೧೪



ಇಮ್ಮಡಿ ಗುಣವರ್ಮ ಪಾರ್ಶ್ವಪಂಡಿತ ಸಂಪುಟ

ಪುಷ್ಪದಂತ ಪುರಾಣಂ
ಚಂದ್ರನಾಥಾಷ್ಟಕ
ಪಾರ್ಶ್ವನಾಥ ಪುರಾಣಂ

ಸಂಪಾದಕರು
ಡಾ. ವೈ.ಸಿ. ಭಾನುಮತಿ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಮಗ್ರ
ಕನ್ನಡ ಜೈನಸಾಹಿತ್ಯ
ಸಂಪುಟ-೧೪



೧.	ಪಂಪ ಸಂಪುಟ	ಸಂ. ಪ್ರೊ. ಟಿ.ವಿ. ವೆಂಕಟಾಚಲ ಶಾಸ್ತ್ರೀ
೨.	ಶಿವಕೋಟ್ಯಾಚಾರ್ಯ-ಚಾವುಂಡರಾಯ ಸಂಪುಟ	ಸಂ. ಪ್ರೊ. ಕಮಲಾ ಹಂಪನಾ
೩.	ಪೊನ್ನ-ಕಮಲಭವ ಸಂಪುಟ	ಸಂ. ಪ್ರೊ. ಹಂಪ ನಾಗರಾಜಯ್ಯ
೪.	ರನ್ನ ಸಂಪುಟ	ಸಂ. ಪ್ರೊ. ಹಂಪ ನಾಗರಾಜಯ್ಯ
೫.	ನಾಗವರ್ಮ ಸಂಪುಟ	ಸಂ. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
೬.	ಶಾಂತಿನಾಥ-ಆಂಡಯ್ಯ ಸಂಪುಟ	ಸಂ. ಪ್ರೊ. ಪಿ. ವಿ. ನಾರಾಯಣ
೭.	ನಾಗಚಂದ್ರ ಸಂಪುಟ	ಸಂ. ಪ್ರೊ. ಶಾಂತಿನಾಥ ದಿಬ್ಬದ
೮.	ನಯಸೇನ ಸಂಪುಟ	ಸಂ. ಪ್ರೊ. ಎಸ್.ಪಿ. ಪಾಟೀಲ
೯.	ಬ್ರಹ್ಮಶಿವ-ವೃತ್ತವಿಲಾಸ ಸಂಪುಟ	ಸಂ. ಡಾ. ಎಂ. ಎಂ. ಕಲಬುರ್ಗಿ
೧೦.	ನೇಮಿಚಂದ್ರ ಸಂಪುಟ	ಸಂ. ಪ್ರೊ. ದೇ. ಜವರೇಗೌಡ
೧೧.	ಬಂಧುವರ್ಮ ಸಂಪುಟ	ಸಂ. ಬಿ. ಎಸ್. ಸಣ್ಣಯ್ಯ
೧೨.	ಆಚಣ್ಣ-ಅಗ್ಗಳ ಸಂಪುಟ	ಸಂ. ಜಿ.ಜಿ. ಮಂಜುನಾಥನ್
೧೩.	ಜನ್ನ ಸಂಪುಟ	ಸಂ. ಪ್ರೊ. ಸಿ.ಪಿ. ಕೃಷ್ಣಕುಮಾರ್
೧೪.	ಇಮ್ಮಡಿ ಗುಣವರ್ಮ-ಪಾರ್ಶ್ವಪಂಡಿತ ಸಂಪುಟ	ಸಂ. ಡಾ. ವೈ.ಸಿ. ಭಾನುಮತಿ
೧೫.	ಮಧುರ-ಬಾಹುಬಲಿ ಸಂಪುಟ	ಸಂ. ಪ್ರೊ. ಎನ್. ಬಸವಾರಾಧ್ಯ
೧೬.	ಮಂಗರಸ ಸಂಪುಟ	ಸಂ. ಡಾ. ಬಿ.ವಿ. ಶಿರೂರ
೧೭.	ರತ್ನಾಕರವರ್ಣಿ ಸಂಪುಟ	ಸಂ. ಪ್ರೊ. ಎಂ.ಜಿ. ಬಿರಾದಾರ
೧೮.	ಸಾಳ್ವ ಸಂಪುಟ	ಸಂ. ಡಾ. ಎಂ.ಎ. ಜಯಚಂದ್ರ
೧೯.	ದೇವಚಂದ್ರ ಸಂಪುಟ	ಸಂ. ಪ್ರೊ. ಎಚ್.ಜೆ. ಲಕ್ಕಪ್ಪಗೌಡ
೨೦.	ವಾಕ್ಯ ಮಾಣಿಕ್ಯ ಸಂಪುಟ	ಸಂ. ಪ್ರೊ. ಜಿ.ಎಸ್. ಶಿವರುದ್ರಪ್ಪ

ಸುವರ್ಣ ಕರ್ನಾಟಕ - ೨೦೦೬

ಇಮ್ಮಡಿ ಗುಣವರ್ಮ-ಪಾರ್ಶ್ವಪಂಡಿತ ಸಂಪುಟ

ಪುಷ್ಪದಂತ ಪುರಾಣಂ, ಪಾರ್ಶ್ವನಾಥ ಪುರಾಣಂ

ಚಂದ್ರನಾಥಾಷ್ಟಕಂ

ಸಂಪಾದಕರು

ಡಾ. ವೈ. ಸಿ. ಭಾನುಮತಿ

ಪ್ರಸಾರಾಂಗ

ಕನ್ನಡ ವಿಶ್ವವಿದ್ಯಾಲಯ - ಹಂಪಿ

೨೦೦೭

Samagra Kannada Jaina Sahitya Series - XIV

IMMADI GUNAVARMA - PARSHWAPANDITA SAMPUTA

Pushpadanta Puranam, Parshwanatha Puranam, Chandranathasthakam

Edited by

Dr. Y.C. Bhanumati
1123, Keshavadeepa, Lalithadri
1st Cross, Kuvempunagar
Mysore - 570 023
Phone : 0821-2560931

Published by
Prof. Mallepuram G. Venkatesha
Director, Prasaranga Kannada University
Hampi, Vidyaranya-583 276

Page : L + 642 Price : **Rs. 100/-**
First Impression : **2007**
www.kannadauniversity.org

ಪ್ರಕಾಶನ
ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ನಿರ್ದೇಶಕರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ
ಹಂಪಿ, ವಿದ್ಯಾರಣ್ಯ - ೫೮೩ ೨೭೬

ಬೆಲೆ : ರೂ. ೧೦೦/-

ಅಕ್ಷರ ಸಂಯೋಜನೆ ಮತ್ತು ಮುದ್ರಣ :
ವಿಶ್ವಾಸ್ ಪ್ರಿಂಟ್ಸ್
ಚಾಮರಾಜಪೇಟೆ, ಬೆಂಗಳೂರು
✆ ೨೬೬೦೬೦೮೮

ಆರ್ಥಿಕ ನೆರವು

ಕಂದಾಯ ಇಲಾಖೆ (ಮುಜರಾಯಿ)

ಕರ್ನಾಟಕ ಸರ್ಕಾರ

ಸಂಪಾದಕ ಸಲಹಾ ಸಮಿತಿ

ಅಱಿವುದು ಧರ್ಮಮಂ ಕಾವ್ಯಧರ್ಮಮುಮಂ

ಕನ್ನಡ ವಿಶ್ವವಿದ್ಯಾಲಯವು ಕರ್ನಾಟಕ ಸರಕಾರದ ಆರ್ಥಿಕ ನೆರವಿನಿಂದ ರೂಪಿಸಿ, ಪ್ರಕಟಿಸುತ್ತಿರುವ ಸಮಗ್ರ ಕನ್ನಡ ಜೈನಸಾಹಿತ್ಯ ಸಂಪುಟಗಳ ಯೋಜನೆಯು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೇ ಮಹತ್ವಪೂರ್ಣವಾದದ್ದು. ೨೦೦೬ರ ಶ್ರವಣ ಬೆಳಗೊಳದ ಐತಿಹಾಸಿಕ ಗೊಮ್ಮಟ ಮಹಾಮಸ್ತಕಾಭಿಷೇಕದ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯ ಹಂಪಿಯು ಈ ಸಮಗ್ರ ಕನ್ನಡ ಜೈನಸಾಹಿತ್ಯ ಸಂಪುಟಗಳ ಯೋಜನೆಯನ್ನು ರೂಪಿಸಿ ಕರ್ನಾಟಕ ಸರ್ಕಾರಕ್ಕೆ ಸಲ್ಲಿಸಿತು. ಕರ್ನಾಟಕ ಸರ್ಕಾರವು ಈಗಾಗಲೇ ಸಮಗ್ರ ವಚನಸಾಹಿತ್ಯ ಮತ್ತು ದಾಸಸಾಹಿತ್ಯ ಸಂಪುಟಗಳನ್ನು ಹೊರತಂದಿದ್ದು, ಈಗ ಸಮಗ್ರ ಜೈನಸಾಹಿತ್ಯ ಸಂಪುಟಗಳ ಪ್ರಕಟಣೆಯ ಮೂಲಕ ಪ್ರಾಚೀನ ಕನ್ನಡ ಸಾಹಿತ್ಯದ ಬಹಳ ಮಹತ್ವದ ಶರೀರವೊಂದನ್ನು ಪೂರ್ಣಗೊಳಿಸುತ್ತಿದೆ. ಈ ಸಮಗ್ರ ಜೈನಸಾಹಿತ್ಯ ಸಂಪುಟದ ಯೋಜನೆಯನ್ನು ೨೦೦೬ರ ಶ್ರವಣಬೆಳಗೊಳದ ಮಹಾಮಸ್ತಕಾಭಿಷೇಕದ ಭಾಗವಾಗಿ ಕರ್ನಾಟಕ ಸರ್ಕಾರ ಅಂಗೀಕರಿಸಿ ಸಾರಸ್ವತ ಮಹಾಮಸ್ತಕಾಭಿಷೇಕ ಮಾಡಿದ ಪುಣ್ಯಕ್ಕೆ ಪಾತ್ರವಾಗಿದೆ. ಈ ಯೋಜನೆಯ ಮಹತ್ವವನ್ನು ಮನಗಂಡು ಉದಾರವಾದ ಆರ್ಥಿಕ ನೆರವು ನೀಡಿದ ಆಗಿನ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎನ್. ಧರ್ಮಸಿಂಗ್ ಅವರಿಗೂ ಉಪಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಎಂ.ಪಿ. ಪ್ರಕಾಶ್ ಅವರಿಗೂ ಸನ್ಮಾನ್ಯ ಲೋಕೋಪಯೋಗಿ ಸಚಿವರಾದ ಶ್ರೀ ಎಚ್.ಡಿ. ರೇವಣ್ಣ ಅವರಿಗೂ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಅಂದು ಚಾಲನೆಗೊಂಡ ಯೋಜನೆಗೆ ಮತ್ತೆ ಜೀವ ತುಂಬಿದ ಈಗಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಚ್.ಡಿ. ಕುಮಾರಸ್ವಾಮಿ, ಉಪಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ ಅವರಿಗೆ ವಿಶೇಷ ವಂದನೆಗಳನ್ನು ಸಲ್ಲಿಸುತ್ತೇನೆ. ಈ ಪ್ರಸ್ತಾವವನ್ನು ವಿಧಾನ ಪರಿಷತ್ತಿನಲ್ಲಿ ಮಂಡಿಸಿದ ಪರಿಷತ್ತಿನ ಸದಸ್ಯರಾದ ಡಾ. ಎಂ.ಆರ್. ತಂಗಾ, ಡಾ. ಚಂದ್ರಶೇಖರ ಕಂಬಾರ, ಡಾ. ಎಲ್. ಹನುಮಂತಯ್ಯ, ಶ್ರೀ ಹಸನಬ್ಬ ಅವರ ನೆರವನ್ನು ವಿಶೇಷವಾಗಿ ಸ್ಮರಿಸುತ್ತೇನೆ. ಕನ್ನಡದ ಹಿರಿಯ ಸಾಹಿತಿಗಳಾದ ಮತ್ತು ಜೈನಸಾಹಿತ್ಯದಲ್ಲಿ ವಿಶೇಷ ಪಾಂಡಿತ್ಯವುಳ್ಳ ಡಾ. ಹಂಪ. ನಾಗರಾಜಯ್ಯ ಮತ್ತು ಡಾ. ಕಮಲಾ ಹಂಪನಾ ಅವರು ಈ ಸಂಪುಟಗಳ ರೂಪರೇಷೆಯಿಂದ ತೊಡಗಿ ಕರ್ನಾಟಕ ಸರ್ಕಾರಕ್ಕೆ ಇದರ ಮಹತ್ವವನ್ನು ಮನವರಿಕೆ ಮಾಡಿಕೊಡುವವರೆಗೆ ವಿಶೇಷವಾದ ಕಾಳಜಿ ವಹಿಸಿ ಸಹಕರಿಸಿದ್ದಾರೆ.

ಪ್ರಾಚೀನ ಕನ್ನಡ ಸಾಹಿತ್ಯ ಆರಂಭವಾಗುವುದೇ ಜೈನ ಸಾಹಿತ್ಯ ಕೃತಿಗಳ ಮೂಲಕ. ಆದಿಕವಿ ಪಂಪನ ವಿಕ್ರಮಾರ್ಜುನ ವಿಜಯ ಮತ್ತು ಆದಿಪುರಾಣಗಳು ಕನ್ನಡ ಸಾಹಿತ್ಯದ ಮೊತ್ತಮೊದಲ

ಮಹಾಕಾವ್ಯಗಳು. ಶಿವಕೋಟ್ಯಾಚಾರ್ಯನ ವೊಡ್ಡಾರಾಧನೆ ಕನ್ನಡದ ಮೊತ್ತಮೊದಲ ಉಪಲಬ್ಧ ಗದ್ಯ ಗ್ರಂಥ. ಸಂಸ್ಕೃತವೇ ಸಾಹಿತ್ಯನಿರ್ಮಾಣದ ಪ್ರಧಾನ ಭಾಷೆಯಾಗಿದ್ದ ಭಾರತ ದೇಶದಲ್ಲಿ ಕನ್ನಡದಂತಹ ಪ್ರಾದೇಶಿಕ ಭಾಷೆಯಲ್ಲಿ ಕಾವ್ಯರಚನೆ ಮಾಡುವ ಮೂಲಕ ಜೈನಕವಿಗಳು, ಪ್ರಾದೇಶಿಕ ಸಾಹಿತ್ಯ ನಿರ್ಮಾಣಕ್ಕೆ ನಾಂದಿ ಹಾಡಿದರು. ಆದಿಕವಿ ಪಂಪ ಇದು ನಿಚ್ಚಂ ಪೊಸತು ಅರ್ಣವಂಬೋಲ್ ಅತಿ ಗಂಭೀರಂ ಕವಿತ್ವಂ ಎಂದು ಹೇಳಿದ್ದಾನೆ. ಪಂಪಕವಿಯು ಆದಿಪುರಾಣದಲ್ಲಿ ಆದಿನಾಥನ ಭವಾವಳಿಗಳನ್ನು ಮತ್ತು ಆತನ ಮಕ್ಕಳಾದ ಭರತ ಬಾಹುಬಲಿಯರು ರಾಜ್ಯದ ಒಡೆತನಕ್ಕಾಗಿ ಪರಸ್ಪರ ಎದುರಾಳಿಗಳಾಗುವ ಸನ್ನಿವೇಶವನ್ನು ಚಿತ್ರಿಸಿದ್ದಾನೆ. ಅಣ್ಣ ತಮ್ಮಂದಿರ ನಡುವೆ ಮುಖಾಮುಖಿ ಯುದ್ಧದಲ್ಲಿ ಅಣ್ಣ ಭರತ ಸೋಲುತ್ತಾನೆ, ತಮ್ಮ ಬಾಹುಬಲಿ ಗೆಲ್ಲುತ್ತಾನೆ. ಆದರೆ ಈ ರೀತಿ ಗೆದ್ದ ಬಾಹುಬಲಿಯು ರಾಜ್ಯದ ಒಡೆತನವನ್ನು ನಿರಾಕರಿಸಿ ವೈರಾಗ್ಯಪರನಾಗಿ ಪ್ರತಿಮಾ ಯೋಗದಲ್ಲಿ ನಿಂತು ಗೊಮ್ಮಟನಾಗುತ್ತಾನೆ. ಅಂತಹ ವೈರಾಗ್ಯದ ಪ್ರತಿಮೆಯಾದ ಗೊಮ್ಮಟನ ಮಹಾಮಸ್ತಕಾಭಿಷೇಕದ ನೆನಪಿಗಾಗಿ ಕನ್ನಡ ಸಾಹಿತ್ಯದ ಗೊಮ್ಮಟ ಸದೃಶ ಜೈನಕೃತಿಗಳನ್ನು ಮತ್ತೆ ಹೊಸದಾಗಿ ಶುಭ್ರಗೊಳಿಸಿ ಸಾಹಿತ್ಯ ಮತ್ತು ಶಾಸ್ತ್ರದ ವಿಭಿನ್ನ ಅರ್ಚನೆಗಳ ಮೂಲಕ ಅವುಗಳಿಗೆ ಪ್ರಕಟಣೆಯ ಅಭಿಷೇಕವನ್ನು ಮಾಡಲಾಗಿದೆ.

ಆದಿಕವಿ ಪಂಪನು ತನ್ನ ವಿಕ್ರಮಾರ್ಜುನ ವಿಜಯದಲ್ಲಿ ಬೆಳಗುವೆನಿಲ್ಲಿ ಲೌಕಿಕಮಂ ಅಲ್ಲಿ ಜಿನಾಗಮಮಂ ಎಂದು ಹೇಳಿಕೊಂಡಿದ್ದಾನೆ. ಹೀಗಾಗಿ ಪ್ರಾಚೀನ ಕಾವ್ಯಗಳಲ್ಲಿ ಲೌಕಿಕ ಮತ್ತು ಆಗಮಿಕ ಎನ್ನುವ ಕಾವ್ಯ ಮತ್ತು ಪುರಾಣಗಳ ನಿರ್ಮಾಣದ ಒಂದು ಪರಂಪರೆ ಕಾಣಸಿಕೊಳ್ಳುತ್ತದೆ. ಪಂಪನಿಂದ ತೊಡಗಿ ಪೊನ್ನ ರನ್ನರಿಂದ ಮುಂದುವರಿದು ಮುಂದಿನ ಕವಿಗಳಲ್ಲಿ ಆಗಮಿಕ ಕಾವ್ಯಗಳಾದ ತೀರ್ಥಂಕರರ ಪುರಾಣ ಕೃತಿಗಳ ನಿರ್ಮಾಣ ಒಂದು ನೋಂಪಿಯಂತೆ ಕಾಣಸಿಗುತ್ತದೆ. ಇನ್ನೊಂದು ಕಡೆ ನಯಸೇನ, ಜನ್ನ, ಬ್ರಹ್ಮಶಿವ, ವೃತ್ತವಿಲಾಸರಂತಹ ಕವಿಗಳು ಲೌಕಿಕ ಕಥೆಗಳಿಗೆ ಜೈನ ಆವರಣವನ್ನು ನಿರ್ಮಾಣ ಮಾಡಿ ಲೌಕಿಕ-ಧಾರ್ಮಿಕಗಳನ್ನು ಒಂದುಗೂಡಿಸುವ ವಿಶಿಷ್ಟ ಕಲೆಗಾರಿಕೆಯನ್ನು ಮೆರೆಯುತ್ತಾರೆ. ಹೀಗೆ ೨೪ ತೀರ್ಥಂಕರರ ಪುರಾಣಕಾವ್ಯ ಒಂದು ಧಾರೆಯಾದರೆ ಚರಿತ್ರೆ ಲೌಕಿಕಕಥೆ ನೀತಿಕಥೆಗಳ ಮೂಲಕ ಸಮಕಾಲೀನ ಬದುಕಿಗೆ ಸ್ಪಂದಿಸಿದ ವೈವಿಧ್ಯಮಯ ಕಾವ್ಯಪರಂಪರೆ ಪ್ರಾಚೀನ ಜೈನಸಾಹಿತ್ಯದ ಇನ್ನೊಂದು ಮುಖ್ಯಧಾರೆಯಾಗಿದೆ. ಇದರೊಂದಿಗೆ ಗದ್ಯ ಸಾಹಿತ್ಯದ ದೃಷ್ಟಿಯಿಂದ ಶಿವಕೋಟ್ಯಾಚಾರ್ಯನ ವೊಡ್ಡಾರಾಧನೆ ಮತ್ತು ಚಾವುಂಡರಾಯನ ಚಾವುಂಡರಾಯ ಪುರಾಣ ಇನ್ನೊಂದು ಪರಂಪರೆಯನ್ನು ಕಟ್ಟಿಕೊಡುತ್ತದೆ. ಒಂದು ಕಡೆ ಜೈನಧರ್ಮದ ಚೌಕಟ್ಟಿನ ಒಳಗಡೆ ಕತೆಗಳು ಮಾಧ್ಯಮವಾಗಿ ಬಳಕೆಯಾದರೆ, ಇನ್ನೊಂದೆಡೆ ಜೈನ ಧರ್ಮದ ಮೇಲ್ಮೈಗಾಗಿ ಸಾಧನೆ ಮಾಡಿದ ಸಾಂಸ್ಕೃತಿಕ ವ್ಯಕ್ತಿಯ ಸುತ್ತ ಕಥನವೊಂದು ನಿರ್ಮಾಣವಾಗುತ್ತದೆ. ಇವುಗಳ ನಡುವೆ ಇಮ್ಮಡಿ ನಾಗವರ್ಮನಂತಹ ಶಾಸ್ತ್ರಕಾರನು ಭಾಷೆ ಮತ್ತು ಕಾವ್ಯಲಕ್ಷಣಕ್ಕೆ ಸಂಬಂಧಿಸಿದ ಶಾಸ್ತ್ರಗ್ರಂಥಗಳನ್ನು ರಚಿಸಿದ್ದಾನೆ. ಮಧ್ಯಯುಗೀನ ಕಾಲದಲ್ಲಿ ರತ್ನಾಕರವರ್ಣಿಯಂತಹ ಕವಿಯು ಸಾಂಗತ್ಯದಲ್ಲಿ ಭರತೇಶ ವೈಭವ ಕಾವ್ಯರಚಿಸಿ ಜೈನ ಕಾವ್ಯಗಳ ಆಶಯದ ಸಾಂಸ್ಕೃತಿಕ ಪಲ್ಲಟವನ್ನು ದಾಖಲಿಸುತ್ತಾನೆ. ೧೮೦೦ರ ಕಾಲಕ್ಕೆ ಬರುವ ದೇವಚಂದ್ರನ ರಾಜಾವಳಿ ಕಥೆಯು ಆಧುನಿಕ ಕನ್ನಡದ ಪೂರ್ವದ ಕಥಾರಚನೆಯ ಅರುಣೋದಯದ ಹೆಜ್ಜೆಯಾಗಿ ಮುಖ್ಯವಾದ ಕೃತಿಯಾಗಿದೆ.

ಒಂದು ಅಂದಾಜಿನ ಪ್ರಕಾರ ಸುಮಾರು ೪೫೦ ಜೈನಕವಿಗಳು ೫೨೦ಕ್ಕೂ ಹೆಚ್ಚಿನ ಕನ್ನಡ ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಸುಮಾರು ಅರ್ಧದಷ್ಟು ಕೃತಿಗಳು ಲಭ್ಯವೆಂದು ನಾವು ಭಾವಿಸಿದರೂ ಇವುಗಳ ಪ್ರಮಾಣ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಗಣನೀಯ ಎನ್ನಿಸುತ್ತದೆ. ಮಹಾಕಾವ್ಯದಿಂದ ತೊಡಗಿ ಮುಕ್ತಕದ ವರೆಗೆ, ಗಣಿತಶಾಸ್ತ್ರದಿಂದ ಹಿಡಿದು ಸೂಪಶಾಸ್ತ್ರದ ವರೆಗೆ, ಜನಪದ ಕಥೆಯಿಂದ ಆರಂಭಿಸಿ ವಿಡಂಬನ ಸಾಹಿತ್ಯದ ವರೆಗೆ ಕನ್ನಡ ಜೈನಸಾಹಿತ್ಯದ ಹರಹು ವ್ಯಾಪಿಸಿಕೊಂಡಿದೆ.

ಪಂಪಕವಿಯು ತನ್ನ ಕಾವ್ಯದಲ್ಲಿ ಮಾರ್ಗ ಮತ್ತು ದೇಸಿಗಳ ಕುರಿತು ಮಾತನಾಡುತ್ತಾನೆ. ಕನ್ನಡ ಜೈನಸಾಹಿತ್ಯದ ಬಗ್ಗೆ ಹೇಳುವಾಗ ಜೈನ ಪುರಾಣಗಳ ಪರಿಭಾಷೆ ಮತ್ತು ಪರಿಮಾಣಗಳು ಮಾರ್ಗವಾದರೆ, ಇತಿಹಾಸ, ಸಮಾಜ, ಲೌಕಿಕ ಪ್ರಪಂಚ ದೇಸಿಯಾಗುತ್ತದೆ. ಪಂಪನ ಕಾವ್ಯಗಳ ನಾಣ್ನುಡಿಯಿಂದ ತೊಡಗಿ, ವೊಡ್ಡಾರಾಧನೆ ಕತೆಗಳ ಗ್ರಾಮೀಣ ಬದುಕಿನಿಂದ ಮುಂದುವರಿದು, ನಯಸೇನನ ಧರ್ಮಾಮೃತದ ಕಥೆಗಳ ಮಾಲೋಪಮೆಗಳಿಂದ ಹಾದು ಬಂದು, ರತ್ನಾಕರನ ಭರತೇಶ ವೈಭವದ ನುಡಿಗಟ್ಟುಗಳ ವರೆಗೆ ಕನ್ನಡದ ನಿಜವಾದ ದೇಸಿಯನ್ನು ಜೈನ ಸಾಹಿತ್ಯ ನಿರ್ಮಿಸಿಕೊಂಡಿದೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಚಂಪೂಕಾವ್ಯ ಪ್ರಕಾರ ಜೈನರಿಂದ ಆರಂಭವಾಯಿತು. ಸಾಂಗತ್ಯಕಾವ್ಯ ಪ್ರಕಾರಕ್ಕೆ ನಾಂದಿ ಹಾಡಿದವರು ಜೈನಕವಿಗಳು. ಗದ್ಯವನ್ನು ಮೊದಲು ಮಾಡಿದವರು ಜೈನ ಕಥೆಗಾರರು. ಕಾವ್ಯಶಾಸ್ತ್ರ, ಛಂದಸ್ಸು, ವ್ಯಾಕರಣ, ಸೂಪಶಾಸ್ತ್ರದಂತಹ ಶಾಸ್ತ್ರ ಪಾಂಡಿತ್ಯವನ್ನು ಕನ್ನಡದಲ್ಲಿ ಕಟ್ಟಿಕೊಟ್ಟವರು ಜೈನರು. ಹೀಗೆ ಕನ್ನಡದ ವಿದ್ವತ್ತು, ವಿವೇಕ ಮತ್ತು ವಿಸ್ಮಯ ಕನ್ನಡ ಸಾಹಿತ್ಯದಲ್ಲಿ ಜೈನ ಕವಿಗಳಿಂದ ಅಪೂರ್ವವಾಗಿ ನಿರ್ಮಾಣವಾಗಿದೆ ಮತ್ತು ಪ್ರಸಾರವಾಗಿದೆ.

ಈ ಹಿನ್ನೆಲೆಯಲ್ಲಿ ಸಮಗ್ರ ಕನ್ನಡ ಜೈನ ಸಾಹಿತ್ಯ ಯೋಜನೆಯನ್ನು ನಿಗದಿತ ಕಾರ್ಯವಿಧಾನದ ಮೂಲಕ ರೂಪಿಸಿಕೊಂಡು ವ್ಯವಸ್ಥಿತವಾಗಿ ಕಾರ್ಯನಿರ್ವಹಿಸಬೇಕೆಂದು ನಾವು ತೀರ್ಮಾನಿಸಿಕೊಂಡೆವು. ಇದಕ್ಕಾಗಿ ಈ ಕ್ಷೇತ್ರದಲ್ಲಿ ನುರಿತ ನಾಡಿನ ಹಿರಿಯರನ್ನೊಳಗೊಂಡ ಉನ್ನತ ಸಲಹಾ ಸಮಿತಿ ಹಾಗೂ ಸಂಪನ್ಮೂಲ ವಿದ್ವಾಂಸರನ್ನು ಈ ಯೋಜನೆಯ ವ್ಯಾಪ್ತಿಗೆ ಒಳಗೊಳ್ಳಲು ಬಯಸಲಾಯಿತು. ಅದರಂತೆ ನಾಡಿನ ಗಣ್ಯ ವಿದ್ವಾಂಸರು ಈ ಬೃಹತ್ ಯೋಜನೆಯಲ್ಲಿ ಪಾಲ್ಗೊಂಡರೆಂಬುದು ಕನ್ನಡ ವಿಶ್ವವಿದ್ಯಾಲಯಕ್ಕೆ ಹೆಮ್ಮೆಯ ಸಂಗತಿ.

ಸಮಗ್ರ ಕನ್ನಡ ಜೈನ ಸಾಹಿತ್ಯ ಸಂಪುಟದ ಯೋಜನೆಯ ಉನ್ನತ ಸಲಹಾ ಸಮಿತಿಯ ಸದಸ್ಯರಾದ ಡಾ. ದೇ. ಜವರೇಗೌಡ, ಡಾ. ಜಿ.ಎಸ್. ಶಿವರುದ್ರಪ್ಪ, ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ, ಡಾ. ಹಂಪ. ನಾಗರಾಜಯ್ಯ, ಡಾ. ಕಮಲಾಹಂಪನಾ, ಡಾ. ಚಂದ್ರಶೇಖರ ಕಂಬಾರ, ಡಾ. ಎಂ.ಎಂ. ಕಲಬುರ್ಗಿ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಎಂ.ಜಿ. ಬಿರಾದಾರ ಮತ್ತು ಕನ್ನಡ ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರು, ಕರ್ನಾಟಕ ಸರ್ಕಾರದ ಕಂದಾಯ ಮತ್ತು ಮುಜರಾಯಿ ಇಲಾಖೆಯ ಕಾರ್ಯದರ್ಶಿಗಳು ತಮ್ಮ ಸೂಚನೆ ಸಲಹೆಗಳಿಂದ ಈ ಸಂಪುಟಗಳ ಸ್ವರೂಪ ಮತ್ತು ಅನುಷ್ಠಾನಗಳ ಎಲ್ಲಾ ಹಂತಗಳಲ್ಲಿಯೂ ಮಾರ್ಗದರ್ಶನ ಕೊಟ್ಟಿದ್ದಾರೆ. ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು ಸಮಿತಿಯ ಸಂಚಾಲಕರಾಗಿ ಇಡೀ ಯೋಜನೆಯ ಅನುಷ್ಠಾನದ ಕೆಲಸವನ್ನು ಹೆಚ್ಚೆ ಹೆಚ್ಚೆಗೂ ಸಮರ್ಥವಾಗಿ ನಿರ್ವಹಿಸಿದ್ದಾರೆ. ಹಿಂದಿನ ಕುಲಸಚಿವರಾದ ಪ್ರೊ. ಕರೀಗೌಡ ಬೀಚನಹಳ್ಳಿ ಅವರು

ಯೋಜನೆಯ ಆಡಳಿತಾತ್ಮಕ ನಿರ್ವಹಣೆಯನ್ನು ಅಚ್ಚುಕಟ್ಟಾಗಿ ನಡೆಸಿದ್ದಾರೆ. ಇಂದಿನ ಕುಲಸಚಿವರಾದ ಶ್ರೀ ವಿ. ಶಂಕರ್ ಅವರು ಯೋಜನೆಯ ಆಡಳಿತಾತ್ಮಕ ನಿರ್ವಹಣೆಯನ್ನು ಅಚ್ಚುಕಟ್ಟಾಗಿ ನಡೆಸಿಕೊಡುತ್ತಿದ್ದಾರೆ. ನಮ್ಮ ವಿಶ್ವವಿದ್ಯಾಲಯದ ಜೈನ ಸಂಸ್ಕೃತಿ ಅಧ್ಯಯನ ಪೀಠದ ಸಂಚಾಲಕರಾದ ಡಾ. ಎಂ. ಉಷಾ ಅವರು ಈ ಯೋಜನೆಯನ್ನು ರೂಪಿಸುವಲ್ಲಿ ವಿಶೇಷವಾಗಿ ಸಹಕರಿಸಿದ್ದಾರೆ.

ವಿಶ್ವವಿದ್ಯಾಲಯವು ಈ ಯೋಜನೆಯನ್ನು ಕೈಗೆತ್ತಿಕೊಂಡಾಗ ಪ್ರಕಟಣ ಸ್ವರೂಪವನ್ನು ಸ್ಥೂಲವಾಗಿ ಹೀಗೆ ಗುರುತಿಸಿಕೊಳ್ಳಲಾಯಿತು. ಇದು ಡೆಮ್ಮಿ ೧/೮ ಆಕಾರದ ಸುಮಾರು ಇಪ್ಪತ್ತು ಸಂಪುಟಗಳಿಂದ ಕೂಡಿರಬೇಕು. ಪ್ರತಿ ಸಂಪುಟವೂ ಅಂದಾಜು ೬೦೦ ಪುಟಗಳಾಗಿರಬೇಕು. ಸಂಪುಟದ ಸಂಪಾದಕರು ಆಯಾ ಸಂಪುಟಕ್ಕೆ ಸೂಕ್ತವಾದ ಕವಿ ಕಾವ್ಯ ಪರಿಚಯ, ಚಾರಿತ್ರಿಕ ಹಾಗೂ ಸಾಹಿತ್ಯಿಕ ಮಹತ್ವ ಇತ್ಯಾದಿ ವಿವರಗಳನ್ನು ಒಳಗೊಂಡ ಪ್ರಸ್ತಾವನೆ ಬರೆಯಬೇಕೆಂದು ನಿರ್ಣಯಿಸಲಾಯಿತು. ಸಂಪುಟಗಳು ಜನಪ್ರಿಯ ಆವೃತ್ತಿ ಆಗಿರುವುದರಿಂದ ಪಠ್ಯಗಳಲ್ಲಿ ಪಾಠಾಂತರಗಳನ್ನು ನೀಡಬೇಕಾಗಿಲ್ಲ. ಪ್ರತಿಯೊಬ್ಬ ಕವಿಯ ಸಮಗ್ರ ಕಾವ್ಯವನ್ನು ಒಂದು ಸಂಪುಟದಲ್ಲಿ ತರುವುದೆಂದು ಸಮಿತಿ ತೀರ್ಮಾನಿಸಿತು. ವಸ್ತು ವಿಷಯಕ್ಕೆ ಅನುಗುಣವಾಗಿ ಬೇರೆ ಬೇರೆ ಎರಡೆರಡು ಕಾವ್ಯಗಳನ್ನು ಒಂದೇ ಸಂಪುಟದಲ್ಲಿ ಅಳವಡಿಸುವುದು ಸೂಕ್ತವೆಂದು ತೀರ್ಮಾನ ತೆಗೆದುಕೊಳ್ಳಲಾಯಿತು. ಈಗಾಗಲೇ ಸಂಪಾದನೆಗೊಂಡು, ಪ್ರಕಟವಾಗಿರುವ ಕಾವ್ಯಗಳನ್ನು ಮೊದಲ ಹಂತದಲ್ಲಿ ತೆಗೆದು ಕೊಳ್ಳುವುದೆಂದೂ ಅಪೂರ್ವ ಕೃತಿಗಳನ್ನೂ ಈ ಮಾಲೆಯಲ್ಲಿ ಸೇರಿಸಿಕೊಳ್ಳುವುದೆಂದೂ ನಿಶ್ಚಯಿಸಲಾಯಿತು. ಪಂಪ, ಪೊನ್ನ, ರನ್ನ, ಜನ್ನ, ನಾಗವರ್ಮ, ನಯಸೇನ, ಸಾಳ್ವ ಮುಂತಾದವರ ಕಾವ್ಯಗಳು ಈಗಾಗಲೇ ಮುದ್ರಣಗೊಂಡಿವೆ. ಆದರೂ ಪಾಠಕ್ಲೇಶ ಅರ್ಥಕ್ಲೇಶಗಳು ಹೇಗೋ ಉಳಿದುಬಿಟ್ಟಿವೆ. ಆದುದರಿಂದ ಎಲ್ಲ ಮುದ್ರಿತ ಪಾಠಗಳನ್ನು ಗಮನಿಸಿ ಈ ಎಲ್ಲ ಕ್ಲೇಶಗಳನ್ನು ನಿವಾರಿಸಿ ಸರ್ವಪ್ರತಿಪಾಠಗಳನ್ನು ಇಟ್ಟುಕೊಳ್ಳುವುದು ಅಗತ್ಯವೆಂದು ಸಮಿತಿ ಭಾವಿಸಿತು. ಗ್ರಂಥದ ಕೊನೆಗೆ ಶಬ್ದಾರ್ಥಕೋಶ, ಪಾರಿಭಾಷಿಕಕೋಶ, ಸಹಾಯಕ ಸಾಹಿತ್ಯ ನೀಡುವುದು ಅಗತ್ಯವೆಂದು ಸಂಪಾದಕರಿಗೆ ಬಿನ್ನವಿಸಿಕೊಳ್ಳಲಾಯಿತು. ಈ ಹಿನ್ನೆಲೆಯಲ್ಲಿ ಪ್ರಸ್ತುತ ಇಪ್ಪತ್ತು ಸಂಪುಟಗಳು ನಿಮ್ಮ ಎದುರಿಗಿವೆ. ಶ್ರಮಸಾಧ್ಯವಾದ ಇಂಥ ಕಾವ್ಯಗಳನ್ನು ಸಂಪಾದಿಸಿಕೊಟ್ಟ ಕನ್ನಡದ ಹಿರಿಯ ವಿದ್ವಾಂಸರಾದ ಎಲ್ಲ ಸಂಪಾದಕರಿಗೆ ಕೃತಜ್ಞತೆ ಹೇಳುವುದು ಮಾತ್ರ ಈಗ ನಮಗೆ ಸಾಧ್ಯವಾಗಿದೆ.

ಎರಡನೆಯ ಗುಣವರ್ಮನು ಹದಿನಾರನೆಯ ಶತಮಾನದ ಆರಂಭದಲ್ಲಿ ಇದ್ದು **'ಪುಷ್ಪದಂತ ಪುರಾಣಂ'** ಎಂಬ ಚಂಪೂ ಕಾವ್ಯವನ್ನೂ **'ಚಂದ್ರನಾಥಾಷ್ಟಕಂ'** ಎನ್ನುವ ಒಂಬತ್ತು ಪದ್ಯಗಳ ಅಷ್ಟಕವನ್ನೂ ರಚಿಸಿದ್ದಾನೆ. ಇವನ **'ಪುಷ್ಪದಂತ ಪುರಾಣ'**ವು ಒಂಬತ್ತನೆಯ ತೀರ್ಥಂಕರನಾದ ಪುಷ್ಪದಂತನ ಚರಿತವನ್ನು ಹದಿನಾಲ್ಕು ಆಶ್ವಾಸಗಳ ಹರಹಿನಲ್ಲಿ ವಿವರಿಸಿರುವ ಚಂಪೂ ಕಾವ್ಯ. ಗುಣಭದ್ರಾಚಾರ್ಯನ ಉತ್ತರಪುರಾಣದ ಪುಷ್ಪದಂತ ಚರಿತದ ಭಾಗವನ್ನು ಬಳಸಿಕೊಂಡು ಹದಿನಾಲ್ಕು ಆಶ್ವಾಸಗಳಲ್ಲಿ ೧೩೬೫ ಪದ್ಯಗಳಲ್ಲಿ ಹಾಗೂ ಹಲವು ಗದ್ಯಭಾಗಗಳಲ್ಲಿ ವಿಸ್ತರಿಸಿದ್ದಾನೆ. ಈ ಕಾವ್ಯದಲ್ಲಿ ಸಾಮಾನ್ಯವಾಗಿ ಜೈನಪುರಾಣಗಳಲ್ಲಿ ಕಾಣಿಸುವ ಜನ್ಮಾಂತರ ಕಥೆಗಳ ತೊಡಕು ಇಲ್ಲ. ಎಳೆಯಷ್ಟು ಇರುವ ಕಥೆಯನ್ನು ವಿಸ್ತಾರವಾದ ವರ್ಣನೆಯ ನೆರವಿನಿಂದ ದೊಡ್ಡ ಪುರಾಣದ ವ್ಯಾಪ್ತಿಗೆ ಹಿಗ್ಗಿಸಿದ್ದಾನೆ. ಪಂಪನ ಪರಂಪರೆಯಿಂದ ಪ್ರಭಾವಿತನಾದ ಗುಣವರ್ಮ ತನ್ನ ಪೋಷಕನಾದ

ಶಾಂತಿವರ್ಮನನ್ನು ಕೃತಿಯ ನಾಯಕನಾದ ಮಹಾಪದ್ಮನೊಡನೆ ಅಭೇದ ಕಲ್ಪಿಸಿ ಕಾವ್ಯರಚನೆ ಮಾಡಿದ್ದಾನೆ. ಮಹಾಪದ್ಮನೇ ಮುಂದಿನ ಜನ್ಮದಲ್ಲಿ ಪುಷ್ಪದಂತನಾಗಿ ತೀರ್ಥಂಕರನಾಗುವ ಕಥಾವಸ್ತು ಇಲ್ಲಿದೆ. ಅನಿವಾರ್ಯವಾಗಿ ಜೈನಪುರಾಣಗಳ ಎಂಟು ಅಂಗಗಳು, ಪಂಚ ಕಲ್ಯಾಣಗಳು ಮತ್ತು ಮಹಾಕಾವ್ಯದ ಅಷ್ಟಾದಶವರ್ಣನೆಗಳಿಂದ ತುಂಬಿಕೊಂಡಿದೆ. 'ಅನುಗುಣಮಾಗೆ ವರ್ಣನಂ ಒಡಂಬಡೆ' ಎನ್ನುವ ಗುಣವರ್ಮನ ಮಾತು ಅವನ ಕೃತಿಯಲ್ಲಿ ಸಂಪೂರ್ಣವಾಗಿ ಪಾಲಿತವಾಗಿಲ್ಲ. ಮಾರ್ಗದೇಸಿಗಳ ಸಮನ್ವಯ ಶೈಲಿ ಪ್ರಧಾನವಾಗಿದ್ದರೂ ಕನ್ನಡದ್ದೇ ಆದ ಅಭಿವ್ಯಕ್ತಿಯ ಅನೇಕ ಪದ್ಯಗಳು ಇಲ್ಲಿ ಗಮನ ಸೆಳೆಯುತ್ತವೆ. ನಾಟಕೀಯತೆಯ ಗುಣ, ನಾಣ್ಣುಡಿಗಳ ಬಳಕೆ, ಸರಳ ಸಮರ್ಥ ಉಪಮೆಗಳು, ಅವಧಾರಣೆಯ ಶೈಲಿ, ಶ್ಲೇಷೆಯ ಪದಚಮತ್ಕಾರ, ದೇಸಿನುಡಿಯ ಅಪೂರ್ವ ಬಳಕೆ – ಹೀಗೆ ಚಂಪೂ ಕಾವ್ಯದ ಒಳಗೆಯೇ ಕನ್ನಡತನದ ಹೊಳಹುಗಳನ್ನು ಪ್ರಕಟಿಸುವ ಪ್ರಯತ್ನವನ್ನು ಗುಣವರ್ಮ ಮಾಡಿದ್ದಾನೆ. ಈತನ **'ಚಂದ್ರನಾಥಾಷ್ಟಕ'**ದಲ್ಲಿ ಒಂಬತ್ತು ಪದ್ಯಗಳಿದ್ದು ಇದರ ವಸ್ತು ಸೊಲ್ಲಾಪುರದ ಶ್ರೀತ್ರಿಭುವನ ತಿಲಕ ಜಿನಾಲಯದ ಚಂದ್ರನಾಥನ ಸ್ತುತಿಯಾಗಿದೆ. ಅಷ್ಟಕದ ರೂಪ ಬೇರೆಯಾದರೂ ವಸ್ತು ಶೈಲಿಯ ದೃಷ್ಟಿಯಿಂದ, ಗುಣವರ್ಮನ ಚಂಪೂ ರಚನೆಗಿಂತ ಹೆಚ್ಚಿನ ವ್ಯತ್ಯಾಸ ಕಾಣುವುದಿಲ್ಲ.

ಹದಿನಾರನೆಯ ಶತಮಾನದ ಆರಂಭ ಭಾಗದಲ್ಲಿದ್ದ ಪಾರ್ಶ್ವಪಂಡಿತನು **'ಪಾರ್ಶ್ವನಾಥ ಪುರಾಣಂ'** ಎಂಬ ಚಂಪೂಕಾವ್ಯದಲ್ಲಿ ತನ್ನ ಆಶ್ರಯದಾತ ನಾಲ್ಕನೇ ಕಾರ್ತವೀರ್ಯನೊಂದಿಗೆ ಕಥಾನಾಯಕನನ್ನು ಸಮೀಕರಿಸಲು ಪ್ರಯತ್ನಿಸಿದ್ದಾನೆ. ರಟ್ಟರ ಆಸ್ಥಾನದಲ್ಲಿದ್ದ ಪಾರ್ಶ್ವಕವಿ ಪುರಾತನ ಕವಿಗಳನ್ನೂ ನೂತನ ಕವಿಗಳನ್ನೂ ಸಮಾನರಾಗಿ ಕೊಂಡಾಡಿದ್ದಾನೆ. ಇಪ್ಪತ್ತನೇ ತೀರ್ಥಂಕರನಾದ ಪಾರ್ಶ್ವನಾಥನನ್ನು ನಾಯಕನನ್ನಾಗಿ ಇಟ್ಟುಕೊಂಡು ರಚಿಸಿದ **'ಪಾರ್ಶ್ವನಾಥ ಪುರಾಣ'**ವು ಸಂಸ್ಕೃತ, ಪ್ರಾಕೃತ ಮತ್ತು ಕನ್ನಡ ಭಾಷೆಗಳಲ್ಲಿ ಈ ಕುರಿತು ರಚನೆಗೊಂಡ ಕಾವ್ಯಗಳಿಂದ ಪ್ರಭಾವಿತವಾಗಿದೆ. ಮಹಾವೀರನಂತೆ ಐತಿಹಾಸಿಕ ವ್ಯಕ್ತಿಯಾದ ಪಾರ್ಶ್ವನಾಥನನ್ನು ಜೈನತೀರ್ಥಂಕರ ಪುರಾಣಗಳ ನಾಯಕನಂತೆ ಕವಿ ಚಿತ್ರಿಸಿದ್ದಾನೆ. ಆದರೆ, ಇಲ್ಲಿ ಭವಾವಳಿಗಳ ತೊಡಕಿಲ್ಲ. ಕಥಾ ಪ್ರಸಂಗಗಳನ್ನು ನಾಟಕೀಯವಾಗಿ, ಸ್ವಾರಸ್ಯಪೂರ್ಣವಾಗಿ ಕಾವ್ಯದಲ್ಲಿ ಅಳವಡಿಸಲಾಗಿದೆ. ಪಂಪ ಕವಿಯ ವಿಶೇಷ ಪ್ರಭಾವಕ್ಕೆ ಒಳಗಾಗಿರುವ ಪಾರ್ಶ್ವಪಂಡಿತನಿಗೆ ಸಂಗೀತ, ನೃತ್ಯ ಮುಂತಾದ ಕಲೆಗಳಲ್ಲಿ ವಿಶೇಷ ಪ್ರಾವೀಣ್ಯ ಇದ್ದಹಾಗೆ ಕಾಣಿಸುತ್ತದೆ. ತನ್ನ ಕಾಲದ, ನಾಡಿನ ಸಸ್ಯಸಂಪತ್ತನ್ನು, ದೇಸಿ ತಿನಿಸುಗಳನ್ನು, ಜನಪದ ದೇವತೆಗಳನ್ನು ತುಂಬಾ ವಿಶಿಷ್ಟವಾಗಿ ವರ್ಣಿಸುವ ಸೊಗಸು ಈತನ ಕಾವ್ಯದಲ್ಲಿ ದೊರೆಯುತ್ತದೆ. ಹೆಸರಿಗೆ ಅನ್ವರ್ಥವಾಗಿ ಪಾಂಡಿತ್ಯದ ಅಪಾರವಾದ ಜ್ಞಾನವನ್ನು ಹೊಂದಿದ್ದ ಪಾರ್ಶ್ವಪಂಡಿತನು ಜನಪದ ಸಂಸ್ಕೃತಿಯ ಬಗೆಗೂ ವಿಶೇಷ ತಿಳುವಳಿಕೆಯನ್ನು ಹೊಂದಿದ್ದ ಎನ್ನುವುದಕ್ಕೆ ಆತನ ಕಾವ್ಯದಲ್ಲಿ ಉಲ್ಲೇಖಿತವಾಗಿರುವ ಜೋಕುಮಾರನ ಆರಾಧನೆ, ಟಗರುಕಾಳಗ, ಮಕ್ಕಳ ಕಲ್ಲಾಟ– ಇಂಥ ಅನೇಕ ನಿದರ್ಶನಗಳಿವೆ. ಪುರಾಣ ಮತ್ತು ಚಂಪೂ ಕಾವ್ಯಗಳ ಮಾರ್ಗೀಯ ಕವಚದೊಳಗೆ ಕನ್ನಡ ಸಂಸ್ಕೃತಿಯ ದೇಸಿಯನ್ನು ತಿರುಳಾಗಿ ಹೊಂದಿದ್ದ ಕವಿ ಪಾರ್ಶ್ವಪಂಡಿತನ **'ಪಾರ್ಶ್ವನಾಥ ಪುರಾಣಂ'**

ವಿಶಿಷ್ಟವಾಗಿದೆ. ಚಾರಿತ್ರಿಕ ವಿವರಗಳನ್ನು ವಿಪುಲವಾಗಿ ಒಳಗೊಂಡ ಪಾರ್ಶ್ವಕವಿ ವಿರಚಿತ 'ಕಲ್ಲೊಳೆ ಶಾಸನ'ವು ಸಾಂಸ್ಕೃತಿಕವಾಗಿ ಮಹತ್ವದ್ದಾಗಿದೆ.

ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಸಂಪಾದನ ವಿಭಾಗದಲ್ಲಿ ಹಿರಿಯ ಸಂಶೋಧಕಿಯಾಗಿರುವ ಡಾ.ವೈ.ಸಿ. ಭಾನುಮತಿ ಅವರು ಪ್ರಾಚೀನ ಕನ್ನಡ ಸಾಹಿತ್ಯ, ಹಸ್ತಪ್ರತಿಶಾಸ್ತ್ರ, ಗ್ರಂಥ ಸಂಪಾದನೆ ಮತ್ತು ಜಾನಪದ ಕ್ಷೇತ್ರಗಳಲ್ಲಿ ವಿಶೇಷ ಪರಿಶ್ರಮದ ಸಾಧನೆಗಳನ್ನು ಮಾಡಿದವರು. ಅವರ ಸಹ್ಯಾದ್ರಿಖಂಡ, ಬತ್ತೀಸ ಪುತ್ತಳಿಕಥೆ, ವಿಜಯಕುಮಾರಿ ಚರಿತೆ, ಕನ್ನಡ ಶ್ರಾವಕಾಚಾರ ಗ್ರಂಥಗಳು, ಸಿದ್ಧಲಿಂಗ ಲಘುಕೃತಿಗಳು, ಸಿದ್ಧಲಿಂಗ ಕಾವ್ಯ ಮತ್ತು ಮಹಾಕೂಟ ಮಹಾತ್ಮ್ಯ ಮುಂತಾದ ಸಂಪಾದಿತ ಗ್ರಂಥಗಳು; ಗ್ರಂಥ ಸಂಪಾದನೆ – ವಿವಕ್ಷೆ, ಗ್ರಂಥ ಸಂಪಾದನೆ–ಕೆಲವು ಅಧ್ಯಯನ, ಆಲಿ ನುಂಗಿದ ನೋಟ, ಜಾನಪದ ಆಂತರ್ಯ ಲೇಖನ ಸಂಕಲನಗಳು; ಕನ್ನಡದಲ್ಲಿ ವರ್ಧಮಾನ ಸಾಹಿತ್ಯ ಪಿಎಚ್.ಡಿ. ನಿಬಂಧ – ಈ ಎಲ್ಲ ಕೃತಿಗಳು ಕನ್ನಡ ವಿದ್ವತ್ ಜಗತ್ತಿಗೆ ಮುಖ್ಯ ಕೊಡುಗೆಗಳಾಗಿವೆ. ಗ್ರಂಥ ಸಂಪಾದನೆಯ ಕ್ಷೇತ್ರ ಹೊಸ ತಲೆಮಾರಿನ ವಿದ್ವಾಂಸರಲ್ಲಿ ಅವಗಣಿತವಾಗಿರುವ ಇಂದಿನ ಸಂದರ್ಭದಲ್ಲಿ ಡಾ. ವೈ.ಸಿ. ಭಾನುಮತಿ ಅವರು ಈ ಕ್ಷೇತ್ರಕ್ಕೆ ತಮ್ಮನ್ನು ಅರ್ಪಿಸಿಕೊಂಡು ಅಪೂರ್ವ ಕೃತಿಗಳ ಸಂಪಾದನೆಗೆ ಹೆಸರಾಗಿದ್ದಾರೆ. ಎರಡನೆಯ ಗುಣವರ್ಮನ **ಪುಷ್ಪದಂತ ಪುರಾಣ**, ಪಾರ್ಶ್ವಪಂಡಿತನ **ಪಾರ್ಶ್ವನಾಥ ಪುರಾಣ** ಎಂಬೆರಡು ಜೈನ ಕಾವ್ಯಗಳನ್ನು ಈವರೆಗೂ ಸಂಪಾದಿತವಾದ ಪಠ್ಯಗಳ ಮತ್ತು ಹಸ್ತಪ್ರತಿಗಳ ಸೂಕ್ಷ್ಮ ಅವಲೋಕನದಿಂದ ಪರಿಶ್ರಮಪೂರ್ವಕವಾಗಿ ಹಾಗೂ ಅಚ್ಚುಕಟ್ಟಾಗಿ ಸಂಪಾದಿಸಿಕೊಟ್ಟಿದ್ದಾರೆ. ಅವರಿಗೆ ಕನ್ನಡ ವಿಶ್ವವಿದ್ಯಾಲಯದ ಪರವಾಗಿ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಬಿ. ಎ. ವಿವೇಕ ರೈ
ಕುಲಪತಿ

ಸಂಪಾದಕರ ನುಡಿ

ಇಮ್ಮಡಿ ಗುಣವರ್ಮ - ಪಾರ್ಶ್ವಪಂಡಿತ ಸಂಪುಟ ವೈಶಿಷ್ಟ್ಯಪೂರ್ಣವಾದ ಸಂಪುಟವಾಗಿದೆ. ಇದು ಒಂಬತ್ತನೆಯ ತೀರ್ಥಂಕರರಾದ ಪುಷ್ಪದಂತ ಮತ್ತು ಇಪ್ಪತ್ಮೂರನೆಯ ತೀರ್ಥಂಕರರಾದ ಪಾರ್ಶ್ವನಾಥರ ಪುರಾಣಗಳನ್ನು ಒಳಗೊಂಡಿದೆ. ಈ ಎರಡೂ ಪುರಾಣಗಳಿಗೆ ಅನೇಕ ವಿಚಾರಗಳಲ್ಲಿ ಸಾಮ್ಯತೆ ಇದೆ. ಇವುಗಳನ್ನು ಇಬ್ಬರು ಸಮಕಾಲೀನ ಕವಿಗಳು ರಚಿಸಿದ್ದಾರೆ.

ಈ ಸಂಪುಟದ ಎರಡೂ ಪುರಾಣಗಳು ಚಾರಿತ್ರಿಕವಾಗಿಯೂ ಮುಖ್ಯವಾಗಿವೆ. ಪುಷ್ಪದಂತ ಪುರಾಣವನ್ನು ರಚಿಸಿದ ಗುಣವರ್ಮ ರಟ್ಟರ ನಾಲ್ಕನೆಯ ಕಾರ್ತವೀರ್ಯನ ಕೈಕೆಳಗಿದ್ದ ನಾಡಪ್ರಭು ಶಾಂತಿವರ್ಮನಿಂದ ಪ್ರೇರಣೆ ಪಡೆದರೆ, ಪಾರ್ಶ್ವನಾಥಪುರಾಣ ರಚಿಸಿದ ಪಾರ್ಶ್ವಪಂಡಿತ ರಟ್ಟರ ನಾಲ್ಕನೆಯ ಕಾರ್ತವೀರ್ಯನ ಆಸ್ಥಾನದಲ್ಲಿಯೇ ಇದ್ದು ಆಶ್ರಯ ಪಡೆದವನು. ಇಬ್ಬರೂ ತಂತಮ್ಮ ಆಶ್ರಯದಾತರನ್ನು ಕಥಾನಾಯಕರೊಂದಿಗೆ ಸಮೀಕರಿಸಿದ್ದಾರೆ. ಆಶ್ರಯದಾತರ ವ್ಯಕ್ತಿಚಿತ್ರವನ್ನು ಕೃತಿಗಳಲ್ಲಿ ಕಡೆದು ನಿಲ್ಲಿಸಿದ್ದಾರೆ. ಹಾಗಾಗಿ ಪ್ರಸ್ತುತ ಸಂಪುಟವು ರಟ್ಟ ಅರಸರ ಕಾಲದ ಸಾಹಿತ್ಯವಾಗಿದೆ. ಈ ಅರಸರು ಜೈನಧರ್ಮದ ಅನುಯಾಯಿಗಳಾಗಿದ್ದರು.

ಇಮ್ಮಡಿ ಗುಣವರ್ಮ ಚಂದ್ರನಾಥಾಷ್ಟಕ ಎಂಬ ಕಿರು ಕೃತಿಯನ್ನೂ ಬರೆದಿದ್ದಾನೆ. ಪಾರ್ಶ್ವಪಂಡಿತನು ಕಲ್ಹೊಳೆ ಶಾಸನದ ಕರ್ತೃವಾಗಿದ್ದಾನೆ. ಈ ಸಂಪುಟದ ಇಬ್ಬರು ಕವಿಗಳೂ ಉತ್ತಮ ಪಾಂಡಿತ್ಯ ಉಳ್ಳವರಾಗಿದ್ದರು. ಹಾಗಾಗಿ ಎರಡೂ ಕಾವ್ಯಗಳು ಪ್ರೌಢವಾಗಿದ್ದು ಆ ಕಾಲದ ಪಾಂಡಿತ್ಯಕ್ಕೆ ನಿದರ್ಶನಗಳಾಗಿವೆ. ಆ ಕಾಲದಲ್ಲಿ ಜೈನಕಾವ್ಯಗಳು ಪಡೆದುಕೊಂಡ ಬದಲಾದ ಪಥದ ಕುರುಹೂ ಆಗಿವೆ.

ಹೀಗೆ ಹಲವು ವಿಶಿಷ್ಟಗಳಿಗೆ ಕಾರಣವಾದ ಪ್ರಸ್ತುತ ಸಂಪುಟದ ಕೃತಿಗಳು ಈಚಿನ ದಶಕಗಳಲ್ಲಿ ಪುನರ್ ಪರಿಷ್ಕರಣೆಗೆ ಒಳಗಾಗಿರಲಿಲ್ಲ. ಪುಷ್ಪದಂತಪುರಾಣ ಸಂಪಾದಿತವಾಗಿ ೭೪ ವರ್ಷಗಳೇ ಕಳೆದುಹೋಗಿವೆ. ಈ ಕಾವ್ಯವನ್ನು ಅಧ್ಯಯನ ಮಾಡಿದವರೂ ವಿರಳ ಎನ್ನಬಹುದು. ವೆಂಕಟರಾವ್ ಮತ್ತು ಶೇಷಯ್ಯಂಗಾರ್ಯರ ಪರಿಷ್ಕರಣವನ್ನು ವಿಮರ್ಶೆಯ ಒರೆಗಲ್ಲಿಗೆ ಹಚ್ಚಿದ ಡಿ.ಎಲ್. ನರಸಿಂಹಾಚಾರ್ಯರು ಒಂದು ಲೇಖನವನ್ನು ಬರೆದಿದ್ದರು. ಅದು ಪೀಠಿಕೆಗಳು ಲೇಖನಗಳು ಸಂಪುಟದಲ್ಲಿ ಅಚ್ಚಾಗಿದೆ. ಅನಂತರದಲ್ಲಿ ಈ ಪುರಾಣವನ್ನು

ಆಳವಾಗಿ ಅಭ್ಯಾಸ ಮಾಡಿದವರೆಂದರೆ ಪ್ರೊ. ಬಿ.ಎ. ವಿವೇಕ ರೈ ಅವರು. ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ ನಾಲ್ಕನೆಯ ಸಂಪುಟಕ್ಕಾಗಿ ವಿವೇಕ ರೈ ಅವರು ೧೯೭೭ರಲ್ಲಿ ಇಮ್ಮಡಿ ಗುಣವರ್ಮನನ್ನು ಕುರಿತು ಸುದೀರ್ಘವಾದ ಬರೆದ ಲೇಖನವೇ ಪುಷ್ಪದಂತ ಪುರಾಣದ ಮೇಲೆ ಬಂದ ಏಕೈಕ ಸಮಗ್ರ ಬರಹವಾಗಿದೆ.

ಪಾರ್ಶ್ವನಾಥ ಪುರಾಣವು ೧೯೫೪ರಲ್ಲಿ ಎಂ. ಮರಿಯಪ್ಪಭಟ್ಟ ಮತ್ತು ಎಂ. ಗೋವಿಂದ ರಾವ್ ಅವರಿಂದ, ೧೯೫೬ರಲ್ಲಿ ಎಸ್. ಬೊಮ್ಮರಸ ಪಂಡಿತರಿಂದ, ೧೯೬೦ ರಲ್ಲಿ ಎಚ್. ಶೇಷಯ್ಯಂಗಾರ್ಯರಿಂದ ಮೂರು ಪರಿಷ್ಕರಣಗಳನ್ನು ಕಂಡಿದೆ. ಬೊಮ್ಮರಸ ಪಂಡಿತರಿಂದ ಗದ್ಯಾನುವಾದವೂ ದಕ್ಕಿದೆ. ರಾಜಶೇಖರ ಇಚ್ಚಂಗಿ ಅವರು 'ಪಾರ್ಶ್ವನಾಥ ಪುರಾಣ ಒಂದು ತೌಲನಿಕ ಅಧ್ಯಯನ' ಎಂಬ ತಮ್ಮ ಪಿಎಚ್.ಡಿ. ಪ್ರಬಂಧದಲ್ಲಿ ಪಾರ್ಶ್ವಪಂಡಿತನನ್ನು ಅಭ್ಯಾಸ ಮಾಡಿದ್ದಾರೆ. ತೀ.ನಂ. ಶಂಕರನಾರಾಯಣ ಅವರು ಕನ್ನಡ ಅಧ್ಯಯನ ಸಂಸ್ಥೆಯ ಸಾಹಿತ್ಯ ಚರಿತ್ರೆಗೆಂದು ಲೇಖನ ಬರೆದಿದ್ದಾರೆ.

ಹೀಗೆ ದಶಕಗಳ ಬಳಿಕ ಪ್ರಸ್ತುತ ಸಂಪುಟದ ಕಾವ್ಯಗಳು ಓದುಗರಿಗೆ ಲಭಿಸುತ್ತಿವೆ. ಈ ಸಂಪುಟವನ್ನು ಸಂಪಾದಿಸಲು ಅವಕಾಶ ಮಾಡಿಕೊಟ್ಟ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳೂ ನನ್ನ ವಿದ್ಯಾಗುರುಗಳೂ ಆದ ಪ್ರೊ. ಬಿ.ಎ. ವಿವೇಕರೈ ಅವರಿಗೆ ವಂದನೆಗಳು. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು ನೀಡಿದ ಸಹಕಾರ ದೊಡ್ಡದು. ಇವರಿಗೆ ನಾನು ಅತ್ಯಂತ ಆಭಾರಿಯಾಗಿದ್ದೇನೆ. ಕೆಲವೊಂದು ಉತ್ತಮ ಸಲಹೆ ಸೂಚನೆಗಳನ್ನು ನೀಡಿದ ಶ್ರೀ ಜಿ.ಜಿ. ಮಂಜುನಾಥನ್ ಅವರನ್ನೂ ಈ ಸಂದರ್ಭದಲ್ಲಿ ನೆನೆಯುತ್ತೇನೆ.

-ವೈ.ಸಿ. ಭಾನುಮತಿ

ಪರಿವಿಡಿ

ಪ್ರಸ್ತಾವನೆ
ಪುಷ್ಪದಂತ ಪುರಾಣಂ

ಕವಿವಿಚಾರ :

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಇಬ್ಬರು ಗುಣವರ್ಮರು ಕಂಡುಬರುತ್ತಾರೆ. ಮೊದಲನೆಯ ಗುಣವರ್ಮ ಕ್ರಿ.ಶ. ೯೦೦ರಲ್ಲಿದ್ದನೆಂದು ಊಹಿಸಲಾಗಿದೆ. ಈತ ಹರಿವಂಶ ಮತ್ತು ಶೂದ್ರಕ ಎಂಬ ಕಾವ್ಯಗಳ ಕರ್ತೃ. ಪ್ರಸ್ತುತ ಸಂಪುಟದ ಕವಿಯನ್ನು ಅಧ್ಯಯನದ ಅನುಕೂಲಕ್ಕಾಗಿ ಆರ್. ನರಸಿಂಹಾಚಾರ್ಯರು ಎರಡನೆಯ ಗುಣವರ್ಮ ಎಂದು ಗುರುತಿಸಿದರು. ಈತ ಪುಷ್ಪದಂತ ಪುರಾಣ ಮತ್ತು ಚಂದ್ರನಾಥಾಷ್ಟಕ ಎಂಬ ಕೃತಿಗಳನ್ನು ರಚಿಸಿದ್ದಾನೆ.

ಎರಡನೆಯ ಗುಣವರ್ಮ ತನ್ನ ಕಾಲವನ್ನು ಹೇಳಿಕೊಂಡಿಲ್ಲ. ಈ ಬಗ್ಗೆ ವಿವಿಧ ವಿದ್ವಾಂಸರು ಚರ್ಚಿಸಿದ್ದು ಅವರ ಅಭಿಪ್ರಾಯಗಳನ್ನು ಇಲ್ಲಿ ಕ್ರೋಢೀಕರಿಸಿದೆ. ಆರ್. ನರಸಿಂಹಾಚಾರ್ಯರು ಕವಿಚರಿತೆಯ ಮೊದಲ ಸಂಪುಟದಲ್ಲಿ "ಇವನು ಜೈನಕವಿ, ಇವನ ಪೋಷಕನು ಅಹಿತ ಕ್ಷ್ಮಾಭೃತ್ಪಟ್ಟಜ್ರನಾದ ಕಾರ್ತವೀರ್ಯರಾಜನ ಕೈಯ ಕೆಳಗೆ ನಾಡ್ಪ್ರಭುವಾಗಿದ್ದ ಶಾಂತಿವರ್ಮನು; ಗುರು ಕಾರ್ತವೀರ್ಯನ ಗುರುವಾದ ಮುನಿಚಂದ್ರನು" ಎಂದಿದ್ದಾರೆ. ಈತನ ಕಾಲ ನಿರ್ದೇಶಿಸುವಾಗ ಪೂರ್ವಕವಿಸ್ಮರಣೆಯ ಪದ್ಯವನ್ನು ಆಧರಿಸಿ ಜನ್ನನನ್ನು (೧೨೩೦) ಸ್ತುತಿಸಿರುವುದರಿಂದ ಆ ಕವಿಗಿಂತ ಈಚೆಯವನಾಗಿರಬೇಕು, ಮಲ್ಲಿಕಾರ್ಜುನನು ಪುಷ್ಪದಂತ ಪುರಾಣದ ಉಲ್ಲೇಖಮಾಡಿರುವುದರಿಂದ (ಸು. ೧೨೪೫) ಈತನಿಗಿಂತ ಹಿಂದೆ ಇದ್ದಿರಬೇಕೆಂದು ಊಹಿಸಿದರು. ಇವರು ಕ್ರಿ.ಶ. ೧೨೨೮ರ ಸವದತ್ತಿ ಶಾಸನವನ್ನು ಬೆಂಬಲವಾಗಿ ತೆಗೆದುಕೊಂಡು ಈ ಶಾಸನೋಕ್ತ ಕಾರ್ತವೀರ್ಯ, ಮುನಿಚಂದ್ರ, ಶಾಂತಿನಾಥ ಎಂಬವರು ಪುಷ್ಪದಂತ ಪುರಾಣದಲ್ಲಿ ಉಕ್ತರಾದವರೇ ಇರಬೇಕೆಂದರು. ಶಾಸನದ ಪ್ರಕಾರ ಶಾಂತಿನಾಥನು ಮುನಿಚಂದ್ರನ ಮಂತ್ರಿ. ಶಾಸನದಲ್ಲಿ ಈತನನ್ನು 'ಇಷ್ಟಶಿಷ್ಟ ಚಿಂತಾಮಣಿ' ಎಂದು ವರ್ಣಿಸಿರುವುದು ಪುಷ್ಪದಂತ ಪುರಾಣದಲ್ಲಿ ಬರುವ 'ಇಷ್ಟಶಿಷ್ಟ ಕಲ್ಪಕುಜ' ಎಂಬುದಕ್ಕೆ ಸಂವಾದಿಯಾಗಿದೆ. ಕಾರ್ತವೀರ್ಯನು ಕ್ರಿ.ಶ. ೧೨೦೨-೧೨೨೦ರವರೆಗೆ ಆಳಿದ್ದರಿಂದ ಈ ಕವಿಯ ಕಾಲವನ್ನು ಸು. ೧೨೩೫ ಎಂದು ನಿರ್ಧರಿಸಿದರು. ಕಾರ್ತವೀರ್ಯನು ಕುಂತಳ ದೇಶದ ಕೂಂಡಿಯನ್ನು ಆಳುತ್ತಿದ್ದುದರಿಂದ ಕೂಂಡಿಯೇ ಕವಿಯ ಸ್ಥಳ ಇರಬೇಕೆಂಬುದು ಇವರ ಊಹೆ.

ಎ. ವೆಂಕಟಸುಬ್ಬಯ್ಯನವರು ಗುಣವರ್ಮನ ಕಾಲವನ್ನು ಚರ್ಚಿಸುತ್ತ ಕವಿಚರಿತೆಕಾರರು ಹೇಳಿರುವಂತೆ ಈ ಕವಿಯ ಕಾಲದಲ್ಲಿ ಎಂದರೆ ಕ್ರಿ.ಶ. ೧೨೩೫ರಲ್ಲಿ ಕಾರ್ತವೀರ್ಯನಾಗಲಿ ಅವನ ಮಗ ಲಕ್ಷ್ಮೀದೇವನಾಗಲಿ ಇರಲಿಲ್ಲವಾದುದರಿಂದ ಈ ಕವಿಯು ನಾಲ್ಕನೆಯ ಕಾರ್ತವೀರ್ಯನ ಸಭೆಯಲ್ಲಿ ಪುಷ್ಪದಂತ ಪುರಾಣವನ್ನು ಬರೆದುದು ಅಸಂಭವವೆಂದು ಹೇಳಿ "ಜನ್ನನು ಯಶೋಧರ ಚರಿತ್ರೆ ಬರೆದ ಕಾಲದಿಂದ ಎಂದರೆ ೧೨೦೯ರಿಂದ ಈ ಕಾರ್ತವೀರ್ಯನ ಆಳ್ವಿಕೆಯ ಅಂತ್ಯಕಾಲವಾದ ೧೨೨೦ರೊಳಗೆ ಎಂದರೆ ೧೨೧೬ರಲ್ಲಿ ಈ ಕಾವ್ಯವನ್ನು ಬರೆದಿರುವನು" ಎಂದು ಪ್ರತಿಕ್ರಿಯೆ ತೋರಿದರು. ಇದನ್ನು ಗಮನಿಸಿದ ಕವಿಚರಿತೆಕಾರರು ಕವಿಚರಿತೆಯ ಮೂರನೆಯ ಸಂಪುಟದ ಗ್ರಂಥಶುದ್ಧಿ ಭಾಗದಲ್ಲಿ ಗುಣವರ್ಮನ ಕಾಲವನ್ನು ೧೨೧೫ ಎಂದು ಸ್ವೀಕರಿಸಿದರು.

ವೆಂಕಟರಾವ್ ಮತ್ತು ಶೇಷಯ್ಯಂಗಾರ್ಯರು ಪೂರ್ವೋಕ್ತ ವಿದ್ವಾಂಸರ ಚರ್ಚೆಯನ್ನು ಮುಂದುವರಿಸಿ ವಜ್ರದೇವ ಮತ್ತು ಲಿಪಿಕಾರ ಮಾದಿರಾಜನ ಮೇಲೆ ಕೇಂದ್ರೀಕರಿಸಿ ಕೆಲವು ತೀರ್ಮಾನಗಳನ್ನು ನೀಡಿದರು. ಪುಷ್ಪದಂತ ಪುರಾಣದ "ವಜ್ರದೇವನರನಾಸ್ಥಾನದೊಳ್ ಎಂದೋರಂತಿರೆ ಕೋವಿದರ್ ಕೂರ್ತ ನಣ್ಪಂದೆ ಕೊಂಡು ಕೊನೆಯಲ್ ಅದಂ ಶಾಂತಿವರ್ಮಂ ಕೇಳ್ದು ಎನ್ನಂ ಆದರಿಸಿ ಈಗಳ್ ನೀಂ ಈ ಪುರಾಣಮಂ ಪೇಟ್" ಎಂಬ ಪದ್ಯಭಾಗವನ್ನು ಒರೆಹಚ್ಚಿ ವಜ್ರದೇವನಿಗೂ ಈ ಪುರಾಣರಚನೆಗೂ ಯಾವ ಸಂಬಂಧವೂ ಇಲ್ಲ. ವಜ್ರದೇವನೇ ಆ ಕಾರ್ತವೀರ್ಯನೆಂದು ಹೇಳುವುದಕ್ಕೆ ಯಾವ ಆಧಾರವೂ ಇಲ್ಲ ಎಂದು ವಾದಿಸಿ ವಜ್ರದೇವನನ್ನು ಗುರುತಿಸಲೆತ್ನಿಸಿದರು. ಹಾಸನಜಿಲ್ಲೆಯ ೧೦೬ನೆಯ ಶಾಸನವನ್ನು ಸಾಕ್ಷಿಯಾಗಿರಿಸಿಕೊಂಡು ಇಲ್ಲಿಯ ಎರಡನೇ ಬಲ್ಲಾಳನ ಪ್ರತಿದ್ವಂದ್ವಿಯಾದ ವಜ್ರದೇವನೇ ಈ ಕವಿ ಉಲ್ಲೇಖಿಸಿರುವ ವಜ್ರದೇವನೆಂದು ನಿರ್ಧರಿಸಿದರು. ಈ ಕಾರಣಗಳನ್ನೊಡ್ಡಿ ಇವರು ಗುಣವರ್ಮನ ಕಾಲವನ್ನು ೧೨೨೦-೧೨೩೦ ಎಂದು ಅಂಗೀಕರಿಸಿದರು.

ಡಿ.ಎಲ್. ನರಸಿಂಹಾಚಾರ್ಯರು ಇವರೆಲ್ಲರ ಮಂಡನೆಗಳನ್ನು ಇಟ್ಟುಕೊಂಡು ಎ. ವೆಂಕಟರಾವ್ ಮತ್ತು ಹೆಚ್. ಶೇಷಯ್ಯಂಗಾರ್ಯರು ಹೇಳಿರುವ "ಈ ವಜ್ರನ ಆಸ್ಥಾನದಲ್ಲಿ ಪಂಡಿತರು ಗುಣವರ್ಮಕವಿಯ ಪಾಂಡಿತ್ಯವನ್ನು ಹೊಗಳಿದರೆಂದೂ ಆ ಹೊಗಳಿಕೆಯನ್ನು ನಾಲ್ಕನೆಯ ಕಾರ್ತವೀರ್ಯರಾಜನಲ್ಲಿ ಸಾಚಿವ್ಯಪ್ರಭುವಾಗಿದ್ದ ಶಾಂತಿವರ್ಮನು ಕೇಳಿದ" ಎಂಬ ಮಾತನ್ನು ಶಂಕಿಸಿದರು. ಕವಿಯನ್ನು ಹೊಗಳಿದ್ದು ಒಬ್ಬ ರಾಜನ ಆಸ್ಥಾನದಲ್ಲಿ ; ಬೇರೊಬ್ಬ ರಾಜನಲ್ಲಿ ಮಾಂಡಲಿಕನಾದವನು ಕಾವ್ಯವನ್ನು ಬರೆಯುವಂತೆ ಪ್ರೇರಿಸಿದವನು ಈ ರೀತಿಯಾಗಿ ಅರ್ಥಮಾಡುವುದು ಸರಿಯಾಗಿರುವಂತೆ ತೋರುವುದಿಲ್ಲ ಎಂದು ಹೇಳುತ್ತ ಹಾಸನ ಶಾಸನದ ವಜ್ರದೇವನು ಗುಣವರ್ಮ ಹೇಳಿದ ವಜ್ರದೇವನೇ ಏಕಾಗಿರಬೇಕು ಎಂದು ಪ್ರಶ್ನಿಸಿ, ಗುಣವರ್ಮ ಕಾರ್ತವೀರ್ಯನಿಗೆ 'ಅಹಿತಕ್ಷ್ಮಾಭೃದ್ಭೃಹದ್ವಜ್ರ' ಎಂದು ವಿಶ್ಲೇಷಿಸಿರುವಲ್ಲಿಯೇ ಆ ರಾಜನಿಗೆ

ವಜ್ರದೇವ ಎಂಬ ಹೆಸರೂ ಇತ್ತೆಂಬುದು ಧ್ವನಿತವಾಗುತ್ತದೆ ಎಂಬ ಹೊಸ ಅಂಶವನ್ನು ನೀಡಿದರು.

ಬಿ.ಎ. ವಿವೇಕ ರೈ ಅವರು ಈ ಎಲ್ಲ ವಿದ್ವಾಂಸರ ಚರ್ಚೆಗಳನ್ನು ಮುಂದಿಟ್ಟುಕೊಂಡು ಹೀಗೆ ನಿರ್ಧರಿಸಿದರು - "೨ನೆಯ ಗುಣವರ್ಮನು ೪ನೆಯ ಕಾರ್ತವೀರ್ಯನ ಆಳ್ವಿಕೆಯ ಕಾಲದಲ್ಲಿ ಅಂದರೆ ೧೧೯೯ರಿಂದ ೧೨೨೨ರ ಒಳಗೆ ಪುಷ್ಪದಂತ ಪುರಾಣವನ್ನು ರಚನೆ ಮಾಡಿರಬೇಕು. ಇದರಿಂದಾಗಿ ಗುಣವರ್ಮನ ಕೃತಿರಚನೆಯ ಕಾಲದ ಮೇಲಿನ ಗಡು ೧೨೨೨. ಗುಣವರ್ಮನು ತನ್ನ ಕೃತಿಯಲ್ಲಿ ಜನ್ನನನ್ನು ಸ್ಮರಿಸಿರುವ ಕಾರಣ ಅವನ ನಂತರ ಇದ್ದಿರಬೇಕು ಎಂಬುದನ್ನು ಈ ಮೊದಲೇ ಅಭಿಪ್ರಾಯಿಸಿದೆ. ಜನ್ನನ ಅನಂತನಾಥ ಪುರಾಣದ ರಚನೆಯ ಕಾಲ ೧೨೩೦. ಆದರೆ ಈ ವೇಳೆಗೆ ೪ನೆಯ ಕಾರ್ತವೀರ್ಯ (೧೧೯೯-೧೨೨೨)ನು ರಾಜ್ಯವಾಳುತ್ತಿರಲಿಲ್ಲ. ಆದ್ದರಿಂದ ಜನ್ನನ ಯಶೋಧರಚರಿತ್ರೆಯನ್ನು (೧೨೦೯) ಗಮನಿಸಿ, ಗುಣವರ್ಮನು ಅವನನ್ನು ತನ್ನ ಕೃತಿಯಲ್ಲಿ ಸ್ಮರಿಸಿರಬೇಕು. ಜನ್ನನ ಅನಂತನಾಥ ಪುರಾಣ (೧೨೩೦) ಗುಣವರ್ಮನ ಕೃತಿಯ ನಂತರ ಬಂದಿರಬೇಕು. 'ಜನ್ನಿಗನಿಂಪು' ಎನ್ನುವ ಮಾತು ಅನಂತನಾಥ ಪುರಾಣಕ್ಕಿಂತ ಯಶೋಧರಚರಿತ್ರೆಗೆ ಹೆಚ್ಚು ಅನ್ವಯಿಸುತ್ತದೆ. ಇದರಿಂದಾಗಿ ೨ನೆಯ ಗುಣವರ್ಮನು ಜನ್ನನ ಸಮಕಾಲೀನ ಎನ್ನಬೇಕಾಗುತ್ತದೆ. ಅವನು ಪುಷ್ಪದಂತ ಪುರಾಣವನ್ನು ೧೨೦೯ರ ಬಳಿಕ ೧೨೨೨ರ ಒಳಗೆ ರಚಿಸಿರಬೇಕು. ಈ ದೃಷ್ಟಿಯಿಂದ ಆರ್. ನರಸಿಂಹಾಚಾರ್ ಮತ್ತು ಎ. ವೆಂಕಟಸುಬ್ಬಯ್ಯನವರು ಹೇಳುವ ಕಾಲಗಳು (ಅನುಕ್ರಮವಾಗಿ ಸುಮಾರು ೧೨೧೫ ಮತ್ತು ೧೨೧೬) ವಿಶೇಷವಾಗಿ ಬದಲಾವಣೆಗೊಳ್ಳುವ ಅಗತ್ಯ ಕಾಣುವುದಿಲ್ಲ." ಈ ಮಾತಿಗೆ ಪೂರಕವಾಗಿ ಕೆಲವು ಅಂಶಗಳನ್ನು ಇಲ್ಲಿ ಪ್ರಸ್ತಾಪಿಸಬಹುದು.

ಈಗಾಗಲೇ ನೋಡಿರುವಂತೆ ಇದೇ ಸಂಪುಟದ ಪಾರ್ಶ್ವಪಂಡಿತಕವಿ ರಟ್ಟರ ನಾಲ್ಕನೆಯ ಕಾರ್ತವೀರ್ಯನ ಆಸ್ಥಾನಕವಿ. ಕಾರ್ತವೀರ್ಯನೇ ವಜ್ರದೇವ ಎಂದು ಒಪ್ಪಿಕೊಳ್ಳುವುದಾದರೆ ಇವರಿಬ್ಬರೂ ಸಮಕಾಲೀನರೆಂದು ಹೇಳಬಹುದು. ಪಾರ್ಶ್ವಪಂಡಿತ ತನ್ನ ಕಾವ್ಯದಲ್ಲಿ ಒಬ್ಬ ಗುಣವರ್ಮನನ್ನು ಸ್ತುತಿಸಿದ್ದಾನೆ. ಈತ ಮೊದಲನೆಯವನೇ ಇರಬೇಕೆಂಬ ಈವರೆಗಿನ ತಿಳಿವಳಿಕೆಯನ್ನು ಪರಿಶೀಲಿಸಬೇಕಾಗುತ್ತದೆ. ಸದ್ಯದಲ್ಲಿ ಎರಡನೆಯ ಗುಣವರ್ಮನ ಕಾಲ ಕ್ರಿ.ಶ. ೧೨೧೫ ಎಂದೇ ಒಪ್ಪಿತವಾಗಿದೆ.

ಗುಣವರ್ಮನ ವೈಯಕ್ತಿಕ ಚರಿತ್ರೆಯ ಬಗ್ಗೆ ಹೆಚ್ಚಿನ ಮಾಹಿತಿಯೇನೂ ದೊರೆಯುತ್ತಿಲ್ಲ. ಈತನ ಜೀವನದ ಮೇಲೆ ಗಾಢವಾದ ಪ್ರಭಾವ ಬೀರಿದ ಇಬ್ಬರು ವ್ಯಕ್ತಿಗಳೆಂದರೆ ಈತನ ಗುರು ಮುನಿಚಂದ್ರಪಂಡಿತ ಮತ್ತು ಆಶ್ರಯದಾತನಾದ ಶಾಂತಿವರ್ಮ. ಪ್ರತಿ ಆಶ್ವಾಸಾಂತ್ಯ ಗದ್ಯದಲ್ಲಿ ಮುನಿಚಂದ್ರಪಂಡಿತದೇವನನ್ನು ಉಲ್ಲೇಖಿಸಲಾಗಿದೆ. ಈತನ ದಯದಿಂದಲೇ ಕವಿತಾಶಕ್ತಿ ಅನುಗ್ರಹವಾಯಿತೆಂಬುದು ಕವಿಯ ನಂಬಿಕೆ –

ಭಾವಿಸೆ ಚಿತ್ರಮೆನಲ್ ವಿಬು
ಧಾವಳಿ ಗುಣವರ್ಮಬುಧನನತಿ ಕೃಪೆಯಿಂ ಕೊ
ರ್ತೋವಿ ಮುನಿಚಂದ್ರ ಪಂಡಿತ
ದೇವರ್ ಗುರುವಾಗೆ ಕವಿತೆ ಬಂದುದು ಚಿತ್ರಂ ೧-೫೯

ಇದರಿಂದ ಈತ ಕವಿಗೆ ಕಾವ್ಯಗುರುವೂ ಆಗಿದ್ದನೆಂದು ತಿಳಿಯಬಹುದು. ಮುನಿಚಂದ್ರ ಪಂಡಿತನು ಕಾರ್ತವೀರ್ಯನಿಗೂ ಗುರು ಹಾಗೂ ಮಂತ್ರಿ ಲಕ್ಷ್ಮೀದೇವನಿಗೆ ಶಿಕ್ಷಾಗುರುವಾಗಿದ್ದ.

ಪಂಪ ಅರಿಕೇಸರಿಯ, ರನ್ನ ಅತ್ತಿಮಬ್ಬೆ ಚಾವುಂಡರಾಯರ ಜೀವನಚರಿತ್ರೆಯನ್ನು ಕಟ್ಟಿಕೊಟ್ಟಂತೆ ಗುಣವರ್ಮನು ತನ್ನ ಆಶ್ರಯದಾತನಾದ ಶಾಂತಿವರ್ಮನ ಕಿರುಚರಿತ್ರೆಯನ್ನು ಕಟ್ಟಿಕೊಟ್ಟಿದ್ದಾನೆ. ಶಾಂತಿವರ್ಮನನ್ನು ವಿಷ್ಣುವಿಗೆ ಹೋಲಿಸುವ ಈ ಕವಿ ವಿಷ್ಣು ಹೇಗೆ ತನ್ನನ್ನು ಕ್ಷೀರಸಮುದ್ರಕ್ಕೆ ಸಮರ್ಪಿಸಿಕೊಂಡು ಲಕ್ಷ್ಮೀಯನ್ನೂ ಕೌಸ್ತುಭವನ್ನೂ ಪಡೆದನೊ ಹಾಗೆ ಈತ ಗುಣವರ್ಮನಿಗೆ ತನ್ನನ್ನೇ ಸಮರ್ಪಿಸಿಕೊಂಡು ಕಾವ್ಯರತ್ನವನ್ನು, ಕೀರ್ತಿಯನ್ನು ಪಡೆದ ಎನ್ನಲಾಗಿದೆ. ಶಾಂತಿವರ್ಮನ ಮೇಲಿನ ಪ್ರೀತಿ, ಭಕ್ತಿಯಿಂದಲೇ ಕವಿ ಈ ಕಾವ್ಯವನ್ನು ರಚಿಸಿರಬೇಕು. ಪಂಪ-ಅರಿಕೇಸರಿಯ ಸಂಬಂಧದಂತೆ ಗುಣವರ್ಮ-ಶಾಂತಿವರ್ಮರ ಸಂಬಂಧವಿದ್ದಿತೆನ್ನಬಹುದು. ಇಲ್ಲಿ ಕವಿಗುಣವರ್ಮ ಪಂಪನಿಂದ ನೇರವಾಗಿ ಪ್ರಭಾವಿತನಾಗಿದ್ದಾನೆ. ಏಕೆಂದರೆ ಪಂಪಭಾರತದಲ್ಲಿ ಅರಿಕೇಸರಿಯನ್ನು ನಾರಾಯಣನಿಗಿಂತ ಉತ್ತಮ ಎಂದು ಹೇಳುವಾಗ ಅರಿಕೇಸರಿ ಶತ್ರು ಸೈನ್ಯಮಥನದಿಂದ ಜಯಲಕ್ಷ್ಮೀಯನ್ನು ಪಡೆದನು, ನಾರಾಯಣನಾದರೆ ದೇವದಾನವರು ಸೇರಿ ಸಮುದ್ರಮಥನ ಮಾಡಿದಾಗ ಹುಟ್ಟಿ ಬಂದ ಲಕ್ಷ್ಮೀಯನ್ನು ಏನೂ ಕಷ್ಟವಿಲ್ಲದೆ ಸ್ವೀಕರಿಸಿದನೆಂದು ಪಂಪನೇ ಹೇಳಿದ್ದಾನೆ. ಇದೇ ವಿಚಾರವನ್ನು ಸ್ವಲ್ಪ ಮಾರ್ಪಾಟಿನೊಂದಿಗೆ ಗುಣವರ್ಮ ಈ ಸಂದರ್ಭಕ್ಕೆ ಅನ್ವಯಿಸಿದ್ದಾನೆ. ಪಂಪನಂತೆ ಈತನೂ ಪ್ರಸ್ತುತ ಕಾವ್ಯವನ್ನು ಶಾಂತಿವರ್ಮನಿಗೆ ಅರ್ಪಿಸಿದ್ದಾನೆ.

ಶಾಂತಿವರ್ಮ ನಾಲ್ಕನೆಯ ಕಾರ್ತವೀರ್ಯನ ರಾಜ್ಯದಲ್ಲಿ ಸ್ಥಳೀಯ ಅರಸನಾಗಿದ್ದ. 'ನಾಟ್ಟಿಘು ಶಾಂತಿವರ್ಮ' ಎಂದೇ ಕವಿ ಬಣ್ಣಿಸಿದ್ದಾನೆ. ವಜ್ರದೇವನ ಆಸ್ಥಾನದಲ್ಲಿ ಗುಣವರ್ಮನ ಕವಿತಾಶಕ್ತಿಯನ್ನು ಕೊಂಡಾಡಲು, ಇದನ್ನು ಕೇಳಿದ ಶಾಂತಿವರ್ಮ ಜಿನಕಥೆಯನ್ನು ನಿರೂಪಿಸುವಂತೆ ಗುಣವರ್ಮನನ್ನು ಹುರಿದುಂಬಿಸಿದನು.

ಎಂದೋರಂತಿರೆ ವಜ್ರದೇವ ನರನಾಥನಾಸ್ಥಾನದೊಳ್ ಕೂರ್ತ ನ
ಣ್ಪಿಂದಂ ಕೋವಿದರೆಯ್ದೆ ಕೊಂಡು ಕೊನೆಯಲ್ ಕೇಳ್ದಟ್ಟಜಿಂ ಶಾಂತಿವ
ರ್ಮಂ ದೀನಾನತವರ್ಮನಾದರಿಸಿ ನೀಂ ಪೇಟಿಂದೊಡೀಗಳ್ ಮನಂ
ದಂದಂ ಪಾಲ್‌ಗಡ ಮರ್ದೆನಲ್ ಜಿನಕಥಾವಿಸ್ತಾರಮಂ ಸಾರಮಂ ೧-೬೭

ಕಾವ್ಯವನ್ನು ಕನ್ಯೆಗೆ ಹೋಲಿಸಿ ಶಾಂತಿವರ್ಮನನ್ನೇ ಅಳಿಯನೆಂದು ಭಾವಿಸಿ ಅಳಿಯ ಎಂಬ ಪದವನ್ನೇ ಶ್ಲೇಷೆಯಿಂದ ಬಳಸಿರುವುದುಂಟು –

ಅಳಿಯಂ ಮೊಜಿ಼ಯಿಂ ಭಾಗ್ಯದಿ
ನಳಿಯಂ ಸೌಭಾಗ್ಯದಿಂದಮಳಿಯಂ ಗುಣದಿಂ
ದಳಿಯಂ ವಿತರಣಗುಣದಿಂ
ದಳಿಯನೆನಿಪ್ಪಂಗೆ ಕುಡುಗೆ ಕೃತಿಕನ್ಯಕೆಯಂ ೧-೨೦

ಎಂದು ಕವಿತಾ ಚಮತ್ಕಾರವನ್ನೂ, ಪ್ರೀತಿಯನ್ನೂ ಒಟ್ಟಿಗೇ ವ್ಯಕ್ತಪಡಿಸಿದ್ದಾನೆ. ಉತ್ತಮ ಕಾವ್ಯವನ್ನೂ, ಉತ್ತಮ ಕನ್ಯೆಯನ್ನೂ ಅರಿಕೇಸರಿಗೆ ಅರ್ಪಿಸಬೇಕೆಂಬ ಪಂಪನ ಆಶಯವೇ ಇಲ್ಲಿ ಮಾರ್ದನಿಸಿದೆ. ಶಾಂತಿವರ್ಮನನ್ನು ಕೀರ್ತಿಪತಾಕ, ಪುರುಷೋತ್ತಮ, ಗುಣರತ್ನಭೂಷಣ, ಸರಸ್ವತೀ ಕರ್ಣಪೂರ, ಸತ್ಯರಾಧೇಯ, ಗಂಭೀರ ನೀರಾಕರ, ಕದನ ಕಂಠೀರವ, ಪ್ರಭುಕುಲ ಶಿರೋಮಣಿ, ವಿವೇಕ ಚತುರಾನನ, ಮಲ್ಲಿಕಾವಲ್ಲಭ, ಸಕಲಸುಕವಿಪಿಕಮಾಕಂದ, ಜಿನಾರ್ಣವ ಪೂರ್ಣಚಂದ್ರ, ಸಕಲಜನಮನೋಹರ, ಕರ್ಣಾಟಕೀ ಕರ್ಣಾವತಂಸ, ಮಳೆಯ ಮಾನಿನೀ ಮನೋಮಾನಸಹಂಸ, ಕೇರಳೀಕುಚಕಲಶತಾರಹಾರ, ಸಿಂಹಳ ಸೀಮಂತಿನೀ ಸಿಂಧೂರ ಎಂದು ಈತ ಹಲವು ವಿಶೇಷಣಗಳಿಂದ ಪ್ರಶಂಸಿಸಿದ್ದು ಇಲ್ಲಿಯ ಅನೇಕ ವಿಶೇಷಣಗಳು ಪಂಪನಿಂದ ಸ್ವೀಕರಿಸಿರುವಂಥವು.

ಗುಣವರ್ಮ ಶಾಂತಿವರ್ಮನನ್ನು ಕಾವ್ಯದಲ್ಲಿ ಬರುವ ಮಹಾಪದ್ಮನೊಡನೆ ಸಮೀಕರಿಸಿದ್ದಾನೆ. ಹಾಗಾಗಿ ಅಷ್ಟಮಾಶ್ವಾಸದಲ್ಲಿ ಕಥಾನಾಯಕನ ಜೊತೆ ಜೊತೆಯಲ್ಲಿಯೇ ಈತನ ವ್ಯಕ್ತಿತ್ವವನ್ನು ಬಿಡಿಸಿಟ್ಟಿದ್ದಾನೆ -

ಜನಕಂ ವಿಶ್ರುತವಂದಿವೃಂದಜನಕಂ ಬಪ್ಪಂ ಲಸನ್ಮಾತೆ ಮಾ
ನಿನಿ ಮಾದಾಂಬಿಕೆ ಭಾಮೆ ಭಾಮಲೆ ಜಿನೇಂದ್ರಂ ದೈವವಮ್ಮಮ್ಮ ಕೀ
ರ್ತಿನಿದಾನಂ ನೃಪಕಾರ್ತವೀರ್ಯನಹಿತಕ್ಷ್ಮಾಭೃದ್ವ್ಯೂಹದ್ವಜ್ರನಾ
ಳ್ವನೆನಲ್ ನಾಟ್ಟಿಭು ಶಾಂತಿವರ್ಮನನದಿನ್ನೇವಣ್ಣಿಪಂ ಬಣ್ಣಿಪಂ ೮-೬೨

ಈ ಪದ್ಯದಿಂದ ಶಾಂತಿವರ್ಮನ ತಂದೆ ಬೊಪ್ಪ, ತಾಯಿ ಮಾದಾಂಬಿಕೆ, ಪತ್ನಿ ಭಾಮಲೆ, ರಾಜ ಕಾರ್ತವೀರ್ಯನೆಂಬುದು, ರಾಜನಿಗೆ ವಜ್ರ ಎಂಬ ವಿಶೇಷ ಹೆಸರಿರುವುದು ಸ್ಪಷ್ಟವಾಗುತ್ತದೆ.

ಕವಿಗೆ ಕಾವ್ಯಲಕ್ಷಣ, ಸ್ವರೂಪ, ಕಾವ್ಯಮೀಮಾಂಸೆಯ ಪರಿಜ್ಞಾನ ಚೆನ್ನಾಗಿದೆ. ಈ ಬಗ್ಗೆ ಪಂಪನಂತೆ ಈತನೂ ಅನೇಕ ಪದ್ಯಗಳಲ್ಲಿ ಶಾಸ್ತ್ರಕಾರನಾಗಿ ಚಿಂತಿಸಿದ್ದಾನೆ. ಪಂಪನು ಕಾವ್ಯಬಂಧವು "ಮೃದುಬಂಧದೊಳೊಂದುವುದು...." ಎಂದಂತೆ ಈತನೂ "ಮೃದುಪದ ಬಂಧಮುಂ ಸುರುಚಿರಾರ್ಥಮುಮುತ್ಕಟ ವೃತ್ತಿಯಾಗಿ ತೀವಿದ ರಸಮುಂ...." (೧-೪೦) ಎಂದು ಹೇಳಿದ್ದಾನೆ. ಈತ ಕವಿಯಾಗಿರುವುದಷ್ಟೇ ಅಲ್ಲ ಗಮಕಿ ವಾದಿ ವಾಗ್ಮಿಯೂ ಆಗಿರಬೇಕು. ಇದರಲ್ಲಿ ತನಗೆ ಸರಿಸಾಟಿಯಾಗಿರುವವರು ಯಾರಿದ್ದಾರೆ ಎಂದು ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ.

ಗುಣವರ್ಮ ಹಲವಾರು ಬಿರುದುಗಳನ್ನು ಪಡೆದಿದ್ದನು. 'ಕವಿಕುಲತಿಲಕ' 'ಸರಸ್ವತೀ ಕರ್ಣಪೂರ' 'ಸಹಜಕವಿ ಸರೋವರ ಹಂಸ' 'ಪ್ರಭುಗುಣಾಬ್ಜಿನೀಕಳಹಂಸ' 'ಗುಣರತ್ನಭೂಷಣ' 'ಭವ್ಯರತ್ನಾಕರ' 'ಶ್ರೀರಾಜವಿದ್ಯಾಧರ' 'ಮಾನಮೇರು' 'ಸಾಕ್ಷರ ಸಮಯಾವಲಂಬಿ' ಇತ್ಯಾದಿ ಬಿರುದುಗಳಿದ್ದು ಇದರಲ್ಲಿ ಕೆಲವು ಶಾಂತಿವರ್ಮ ಮತ್ತು ಗುಣವರ್ಮ ಇಬ್ಬರಿಗೂ ಅನ್ವಯವಾಗುವಂತಿವೆ.

ಗುಣವರ್ಮನ ಕವಿತಾಶಕ್ತಿ ರಾಜನ ಆಸ್ಥಾನದಲ್ಲಿ ಪ್ರಶಂಸೆಗೆ ಒಳಗಾಗಬೇಕಾದರೆ ಈತ ಪುಷ್ಪದಂತ ಪುರಾಣಕ್ಕೂ ಮೊದಲೇ ಕೆಲವೊಂದು ಚಿಕ್ಕ ಚಿಕ್ಕ ಕೃತಿಗಳನ್ನು ರಚಿಸಿರಬೇಕು. ಸದ್ಯಕ್ಕೆ ಉಪಲಬ್ಧವಿರುವ ಕೃತಿಯೆಂದರೆ ಚಂದ್ರನಾಥಾಷ್ಟಕ. ಇದು ಕೊಲ್ಲಾಪುರದ ಚಂದ್ರನಾಥನ ಮೇಲೆ ಬರೆದ ಸ್ತುತಿಮಾಲೆಯಾಗಿದೆ -

ಬಹುವಿದ್ಯಾಮಂಡನಂ ಪಂಡಿತಮುನಿಚಂದ್ರವ್ರತಿ ಶ್ರೀ ಪಾದಾಂಭೋ
ರುಹ ಸೇವಾಸಂಗಭೃಂಗಂ ಕ್ಷಿತಿನುತ ಗುಣವರ್ಮಂ ವಚೋಮಾಲೆಯಿಂದ
ನ್ವಹಮಾದಂ ಪೂಜಿಸಲ್ ರಾಜಿಪಪದನನಘಂ ಮಾಳ್ಕೆ ಭವ್ಯರ್ಗೆ ಸೌಖ್ಯಾ
ವಹಮಂ ಕೊಲ್ಲಾಪುರ ಶ್ರೀ ತ್ರಿಭುವನ ತಿಳಕಾಲಂಕೃತಂ ಚಂದ್ರನಾಥಂ ೯

ಚಂದ್ರನಾಥಾಷ್ಟಕದಲ್ಲಿ ಒಂಬತ್ತು ಪದ್ಯಗಳಿವೆ. ಪ್ರತಿಯೊಂದು ಪದ್ಯವೂ ಚಂದ್ರನಾಥಾ ಎಂದು ಕೊನೆಗೊಳ್ಳುತ್ತದೆ. ಮೊದಲನೆಯ ಪದ್ಯ ಸ್ರಗ್ಧರೆಯಲ್ಲಿದೆ. ಉಳಿದ ಎಂಟು ವೃತ್ತಗಳು ಮಹಾಸ್ರಗ್ಧರೆಯಲ್ಲಿವೆ. ಕವಿಯ ಭಕ್ತಿಭಾವಗಳು ಈ ಮೂಲಕ ಪ್ರಕಟವಾಗಿವೆ. ಪುಷ್ಪದಂತ ಪುರಾಣದಲ್ಲಿ ಪರಮತ ಅಸಹಿಷ್ಣುತೆ ಕಂಡುಬರುವುದಿಲ್ಲ. ಆದರೆ ಇಲ್ಲಿ ಭಾವುಕತೆಯ ಪರಿಣಾಮವಾಗಿಯೋ ಏನೊ 'ಕುಮತ' ಎಂದು ಕರೆದಿದ್ದಾನೆ. ಇಲ್ಲಿಯ ರಚನೆಗಳಲ್ಲಿ ಬುದ್ಧಿ ತೀವ್ರತೆ ಕಂಡುಬರುತ್ತದೆ. ಜೈನಧರ್ಮದ ಹಿರಿಮೆ, ತೀರ್ಥಂಕರನ ಗುಣಾಧಿಕ್ಯವೇ ಇಲ್ಲಿನ ಹೂರಣ. ಸ್ತ್ರೀಯನ್ನಿಟ್ಟುಕೊಂಡು ಭಗವಂತನನ್ನು ಸ್ತುತಿಸುವ ಪದ್ಧತಿಗೆ ಈತನೂ ಹೊರತಲ್ಲ. ಕಾವ್ಯ ಸೌಂದರ್ಯಕ್ಕಿಂತ ಕವಿಯ ಧನ್ಯತಾಭಾವವೇ ಇದರಲ್ಲಿದೆ.

ಕಥಾಸಾರ

ಮೇರುವಿನ ಪೂರ್ವ ಪಶ್ಚಿಮ ಪ್ರದೇಶದಲ್ಲಿ ೩೨ ನಾಡುಗಳಿಂದ ಕೂಡಿದ ವಿದೇಹ ದೇಶ. ಪೂರ್ವವಿದೇಹದ ಮಧ್ಯದಲ್ಲಿ ಸೀತಾನದಿ. ಇದರ ಎರಡೂ ತಟಗಳಲ್ಲಿ ಎಂಟೆಂಟು ಷಟ್ಖಂಡ ಮಂಡಳ. ಎಂಟನೆಯ ತಾಣದಲ್ಲಿ ಪುಷ್ಕಳಾವತಿ ನಗರ. ಇದು ಅತ್ಯಂತ ಮನೋಹರ, ಸಂಪದ್ಭರಿತ. ಇದರ ರಾಜಧಾನಿ ಪುಂಡರೀಕಿಣಿಪುರ. ಇಲ್ಲಿಯ ರಾಜ ಪದ್ಮ.

ರಾಜ ಪದ್ಮನು ನೀತಿಮಾರ್ಗದಿಂದ ರಾಜ್ಯವಾಳುತ್ತಿದ್ದ. ಈತನ ಕೀರ್ತಿ ಲೋಕ ಪ್ರಸಿದ್ಧವಾಗಿತ್ತು. ಪದ್ಮನ ಪಟ್ಟಮಹಿಷಿ ವನಮಾಲಾದೇವಿ. ಈಕೆ ಸುಂದರಿಯೂ, ಸದ್ಗುಣೆಯೂ ಆಗಿದ್ದಳು. ಒಂದು ದಿನ ಈಕೆ ಚಿಂತಾಕ್ರಾಂತಳಾಗಿದ್ದಳು. ರಾಜ ಕಾರಣ ಕೇಳಿದಾಗ ಚತುರಿಕೆ

ಎಂಬ ಆಕೆಯ ಸಖಿ ರಾಣಿಯು ಜಿಂಕೆಯ ಮರಿಯನ್ನು ನೋಡಿದಾಗಿನಿಂದ ತನಗೆ ಸಂತಾನವಿಲ್ಲವೆಂದು ಚಿಂತಿಸುತ್ತಿದ್ದಾಳೆ ಎಂದಳು. ರಾಜ ಪತ್ನಿಯನ್ನು ಸಂತೈಸುತ್ತ - "ಈ ದಿನ ನಿನ್ನ ಇಷ್ಟ ಸಿದ್ಧಿಸುವ ಸಂಗತಿ ಜರುಗಿತು. ಇಂದಿನ ಅಷ್ಟಮಿಯಂದು ನಾನು ಚೈತ್ಯಾಲಯಕ್ಕೆ ಹೋಗಿ ವಂದಿಸುವಾಗ ದೇವನ ಪಾದದ ಹತ್ತಿರವಿದ್ದ ಮಾದಳದ ಹಣ್ಣು ಜಾರಿ ನನ್ನ ಹತ್ತಿರ ಬಂದಿತು. ಇದು ಪುತ್ರ ಪ್ರಾಪ್ತಿ ಸೂಚಕ" ಎಂದನು.

ಹೀಗಿರಲು ಒಂದು ದಿನ ರಾಣಿ ಬೆಳಗಿನ ಜಾವದಲ್ಲಿ ಶುಭಸ್ವಪ್ನವನ್ನು ಕಂಡಳು. ಗರ್ಭ ಚಿಹ್ನೆಗಳು ತಲೆದೋರಿದವು. ರಾಜನು ಪುಂಸವನ ಮೊದಲಾದ ಕರ್ಮಗಳನ್ನು ನೆರವೇರಿಸಿದನು. ರಾಣಿಗೆ ಪ್ರಸವ ಸಮಯ ಪ್ರಾಪ್ತವಾಗಿ ಗಂಡು ಮಗುವಿಗೆ ಜನ್ಮವಿತ್ತಳು. ಹತ್ತನೆಯ ದಿನ ಶಿಶುವಿಗೆ ಮಹಾಪದ್ಮ ಎಂದು ಹೆಸರಿಟ್ಟರು. ಮಗು ಬೆಳೆದು ಯುವರಾಜನಾದನು. ಒಮ್ಮೆ ಮಹಾಪದ್ಮ ದಿಗ್ವಿಜಯ ಹೊರಟನು. ಅಲ್ಲಿ ನಾಲ್ಕು ದಿಕ್ಕುಗಳ ರಾಜರನ್ನು ಗೆದ್ದನು. ಖೇಚರನ ನಾಗಪಾಶವನ್ನು ಬಿಡಿಸಿದನು. ಆಗ ಆತ ತನ್ನ ಬಗ್ಗೆ "ನಾನು ಚಿತ್ರಾಂಗ ಎಂಬ ವಿದ್ಯಾಧರ ರಾಜ. ನನ್ನ ಹೆಂಡತಿ ನಿದ್ರಿಸುತ್ತಿದ್ದ ಸಮಯದಲ್ಲಿ ಹಯಗ್ರೀವನು ನನ್ನನ್ನು ನಾಗವಿದ್ಯೆಯಿಂದ ಬಂಧಿಸಿ ನನ್ನ ಹೆಂಡತಿಯನ್ನು ಅಪಹರಿಸಿದ. ನಿನ್ನಂತಹ ಮಹಾತ್ಮನ ದರ್ಶನಕ್ಕೆ ಅವಕಾಶವಿತ್ತ ಆತ ನನಗೆ ಉಪಕಾರಿಯೇ ಆಗಿದ್ದಾನೆ. ನಿನ್ನ ಸೈನ್ಯದೊಡನೆ ಹೋಗಿ ಶತ್ರುವನ್ನು ಗೆದ್ದು ಹೆಂಡತಿಯನ್ನು ಕರೆತರುವೆ" ಎಂದು ಹೇಳಿ ಹೊರಟನು. ಇತ್ತ ಮಹಾಪದ್ಮನು ಮತಂಗ ರಾಜನನ್ನು ಸಂಹರಿಸಿ ಅವನ ರಾಜ್ಯ ವಶಪಡಿಸಿಕೊಂಡು ಭಂಗುರವೇಣಿಯೆಂಬ ನದಿಯ ದಡವನ್ನು ಸೇರಿದಾಗ ಒಬ್ಬ ವೃದ್ಧಪುರೋಹಿತನು ರಾಜನಿಗೆ ನಿನ್ನ ತಂದೆ ಇಲ್ಲಿ ಜಯಸ್ತಂಭ ಸ್ಥಾಪಿಸಿದ್ದ, ನೀನೂ ಸ್ಥಾಪಿಸು ಎನ್ನಲು ಅಲ್ಲಿಯೇ ಬೀಡುಬಿಟ್ಟನು.

ಚಿತ್ರಾಂಗನು ಹಯವದನನೊಡನೆ ಯುದ್ಧಮಾಡಿ ಹೆಂಡತಿಯನ್ನು ಕರೆದುಕೊಂಡು ಬಂದು ತಾನು ತಂದಿದ್ದ ಕುಲಧನಗಳನ್ನು, ಮೂರು ವಿದ್ಯೆಗಳನ್ನು, ಬಾಣ ಹಾರ ಕವಚ ಮೊದಲಾದುವನ್ನು ಕೃತಜ್ಞತೆಯ ಸೂಚಕವಾಗಿ ಮಹಾಪದ್ಮರಾಜನಿಗೆ ಕೊಟ್ಟನು. ಇತ್ತ ರಾಜನು ಸಿದ್ಧಕೂಟದ ಜಿನಾಲಯಕ್ಕೆ ನಂದೀಶ್ವರಪೂಜೆಗೆಂದು ಹೋಗಿ ಪ್ರದಕ್ಷಿಣೆ, ಅಭಿಷೇಕವನ್ನು ಮಾಡಿದನು.

ಒಂದು ದಿನ ಮಹಾಪದ್ಮ ಓಲಗದಲ್ಲಿರುವಾಗ ಈತನ ಸೋದರ ಅತ್ತೆಯ ಗಂಡ ಜಯವರ್ಮರಾಜನ ರಾಯಭಾರಿ ದಮನನೆಂಬವ ಬಂದು - "ನಿಮ್ಮ ಸಹಾಯ ಬಯಸಿ ಜಯವರ್ಮ ಕಳಿಸಿದ್ದಾನೆ. ನಿನ್ನ ಅತ್ತೆಯ ಮಗಳಾದ ಭಾನುಮತಿ ಎಂಬ ಸುಂದರಿಯನ್ನು ತನಗೆ ಕೊಡಬೇಕೆಂದು ಕನಕಪುರದ ಗಜಕರ್ಣನೆಂಬ ರಾಜನು ಜಯವರ್ಮ ದೂತನನ್ನು ಕಳಿಸಿದ್ದ. ನಮ್ಮ ರಾಜನು ದೂತನೊಡನೆ ಕನ್ಯೆಯನ್ನು ಕೊಡುವುದಾಗಿ ಹೇಳಿ ಅನಂತರದಲ್ಲಿ ಮಂತ್ರಿಗಳೊಡನೆ ಚರ್ಚಿಸಿ ಭಾನುಮತಿಗೆ ನನ್ನ ತಂಗಿಯ ಮಗ ಮಹಾಪದ್ಮನೇ ಯೋಗ್ಯವರನೆಂದು ನಿರ್ಣಯಿಸಿದ. ಆದುದರಿಂದ ಗಜಕರ್ಣನಿಗೆ ಕಿರಿಯ ಮಗಳಾದ

ಮದಲೇಖೆಯನ್ನು ಕೊಡುವುದಾಗಿ ಹೇಳಿದನು. ಆಗ ದೂತನು 'ನಮ್ಮ ರಾಜನಿಗೆ ನಿಮ್ಮ ಪಟ್ಟಮಹಿಷಿ ಮಗಳಾದ ಭಾನುಮತಿಯನ್ನು ಕೊಟ್ಟರೆ ಮಾತ್ರ ಸಂತೋಷವಾಗುತ್ತದೆ. ನಮ್ಮ ರಾಜನಿಗೆ ಮಗಳನ್ನು ಕೊಡದಿದ್ದರೆ ಬಲಾತ್ಕಾರದಿಂದ ಕೊಂಡೊಯ್ಯುವನಲ್ಲದೆ ನೀನು ರಾಜ್ಯವನ್ನೂ ಕಳೆದುಕೊಳ್ಳಬೇಕಾಗುತ್ತದೆ' ಎಂದು ಬೆದರಿಸಿದನು. ಇದರಿಂದ ಜಯವರ್ಮನ ಮಂತ್ರಿಗಳು ಕುಪಿತಗೊಂಡು "ಇಂತಹ ಕೀಳು ಮನುಷ್ಯರನ್ನು ನಮ್ಮ ರಾಜಕುಮಾರಿ ಕಣ್ಣೆತ್ತಿಯೂ ನೋಡುವುದಿಲ್ಲವೆಂದು ಹೇಳಿದರು. ಈ ಮಾತನ್ನು ಆ ದೂತನು ಗಜಕರ್ಣನಿಗೆ ತಿಳಿಸಿರುವುದರಿಂದ ಅವನೀಗ ಯುದ್ಧಕ್ಕೆ ಬಂದಿದ್ದಾನೆ. ನಮ್ಮ ಮಂತ್ರಿಗಳು ನಿನ್ನ ಸಹಾಯ ಬಯಸುತ್ತಿದ್ದಾರೆ" ಎಂದು ಹೇಳಿದನು.

ಮಹಾಪದ್ಮನು ಸೈನ್ಯ ಸಮೇತ ಸಾಮಗ್ರಿಗಳೊಂದಿಗೆ ಜಯವರ್ಮನ ನೆರವಿಗೆ ಬಂದನು. ಗಜಕರ್ಣನನ್ನು ಹಿಮ್ಮೆಟ್ಟಿಸಿದನು. ಜಯವರ್ಮನು ಮಹಾಪದ್ಮನಿಗೆ ಮಗಳನ್ನು ಧಾರೆ ಎರೆದುಕೊಟ್ಟನು. ಹೀಗಿರಲು ಇವರಿಗೆ ಧನದೇವ ಎಂಬ ಪುತ್ರ ಜನಿಸಿದನು. ಮಹಾಪದ್ಮ ಸುಖದಿಂದಿರುವಲ್ಲಿ ಒಂದು ದಿನ ವೇಶ್ಯಾವಾಟಿಕೆಯನ್ನು ನೋಡಿ, ಚಂದ್ರಿಕಾವಿಹರಣ ಮುಗಿಸಿ, ಉದ್ಯಾನವನಕ್ಕೆ ಬರುತ್ತಿದ್ದಾಗ ಮುನಿಗಳನ್ನು ಕಂಡು ನಮಸ್ಕರಿಸಿದನು. ಅವರು ಈತನು ಆಸನ್ನಭವ್ಯನೆಂಬುದನ್ನು ಅರಿತು ಜಿನತತ್ವವನ್ನು ಬೋಧಿಸಿದರು. ಮಹಾಪದ್ಮ ಸಾವಿರ ರಾಜಕುಮಾರರೊಂದಿಗೆ ಜಿನದೀಕ್ಷೆ ಸ್ವೀಕರಿಸಿದನು. ಎಲ್ಲ ಕಡೆಗಳಲ್ಲಿ ವಿಹರಿಸುತ್ತ ತೀರ್ಥಂಕರ ಪುಣ್ಯವನ್ನು ಪಡೆದನು. ಆರಾಧನಾವಿಧಿಯಿಂದ ದೇಹವನ್ನು ಮುಡಿಪಿ ಪ್ರಾಣತಕಲ್ಪವೆಂಬ ಸ್ವರ್ಗದಲ್ಲಿ ಜನಿಸಿದನು.

ಜಂಬೂದ್ವೀಪದ ಕಾಶೀ ವಿಷಯದ ರಾಜಧಾನಿ ಕಾಕಂದಿಪುರ. ಇದನ್ನು ಸುಗ್ರೀವ ಎಂಬ ರಾಜ ಆಳುತ್ತಿದ್ದ. ಈತನ ಪಟ್ಟಮಹಿಷಿ ಜಯರಾಮೆ. ಇವರಿಬ್ಬರೂ ಸುಖದಿಂದಿರುವಾಗ ಸ್ವರ್ಗದಲ್ಲಿ ಇಂದ್ರನಿಗೆ ಆಸನಕಂಪವಾಗಿ ಭರತಕ್ಷೇತ್ರದಲ್ಲಿ ತೀರ್ಥಂಕರನ ಜನನವಾಗುವುದನ್ನು ಅರಿತು ಕುಬೇರನಿಗೆ ರತ್ನದ ಮಳೆ ಸುರಿಸುವಂತೆ ಅಪ್ಪಣೆ ಮಾಡಿದನು. ಆತ ಮೂರೂವರೆ ಕೋಟಿ ರತ್ನಗಳ ಮಳೆ ಸುರಿಸಿದ. ಇಂದ್ರನು ಜಯರಾಮೆಯ ಗರ್ಭಶೋಧಕ್ಕಾಗಿ ಶ್ರೀ ಹ್ರೀ ಮುಂತಾದ ದೇವಿಯರನ್ನು ಕಳಿಸಿದ. ಒಂದು ದಿನ ಜಯರಾಮೆಯು ಸ್ವಪ್ನದಲ್ಲಿ ಸಿಂಹ, ಆನೆ ಇತ್ಯಾದಿಯನ್ನು ಕಂಡುದಾಗಿ ಪತಿ ಸುಗ್ರೀವನಿಗೆ ತಿಳಿಸಿದಾಗ ಆತ ತೀರ್ಥಂಕರನು ಹುಟ್ಟುವುದಾಗಿ ನುಡಿದನು. ಪ್ರಾಣತಕಲ್ಪದಲ್ಲಿದ್ದ ಮಹಾಪದ್ಮಚರನು ಸ್ವರ್ಗದಿಂದ ಚ್ಯುತನಾದ ಬಳಿಕ ಜಯರಾಮೆಯ ಗರ್ಭ ಪ್ರವೇಶಿಸಿದನು.

ನವಮಾಸ ತುಂಬಲು ಮಾರ್ಗಶಿರ ಬಹುಳ ದಶಮಿಯಂದು ತೀರ್ಥಂಕರಶಿಶು ಜನಿಸಿತು. ದೇವದುಂದುಭಿ, ಪುಷ್ಪವೃಷ್ಟಿಗಳಾದವು. ಇಂದ್ರನಿಗೆ ಆಸನಕಂಪವಾಗಿ ಕಾಕಂದಿಪುರಕ್ಕೆ ಪರಿವಾರ ಸಮೇತ ಬಂದನು. ಪ್ರಸೂತಿಗೃಹದ ಬಾಗಿಲಲ್ಲಿ ನಿಂತಾಗ ಪತ್ನಿ ಶಚೀದೇವಿ ಜಿನಜನನಿಯ

ಮಡಿಲಲ್ಲಿ ಮಾಯಾಶಿಶುವನ್ನು ಇರಿಸಿ ಜಿನಶಿಶುವನ್ನು ಎತ್ತಿಕೊಂಡು ಐರಾವತದ ಮೇಲೆ ಕುಳಿತಿದ್ದ ಇಂದ್ರನಿಗೆ ಕೊಟ್ಟಳು. ಆತ ಗಂಧಾಕ್ಷತೆ ಹೂವುಗಳಿಂದ ಶಿಶುವನ್ನು ಪೂಜಿಸಿ ಜನ್ಮಾಭಿಷೇಕ ಕಲ್ಯಾಣಕ್ಕೆ ಮುಂದಾದನು. ಮೊದಲು ಪದ್ಮ ಮೊದಲಾದ ಸರೋವರಗಳ ನೀರಿನಿಂದ ಅಭಿಷೇಕವಾಯಿತು. ಅನಂತರ ಎಳನೀರು, ಕಬ್ಬಿನರಸ, ಮಾವಿನ ಹಣ್ಣಿನ ರಸದ ಅಭಿಷೇಕವಾದ ಬಳಿಕ ಕ್ಷೀರಸಮುದ್ರದ ನೀರನ್ನು ಸಾವಿರಾರು ತೋಳುಗಳಿಂದ ಕ್ಷೀರಾಭಿಷೇಕ ಮಾಡಿದನು. ಗಂಧೋದಕದ ಅಭಿಷೇಕವೂ ಆದ ಮೇಲೆ ಶಚೀದೇವಿ ಜಿನಶಿಶುವನ್ನು ಅಲಂಕರಿಸಿದಳು. ಇಂದ್ರನು ಮಗುವನ್ನು ಕಣ್ಣುಗಳಲ್ಲಿ ತುಂಬಿಕೊಂಡ ಬಳಿಕ ಐರಾವತದ ಮೇಲೆ ಕುಳ್ಳಿರಿಸಿಕೊಂಡು ಕಾಕಂದೀನಗರದಲ್ಲಿ ಸಿಂಹಾಸನದ ಮೇಲೆ ಇರಿಸಿದನು. ಅಲ್ಲಿಗೆ ಸುಗ್ರೀವ ಮಹಾರಾಜ ತನ್ನ ರಾಣಿಯೊಡನೆ ಬಂದನು. ಇಂದ್ರನು ಆತನನ್ನು ಉದ್ದೇಶಿಸಿ ಜಿನನು ನಿನಗೆ ಮಗನಾಗಿ ಹುಟ್ಟಿದ್ದಾನೆ, ನಾನು ಜನ್ಮಾಭಿಷೇಕ ಮಾಡಿ ಕೃತಾರ್ಥನಾಗಿ ಮಗುವನ್ನು ತಂದು ಇಲ್ಲಿ ಬಿಟ್ಟಿದ್ದೇನೆ ಎಂದನು. ರಾಜನು ಶಿಶುವಿಗೆ ಜಾತಕರ್ಮ ಮಾಡಿದಾಗ ಇಂದ್ರ ಆನಂದ ನೃತ್ಯ ಪ್ರದರ್ಶಿಸಿದನು. ಶಿಶುವಿಗೆ ಪುಷ್ಪದಂತ ಎಂದು ನಾಮಕರಣ ಮಾಡಿ ಶಿಶುವಿನ ಪಾಲನೆಗೆ ದಾದಿಯರನ್ನು ಇರಿಸಿದನು.

ಶಿಶುವಿನ ಬಾಲಲೀಲೆಗಳು ತಂದೆ ತಾಯಿಗಳಿಗೆ ಮುದ ನೀಡಿದವು. ಕೌಮಾರ್ಯಕ್ಕೆ ಕಾಲಿಟ್ಟ ಪುಷ್ಪದಂತ ಸಕಲ ವಿದ್ಯೆಗಳನ್ನು ಕಲಿತನು. ಮಗನು ಯೌವನಕ್ಕೆ ಕಾಲಿರಿಸಿದ್ದನ್ನು ಗಮನಿಸಿ ಸುಗ್ರೀವರಾಜನು ಸಾವಿರ ಮಂದಿ ಕ್ಷತ್ರಿಯ ಕನ್ಯೆಯರನ್ನು ತಂದು ಶುಭಲಗ್ನದಲ್ಲಿ ವಿವಾಹ ಮಾಡಿದನು. ಅನಂತರ ರಾಜ್ಯಭಾರ ವಹಿಸಿದನು. ಪುಷ್ಪದಂತ ಧರ್ಮಮಾರ್ಗದಲ್ಲಿ ರಾಜ್ಯಭಾರ ಮಾಡುತ್ತಿದ್ದ. ಈತನಿಗೆ ಚಂದ್ರಿಳಪುರದ ರಾಜನ ಮಗಳಾದ ಚಂದ್ರಿಕಾದೇವಿ ಪಟ್ಟದ ರಾಣಿಯಾಗಿದ್ದಳು. ಈಕೆಯ ಗರ್ಭದಲ್ಲಿ ಕೀರ್ತಿಧರ ಜನಿಸಿದನು. ಆಮೇಲೆ ಇತರ ಪತ್ನಿಯರಲ್ಲಿಯೂ ಕೆಲವರಿಗೆ ಪುತ್ರರು ಜನಿಸಿದರು. ಕೀರ್ತಿಧರನಿಗೆ ಯುವರಾಜಪಟ್ಟ ಕಟ್ಟಲಾಯಿತು.

ಪುಷ್ಪದಂತನಿಗೆ ನಿದಾಘಕಾಲ ಪ್ರಾಪ್ತವಾಯಿತು. ಒಂದು ದಿನ ಈತ ಆಕಾಶದಿಂದ ಬಿದ್ದ ಉಲ್ಕೆಯನ್ನು ಕಂಡು ನಿರ್ವೇಗಪರನಾದನು. ಲೋಕಾಂತಿಕ ದೇವರುಗಳು ಆಗಮಿಸಿ ಈತನಿಗೆ ರಾಜ್ಯಭೋಗಗಳನ್ನು ತ್ಯಜಿಸಿ ಜಿನದೀಕ್ಷೆ ಪಡೆಯುವಂತೆ ತಿಳಿಸಿದರು. ಪುಷ್ಪದಂತನು ಮಗನಿಗೆ ರಾಜ್ಯವಹಿಸಿ ಪರಿನಿಷ್ಕ್ರಮಣಕ್ಕೆ ಸಿದ್ಧನಾದನು. ಸಿಂಹಾಸನದಿಂದ ಇಳಿದು ಸಿವಿಗೆ ಏರಿದನು. ಇದನ್ನು ಅರಸರು, ಆಕಾಶಗಾಮಿಗಳು, ಸುರಾಸುರರು, ಇಂದ್ರರು ಹೊತ್ತು ಪುಷ್ಪಕೋದ್ಯಾನದಲ್ಲಿ ತಂದಿರಿಸಿದರು. ಪುಷ್ಪದಂತ ಚಂದ್ರಕಾಂತಶಿಲೆಯಲ್ಲಿ ಕುಳಿತು ಕೇಶವನ್ನು ಹರಿದು ಬಿಸುಟನು. ದಿಗಂಬರತ್ವ ಪಡೆದ ಪುಷ್ಪದಂತನಿಗೆ ಇಂದ್ರನು ಕಲ್ಯಾಣೋತ್ಸವ ನೆರವೇರಿಸಿದ ಬಳಿಕ ಪುಷ್ಪದಂತ ಮುನಿ ಆರು ದಿನ ಧ್ಯಾನದಲ್ಲಿದ್ದನು. ಅನಂತರ ಆ ಉದ್ಯಾನ ಬಿಟ್ಟು ಬರುವಾಗ ಶೈಲಪುರದ ರಾಜ ಈತನಿಗೆ ಪಾಯಸವನ್ನಿತ್ತನು. ಆಹಾರದಾನದಿಂದಾಗಿ ರಾಜನ ಅರಮನೆಯಲ್ಲಿ

ಪಂಚಾಶ್ಚರ್ಯಗಳಾದವು. ಅನಂತರ ಪುಷ್ಪದಂತ ತಪಸ್ಸು ಮಾಡಿ ಕರ್ಮಗಳನ್ನು ಘಾತಿಸಿ ಪ್ರತಿಮಾಯೋಗದಲ್ಲಿ ನಿಂತನು. ಆತ ನಿಂತ ವನದಲ್ಲಿ ಶಾಂತರಸ ಹರಡಿತು. ಕರ್ಮಗಳು ಘಾತಿಸಿದ ಬಳಿಕ ಕೇವಲಜ್ಞಾನ ಪ್ರಾಪ್ತವಾಯಿತು. ಇಂದ್ರನು ಕಲ್ಯಾಣೋತ್ಸವ ನೆರವೇರಿಸಿದನು. ಪುಷ್ಪದಂತಜಿನನು ಧರ್ಮೋಪದೇಶ ಮಾಡುತ್ತ ಒಂದು ತಿಂಗಳು ಕಾಲ ವಿಹರಿಸಿ ಮತ್ತೆ ಪ್ರತಿಮಾಯೋಗದಲ್ಲಿ ನಿಂತನು. ಭಾದ್ರಪದ ಶುಕ್ಲ ಅಷ್ಟಮಿ ಮೂಲನಕ್ಷತ್ರದಲ್ಲಿ ಮುಕ್ತಿ ಉಂಟಾಯಿತು. ಇಂದ್ರ ಪರಿನಿರ್ವಾಣ ಕಲ್ಯಾಣ ಎಸಗಿ ಆನಂದನೃತ್ಯ ಮಾಡಿದನು. ಪುಷ್ಪದಂತ ಜಿನ ಪರಮ ಸುಖ ತಳೆದನು. ತಂದೆಯ ನಿರ್ವಾಣವನ್ನರಿತ ಕೀರ್ತಿಧರ ಆ ನಿರ್ವಾಣಭೂಮಿಯನ್ನು ಪೂಜಿಸಿದನು.

ಕಾವ್ಯಸಮೀಕ್ಷೆ : ಪುಷ್ಪದಂತ ಒಂಬತ್ತನೆಯ ಜೈನ ತೀರ್ಥಂಕರ. ಈತನಿಗೆ 'ಸುವಿಧಿಜಿನ' 'ಸುವಿಧಿಕುಮಾರ' ಎಂಬ ಹೆಸರುಗಳೂ ಇರುವುದು ಪುಷ್ಪದಂತ ಪುರಾಣದಿಂದ ತಿಳಿದುಬರುತ್ತದೆ. ಈತನ ಲಾಂಛನ ಮಕರ, ಯಕ್ಷ ಅಜಿತ, ಯಕ್ಷಿ ಮಹಾಕಾಳಿ. ಇತರ ತೀರ್ಥಂಕರರಿಗೆ ಹೋಲಿಸಿದರೆ ಈತನ ಬಗೆಗೆ ಸ್ವತಂತ್ರ ರಚನೆಗಳು ಅಷ್ಟಾಗಿ ಕಂಡುಬರುವುದಿಲ್ಲ. ಸಂಸ್ಕೃತ, ಪ್ರಾಕೃತ, ಅಪಭ್ರಂಶ ಸಾಹಿತ್ಯದಲ್ಲಿ ಈತನ ಸಾಹಿತ್ಯ ದೊರೆತರೂ ಅವುಗಳಲ್ಲಿ ಬಹುಪಾಲು ಅರವತ್ತ್ಮೂರು ಶಲಾಕಾ ಪುರುಷರ ಚರಿತ್ರೆಯನ್ನು ನಿರೂಪಿಸುವಾಗ ಪ್ರಾಸಂಗಿಕವಾಗಿ ಸಂಕ್ಷಿಪ್ತವಾಗಿ ಬಂದಿರುವಂಥವು. ಪ್ರಾಕೃತದಲ್ಲಿ ಒಂದು ಪುಷ್ಪದಂತ ಪುರಾಣ ಇರಬಹುದೆಂದು ಎಚ್.ಡಿ. ವೇಲಂಕರ್ ಅವರು ಊಹಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಗುಣವರ್ಮನ ಕೃತಿಗೆ ಮಹತ್ವವಿದೆ.

ಕನ್ನಡದಲ್ಲಿ ಚಾವುಂಡರಾಯನ ತ್ರಿಷಷ್ಟಿಶಲಾಕಾ ಪುರುಷ ಚರಿತೆ (ಚಾವುಂಡರಾಯ ಪುರಾಣ)ಯಲ್ಲಿ ಪುಷ್ಪದಂತನ ಕಥೆ ಮೊಟ್ಟಮೊದಲಿಗೆ ಕಾಣಿಸಿಕೊಳ್ಳುತ್ತದೆ. ಅನಂತರದಲ್ಲಿ ಸ್ವತಂತ್ರವಾಗಿ ಸಮಗ್ರ ಕಾವ್ಯದಲ್ಲಿ ಈ ಕಥೆ ಮೂಡಿಬಂದಿದ್ದು ಗುಣವರ್ಮನಲ್ಲಿಯೇ. ಇತರ ಜೈನಕವಿಗಳಂತೆ ಈತನೂ ಸಾಂಪ್ರದಾಯಿಕವಾಗಿ ಪುಷ್ಪದಂತ ತೀರ್ಥಂಕರ ಸಾಹಿತ್ಯದ ಕಥಾಪರಂಪರೆಯನ್ನು ಹೇಳಿದ್ದಾನೆ. ಆ ಪ್ರಕಾರ ಈ ಕಥೆ ಮೊದಲು ನಾಲ್ಕು ಅನುಯೋಗದ ನಾಲ್ಕು ಶ್ರುತಸ್ಕಂದಗಳ ಪೂರ್ವಾನುಯೋಗದಲ್ಲಿ ಕಾಣಿಸಿಕೊಂಡಿತು (೧-೮೩). ಮುಂದೆ ಇದನ್ನು ಆದಿತೀರ್ಥಂಕರರು ರೂಪ್ಯಗಿರಿಯಲ್ಲಿ ಭರತನಿಗೆ, ಅಂತಿಮತೀರ್ಥಂಕರರ ವಾಣಿಯಿಂದ ಕೇಳಿದ ಗೌತಮಗಣಧರರು ವಿಪುಳಗಿರಿಯಲ್ಲಿ ಶ್ರೇಣಿಕನಿಗೆ ನಿರೂಪಿಸಿದರೆನ್ನಲಾಗಿದೆ (೧-೮೪). ಆದರೆ ಗುಣವರ್ಮ ತನ್ನ ಕೃತಿಗೆ ಆಕರವಾದ ಗ್ರಂಥದ ಬಗ್ಗೆ ಖಚಿತವಾಗಿ ಹೇಳದಿದ್ದರೂ ಕನ್ನಡೇತರ ಕೃತಿಗಳನ್ನು ಗ್ರಂಥ ರಚಿಸುವ ಕಾಲಕ್ಕೆ ಪರಿಭಾವಿಸಿರಬೇಕು ಎಂಬುದಕ್ಕೆ-

> ನೋಡಿರೆ ಪೂರ್ವದೊಳ್ ಗಣಧರಾದಿ ಮಹಾಮುನಿ ಸತ್ಕವೀಶ್ವರರ್
> ಮಾಡಿದ ಪುಷ್ಪದಂತ ಜಿನನಾಥ ಪುರಾಣಮನಿಂದು ಕನ್ನಡಂ
> ಮಾಡುವೆನೆಂದು ಪೂಣ್ದೆನಿದು ಶಕ್ತಿಯೊ ಭಕ್ತಿಯೊ ವೈನತೇಯನಿ
> ರ್ದಾಡಿದ ಗಾಳಿಪಟ್ಟೆಗೆ ಮಸಂಬಡೆ ಧೀಂಕಿಡುವಂತೆ ಟಟ್ಟಭಂ ೧-೪೨

ಎನ್ನುವಲ್ಲಿ ಸೂಚನೆಯಿದೆ. ಕನ್ನಡ ತೀರ್ಥಂಕರ ಚರಿತೆಗಳು ಜಿನಸೇನ ಗುಣಭದ್ರರ ಸಂಸ್ಕೃತ ಮಹಾಪುರಾಣದಿಂದ ಪ್ರೇರಣೆ ಪಡೆದಿರುವುದು ಸುವಿದಿತ. ಇದಕ್ಕೆ ಗುಣವರ್ಮ ಕವಿ ಹೊರತೇನಲ್ಲ. ಕಾವ್ಯದ ಆರಂಭದಲ್ಲಿ ಜಿನಧರ್ಮರಥವನ್ನು ಎಳೆದ ಜಿನಸೇನರನ್ನು, ಗುಣಗಳ ಖಣಿಯಾದ ಗುಣಭದ್ರರನ್ನು ಸ್ತುತಿ ಮಾಡಲು ಕವಿ ಮರೆತಿಲ್ಲ. ಗುಣಭದ್ರರ ಉತ್ತರಪುರಾಣದಲ್ಲಿ ಬರುವ ಪುಷ್ಪದಂತ ಚರಿತೆಯ ಕಥಾಚೌಕಟ್ಟನ್ನು ಇಟ್ಟುಕೊಂಡು ಈತ ವಸ್ತು ನಿರ್ವಹಣೆ ಮಾಡಿರುವುದು ತೌಲನಿಕ ಅಧ್ಯಯನದಿಂದ ಸ್ಪಷ್ಟವಾಗುತ್ತದೆ.

ಗುಣಭದ್ರಾಚಾರ್ಯರ ಉತ್ತರಪುರಾಣದಲ್ಲಿ ಪುಷ್ಪದಂತನ ಕಥೆ ಕೇವಲ ೬೨ ಶ್ಲೋಕಗಳಲ್ಲಿ ಚಿಕ್ಕದಾಗಿ ಬಂದಿದೆ. ಇದನ್ನು ಗುಣವರ್ಮ ೧೪ ಆಶ್ವಾಸಗಳಿಗೆ ವಿಸ್ತರಿಸುವಲ್ಲಿಯೇ ಈ ಕೃತಿಕಾರನ ಆಶಯ ಗೃಹೀತವಾಗುತ್ತದೆ. ಗುಣವರ್ಮ ಉತ್ತರಪುರಾಣದಂತೆ ಪುಷ್ಪದಂತ ತೀರ್ಥಂಕರ ಸ್ತುತಿಯಿಂದ ಕಾವ್ಯಾರಂಭ ಮಾಡಿದ್ದರೂ ಭಿನ್ನವಾಗಿದೆ. ಉತ್ತರಪುರಾಣದಲ್ಲಿ -

ವಿಧಾಯ ವಿಪುಲೇ ಮಾರ್ಗೇ ವಿನೇಯಾಂಶ್ಚಾಮಲೇ ಸ್ವಯಂ
ಸ್ವಯಂ ಚ ಸುವಿಧಿರ್ಯೋ ಭೂದ್ವಿದೇಯಾನ್ನಸ್ಸ ತಂ ವಿಧಿಂ ॥೧॥

ಎಂದು ಪ್ರಾರ್ಥಿಸಿದ್ದರೆ ಗುಣವರ್ಮ -

ಶ್ರೀ ಪೌಲೋಮೀಶ ಭೂಭೃತ್ಸಮುದಯ ವಿನುತಂಗಳ್ ತಮಸ್ತೋಮ ಚೈತ್ರಾ
ದೀಪಂಗಳ್ ದರ್ಶಿತಾಶಾಂಬರ ಸಕಲ ಪದಾರ್ಥ ಕ್ರಮಂಗಳ್ ಸದಾಲೋ
ಕಾಪದ್ವಿಚ್ಛೇದಕಂಗಳ್ ಮಹದಮೃತನಿಧಿಸ್ಫೂರ್ತಿಗಳ್ ಪುಷ್ಪದಂತ
ಶ್ರೀಪಾದಂಗಳ್ ಸಮುತ್ಪಾದಿಸುಗೆಮಗೆ ಹೃದಿಂದೀವರಾನಂದದೊಳ್ಪಂ   ೧-೧

ಎಂದು ಮೂಲಕ್ಕಿಂತ ವಿಸ್ತೃತವಾಗಿ ತನ್ನದೇ ಆದ ರೀತಿಯಲ್ಲಿ ಸ್ತುತಿಸಿ ಕಾವ್ಯ ಸಾಮರ್ಥ್ಯವನ್ನು ಪ್ರಕಟಿಸಿದ್ದಾನೆ. ಉತ್ತರ ಪುರಾಣದಲ್ಲಿ ೨ನೆಯ ಶ್ಲೋಕದಿಂದಲೇ ಕಥೆ ಶುರುವಾಗುತ್ತದೆ. ಗುಣವರ್ಮನ ಕಾವ್ಯ ಸ್ವತಂತ್ರ ರಚನೆಯಾಗಿರುವುದರಿಂದ ಕಾವ್ಯಲಕ್ಷಣಕ್ಕನುಗುಣವಾಗಿ ಸಿದ್ಧರು ಆಚಾರ್ಯರು ಉಪಾಧ್ಯಾಯರು ಮುಂತಾದವರ ಸ್ತುತಿ, ಪೂರ್ವಕವಿಸ್ಮರಣೆ, ಸ್ವಕಾವ್ಯ ಪ್ರಶಂಸೆ ಇತ್ಯಾದಿ ಪದ್ಯಗಳಿಂದ ಕೂಡಿ ಪೀಠಿಕಾರೂಪದಲ್ಲಿ ಪ್ರಥಮ ಆಶ್ವಾಸ ಆಕಾರ ಪಡೆದಿದೆ.

ಉತ್ತರ ಪುರಾಣದಲ್ಲಿ ಪುಷ್ಕಲಾವತಿದೇಶದ ಪರಿಚಯವನ್ನು ಒಂದು ಶ್ಲೋಕಕ್ಕೆ ಪರಿಮಿತಗೊಳಿಸಿದ್ದರೆ, ಪುಷ್ಪದಂತ ಪುರಾಣದಲ್ಲಿ ಇದು ೩೦ ಪದ್ಯಗಳಲ್ಲಿ (೨:೧-೩೧) ವರ್ಣನೆಗೊಂಡಿದೆ. ಅಲ್ಲಿರುವ ಪುಂಡರೀಕಿಣಿ ನಗರವನ್ನು ಸುಮಾರು ೬೦ ಪದ್ಯಗಳಲ್ಲಿ (೨:೩೨-೯೫) ಬಣ್ಣಿಸಿ ಅಚ್ಚುಕಟ್ಟಾದ ನಗರ ವರ್ಣನೆಗೆ ಅವಕಾಶ ಮಾಡಿಕೊಂಡಿರುವುದನ್ನು ಗಮನಿಸಬಹುದು. ಪುಷ್ಪದಂತನ ಕಥಾಚೌಕಟ್ಟು ಅತ್ಯಂತ ಕಿರಿದಾದುದು. ಹೀಗಿರುವಾಗ ಪುಷ್ಪದಂತ ಪುರಾಣದಲ್ಲಿ ಬರುವ ಕೆಲವು ಸನ್ನಿವೇಶಗಳು ಉತ್ತರ ಪುರಾಣದಲ್ಲಿ ಕಂಡುಬರುವುದಿಲ್ಲ. ಮಹಾಪದ್ಮನ ತಂದೆ ಪದ್ಮರಾಜನ ವೃತ್ತಾಂತ ಉತ್ತರ ಪುರಾಣದಲ್ಲಿಲ್ಲ. ಗುಣವರ್ಮ

ಮಹಾಪದ್ಮನನ್ನು ತನ್ನ ಆಶ್ರಯದಾತನಾದ ಶಾಂತಿವರ್ಮನೊಡನೆ ಸಮೀಕರಿಸಿರುವುದರಿಂದ ಆತನ ಉನ್ನತ ವ್ಯಕ್ತಿತ್ವವನ್ನು ಸಮರ್ಥವಾಗಿ ಕಟ್ಟಿಕೊಟ್ಟಿದ್ದಾನೆ. ಮಹಾಪದ್ಮ ಪೃಥ್ವಿಯನ್ನು ಚೆನ್ನಾಗಿ ಪೋಷಿಸುತ್ತಿದ್ದನೆಂದು ನಿರೂಪಿಸುವಾಗ ಉತ್ತರ ಪುರಾಣದಲ್ಲಿ -

ಸಂಪೋಷ್ಯ ಪಾಲಯಾ ಮಾಸ ಗಾಂ ಸಸಾ ಚ ಸ್ವಯಂ ಮುದಾ
ಪ್ರಸ್ನುತಾ ನಿಜಸಾರೇಣ ತಂ ಸದಾ ಸಮತರ್ಪಯತ್ ೫

ಎಂದಿರುವುದನ್ನು ಗುಣವರ್ಮ -

ವಸುವಂ ಸನ್ಮಾರ್ಗದೊಳಾ
ರ್ಜಿಸುವಂ ವರ್ಧಿಸುವನೆಯ್ದೆ ರಕ್ಷಿಸದೀವಂ
ನಿಸದಂ ವಿಬುಧರ್ಗಿದು ಭಾ
ವಿಸೆ ಚಿತ್ರಂ ರಾಜವೃತ್ತಮಾಯ್ತನ್ನೂನಂ ೩-೯

ಎಂದು ಅದೇ ಭಾವವನ್ನು ಮುಂದುವರಿಸಿದ್ದರೂ ಇಂಥ ನಿದರ್ಶನಗಳು ವಿರಳ. ಉತ್ತರ ಪುರಾಣದಲ್ಲಿ ಪುತ್ರದೋಹಳದ ವರ್ಣನೆಯಾಗಲಿ, ಚಿತ್ರಾಂಗದ ಪ್ರಸಂಗವಾಗಲಿ ಇಲ್ಲ. ಗುಣವರ್ಮ ಈ ಭಾಗಗಳನ್ನು ಅನ್ಯಮೂಲಗಳಿಂದ ಪಡೆದಿದ್ದಾನೋ ಅಥವಾ ಈತನ ಸ್ವಂತ ಸೃಷ್ಟಿಯೊ ಸ್ಪಷ್ಟವಾಗುವುದಿಲ್ಲ. ಈತ ಉತ್ತರ ಪುರಾಣದ ಕೆಲವು ಭಾಗಗಳನ್ನು ಮೂಲಕ್ಕಿಂತ ಉತ್ತಮಪಡಿಸಿರುವುದುಂಟು. ಮಹಾಪದ್ಮ ಸಂಸಾರದಿಂದ ನಿರ್ವೇಗಪರನಾದಾಗ ಆತನ ಮನಸ್ಸಿನಲ್ಲಿ ಉಂಟಾದ ತಳಮಳವನ್ನು ಗುಣಭದ್ರರು ವರ್ಣಿಸಿದ್ದಾರೆ. ಉದಾಹರಣೆಗೆ -

ಜನ್ಮ ದುಃಖಜರಾಮೃತ್ಯು ಮಹಾಮಕರ ಭೀಕರೇ
ಇತಿಸಾಮ್ರಾಜ್ಯಲಕ್ಷ್ಮೀಂ ಸ ತಿತ್ಯಕ್ಷುರಭವತ್ತದಾ ೪೪

ಎಂಬ ಶ್ಲೋಕದ ಜಾಡಿನಲ್ಲಿ ಗುಣವರ್ಮ ಕ್ರಮಿಸಿದರೂ -

ಅತಿನಿಸ್ಸಾರಮಿದೆಲ್ಲಮೆಂದಱಿದುವೆನ್ನೊಳ್ ಮತ್ತೆ ಸಂಸಾರಮು
ಹ್ಯತೆ ಮತ್ತಾಪ್ತ ಕಳತ್ರ ಪುತ್ರಜನಮೋಹಂ ಮತ್ತೆ ರಾಜ್ಯಾಂಗ ಸಂ
ಗತಿ ಮತ್ತಿಷ್ಟ ಸುಖೋಪಭೋಗರತಿ ಮತ್ತರ್ಥಾರ್ಜನಾಪೇಕ್ಷೆ ಮ
ತ್ತೆ ತದಾನುಗ್ರಹನಿಗ್ರಹಕ್ರಿಯೆ ಗಡೇಂ ಚಃ ಕಷ್ಟಮೀಚೇಷ್ಟಿತಂ ೧೩-೩೧

ಎಂದು ಸಂಸಾರದ ನಿಸ್ಸಾರತೆಯನ್ನು ಮೂಲಕ್ಕಿಂತ ಪರಿಣಾಮಕಾರಿಯಾಗಿ ಪ್ರಸ್ತುತಪಡಿಸಿದ್ದಾನೆ. ಉತ್ತರ ಪುರಾಣದಲ್ಲಿ ಪುಷ್ಪದಂತನು ಪುತ್ರನಾದ ಸುಮತಿಗೆ ರಾಜ್ಯವನ್ನು ಒಪ್ಪಿಸಿದನೆಂದಿದೆ. ಆದರೆ ಗುಣವರ್ಮನಲ್ಲಿ ಹಿರಿಯಮಗನೂ ಯುವರಾಜನೂ ಆಗಿದ್ದ ಕೀರ್ತಿಧರನಿಗೆ ರಾಜ್ಯ ಒಪ್ಪಿಸಿದಂತೆ ವ್ಯತ್ಯಾಸ ಮಾಡಿಕೊಳ್ಳಲಾಗಿದೆ. ಇದು ಕೇವಲ ನಾಮ ವ್ಯತ್ಯಯವೊ ಅಥವಾ ಪುಷ್ಪದಂತನಿಗೆ ಸುಮತಿ ಎಂಬ ಮಗನಿದ್ದನೊ ತಿಳಿಯುವುದಿಲ್ಲ. ಈ ಕೆಲವು ಅಂಶಗಳಿಂದ ಕನ್ನಡ ಪುಷ್ಪದಂತ ಪುರಾಣವು ಉತ್ತರಪುರಾಣದ ಪುಷ್ಪದಂತ ಚರಿತೆಯನ್ನು

ನೇರವಾಗಿ ಅನುಸರಿಸಲು ಹೋಗದೆ ಕನ್ನಡಕ್ಕೊಂದು ಹೊಸ ಕಥನಕ್ರಮಕ್ಕೆ ಅಡಿಪಾಯ ಹಾಕಿದ್ದಾನೆ. ಚಾವುಂಡರಾಯನದು ಗುಣಭದ್ರರ ಸಂಪ್ರದಾಯವಾದರೆ, ಇಲ್ಲಿಯು ಕಥೆ ಗುಣವರ್ಮನ ಸಂಪ್ರದಾಯವೆನ್ನಬಹುದು. ಹೀಗೆ ಗುಣವರ್ಮ ಉತ್ತರ ಪುರಾಣದ ಕಥಾಸೂತ್ರವನ್ನು ಇಟ್ಟುಕೊಂಡಿದ್ದರೂ ಆತನ ಕೃತಿಯನ್ನು ಪೂರ್ತಿಯಾಗಿ ಬಳಸಿಕೊಂಡಿರುವಂತೆ ತೋರುವುದಿಲ್ಲ. ಯಾವುದಾದರೂ ಪ್ರಾಕೃತ ಪುಷ್ಪದಂತ ಪುರಾಣವನ್ನು ಬಳಸಿಕೊಂಡಿದ್ದಾನೆಯೆ ಎಂಬುದು ಇನ್ನೂ ತಿಳಿಯಬೇಕಾಗಿದೆ.

ಕವಿ ಪುಷ್ಪದಂತನ ಕಥೆಯನ್ನು ದೊಡ್ಡ ಕಾವ್ಯವಾಗಿ ವಿನ್ಯಾಸಗೊಳಿಸುವಾಗ ತನಗಿಂತ ಪೂರ್ವದಲ್ಲಿದ್ದ ಕನ್ನಡ ತೀರ್ಥಂಕರ ಚರಿತೆಗಳನ್ನೆಲ್ಲ ಅಭ್ಯಾಸ ಮಾಡಿದ್ದಾನೆ. ಪಾರ್ಶ್ವಪಂಡಿತನಂತೆ ಈತನೂ ತನ್ನ ಕಾವ್ಯವನ್ನು ನವ್ಯಕಾವ್ಯ ಎಂದು ಕರೆದಿದ್ದು ಈ ಕಾವ್ಯದಲ್ಲಿ ಗುಣವರ್ಮನ ಕಾವ್ಯಸಂಪತ್ತು, ಪಂಪನ ಓಜೆ, ಪೊನ್ನನ ದೇಸಿ, ರನ್ನನ ಗುಣಾತಿಶಯ, ನಾಗವರ್ಮನ ರೀತಿ, ನೇಮಿಚಂದ್ರನ ಚಮತ್ಕಾರ, ಜನ್ನನ ಇಂಪು, ನಾಗಚಂದ್ರನ ರಸವೃತ್ತಿ (೧-೩೬) ಇವು ನೆಲಸಲೆಂದು ಆಶಿಸಿದ್ದಾನೆ. ಈ ಪದ್ಯ ಈತನ ವಿಮರ್ಶನ ಪ್ರಜ್ಞೆಗೂ ಸಾಕ್ಷಿ. ಕಾವ್ಯಶಿಲ್ಪಕ್ಕೆ ಸಂಬಂಧಿಸಿದಂತೆ ಪಂಪನಿಗೆ ಬಹಳ ಋಣಿಯಾಗಿದ್ದಾನೆ. ಈತನಿಗೆ ಪಂಪಭಾರತದ ಪ್ರಭಾವವಿರುವುದನ್ನು ಸ್ವಲ್ಪ ಮಟ್ಟಿಗೆ ಶೇಷಯ್ಯಂಗಾರ್ಯರು ಗುರುತಿಸಿದ್ದಾರೆ. ಆದರೆ ಇನ್ನೂ ಅನೇಕ ಪದ್ಯಗಳಲ್ಲಿ ನೇರ ಪ್ರಭಾವವಾಗಿರುವುದನ್ನು ಪಟ್ಟಿ ಮಾಡಬಹುದು. ಮರುದೇವಿಯ ಗರ್ಭವರ್ಣನೆಯ ಸಂದರ್ಭದಲ್ಲಿ ಪಂಪ -

ಬಸಿಱ ತೆಳ್ಪಳಿದತ್ತೆ ಮೊಗಂ ಬೆಳ್ಪೇಱಿದುದೇ ಕುಚಚೂಚುಕಂ
ಮಸುಳ್ದವೇ ತ್ರಿವಳೀರುಚಿ ಪೇಱಿ್ ಕುಂದಿದುದೆ ಮುನ್ನಿನ ಚೆಲ್ವನ
ಪ್ಪಸಿಯು ಬಾಸೆಗೆ ಕರ್ಪೆಸೆದತ್ತೇ ಚೋದ್ಯಮಿದೆಂದು ಮಗುಳ್ದು ಬ
ಣ್ಣಿಸಿದರಿಂದ್ರನ ಕಾಂತೆಯರಂತರ್ವತ್ನಿಯನಾ ನೃಪಪತ್ನಿಯಂ   ೭-೩೭

ಎಂದು ಆದಿಪುರಾಣದಲ್ಲಿ ಬಣ್ಣಿಸಿದಂತೆಯೇ ಗುಣವರ್ಮನು -

ತನು ರೋಮಾವಳಿಗೊಯ್ಯನೊಯ್ಯನೆ ಪಸುರ್ಪಂ ಚೂಚಕಕ್ಕೊಯ್ಯನೊ
ಯ್ಯನೆ ಕರ್ಪಂ ವಳಿಗೊಯ್ಯನೊಯ್ಯನಪೆವಂ ಶಾತೋದರಕ್ಕೊಯ್ಯನೊ
ಯ್ಯನೆ ಕೋರ್ವಂ ಮೊಗಕೊಯ್ಯನೊಯ್ಯನೆ ಬೆಳರ್ಪಂ ಕುಂತಳಕ್ಕೊಯ್ಯನೊ
ಯ್ಯನೆ ನೀಳ್ಪಂ ಮಿಗೆ ಮಾಡುವಾ ಸತಿಯ ಗರ್ಭಾದಾನಮೇನೊಪ್ಪಿತೋ   ೯-೧೧೬

ಎಂದು ಪಂಪನನ್ನು ಗಮನಿಸಿ ಅದೇ ರೀತಿ ರಮ್ಯವಾಗಿ ಚಿತ್ರಿಸಲು ಪ್ರಯತ್ನ ಪಟ್ಟಿದ್ದಾನೆ.

ಅಗ್ಗಳನ ಚಂದ್ರಪ್ರಭಪುರಾಣದಲ್ಲಿ ಅಜಿತಸೇನ ಗಗನಮಂಡಲವನ್ನು ನೋಡಿ ನಿರ್ವೇಗ ಪರನಾದಾಗ - "ಇದು ಸುಟಿಗಾಳಿಯಿಂ ನೆಗೆದು ತೋಱುವ ಕಿಂಶುಕಪತ್ರಮಿಂತಿದು" ಎಂಬ ಪದ್ಯದಲ್ಲಿ ಹೇಳಿರುವಂತೆಯೇ ಗುಣವರ್ಮನಲ್ಲಿ ಉಲ್ಕಾಪಾತವನ್ನು ಕಂಡು ಪುಷ್ಪದಂತ ವೈರಾಗ್ಯ ಪರನಾದಾಗ -

ಇದು ರಾಗಾಂಗದ ಮೋಹವಾರ್ಧಿಗೆ ಪೊದಟ್ಟೌರ್ವಾನಳಜ್ವಾಲೆ ಮೇ
ಣಿದು ಸಂಸಾರ ಸುಖಾತ್ತ ಚಿತ್ತ ಗಹನಾತಂಕಕ್ಕೆ ಮೇಣ್ ದಾವಮಿಂ
ತಿದು ವೈರಾಗ್ಯದ ರೂಪುಗಾಣಿಸುವ ದೀಪಜ್ಯೋತಿಯೆಂಬಂತಿರಾ
ದುದು ಘೋಂಕಲ್ ನಭದಿಂ ಪ್ರಭಾಸುಭಗಮುಳ್ಕಾಪಾತಮತ್ಯದ್ಭುತಂ ೧೩-೨೬

ಎಂದು ಅನ್ನರ ಪ್ರಭಾವದಿಂದ ಉತ್ತಮವಾಗಿ ವರ್ಣಿತವಾಗಿರುವುದನ್ನು ಕಾಣಬಹುದು. ಹೀಗೆ ಈತ ಕಾವ್ಯಾವಲೋಕನದ ಕೆಲವು ಪದ್ಯಗಳಿಗೂ ಋಣಿಯಾಗಿದ್ದಾನೆ. ಆದರೆ ಎಲ್ಲಿಯೂ ಮೂಲದ ಯಥಾವತ್ತಾದ ಸ್ವೀಕರಣೆ ಕಂಡುಬರುವುದಿಲ್ಲವೆನ್ನುವುದು ಈತನ ಹೆಚ್ಚುಗಾರಿಕೆ.

ಪುಷ್ಪದಂತ ಪುರಾಣದ ಕಥಾಭಿತ್ತಿ ಎಷ್ಟೆಂಬುದರ ಅರಿವು ಕವಿಗಿದೆ. ಆದುದರಿಂದ "ಕತೆ ಕಿಱಿದಾದೊಡಂ ಕತೆಯ ನಾಯಕನುನ್ನತ" (೧-೪೩) ಎಂದು ಕವಿಯೇ ಸಮರ್ಥನೆ ನೀಡಿದ್ದಾನೆ. ತೀರ್ಥಂಕರಜೀವ ಪಲವು ಭವಗಳನ್ನು ಹಾದು ಬರುವುದು ಸಾಮಾನ್ಯ. ಆದರೆ ಇಲ್ಲಿ ಭವಾವಳಿಗಳ ಗೊಂದಲವಿಲ್ಲ. ಪಾರ್ಶ್ವನಾಥನಿಗೆ ಒಂಬತ್ತು ಭವದ ಕಥೆಯಾದರೂ ಹಿನ್ನೆಲೆಗಿದೆ. ಪುಷ್ಪದಂತನಿಗೆ ತೀರ್ಥಂಕರಭವವನ್ನು ಬಿಟ್ಟರೆ ಕೇವಲ ಒಂದು ಭವದ ಕಥೆ ಮಾತ್ರ ಬರುತ್ತದೆ. ಹಾಗಾಗಿ ಕವಿ ಅಷ್ಟಾಂಗಗಳು, ಪಂಚಕಲ್ಯಾಣಗಳು, ಅಷ್ಟಾದಶ ವರ್ಣನೆಗಳ ಮೂಲಕ ೧೪ ಆಶ್ವಾಸಗಳವರೆಗೆ ವಿಸ್ತರಿಸಿದ್ದಾನೆ. ಈ ಕಾವ್ಯದಲ್ಲಿ ಈತನ ಕವಿತಾಶಕ್ತಿಯನ್ನು ಹೊರಸೂಸುವ ಪದ್ಯಗಳು ಅಲ್ಲಲ್ಲಿ ಮಿಂಚಿದರೂ ರಸಘಟ್ಟಿಯಾದ ಸನ್ನಿವೇಶಗಳು ಕಡಿಮೆಯೇ. ಇಡೀ ಕಾವ್ಯದಲ್ಲಿ ಮನ ಸೆಳೆಯುವ ಭಾಗವೆಂದರೆ ವನಮಾಲಾದೇವಿಯ ಪುತ್ರದೋಹಳದ ಪ್ರಸಂಗ. ಕವಿ ಇದನ್ನೊಂದು ಸುಂದರ ಸನ್ನಿವೇಶವಾಗಿ ಮಾಡಿದ್ದಾನೆ. ಪುತ್ರದೋಹಳ ಜೈನ ಕಾವ್ಯಗಳ ವಿಶೇಷ. ಪ್ರಸ್ತುತದಲ್ಲಿ ಈ ಚಿತ್ರಣದ ಯಶಸ್ಸು ಬಲುಮಟ್ಟಿಗೆ ಗುಣವರ್ಮನದೆ.

ವನಮಾಲಾದೇವಿ ಜಿನಾಲಯಕ್ಕೆ ಹೋಗಿ ಜಿನನನ್ನು ಪೂಜಿಸಿ ಹಿಂದಿರುಗುವಾಗ ಉದ್ಯಾನವನದಲ್ಲಿ ಜಿಂಕೆಯ ಮರಿಯನ್ನು ನೋಡುತ್ತಾಳೆ. ಈಕೆಯೇ ಸಾಕಿದ ಜಿಂಕೆ ಮರಿ ಹಾಕಿದೆ. ಅದಕ್ಕೀಗ ತನ್ನ ಮರಿಯ ಸೆಳೆತ. ಆದುದರಿಂದ ವನಮಾಲೆಯನ್ನು ಕಂಡ ಕೂಡಲೇ ಆಕೆಯ ಬಳಿಗೆ ಓಡಿಬರುವುದಿಲ್ಲ. ಅದು ತನ್ನ ಮರಿಗೆ ಗರಿಕೆಯ ಎಸಳನ್ನು ತನ್ನ ಬಾಯಿಂದ ಕೊಡುತ್ತ, ಮುಖಕ್ಕೆ ಮುಖ ಕೊಟ್ಟು ಮುದ್ದಿಸುತ್ತ, ಮೊಲೆಯೂಡುತ್ತ ತಾಯ್ತನದ ಮೋಹರಸದಲ್ಲಿ ಓಲಾಡುವುದನ್ನು ಕವಿ ಒಂದು ಸೊಗಸಾದ ಗದ್ಯದಲ್ಲಿ ಚಿತ್ರಿಸಿದ್ದಾನೆ. ಆ ಹಲ್ಲೆಯನ್ನು ನೋಡಿದ ವನಮಾಲಾದೇವಿ ಪುತ್ರಸುಖ ಎಷ್ಟು ದೊಡ್ಡದು ಎಂಬುದನ್ನು ತಿಳಿದು ತನ್ನ ಕೊರತೆಯ ಬಗ್ಗೆ ಚಿಂತಿಸುತ್ತ ಅರಮನೆಗೆ ಹಿಂದಿರುಗುತ್ತಾಳೆ. ಈಕೆಯ ಪತಿ ಅರಮನೆಗೆ ಉತ್ಸಾಹದಿಂದ ಬಂದಾಗ ಪತ್ನಿಯ ಮುಖ ಎಂದಿನಂತೆ ಇರುವುದಿಲ್ಲ. ಆಕೆಯ ಮ್ಲಾನವದನವನ್ನು ಕಂಡು "ಒಸರದಿದೇಕೆ ನಿನ್ನ ವದನೇಂದು ವಚೋಮೃತಮಂ" (೩-೬೯) ಎಂದು ಮರುಗುತ್ತಾನೆ. ಸಖಿಯರಿಂದ ಕಾರಣವನ್ನು ತಿಳಿದುಕೊಳ್ಳುತ್ತಾನೆ.

ವನಮಾಲಾದೇವಿಗೆ ತನ್ನ ಓರಗೆಯ ಹೆಣ್ಣು ಮಕ್ಕಳು ಮಕ್ಕಳನ್ನು ಪಡೆದು ಮುದ್ದಾಡುವುದನ್ನು ನೋಡಿದಾಗ ತಾಯ್ತನದ ಶ್ರೀಮಂತಿಕೆಯು ತನ್ನ ಶ್ರೀಮಂತಿಕೆಯನ್ನು ಜರಿಯುವಂತೆ ಭಾಸವಾಗುವುದನ್ನು ಕವಿ ವಿವರವಾಗಿ ವರ್ಣಿಸಿದ್ದಾನೆ –

ನಡಪಿದ ಪುಲ್ಲೆ ನೋಡ ಕೊಣಸಂ ಪಡೆದಿಂತೆಸೆದಿರ್ದುದೀಗಳೀ
ನಡಪಿದ ಪಕ್ಕಿಗಳ್ ಮಱಿಗಳೊಳ್ ಗಱಿ ಸೋಂಕಿ ಸುಖಕ್ಕೆ ಸಂದುವಾ
ನಡಪಿದ ಬಳ್ಳಿಗಳ್ ಪಲವು ಸೂಟಿ್ ಸುಫಲ ಪ್ರಸವಕ್ಕೆ ವಂದುವಾಂ
ಪಡೆಯದೆ ಸರ್ವಲೋಕ ಹಿತನಂ ಸುತನಂ ತಡೆದಿರ್ದೆನೇಕೆಯೋ ೩-೭೯

ಎಂದು ಪ್ರಾಣಿ ಪಕ್ಷಿ ಗಿಡಮರಗಳಲ್ಲಿ ವನಮಾಲಾದೇವಿ ತಾಯ್ತನದ ಭಾವವನ್ನು ಕಾಣುವುದು ಅಪೂರ್ವವಾಗಿದೆ. ಈಕೆಯನ್ನು ಸಮಾಧಾನಪಡಿಸಲು ಪತಿ ಹೇಳುವ -

ಪಡೆದೊಡದೇನೊ ಕಾಡಲತೆಗಳ್ ಫಲವಂ ಪಲವುಂ ಫಲಂ ದಿಟಂ
ತಡೆದೊಡಮೇನೊ ಕಲ್ಪಲತೆ ಲೋಕದ ದೃಷ್ಟದೆ ಸೇವ್ಯ ಸತ್ಫಲಂ
ಬಿಡಿಯದುದಲ್ತು ಮಿಕ್ಕ ವಧುಗಳ್ ಪಡೆದೆಂಗಳ ಮಕ್ಕಳಂ ಮಗಂ
ಬಡೆದಪೆ ನೀನೆ ದಲ್ ಜಗದ ಭಾಗ್ಯದ ಮುಂಬಿನೊಳಂಬುಜಾನನೇ ೩-೮೪

ಎಂಬ ಮಾತು ಆತನ ವ್ಯಕ್ತಿತ್ವಕ್ಕೆ ತಕ್ಕುದಾಗಿದೆ. ಇದೇ ಭಾವ ಮಧುರನ ಧರ್ಮನಾಥ ಪುರಾಣದಲ್ಲಿ ಪುತ್ರದೋಹಳದ ಸಂದರ್ಭದಲ್ಲಿಯೇ -

ಬಂದು ನಱುಸುಯ್ಗೆ ನೆಱೆ ಮೆ
ಯ್ಯುಂದದ ಕೆಲಪಿಂಗೆ ಸೋಲ್ತು ಬಿಂಬಾಧರಮಂ
ಕಂದಿಸು ನೀನೆಂದೆಸುಕೆಯ
ಕೆಂದಳಿರೇಂ ಲಂಚಮಿತ್ತುದೇ ಲಲಿತಾಂಗೀ ಧರ್ಮ. ಪು. ೩-೧೩೮

ಎಂದು ಮರುಕೊಳಿಸಿದೆ. ಹೀಗೆಯೇ 'ಅಂದುಗೆಯ ನೂಲ ಕಂಕಣ' (೩-೯೫) 'ಬಾಳ ಮರಾಳಮಂ' (೩-೯೬) ಎಂಬ ಪುಷ್ಪದಂತ ಪುರಾಣದ ಪದ್ಯಗಳ ಭಾವ ಧರ್ಮನಾಥ ಪುರಾಣದ (೩-೧೧೮, ೧೧೯) ಪದ್ಯಗಳಲ್ಲಿಯೂ ಕಾಣಿಸಿಕೊಂಡಿದೆ. ಮಧುರ ಈ ಪದ್ಯಗಳನ್ನು ಗುಣವರ್ಮನಿಂದ ಸ್ವೀಕರಿಸಿದನೊ ಅಥವಾ ಇವರಿಬ್ಬರೂ ಯಾವುದೋ ಒಂದು ಮೂಲವನ್ನು ಆಧರಿಸಿ ಬರೆದರೊ ಪರಿಶೀಲನಾರ್ಹ. ಒಟ್ಟಿನಲ್ಲಿ ಈ ಪದ್ಯಗಳು ಮಗುವಿಗಾಗಿ ಹಂಬಲಿಸುತ್ತಿರುವ ತಾಯಿಯ ಭಾವನೆಗಳನ್ನು, ಆಕೆಯ ಮಾನಸಿಕ ತೊಳಲಾಟವನ್ನು ಸೂಕ್ಷ್ಮವಾಗಿ ಪ್ರಕಟಿಸುತ್ತವೆ.

ಪುಷ್ಪದಂತ ಪುರಾಣ ವರ್ಣನಾ ಪ್ರಧಾನವಾದ ಕಾವ್ಯ. ದೇಶ ವರ್ಣನೆ, ಪುರ ವರ್ಣನೆ, ನಾಯಕಾಭ್ಯುದಯ, ಕುಮಾರೋದಯ, ದಿಗ್ವಿಜಯ ವರ್ಣನೆ, ಮಾತ ವರ್ಣನೆ, ಜಲಕೇಳೀ ವರ್ಣನೆ ಮೊದಲಾದೆಡೆ ದೀರ್ಘವಾದ ವರ್ಣನೆಗಳು ಬಂದಿದ್ದು ಕೆಲವು ಸಾಂಪ್ರದಾಯಿಕ ವೆನಿಸಿದರೂ ಕವಿ ಪ್ರತಿಭೆಯನ್ನು ಅಭಿವ್ಯಕ್ತಿಸುವ ಪದ್ಯಗಳು ಮುದ ನೀಡುತ್ತವೆ. ಸೀತಾ ನದಿಯ

ವರ್ಣನೆಯಲ್ಲಿ ಕವಿ ಸೀತೆ, ಸೀತಾ ನದಿ ಹಾಗೂ ರಾಮಾಯಣವನ್ನು ಒಂದೇ ಸೂತ್ರದಲ್ಲಿಟ್ಟು ವರ್ಣಿಸಿರುವುದು ವಿಶಿಷ್ಟವಾಗಿದೆ -

ಕುಲಭೂಭೃದ್ಭವೆ ಲಕ್ಷ್ಮಣಾಭಿನುತೆ ರಾಮೋತ್ಕಂಠೆ ವೈದೇಹಿ ಮಂ
ಜುಲವೇಣೀ ರಮಣೀಯೆ ಸತ್ಕುಶಲವ ವ್ಯಾಸಂಗೆ ಕಂದರ್ಪಜೋ
ತ್ಕಳಿಕಾಕ್ರಾಂತೆ ದಶಾನನಾತ್ಮೆ ವಿಮಲಶ್ರೀಮಜ್ಜನಸ್ಥಾನೆ ಕ
ಣ್ಗೊಳಿಕುಂ ವಾಹಿನಿ ಸೀತೆ ಪೋಲ್ತು ಭುವನ ಪ್ರಖ್ಯಾತೆಯಂ ಸೀತೆಯಂ ೨-೮

ಸೀತೆ ಭೂಮಿಯಲ್ಲಿ ಹುಟ್ಟಿದಳು, ಲಕ್ಷ್ಮಣನಿಂದ ನಮಸ್ಕರಿಸಲ್ಪಟ್ಟಳು, ರಾಮನಿಗೆ ಪ್ರಿಯಳಾದವಳು ವೈದೇಹಿ, ಕುಶಲವರಿಗೆ ವ್ಯಾಸಂಗ ಮಾಡಿಸಿದವಳು, ರಾವಣನ ಆತ್ಮದಲ್ಲಿ ನೆಲಸಿದವಳು. ಸೀತಾನದಿ ಲೋಕಪ್ರಸಿದ್ಧಳಾದ ಸೀತೆಯನ್ನು ಹೋಲುತ್ತಿದ್ದಳೆಂದು ಕವಿ ವರ್ಣಿಸಿದ್ದಾನೆ.

ಸ್ತ್ರೀಯರನ್ನು ನಖಶಿಖಾಂತ ವರ್ಣನೆ ಮಾಡಿರುವುದರಿಂದ ಅನಾವಶ್ಯಕವಾದ ವರ್ಣನೆಗಳೂ ಸೇರಿಕೊಂಡಿವೆ. ಆದರೆ ಯುವರಾಜನನ್ನು ನೋಡುತ್ತಿದ್ದ ಸ್ತ್ರೀಯರ ಶೃಂಗಾರ ಭಾವನೆಗೆ ಕವಿ-

ಬೆಳತಿಗೆಗಣ್ಣ ಬೆಳ್ಪು ನಗೆಗಣ್ಣ ಮುಗುಳ್ನಗೆ ಚೆಲ್ಲಗಣ್ಣ ಚಾ
ಪಳಮಲರ್ಗಣ್ಣ ಬಳ್ವಳಿಕೆ ಮಿಂಚೊಣರ್ಗಣ್ಣ ನಿಮಿರ್ಕೆ ಸೊರ್ಕುಗ
ಣ್ಣಳಸತೆ ಪುಲ್ಲೆಗಣ್ಣೆಳತೆ ತಳ್ತೆಮೆಗಣ್ಣ ತಗುಳ್ಪು ತೋಱೆ ಕ
ಣ್ಬೆಳಸಿನ ಸುಗ್ಗಿಗಾಣಲಣಮಾಯ್ತು ಪುರ ಪ್ರಮದಾಜನಂಗಳೊಳ್ ೫-೨೪

ಎಂದು ಮೂರ್ತರೂಪ ನೀಡಿದ್ದು ಈತ ಹೇಳುವ ವಿವಿಧ ಬಗೆಯ ಕಣ್ಣುಗಳು ಅಲ್ಲಿ ವ್ಯಕ್ತವಾದ ವಿವಿಧ ಭಾವವನ್ನು ಅಭಿವ್ಯಕ್ತಿಸುವಲ್ಲಿ ಸಫಲವಾಗಿವೆ.

ಗುಣವರ್ಮನ ಯುದ್ಧವರ್ಣನೆ ಸಾಂಪ್ರದಾಯಿಕವಾಗಿರದೆ ಸಹಜವೆಂಬಂತೆ ಚಿತ್ರಿತವಾಗಿದೆ. ಜಯತುಂಗದೇವನ ಸೈನ್ಯವನ್ನು -

ಬಳೆದುದೊ ಭೂತಳಂ ಬೆಸಲೆಯಾಯ್ತೊ ದಿಶಾವಳಿ ಮೇರೆದಪ್ಪಿತೋ
ಜಳಮಯಮಾಗಿ ವಾರ್ಧಿ ಭುವನತ್ರಯವಾಸಿಗಳೆಲ್ಲಮಿಲ್ಲಿಗೀ
ಗಳೆ ನರನಾಗಿ ಬಂದು ನಡೆವಂದಮೊ ಪೇಟಿಮೆನಲ್ಕಗುರ್ವನಾ
ಳ್ವಳವಿಗಳುಂಬಮಾದುದು ಬಳಪ್ರಚಳಂ ಜಯತುಂಗದೇವನಾ ೮-೩೩

ಎಂದು ಚಿತ್ರವತ್ತಾಗಿ ವರ್ಣಿಸಿದ್ದಾನೆ. ಕೋಟೆಕಾಳಗ (೭-೩೪) ದ ಪ್ರಸ್ತಾಪ ಇಲ್ಲಿಯೂ ಎಡೆಪಡೆದಿದೆ.

ಗುಣವರ್ಮ ತನ್ನ ಕಾವ್ಯದ ರಸದೃಷ್ಟಿಯನ್ನು ಕುರಿತು "ವೀತರಾಗ ಕಥಾಂತರ್ಗತ ಮಾದೊಡಾವ ರಸಮುಂ ಶಾಂತತ್ವಮಂ" ಎಂದು ಇಲ್ಲಿ ಎಲ್ಲ ರಸಗಳೂ ಶಾಂತರಸವಲ್ಲಿಯೇ ಪರ್ಯವಸಾನವಾಗುವುದನ್ನು ಹೇಳಿದ್ದಾನೆ. ಈ ಮಾತು ಎಲ್ಲ ಜೈನಕಾವ್ಯಗಳಿಗೂ

ಅನ್ವಯಿಸುವಂತಿದೆ. ಕಾವ್ಯಸೌಂದರ್ಯವನ್ನು ಹೆಚ್ಚಿಸಲು ಅಲಂಕಾರಗಳೂ ಇರಬೇಕೆಂಬ ಆಶಯದಿಂದ ಅವಕ್ಕೆ ಸೂಕ್ತ ಸ್ಥಾನ ನೀಡಿದ್ದಾನೆ. ಪ್ರಾಸ ಅನುಪ್ರಾಸ ಯಮಕ ಇತ್ಯಾದಿ ಶಬ್ದಾಲಂಕಾರಗಳನ್ನು ಉಪಮೆ ದೃಷ್ಟಾಂತ ಶ್ಲೇಷೆ ಮೊದಲಾದ ಅರ್ಥಾಲಂಕಾರಗಳನ್ನು ಔಚಿತ್ಯವರಿತು ತಂದಿದ್ದಾನೆ. ಮುದ್ರಾಲಂಕಾರವೂ ಕಾಣಸಿಗುತ್ತದೆ. ಹೆಣ್ಣಾನೆಯ ಪ್ರಸವದ ಸಂದರ್ಭದಲ್ಲಿ ಸ್ವಭಾವೋಕ್ತಿಯನ್ನು ಬಳಸಿದ್ದು ಕಣ್ಣಿಗೆ ಕಟ್ಟುವಂತಿದೆ -

ಬೇನೆಯಿನಕ್ಷಿಗಳ್ ನಸುಮುಗುಳ್ತಿರೆ ಪಿಂತು ಕುಸುಂಗಿ ಜೋಲೆ ಪೇ
ರಾನೆಯ ಕರ್ಣವಾಯು ಬೆಮರಾಜ್ಜಿಸೆ ತಾಯ್ಪಿಡಿ ನೀಡೆ ಹಸ್ತದಿಂ
ತಾನವಳಂಬಿಸಿರ್ದು ತಟಭೂಜದೊಳೊಂದು ಕರೇಣು ಸೂಲಿಸು
ತ್ತೇನಣವಲ್ಲಿ ಮಾಡಿಮುದೊ ಬೇಡರೊಳಂ ಕರುಣಾನುಭಾವಮಂ   ೫-೮೨

ಹೀಗೆ ಬಿಡಿಪದ್ಯಗಳನ್ನು ಅಲಂಕಾರದಿಂದ ಶೃಂಗರಿಸಿ ಸುಂದರಗೊಳಿಸಲಾಗಿದೆ.

ಪದ್ಯದಂತೆ ಗದ್ಯದಲ್ಲಿಯೂ ಗುಣವರ್ಮ ಅಲಂಕಾರಗಳನ್ನು ತರಬಲ್ಲ. ಉದಾಹರಣೆಗೆ "ಮಾತಂಗಸಂಗಿಯಾಗಿಯುಂ ಸದ್ವಂಶವಿರಹಿತಮಲ್ತು ಬಂಧುಜೀವಹಾರಿಯಾಗಿಯು ಪಧೀಕೃತ ಗೋತ್ರಮಲ್ತು ಮದನವಿಜಯಾಭಿವೃದ್ಧಿಕರಮಾಗಿಯುಂ ವಿರಾಗದೂರಮಲ್ತು ವಿವಿಧ ಶಬ್ದ ರಚಿತಮಾಗಿಯುಂ ಶಬ್ದಾವಕಾಶಮಲ್ತೆನಿಪ" (೫-೮೬ ವ.) ಎಂಬ ಭಾಗದ ವಿರೋಧಾಭಾಸ ಅಲಂಕಾರ ಗಮನಾರ್ಹ. ಪ್ರಕೃತಿ ವ್ಯಾಪಾರಕ್ಕೆ ಲೋಕವ್ಯಾಪಾರವನ್ನು ತಳುಕು ಹಾಕಿರುವಲ್ಲಿ (೮-೧೧೭) ಯೂ ಕವಿಯ ಕೌಶಲ ಪ್ರಕಟವಾಗಿದೆ.

ಗುಣವರ್ಮ ತನ್ನ ಸಮಕಾಲೀನ ಕೆಲವು ಸಂಗತಿಗಳನ್ನು ಕಾವ್ಯದಲ್ಲಿ ಅಂತರ್ಗತಗೊಳಿಸಿದ್ದು ಅವು ಆ ಕಾಲದ ಸಾಮಾಜಿಕ ಇತಿಹಾಸ ತಿಳಿಯಲು ನೆರವಾಗಬಲ್ಲವು. ವಿದ್ಯಾಭ್ಯಾಸಕ್ಕಾಗಿ ವಿದ್ಯಾಮಂಟಪ (೪-೫೪), ಅಕ್ಷರಾಭ್ಯಾಸ ಮಾಡಿಸುತ್ತಿದ್ದ ರೀತಿ, ವಿದ್ಯಾರಂಭಕ್ಕೆ ಮೊದಲು ವಿದ್ಯಾದೇವತೆಯ ಪೂಜೆ, ವಿದ್ಯಾಚಾರ್ಯ ಪೂಜೆ ಮತ್ತು ಆ ಕಾಲದ ಪಠ್ಯಗಳೇನಿದ್ದವೆಂಬ ಬಗ್ಗೆಯೂ ಸೂಚನೆಗಳು ದೊರೆಯುತ್ತವೆ. ರಾಜಕುಮಾರರು ಲಿಪಿ ಶಬ್ದಶಾಸ್ತ್ರ ಅಭಿದಾನ ನಾಟಕ ಕಾವ್ಯ ನೃಪನೀತಿ ಜ್ಯೋತಿಷ್ಯ ರತ್ನಪರೀಕ್ಷೆ ಗಣಿತ ಹಯಶಾಸ್ತ್ರ ವಾಸ್ತು ಯಂತ್ರ ಮಂತ್ರ ಹೀಗೆ ಹಲವಾರು ಬಗೆಯ ವಿದ್ಯೆಗಳನ್ನು ಕಲಿಸುತ್ತಿದ್ದ ವಿಚಾರ ವಿವರವಾಗಿ ಬಂದಿದೆ.

ಮಹಾಪದ್ಮನಿಗೆ ಯುವರಾಜಪಟ್ಟ ಕಟ್ಟುವ ಸನ್ನಿವೇಶದಲ್ಲಿ ಆ ಸಂದರ್ಭದ ಕೆಲವು ಸಂಪ್ರದಾಯಗಳು (೪-೭೯) ಕಾವ್ಯದಲ್ಲಿ ಕಂಡುಬರುತ್ತವೆ. ಮಹಾಪದ್ಮನ ಜನನ ಸಂದರ್ಭದಲ್ಲಿ ಹಣ್ಣು ಉರುಳಿ ಬರುವುದು ಶುಭಶಕುನವಾಗಿ ಬಂದಿದ್ದು ಶಿಷ್ಟ ಮತ್ತು ಜನಪದ ಸಂಸ್ಕೃತಿಗಳ ಅಂಶಗಳನ್ನು ತಂದಿದ್ದಾನೆ. ರಾಣಿಗೆ ಪ್ರಸವವಾದಾಗ ರಾಜನಿಗೆ ತಿಳಿಸಲು ಶಂಖ ಊದುತ್ತಿದ್ದ (೪-೨೧) ಸಂಪ್ರದಾಯ ಇಲ್ಲಿ ದಾಖಲಾಗಿದೆ.

ಗುಣವರ್ಮನಿಗೆ ಹಲವು ಶಾಸ್ತ್ರಗಳ ಪರಿಜ್ಞಾನವಿರುವಂತೆ ತೋರುತ್ತದೆ. ನ್ಯಾಯಶಾಸ್ತ್ರ, ನೃತ್ಯ ಮೊದಲಾದ ಶಾಖೆಗಳ ಪರಿಭಾಷೆಗಳು ಇಲ್ಲಿ ಬಂದಿವೆ. ಅಂಧವರ್ತಕ ನ್ಯಾಯ

ಅಜಾಕೃಪಾಣೀಯ ಕಾಕತಾಳೀಯ ನ್ಯಾಯಗಳನ್ನು ಹೇಳಿದ್ದಾನೆ. ಛಂದಸ್ಸಿನಲ್ಲಿಯೂ ಈತನಿಗೆ ಉತ್ತಮ ಪರಿಶ್ರಮವಿದೆ. ಈತ ಖ್ಯಾತ ಕರ್ನಾಟಕಗಳಲ್ಲದೆ ಹರಿಣೀವೃತ್ತ, ಮಂದಾಕ್ರಾಂತ, ಸ್ವಾಗತಂ ಮುಂತಾದ ವಿರಳ ವೃತ್ತಗಳನ್ನೂ ಬಳಸಿದ್ದಾನೆ. ಪ್ರಾಣಿಗಳನ್ನು ವರ್ಣಿಸುವಾಗ ಶಾರ್ದೂಲದ ವರ್ಣನೆಗೆ ಶಾರ್ದೂಲ ವಿಕ್ರೀಡಿತ ವೃತ್ತವನ್ನು, ವ್ಯಾಘ್ರದ ವರ್ಣನೆಗೆ ಮತ್ತೇಭ ವಿಕ್ರೀಡಿತ ವೃತ್ತವನ್ನು ಬಳಸಿರುವುದು ಚಮತ್ಕಾರಯುತವಾಗಿದೆ. ಪ್ರಾಸವನ್ನು ತ್ಯಜಿಸಿ, ರಗಳೆ ಛಂದಸ್ಸಿನಲ್ಲಿ ಕೆಲವು ಪ್ರಯೋಗ ಮಾಡಿರುವುದೂ (೧೦-೪೫) ಉಂಟು. ವಸ್ತುಕ ವರ್ಣಕಗಳ ಬಗ್ಗೆ ಕವಿಗೆ ಸ್ಪಷ್ಟ ತಿಳಿವಳಿಕೆಯಿದೆ

ಗುಣವರ್ಮನ ಭಾಷೆ ಶೈಲಿಗಳು ಸಮಕಾಲೀನ ಚಂಪೂ ಕವಿಗಳಂತೆಯೇ ಇವೆ. ಈತ ಪಂಡಿತಕವಿಯಾಗಿರುವುದರಿಂದ ಸಂಸ್ಕೃತ ಭೂಯಿಷ್ಠ ರಚನೆಗಳಿರುವಂತೆ ಸರಳವಾದ ದೇಸೀ ನುಡಿಗಳಿಂದ ಕೂಡಿದ ಅಚ್ಚಗನ್ನಡ ಶೈಲಿಯನ್ನೂ ಕಾಣಬಹುದು. ಸಂಸ್ಕೃತದಲ್ಲಿಯೂ ಈತನಿಗೆ ಪ್ರಭುತ್ವವಿದೆ. ಅನೇಕ ಶ್ಲೋಕಗಳನ್ನು ಮಧ್ಯೆ ಮಧ್ಯೆ ಬಳಸಿದ್ದಾನೆ. ಲ ಕಾರದ ಸ್ಥಾನದಲ್ಲಿ ಳ ಕಾರದ ಬಳಕೆ ಹೆಚ್ಚಾಗಿದೆ. ಕವಿ ತನ್ನ ಕಾಲದ ಕೆಲವು ಗಾದೆ ಮಾತುಗಳನ್ನು ಬಳಸಿದ್ದಾನೆ - "ದೇವಂಗಾಜದೆ ಧರ್ಮಿಯಂ ಬಡಿದರೆಂಬೀ ಸಂದ ನಾಣ್ಣುಡಿ" (೧೨-೮೬) ಎಂಬ ಗಾದೆಯಲ್ಲಿ ಆ ಕಾಲದಲ್ಲಿದ್ದ ಧಾರ್ಮಿಕ ಘರ್ಷಣೆಯ ಸೂಚನೆಯಿದೆ. ಹಾಗೆಯೇ ನೀರಡಸಿದಂಗೆ ತುಪ್ಪಂ ಮರ್ದೆ (೭-೫೬) "ಬಡವಂ ಬಡಿದಂಜಿಸುವಂ ಬಲ್ಲಿತ್ತನ್" (೧೨-೮೭) ಇತ್ಯಾದಿ ಗಾದೆ, ನುಡಿಗಟ್ಟುಗಳನ್ನು ಉದಾಹರಿಸಬಹುದು.

ಒಟ್ಟಿನಲ್ಲಿ ಗುಣವರ್ಮ ಕಾವ್ಯ ಸಾಮರ್ಥ್ಯ ಉಳ್ಳ ಪ್ರೌಢಕವಿ. ಈತನ ಪದ್ಯಗಳು ಕಾವ್ಯಾವಲೋಕನ, ಸೂಕ್ತಿಸುಧಾರ್ಣವ, ಕಾವ್ಯಸಾರಗಳಲ್ಲಿ ಉದಾಹೃತವಾಗಿವೆ. ಹೀಗೆ ಈ ಕಾವ್ಯ ಸಮಕಾಲೀನ ವಿದ್ವಜ್ಜನರ ಮೆಚ್ಚುಗೆ ಪಡೆದಿತ್ತು. ಪುಷ್ಪದಂತತೀರ್ಥಂಕರನ ಮೇಲೆ ಅನೇಕ ಭಾಷೆಗಳಲ್ಲಿ ಸ್ವತಂತ್ರ ಕಾವ್ಯವೇ ಇಲ್ಲದಿರುವಾಗ ಗುಣವರ್ಮ ಪ್ರೌಢಕಾವ್ಯ ರಚಿಸಿ ಕನ್ನಡಕ್ಕೆ ಆ ಕೀರ್ತಿಯನ್ನು ತಂದುಕೊಟ್ಟ ಕಾರಣ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಈತನಿಗೊಂದು ವಿಶಿಷ್ಟ ಸ್ಥಾನವಿದೆ. ಚಾರಿತ್ರಿಕ ಅಂಶವಿರುವುದರಿಂದ ಕೃತಿಯ ಮೌಲ್ಯ ಹೆಚ್ಚಿದೆ.

ಗ್ರಂಥಸಂಪಾದನೆ :

ಗುಣವರ್ಮ ವಿರಚಿತ ಪುಷ್ಪದಂತ ಪುರಾಣವನ್ನು ಎ. ವೆಂಕಟರಾಜು ಮತ್ತು ಹೆಚ್. ಶೇಷಯ್ಯಂಗಾರ್ಯರು ೧೯೩೩ರಲ್ಲಿ ಸಂಪಾದಿಸಿ ಮದ್ರಾಸ್ ವಿಶ್ವವಿದ್ಯಾನಿಲಯದಿಂದ ಪ್ರಕಟಿಸಿದ್ದರು. ಇದರ ಪರಿಷ್ಕರಣೆಯಲ್ಲಿ ಅವರು ಎರಡು ಓಲೆ ಪ್ರತಿ ಒಂದು ಕಾಗದದ ಪ್ರತಿಯ ನೆರವು ಪಡೆದರು. ಈ ಪ್ರತಿಗಳಲ್ಲಿ ಒಂದು ಓಲೆ ಪ್ರತಿಯ ಲಿಪಿಕಾರ ನವಿಲ್ಗುಂದದ ಮಾದಿರಾಜ. ಈತ ಕಾವ್ಯಾಂತ್ಯದಲ್ಲಿ ರಚಿಸಿರುವ ಪದ್ಯಗಳಲ್ಲಿ 'ಬಿಂದುವಿನೊಂದು ಶೋಭೆ' ಎಂಬುದು ಕನ್ನಡ ಗ್ರಂಥಸಂಪಾದನೆಯಲ್ಲಿ ಪ್ರಸಿದ್ಧವಾಗಿದೆ. ಈ ಪದ್ಯದಷ್ಟೇ ಸುಂದರವಾದ ಅಕ್ಷರಗಳಿಂದ ಈತ ಪ್ರತಿ ಮಾಡಿದ್ದಾನೆ. ಈ ಪರಿಷ್ಕರಣದಲ್ಲಿ ಬಳಸಿದ ಮದ್ರಾಸಿನ ಎರಡೂ

ಹಸ್ತಪ್ರತಿಗಳು ಈಗ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿವೆ. ಪ್ರಸ್ತುತ ಸಂಪಾದನೆಯು ಇಲ್ಲಿನ ಮುದ್ರಿತ ಪ್ರತಿ ಹಾಗೂ ಹಸ್ತಪ್ರತಿಗಳಿಗೆ ಋಣಿಯಾಗಿದೆ. ಡಿ.ಎಲ್. ನರಸಿಂಹಾಚಾರ್ಯರು ಪ್ರಥಮ ಪರಿಷ್ಕರಣವನ್ನು ಕುರಿತು ವಿಮರ್ಶೆ ಮಾಡುವಾಗ ಅನೇಕ ತಿದ್ದಿದ ಪಾಠಗಳನ್ನು ನೀಡಿದ್ದರು. ಅವುಗಳನ್ನು ಪ್ರಸ್ತುತ ಸಂಪುಟದಲ್ಲಿ ಬಳಸಿಕೊಳ್ಳಲಾಗಿದೆ. ಸೂಕ್ತಿ ಸುಧಾರ್ಣವದ ಪಾಠವನ್ನು ಗಮನಿಸಲಾಗಿದೆ.

ಪ್ರಸ್ತಾವನೆ

ಪಾರ್ಶ್ವನಾಥ ಪುರಾಣಂ

ಕವಿ ವಿಚಾರ :

ಪಾರ್ಶ್ವನಾಥ ಪುರಾಣ ಮತ್ತು ಕಲ್ಪೊಳೆ ಶಾಸನದ ಕರ್ತೃ ಪಾರ್ಶ್ವ ಪಂಡಿತ. ಈತನ ಕಾಲ ನಿರ್ಣಯಿಸಲು ಈತನ ಕೃತಿಗಳು ಉತ್ತಮ ಆಧಾರ ಒದಗಿಸಿವೆ. ಕಲ್ಪೊಳೆ ಶಾಸನ "ಶಕವರ್ಷಂ ೧೧೨೭ನೆಯ ರಕ್ತಾಕ್ಷಿ ಸಂವತ್ಸರದ ಪೌಷ್ಯ ಶುದ್ಧ ಬಿದಿಗೆ ಶನಿವಾರದಂದು ದತ್ತರಾಯಣ ಸಂಕ್ರಮಣದಲ್ಲಿ" ಬರೆಯಲಾಯಿತೆಂದು ಹೇಳಿರುವುದರಿಂದ ಆರ್. ನರಸಿಂಹಾಚಾರ್ಯರು ಇದರ ಕಾಲವನ್ನು ಕ್ರಿ.ಶ. ೧೨೦೫ ಎಂದು ನಿರ್ಣಯಿಸಿದ್ದರು. ಆರ್.ಎನ್. ಗುರುವ ಅವರು ಈ ಶಾಸನದ ಮರು ಓದಿನಲ್ಲಿ ಇಲ್ಲಿ ಬರುವ ರಕ್ತಾಕ್ಷಿ ಸಂವತ್ಸರ ಶಕವರ್ಷ ೧೧೨೭ಕ್ಕೆ ಗತವಾಗಿರದೆ ವರ್ತಮಾನವಾಗಿದೆ ಎಂದು ಗ್ರಹಿಸಿ ಇದರ ಕಾಲ ೧೨೦೪ಕ್ಕೆ ಸಮನಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಪಾರ್ಶ್ವನಾಥ ಪುರಾಣವು ಶಾಸನ ರಚನೆಯಾದ ಹದಿನೇಳು ವರ್ಷಗಳ ಬಳಿಕ ಸೃಷ್ಟಿಯಾಗಿದೆ. ಈ ಕಾವ್ಯಾಂತ್ಯದಲ್ಲಿ-

> **ಶಕವರ್ಷಂ ಚತುರಬ್ಧಿ ಚಂದ್ರ ಶಶಿಸಂಖ್ಯಂ ಚಿತ್ರಭಾನೂತ್ಥ ಕಾ**
> **ರ್ತಿಕ ಶುದ್ಧೋದಿತ ಪಂಚಮಿಾಧಿಪಣವಾರಂ ಪೂರ್ಣೆ ಸಂಪೂರ್ಣಮಾ**
> **ಯ್ತು ಕವಿ ಪ್ರಸ್ತುತ ಪಾರ್ಶ್ವನಾಥಚರಿತಂ ಪಾರ್ಶ್ವೋದಿತಂ ಕೂಡೆ ನ**
> **ರ್ತಿಕೆ ತತ್ಕೀರ್ತಿವ್ರೋಲೂರ್ಜಿತಾರ್ಥ ವಿಲಸತ್ಕಾವ್ಯಂ ಧರಾಭಾಗದೊಳ್**
>
> **(೧೬-೧೮೫)**

ಎಂಬ ಪದ್ಯವಿದ್ದು ಇದು ಈಗಾಗಲೇ ವಿದ್ವಾಂಸರ ಚರ್ಚೆಗೆ ಗ್ರಾಸವಾಗಿದೆ. ಎಂ. ಮರಿಯಪ್ಪ ಭಟ್ಟ ಮತ್ತು ಎಂ. ಗೋವಿಂದರಾವ್ ಅವರು- "ಇಲ್ಲಿ ಹೇಳಲ್ಪಟ್ಟಿರುವ ಚಿತ್ರಭಾನು ಸಂವತ್ಸರವು ದಾಕ್ಷಿಣಾತ್ಯ ಸಂಪ್ರದಾಯಕ್ಕನುಸಾರವಾಗಿ ವ್ಯವಹೃತವಾದ ಚಿತ್ರಭಾನುವಾಗಿದ್ದ ಪಕ್ಷದಲ್ಲಿ ಕವಿಯ ಪೋಷಕನಾದ ನಾಲ್ಕನೆಯ ಕಾರ್ತವೀರ್ಯನು ಶಕ ೧೧೪೪ರಲ್ಲಿ ಎಂದರೆ ಕ್ರಿ.ಶ. ೧೨೨೨ರಲ್ಲಿ ಆಳುತ್ತಿದ್ದಿರಬೇಕು; ಮತ್ತು ಕವಿಯು ತನ್ನ ಗ್ರಂಥವನ್ನು ಆ ವರ್ಷದಲ್ಲಿಯೇ ಮುಗಿಸಿರಬೇಕು. ಪಾರ್ಶ್ವ ನಿರ್ಮಿತವಾದ ಒಂದು ಶಾಸನದ ಕಾಲವು ಕ್ರಿ.ಶ. ೧೨೦೫. ಆದುದರಿಂದ ಕವಿಯ ಕಾಲವು ಸು. ೧೨೦೫-೧೨೨೨ ಎಂದು ಸ್ಥೂಲವಾಗಿ ನಿರ್ಧರಿಸಬಹುದು" ಎಂದು ಹೇಳಿದ್ದು ಸಮಂಜಸವೇ ಆಗಿದೆ. ಒಟ್ಟಿನಲ್ಲಿ ಪಾರ್ಶ್ವಪಂಡಿತನ ಕಾಲ ಕ್ರಿ.ಶ. ೧೨೦೪ ಎಂದು ನಿರ್ದಿಷ್ಟಗೊಂಡಿದೆ.

ಕವಿ ತನ್ನ ಮಾತಾಪಿತೃ, ಗುರು, ಸೋದರ, ಆಶ್ರಯದಾತ ಇವರ ವಿಚಾರವಾಗಿಯೂ ಕೃತಿಯಲ್ಲಿ ಪ್ರಸ್ತಾಪಿಸಿದ್ದಾನೆ-

ಲೋಕಣನಾಯಕಂ ವಿಬುಧಲೋಕನುತಂ ಪಿತೃ ಕಾಮಿಯಕ್ಕನ
ವ್ಯಾಕುಳಶೀಲೆ ತಾಯ್ ತನಗೆ ನಾಗಣನುತ್ತಮಭೋಗನಗ್ರಜಂ
ಶ್ರೀ ಕುಮುದೇಂದು ನಿರ್ಮಳ ಯಶಃಪ್ರಸರಂ ಗುರು ವಾಸುಪೂಜ್ಯನಾ
ತ್ಮೀಕೃತ ತತ್ವನಾಗಿ ನೆಗಳ್ದಂ ಗುಣಮಂಡನ ಪಾರ್ಶ್ವಪಂಡಿತಂ (೧-೯೨)

ಎಂಬ ಪದ್ಯದಿಂದ 'ವಿಬುಧಲೋಕನುತ' ಎಂಬ ವಿಶೇಷಣಕ್ಕೆ ಪಾತ್ರನಾದ ಕವಿಯ ತಂದೆ ದೊಡ್ಡ ವಿದ್ವಾಂಸನಾಗಿರಬೇಕೆಂದು ತಿಳಿದುಬರುತ್ತದೆ. ತಾಯಿ ಕಾಮಿಯಕ್ಕ ಕೂಡ 'ಅವ್ಯಾಕುಳ ಶೀಲೆ' ಎನಿಸಿದ್ದಳು. ಪಾರ್ಶ್ವಪಂಡಿತನ ಗುರು ವಾಸುಪೂಜ್ಯಮುನಿ, ಸೋದರ ನಾಗಣ. ಹೀಗೆ ಒಂದು ಉತ್ತಮ ಪರಿಸರ ಕವಿಗೆ ದೊರೆಯಿತೆನ್ನಬಹುದು.

ಪಾರ್ಶ್ವಕವಿ ತನ್ನ ಆಶ್ರಯದಾತನಾದ ಕಾರ್ತವೀರ್ಯ ಮತ್ತು ಆತನ ತಂದೆ ತಾಯಿಗಳ ಬಗೆಗೆ ಪಾರ್ಶ್ವನಾಥ ಪುರಾಣದ ಕಡೆಯಲ್ಲಿ ಮತ್ತು ಕಲ್ಹೊಳೆ ಶಾಸನದಲ್ಲಿ ವಿಶೇಷವಾಗಿ ಉಲ್ಲೇಖಿಸಿದ್ದು ಈ ಕಾರಣವಾಗಿ ಕಾವ್ಯಕ್ಕೆ ಚಾರಿತ್ರಿಕ ಮಹತ್ವವೂ ಪ್ರಾಪ್ತವಾಗಿದೆ. ವೀರ ಶ್ರೀನಿಧಿ ಕಾರ್ತವೀರ್ಯ (೧೬-೧೮೬), ಪೊಗರಂಭೋರುಹ ಸಂಭವಂ (೧೬-೧೮೭), ಶ್ರೀಕಾರ್ತವೀರ್ಯ (೧೬-೧೮೮) ಎಂಬ ಪದ್ಯಗಳಲ್ಲಿ ರಟ್ಟವಂಶದ ಪ್ರಸಿದ್ಧ ರಾಜರ ಉಲ್ಲೇಖವಿದೆ. ರಟ್ಟರು ಕಲಚೂರ್ಯರ ಕೈಕೆಳಗೆ ಸಾಮಂತರಾಗಿದ್ದು ಕೆಲವು ಕಾಲ ಸೌಂದತ್ತಿಯನ್ನೂ ಕೆಲವು ಕಾಲ ಬೆಳಗಾವಿಯನ್ನೂ ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ್ದರು. ಪಾರ್ಶ್ವಕವಿ ವೀರ ಶ್ರೀನಿಧಿಯಾದ ಕಾರ್ತವೀರ್ಯ, ಇವನ ಪುತ್ರ ಲಕ್ಷ್ಮಣ ಕ್ಷೋಣಿಪ, ಈತನ ಪತ್ನಿ ಚಂದ್ರಿಕಾದೇವಿಯ ಗರ್ಭದಲ್ಲಿ ಜನಿಸಿದ ಕಾರ್ತವೀರ್ಯರ ಬಗೆಗೆ ಹೇಳಿದ್ದಾನೆ. ಇವರಲ್ಲಿ ಲಕ್ಷ್ಮೀದೇವನು ಕ್ರಿ.ಶ. ಸು. ೧೨೦೮ರಲ್ಲಿ ಆಳುತ್ತಿದ್ದ. ಈತನ ಮಗ ನಾಲ್ಕನೆಯ ಕಾರ್ತವೀರ್ಯನೇ ಕವಿಯ ಪೋಷಕ. ಲಕ್ಷ್ಮೀದೇವನು ಕವಿ ನೇಮಿಚಂದ್ರನಿಗೆ ಪೋಷಕನಾಗಿದ್ದ.

ಪಂಪ ರನ್ನ ಮೊದಲಾದ ಕವಿಗಳಂತೆ ಪಾರ್ಶ್ವಕವಿ ಕೂಡ ತನಗೆ ಪ್ರೋತ್ಸಾಹವಿತ್ತ ನಾಲ್ಕನೆಯ ಕಾರ್ತವೀರ್ಯನೊಂದಿಗೆ ಕಥಾನಾಯಕನನ್ನು ಸಮೀಕರಿಸಲು ಪ್ರಯತ್ನಿಸಿರುವುದು ಅಲ್ಲಲ್ಲಿ ಕಂಡುಬರುತ್ತದೆ. ರಟ್ಟರಾಜರು ಜೈನಮತಾವಲಂಬಿಯಾಗಿದ್ದರು. ನೇಮಿಚಂದ್ರ ತನ್ನ ಲೀಲಾವತಿ ಕಾವ್ಯದಲ್ಲಿ ಲಕ್ಷ್ಮೀದೇವನನ್ನು 'ರೂಪಕಂದರ್ಪ' ಎಂದು ಕರೆದಂತೆ ಪಾರ್ಶ್ವಕವಿಯೂ ವಜ್ರನಾಭಿಗೆ ರೂಪಕಂದರ್ಪ ಎಂಬ ವಿಶೇಷಣ ಬಳಸಿರುವುದನ್ನು ಎಂ. ಮರಿಯಪ್ಪ ಭಟ್ ಮತ್ತು ಎಂ. ಗೋವಿಂದರಾವ್ ಅವರು ಗುರುತಿಸಿದ್ದಾರೆ. ಮಹಾಮಂಡಳೇಶ್ವರ ಎಂಬುದು ರಟ್ಟರ ಬಿರುದು. ಈ ಬಿರುದನ್ನು ಪಾರ್ಶ್ವಕವಿ ಆನಂದನಿಗೆ (೧೩-೩) ಕೊಟ್ಟಿದ್ದಾನೆಂದು ತಿಳಿಯಲಾಗಿದೆ. ಕಾವ್ಯದಲ್ಲಿ ಆನಂದನು ಒಂದು ಜಿನಾಲಯವನ್ನು ಕಟ್ಟಿಸುವ ಪ್ರಸಂಗವನ್ನು ವರ್ಣಿಸಲಾಗಿದೆ-

ಪುರುಪಾರ್ಥನಿಧಿ ಶಲಾಕಾ
ಪುರುಷತೆಯಂ ಮಾಬ್ಬಿ ಪುಣ್ಯರಾಶಿಗಳೆಂಬಂ
ತಿರೆ ಸೊದೆವಟೆದ ಶಲಾಕೆಯ
ಪರಮಜಿನಾಲಯಮನರ್ತಿಯಿಂದೆತ್ತಿಸಿದಂ ೧೩-೪೨

ಎಂಬ ಪದ್ಯದ ಹಿನ್ನೆಲೆಯಲ್ಲಿ ನಾಲ್ಕನೆಯ ಕಾರ್ತವೀರ್ಯನು ಶಾಂತಿನಾಥ ಜಿನಾಲಯವನ್ನು ಜೀರ್ಣೋದ್ಧಾರ ಮಾಡಿಸಿ ಉಂಬಳಿ ನೀಡಿದ ಚಾರಿತ್ರಿಕ ಘಟನೆಯನ್ನು ಸಮೀಕರಿಸಲಾಗಿದೆ. ಪಾರ್ಶ್ವನಾಥ ಪುರಾಣದ ಆರಂಭದಲ್ಲಿ ಬರುವ 'ಪಾರ್ಶ್ವಾನತ ಭುವನ ಪತಿ' (೧-೯೬) ಎಂಬ ಉಕ್ತಿಯಲ್ಲಿರುವ 'ಭುವನಪತಿ' ಎನ್ನುವುದು ನಾಲ್ಕನೆಯ ಕಾರ್ತವೀರ್ಯನನ್ನು ಸೂಚಿಸುತ್ತದೆ ಎನ್ನಲಾಗಿದೆ. ಆನಂದಭವದ ಕಥೆಯಲ್ಲಿಯೇ "ಪಾರ್ಶ್ವಪಂಡಿತ ನಿರ್ಮಿತ ಕಾವ್ಯದವೋಲ್ ಜಿನಾಲಯಂ ಪಡೆದು" (೧೩-೪೫) ಎಂದಿರುವುದೂ ಕೂಡ ಸಮಕಾಲೀನ ಅಂಶವನ್ನು ಕಾವ್ಯದಲ್ಲಿ ಅಂತರ್ಗತಗೊಳಿಸಿರುವಂಥದಾಗಿದೆ.

ಪಾರ್ಶ್ವನಾಥ ಪುರಾಣದಲ್ಲಿ ಕವಿ ತನ್ನ ಬಿರುದಾವಳಿಗಳನ್ನು ಮತ್ತು ಅವು ಪ್ರಾಪ್ತವಾಗಲು ಕಾರಣಗಳೇನೆಂಬುದನ್ನು ತಿಳಿಸಿದ್ದಾನೆ. 'ಸುಕವಿಜನ ಮನೋಹರ್ಷ ಸಸ್ಯ ಪ್ರವರ್ಷಂ', 'ವಿಭುಧ ಜನ ಮನಃಪದ್ಮಿನೀ ಪದ್ಮಮಿತ್ರಂ', 'ಕವಿರಾಜಶೇಖರ', 'ಸರಸ ಸಾಹಿತ್ಯ ವಿದ್ಯಾಧರ' ಮುಂತಾದ ಬಿರುದುಗಳಿದ್ದು 'ಕವಿಕುಳತಿಳಕ' ಎಂಬುದು ಪ್ರತಿ ಆಶ್ವಾಸದಲ್ಲಿ ಕಂಡುಬರುತ್ತದೆ. ಇದರಿಂದ ಈತ ಪ್ರಸ್ತುತ ಕಾವ್ಯ ರಚನೆಗೆ ಮೊದಲೇ ಕವಿಯಾಗಿ ಪ್ರಸಿದ್ಧಿ ಪಡೆದಿದ್ದನೆಂದು ತಿಳಿಯಬಹುದು. 'ದೇವನಾಂಪ್ರಿಯ' ಎಂಬುದು ಅಶೋಕನ ಬಿರುದು. ಪಾರ್ಶ್ವಪಂಡಿತ (೭-೧೫) ಇದನ್ನು ಬಳಸಿದ್ದು ಪರಿಶೀಲನಾರ್ಹವಾಗಿದೆ.

ಪಾರ್ಶ್ವಕವಿ ರಟ್ಟರ ಆಸ್ಥಾನದಲ್ಲಿದ್ದುದರಿಂದ ಸವದತ್ತಿ ಅಥವಾ ಕಲ್ಲುಹೊಳೆಯಲ್ಲಿ ನೆಲಸಿರಬೇಕೆಂದು ಹೇಳಬಹುದು. ಏಳನೇ ಆಶ್ವಾಸದಲ್ಲಿ ಬರುವ ವಿದೇಹ ನಾಡಿನ ವರ್ಣನೆಯು ಸುಗಂಧವತಿಯ ವರ್ಣನೆಯೇ ಇರಬೇಕೆಂಬ ಊಹೆಯಿದೆ. ಈತ ತನ್ನ ಗುರುಪರಂಪರೆಯನ್ನು ಕವಿಪರಮೇಷ್ಠಿಯಿಂದ ಆರಂಭಿಸಿ ವೀರಣಂದಿಯವರೆಗೆ ಬಹಳ ದೀರ್ಘವಾಗಿ ನಿರೂಪಿಸಿದ್ದಾನೆ. ಅನಂತರ ಪಂಪ, ಪೊನ್ನ, ರನ್ನ, ಕಣ್ಣಮಯ್ಯ, ಗುಣವರ್ಮ, ಅಗ್ಗಳ, ನೇಮಿಚಂದ್ರ, ಬಾಳಚಂದ್ರ, ನಾಗಚಂದ್ರ, ಬೊಪ್ಪಣ್ಣ, ಕೇಶಿಯಣ್ಣ, ಕವಿಕಾಮ, ವಾಸುದೇವ ಮೊದಲಾದ ಕವಿಗಳನ್ನು ನೆನೆದಿದ್ದಾನೆ. ಪೂರ್ವಕವಿ ಸ್ಮರಣೆ ಪ್ರಾಚೀನ ಕಾವ್ಯಗಳಲ್ಲಿ ಸಾಮಾನ್ಯವಾದರೂ ಪಾರ್ಶ್ವಕವಿ "ನೂತನ ಕವಿಗಳುಮೆಮಗೆ ಪುರಾತನ ಕವಿಗಳ ಸಮಾನರತಿಶಯ ಸುಗುಣಾನ್ವಿತರ್" ಎಂಬ ಭಾವನೆ ವ್ಯಕ್ತಪಡಿಸಿರುವುದು ಅಪೂರ್ವವೆನಿಸಿದೆ. ಸಮಕಾಲೀನ ಕವಿಗಳನ್ನು ಇಷ್ಟು ಔದಾರ್ಯದಿಂದ ಕಂಡಿರುವುದು ಈತನ ವ್ಯಕ್ತಿತ್ವದ ಔನ್ನತ್ಯವನ್ನು ಬಿಂಬಿಸುತ್ತದೆ. ಪಾರ್ಶ್ವಪಂಡಿತ ಕೆಲವು ಕವಿ ಕೃತಿಗಳನ್ನು ಉಲ್ಲೇಖಿಸಿದ್ದು ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ಉಪಯುಕ್ತವಾಗಿದೆ. ಈತ ಹೇಳಿರುವ ಅಗ್ಗಳನ

'ರೂಪಸ್ತವನ ಮಣಿಪ್ರವಾಳ', 'ಜಿನನಾಸ್ನಾನಸ್ತವನ', ಕಪಿಕಾಮನ 'ಸ್ನಾನಶತಕ', ಕೇಶಿಯಣ್ಣನ 'ಸಿಂಹಪ್ರಾಯೋಪಗಮನ' ಗ್ರಂಥಗಳು ಅನುಪಲಬ್ಧವಾಗಿವೆ.

ಪಾರ್ಶ್ವಕವಿ ವಿರಚಿತ ಕಲ್ಹೊಳೆ ಶಾಸನವು ಮುಖ್ಯವಾಗುವುದು ಅದರಲ್ಲಿರುವ ಚಾರಿತ್ರಿಕ ಅಂಶಗಳಿಂದ. ಇದರಲ್ಲಿ ೪೦ ಪದ್ಯಗಳಿವೆ. ಗದ್ಯ, ವೃತ್ತಗಳಿಂದ ಕೂಡಿದೆ. ಶಾಂತಿನಾಥ ಬಸದಿಯ ಜೀರ್ಣೋದ್ಧಾರ, ಜೈನಗುರುಗಳು, ಕಾರ್ತವೀರ್ಯನ ತಾಯಿ ಚಂದಲದೇವಿಯ ವರ್ಣನೆ ಮುಂತಾದ ವಿಚಾರಗಳನ್ನು ಕವಿ ಇಲ್ಲಿ ನಿರೂಪಿಸಿದ್ದು ಕಾವ್ಯಾತ್ಮಕತೆಗಿಂತಲೂ ಇತರ ಕಾವ್ಯೇತರ ಸಂಗತಿಗಳಿಗಾಗಿ ಮುಖ್ಯವಾಗಿದ್ದು ಪಾರ್ಶ್ವನಾಥ ಪುರಾಣ ರಚನೆಗೆ ಪೂರ್ವಭಾವಿಯಾಗಿ ಬರೆದ ಕವಿಯ ಬರಹಗಳಾಗಿವೆ.

ಕವಿಗೆ ಚಂದಲದೇವಿಯ ಬಗ್ಗೆ ಅಪಾರ ಗೌರವ. ಆಕೆಯನ್ನು ಈತ –

ಶ್ರೀಪತಿ ಲಕ್ಷ್ಮೀದೇವ ಮಹಿವಲ್ಲಭ ವಲ್ಲಭೆ ಕಾರ್ತವೀರ್ಯ ಧಾ
ತ್ರೀಪತಿ ಮಲ್ಲಿಕಾರ್ಜುನ ಮಹೀಶರ ಮಾತೃ ಮಹಾಸತೀತ್ವ ಸೀ
ತೋಪಮೆ ಜೈನಪೂಜನ ಸುರೇಂದ್ರ ವಧೂಪಮೆ ರೂಪಕಂತುಕಾಂ
ತೋಪಮೆ ರಂಜಿಪಳ್ ನೆಗಳ್ದ ಚಂದಲದೇವಿ ಸಮಸ್ತ ಧಾತ್ರಿಯೊಳ್

ಎಂದು ಆಪ್ತವಾಗಿ ವರ್ಣಿಸಿದ್ದಾನೆ. ಇಲ್ಲಿಯ ಚಂದಲದೇವಿ ಹಗರಟಿಗೆ ನಾಡಿಗೆ ಸೇರಿದವಳು. ರಟ್ಟರು ಮತ್ತು ಹಗರಟಿಗೆ ನಾಡಿನ ರಾಜರು ಬಂಧುಗಳು. ಈ ಕಾರಣದಿಂದ ಕವಿ ಹಗರಟಿಗೆ ನಾಡಿಗೆ ಸೇರಿರಬಹುದೆಂಬ ಊಹೆಯೂ ಇದೆ. ರಟ್ಟರ ಚರಿತ್ರೆಯನ್ನು ಕಟ್ಟಿಕೊಡಲು ಕಲ್ಹೊಳೆ ಶಾಸನ ಕೂಡ ಬೆಂಬಲವಾಗಿ ನಿಲ್ಲುತ್ತದೆ.

ಕಥಾಸಾರ :

ಜಂಬೂದ್ವೀಪದ ಸುರಮ್ಯ ದೇಶದ ಪೌದನಪುರದಲ್ಲಿ ಅರವಿಂದನೆಂಬ ರಾಜ ಆಳುತ್ತಿದ್ದನು. ಅವನಿಗೆ ವಿಶ್ವಭೂತಿ ಎಂಬ ಮಂತ್ರಿ. ಈತನ ಪತ್ನಿ ಅನುಂಧರೆ. ಈ ದಂಪತಿಗಳಿಗೆ ಕಮಠ ಮತ್ತು ಮರುಭೂತಿ ಎಂಬ ಮಕ್ಕಳು. ಕಮಠನಿಗೆ ವಾರುಣೆ ಎಂಬ ಹೆಂಡತಿ. ಮರುಭೂತಿಯ ಹೆಂಡತಿ ವಸುಂಧರೆ. ಕಮಠ ದುರಾಚಾರಿಯಾಗಿದ್ದರೆ ಮರುಭೂತಿ ಸುಗುಣಿ.

ಒಂದು ದಿನ ವಿಶ್ವಭೂತಿ ತನ್ನ ತಲೆಯಲ್ಲಿ ನರೆಗೂದಲನ್ನು ಕಂಡು ವೈರಾಗ್ಯಪರನಾದ. ಸಂಸಾರವನ್ನು ತ್ಯಜಿಸಿ, ಹಿರಿಯ ಮಗ ದುಷ್ಟನಾಗಿದ್ದುದರಿಂದ ಮರುಭೂತಿಗೆ ಮಂತ್ರಿಪದವಿ ಒಪ್ಪಿಸಿದ.

ಒಮ್ಮೆ ಸಾಮಂತನೊಬ್ಬ ಮಲೆತಿರುವ ಸುದ್ದಿ ತಿಳಿದು ಮರುಭೂತಿ ತನ್ನ ಪ್ರಭುವಿನ ಜೊತೆಯಲ್ಲಿ ಯುದ್ಧಕ್ಕೆ ಹೋಗಬೇಕಾಯಿತು. ಈ ಸಂದರ್ಭವನ್ನರಿತ ಕಮಠನು ಅಧಿಕಾರ ಅನುಭವಿಸುತ್ತ, ಸೋದರನ ಪತ್ನಿ ವಸುಂಧರೆಯನ್ನು ಒಲಿಸಿಕೊಂಡು ಅವಳಲ್ಲಿ ಅನುರಕ್ತ

ನಾದನು. ಕೆಲವು ದಿನಗಳಾದ ಬಳಿಕ ಯುದ್ಧದಿಂದ ಹಿಂದಿರುಗಿದ ರಾಜ ಮತ್ತು ಮರುಭೂತಿಯರಿಗೆ ಗೂಢಚರರು ಕಮಠನ ವಿಷಯವನ್ನು ತಿಳಿಸಿದರು. ಆಗ ಮರುಭೂತಿ ಹೆಂಡತಿಯನ್ನು ಕೀಳಾಗಿ ಭಾವಿಸಿದನೇ ಹೊರತು ಅಣ್ಣನೊಡನೆ ಎಂದಿನಂತೆಯೇ ಇರತೊಡಗಿದ. ಇದರಿಂದ ರಾಜನೇ ಕಮಠನಂಥ ಕ್ರೂರಿಗೆ ತಕ್ಕನಾದ ಶಿಕ್ಷೆ ವಿಧಿಸಿ ನಾಡಿನಿಂದ ಹೊರಗಟ್ಟಿದ. ಇದನ್ನು ತಿಳಿದು ಮರುಭೂತಿ ಅಣ್ಣನಲ್ಲಿಗೆ ಹೋಗಿ ಕಾಲಿಗೆ ನಮಸ್ಕರಿಸುವಾಗ ಕಮಠನು ಮೋಸದಿಂದ ಮರುಭೂತಿಯ ತಲೆಯ ಮೇಲೆ ಕಲ್ಲು ಎತ್ತಿಹಾಕಿ ಕೊಂದನು.

ಮರುಭೂತಿ ಸಲ್ಲಕೀವನದಲ್ಲಿ ವಜ್ರಘೋಷನೆಂಬ ಆನೆಯಾಗಿ ಹುಟ್ಟಿದನು. ಆ ವೇಳೆಗೆ ಅರವಿಂದ ಮಹಾರಾಜನು ವಿರಕ್ತಿ ಹೊಂದಿ ಪ್ರತಿಮಾಯೋಗದಲ್ಲಿದ್ದನು. ಆನೆಯು ಆತನನ್ನು ಕಂಡು ಕೊಲ್ಲಲು ಹೋದಾಗ ಅರವಿಂದಮುನಿಯ ಎದೆಯಲ್ಲಿದ್ದ ಶ್ರೀವತ್ಸಲಾಂಛನ ಗೋಚರಿಸಿತು. ಪೂರ್ವಜನ್ಮದ ಸಂಬಂಧ ನೆನಪಾಗಿ ಅದು ತೊಂದರೆ ಕೊಡದೆ ಸುಮ್ಮನಾಯಿತು. ಅನಂತರ ಅದು ಉಗ್ರತಪಸ್ಸನ್ನಾಚರಿಸಿ ಒಂದು ದಿನ ನೀರು ಕುಡಿಯಲೆಂದು ವೇಗವತಿ ಮಡುವಿನಲ್ಲಿಳಿದಾಗ ಸರ್ಪರೂಪದಲ್ಲಿದ್ದ ಕಮಠನು ಕಚ್ಚಲಾಗಿ ಪ್ರಾಣಬಿಟ್ಟಿತು.

ವಜ್ರಘೋಷ ಆನೆ ಹೀಗೆ ಸತ್ತು ಸಹಸ್ರಾರ ಕಲ್ಪದಲ್ಲಿ ಶಶಿಪ್ರಭ ಎಂಬ ದೇವನಾಗಿ ಜನಿಸಿ ಸುಖವನ್ನು ಅನುಭವಿಸಿತು. ಜಿನೇಶ್ವರನನ್ನು ಮನಸ್ಸಿನಲ್ಲಿ ಸ್ಥಿರವಾಗಿ ಭಾವಿಸಲಾಗಿ ಸಮಾಧಿ ಮರಣ ಉಂಟಾಯಿತು. ಶಶಿಪ್ರಭನು ಮರುಭವದಲ್ಲಿ ಜಂಬೂದ್ವೀಪದ ತ್ರಿಲೋಕೋತ್ತಮ ನಗರದ ವಿದ್ಯುತ್ಪ್ರಭರಾಜನ ಪತ್ನಿ ವಿದ್ಯುನ್ಮಾಲೆಯ ಗರ್ಭದಲ್ಲಿ ರಶ್ಮಿವೇಗನಾಗಿ ಹುಟ್ಟಿದನು. ಈತ ಯೌವನಕ್ಕೆ ಕಾಲಿಟ್ಟಾಗ ಭವಸಾಗರ ದಾಟಲು ತಪಸ್ಸೇ ಯೋಗ್ಯವೆಂದು ತಪೋನಿರತನಾಗಿದ್ದಾಗ ಕಮಠನು ಹೆಬ್ಬಾವಾಗಿ ಹುಟ್ಟಿ ರಶ್ಮಿವೇಗಮುನಿಯನ್ನು ನುಂಗಿದನು.

ಐದನೆಯ ಜನ್ಮದಲ್ಲಿ ರಶ್ಮಿವೇಗಮುನಿಯು ಅಚ್ಯುತಕಲ್ಪದಲ್ಲಿ ಅಚ್ಯುತೇಂದ್ರನಾಗಿ ಇಪ್ಪತ್ತೆರಡು ಸಾಗರೋಪಮಕಾಲ ಬದುಕಿದ್ದು, ಆರನೆಯ ಜನ್ಮದಲ್ಲಿ ಜಂಬೂದ್ವೀಪದ ಅಶ್ವಪುರವನ್ನಾಳುವ ವಜ್ರವೀರ್ಯ ಅರಸನ ಪತ್ನಿ ವಿಜಯಾಂಗನೆಗೆ ವಜ್ರನಾಭಿ ಎಂಬ ಮಗನಾದನು. ಈತ ಷಟ್ಖಂಡ ಸಾಮ್ರಾಜ್ಯ ಅನುಭವಿಸಿದ ಬಳಿಕ ವೈರಾಗ್ಯ ಹೊಂದಿ ಪ್ರತಿಮಾಯೋಗದಲ್ಲಿದ್ದಾಗ ಕಮಠನು ಕುರಂಗಕನೆಂಬ ಬೇಡನಾಗಿ ಹುಟ್ಟಿಬಂದು ಹಲವು ಬಗೆಯ ತೊಂದರೆಗಳನ್ನು ಕೊಟ್ಟನು. ವಜ್ರನಾಭಿ ದೇಹಭಾರ ಇಳಿಸಿದ ಬಳಿಕ ಏಳನೆಯ ಜನ್ಮದಲ್ಲಿ ಸುಭದ್ರ ವಿಮಾನದಲ್ಲಿ ಅಹಮಿಂದ್ರದೇವನಾಗಿ ಜನಿಸಿ ದಿವ್ಯಭೋಗವನ್ನು ಅನುಭವಿಸಿ ಅಲ್ಲಿಂದ ಚ್ಯುತನಾದ ತರುವಾಯ ಜಂಬೂದ್ವೀಪದ ಸಾಕೇತನಗರದಲ್ಲಿ ವಜ್ರಬಾಹು ಅರಸನ ಸತಿ ಪ್ರಭಂಕರೀ ದೇವಿಗೆ ಆನಂದನೆಂಬ ಮಗನಾಗಿ ಹುಟ್ಟಿದನು.

ಎಂಟನೇ ಜನ್ಮದ ಆನಂದನು ಮಹಾಮಂಡಲೇಶ್ವರನಾಗಿ ರಾಜ್ಯಭಾರ ಮಾಡಿದನು. ಒಂದು ದಿನ ವಿಪುಲಮತಿಯತಿಗಳಿಂದ ಜಿನಬಿಂಬಾರ್ಚನೆ ಜಿನಾಲಯಗಳ ಮಹತ್ವವನ್ನು ತಿಳಿದುಕೊಂಡು ಅನೇಕ ಜಿನಮಂದಿರಗಳನ್ನು ಕಟ್ಟಿಸಿದನು. ಅನಂತರ ನರೆಗೂದಲನ್ನು ಕಂಡು ನಿರ್ವೇಗಪರನಾಗಿ ತಪಸ್ಸಿನಲ್ಲಿದ್ದಾಗ ಕಮಠನು ಸಿಂಹರೂಪದಲ್ಲಿ ಜನಿಸಿ ಬಂದು ಆತನನ್ನು ಕೊಂದನು. ಆನಂದನು ಒಂಬತ್ತನೇ ಜನ್ಮದಲ್ಲಿ ಆನತಕಲ್ಪದಲ್ಲಿ ದೇವನಾಗಿ ಹುಟ್ಟಿ ಇಪ್ಪತ್ತು ಸಾಗರೋಪಮ ಕಾಲ ಸುಖದಲ್ಲಿದ್ದನು.

ಜಂಬೂದ್ವೀಪದ ವಾರಣಾಸಿ ನಗರದ ರಾಜ ಅಶ್ವಸೇನ. ಈತನ ಪತ್ನಿ ಬ್ರಹ್ಮದತ್ತೆ. ಈ ದಂಪತಿಗಳಿಗೆ ಆನತಕಲ್ಪದ ದೇವನು ಮಗನಾಗಿ ಹುಟ್ಟುವನೆಂದು ತಿಳಿದ ಇಂದ್ರನು ಕುಬೇರನಿಗೆ ರತ್ನದ ಮಳೆ ಸುರಿಸಲು ತಿಳಿಸಿದನು. ಬ್ರಹ್ಮನತ್ತಾದೇವಿಯ ಗರ್ಭದಲ್ಲಿ ಜಿನಶಿಶುವಿರುವುದನ್ನು ಅರಿತು ಗರ್ಭಶೋಧನೆ ಮಾಡಲು ಇಂದ್ರನು ಸ್ವರ್ಗದ ದೇವತಾ ಸ್ತ್ರೀಯರನ್ನು ಕಳಿಸಿದನು. ಬ್ರಹ್ಮದತ್ತಾದೇವಿ ಶುಭಸ್ವಪ್ನಗಳನ್ನು ಕಂಡಳು. ಇಂದ್ರನು ಗರ್ಭಾವತರಣ ಕಲ್ಯಾಣ ಮಹೋತ್ಸವವನ್ನು ನೆರವೇರಿಸಿದನು.

ಪುಷ್ಯಮಾಸ, ಕೃಷ್ಣಪಕ್ಷ, ಏಕಾದಶಿಯ ದಿನ ಶುಭವಾರ ಶುಭನಕ್ಷತ್ರ ಕೂಡಿಬರಲು ಬ್ರಹ್ಮದತ್ತಾದೇವಿ ಜಿನಶಿಶುವಿಗೆ ಜನ್ಮವಿತ್ತಳು. ಶಚೀದೇವಿ ತಾಯಿಯ ಬಳಿಯಲ್ಲಿ ಮಾಯಾ ಶಿಶುವನ್ನಿಟ್ಟು ಜಿನಶಿಶುವನ್ನು ಇಂದ್ರನ ಕೈಗಿತ್ತಳು. ಐರಾವತದಲ್ಲಿದ್ದ ಶಿಶುವಿಗೆ ಇಂದ್ರರು ಚಾಮರ ಬೀಸಿದರು. ಕ್ಷೀರಸಮುದ್ರದ ನೀರಿನಿಂದ ಅಭಿಷೇಕ ಮಾಡಿ ಧರ್ಮೋಪದೇಶ ವಚನಗಳು ಪಾರ್ಶ್ವದಲ್ಲಿರುವುದರಿಂದ ಪಾರ್ಶ್ವನಾಥನೆಂದು ಹೆಸರಿಟ್ಟು ಇಂದ್ರನು ತೆರಳಿದನು.

ಪಾರ್ಶ್ವನಾಥನು ಬಾಲ್ಯವನ್ನು ಕ್ರಮಿಸಿ ಕೌಮಾರ್ಯಕ್ಕೆ ಕಾಲಿಟ್ಟನು. ಲೋಕಕ್ಕೆಲ್ಲ ಉನ್ನತನಾಗಿದ್ದನು. ಒಂದು ದಿನ ಆತ ಪುರದ ಸಿರಿಯನ್ನು ನೋಡಲು ಹೋದಾಗ ಪಂಚಾಗ್ನಿಗಳ ಮಧ್ಯದಲ್ಲಿ ತಪದಲ್ಲಿದ್ದ ಒಬ್ಬ ಮುನಿಯನ್ನು ಕಂಡನು. ಜೀವಾದಿ ತತ್ವಗಳನ್ನು ತಿಳಿಯದೆ ಮಾಡುವ ತಪಸ್ಸು ಪುಣ್ಯವನ್ನು ನಾಶಪಡಿಸಿ ಪಾಪವನ್ನುಂಟುಮಾಡುತ್ತದೆ ಎಂದು ಆ ತಪಸ್ವಿಯ ಅವಿವೇಕವನ್ನು ಪಾರ್ಶ್ವನು ತಿಳಿಸಿದನು. ಆತ ಕೋಪದಿಂದ ದೋಷವಿದ್ದರೆ ತಿಳಿಸು ಎಂದಾಗ ಅಲ್ಲಿ ಹತ್ತಿ ಉರಿಯುತ್ತಿದ್ದ ಕಟ್ಟಿಗೆಯ ತುಂಡನ್ನು ಸೀಳಿಸಿ ಅದರಲ್ಲಿ ಬೆಂದುಹೋಗಿದ್ದ ಉರಗ ದಂಪತಿಗಳನ್ನು ತೋರಿಸಿದನು. ಆ ಸರ್ಪಗಳಿಗೆ ಜೀವದಾನ ಮಾಡಿದನು. ಗಂಡುಸರ್ಪವು ಧರಣೇಂದ್ರನಾಗಿ, ಹೆಣ್ಣುಸರ್ಪವು ಪದ್ಮಾವತಿಯಾಗಿ ಜನಿಸಿದವು. ಅನಂತರ ಪಾರ್ಶ್ವನು ಅಹಿಂಸೆಯ ಮಹತ್ವವನ್ನು ಬೋಧಿಸಿದನು.

ಯೌವನದಿಂದ ಕೂಡಿದ್ದ ಪಾರ್ಶ್ವನಿಗೆ ತಂದೆತಾಯಿಗಳು ವಿವಾಹ ಮಾಡಲು ನಿಶ್ಚಯಿಸಿದರು. ಹಲವಾರು ದೇಶದ ರಾಜಕುಮಾರಿಯರನ್ನು ತೋರಿಸಿದರೂ ಈತನಿಗೆ ವಿವಾಹದಲ್ಲಿ ಆಸಕ್ತಿ ಮೂಡಲಿಲ್ಲ. ಮದುವೆಯು ಮುಕ್ತಿಸಂಪಾದನೆ ಮಾಡುವವರಿಗೆ

ಯೋಗ್ಯವಲ್ಲ, ಅಜ್ಞಾನಿಗಳಂತೆ ನೀವು ನನ್ನನ್ನು ಒತ್ತಾಯಿಸಬೇಡಿ ಎಂದು ತಂದೆತಾಯಿಗಳಿಗೆ ತಿಳಿಸಿದನು.

ಒಂದು ದಿನ ಸಾಕೇತಪುರದ ಜಯಸೇನರಾಜನು ಪಾರ್ಶ್ವನಿಗೆ ಒಂದು ಕುದುರೆಯನ್ನು ಮಹತ್ತರನ ಮೂಲಕ ಕಳಿಸಿಕೊಟ್ಟನು. ಪಾರ್ಶ್ವನು ಆತನಲ್ಲಿ ನಿಮ್ಮ ರಾಜನ ಪಟ್ಟಣವು ವೃಷಭನಾಥನ ಜನನದಿಂದ ಹೇಗೆ ಪವಿತ್ರವಾಯಿತೆಂದು ಕೇಳುತ್ತ ಭವಸ್ಮರಣೆ ಉಂಟಾಗಿ ವೈರಾಗ್ಯಪರನಾದನು. ಇದನ್ನರಿತ ಇಂದ್ರನು ದೇವತೆಗಳೊಂದಿಗೆ ಪರಿನಿಷ್ಕ್ರಮಣ ಕಲ್ಯಾಣವನ್ನು ನೆರವೇರಿಸಿದನು. ಅನಂತರ ಪಾರ್ಶ್ವನು ದಿಗಂಬರನಾಗಿ ತಪಸ್ಸಿಗೆ ತೊಡಗಿ ಪ್ರತಿಮಾಯೋಗದಲ್ಲಿ ಏಳು ದಿನಗಳವರೆಗೆ ನಿಂತನು. ಆ ಸಂದರ್ಭದಲ್ಲಿ ಪಂಚಾಗ್ನಿ ಮಧ್ಯದಲ್ಲಿ ತಪಸ್ಸು ಮಾಡುತ್ತಿದ್ದ ಆ ಮುನಿ ಕೋಪವನ್ನಿಟ್ಟುಕೊಂಡು ಸತ್ತು ಭೂತಾನಂದನೆಂಬ ಅಸುರನಾಗಿ ಜನಿಸಿ ಆಕಾಶಮಾರ್ಗದಲ್ಲಿ ಬರುತ್ತಿದ್ದನು. ಪಾರ್ಶ್ವನನ್ನು ಕಂಡು ಅಸುರನ ವಿಮಾನ ನಿಂತುಕೊಂಡಿತು. ಪೂರ್ವಜನ್ಮದ ದ್ವೇಷದಿಂದ ಅಸುರನು ನಾನಾ ರೀತಿಯ ಉಪಸರ್ಗಗಳನ್ನು ನೀಡಿದರೂ ಪಾರ್ಶ್ವನು ನಿಶ್ಚಲನಾಗಿದ್ದನು. ಆಗ ಪಾತಾಳಲೋಕದಲ್ಲಿದ್ದ ನಾಗರಾಜನಿಗೆ ಆಸನಕಂಪವಾಗಿ ಪದ್ಮಾವತಿಯೊಂದಿಗೆ ಬಂದು ತನ್ನ ಹೆಡೆಗಳನ್ನು ಪಾರ್ಶ್ವನ ತಲೆಯ ಮೇಲೆ ಎತ್ತಿಹಿಡಿದನು. ಪದ್ಮಾವತಿ ವಜ್ರದ ಛತ್ರಿಯನ್ನು ಎತ್ತಿಹಿಡಿದಳು. ಪಾರ್ಶ್ವನು ಕರ್ಮಗಳನ್ನು ಗೆದ್ದು ಚೈತ್ರಮಾಸದ ಕೃಷ್ಣಪಕ್ಷದ ಚತುರ್ದಶಿಯ ದಿನ ವಿಶಾಖಾ ನಕ್ಷತ್ರದಲ್ಲಿ ಕೇವಲಜ್ಞಾನವನ್ನು ಪಡೆದನು. ಇಂದ್ರ ಹಾಗೂ ಇತರ ದೇವತೆಗಳು ಕೇವಲಜ್ಞಾನಕಲ್ಯಾಣ ನೆರವೇರಿಸಿದರು. ಅನಂತರ ಪಾರ್ಶ್ವನು ಪಾರ್ಶ್ವನಾಥ ಎಂಬ ತೀರ್ಥಂಕರನಾದನು.

ಪಾರ್ಶ್ವನಾಥನು ಒಂಬತ್ತು ಗಣಧರರು, ಐನೂರರವತ್ತು ಪೂರ್ವಧರರು, ಸಾವಿರದ ಒಂಬೈನೂರು ಶಿಕ್ಷಕರು, ಐದು ಸಾವಿರದ ನಾನೂರು ಅವಧಿಜ್ಞಾನಿಗಳು, ಒಂದು ಸಾವಿರ ಕೇವಲಿಗಳು, ಏಳುನೂರೈವತ್ತು ಮನಃಪರ್ಯಾಯ ಜ್ಞಾನಿಗಳು, ಆರುನೂರು ವಾದಿಗಳು, ಒಂದು ಲಕ್ಷ ಶ್ರಾವಕರು, ಮೂರು ಲಕ್ಷ ಶ್ರಾವಕಿಯರು, ಅಸಂಖ್ಯಾತ ದೇವಸಮೂಹ ಹಾಗೂ ತಿರ್ಯಕ್ ಸಂಘದವರೊಡನೆ ಕೂಡಿ ಸುಮಾರು ಎಪ್ಪತ್ತು ವರ್ಷ ಧರ್ಮಬೋಧೆ ಮಾಡಿದನು. ಅದಕ್ಕಾಗಿ ಕರಹಾಟ, ಆಂಧ್ರ, ಕಳಿಂಗ, ವಂಗ, ಮಗಧ, ಅಂಗ, ಆಭೀರ, ಸೌವೀರ, ಗೂರ್ಜರ, ಕರ್ಣಾಟ, ವರಾಳ, ಮಾಳವ, ಮಹಾರಾಷ್ಟ್ರ ಮುಂತಾದೆಡೆ ಸಂಚರಿಸಿದನು. ಹಲವರು ಈತನಿಂದ ಧರ್ಮೋಪದೇಶ ಪಡೆದು ಪುನೀತರಾದರು. ಈತನ ತಂದೆತಾಯಿಗಳೂ ಅವರಲ್ಲಿ ಇದ್ದರು. ಪಾರ್ಶ್ವನಾಥನು ಸಮ್ಮೇದಪರ್ವತದ ಶಿಖರದಲ್ಲಿ ಪ್ರತಿಮಾಯೋಗದಲ್ಲಿದ್ದು ಮುಕ್ತಿ ಪಡೆದನು. ಇಂದ್ರನು ಆಗಮಿಸಿ ಪರಿನಿರ್ವಾಣ ಕಲ್ಯಾಣ ಮಹೋತ್ಸವವನ್ನು ನೆರವೇರಿಸಿದನು.

ಕಾವ್ಯಸಮೀಕ್ಷೆ : ಜೈನರ ಪ್ರಮುಖ ತೀರ್ಥಂಕರರಲ್ಲಿ ಒಬ್ಬನಾದ ಪಾರ್ಶ್ವನಾಥನು ೨೩ನೆಯ ತೀರ್ಥಂಕರ. ಈತನನ್ನು ಕೇಂದ್ರವಾಗಿಟ್ಟುಕೊಂಡು ರಚಿತವಾದ ಕಾವ್ಯವೇ ಪ್ರಸ್ತುತ

ಪಾರ್ಶ್ವನಾಥ ಪುರಾಣ. ಮಹಾವೀರನಂತೆ ಈತ ಕೂಡ ಐತಿಹಾಸಿಕ ವ್ಯಕ್ತಿ. ಮಹಾವೀರನಿಗಿಂತ ಸು. ೨೫೦ ವರ್ಷ ಮೊದಲು ಕ್ರಿ.ಪೂ. ೭೭೭ರಲ್ಲಿ ಈತ ಇದ್ದನೆಂದು ಹೇಳಲಾಗಿದೆ. ಗೌತಮಬುದ್ಧ ಮತ್ತು ಮಹಾವೀರರು ಈತನ ತತ್ವಗಳಿಂದ ಪ್ರಭಾವಿತ ರಾಗಿದ್ದರೆಂಬ ಅಭಿಪ್ರಾಯವಿದೆ. ಪಂಚಾಣು ವ್ರತಗಳಲ್ಲಿ ಅಹಿಂಸೆಯನ್ನು ಹೊರತುಪಡಿಸಿದ ಇತರ ನಾಲ್ಕು ವ್ರತಗಳನ್ನು ಈತನೇ ಬೋಧಿಸಿದ್ದನೆನ್ನುತ್ತಾರೆ. ಬುದ್ಧ 'ಪಾರ್ಶ್ವಚಿಜ್ಜ' (ಪಾರ್ಶ್ವನಾಥನ ಶಿಷ್ಯ) ಎಂಬ ಮಾತು ಬಳಸಿದ್ದಾನೆ. ಇದರಿಂದ ಬುದ್ಧನ ಕಾಲಕ್ಕೆ ಈತನ ಶಿಷ್ಯರಿದ್ದರೆಂದು ತಿಳಿಯಬಹುದು. ಜೈನವಾಸ್ತುವಿನಲ್ಲಿ ಪಾರ್ಶ್ವತೀರ್ಥಂಕರರ ಪ್ರತಿಮೆಗಳಷ್ಟು ಹೇರಳವಾಗಿ ಬೇರಾವ ತೀರ್ಥಂಕರರದೂ ದೊರೆಯುವುದಿಲ್ಲ. ಸಾಹಿತ್ಯಿಕವಾಗಿಯೂ ಶಿಷ್ಟದಿಂದ ಜನಪದದವರೆಗೆ ಈತನ ಖ್ಯಾತಿಯಿದೆ -

ಜಿನದತ್ತ ಜಿನಸ್ವಾಮಿ ಹೊನ್ನ ಪಾರ್ಶ್ವನಾಥ
ನಿನ್ನಂಥ ಒಬ್ಬ ಮಗ ಬೇಕ ಬಸ್ತ್ಯಾನ
ಪದ್ಮಾವತಿಯಂಥ ಸೊಸಿ ಬೇಕ

ಎಂದು ಹಳ್ಳಿಯ ಹೆಣ್ಣುಮಗಳು ಪ್ರಾರ್ಥಿಸುವುದುಂಟು. ಜೈನರು ಯಂತ್ರ ಮಂತ್ರದ ಸಂದರ್ಭದಲ್ಲಿಯೂ ಪಾರ್ಶ್ವನಾಥನನ್ನು ಪೂಜಿಸುವುದುಂಟು. ಜನಸಾಮಾನ್ಯರ ನಡುವೆ ಈತ ವೈದ್ಯದೇವತೆಯ ಸ್ಥಾನಮಾನ ಪಡೆದಿರಬಹುದು.

ಪಾರ್ಶ್ವತೀರ್ಥಂಕರ ಚರಿತ್ರೆ ಸಂಸ್ಕೃತ, ಪ್ರಾಕೃತ, ಕನ್ನಡ ಮೊದಲಾದ ಭಾಷೆಗಳಲ್ಲಿ ಸ್ವತಂತ್ರವಾಗಿ ಆನುಷಂಗಿಕವಾಗಿ ಕಾಣಸಿಕೊಂಡಿದೆ. ಸಂಸ್ಕೃತದಲ್ಲಿ ಜಿನಸೇನ ಗುಣ ಭದ್ರಾಚಾರ್ಯರ ಮಹಾಪುರಾಣ, ಜಿನಸೇನಾಚಾರ್ಯರ ಪಾರ್ಶ್ವಾಭ್ಯುದಯ, ವಾದಿರಾಜ ಸೂರಿಯ ಪಾರ್ಶ್ವನಾಥ ಚರಿತೆ, ಮಾಣಿಕಚಂದ್ರ ಸೂರಿಯ ಪಾರ್ಶ್ವನಾಥ ಚರಿತ, ಭವದೇವ ಸೂರಿಯ ಪಾರ್ಶ್ವನಾಥ ಚರಿತ ಮುಂತಾದ ಗ್ರಂಥಗಳನ್ನು ಪಾರ್ಶ್ವಕವಿಗೆ ಪೂರ್ವದಲ್ಲಿಯೇ ಕಾಣಬಹುದು. ಪ್ರಾಕೃತದಲ್ಲಿಯೂ ನಾಗದೇವನ ಪಾರ್ಶ್ವನಾಥ ಪುರಾಣ, ಜಿನಪ್ರಭಸೂರಿಯ ಪಾರ್ಶ್ವನಾಥ ಜನ್ಮಾಭಿಷೇಕ, ಶೀಲಾಂಕನ ಚಉಪನ್ನ ಮಹಾಪುರಿಸ ಚರಿಉ, ಪದ್ಮಕೀರ್ತಿಯ ಪಾಸಣಾಹ ಚರಿಉ, ಶ್ರೀಧರನ ಪಾಸಣಾಹ ಚರಿಉ ಇತ್ಯಾದಿ ಗ್ರಂಥಗಳಿದ್ದವು. ಕನ್ನಡದಲ್ಲಿ ಈ ವಸ್ತು ಚಾವುಂಡರಾಯ ಪುರಾಣದಲ್ಲಿ ಪಾರ್ಶ್ವಿಕವಾಗಿ ಕಾಣಿಸಿಕೊಂಡ ಬಳಿಕ ಪಾರ್ಶ್ವಕವಿಯಲ್ಲಿ ಮೊದಲು ಸಮಗ್ರವಾಗಿ, ಅನಂತರ ಶಾಂತಿಕೀರ್ತಿ ಚಂದ್ರಸಾಗರವರ್ಣಿಯರ ಕಾವ್ಯಗಳಲ್ಲಿ ಹೊರಹೊಮ್ಮಿತು.

ಪಾರ್ಶ್ವಕವಿ ತನ್ನ ಕೃತಿಗೆ ಆಕರವನ್ನು ನೇರವಾಗಿ ಸೂಚಿಸಿಲ್ಲ. ಆದರೆ ಇತರ ಕವಿಗಳಂತೆ ಈತನೂ ತನ್ನ ಕೃತಿ ಪರಂಪರೆಯನ್ನು ಸಾಂಪ್ರದಾಯಿಕವಾಗಿ ಹೇಳಿದ್ದಾನೆ-

ಪುರುಜಿನ ಪಾರ್ಶ್ವದೊಳ್ ವೃಷಭಸೇನಗಣಾಗ್ರಣಿ ತಜ್ಜಿನೋಕ್ತಮಂ
ಭರತನೃಪಂಗೆ ವೀರಜಿನ ಪಾರ್ಶ್ವದೊಳಾ ಜಿನರಾಜಸೂಕ್ತಮಂ

ಗುರುಗುಣಗೌತಮರ್ ಮಗಧ ಮಾಂಡಳಿಕಂಗೊಲವಿಂದೆ ಪೇೞ್ದುದಂ
ನಿರುಪಮ ವಿಶ್ರುತ ಶ್ರುತಧರಾಘ ಪರಂಪರೆಯಿಂದೆ ಬಂದುದಂ   ೧-೯೪

ಈ ಪದ್ಯದ ಪ್ರಕಾರ ವೃಷಭತೀರ್ಥಂಕರ ಸಮವಸರಣ ಮಂಟಪದಲ್ಲಿ ಭರತೇಶ ಚಕ್ರವರ್ತಿಗೆ, ವರ್ಧಮಾನತೀರ್ಥಂಕರ ಸಮವಸರಣ ಮಂಟಪದಲ್ಲಿ ಗೌತಮಗಣಧರರು ಶ್ರೇಣಿಕನಿಗೆ ತಿಳಿಸಿದ ಜಿನಸೂಕ್ತಿಗಳು ಶ್ರುತಕೇವಲಿಗಳ ಮೂಲಕ ಹರಿದುಬಂದಿತು. ಆದರೆ ಪಾರ್ಶ್ವನಾಥ ಪುರಾಣಕ್ಕೆ ಗುಣಭದ್ರರ ಉತ್ತರ ಪುರಾಣ ಮತ್ತು ಚಾವುಂಡರಾಯನ ಚಾವುಂಡರಾಯ ಪುರಾಣಗಳು ಪ್ರಮುಖವಾಗಿ, ಇತರ ಕೆಲವು ಸಂಸ್ಕೃತ ಕೃತಿಗಳು ಸಾಂದರ್ಭಿಕವಾಗಿ ಆಕರಗಳಾಗಿವೆ. ಉತ್ತರ ಪುರಾಣಲ್ಲಿ ಈ ಕಥೆ ೧೭೦ ಶ್ಲೋಕಗಳಲ್ಲಿ ಮುಕ್ತಾಯವಾಗುತ್ತದೆ. ಇದೇ ಕಥಾಚೌಕಟ್ಟು ಉಳಿಸಿಕೊಂಡು ಪಾರ್ಶ್ವಕವಿ ತನ್ನ ಕಾವ್ಯವನ್ನು ೧೬ ಆಶ್ವಾಸಗಳಲ್ಲಿ ಬೆಳೆಸಿದ್ದಾನೆ.

ಉತ್ತರ ಪುರಾಣಕಾರನದು ಸಂಕ್ಷಿಪ್ತ ಮಾರ್ಗ. ಪಾರ್ಶ್ವಪಂಡಿತನದು ವಿಸ್ತೃತ ಮಾರ್ಗ ಉದಾಹರಣೆಗೆ ಗುಣಭದ್ರರಲ್ಲಿ ಮೊದಲ ಭವದ ಕಥೆಯಲ್ಲಿ ಜಂಬೂದ್ವೀಪದ ಭರತಕ್ಷೇತ್ರದ ಪೌದನನಗರ, ಅಲ್ಲಿ ಪ್ರಜೆಗಳಿಗೆ ಪ್ರೀತಿಪಾತ್ರನಾದ ಅರವಿಂದರಾಜನು ರಾಜ್ಯಭಾರ ಮಾಡುತ್ತಿದ್ದ ಎಂದಷ್ಟೇ ಇದ್ದರೆ ಪಾರ್ಶ್ವಪಂಡಿತನು ಪೌದನಪುರವನ್ನು, ಅರವಿಂದ ಮಹಾರಾಜನ ವ್ಯಕ್ತಿತ್ವವನ್ನು ದೀರ್ಘವಾಗಿ ವರ್ಣಿಸಿ ಒಂದು ಸ್ಪಷ್ಟಚಿತ್ರ ನೀಡುತ್ತಾನೆ. ಸಂಸ್ಕೃತದ ವಾದಿರಾಜಸೂರಿಯಲ್ಲಿ ಈ ಬಗೆಯ ವಿವರಗಳಿರುವುದನ್ನು ಪಾರ್ಶ್ವಪಂಡಿತ ಗಮನಿಸಿದ್ದರೂ ಅದನ್ನು ಯಥಾವತ್ತಾಗಿ ಸ್ವೀಕರಿಸದೆ ಸ್ವಂತಿಕೆ ಮೆರೆದಿದ್ದಾನೆ.

ಪಾರ್ಶ್ವಪಂಡಿತ ಸಂದರ್ಭವರಿತು ಕೆಲವೊಮ್ಮೆ ಗುಣಭದ್ರರನ್ನೂ ಮತ್ತೆ ಕೆಲವೆಡೆ ವಾದಿರಾಜಸೂರಿಯನ್ನೂ ಅನುಸರಿಸಿದ್ದಾನೆ. ಉದಾಹರಣೆಗೆ ವಿಶ್ವಭೂತಿಗೆ ವೈರಾಗ್ಯ ಉಂಟಾಗಲು ಕಾರಣವಾದ ಅಂಶವನ್ನು ಉತ್ತರ ಪುರಾಣದಲ್ಲಿ ನಿರ್ಲಕ್ಷಿಸಲಾಗಿದೆ. ಆದರೆ ಈ ಅಂಶ ಜೈನಧರ್ಮದಲ್ಲಿ ಕಂಡುಬರುವ ವಿಶೇಷವೆಂಬುದು ಕವಿಯ ಗಮನದಲ್ಲಿದೆ. ಹಾಗಾಗಿ ವಾದಿರಾಜಸೂರಿಯಲ್ಲಿದ್ದ ನರೆಗೂದಲಿನ ಪ್ರಸಂಗವನ್ನು ಈತ ಅಳವಡಿಸಿ ಕೊಂಡಿರುವುದು ಔಚಿತ್ಯಪೂರ್ಣವಾಗಿದೆ.

ಕಮಠ ತನ್ನ ತಮ್ಮನ ಹೆಂಡತಿಯನ್ನು ಮೋಹಿಸುವ ಭಾಗದಲ್ಲಿ ಶ್ವೇತಾಂಬರ ಸಂಪ್ರದಾಯದಲ್ಲಿ ಭಿನ್ನವಾದ ಕೆಲವು ಸಂಗತಿಗಳಿವೆ. ಪಾರ್ಶ್ವಪಂಡಿತ ಇಲ್ಲಿ ದಿಗಂಬರ ಸಂಪ್ರದಾಯದಲ್ಲಿರುವ ಕಥಾಭಾಗವನ್ನೇ ಇಟ್ಟುಕೊಂಡಿದ್ದಾನೆ. ಹಾಗೆಯೇ ಪಾರ್ಶ್ವ ತೀರ್ಥಂಕರನ ತಂದೆತಾಯಿಗಳು ವಿಶ್ವಸೇನ ಬ್ರಾಹ್ಮಿಲಾ ಎಂದು ಉತ್ತರ ಪುರಾಣದಲ್ಲಿದ್ದರೆ ಈತ ಅಶ್ವಸೇನ ಬ್ರಹ್ಮದತ್ತೆ ಎಂದು ಮಾರ್ಪಾಟು ಮಾಡಿಕೊಂಡಿದ್ದಾನೆ. ವಿವಾಹ ಪ್ರಸಂಗದಲ್ಲಿಯೂ ಪಾರ್ಶ್ವನಾಥನು ತಂದೆಯ ಇಚ್ಛೆಯಂತೆ ಪ್ರಭಾವತಿಯನ್ನು ಮದುವೆಯಾಗಿದ್ದನೆಂದು ಕೆಲವು ಗ್ರಂಥಗಳು ತಿಳಿಸುತ್ತವೆ. ಪಾರ್ಶ್ವಕವಿ ಇದರಲ್ಲಿ

ಯವನರಾಜರನ್ನು ಎದುರಿಸಿದ ಪ್ರಸಂಗ ಹಾಗೂ ಪಾರ್ಶ್ವನಾಥ ವಿವಾಹಿತನೆಂಬ ಅಂಶವನ್ನು ಕೈಬಿಟ್ಟು ಉತ್ತರ ಪುರಾಣದ ಕಥಾಮಾರ್ಗವನ್ನೇ ಅನುಸರಿಸಿದ್ದಾನೆ. ವಸ್ತುವಿನ ನಿರ್ವಹಣೆಯಲ್ಲಿ ಪಾರ್ಶ್ವಪಂಡಿತ ಒಂದೇ ಆಕರವನ್ನು ಇಟ್ಟುಕೊಳ್ಳದೆ ಹಲವು ಮೂಲಗಳಿಂದ ಸ್ವೀಕರಿಸಿ ವಿಸ್ತರಿಸುತ್ತ, ಮೂಲವನ್ನು ಉಜ್ವಲಗೊಳಿಸುತ್ತ ತನ್ನ ಸ್ವೋಪಜ್ಞತೆಯನ್ನು ತೋರಿರುವುದು ಇವನು ಸಾಧಾರಣ ಕವಿಯಲ್ಲವೆಂಬುದನ್ನು ತಿಳಿಸುವಂತಿದೆ.

ಪಾರ್ಶ್ವನಾಥ ಐತಿಹಾಸಿಕ ವ್ಯಕ್ತಿಯಾದರೂ ಪಾರ್ಶ್ವಕವಿ ಈತನನ್ನು ಜೈನತೀರ್ಥಂಕರ ಪುರಾಣಗಳ ನಾಯಕನಂತೆಯೇ ಚಿತ್ರಿಸಹೊರಟಿರುವುದರಿಂದ ಜೈನಪುರಾಣಗಳ ಕ್ರಮವನ್ನು ಚಾಚೂತಪ್ಪದೆ ಅನುಸರಿಸಿದ್ದಾನೆ. ಪಾರ್ಶ್ವನಾಥನ ಚರಿತ್ರೆಯು ಮರುಭೂತಿ, ವಜ್ರಘೋಷ, ಸಹಸ್ರಾರ ಕಲ್ಪದೇವ, ರಶ್ಮಿವೇಗ, ಅಚ್ಯುತಕಲ್ಪದೇವ, ವಜ್ರನಾಭಿ, ಆನತಕಲ್ಪೇಂದ್ರ, ಪಾರ್ಶ್ವ ಹೀಗೆ ಹತ್ತು ಭವಗಳಲ್ಲಿ ಸಾಗುತ್ತದೆ. ಇತರ ತೀರ್ಥಂಕರರ ಚರಿತೆಗಳಿಗೆ ಹೋಲಿಸಿದರೆ ಇಲ್ಲಿ ಭವಾವಳಿಗಳ ತೊಡಕಿಲ್ಲ. ಇಂಥ ಸರಳ ಕಥೆಯನ್ನು ಒಂದು ಪ್ರೌಢ ಚಂಪೂಕಾವ್ಯವಾಗಿ ರೂಪಿಸ ಹೊರಟಾಗ ಪಂಚಕಲ್ಯಾಣಗಳು ಮತ್ತು ಅಷ್ಟಾದಶ ವರ್ಣನೆಗಳಿಗೆ ಕವಿ ಮಹತ್ವ ನೀಡಿರುವುದು ಅನಿವಾರ್ಯವಾಗಿದೆ.

ಕಮಠ ಮತ್ತು ಮರುಭೂತಿಯ ಕಥೆ ಹಾಗೂ ಪಾರ್ಶ್ವತೀರ್ಥಂಕರನ ಯಕ್ಷಯಕ್ಷಿಯರಾದ ಧರಣೇಂದ್ರ ಪದ್ಮಾವತಿಯರ ಪ್ರಸಂಗ ಕಾವ್ಯದ ಆಕರ್ಷಕ ಭಾಗಗಳೆನ್ನಬಹುದು. ನಾಟಕೀಯ ಸನ್ನಿವೇಶಗಳಿಂದ ಕೂಡಿದ ಈ ಭಾಗಗಳಲ್ಲಿ ಕವಿಪ್ರತಿಭೆ ಸುವ್ಯಕ್ತವಾಗಿದೆ. ದುರ್ಗುಣಗಳ ಮೊತ್ತವಾಗಿದ್ದ ಕಮಠ ತನ್ನ ತಮ್ಮನೂ ಸುಗುಣಿಯು ಆದ ಮರುಭೂತಿಯ ಪತ್ನಿಯನ್ನು ಒಲಿಸಿಕೊಳ್ಳುತ್ತಾನೆ. ಇದು ಅನಂತನಾಥಪುರಾಣದ ಸುನಂದ- ಚಂಡಶಾಸನ, ರಾಮಚಂದ್ರ ಚರಿತ ಪುರಾಣದ ರಾವಣ–ಉಪರಂಭೆ ವೃತ್ತಾಂತವನ್ನು ನೆನಪಿಗೆ ತರುವುದಾದರೂ ಇಲ್ಲಿಯ ಕಮಠ ರಾವಣನಂತಲ್ಲ, ವಸುಂಧರೆ ಸುನಂದೆಯಂಥ ಉನ್ನತ ವ್ಯಕ್ತಿತ್ವದವಳಲ್ಲ. ತೀರ್ಥಂಕರ ಜೀವಿಯಾದ ಮರುಭೂತಿಯ ಪಾತ್ರವನ್ನು ಉತ್ಕರ್ಷಿಸುವ ಸಲುವಾಗಿ ಈ ಸನ್ನಿವೇಶವನ್ನು ದೀರ್ಘವಾಗಿ ಬೆಳೆಸಲಾಗಿದೆ. ಇಲ್ಲಿ ಗೃಹಕೃತ್ಯ ಜೀವನದಲ್ಲಿ ಅನುಸರಿಸಬೇಕಾದ ನೀತಿ ಸಂಹಿತೆ ಮೊದಲಾದ ಸಂಗತಿಗಳೆಲ್ಲ ಮೇಳೈಸಿದ್ದು ಕವಿಯ ವಿಶಿಷ್ಟತೆ ಎದ್ದುಕಾಣುತ್ತದೆ. ಮರುಭೂತಿಗೆ ಅಣ್ಣನ ದುರ್ವರ್ತನೆ ತಿಳಿದಾಗ ಕೂಡ-

ಮಡದಿಯರನರ್ಥಮುಳ್ಳಡೆ
ಪಡೆಯಲ್ ಬರ್ಕುಂ ಸಹೋದರನೇನಿತ್ತುಂ
ಪಡೆವರೆ ಪೆಂಡಿರ ದೂಸಱ್
ನೊಡವುಟ್ಟಿದರ್ಗೆಂತು ಮುಳಿಯಲಕ್ಕುಂ ತಕ್ಕಂ ೪-೭

ಎಂದು ಒಡಹುಟ್ಟಿದವ ಎಂಬ ಸಂಬಂಧವನ್ನು ಮುಂದೆ ಮಾಡಿಕೊಂಡು ಅಣ್ಣನ ಬಗ್ಗೆ ಕೋಪಿಸಿಕೊಳ್ಳದೆ ಹೆಂಡತಿಯನ್ನು ಮಾತ್ರ ದೂಷಿಸುವಲ್ಲಿ ಆ ಕಾಲದಲ್ಲಿದ್ದ ಪುರುಷ ಪ್ರಧಾನ ಧೋರಣೆಯೇ ಪ್ರತಿಫಲಿಸಿದೆ.

ಜೈನತೀರ್ಥಂಕರ ಚರಿತೆಗಳ ಅವಿನಾಭಾಗವಾದ ಗರ್ಭಾವತರಣ, ಜನ್ಮಾಭಿಷೇಕ, ಪರಿನಿಷ್ಕ್ರಮಣ, ಕೇವಲಜ್ಞಾನ, ಪರಿನಿರ್ವಾಣ ಕಲ್ಯಾಣಗಳು, ಪಾರ್ಶ್ವನಾಥ ಪುರಾಣದಲ್ಲಿಯೂ ಸಮುಚಿತ ಸ್ಥಾನ ಪಡೆದಿದ್ದು ಇದನ್ನು ಪ್ರಸ್ತುತಪಡಿಸುವಾಗ ಕವಿಪಾರ್ಶ್ವ ಪಂಪನಿಂದ ಪ್ರೇರಣೆ ಪಡೆದಂತೆ ತೋರುತ್ತದೆ. ತೀರ್ಥಂಕರ ಚರಿತೆಯನ್ನು ನಿರ್ವಹಿಸುವಾಗ ಪಂಪ ಈತನಿಗೆ ಆದರ್ಶವಾಗಿರಬೇಕು. ಏಕೆಂದರೆ ಕಾವ್ಯದ ಆರಂಭದಲ್ಲಿಯೇ 'ಪರಮ ಜಿನೇಂದ್ರವಾಣಿಯೆ ಸರಸ್ವತಿ' ಎಂದು ಪಂಪ ಹೇಳಿರುವಂತೆ ಪಾರ್ಶ್ವಕವಿ ಕೂಡ "ಜಿನವಾಣಿಯೆನಿಪ್ಪ ಭಾರತಿದೇವಿಯೇ ಸರಸ್ವತಿ" (೧-೧೦) ಎಂದು ಹೇಳಿದ್ದಾನೆ. ಪಾರ್ಶ್ವನಾಥನು ಕೇವಲಜ್ಞಾನ ಪ್ರಾಪ್ತಿಗಾಗಿ ಉಗ್ರತಪಸ್ಸು ಕೈಕೊಂಡು ಯೋಗದ ಪರಮಸ್ಥಿತಿಯನ್ನು ತಲಪಿದ ಸಂದರ್ಭದಲ್ಲಿ ಪಾರ್ಶ್ವಕವಿ-

ಕರಣಂ ಕೂಡೆ ಕನುಂಗಿಕೊಂಡಿರೆ ಮನಂ ಭಾಳಾಗ್ರದೊಳ್ ನಿಟ್ಟಿವೆ
ತ್ತಿರೆ ನೇತ್ರದ್ವಯಮುಳ್ಳಲರ್ದಿರೆ ಭುಜಾಕಾಂಡಂಗಳಾ ಜಾನುಗ
ಳ್ವರೆಗಂ ನೀಳ್ದಿರೆ ದಂತಮೊಂದಿಯನಿತು ತಮ್ಮೊಳ್ ಸಮಾನಂಗಳಾ
ಗಿರೆ ಯೋಗಂ ಪರಭಾಗಮಂ ಪಡೆದುದಾ ನಿಷ್ಪಂದ ಯೋಗೀಂದ್ರನೊಳ್

೧೫-೯೭

ಎಂದು ವರ್ಣಿಸಿರುವುದು ಕೂಡ ಪಂಪನ ಆದಿಪುರಾಣದಲ್ಲಿ ಬರುವ-

ಕರಣಗಣಂ ಕನುಂಗಿರೆ ಮನಂ ನೊಸಲಲ್ಲಿರೆ ಲೋಚನಂಗಳು
ಳ್ಳಿರೆ ಮುಗುಟ್ಟೆಂಬುವೆತ್ತಿರೆ ಕರದ್ವಯಪಲ್ಲವಮಂಕದೊಳ್ ಮರ
ಲ್ದಿರೆ ತನು ನಿಷ್ಪ್ರಕಂಪಮಿರೆ ದಂತಚಯಂ ಸಮನಾಗೆ ತನ್ನೊಳೊಂ
ದಿರೆ ಸಮಸಂದುದಾ ಪರಮಯೋಗಿಗೆ ಯೋಗವಿಯೋಗ ಭಾವನಂ

೧೦-೧೪

ಎಂಬ ಪದ್ಯದ ಛಾಯೆಯಾಗಿದೆ. ಪಾರ್ಶ್ವನಾಥ ಪುರಾಣದ ಲೀಲಾಂಜನಾ ನೃತ್ಯ ಕೂಡ ಆದಿಪುರಾಣದ ನೀಲಾಂಜನೆಯ ನೃತ್ಯದ ನೆನಪು ತಂದುಕೊಡುತ್ತದೆ. ಆದರೆ ಈ ಭಾಗದಲ್ಲಿ ಪಂಪನ ಭವ್ಯತೆ ಕಂಡುಬರುವುದಿಲ್ಲ.

ರನ್ನನ ಗದಾಯುದ್ಧದಲ್ಲಿನ 'ನೀರೊಳಗಿರ್ದುಂ ಬೆಮರ್ತನುರಗಪತಾಕಂ' ಎಂಬ ಮಾತು ಬಹು ಪ್ರಸಿದ್ಧ. ಪಾರ್ಶ್ವಪಂಡಿತ ಈ ಉಕ್ತಿಯನ್ನಿಟ್ಟುಕೊಂಡು ಶೃಂಗಾರ ಸನ್ನಿವೇಶದಲ್ಲಿ 'ನೀರೊಳಗಿರ್ದುಂ ಬೆಮರ್ತಳೊರ್ವಳ್ ಮುಳಿಸಿಂ' (೯-೧೩೧) ಎಂದು ಬಳಸಿದ್ದಾನೆ. ಈ ಕವಿಗೆ ನಾಗಚಂದ್ರ ನೆಚ್ಚಿನ ಕವಿ. ಪಾರ್ಶ್ವನಾಥ ಪುರಾಣದ ಆಶ್ವಾಸಾಂತ್ಯ ಗದ್ಯದಲ್ಲಿ 'ಪಾರ್ಶ್ವನಾಥ ಚರಿತ ಪುರಾಣ' ಎಂಬ ಶೀರ್ಷಿಕೆ ನೀಡಿರುವುದೂ ನಾಗಚಂದ್ರನ ಪ್ರಭಾವದಿಂದಲೇ ಎನ್ನಬಹುದು. ಗುಣದ ಮಹತ್ವ ತಿಳಿಸುವಾಗ ನಾಗಚಂದ್ರನ ರಾಮಚಂದ್ರ ಚರಿತ ಪುರಾಣದ-

ಗುಣಹೀನನೆನಿಪ ಕಮಠನ
ಪಣಮುಂ ಕುಲಮುಂ ಮಹೋನ್ನತಿಕೆಯುಮದೇಕ
ಕ್ಷಣಮಿರಿಸಲಾರವದಱಿಂ
ಗುಣಮೆ ಮಹೋನ್ನತಿಗೆ ಕಾರಣಂ ಪೆಱತುಂಟೇ ೪-೩೧

ಎಂಬ ಪದ್ಯದ ಪ್ರೇರಣೆಯಿಂದಲೇ ಪಾರ್ಶ್ವಕವಿ-

ಗುಣಹಾನಿಯಿಂದಧೋಗತಿ
ಗುಣದಿಂ ಸ್ವರ್ಗಾಪವರ್ಗ ಸುಖಮಕ್ಕುಮೆನಲ್
ಗುಣಹೀನನ ಸಿರಿಯಿಂದಂ
ಗುಣಿಗಳ ಬಡತನಮೆ ನಾಡೆಯುಂ ಲೇಸಲ್ತೇ ೯-೧೪೨

ಎಂದಿದ್ದಾನೆ. ಯುದ್ಧ ವರ್ಣನೆಯಲ್ಲಿ ಸೈನಿಕರು ತಮ್ಮ ಕಾಂತೆಯರನ್ನು ಅಗಲುವ ದೃಶ್ಯ, ತಳಮಳಗಳು, ರಣರಂಗದ ವಿನೋದಗಳು, ಕೋಟೆಕಾಳಗ ಮೊದಲಾದೆಡೆ ಅಗ್ಗಳನ ಚಂದ್ರಪ್ರಭ ಪುರಾಣ, ಶೃಂಗಾರ ಸನ್ನಿವೇಶದಲ್ಲಿ ವಾತ್ಸಾಯನನ ಕಾಮಸೂತ್ರ ಗ್ರಂಥಗಳನ್ನು ಕವಿ ನೋಡಿರುವಂತೆ ಕಂಡುಬರುತ್ತದೆ. ಹೀಗೆ ಪೂರ್ವಕವಿಗಳ ಪ್ರಭಾವವನ್ನು ಗುರುತಿಸ ಬಹುದಾದರೂ ಈತ ಎಲ್ಲಿಯೂ ಮೂಲದ ಪಡಿಯಚ್ಚಾಗದೆ ಅಲ್ಲಿಯ ಭಾವಗಳನ್ನು ಪುನರ್ರೂಪಿಸಿ ತನ್ನ ಸಾಮರ್ಥ್ಯವನ್ನು ತೋರಿದ್ದಾನೆ.

ಪಾರ್ಶ್ವಪಂಡಿತನಿಗೆ ಲಲಿತ ಕಲೆಗಳಲ್ಲಿ ಅಭಿಜ್ಞತೆ ಇರುವುದನ್ನು ಸಂಗೀತ, ನೃತ್ಯ ಮುಂತಾದ ಕಲೆಗಳನ್ನು ಕುರಿತ ಪದ್ಯಗಳಲ್ಲಿ ಕಾಣಬಹುದು. ಧರ್ಮ ಕಾವ್ಯಧರ್ಮಗಳನ್ನು ಸಮನ್ವಯಗೊಳಿಸುವ ಪರಂಪರೆಗೆ ಈತನೂ ಬದ್ಧನಾಗಿದ್ದಾನೆ. ಹಾಗಾಗಿ "ಇದು ಸದ್ಧರ್ಮ ಸುಕಾವ್ಯ ಧರ್ಮವಿಭವ" (೧೬-೧೮೭) ಎಂದು ಹೇಳಿ ಇದರಲ್ಲಿ ತಕ್ಕಮಟ್ಟಿಗೆ ಯಶಸ್ವಿಯಾಗಿದ್ದಾನೆ. ತನ್ನ ಕೃತಿಯನ್ನು ಪ್ರೌಢ ಚಂಪೂಕಾವ್ಯವಾಗಿ ಬೆಳೆಸುವಾಗ ಪಾಂಡಿತ್ಯವನ್ನು ಅವಲಂಬಿಸಿದ್ದಾನೆ. ಸಾಂಪ್ರದಾಯಿಕ ವರ್ಣನೆಗಳ ಜೊತೆಗೆ ಕಾವ್ಯ ಕೌಶಲ್ಯಕ್ಕೆ ಕನ್ನಡಿ ಹಿಡಿಯುವ ಅನೇಕ ವರ್ಣನೆಗಳು ಎಡೆಪಡೆದಿವೆ. ಅಲಂಕಾರವಿಲ್ಲದ ಹೆಣ್ಣು ಹೇಗೆ ಶೋಭಿಸುವುದಿಲ್ಲವೊ ಹಾಗೆ ಅಲಂಕಾರವಿಲ್ಲದ ಕಾವ್ಯವೂ ಶೋಭಿಸುವುದಿಲ್ಲ (೧-೭೪) ಎಂಬ ಧೋರಣೆ ವ್ಯಕ್ತಪಡಿಸಿರುವ ಕವಿ ಶಬ್ದಾಲಂಕಾರ, ಅರ್ಥಾಲಂಕಾರ ಗಳನ್ನು ಧಾರಾಳವಾಗಿ ಬಳಸಿದ್ದಾನೆ. ಹಳದಿ ಬಣ್ಣದ ತೆನೆಗಳನ್ನು ಹೊತ್ತ ಹಸಿರು ಬಣ್ಣದ ಗಿಳಿಗಳು ಹಾರುತ್ತಿರುವುದನ್ನು ಕವಿ-

ಕಳಮ ಕಣಿಶಂಗಳಂ ಬ
ಲ್ಗಿಳಿಗಳ್ ನಸುಗರ್ಚಿ ಜಡಿಯೆ ಪಾಮರಿಯರ್ಮಾಂ
ಡಳಿಸಿ ನಭದಲ್ಲಿ ತಳೆದವು
ವಳಯಾಕೃತಿವೆತ್ತ ಶಕ್ರಚಾಪದ ಚೆಲ್ವಂ

ಎಂದು ಹಕ್ಕಿಗಳನ್ನು ಕಾಮನಬಿಲ್ಲಿಗೆ ಹೋಲಿಸಿರುವ ಕಲ್ಪನೆ ಬಹಳ ಸೊಗಸಾಗಿದೆ. 'ಇಜುಪೆ ಗಜಂಕೆ ಮೂಡಿದವೊಲ್' (೨-೭೨) 'ಜಳಧಿಯ ನಡುವಣ ಚೈತ್ರದವೊಲ್' (೩-೪೭) 'ಬಜವಜ ಬತ್ತಿದ ಕೆಜೆಯ ಕಮಠನಂತೆ' (೩-೮೬ ವ) 'ಪ್ರೇಮದ ಮಡದಿಯ ನುಡಿಯವೊಲ್' (೯-೩) ದೀಪವರ್ತಿ ನಿಧಿಗೆಜಗುವವೋಲ್ (೮-೪೭) ಇತ್ಯಾದಿ ದೊಡ್ಡಪಟ್ಟಿ ನೀಡಬಹುದು. ಗದ್ಯಭಾಗದಲ್ಲಿ ಮಾಲೋಪಮೆಗಳನ್ನು ಬಳಸಲಾಗಿದೆ.

ಸಾವಿರಾರು ವರ್ಷದ ಹಿಂದಿದ್ದ ಪಾರ್ಶ್ವತೀರ್ಥಂಕರ ಚರಿತ್ರೆಯನ್ನು ನಿರ್ಮಾಣ ಮಾಡುವಾಗ ಕೂಡ ಕವಿ ತಾನು ನಿಂತ ನೆಲದ ಸಾಮಾಜಿಕ ಸಾಂಸ್ಕೃತಿಕ ಸಂಗತಿಗಳಿಗೆ ವಿಮುಖನಾಗಿಲ್ಲ. ಈ ನಾಡಿನ ಸಸ್ಯಸಂಪತ್ತನ್ನು ಕುರಿತಂತೆ ಗಿಡ ಮರ ಹೂವುಗಳನ್ನು, ಭತ್ತದ ಗದ್ದೆಗಳನ್ನು ವರ್ಣಿಸುವ ಕವಿ ಆ ಕಾಲದಲ್ಲಿ ಧರಿಸುತ್ತಿದ್ದ ಕಡಗ, ಡಾಬು, ಕಂಠಿಕೆ, ಕುಂಡಲ ಇತ್ಯಾದಿ ಆಭರಣಗಳನ್ನು ಉಲ್ಲೇಖಿಸಿದ್ದಾನೆ. ಪಾರ್ಶ್ವಪಂಡಿತ ಸಮಕಾಲೀನ ಪಾಕ ವಿಶೇಷಗಳಾದ ಸರವಳಿಗೆ ಪಾಯಸ (೮-೫೦), ಶಾಲ್ಯನ್ನ, ಮಾವಿನಹಣ್ಣಿನ ಶೀಖರಣೆ, ಮಂಡಗೆ, ಹೂರಿಗೆ, ಲಡ್ಡುಗೆ, ಇಡ್ಡಲಿ, ಶಾಲ್ಯನ್ನ, ಸುಧಾನ್ನ, ಶ್ರೀಖಂಡ ಮುಂತಾದವನ್ನು ವರ್ಣಿಸಿದ್ದು ಇವುಗಳಲ್ಲಿ ಕೆಲವು ಇಂದಿಗೂ ಉಳಿದುಕೊಂಡು ಬಂದಿರುವುದನ್ನು ಗಮನಿಸಬಹುದು.

ಜನಪದರು ನಂಬುವ, ಪೂಜಿಸುವ ದೈವಗಳ ಬಗ್ಗೆ ಪಾರ್ಶ್ವಪಂಡಿತ-

ಮಸಗುವ ಮಾರಿ ಬೊಬ್ಬಱಿವ ಬೆಂತರದಿಂ ಸಿಡಿಲೇಱ್ಕೆಯೇಱ್ವರ
ಕ್ಕಸಿ ಕುಡುದಾಡೆಯಂ ಮಸೆವ ಡಾಕಿನಿ ಕೂರಸಿಯಿಂದೆ ಕೊಂಕಿ ಝುಂ
ಕಿಸುವ ಕುಮಾರಿ ಮೂಂಕರಿಪ ಪೂತಿನಿ ಹೂಂಕೃತಿಗೆಯ್ವ ಭೈರವಂ
ನೊಸಲುರಿಗಣ್ಣನಾಳ್ವ ಚವುಡೇಶ್ವರಿ ಕೂಂಕರಿದಾರ್ವ ಕಾಟಿಯಿಂ ೧೫-೧೧೩

ಎಂದು ಅವುಗಳ ವೈಶಿಷ್ಟ್ಯದೊಂದಿಗೆ ಹೆಸರಿಸಿರುವುದು ಜನಪದ ದೇವತೆಗಳ ಅಧ್ಯಯನಕ್ಕೆ ಉಪಯುಕ್ತವಾಗಿದೆ. ಕುಮಾರಿಪೂಜೆ ಇಂದಿಗೂ ತೀರ್ಥಹಳ್ಳಿ ಭಾಗದಲ್ಲಿ ಚಾಲ್ತಿಯಲ್ಲಿದೆ. ಈತ ಜಟಿಂಗ ಭೂತವನ್ನು ಉಲ್ಲೇಖಿಸಿದ್ದು ಇವೆಲ್ಲ ಗ್ರಾಮೀಣ ಜನರನ್ನು ಹಿಂದಿನಿಂದಲೂ ನಿಯಂತ್ರಿಸುತ್ತಿವೆ. ಉತ್ತರ ಕರ್ನಾಟಕದ ಜನಪದದಲ್ಲಿ ಪ್ರಸಿದ್ಧನಾದ ಜೋಕುಮಾರ (೩-೬೬) ನನ್ನೂ ಕವಿ ನೆನಪಿಸಿಕೊಂಡಿದ್ದಾನೆ. ಹುಟ್ಟಿದ ಏಳೇ ದಿನಕ್ಕೆ ಸಾಯುವ ಈತ ಕಾಮುಕತ್ವದಿಂದ ಕಂಟಕನಾಗಿದ್ದ. ಕಮಠನನ್ನು ವರ್ಣಿಸುವಾಗ ಜೋಕುಮಾರನಿಗೆ ಹೋಲಿಸಿರುವುದು ಸಮಂಜಸವಾಗಿದೆ. ಮಕ್ಕಳು 'ತಿರಿಕಲ್ಲಾಟ', 'ಟಗರುಕಾಳಗ'ವನ್ನು ಆಡುತ್ತಿದ್ದ ಚಿತ್ರವೂ ಲಭ್ಯವಿದೆ. ಪಾರ್ಶ್ವಪಂಡಿತ ತನ್ನ ಕಾಲದ ವಿದ್ಯಾಭ್ಯಾಸದ ಬಗ್ಗೆ ವಿವರಿಸುವಾಗ ಶಬ್ದಶಾಸ್ತ್ರ, ಅರ್ಥಶಾಸ್ತ್ರ, ಮುಕ್ತಾಮುಕ್ತಶಾಸ್ತ್ರಗಳನ್ನು ಹೇಳಿದ್ದು ಇದು ಆ ಕಾಲದ ಪಠ್ಯದಲ್ಲಿದ್ದಿತೆನ್ನಬಹುದು.

ಪಾರ್ಶ್ವಪಂಡಿತನ ಭಾಷೆ ಶೈಲಿ ಆ ಕಾಲದ ಚಂಪೂಕಾವ್ಯಗಳ ಲಕ್ಷಣಗಳಿಂದ ಕೂಡಿದೆ. ಈತ ಮಾರ್ಗ-ದೇಸಿ ಎರಡನ್ನೂ ಸಮರ್ಥವಾಗಿ ನಿರ್ವಹಿಸಬಲ್ಲ. ಸಂಸ್ಕೃತ ಭೂಯಿಷ್ಠ ಪ್ರೌಢಶೈಲಿಗೆ ಮತ್ತು ಸರಳಶೈಲಿಗೆ ಈ ಕಾವ್ಯದಲ್ಲಿ ಉದಾಹರಣೆಗಳು ದೊರೆಯುತ್ತವೆ. ಸಂಸ್ಕೃತ ಭೂಯಿಷ್ಠ ಶೈಲಿಗೆ ನಿದರ್ಶನವಾಗಿ ಒಂದು ಪದ್ಯವನ್ನು ಇಲ್ಲಿ ಉದ್ಧರಿಸಬಹುದು-

ಸಮರೋದಗ್ರಭಟಪ್ರತಾನಮನುದಾರೋರ್ವೀಶ ಸಂತಾನಮಂ
ಪ್ರಮದಾಸ್ಯಂಬುಜಗನ್ಧಮಗ್ನ ಮಧುಪಪ್ರಧ್ವಾನಮಂ ನೃತ್ಯವಾ
ದ್ಯಮಿಳದ್ಗಾನಮನಾರ್ಯವರ್ಯ ವಚನಃ ಪೀಯೂಷದತ್ತಾವಧಾ
ನಮನೈಶ್ವರ್ಯ ನಿಧಾನಮಂ ಪದಪಿನಿಂ ಪೊಕ್ಕಂ ನೃಪಾಸ್ಥಾನಮಂ 2-93

ಆದರೆ ಕವಿ ಕನ್ನಡಪದ ಪ್ರಾಚುರ್ಯದಿಂದಲೂ ಬಹಳ ಸುಂದರವಾಗಿ ಪದ್ಯಗಳನ್ನು ರಚಿಸಬಲ್ಲ-

ಕುಡುವುದು ಕಪ್ಪಮಂ ನಡೆವುದಾಳ್ವೆಸದಿಂದಮೆ ಮುನ್ನಿನಂದದಿಂ
ಬಿಡುವುದು ದರ್ಪಮಂ ಪಡೆವುದಾಳ್ದನದೊಂದು ಮನಃಪ್ರಸಾದಮಂ
ತಡೆವುದು ಬುದ್ಧಿಯಲ್ತಧಿಕನಪ್ಪವನೊಳ್ ಬಲಹೀನನಪ್ಪವಂ
ತೊಡರ್ದೊಡೆ ಕೇಡು ತಪ್ಪದೆನುತುಂ ನುಡಿದಂ ನಯಶಕ್ತಿಕೋವಿದಂ 2-96

ಈತನ ಕಥನ ಸರಣಿಯಲ್ಲಿ ನಾಗಚಂದ್ರನ ಪ್ರಸಾದ ಗುಣವನ್ನು ರಂ.ಶ್ರೀ. ಮುಗಳಿ ಅವರು ಗುರುತಿಸಿದ್ದಾರೆ. ಪಾರ್ಶ್ವಕವಿ ತನ್ನ ಕಾಲದ ನುಡಿಗಟ್ಟುಗಳನ್ನು, ಗಾದೆ ಮಾತುಗಳನ್ನು, ಶ್ಲೋಕಗಳನ್ನು ಸಮರ್ಥವಾಗಿ ಬಳಸಿಕೊಂಡಿದ್ದಾನೆ. "ತೂಂಕಡಿಪ್ಪವರನೊಪ್ಪುವ ಪಾಸಿನ ಮೇಲೆ ನೂಂಕಿದಂತಾದುದು" (೧-೧೦೪) 'ಅತಿಮೋಹಂ ಗತಿಯಂ ಕರಂ ಕಿಡಿಗುಂ' (೩-೫೭), 'ನೆಚ್ಚಿನೆಮ್ಮೆ ಕೋಣನನೀಂದತ್ತೆಂಬವೊಲ್' (೬-೪೪), 'ವನವಂ ಸುಡುವಗ್ನಿಗೆ ವಾಯು ನಂಟು' (೩-೨೩), 'ಬಿಡಾಳಕ್ಕಂ ಪಾಲ ಕಾಪನಿತ್ತವೊಲ್' (೧-೧೧೨) ಮೊದಲಾದ ಹಲವಾರು ಗಾದೆಗಳು ದೇಸೀಯ ಮೆರುಗು ನೀಡಿವೆ. ಈತನ ಶಬ್ದಸಂಪತ್ತು ವಿಶಿಷ್ಟ. ಒಡ್ಡಣ (೨-೨೪), ಒಣರ್ (೨-೨೭), ಅಣೆಯಿಸು (೩-೭೬ ವ), ಗಂಪಲ್ (೫-೬೧), ಇಟ್ಟಳ (೧೩-೧೦೩), ಕಂಟಿಸು (೩-೭೨), ಬೈಸಿಕೆ (೧೧-೩೪) ಇತ್ಯಾದಿ ಉದಾಹರಿಸುತ್ತ ಹೋಗಬಹುದು.

ಪಾರ್ಶ್ವಪಂಡಿತನಿಗೆ ತನ್ನ ಕವಿತಾ ಸಾಮರ್ಥ್ಯದ ಬಗ್ಗೆ ಅಪಾರ ವಿಶ್ವಾಸ. 'ನುಡಿ ಪೊಸತಾಯ್ತು ದೇಸೆ ಪೊಸತಾಯ್ತು' (೧-೭೩) 'ಘನಶಬ್ದಾಡಂಬರೋತ್ಪತ್ತಿಯಿನಖಿಳ ರಸೋತ್ಪಾದನಾ ಪ್ರೌಢಿಯಿಂ' (೧-೮೮) ಎಂದೆಲ್ಲ ಹೇಳಿಕೊಂಡಿದ್ದಾನೆ. ಆದರೆ ಹೊಸತನವನ್ನು ಅರಸಬೇಕಷ್ಟೆ. ಈತನೊಬ್ಬ ಪಂಡಿತಕವಿಯಾಗಿ ಕಂಡುಬರುತ್ತಾನೆ. ಪಾರ್ಶ್ವನಾಥನ ಕಥೆಯನ್ನು ಕನ್ನಡದಲ್ಲಿ ಮೊದಲ ಬಾರಿಗೆ ಕಾವ್ಯಕ್ಕೆ ಅಳವಡಿಸಿ ತನ್ನ ಕಾಲದ ಓದುಗರ ಅಭಿರುಚಿಗನುಗುಣವಾಗಿ ರಚಿಸಿ ಚಂಪೂವಿನಲ್ಲಿ ಪ್ರಸ್ತುತಪಡಿಸಿರುವಲ್ಲಿ ಈತನ

ಅತಿಶಯಪಿದೆ. ಈತನ ಪ್ರಭಾವ ತರುವಾಯದ ಶಾಂತಿಕೀರ್ತಿಯ ಪಾರ್ಶ್ವನಾಥಚರಿತೆ (೧೭೩೩) ಚಂದ್ರಸಾಗರವರ್ಣಿಯ (೧೯ನೇ ಶತ.) ಪಾರ್ಶ್ವನಾಥ ಪಂಚಕಲ್ಯಾಣಗಳ ಮೇಲೆ ಆಗಿರುವುದೂ ಪಾರ್ಶ್ವಪಂಡಿತನ ಕಾವ್ಯದ ಹಿರಿಮೆಯನ್ನು ಅರುಹುತ್ತದೆ. ಈ ಎರಡೂ ಕೃತಿಗಳು ರಟ್ಟ ಅರಸರ ಚರಿತ್ರೆಯನ್ನು ನಿರ್ಮಿಸುವಲ್ಲಿ ಆಕರ ಗ್ರಂಥಗಳಾಗಬಲ್ಲವು.

ಗ್ರಂಥಸಂಪಾದನೆ:

ಪಾರ್ಶ್ವಪಂಡಿತನ ಪಾರ್ಶ್ವನಾಥ ಪುರಾಣಂ ಕಾವ್ಯವನ್ನು ಎಂ. ಮರಿಯಪ್ಪಭಟ್ಟ ಮತ್ತು ಎಂ. ಗೋವಿಂದರಾವ್ ಅವರು ಮೊಟ್ಟಮೊದಲಿಗೆ ಸಂಪಾದಿಸಿ ೧೯೫೪ರಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯದಿಂದ ಪ್ರಕಟಿಸಿದ್ದರು. ಈ ಪರಿಷ್ಕರಣವು ಮೈಸೂರಿನ ಓರಿಯಂಟಲ್ ಲೈಬ್ರರಿಯಲ್ಲಿದ್ದ ಏಕೈಕ ಹಸ್ತಪ್ರತಿಯನ್ನು ಆಧರಿಸಿತ್ತು. ಅನಂತರ ಎಸ್. ಬೊಮ್ಮರಸ ಪಂಡಿತರು ೧೯೫೬ರಲ್ಲಿ ಮತ್ತೊಂದು ಪರಿಷ್ಕರಣವನ್ನು ಹೊರತಂದರು. ಅವರು ಇದರಲ್ಲಿ ಹಿಂದಿನ ಅಚ್ಚಾದ ಪ್ರತಿಯ ಜೊತೆಗೆ ಶ್ರವಣಬೆಳಗೊಳದ ಜೈನಮಠದ ಓಲೆಪ್ರತಿ ಮದರಾಸಿನ ಶೇಷಯ್ಯಂಗಾರ್ಯರ ಪ್ರತಿ ಮತ್ತು ಮೂಡಬಿದರೆಯ ಎರಡು ಓಲೆಪ್ರತಿಗಳನ್ನು ಬಳಸಿಕೊಂಡರು. ಇದಾದ ಬಳಿಕ ಎಚ್. ಶೇಷಯ್ಯಂಗಾರ್ಯರು ೧೯೬೦ರಲ್ಲಿ ಮೂರು ಹಸ್ತಪ್ರತಿಗಳ ಸಹಾಯದಿಂದ ಪರಿಷ್ಕರಿಸಿ ಪ್ರಕಟಿಸಿದರು.

ಪ್ರಸ್ತುತ ಪರಿಷ್ಕರಣವು ಬೊಮ್ಮರಸ ಪಂಡಿತರ ಆವೃತ್ತಿಯನ್ನು ಆಕರವಾಗಿಟ್ಟು ಕೊಂಡಿದ್ದರೂ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ಕೆ ೧೧೧೩, ಕೆ ೧೧೧೪ ಕೆಬಿ. ೫೮,೫೯ ಹಸ್ತಪ್ರತಿಗಳನ್ನು ಬಳಸಿಕೊಂಡಿದೆ.

ವೈ. ಸಿ. ಭಾನುಮತಿ

ಪುಷ್ಪದಂತ ಪುರಾಣಂ

ಪ್ರಥಮಾಶ್ವಾಸಂ

ಸ್ರ॥ ಶ್ರೀಪೌಲೋಮೀಶಭೂಭೃತ್ಸಮುದಯವಿನುತಂಗಳ್ ತಮಸ್ತೋಮ ಚೈತ್ರಾ
ದೀಪಂಗಳ್ ದರ್ಶಿತಾಶಾಂಬರಸಕಲಪದಾರ್ಥಕ್ರಮಂಗಳ್ ಸದಾ ಲೋ
ಕಾಪದ್ವಿಚ್ಛೇದಕಂಗಳ್ ಮಹದಮೃತನಿಧಿಸ್ಫೂರ್ತಿಗಳ್ ಪುಷ್ಪದಂತ
ಶ್ರೀಪಾದಂಗಳ್ ಸಮುತ್ಪಾದಿಸುಗೆಮಗೆ ಹೃದಿಂದೀವರಾನಂದದೊಳ್ಪಂ ೧

ಮ॥ ಅನಿಶಂ ಸ್ವಾತ್ಮಗುಣಪ್ರಬುದ್ಧರೆನಿಸಿರ್ದುಂ ಮುಕ್ತರಾದಂ ನಿರಂ
ಜನರಾಗಿರ್ದುಮಶೇಷಲೋಕನಿಹಿತಾರ್ಥಗ್ರಾಹಿಗಳ್ ಯೋಗವ
ರ್ತನಮೊಂದುಂ ತಮಗೆಂದುಮಿಲ್ಲೆನಿಸಿಯುಂ ಸಿದ್ಧರ್ಕಳೆಂದೆಂಬ ಪೆಂ
ಪಿನಮೂರ್ತರ್ ಪರಮಾತ್ಮರುದ್ಧರಿಸುಗೆಮ್ಮಂ ಸಿದ್ಧಿಯಪ್ಪನ್ನೆಗಂ ೨

ಮ.ಸ್ರ॥ ವರ ಪಂಚಾಚಾರಮಾಚಾರವನೊದವಿಸೆ ಷಟ್ತ್ರಿಂಶ[ದುದ್ಯ]ದ್ಗುಣಂ ಚಿ
ತ್ತರದಿಂದಂ ಸದ್ಗುಣವ್ರಾತದೊಳನುವಿಸೆ ಸಮ್ಯಕ್ತಪಃಶೀಲಜಾಲಂ
ಪೊರೆದಂತೇವಾಸಿಭವ್ಯಾವಳಿಗತುಳತಪಃಶೀಲಮಂ ಮಾಡೆ ಲೋಕೋ
ತ್ತರರಾದಾಚಾರ್ಯರೆಮ್ಮಂ ನಿಯಮಿಸುಗೆ ನಿಜಾನುಗ್ರಹಪ್ರೌಢಿಯಿಂದಂ ೩

ಮ॥ ನಯವಾದಂ ನಯಮಾಗಿ ಕೂಡೆ ಪೊಳೆಯಲ್ ನಿಕ್ಷೇಪಮಾಕ್ಷೇಪಮಾ
ರಯಮಿಲ್ಲೆಂದೆನಿಸಲ್ ಪ್ರಮಾಣಗದಿತಾರ್ಥಂ ಸಂಶಯಂಗೊಳ್ಳವಾ
ದಿಯೊಳುಂಟಾಗೆ ಲಸತ್ಪ್ರಮಾಣಮತಿಯುಂ ರತ್ನತ್ರಯಂ ಮುಕ್ತ್ಯಲಂ
ಕ್ರಿಯೆಯಾಗಲ್ ಮಿಗೆ ಪೇಲ್ವರೀಗೆಮಗುಪಾಧ್ಯಾಯರ್ ಸುಖೋಪಾಯಮಂ ೪

ಬಗೆ ತತ್ವಾರ್ಥವಿನಿಶ್ಚಯಂಬಡೆಯೆ ನೈರ್ಗ್ರಂಥ್ಯಂ ಪೊದಟ್ದಿತ್ತು ಶಾಂ
ತಿಗಡರ್ಪಾಗಿರಲುಗ್ರಕರ್ಮರಿಪುವಂ ನಿರ್ಮೂಲನಂ ಮಾಡುವು
ಜ್ಜಗಮಾಯ್ತೊಂದಿರಲಪ್ರಮತ್ತತೆಯೊಳನ್ಯಪ್ರೀತಿಶೀಲಕ್ಕೆ ಕೇ
ಡೊಗೆದತ್ತೆಂಬ ವಿರುದ್ಧವೃತ್ತರೆಮಗೊಳ್ಪಂ ಮಾಳ್ಕೆ ಸಾಧೂತ್ತಮರ್ ೫

ಕಂ॥ ಎಮಗೀಗೆ ಪಂಚಗುರುಪದ
ಕಮಲಂಗಳ್ ಕಡೆಯದೊಂದೆ ಕಲ್ಯಾಣಮನೇ
ವೆಮೊ ಮಿಕ್ಕಾ ನಾಲ್ಕುಮವನಿ
ಗೆ ಮಾಣ್ಗೆ ತಾಂ ಮೇಣಿದೊಂದ ಮುಖ್ಯಪ್ರಕೃತಂ ೬

ಚಂ॥ ಜಿನಪರಮೇಷ್ಠಿ ಚಾರುಚತುರಾನನದಿಂದೊಗೆತಂದು ಸಂದ ಸೈ
ಪಿನ ಗಣನಾಥವಕ್ತ್ರಸರಸೀರುಹಕೇಳಿನಿವಾಸದಲ್ಲಿ ನ
ರ್ತನಮನೊಡರ್ಚೆ...ವಿನಯಾನನದಿಂ........
ದಿನಿಸು ಬಜಿಲ್ದ ವಾಗ್ವನಿತೆ ವಿಶ್ರಮಿಸಿರ್ಕೆ ಮದಾನನಾಬ್ಜದೊಳ್ ೭

ಶಾ॥ ಸ್ವಚ್ಛಾಂಗಗಳ್ ನಿಜದಿಂ ವಿರಕ್ತವಿನುತಂಗಳ್ ಸಂದನರ್ಘ್ಯಂಗಳ
ಸ್ವಚ್ಛಿದ್ರಂಗಳನೂನ ಮಂಗಳಕರಂಗಳ್ ಸಂತತಾಂತಸ್ತಮೋ
ವಿಚ್ಛೇದಂಗಳುಪಾತ್ತಸೂತ್ರಗತಿಗಳ್ ರತ್ನತ್ರಯಂಗಳ್ ಹೃದ
ವ್ಯಚ್ಛಿನ್ನಾಭರಣಂಗಳಕ್ಕಮಗೆ ಮುಕ್ತಿಶ್ರೀ ಮನಂಗೊಳ್ವಿನಂ ೮

ಚಂ॥ ಇಹಪರಸೌಖ್ಯಮೆಂಬೆರಡುಮಿಲ್ಲದ ನಾಸ್ತಿಕಧರ್ಮದಿಂದಮೊಂ
ದಿಹಮನೆ ಖಿಲ್ವಂಬಿಲ್ವ ವಿಧಿಯಿಂದಿನಿಸೆಯ್ದಿಪ ಸೌಗತಾದಿ ದು
ರ್ವಿಹಿತ ಕುಧರ್ಮದಿಂದಮಿಹಮಂ ಪರಮಂ ಬಗೆದಂತೆ ಮಾಟ್ಟಿ ಸ
ನ್ಮಹಿತಜಿನೇಂದ್ರಧರ್ಮಮಭಿವಾಂಛಿತದಾಯಿಯೆನಿಪ್ಪುದೊಪ್ಪದೇ ೯

ಮ॥ ಕನಕಚ್ಛಾಯೆಯಿನಾಳ್ದ ದೇಹರುಚಿ ಚೆಲ್ವಂ ಬೀಱೆ ದೋರ್ವಲ್ಲಿ ನಾ
ಲ್ಕನಸುಂ ತಳ್ತಿರೆ ಖಡ್ಗಖೇಟಕ ಲಸದ್ವಜ್ರಾಬ್ಜಮೊಳ್ಪೊಪ್ಪುವಾ
...ತ್ರಿಶೂಲ ಡಮರುಗ ರಕ್ಷಿಪ್ಪ ಮಾಕಾಳಿ ಯ
ಕ್ಷಿ ನವೀನಾಭರಣಾಂಗೆ ಮತ್ಕೃತಿಗೆ ಮಾಟ್ಕೋರಂತೆ ನಿರ್ವಿಘ್ನಮಂ ೧೦

ಉ॥ ಸ್ಫೂರಿಪ...ನವ್ಯ ಕುಮುದದ್ಯುತಿಮತ್ತನು ಕೂರ್ಮವಾಹನಂ
ಸ್ಫಾರಕಶಾ ತ್ರಿಶೂಲಘನದಂಡಕುಠಾರಚತುಷ್ಟಯೋಲ್ಲಸ
ದ್ಭೂರಿಭುಜಾಚತುಷ್ಟಯನಶೇಷ ಜಿನೇಶ್ವರಧರ್ಮವರ್ತಿ ವಿ
ಸ್ತಾರಕನೀಗೆ ಕೂರ್ತ ಜಿತಯಕ್ಷನವಿಘ್ನ ವಚೋವಿಲಾಸಮಂ ೧೧

ಚಂ॥ ಹರಿಪರಪದ್ಮಜಾದಿಗಳನೋವದೆ ಕಂತು ಲತಾಂತಬಾಣಮೊಂ
ದೆರಡಜಿನೆಚ್ಚು ಗೆಲ್ದ ಜಯದಗ್ಗದ ಸುಗ್ಗಿಯ ಮೊಟ್ಟೆಗೆಂದು ಬಂ
ದಿರದೆ ಪೊಣರ್ಚಿ ಸೋಲ್ತು ವಿಜಯಧ್ವಜಮಂ ತೆಱೆದಿತ್ತು ಪೋದುದಂ
ನಿರಪಿಪ ಪುಷ್ಪದಂತಮಕರಧ್ವಜನೀಗೆ ಮನೋನುರಾಗಮಂ ೧೨

ಕಂ॥ ಗೌತಮ ಸುಧರ್ಮ ಜಂಬೂ
ಖ್ಯಾತ ವಿಶುದ್ಧಾನುಬದ್ಧ ಕೇವಲಿಗಳಭಿ
ದ್ಯೋತಿಸುಗೆ ಭವತಮೋಹರ
ಣಾತಿಶಯಂಬಡೆವ ವಿಮಳರತ್ನತ್ರಯಮಂ ೧೩

ಓವುಗೆ ಮನ್ಮತಿಯಂ ಶ್ರುತ
ಕೇವಲಿಗಳ್ ಮೊದಲ ವಿಷ್ಣುಮುನಿವೆರಸು ಜಗ

ತ್ಸೇವಿತ ನಂದ್ಯಪರಾಜಿತ
ಗೋವರ್ಧನ ಭದ್ರಬಾಹುವೆಂದಿಂತಯ್ವರ್ ೧೪

ದಶಪೂರ್ವಿಗಳೀವನುಪಮ
ದಶವಿಧಸಮ್ಯಕ್ತ್ವಮಣಿಗಳೊಲ್ದಂಗೈಕಾ
ದಶಧಾರಿಗಳೀವೇಕಾ
ದಶನಿಳಯದ ಸಂಪದಂಗಳಕ್ಕೆಮಗೆಂದುಂ ೧೫

ಆಚಾರಾಂಗಧರರ್ ಪರ
ಮಾಚಾರಪವಿತ್ರರೆನಿಪ ಮುನಿಗಳ್ ಸಂ
ದಾಚಾರಸೂತ್ರಮಂ ಮಿಗೆ
ಗೋಚರಿಸುಗೆ ಕಳೆದು ಹೃದಯಮಣಿಗಳ ಮಲಮಂ ೧೬

ಅತಿಶಯತಪದಿಂ ಪಡೆದೊಡೆ
ಚತುರಂಗುಳಚಾರಣರ್ಧಿಯಂ ಪದೆದರ್ಹ
ತ್ಪತಿ ಮೆಚ್ಚಿತ್ತಂ ತ್ರಿಪ್ರಾ
ಭೃತಮನೆನಲ್ ಕೊಂಡಕುಂದಮುನಿಪತಿ ಸಂದಂ ೧೭

ನುಡಿದುದೆ ತತ್ವಾರ್ಥಂ ಕೆ
ಯ್ವಿಡಿದುದೆ ಸತ್ವೈಕಹಿತಕರಂ ಕುಂದದೆ ತಾಂ
ನಡೆದುದೆ ಸನ್ಮಾರ್ಗಮಿದೇಂ
ಪೊಡವಿಯೊಳುತ್ತಮನೊ ಗೃಧ್ರಪಿಂಛಾಚಾರ್ಯಂ ೧೮

ಚಂ॥ ಅನುಪಮ ಜೈನಶಾಸನಘನಾಗಮದೊಳ್ ಮಿಗೆ ಧರ್ಮವೃಷ್ಟಿಯಂ
ಘನಮೆನೆ ಸಂತತಂ ಸುರಿದರುನ್ನತವೃತ್ತ ಬಳಾಕಪಿಂಛಾರ್ಯಂ
ವಿನುತ ಮಯೂರಪಿಂಛಮುನಿಪರ್ ಸಫಲಂ ಸಲೆ ಭವ್ಯಸಸ್ಯವಾಂ
ತೆನಸುಮಜಲ್ಲಿರೋದಸಿಯೊಳೆಯ್ದೆ ಬಳಾಕಮಯೂರಪಿಂಛಮಂ ೧೯

ಕಂ॥ ಅರ್ಹದ್ಬಲಿಮುನಿಪತಿಯ
ಭ್ಯರ್ಹಿತವೃತ್ತಿಯನದೇವೊಗಳ್ವುದೊ ನೆಗಳ್ದಿಂ
ದರ್ಹನ ಮತಮಲ್ಲದುದತಿ
ಗರ್ಹಿತಮೆಂದೆನಿಸಿದಂ ಮಹೀಮಂಡಲದೊಳ್ ೨೦

ಭೂತಬಲಿಮುನಿಪನೇ ವಿ
ಖ್ಯಾತಜಿನಂ ದಿವ್ಯಭಾಷೆಸಿದ್ಧಾಂತಂ ಮ
ತ್ತೇತೊದಳೊ ಗಣಾಗ್ರಣಿಯೇ
ಭೂತಳದೊಳ್ ಪುಷ್ಪದಂತಪರಮಾಚಾರ್ಯಂ ೨೧

ಉ॥ ಚಿತ್ತರಮಾಗೆ ಸೂತ್ರಗತಿಯಿಂ ಮಿಗೆ ಪಣ್ಣಿದ ಗಂಧಹಸ್ತಿತೊಂ
ಬತ್ತಱುಸಾಸಿರಕ್ಕೆ ಶಿವಕೋಟಿಯ ಕೋಟಿ ವಿಪಕ್ಷವಿದ್ವದು
ಸ್ತತ್ತಗಜಂ ಮದಂಬಱತು ಕೆಯ್ಯೆಡೆಗೊಟ್ಟುದೆನಲ್ಕೆ ಪೇೞ್ವುದೇಂ
ಮತ್ತೆ ಸಮಂತಭದ್ರಮುನಿರಾಜನುದಾತ್ತ ಜಯಪ್ರಶಸ್ತಿಯಂ ೨೨

ಕಂ॥ ಸತತಮಕಳಂಕಮಂದರ
ಕೃತಮಥನನಯಪ್ರಮಾಣ ಪಾರಾವಾರೋ
ದ್ಗತಯುಕ್ತ್ಯಮೃತಂ ವಿಬುಧ
ಪ್ರತತಿಯ ಮಿಥ್ಯಾತ್ವಮೃತಿಯನಳಱೆಪುದರಿದೇ ೨೩

ಮ॥ ನಿಸದಂ ತನ್ನ ನಿರಾಮಯಾಕೃತಿ ಜಗದ್ವಿಖ್ಯಾತಮಾದತ್ತು ಭಾ
ಪಿಸೆ ಸರ್ವಾರ್ಥದಸಿದ್ಧಿಯೊಳ್ ತೊಡರ್ದುಬೋಧಂ ಭವ್ಯಸಂಸೇವ್ಯಮಾ
ಯ್ತು ಸುಹೃತ್ಪದ್ಮದೊಳಿಂಬುವೆತ್ತುದು ಪದನ್ಯಾಸಂ ಗಡಾರಣ್ಣ ಬ
ಣ್ಣಿಸರೋರಂತೆ ಜಿನೇಂದ್ರಬುದ್ಧಿವೆಸರಂ ಶ್ರೀಪೂಜ್ಯಪಾದೇಶನಾ ೨೪

ಕಂ॥ ಮಾಂದಿಸಿ ತಮಮಂ ದೃಷ್ಟಿಯೊ
ಳೊಂದಿಸಿ ತತ್ವಾರ್ಥಮಂ ಜಗದ್ವ್ಯವಹಾರ
ಕ್ಕಂದು[ಱ್] ಮಾಡಿದ ವಿದ್ಯಾ
ನಂದಸ್ವಾಮಿಯ ಮಹೋದಯಂ ಕೇವಳಮೇ ೨೫

ನಿರುಪಮ ಸರಸ್ವತೀ ಸುಂ
ದರಚತುರಾನನನಶೇಷ ವಿಬುಧಸ್ತುತ್ಯಂ
ಪರಮಬ್ರಹ್ಮನೆನಲ್ ಕವಿ
ಪರಮೇಷ್ಠಿ ಪುರಾಣಪುರುಷನೆಂಬುದು ಪುಸಿಯೇ ೨೬

ವರ ವೀರಸೇನ ಜಿನಸೇ
ನರೆಂಬ ಮುನಿವೃಷಭರಾಂತು ಕಲಿಯುಗದೊಳ್ ವಿ
ಸ್ತರಿಸಿ ಜಿನಧರ್ಮರಥಮಂ
ಪರಿಯಿಸಿದರ್ ಸಕಲ ವಸುಮತೀ ಮಂಡಲದೊಳ್ ೨೭

ಗುಣಭದ್ರಸ್ವಾಮಿಯ ಗುಣ
ದೆಣಿಕೆಗೆ ಜಿಹ್ವಾಸಹಸ್ರಮಂ ಪಡೆದುಮವಂ
ಫಣಿರೂಪದಿನಿರ್ಮಡಿಸಿದ
ಫಣೀಶನೇನಣ್ಣ ಬುದ್ಧಿಯೊಳ್ ಪೆರ್ಚಿದನೋ ೨೮

ನಡೆವಳಿಯೊಳ್ ತನ್ನ ಸಮಂ
ಬಡೆದಾರುಂ ನಡೆದರಿಲ್ಲ ಗಡಮೆಂತೆರ್ದೆಯಂ
ನುಡಿಯುಂ ನಡೆದುವೊ ಪದುಳಿಕೆ
ಯೆಡೆಗೆ ಜಟಾಸಿಂಹಣಂದಿ ಮುನಿಪುಂಗವನಾ ೨೯

ಏಲಾನದಿಯಾದುದು ಗಡ
ಕಾಲುದಕಂ ನಿಂದ ಭೂಮಿ ಸಿದ್ಧಾಂತವೆಸ
ಗರ್ಾಲಂಬನಮಾಯ್ತು ಗಡೆನ
ಲೇಲಾಚಾರ್ಯಪ್ರಸಿದ್ಧಿ ಸಾಧಾರಣಮೇ ೩೦

ಕಲಿಕಾಲವಶದೆ ಬೋಧಾ
ಕುಲಿತ ಕುದೃಷ್ಟಿಗಳಡಂಗೆ ನಿಜರುಚಿಯಿಂ ಪ
ಜ್ಜಳಿಸಿ ದಿಗಂಬರಕುಲಮಂ
ಬೆಳಗಿದ ಯೋಗೀಂದುದೇವಚಂದ್ರನೆ ವಂದ್ಯಂ ೩೧

ಚಂ॥ ವದನಮತಿಪ್ರಸನ್ನತೆಯನಾಳ್ದುದು ಶಾಂತಿಯನಾಂತುದಂತವೆ
ಯ್ದಿದುದತಿಕಾಂತಿಯಂ ತನು ದಯಾರ್ಣವಮಂ ನೆಲೆವೆರ್ಚಿಸಿತ್ತು ನೋ
ಡಿದೊಡೊಗೆತಂದ ಚಂದ್ರಿಕೆ ಕಳಾಕಳಿತಂ ವಚನಾಮೃತಂ ಮನೋ
ಮುದಮನೊಡರ್ಚಿದತ್ತು ವಿಬುಧರ್ಗಿಳೆಯೊಳ್ ಮುನಿಚಂದ್ರದೇವನಾ ೩೨

ಕಂ॥ ಭೂತಭವದ್ಭಾವಿ ಮುನಿ
ವ್ರಾತಂ ಸತತಂ ತ್ರಿಹೀನನವಕೋಟೀಸಂ
ಖ್ಯಾತಂ ಮಾನಸಹಂಸ
ಪ್ರೀತಿಯನೊಡರಿಕೆ ದಯಾಪಯೋವಾಹಿನಿಯಿಂ ೩೩

ಚಂ॥ ವಿಷಯವಿಲೀನಮಾನಸದ ಮಾನಸರಂ ತಿಳಿಪಲ್ಕೆವೇಡಿ ನಿ
ರ್ವಿಷಯಿಜಿನೇಂದ್ರರುಂದ್ರ ಕಥೆಯೊಳ್ ನವಭಾವರಸಂಗಳಂ ತಟಂ
ಕಷಮೆನೆ ತೋಱಿ ತದ್ರುಚಿಯ ಮೆಯ್ಯೊಳೆ ಸದ್ರುಚಿಯೊಳ್ ತೊಡರ್ಚುವೀ
ಮಿಷದ ಕವೀಂದ್ರರೀಗೆ ಸುಖಸೃಷ್ಟಿರತರ್ ಕವಿತಾಪ್ರಸಾದಮಂ ೩೪

ಮ.ಸ್ರ॥ ಮಣಿಯಂತೇ ರಂಜಿಪಂತೊಪ್ಪಮನೆಸಗುಗೆ ಕೆಯ್ಕೊಂಡು ಕೊಂಡಾಡಿ ವಿದ್ಯಾ
ಗ್ರಣಿಗಳ್ ಭವ್ಯೌಘಸಂಸೇವ್ಯಮನಮಳ ವಚೋನವ್ಯಮಂ ಸ್ವಾರ್ಥಸಿದ್ಧಿ
ಪ್ರಣಯಿಪ್ರೋದ್ಯೋದ್ಯಮಂ ವಿಶ್ರುತನವರಸಭಾವಾಭಿಧಾನವ್ಯಮಂ ಸ
ದ್ಗುಣಿಪಿದ್ವದ್ಭವ್ಯಮಂ ಶ್ರವ್ಯಮನನುಪಮ ಮತ್ಕಾವ್ಯಮಂ ಸತ್ಕವೀಂದ್ರರ್ ೩೫

ಚಂ॥ ಅನುಗುಣಮಾಗಿ ಕೂಡೆ ಗುಣವರ್ಮನ ಮೈಸಿರಿ ಪಂಪನೋಜೆ ಪೊ
ನ್ನನ ಪೊಸದೇಸಿ ರನ್ನನ ಗುಣೋನ್ನತಿಯಗ್ಗಳನೊಳ್ಪು ನಾಗವ
ರ್ಮನ ಬಹುರೀತಿ ನೇಮಿಯ ಚಮತ್ಕೃತಿ ಜನ್ನಿಗನಿಂಪು ನಾಗಚಂ
ದ್ರನ ರಸವೃತ್ತಿ ರಂಜಿಸುಗೆ ನಿರ್ಣಯಮೆನ್ನಯ ನವ್ಯಕಾವ್ಯದೊಳ್ ೩೬

ಕಂ॥ ಚತುರಾನನನಂ ಬಿಡಿಸಿದ
ರತಿಶಯಿತಾರ್ಥಮನೆ ತೋಱಿಪದಿರಿಂ ಪೆಱರಾರ್
ಪತಿಗಳೊಳನುರಕ್ತೆಯೆ ಸರ
ಸತಿ ದನಿಯಂ ತೋಱಿ ನೆರೆವಳೆಮ್ಮೊಳ್ ಚಿತ್ರಂ ೩೭

ಎನಿತಂ ಪದಪದದೊಳ್ ಸಾ
ಲ್ವನಿತರ್ಥಮನಿತ್ತೊಡಂ ಮನಂಗೊಳ್ವಳೆ ನು
ಣ್ದನಿಯಂ ತೋಱುತ್ತುಮೆ ವಾ
ಗ್ವನಿತೆಯನೊಲಿಪೊಂದು ಸೊಬಗು ಸಮನಿಸವೇಡಾ ೩೮

ಚಂ॥ ಅನುಗುಣಮಾಗೆ ವರ್ಣನಮೊಡಂಬಡೆ ರೀತಿ ರಸಕ್ಕೆ ಭಾವವ
ಚ್ಚನಿಸಿರೆ ಭಾವದೊಳ್ ಪದುಳಮಾಗಿರೆ ಚೌತೆಱನರ್ಥವೃತ್ತಿಯೊ
ಳ್ದನಿ ಪೊಸದೇಸಿ ಮಾತಿನೊಳುದಾರತೆವೆತ್ತಿರೆ ಸಯ್ತು ಪೇೞ್ವುದಿಂ
ಪನಿಸೆ ಕವೀಶ್ವರಂ ಕೃತಿಯನಲ್ಲದೊಡೇಕದಱೊಂದು ದಂದುಗಂ ೩೯

ಮೃದುಪದಬಂಧಮುಂ ಸುರುಚಿರಾರ್ಥಮುಮುತ್ಕಟವೃತ್ತಿಯಾಗಿ ತೀ
ವಿದ ರಸಮುಂ ಮನಂಗೊಳಿಪ ಭಾವಮುಮಾರಯಲಿಲ್ಲ ನೂತ್ನಕಾ
ವ್ಯದೊಳೆನವೇಡೆ ಚೈತ್ರದ ರಸಾಳದ ಗಾಳಿಯ ಕೋಕಿಲಪ್ರಣಾ
ದದ ನೆಱೆದಿಂಗಳಿಂಗದಿರ ಸೊಂಪತಿನೂತನಮಿಂಪುವೀಱದೇ ೪೦

ಕಂ॥ ರಸವೃತ್ಯಭಿನಯ ಭಾವದ
ಪೊಸದೇಸಿಯ ರೂಪನೀಕ್ಷಿಪಂ ಪ್ರೌಢಂ ನಿ
ಟ್ಟಿಸಿ ಮೈಸಿರಿ ನವಕಾವ್ಯಮಂ
ಕೇಳಿ ಸಂತೋಷಿಪರ್ ಚಿತ್ತದೊಳ್ * ೪೧

ಉ॥ ನೋಡಿರೆ ಪೂರ್ವದೊಳ್ ಗಣಧರಾದಿ ಮಹಾಮುನಿಸತ್ಕವೀಶ್ವರರ್
ಮಾಡಿದ ಪುಷ್ಪದಂತಜಿನನಾಥಪುರಾಣಮನಿಂದು ಕನ್ನಡಂ
ಮಾಡುವೆನೆಂದು ಪೂಣ್ದೆನಿದು ಶಕ್ತಿಯೊ ಭಕ್ತಿಯೊ ವೈನತೇಯನಿ
ರ್ದಾಡಿದ ಗಾಳಿವಟ್ಟೆಗೆ ಮನಂಬಿಡೆ ಧೀಂಕಿಡುವಂತೆ ಟಿಟ್ಟಿಭಂ ೪೨

---

* ೪೧ನೆಯ ಕಂದದ ಕೊನೆಯಪಾದವೂ ಮತ್ತೊಂದು ವೃತ್ತದ ಮೂರುವರೆಪಾದಗಳೂ ಲುಪ್ತವಾದಂತಿವೆ. “ಕೇಳಿ ಸಂತೋಷಿಪರ್ ಚಿತ್ತದೊಳ್” ಎಂಬುದು ವೃತ್ತದ ಕೊನೆಯ ಭಾಗವಾಗಿರಬಹುದು.

ಚಂ॥ ಕತೆ ಕಿಱಿದಾದೊಡಂ ಕತೆಯ ನಾಯಕನುನ್ನತವಂಶವೀರ್ಯ ವಿ
ಶ್ರುತಮಹಿಮಪ್ರಪಂಚಿತಗುಣಂ ಪಿರಿದಂತವಱಿಂದೆ ವರ್ಣನ
ಸ್ಥಿತಿ ಮಿಗೆ ಸಾಲ್ವುದೇ ಗಣಧರಾದಿಗಳುಳ್ಳುದನುಳ್ಳ ಮಾಱ್ಕೆಯಿಂ
ಕಥಿಸಿದರಿಲ್ಲಿ ಪೇಟ್ವ ಕವಿಕಲ್ಪಮಿದೆಂಬವನಲ್ಪನಲ್ಲನೇ ೪೩

ಕಂ॥ ಪಿರಿದುಂ ಜಿನನುತಿಗಲ್ಲದೆ
ಪರಮ ಶ್ರೀವಿಭವಮೆಯ್ದದೆಂದಾರೆಂದರ್
ಪರಮಾಣುಮಾತ್ರಮಮೃತದ
ಪರಿಸೇವನೆ ಘಟಿಸಲಮರದೇನಮರತ್ವಂ ೪೪

ಎಣೆಯಾಗಿ ಸುಕವಿಯೊಳ್ ಸಂ
ದಣಿಸುವರೇಕಯ್ಯ ವಿಬುಧಸಭೆಯೊಳ್ ತಾಮೇಂ
ಗಣನೀಯರೆ ಕುಕವಿಗಳಾರ್
ಗಣಿಸಿದಪರ್ ಮುಸುಱೆ ಪರಿವ ನೊರಜಂ ನೊಟಿಮಂ ೪೫

ಪದಮಿಡಲಱಿಯಂ ಗಡ ಮಾ
ರ್ಗದೊಳಂತವನೆಂತೊ ನಡೆವೊನರ್ಥದ ಸೊಂಪಿ
ಲ್ಲದ ಕುಕವಿ ನವರಸಾನುಭ
ವದೆ ತನ್ನಂ ಪೆಱರನೆಂತೊ ಪೇಟ್ ತಣಿಪಿದಪಂ ೪೬

ಥಳಥಳಿಪ ಪದಾರ್ಥವನೇಂ
ಗಳ ಕಾಣ್ಬನೆ ದೋಷದೃಷ್ಟಿ ದುರ್ಮತಿ ಗಡದೇಂ
ತಿಳಿವನೆ ಗುಣಸಂತತಿಯಂ
ಖಳಂ ಗಡೆಂತುಂ ರಸಂಗಳೊಳ್ಪೊರೆದಪನೇ ೪೭

ತೊಳಗುವ ನಭದೊಳ್ ಪಿತ್ತಾ
ವಿಳದೃಷ್ಟಿಗವಿದ್ಯಮಾನಮೇಚಕರುಚಿಯೊಂ
ದೆಳಸಿ ಮಿಗೆ ತೋರ್ಪ ತೆಱದಿಂ
ಖಳಂಗೆ ಪೊಲನಲ್ತೆ ಕೃತಿಯೊಳಿಲ್ಲದ ದೋಷಂ ೪೮

ತಲೆದೂಗನೆ ಖಳನದು ಮೂ
ದಲೆಯಕ್ಕುಂ ಮುಂದೆ ಕೇಳ್ದು ಸತ್ಕವಿಕೃತಿಯಂ
ತಲೆದೂಗೆ ಖಳರ್ಗೆಂದಾ
ತಲೆ ಭೂಮಿಗೆ ಭಾರಮೆಂತೊ ಪೇಟ್ ತೂಗಿದಪಂ ೪೯

ಉ॥ ಮುಟ್ಟಿಯುಮೇನೊ ಮುಟ್ಟದೆಯುಮೇನೊ ಖಳರ್ ವಿಬುಧಾಂತರಂಗಮಂ

ಮೆಚ್ಚಿಪ ಕಾವ್ಯರತ್ನಮವರಂ ಮಿಗೆ ಮೆಚ್ಚಿಸದೇ ಸುವೃಷ್ಟಿ ಸೊಂ
ಪೞ್ಚಿರಿಯಾಗೆ ಸಸ್ಯಚಯಮಂ ಪರಿವರ್ಧಿಸುತಿರ್ಪುದಣ್ಣ ಪೇ
ಚೊೞ್ಚತಮಾಗೆ ಪೆರ್ಚಿಸದೆ ಮಿಕ್ಕ ತೃಣಾಂಕುರಸಂಕುಳಂಗಳಂ ೫೦

ಕಂ॥ ಪುಟ್ಟಿಸಿದನಿದೇಕೆಯೊ ಬಿದಿ
ನಿಟ್ಟುರದಿಂ ಲೋಕದೊಳಗೆ ದುರ್ಜನನನಿದಂ
ನಿಟ್ಟಿಸಿ ತಿಳಿದೆಂ ಸುಜನರೊ
ಳಿಟ್ಟಣಿಸಿದ ಗುಣಮನಱಿಪಲದು ಸಂದೆಯಮೇ ೫೧

ಖಳನಂ ಗುಣಗಣದಾವಾ
ನಳನಂ ಸುಜನಾಂತರಂಗ ಸಂತೋಷವ್ಯಾ
ಕುಳನಂ ಸಮಗ್ರದೋಷಾ
ವಿಳನಂ ಪೆಸರ್ಗೊಂಡು ಬರ್ದುಕುವನ್ನನದಾವಂ ೫೨

ವಿಷದಿಂ ಕೊಲ್ವಹಿಯುಂ ನಿ
ಟ್ಟುಸಿರಿಂ ಕೊಲ್ವಹಿಯುಮಳುರ್ವ ದಿಟ್ಟಿಯ ನೋಟಂ
ಮಸಗಿ ಕೊಳಲ್ ಕೊಲ್ವಹಿಯುಂ
ಪೆಸರ್ಗೊಳೆ ಕೊಲಲಾರ್ಪ ಖಳನೊಳೆಣೆವಂದಪುವೇ ೫೩

ಅಕ್ಕಟ ಖಳನಂ ಜವನೇ
ಕಿಕ್ಕನೊ ತುತ್ತಾಗಿ ಬಾಯೊಳಿದನಱಿದೆನವಂ
ಪೊಕ್ಕೊಡೆ ತನ್ನೊಡಲಂ ಪೋ
ೞ್ದಿಕ್ಕುಗುಮೆಂದಂಜಿದಂದಮಾಗಲೆವೇೞ್ಕುಂ ೫೪

ಕೊಂದೊಡೆ ಬಿಡದವಗುಣಮಿನಿ
ಸೆಂದೊಡೆ ಬಿಟ್ಟಪುದೆ ಖಳರೊಳೆಮಗದನೆನಲೇ
ವಂದಪುದವರ್ಗಳ ಭಯಮಂ
ಮಾಂದಿಸುವೊಡೆ ಸುಜನಸಂಸ್ತವಂ ಕರಣೀಯಂ ೫೫

ಇಲ್ಲದ ಗುಣಮಂ ಪೆಱರೊಳ್
ಸೊಲ್ಲಿಸುವಂ ತನ್ನೊಳುಳ್ಳ ಗುಣಮಂತದು ತಾ
ನಿಲ್ಲೆಂದಾಡುವ ಪುಸಿಕಂ
ಗೆಲ್ಲಿಂದಂ ಬಂದುದಮಮ ಸುಜನತೆ ಚಿತ್ರಂ ೫೬

ರಸಮಯಮಂ ಕೃತಿಯಂ ಸೇ
ವಿಸಿ ವಿರಸಮನೆಯ್ದೆ ಜೋಡು ಮಾಡುವ ವಿಬುಧ
ಪ್ರಸರಂ ಪೊಸಮಾವಂ ಸೇ

ಏಸಿ ಬಿದಿರಂ ಪೊಸೆವ ತುಂಬಿಯೊಡನಾಡಿದರೇಂ ೫೭
ಕೊಂಡಾಡದರಂ ತಮ್ಮಂ
ಕೊಂಡಾಡುವರೆಂದು ಪೊಗೞ್ವುದೀ ಧರೆಯಿದನಾಂ
ಕೊಂಡೆಸಗುವೆನೀನುಡಿ ಬೆಂ
ಗೊಂಡುದು ಸಜ್ಜನರನೊಂದುಮಾತಿನ ಮಱೆಯಿಂ ೫೮

ವ ॥ ಅದೆಂತೆನೆ

ಕಂ॥ ಭಾವಿಸೆ ಚಿತ್ರಮೆನಲ್ ವಿಬು
ಧಾವಳಿ ಗುಣವರ್ಮಬುಧನನತಿಕೃಪೆಯಿಂ ಕೂ
ರ್ತೋರ್ವಿ ಮುನಿಚಂದ್ರಪಂಡಿತ
ದೇವರ್ ಗುರುವಾಗೆ ಕವಿತೆ ಬಂದುದು ಚಿತ್ರಂ ೫೯

ತಣಿವಂತಿರೆ ರಸದಿಂ ಬುಧ
ರಣಿಯರಮೆಸಗುವುದು ಸುಕವಿ ಸತ್ಕೃತಿಯನಣಂ
ಗುಣವರ್ಮನಾಗಿ ಶಿತಮಾ
ರ್ಗಣದಂತುಚ್ಚಳಿಪದಿರ್ಪಿನಂ ಖಳವಚನಂ ೬೦

ಪ್ರಕಟಂ ಸುಕವಿಮಧುವ್ರತ
ನಿಕರಮನೆಱಗಿಸುವ ಚೂತಮಂಜರಿ ಕುಕವಿ
ಪ್ರಕರಮಧುಪಕ್ಕೆ ಕೃತಿ ಚಂ
ಪಕಮಂಜರಿಯೆನಿಸೆ ಪೇೞ್ದಪಂ ಗುಣವರ್ಮಂ ೬೧

ಪದಮೆ ಪದಮರ್ಥಮರ್ಥಂ
ಪುದಿದ ರಸಂ ತೃಪ್ತಿಕರರಸಂ ಭಾವಂ ಪೊ
ಣ್ಮಿದ ಸದ್ಭಾವಂ ದನಿಯಿಂ
ಪೊದವಿದ ದನಿಯೆನಿಪೆ ಪೇೞ್ದಪಂ ಕವಿತಿಲಕಂ ೬೨

ಸ್ವೀಕೃತ ಜಿನಧರ್ಮನನಂ
ಗೀಕೃತ ಖಳವರ್ಮನಮಳವಾಣೀಕರುಣಾಂ
ಗೀಕೃತ ಕವಿತಾವರ್ಮನ
ಪಾಕೃತದುಷ್ಕರ್ಮನಮಮ ಕವಿ ಗುಣವರ್ಮಂ ೬೩

ಕವಿ ಗಮಕಿ ವಾದಿ ವಾಗ್ಮಿ
ಪ್ರವರನ್ ಗುಣವರ್ಮನೊಳ್ ಸಮಂ ಬರ್ಪವರಾರ್
ಕವಿತೆಯೊಳಂ ಗಮಕದೊಳಂ

ಕುವಾದಿವಿಜಯದೊಳಮಮೃತ ವಾಗ್ವೃತ್ತಿಯೊಳಂ ೬೪
ವಿವಿಧ ಕಳಾಭಿಜ್ಞಂ ಭಾ
ವವಿದಂ ರಸರಸಿಕನುಚಿತಕವಿತಾಚತುರಂ
ಸುವಿವೇಕನಿಧಾನಂ ವಿಬು
ಧವತ್ಸಳಂ ಮಾನಮೇರು ನೃಪತತಿಮಹಿತಂ ೬೫

ಚಂ॥ ರತಿ ಪದೆದಂತೆ ಚಂದ್ರಕಿರಣಂಗಳೆ ಪಾಲ್ಗುಡಿದಂತೆ ಮಂದಮಾ
ರುತನೊಡಗೂಡಿ ಬಂದ ಸಹಕಾರಪರಾಗದೊಳಾಡಿದಂತೆ ರಾ
ಜಿತ ಮಧುಮಾಸದೊಳ್ ಪರೆಯದಿಂ ಪೊರೆದಂತಬಲಾಕಟಾಕ್ಷಶಿ
ಕ್ಷಿತಮೆನಿಪಂತೆ ಮೋಹಿಸದೆ ಪೇಟ್ ಗುಣವರ್ಮನ ಸೂಕ್ತಿಸಂಚಯಂ ೬೬

ಶಾ॥ ಎಂದೋರಂತಿರೆ ವಜ್ರದೇವನರನಾಥಾಸ್ಥಾನದೊಳ್ ಕೂರ್ತ ನ
ಣ್ಪಿಂದಂ ಕೋವಿದರೆಯ್ದೆ ಕೊಂಡುಕೊನೆಯಲ್ ಕೇಳ್ದಟ್ಟಜೆಂ ಶಾಂತಿವ
ರ್ಮಂ ದೀಸಾನತವರ್ಮನಾದರಿಸಿ ನೀಂ ಪೇಟೆಂದೊಡೀಗಳ್ ಮನಂ
ದಂದೆಂ ಪಾಲ್ಗಡ ಮರ್ದೆನಲ್ ಜಿನಕಥಾವಿಸ್ತಾರಮಂ ಸಾರಮಂ ೬೭

ಕಂ॥ ಕೃತಿ ಗಡ ಕೊಳ್ವಂ ಕುಡುವಂ
ಕೃತಿ ಗಡ ಭಾವಿಸುವೊಡಾಪತಿಂವರೆಯುಂ ತಾಂ
ಕೃತಿ ಗಡೆನಲ್ ಕೊಳ್ಕೊಡೆಯೇ
ನತಿಶಯಮಾದುದೊ ಕೃತಾರ್ಥಮೆನೆ ಭುವನಜನಂ ೬೮

ಕುಡುವವನಂ ಕೊಳ್ವವನೆಂ
ದೆಡೆಯುಡುಗದೆ ಕೊಳ್ವನಂ ಕರಂ ಕುಡುವವನೆಂ
ದಡಿಗಡಿಗೆ ವಿಬುಧವೃಂದಂ
ನುಡಿದುದು ಸಾಶ್ಚರ್ಯಮಲ್ತೆ ಕೊಳ್ಕೊಡೆ ಕೃತಿಯಾ ೬೯

ಅಳಿಯಂ ಮೊಜೆಯಿಂ ಭಾಗ್ಯದಿ
ನಳಿಯಂ ಸೌಭಾಗ್ಯದಿಂದಮಳಿಯಂ ಗುಣದಿಂ
ದಳಿಯಂ ವಿತರಣಗುಣದಿಂ
ದಳಿಯನೆನಿಪ್ಪಂಗೆ ಕುಡುಗೆ ಕೃತಿಕನ್ಯಕೆಯಂ ೭೦

ಕೃತಿ ಬೆಲೆಯಿಂ ಬರ್ಕುಮೆ ಪಂ
ಡಿತರಾರ್ ಬೆಲೆಯಿಲ್ಲದಿಟ್ಟೊಡಂ ಕೃತಿಗೊಳ್ವಂ
ಕೃತಿಗೆ ಬೆಲೆಯಂ ಬಜೆದು ಮನ
ಕತಮಾದೊಡೆ ಕೇಳ ವಿಬುಧವಿದ್ವತ್ಸಭೆಯೊಳ್ ೭೧

ಮ.ಸ್ರ॥ ಕ್ಷಿತಿಯೊಳ್ ಮುನ್ನಬ್ಜನೇತ್ರಂ ಮನೆಯಳಿಯನೆನೆಲ್ ಕ್ಷೀರವಾರಾಶಿಯಿಂ ವಿ
ಶ್ರುತಲಕ್ಷ್ಮೀದೇವಿಯಂ ಕೌಸ್ತುಭಮಣಿಸಹಿತಂ ಕೊಂಡನೆಂತಂತೆ ತನ್ನಂ
ಸತತಂ ಕೂರ್ತಿತ್ತು ಕೊಂಡಂ ಗುಣನಿಧಿ ಗುಣವರ್ಮಂಗೆ ಕೀರ್ತ್ಯನ್ವಿತಂ ಸ
ತ್ಕೃತಿಲಕ್ಷ್ಮೀಕಾಂತೆಯಂ ರಂಜಿತವಿಬುಧಜನಸ್ವಾಂತೆಯಂ ಶಾಂತಿವರ್ಮಂ ೭೨

ಕಂ॥ ಆತನ ನಿಖಿಳಮಹೀವಿ
ಖ್ಯಾತನ ಸನ್ಮಾನದಾನಸಂಚಿತಸುಕೃತ
ವ್ರಾತನ ಗುಣವೇಣಿಕೆಗೆ ಘನ
ವೇತಱಿೊಳಂ ಕಿಱಿದಱೆಂದಮಱೆಪುವೆನಿನಿಸಂ ೭೩

ವ ॥ ಅದೆಂತೆಂದೊಡೆ

ಚಂ ಸಕಳಜನೈಕಮಿತ್ರನನವದ್ಯಕಳಾಧರನಿಷ್ಪಶಿಷ್ಟಕ
ಲ್ಪಕುಜನುಪಾಶ್ರಿತಾಖಿಳಬುಧಂ ನಯವಾಕ್ಪತಿ ಸತ್ಕವಿತ್ವರಂ
ಜಕನಹಿತಾದ್ರಿಸಂಗತಮಹಾಶನಿ ಸಂತತ ಭೋಗಿರೂಪ ಕೌ
ತುಕಜಿತಮೀನಕೇತುವೆನೆ ಶಾಂತಿ ನವಗ್ರಹಭಾಸಿ ಲೋಕದೊಳ್ ೭೪

ಗುರುಜನಕಂ ಕವೀಂದ್ರಜನಕಂ ಗುಣವಜ್ಜನಕಂ ಸಮಸ್ತಸಾ
ಕ್ಷರಜನಕಂ ಜಗಜ್ಜನಕನೊಲ್ದುದನಿತ್ತಭಿರಕ್ಷಿಪಟ್ಟಿಯಿಂ
ಗುರುಜನಕಂ ಕವೀಂದ್ರಜನಕಂ ಗುಣವಜ್ಜನಕಂ ಸಮಸ್ತ ಸಾ
ಕ್ಷರಜನಕಂ ಜಗಜ್ಜನಕನೆಂಬುದು ಮೇದಿನಿ ಶಾಂತಿವರ್ಮನಂ ೭೫

ಮ॥ ಜಗದೊಳ್ ನಾಱ್ಪ್ರಭು ಶಾಂತಿವರ್ಮನೆಸೆವಂ ಪ್ರೋದ್ದಾಮಲಕ್ಷ್ಮೀಗೃಹಂ
ಜಗತೀಮಂಗಳರತ್ನಭೂಷಣಗೃಹಂ ಸಾಹಿತ್ಯಲೀಲಾಗೃಹಂ
ಭಗವಜ್ಜೈನಮತೋಕ್ತಿನರ್ತನಗೃಹಂ ದಿಕ್ಕಾಮಿನೀವರ್ತಿಕೀ
ರ್ತಿಗೃಹಂ ಕೀರ್ತಿತಸತ್ಯಸಂಪದಗೃಹಂ ಸನ್ನೀತಿ ವಿದ್ಯಾಗೃಹಂ ೭೬

ಚಂ॥ ವಸುಧೆಯೊಳೊಳ್ಪುವೆತ್ತ ನರರೇಮಱ್ವನ್ನರೆ ಶಾಂತಿ ನೀಂಬರಂ
ರಸಿಕರೆ ನೀಂಬರಂ ವಿನಯವೃತ್ತರೆ ನೀಂಬರವಾತ್ಮ ಸತ್ಕಳಾ
ಪ್ರಸರರೆ ನೀಂಬರಂ ಬುಧಜನಸ್ತುತಮಾರ್ಗರೆ ನೀಂಬರಂ ಗುಣ
ವ್ಯಸನರೆ ನೀಂಬರಂ ಶ್ರುತವಿಳಾಸರೆ ನೀಂಬರವೇನುದಾತ್ತರೇ ೭೭

ಉ॥ ಶ್ರೀಯುತ ಶಾಂತಿವರ್ಮ ಪೆಱರಾರ್ಪು ವಿಚಾರಿಪೊಡಂಥವರ್ತಕ
ನ್ಯಾಯಮ ಬೀರದೇಟ್ಗೆ ಪರಿಭಾವಿಪೊಡಂತದು ತಾನಜಾಕೃಪಾ
ಣೀಯಮ ನಿಕ್ಕುವಂ ನುಡಿವ ಪೆಂಪು ವಿಚಾರಿಪೊಡುಂತೆ ಕಾಕತಾ
ಳೀಯಮ ಭಾಪ್ಪು ನಿನ್ನವೊಲುದಾರರೆ ಬೀರರೆ ಸತ್ಯವಾಕ್ಯರೇ ೭೮

ಚಂ॥ ಎನಗೆನಗೀವನಾವ ತೆಱದಿಂ ವರವಸ್ತ್ರಸುವರ್ಣಮಂ ಸಮಂ
ತೆನಗೆನಗಟ್ಟಿಱೆಂ ಪದೆದು ಮನ್ನಿಪನಿನ್ನನದಾವನೆಂದಣಂ
ತನತನಗಟ್ಟಿಯಿಂದೆ ಸಕಳಾರ್ಥಿಜನೋತ್ಕರಮಾರ್ತು ಕೀರ್ತಿಸು

ತ್ರಸುದಿನಮಿರ್ಪುದೆಂದೊಡವಿಳಸ್ತುತನೋ ಪ್ರಭು ಶಾಂತಿಯುರ್ವಿಯೊಳ್ ೭೯
ಪರಹಿತದೊಳ್ ನಯಕ್ರಮದೊಳಾಯತಿಯೊಳ್ ಸುಚರಿತ್ರದೊಳ್ ದಯಾ
ಪರಿಣತಿಯೊಳ್ ಕಳಾವಿಭವದೊಳ್ ವರವಿಕ್ರಮದೊಳ್ ಗಭೀರದೊಳ್
ಗರಿಮೆಯೊಳೂರ್ಜಿತಪ್ರಭುತೆಯೊಳ್ ಸುಜನಾಗ್ರಣಿ ಶಾಂತಿವರ್ಮ ಸಾ
ಕ್ಷರಸಮಯಾವಲಂಜಿ ನಿನಗಾರ್ ದೊರೆ ಮಾನವರೀಧರಿತ್ರಿಯೊಳ್ ೮೦

ಮ.ಸ್ರ॥ ಸ್ಫುರಿತೋದ್ವೃತ್ತಾರ ತಾರಾಚಳ ಹರಹಸನಾದಭ್ರಶುಭ್ರಾಭ್ರಹಂಸೀ
ಹರಿದಿಜ್ಞಾತ್ಮತಂಗ ಗಂಗಾಸರಳತರಳ ಕಲ್ಹಾರ ಕರ್ಪೂರ ಪೂರಾ
ಮರರಾಜೋರ್ವೀಜ ರಾಜತ್ಕುಸುಮವಿಸರ ನೀಹಾರ ನೀರೇಜ ನೀರಾ
ಕರ ನೀರೇಜಾರಿ ಗೌರೀದ್ಯುತಿ ವಿತತಯಶಃಕಾಂತನೀ ಶಾಂತಿವರ್ಮಂ ೮೧

ನಿರವದ್ಯಶ್ರೀನಿಜೌನ್ನತ್ಯದಿನಮೃತನಿಧಿಸ್ಫೂರ್ತಿಯಂ ಸತ್ಯಭಾಮಾ
ಪರಿಭಾಸ್ವತ್ಸಂಗದಿಂ ಶಾರ್ಙ್ಗಿಯನುಮೆಯಿನುಮಾಧೀಶನಂ ಮಾರ್ಗಣಾಡಂ
ಬರದಿಂ ನೈಷಂಗಮಂ ಸತ್ಕವಿಕಳಿತಕಳಾರಂಭದಿಂ ಶುಂಭದಬ್ಜಾ
ಕರಮಂ ಪೋಲ್ವಂ ಮಹೀಭಾಸುರಗುಣನಿಳಯಂ ಶಾಂತನುತ್ಕೀರ್ತಿ ಕಾಂತಂ ೮೨

ವ॥ ಎಂದಿಂತು ಸಮಸ್ತ ಭುವನಜನಂ ಪೊಗೞೆ ನೆಗೞ್ತೆವಡೆದನಪ್ಪುದಱಿಂ ಕೀರ್ತಿಪತಾಕನುಂ ಅಗಣ್ಯಪುಣ್ಯಲಕ್ಷ್ಮೀಸದನವಕ್ಷಸ್ಥಳನಪ್ಪದಱಿಂ ಪುರುಷೋತ್ತಮನುಂ ಆತ್ಮೀಯಾನ್ವಯಮಂ ಗುಣರತ್ನದಿನಲಂಕರಿಸುವುದಱಿಂ ಗುಣರತ್ನಭೂಷಣನುಂ ಚಾತುರ್ಯಚಾರಾಯಣನಪ್ಪುದಱಿಂ ಸರಸ್ವತೀಕರ್ಣಪೂರನುಂ ಮಱೆದಪ್ಪೊಡಂ ತೊದಳನುಡಿದಱಿಯನಪ್ಪುದಱಿಂ ಸತ್ಯರಾಧೇಯನುಂ ಘನಗಭೀರತೆಯಿನಾರ್ಗಮಧಿಕನಪ್ಪುದಱಿಂ ಗಂಭೀರನೀರಾಕರನುಂ ವಿರೋಧಿಸಾಧನ ಭಯಂಕರನಪ್ಪುದಱಿಂ ಕದನಕಂಠೀರವನುಂ ಅಪ್ರತಿಮಪ್ರಭಾವಾಭಿನು ತನಪ್ಪುದಱಿಂ ಪ್ರಭುಕುಲೈಕರೋಧೋಮಣಿಯುಂ ಕವಿತ್ವತತ್ವನಿಕಷಣಪ್ರತಿಭಾನನಪ್ಪುದಱಿಂ ವಿವೇಕ ಚತುರಾನನುಂ ನಿಸರ್ಗಸುರಭಿಪರಿಮಳಪರಿಮಿಳಿತನಪ್ಪುದಱಿಂ ಮಲ್ಲಿಕಾವಲ್ಲಭನುಂ ಸುಕವಿಕದಂಬಾವಲಂಬನನಪ್ಪುದಱಿಂ ಸಕಳಸುಕವಿಪಿಕಮಾಕಂದನುಂ ಜಿನಧರ್ಮಹರ್ಮ್ಯ ಮಾಣಿಕ್ಯಕಳಶನಪ್ಪುದಱಿಂ ಭವ್ಯಜಿನಾರ್ಣವಪೂರ್ಣಚಂದ್ರನುಂ ವಿದ್ವಜ್ಜನಹೃದಯನಪ್ಪುದಱಿಂ ಸಕಳಜನಮನೋಹರನುಂ ಕರ್ಣಾಟಕೀಕರ್ಣಾವತಂಸನುಂ ಮಳಯಮಾನಿನೀಮನೋಮಾನ ಸಹಂಸನುಂ ಕೇರಳೀಕುಚಕಲಶತಾರಹಾರನುಂ ಸಿಂಹಣ ಸೀಮಂತಿನೀಸೀಮಂತ ಸಿಂಧೂರನುಮೆನಿಸಿ ನೆಗೞ್ದ ನಾಪ್ರಭು ನಭೋಮಣಿ ಶಾಂತಿವರ್ಮನ ಯಶೋಲತೆಗಾಲಂಬನ ಮಾಗಿ ಮನೋಹರಮಾದ ಕಥಾವನಿತೆಗುದ್ಭವಸ್ಥಾನಮೆಂತೆಂದೊಡೆ

ಮ॥ ನಿರುತಂ ನಾಲ್ಕನುಯೋಗಮೆಂಬ ದೆಸೆಯೊಳ್ ನಾಲ್ಕುಂ ಶ್ರುತಸ್ಕಂಧಬಂ
ಧುರ ಭೂಚಕ್ರದೊಳೊಪ್ಪುತಿರ್ಪುದದಱೊಳ್ ಪೂರ್ವಾನುಯೋಗಸ್ಥಿತಂ
ಸುರರಾಜದ್ವಿಪದಂತೆ ಪೆಂಪೆಸೆವುದೀ ಶುಂಭತ್ಕಥಾಂಗಂ ನಿರಂ
ತರದಾನಪ್ರವಿಭಾಸಿ ಭದ್ರಗುಣಸಂಪೂರ್ಣಂ ಬುಧಾಧಿಷ್ಠಿತಂ ೮೩

ಕಂ॥ ಪುರುಜಿನವೀರಜಿನೋಕ್ತಿ
ಸ್ವರೂಪಮಂ ವೃಷಭಸೇನಗೌತಮಗಣಿಗಳ್
ಭರತನೃಪಮಗಧರಾಜ
ರ್ಗೆ ರೂಪ್ಯಗಿರಿ ವಿಪುಳಗಿರಿಗಳೊಳ್ ಬೆಸಸಿದುದಂ ೮೪

ಮ॥ ಪರಿಯಂತಂತಿರನೇಕ ಪಾಪಹರಣೈಕಪ್ರೌಢಮಂ ಕಿನ್ನರೇ
ಶ್ವರನಂತಂತಿರಗಣ್ಯಪುಣ್ಯಜನಸೇವ್ಯೈಶ್ವರ್ಯಮುಂ ಮೇರುಭೂ
ಧರಮೆಂತಂತಿರೆ ಪುಷ್ಪದಂತಪರಿವೃತ್ತೋದಾತ್ತಮಂ ಭವ್ಯರಾ
ದರಿಸಲ್ ಭಕ್ತಿಯಿನಾಂ ವಿನಿರ್ಮಿಸುವೆನೀ ಶ್ರೀಮತ್ಕಥಾಬಂಧಮಂ ೮೫

ಸುಕೃತಂ ಶಾಂತದಿನಕ್ಕುಮೀ ಕಥೆಗೆ ಶೃಂಗಾರಾದಿ ನಾನಾರಸಾ
ಷ್ಟಕವೇಜಾಟ್ಟೆಯೊ ರಾಗಕಾರಣಮನಲ್ಲೇಡೆಯ್ದುಗುಂ ವೀತರಾ
ಗಕಥಾಂತರ್ಗತಮಾದೊಡಾವ ರಸಮುಂ ಶಾಂತತ್ವಮಂ ನೀರದ
ಪ್ರಕರಾಂತರ್ಗತ ವಾರ್ಧಿವಾರಿ ಪಡೆವಂತತ್ಯಂತ ಮಾಧುರ್ಯಮಂ ೮೬

ವ॥ ಆ ಕಥಾವತಾರಮೆಂತೆಂದೊಡೆ

ಮ.ಸ್ರ॥ ನಿರುತಂ ಷಡ್ದ್ರವ್ಯ ಗರ್ಭೋದರವಿತರವಿತರ್ಕಾತಿರಿಕ್ತಸ್ವರೂಪಂ
ಪರಮೇಷ್ಠಿಜ್ಞಾನದೃಷ್ಟಿಪ್ರಸರವಿಷಯಮಾದ್ಯಂತಶೂನ್ಯಂ ವಿಯತ್ತಂ
ಚರಮಧ್ಯಸ್ಥಾಯಿ ಲೋಕಂ ಕ್ರಮಗತಿಯಿನಧಸ್ತಿರ್ಯಗೂರ್ಧ್ವ ತ್ರಿಭೇದಂ
ಚಿರಸೊಪ್ಪುತ್ತಿರ್ಪುದಾತ್ಮೋಚ್ಛ್ರಯಮದು ಪದಿನಾಲ್ಕಾಗೆ ರಜ್ಜು ಪ್ರಮಾಣಂ ೮೭

ಕಂ॥ ಏತೊದಳೊ ಘನೋದಧಿ ಘನ
ವಾತಂ ತನುವಾತಮೆಂಬ ವಳಯಂಗಳನು
ಸ್ಯೂತಂಗಳ್ ಬಳಸಿರೆ ಸಮು
ಪೇತ ತ್ರಸನಾಳಗರ್ಭಮದು ಸೊಗಯಿಸುಗುಂ ೮೮

ಚಂ॥ ಪರಿವೃತ ತೋಯ ವಾಯುಗಳನಂಬರಮಂ ಪೊಜಗಿಕ್ಕಿತೆಂಬುದೇ
ಪಿರಿದದು ಮಾಣ್ಬಿ ಸಂಹರಿಪ ದಂದುಗಮಂ ಪೊಜಗಿಕ್ಕಿತೆಂಬ ಮ
ಯ್ಸಿರಿ ಸಹಜಾತಮಾಗೆ ತಳೆದಿರ್ಪುದನುಕ್ರಮದಿಂದೆ ವೇತ್ರವಿ
ಷ್ಟರನಿಭ ಝಲ್ಲರೀನಿಭ ಮೃದಂಗನಿಭಾಕೃತಿಯಿಂ ಜಗತ್ರಯಂ ೮೯

ವ॥ ಆ ಲೋಕತ್ರಿತಯಮಧ್ಯದೊಳೊಂದುರಜ್ಜುಪ್ರಮಾಣಮುಂ ಸ್ವಯಂಭೂರಮಣ ಸಮುದ್ರಪರ್ಯಂತಮುಂ ಸಕಳ ತಿರ್ಯಕ್ಪರಿಭ್ರಮಣ ಪರಿಗತಮುಂ ಮಧ್ಯಸ್ಥಿತಮಂದರ ಮಹೀಧರಮುಮೆನಿಸಿ

ಕಂ॥ ನಿಸದಮಸಂಖ್ಯಾತದ್ವೀ
ಪ ಸಮುದ್ರದ ಬಳಿವಳ್ಳಿ ವಳಯಾಕೃತಿಯಿಂ
ದೆಸೆದೊಂದನೊಂದು ಪರಿವೇ
ಷ್ಟಿಸಿರಲ್ ಕಣ್ಗೊಳಿಪುದದುವೆ ಮಧ್ಯಮಲೋಕಂ ೯೦

ಮ.ಸ್ರ॥ ಇರೆ ಜಂಬೂದ್ವೀಪಮಲ್ಲಿಂ ಪೊಜಗಿರೆ ಲವಣಾಂಬೋಧಿ ತದ್ವಾರ್ಧಿಯಂ ಬಂ
ಧುರಲೋಕಾಕಾರದಿಂದಂ ಬಳಸಿರೆ ವಿಲಸದ್ಧಾತಕೀಷಂಡಮೋರಂ
ತಿರದಂ ಸುತ್ತಿರ್ದು ಕಾಳೋದಕಜಲಧಿ ಬೆಡಂಗಾಗೆ ತದ್ಬಾಹ್ಯದೊಳ್ ಪು
ಷ್ಕರನಾಮದ್ವೀಪಮಿರ್ಕುಂ ವಿವಿಧಗಿರಿಸರಿದ್ದೇಶ ಸಂಪತ್ಕಳಾಪಂ ೯೧

ವ॥ ಆ ದ್ವೀಪದ ಬಾಹ್ಯಾರ್ಧಮನಳಂಕರಿಸಿ

ಕಂ॥ ನವರತ್ನರಾಜಿ ಫಣಮಣಿ
ಕವಿದ ಮುಗಿಲ್ ತೆರೆ ಕರಾಳಪವನಂ ಘೂತ್ಕಾ
ರವೆನಲ್ ಮಂಡಳಿತಮಹಾ
ಹಿವೊಲಿರ್ಪುದು ಸುತ್ತಿ ಮಾನುಷೋತ್ತರಶೈಲಂ ೯೨

ಉ॥ ಆ ಪೃಥಿವೀಧರೇಂದ್ರಫಣಿಪಂ ಪರಿವೇಷ್ಟಿಸಿ ಕಾವ ಪುಷ್ಕರ
ದ್ವೀಪ ಮಹಾನಿವಾಸದ ಸಮುನ್ನತ ಕಾಂಚನರಾಶಿಯಂತಿರು
ದ್ದೀಪಿತ ರಶ್ಮಿ ರಂಜಿಪುದು ಮೂಡಣಮಂದರಮರ್ಹದಂಘ್ರಿಪೂ
ಜೋಪನ ತತ್ಪುರಂದರವಿಳಾತಳ ಸೌಂದರಮುದ್ಧಕಂದರಂ ೯೩

ಚಂ॥ ಅಡಿಮೊದಲಿಂಗಧೋಭುವನಮೋಲಗಿಸುತ್ತಿರೆ ಮಧ್ಯಲೋಕಮೋ
ಗಡಿಸದೆ ಸುತ್ತಲುಂ ಬಳಸಿ ಜೀವಿಸೆ ಚೂಳಿಕೆ ನಾಕಲೋಕಮಂ
ಸೆಡೆಯದೆ ಪೊತ್ತು ನಿತ್ತರಿಸೆ ಮೈಮೆಯನಿಂತು ಜಗತ್ತ್ರಯಕ್ಕೆ ಮೂ
ವಡಿಪುದು ಲಕ್ಷಯೋಜನಮಿತೋಚ್ಚ್ರಯಮಾ ಕನಕಾವನೀಧರಂ ೯೪

ವ॥ ಅಂತುಮಲ್ಲದೆಯುಂ

ನೆನೆಯಿಪುದೆಯ್ದೆ ಮೇರುಗಿರಿ ವಿಶ್ವಜಗನ್ನುತ ದಿವ್ಯಪಾದದಿಂ
ಜಿನಪತಿಯಂ ಮಹಾಕಟಕದಿಂ ನೃಪನಂ ವಿಧೃತಕ್ಷಮತ್ವದಿಂ
ಮುನಿಜನಮಂ ನಿತಂಬಗತಕಾಂಚನಮೇಖಳೆಯಿಂ ಲತಾಂಗಿಯಂ
ವಿನುತಪವಿತ್ರಪುಣ್ಯಗುಣದಿಂ ಗುಣಿ ನಾಟ್ಪ್ರಭು ಶಾಂತಿವರ್ಮನಂ ೯೫

ಗದ್ಯ

ಇದು ಸಮಸ್ತ ಭುವನಜನಸಂಸ್ತುತ ಜಿನಾಗಮ ಕುಮುದ್ವತೀ ಚಾರುಚಂದ್ರಾಯಮಾಣಮಾನಿತ ಶ್ರೀಮದುಭಯಕವಿ ಕಮಳಗರ್ಭ ಮುನಿಚಂದ್ರ ಪಂಡಿತದೇವ ಸುವ್ಯಕ್ತಸೂಕ್ತಿ ಚಂದ್ರಿಕಾಪಾನ ಪರಿಪುಷ್ಟಮಾನಮರಾಳ ಗುಣವರ್ಮ ನಿರ್ಮಿತಮಪ್ಪ ಪುಷ್ಪದಂತ ಪುರಾಣದೊಳ್ ಪೀಠಿಕಾವರ್ಣನಂ ಪ್ರಥಮಾಶ್ವಾಸಂ

ದ್ವಿತೀಯಾಶ್ವಾಸಂ

ಕಂ॥ ಶ್ರೀನಿಧಿ ಮಹಿಮಧ್ಯಸ್ಥಂ
ಮಾನಿತಕಲ್ಯಾಣರೂಪಮೆಸೆವುದು ಸತ್ಸಂ
ತಾನಯುತಂ ದಿವಿಜಾದ್ರಿ ಸ
ಮಾನೀಕೃತ ಸಹಜಕವಿ ಸರೋವರಹಂಸಂ ೧

ವ॥ ಆ ಮೇರುವಿನ ಪೂರ್ವಪಶ್ಚಿಮಪ್ರದೇಶದೊಳ್

ಕಂ॥ ಓರೊಂದಱೊಳಗೆ ನಾಡುಗ
ಳೀರೆಂಟುಗಳಾಗೆ ಕೂಡಿ ಮೂವತ್ತೆರಡುಂ
ರಾರಾಜಿಸೆ ಸೊಗಯಿಪ್ಪುದಿ
ಳಾರಮಣೀರಮ್ಯಗೇಹಮುಭಯವಿದೇಹಂ ೨

ಮ॥ ಅಮಳಶ್ರೀಜಿನವರ್ತನಂ ಕಿಡದು ಷಟ್ಖಂಡಾವನೀಮಂಡಳಾ
ಕ್ರಮಿಗಳ್ ಕುಂದರಭೀಷ್ಟವೃಷ್ಟಿ ಕಱೆಯುತ್ತಿರ್ಕುಂ ಪದಂದಪ್ಪದ
ನ್ನಮತಕ್ಕುದ್ಭವಮಿಲ್ಲ ಪಂಚಶತಚಾಪೋತ್ಸೇಧರುಂ ಪೂರ್ವಿತ
ಪ್ರಮಿತಾಯುಷ್ಯರುಮಪ್ಪರಲ್ಲಿ ಮನುಜರ್ ಭೂಪರ್ ಪ್ರಜಾಪಾಳಕರ್ ೩

ಕಂ॥ ನೆಗಟ್ಟಿ ಮಹಾಲಯಮಲ್ಲದೆ
ನೆಗಟ್ಟಿ ಮಹಾಲಯಮದಿಲ್ಲಯುತವರನಾರೀ
ಯುಗಪರಿವರ್ತನಮಲ್ಲದೆ
ಯುಗಪರಿವರ್ತನಮದಿಲ್ಲ ತದ್ಭೂತಳದೊಳ್ ೪

ಲಂಚಂ ಕವರ್ತೆ ಸೆಱೆ ಕೋ
ಳಿಂಚೆ ಬಱಂ ಪಸವು ಮಾರಿ ಬಂದೀಗ್ರಹಣಂ
ಮಂಚಲ್ ಕಳವಾರಡಿ ಭಯ
ಸಂಚಯಮೆಂಬಿವಱ ಪೆಸರುಮಿಲ್ಲಾ ನಾಡೊಳ್ ೫

ಕಂ॥ ಲಲಿತಾಂಗದ ಬೆಮರ್ವನಿಗಳ .
ನಲೆದಾಱಿಪ ಕೀರಕುಳದೆಱಂಕೆಯ ಕಡುದ
ಣ್ಣೆಲರ್ಗೆಳಸಿ ಪಕ್ಕಿ ಸೋಯದೆ
ಕೆಲಬರ್ ಪಾಮರಿಯರವಱ ಬರಮನೆ ಪಾರ್ವರ್ ೧೯

ವ॥ ಮತ್ತಮಲ್ಲಿ

ಚಂ॥ ಒದವಿದ ಶಾಲಿಗರ್ದೆಗಳ ಪಾಳಿ ಕುಕಿಲ್ವ ಪಿಕಾಳಿ ತಣ್ಪುವೇ
ಱಿದ ಸುೞಿಗಾಳಿ ಪಾಮರಿಯರೋಳಿ ವಿಟೀವಿಟಕೇಳಿ ಪೂಗಳಿಂ
ಕೆದಱುವ ಧೂಳಿ ಪಾಡುವ ಮದಾಳಿ ಪೊದೞ್ದಲರೋಳಿಯೆಂಬಿನಂ
ಮದನನ ದಾೞಿಗೆತ್ತು ಸುಗಿದಿರ್ಪುದು ಪಾಂಥಜನಂ ನಿರಂತರಂ ೨೦

ವ॥ ಅದಲ್ಲದೆಯುಂ

ಉ॥ ರಾಗಿಮುಖೇಂದುಬಿಂಬದ ಲತಾಂಗದ ಕಣ್ಗಳ ಕಾಂತಿ ವಾರಿಧಾ
ರಾಗಣದೊಳ್ಪೊನಲ್ ಕವಿದು ಪಾಂಥರ ಕಣ್ಗೆ ಮನಕ್ಕೆ ರೂಪುಗೊಂ
ಡಾಗಳೆ ತೃಪ್ತಿಯಿಂ ಕುಡೆ ಮನಂಗೊಳಿಸಿರ್ಪರನಂಗರಾಜಧಾ
ರಾಗೃಹಶಾಳಭಂಜಿಕೆಗಳಂತಱವಟ್ಟಿಗೆಯೊಳ್ ಲತಾಂಗಿಯರ್ ೨೧

ವ॥ ಅಂತುಮಲ್ಲದೆಯುಂ

ಮ॥ ನೆವದಿಂ ತೃಷ್ಣೆಯನಾಗಿಪಂದಮಿದು ತೃಷ್ಣಾಭೇದಮಂ ಮಾಡುವಂ
ದಪಿದಲ್ಲಪ್ಪೊಡಿವಂದಿರೇಕೆ ಸುರಭಿಪ್ರಾಲೇಯತೋಯಂಗಳಂ
ಯುವಪಾಂಥರ್ಗೆಱೆವಲ್ಲಿ ತಮ್ಮ ಲಲಿತಾಂಗೋಪಾಂಗಶೃಂಗಾರಗೌ
ರವಮಂ ಬೀಱುವರೆಂಬ ದೂಱಿನೆಸಗುತ್ತಿರ್ಪರ್ ಪ್ರಪಾಕಾಂತೆಯರ್ ೨೨

ವ॥ ಆ ಪ್ರದೇಶಕ್ಕನತಿದೂರಮಾಗಿ

ಚಂ॥ ಸಲೆ ನಿಲೆ ಮಾವು ಪೂವು ವಕುಳಂ ಮುಕುಳಂ ಪೊಸತೆಂಗು ಕೌಂಗು ಕಾ
ದಲರೆಲರಂಚೆ ಬೆಂಚೆ ಪುಳಿನಂ ನಳಿನಂ ಗಿಳಿವಿಂಡು ಬಂಡು ಕೋ
ಗಿಲೆಗೊಲೆ ತುಂಬಿ ಬಿಂಬಿ ಸುೞಿಗೇದಗೆ ಜಾದಗೆ ಕಂಪು ಸೊಂಪಗುಂ
ದಲೆಯೆನೆ ರಮ್ಯಮಾ ವಿಷಯದೂರ್ಗಳ ನಂದನವೃಂದವೆತ್ತಲುಂ ೨೩

ಮ.ಸ್ರ॥ ವನವಲ್ಲೀಲಾಸ್ಯದಿಂ ಜೀರ್ಕೋೞಿವಿಯನನುಬದ್ಧಾಳಿಯಿಂ ವಾರನಾರೀ
ಜನಮಂ ಧಾರಾಲಯೋದ್ಯದ್ಗತಿಚತುರತೆಯಿಂ ವಾಜಿಯಂ ಸೌರಭಾಲಂ
ಬನದಿಂ ಗೋಸರ್ಗಮಂ ಲಾಲಿತಕುಶಲವಸಾಂಗತ್ಯದಿಂ ರಾಮಸೀಮಂ
ತಿನಿಯಂ ಪೋಲ್ತಲ್ಲಿ ನಿಚ್ಚಂ ಸುೞಿವುದು ವನದೊಳ್ ಸ್ವೈರಚಾರಂ ಸಮೀರಂ ೨೪

ವ॥ ಅಂತುಮಲ್ಲದೆಯುಂ

ಚಂ॥ ಕರಗಿಸುವಂತೆ ಗರ್ವಘನಜಾಳಮನುರ್ಪಿಸುವಂತೆ ಕಾಮತೋ
ಮರಜನಿತಾಗ್ನಿಯಂ ನಜೆಯೆ ನಂದಿಸುವಂತೆ ವಿವೇಕದೀಪಮಂ
ಬಿರಯಿಗಳಂ ಪಳಂಚಲೆವ ತಣ್ಣೆಲರಾಜಿಸುತಿರ್ಪುದಲ್ಲಿ ನ
ಲ್ಲರ ವಿಳಸದ್ವ್ರತಾಂತಪರಿಖೇದಮನೆಯ್ದು ಲತಾವನಂಗಳೊಳ್ ೨೫

ವ॥ ಅದಲ್ಲದೆಯುಂ

ಮ.ಸ್ರಾ॥ ನನೆಯಂಬಂ ಕಂತುವಿಂದಂ ಬಿಸುಡಿಸಿದಲರ್ಗಣ್ ಚಂದ್ರಬಿಂಬೋದಯಪ್ರಾ
ರ್ಥನೆಯಂ ಕನ್ನೆಯ್ದಿಲಿಂ ಪಿಂಗಿಸಿ ಕಳೆದ ಮೊಗಂ ಜನ್ಮಸಾಫಲ್ಯಮಂ ಭೂ
ಜನನೇತ್ರಾನೀಕದಿಂದೆಯ್ದಿಸಿದನುಪಮಸೌಂದರ್ಯಮೊಳ್ಗಂಡರಂ ಬ
ರ್ದಿನ ಬಲ್ಪಿಂ ಗಂಡುದೊಜತ್ತಾಳ್ವೆಸಕದ ಸೊಬಗಾ ನಾಡ ಪೆಂಡಿರ್ಗೆ ಸಾಜಂ
೨೬

ಚಂ॥ ಅರಲ ಸರಲ್ಗದಾರ ಮನಮಂ ಗುಜಿಮಾಡದೊ ನಾಡ ನೀಜೆವಂ
ಡಿರ ನಡೆವೊಪ್ಪುವಪ್ಪುವೊಡಗೂಡುವ ನೋಡುವ ಸುತ್ತುವೊತ್ತುವಾ
ದರಿಪೊಲಿಪೊಲ್ವ ಗೆಲ್ವ ಬಸದಾಗಿಪ ಭೋಗಿಪ ಕಾಯ್ವ ಬಯ್ವ ನಾ
ಣ್ಗರವರೆವಿಂಬುಕೆಯ್ಯುವೊಳಪೊಯ್ಯುವನೇಕ ವಿಚಿತ್ರಚೇಷ್ಟೆಗಳ್ ೨೭

ವ॥ ಮತ್ತಮಲ್ಲಿ

ಕಂ॥ ಬಾಲಾಶೋಕಂ ವಿಗ್ರಹ
ಲೀಲೆ ರಜೋವಿಕೃತಿ ಜಾತಿಸಂಕರಮನಿಲೋ
ಲ್ಲಾಲತರಶಿಖಿಬಿಬಾಕುಳ
ಕೋಳಾಹಳಮಿಲ್ಲ ಬನದೊಳಲ್ಲದೆ ಜನದೊಳ್ ೨೮

ಮ॥ ಧೃತಧರ್ಮಚ್ಯುತಿ ಬಾಣಸಂಹತಿಗೆ ಬದ್ಧಾವೈಕೃತಂ ವಾರಣ
ಕ್ಕೆ ತಮಃಸಂಗತಿ ರಾತ್ರಿಗಾಜಡಿ ಸುಗಂಧೋತ್ಫುಲ್ಲಪುಷ್ಪಕ್ಕುಪಾ
ತ್ತತಪೋಹೀನತೆ ಚೈತ್ರದೇಜ್ಗೆ ಮಹದ್ವಂದಿಗ್ರಹಂ ತ್ಯಾಗಿಗ
ವ್ರತಯೋಗಂ ಜಳಪಕ್ಷಿಗಲ್ಲದೆ ಜನಕ್ಕಿಲ್ಲಲ್ಲಿ ಬೇಜಿಲ್ಲಿಯುಂ ೨೯

ಲತಿಕಾಪಲ್ಲವಮಲ್ಲದಿಲ್ಲವಿಳ ಲೋಕಾಪಲ್ಲವಂ ಜೈನನಿ
ರ್ಮಿತ ಧರ್ಮೋದಯಮಲ್ಲದಿಲ್ಲರಿಚಮೂಧರ್ಮೋದಯಂ ಕೇತಕೀ
ಧೃತಸತ್ಕಂಟಕಮಲ್ಲದಿಲ್ಲ ವಸುಧಾಸತ್ಕಂಟಕಂ ಕಾಳಕ
ಲ್ಪಿತ ದೋಷೋದ್ಗಮಮಲ್ಲದಿಲ್ಲ ಪೆಜವುಂ ದೋಷೋದ್ಗಮಂ ದೇಶದೊಳ್
೩೦

ಕಂ॥ ಗುಣಮಿಲ್ಲದ ಯತಿ ಮಹಿರ
ಕ್ಷಣಮಿಲ್ಲದ ನೃಪತಿ ಶೀಲಮಿಲ್ಲದ ಸತಿ ಲ
ಕ್ಷಣಮಿಲ್ಲದ ಕೃತಿ ಜಿನಗೃಹ
ಗಣಮಿಲ್ಲದ ನಗರತತಿಯುಮಿಲ್ಲಾ ನಾಡೊಳ್ ೩೧

ವ॥ ಎಂಬಿನಮನೇಕ ಗಿರಿ ನಗರಸರಿದರಣ್ಯ ಕೇದಾರನಂದನಜನಸ್ಥಾನಸಂಪತ್ತಿಗುತ್ಪತ್ತಿ ನಿಳಯಮಾದ ತನ್ಮಹೀವಳಯದೊಳಗೆ ಸಕಳಸೌಂದರ್ಯಯೋನಿಯುಂ ರಾಜಧಾನಿಯುಮೆನಿಸಿ

ಚಂ॥ ಅರಮನೆ ಮೂಗು ಕಂಪಿಡಿದೆಲರ್ನಱುಸುಯ್ ಸಿತಕೇತುಮಾಳೆ ಭಾ
ಸುರ ಸಯುನಾಂಉು ಪಂದಳಿರ ತೋರಣಮೊಳ್ನಿಡುವುರ್ಪುಪಾಸಕಾ
ಧ್ವರಶಿಖಿಧೂಮಮಂಡಳಿ ಚಳಾಳಕಮಾಗಿರೆ ಪುಂಡರೀಕಿಣೀ
ಪುರಮೆಸೆದಿರ್ಪುದಾ ವಿಷಯಲಕ್ಷ್ಮಿಯ ಮುಗ್ಧಮುಖೇಂದುವೆಂಬಿನಂ ೩೨

ಕಂ॥ ಅದು ಗುಹ್ಯಕೋಪಗತಸಂ
ಪದಮೆಂದಕುಲೀನಮೆಂದು ಬಹುವಿಷಧರಮೆಂ
ದೊದವಿದ ಮಹತ್ವದಿಂದಿಟಿ
ಪುದು ಧನಪತಿ ದಿವಿಜಪತಿ ಫಣಾಪತಿಪುರಮಂ ೩೩

ಅದಜೊಡನೆ ಕೂಡಿ ತೊಲೆಯೊಳ್
ಬಿದಿ ತೂಗಿದೊಡೊಂದೆ ನೆಲೆಗೆ ನಿರುತಂ ಬರಲಾ
ಱದೆ ತನ್ನಲಘುತೆಯಿಂದೆಂ
ಬುದನೆರಡಱ ನಿಂದ ನಿಲವೆ ಸೂಚಿಪುದಿನ್ನುಂ ೩೪

ಭುವನದ ರಮಣೀಯ ಪದಾ
ರ್ಥವೆಲ್ಲವಂ ಮಾಡಿಮಾಡಿ ನಿಜಕೌಶಳದೊ
ಳ್ಪು ವಿಶೇಷಮಾಗೆ ಬಿದಿ ಬಱಿ
ಕಪೆ ಮಾಡಿದನೆನಿಪುದದಱ ಪೊಱವೊಟಲಂದಂ ೩೫

ವ॥ ಅದೆಂತೆನೆ

ಮ.ಸ್ರ॥ ನರನಾರೀಯೋಗದೀಕ್ಷಾಭವನಮಿದೆನಿಕುಂ ನಾಗವಲ್ಲೀಪಿನದ್ಧೋ
ದ್ಧುರಪೂಗಂ ಮಾಧವೀವೇಷ್ಟಿತ ಕುರವಕ ವೇಳಾಲತಾಬದ್ಧ ಕಾಳಾ
ಗರು ಮಲ್ಲೀನದ್ಧಚೂತಂ ಲವಲಿವೃತಲವಂಗಂ ತಮಾಳೀಪರೀತ
ಸ್ಫುರಿತಾಶೋಕಂ ಮೃಣಾಳೀಪರಿಚಿತಖರದಂಡಂ ಪುರೋದ್ಯಾನಷಂಡಂ ೩೬

ಚಂ॥ ದಿನಪನ ಕೆಯ್ಯ ಕಂಜದೊಡವುಟ್ಟಿದ ತಾವರೆ ಕಾಮಚಾಪದಿಂ
ಜನಿಯಿಸಿದಿಕ್ಷು ಚಂದ್ರನಮರ್ದಿಂ ಮಡುಗೊಂಡ ಕೊಳಂ ದಿವಂ ತವ
ರ್ಮನೆ ತನಗೆಂಬ ಪುಷ್ಪಲತೆ ಕಲ್ಪಮಹೀಜದ ಬೀಜದಂಘ್ರಿಪಂ
ವನಜಜನಂಚೆಗಗ್ನಿಜನ ಸೋಗೆಗೆ ಪುಟ್ಟಿದ ಹಂಸಕೇಕಿಗಳ್ ೩೭

ಕಂ॥ ಕಳರುತಿಯಂ ರತಿಯೊಳ್ ಕ
ಲ್ತೆಳವುರುಳಿಗಳಗ್ನಿಶಾಪವೆಯ್ದದ ಗಿಳಿಗಳ್
ಕಳಗೀತಿಕೆಗಳ್ ನಾಕದ
ವಿಳಸನದಿಂದೊಪ್ಪಿ ತೋರ್ಪ ಪಿಕನಿಕರಂಗಳ್ ೩೮

ಮ ಒಳಪೊಕ್ಕೆಯ್ದಿ ತೊಟಲ್ವುದಲ್ಲಿ ಪಥಿಕವ್ರಾತಂಗಳೊಳ್ ಪೋರುತುಂ
ತಳಿರ್ವೊಯ್ಲಿಂದೊಳಸೋರುತುಂ ಪುಟಲತಣ್ಪಂ ಸಾರುತುಂ ಪಿಂದೆ ನಿಂ
ದಳಿವೃಂದಂ ಬರೆ ಪಾರುತುಂ ಕುಳಿರ್ವನೀರಂ ಪೀರುತುಂ ಪ್ರೋಲ್ಲಸ
ತ್ಕಳಕಂಠೀರುತಮಾತ್ಮಸಾತ್ಕೃತವನಶ್ರೀಚಾರುತನ್ಮಾರುತಂ ೩೯

ವ॥ ಅಂತು ಸಂಚರಿಪ ಮಂದಗಂಧವಹನಿನಲ್ಲುಗುವ ತರುಶತದೊಳುದಿರ್ವ ಕುಸುಮರಜದ ಮಂದ್ಯೆಸಿ ನೆಗೆದ ಕೆಂಧೂಳಿಯಿಂದೆ ಮುಂದುಗೆಟ್ಟು ಮೊರೆವ ಮಧುಕರಂಗಳುಂ ಮಧುಕರಧ್ವನಿಯಿನಲರ್ಪಿಲ್ಲ ಜೇವೊಡೆಯ ರವವೆಂದು ಕಿವಿಯಿತ್ತು ಕೇಳಲುಮ್ಮಳಿಸಿ ತಮ್ಮೊಳ್ ಬಿಗುರ್ವ ಬಿರಯಿಗಳುಂ ಬಿರಯಿಗಳ ಮೆಯ್ಸುಯ್ಯ ಬೆಂಕೆ ಸೋಂಕೆ ಕಜಿಗಂದಿದಂತೆ ಕಪ್ಪುವಿಡಿದಂಗಮೆಸೆಯೆ ಕುಸುಮಶರಸಖನ ಪಡಿಯಜವಸಕೆ ಪಕ್ಕಾಗಿ ಪುಗಲ್ಪುಗಲೆಂದು ಬಂಡಳಿಸಿ ತೊಂಡುಗೆಡೆವ ಗಂಡುಗೋಗಿಲೆಗಳುಂ ಗಂಡುಗೋಗಿಲೆಗಳ ತುಂಡಖಂಡನದಿನೊಜಿತುಗುವ ಮಾಮರದ ಸೊನೆಯ ಸೋನೆಯಿಂ ನಾಂದು ಕೆಂದಳಿರೊಳೊಂದಿ ಮಂದಯಿಪಶೋಕವನಮನೆಳಪಿಸಿಲ ಬಳಗಮೆಂದೆಳಸಿ ಬಳಸುವೆಳಗಿಳಿಗಳುಂ ಎಳಗಿಳಿಗಳ ಬಳಗದ ನುಡಿಯನನುದಿನಂ ಕಲ್ತು ನುಡಿವಂಗನಾರತಿರಹಸ್ಯ ನಿಶ್ವಸನಂಗಳಂ ಕೇಳ್ದು ನಗೆಯಿಂದ ಬಿರಿವಂತೆ ಬಿರಿವ ಬಿರಿಮುಗುಳ ತಗುಳದಿಂ ಸೊಗಯಿಸುವ ಮಲ್ಲಿಕಾಲತೆಯ ಜೊಂಪಂಗಳುಂ ಮಲ್ಲಿಕಾಲತೆಯ ಜೊಂಪಕ್ಕೆ ಪಕ್ಕಾಗಿ ಕುಳಿರ್ವ ತಿಳಿಗೊಳದ ತಡಿಯ ತಣ್ಬುಟಿಲ ನುಣ್ಮಣಲೊಳತನುಗುರುರತಿಯನೋದಿಸುವ ಶುದ್ಧಾಕ್ಷರಂಗಳೆನಿಪ ಶುಕ ಪಿಕ ಚಕೋರ ಚಕ್ರವಾಕ ಬಕ ಬಳಾಕ ಸಾರಸ ಮರಾಳ ಪಾರಾವತ ಮಯೂರ ಹಾರೀತ ಕಾರಂಡ ಕುರವಕ ಸಂಕುಳಚರಣಸಂಚರಣದಿಂ ಪಳಚ್ಚನೆಸೆವ ಪಜ್ಜೆಗಳುಮಳುಂಬಮೆನಿಸುಗು ಮತ್ತಮಲ್ಲಿ

ಚಂ॥ ಸೊನೆ ತನಿವಣ್ಣ ಸಾರ್ವರಿವ ನೀರೆಳನೀರಲರ್ವಂದು ಜೇಂಚೆ ಕ
ರ್ಬಿನರಸವೆಟ್ಟಿ ಜಾಗದ ಪೊನಲ್ ಕೃತಕಾಚಳನಿರ್ಜರಾಂಬುವಂ
ಜನಿತಜಟನಾದ ಕೊಟ್ಗೆಜಾಜಿಸಿ ಪಾಂಥರ ಕಂತುತಾಪಮಂ
ಘನತರಪುಷ್ಪರೇಣುಗಳ್ ಕೂರ್ತೊಡಗೂಡುವಗಿಂಬುಮಾಡುಗುಂ ೪೦

ಕಂ॥ ಎಳಲತೆವನೆಯೆನಿತನಿತುಂ
ತಳಿರ್ವೊದಱೆನಿತನಿತುಮಮರ್ದ ಪುೞಿಲೆನಿತನಿತುಂ
ಕೊಳನೆನಿತನಿತುಂ ಕೃತಕಾ
ಚಳಮೆನಿತನಿತುಂ ರತಾರ್ತರೆಳಸಿರೆ ರಯ್ಯಂ ೪೧

ಚಂ॥ ವಿಹಗಕುಳಂಗಳಂ ನೆರಪಿ ಕೂಜನದೇೞ್ಗೆ ಮನೋಜರಾಜ್ಯಮಂ
ಬಹಳಿಕೆಯಿಂದೆ ಮೂವಡಿಸಿ ಕಾಮಮನಾರ ಮನಕ್ಕಮಾಳಿಪಾ
ಗ್ರಹಮನೊಡರ್ಚಲಲ್ತು ಮೊಱೆಯಂ ಮಱೆಸುತ್ತಿರಲಾತ್ಮಮನ್ಮಥ
ಗ್ರಹಮನದೇಂ ಕಟಿಲ್ಚುವರೊ ಯವ್ವನಮತ್ತೆಯರಲ್ಲಿ ನಲ್ಲರೊಳ್ ೪೨

ಪರಿಣೀ॥ ನಳಿನದಳದೊಳ್ ತೀವಿರ್ದಚ್ಚಾಂಬು ತಳ್ತಲರ್ವಾಸು ಕೆಂ
ದಳಿರ ತೆರೆ ತಾಂಬೂಲಂ ರಂಭಾದಳವ್ಯಜನಂ ಲತಾ
ನಿಳಯಮಳಿನೀಗೀತಂ ಪೂಗಂಪು ರಾಗದಲಂಪನ
ಗ್ಗಳಿಸೆ ಬನದೊಳ್ ನಿಚ್ಚಂ ಮೆಚ್ಚಿಪ್ಪರಿಚ್ಚೆಯಿನೋಪವರ್ ೪೩

ವ॥ ಅದಲ್ಲದೆಯುಂ

ರಗಳೆ॥ ಅಲ್ಲಿ ಬಹುಕುಸುಮಕುಜವೀಧಿಗಳೊಳೆಡೆಯಾಡಿ
ಸಲ್ಲಲಿತಲತೆಗಳಂ ಕಣ್ಣಾರೆ ನಡೆನೋಡಿ॥
ಮುಂಚಿ ತಿಱಿದಲರ್ಗಳಂ ಕೂರ್ಪ ಕೆಳದಿಗೆ ನೀಡಿ
ಲಂಚಮಂ ಪ್ರಿಯರಿತ್ತ ಪೂಮಾಲೆಯಂ ಸೂಡಿ॥
ನನೆಯ ಮುಗುಳಲರ ಮಿಡಿಯೊಳ್ದುಡಿಗೆಯಂ ಮಾಡಿ
ತನಿಗೊರ್ವಿದೆಲೆವಳ್ಳಿಯೊಳಡಂಗುಱುಚಾಡಿ॥
ತುಱುಗಿದ ತಮಾಲದೊಳಗವಿದು ಸಖಿಯಂ ಕಾಡಿ
ನಱುಸುಯ್ಗೆ ಸುಟಿವಳಿಗೆ ಸುಗಿದು ಸಂಪಗೆಗೂಡಿ॥
ಬಂದೊಳ್ವ ಬೆರ್ಚಿಸುವ ಚಪಳಕಪಿಗಲ್ಲಾಡಿ
ಬಂದ ಮಾಮರದ ತಳಿಗೊರ್ಂಬನುಯ್ಯಲಾಡಿ॥
ತುಂಬಿಗಳುಮೊಡನೊಡನೆ ತೇರಯ್ಸುತಿರೆ ಪಾಡಿ
ತಿಂಬಿ ಗಱಿಪುವ ಗಿಳಿಗಳೊಡನೆಳಸಿ ಮಾತಾಡಿ॥
ನುಡಿಯ ನುಣ್ಪಿಂ ಪಿಕನಿನಾದಮಂ ಕೊಱಚಾಡಿ
ಬಿಡುಮುಡಿಯ ಬಿಂಕದಿಂ ಸೋಗೆಯಂ ಕೀೞ್ಪಾಡಿ॥
ನಡೆಯ ನಯದಿಂದಂಚೆಯಳವನೆಟಿಕುಳಿಯಾಡಿ
ತೊಡೆಯ ಚೆಲ್ವಿಂ ಕನಕಕದಳಿಯಂ ಜೋಡಾಡಿ॥
ಕೃತಕಗಿರಿಗಳನೇಱಿದನಿತಱೊಳೆ ನಸುಬಾಡಿ
ಲತೆವನೆಗಳೆಸಳ ಪಸೆಯೊಳ್ ತನುವನೀಡಾಡಿ॥
ಬೆಳೆದಳಿಪಿನಿಂ ಪಿಡಿದು ನಲ್ಲರಂ ಮುಂಡಾಡಿ
ಮುಳಿವ ತಿಳಿಪುವ ವಿನೋದಂಗಳಂ ಕೊಂಡಾಡಿ॥

ಮಚ್ಚಱಿದು ಮನಮಿಚ್ಚೆವಟ್ಟು ಪುರುಳಂ ಬೇಡಿ
ಪೊಚ್ಚಮಿಲ್ಲದ ರಾಗರಸದಿಂ ಕುಳಿಕೋಡಿ॥
ತಣ್ಪುಟಿಲ ತಾಣದೊಳ್ ಬಗರಗೆಗಳಂ ತೋಡಿ
ಕಣ್ಪೊಲದ ತಾವರೆಗೊಳಂಗಳೊಳಗೋಲಾಡಿ॥
ವಿವಿಧ ಕೇಳೀಜಳದ್ರೋಣಿಯೊಳ್ ಮುಳ್ಕಾಡಿ
ನವನಾಳಿಕೇರ ರಸಪೂರಮಂ ತುಳ್ಕಾಡಿ॥
ನಿಖಿಳಕೃತ್ರಿಮನದಿಗಳಿರ್ತಡಿಯೊಳೀಸಾಡಿ
ಮುಖಶಶಿಯ ಪಗೆಯೆಂದು ಕಮಲಮಂ ಬೀಸಾಡಿ॥
ತನುಲತೆಯನಾಱಿಸೆ ಸುಗಂಧಪವನಂ ತೀಡಿ
ವನವಿಹರಣದೊಳಗೆ ಬೇಱೊಂದು ಕಡುಗಾಡಿ॥
ಪೊಟ್ತುಗಳೆವುದು ನೃಪನ ಪೆಂಡವಾಸಂ ಕೂಡಿ
ವರ್ತಿಸುತ್ತಿರೆ ತಮ್ಮ ಬಿಯದ ಚಾಗದ ರೂಢಿ॥ ೪೪

ಚಂ॥ ಅಳಿಗಲರ್ಗೊಂಚಲಂ ಗಿಳಿಗೆ ಮಾಮಿಡಿಯಂ ಕಳಹಂಸೆಗಬ್ಜಕೋ
ಮಳದಳಮಂ ಪಿಕಕ್ಕೆ ಕೊನರಂ ತಿಱಿದಿಕ್ಕಿ ಪುರಾಂಗನಾಜನಂ
ಬಳೆವ ವಿನೋದದಿಂ ತಣಿಪುತಿರ್ಪುದು ನಲ್ಲರಗಲ್ಕೆಕಾಲದೊಳ್
ಮುಳಿಯದೆ ಸಂತಮಿರ್ಕುಮೆಮಗೆಂದವಱೊಳ್ ಕಳೆಗೊಳ್ವ ಮಾಟ್ಕೆಯಿಂ ೪೫

ವ॥ ಮತ್ತಂ

ಚಂ॥ ಅಲರ್ವನಸೆಯೊಳ್ ಬಟಲ್ಪುಸಿರ್ದು ತಣ್ಪುಟಿಲೊಳ್ ತಳರ್ದಿಕ್ಕೆದಾಣದೊಳ್
ನಲಿದೆಳನೀರ್ಗಳಂ ಕುಡಿದು ತುಂಬಿಯ ಗೀತಮನೊಲ್ದು ಕೇಳ್ದು ನು
ಣ್ಬಲಸಿನ ಬಾಟೆಯೀಳೆಯರಸೇಱಲ ಮಾವಿನ ಪಣ್ಗಳಂ ಮನಂ
ನಿಲೆ ಸವಿದಲ್ಲಿ ತೀರಮೆಯುಮಂ ಮಱೆದಿರ್ಪುದು ಪಾಂಥಸಂಕುಳಂ ೪೬

ಕಂ॥ ವನಲಕ್ಷ್ಮಿಯ ನೇತ್ರಾಂಶುಕ
ವೆನೆ ನೇತ್ರಕ್ಕೆಸೆದು ಮಿಸುಗಿ ಪಸುರ್ವಡೆದುವು ನಂ
ದನದ ಕೆಲಂಬಿಡಿದಾರ್ದ್ರಕ
ವನ ಜೀರಕವನ ಹರಿದ್ರವನ ಸಂತತಿಗಳ್ ೪೭

ವ॥ ಅವಕ್ಕನತಿ ದೂರದೊಳ್

ಚಂ॥ ಎನಗಮರ್ದಿಂಟಿನೊಳ್ ಮಧುಪನಿಂಪು ರಸಾಯನದಿಂಪು ಕೂರೆ ಕೂ
ರ್ತಿನಿಯರ ಕೂಟದಿಂಪಮರ್ದಿನಿಂ ಪೆಣೆಯಲ್ಕೆ ದಿಟಕ್ಕೆ ಜೀಗುವಂ
ತನುಪಮಮಾಗಿ ಜೀಗಿ ಪೆಳೆದಿಂಪಿನ ಪರ್ವಮೆನಿಪ್ಪ ಪರ್ವದಿಂ
ತನಿರಸಮುಚ್ಚು ಪಾಯೆ ಬಗೆಗೊಳ್ಪುದು ಕರ್ಬಿನ ಸುಪ್ರ್ವ ತೋಂಟದೊಳ್ ೪೮

ವ॥ ಅಲ್ಲಿ

ಚಂ॥ ಸ್ಫುರಿಯಿಸುವೆಮ್ಮ ಪುರ್ವೆ ನೆಱೆಗುಂ ಜಗಮಂ ಗೆಲಲಿನ್ನದೇಕೆ ನೀಂ
ಪರಿಹರಿಸೆಂದು ಮತ್ಕುಲದ ಕರ್ವಿನ ಬಿಲ್ಲನನಂಗನಿಂದಗ
ಲ್ವಿರಿಸಿದರೀ ಪುರಾಂಗನೆಯರೆಂಬ ಕನಲ್ಕೆಯಿನಿಕ್ಷು ಕೋಟಿ ಪ
ಲ್ಮೊರೆವವೊಲಿಕ್ಷುಯಂತ್ರನಿವಹಂ ಮೊರೆವಬ್ಬರಮೆಂದುಮುಬ್ಬರಂ ೪೯

ಉ॥ ಓಲಗಶಾಲೆ ಪೂಗಿಡುಗಳೋಳಿಗೆ ಜೀವಣಶಾಲೆ ಮತ್ತಭೃಂ
ಗಾಳಿಗೆ ಜೇನಶಾಲೆ ಕುಸುಮೇಷುಗೆ ಸೌರಭಸತ್ರಶಾಲೆ ತ
ಣ್ಗಾಳಿಗೆ ನಾಟ್ಯಶಾಲೆ ಕುಸುಮಾಪಚಯಪ್ರಚಳತ್ಪುರಾಂಗನಾ
ಲೋಲಕಟಾಕ್ಷಲಕ್ಷ್ಮಿಗೆನಲೊಪ್ಪುವುವಲ್ಲಿಯ ಪುಷ್ಪವಾಟಿಗಳ್ ೫೦

ಕಂ॥ ಅಹಿಯಂತೆ ವಿಷೋದ್ಗಾರಿಗ
ಳಹರ್ನಿಶಪ್ರಹರದಂತೆ ಘಟಿಕಾತ್ಮಂಗಳ್
ರಹಟಘಟೀಯಂತ್ರಂಗಳ್
ಬಹುವಿಧವಿಭ್ರಮದಿನೆಸೆವುವುಪಶಲ್ಯಕದೊಳ್ ೫೧

ಚಂ॥ ವಿಳಸದನಂತಪದ್ಮವಸುರಾಂತಕನಂ ಫಣಿವಂಶಮಂ ಸದಾ
ನಳಕುಮುದಾವಭಾಸಿ ದೆಸೆಯಂ ರಘುನಂದನಸೈನ್ಯಮಂ ನಿರಾ
ಕುಳಕವಿರಾಜಹಂಸಸುಭಗಂ ನಭಮಂ ನೃಪಗೇಹಮಂ ಸಮಂ
ತಿಳಿಪುಗುಮಲ್ಲಿ ಮಂದಪವನೋಚ್ಚಳಶೀಕರಮಂಬುಜಾಕರಂ ೫೨

ವ॥ ಮತ್ತಂ

ಉ॥ ಪಾವಕದಿಕ್ಕಿನಂತೆ ವನದಂತೆ ವಿಜೃಂಭಿತಪುಂಡರೀಕವಿಂ
ದೀವರನಾಭರಮ್ಯಸಭೆಯಂತೆ ರಸಾತಳದಂತನಂತ ಪ
ದ್ಮಾವಹಮುರ್ವಿಯಂತೆ ನಭದಂತವಲಂಬಿತರಾಜಹಂಸ ವಾ
ಮ್ರಾವಳಿಯಂತೆ ಕಾಮಿಜನದಂತೆ ಸಮುತ್ಕಳಿಕಾಕುಳಂ ಕೊಳಂ ೫೩

ವ॥ ಮತ್ತಮಲ್ಲಿ

ಚಂ॥ ನೆಗಟ್ಟಿಸವದ್ಯವಿದ್ಯರ ಕಳಾವನದಂತೆ ಪರೋಪಭೋಗವೃ
ತ್ತಿಗಳೆನಿತಕ್ಕುವಂತನಿತು ಕುಂದದೆ ಪೆರ್ಚುವ ತೋಯದಿಂದಮಾ
ನಗರದ ಬಾವಿ ಪೊಕ್ಕರಣೆ ದೀರ್ಘಿಕೆ ಪೆರ್ಗೆಱೆ ದೊಣ್ಣೆ ಪೂಗೊಳಂ
ಬಗರಗೆ ಬೆಂಚೆ ಪಳ್ಳ ಮೊಱೆವೆಂಬ ಜಲಾಶಯಮಿಂತು ಸುತ್ತಲುಂ ೫೪

ಕಂ॥ ನೀಡಿರದೆ ಪಿರಿಯಕರಿ ಸೆಂ
ಡಾಡೆ ನೃಪಂ ನಿಚ್ಚಮತುಳಜನಕಳಕಳದಿಂ
ಕೂಡಿ ಸೊಗಯಿಪುವು ನಗರದ
ಮೂಡಣ ಪಡುವಣ ವಿಭಾಗದೊಳ್ ವೈಹಳಿಗಳ್ ೫೫

ನಯನಿಪುಣಸೂತ್ರಧಾರರ್
ನಿಯಮಿಸುವರ್ ಭದ್ರಮಂದಮೃಗಸಂಕೀರ್ಣಾ
ನ್ವಯದ ನೃಪಕರಿಗಳಂ ಪ್ರಣಿ
ಧಿಯೊಡಂಬಡೆ ಸಕಳಶಿಕ್ಷೆಕರ್ಣ್ಪೋಜುಪಿನಂ ೫೬

ಉ॥ ವರ್ತಿಪ ಬೃಂಹಿತಂಗಳೊಳೊಳಸೋರ್ವ ಮದನಸ್ರವದಂಬು ಕೊಂಬು ಸಂ
ವರ್ತದ ಬಲ್ಸಿಡಿಲ್ಗಳೆನೆ ವಜ್ರಧರಂ ಸಜೆಗೆಯ್ದ ಪುಷ್ಕಳಾ
ವರ್ತ ಘನಾಘನಂಗಳವೊಲಂಜನಕಾಂತಿಗಳುಗ್ರ ದಂತಿಗಳ್
ಮಾರ್ತುಡುಗೀಗವೇಜನೆಯಮಂ ತಡವಂದಮನಾಂತು ಕಂಭದೊಳ್ ೫೭

ವ॥ ಅದಲ್ಲದೆಯುಂ

ಮ॥ ನವರತ್ನೋತ್ಕರದಿಂ ಸುರೇಂದ್ರಧನುವಂ ಮೆಯ್ವಣ್ಣದಿಂ ತಾರ್ಕ್ಷ್ಯನಂ
ಪವಮಾನಾತ್ಮಜನಂ ಜವಪ್ರಸರದಿಂ ಸೂರ್ಯಾಶ್ವಮಂ ಶಕ್ರವಾ
ಹವನಕ್ಷೂಣಗುಣಂಗಳಿಂ ಮಿಗುವ ಜಾತ್ಯಶ್ವಂಗಳಂ ತಿರ್ದುತಿ
ಪ್ಪವರ್ಗೆಂ ಸಾರ್ದುವೂ ಶಾಲಿಹೋತ್ರರಪಿಮುತ್ರಾರೋಹಣಪ್ರೌಢಿಗಳ್ ೫೮

ವ॥ ಆ ಪ್ರದೇಶಕ್ಕಾಸನ್ನಮಾಗಿ ವಿಹಿತಲೋಹಪಟಪ್ರಮುಖಬಹುವೇಧ್ಯಸಾನ್ನಿಧ್ಯಪರುವಿರ ಚಿತಾಂಗುಳಿತ್ರಾಣರಪ್ಪ ಶಿಷ್ಯರಂ

ಕಂ॥ ನಿಯಮಿಸವರ್ ತ್ರಿವಿಧಧನುಃ
ಪ್ರಯೋಗದೊಳ್ ದೃಷ್ಟಿ ಮುಷ್ಟಿ ಶರಸಂಧಾನ
ಕ್ರಿಯೆ ಲಕ್ಷ್ಯಸಿದ್ಧಿ ನಿಜಶಿ
ಕ್ಷೆಯಿನನುಪಮಮಾಗೆ ಚತುರಚಾಪಾಚಾರ್ಯರ್ ೫೯

ವ॥ ಮತ್ತಮಲ್ಲಿ

ಚಂ॥ ಒದವಿ ಪೊದಳ್ದ ಮೇಳೆಯದ ಕೇತನಮಾಳಿಕೆ ವೀರಲಕ್ಷ್ಮಿ ದೂ
ರದ ಭಟರಂ ನಿಜೋಚ್ಚಲಪಟಾಂಚಲದಿಂ ಕರೆವಂತುಟಾಗೆ ಮ
ತ್ತದು ಭೃಗುದೇವತಾಕಟಕಪರ್ವತಮಂಜಿನಮೊಪ್ಪುತಿರ್ಪುದಂ
ಕದ ಕಳನಲ್ಲಿ ಜಿನ್ನಣದ ಜೀರಬಳಾಪತಿ ಮೆಚ್ಚೆ ಕಾದುವರ್ ೬೦

ವ॥ ಆ ಕಳವ ಕೆಲದೊಳ್ ಸಾರಿಯಂ ಕೋಲೊಡ್ಡಿ ಗೆಲ್ದ ನಿಗಜಿನ ನೆಗಜ್ತೆಗಿಡಿಪ ಘ್ರಗುವಂ ನಗುವ ಬೇತಾಳನಂ ಬೇಡೆನಿಪ ತಕ್ಕು ಮಿಕ್ಕುವರೆ ಕಲ್ತ ಜಿನ್ನಣಿಗಳಿರ್ದು

ಚಂ॥ ಕಿಜಿಪುವ ಗೇಣ ಕೇಣಮಿವರಿಂ ನವಯೌವನಯೋಗ್ಯಮಾಯ್ತು ಕ
ಣ್ಣೆಜಿಯುದು ರೂಪುಗೊಂಡುದೆನೆ ಚಾರಿ ಪುಗಿಲ್ ನೆಲೆ ನೋರ್ಪು ದಂಡೆ ಸೂಜ್
ನಿಜಿಸು ನಿಘಾತ ಮಾಂಕೆ ಬಗೆ ಬಗ್ಗಣೆ ವಂಚನೆ ಬಂಧಮೆಂಬಿವಂ
ಮಜಿಪ್ರೂವಜರ್ಕಳೇಂ ಕಲಿಸುತಿರ್ಪರೊ ಚಟ್ಟರನಟ್ಟೆವಟ್ಟರಂ ೬೧

ವ॥ ಇಂತನೇಕ ಜನಮನೋಹಾರಿ ಸೌಂದರ್ಯವೃತ್ತಿಗವಕಾಶವಾದ ವಿವಿಧ ಪ್ರದೇಶದಿಂದೊಳಗೆ ವಿಷಮವಿಷಲತಾ ಗುಲ್ಮಕಂಟಕವಿಕೀರ್ಣವಾಗಿ ಬಳಸಿ ಬಳ್ವಳಿಪ ಬಾಟ್ವೇಲಿಗನತಿದೂರದೊಳ್

ಮ॥ ಪರಿವೇಷಂ ರವಿಬಿಂಬಮಂ ಜಳಧಿ ಜಂಬೂದ್ವೀಪಮಂ ಸುತ್ತಿ ಸೌಂ
ದರಮಾಗಿರ್ಪವೊಲಿರ್ಪುದಪ್ರತಿಮಕೋಟಾಚಕ್ರಮಂ ಸುತ್ತಿ ಕಂ
ಜರಜಃಪುಂಜವಿಚಿತ್ರವೀಚಿರುಚಿರಂ ಪರ್ಯಂತಹಂಸಂ ನಿರಂ
ತರಕಾಂತಂ ಪರಿಖಾಂತರಂ ಪುರವಧೂಚೀನೋತ್ತರೀಯೋಪಮಂ ೬೨

ಕಂ॥ ಪೊಜಿವೊಟಿಲ ಬನದ ಕಟ್ಟಿಲೆ
ಮಜಿದುಂಬಿಗಳಿಂದೆ ಬಯ್ದು ಪಾಡಿಸಿ ಸಾರ್ತಂ
ದುಜಿದೊಡ್ಡಿದರ್ಕಬಿಂಬದ
ತಜುಗಲದೆನಿಸುವುದು ಕಾಂಚನಪ್ರಾಕಾರಂ ೬೩

ಚಂ॥ ಇದು ತೆಜಿದಿರ್ದ ರಾಹುಮುಖಮೆಂಬ ವಿಶಂಕೆಯಿನಿಂದ್ರನೀಲರ
ತ್ನದ ತೆನೆಯಂಬುಗಂಡಿಯೊಳಗಂ ಪುಗಲಂಜಿ ನಭಂಬರಂ ಪೊದ
ಟ್ಪೊದವಿದ ಕೋಂಟೆಯಂ ಸುಗುಳ್ದು ಪೋಗಲಹಃಪತಿ ಬೇಜಿ ಬಟ್ಟೆಗಾ
ಣದೆ ತಡೆದಿರ್ಪನಲ್ಲಿ ಪೊಣರ್ವಕ್ಕಿಗೆ ಸಂತಸಮಾಗೆ ಸಂತತಂ ೬೪

ಕಂ॥ ಪ್ರತ್ಯಾಸನ್ನದೆ ನಡೆವಾ
ದಿತ್ಯನ ರುಚಿ ಪೊನ್ನ ಕೋಂಟೆಯಂ ಕರಗಿಸಿದಂ
ತತ್ಯುಚ್ಚಕೂಟಹತಿಯಿಂ
ನಿತ್ಯಂ ಪಜಿಪಜಿದು ಸಾರ್ವುವಲ್ಲಿಯ ಮುಗಿಲ್ಗಳ್ ೬೫

ಮುಗಿಲಟ್ಟಳೆಗಳ ಪಚ್ಚೆಯ
ಪೊಗರ್ವೆಳಗಿಡಿವಡರ್ವ ಪಾಂಗು ಗಗನಾಪಗೆಯಂ
ಜಗುನೆಯ ಕರ್ಮಡುವಜಿಸಲ್
ನೆಗೆವಂತೊಪ್ಪುವುದು ಕಣ್ಗೆ ತತ್ಪುರಜನದಾ ೬೬

ಕಂ|| ಪ್ರಣಿಹಿತಕಲಶಾವಳಿ ಕಿಂ
ಕಿಣಿಯೊಳ್ ಪೊಱಮಡುವ ಪುಗುವ ಜನದುಲಿಯುಲಿಯೊಳ್
ತೊಣೆಯಾಗೆ ನಗರಲಕ್ಷ್ಮಿಯ
ಮಣಿನೂಪುರದಂತೆ ಗೋಪುರಂ ಸೊಗಯಿಸುಗುಂ ೬೭

ತುಂಗತರಂಗಂ ಸುೞಿವ ತು
ರಂಗಂ ನೊರೆವಿಂಡು ನೃಪರ ಬೆಳ್ಗೊಡೆಯಾಗಲ್
ಗಂಗಾಪ್ರವಾಹಮೆನಿಪುದು
ಸಂಗತಜನಕಳಕಳಂ ಪ್ರತೋಳೀವಳಯಂ ೬೮

ಮ|| ಪುರಪೂರ್ವಾಪರ ದಕ್ಷಿಣೋತ್ತರ ದಿಶಾಖಂಡಂಗಳೊಳ್ ನೀಳ್ದು ಚಿ
ತ್ತರದಿಂದೊಪ್ಪುವ ಬೀದಿಗಳ್ ಸುಜನಚಿತ್ತಾಹ್ಲಾದಿಗಳ್ ಕೀರ್ಣಪು
ಷ್ಪರಸಾಮೋದಿಗಳೋಳಿಯೊಳ್ ಸ್ಫಟಿಕಲೀಲಾವೇದಿಗಳ್ ಗೋತ್ರಭಿ
ತ್ಪುರಸಂವಾದಿಗಳುದ್ಧತೋರಣಪತಾಕಾಸ್ತಂಭಸಂಭೇದಿಗಳ್ ೬೯

ಚಂ|| ದ್ವಿಗುಣಿಸೆ ಬಣ್ಣಿಪಿಂದುಮಣಿಮಂಡಪಕಾಂತಿಗಳಿಂ ಮುಗುಳ್ತ ಮ
ಲ್ಲಿಗೆಗೆ ಹರೀತರತ್ನ ಭವನಾಂಶುಗಳಿಂದೆಳವಾೞ್ಗಿಂದ್ರನೀ
ಲಗೃಹಮರೀಚಿಯಿಂ ಮಧುಕರಪ್ರಕರಕ್ಕರುಣಾಶ್ಮವೇಶ್ಮರ
ಶ್ಮಿಗಳಿನಶೋಕೆಗೀವುವು ಗೃಹೋಪವನಾವಳಿ ಕೇರಿಗೇರಿಯೊಳ್ ೭೦

ಕಂ|| ಬಾಂದೊಱೆಯೊಳೊಗೆದ ನೊರೆವಿಂ
ಡೆಂದು ಪುರಶ್ರೀಗೆ ಪಿಡಿದ ಬೆಳ್ಗೊಡೆಯ ತಗು
ಳ್ದೊಂದು ನೆಗೆತಂದ ಬೆಳ್ಮುಗಿ
ಲೆಂದೆನಿಸುವುವಭ್ರಚುಂಬಿ ಸೌಧತಳಂಗಳ್ ೭೧

ಪುರವರದ ಸೌಧತಳದೊಳ್
ಕರುವಿನ ಚಿತ್ರದ ಬಿಡಾಲಮಂ ಕಂಡೊಡೆ ಚೆ
ಚ್ಚರಮೆ ಪುಲಿಗೆತ್ತು ಚಂದ್ರನ
ಹರಿಣಂ ಬಿಱುತೋಡಿ ನಗಿಸದಿರ್ಕುಮೆ ಜನಮಂ ೭೨

ಮ|| ಕಳಶಂ ಕನ್ನಡಿ ರಂಗವಲ್ಲಿ ರಸವದ್ಗೀತಂ ವರಸ್ತ್ರೀಜನಂ
ತಳಿರುಯ್ಯಲ್ ಮಣಿದೀಪರಾಜಿ ಗುಡಿ ಮಾಂಗಲ್ಯಸ್ನಾನಂ ವೇದಿಕಾ
ವಳಯಂ ಪೂವಲಿ ಮತ್ತವಾರಣಮುದಂಚತ್ತೋರಣಂ ಚಿತ್ರಭಿ
ತ್ತಿಳತಾಮಂಟಪವೆಂಬಿವಿಲ್ಲದ ಜಿನಾವಾಸಂಗಳಿಲ್ಲೆಲ್ಲಿಯುಂ ೭೩

ಶಾ॥ ಶ್ರೀನೀಡಂ ಪುರಮಬ್ಧಿ ತತ್ತ್ವನಯಘೋಷಂ ಕರ್ಣಧಾರಂ ಮಹಾ
ಮಾನಸ್ತಂಭಕುಳಂ ಶಿಳಂ ಪರಮಧರ್ಮವ್ಯಾಪ್ತಿ ಬಿಣ್ಗುಂಡು ಭ
ವ್ಯಾನೀಕಂ ಶುಭಲಾಭಲಂಪಟಮನಸ್ಸಾಂಯಾತ್ರಿಕವ್ರಾತಮಾ
ಗೇನೊಪ್ಪಿರ್ಪುವೊ ಪೋಲ್ತು ದಿವ್ಯಜಿನಚೈತ್ಯಂಗಳ್ ಬಹಿತ್ರಂಗಳಂ ೭೪

ಮ॥ ಗುರುಧರ್ಮಶ್ರವಣಾವಭಾಸಿ ನಭದೊಳ್ ನಿಷ್ಕಲ್ಮಷಾಶಾಂಬರ
ಸ್ಫುರಿತಂ ಶಾರದದೊಳ್ ಸುಧಾಧವಳಧಾಮಂ ಸೋಮನೊಳ್ ಚಿತ್ರವಿ
ಚ್ಛುರಿತಂ ಮಂಡಿತಮಾನಿನೀನಿಟಿಲದೊಳ್ ನಿರ್ವಾಣಸೌಖ್ಯಪ್ರಿಯಾ
ನಿರತಂ ಸಾಮಜದೊಳ್ ಸಮಾನಮೆನಿಕುಂ ಪ್ರೋತ್ತುಂಗಚೈತ್ಯಾಲಯಂ ೭೫

ವ॥ ಎನಿಸಿದುತ್ತಂಭಿತ ಮಾನಸ್ತಂಭಮಕರತೋರಣವಿರಚಿತಂಗಳುಂ ಅನೇಕಮಣಿ ಕೂಟಕೋಟಿ ವಿಟಂಕಟಂಕಿತವಿಯತ್ತಳಂಗಳುಂ ಜಿನರಾಜಪೂಜಾನುರಕ್ತ ಪುರಜನಪ್ರವೇಶ ನಿಸ್ಸರಸಂಕೀರ್ಣಗೋಪುರಂಗಳುಂ ಅಂತರಾಂತರವಿಕೀರ್ಣ ಸೌವರ್ಣ ಕಳಶ ಮುಕುರ ಚಾಮರ ವ್ಯಜನ ಧೂಪ ದೀಪಾದ್ಯುಪಕರಣ ವಿಳಸಿತಂಗಳುಂ ಪ್ರಚಂಡಪಂಡಿತಸ್ಯಾದ್ವಾದವಿದ್ಯಾನುವಾದ ಶಬ್ದಾರ್ಥನಯಪ್ರಮಾಣವಾಣೀವಿಳಾಸಿಗಳುಮಪ್ಪ ಜಿನನಿವಾಸಂಗಳಲ್ಲದೆಯುಂ

ಕಂ॥ ಮನಸಿಜನ ಭುವನಸಮ್ಮೋ
ಹನ ವಿದ್ಯಾಪೀಠವೆನಿಸಿ ರಂಜಿಪುದು ವಿಯೋ
ಗಿನಿಕಾಯ ಕಾಳಕೂಟಂ
ಘನಕನಕಕವಾಟಮಲ್ಲಿ ಗಣಿಕಾವಾಟಂ ೭೬

ಉ॥ ಮೇನಕೆ ರಂಭೆಯೂರ್ವಶಿ ಸುಕೇಶಿ ತಿಲೋತ್ತಮೆ ಮಂಜಘೋಷೆಯೆಂ
ಜೀ ನೆಗಟ್ದಿಗ್ಗದಚ್ಚರಿಯರಚ್ಚರಿಯಪ್ಪ ವಿಳಾಸಮಂ ನಿಜ
ಭ್ರೂನಟನೈಕದೇಶಮೆ ತಱುಂಬಿದುದೆಂಬ ಸುರೂಪವಿಭ್ರಮೆ
ಶ್ರೀನಿಜಮಾಗೆ ರಂಜಿಸುವರಲ್ಲಿಯ ರೂಢಿಯ ಗಾಡಿಗಾರ್ತಿಯರ್ ೭೭

ವ॥ ಎನಿಪಗಣ್ಯ ಲಾವಣ್ಯ ಪಣ್ಯಾಂಗನಾಜನದ ಭಾಗ್ಯದ ಸೌಭಾಗ್ಯದ ನಯದ ಬೀಯದ ಚಾಗದುಪಭೋಗದೆಸಕದೊಳಂ ಬರ್ದುಗಾರ್ತಿಯರ ಬಹಿರಂಗಣಂಗಳೊಳ್ ಅಳವಟ್ಟ ಕಂಭಂಗಳಲ್ಲಿ ನೆಗಟ್ತೆಗೆತ್ತಿ ತೆತ್ತಿಸಿದ ಸೌಭಾಗ್ಯಘಂಟೆಗಳೊಳಂ ಸೌಧತಳಂಗಳ ವಿನೋದವೇದಿಕೆಯ ಮತ್ತವಾರಣದ ಮಲಂಗಂ ಮಲಂಗಿ ಚದುರ ಚಾಗದ ದಗುಂತಿಯಂ ಮೆಱೆವ ವಿವಿಧ ವಿಟರೊಳಂ ಚತುರಚತುರಿಕೆಯರೋದಿಸಿದ ಮದನಾಗಮಂಗಳಂ ಪದಂಗುಟ್ಟಿ ಪರಮಪಂಡಿತಂಗಳೆನಿಪ ಪಂಜರದ ಪಂಡಿತವಕ್ಕಿಗಳೊಳಮತಿಮನೋಹಾರಿಯಪ್ಪ ಸೂಳೆಗೇರಿಗಾಸನ್ನಮಾದ ವಿಪಣಿವೀಥಿಯೊಳ್

ಚಂ॥ ಬಳಸುವ ತುಂಬಿವಿಂಡು ಜಲದಾವಳಿ ಸೂಸುವ ಬೆಳ್ಮುಗುಳ್ ಘನೋ
ಪಳತತಿ ಮಾಳ್ಕೆಯಿಂದೊಸರ್ವ ಪುಷ್ಪರಸಂ ಮಱೆ ಮಾಳೆಗಾರ್ತಿಯ

ರ್ಗಳ ಕಡೆಗಣ್ಣ ಬೆಳ್ಪು ಕುಡುಮಿಂಚು ಕನನ್ಮಣಿಕಂಕಣಸ್ವನಂ
ಗಳೆ ಮೊಱಗಾಗೆ ಕಾರ್ಮೊಗಮನಲ್ಲಿಯ ಪೂಪಿನ ಸಂತೆ ತೋಱುಗುಂ ೭೮

ಕಂ॥ ಬಿರಯಿಗಳನಿಸಲನಂಗಂ
ಗರಲಂಬಿನ ಪೊದೆಯನಖಿಳವನದೇವತೆಯರ್
ವಿರಚಿಸಿ ನೀಡಲ್ ಬಂದಂ
ತಿರಲೆಸೆವರ್ ಪುಷ್ಪಮಾಲಿಕಾಧಾರಿಣಿಯರ್ ೭೯

ಚಂ॥ ಶ್ವಸಿತದ ಕಂಪು ಕಂಪನಭಿವರ್ಧಿಸೆ ಬಣ್ಣದ ಸೊಂಪು ಬಣ್ಣವೇ
ಱಿಸೆ ಮಧುರಸ್ಮಿತಾಂಶು ಮಧುರಸ್ಮಿತಲೀಲೆಯನೀಯೆ ಮಾಲೆಗೇ
ನೆಸೆದುವೊ ಮಾಲೆಗಾರ್ತಿಯರ ವರ್ತನೆ ಮಾಱುಗಳಂತೆ ಮಾಱುಗಳ್
ರಸಿಕರನೊತ್ತೆ ಪಾಸಿಗಮನೆತ್ತುವ ಚೆಲ್ವಗೆಯೆತ್ತೆ ಚಿತ್ತಮಂ ೮೦

ವ॥ ಅದಲ್ಲದೆಯುಂ ಅತಿಮಧುರಪೂಗಫಲಂಗಳೊಳಂ ಸರಸನಾಗವಲ್ಲೀದಳಂಗಳೊಳ
ಮೆಸೆವ ತಾಂಬೂಲಿಕಾನಿಕೇತನಂಗಳೊಳ್

ಕಂ॥ ಪೊಸಮುತ್ತಿನ ಸಿಪ್ಪುಗಳಂ
ತೆಸೆದಪುವೆಂಬವರ ನೀರಸೋಕ್ತಿಯ ಪುರುಳೇಂ
ವಸುಧೆಗಿೞಿದಿಂದುಕಳೆಗಳ
ಪೊಸಬೆಳಸೆನಿಪುವು ಪೊದಟ್ಟ ಬೆಳ್ಪಿಡಿದೆಲೆಗಳ್ ೮೧

ವ॥ ಅದಲ್ಲದೆಯುಂ

ಕಂ॥ ವಿರಹಭರೋತ್ಕಂಠಮನೋ
ಹರಿಯ ಕಪೋಳಂಗಳಂತೆ ನಿಬ್ಬರಿಸಿದ ಬೆ
ಳ್ಕರಿಸಿದೆಲೆಗಳಿನದೆಲೆಗಳ
ಬರಿಸುವುದನುನಯದೆ ಪೆಂಟೆ ಗೆಂಟರ ವಿಟರಂ ೮೨

ವ॥ ಅದಱ ಕೆಲದೊಳ್

ಕಂ॥ ನೆರೆವ ದಳದರೆವ ಸಾಂದಿನ
ಮೊರೆವಳಿಗಳ ಪರೆವ ಕಂಪನೆರೆವನಿಳನ ಮು
ಯ್ಯೊರೆವ ವಿಟಭೋಗಿಗಳ ವಿ
ಸ್ತರದಿಂ ಸೊಗಯಿಪುವು ಘಟ್ಟವಳರಂಗಡಿಗಳ್ ೮೩

ವ॥ ಅದಲ್ಲದೆಯುಂ

ಕಂ॥ ಉಂಡೊಡೆ ಕಿಡುವುದು ಪಿರಿದೇಂ
ಕಂಡೊಡೆ ಪೆಸರ್ಗೊಂಡೊಡೊರ್ಮೆ ನೆನೆದೊಡೆ ಕಿಡುಗುಂ
ಚಂಡಾಮಯಮೆನಿಪೌಷಧ
ಮಂಡಳಿಯಿಂ ಸೇವ್ಯಮಲ್ಲಿ ಗಂದಿಗವಸರಂ ೮೪

ಇದು ಪೂವಲಿಗೆದರ್ಜಿದ ನೀ
ಲದ ರಂಗಂ ಭಗಣಬಿಂಬಚುಂಬಿತಯಮುನಾ
ಹ್ರದಮೆನಿಪುದುಚಿತಮಣಿಗಳ
ಪುದುವಿಂ ಮಣಿಗಾಜಿವಸರಮಸಿತಾಂಬರದೊಳ್ ೮೫

ತರಳ॥ ಕಮಳವೃಂದಮನಾವಿರಲ್ ಪಗಲುಂ ಪಳಂಚಲೆವೀ ಪುರೋ
ತ್ತಮವಧೂವದನೇಂದುಗಳ್ಕಿದುವುಂತು ಮಾಣಿಪ ಶಕ್ತಿಯಿ
ಲ್ಲಮಗವಂ ಕೆಳೆಗೊಂಡು ಮಾಣಿಪೆವೆಂದು ಬಂದ ದಿನೇಶರಂ
ತಮರ್ದ ಭಂಡದ ಸೊಂಪು ಪೊಂಪುಟಿ ಕಂಚುಗಾಜಿರ ಪಟ್ಟದೊಳ್ ೮೬

ಕಂ॥ ಧನದನ ಕಾಂಚನಮಿವರನು
ದಿನಮೊರೆವ ಸುವರ್ಣರಜದ ತೂಕಕ್ಕೆ ವರಲ್
ಕನಸಿನೊಳಮಾಜಿದೆನಿಸುವ
ಧನಪತಿಗಳ ಬಚ್ಚ ರಾಪಣಂಗಳಳುಂಬಂ ೮೭

ಉ॥ ವಲ್ಲಭಮಂತ್ರತಂತ್ರ ಪರಿರಕ್ಷೆಯಿದೆಂದುಮಬಾಧ್ಯಮಿಂತಿದೆಂ
ದಿಲ್ಲಿಯೆ ರತ್ನಮಂ ಧರಣಿ ಬಯ್ತಳೊ ಮೇಣ್ ವಡಬಾಗ್ನಿಗಳ್ಕಿ ತ
ನ್ನಿಲ್ಲಿಯ ರತ್ನಮಂ ಕಳಿಪಿತೋ ಕಡಲೀಪುರಿಗೆಂಬ ಮಾತನ
ಲ್ಲಲ್ಲಿ ನಿಮಿರ್ಚುಗುಂ ವಿಪಣಿವೀಧಿಯೊಳೊಪ್ಪುವ ರತ್ನರಾಶಿಗಳ್ ೮೮

ವ॥ ಅದಲ್ಲದೆಯುಂ

ಕಂ॥ ನಾನಾಜನಬಹಳತೆಯಿಂ
ನಾನಾಮಣಿಕನಕವಸ್ತುವಿಸ್ತೀರ್ಣತೆಯಿಂ
ನಾನಾಕ್ರಯವಿಕ್ರಯದಿನ
ನೂನಮೆನಲ್ ಪಣ್ಯಮಾರ್ಗಮಾರ್ಗಂ ಸೇವ್ಯಂ ೮೯

ವ॥ ಆ ವಿಪಣಿವೀಧಿಯೆಂಬ ಬಿಸಜನಾಳಕ್ಕೆ ವಿಚಿತ್ರಪತ್ರದಂತೆ ರಾಜಭವನಮಂ ಬಳಸಿ

ಮುದ್ರಿಕೆ॥ ನಗರನಾಯಕನುನ್ನತಿ ತನ್ನಂ ಮುನ್ನಲೆಯುತ್ತಿರೆ ಮಂದರಂ
ಬಗೆಯೊಳೊಡ್ಡಿಸಲಣ್ಮದೆ ಸೇವಾವೃತ್ತಿಗೆ ಪೊಣ್ಬು ನಿತಾಂತಮೋ
ಲಗಿಸಲಟ್ಟಿದ ಸಾನುವದೆತ್ತಂ ಬಂದೆಳಸಿರ್ಪುದೆಂಬಿನಂ
ಸೊಗಯಿಪ್ಪುದು ಪೊಮ್ಮದಿಲುಗ್ರಾಂಶೂದ್ಗತಮಾಗಿರೆ ಕೆಮ್ಮುಗಿಲ್ ೯೦

ವ॥ ಅಲ್ಲಿಂದೊಳಗೆ ವಿಚಿತ್ರಚೀನಾಂಬರಾವಳಂಬಿತಸಂಭೃತಮಾಗಿ

ಚಂ॥ ಜಲಧಿಯೊಳಿಪ್ಪ ಕಾಲಮೊಡಗೂಡಿದ ಬಂಧುಗಳಪ್ಪ ರತ್ನಮಂ
ಡಳಗಳಿಳೇಶಮಂದಿರದೊಳಿರ್ದೊಡವಂ ನೆನೆದಟ್ಟಿಜೆಂದೆ ಬಂ
ದೊಳಪುಗಲಾಜದಾ ವರುಣವಾಹನಮೀಕ್ಷಿಸಲೇಜೆ ನಿಂದುದುದ್ದ
ದೊಳೆನೆ ರಂಜಿಕುಂ ಮಕರತೋರಣಮೀಕ್ಷಣ ಸೌಖ್ಯಕಾರಣಂ ೯೧

ವ॥ ಮತ್ತಮನವರತವೋಲಗಿಸಲೆಂದೊಳಪುಗುವ ಮಂಡಳಿಕ ದಂಡನಾಥ ಸಾಮಂತವೃಂದದಂದಣದ ಸತ್ತಿಗೆಯ ಸಂದಣಿಯಿನೊಂದಿದುತ್ತರಾಭಿಮುಖಮಪ್ಪ ಬಾಗಿಲ್ವಾಡಮುಂ ಮದಪರಿಮಳಕ್ಕೆಳಸಿ ಬಳಸುವಳಿವಾಲೆ ಮೇಲೆ ಪೀಲಿದಟ್ಟೆಯ ಲೀಲೆಯನೊಡರ್ಚೆ ಬಾಳ್ಗಂಬದೊಳನೇಕನಿಗಳನಿಯಮಮಂ ತಳೆದು ಗರಳಗಳನಿಂದೆ ಸೆಜೆವಟ್ಟ ಗಜದನುಜನಂತಿರ್ದ ಪಟ್ಟವರ್ಧನಗಜೇಂದ್ರಮಿರ್ಪಾನೆಶಾಲೆಯುಂ ಜವದ ಜಗಳಕ್ಕೆ ಪುರುಡಿಸುವ ಗರುಡನಂ ಗಜಬುವಂತೆ ದುಂದುಭಿಗಭೀರಹೇಷಾರವಂಗಳೊಗೆಯೆ ಸೊಗಯಿಸುವ ನಿತ್ಯನೀರಾಜನವಿರಾಜಮಾನವಾಜಿರಾಜಿಗವಕಾಶಮಪ್ಪ ಮಂದುರಮುಂ ಒಳಗೆ ತಳತಳಿಸಿ ಪೊಳೆವ ಕೆಯ್ದುಗಳ ಬಳಗಮಂ ತಳೆದ ವಿಷಮವಿಷಧರಪೂರ್ಣಮಪ್ಪ ವಿಕೀರ್ಣಮಪ್ಪ ಪಾತಾಳಕುಹರದಂತಗುರ್ವಿಸುವ ಶಸ್ತ್ರಶಾಲೆಯುಂ ಸುರುಚಿರಪರಾರ್ಧ್ಯಮಣಿಕನಕ ವಸ್ತುವಿಸ್ತಾರಮೆಸೆಯೆ ನಿಜಕವಾಟಘಟಿತಕುಳಿಶಮಣಿಕಿರಣದಿಂ ಹಿಮಕಿರಣವಿಭೂತಿಯಂ ನಗುವಂತೆ ರಂಜಿಸುವ ಕೋಶಭವನಮುಂ ಕುಬ್ಜ ವಾಮನ ಕಿರಾತ ವರ್ಷಧರ ಬರ್ಬರ ಪ್ರಾಯಪುರುಷಪರಿವೃತೆಯರಾಗಿ ಗಿಡುಗಳ ಕಂಟಕಿತಜರತ್ತರುಗ ಳೊಳಗೆಳಲತೆಗಳಂತೆ ಕಣ್ಗೊಳಿಪ ಶುದ್ಧಾಂತಕಾಂತೆಯರಿನೊಪ್ಪುವಂತವುರದಾವಾಸಮುಂ ನೃಪವಿಭೂತಿಯಂ ಕಣ್ಣಾರೆ ನೋಟ್ಪ ಜಲದೇವಿಯರ್ಕಳಲರ್ಗಣ್ಣ ಬಳಗಂಗಳಂತಲರ್ದ ಕುಮುದವನಂಗಳಿಂ ಮನಂಗೊಳಿಪ ಭವನದೀರ್ಘಿಕಾನಿಕರಮುಂ ನಿಜಸ್ಫುರಿತ ಹರಿತಕಿರಣಂಗಳಿಂ ಕಳಧೌತವಿಳಸಿತ ಪ್ರಾಸಾದ ಪಙ್ತೆಯಿಂ ಮಾಯಂ ಮಾಬ್ಟುಪವನಂಗಳುಮಳುಂಬಮಾಗೆ ತದನಂತರೋದ್ದೇಶದೊಳ್

ಚಂ॥ ಬರೆವೊಡೆ ಚೀರಫಟ್ಟಿ ಕರುಪಿಟ್ಟಪನೆಂದೊಡೆ ಪದ್ಮಯೋನಿ ಕಂ
ಡರಿಪೊಡೆ ವಿಶ್ವಕರ್ಮನಜೆಗುಂ ನೆಜೆಯಂ ಪೆಜನಿಂತಿದಂ ಸುರೇ
ಶ್ವರಭವನಕ್ಕೆ ತಾನೆ ಪಡಿಚಂದಮಿದೆಂಬಿನ ಮಚ್ಚರಕ್ಕೆ ತಾ
ಯ್ಗರು ಕರುಮಾಡವೊಪ್ಪುವುದಳಂಕೃತ ಸಪ್ತತಳಂ ನಿರಾಕುಳಂ ೯೨

ಅದು ಪೊಸಪೊನ್ನಘಂಟೆಯ ದುಕೂಲವಿತಾನದ ಮೌಕ್ತಿಕಪ್ರಲಂ
ಬದ ಬಹುಭೂಮಿಕಾಗಣದ ಕುಟ್ಟಿಮರಂಗದ ಚಿತ್ರಭಿತ್ತಿಭಾ

ಗದ ನವರತ್ನಪುತ್ರಿಕೆಯ ಚಿನ್ನದ ಕಂಬದ ರಮ್ಯಜಾಳಮಾ
ರ್ಗದ ವಿಳಸತ್ಕವಾಟದ ವಿಚಿತ್ರವಿಭೂತಿಗೆ ಜನ್ಮಮಂದಿರಂ ೯೩

ಕಂ॥ ಲಲನೆಯರ ಬಳ್ಳಿಮಾಡದ
ನೆಲಮಾಡದ ಕನ್ನಮಾಡದೊದವಿದ ಬಳಸಿಂ
ನೆಲಸಿ ಕರುಮಾಡಮಿಳಿಪುದು
ಕುಲಗಿರಿಗಳ್ ಬಳಸಿ ನಿಂದ ಮಂದರಗಿರಿಯಂ ೯೪

ಚಂ॥ ಸೊಗಯಿಪ ನಾಟ್ಯಶಾಲೆಗೆ ವಿರಾಜಿಪ ಮಜ್ಜನಶಾಲೆಗೊಳ್ಪಿನಿಂ
ಸೊಗಯಿಪ ಮಂತ್ರಶಾಲೆಗೆಸೆವೋಲಗಶಾಲೆಗೆ ರಂಜಿಪಾನೆಶಾ
ಲೆಗೆ ಮಿಸುಪಸ್ತ್ರಶಾಲೆಗಮದೊರ್ಪುವ ಜೇವಣಶಾಲೆಗುನ್ಮಣಿ
ಸ್ಥಗಿತತಟಾಂಶುವಿಂದಮದು ಮಾಳ್ಪುದಕೃತ್ಯವಿಚಿತ್ರಶೋಭೆಯಂ ೯೫

ಮ.ಸ್ರ॥ ಅದಱೊಳ್ ಸಾಮ್ರಾಜ್ಯಲಕ್ಷ್ಮೀವಿಳಸಿತವಿಪುಳೋರುಸ್ಥಳಂ ವೀರಲಕ್ಷ್ಮೀ
ಸದನಪ್ರೋಚ್ಚಂಡದೋರ್ಮಂಡನನಮಳಿನಸತ್ಯೋಕ್ತಿ ಲಕ್ಷ್ಮೀವಿಭಾಸ್ವ
ದ್ವದನಂ ಸತ್ಕೀರ್ತಿಲಕ್ಷ್ಮೀಪರಿಚಿತ ನಿಖಿಲಾಶಾಮುಖಂ ದಾನಲಕ್ಷ್ಮೀ
ಮುದಿತಾರ್ಥವ್ರಾತನಿರ್ಪಂ ನೃಪಕುಳತಿಲಕಂ ಪದ್ಮನುತ್ಸಾಹಸದ್ಮಂ ೯೬

ಚಂ॥ ಅತನುಸಮರ್ಥತಾಪಮೊಡಗೂಡಿದ ಕೂಡದ ಪೆಂಡಿರೊಳ್ ಕುಳ
ಕ್ಷಿತಿಸಹವರ್ತನಂ ಪದನತಾನತಭೂಪರೊಳುದ್ಧದಾನಸಂ
ಗತಿ ಬಹುಶಿಷ್ಟದುಷ್ಟರೊಳೊಡಂಬಡುತಿರ್ಪನಿದೇನೊ ಚಿತ್ರಮೀ
ಕ್ಷಿತಿಪಚರಿತ್ರಮೆನ್ನದವರಾರ್ ಗಳ ನಾಬ್ಜಭುವಂಶಮೇರುವಂ ೯೭

ಗದ್ಯ

ಇದು ಸಮಸ್ತಭುವನಜನಸಂಸ್ತುತ ಜಿನಾಗಮ ಕುಮುದ್ವತೀ ಚಾರುಚಂದ್ರಾಯಮಾಣ ಮಾನಿತ ಶ್ರೀಮದುಭಯಕವಿ ಕಮಳಗರ್ಭ ಮುನಿಚಂದ್ರಪಂಡಿತದೇವ ಸುವ್ಯಕ್ತಸೂಕ್ತಿ ಚಂದ್ರಿಕಾಪಾನ ಪರಿಪುಷ್ಟಮಾನಸ ಮರಾಳ ಗುಣವರ್ಮ ನಿರ್ಮಿತಮಪ್ಪ ಪುಷ್ಪದಂತ ಪುರಾಣದೊಳ್ ನಗರ ಸಂಪದ್ವರ್ಣನಂ ದ್ವಿತೀಯಾಶ್ವಾಸಂ

ತೃತೀಯಾಶ್ವಾಸಂ

ಕಂ॥ ಶ್ರೀಕಾಂತೆ ತನ್ನುರಃಪ
ದ್ಮಾಕರದೊಳ್ ಹಂಸಿಯಂತೆ ನೆಲಸಿರೆ ಪುಣ್ಯ
ಶ್ರೀಕಾಂತನೆಸೆದನಖಿಳ ಕ
ಳಾಕಾಂತಂ ಪ್ರಭುಗುಣಾಬ್ಜವನಕಳಹಂಸಂ ೧

ಧರೆಯಂ ಸ್ಥಿರೆಯೆನಿಸಿದನಿಂ
ದಿರೆಯಂ ಪದ್ಮಾಲಯಾಖ್ಯೆಯೆಂದೆನಿಸಿದನಾ
ಸರಸತಿಯಂ ಚತುರಾನನ
ಪರಿಚಿತೆಯೆನಿಸಿದನದೇಂ ಸಮರ್ಥನೊ ಪದ್ಮಂ ೨

ಚಂ॥ ಪರಿವೃತ ರಾಜಹಂಸಕೃತಸೇವೆಯುಮುದ್ಗತಮಾದ ಸದ್ಗುಣೋ
ತ್ಕರಮುಮನೂನಲಕ್ಷ್ಮಿ ನೆಲೆಗೊಂಡಿರವುಂ ದೊರೆವೆತ್ತು ತನ್ನೊಳೊಂ
ದಿರೆ ಜಡಸಂಗಮುಂ ಪುದಿದ ಕಂಟಕಮುಂ ರಜಮುಣ್ಮಿ ತೋರ್ಪುದುಂ
ಪರಿಕಿಪೊಡಿಲ್ಲನಿಪ್ಪಸಕಮೇಂ ದೊರೆಯೆಂದೆನಿಸಿತ್ತೊ ಪದ್ಮನಾ ೩

ತೆಗೆದತಿನಿಷ್ಠುರಂ ತಳೆಯಲಾ ಕಮಠಂ ವಿಷವಕ್ತ್ರನಾಗಿ ನಾ
ಲಗೆಯೆರಡಾದ ವಾಸುಗಿ ಕರಂ ತಲೆವಾಗಿಯುಮಾವಗಂ ಮದಂ
ಜಗುಟದಿಭಂಗಳಾಂತ ಪೊರೆ ನಿಲ್ಲಳೆ ವಕ್ಷದ ಲಕ್ಷ್ಮಿ ಕೂರ್ತು ಪ
ತ್ತುಗೆಗೊಳೆ ತಳ್ತು ತೋಳೊಳೆಸೆದಳ್ ಧರಣೀವಧು ಪದ್ಮಭೂಪನಾ ೪

ಕಂ॥ ಸ್ವವಶಮನಿರದಿಂದ್ರಿಯವ
ರ್ಗವನೆಡಙ್ದರಾತಿವರ್ಗಮುಮನೆಯ್ದಿಸಿ ತ
ದ್ವಿವಿಧವಿಷಯೋಪಭೋಗಮ
ನವಿರುದ್ಧಕ್ರಮದೆ ಸಲಿಸಿದಂ ನೃಪನುಚಿತಂ ೫

ಸತ್ವಂ ಸಾತ್ವಿಕಗುಣಕೆ ಮ
ಹಾತ್ಯಾಗಂ ರಾಜಸಕ್ಕೆ ವಿಕ್ರಮಮಧಿಕೋ
ದ್ಧತ್ಯಂ ತಮಕ್ಕೆ ನೆಲೆಯಾ
ಯ್ತತ್ಯಂತಂ ನೃಪನಿದೇಂ ತ್ರಿಮೂರ್ತ್ಯಾತ್ಮಕನೋ ೬

ನಯದೊದವಿಂ ನೆಗಟ್ದಿಪನಪ
ಜಯಮಮಂ ನೃಪತಿಲಕನಾಱುಮೊಳ್ವಗೆಗಳ್ಗಾ
ರಯೆ ಗೆಲ್ಲನೆ ನಯಶೌರ್ಯ
ದ್ವಯದಿಂ ಪೊಱವಗೆಯ ರಾಜಕದ್ವಾದಶಮಂ ೭

ರಿಪುರಾಜಮಂಡಳಂ ಕುಂ
ದಿ ಪದ್ಮತೇಜದಿನದೊರ್ಮೆಯುಂ ಪೆರ್ಚದು ಭಾ
ವಿಪೊಡೆಯ್ದಿ ಮಿತ್ರಮಂಡಳ
ಮುಪಚಯಮಮಂ ತಾಳ್ವುದಂತದುಚಿತಂ ಚಿತ್ರಂ ೮

ವಸುವಂ ಸನ್ಮಾರ್ಗದೊಳಾ
ರ್ಜಿಸುವಂ ವರ್ಧಿಸುವನೆಯ್ದೆ ರಕ್ಷಿಸದೀವಂ
ನಿಸದಂ ವಿಬುಧರ್ಗಿದು ಭಾ
ವಿಸೆ ಚಿತ್ರಂ ರಾಜವೃತ್ತಮಾಯ್ತನ್ಯೂನಂ ೯

ಪ್ರಜೆಗಳದೃಷ್ಟೋಪಾದಾ
ನಜದುಃಖಪ್ರಾಪ್ತಿಗಾವಗಂ ಪ್ರತಿಕೃತಿಯಂ
ಸೃಜಿಯಿಸುವ ನೃಪಂ ಸ್ವನಿಮಿ
ತ್ತಜದುಃಖಮನೆಂತುಮೆಂದುಮೇಂ ಮಾಡುಗುಮೇ ೧೦

ಗುಣಮೇಱಿದ ಧರ್ಮಂ ಮಾ
ರ್ಗಣತತಿಯಂ ಲಕ್ಷ್ಯಸಿದ್ಧಿಯೊಳ್ ಕೂಡಿ ನೃಪಾ
ಗ್ರಣಿಯನಿಹಸೌಖ್ಯದಿಂದಮೆ
ತಣಿಪುದದೆ ಪರಮಸುಖೈಕಕಾರಣಮಲ್ತೇ ೧೧

ಧರೆಯೊಳಗುಳ್ಳಖಿಲಾರ್ಥಿಗ
ಳೆರೆದರ್ಥಮನೇನನಿತ್ತೊಡಂ ತವೆಯದ ಮೆ
ಯ್ಸಿರಿಯುಂ ಸಿರಿಯುಂ ಪದ್ಮಂ
ಗೆರವೇ ನೃಪನಿಧಿಯೆನಿಪ್ಪ ಪೆಸರನ್ವರ್ಥಂ ೧೨

ಚಂ॥ ವಿತರಣಲಕ್ಷ್ಮಿಗಿತ್ತು ಬೆರಲಂ ಜಯಲಕ್ಷ್ಮಿಗೆ ಮುಯ್ವನಿತ್ತು ಸಂ
ಗತಮೆನೆ ಲಕ್ಷ್ಮಿಗಿತ್ತು ರಮನಾನನಮಂ ವರವಾಣಿಗಿತ್ತು ಕೂ
ರ್ಪತಿಶಯಮಾಗೆ ಮಾಡಿ ಕಡುಗೂರ್ತ ಯಶೋವಧುಗೇಕದೇಶಸಂ
ಸ್ಥಿತಿಯುಮನಿತ್ತನಿಲ್ಲ ನೃಪನೊಲ್ದಬಲಾವಳಿಗಾಸೆಮುಟ್ಟದೇ ೧೩

ಮ.ಸ್ರ॥ ಜಗಮೆಲ್ಲಂ ಗಂಗೆಯಂ ಮಿಂದುದೊ ದುಗುಲದೆ ಮೇಲ್ಕೊಂಡುದೊ ಕೂಡೆ ಮೆಯ್ಗ
ಣ್ಬುಗಳಂ ಶ್ರೀಖಂಡಕರ್ಪೂರದೆ ರಚಿಸಿತೊ ಮುಕ್ತಾಳಿಯಂ ತೊಟ್ಟುದೋ ಮ
ಲ್ಲಿಗೆಯಂ ಸೂಡಿತ್ತೊ ಪೀಯೂಷದೆ ತಣಿದುದೊ ಬೆಳ್ದಿಂಗಳೊಳ್ ಸಂದುದೋ ಸಂ
ದೆಗಮೇನೆಂಬಂತದೇಂ ಪರ್ವಿದುದೊ ನೃಪನತಿಸ್ಫೂರ್ತಿಕೀರ್ತಿಪ್ರತಾನಂ ೧೪

ಮ॥ ನಿಡುದೋಳುರ್ವಿದ ಮುಯ್ವು ಕೊರ್ವಿದ ಪೆಗಲ್ ತಾಮ್ರಾಧರಂ ನಾಡೆ ಕೆಂ
ಪಡೆಗೊಂಡಾಯತನೇತ್ರ ಪೊಡ್ಡಿದ ಸೊಸಲ್ ವಿಸ್ತೀರ್ಣವಕ್ಷಸ್ಥಲಂ
ಪೊಡೆವುತ್ತುಂಗಕಟೀತಟಂ ಕಡುಪುವೆತ್ತೂರುದ್ವಯಂ ಕೂರ್ಮೆಯಂ
ಪಡೆಗುಂ ಲಕ್ಷ್ಮಿಯೊಳಿನ್ನದಾರ್ ನೃಪನ ರೂಪಿಂ ಸೋಲದಬ್ಜಾಕ್ಷಿಯರ್ ೧೫

ಕಂ॥ ಎಡೆಗೊಂಡಿರೆ ತನ್ನಯ ತೋ
ಳೆಡೆಯಂ ಜಯಲಕ್ಷ್ಮಿ ಮೊಗದ ಪೊಗರಿಂದತಿನೀ
ಳ್ದೊಡನೊಡನೆ ನೃಪನ ಜಡಿಪದೆ
ನಡುಗುವಳಸಿಕಾಂತೆ ಕೂರ್ಪಿದೇಂ ಕೈವಸಮೋ ೧೬

ಚಂ॥ ಹರಿ ಮದಸಿಂಧುರಂಗಳ ಜಯಕ್ಕೆ ನೆರಂ ಮೃಗಯೂಥಮೆಂದವಂ
ಪೊರೆವುದೆ ಚಂದ್ರಸಂಧತಮಮಂ ಕಿಡಿಸಲ್ ನೆರಮೆಂದು ತಾರಕೋ
ತ್ಕರಮನದೆಂದುಮುಜ್ಜಳಿಪನೇ ರಿಪುಸಂತತಿಯಂ ಗೆಲಲ್ ನೃಪಂ
ಪೊರೆವನೆ ಚಾತುರಂಗಬಲಮಂ ಪುಸಿ ಪೆರ್ಮೆಗೆ ಕಾಣ ನಿಶ್ಚಯಂ ೧೭

ಮ॥ ಕದನಕ್ಷೇತ್ರದೊಳಾಂತ ಶತ್ರು ಪಿಡಿಪಟ್ಟಂ ಕೂಡೆ ಕಣ್ಗೆಟ್ಟ ನೋ
ಡಿದನಟ್ಟಾಡಿದನೆಂಬ ಮಾತವನ ವಂಶಕ್ಕೆಯ್ದುಗುಂ ತಳ್ತು ಕಾ
ದಿದನಾದಂ ಸರಿವೋದನೆಂಬ ನುಡಿ ತಾನಿಲ್ಲೆಂದೊಡೆಲ್ಲಿತ್ತೊ ಗೆ
ಲ್ಲದ ಮಾತಿಂತುಟು ಪದ್ಮರಾಜನರಿದುಷ್ಪ್ರಾಪಪ್ರತಾಪೋದಯಂ ೧೮

ಉ॥ ಆತನ ದಿಗ್ಜಯೋದ್ಯಮಮನಾಂ ಮಿಗೆ ಪೇಳದೊಡೇನೊ ಶತ್ರುಸಂ
ಘಾತಮಿದಿರ್ಚೆ ದೀಪ್ತಿಗಿದಿರಾದ ಪತಂಗದ ಮಾಳ್ಕೆಯಾದುದುಂ
ಭೀತನೃಪಾಲರಿತ್ತೆರೆದುದುಂ ಮಿಗೆ ಬಾಳ್ವುದು ಮುಂತೆ ಕೈತವೋ
ಪೇತರಡರ್ತು ಬೆರ್ಚೆ ಬೆಸಕೆಯ್ದು ಬಳಲ್ದುದುಮೆಯ್ದೆ ಪೇಳವೇ ೧೯

ಕಿನ್ನರಗಾಣರಾ ನೃಪನ ಗೀತಮನೊಪ್ಪಿರೆ ಪಾಡುವಾಗಳುಂ
ತನ್ನ ಸುಖಾಶ್ರುವಿಂದೆಸೆಯೆ ನೇತ್ರಸಹಸ್ರವಳಲ್ದು ಕೇಳುತಾಂ
ಪನ್ನಗರಾಜನಾಗೆ ಸಫಳಂವಗಳ ಜನ್ಮಮೆನುತ್ತೆ ವಾಸವಂ
ಮನ್ನಿಸಿ ಮಾತನಾಡಿ ಪರಿತೋಷಿಸುವಂ ದಿವಿಜಪ್ರಧಾನರಂ ೨೦

ಉ ಸಮದಾರಾತಿಗಳಂ ಪಡಲ್ವಡಿಸಿ ಭೀತವ್ರಾತಮಂ ಕಾಯ್ದು ಕಾ
ರ್ಯಮನಾಳೋಚಿಸಿ ಮಾಡಿ ಮಾಡಿದನಿತುಂ ಧರ್ಮಾರ್ಥಕಾಮಂಗಳಂ

ಕ್ರಮದಿಂ ಪೆರ್ಚಿಸಿ ಪೆತ್ತು ನಿತ್ಯಸುಖಮಂ ಸತ್ಕೀರ್ತಿಯಂ ತಾಳ್ದು ರಾ
ಜ್ಯಮನಾರಾಳ್ದರೊ ಪದ್ಮರಾಜನವೊಲುರ್ವೀಭಾಗದೊಳ್ ಭೂಭುಜರ್ ೨೧

ವ॥ ಮತ್ತಮಾ ನರೇಂದ್ರನನೂನದಾನವಿಧಾನನಾಗಿಯುಮುದಿತಮದೋದ್ರೇಕನಲ್ಲದ ರಾಜದಿಕ್ಕುಂಜರನುಂ ಅಹೀನವೃತ್ತಿಪ್ರವರ್ತಕನಾಗಿಯುಂ ವಿನತಾನಂದವಿದ್ವೇಷಿಯಲ್ಲದ ಭೋಗೀಶ್ವರನುಂ ಜಗತ್ಪ್ರೀತಿಕರಪರಿಗೃಹೀತನಾಗಿಯುಂ ದೋಷಾನುವರ್ತನೆಗೊಳಗಾಗದ ಕಳಂಕರಾಜನುಂ ಅತುಳಪ್ರತಾಪತೇಜಃಸಮಾಜನಾಗಿಯುಂ ತಮಃಪ್ರಮೋಷಿತನಲ್ಲದ ಜಗನ್ಮಿತ್ರನುಂ ಅಗಣ್ಯಲಾವಣ್ಯ ಪೂರ್ಣರೂಪನಾಗಿಯುಂ ನಿಮಗ್ನಕುಲಗೋತ್ರನಲ್ಲದ ಮಹಿಜೀವನಾಧಾರ ಭೂತನುಂ ನಿರಂತರಲಕ್ಷ್ಮೀನಿವಾಸನಾಗಿಯುಂ ವಿರಥವೃತ್ತಿಯೊಳ್ ವರ್ತಿಸದ ಪುರುಷೋತ್ತಮನುಂ ಅಧಿಗತ ಸ್ವಾಮಿಸಂಪತ್ಪ್ರಮೋದಿತನಾಗಿಯುಂ ದುರ್ಗಾಶ್ರಯವಿಗ್ರಹನಲ್ಲದ ವಿಭೂತಿಭೂಷಿತನುಂ ಸರಸ ಸರಸ್ವತೀಸುಂದರಮುಖಾರವಿಂದನಾಗಿಯುಂ ರಜೋರಂಜಿತ ಮೂರ್ತಿಯಲ್ಲದಾ ಲೋಕೇಶನುಂ ವಿಪಕ್ಷಭೂಭೃತ್ಪಕ್ಷವಿಚ್ಛೇದಿಯಾಗಿಯುಂ ತ್ರಿದಿವಪರಿಪ್ರಾಪ್ತ ಪರಮೈಶ್ವರ್ಯನಲ್ಲದ ವಿಬುಧಪತಿಯುಂ ಸಮವರ್ತಿಯಾಗಿಯುಂ ಕೃತಾಂತನಲ್ಲದ ಧರ್ಮರಾಜನುಂ ಅನೇಕರತ್ನಾಕರಾಧಿಪತಿಯಾಗಿಯುಂ ಜಡಾಶ್ರಯನಲ್ಲದ ಪ್ರಚೇತಸನುಂ ಶಿವಾನುಬಂಧಸಯುಕ್ತನಾಗಿಯುಂ ದಶಾನನಾಸ್ತಂಗತಪ್ರಾಭವನಲ್ಲದ ಪುಣ್ಯಜನೇಶ್ವರನುಮೆನಿಸಿ ದೇವತಾಸ್ವರೂಪನಾದನಾ ಮಹೀಕಾಂತಂಗೆ

ಕಂ॥ ಶ್ರೀಧರನೆನೆ ಸಕಳ ಧರಿ
ತ್ರೀಧರನೆನೆ ಸಂದದೊಂದು ಸೊಬಗಿಂ ವನಮಾ
ಲಾಧರನಾದನೆನಲ್ ಮಧು
ರಾಧರೆ ವನಮಾಲೆ ವಲ್ಲಭಾಗ್ರಣಿಯಾದಳ್ ೨೨

ಮ.ಸ್ರ॥ ಯುವತೀನಿರ್ಮಾಣನಂ ಕರ್ಮದ ವಿಧಿಕೃತಮೇಂ ಬಾಟ್ಟೆ ಲೋಕತ್ರಯೀಜಿ
ಷ್ಣುವನೆನ್ನಂ ಭೂಪನಂದಂ ತೃಣವೆನೆ ಲಘುವಂ ಮಾಡಿತೆಂದೇವದಿಂ ಕಂ
ತುವೆ ತಾಂ ಪದ್ಮೋದ್ಭವತ್ವಂಬಡೆದುಲಿದು ತಪಸ್ತಪ್ತನಾಕಾಂತೆಯಂ ಸಾ
ರವಿಲಾಸಾಕ್ರಾಂತೆಯಂ ನಿರ್ಮಿಸಿ ಜಯಿಸಿದನಿಂ ಬಣ್ಣಿಸಲ್ ಬಲ್ಲನಾವಂ ೨೩

ಕಂ॥ ಶೃಂಗಾರಾಬ್ಧಿಯೊಳೊಗೆತಂ
ದಂಗಜಜಯಲಕ್ಷ್ಮಿಯೆನೆ ಕಳಾನಿಧಿಸಹಿತಂ
ಸಂಗಳಿಸಿ ಚೆಲ್ವನಾಕೆ ಬೆ
ಡಂಗಿಂ ಪದ್ಮಾಂತರಂಗದೊಳ್ ರಂಜಿಸಿದಳ್ ೨೪

ಮ.ಸ್ರ॥ ರತಿಯಿಂ ಸೌಂದರ್ಯಸೌಭಾಗ್ಯಮನೊಸಗೆಯ ಪೌಲೋಮಿಯಿಂ ಭಾಗ್ಯಮಂ ಭಾ
ರತಿಯಿಂ ನಾನಾಕಳಾಕೌಶಲಮನತಿಶಯಂಬೆತ್ತಿರಲ್ ಮೈಮೆಯಂ ಪಾ
ರ್ವತಿಯಿಂದೀಟ್ಕೊಂಡು ಮೂಲೋಕದೊಳನುಪಮಮೀ ಕಾಂತೆಯೆಂದಂತಪೂರ್ವಾ
ಕೃತಿಯಿಂ ಕೆಯ್ಗೆಯ್ದು ಕಣ್ಣಿಟ್ಟವೊಲರರೆ ಮಹಾದೇವಿ ಕಣ್ಗೆಡ್ಡಮಾದಳ್ ೨೫

ಕಂ॥ ಅಡಿಗಿಕ್ಕಿ ಮೆಟ್ಟಿ ತಮ್ಮಿ
ಟ್ಟೆಡೆವಡೆದನುರಾಗಮೆಲ್ಲಮಂ ಕಾಂತೆಯ ಮೆ
ಲ್ಲಡಿಯಡಿಯೆನಿಸಿರ್ದನಿತಱೊ
ಳೆಡೆಗೊಂಡುದೆ ಗೆಲ್ಲವರುಣಪಲ್ಲವತತಿಯೊಳ್ ೨೬

ಮೃಗನೇತ್ರೆಯ ತೊಳಗುವ ಕಾ
ಲುಗುರಿಂ ಕಂಗೊಳಿಪ ಕೋಮಲಾಂಗುಳಿಗಳದೇಂ
ಬಗೆಯಂ ಬೆದಱಿಪುವೊ ಪುಣಂ
ಬುಗಳೆಂಬಂತಿಂಬುವೆತ್ತು ವಿಷಮಾಯುಧನಾ ೨೭

ಒದವಿದ ಲಾವಣ್ಯರಸಂ
ಪುದಿದೆತ್ತಂ ತುಳ್ಕಿ ತೋರ್ಪ ಕುಪ್ಪಿಗೆಯಿವೆ ದಲ್
ಮದನನ ಮೋಹನಭಂಡಾ
ರದ ಬಾಟಿಲ್ಮೊದಲೆನಿಸಿ ಸತಿಯ ಪೊಱ ಅಡಿಯೆಸೆಗುಂ ೨೮

ಪಡೆದುವೆ ನಮ್ಮುನ್ನತಿಯಂ
ಮಡದಿಯ ಪಾದಾಶ್ರಿತಂಗಳಾಗಿಯುಮಿಂತೀ
ಮಡಮುಂ ಬೆರಲ್ಗಳುಂ ಕಿ
ತ್ತಡಿಯುಮೆನುತ್ತುರ್ವಿದಂತೆ ಮೇಂಗಾಲೆಸೆಗುಂ ೨೯

ಕಳನೂಪುರಕೀಲಿತಮಣಿ
ಗಳಿನೊಗೆದುದು ಮನ್ಮಯೂಖ ಲೇಖೆಗಳಿಂ ಕ
ಣ್ಗೊಳಿಪುದೊ ಬರ್ಜಿಸೆ ರತಿಯೋ
ಕುಳಿಯಾಡುವ ಕನಕಶೃಂಗಮಂ ಕಿಱುದೊಡೆಗಳ್ ೩೦

ಒಳಕೆಯ್ದುವು ಗಡ ರಂಭಾ
ವಿಳಸನಮಂ ಸತಿಯ ಬಟ್ಟನುಣ್ದೊಡೆಗಳದಿ
ನ್ನೆಳಕೊಳಿಸುವುದರಿದೇ ಕ
ಣ್ಗೊಳೆ ನಿಟ್ಟಿಪ ಸತಿಯ ದಿಟ್ಟಿಗೆಮೆಯಿಕ್ಕದುದಂ ೩೧

ಇನಿಯನ ಮನಮಂ ಪೊಱವಾ
ಱನೆಂದುಮೆಯ್ದಿಸದ ಸತಿಯ ಪೊಱವಾಱಿಂ ಕಾ
ಮನ ಕೇಳೀನಗಮೆಂದೆಂ
ಬನ ನುಡಿಯೇನುಚಿತಮಾಯ್ತೊ ಮಣಿಮೇಖಲೆಯಿಂ ೩೨

ಇಲ್ಲದೊಡಗ್ರವಿಭಾಗ
ಕ್ಕಿಲ್ಲಿಯದಾಧಾರವದಱ್‌ನುಂಟಾದೊಡೆ ತೋ

ಱೆಲ್ಲಿರ್ದುದೆನಿಪ್ಪೂಹೆಯ
ಸೊಲ್ಲಿಂಗೆಡೆಯಾದುದಸಿಯ ನಡು ಕಾಮಿನಿಯಾ ೩೩

ಬಳವಳಿಯಿಂದಿವು ಸೊಬಗಿನ
ಬಳವಳಿಯೆಂದೆನಿಸಿ ಮಿಸುಪ ಲಾವಣ್ಯರಸೋ
ತ್ಕಳಿಕೆಗಳೆ ತಪ್ಪದೆನಲು
ತ್ಕಳಿಕೆಯನಿನಿಯಂಗೆ ಮಾಱ್ಪುವಾಕೆಯ ವಳಿಗಳ್ ೩೪

ಇನಿಯನ ಮನೋಮದೇಭವ
ನೆನಸುಂ ಕೆಡಪಲ್ಕೆವೇಡಿ ಕಾಮಕಿರಾತಂ
ಮುನಿಸಿಂ ಮಾಡಿದ ಕುೞಿಯೆಂ
ದೆನೆ ವನಿತೆಯ ನಿಮ್ನನಾಭಿಯೇನೊಪ್ಪಿದುದೋ ೩೫

ಮದನನ ಕಟ್ಟಿದ ಕಿಱುಗೇ
ಣಿದು ಸಂದೆಯಮಾವುದೆನಿಸಿ ನುಣ್ಗರ್ಪಿಂದು
ಣ್ಮಿದ ಬಾಸೆಯ ದೇಸಿಗೆವ
ರ್ಪುದೆ ಮಿಕ್ಕುಪಮಾನವರ್ಗಮಾ ಕಾಮಿನಿಯಾ ೩೬

ಒತ್ತಿದುವಿರ್ಕೆಲನ ಮದು
ದ್ವೃತ್ತತೆಯಿಂದೆಯ್ದಿ ತಮ್ಮೊಳಿದಿರೆಟ್ಟಿ ಮೊಗ
ಕ್ಕೆತ್ತಂ ಪಾಯ್ದಪುವೀಯು
ದ್ವೃತ್ತತೆ ಕಠಿಣತೆ ಕುಚಕ್ಕೆ ಸಹಜಂ ಸತಿಯಾ ೩೭

ಮನಸಿಜ ಸಿದ್ಧನ ವಿವಿಧಾ
ರ್ಚನೆಗೆಯ್ದಿರಿಸಿಟ್ಟ ಯಂತ್ರಮೆನೆ ಮಾಱ್ಪುದು ಕಂ
ಪಿನ ಸೊಂಪಿನ ಪೊಗರಿಂದಂ
ವನಿತೆಯ ಕಕ್ಷಪುಟಮೀಕ್ಷಣಾಕರ್ಷಣಮಂ ೩೮

ಇದೆ ಪೋ ಕಂದರ್ಪನ ಬಾ
ಟಿಮ್ಮೊದಲೆಂದು ವಿದಗ್ಧರಾಡೆ ತೋಳ್ಮೊದಲಂತ
ಪ್ಪುದು ಬಾಳೆಂದರ್ ಚದುರರ್
ಸುದತಿಯ ತೋಳ್ಗಳನದಾವ ಬಾೞಿಂದೆಂಬೆಂ ೩೯

ಬಾಡುವ ಕೆಂದಳಿರಂ ನೀ
ರೋಡುವ ತಾವರೆಯನೇಕೆ ಪಡಿಯಿಡುವರವೇಂ
ತೋಡಪ್ಪುವೆ ಕರತಳದೊಳ
[ಗೂಡಿ]ದ ಸೌಭಾಗ್ಯರೇಖೆಯೊಂದಱೊಳವಳಾ ೪೦

ಸುದತಿಯ ಬೆರಲಿಂ ಮೂವಡಿ
ಸಿದುವು ಸರಲ್ ಗೆಲ್ದನಾಗಳೊಂದೊಂದಱಿನಿಂ
ಪದಿನಾಲ್ಕುಜಗವನಂಗಜ
ನದೊಂದೆ ಕಿಱುಗುಣಿಕೆಯಿಂದೆ ಗೆಲ್ಲನೆ ಪತಿಯಂ ೪೧

ಲಳನೆಯ ಕರಜಂಗಳ್ ಕೆಂ
ಬೆಳಗಂ ದೆಸೆದೆಸೆಗೆ ಪಸರಿಸುತ್ತೊಪ್ಪಿದುವು
ಜ್ವಳಿಸುವ ತೇಜದ ಕೀರ್ತಿಯ
ಬೆಳಸಿನ ಬಿತ್ತುಗಳ ತೆಱದೆ ಕುಸುಮಾಯುಧನಾ ೪೨

ಸುರ ನರ ಪನ್ನಗ ವನಿತೋ
ತ್ಕರ ಸೌಭಾಗ್ಯಮನೆ ಗೆಲ್ದ ಮೂರೇಖೆಯ ಸುಂ
ದರಿಯೊಪ್ಪುವ ಕೊರಲೇಂ ಬಿ
ತ್ತರಿಸಿದುದೋ ಹಾರಲತೆಯ ಕಂದದ ಚೆಲ್ವಂ ೪೩

ಯುವತಿಯ ನಗೆಮೊಗಮಂ ಮಿಸು
ಗುವ ಭಾವಿಸೆ ದರ್ಪಣೇಂದುಜಳಜಂಗಳ್ ಸೋ
ಲವನಾಂತುವು ಗಡ ಮುನ್ನವ
ಱವಯವಮೊಂದೊಂದಱೊಡನೆ ತಮ್ಮೊಂದೊಂದುಂ ೪೪

ರದನಂಗಳೋಳಿಯಿಂ ತೀ
ವಿದ ಪಳಿಕಂ ಪೋಲೆ ಸತಿಯ ಬಾಯ್ದೆಱೆ ಪೋಲ್ಗುಂ
ಮದನಂ ತನ್ನಟ್ಟೆಗೆ ಮಾ
ಡಿದ ಮಾಣಿಕವೆಸದ ಕಪ್ಪುರದ ಕರಡಿಗೆಯಂ ೪೫

ವದನಂ ಗೆಲವಿಂ ವಿಧುಬಿಂ
ಬದ ಕಳೆಗಳನೊಳಗೆ ಪಾಯ್ಸಿಕೊಂಡುದೆನಲ್ ಕುಂ
ದದ ಕಾಂತಿಯಿನಾ ಕಾಂತೆಯ
ರದನಾವಳಿಯೇಂ ಕರಂ ತಳತ್ತಳಿಸಿದುದೋ ೪೬

ಮನಸಿಜನರ್ಚಿಸಿ ಸಮ್ಮೋ
ಹನದ ಮರ್ದಂ ಮಣಿಯ ಭರಣಿಯೊಳ್ ತೀವಿಯೆ ನ
ಚ್ಚಿನ ನಿಧಿಯ ಮೊಗದೊಳಿರಿಸಿದ
ನೆನಲ್ಕೆ ಮಧುರಾಧರಂ ಮನೋಹರಮವಳಾ ೪೭

ಲಾವಣ್ಯಾಮೃತರಸದೊಳ್
ತೀವಿದ ಪೊಸಪೊನ್ನ ಮಿಸುಪ ಶುಕ್ತಿಕೆಗಳೆನಲ್
ದೇವಿಯ ತಾಂಬೂಲಚ್ಛಾ
ಯಾವಿಷ್ಕೃತಮಾದ ತೆಳ್ಗದಂಪುಗಳೆಸೆಗುಂ ೪೮

ಅನುಪಮಸುಗಂಧಿ ವನಜಾ
ನನಮಂ ಪರಿಮುತ್ತುಗೊಳ್ವ ತುಂಬಿಯ ರಕ್ಷಾ
ವಿನಿಯೋಗಕ್ಕಿಕ್ಕಿದ ಕಾಂ
ಚನಚಂಪಕಮಲ್ತೆ ಸತಿಯ ನಾಸಾಮುಕುಳಂ ೪೯

ಎಡಬಲನಲ್ಲದೆ ಭೇದಂ
ಬೆಡಂಗಿನಿಂ ಕೂರ್ಪಿನಿಂ ಬೆಳರ್ಪಿಂದಿಲ್ಲಾ
ಗಡುಮಾಕೆಯ ಕಣ್ಣೇಕೆಯೊ
ಗಡ ಕಿವಿವರ್ಚಿಪರ್ಪುವೆತ್ತರೊಂದೊಂದಿತ್ತಂ ೫೦

ಪೆಱಮೆಟ್ಟಿ ತುಱುಗಿ ಮಿಗೆ ತ
ಳ್ತಿಱಿದಪ್ಪುವೊಡನೊಡನೆ ತಮ್ಮೊಳೀಕಾಂತೆಯ ನು
ಣ್ದುಱುಗೆವೆಗ[ಣ್ಗ]ಳ್ಕೀಗಿನ
ಕೊಱತೆಗೆ ದಲ್ಪಾಱುಗಣ್ಣಬಟ್ಟಿಗದು ಸಹಜಂ ೫೧

ಮೋಹನಲಕ್ಷಣರೇಖೆಗ
ಳೀ ಹರಿಣಾಕ್ಷಿಯ ಮುಖಾಮೃತಾಂಶುಗಿವೆಂದೇ
ನಾಹಾರವದಿಂ ಮನ್ಮಥ
ನೂಹಿಸಿ ನಲಿವನೊ ಸವಿಭ್ರಮಭ್ರೂಯುಗಮಂ ೫೨

ಪರಿಪೂರ್ಣೇಂದುವ ಗೆಲವಿಂ
ದರಸ್ಮಿತಸ್ಮೇರವಕ್ತ್ರಶಶಿಯೊಳ್ ಮತ್ತೊಂ
ದರರೆ ಕಲೆಯೆನಿಸಿತೆನೆ ಸುಂ
ದರಮಾಯ್ತನ್ವರ್ಥಮಾಗಿ ಪೆಱನೊಸಲವಳಾ ೫೩

ಅವತಂಸಲಕ್ಷ್ಮಿಗಿಂತಿದೆ
ಸವತಿಯೆನಲ್ ಮೇಲೆ ವಂದಪಾಂಗಶ್ರೀಯು
ತ್ಸವಲೀಲಾಗ್ರಹಮೆಂಬೆಂ
ಕಿವಿಯಂ ಪೆಱತೇನನೆಂಬೆನಾ ಕೋಮಳೆಯಾ ೫೪

ಎಂತೋ ಕಾಂತೆಯ ವರಸೀ
ಮಂತಂ ಕೆಳೆಗೊಂಡುದಿರ್ಕೆಲದ ಕುಟಿಲಾಂತಃ

ಕುಂತಳಮಂ ಸ್ನಿಗ್ಧಮೃದು
ತ್ವಂ ತೋಱಿಲ್ ಪೊಱಗೆ ರುಜುಗಳೇನಂ ಬಲ್ಲರ್ ೫೫

ತಲೆವೊತ್ತೆ ತಾರಕಾವಳಿ
ತಲೆಗರೆದಿವೆ ರಾಹು ವದನಶಶಿಬಿಂಬದ ಪಿಂ
ದಲೆಯೊಳೆನೆ ತೋರಮುತ್ತಿನ
ತಲೆಮುಡುಗೆಯಿನೆಸೆದುದಲರ ಸೋರ್ಮುಡಿ ಸತಿಯಾ ೫೬

ಮದನನ ದಿಗ್ವಿಜಯದೊಳಿಂ
ತಿದೆ ಬೆನ್ನಾಗಿರ್ದುದೆಂಬ ಚೆನ್ನಿಂದೆಸೆಗುಂ
ಸುದತಿಯ ಸೊಬಗಿನ ಸರ್ವ
ಸ್ವದ ಭಾಗಂಗೊಂಡಪೂರ್ವ ಭಾಗಾಭೋಗಂ ೫೭

ಮ॥ ಮೃಗಭೂಕುಂಕುಮಚಂದನಾಗರುವಿಲೇಪಕ್ಕಂಗಸೌರಭ್ಯವೊಂ
ದುಗೆಯಂ ಮಾೞ್ಪುದಪೂರ್ವಗಂಧಮನುದಂಚದ್ರತ್ನ ನಾನಾವಿಭೂ
ಷೆಗಳಂ ದೇಹದ ಕಾಂತಿ ರಂಜಿಪುದಪೂರ್ವಚ್ಛಾಯೆಯಿಂ ಮಾಲ್ಯಲ
ಕ್ಷ್ಮಿಗೆ ಕೆಯ್ಗೆಯ್ದುದು ಕೇಶಸಂಚಯಮಪೂರ್ವಸ್ಮೇರಮಾ ಕಾಂತೆಯಾ ೫೮

ಕಂ॥ ವನಮಾಲೆ ವನಕ್ರೀಡೆಗೆ
ವನಮಾಲೆಯೆ ಪದ್ಮನೊಳ್ ಜಲಕ್ರೀಡೆಗೆ ತ
ದ್ವನಮಾಲೆ ರತಿಕ್ರೀಡೆಗೆ
ಮನೋಜ್ಞಮನುಕೂಲಮುಚಿತಮೆನೆ ರಂಜಿಸಿದಳ್ ೫೯

ವ॥ ಮತ್ತಮಾ ಮದನಮೋಹನವಿದ್ಯಾಲಕ್ಷ್ಮಿಯಾ ಚತುಷಷ್ಟಿವಿದ್ಯಾಚಾತುರ್ಯ ಚತುರಾನನ ಸಹಜಪ್ರಸನ್ನಸುಂದರದರವಿಕಸಿತಾನನಸರಸಿರುಹದೊಳ್ ನಲಿದು ನೆಲಸಿ ನೆಲೆಗೊಂಡ ಹಿತಮಿತಾನ್ವಿತೋದಾರ ಗಂಭೀರತಾಸಾರ ಸಾರಸ್ವತಲಕ್ಷ್ಮಿಯಂ ತನ್ನ ನಿರತಿಶಯ ರೂಪ ಯೌವನ ವಿಳಾಸ ವಿಭ್ರಮ ಸೌಭಾಗ್ಯ ಭಾಗ್ಯಾದಿ ನಿಖಿಳಗುಣಗಣ ವರ್ಣನವ್ಯಾಪಾರದೊಳ್ ನಿತ್ಯನಿಯಮದಿಂ ನಿರವಿಸಿ ಸುಸ್ಥಮಿರಿಸಿಯುಂ ಆ ಕಾಮಸಾಮ್ರಾಜ್ಯಲೀಲಾಲಕ್ಷ್ಮಿಯಾ ಪರಮಪುರುಷೋತ್ತಮಾವತಾರನ ವಿಶಾಲೋರಸ್ಥಳಪದ್ಮಪೀಠದೊಳವಿಚಳಸ್ಥಿತಿಲೀಲೆಯಂ ತಳೆದ ಸಕಳ ಸುರಾಸುರಲೋಕ ವಿಸ್ಮಯಾವಹಾನೇಕ ವಿಪಕ್ಷ ಕ್ಷತ್ರಿಯಾವಹ ಪಾರಾವಾರ ಮಹಾಮಥನಪರಿಲಬ್ಧ ಮಹನೀಯ ಮಹಾಲಕ್ಷ್ಮಿಯಂ ಸ್ವಕೀಯನಿತ್ಯನೈಮಿತ್ತಿಕ ದಾನ ಪೂಜಾ ತ್ಯಾಗ ಭೋಗೋಚಿತ ಪರಮಿತದ್ರವ್ಯದತ್ತಿ ಯೊಳೊಡಂಬಡಿಸಿ ಸಂಭಾವಿಸಿಯುಂ ಆ ಸಂಕಲ್ಪಜನ್ಮನ ಮನೋರಥ ಜನ್ಮಭೂಮಿಯಾ ಮಹೇಶ್ವರಮಹಾವರಾಹೋತ್ಖಾತ ತೀಕ್ಷ್ಣ ಕೌಕ್ಷೇಯಕದಂಷ್ಟ್ರಾ ಸಮುದ್ಧರಣಪ್ರೀತಿಯಿಂ ಪ್ರಚಂಡದೋರ್ದಂಡ ಪರಿರಂಭಸಂಭವ ಸುಖಾನುಭವಲಂಪಟೆ ಯಾದಕ್ಷೂಣಕ್ಷೋಣಿಯಂ ತನ್ನಾಣತಿಯೊಳ್ ತೊಡರ್ಚಿ ವಿನಯಮನೊಡರ್ಚಿಯುಂ ಆ ಮನೋ[ಜ]ರಾಜ ವಿಜಯಲಕ್ಷ್ಮಿಯಾ ವಿಕ್ರಾಂತಕಂಠೀರವನ ಮೆಯ್ಯೊಳ್ ಸಕಲ ದಿಗ್ವಿಜಯ ಯಾತ್ರಾಸಮಯ ಸಮುಜ್ಜೃಂಭಿತ ಸಂಕ್ಷುಬ್ಧಸೈನ್ಯ

ಕೋಳಾಹಳಾಭೀಳ ಭೇರೀಭಾಂಕಾರ ಕ್ಷ್ವೇಡಾಕ್ರೀಡಾತಿಚಕಿತನಿಶ್ಚಳ ಕರ್ಣತಾಳದಿಕ್ಕುಂಡಳಾ ಮಂಡಳೆಯೆನಿಸಿ ಮೆಯ್ವೆತ್ತಿದ ವೀರಲಕ್ಷ್ಮಿಯನಸಿಧಾರಾ ಚರಣಪರಿಣತೆಯೊಳ್ ಪತ್ತಿಸಿ ಮುದಂಬೆತ್ತುಂ ಆ ಮದನಮಂಗಳ ಯಶೋಲಕ್ಷ್ಮಿಯಾ ರಾಜೇಂದ್ರಚಂದ್ರನ ವಂದಿ ಚಕೋರವೃಂದಾರ ಮಂದಾನಂದಕರಣ ವಿತರಣಕರಣಪ್ರಭೂತೆಯೆನಿಸಿ ನಿಖಿಳ ದಿಗ್ದಂತಿದಂತದಂಡಾಂದೋಳ ಡೋಳಾವಿನೋದ ವಿಶ್ರಾಂತ ವಿಹಾರಕೇಳಿಯೊಳ್ ಮನಂಗೊಂಡ ವಿಶದ ಯಶಶ್ಚಂದ್ರಿಕಾಲಕ್ಷ್ಮಿಯಾ ನಿಜಮನೋರಾಗಸುಧಾಸಾಗರಮಂ ನೆಱೆ ಪೆರ್ಚಿಸುವಂತು ನಿರಂತರಂ ಸಂತಮಿರಿಸೆಯುಂ ಇಂತು ನಿಸ್ಸಪತ್ನೀವೃತ್ತಿಯೊಳ್ ನೆಗೞ್ತೆವೆತ್ತುಂ ಸಪತ್ನೀಜನಾನುಕೂಲ್ಯದಿಂ ಬೇಱೊಂದು ಪೊಗೞ್ತೆವೆತ್ತಳಂತು ಮಲ್ಲದೆಯುಂ

ಚಂ॥ ಜಿತರತಿಕಾಮಿನೀಲಲಿತಲೀಲೆ ಮನೋಭವಮೋಹನಾಕ್ಷರಾಂ
ಚಿತನುತಬಾಲೆ ವಿಶ್ರುತಕಳಾನವನರ್ತನಶಾಲೆ ಸಂತತಂ
ಪತಿಚರಿತಾನುಕೂಲೆ ಘನರಾಗರಸಾರ್ಣವವೇಲೆ ಲೋಕಸಂ
ಸ್ತುತಿಯುತಪುಣ್ಯಶೀಲೆ ಗುಣಮಾಲೆಯೆನಲ್ ವನಮಾಲೆ ರಂಜಿಪಳ್ ೬೦

ಉ॥ ಆ ಸತಿಯೊಳ್ ಮಹೀರಮಣನುತ್ಕಟರಾಗದೆ ಭೋಗಗಂಧಸಂ
ವಾಸಿತನಾಗಿ ಧರ್ಮದೊಳಮರ್ಥದೊಳಂ ಬಗೆಯಂ ಕಟಿಲ್ಚದು
ದ್ಭಾಸಿಸಿದಂ ಗಡಂತವನವರ್ಕೆ ಫಲಂ ಸುಖಮೆಂದು ಬಲ್ಲವಂ
ಬೇಸಱನಾಳ್ವನೇ ಬೆಳೆವ ಬಿತ್ತಿನ ಸಂಕ್ರಮದೊಳ್ ಫಲೋತ್ಸುಕಂ ೬೧

ಕಂ॥ ಪಲಬರವರೋಧಕಾಂತೆಯ
ರೊಲವಿಂ ಪತ್ತಿರೆಯುಮಾಕೆಯೊಳ್ ನೃಪನನಿಶಂ
ನಲಿದೊಂದಿರ್ಪಂ ತಾರಾ
ವಲಿ ತಳ್ತಿರಲಿಂದು ಚಂದ್ರಿಕೆಯೊಳೊಂದುವವೋಲ್ ೬೨

ಚಂ॥ ಚತುರುಪಧಾವಿಶುದ್ಧನನವದ್ಯಚರಿತ್ರನನೂನವಂಶನ
ನ್ವಿತಮಹಿಮಾವಭಾಸಿ ಸಕಳಕ್ಷಿತಿಭಾರಧುರೀಣನನ್ವಯಾ
ಗತನೆನೆ ಸಂದ ವೈಶ್ರವಣಮಂತ್ರಿವರೇಣ್ಯನ ಮೇಲೆ ರಾಜ್ಯಸಂ
ಸ್ಥಿತಿಗೆಡೆಮಾಡಿ ತದ್ವನಿತೆಯೊಳ್ ನಲಿವಂ ನೃಪನೇಂ ವಿವೇಕಿಯೋ ೬೩

ವ॥ ಇಂತಿಷ್ಟವಿಷಯೋಪಭೋಗಂಗಳಿಂದನೇಕ ಸಂವತ್ಸರಂಗಳೇಕೈಕ ಕ್ಷಣಂಗಳಂತೆ ವಿದಿತ ಸ್ವರೂಪಂಗಳಾಗಿ ಸಲುತುಮಿರ್ಪಿನಮೊಂದುದೆವಸಂ

ಚಂ॥ ತುಱುಗಿ ತುರಂಗಮಂ ಪೊಳೆದು ಮೆಟ್ಟುವ ದೆಸೆಯನಾಡಿ ತೋರ್ಪವೋಲ್
ತುಱುಗಿ ಕಪೋಲರಂಗತಟದೊಳ್ ಕುಣಿಯಲ್ ಮಣಿಕುಂಡಳದ್ವಯಂ
ತುಱುಗಿ ಕರಂಗಳಂ ಕೆದಱೆ ವಕ್ಷದೊಳುಜ್ಜ್ವಳತಾರಹಾರಮೇಂ
ಮೆಱೆದನೋ ಭೂಪನುತ್ಸವದಿನೆೞ್ತಿರುತುಂ ಮನೆಗಾಗಿ ದೇವಿಯಾ ೬೪

ವ॥ ಅಂತಂತಃಪುರಮಂ ಪೊಕ್ಕು ಕಾಂತೆಯಂತಿಕಕ್ಕಾ ಮಹೀಕಾಂತನೆಯ್ದುವಂದಾಗಳ್

ಕಂ॥ ಎಂದಿನ ತೇಜಿನಲ್ಲದಿದೇ
ನಿಂದೀ ವಲ್ಲಭೆಯ ವದನವನಜಂ ಕೊರಗಿ
ತ್ತೆಂದದನೆ ಪೆರ್ಚುಗೊಳ್ವೊಂ
ದಂದದಿನೇನರಸನಾಸನಂ ಕೊರಗಿದುದೋ ೬೫

ಚಿಂತಾಪರವಶತೆಯಿನಿನಿ
ಸಂ ತಡೆದಿದಿರೇಳದಾತ್ಮಪರ್ಯಂಕದೊಳಾ
ಕಾಂತಂ ಕುಳ್ಳಿರೆ ಕಂಡು ಕ
ರಂ ತಳವೆಳಗಾಗಿ ಸಖಿಯನೇಂ ನೋಡಿದಳೋ ೬೬

ವ॥ ಆಗಳಾ ವಿಳೋಕನಾಮಳಜಳಕ್ಷಾಳಿತಾತ್ಮಹೃದಯಸರಃಶಂಕಾಪಂಕನಾಗಿ ಭೂಕಾಂತಂ ಮೆಲ್ಲನಿಂತೆಂದಂ

ಕಂ॥ ಪೊಗಸಿನ ಚಂದ್ರನ ತೇಜಿದಿಂ
ನಗೆಮೊಗಮೇಕಾಂತುದುಬ್ಬರಂ ಬಿರಿವಿನ ಮೇ
ಕುಗುತಿರ್ದುವು ತುಱುಗೆಮೆ ದುಂ
ಬಿಗಳುಳ್ಳಲರ್ದಕ್ಷಿಕುಮುದ ಮಧುಬಿಂದುಗಳಂ ೬೭

ಕದಪನದೇಕೆಯೊ ಪತ್ತಿ
ರ್ದುದು ಕೆಂದಳದೊಂದು ಪಜ್ಜೆ ತದ್ವರ್ಣಮನಾಂ
ತುದು ತಮದ ಮಱಿಯ ಮುತ್ತಿಗೆ
ಯೊದವೆನೆ ಮುಖಶಶಿಗಿದೇಕೆ ಕುರುಳಿಟ್ಟದಪುದೋ ೬೮

ಚಂ॥ ಒಸರದಿದೇಕೆ ನಿನ್ನ ವದನೇಂದು ವಚೋಮೃತಮಂ ಸುಕೇಸರ
ಪ್ರಸವಮನೇಕೆ ಚುಂಬಿಸವು ತುಂಬಿಗುರುಳ್ ತನುವಲ್ಲಿ ಪಲ್ಲವ
ಪ್ರಸರಮನೇಕೆ ಸಂಗಳಿಸದುನ್ಮಣಿಭೂಷಣದಿಂದಮೇಕೆ ಸಂ
ತಸಮನೊಡರ್ಚೆಯೆನ್ನ ಮನದಂಚೆಗೆ ಪೇಟ್ ದರಹಾಸದುಗ್ಧದಿಂ ೬೯

ಕಂ॥ ಅಂತಸ್ತಾಪಂ ತನುಲತೆ
ಯಂ ತವೆ ಕೊರಗಿಸಿದುದೆಯ್ದೆ ನೀಂ ಬಿಸುಸುಯ್ಯಿಂ
ದಿಂತೇಕೆ ತಿಱಿದ ತಳಿರೆಂ
ಬಂತಿರೆ ಕೊರಗಿಸುವೆಯಧರ ನವಪಲ್ಲವಮಂ ೭೦

ಚಂ॥ ಅನುವಶವೃತ್ತಿಗಲ್ಲದ ಸಪತ್ನಿಯರಿಲ್ಲ ಮನಕ್ಕೆ ನಲ್ಮೆಯಂ
ಜನಿಯಿಸುವರ್ತ್ತಿಗಲ್ಲದ ಸುವಸ್ತುಗಳಿಲ್ಲಿನಿಕೆಯ್ದು ರಾಗದಿಂ

ನನಕೊನೆವೋಗಲಿಲ್ಲದಪರಾಧಲವಂ ಪೆಱತೆನ್ನೊಳಿಲ್ಲ ಪೇೞ್
ನಿನಗಿನಿತೊಂದು ಚಿತ್ತದ ನಿಮಿತ್ತದ ಚಿಂತೆ ಲತಾಂತ ಕೋಮಳೇ ೭೧

ಉ॥ ಈ ತೆಱದಿಂ ನೃಪಂ ಪ್ರಿಯೆಯ ಚಿತ್ತದ ಖೇದಮನೆಯ್ದೆ ಕೇಳ್ದು ಸಂ
ಜಾತಕುತೂಹಳಂ ನುಡಿಯದಪ್ರುಗಳಂ ಸಿಡಿಯುತ್ತಿರಲ್ಕೆ ಮ
ಚ್ಚೇತದೊಳುಣ್ಮಿ ಪೊಣ್ಮುವ ತನೂಭವಲಾಭದ ಚಿಂತೆ ಪೋ ಸುನಿ
ರ್ಣೀತಮಿದೆಂದದೇಂ ನುಡಿದನೋ ಬಗೆಯಂ ನವಭಾವಕೋವಿದಂ ೭೨

ವ॥ ಆಗಳ್

ಕಂ॥ ನುಡಿದಾ ಮಾತಿನ ಬೞಿಯನೆ
ಗುಡುಗುಡನುಗಲಶ್ರು ಹರ್ಷಬಾಷ್ಪಮೆನಲ್ ತ
ಳ್ತಿಡಿದು ಮೊಳೆಯಾಯ್ತೊ ಪುಟಕಂ
ಕಡೆಗಣ್ಣಿಂ ನೋಡಿದಳ್ ವಯಸ್ಯೆಯ ಮೊಗಮಂ ೭೩

ವ॥ ಆಗಳಾ ಮಹಾದೇವಿಯ ಕಣ್ಣಱಿದು ಚತುರಿಕೆಯೆಂಬ ಕೆಳದಿಯಿಂತೆಂದಳ್

ಕಂ॥ ದೇವಿಯ ಬಗೆಯನಲರ್ಚಲ್
ದೇವರವೋಲ್ ಬಲ್ಲರಾರೊ ಸಖಿಯರ್ಕಳ್ ತಾ
ರಾವಳಿಯಲರ್ಚಲಾರ್ಕುಮೆ
ಭಾವಿಸೆ ಹಿಮಕಿರಣನಂತೆವೋಲ್ ಕುಮುದಿನಿಯಂ ೭೪

ವ॥ ಎಂದಭಿಮುಖಂಬಡೆದು ಪೇೞಲ್ ತಗುಳ್ದಳ್ ಇಂದು ಪರ್ವದಿನಮಪ್ಪುದಱಿಂ ದೇವಿಯುದಯಸಮಯದೊಳ್ ಮಂಗಳಾಲಂಕಾರಾಲಂಕೃತೆಯಾಗಿ ಪರಿವಾರಾಂಗನಾ ಕರತಳ ಪರಿಕಳಿತ ವಿವಿಧಾರ್ಚನಾ ವಿಶೇಷಂ ಬೆರಸು

ಚಂ॥ ಪ್ರಮದವನಕ್ಕೆ ಪೋಗಿ ನವರತ್ನವಿನಿರ್ಮಿತ ನೂತ್ನಜೈನಗೇ
ಹಮನತಿಭಕ್ತಿಯಿಂದೆ ಬಲವಂದು ಶಚೀವಧುವೆಂದೆನಲ್ ಸಸಂ
ಭ್ರಮ ವಿವಿಧಾರ್ಚನಾವಳಿಯಿನರ್ಚಿಸಿ ದೇವನನಟ್ಟೆಯಿಂ ಬರು
ತ್ತಮರ್ದಿನ ಸೋನೆಯಂ ಸುರಿದವೋಲ್ ನಡೆ ನೋಡಿದಳಾ ವನಾಂತಮಂ ೭೫

ವ॥ ಅಲ್ಲಿ ಮನಂಗೊಳ್ವ ಮರಾಳ ಬಳಗಂಗಳ್ಗೆ ಮಂದಮಂದ ಪದನ್ಯಾಸಮನು ಪದೇಶಿಸುತ್ತುಂ ಬರುತ್ತುಮಿರೆ ತದ್ವನೈಕದೇಶದೊಳ್

ಮ.ಸ್ರ॥ ಪಸುರ್ಗರ್ಪಿಂ ಸುತ್ತಲುಂ ಕಟ್ಟಿಲಿಪ ಪಸಲೆಯಾಕಾಶಮಂ ಮಧ್ಯದೊಳ್ ಶೋ
ಭಿಸಿ ತೆಳ್ಪಂ ತಾಳ್ದ ಚಂದ್ರೋಪಳಮಮಳ ಶರತ್ಪೂರ್ಣಶುಭ್ರಾಂಶುವಂ ಸಂ

ತಸದಿಂದಂತಲ್ಲಿ ಪಟ್ಟಿರ್ದೆರಲೆವಱ್ ಲಸಲ್ಲಕ್ಷ್ಮಮಂ ಪೋಲ್ತುದೇಂ ಪು
ಟ್ಟಿಸಿದತ್ತೋ ದೃಕ್ಚಕೋರಂಗಳನೆ ತಣಿಪುವಾ ಶಕ್ತಿಯಂ ದೇವಿಗಾಗಳ್ ೭೬

ವ॥ ಅಂತು ಮನಂಗೊಳೆ ನೋಟ್ಪಿನಮದಱ ಕೆಲನೆಲದ ಪಸುರ್ವುಲ್ಲಂ ಮೇವುತಿರ್ದ ಪೊಸವಾಣಿತಿವುಲ್ಲೆ ಮುನ್ನ ತನ್ನ ನಡೆಪಿದುದಪ್ಪುದಱಿಂ ಪರಿಚಯಕ್ಕೆಳಸಿ ಪರಿತರಲುಜ್ಜುಗಂಗೆಯ್ದು ಪಟ್ಟಿರ್ದ ಕೊಣಸುಮಂ ಬಿಟ್ಟು ಬರಲಾಱದಂಗದೇಶಂಗಳನಲ್ಲಲ್ಲಿಗಾಘ್ರಾಣನಂ ಮಾಡಿಯುಂ ಮಗುಟ್ಟುಮಾಲೇಹನಂಗೆಯ್ದುಮೆಚ್ಚಱಿಸಿ ತೊರೆದ ಮೊಲೆಯಂ ಸಾರ್ಚಿ ತಣಿಯೂಡದೆ ನಡೆಗೊಳಿಸಿ ತವಕದಿಂ ಬರುತ್ತುಂ ಕೂಡೆವರಲುಮಿರಲುಮಱಿಯದೆ ತಡಂಗಾಲ್ಗೊಂಡು ತಡೆದು ತಡೆದಡವರ್ಪ ತರುಣ ಹರಿಣಂ ಕೂಡೆವರ್ಪಂತಡಿಗಡಿಗೆ ನಿಂದು ನೋಡುತ್ತುಂ ಕಡೆವಾಯ ಕಱುಂಕೆಯೆಸಳಂ ಬಾಯ್ವಾಯೊಳ್ ನೀಡುತ್ತುಂ ಮೋಹರಸದೊಳೋಲಾಡುತ್ತುಂ ಬಂದು ತುಡುಗೆಯ ಪಚ್ಚೆವರಲ ಪಸುರ್ವೆಳಗು ಪಸರಿಸಿದ ಪರಿಸರಸ್ಥಳಿಯಂ ಪಸಲೆಗೆತ್ತು ಕಾರ್ದು ಕನಲ್ವ ಮುಗ್ಧಶಾಬಕದ ಮೊಗಮಂ ಮೊಗಮೊಗದಿಂ ನೂಂಕಿ ಮೊಲೆಯೂಡುವ ಹರಿಣಿಯಂ ನೀಡುಂ ಭಾವಿಸಿ ನೋಡಿ ವಿಸ್ಮಯಾಂಬುರಾಶಿಯೊಳ್ ಮುೞ್ಗಾಡಿ ಮತ್ತಮಾ ಕುರಂಗಿಯ ತನ್ನೊಳಾದ ನಿರತಿಶಯ ಸ್ನೇಹಮಂ ಮಱಿಯೊಳಾದಸಾಧಾರಣ ಮೋಹಮುಮನಾವುದಗ್ಗಳಂ ಪೇೞಿಂಬಂತೆನ್ನಂ ಕೂಂಕಿ ತೋಱಿತ್ತು ಮುತ್ತರಮಂ ತಾನೆ ನುಡಿವಂತೆನ್ನೊಳಿಂತೆಂದಳ್

ಕಂ॥ ಎನ್ನಯ ನಡೆಪಿದ ಪುಲ್ಲೆಯಿಂ
ದೆನ್ನಂ ಕಾಣುತ್ತೆ ಪರಿದು ಬರುತಿರ್ಪುದು ದಲ್
ಮುನ್ನೀಗಳ್ ಸಖಿ ಕೊಣಸಂ
ನಿಲ್ಲದು ತಾಂ ಬಿಟ್ಟು ಪುತ್ರಸುಖಮೇಂ ಪಿರಿದೋ ೭೭

ವ॥ ಎಂದದನೆ ಪುನಃಪುನಃ ಕಥನಂ ಮಾಡಿ ಮುಹುರ್ಮುಹುಶ್ಶ್ರೀಪರ್ಾಂ ದೋಳನಂಗೆಯ್ವುತ್ತುಮಂತಃಪುರಕ್ಕೆ ವರ್ಪಾಗಳ್

ಕಂ॥ ಏನೆಂಬುದೊಂದು ಹರ್ಷದ
ಹಾನಿಯನೀ ಪರಮ ಕರ್ಷಮೋ ಪಲಕಾಲಂ
ತಾನಿರ್ದಂದದ ಚಿಂತಾ
ಗ್ಲಾನಿ ಮನಂಬೊಕ್ಕುದರಸಿಗಾತ್ಮಜವಿಷಯಂ ೭೮

ವ॥ ಅಂತಚಿಂತ್ಯಚಿಂತಾಪರತಂತ್ರಾಂತರಂಗೆಯಾಗಿ ಬಂದರಮನೆಯಂ ಪೊಕ್ಕೆಲ್ಲರುಮಂ ವಿಸರ್ಜಿಸಿ ಮೆಲ್ಲನೆನ್ನೊಳಿಂತೆಂದಳ್

ಚಂ॥ ನಡಪಿದ ಪುಲ್ಲೆ ನೋಡ ಕೊಣಸಂ ಪಡೆದಿಂತೆಸೆದಿರ್ದುದೀಗಳೀ
ನಡಪಿದ ಪಕ್ಕಿಗಳ್ ಮಱಿಗಳೊಳ್ ಗಱಿಸೋಂಕಿ ಸುಖಕ್ಕೆ ಸಂದುವಾ
ನಡಪಿದ ಬಳ್ಳಿಗಳ್ ಪಲವು ಸೂೞ್ ಸುಫಲಪ್ರಸವಕ್ಕೆವಂದುವಾಂ
ಪಡೆಯದೆ ಸರ್ವಲೋಕಹಿತನಂ ಸುತನಂ ತಡೆದಿರ್ದನೇಕೆಯೋ ೭೯

ಕಂ॥ ನೋಡೆನ್ನೋರಗೆವೆಣ್ಗಳ್
ಕೂಡೆ ಮನಂಗೊಳ್ವ ಮಕ್ಕಳಂ ಮುದದಿಂ ಮು
ದ್ದಾಡಿಸುತಿರ್ದಿರ್ಪರ್ ತಾ
ಮೇಡಿಸುವಂತೆನ್ನ ಸಿರಿಯುಮಂ ಪರೆಯಮುಮಂ ೮೦

ಚಂ॥ ಕ್ಷಿತಿಪನ ಮಾಡಿದುನ್ನತಿ ಸಪತ್ನಿಯರೊಳ್ಪಿನ ಮಾಟ್ಪಿನೂನಸ
ತ್ಕೃತಿ ಜನಮೆಯ್ದೆ ಕೀರ್ತಿಸುವ ಸನ್ನುತಿ ಲೋಕದೊಳಾಣೆ ಸಲ್ವಹಂ
ಕೃತಿ ದೊರೆವೆತ್ತ ಭಾಗ್ಯದ ಚಮತ್ಕೃತಿ ಸಂದ ವಿವೇಕವೃದ್ಧಸ
ಮ್ಮತಿ ಸುತನಿಲ್ಲದಂದೆನಗೆ ನಿಷ್ಫಲಮೆನ್ನದದೇನನೆಂಬುದೋ ೮೧

ಇಹಪರಲೋಕಸಂಭವಸುಖಂ ಸಮನಿಪ್ಪುದು ಪುತ್ರನಪ್ಪುದುಂ
ಗೃಹಿಗವನಿಲ್ಲದಿರ್ಪಧಿಕರಾಜ್ಯವಿಭೂತಿಯಿನಪ್ಪುದೇನೊ ನಿ
ರ್ವಹಿಸದರಣ್ಯದೊಳ್ ಚರಿಪೊಡಂ ತಪದಿಂ ಸತಿಯರ್ಗೆ ಮುಕ್ತಿಯಾ
ನಹಹ ನಿರರ್ಥಜನ್ಮಯೆನುತುಂ ಸುರಿದಳ್ ಬಿಸುಸುಯ್ದು ಬಾಷ್ಪಮಂ ೮೨

ವ॥ ಅಂತಳವಿಗಟಿದಟಿಲನೊಳಕೊಳ್ವುದುಮಾತನಿಂತೆಂದಂ

ಉ॥ ಸರ್ವ ಕಳಾವಿಭಾಸಿ ಸುಮನಃಪರಿತೋಷಕರಂ ಸಲಕ್ಷಣಂ
ಪಾರ್ವಣಚಂದ್ರನಸ್ತಮಿತದುಸ್ತಮನಾತ್ತ ಸುವೃತ್ತನೊರ್ಮೆಯೇ
ಪೂರ್ವದಿಶಾಸಮುದ್ಭವನೆ ಪೇಟ್ ಪಲವುಂ ದಿನಮಿರ್ದೊಡಲ್ಲದಂ
ತೂರ್ವಿಗೆ ರಾಜನಪ್ಪ[ನು]ದಯಂ ನಿನಗಪ್ಪುದು ದೇವಿ ನಿಶ್ಚಯಂ ೮೩

ಚಂ॥ ಪಡೆದೊಡದೇನೊ ಕಾಡಲತೆಗಳ್ ಪಲವಂ ಪಲವುಂ ಫಲಂ ದಿಟಂ
ತಡೆದೊಡಮೇನೊ ಕಲ್ಪಲತೆ ಲೋಕದ ದೃಷ್ಟದೆ ಸೇವ್ಯಸತ್ಫಲಂ
ಬಿಡಿಯದುದಲ್ತು ಮಿಕ್ಕ ವಧುಗಳ್ ಪಡೆದೆಂಗಳ ಮಕ್ಕಳಂ ಮಗಂ
ಬಡೆದಪೆ ನೀನೆ ದಲ್ ಜಗದ ಭಾಗ್ಯದ ಮುಂಬಿನೊಳಂಬುಜಾನನೇ ೮೪

ವ॥ ಎಂದೆನೆ ತತ್ಕಾಲೋಚಿತ ವಚನತುಷಾರಸೇಚನದಿನೀಷದ್ವಿಶ್ರಾಂತ ಚಿಂತಾಸಮುದ್ಭೂತಾಂತಃಶೋಕಸಂತಾಪಶ್ರಮೆಯಾಗಿ ಮತ್ತಮಿನಿತುಂ ಪೊಟ್ಟುಂ ಬಸಿಱೊಳಪ್ಪ ಬಯಕೆಗಳ್ಗಿವೆ ಕಾರಣಂಗಳೆನಿಸಲ್ ತಕ್ಕ ಬಯಕೆಗಳಂ ಬಯಸುತಿರ್ದಳದೆಂತೆಂದೊಡೆ

ಕಂ॥ ಈ ತನುವಲ್ಲಿ ಜಗತ್ಸಂ
ಪ್ರೀತಿಕರಪ್ರಸವಮೊಂದಱೊಳಮೊಂದದೆ ತಾ
ನೇತಕ್ಕೆ ನಿಷ್ಫಲಂ ಪು
ಷ್ಪಾತಿಶಯಂಬಡೆದು ಬೇಸಱಂ ಬೀಱುವುದೋ ೮೫

ಪೊಲೆ ಪಿಂಗದೆ ಪೊಂಗುವುದ
ಕ್ಕಲಸುವರಾಳಿಜನಂಗಳೆನ್ನಯ ಬಸಿಱೊಳ್
ಕುಲಪೂತನೆನಿಪ್ಪ ಮಗಂ
ನೆಲಸುತ್ತೀ ಪೊಲೆಯನೆಂದು ಪೇೞ್ ಪಿಂಗಿಪನೋ ೮೬

ಅಂಗಭವನಂಗಭವನೆನೆ
ಪಿಂಗದೆ ಮನದೊಳಗೆ ಪುಟ್ಟಿ ರತಿಯುತ್ತವಳಂ
ಸಂಗಳಿಸಲ್ ತೋರ್ಪವನಂ
ದಂಗದೊಳೊಗೆದೆನಗೆ ಸಿರಿಯ ಸೈಪಂ ಮಾೞ್ಪಂ ೮೭

ಸುವಿದಿತಮಿನಿತು ದಿನಂ ಸ್ತ್ರೀ
ಸವನಂ ನಿನಗಿಂದು ಕಾಂತೆ ಪುಂಸವನಂ ಮಾ
ಡುವದೊಂದರ್ಥಾಂತರದಿಂ
ದವನೀಶಂ ಸರಸವಾಡಿ ಕಾಡುಗುಮೆಂದೋ ೮೮

ಪೆರ್ಚಿಸಿದ ಪೊರ್ಕ್ಕುೞೊಳ್ ಮಿಗೆ
ಸಾರ್ಚಿ ಹರಿದ್ರಾಂಭಕಾಂಶಮಮಂ ತಳ್ತೆಮೆಗಳ್
ಬಿರ್ಚಿದ ಬಾಳಕನಂ ಮೆ
ಯ್ವೆರ್ಚುತ್ತೀಕ್ಷಿಸುವ ಸೈಪದೆಂದಾದಪುದೋ ೮೯

ಕಂದಂಗೆ ರಾಜ್ಯಚಿಹ್ನಮ
ನೊಂದೆರಡುಮನುೞಿಸಿ ಮಂದಿಗೆರೆದರ್ಥಮನಾ
ಮಂದಾರಂ ಕೆಯ್ವಂದವೊ
ಲೆಂದಿತ್ತೆಸಗುವನೊ ನೃಪತಿ ಜನನೋತ್ಸವಮಂ ೯೦

ಅಂಜನಮಕ್ಷಿದ್ವಯದೊಳ್
ರಂಜಿಸೆ ಸೊಡರ್ವಕ್ಕು ನೊಸಲೊಳೆಸೆದಿರೆ ಪದದಿಂ
ಮಂಜೀರಕರವ ಮೊಗೆಯೆ ಮ
ಗಂ ಜಗುೞುತ್ತೆಂದೊ ತೊಟ್ಟಿಲಂ ಪಟ್ಟೊದೆವಂ ೯೧

ತನುಜನಖಿಳಾರ್ಥ ಕಲ್ಪಾ
ವನಿಜಂ ತಣಿಯುಂಡು ಬಳೆವೊಡೀ ಪೀನಘನ
ಸ್ತನಮೆ ಪಯೋಧರಮಾತ
ಕ್ಕೆನುರೋಜಭರಕ್ಕದೊಂದು ಪೆಸರೊಳ್ ಪೊರೆಯೇ ೯೨

ಹಾರಕ್ಕದೊಂದೆ ನಾಯಕ
ವಾರಯಲೆಂದರಸನೀಕ್ಷಿಸುತ್ತುಂ ನಲಿಯಲ್

ವ॥ ಆ ಮಾತುಳುಂಗಫಲಮನಭೀಷ್ಟಫಲಮನಾಂಪಂತಂಜಳಿಪುಟದಿನಾಂತು ಮನಂಗೊಂಡು

ಮ॥ ಸುತಜನ್ಮೋತ್ಸವಮಾಗಳಾದ ತೆಱದಿಂ ರೋಮಾಂಚಮಂ ತಾಳ್ದಿ ಹ
ರ್ಷಿತೆ ಹರ್ಷಾಶ್ರುಜಲಾರ್ದ್ರನೇತ್ರೆ ಫಲಪೂರಂ ಜನ್ಮಸಾಫಲ್ಯಸಂ
ಸ್ಥಿತಿಯಂ ಮಾಡಿದುದೆಂದು ನೋಡಿದಳಲಂಪಿಂ ಸುತ್ತಿರಲ್ ಲೋಚನ
ದ್ಯುತಿ ಕೆಯ್ವೊಕ್ಕನಿಧಾನಮಂ ಬಡವನಂದಾಚ್ಛಾದನಂಗೆಯ್ವವೋಲ್ ೧೦೬

ವ॥ ಅಂತು ನೀಡುಂ ನೋಡಿ ಸಂತತ ಸಂತೋಷಾಮೃತಾಂಬುನಿಧಿಯೊಳೋಲಾಡಿ ಮೂಡಿ ಮುೞ್ಕಾಡಿ ತದನಂತರಂ

ಕಂ॥ ವಿಸ್ಮಯಮೆಂತೆಂತೆಂದು ದ
ರಸ್ಮಿತೆ ಬಗೆಗೊಂಡು ಬೆಸಗೊಳಲ್ ಶಾಸನದೇ
ವೀಸ್ಮೃತಿಯಿಂದಾಯ್ತವರ್ಗೇಂ
ವಿಸ್ಮೃತಿಯೇ ನಿನ್ನ ಮಾಟ್ಟಿ ಬಹುಸತ್ಕಾರಂ ೧೦೭

ವ॥ ಎಂದರಸಂ ಯಥಾರ್ಥಪ್ರೇಮಚಾರುಚಾಟುವಚನಾಮೃತವರ್ಷದಿಂದರಸಿಯ ಗಾತ್ರಕ್ಷೇತ್ರದೊಳ್ ರೋಮಹರ್ಷಸಸ್ಯಸಮೃದ್ಧಿಯಂ ಮಾಡಿ ಮತ್ತಮಿಂತೆಂದಂ

ಕಂ॥ ಧರ್ಮಮೆ ದೇಹಿಗಳಿಹಪರ
ಶರ್ಮಕ್ಕೆ ನಿದಾನ ಮದನನೂನವಿಧಾನಂ
ನರ್ಮದಿನೆಸೆಗುತ್ಕಟಸ
ತ್ಕರ್ಮಂ ಪ್ರತ್ಯಕ್ಷಫಲಮನೀವುದು ಪುಸಿಯೇ ೧೦೮

ವ॥ ಎಂದು ಪದ್ಮರಾಜಂ ಧರ್ಮೋದ್ಯೋಗದೊಳ್ ನಿಯಾಮಿಸುವುದುಮಾ ದಿನಂ ಮೊದಲ್ಗೊಂಡು ವನಮಾಲಾಮಹಾದೇವಿ ಪುತ್ರಕಾಮ್ಯದಿಂದಮೌಷಧಾನ್ನದಾನಾದಿ ಚತುರ್ವಿಧಧರ್ಮತತ್ಪರೆಯಾಗಿ

ಕಂ॥ ಸುರಭಿಯ ತೊರೆದ ಕುಚಂಗಳ
ಬೆರಗಂ ಬೆರಲಿಟಿಸೆ ಪರಮಹಸ್ತಪುಟಾಂ
ತರದೊಳಮೃತಮನೆ ಕಱೆದಾ
ವರವಧು ಪುತ್ರಾರ್ಥಿ ಪಾತ್ರಶೇಷಮನುಣ್ಬಳ್ ೧೦೯

ಚಂ॥ ನವವರರತ್ನ ಕಾಂಚನದೆ ನಿರ್ಮಿಸಿ ನಾಟ್ಟಿಭುವಂಶಮೇರು ಸಂ
ಭವಿಸುವನಕ್ಕೆ ಮಜ್ಜರಭೂಮಿಯೊಳೆಂದು ಸುಮೇರುವಂ ಮಹೋ
ತ್ಸವದೆ ಜಿನೇಂದ್ರಜನ್ಮಸವನೋತ್ಸವಮಂ ಮಿಗೆ ಮಾಡಿ ತತ್ಪಯಃ
ಪ್ಲವದೊಳೆ ಮಿಂದು ವಂದಿಗೆ ತವದ್ರಿಯನೀವಳಿದೇನುದಾತ್ತೆಯೋ ೧೧೦

ಮಂದಾಕ್ರಾಂತ॥ ಸಂತಾನಶ್ರೀಪ್ರದಮಿದೆನಗಕ್ಕೆಂದು ರತ್ನಂಗಳಿಂದಂ
ಸಂತಾನೋರ್ವೀಜಮನೆಸಗಿ ತನ್ಮೂಲದೊಳ್ ಭವ್ಯವಿದ್ವ
ತ್ಸಂತಾನಂ ಜೇಂಕರಿಸಿ ಜಿನಪೂಜೋತ್ಸವಂ ಮಾಡೆ ದಿಗ್ವಾ
ಸಂ ತಾನಾಯ್ತೆಂದೆನೆ ಜಸಮೊಱಲ್ದರ್ಥಿಗೀಯುತ್ತುಮಿರ್ಪಳ್ ೧೧೧

ಕಂ॥ ವ್ರತಮೆನಿತೊಳವನಿತುಮನಾ
ಸತಿ ಸತತಂ ನಿರತಿಚಾರದಿಂ ನೆಗೞ್ವಳ್ ವಿ
ಶ್ರುತತೀರ್ಥಕೃತ್ಪುರಾಣಂ
ಶ್ರುತಿಪೂರಮೆನಲ್ ಕರಂ ಸುತಾರ್ಥಿನಿ ಕೇಳ್ವಳ್ ೧೧೨

ಪದೆದಷ್ಟಾಹ್ನಿಕದೊಳ್ ಪ
ರ್ವದಿನಂಗಳೊಳಖಿಳತೀರ್ಥಕೃತ್ಕಲ್ಯಾಣಾ
ಭ್ಯುದಯದಿವಸಂಗಳೊಳ್ ತ
ಪ್ಪದುಪೋಷಿತೆಯಾಗಿ ದರ್ಭಶಯನದೊಳಿರ್ಪಳ್ ೧೧೩

ಪದಿನಾಱನೆಯಗ್ಗದ ಸ
ಗ್ಗದ ಸಾಧನವೆನಿಪ ಪುಣ್ಯಮಂ ಪುತ್ರನಿಮಿ
ತ್ತದಿನಾಚರಿಸಿದಳಾ ಸ
ಗ್ಗದೊಳಾರ್ಗಳ ಪುತ್ರಸೌಖ್ಯಮಂ ಪೆತ್ತವರ್ಗಳ್ ೧೧೪

ವ॥ ಇಂತು ನೆಗೞ್ತೆಗಂ ಪೊಗೞ್ತೆಗಮಳುಂಬಮಪ್ಪ ಧರ್ಮತತ್ಪರತೆಯಿನಿನಿತು ಪೊೞ್ತುಪೋದಂ ತಪ್ಪದೆ ಕಾಲಂ ಸಲುತ್ತುಮಿರಲೊಂದುದೆವಸಂ

ಕಂ॥ ಮೂಡಿದ ಮೊಡವಿ ಮುಗುಳ್ಮೊಗ
ವೀಡಿಱಿವುನ್ಮಂಜರೀಸ್ತನಂ ತೋಳ್ಮೊದಲೊಳ್
ತೀಡುವ ನಱುಗಂಪೇಂ ಪಿಸು
ಣಾಡಿದುದೋ ಸತಿಗೆ ಪುಷ್ಪಸಮಯೋದಯಮಂ ೧೧೫

ವ॥ ಆಗಳ್

ಕಂ॥ ಕಳೆದುಂ ಮಣಿದೊಡವಂ ಪೊಂ
ಗಳ ತೊಡವಂ ತೊಟ್ಟು ತಳೆದು ಸೆಳೆಯಂ ಪೋಲ್ತಳ್
ಕಳೆದುಡುಗಣಮಂ ಕೆಮ್ಮುಗಿ
ಲೆಳಸಿದ ಪೆಱ ಪೊಳೆವ ಪೂರ್ವದಿಗ್ದೇವತೆಯಂ ೧೧೬

ವ॥ ಆ ಚತುರ್ಥದಿನದ ದಿನಕರೋದಯದೊಳ್

ಚಂ॥ ಒವಗಿವ ಸೌಖ್ಯಮಂ ಧರೆಗೆ ಬೀಱುವಪೂರ್ವಫಲೋದಯಕ್ಕೆ ತಾ
ಣಿದೆ ನೆಲೆಯೆಂದು ಕಲ್ಪಲತೆಗಚ್ಚರಿಯರ್ ಪೊರೆದೊಂದು ದೇಸೆಯಿಂ
ಮೊದಲೊಳಲಂಪಿನಿಂ ಸುರಭಿಗೋಮಯಮಂ ತಳಿವಂತೆ ಗಾಂಗತೋ
ಯದ ಸಖಿಯರ್ ನೃಪಾಂಗನೆಗೆ ಮಂಗಳಮಜ್ಜನಮಂ ನಿಮಿರ್ಚಿದರ್ ೧೧೭

ವ॥ ಅನಂತರಂ ಭಗವಜ್ಜಿನೇಂದ್ರಪೂಜಾವಿವಿಧಮಂಗಳಮನಾಚರಿಸಿ ಮಂಗಳಾಲಂಕಾರಾಲಂಕೃತೆಯಾಗಿ

ಚಂ॥ ಮಳಯಜದಣ್ಪು ಸೋರ್ಮುಡಿಯ ಮಲ್ಲಿಗೆಯುಟ್ಟ ದುಕೂಲಚೇಲಮು
ಜ್ಜಳಿಸುವ ಮುತ್ತಿನಾಭರಣಮೊಪ್ಪುವ ಕಪ್ಪುರದೋಲೆ ಬಾಯ ಕೆಂ
ಪೆಳಗಿನೊಳಣ್ಕೆಗೊಂಡ ಸುಲಿಪಲ್ ಪೊಸದೇಸೆಯನೀಯೆ ಕೂಡೆ ಕಂ
ಗೊಳಿಸಿದುದಂದು ಬೆಳ್ವಸದನಂ ಕುಮುದಾಯತಲೋಲನೇತ್ರೆಯಾ ೧೧೮

ವ। ಅಂತು ಕೆಯ್ಗೆಯ್ದುಂದಿನಿರುಳ್ ಮನಃಪ್ರಿಯನ ಸೂೞ್ಗೆವಂದು

ಕಂ॥ ರತಿರಾಗಾಮೃತವಾರ್ಧಿಯೊ
ಳತನುಕ್ರೀಡಾನಿಮಗ್ನೆಯಾದಂತಾ ದಂ
ಪತಿಗೆ ಮಿಗೆ ಮೂಡುತೆ ಮುೞುಂ
ಗುತೆ ಬೆಂಡೇೞ್ವಂತಿರಾಗೆ ಕಣ್ಗೆಯ್ದಾಗಳ್ ೧೧೯

ಪರಿಪೂರ್ಣಚಂದ್ರನಂ ತಿ
ಗ್ಮರೋಚಿಯಂ ಕಲ್ಪವೃಕ್ಷಮಂ ಕ್ಷೀರಜಲಾ
ಕರ ಮಂದರ ವಿಕಸದ್ವಾ
ರಿರುಹಮನಾ ಕಾಂತೆ ನಿಶೆಯ ಕಡೆಯೊಳ್ ಕಂಡಳ್ ೧೨೦

ಉ॥ ಮಂಗಳಗಾಯಿಕಾಮಧುರಗಾನದಿನೆೞ್ಚಿಜಿನೆಯ್ದಿ ನಿತ್ಯಕೃ
ತ್ಯಂಗಳ ಮಂಗಳಾಚರಣಮಂ ನೆಗೞುತ್ತೆ ಜಿನೇಂದ್ರನಂ ಜಗ
ನ್ಮಂಗಳವಸ್ತುವಿಂದಧಿಕ ಭಕ್ತಿಯಿನರ್ಚಿಸಿ ಕಾಂತನಲ್ಲಿಗೊ
ಲ್ದಂಗನೆ ಬಂದಳಂಗಜನ ಮಂಗಳಲಕ್ಷ್ಮಿಯೆನಲ್ ವಿಲಾಸದಿಂ ೧೨೧

ವ॥ ಬಂದು ಮನೋವಲ್ಲಭನ ಸಿಂಹಾಸನಾರ್ಧಕ್ಕಲಂಕಾರಮಾಗಿರ್ದು ತನ್ನ ಕಂಡ ಕನಸುಗಳನನುಕ್ರಮದಿಂ ಪೇೞ್ವುದುಮರಸನಪರಿಮಿತಪರಿತೋಷಪೀಯೂಷಪಾರಾವಾರದೊಳೋಲಾಡಿ ಕೆಲದೊಳಿರ್ದ ಪುರೋಹಿತನ ಮೊಗಮಂ ನೋೞ್ಪುದುಮಾತನಾ ಸ್ವಪ್ನವಿಶೇಷಫಲಂಗಳಂ ಜಲಕ್ಕನಾಗೆ ತಿಳಿದಿಂತೆಂದಂ

ಮ॥ ವಿಧುವಿಂದಂ ವಿಬುಧೋತ್ಕರಪ್ರಿಯಕರಂ ತೀವ್ರಾಂಶುವಿಂದಂ ಪ್ರತಾ
ಪಧನಂ ಕಲ್ಪಮಹೀಜದಿಂ ಧನವಧಿತ್ಯಾಗಪ್ರಭಾವಂ ಪಯೋ

ನಿಧಿಯಿಂದಂ ನಿಖಿಳಾವನೀಶ್ವರಭಯಸ್ಥಾನಂ ದಳತ್ಪದ್ಮದಿಂ
ದಧಿಕ ಶ್ರೀನಿಳಯಂ ಸುಪುತ್ರಸೊಗೆತರ್ಕುಂ ನಿಮ್ಮೊಳುರ್ವೀಶ್ವರಾ ೧೨೨

ವ॥ ಎಂದು ಪೇೞ್ವುದುಂ ಪುರೋಹಿತನನೂನಪ್ರೀತಿದಾನದಿಂ ಮನ್ನಿಸಿ

ಕಂ॥ ಮಂದಾನಿಳನಲೆಪದೆ ಮಾ
ಕಂದಂ ವಿಚಕಿಳಲತಾಸಮೇತ ಮರಲ್ವಂ
ತಂದು ಪುರೋಹಿತನಮೃತ
ಸ್ಯಂದಿವಚಸ್ತತಿಯಿನೊಸೆದುದಾ ನೃಪಚಿತ್ತಂ ೧೨೩

ವ॥ ಅಂತು ಸುಖಸಂಕಥಾವಿನೋದದಿಂದಿರುತ್ತುಂ ಕೆಲವಾನುಂ ದಿವಸಂಗಳ್ಗೆ

ಕಂ॥ ಭವಭವದೊಳ್ ಕಟ್ಟಿದನೇ
ಕವಿಧದ ದುಷ್ಕರ್ಮಮಂ ಕಟಿಲ್ಚಲ್ ಪುಣ್ಯಾ
ಸ್ರವದೊಳ್ ನೆರೆಯಲ್ ಭವ್ಯ
ರ್ಗಿವೆ ದಿವಸಮೆನಲ್ಕೆ ಬಂದ ನಂದೀಶ್ವರದೊಳ್ ೧೨೪

ಮ.ಸ್ರ॥ ಪಿರಿದುಂ ದೇವೇಂದ್ರನೊಳ್ ಮಚ್ಚರಮಿದೆನೆ ಚೈತ್ಯಾಲಯಂ ಮಂ
ದರಚೈತ್ಯಾವಾಸಮಾಗಲ್ಕುಪವನ ಚತುರಾಶಾಸರೋಮಧ್ಯಕೇಳೀ
ಧರಣೀಭೃಚ್ಚೈತ್ಯಗೇಹಾವಳಿ ನಿರುಪಮನಂದೀಶ್ವರದ್ವೀಪಚೈತ್ಯೋ
ತ್ಕರಮಾಗಲ್ ಪೆಂಪಿನಷ್ಟಾಹ್ನಿಕದ ಮಹಿಮೆಯಂ ಮಾಡಿದಂ ಪದ್ಮರಾಜಂ ೧೨೫

ವ॥ ಅಂತು ನಿರ್ವರ್ತಿತನಂದೀಶ್ವರಪರ್ವಾಪೂರ್ವ ಮಹಾಮಹನಾಗಿ ಬಹಿರುದ್ಯಾನದಿಂ ಪುರಾಭಿಮುಖನಾದ ಸಮಯದೊಳ್ ಒರ್ವ ದೂತನತಿತ್ವರಿತಗತಿಯಿಂ ಬಂದು ಸರ್ವಾಂಗಾಲಿಂಗಿತಮಹೀತಳನಾಗಿಂತೆಂದಂ

ಉ॥ ದೇವ ಭವದ್ವಿರೋಧಿನರಪಾಳರ ದೇಶದಶೇಷವಸ್ತುವಾ
ಹಾವಳಿಯೆಲ್ಲಮಂ ನೆಱೆಯೆ ಸೂಱೆಯನೀೞ್ಕುಳಿಗೊಂಡು ಚಂಪೆಯೊಳ್
ತೀವಿ ತದೀಶನಂ ಸೆಱೆಗೆದಂದಿಳೆಯಿಂದುದೆನಲ್ ಪುಳಿಂದರೆ
ಮ್ಮೀ ವಿಷಯಕ್ಕೆ ದಾೞಿಯಿಡಲುಜ್ಜುಗದಿಂದಿರೆ ಮಿಕ್ಕ ಸೊರ್ಕಿನಿಂ ೧೨೬

ಕಂ॥ ಚರರಱಿಪೆ ಚತುರ್ಬಲಮಂ
ನೆರಪುತ್ತುಂ ಭರದೆ ಸಿಂಹವರ್ಮಧರಾದೇ
ವರ ಸೇನಾಪತಿ ಚಂಪಾ
ಪುರಮಂ ಪರಿಯಿಟ್ಟು ಮುತ್ತಿದಂ ಮೂವಳಸಿಂ ೧೨೭

ವ॥ ಅಂತು ಗಾಳಿಗಂ ನುಸುಳಲ್ಬಾರದಂದದಿಂ ಸಂದಣಿಸಿ ಮುತ್ತಿ ಕೋಂಟೆಯಂ ಪತ್ತಲವ್ವಳಿಪಗುರ್ವಿನ ದೋರ್ವಲದ ಪೆರ್ವಲಮಂ ಕಂಡಡವಿಯೆಲ್ಲಮಂ ಸುಟ್ಟುರೆಯ ಮಸಕದಿಂ ಸುೞಿದು ಸುತ್ತಿ ಸುಡುವ ಬೆಟ್ಟವೇಸಗೆಯುಜ್ಜೇಗೆಗಿರ್ಚಿನ ಬಳಸಿಂಗೊಳಗಾದ ಸಿಂಗದ ಸಂಗಡದಂತೆಯುಂ ಕಾಡಾನೆಯ ಕಡುಪಿನಂತೆಯುಂ ಪೆರ್ವುಲಿಯ ಪಿಂಡಿನಂತೆಯುಂ ಕಾಡೆಮ್ಮೆವೋರಿಯ ಹಾರಿಯಂತೆಯುಂ ಪಂದಿಯ ಗೊಂದಳದಂತೆಯುಂ ಅಮ್ಮಾಪಿನ ತೋಮೆಯಂತೆಯುಂ ತೋಳದ ಗೂಳೆಯದಂತೆಯುಂ ಎತ್ತಲುಂ ಮಿಡುಂಕಲ್ಬಡೆಯದೆ ಸಿಡಿಮಿಡಿಗೊಂಡು ಸಿಡಿದು ಸಿಡಿಲೇಟ್ಗೆಯೆರ್ದು ಪಲ್ಗಡಿದು ಮಾಮಸಕಂ ಮಸಗಿ ಮುನ್ಮಾರ್ಗಮೊಳಸೋರದಗ್ಗಲಿಸಿದ ಮದದಿಂ ಮೇಗುಂ ಮೆಯ್ಸರಿಯದೆ ತಮ್ಮೊಳ್ ಪರಿಚ್ಛೇದಿಸಿ

ಮ॥ ರಸೆಯಂ ಪೊಕ್ಕುಳಿದಿರ್ದ ದಾನವಚಯಂ ದೇವೇಂದ್ರನೊಳ್ ಕಾದುವೇ
ರ್ವೆಸದಿಂದರ್ಪಿಸಿ ಬಂದುದೋ ರವಿಯ ಮೇಲೆಟ್ಟಿಂದುದೋ ದುಸ್ತಮಃ
ಪ್ರಸರಂ ತಾರ್ಕ್ಷ್ಯನನಿಕ್ಕಲುರ್ಕಿದುದೊ ಕಾಳವ್ಯಾಳಜಾಳಂ ವಿಗು
ರ್ವಿಸಿತೆಂಬಂತೆ ಪುಳಿಂದಸೇನೆ ಪೊಱಮಟ್ಟತ್ತಾ ಪುರದ್ವಾರದಿಂ ೧೨೮

ವ॥ ಅಂತು ಪೊಱಮಟ್ಟು ಅಗುರ್ವುಮದ್ಭುತಮುಮಾಗೆ ತಾಗಿ ತಳ್ತಿಱಿವಾಗಳ್

ಮ॥ ಅದನೇವೇೞ್ವೆಪೆನೀಗಳಾ ಸಮಯದೊಳ್ ಪತ್ತಿರ್ದ ಸೇನಾಸಮು
ದ್ರದದಂದೇಶಮಹೌರ್ವದುಗ್ರ ಸುಭಟಜ್ವಾಲಾಳಿಯಸ್ತ್ರ ಸ್ಫುಲಿಂ
ಗದ ಕೋಳ್ಗೆೞ್ದುದುದಿಲ್ಲ ತನ್ನಗರಕೋಟಾವೇದಿಕಾದ್ವಾರಮಾ
ರ್ಗದಿನುರ್ಚಿಂ ಪರಿದಾಂಪ ಲುಬ್ಧಕವಿಜೃಂಭದ್ವಾಹಿನೀಸಂಚಯಂ ೧೨೯

ವ॥ ಅಂತು ಗಾಳಿಗಿದಿರ್ಚಿದ ಮೇಘಾಳಿಯಂತೆ ಬೇಡೆವಡೆಯುಚ್ಚೊಡಿ ಪೋಗೆ ಚಂಪಾಪುರಮಂ ಪೊಕ್ಕು ತತ್ಪುರಾಧಿಪಂ ದೇವರ ದಿಗ್ವಿಜಯದಿಂ ತೊಟ್ಟು ಮೂವಿಡಿವಟ್ಟೆಪರ್ವನ ಪ್ಪುದಱೊ ಸೆಱೆಯಂ ಬಿಟ್ಟಲ್ಲಿಯೆ ನಿಲಿಸಿ ಕಿರಾತಕರ್ ತಂದೊಟ್ಟಿ ಬೆಟ್ಟದಂತಿರ್ದ ಸಾರದ್ರವ್ಯಸಂಚಯಕ್ಕೆ ಭಂಡಿಯುಂ ಕೊಟ್ಟಿಗೆಯುಂ ವೊಟ್ಟೆಯುಂ ಪೊಱೆಯಾಳುಂ ನೆಱೆಯದೆ ಚಾತುರ್ಬಲದ ತಲೆವೊಱೆಯೊಳ್ ತಂದಿಂದೀಗಳ್ ನಿನ್ನ ಪಾದಪದ್ಮಮಂ ಕಾಣಲ್ ಬರುತಿರ್ದಪನೆಂದು ಮತ್ತಮಿಂತೆಂದಂ

ಶಾ॥ ದೇವರ್ ದಿಗ್ವಿಜಯಂಗೆಯುತ್ತವಿಳ ಧಾತ್ರೀನಾಥರೊಳ್ ಕೊಂಡೆ ನಾ
ನಾವಸ್ತೂತ್ಕರದಿಂದನೇಕಗುಣಮಿಂತೀ ವಸ್ತುವಂತಾದೊಡೇ
ನೀವೃತ್ತರ್ಥಿಜನಕ್ಕಣಂ ತಣಿಯದಿರ್ಪೀ ನಿನ್ನ ಕೆಯ್ವೊಕ್ಕೊಡಾ
ದೇವಾದ್ರೀಂದ್ರಮಣೂಪಮಾನಮೆನೆ ಮತ್ತಿನ್ನಾವುದುಂ ದೊಡ್ಡಿತೇ ೧೩೦

ವ॥ ಎಂದು ಬಿನ್ನವಿಸಿ ವರ್ಣ್ಪ ದೂತನ ಮಾತಂ ಮನದೆಗೊಂಡು ತುಷ್ಟಿದಾನಂಗಳಿಂದವನಭೀಷ್ಟಮಂ ತೀರ್ಚಿ ತದುದ್ಯಾನಬಾಹಿರವಾಹಳೀಪ್ರದೇಶಕ್ಕೆ ವಂದು ಸಾಷ್ಟಾಂಗಪ್ರಣತಿಪೂರ್ವಕಂ ಕಾಣ್ಕೆಗೊಟ್ಟು ಪೊಡೆವಟ್ಟ ಸಿಂಹವರ್ಮನುತ್ತಮಾಂಗದೊಳ್ ಪದಮಿಟ್ಟು ತಂದು ಸಂದಳಿಸಿ ಗೊಂದಳಂಗೊಳಿಸಿದ ವಸ್ತುವಾಹನಾದಿಗಳಂ ಬೇಱೆವೇಱೆ ಪಿವರಿಸಿ

ನೋಟ್ಪಾಗಳ್ ಸಂತೋಷಗೊಂಡು

ಚಂ॥ ಎಣಿಸುವೊಡಂದದೊಂದೆರಡುಮೂಜಿಜಿ ಲೆಕ್ಕಮ ಲಕ್ಷ ಕೋಟಿಯಿಂ
ಗಣಿಯಿಸುವಾನೆಯೊಟ್ಟೆಯ ತುರಂಗದ ವೇಸರಿಯೆಮ್ಮೆಯಾಕಳೊ
ಳ್ಗಣಿಕೆಯರಸ್ತ್ರವಸ್ತ್ರ ಮಣಿಕಾಂಚನಭೂಷಣಪೂರ್ಣಪೇಟಿಕಾ
ಗಣವರ ಕುಪ್ಯಸಾರಧನದೋಳಿಗಳೆಣ್ದೆಸೆಗೆಲ್ಲ ಕಣ್ಪೊಲಂ ೧೩೧

ವ॥ ಅಂತು ತೋರ್ಕೆಗಳುಂಬಮುಮಾದನೇಕ ಧನ ಜೀವಧನಂಗಳುಮಂ ತಂದ ಸೇನಾನಿಯ ಸಾಹಸಮಂ ವೈಶ್ರವಣಾಮಾತ್ಯನುಂ ತಾನುಮೋರೊರ್ವರೊಳ್ ಮಗುಟೆಮಗುಟೆ ನುಡಿಯುತ್ತುಂ ಮಂಗಳಾನಕರವಂಗಳ್ ಮೊಱೆಗೆ ಪೊೞಲಂ ಪುಗುವಾಗಳ್

ಚಂ॥ ಅತನುಗುಣೋನ್ನತಂ ವಿನತಶತ್ರುಕುಲಂ ಸುಕುಲಪ್ರಭೂತಿ ಸಂ
ಗತಮಹಿಮೋತ್ತರಂ ವಿತರಣಪ್ರಥಿತಂ ಕಥಿತಪ್ರಭಾವ ಸ
ನ್ನುತ ಜಿನಮಾರ್ಗಧರ್ಮಚರಣಂ ಕರಣತ್ರಯಶುದ್ಧನೆಂದದೇಂ
ಸ್ತುತಿಯಿಸಿದತ್ತೊ ಸಂತಸದೆ ಪೌರಜನಂ ಪ್ರಭುವಂಶಮೇರುವಂ ೧೩೨

ಗದ್ಯ

ಇದು ಸಮಸ್ತಭುವನಜನಸಂಸ್ತುತಜಿನಾಗಮಕುಮುದ್ವತೀ ಚಾರುಚಂದ್ರಾಯಮಾಣಮಾನಿತ ಶ್ರೀಮದುಭಯಕವಿ ಕಮಳಗರ್ಭ ಮುನಿಚಂದ್ರಪಂಡಿತದೇವ ಸುವ್ಯಕ್ತಸೂಕ್ತಿಚಂದ್ರಿಕಾಪಾನ ಪರಿಪುಷ್ಟ ಮಾನಸ ಮರಾಳ ಗುಣವರ್ಮನಿರ್ಮಿತಮಪ್ಪ ಪುಷ್ಪದಂತ ಪುರಾಣದೊಳ್ ನಾಯಿಕಾಭ್ಯುದಯವರ್ಣನಂ ತೃತೀಯಾಶ್ವಾಸಂ

ಚತುರ್ಥಾಶ್ವಾಸಂ

ಕಂ॥ ಶ್ರೀ ಜಿನಪದನಖಮುಕುರಸ
ಮಾಜದೊಳೋರಂತೆ ನೋಡಿ ನಿಚ್ಚಂ ಕೆಯ್ಗೆ
ಯ್ದೀ ಜಗದೊಳ್ ಸದ್ದೃಷ್ಟಿಗೆ
ರಾಜಿಸುವಂ ಪ್ರಭುಗುಣಾಬ್ಜವನಕಳಹಂಸಂ ೧

ವ॥ ಎಂದು ಪೊಗೞುತ್ತುಮಲ್ಲಲ್ಲಿ ನಿಂದು ನೋೞ್ಪ ಪುರಜನದ ಗೊಂದಣದಿ ನೊಂದಿ ಸೊಗಯಿಸುವ ವಿಪಣಿವೀಥಿಯೊಳಗನೇಕಮಣಿತೋರಣಂಗಳಂ ನುಸುಳುತ್ತರಮನೆಗೆ ವಂದು ಚಂಪಾಪುರದ ಸೂಜ಼ೆಯಿಂ ಬಂದ ಸಮಸ್ತ ವಸ್ತುವಾಹನವಧೂಸಮೂಹಮಂ ಗೃಹವುಹತ್ತರಂಗೆ ಕೆಯ್ಕೊಳಲ್ವೇೞ್ದನಂತರಂ ಸಿಂಹವರ್ಮನನನೂನಸನ್ಮಾನದಾನದಿಂ ಸಂತೋಷಂಬಡಿಸಿ ಬೀಡಿಂಗೆ ಕಳಿಪಿ ಸುಖದಿನಿರೆ

ಕಂ॥ ಪರಿಜನಕೆ ಹರ್ಷಗರ್ಭಂ
ಪರಭೂಮಿಗೆ ಭೀತಿಗರ್ಭವಡಿಪ ಜಯಶ್ರೀ
ಗರಿಚೈತ್ರಕೇಳಿಗರ್ಭಂ
ನಿರುತಂ ನೆಲಸಲ್ಕೆ ನೆಲಸಿತರಸಿಯ ಗರ್ಭಂ ೨

ಕಿಡೆ ಮಧ್ಯದ ವಳಿರೇಖೆಗ
ಳೊಡರಿಸೆ ತೀರದ ಸಮೃದ್ಧಿ ಪುಟ್ಟೆ ಗುರುತ್ವಂ
ಜಡಗತಿಗೆ ಗಾಳಿಯಲಸಿಂ
ಗಡೆಯಾಗಿರೆ ಬರ್ಪ ತೊಜ಼ೆಯನಂಗನೆ ಪೋಲ್ತಳ್ ೩

ಚಂ॥ ಒಳಗೆ ಸಮಸ್ತಭೂಭೃದಧಿಕಂ ಪ್ರಬಳಂ ಮನುಜೇಂದ್ರಮಂದರಂ
ಬಳೆಯೆ ತಜುಂಜಿ ಸಂಚಳಿಸದಿರ್ದಪುದೀ ನಡುವೆಂಬ ಕೌತುಕಾ
ಕುಳಿತರ ದುಷ್ಟದೃಷ್ಟಿವಿಷರಕ್ಷೆಗಿದಂಜನಲೇಖೆಯೆಂಬ ಬ
ಳ್ಳಳಕೆಯನಾಳ್ದು ತಾಳ್ದಿದುದು ಕಾಂತೆಯ ಕರ್ಗಿದ ಬಾಸೆ ದೇಸೆಯಂ ೪

ವ॥ ಅದಲ್ಲದೆಯುಂ

ಮ॥ ಉದರೋದ್ದೇಶದೊಳಿರ್ಪ ಮಂಡಳಿಕಮಾರ್ತಂಡಂಗೆ ಮಯ್ದೋಱಲ
ಣ್ಮದೆ ಮಟ್ಟಂ ಪೊಱಮಟ್ಟುಂ ನೆಟ್ಟನೆಸೆದಿರ್ದೀ ನಾಭಿರಂಧ್ರಪ್ರದೇ
ಶದೆ ನೋಡುತ್ತಿದೆ ನೋಡೆ ಚಿತ್ತದ ತಮಂ ವಕ್ಷೋಜದೊತ್ತಿಂಗೆನಲ್
ಸುದತೀರಾಜಿತರೋಮರಾಜಿ ನಿಮಿರ್ದತ್ತುತ್ಕೋಮಳಶ್ಯಾಮಳಂ ೫

ಚಂ॥ ಒದವಿದ ಲೋಕಲೋಚನಸುಖಾಮೃತಮಂ ಕಱಪೊಳ್ಮುಗಿಲ್ ಮುಸುಂ
ಕಿದ ಶಿಖರಂಗಳೊಪ್ಪುತಿವೆ ಕಾಮನ ಕಾಂಚನಭೂಧರಪ್ರದೇ
ಶದೊಳೆನೆ ಕಂಬುಕಂಧರೆಯ ಕರ್ಬೊಗರೇಱದ ಚೂಚಕಂಗಳೊ
ಪ್ಪಿದುವು ಪೊದಟ್ಟಿ ನುಣ್ಣಮರ್ದ ಕೊರ್ವಿದ ಪೀನಕುಚಪ್ರದೇಶದೊಳ್ ೬

ವ॥ ಮತ್ತಂ

ಉ॥ ಭಾವೆ ನಿಜಾತ್ಮಜಂ ತೊಳಪ ಕೀರ್ತಿಯಿನೆನ್ನನದರ್ಪದಂತೆವೋಲ್
ಕಾವುದು ದೇವಿ ನೀಂ ದಿಟಕೆನುತ್ತಮನಾಗತಬಾಧೆಗಳ್ಗೆ ಬಂ
ದಾ ವಿಧುವೀ ವಧೂಮುಖದೊಳಿರ್ದಪನೋಲಗಿಸುತ್ತುಮಂಜಿನಂ
ಭಾವಕರಂ ಮನಂಗೊಳಿಸಿದತ್ತು ಬೆಳರ್ತ ಮೊಗಂ ಮೃಗಾಕ್ಷಿಯಾ ೭

ವ॥ ಆ ಸಮಯದೊಳ್

ಕಂ॥ ಸುರಕುಜದ ವನಮುಮಂ ಸಿ
ದ್ಧರಸದ ಪರಿಕಾಲನಿಂದ್ರಧೇನುವ ಪಯಮಂ
ಪರಿವಾರಜನಕೆ ಪದಪಿಂ
ವಿರಚಿಸುವೀ ಬಯಕೆ ದೇವಿಗಾಯ್ತೆಳವಸಿಱೊಳ್ ೮

ಧರಣಿಯ ಸೀಮೆಯ ನಾಲ್ಕುಂ
ಪರಿಧಿಯನವಲೋಕಿಸಲ್ ತ್ರಿಷಷ್ಟಿಶಲಾಕಾ
ಪುರುಷಪ್ರತತಿಯ ಕಥೆಯಂ
ಪರಿಭಾವಿಸಲಾಯ್ತು ದೌಹೃದಂ ನೃಪಸತಿಯೊಳ್ ೯

ವ॥ ಅಂತು

ಮ॥ ಪ್ರಣುತೋದಾತ್ತನ ಗರ್ಭದರ್ಭಕನ ಸರ್ವೌದಾರ್ಯ ಶೌರ್ಯಾದಿ ಸ
ದ್ಗುಣಮಂ ಸೂಚಿಸಲಾದುವಂದರಸಿಯೊಳ್ ಭೂಕಂಟಕಧ್ವಂಸಕಾ
ರಣಹಾಳಾಹಳಮುದ್ಗತಾರಿಭಯವತ್ಕೋಳಾಹಳಂ ಲೋಕರ
ಕ್ಷಣಕೇಳೀಜಯಕಾರಣೀಕೃತ ಮಹಾಕೌತೂಹಳಂ ದೌಹಳಂ ೧೦

ವ॥ ಅದಲ್ಲದೆಯುಂ

ಕಂ॥ ತನಗೆ ಪತಿಯಪ್ಪ ಯತ್ನತೆ
ಗನುನಯದಿಂದವನಿವನಿತೆಯಟ್ಟಿದ ರಕ್ಷಾಂ
ಜನಗುಟಿಕೆಯನೊಳಪೊಯ್ದಪ
ಳೆನೆ ಮಾಡಿದಳರಸಿ ಸುರಭಿಮೃತ್ಸೇವನೆಯಂ ೧೧

ವ॥ ಅಂತಾ ಕಾಂತೆಯ ಗರ್ಭಚಿಹ್ನಂಗಳಿನಿಸುಂ ಪ್ರಸನ್ನಂಗಳಾಗೆ

ಕಂ॥ ಪರಿವಾರದ ಕರ್ಣಪರಂ
ಪರೆಯಿಂ ವಲ್ಲಭೆಯ ಗರ್ಭವೃತ್ತಮನಿಳೇ
ಶ್ವರನಱಿದು ಮಂತ್ರಿಮುಖ್ಯಂ
ಬೆರಸಂತಃಪುರಕೆ ಬಂದು ಸಂತಸದಿಂದಂ ೧೨

ಮ.ಸ್ರ॥ ವಿವಿಧಾತೋದ್ಯ ಸ್ವನಂಗಳ್ ದೆಸೆಗೆಸೆವಿನೆಗಂ ಬಾಯಿನಂಗೊಟ್ಟು ನಾನಾ
ನವರತ್ನಸ್ವರ್ಣವಸ್ತ್ರಂಗಳನಖಿಳಜನಂ ಕೂಡೆ ಸಂಪನ್ನಮಪ್ಪ
ನ್ನವಿಳಾಚಕ್ರಂ ಮನಂಗೊಳ್ವಿನಮೆಸೆದು ಯಥಾಪ್ರಸ್ತುತೌಚಿತ್ಯದಿಂ ಪುಂ
ಸವನಾದ್ಯುತ್ಸಾಹಮಂ ಮಾಡಿದನಭಿನುತಮಂ ಪದ್ಮರಾಜಾಧಿರಾಜಂ ೧೩

ವ॥ ಅಂತು ಮಾಡಿ

ಕಂ॥ ವನಿತೆಯ ತನುರಕ್ಷೆಗೆ ತ
ಕ್ಕನುಚರಜನ ಕುಶಲಜನ ಸುಹೃಜ್ಜನ ಧಾತ್ರೀ
ಜನ ಸೂತೀಜನ ಸಖಿಜನ
ಮನಿತನಿತುಮನವನಿಪತಿ ನಿಯೋಜಿಸಿ ತಳರ್ದಂ ೧೪

ವ॥ ಅಂತನಂತರಂ

ಚಂ॥ ಅಲಸುವ ಮೆಯ್ಯುಮಾಗುಳಿಸುವಾನನಮುಂ ನಯದಿಂ ತೊಟಿಲ್ವ ಕ
ಣ್ಮಲರುಮನಾಕುಳಂ ತಳೆದ ತೆಳ್ವರಿಜುಂ ಚಿಗುರೇಱುತಿರ್ಪ ಮೇ
ಖಳೆಯ ತೊಡರ್ಪು ಕಣ್ಗೊಳಿಪ ಯಾನದ ಮೆಲ್ಪುಮಪೂರ್ವಭಾವಮಂ
ಲಲನೆಗೆ ತಂದವಂದನುದಿನಂ ಬಳೆಯುತ್ತಿರೆ ಗರ್ಭದರ್ಭಕಂ ೧೫

ಕಂ॥ ಕಿಡೆ ಕೃಶತೆ ಪೂರ್ಣಮಾಗಿಯು
ಮುಡುಪತಿಯಂತೆಜಿಗಿಸಿತ್ತು ಜಗಮಂ ದಿಟದಿಂ
ಬಡತನದೊಳುಂತೆ ಸೊಗಯಿಪ
ನಡು ತನಗಭಿವೃದ್ಧಿಯಾಗೆ ಸೊಗಯಿಪುದರಿದೇ ೧೬

ವ॥ ತತ್ಸಮಯದೊಳ್

ಕಂ॥ ಸುದತಿ ಘನತೋದ್ಯದಳಿಗೀ
ತದ ವಾದ್ಯದ ಹೃದ್ಯದುಚಿತಪತ್ರದ ರಸಚಿ
ತ್ರದ ಮಾಳಾಕರ್ಮದ ನ
ರ್ಮದ ಸಖಿಯರ ಬಿನದದಿಂದವಲಸಿಕೆಗಳೆವಳ್ ೧೭

ವ॥ ಮತ್ತಂ

ಚಂ॥ ಅರಗಿಳಿವೆಣ್ಣನೊರ್ಮೆ ನಲಿದೋದಿಸಿ ಸೋಗೆಯನೊರ್ಮೆ ನೃತ್ಯದೊಳ್
ವಿರಚಿಸಿ ಹಂಸಗರ್ಭಿಣಿಯನೊರ್ಮೆ ಗತಿಶ್ರಮಮಾಱೆ ಬೀಸಿ ಪೆ
ಣ್ಬುರುಳಿಯನೊರ್ಮೆ ಮೆಲ್ನುಡಿಯಿನಾಱಿಸಿ ಕಾಂತ ವಿನೋದದಿಂ ಗೃಹಾಂ
ತರದೊಳಗಿಂತು ಪೊೞ್ತುಗಳೆವಳ್ ಗುರುಗರ್ಭಭರಾಲಸತ್ವದಿಂ ೧೮

ಬಲಿಕುಸುಮಂಗಳೊಳ್ ನಲಿವ ಭೃಂಗಮನಂಗನೆ ನೋಯೆ ಮೆಟ್ಟುಗುಂ
ತೊಲತೊಲಗೆಂದು ಚಪ್ಪರಿಸಿದಪ್ಪಳೊ ಪಾದಪಯೋಜಲಕ್ಷ್ಮಿ ಮೇಣ್
ನೆಲನನನಂಗ ನುಗ್ಗಡಿಸಿದಪ್ಪನೊ ಪೇೞೆನೆ ನೂಪುರಂ ತಗು
ಳ್ದುಲಿಯೆ ಲತಾಂಗಿ ಗರ್ಭಭರದಿಂ ಸುೞೆವಳ್ ನವರತ್ನರಂಗದೊಳ್ ೧೯

ಗುರುತರಗರ್ಭದೊಳ್ ತನು ತನುತ್ವಮನಾಂತೊಡೆ ರತ್ನರಂಜಿತಾ
ಭರಣಭರಕ್ಕೆ ಮೆಯ್ದೆಗೆದುಪಾರ್ಜಿಸಿದಳ್ ಸುಮನೋಲಸದ್ಗುಣಾ
ಭರಣಮನಾತ್ಮಗರ್ಭದೊಳಗಿರ್ಪ ಸುತಂ ಸುಮನೋಲಸದ್ಗುಣಾ
ಭರಣನೆನಿಪ್ಪುದಂ ಕುಸುಮಕೋಮಳೆ ಭೂಮಿಗೆ ಸೂಚಿಪಂದದಿಂ ೨೦

ಕಂ॥ ಅಮೃತೋದ್ಭವಮೆನಿಪಾಹಾ
ರಮಿರಲ್ ಸೇವಿಸುವರಾರೊ ಕನಕಮನೆನೆ ಹೇ
ಮಮಯಗ್ರೈವೇಯಕಭಾ
ರಮನೊಲ್ಲದೆ ತಳೆದಳರಸಿ ಮುತ್ತಿನ ಸರಮಂ ೨೧

ವ॥ ಅಂತನೇಕವಿನೋದದೊಳಮಕೃತಪೂರ್ವರಸದೊಳಂ ನಿರ್ಭರಪ್ರಾದುರ್ಭಾವ ದಿವಸಂಗಳಂ ಕಳಿಪುತ್ತಿರ್ದು ಸಂಪ್ರಾಪ್ತಪ್ರಸವಸಮಯದೊಳ್ ನಿಖಿಳಶೋಭನವಾರಮಪ್ಪ ವಾರಮುಮಖಿಳ ಮಂಗಳಾಗ್ರೇಸರಮಪ್ಪ ವಾಸರಮುಮಶೇಷ ಕಲ್ಯಾಣಪಾತ್ರಮುಮಪ್ಪ ನಕ್ಷತ್ರಮುಂ ನಿಃಶೇಷಮಾಂಗಲ್ಯಕರಣಮುಮಪ್ಪ ಕರಣಮುಂ ಸಕಳಶ್ರೇಯೋನಿಧಿನಿಯೋಗಮಪ್ಪ ಯೋಗಮುಮೊಂದಿ ಬರ್ಪುದುಂ ಗಣಕಸಂಕುಳಂ ಸಂಕುವಂ ಪೂಜಿಸಿ ಸಮಾಹಿತಚ್ಛಾಯರಾಗಿ ಪಾರ್ದಿರೆ

ಮ.ಸ್ರ॥ ವಿಳಸನ್ನಿತ್ಯೋದಯಾಳಂಕೃತನಸಮಹಯಪ್ರೌಢನಕ್ಷೋಣಲಕ್ಷ್ಮೀ
ನಿಳಯಂ ಸನ್ಮಂಡಳಾಗ್ರಸ್ಫುರಿತಕರಹತೋದ್ವೃತ್ತರಾಜಂ ಮಹೀಭೃ
ತ್ಕುಳಮಸ್ತನ್ಯಸ್ತಪಾದಂ ಸಮುದಿತವಿನತಾನಂದನಂ ವೃತ್ತಪೀಠಾ
ವಿಳಮೋಷಂ ದ್ಯೋತಿತಾಶಾಂಬರಮುಖನೊಗೆದಂ ಭವ್ಯಲೋಕೈಕಮಿತ್ರಂ ೨೨

ವ॥ ಆಗಳ್

ಕಂ॥ ಎಸಗಿದುದು ತೆಂಬೆಲರ್ ಘೂ
ರ್ಣಿಸಿದುದು ಪಲತೆಱದ ಮಂಗಳಾನಕನಿನದಂ
ವಸುಧಾಜನದಿಂದಾದಂ
ಪಸರಿಸಿತೆತ್ತಂ ಪೊದಟ್ಟು ಜಯಜಯಘೋಷಂ ೨೩

ಮ॥ ನೆರವಾದಂ ನಮಗೊರ್ವನುರ್ವರೆಯನಾನಲ್ಕೀಗಳೆಂದಷ್ಟದಿ
ಕ್ಕರಿಗಳ್ ರಾಗಿಸಿ ತತ್ಕುಮಾರಕನ ಜನ್ಮೋತ್ಸಾಹತೂರ್ಯಸ್ವನೋ
ತ್ಕರಮಂ ಭಾವಿಸಿ ಕೇಳಲಾ ಸಮಯದೊಳ್ ನಿಷ್ಕಂಪಕರ್ಣಂಗಳಾ
ಗಿರೆ ಗಂಡಸ್ಥಳದಾನಲೀನಮಧುಪಂ ತಾಳ್ದಿತ್ತು ಸೌಸ್ಥಿತ್ಯಮಂ ೨೪

ವ॥ ಮತ್ತಂ

ಚಂ॥ ಅವಿರಳವಾದುದಂತಪುರದೊಳ್ ಕಡೆಯಿಕ್ಕುವ ತೋರಮುತ್ತು ಸೂ
ಸುವ ಪಟವಾಸಮಾವರಿಪ ಪೂವಲಿ ಪೊಣ್ಮುವ ಮಂಗಳೋಕ್ತಿ ಕ
ಟ್ಟುವ ಗುಡಿ ಪೊಯ್ವ ಬದ್ದವಣಮೆತ್ತುವ ಬೆಳ್ಗೊಡೆಯಾರ್ವ ವಂದಿ ಪು
ಟ್ಟುವ ಜನಸಂಭ್ರಮಂ ಕುಣಿವ ಗೊಂದಣವೆಕ್ಕಣವೀವ ಬಾಗಿನಂ ೨೫

ವ॥ ಆಗಳೊರ್ವಳಂತಃಪುರವಿಲಾಸಿನಿ ತದುತ್ಸವಮನವನೀಪತಿಗಱಿಪಲುತ್ಸುಕೆಯಾಗಿ

ಮ॥ ವಸನಂ ಮೇಖಳೆಯೊಳ್ ಸಹರ್ಷವಚನಂ ವಕ್ತ್ರಾಬ್ಜದೊಳ್ ವೇಗವಿ
ನ್ಯಸನಂ ಪಾದದೊಳುತ್ತರೀಯವಸನಂ ಜೋಲ್ದುರ್ವಿಯೊಳ್ ಸಾರ್ದ್ರನಿ
ಶ್ವಸನಂ ನಾಸಿಕೆಯೊಳ್ ಮದೋಲ್ಲಸನಮಾ ಲೋಲಾಕ್ಷಿಯೊಳ್ ಕೂಡೆ ವ
ರ್ತಿಸುವನ್ನಂ ಪರಿತಂದು ನಿಂದೆಜಗಿದಳ್ ಭೂಪಾಂಘ್ರಿಗಾಸ್ಥಾನದೊಳ್ ೨೬

ವ॥ ಅಂತೆಱಗಿ

ಕಂ ಬಿನ್ನಪಮವನೀವಲ್ಲಭ
ನಿನ್ನ ಮಹಾದೇವಿ ಸಕಳ ಭೂವಳಯದ ಭಾ
ಗ್ಯೋನ್ನತಿಯಿಂದಂ ಪಡೆದಳ್
ಸನ್ನುತ ಶುಭಲಕ್ಷಣಾಭಿನುತನಂ ಸುತನಂ ೨೭

ವ॥ ಎಂದು ಬಿನ್ನವಿಸಿ

ಮ॥ ಒಸೆದೀ ವಾರ್ತೆಗೆ ಪೂರ್ಣಪಾತ್ರಮಿದು ದೇವರ್ ಮನ್ನಿಸಲ್ವೇಱ್ಕುಮೆಂ
ದು ಸಮಂತೀಱ್ಕುೞಿಗೊಂಡೞಾಕ ನೃಪಕಂಠೋದ್ದೇಶದಿಂ ಶ್ರೀವಧೂ
ಹಸನಸ್ಫಾರಮನುಲ್ಲಸತ್ತರಳರತ್ನಾಧಾರಮಂ ತಾರಕ
ಪ್ರಸರಾಕಾರಮನಂಶುಜಾಳಕ ಲಸನ್ನೀಹಾರಮಂ ಹಾರಮಂ ೨೮

ಮಣಿವಿಭೂಷಣ॥ ಅಂದೆ ವಿಶ್ವಭುವನಂ ತನಗುಂಡಿಗೆಸಾಧ್ಯಮಾ
ದಂದದಿಂ ಮನಮೆಟಲ್ಚೆ ಮಹೀಪತಿ ತೀವಿದಂ
ತಂದು ತನ್ನ ವದನಕ್ಕೆ ವಿಕಾಸಮನಕ್ಷಿಗಾ
ನಂದಬಾಷ್ಪಮಮೊಡಲ್ಗೆ ಬೃಹತ್ಪುಳಕಂಗಳಂ ೨೯

ವ॥ ಅಂತನಂತಸಂತೋಷಶಿಖರಿಶೇಖರಾರೂಢನಾಗಿ ಪದ್ಮರಾಜಂ ತನ್ನಿಂದಧಿಕ ಸಮ್ಮುದದ ಪರಮಸುಖಕೋಟಿಯನೆಯ್ದುತ್ತುಮಿರ್ದ ನಿಜಾಮಾತ್ಯವೈಶ್ರವಣನ ಕೆಯ್ಯಂ ಪಿಡಿದಾಸ್ಥಾನಮಂಟಪದಿಂ ತಳರ್ದು ಪುತ್ರಮುಖಾವಲೋಕನಕುತೂಹಳತೆಯಿಂ ಬರ್ಪಾಗಳ್

ಮ॥ ವಿಳಸದ್ಗೀತರವಂ ಮೃದಂಗನಿನದಂ ಶಂಖಸ್ವನಂ ಸೂತಮಂ
ಗಳಪಾಠಧ್ವನಿ ಕಾಹಳಾವಿರುತಿಯಾಶೀರ್ವಾದನಾದಂ ನಟ
ಲ್ಲಲನಾನೂಪುರನಾದಮೆಂಬಿವು ಪೊದಟ್ದು ಜೃಂಭಿಸಲ್ ಚಂದ್ರಮಂ
ಡಲ ಲೀಲೋದಯವಾರ್ಧಿಯಂತೆ ರಭಸಂಬೆತ್ತತ್ತು ರಾಜಾಲಯಂ ೩೦

ಕಂ॥ ನೆಗೆದುವು ಮನೆಮನೆದಪ್ಪದೆ
ದುಗುಲದ ಕೌಸುಂಭಪಟದ ನೀಲದ ಗುಡಿಗಳ್
ಸೊಗಯಿಸಿ ಬೆಳ್ಮುಗಿಲಂ ಕೆ
ಮ್ಮುಗಿಲಂ ಕಾರ್ಮುಗಿಲನೆಸಗಲಾರ್ತುವು ನಭದೊಳ್ ೩೧

ಕೆದಱಿದ ಪಿಷ್ಟಾತಕಚೂ
ರ್ಣದೊಳಂ ಪಟವಾಸಚೂರ್ಣದೊಳಮಷ್ಟದಿಶಾ
ವದನಮುಮಾ ನಭಮುಂ ಪಡೆ
ದುದು ನಾನಾವರ್ಣರುಚಿರರಚನಾಚ್ಛವಿಯಂ ೩೨

ಮೃಗಮದದ ಯಕ್ಷಕರ್ದಮ
ದಗರುವ ಕುಂಕುಮದ ಕದಡುನೀರ್ದಳಿಪದಿನೋ
ಲಗಿಸಿದುವು ಸುಟಿವ ತಂಗಾ
ಳಿಗೆ ನೃಪಗೃಹವೀಥಿ ಬೆರಕೆಗಂಪಿನ ಸೊಂಪಂ ೩೩

ತೊಳಗುವ ತಾರಾತತಿ ಮಾ
ರ್ಪೊಳೆಯೆ ಮನಂಗೊಳಿಪ ತಿಳಿಗೊಳಂಗಳ ತೆಱನಂ
ತಳೆದುವು ಬಲಿಗೆದಱಿದ ವಿಚ
ಕಿಳದಲರಿಂ ನೀಲಮಣಿಮಯಪ್ರಘಣಂಗಳ್ ೩೪

ಒಸಗೆ ಮರುಳ್ಗೊಂಡಾಡುವ
ವಿಸರುಹ ವದನೆಯರ ನೂಪುರಂಗಳ ದನಿಯಿಂ
ಕುಸುಮೋಪಹಾರದಳಿಗಳ
ಲಸಿತಂ ದ್ವಿಗುಣಿಸಿತು ನೃಪಗೃಹಪ್ರಾಂಗಣದೊಳ್ ೩೫

ಹೃದಯಪ್ರಮೋದ ಮದಿರಾ
ಮದದಿಂ ಮೆಯ್ಮಱೆದು ಮೇಲುದಂ ಮಱೆದಿರ್ದಾ
ಡಿದುದು ಪಱೆ ಮಾಣ್ದೊಡಂ ಮಾ
ಣದೆ ಮೆಚ್ಚಿದ ತೆಱದಿನಾಪ್ತವೃದ್ಧಕದಂಬಂ ೩೬

ಮ ಎಳಮಿಂಚಂ ಮಣಿತೋರಣಾಂಶು ಮೊಟಗಂ ವಾದ್ಯಸ್ವನಂ ನೀರದೋ
ಪಳಮಂ ಪೂವಲಿ ತಳ್ತ ಕಾರ್ಮುಗಿಲನುದ್ಯದ್ಧೂಪಧೂಮಂ ನಿರಾ
ಕುಳದಿಂ ಪೋಲ್ತು ಖರಾಂಶು ಪೂಱೆ ಪಟವಾಸಕ್ಷೋದದಿಂ ಕೇಕಿಸಂ
ಕುಳ ಮಾಡಿತ್ತು ನಟೀಕದಂಬದೊದವನಂದಭ್ರಾಗಮಭ್ರಾಂತಿಯಿಂ ೩೭

ವ॥ ಅಂತು ನಿರ್ಭರಪ್ರಮೋದಪರವಶೀಭೂತ ಪೌರಜನಕ್ಷೋಭಶೋಭಾವ ಳಂಬಿಂಸಾದ ನಿಜಗೃಹಮಹೋತ್ಸವಮನೀಕ್ಷಿಸುತ್ತುಮೆಟ್ಟಂದು ನೈಮಿತ್ತಿಕನಿರೂಪಿತ ಶುಭಮುಹೂರ್ತದೊಳನೇಕ ರಕ್ಷಾಪರಿಗ್ರಹಪರೀತಮುಂ ಸಕಳಮಂಗಳಪರಂಪರಾಭಿ ಜಾತಮುಮಪ್ಪಭಿನೂತ ಪ್ರಸೂತಿಕಾನಿಕೇತನಮಂ ವೈಶ್ರವಣದ್ವಿತೀಯನಾಗಿ ಪೊಕ್ಕು

ಚಂ॥ ಎಳವೆಱೆಯಂತೆ ಮಾಣಿಕದ ತಣ್ಪೊಡರಂತುದಯಾದ್ರಿಯಿಂದಮಾ
ಗಳೆ ಪೊಱಮಟ್ಟ ಪದ್ಮಸಖನಂತೆ ತಳತ್ತಳಿಪಂಗಕಾಂತಿಯಂ
ತಳೆದೆಸೆದಿರ್ಪ ಬಾಲಕನ ಮುಗ್ಧಮುಖೇಂದುವನಂದು ನೋಡಿ ಭೂ
ತಳಪತಿ ಮಾಡಿದಂ ಸ್ನಪನಮಂಗಳಮಂ ನಿಜಹರ್ಷಬಾಷ್ಪದಿಂ ೩೮

ವ॥ ಅಂತು ಕಣ್ಣಾರೆ ನೋಡಿನೋಡಿ ತದಂಗಸಂಗತಶುಭಲಕ್ಷಣಂಗಳುಂ ದುಂದುಭಿಗಭೀರಘೋಷಮುಂ ತನ್ನುಮನಮಾತ್ಯನಂ ಮನಂಗೊಳಿಸೆ ತಮ್ಮೊಳೋರೋರ್ವರ್ಗೆ ತೋಱೆ ನಿಧಿಗಂಡ ಬಡವನಂತೆ ಕಡೆಯಿಲ್ಲದುತ್ಸವಕ್ಕೆ ಪಕ್ಕಾಗಿ ತದನಂತರಂ

ಉ॥ ಎನ್ನಯ ವಂಶಮೀ ರಮಣಿಯಿಂ ಕುಳಸಿಂಧುವಿನಂತಿರವ್ವವ
ಚ್ಛಿನ್ನಮುಮುದ್ಧಗೋತ್ರಕುಭೃದಾಶ್ರಯಮುಂ ಸುಪವಿತ್ರಜೀವನೋ

ತ್ಪನ್ನಪಿಲಾಸಮುಂ ಸಕಲಸತ್ಕವಿಸೇವ್ಯಮುಮಾದುದೆಂದುಮು
ಯ್ಪನ್ನಡೆನೋಡಿದಂ ಪ್ರಸವಪಾಂಡುರತನ್ವಿಯನೊಲ್ದು ನೋಡುತುಂ ೩೯

ವ॥ ಆಗಳರಸಿ ಲಜ್ಜಾರಸಮನಪ್ಪುಕೆಯ್ದಿರ್ಪುದುಂ ಸಚಿವವಚನೋಪರೋಧದಿಂ ಪೂಜಿಮಟ್ಟನೂನ ದಾನ ಸನ್ಮಾನದಿಂ ಪ್ರಸೂತಿಕಾಗೃಹನಿಹಿತನಿಖಿಳಜನಮುಮಂ ದೈವಜ್ಞ ಜನಮುಮಂ ಮನಮೊಸೆದು ಮನ್ನಿಸಿ

ಉ॥ ಕ್ಷೋಣಿಯೊಳಿನ್ನರಾರೆನೆ ಜನಂ ಪರಿವಾರಜನಕ್ಕೆ ಬಾಂಧವ
ಶ್ರೇಣಿಗೆ ವಂದಿಸಂತತಿಗೆ ವಸ್ತುಗಳಂ ತಣಿವನ್ನಮಿತ್ತು ಗೀ
ರ್ವಾಣಕುಜಕ್ಕೆಲಕ್ಕೆ ಮಿಗಿಲಾಗಿ ಮಹೀಪತಿಜಾತಕರ್ಮಕ
ಲ್ಯಾಣವಿಭೂತಿಯಂ ಮೆಱೆದನುಣ್ಮೆ ಮಹೋತ್ಸವತೂರ್ಯನಿಸ್ವನಂ ೪೦

ವ॥ ಅಂತು ಮೆಱೆದು

ಮ॥ ಚಿರಸಂಬದ್ಧಚಮೂರುಸಿಂಹಚಯಮಂ ಕಾಂತಾರಚಕ್ರಕ್ಕೆ ಪಂ
ಜರಪಾರಾವತಕೀರಸಾರಿಕೆಗಳಂ ಕೇಳೀವನಾಂತಕ್ಕೆ ಭೀ
ಕರಕಾರಾಗೃಹನಿಷ್ಠಿತಾರಿನೃಪರಂ ಮುನ್ನಾಳ್ದ ದೇಶಕ್ಕೆ ಬಿ
ಟ್ಟರಸಂ ರಾಗರಸಂ ಮಿಗಲ್ ಕಲಿಪಿದಂ ಪುತ್ರೋದಯೋತ್ಸಾಹದೊಳ್ ೪೧

ವ॥ ತದನಂತರಂ ದೈವಜ್ಞ ವಿಜ್ಞಾಪಿತದಶಮದಿನದ ಶೋಭನಮುಹೂರ್ತ ದೊಳೊಸಗೆಯನಸದಳಂ ಮಾಡಿ

ಮ॥ ನಿರುತಂ ಶ್ರೀಗೆ ನಿವಾಸನಪ್ಪ ನಿಧಿರೂಪಂ ತಾನೆ ದೀನಾರ್ಥಿಗ
ಪ್ಪ ರಿಪುಪ್ರಾಣಸಮೀರಸಂಹರಣಕೇಳೀಶೀಳನಪ್ಪಿತನೊಳ್
ಕರಮನ್ವರ್ಥಮಿದಾದುದೆಂದು ವಿಬುಧರ್ ಮೆಚ್ಚಲ್ ಮಹಾಪದ್ಮನೆಂ
ದರಸಂ ಸೂನುಗೆ ನಾಮಕರ್ಮವನತಿಪ್ರಾಗಲ್ಭ್ಯಮಂ ಮಾಡಿದಂ ೪೨

ವ॥ ಆ ಸಮಯದೊಳ್

ಉ॥ ಅರ್ಥಿಗೆ ಮುನ್ನಮೇಂ ತಣಿಸಿದೇನುಮನಿತ್ತರೆ ಪೇೞ್ ಪರೋಪಕಾ
ರಾರ್ಥಮಿದಂ ಶರೀರಮೆನಿಪುನ್ನತಿಯಂ ನೆಗೞ್ದುದ್ಧರಾರೊ ಮ
ತ್ತಾರ್ಥಿತಮೆಂದು ಕೌತುಕದಿನೀ ಧರೆ ಬಣ್ಣಿಸೆ ಸೂಱೆಬಿಟ್ಟನ
ರ್ಥಾರ್ಥಿಗೆ ಪೊನ್ನ ಪುಟ್ಟಿಗೆಯ ರನ್ನದ ರಾಶಿಗಳಂ ಮಹೀಭುಜಂ ೪೩

ವ॥ ಅಂತು ಮಂಗಳೋಚಿತಕ್ರಿಯಾನಿವಹಮಂ ನಿರ್ವರ್ತಿಸಿ ಸುಖದಿನಿರೆ

ಮ॥ ಜನನೀಲೋಚನಕೈರವಕ್ಕತಿವಿಕಾಸಶ್ರೀಯನೀಯಲ್ ಸುಹೃ
ಜ್ಜನರಾಗಾಮೃತವಾರ್ಧಿಯಂ ಬಳಯಿಸಲ್ ವಿದ್ವಿಣ್ಮುಖಾಬ್ಜಕ್ಕೆ ಕುಂ
ದನೊಡರ್ಚಲ್ ನೆಲದೇಟ್ಗೆವಾಡಿವದ ಕಾಂತಿಸ್ನಿಗ್ಧಮುಗ್ಧೇಂದುವೆಂ
ಬಿನವಾಳ್ದಂ ಪ್ರತಿವಾಸರೋಪಚಯಮಂ ಲಂಬಾಳಕಂ ಬಾಲಕಂ ೪೪

ಕಂ॥ ಪರಕಲಿಸಿದ ಕಾಡಿಗೆಯಂ
ತರುಣನ ನಗೆಮೊಗಮುಮಳಿಗಳೆಱಗಿದ ಹೇಮಾಂ
ಬುರುಹದಲರಂತೆ ಸೊಗಯಿಸೆ
ಪರಿಭವಿಸಿದನಂದು ಪೂರ್ಣಶಶಿಮಂಡಲಮಂ ೪೫

ಕನಕಾಂಬುಜಕುಟ್ಮಲಮಧು
ವನಲಂಪಿಂ ನಲಿದು ಪೀರ್ವ ನವಮಧುಕರನಂ
ನೆನೆಯಿಸಿದನಂದು ಜನನೀ
ಸ್ತನರಸಸುಖಪಾನಲೀನಲಂಪಟರಸನಂ ೪೬

ಅವಿದೊಳಗೆ ಜಿನುಗುವಳಿಗಳ
ರವಮಂ ಗೆಡೆಗೊಂಡು ಗರ್ಭರಜಮಂ ಪೊಱಸೂ
ಸುವ ಕಮಳಮೆನಿಸೆ ಮೊಗಮು
ತ್ಸವದ ತೊದಳ್ನುಡಿದು ಬೀಱಿದಂ ಬಿಱುನಗೆಯಂ ೪೭

ದರಹಾಸಲತೆಯ ಬೀಜೋ
ತ್ಕರಮೆನೆ ದರಹಾಸಲಕ್ಷ್ಮಿ ತಾಳ್ದಿದ ಮುಕ್ತಾ
ಭರಣಮೆನೆ ನಗೆಗಳೊಗೆದಿರೆ
ಸುರತರುವಿನ ಸಸಿ ಮುಗುಳ್ತುದೆನಿಸಿದನೆನಸುಂ ೪೮

ರಕ್ಕೆವಣಿ ಪುಲಿಯುಗುರ್ ಪಸು
ರ್ವೊಕ್ಕುಳಿ ಪೊಂಗೆಜ್ಜೆ ಕಡಗಮುಡೆವಣಿ ಮಾಂಗಾಯ್
ಮೊಕ್ಕಳಗಾಡಿಗೆ ಜಡೆ ಸೊಡ
ರ್ಕ್ಕಿನ ಬೊಟ್ಟೆಂಬ ಬಾಳವಚ್ಚದಿನೆಸೆದಂ ೪೯

ಚ॥ ತನಗಧಿನಾಥನೆಂಬ ಪದಪಿಂದೆರ್ದೆಯೊಳ್ ಮಹಿಕಾಂತೆ ನೆಟ್ಟನೀ
ತನನಿರಿಸಿಟ್ಟಳೆಂಬಿನೆಗಮಾತ್ಮತನುಪ್ರತಿಬಿಂಬಡಂಬರಂ
ವಿನಿಹಿತರತ್ನಕುಟ್ಟಿಮದೊಳೊಪ್ಪೆ ತಳರ್ನಡೆದಾಡಿ ಚೆನ್ನಚೆ
ನ್ನನೆ ನಡೆತರ್ಪ ದಾದಿಯರ್ಗೆ ಮಾಡಿದನಾತನತಿ ಪ್ರಮೋದಮಂ ೫೦

ವ॥ ಅದಲ್ಲದೆಯುಂ

ಉಡೆವಣಿಗಟ್ಟುವಂದೆ ರಿಪುದಂತಿಘಟಂ ಮದವೆತ್ತಿ ಕಟ್ಟಿ ದ
ಟ್ಟಡಿಯಿಡುವಂದೆ ವೈರಿಧರೆ ಗೋಟಡೆ ತೊಟ್ಟಿಲನೇಱುವಂದೆ ಮಾ
ರ್ಪಡೆ ಗಿರಿದುರ್ಗಮೇಱೆ ತೊದಳಂ ನುಡಿವಂದೆ ವಿರೋಧಿ ಕಷ್ಟಮಂ
ನುಡಿಯೆ ಜಗಕ್ಕೆ ಬಾಲ್ಯದೊಳೆ ಸೂಚಿಸಿದಂ ಶಿಶು ಶೌರ್ಯತೇಜಮಂ ೫೧

ವ॥ ಅಂತೆನಿಸಿ ನೆಗಟ್ಟಿ ಶತ್ರು ಶಾಸನಂಗನ್ನಪ್ರಾಶನಮುಂ ಬಂಧುಜನವರ್ಧನಂಗೆ ವರುಷವರ್ಧನವುಮಂ ಭುವನಚೂಡಾಭರಣಂಗೆ ಚೂಡಾಕರಣಮುಂ ಮೊದಲಾದ ಸಮುಚಿತಕ್ರಿಯೆಗಳಂ ಯಥಾಕಾಲದೊಳ್ ಮಹೀಪಾಲಕಂ ಮಾಡಿಸಿ ತದನಂತರಂ ಕ್ರಮಕ್ರಮದಿ ನಂತಃಪುರಪ್ರಚಾರಮಾ ಸೇವ್ಯವೃತ್ತಿ ಸಮನಿಸೆ

ಕಂ॥ ಸಹಪಾಂಶುಖೇಳರೆನಿಸಿದ
ಬಹುನೃಪದಾರಕರ ನಡುವೆ ದಾಸೀಕರರಿಂ
ಗೃಹಿತಮಣಿಕನಕಮಂಡನ
ಸಹಿತಂ ಮಾರ್ಗಜಟಿ ನೂಂಕಿ ಪೊಕ್ಕುಪವನಮಂ ೫೨

ಚಂ॥ ತಿಳಿಗೊಳನಂ ಪಯೋಧಿಜಲದುರ್ಗಮಿದೆಂದು ಕಲಂಕಿ ಪಂಕಜಂ
ಗಳನರಿಧೇಯವೀರಶಿರಮೆಂದು ಕಿಮುಟ್ಟಿ ಮೃಣಾಳಮಂ ಖಳ
ರ್ಗಳ ಕರುಳೆಂದು ಕಿತ್ತು ಜಳಪಕ್ಷಿಯನನ್ಯಕುಟುಂಬಮೆಂದಸುಂ
ಗೊಳೆ ಸೆಱೆಗೆಯ್ದು ಸೂಚಿಸಿದನೇಱಸನಂ ಶಿಶು ಬಾಲಕೇಳಿಯೊಳ್ ೫೩

ವ॥ ಅಂತಗಣ್ಯ ತಾರುಣ್ಯಲಕ್ಷ್ಮಿಯಂ ತಳೆದು ಗುರುಜನದ ಪರಿಜನದ ಮನಮಂಬ ನಿಮ್ನಗೆಯಿಂದತಿಬಹುಳ ಮೋಹರಸಮನೋರಂತೆ ತೀವಿ ಕಱೆವ ನಿರ್ವಂದ ನೀರಧರಮನಿಸಿ ತತ್ಕುಮಾರನಿರ್ಪನ್ನೆಗಂ

ಮ॥ ದ್ವಿರದಾರೋಹಣಯೋಗ್ಯವೀಥಿ ಹಯವೈಹಾಳಿಪ್ರದೇಶಂ ನಿರಂ
ತರಶಸ್ತ್ರಶ್ರಮಭೂಮಿ ಶಾಸ್ತ್ರಸಮಿತಿವ್ಯಾಖ್ಯಾನಶಾಲಾಪರಂ
ಪರೆ ಸುತ್ತಿರ್ಪಿನೆಗಂ ನೃಪಂ ನಿಜಸುತಂಗಾನಂದದಿಂ ಮಾಡಿಸಲ್
ಕರಮೊಪ್ಪಿತ್ತು ಸಲೀಲಕೇಳಿವನದೊಳ್ ವಿದ್ಯಾಮಹಾಮಂಡಪಂ ೫೪

ವ॥ ಆ ಮಹೀಮಂಡನಾಯಮಾನಮಂಟಪಕ್ಕೆ ಪದ್ಮರಾಜಂ ನಿಜತನೂಜನಪ್ಪ ಲೋಕೈಕಮಿತ್ರನಂ ವೈಶ್ರವಣಪುತ್ರನಪ್ಪ ಚಿತ್ರಭಾನುವೆರಸು ಮಂಗಳಾನಕರವಂಗಳೆಸೆಯೆ ಶುಭಮುಹೂರ್ತದೊಳೊಂದುದಿವಸಂ ಮುಂದಿಟ್ಟೊಡಗೊಂಡು ಬಂದು ಸಕಳ ವಿದ್ಯಾದೇವತಾ ಪೂಜೆಯನಖಿಳವಿದ್ಯಾಚಾರ್ಯಪೂಜೆಯುಮಂ ನಿರ್ವರ್ತಿಸಿ ವಿದ್ಯಾಪ್ರಾರಂಭದೊಳ್ ನಿಯೋಜಿಸಿ

ಕಂ॥ ಮನಮೆಳಸಿದಾಗಳಲ್ಲಿಗೆ
ವನಮಾಲಿಕೆವೆರಸು ವಿರಳಪರಿಜನವೃತ ನಿಂ

ಬೆನೆ ಬಂದು ನಿಚ್ಚನಿಚ್ಚಂ
ತನಯಮುಖಾಲೋಕಸುಖಮನೆಯ್ದುತ್ತಿರ್ದಂ ೫೫

ವರ ಗುರು ತನ್ನಂ ಸುದ್ದಗೆ
ವರೆಯಿಸೆ ಮೂಱನೆಯ ತಾಣದೆರಡಕ್ಕರಮಂ
ಸ್ವರದೊಳಮಂತಸ್ಥೆಯೊಳಂ
ಬರೆಯೆನೆ ವಿತರಣವಿನೋದನದನೇಕಜೀವಂ ೫೬

ಗುರುಮುಖದೊಳಾ ಕುಮಾರಂ
ಪರಿವಿಡಿಗೆಯ್ದುಪನತೀತ ಜನ್ಮಾಭ್ಯಾಸ
ಸ್ಫುರದಖಿಳವಿದ್ಯೆಗಳನೆನೆ
ಪರಿಣಮಿಸೆ ಕಳಾಕಳಾಪಮತಿ ಪಟುವಾದಂ ೫೭

ವ॥ ಆಗಿ

ಕಂ॥ ಲಿಪಿ ಶಬ್ದಶಾಸ್ತ್ರಮಭಿಧಾ
ನಪರಂಪರೆ ನಾಟಕಪ್ರಯೋಗಂ ಕಾವ್ಯಂ
ನೃಪನೀತಿ ಜೋಯಿಸಂ ರ
ತ್ನಪರೀಕ್ಷೆ ವಿಷಾಪಹರಣಮಾಯುರ್ವೇದಂ ೫೮

ಮ॥ ಒರೆಪಂ ಬಾಜನೆ ಗಂಧಯುಕ್ತಿ ಗಣಿತಂ ಗಂಧರ್ವಮಾಖ್ಯಾನಕಂ
ಭರತಾಭ್ಯಾಸಮಿಭೇಂದ್ರಶಿಕ್ಷೆ ಹಯಶಾಸ್ತ್ರಂ ಸೂಪಶಾಸ್ತ್ರಂ ನದೀ
ತರಣಂ ತಾಪನಮಿಂದ್ರಜಾಲಮೆಱಕಂ ಲೆಪ್ಪಂ ಶಿಲಾಕರ್ಮಮು
ತ್ಕಿರಣಂ ಚಿತ್ರಪಿವಕ್ಷೆ ವಾಸ್ತು ಶಕುನಜ್ಞಾನಂ ರಥಾರೋಹಣಂ ೫೯

ಕಂ॥ ಸ್ಮರಮಂತ್ರಂ ಬಹುಭಾಷಾ
ಪರಿಚಿತಿ ಯಂತ್ರಪ್ರಯೋಗಮಖಿಲ ವ್ಯೂಹೋ
ತ್ಕರಮೆಂಬಿನಿತಱೊಳಂ ಬ
ಲ್ಲರೆಲ್ಲರುಂ ಮೆಚ್ಚೆ ಪಡೆದನತಿಕೌಶಲಮಂ ೬೦

ಮ॥ ಅದಲ್ಲದೆಯುಂ

ಕಂ॥ ಕರವಾಳ ಕಣೆಯ ಕಂಪನ
ಪರಶು ಶರಾಸನ ಮುಸುಂಡಿ ಮುಸಲ ಗದಾ ತೋ
ಮರ ಶಂಕು ಶಕ್ತಿ ಚಕ್ರ
ಚ್ಛುರಿಕಾದ್ಯಾಯುಧದೊಳಧಿಗತಶ್ರಮನಾದಂ ೬೧

ವ॥ ಆಗಿ ಕೀರ್ತಿಪತಾಕನಗಣ್ಯ ಪುಣ್ಯಲಕ್ಷ್ಮೀಸದನವಕ್ಷಸ್ಥಳ ಪುರುಷಪುರುಷೋತ್ತಮ ಸರಸ್ವತೀಕರ್ಣಪೂರ ಸತ್ಯರಾಧೇಯ ಗಂಭೀರನೀರಾಕರ ಕದನಕಂಠೀರವ ಪ್ರಭುಕುಲೈಕರೋದ್ದೋಮಣಿಯೆಂಬ ಗುಣನಾಮಂಗಳಂ ವಿವಿಧ ವಿದ್ಯೋಪಾಧ್ಯಾಯರ್ಕಳತ್ತಣಿಂ ಪೆತ್ತು ನೆಗಳ್ತೆವಡೆದ ಮಹಾಪದ್ಮನೊಡನೆ ಕೂಡಿ

ಕಂ॥ ಪರಿಣತಿವಡೆದಂ ವಿದ್ಯಾ
ಪರಿಕರದೊಳಮಾತ್ಯಸುತನುವಿದು ಚೋದ್ಯಮ ಪೇಳ್
ಧರೆಯೊಳ್ ಪದ್ಮಜನೊಡನನ
ವರತ ಕೃತಾಭ್ಯಾಸನಾದ ವಿಭುವೆಂಬಿನೆಗಂ ೬೨

ವ॥ ಅಂತು ಪದ್ಮರಾಜಪುತ್ರಂಗೆ ಚಿತ್ರಭಾನು ಸಮವಿದ್ಯನಾದನಲ್ಲದೆಯುಂ

ಕಂ॥ ಎಳವೆಯೊಳಂ ಭಕ್ತಿಯೊಳಂ
ಬಳಿವಿಡದೆ ನೆಟಿಲ್ವೊಲಿರ್ಪ ಸಂಗತಿಯೊಳಮೊ
ಳ್ಪಟಿಯದೆ ಬಗೆಗೊಂಡಂ ಮನ
ದಟಿಪಿನ ಸಖನಾಗಿ ಭವ್ಯಚೂಡಾಮಣಿಯಂ ೬೩

ಕೌತುಕಮೇಂ ಕೇವಳಮೇ
ಪ್ರೀತಿ ಮಹಾಪದ್ಮಚಿತ್ರಭಾನುಗಳೊಳ್ ಶ್ರೀ
ಹೇತುವದು ಚಕ್ರವರ್ತಿವಿ
ಭೂತಿಗೆ ಮೊದಲದು ನಿರಸ್ತದೋಷಮದೆಂತುಂ ೬೪

ವ॥ ಎಂಜಿನಮಂತವರ್ಗಳಿರ್ವರುಂ ಸಕಳಕಳೆಯುಮಂ ಕೆಳೆಯುಮನೊಡನೊಡನೆ ಬಳೆಯಿಸುತ್ತಮಿರ್ಪಲ್ಲಿ

ಉ॥ ಜೊನ್ನದ ರಾತ್ರಿ ನೇತ್ರಕುಮುದಕ್ಕಿನನಂಬು ಮುಖಾಂಬುಜಕ್ಕೆ ತೈ
ಲನ್ನವ ಕಾಂತಿದೀಪಿಕೆಗೆ ಕಾರ್ಮುಕದೇಟ್ಗೆ ಶಿರೋಜಕೇಕಿಗು
ತ್ಪನ್ನವಸಂತ ಮಂಗಲತೆಗುಗ್ರಮದಂ ಭುಜದರ್ಪದಂತಿಗೆಂ
ಬನ್ನಗವಂದು ತಂದುದು ಕುಮಾರನ ಜವ್ವನದೇಟ್ಗೆ ಲೀಲೆಯಂ ೬೫

ಮ॥ ತರುಣೀಮೋಹನಮಂತ್ರಮಂ ಮನಸಿಜಂ ಕಸ್ತೂರಿಕಾಪಂಕದಿಂ
ಬರೆದಂತಿರ್ದುವು ಬರ್ಪ ಪೊಸೆ ವಿಜಯಶ್ರೀಯಂ ಬಹುಕ್ಷತ್ರಮ
ತ್ರರ ಸುತ್ತಿಂಗೊಳಗಾಗದಿರ್ದಜಿಕೆಯಿಂ ಸುತ್ತಲ್ಕೆ ನೀಟ್ದಂತೆ ಬಿ
ತ್ತರದಿಂ ದೀರ್ಘತರಂಗಳಾದುವು ಭುಜಂ ಸೌಂದರ್ಯಕಂದರ್ಪನಾ ೬೬

ಮ॥ ವಿಳಸತ್ಸಜ್ಜನಪೀಠವಾದುದು ಜಿನಂಗಂಬೊಕ್ಕನಿಂ ಪೆರ್ಮೆಯಂ
ತಳೆದತ್ತಲ್ಲದೊಡೆಂತದೆನ್ನೊಳೆಣೆಯೇ ಸನ್ಮಿತ್ರರಾಜಭ್ರಮಾ

ಕಳಿತಂ ನಂದಿತಗೋತ್ರವೈರಿಯೆನುತುಂ ಹೇಮಾಚಳಶ್ರೀಶಿಲಾ
ತಳಮಂ ಮೆಚ್ಚೆಯುಮಂದು ಮೆಚ್ಚದೆ ಬೃಹದ್ವಕ್ಷಂ ಮಹಾಪದ್ಮನಾ ೬೭

ವ॥ ಅಂತು

ಮ.ಸ್ರ॥ ಘನಕೇಶಂ ಪೂರ್ಣಭಾಳಂ ಕುವಲಯನಯನಂ ತುಂಗಘೋಣಂ ಗಭೀರ
ಧ್ವನಿ ಸೂಕ್ಷ್ಮಶ್ಮಶ್ರು ಬಿಂಬಾಧರವತಿಕರಿಣಸ್ಕಂಧವಕ್ಷೂಣವಕ್ಷಂ
ತನುಮಧ್ಯಂ ದೀರ್ಘಬಾಹುದ್ವಯಮರುಣನಖಂ ರಮ್ಯರಂಭೋರುವಂಭೋ
ಜನಿಭಶ್ರೀಪಾದಮಂತಂತೆಸೆಯೆ ನೃಪಸುತಂ ನೋಡೆ ಕಣ್ಗೆಡ್ಡಮಾದಂ ೬೮

ಚಂ॥ ಮನಮೊಸೆದಾ ಕುಮಾರನ ವಿಳಾಸಮನೊಯ್ಯನೆ ಕಂಡ ವಾರಿಜಾ
ನನೆಗೆ ಮರಾಳಗಾಮಿನಿಗೆ ಮೀನನಿಭಾಕ್ಷಿಗೆ ಸಾರಸೀಕಳ
ಸ್ವನೆಗೆ ರಥಾಂಗತುಂಗಕುಚೆಗುತ್ಪಲಗಂಧಿಗೆ ಸೀನೆಯಾಯ್ತು ಜೀ
ವನದಭಿಲಾಷೆ ಕಂತುಪರಿತಾಪದೊಳಿಂತಿದು ಚಿತ್ರಮೆಂಬಿನಂ ೬೯

ಪರನೃಪಮಂಡಳಕ್ಕೆ ಭಯಮಂ ರಮಣೀನಿವಹಕ್ಕೆ ಕಾಮಕಾ
ತರತೆಯನಂಗಜಂಗೆ ಮದಮಂ ಜನದೃಷ್ಟಿಗಪೂರ್ವತುಷ್ಟಿಯಂ
ಸರಸಕವೀಂದ್ರಜಿಹ್ವೆಗಭಿವರ್ಣನಕಾಂಕ್ಷೆಯನಿತ್ತನಂದು ಬಿ
ತ್ತರಿಸೆ ಸನತ್ಕುಮಾರ ನಳಕೂಬರ ಕಂತುನಿಭಂ ನೃಪಾತ್ಮಜಂ ೭೦

ವ॥ ಅಂತು ವಿದ್ಯಾಲಕ್ಷ್ಮಿಯೊಡನೆ ತನಗೆಳಸಿರ್ದ ನವಯೌವನಲಕ್ಷ್ಮಿಯ ಸಮಾಯೋಗದೊಳ್ ಸವಿಲಾಸರೂಪವಿಭ್ರಮಮಂ ಸಹಜಾತಸೌಭಾಗ್ಯನುಂ ಸಮಗ್ರಸತ್ವಾವಲಂಬನುಂ ಸಾಜ್ಞರ್ಯಶೌರ್ಯಾವಲೇಪನುಮಾದ ಕುಮಾರನಂ ನೀತಿರತ್ನಾಕರಾವನೀಶ್ವರಾದೇಶದಿಂದಮೊಂದು ದಿವಸಮುಖಿಲವಿದ್ಯಾಚಾರ್ಯರಂ ಮುಂದಿಟ್ಟೊಡಗೊಂಡು ಬರ್ಪುದುಂ ಪಂಜರ ವಿಮುಕ್ತ ಕುಂಜರಾರಾತಿಯಂತೆ ಮಂಟಪದಿಂ ನೃಪನಿವಾಸಕ್ಕೆ ಬಂದು ಸಭಾಸದನಮಂ ಪೊಕ್ಕು

ಕಂ॥ ತನಗಹಮಿಕೆಯಿಂದಿರದೆಱ
ಪ ನೃಪಾಳರ ಮೌಳಿಮಾಳೆ ಕುಟ್ಟಿಮ ಸಂಘ
ಟ್ಟನದಿನತಿಮುಖರಮಾಗಿ
ರ್ಪಿನೆಗಂ ಸಾರ್ತಂದು ತಂದೆಗವನತನಾದಂ ೭೧

ವ॥ ಆಗಿ ದೌವಾರಿಕದತ್ತಕನಕವಿಷ್ಟರಮನಗಲೆ ನೂಂಕಿ

ಮ॥ ವಿನಯಂಗುಂದದೆ ಪಾದಪೀಠತಳದೊಳ್ ಕುಳ್ಳಿರ್ಪ ಲೋಕೈಕಮಿ
ತ್ರನನೊತ್ತಂಬದಿನೆತ್ತಿ ನೇತ್ರಯುಗದಿಂದಾನಂದಬಾಷ್ಪಾಂಬು ಝು
ಮ್ಮೆನುಗಲ್ ನೀನೆಮಗಿನ್ನುವಮ್ಮ ಪಸುಗೂಸೆಂದಪ್ಪಿ ಬಾಯ್ದಾಯೊಳಿಂ
ಬಿನೆ ತಾಂಬೂಲಮನಿಕ್ಕಿ ಪೊಣ್ಮೆ ಪುಳಕಂ ಮುಂದಾಳಿದಂ ಭೂಭುಜಂ ೭೨

ವ॥ ತದನಂತರಂ ನಿಜಪಾದಪೀಠಘಟಿತೋತ್ತಮಾಂಗನಾದ ಚಿತ್ರಭಾನುವಂ ಪುತ್ರನಿರ್ವಿಶೇಷಮೋಹದಿಂದಮಾದರಿಸಿ ತತ್ಸಮಯದೊಳಮಾತ್ಯ ವೈಶ್ರವಣಂಗೆ ಪೊಡವಡಿಸೆ ಪೊಡವಟ್ಟು ತದಾಶೀರ್ವಾದಜನಿತಪ್ರಮೋದನಾಗಿ

ಚಂ॥ ಅವಿಕಳರಾಜ್ಯಸಿಂಹದೆರಡುಂಕುಡುದಾಡೆವೊಲಿರ್ದ ಭೂಪ ವೈ
ಶ್ರವಣತನೂಜರಿರ್ವರುಮಖಂಡಿತ ವೃದ್ಧಿಯಿನಿರ್ವರುಂ ಕಳಾ
ನಿವಹದಿನಿರ್ವರುಂ ಲಲಿತಯೌವನಲೀಲೆಯಿನಿರ್ವರುಂ ಗುಣ
ದ್ರವಿಣದಿನಿರ್ವರುಂ ವಿನಯದಿಂ ಸಭೆಗುತ್ಸವಮಂ ನಿಮಿರ್ಚಿದರ್ ೭೩

ವ॥ ಅನಂತರಂ ಜನತಾನುಮತದಿನಾರ್ಯಕುಳಪರಿಜನಪರೀತನಾಗಿ ಬಂದು ಮುನ್ನೆ ತನ್ನ ಬರವಿಂಗೆ ವಿರಚಿಸಿದ ಮಾಂಗಲ್ಯಪರಿಕರದಿನೊಪ್ಪುವಂತಃಪುರಮಂ ಪುಗುವುದುಮಾ ಸಮಯದೊಳ್ ವನಮಾಳಿಕಾಮಹಾದೇವಿ

ಕಂ॥ ಎನ್ನಯ್ಯನೆನ್ನ ಮದಗಜ
ನೆನ್ನಾಳ್ದಂ ಬಂದನೆಂದು ಮುದದಿಂದಿದಿರ್ವಂ
ದುನ್ನತ ನೃಪಾಂಗನಾವೃತೆ
ಮನ್ನಿಸಿ ತಳಿದಳ್ ಸುತಂಗೆ ಶೇಷಾಕ್ಷತೆಯಂ ೭೪

ವ॥ ಅಂತು ಸೇಸೆಯಿಕ್ಕಿ ನಿಜಪಾದಾರವಿಂದದ್ವಂದ್ವಮಂ ಚಳಾಳಕಮಧುವ್ರತಂಗಳಿನಳಂಕರಿಸಿರ್ದ ಚಿತ್ರಭಾನುಮಿತ್ರನಂ ಪರಮಪರಿತೋಷದಿಂ ಪರಸಿ

ಕಂ॥ ನೆಲೆಮೊಲೆಯಿಂ ಕ್ಷೀರಂ ಕ
ಣ್ಮಲರಿಂ ಬಾಷ್ಪಾಂಬು ಪೊಣ್ಮೆ ಪುಟಕಸ್ವೇದಾ
ರ್ದ್ರಲತಾಂಗಿ ತನಯನಂ ನಲಿ
ನಲಿದಟ್ಟಿಜಿಳಪ್ಪಿ ತಣಿದಳಿಲ್ಲಾ ಕ್ಷಣದೊಳ್ ೭೫

ವ॥ ಅಲ್ಲಿಂ ಬಟಿಕ್ಕಮಾತ್ಮಾಂಬಿಕಾದೇಶದಿಂದಮಖಿಳಜನನೀಜನಂಗಳ ನಿವಾಸಂಗಳ್ಗೆ ಪೋಗಿ ಪೊಡವಟ್ಟು ಪರಕೆವರಸು ಸೇಸೆಗೊಂಡಂತಃಪುರನಿಷ್ಕ್ರಾಂತನಾಗಿ ಸರಸ್ವತೀಕರ್ಣಪೂರಂ ಬಂದು

ಮ.ಸ್ರ॥ ತನಗೆಂದುರ್ವೀಶ್ವರಂ ಮುನ್ನಮೆ ಸಮಯಿಸಿದುತ್ಕೃಷ್ಟಕೋಷ್ಠಾಂತರೋದ್ಭಾ
ಸಿ ನಿಶುಂಭಚ್ಚಂದ್ರಶಾಲಾಮಣಿಮಯವಿಲಸತ್ತುತ್ರಿಕೋತ್ತಂಭಿತಸ್ತಂ
ಭನಿಕಾಯಂ ಚಿತ್ರಭಿತ್ತಿಸ್ಥಿತಯುತಮಧಿಕೃತ್ತೋರಣಾಭಂ ಕನತ್ಕಾಂ
ಚನಚೂಡಂ ಮಾಡಮೊಪ್ಪುತ್ತಿರೆ ಗೃಹಸಚಿವಪ್ರೇರಿತಂ ಪೊಕ್ಕನಾಗಳ್ ೭೬

ವ॥ ಪೊಕ್ಕು ತದನಂತರೋದ್ದೇಶನಿಹಿತಚಂಚದ್ರತ್ನಪರ್ಯಂಕಿಕಾಪ್ರದೇಶಮನಲಂಕರಿಸಿ ಭವನಪ್ರವೇಶಮಾಂಗಲ್ಯಶೇಷಾಕ್ಷತಂಗಳಂ ತಳಿದು ತದನಂತರಂ ಮಜ್ಜನಭೋಜನಾದಿ

ವಿವಿಧವ್ಯಾಪಾರಂಗಳಂ ತೀರ್ಚಿಸಿ ನಿಜಪಿತೃಸಮರ್ಪಿತಸಮಗ್ರಕುಳ ರೂಪವಿಭವವಿದ್ಯಾವಿಳಾಸ ಚಾತುರ್ಯಪರ್ಯರಪ್ಪ ನೃಪಕುಮಾರಕರೆ ಸತತಸನ್ನಿಹಿತಪರಿವಾರಮಾಗೆ

ಮ॥ ಕವಿತಾಗೋಷ್ಠಿಯೊಳಾದಿರಾಜಕಥೆಯೊಳ್ ತತ್ಪ್ರೋಕ್ತಿನಿರ್ಣೀತಿಯೊಳ್
ನವಸಂಗೀತಕಸಂಗದೊಳ್ ವನಜಳವ್ಯಾಯಾಮದೊಳ್ ಮನ್ಮಥೋ
ತ್ಸವದೊಳ್ ಕಂದುಕಕೇಳಿಯೊಳ್ ಮಹಿಷಮಲ್ಲದ್ವಂದ್ವಯುದ್ಧಾವಲೋ
ಕವಿನೋದಂಗಳೊಳೆಯ್ದೆ ಪೊಲ್ತುಗಳೆವುತ್ತಿರ್ದಂ ನರೇಂದ್ರಾತ್ಮಜಂ ೭೭

ವ॥ ಅಂತಿರ್ಪುದುಮೊಂದುದಿವಸಂ ಪದ್ಮರಾಜಂ ತನೂಜಂಗೆ ಯುವರಾಜ ಪಟ್ಟಬಂಧಮಂ ಮಾಡಲ್ ಮನಂದಂದು ಸಮಾಳೋಚಿತ ಸಚಿವಸಂದೋಹನಾಗಿ ಮಾಂಗಲ್ಯ ಮಂಟಪಮಂ ಗೃಹಮಹತ್ತರಂಗೆ ಬೆಸಸಿ ಸಮೆಯಿಸುವುದುಂ

ಉ॥ ಸುತ್ತಿದ ಚಿತ್ರಕಾಂಡಪಟಮಿಕ್ಕಿದ ಮಂಗಳವೇದಿ ಕಂಬದೊಳ್
ಪತ್ತಿದ ಪೊನ್ನ ಪುತ್ತಳಿ ತೊಡರ್ಚಿದ ಮುತ್ತಿನ ಸೂಸಕಂ ತಗು
ಳ್ದೆತ್ತಿದ ತೋರಣಂ ಮುಡಿದ ಪೂವಲಿ ತಳ್ತ ವಿತಾನವಿಸ್ತರಂ
ಚಿತ್ತದ ಜಾಗಮುಜ್ವಳಿಪ ಕನ್ನಡಿ ತೀವಿ ಪೊದಟ್ದಿ ಪೊಂಗೊಡಂ ೭೮

ಕಂ॥ ಒಸಗೆವಱ ಸರ್ವಧಾನ್ಯಂ
ಮೊಸರಣ್ಕೆ ಕಱುಂಕೆ ರಂಗವಲಿ ಭೃಂಗಾರಂ
ಪಸೆ ರನ್ನದ ಸೊಡರೆಂಬಿವ
ಱ ಸಕಂ ಕಣ್ಗೊಳಿಸುತಿರ್ದುವಾ ಮಂಟಪದೊಳ್ ೭೯

ವ॥ ತದನಂತರಂ ಮೌಹೂರ್ತಿಕೋಪದಿಷ್ಟ ಶುಭಮುಹೂರ್ತದೊಳನೇಕ ಶಂಖ ಕಹಳ ಮೃದಂಗ ಭೇರೀ ಕಾಂಸ್ಯತಾಳರವರಭಸಮುಮಾರ್ಯಜನಮುಖೋಚ್ಚಾರ್ಯಮಾಣ ಮಂಗಳವಚೋ ನಿಚಯಮುಮತಿಬಹುಳಕುಸುಮಫಳಹಸ್ತವಿಸ್ತಾರಿವಾರನಾರೀಸಮೂಹಮುಂ ವಿಚಿತ್ರ ಪಾತ್ರನೃತ್ಯವರ್ತನಮುಮಸೆಯೆ ಮಹಾಮಂತ್ರಿ ವೈಶ್ರವಣನೊಡಂಗೊಂಡು ತರ್ಪುದುಂ

ಮ॥ ಜನಕಾದೇಶದೆ ಬಂದನಲ್ಲಿಗೆ ಕುಮಾರಂ ಪಕ್ವಬಿಂಬಾಧರಂ
ತನಿಗಂಪಿಂ ಕಿಸುಸಂಜೆಯಂ ಕೆದಱ ಲಾವಣ್ಯಾಮೃತಂ ಲೋಕಲೋ
ಚನಮಂ ತೇಂಕಿಸೆ ಮುತ್ತಿನೊಳ್ತೊಡವುಗಳ್ ಬೆಳ್ದಿಂಗಳಂ ಬೀಱ ಯೌ
ವನದರ್ಪಂ ಸ್ಮರನಂ ಮಗುಳ್ಚೆ ಘನತೇಜಂ ತಿಟ್ಟೆ ತಿಗ್ಮಾಂಶುವಂ ೮೦

ವ॥ ಆಗಳನೇಕ ಮೂರ್ಧಾಭಿಷಿಕ್ತಮಂಡಳಿಕ ಮಂಡಳೀಪರಿವೃತನಾಗಿ ಪದ್ಮರಾಜನಾ ರಾಜವಿದ್ಯಾವಿಳಾಸನಂ ಮಂಗಳಾನಕರವಂಗಳೆಸೆಯೆ ಕಮನೀಯಕಲ್ಯಾಣ ಪೀಠನಿಷ್ಠಿತನಂ ಮಾಡಿ

ಮ॥ ನವಸರ್ವೌಷಧಿ ಸರ್ವರತ್ನಪರಿಮಿಶ್ರಾಶೇಷತೀರ್ಥಾಂಬು ಪೂ
ರ್ಣವಸುತ್ಸಾಹದಿನೆತ್ತಿ ಪೊಂಗಳಸಮಂ ಹರ್ಷಾಶ್ರುಗಳ್ ಕೂಡೆ ಪೊ

ಙ್ಕುಪಿನಂ ಮಾಡಿದನಾತ್ಮಮಂತ್ರಿಜನಯುಕ್ತಂ ಯೌವರಾಜ್ಯಾಭಿಷೇ
ಕವನಾನಂದಿತಮಿತ್ರಲೋಕಮನತಿತ್ರಸ್ತಾಪಿತಾನೀಕಮಂ ೮೧

ವ॥ ತದನಂತರಮಿಂಗಡಲ ತೆರೆಯು ದೊರೆಯ ದುಕೂಲದೊಳಪಾಗಳಾಗಳ ನಿಶಾಮುಖದೊಳ್ ನೆಗದ ತಾರಗೆಗಳೋರಗೆಗಳೆನಿಪ ಪೊಚ್ಚ ಪೊಸಮುತ್ತಿನ ಪಚ್ಚಪೊಡಪಿನೊಳಂ ಮನಕ್ಕೆ ಮಚ್ಚರಿಪ ಚೆಲ್ವಿಂ ಬಳ್ವಲಾದ ಮಲ್ಲಿಗೆಯ ಮುಗುಳ ತಗುಳದಿಂದೆಸೆವ ಜಾಜಿಗಂಗಳೊಳ ಮಳಂಕರಿಸೆ

ಕಂ॥ ಅಭಿನವಸಂಗೋತ್ಕಂಠೆಯಿ
ನಭಿವೀಕ್ಷಿಪ ಯೌವರಾಜ್ಯಲಕ್ಷ್ಮಿಯ ನಯನ
ಪ್ರಭೆ ಪೆರ್ಚಿತೆನಿಸಿದತ್ತಿ
ಶುಭದಂ ಪದ್ಮಜನ ಧವಳಮಂಗಳವೇಷಂ ೮೨

ವ॥ ಅಂತಲಂಕೃತನಾದ ಭವ್ಯರತ್ನಾಕರನಂ ಸಮುತ್ತುಂಗ ಮಾಂಗಲ್ಯ ಮಂಟಪಮಂಡನೀಭೂತ ಮೃಗರಾಜವಿಷ್ಟರದೊಳಿರಿಸಿ

ಕಂ॥ ಯುವರಾಜಕಂಠಿಕಾಬಂ
ಧವನಖಿಲ ಜನಾನುಬಂಧವಂ ರಿಪುದರ್ಪಾ
ರ್ಣವ ಸೇತುಬಂಧವಂ ಶಿ
ಷ್ಟವಿಪತ್ಪ್ರತಿಬಂಧವಂ ನೃಪಂ ನಿರ್ಮಿಸಿದಂ ೮೩

ಹರಿಣಿ॥ ಭುವನನುತವಿಕ್ರಾಂತಂ ಪ್ರಾಣೇಶ್ವರಪ್ರಭವಂ ಕಳಾ
ಭವನನವನೀರಕ್ಷಾದಕ್ಷಾತ್ಮನೆಂದು ಸಮಸ್ತ ರಾ
ಜ್ಯವನೆ ತನಯಂಗೀಯಲ್‌ವೇಡಿತ್ತೆನಲ್ ಯುವರಾಜವೈ
ಭವಮನದನಾ ಭೂಪಂ ಕೂರ್ತೀವುದಾವುದು ಕೌತುಕಂ ೮೪

ವ॥ ಎನಿಸಿದ ನವಕಂಠೀರವಂಗೆ ಯುವರಾಜಕಂಠಿಕಾಬಂಧಮಂ ಮಾಡಿ

ಮ॥ ನೆಗಟ್ದುನ್ಮತ್ತಗಜಂಗಳಂ ಪ್ರಬಳಜಾತ್ಯಶ್ವಂಗಳಂ ಸಾರವ
ಸ್ತುಗಳಂ ಸದ್ಗುಣವದ್ವಿಳಾಸಿನಿಯರಂ ಪ್ರೋದ್ದಾಮಸಾಮಂತರಂ
ಮಿಗಿಲಪ್ಪೂರ್ಗಳನನ್ವಯಾಗತ ಸಮಗ್ರಾಮಾತ್ಯರಂ ಕೊಟ್ಟು ನೆ
ಟ್ಟನೆ ಭೂಪಂ ಯುವರಾಜನಂ ವಿಭವದಿಂ ತನ್ನೊಳ್ ಸಮಂ ಮಾಡಿದಂ
೮೫

ವ॥ ಆಗಳ್

ಚಂ॥ ಓಮುಕರನಿಂ ನೆಲಕ್ಕೆ ನಿಮಿರ್ವುಜ್ಜ್ವಳಚಂದ್ರಿಕೆಯಂತಧೀಶನಿಂ
ನಿಮಿರ್ದು ಕುಮಾರನತ್ತಲೆಳಸಿರ್ದಳಭಿನ್ನಪರಸ್ಪರೂಪದಿಂ
ಕುಮುದವನಾಭಿರಾಮೆ ಪರಚಕ್ರಭಯಂಕರಶೀಲೆ ವಾಹಿನೀ
ರಮಣಸಮೃದ್ಧಿಸಲ್ಲಲಿತೆ ರಾಜ್ಯರಮಾವಧುವಂದು ಲೀಲೆಯಿಂ ೮೬

ವ॥ ಅಂತಾ ಮನುಜೇಂದ್ರಮಂದರಂ ತಂದೆ ಕೊಟ್ಟ ಯುವರಾಜಲಕ್ಷ್ಮಿಯ ನವಪ್ರಸಂಗದಿಂ ರಾಗರಸರಂಜಿತಾಂತಃಕರಣನಾಗಿ ತದುತ್ಸವದೊಳಾರ್ಯಜನಮನರ್ಘಿಸಿಯುಂ ಪೂಜ್ಯಜನಮಂ ಪೂಜಿಸಿಯುಂ ಮಾನ್ಯಜನಮಂ ಮನ್ನಿಸಿಯುಂ ಇಷ್ಟಜನಮಂ ತುಷ್ಟಿವಡಿಸಿಯುಂ ಪರಿಜನಮಂ ಪರಿವರ್ಧಿಸಿಯುಂ ಅಖಿಳಜನವಂದ್ಯನಾಗಿ ಪರಚಕ್ರಮನಾಕ್ರಮಿಸಲುಪಕ್ರಮಿಸುತ್ತಿರ್ಪನ್ನೆಗಂ

ಮ॥ ಸಮುದಾರಾತಿಜಯೋತ್ಸುಕಂಗೆ ಯುವರಾಜಂಗೆತ್ತಲತ್ಯಂತ ದು
ರ್ಗಮಮಾದಧ್ವವನಿಂದೆ ನೇರ್ಪಡಿಪೆನೆಂಬಂತುರ್ವರಾಭಾಗದು
ರ್ದಮಮಂ ಕರ್ದಮಮಂ ಕಟಿಲ್ವಲತುಳೋದ್ಯತ್ಫೇನಮಂ ಸಿಂಧುಯೂ
ಥಮನೋರಂತಿರೆ ಮಾಡಲಾದುದೆನಸುಂ ನಿರ್ನೀರದಂ ಶಾರದಂ ೮೭

ಚಂ॥ ಸೊಗಯಿಪ ಕೇತಕೀವಿಭವಮೇಟಲೆವಾಟಿಗೆ ನೀಪದೇಟ್ಗೆ ಪೊ
ನ್ನೆಗೆ ಕುಟಜೋಪಶೋಭೆ ಕುಮುದಕ್ಕೆ ಕದಂಬದ ಸೊಂಪು ನೆಯ್ದಿಲೊ
ಳ್ಮುಗುಳ್ಗೆ ಮಯೂರದಭ್ಯುದಯವಂಚೆಗೆ ಚಾದಗೆಯುತ್ಸವಂ ಚಕೋ
ರಿಗೆ ತಳರ್ದೊಪ್ಪಲೊಪ್ಪಿದುದು ನೀರದ ಶಾರದನಿರ್ಗಮಾಗಮಂ ೮೮

ವ॥ ಮತ್ತಂ

ಚಂ॥ ಕಲುಷತೆಯಂ ನಿಮಿರ್ಚಿ ತಿಳಿಪಲ್ಕಣಮಾಜಿದೆ ಮೇಘವಲ್ಲಭಂ
ತಳರ್ದೊಡೆ ಪೆರ್ಚಿ ತೀವ್ರತಪನಂ ಬಡವಟ್ಟನುಕೂಲೆಯರ್ ನದೀ
ಲಲನೆಯರಂದು ಕಂಠಗತಜೀವನವೃತ್ತಿಯನಾಳ್ದ [ರಿಂ] ಭೃಶೋ
ತ್ಕಳಿಕೆಯರೆಂತು ಸೈರಿಸುವರೋ ಸರಸಾತ್ಮನಿನಾದಗಲ್ಕೆಯಂ ೮೯

ಕಂ॥ ಶರದಂಗನೆ ನಿಜಮುಖಹಿಮ
ಕರಬಿಂಬಮನಡರೆ ನೋಡಲುಜ್ವಳಿಸಿದ ಭಾ
ಸುರ ಚಂದ್ರಕಾಂತಮುಕುರೋ
ತ್ಕರಮೆನೆ ಸೊಗಯಿಸಿದುದಂದು ತಿಳಿದ ಕೊಳಂಗಳ್ ೯೦

ಚಂ॥ ಶರಧಿಯ ರತ್ನಮಂ ನೆಱೆಯೆ ಕಳ್ದು ಜಳಾಹರಣಕ್ಕೆ ಬರ್ಪ ವಾ
ರ್ಧರಕುಳಮೊಯ್ದು ಕೊಟ್ಟೊಡವಱಿಂದಮಲಂಕೃತಮಾದುದಕ್ಕುಮಂ
ಬರತಳಮೆಂಬ ಶಂಕೆ ಸುರಚಾಪದಿನಾದೊಡೆ ನೋಡಲಿಂಗಡಲ್
ತೆರೆಗಳನಟ್ಟಿದಂ ವರುಣನೆಂಬವೊಲೊಪ್ಪಿದುವೆಟ್ಟ ಬೆಳ್ಮುಗಿಲ್ ೯೧

ಶರದದ ಪೆರ್ಪಿಸಿಲ್ಗಗಿದು ಬಾಂದೊಱೆಯೊಳ್ ಸಲಿಲಾವಗಾಹತ
ತ್ಪರತೆಯಿನಿರ್ದ ವಾಸವಗಜೇಂದ್ರದ ಪುಷ್ಕರರಂಧ್ರರುಂದ್ರಶ್ರೀ
ಕರಮೊ ಜೆಮರ್ಪ ಮೇಘಪಥಲಕ್ಷ್ಮಿಯ ನಿರ್ಮಲ ಘರ್ಮಬಿಂದುವೋ
ಸುರಿದಪುವೆಂಬಿನಂ ಸುರಿವ ಬೆಳ್ಸರಿಗಳ್ ಬಗೆಗೊಂಡುವಾರುಮಂ ೯೨

ಕಂ॥ ನವರಾಜಲಕ್ಷ್ಮಿಯಂ ಶರ
ದವನೀಶಂ ಪಡೆದು ಬರೆ ದಿಶಾಧೀಶ್ವರರು
ತ಼್ವದಿಂ ಕಟ್ಟಿದೊಡಮರ್ದೊ
ಪ್ಪುವ ಮಣಿತೋರಣಮಿದೆನಿಸಿದುದು ಸುರಚಾಪಂ ೯೩

ಚಂ॥ ಬೆಳೆದು ಪೊದಟ್ಟು ನೀಟ್ಟಿರುಣಶಾಲಿಯ ಸತ್ಕಣಿಶಾಳಿಯುಂ ಶುಕಾ
ವಳಿ ನಡೆಗರ್ಚಿ ಪಾಱುವ ಬೆಡಂಗಸೆದಿರ್ದುದು ಚಂಡಭಾನುಮಂ
ಡಳಪರಿತಾಪವೆಯ್ದಿದ ಶರದ್ವಧುವಿಂಗೆ ಹರೀತದಂಡದಿಂ
ತೊಳಗುವ ಹೇಮಚಾಮರಮನಿಕ್ಕಿದಪರ್ ದೆಸೆವೆಣ್ಗಳೆಂಬಿನಂ ೯೪

ಮ॥ ಕಳಮಕ್ಷೇತ್ರಸಮೂಹದೊಳ್ ಸುಟಿದು ನಾನಾಜಾತಿಸಪ್ತಚ್ಛದೋ
ತ್ಪಳ ಪುನ್ನಾಗಪಯೋಜಕುಂದಕುಸುಮಾಮೋದಂಗಳಂ ಪೇಱ್ ನಿ
ರ್ಮಳಮೇಘಂ ಬಿಡುತಿರ್ಪ ಬೆಳ್ದರಿಗಳಿಂದಂ ನಾಂದದೇಂ ಪಾಂಥ ಸಂ
ಕುಳಯಾನಶ್ರಮಹಾರಿಯಾದುದೊ ಶರತ್ಸಂಭೂತಶೀತಾನಿಳಂ ೯೫

ವ॥ ಮತ್ತಂ ತತ್ಸಮಯ ಸಮಭಿರಾಮಸಂಧ್ಯಾಸಮಯದೊಳ್

ಕಂ॥ ವಿಪುಲಜಳಧರಕಳಂಕಮ
ನಪಹರಿಸಿದ ಗಗನಮೆಂಬ ಮುಕುರಮನಾಳೋ
ಕಿಪ ಯುವರಾಜನ ಕೀರ್ತಿಯ
ಲಪನಪ್ರತಿಬಿಂಬಮೆನಿಸಿದುದು ಶಶಿಬಿಂಬಂ ೯೬

ವ॥ ಅಂತು ಸಕಲಭುವನಪ್ರಸನ್ನಶೋಭಾವಭಾಸಿಯಾಗಿ

ಚಂ॥ ಎಸೆದಿರೆ ಮಿತ್ರಮಂಡಳಮುದಗ್ರ ಕದಂಬಮಡಂಗ ಕುಂದಮೊ
ಳ್ಪಸದಳಮಾಗೆ ಮೀಱಿದಿರೆ ವಾಹಿನಿ ರಂಜಿಸೆ ರಾಜಲೀಲೆ ನ
ರ್ತಿಸೆ ಕಮಲೋದಯಂ ಕುವಲಯಂ ಸುವಿಕಾಸಮನುಂಟುಮಾಡೆ ಪೋ
ಲ್ತಿಸೆದುದು ಶಾರದೀವಿಭವಮುಂ ಸಲೆ ನಾಜ್ರಭುವಂಶಮೇರುವಂ ೯೭

ಗದ್ಯ

ಇದು ಸಮಸ್ತಭುವನಜನಸಂಸ್ತುತ ಜಿನಾಗಮ ಕುಮುದ್ವತೀಚಾರುಚಂದ್ರಾಯಮಾಣಮಾನಿತ ಶ್ರೀಮದುಭಯಕವಿಕಮಳಗರ್ಭ ಮುನಿಚಂದ್ರಪಂಡಿತದೇವ ಸುವ್ಯಕ್ತ ಸೂಕ್ತಿ ಚಂದ್ರಿಕಾಪಾನಪರಿಪುಷ್ಟ ಮಾನಸ ಮರಾಳ ಗುಣವರ್ಮನಿರ್ಮಿತಮಪ್ಪ ಪುಷ್ಪದಂತ ಪುರಾಣದೊಳ್ ಕುಮಾರೋದಯವರ್ಣನಂ ಚತುರ್ಥಾಶ್ವಾಸಂ

ಪಂಚಮಾಶ್ವಾಸಂ

ಕಂ॥ ಶ್ರೀಗೆ ಜಯಲಕ್ಷ್ಮಿಯಂ ಸಮ
ಮಾಗಿಸಲುದ್ಯಮಿಸುವೆನಗೆ ನೆರಮಾದುದಿದೆಂ
ದಾಗಳೆರ್ದೆಗೊಂಡನಾ ಶರ
ದಾಗಮಮಂ ಪ್ರಭುಗುಣಾಬ್ಜಿನೀಕಳಹಂಸಂ . ೧

ವ॥ ಅಂತೆರ್ದೆಗೊಂಡು ತತ್ಸಮಯದೊಳೆ ತನ್ನ ಮನದ ಕಜ್ಜದುಜ್ಜುಗಮನಱಿಪಲೆಂದು ಚಿತ್ರಭಾನುದ್ವಿತೀಯನಾಗಿ ಬಂದಾಸ್ಥಾನಮಂಟಪದೊಳನೇಕ ಮಂಡಳಿಕ ದಂಡನಾಥ ಸಾಮಂತ ಮಂತ್ರಿಮಂಡಳ ಪ್ರಮುಖ ಪರಿಜನಸಮೇತವೊಡ್ಡೋಲಗಂಗೊಟ್ಟಿರ್ದ ನಿಜಜನಕನಂಘ್ರಿವನಜಕ್ಕೆ ವಿನಯದಿಂದೆಱಗಿ ಸಮುಚಿತಾಸನಪ್ರದೇಶಮನಲಂಕರಿಸಿ

ಕಂ॥ ಕನಕಾದ್ರಿಯನೆಳಸುವ ನೂ
ತನಚಂದ್ರಿಕೆಯಂತಿರೆಳಸೆ ದಶನದ್ಯುತಿಗಳ್
ಜನಪತಿಯಂ ನುಡಿದಂ ಮೆ
ಲ್ಲನೆ ಮುಕುಳಿತಕರಸರೋಜನಾ ಯುವರಾಜಂ ೨

ಮ॥ ಪೊಡರ್ವತ್ಯುದ್ಧತರಾಜವಂಶವನಮಂ ನಿರ್ಮೂಲಿಸಲ್ ಪೋಪಮೆಂ
ಬೊಡದಂ ಮುನ್ನಮೆ ನಿಮ್ಮ ವಿಕ್ರಮದ ವಹ್ನಿಜ್ವಾಲೆ ತಳ್ತಿರ್ದುದಾ
ಪಡೆಮಾತಿರ್ಕೆ ಭವತ್ಪ್ರತಾಪಕಥೆಯಂ ಪ್ರತ್ಯಂತಭೂಚಕ್ರದೊಳ್
ಬಿಡೆ ಕೇಳ್ವಾಗ್ರಹಮಾಯ್ತನುಗ್ರಹಿಪುದೆನ್ನಂ ದೇವ ಕಾರುಣ್ಯದಿಂ ೩

ವ॥ ಎಂದು ವಿನಯೋಕ್ತಿಯನೆ ಮುಂದಿಟ್ಟು ನುಡಿದ ಚಾತುರ್ಯಚತುರಾನನ ನುಡಿಗೆ ಚತುರ್ಮುಖಸಾಧನೋದ್ಯೋಗಗರ್ಭಮಪ್ಪಭಿಪ್ರಾಯಮಂ ಜಲಕ್ಕನಱಿದು ಪದ್ಮರಾಜಂ ವಿಕೀರ್ಣದರಹಾಸನಿಂತೆಂದಂ

ಉ॥ ನಿಮ್ಮ ಭುಜಪ್ರತಾಪವನವಹ್ನಿಗೆ ಮುನ್ನೊಳಗಾದ ವೈರಿವಂ
ಶಮ್ಮಗುಜ್ಜಿರ್ಪ ಕೊರ್ವುಗುಮದಂ ನಿಶಿತಾಸಿಕುಠಾರದಿಂ ಪೊಡ
ರ್ಪಮ್ಮೆಱಿದಾಂ ಪಡಲ್ವಡಿಪೆನೆಂದು ಜಲಕ್ಕನೆ ಪೇೞಲೊಲ್ಲದೇ
ನಮ್ಮ ಯಥಾರ್ಥಮಂ ಮಱಿಸಿ ಮತ್ತಿನ ಸುತ್ತಿನ ಮಾತನಾಡುವೈ ೪

ಮ॥ ವಿಹಿತಂ ಕ್ಷತ್ರಿಯನಂದನಂಗೆ ದಿಟಮೆಂತುಂ ನೀತಿಯೊಳ್ ದುಷ್ಟನಿ
ಗ್ರಹಶಿಷ್ಟಪ್ರತಿಪಾಲನಂಗಳದಜೆಂ ನಿನ್ನುದ್ಯಮಂ ಮಾಣಿಪಾ
ಗ್ರಹಮಂ ಪುಟ್ಟಿಸುವಂತುಟಲ್ತು ವಿಜಯಂಗೆಯ್ದುಪ್ಪುಗೆಯ್ ನೀಂ ಮಹಾ
ಮಹಿಪಶ್ರೀಗೆಡೆಯಾಗಿ ವಿಶ್ರುತಜಯಶ್ರೀಯಂ ಯಶಶ್ಶ್ರೀಯುಮಂ ೫

ವ॥ ಎಂದಿಂತು ನುಡಿದ ಬುದ್ಧಿಗೆ ವಿನಯಮುಂ ಪ್ರಿಯಮುಮಪ್ಪುದಜೆನಾಳೋಚಿತಮಂತ್ರಿಜನನಾಗಿ ತನ್ನೆಂದುದನೊಡಂಬಟ್ಟು ತದನಂತರಂ ವೈಶ್ರವಣಸಹಿತಂ ಬಹುಪ್ರಕಾರ ಕಥಿತ ನೃಪನೀತಿ ವಿಭೂತಿಯಿಂ ಮನೋದರ್ಪಣಮನುಜ್ವಳಿಸಿದಾತ್ಮಜನಕನಂ ಬೀಳ್ಕೊಂಡು ಪರಮಪರಿತೋಷದಿಂದವಸಾಸ್ಥಾನಭವನಮಂ ಪೊಱಮಟ್ಟಂತಃಪುರಕ್ಕೆವಂದು ವನಮಾಳಿಕಾಮಹಾದೇವಿಗವನತೋತ್ತಮಾಂಗನುಂ ನಿವೇದಿತನಿಜಪ್ರಯಾಣಾಭಿಪ್ರಾಯನುಮಾಗಿ ತದಾಶೀರ್ವಾದನಿರ್ಘೋಷಶೇಷಾಕ್ಷತಂಗಳಂ ತಳೆದಲ್ಲಿಂದಮಾತ್ಮಭವನಕ್ಕೆ ಬಿಜಯಂಗೆಯ್ದು ಶುಭಮುಹೂರ್ತದೊಳ್

ಕಂ॥ ನೆರಪಲ್ ವೇೞ್ದಂ ಕೃತರಿಪು
ನರೇಂದ್ರಭಂಗಮನುದಗ್ರ ಜಯತುಂಗಮನು
ದ್ಧುರ ಸುಭಟಸಂಗಮಂ ಚಾ
ತುರಂಗಮಂ ನಿಜಬಳಾಧಿಪತಿಗೆ ಕುಮಾರಂ ೬

ವ॥ ಆ ಪ್ರಸ್ತಾವದೊಳ್

ಮ॥ ಪರವಾಚಾಳನೃಪಾಳಜಾಳಕುಳನಾಶೋತ್ಪಾತನಿರ್ಘಾತವಾ
ತರವಂ ವಿಕ್ರಮನಾಟಕಾಭಿನಯನಾಂದೀಮಂಗಳಾತೋದ್ಯಹೃ
ದ್ಯರವಂ ತಾನೆನೆ ಘೂರ್ಣಿಸಿತ್ತು ವಿಲಸತ್ಸೌವರ್ಣಕೋಣಾಹತಿ
ಸ್ಫುರಿತಂ ಶ್ರೀ ಯುವರಾಜದೇವವಿಜಯದಪ್ರಸ್ಥಾನಭೇರೀರವಂ ೭

ಚಂ॥ ಬೆದಱಿದುದಭ್ರಮೂರಮಣಯೊಟ್ಟಜೆಗೆಟ್ಟುದು ಪುಂಡರೀಕಮ
ೞ್ದುದು ಕುಮುದಂ ತಡಂಗಡದುದಂಜನಮುರ್ಕುಡುಗಿತ್ತು ವಾಮನಂ
ಬಿದಿರ್ದುದು ಪುಷ್ಪದಂತಮತಿವಿಹ್ವಲಮಾದುದು ಸಾರ್ವಭೌಮಮೆಂ
ದದಿರ್ದುದು ಸುಪ್ರತೀಕಮಿರದಾಲಿಸಿ ತತ್ಪಟಹಪ್ರಣಾದಮಂ ೮

ವ॥ ಎನಿಸಿ ಗಗನದಿಗವನೀವ್ಯಾಪ್ತಮಾದ ವಿಜಯಪ್ರಯಾಣ ದುಂದುಭಿಧ್ವಾನ ಮೆಸೆಯಲೊಡಂ

ಮ.ಸ್ರ॥ ಮದಧಾರಾವೃಷ್ಟಿ ಪಂಕಂ ಮಸಗಿಸೆ ನೆಲನಂ ಘೋಷಘಂಟಾರವಂ ದಿ
ಗ್ರದನೀಶ್ರೋತ್ರಕ್ಕೆ ಸಂಪಾದಿಸೆ ಬಧಿರತೆಯಂ ಪುಷ್ಕಾನದ್ಧ ನಾನಾ
ಕದಳೀಜಾಳಾಂಬರಂ ಚುಂಬಿಸೆ ಘನಪಥಮಂ ಬಂದುದಂದನ್ನಚಕ್ರ
ಕ್ಕಿದು ಕಲ್ಪಾಂತಾಭ್ರಮೆಂಬಂತುದಿತರಿಪುಮನೋದೈನ್ಯಮುಗ್ರೇಭಸೈನ್ಯಂ ೯

ಮ.ಸ್ರ [illegible]
[illegible]
[illegible]
[illegible] ತುರಂಗಂ ತುರಂಗಂ ೧೦

ಪರಚಕ್ರಕ್ಕೀಗಳಿಂ ಪಲ್ದೊರೆದಪನೆ ಜವಸಂಬಂತತಿಸ್ಫಾರ ಚೇತ್ಕಾ
ರರವಂ ದಿಕ್ಪಾಲರಂ ಕೇಳಿಸೆ ವಿನಿಹಿತಸೂತಂ ಪ್ರಪೂರ್ಣಾಸ್ತ್ರಜಾತಂ
ಗುರುಚಕ್ರಕ್ಷುಣ್ಣಮಾರ್ಗಂ ಸಮಧಿಕರಥಿಸಂಸರ್ಗಮುದ್ವೃತ್ತತಾಕಾಂ
ಬರಮುಗ್ರಾಡಂಬರಂ ಬಂದುದು ವಿಧೃತಮಹಾವಾಜಿಯೂಥಂ ವರೂಥಂ
೧೧

ಉ॥ ಮಾಣೆಯದೆ ಬಂದು ಗೊಂದಣಿಸಿವಡ್ಡಣದೊಡ್ಡಣಮುರ್ಬುರ್ ಬಿಲ್ಲ ಬ
ಲ್ಲಣೆಯು ತೆರಳ್ಕೆ ಭಾರ್ಗವರ ಮೊಗ್ಗರದೊಳ್ಬುಳಿ ಕುಂತದಾಳ ತಿಂ
ತಿಣಿ ನೆಗೆ ತಮ್ಮತಮ್ಮ ಬಿರುದಂ ಪೞಯುಂ ಕಹಳಾರವಂಗಳುಂ
[illegible] ೧೨

ವ॥ ಅಂತತಿ ಪ್ರಬಳಮಾಗಿ ನೆಱೆದು

ಮ॥ [illegible]
[illegible]ಗಳ್ [illegible]ಗಳ್ [illegible]ಗಳ್
[illegible]ಗಳ್ ವರೂಥಂಗಳು
[illegible] ಪತ್ತಿಗಳ್ ೧೩

ವ॥ ಅಗಳಾ ಚತುರಂಗಬಲಜಲಧಿಯೊಳಗೆ ನೆಗೆವ ತೆರೆಮಱುಗಲಂತೆ ಮಿಱುಪ [illegible] ಸಪ್ತರ್ಷಿಸಮಾಜದಂತೆ [illegible] ವಿದ್ರುಮಲತಾಂಕುರದಂತೆ ಕೆಂದಳಿರ [illegible] ಪ್ರಬಳಪವಮಾನಸಮುದೀರ್ಣಘೂರ್ಣನ [illegible] ನೆಱೆಯೆ [illegible] ಬಂದು [illegible] ತಂತಮ್ಮ [illegible]ಗಳನಿೞದು

ಕಂ॥ [illegible]
[illegible]
[illegible]
[illegible] ೧೪

ವ॥ [illegible]

ಮಾಂಗಲ್ಯವೇಷನುಮಾಗಿಗಣಕಗಣಗಣಿತಪ್ರಶಸ್ತಲಗ್ನದೊಳ್ಸಿಂಹೋತ್ತುಂಗಸಿಂಹಾಸನದೊಳಿರ್ದು ಪರಸುವರಸುಗುಲದಾರ್ಯಕುಲದ ಜಯ ಜೀವನಂದ ರಭಸಂಗಳುಂ ಪಠಿಯಿಸುವ ಚಾರಣಮಂಗಳೋಚ್ಚಾರಣಂಗಳುಂ ಸೇಸೆಯಿಕ್ಕುವುನ್ನದವಿಳಾಸಿನೀಜನದ ಮಣಿಕಂಕಣಕ್ವಣಿತಂಗಳುಂ ನೆಲನನುಗ್ಘಡಿಪ ಪಡಿಯುಜಿರ ಸಡಗರಂಗಳುಂ ಪೂರಿಸುವ ಧವಳಶಂಖ ಧ್ವಾಂಕಾರರುತಿಗಳುಂ ಬಾಜಿಸುವ ವಿವಿಧಪ್ರಯಾಣಪಟಹಂಗಳುತ್ತಳವಧ್ವಾನಗಳು ದೊತ್ತುವ ಪೊನ್ನ ಸನ್ನೆಗಾಳೆಗಳ ಕೋಳಾಹಳಂಗಳುಮಳುಂಬಮಾಗೆ ಚಿತ್ರಭಾನುದತ್ತ ಹಸ್ತಾವಳಂಬನಾಗಿ ಕತಿಪಯ ಪದಂಗಳಂ ತಳರ್ದು ನಿಜಪ್ರಾಸಾದಪುರೋಭಾಗದೊಳ್

ಮ॥ ವಿಲಸತ್ಪುಷ್ಕರಶೀಕರಪ್ರಸರದಿಂ ಸೇಸಿಕ್ಕುತಿರ್ಪಂತೆ ಮುಂ
ಜುಳಘಂಟಾರವದಿಂದಮೊಲ್ದು ಪರಸುತ್ತಿರ್ಪಂತೆ ದಾನಭ್ರಮ
ತ್ಕಳಭೃಂಗೀರವದಿಂದೆ ಗಾವರಿಸುತಿರ್ಪಂತುದ್ಧಮಾಂಗಲ್ಯಮಂ
ತಳೆದೊಪ್ಪಿರ್ದುದನೇಜದಂ ದ್ವಿರದಮಂ ವ್ಯಾಳೇಭವಜ್ರಾಂಕುಶಂ ೧೫

ವ॥ ಆಗಳ್

ಚಂ॥ ಅಮಳಮುಖೇಂದುಗಳ್ಕೆ ನಭಮಂ ಪುಗೆ ಕೀರ್ತಿಯನಟ್ಟಿ ಮತ್ತಮಾ
ಕ್ರಮಿಸುವ ನೀತನಲ್ಲಿ ಪಗೆ ಪೊಲ್ಲದು ಕಾಣ್ಬುದು ಕಜ್ಜಮೆಂದು ಬಂ
ದಮೃತಮರೀಚಿ ಕಂಡು ನಡೆದರ್ಪನೆನಲ್ ಮನುಜೇಂದ್ರಮಂದರಂ
ಗಮರ್ದೆಸೆದಿರ್ದುದಾದಲೆಯೊಳೆತ್ತಿದ [ಮುತ್ತಿನ] ಮೇಘಡಂಬರಂ ೧೬

ಕಂ॥ ನವರಾಜ್ಯನಳಿನವನದೊಳ
ಗವಯವದಿಂ ನಲಿದು ನರ್ತಿಪಂಚೆಗಳೆನೆ ಬೀ
ಸುವ ಧವಳಚಾಮರಂಗಳ್
ಯುವರಾಜನ ಕೆಲದೊಳೆಸೆದುವತಿ ಲಲಿತಂಗಳ್ ೧೭

ವ॥ ತದನಂತರ ಮುಖಮಂಡನಾಂಯೋಗಮಂಡಿತಂಗಳು ಮಾರೂಢ ಮಹಾಮಾತ್ರವಿಚಿತ್ರಾಂಕುಶ ಪ್ರಚಾರಣಮುಮಪ್ಪ ವಲ್ಲಭಗಜವ್ರಜಂಗಳುಂ ಖಣಖಣಾಯಿತ ವಿಲೀನಕಷಣಗಳಿತಲಪನಲಾಲಾಂಬುಫೇನಪಲ್ಲವಸ್ತಬಕಿತಮುಖಂಗಳುಂ ನಿಬದ್ಧಮಣಿ ಮಯಾಭರಣಕಿರಣಕಿಮ್ಮೀರಕಾಯಕಮನೀಯಾಕಾರಮುಮಪ್ಪ ಪಟ್ಟಸಾಹಣಹಯಚಯಂಗಳುಂ ಬಳಸಿ ಗೊಂದಣಿಸೆ ರಾಜಗೇಹಮಂ ಪೊಱಮಟ್ಟು ಪೊಱಗೆ ತಮತಮಗೆ ವಿನಯವಿನ ಮಿತೋತ್ತಮಾಂಗರಾದರಸುಮಕ್ಕಳಂ ಸದಯಾವಳೋಕನದಿಂದ ಪರಸಿ ನಿಜನಿಜವಾಹನಂಗಳ ಮೇಱೆಮೆಂದು ಬೆಸಸಿ

ಮ॥ ವಿಲಸದ್ಭೂಭುಜಕೋಟಿ ಮುಂದೆವರೆ ವಾರಸ್ತ್ರೀಜನಂ ಪಿಂದೆ ಪೋ
ರ್ವಳಿದ್ಯುಷ್ಟಂ ತಳತಂತ್ರಮಿರ್ಕೆಲದೊಳಿಂಬಾಗಿರ್ಪಿನಂ ಲೀಲೆಯಿಂ
ತಳರ್ದಂ ಕೆಮ್ಮುಗಿಲಂ ಮುಸುಂಕುವೆಳಮಿಂಚೆಂಬಂತೆ ಸುತ್ತುತ್ತಿರಲ್
ಪೊಳೆಯುಷ್ಟಂಕುಶಿಕಾಂತಿದಾನಗಜಮಂ ವ್ಯಾಳೇಭವಜ್ರಾಂಕುಶಂ ೧೮

ಮ॥ ಪಿಡಿ ಪೇರಾನೆ ಸುಖಾಸನಂ ಸಿಪಿಗೆ ಲೀಲಾವಾಜಿ ರಾರಾಜಿಸಲ್
ಕೊಡೆ ಕುಂಚಂ ತಟಿ ಚಾಮರಂ ಕುರುಳಕೊಂತಂ ತಳ್ತಿರಲ್ ತಂಡದಿಂ
ದೊಡೆನೆಟ್ಟುಂದುದು ಪೆಂಡವಾಸದಬಲಾನೀಕಂ ಜನಾಲೋಕಮಂ
ಕಡುಚೆಲ್ವಿಂ ತಣಿಪುತ್ತುಮಂಗಜನ ಬಲ್ದಂಡೆತ್ತಿ ಬರ್ಪಂದದಿಂ ೧೯

ವ॥ ಮತ್ತಂ

ಕಂ॥ ಬಾಸಣಿಸಿದ ಮದನನ ಬಾ
ಣಾಸನದವೊಲೆಸೆವ ಚಾರುಝುಂಪಾಣದೊಳು
ದ್ಭಾಸಿನಿಯರ್ ನೃಪಸುತನ ವಿ
ಳಾಸಿನಿಯರ್ ಬಂದರೇಱಿ ಪೊನ್ನಂದಣಮಂ ೨೦

ಚಂ॥ ಪ್ರಕಟಿಸಿದತ್ತು ಪದ್ಮಜನ ಪಕ್ಕದೊಳೆಟ್ತಿರದಾತ್ಮಲೀಲೆಯಿಂ
ಸುಕವಿಕದಂಬಕಂ ಕಥಕಸಂಹತಿ ವಾಚಕಕೋಟಿ ಪುಣ್ಯಪಾ
ಠಕತತಿ ಗಾಯಕಪ್ರತತಿ ವಾದಕಮಂಡಳಿ ನರ್ತಕಾಳಿ ವಾಂ
ಶಿಕಕುಳಮಿಂದ್ರಜಾಲಿಕಗಣಂ ಗಣಕಾವಳಿ ಚಿತ್ರಕವ್ರಜಂ ೨೧

ವ॥ ತದನಂತರಂ ನೂತ್ನರತ್ನಾಕರಪ್ರದೇಶದೊಳೆ ನಡೆವ ವರುಣನಂತೆ ಧರಣೀಶನಂದನಂ ಚಂಚತ್ತಂಚರತ್ನತೋರಣವಿರಾಜಮಾನಮಪ್ಪ ರಾಜಮಾರ್ಗದೊಳೆ ಬರ್ಪಸಮಯದೊಳ್

ಕಂ॥ ತೊಡುವುಡುವ ತುಡುವ ಪೂಮುಡಿ
ವಡಿಯೂಡುವ ನೆತ್ತವಾಡುವೋಪರೊಳೊಲವಿಂ
ದೊಡಗೂಡುವ ದಂದುಗಮಿರೆ
ನಡೆತಂದರ್ ನೋೞ್ಪ ತವಕದಿಂದೊಳ್ವೆಂಡಿರ್ ೨೨

ವ॥ ಅಂತು ನಿಜವ್ಯಾಪಾರಪರಂಪರೆಯನುೞಿದು ಕೆಲರ್ ಬಣ್ಣವಿಟ್ಟ ಲೆಪ್ಪದ ತ್ರಿಣ್ಣ ರೂಪುಗಳಂತೆ ಸೌಧಶಿಖರಂಗಳನಲಂಕರಿಸಿಯುಂ ಕೆಲಬರ್ ತೆತ್ತಿಸಿದ ಪುತ್ತಳಿಗಳಂತೆ ಪೊನ್ನವಾಡದ ಸೆಱೆಗಳೊಳ್ ನೆಲಸಿಯುಂ ಕೆಲರ್ ಜಿನಶಾಸನದೇವತೆಯರಂತೆ ಚೈತ್ಯಕೂಟಂಗಳೊಳ್ ಮಸಂಗೊಳಿಸಿಯುಂ ಕೆಲರ್ ವಸಂತಕಾಂತೆಯರಂತೆ ಭವನವನತರುಸ್ಕಂಧದೊಳ್ ನಿಂದುಂ ಕೆಲರ್ ಗಗನಚರಿಯರಂತೆ ಮುಗಿಲಟ್ಟಳೆಗಳೊಳ್ ಸೊಗಯಿಸಿರ್ದುಂ ಕೆಲಬರ್ ಪುರಮುಖಶ್ರೀಕಳೆಗಳಂತೆ ಗೋಪುರಾಗ್ರಂಗಳೊಳ್ ಸಂಗತೆಯರಾಗಿಯುಂ ಮನವೆಗೊಂಡು ಸಂದಣಿಸಿ ನೋಡುವಲ್ಲಿ

ಕಂ॥ ಎಳಮಿಂಚಿನ ನನೆಯುಂಬಿನ
ಜಳಜದ ಕರ್ನೆಯ್ದಿಲೆಸಳ ಬೆಳ್ದಿಂಗಳ ಮಿಾಂ
ಗಳ ಚೆಲ್ವನುಗುಳ್ದುವಾ ಕೋ
ಮಳೆಯರ ತಳತಳಿಸಿ ಪೊಳೆವ ತುಱುಗಮೆಗಣ್ಗಳ್ ೨೩

ಚಂ॥ ಬೆಳತಿಗೆಗಣ್ಣ ಬೆಳ್ಪು ನಗೆಗಣ್ಣ ಮುಗುಳ್ನಗೆ ಚೆಲ್ಲಗಣ್ಣ ಚಾ
ಪಳಮಲರ್ಗಣ್ಣ ಬಳ್ವಳಿಕೆ ಮಿಾಂಬೊಣರ್ಗಣ್ಣ ನಿಮಿರ್ಕೆ ಸೊರ್ಕುಗ
ಣ್ಣಳಸತೆ ಪುಲ್ಲೆಗಣ್ಣೆಳತೆ ತಳ್ತೆಮೆಗಣ್ಣ ತೆಗುಳ್ಪು ತೋಱುಗ
ಣ್ಪಳಸಿನ ಸುಗ್ಗಿಗಾಣಲಣಮಾಯ್ತು ಪುರಪ್ರಮದಾಜನಂಗಳೊಳ್ ೨೪

ತಿಳಿಗೊಳದಂತೆ ರಮ್ಯವನದಂತೆ ರವಿದ್ಯುತಿಯಂತೆ ಜೊನ್ನದಂ
ತೆಳಸಿರಿಸಿತ್ತವಳ್ದಿರ ಲಸಜ್ಝಷನೇತ್ರಮನೇಣನೇತ್ರಮಂ
ಜಳರುಹನೇತ್ರಮಂ ಕುಮುದನೇತ್ರಮನಾ ಯುವರಾಜ ಯವ್ವನೋ
ಜ್ವಳತನುವಲ್ಲಿ ಸಾಧಿಸಿದುದೋ ಬಹುರೂಪಿಣಿಯೆಂಬ ವಿದ್ಯೆಯಂ ೨೫

ವ॥ ಆಗಳೊರ್ವಳ್

ಮ॥ ವಿಸರನ್ಮೌಕ್ತಿಕಮಂಡನಪ್ರಭೆ ನಿಜಾಂಗಕ್ಕೀಯೆ ಬೆಳ್ಪಂ ಮದಾ
ಲಸಕಾಂತಾಜನಲೋಚನಂ ತನುಲತಾಲಾವಣ್ಯದೊಳ್ ತೀವಿ ಬಿಂ
ಬಿಸೆ ತತ್ಪದ್ಮನರೇಂದ್ರನಂದನನನಂದ್ಯೈರಾವತಾರೂಢನಾ
ದ ಸಹಸ್ರಾಕ್ಷನೆಗೆತ್ತು ಮಾನಿನಿ ಮನೋವಿಭ್ರಾಂತಿಯಿಂ ನೋಡಿದಳ್ ೨೬

ವ॥ ಮತ್ತಮೊರ್ವಳಭಿನವ ಮದೋನ್ಮತ್ತೆಯೆನಿಸಿ

ಮ॥ ಉಗಿಯಲ್ಕಂಕುಶದಿಂದ ತೊಡಂಕಿ ಪಱಿದೆತ್ತಂ ಸೋರ್ವ ನಕ್ಷತ್ರಮಾ
ಲೆಗಡರ್ಪಾದ ಮನೋಜಸಾಮಜಲಸತ್ಕುಂಭಂಗಳೆಂಬಂತೆ ಹಾ
ರಗಳನ್ಮೌಕ್ತಿಕದಿಂ ನಖಕ್ಷತಯುತಂ ವಕ್ಷೋಜಯುಗ್ಮಂ ಮನಂ
ಬುಗೆ ರಾಗಂ ಮಿಗೆ ಮೇಲುದಂ ಮಱೆದು ನೋಜ್ಜಜಾಕ್ಷಿ ಕಣ್ಗೊಪ್ಪಿದಳ್ ೨೭

ವ॥ ಮತ್ತಮೊಂದು ರಮ್ಯಹರ್ಮ್ಯತಲದೊಳಗಣಿಂದೆಱಗಿ ನೋಡಲ್ ಪೊಱಮಟ್ಟು

ಮ.ಸ್ರ॥ ಕೃತಸದ್ಯಃಕಾಮಕೇಳೀಭರವಿರಮಣಮಂ ಮಂದನಿಶ್ವಾಸಮಾಕಂ
ಪಿತಗಾತ್ರಂ ರಕ್ತನೇತ್ರಂ ನವನಖಲಿಖಿತಕ್ಷುಣ್ಣವಕ್ಷಸ್ಥಳಂ ವಿ
ಸ್ತೃತಕೇಶಂ ಕೀರ್ಣನೀಲಾಳಕಮುದಿತಮುಖಸ್ವೇದಮುಕ್ಲಿಪ್ತಕಾಂಚೀ
ಲತೆ ಸಂದಷ್ಟಾಧರಂ ಸೂಚಿಸೆ ನೃಪಸುತನಂ ನೋಡಲೆಯ್ತಂದಳೊರ್ವಳ್ ೨೮

ವ॥ ಮತ್ತಮೊರ್ವಳಾ ಕುಮಾರಕನ ಗಾಡಿಯಂ ನಡೆ ನೋಡಿ ತಣಿಯದೆ ಪಂಜಿಡಿದು ಪರಿವ ಮುಗ್ಧನಿತಂಬಿನಿಯ ಕೆಯ್ಯಂ ಪಿಡಿದು

ಉ॥ ಸಾಲದೆ ನೋಟದಿಂ ಪರಿದು ನೋೞ್ಪೊಡೆ ನಿನ್ನ ನಿತಂಬ ಭೂರಿಭಾ
ರಾಲಸಯಾನಮಯ್ದಿಸದದಲ್ಲದೆಯುಂ ಮಗುೞ್ದೀ ಸಡಿಲ್ವ ಕಾಂ
ಚೀಲತೆ ಬೇೞ್ ತಳ್ತು ತೊಡೆ ಸಂಕಲೆಯಾದವುದೆಂತು ಪೋಪೆ ನಿಲ್
ಬಾಲಿಕೆ ಪದ್ಮಜಂ ಮಗುೞ್ ಬಂದಪನಿಲ್ಲಿಯೆ ನಿಂದು ನೋಡುವಂ ೨೯

ಕಂ॥ ಗಾಡಿ ಕಡೆಗಣ್ಮೆ ಪೊಸಪೊ
ಮ್ಮಾಡದ ಮೇಗಿರ್ದು ನೋೞ್ಪ ಸತಿಯ ಮೊಗಂ ಕೀ
ೞ್ಮಾಡಿದುದು ಮಂದರಾಚಲ
ಚೂಡಾಸನ್ನಿಧಿಯೊಳಿರ್ದ ಶಶಿಮಂಡಲಮಂ ೩೦

ವ॥ ಮತ್ತಮೊಂದೆಡೆಯೊಳ್

ಕಂ॥ ಮುಡಿ ಬಿಟ್ಟು ಪಿಂದೆ ಸಸಿನಂ
ಮಡಗಾಲ್ಗಿೞಿದಿರೆ ಮೃಗಾಕ್ಷಿ ನಿಂದೀಕ್ಷಿಸುತಿ
ರ್ಪೆಡೆಯೊಳ್ ಪೋಲ್ತಳ್ ನೀಲದ
ನಿಡುಗಂಬದೊಳಮರ್ದ ಪೊನ್ನ ಪೊಸಪುತ್ತಳಿಯಂ ೩೧

ವ॥ ಆಕರ್ಣಿಕಾರವರ್ಣೆಯ ಪಕ್ಕದೊಳ್

ಮ॥ ಕಳಶಂ ಪೆರ್ಮೊಲೆ ರನ್ನಗನ್ನಡಿ ಲಲಾಟಂ ಲಾಜದಂತಾಂಶು ಕೆಂ
ದಳಿರ್ಗಳ್ ಕೆಂದಳಮಂಚಳಂ ಗುಡಿ ಕಟಾಕ್ಷಶ್ರೇಣಿ ಪೂಮಾಲೆ ನಿ
ರ್ಮಳಹಾರಂ ಮಣಿತೋರಣಂ ಸುಲಲಿತಭ್ರೂ ದೂರ್ವೆಯಾಗಲ್ಕೆ ಕೋ
ಮಳೆಯೊರ್ವಳ್ ನೃಪನಂದನಂಗೆ ಮೆಱೆದಳ್ ಮೆಯ್ವೆತ್ತ ಮಾಂಗಲ್ಯಮಂ ೩೨

ವ॥ ಮತ್ತಮೊರ್ವಳ್ ವಿನಯಪ್ರಾಕಾರನಾಕಾರಮಂ ಕಂಡು ಕಣ್ಸೋಲ್ತು ಕಾಮಪರವಶತೆಯಿಂ ಸಂಕಲ್ಪಸಂಭೋಗಕ್ರೀಡೆಗೆ ಮೆಯ್ದಂದು ಬಹಳಜನನಿರ್ದಯ ಪ್ರಮರ್ದದೊಳ್ ನಿಷ್ಫಲಾರಂಭಸುಭಗೆಯಾಗುತ್ತಿರ್ದೊಡವಳ ಕೆಳದಿಯಿಂತೆಂದಳ್

ಚಂ॥ ನನೆಗಣೆ ನಾಂಟೆ ನಾಣೞಿದು ನೋಟದ ದಂದುಗಮಂ ಬಿಸುಟ್ಟು ನೀಂ
ನೆನಪದೊಳೀ ಕುಮಾರನೊಡಗೂಡಲಪೇಕ್ಷಿಸಿ ಮುಚ್ಚಿ ಕಣ್ಗಳಂ
ಮನದೊಳಿದೇಕೆ ಜಾನಿಸುವೆ ಮಂದಿಯೊಳಾಗದು ಚಿತ್ತಶುದ್ಧಿ ಮು
ನ್ನನುಭವಿಸಕ್ಕ ಕಣ್ದೆಱೆದು ದರ್ಶನಸೌಖ್ಯಮನೀಗಳನ್ನೆಗಂ ೩೩

ವ॥ ಎಂದು ಬಾರಿಸಿದಳತ್ತ ಮಂದಿಯೊಳಿರ್ದು ನೋಟ್ಟ ಕುಲವಧೂಕದಂಬದೊಳ್

ಚಂ॥ ಚಕಿತಮೃಗಾಕ್ಷಿ ನೀನೆಳಸಿ ಕೆಮ್ಮನೆ ಜೊಮ್ಮನವೋಗಿ ಭಾವದಿಂ
ಪ್ರಕಟಿಸಲೇಕೆ ಪಾಱುತನಮಂ ನಿನಗೀ ಗುಣತುಂಗನಲ್ಲಿ ವ
ರ್ತಕಮಿದು ಸಲ್ಲದೆಲ್ಲೆಡೆಯೊಳಂ ಸಲುತಿರ್ಪವೊಲೀಗಳೆಂದು ಭಾ
ವಕಸಖಿ ಸೋಲ್ತ ಕಣ್ಣಱಿದು ಪುಂಶ್ಚಲಿಯಂ ಜಡಿದಳ್ ರಹಸ್ಯದೊಳ್ ೩೪

ವ॥ ಅಂತು ಸಸಂಭ್ರಮ ಸಲೀಲ ಸಪ್ರೇಮ ಸವಿಸ್ಮಯ ಸಹರ್ಷ ಪ್ರಕರ್ಷದರ್ಶನ ಭ್ರಾಂತಮಾದ ನಗರನಾರೀಕದಂಬದ ಸೋರ್ಮುಡಿಯ ಸೊಂಪು ಕಾರ್ಮುಗಿಲ ತಗುಳ್ಚುಮಂ ನೆಗಟ್ಚೆಯುಂ ಕಡೆಗಣ್ಣ ಕುಡುಮಿಂಚು ಸಂಚಳಿಸಿಮಿಳಿರೆಯುಂ ಕಳಕಾಂಚಿಯಿಂಚರದ ಸಡಗರಂ ಮೊಱಗನಳವಡಿಸೆಯುಂ ನಗೆಮೊಗದ ಮಂದಹಾಸರಸವೃಷ್ಟಿ ಬಿಸಿಲ ಬಿಸುಪನುಡುಗಿಸೆಯುಂ ಆಭರಣಕಿರಣಮುಮರಚಾಪವಂ ನಿಮಿರ್ಚೆಯುಂ ಲಾವಣ್ಯರಸದ ಪೊನಲ್ ಜನಲೋಚನಪಾಠೀನಮಂ ತೇಂಕಿಸಯುಂ ಉಜ್ವಳಿಪ ಪೊಚ್ಚಪೊಸಮುತ್ತಿನಚ್ಚಸೇಸೆ ಸೂಸುವಾಲಿವರಲನಭಿನಯಿಸೆಯುಂ ಮನಂಗೊಳಿಸುತ್ತಿರ್ದ ಪುರದ ಪರಿಶೋಭೆಯೆಂಬ ಪೊಸಗಾರ ಪಸರಮಂ ಪೆಱಗುವಮಾಡಿ ಪೊಱಮಟ್ಟು ಮನುಜೇಂದ್ರಮಂದರಂ ಪುರಂದರದಿಶಾಭಿಮುಖನಾಗಿ ನಡೆಯೆ

ಮ.ಸ್ರ॥ ಧರೆಯೆಲ್ಲಂ ಸ್ಯಂದನಾಶ್ವದ್ವಿಪಭಟಬಳದಿಂ ವ್ಯೋಮಮೆಲ್ಲಂ ಚಳಚ್ಚಾ
ಮರಕೇತುಚ್ಛತ್ರಶಸ್ತ್ರಪ್ರಕರದಿನಖಿಲಾಶಾಂತಮೆಲ್ಲಂ ಹಯೇಭೋ
ತ್ಕರ ಹೇಷಾಬೃಂಹಿತೋನ್ಮಿಶ್ರಿತ ಬಹುಕಹಳಾಶಂಕಭೇರೀಮೃದಂಗ
ಸ್ವರದಿಂದೋರಂತೆ ತೀವಲ್ ನಡೆದುದು ಕಟಕಂ ಕಂಪಿತಕ್ಷೋಣಿಭಾಗಂ ೩೫

ವ॥ ಆಗಳ್

ಚಂ॥ ಬಲಭರದಿಂ ನೆಲಂ ಕುಸಿಯೆ ಶೇಷನ ಪೆರ್ವಡೆ ತಗ್ಗಿ ಕಂಠಕಂ
ಧರದೊಳಗಟ್ಟಿಡಂಗಿದುದು ಕೂರ್ಮನ ಖರ್ಪರದೆಲ್ವು ನುಗ್ಗಿ ಬೆ
ನ್ನೊಳಗುಱಿದತ್ತು ಬೆಟ್ಟುಗಳ ಮೂಲಶಿಲಾತಳಸಂಧಿ ಬಿಟ್ಟು ವಾ
ಕುಳತೆಯನಾಳ್ದು ಕಿಟ್ಟಲೆ ಕಿಱುಂದಲೆಯಾದುದು ತಗ್ಗಿ ದಿಗ್ಗಜಂ ೩೬

ಮ॥ ಭರದಿಂ ಭೋಂಕನೆ ತಗ್ಗಿ ಭೂಮಿ ಫಣರತ್ನಂ ನೆತ್ತಿಯೊಳ್ ಬೆಟ್ಟದಂ
ತಿರೆ ನಟ್ಟಿರ್ದೊಡೆ ಮುಚ್ಚವೋಗಿ ಫಣಿಪಂ ಪಾತಾಳದೊಳ್ ಕೂರ್ಮಖ
ರ್ಪರಮಂ ನೆಮ್ಮಿ ತದೀಯನಿಶ್ವಸಿತದಿಂ ಮೂರ್ಛಾಭರಂ ಪಿಂಗೆ ಮ
ತ್ತಿರದೆಚ್ಚಾಂತನುದಾತ್ತನೇಂ ಬಿಡುವನೇಕೆನ್ನಂ ಮಹಾಸತ್ವಮಂ ೩೭

ಕಂ॥ ಪಡೆ ನಡೆವಲ್ಲಿಯೆ ಪಲವುಂ
ಪೆಡೆಗಳನಾನುತ್ತೆ ಕಮಠನನುಮತದಿಂದಂ
ನಡೆದನೊಡನೊಡನೆ ನೆಲನೋ
ರ್ಗುಡಿಸುಗುವೆಂದುರಗಪತಿ ರಸಾತಳತಟದೊಳ್ ೩೮

ವ॥ ಆಗಳಲ್ಲಿಯುಂ

ಮ॥ ಭರದಿಂ ಶೇಷನನೆತ್ತಿ ಪೊತ್ತಿ ಪೊಗೆಯಲ್ಕುಚ್ಛ್ವಾಸದಿಂದುಣ್ಮುವು
ದ್ಧುರಧೂಮೌಘವೊ ಮೇಣ್ ನಿಜಪ್ರಿಯತಮಂ ಸೌಂದರ್ಯಕಂದರ್ಪನೆ
ಯ್ತಿರೆ ಭೂವಲ್ಲಭೆ ಬೆನ್ನೊಳೆಟ್ಟು ಪದೆಪಿಂ ಬರ್ಪಂದಮೋ ಪೇೞಿಮೆಂ
ಬರ ಮಾತೊಪ್ಪೆ ಪೊದಟ್ಟುದಂದು ಬಲಪಾದೋತ್ಥಂ ರಜೋಮಂಡಳಂ ೩೯

ಕಂ॥ ಪಸರಿಸುವ ಪಾಂಸುಪಟಲಂ
ಮಸುಳಿಸೆ ಮಸಮಸನೆ ತೋಱುವವಸರದೊಳ್ ಪೋ
ಲ್ತೆಸೆದುದು ಧರಿತ್ರಿ ಪೊಗೆ ಪುಗೆ
ನಸುಮಾಸಿದ ಪೊಗೆಯ ಚಿತ್ರಭಿತ್ತಿಯ ತೆಱದಿಂ ೪೦

ವ॥ ಮತ್ತಂ

ಕಂ॥ ಲೋಕೈಕಮಿತ್ರನಿರೆ ಪೆಱ
ರ್ಗೇಕೆಯೊ ಪೃಥುತೇಜಮೆಂದು ಸೈರಿಸದವೊಲ
ತ್ಯಾಕೀರ್ಣಂ ಮಸುಳಿಸಿತು ದಿ
ವಾಕರಕಿರಣಮನುದಗ್ರ ಧೂಳೀಪಟಲಂ ೪೧

ಮ॥ ಪಿರಿದುಂ ಮುನ್ನಮನೇಕಪಾಪಹಿತಮಪ್ಪುದ್ಯನ್ಮದೋದ್ರೇಕದೊಳ್
ಪೊರೆಯುತ್ತಿರ್ದ ಮಳೀಮಸಾಕೃತಿ ಕುಜಾತಂ ಧೂಳಿಜಾಳಂ ದಿಗಂ
ಬರಸಾಂಗತ್ಯಮನಪ್ಪುಗೆಯ್ದು ಬೞಿಕಂ ಸದ್ವರ್ತನಂಬೆತ್ತುದೆ
ನ್ನರುಮಂ ಪೊರ್ದಿಸದೇ ದಿಗಂಬರಸಮಾಯೋಗಂ ಸದಾಚಾರಮಂ ೪೨

ವ॥ ಅಂತುಮಲ್ಲದೆಯುಂ

ಕಂ॥ ಎಡೆ ನೆಱೆಯದೀ ಬಲಕ್ಕಾ
ನೆಡೆಮಾಡುವೆನೆಂದು ನೆಲನನೊದವಿಪ ತೆಱದಿಂ
ಕಡಲಂ ಪೀರ್ದುದು ರಜಮೇಂ
ಪಡೆದುದೊ ಯುವರಾಜನಲ್ಲಿ ಪಡೆವಳವೆಸರಂ. ೪೩

ವ॥ ತದನಂತರಂ

ಕಂ॥ ಕರಗಿಸಿದುದು ರಜಮಂ ಚಾ
ಮರಪವನಂ ವಾಜಿವದನವಾಯು ಪತಾಕಾಂ
ಬರಮಾತರಿಶ್ವನನುಗತ
ಮರುತಂ ಮತ್ತೇಭಕರ್ಣತಾಳಸಮೀರಂ ೪೪

ವ॥ ಮತ್ತಂ

ಮ॥ ಹಯಲಾಳಾಜಲಮುಂ ಮದೇಭಮದಮೂತ್ರಾಸಾರಮುಂ ರೇಣುಸಂ
ಚಯಮಂ ತರ್ಗಿಸಿ ಮುಂದುಗಾಣಿಸಿತನಧ್ವಾಲೋಕಮಾಗಿರ್ದ ಸೇ
ನೆಯನಧ್ವಾನದೊಳಂತದೇನನಿತಱಿಂ ಮಾಣ್ದಿರ್ದುದೇ ಯಾನಲೀ
ಲೆಯುಮಂ ನೋೞ್ಪ ವಿಯಚ್ಚರರ್ಗೆ ತೆಱಪಂ ಮಾಡಿತ್ತು ಕಣ್ಣೂರ್ವಿನಂ ೪೫

ವ॥ ತದನಂತರಂ

ಚಂ॥ ಬಳೆದುದೊ ಭೂತಳಂ ಸುರಿದುದೋ ನಭ ಮಿಾಂದುದೊ ದಿಕ್ತಟಂ ಬಳಂ
ಗಳನೆನೆ ಪರ್ವಿದಾ ಪಡೆಯ ತೊೞ್ತುೞಿಯಿಂ ಗಿಡು ಬಳ್ಳಿ ಭೂರುಹಾ
ವಳಿ ಪೊದಱುಳ್ಳ ಬಲ್ಲಡವಿ ಪೆರ್ವಯಲಾಯ್ತು ನದೀನದೌಘಮಾ
ಗಳೆ ಬಱುಗಂಪಲಾಯ್ತು ಕುೞಿಯುಂ ತೆವಱುಂ ಸಮನಾಯ್ತದೆತ್ತಲುಂ ೪೬

ವ॥ ಎನಿಸಿ ನಡೆವಲ್ಲಿ

ಉ॥ ಆ ಗುಣತುಂಗದೇವನ ಮಹಾಕಟಕಂ ನಡೆವುತ್ಸವಕ್ಕೆ ಪ
ಕ್ಕಾಗಿ ಜಗಕ್ಕೆ ಬೀಱಿದುವು ಪೆಂಪನನೇಕನಗೋಪಕಂಠಭೂ
ಭಾಗಮನೇಕ ರಮ್ಯತರುಷಂಡಮನೇಕ ನದೀನದಾಂತಿಕಾ
ಭೋಗಮನೇಕ ದಿವ್ಯಜನತೀರ್ಥನಿವಾಸಮನೇಕನಂದನಂ ೪೭

ವ॥ ಅಂತು ವಿವಿಧ ರಮ್ಯಪ್ರದೇಶವಿಶ್ರಾಂತಶಿಬಿರನಾಗುತ್ತಲೆತ್ತಿಬರ್ಪ ವಿಕ್ರಮವಿನೋದನೆೞ್ತರವನಾಪ್ತ ಗುಪ್ತಚರರಿಂದಮಱಿದು ಕೆಲದ ನೆಲದ ಮಂಡಳಿಕವರ್ಗಮೆಲ್ಲಂ ತಲ್ಲಣಿಸಿ ಸುವಿಟಜನದಂತೆ ವಿದಿತ ಭೀರುಭಾವಮುಂ ವಾದಕನಿಕಾಯದಂತೆ ಘನಕಂಪಮುಂ ಕ್ಷೀಣಶಶಿಯಂತೆ ವಿಕಳಾತ್ಮಮುಂ ನಿದಾಘದಂತೆ ಶೋಷಿತಜಲಾಶಯಮುಂ ಸ್ನಪನಜಲದಂತೆ ಗಳಿತಾವಲೇಪಮುಂ ಶುಷ್ಕಕುಸುಮದಂತಪರಾಗರಸಮುಂ ಅರ್ಕರಿಪುವಿನಂತೆ ನಿರ್ಮುಕ್ತಭೋಗಮುಂ ಮೃಗಯಾವಿನೋದದಂತೆ ಧೃತರಾತ್ರಿಜಾಗರಮುಂ ಉತ್ಖಾತಖಡ್ಗದಂತೆ ಶೂನ್ಯೀಕೃತಕೋಶಮುಂ ಯೋಗಿಗಣದಂತೆ ವಿಷಯತ್ಯಾಗನಿರತಮುಂ ಷಂಡದಂತೆ

ಗೋತ್ರವಾಹಿನೀವಳಯಿತಮುಂ ಅಸಿತಕಂಠಚರಿತ್ರದಂತೆ ದುರ್ಗೋಪಗತಮುಂ ಇಂದ್ರತನುವಿನಂತೆ ಧೃತಮಹಾಲೋಚನಸಹಸ್ರಮುಮಾಗುತ್ತುಮಿರಲಲ್ಲಿ ಕೆಲಬರ್ ಮುನ್ನ ಪದ್ಮರಾಜದಿಗ್ವಿಜಯದೊಳ್ ತಾಗಿ ಬಾಗಿದನುಭೂತ ಪರಿಪ್ಲವರ್

ಚಂ॥ ಬಗೆಯದಿದಿರ್ಚಿ ಸಾವುದು ಮರುಳ್ತನಮುಳ್ಳುದನಿತ್ತು ತೆತ್ತು ಕೆ
ಯ್ಮುಗಿದು ಬರ್ದುಂಕುವಂ ಹರಣಮುಳ್ಳೊಡೆ ಹಾಡಿಯುಣಲ್ಕೆ ಬರ್ಪುದೊ
ಮ್ಮಗೆ ತಲೆಸುತ್ತುವೋಗಿ ತಲೆಯಿರ್ದೊಡೆ ಸೋಲ್ವುದು ಕಾದಿ ಸತ್ತೊಡೆ
ತ್ತುಗುಮೆ ಸಮಸ್ತ ವಸ್ತುತತಿ ಸಾವುದಱಿಂ ಸಿರಿವೋಗಲಾಗದೇ ೪೮

ನಯಮಿದು ನಮ್ಮ ನಾಡ ಗಡಿಯಂ ಪುಗದಲ್ಲಿಯೆ ಬಂದು ಮುತ್ತದ
ಲ್ಲಿಯೆ ಬೆದಱಿಟ್ಟ ಸಂಹರಿಸದಲ್ಲಿಯೆ ರಾಜ್ಯಮನೀಱ್ಕುಕೊಳ್ಳದ
ಲ್ಲಿಯೆ ಬೆಸಕೆಯ್ವಮೆಂದು ನಿಜಸಾರಧನಂಗಳನಟ್ಟಿ ಮುಂದೆ ಭೀ
ತಿಯಿನಿದಿರ್ವಂದು ಕಂಡರಸುವಿಟ್ಟವರೇನುಚಿತಪ್ರವೀಣರೋ ೪೯

ವ॥ ಅಂತು ಕಂಡ ಪರಪುರಾಧಿಪರ ವಿವಿಧ ವಸ್ತುಸದ್ಭಾವಮಂ ಕೆಯ್ಕೊಂಡು ತದೀಯ ಮಂಡಳಂಗಳನುೞಿದುೞಿದ ರಿಪುಮಂಡಳಕ್ಕೆ ನಡೆದು

ಮ॥ ಅನತಕ್ಷತ್ರಿಯರೊತ್ತುಗೊಂಡ ಗಿರಿದುರ್ಗಕ್ಕುಗ್ರವಜ್ರಾಗ್ನಿ ಕಾ
ನನದುರ್ಗಕ್ಕೆ ಮಹಾದವಾಗ್ನಿ ಜಲದುರ್ಗಕ್ಕುರ್ವಿದೌರ್ವಾಗ್ನಿ ಧಾ
ನ್ವನದುರ್ಗಕ್ಕೆ ಬೃಹಲ್ಲಯಾಗ್ನಿಯೆನೆ ತನ್ನುದ್ವೃತ್ತತಾಪಾಗ್ನಿ ನೀ
ೞ್ದೆನಸುಂ ಪರ್ವಿ ವಿಗುರ್ವಿಸಲ್ ನೃಪಸುತಂ ವಿಕ್ರಾಂತಮಂ ತೋಱಿದಂ ೫೦

ಉಱಿದುದ್ವೃತ್ತರ ಮೊತ್ತಮಂ ತಱಿದು ಗೆಲ್ಲಂಗೊಂಡು ವೃಂದಂಗಳಂ
ಸೆಱೆಗೊಂಡುಟ್ಟುದ ನೀಱ್ಕುಕೊಂಡು ಬಳಮಂ ಬೆಂಗೊಂಡು ದುರ್ಗಂಗಳಂ
ಕುಱುಪಿಂದಂ ಪರಿಮುತ್ತುಗೊಂಡು ಪುರಮಂ ಕೆಯ್ಕೊಂಡು ನಾನಾರ್ಥಮಂ
ಸೆಱೆಗೊಂಡಾಯ್ಕುಳಿಗೊಂಡನುದ್ಭಯಶಮಂ ವಿಕ್ರಾಂತಕಾಳಾನಳಂ ೫೧

ವ॥ ಮತ್ತಮಾಳ್ವಲದ ತೋಳ್ವಲದ ಬಾಳ್ವಲದ ಗರ್ವದಿಂದುರ್ವಿ ಮಲೆದ ಗುರ್ವಿತೋರ್ವೀಶ ಬಳಮನೆಟ್ಟಿಟ್ಟಿ

ಮ॥ ಅಸಲಂ ಕಾನನಮಂ ಕಱುತ್ತಡಗಿಡಲ್ ಸುಟ್ಟುಂ ಬಳಿಕ್ಕಲ್ಲಿ ನೂ
ತನ ಬೀಜಾಂಕುರವೃದ್ಧಿಯಂ ನೆಗೞ್ಪಂತುದ್ವೃತ್ತ ಭೂಪಾಲರಂ
ಮುನಿಸಿಂ ಕೊಂದು ಬಳಿಕ್ಕೆ ತತ್ಪದವಿಯೊಳ್ ತದ್ವಂಶಮಂ ಧಾತ್ರಿ ಜೀ
ಯೆನೆ ಸಂಸ್ಥಾಪಿಸಿ ಪದ್ಮಸೂನು ಮೆಱೆದಂ ಕೋಪಪ್ರಸಾದಂಗಳಂ ೫೨

ಉ॥ ಆನತರಾಗಿ ಜೀವಿಸದೆ ದುಷ್ಟನೃಪರ್ ಕೆಲರೋಡಿ ಪೋಗೆ ಪಾ
ಥೋನಿಧಿಯಲ್ಲಿ ಪೊಕ್ಕೊಡವರಂ ತವಿಸಲ್ ಬಟಸಂದು ಸಿಂದುವಂ
ದಾ ನೃಪಸೂನುವಿಕ್ರಮಕೃಶಾನುವವಲ್ಲದೊಡೆಲ್ಲಿ ಪೇೞ್ ನೀ
ರ್ಾನಿಸರೆಂಬರಾರೊ ಬಡವಾನಳನೆಂಬುದದೇನೊ ತೋೞ್ರೇ ೫೩

ವ॥ ಮತ್ತಮಲ್ಲಿ ಕೆಲರ್ ವಿದೇಶಗಮನಕ್ಕೆ ಸಲ್ಲದೆಯುಮನುಪ್ರವೇಶಗಮನಕ್ಲೇಶದಿಂ ನೆಗಬ್ದಿ

ಕಂ॥ ಅನುನಯದಿಂ ಭೂಮ್ಯುಪನತ
ಜನಪರ್ ಕೋಶೋಪನತ ಮಹೀಶರ್ ದೇಶೋ
ಪನತ ಕ್ಷಿತಿಪರ್ ಸರ್ವೊ
ಪನತ ನೃಪರ್ ತನ್ಮಹೀಶ ದಯೆಗೆಡೆಯಾದರ್ ೫೪

ಚಂ॥ ಬೆದಱದ ರಾಜಧಾನಿ ಬೆಸಕೆಯ್ಯದ ಬಲ್ಲಿದರೊಡ್ಡಿ ಕಾದಿ ಸಾ
ಯದ ಸಮರೋದ್ಧತರ್ ಕಿಡದ ಕಂಟಕರೋಡದ ಬೇಡವಟ್ಟು ಪೋ
ಗದ ಕಲಿಗೋಂಟೆ ಸಿಲ್ಕದ ವಿರೋಧಿಕುಟುಂಬಮಿಱುಂಬುಗೊಂಡಡಂ
ಗದ ಖಳರನ್ಯಮಂಡಳದೊಳಿಲ್ಲ ಕುಮಾರನಿದೇನುದಗ್ರನೋ ೫೫

ಮ॥ ನೆಗಬ್ದಿದ್ದಂಡತೆ ಕಂಟಕಸ್ಥಿತಿ ಸರೋಜವ್ರಾತದೊಳ್ ರಾಜಲೀ
ಲೆಗುರುಸ್ಫೂರ್ತಿ ನಭೋಗ್ರದೊಳ್ ಚಪಲತಾಸಂಗಂ ವಿಪತ್ಷಕ್ಷಮ
ದ್ರಿಗಳೊಳ್ ಕೋಶವಿಭೂತಿ ವಿಕ್ರಮದ ಸೊಂಪು ಧ್ಯಾನದೊಳ್ ಪೀನಮೊ
ಪ್ಪುಗುಮುರ್ವೀಶರೊಳೊಪ್ಪದೆಂದೆನಿಸಿದಂ ತನ್ನೇಟ್ಗೆಯಿಂ ಪದ್ಮಜಂ ೫೬

ಜಗತೀಪಾಲರನೊತ್ತಿಕೊಂಡು ಪಿತೃಗಟ್ಟುತ್ತಂ ಬಹುಶ್ಲಾಘ್ಯವ
ಸ್ತುಗಳಂ ಬಿಣ್ಣಿದುವಾಗಿ ಭಾವಿಸದೆ ಪುಣ್ಯಕ್ಷೇತ್ರದೊಳ್ ಚೈತ್ಯಕೋ
ಟಿಗಳಂ ಮಾಡಿಸಿ ಸಿದ್ಧಸೇಸೆಗಳನಟ್ಟುತ್ತುಂ ತ್ರಿಲೋಕೀವಿಭೂ
ತಿಗವಂ ಮೆಯ್ಸಿರಿಯಾಗಿ ಭಾವಿಸಿದನೇಂ ಪದ್ಮೋದ್ಭವಂ ಭವ್ಯನೋ ೫೭

ವ॥ ಅಂತು ಮೂಡಣಿಂ ಮೊದಲ್ಗೊಂಡು ಪುಷ್ಕಲಾವತೀವಿಷಯದೊಳಗಣ ರವಿಂದಪುರದ ಮಾಳಿನೀಪುರದ ವಸುಮತೀಪುರದ ಮೇಖಳಾಪುರದ ಪುರಂದರಪುರದ ಮಣಿಪುರದ ಸೀಮಂತಪುರದ ಪಾಂಚಾಲಪುರದ ಮಂದರಾಪುರದ ಮಳಯಪುರದ ಸಿಂಹಪುರದ ಪಾಟಳಾವತೀಪುರದ ಭದ್ರಾಂಗಪುರದ ರತ್ನವೇಟಪುರದ ಛತ್ರಾಕಪುರದ ಕನಕಪುರದರಸುಗಳನಾಕ್ರಮಿಸುತ್ತಂ

ಕಂ॥ ಪಾಳಿಸುತುಂ ಧರ್ಮಮನು
ನ್ಮೀಳಿಸುತುಂ ದ್ರೋಹರಂ ಯಶೋರಸದಿಂ ಪ್ರ
ಕ್ಷಾಳಿಸುತುಂ ದಿಙ್ಮುಖಮಂ
ಮೇಳಿಸುತುಂ ಚಂಡವಿಕ್ರಮಾಡಂಬರಮಂ ೫೮

ವಂದಿಸುತುಂ ವಂದ್ಯರನಭಿ
ನಂದಿಸುತುಂ ಬುಧರನಱ್ಕೆದಾಣದೊಳೆಸೆವಂ
ತೊಂದಿಸುತುಂ ವಿಜಯಧ್ವಜ
ವೃಂದಮನುತ್ತರದಿಗಂತಮಂ ಸಾರ್ತಂದಂ ೫೯

ವ॥ ಅಂತು ವಸಂತಕಾಲಾದಿತ್ಯನಂತೆ ಲೋಕೈಕಮಿತ್ರನುತ್ತರಾಯಣಪ್ರವೃತ್ತನಾಗಿ ತದ್ದಿಶಾದೇಶಂಗಳರಸುಗಳನವನತರ್ಮಾಡುತ್ತಿಳಾವಿಳಾಸಿನಿಯ ಶಿಖಂಡಮಂಡನದಂತಿರ್ದ ಶಿಖಂಡಮೆಂಬ ಮಂಡಳದೊಳಗೆ ಬರೆವರೆ

ಉ॥ ಭಾಸುರ ನಾಗಪೂಗಮವಳಂಬಿತವಾಜಿಸಮಾಜಮಾತ್ತಬಾ
ಣಾಸನಖಡ್ಗಧೇನುಬಹುಭಲ್ಲಚಯಂ ವಿಜಯಾಭಿರಾಮ ಮ
ಧ್ಯಾಸಿತವೃದ್ಧಕಂಚುಕಿಕುಳಂ ವಿವಿಧಕ್ಷಿತಿಭೃದ್ವಿಳಾಸಿ ಸಂ
ತ್ರಾಸಕಮೆಂಬರಣ್ಯಮೆಸೆದತ್ತು ಕುಮಾರನ ಸೈನ್ಯದಂದದಿಂ ೬೦

ವ॥ ಆಗಳಾ ವಿಪುಳವಿಪಿನದೊಳ್ ಬಹುವಿಧಶ್ವಾಪದೋಪಪ್ಲವಕ್ಕೆ ಪಕ್ಕಾಗದಂತು ಸುಭಟ ಸಂರಕ್ಷಿತಮಾಗಿ ಕಟಕಮಂ ಸೇನಾನಿ ನಡೆಯಿಸೆ ರಥಾಧಿರೂಢನಾಗಿ ಬರ್ಪ ಚಿತ್ರಭಾನುಮಿತ್ರಂಗೆ ಚಿತ್ರಸೇನನೆಂಬ ಸಾರಥಿಯಿಂತೆಂದಂ

ಮ॥ ಇದು ಸಂತ್ರಾಸಕಮೆಂಬರಣ್ಯಮಿದಱೊಳ್ ತಾನುರ್ವಿ ಕಾರಂಗನೆಂ
ಬದಟಂ ಲುಬ್ಧಕರಾಜನುಗ್ರಬಲಸಂಪನ್ನಂ ತಗುಳ್ದೀ ಪ್ರದೇ
ಶದ ನಾಡೆಲ್ಲಮನೊತ್ತಿ ಪೀಡಿಸುತುಮನ್ಯಾಸಾಧ್ಯನಾಗಿರ್ದು ಪೊ
ರ್ದಿದನುರ್ಕಿಂ ನಿಜತಾತದಿಗ್ವಿಜಯದೊಳ್ ನಿಂದಾಂತು ಕಾಲಾಂತಮಂ ೬೧

ವ॥ ಆದಱಿಂದೆ

ಚಂ॥ ಅದಟಿನೊಳಂದು ನಿನ್ನ ಪಿತೃಗೊಡ್ಡಿಸಿ ಸತ್ತರ ನೆತ್ತರೆತ್ತಲುಂ
ಪುದಿದಭಿವರ್ಧಿಸಲ್ ಬೆಳಗುವೆಂಬಿನಮಿಲ್ಲಿ ತಳಿರ್ತಶೋಕೆ ಪೂ
ವೊದವಿದ ದಾಸವರ್ಣಮಲರೇಱಿದ ಪಾದರಿ ಪಣ್ತ ತೊಂಡೆ ಕೊ
ರ್ವಿದ ಕಿಸುಚಂದನಂ ಬೆಳೆದ ಬಂದುಗೆಯೆಂಬಿವಳುಂಬವಾಗಳುಂ ೬೨

ವ॥ ಅದಲ್ಲದೆಯುಂ

ಕಂ॥ ಪುದಿದೆಸೆದುವು ನಿಜಪಿತೃವಂ
ಕದ ಕರಿಗಳ ಮದದ ಸೊವಡು ಮುನ್ನಿನ ಸಪ್ತ
ಚ್ಛದಗಂಧದಿನೇಳಾಗಂ
ಧದಿನೆಸೆವುದು ದೇವ ಭಾವಿಸೀ ಕಾನನಮಂ ೬೩

ವ॥ ಎಂದು ತದ್ಗಹನಮಹಿಮಾಭಿವರ್ಣನವ್ಯಾಜದಿಂ ಪದ್ಮರಾಜದಿಗ್ವಿಜಯವಿಜಯ ವೃತ್ತಾಂತಮಂ ನೂತನವಚನದಿಂ ನಿಜಗುರುಪರಾಕ್ರಮಾಕೀರ್ಣನೋದೀರ್ಣ ಪುಳಕಾವತಂ ಸಕರ್ಣನಾದ ಲೋಕೈಕಮಿತ್ರಂಗೆ ಚಿತ್ರಭಾನುವಭಿಮುಖನಾಗಿ

ಕಂ॥ ತಾಳಪ್ರಪಂಚದಿಂದೆ ಮ
ದೇಳಾಜಾತಿಗಳಿನೆಸೆದು ಸರಸನಟಶ್ರೀ
ಗಾಳಂಬಮಾಗಿ ಭರತದ
ಲೀಲೆಯನಾಳ್ದಪುದರಣ್ಯಸಂತತಿ ವಿಪಿನಂ ೬೪

ಅಮೃತಾಶ್ರಯಮಿಂದ್ರಾಣೀ
ಸಮೇತಮಮರೀವಿಳಾಸಿರಂಭಾರಮ್ಯಂ
ಸುಮನೋನಿಳಯಂ ವಜ್ರ
ಪ್ರಮುಖಮಿದಿಳೆಗಿಟಿದ ಸಗ್ಗಮೆನಿಪುದು ದುರ್ಗಂ ೬೫

ವ॥ ಮತ್ತಂ

ಕಂ॥ ಕಮಳಾಶ್ರಯಮಿದು ನಿನ್ನಂ
ದ್ಯುಮಣಿಯನತಿ ಲಲಿತತಿಳಕಮಿದು ನಿನ್ನಂ ದ್ವಿಜೋ
ತ್ತಮನಂ ಭುವನಾದ್ಭುತ ವಿ
ಭ್ರಮಮಿದು ನಿನ್ನಂ ಪಯೋಧಿಯಂ ಪೋಲ್ತಿರ್ಕುಂ ೬೬

ಪುನ್ನಾಗವಿರಾಜಿತಮಿದು
ಪನ್ನಗವಧುವಂ ಕರೇಣುವಂ ಕೇಸರಸಂ
ಪನ್ನಮಿದು ಹರಿಯನಂಬುಜ
ಮನ್ನೆನೆಯಿಪುದಖಿಳ ಮೃಗಶರಣ್ಯಮರಣ್ಯಂ ೬೭

ಮ॥ ಇದು ದೇಹಾರದ ಗೇಹದಂತೆ ಹರಿಣೀರಮ್ಯಂ ಗ್ರಹಗ್ರಾಮದಂ
ತುದಿತ ಕ್ರೋಡವಿಭಾಸಿ ಕೋಶಗೃಹದಂತಷ್ಟಾಪದಾಧಿಷ್ಠಿತಂ

ಕದನೋರ್ವೀತಳದಂತೆ ದಾರುಣಚಮೂರಾವಸ್ಥಿತಕ್ಷೋಭಿತಂ
ಮದವತ್ಕುಂಜರಗಾತ್ರದಂತೆ ವಿಳಸದ್ಧಭ್ರೂಪ್ರಭಾವಿಭ್ರಮಂ ೬೮

ವ॥ ಅದಲ್ಲದೆಯುಂ ಮಾತಂಗಸಂಗಿಯಾಗಿಯುಂ ಸದ್ವಂಶವಿರಹಿತಮಲ್ತು ಬಂಧುಜೀವಹಾರಿಯಾಗಿಯು ವಧೀಕೃತಗೋತ್ರಮಲ್ತು ಮದನವಿಜಯಾಭಿವೃದ್ಧಿಕರಮಾಗಿಯುಂ ವಿರಾಗದೂರಮಲ್ತು ವಿವಿಧಶಬ್ದರಚಿತಮಾಗಿಯುಂ ಶಬ್ದಾವಕಾಶಮಲ್ತೆನಿಪ ವಿರುದ್ಧಗುಣ ಮನವಲಂಬಿಸಿತ್ತು ಮತ್ತಂ

ಮ.ಸ್ರ॥ ಮರಿಚವ್ಯಾಕೀರ್ಣಕರ್ಣಂಕರರ ತನುವ್ರತಗ್ರಂಥಿಪರ್ಣಚ್ಛದಂಕ
ತ್ತುರಿವೆಕ್ಕಂ ಸಲ್ಲಕೀಪಲ್ಲವಮಿಭಶಿಶುವಂ ಶ್ರೀಫಳೋದ್ಯತ್ಫಳಂ ಬಂ
ಧುರಗೋಲಾಂಗೂಲಮಂ ಕೊರ್ವಿಸೆ ಸೊಗಯಿಪುದೀ ಕಾನನೋದ್ದೇಶಮೋರಂ
ತಿರೆ ನಾನಾ ಭಿಲ್ಲಪಲ್ಲೀಖಗಮೃಗಲತಿಕಾವೃಕ್ಷಗುಲ್ಮಾವಕಾಶಂ ೬೯

ವ॥ ಎಂದಿಂತು ವಿವಿಧವಚನಮಂ ಮೆಱೆದು ಮಚ್ಚಿಸುತ್ತುಂ ಬರ್ಪಲ್ಲಿ

ಶಾ॥ ರಂಗತ್ಪಿಂಗಳಲೋಚನಂ ಘುಳುಘುಳುಪ್ರಧ್ವಾನರೌದ್ರಾನನಂ
ಲಾಂಗೂಲಾಹತಭೂತಳಂ ರುಚಿರದಂಷ್ಟ್ರಾಯುಗ್ಮತಿಗ್ಮಂ ಕುರುಂ
ಗಾಂಗೋಜ್ಜೃಂಭಿತರಕ್ತಸಿಕ್ತನಖರಂ ವ್ಯಾಕೀರ್ಣಕರ್ಣಂ ಕುಮಾ
ರಂಗಾಶ್ಚರ್ಯಮುಮಾರ್ಗಮಾದುದು ಭಯಂ ಶಾರ್ದೂಲವಿಕ್ರೀಡಿತಂ ೭೦

ವ॥ ಅದಲ್ಲದೆಯುಂ

ಮ॥ ವದನೋಗ್ರಗ್ರಸನದಿಂದಮೊಂದೆರಡು ವಾಲೋದ್ಘಾತದಿಂ ಮೂಱುನಾ
ಲ್ಕುದಿತಕ್ರೂರನಖಪ್ರಹಾರಭರದಿಂದೈದಾಱು ದಂಷ್ಟ್ರೋಗ್ರಪಾ
ತದಿನೇೞೆಂಟು ಸುರುಳ್ದುರುಳ್ವಿನೆಗ ವೇಣಶ್ರೇಣಿಯಂ ಪಾಯ್ದು ಕೊಂ
ದುದನೇವೇೞ್ವುದೊ ಶತ್ರುಸಂಹರಣಕೇಳೀಶೀಘ್ರಮಂ ವ್ಯಾಘ್ರಮಂ ೭೧

ಉ॥ ಆಳಿ ನಿಜಾಸ್ಯದಿಂದ ನಿಮಿರೆ ಪುತ್ತಿನ ಬಾಯ್ದುಲೆಯೊಳ್ ಪಿಪೀಲಿಕಾ
ಮಾಳೆಗೆ ಪಾಸಿ ನಾಲಗೆಯನೊಂದು ಭಯಂಕರಭಲ್ಲಮುಲ್ಲಸ
ದ್ವಾಳ ತಮಾಳ ಗುಲ್ಮದೊಳಗಿರ್ಪುದುಮಾ ಸೊವಡಿಂಗೆ ಕಾಯ್ಪಿನಿಂ
ಕಾಳಿಗನಾಗನಿರ್ದಪುದಿದೊಂದು ತಮಾಳದ ಬಳ್ಳಿಯೆಂಬಿನಂ ೭೨

ವ॥ ಮತ್ತೊಂದು ಪೆರ್ಮೆಳೆಯ ಸುತ್ತುಮುತ್ತಿನೊಳ್

ಚಂ॥ ಮುನಿದಿಸೆ ಪಂದಿ ನೂಂದೊಳಱ್ ಕಾಯ್ದಿನೊಳಳ್ಕುಱ್ ದಾಡೆಗುಟ್ಟಿ ತೊ
ಟ್ಟನೆ ಪರಿತಂದು ಮುಟ್ಟಿದೊಡಿಸಲ್ ತೆಱಪಿಲ್ಲದ ಬಿಲ್ಲಸಿಕ್ಕಿ ಡೊ
ಕ್ಕನೆ ನಡೆ ಪಾಯ್ದು ಮೆಯ್ವೊಣರ್ದು ಕಣ್ವೊಱಪಾಯ್ದಿನಮೊತ್ತಿ ಗಂಟಲಂ
ವನಚರನಾರ್ದು ಕೊಂದು ಮೆಱೆದಂ ಭುಜವೀರ್ಯಮನುಗ್ರಶೌರ್ಯಮಂ ೭೩

ಮ॥ ಭರದಿಂದುರ್ವಿದ ನಾಯ್ಗಳವ್ವಳಿಸೆ ಭಿಲ್ಲಂ ಬಿಲ್ಲನಾಕೃಷ್ಟಿಗೆ
ಯ್ದಿರೆ ಕಂಡಳ್ಕಿ ಕುನುಂಗಿ ಪೊಂಗಿ ಮೆಳೆಯಂ ಸಂರಂಭದಿಂ ಜೊಪ್ಪುಗೊಂ
ಡಿರುತಂ ಗರ್ಜಿಸಿ ದಾಡೆಗುಟ್ಟಿದುದು ಧಾತ್ರೀಭೀಕರಂ ವಿಕ್ರಮಾ
ಕರಮವ್ಯಾಕುಳಕೇಕರಂ ಪೃಥುಕಲಾಲಾಶೀಕರಂ ಸೂಕರಂ ೭೪

ವ॥ ಅದಂ ನೋಡುತ್ತುಂ ಬರೆ ಮುಂದೊಂದೆಡೆಯೊಳ್

ಮ.ಸ್ರ॥ ಅಮಿತೋದ್ಯದ್ಗುಲ್ಮವಲ್ಮೀಕಮನುಡಿದಿಱಿಯುತ್ತಂ ಜರತ್ಕಂಟಕೋಗ್ರ
ದ್ರುಮದಿಂದಂ ತನ್ನ ತೀನಂರ್ದೆಡೆಯನೊರಸುತಂ ಪ್ರೋದ್ವಿಷಾಣಂ ಸ್ಫುರದ್ಘ್ರಾ
ಣಮತುಚ್ಛಂ ಲೋಲಪುಚ್ಛಂ ಭೃಕುಟಿಕುಟಿಲಭಾಳಂ ಸರಕ್ತಾಕ್ಷಿಲೀಳಂ
ಯಮವೇಷಂ ಘೋರಘೋಷಂ ನಡೆದುದು ಬಳವತ್ಕಾಳಕಾಯಂ ಲುಲಾಯಂ ೭೫

ವ॥ ಮತ್ತೊಂದು ಜಲಾರ್ದ್ರಕರ್ದಮೋದ್ದೇಶದೊಳ್

ಕಂ॥ ಕಱಿಕೊರ್ವಿಪಂದಿಗಡ್ಡೆಯ
ಮಱಿಗೊಂಡಿರದೆತ್ತುತಿರ್ದ ಸೂಕರನಂ ಕೆ
ಯ್ವೞಿದ ಕರಿಕಳಭಮೆಂದ
ಳ್ಕುಱ್ ಪಾಯಲ್ ಬಗೆದುದೊಂದು ಸಿಂಹಕಿಶೋರಂ ೭೬

ವ॥ ಅದಕ್ಕನತಿದೂರದೊಳ್

ಉ॥ ಪಾಯ್ದೊಡೆ ಕೋಡನೂಱ್ ನಡೆಬಿಟ್ಟಿ ಮದೇಭದ ದಂತದಿಂ ಭರಂ
ಗೆಯ್ದುಡೆಯುಚ್ಚೆ ಕಾಡನರುಣಾಂಬುಗಳಿಂ ಬೆದೆಗೂಡಿ ತಾಯ್ಮಲ
ಕ್ಕೆಯ್ದಿರಲೆಂದು ಜಿತ್ತಿದುದದೊಂದು ಮೃಗಾರಿ ತದುತ್ತಮಾಂಗದಿಂ
ಸಯ್ದನೆ ಸೋರ್ವ ಮುತ್ತುಗಳೆ ಬಿತ್ತುಗಳಾಗಿರೆ ತನ್ನ ಜೀರಮಂ ೭೭

ವ॥ ಆ ವಿಕ್ರಮಾರಂಭನಿಪುಣಕಂಠೀರವಮಲ್ಲದೆಯುಂ

ಚಂ॥ ಶರಭಮಿದಿರ್ಚೆ ನಾರ್ಚೆ ಗೆಲಲುಂ ಕೊಲಲುಂ ನೆರಪಿಲ್ಲದಿರ್ದೊಡಂ
ಹರಿ ಮೃಗರಾಜನಾಮವಱಿಗುಂ ಪಱಿಗುಂ ಜಗಮೋದಿ ಬಿಱ್ದೊಡಂ

ದಿರದಿದಿರಾಗಿ ಸತ್ತು ಜಸಮಂ ಗೆಡೆಗೊಂಡುದದಂತೆ ಲೋಕದೊಳ್
ಧರೆ ಪೊಗಟ್ಟಿಂತು ಸತ್ತ ಕಲಿಯುನ್ನತಿ ಗೆಲ್ಲದಿನಗ್ಗವಲ್ಲವೇ ೭೮

ವ॥ ಮತ್ತಮೊಂದು ಸರಳ ಸಲ್ಲಕೀ ತಮಾಳ ಲವಂಗಸಂಗತಪ್ರದೇಶದೊಳ್

ಮ॥ ಪರಿವಟ್ಟಾಂಬುವನೂಡಿ ಪೂಗವನಮಂ ಕಿೞ್ತಿಕ್ಕಿ ಕರ್ಪೂರಭೂ
ಜರಜೋರಾಜಿತಮಾಗಿ ಕೋಡೆ ಹೊಗೆ ಕಾಡಂ ಸುತ್ತೆ ಮಾಜಾನೆಯೊಳ್
ಭರದಿಂದಂ ಮೊಗಮಿಕ್ಕಿ ಪೋರ್ದು ಶಬರೀಗೇಯಂಗಳಂ ಸೋಲದಿಂ
ಮರವಟ್ಟಾಲಿಸಿ ಲೀಲೆಯಂ ಮೆಱೆದುದುರ್ವೀಬಂಧುರಂ ಸಿಂಧುರಂ ೭೯

ವ॥ ಅದಲ್ಲದೆಯುಂ

ಚಂ॥ ವನಮೃಗಕೋಟಿ ಸೋಲ್ವ ಜನಮಾಗೆ ಮದಂ ತಿಮಿರಾಗೆ ಕೋಡು ಕೂ
ರ್ಮೊನೆಯಲಗಾಗೆ ಕಾಡು ಕಳನಾಗೆ ಮದಭ್ರಮರಾಳಿ ರಕ್ಕೆಗಂ
ಟೆನ ಮಣಿಯಾಗೆ ತಕ್ಕಟೆಯದೆಕ್ಕತುಳಂ ಪೊಣರ್ದಂಕದಂತೆ ಬ
ಲ್ಮುನಿಸಿನೊಳೊಂದನೊಂದಿಱಿಯಲಿರ್ದುವು ತಳ್ತೆರಡುಗ್ರದಂತಿಗಳ್ ೮೦

ವ॥ ಮತ್ತಮೊಂದೆಡೆಯೊಳ್

ಚಂ॥ ಉಡಿದರೆಮೆಲ್ದು ಮೆಲ್ದಳಿರನಿಕ್ಕುವ ಬಲ್ದಳಿಗೊಂಬನಿಂಬಿನಿಂ
ಕೊಡೆವಿಡಿವಗ್ರಹಸ್ತಜಳಮಂ ನಸುವಿಂಡುವ ಕೋಡನಿಟ್ಟು ತೀಂ
ಗಿಡಿಪುವ ಕರ್ಣತಾಳದೆಲರಿಂ ಬೆಮರಾಱಿಪ ಕೆಯ್ತಮೊಪ್ಪೆ ಬ
ಲ್ಪಿಡಿ ಪಿಡಿದಿರ್ದುದಂಗಜನ ಕಯ್ಪಿಡಿಯಂ ಪಿಡಿಯಂ ಮತಂಗಜಂ ೮೧

ವ॥ ಮತ್ತಮೊಂದೆಡೆಯೊಳ್

ಉ॥ ಬೇನೆಯಿನಕ್ಷಿಗಳ್ ನಸು ಮುಗುಳ್ತಿರೆ ಪಿಂತು ಕುಸುಂಗಿ ಜೋಲೆ ಪೇ
ರಾನೆಯ ಕರ್ಣವಾಯು ಬೆಮರಾಱಿಸೆ ತಾಯ್ಪಿಡಿ ನೀಡೆ ಹಸ್ತದಿಂ
ತಾನವಳಂಬಿಸಿರ್ದು ತಟಭೂಜದೊಳೊಂದು ಕರೇಣು ಸೂಲಿಸು
ತ್ತೇನಣವಲ್ಲಿ ಮಾಡಿದುದೊ ಬೇಡರೊಳಂ ಕರುಣಾನುಭಾವಮಂ ೮೨

ವ॥ ಅದಲ್ಲದೆಯುಂ

ಕ॥ ಪರಿಕಲಿತ ಗಂಡಶೈಲೋ
ತ್ಕರಮಧ್ಯದೊಳಮರ್ದು ರಂಜಿಪಂಜನಗಿರಿಯಂ

ಕರಿ ಪೋಲ್ತಿರಲೆಸೆದುದು ಬಳ
ಸಿರೆ ಪೋತಕಲಾಪವಲ್ಲಿ ಯೂಥಸನಾಥಂ ೮೩

ವ॥ ಮತ್ತೊಂದು ಸಪ್ತಶಾಲ್ಮಲೀಷಂಡದೊಳ್

ಕಂ॥ ಎಲೆವರಸು ಗಾಳಿಯಿಂ ಪಱ್
ದೆಲವದ ಪಸುರ್ಗಾಯ್ಗಳುರುಳೆ ಮೂಗೂಱ್ ಶುಕಾ
ವಲಿ ಬಿಟ್ಟುವೆಂದು ಬಿಡೆ ನುಂ
ಗಲೊಡರ್ಚುವುವದಱ ಪೊದಱ ಬಾಳಬಿಡಾಳಂ ೮೪

ತುಱುಗಿದ ತೂಱಲ್ಗೊಂಬಿನ
ತೆಱಪುಗಳೊಳ್ ಕೂಡಿ ನುಸುಳಲಾಱದೆ ಸಿಲ್ಕಿಂ
ಪಱ್ದಿರ್ದ ಬೆಳ್ಮುಗಿಲ್ಗಳ
ಮುಱ್ಗಳಿವೆನಿಸಿದುವು ಶಾಲ್ಮಲೀಫಳತೂಳಂ ೮೫

ವ॥ ಮತ್ತಮೊಂದೆಡೆಯೊಳ್

ಕಂ॥ ಮರಗೊಂಬಿಂದಂ ನೇಲ್ದಲೆ
ಯುರಗನ ಪಜ್ಜಳಿಪ ಪಡೆಯ ಮಾಣಿಕವೆಳಗೇಂ
ಕರಮೆಸೆದುದೊ ವನದೇವತೆ
ಯರಮನೆಯೊಳ್ ನೇಲಿದಲೆಯ ಸೊಡರೆಂಬಿನಗಂ ೮೬

ವ॥ ಅದಲ್ಲದೆಯುಂ

ಚಂ॥ ಬಿರಿಕಿಸೊಳೊಯ್ಯನೊಯ್ಯನರೆದೋಱುವ ಬಿತ್ತುಗಳಿಂ ವಿಳಾಸಮಾ
ವರಿಸಿದ ದಾಡಿಮೀಫಳಮನೊಯ್ಯನೆ ಚುಂಬಿಸಿ ಬರ್ಪ ಕಾಂತನಂ
ತರುಚರಕಾಂತೆ ಕಂಡು ಪುರುಡಿಂ ಬಡಿಯಲ್ ಪಡಿಗೊಂಡುದೀಟ್ಟು ಬ
ಲ್ಗಿರಿದು ಬಲೀಮುಖೀಮುಖಮನಿಂಬೆನೆ ಚುಂಬಿಸೆ ತೇಂಕಿ ಕೋಪಮಂ ೮೭

ವ॥ ಮತ್ತಮನೇಕ ಪನಸ ಜಂಬೀರ ನಾರಿಕೇಳ ಸಹಕಾರ ಕದಳೀ ಪ್ರಮುಖಫಲಿತ ಭೂಜರಾಜಿಗಳ್

ಕಂ॥ ಅನುಭವಿಸುವ ಜನಮಂ ನೆ
ಟ್ಟನೆ ಪಡೆಯದೆ ಬಱ್ದೆ ಕಿಡುವ ವಿವಿಧ ಫಲಂಗಳ್
ನೆನೆಯಿಸಿದುವಲ್ಲಿ ದುರ್ಭಗ
ವನಿತೆಯ ರಮಣೀಯರೂಪಯೌವನದೊದವಂ ೮೮

ವ॥ ಅಂತವಂ ನೋಡುತ್ತುಂ ಬರವರೆ ಮುಂದೊಂದು ಶಬರ ಶಿಬಿರದೊಳ್

ಚಂ॥ ಬಿದಿರಿದ ಮುತ್ತುವಲ್ಲ ಮುರಿಮೂಗಿನ ಬೊಂದಿಗೆವಾಯ ಪೊಂಗುಗ
ಲ್ಲಿದ ಪಸುರ್ಗಣ್ಣ ಕೆಂದಲೆಯ ಕಾಳಿಗವರ್ಣದ ಬೀಡೆಗಾಲ ಜೋ
ಲ್ದುದರದ ಕಂಜಿಗಯ್ದು ಸಿರಮಯ್ದುಟಿಗಡ್ಡದ ಕೂನಬೆನ್ನ ನು
ಗ್ಗಿದ ಕೊರಲಟ್ಟಿ ಪೇರುರದ ಲುಬ್ಧಕರಿರ್ದರಲಬ್ಧಮಾರ್ದವರ್ ೮೯

ವ॥ ಅವರೊಳಗೆ

ಚಂ॥ ಸುಡುರ್ದಲೆ ಸಣ್ಣವುರ್ವೊಳುಮೊಗಂ ಬೆಳರ್ವಾಯ್ ಮಿಳಿರ್ವೊಳ್ಗುರುಳ್ ತೊದ
ಳ್ನುಡಿ ನಿಡುಗಣ್ ತೊಳರ್ಪ ಕದಪುದ್ದನೊಸಲ್ ಸುಲಿಪಲ್ ಘನಸ್ತನಂ
ಬಡನಡು ನೀಟ್ಟ ತೋಳ್ ಪೊಳೆವನುಣ್ದೊಡೆ ಮೆಲ್ಲಡಿ ಕೊಲ್ಲಿನೋಟಮು
ಗ್ಗಡದ ಸುವರ್ಣಮೆಂಬಿವಱನೊಪ್ಪಿದುದಿರ್ದ ವನೇಚರೀಜನಂ ೯೦

ವ॥ ಆಗಳಾ ಕಿರಾತರ ದುರ್ದರ್ಶನೀಯತೆಯುಮನಾ ಕಿರಾತೆಯರ ಸಹಜಾಮ
ಳಾಂಗ ರಮಣೀಯತೆಯುಮಂ ಚಾತುರ್ಯಚತುರಾನನಂ ಕಂಡು ಚಿತ್ರಭಾನುಗಿಂತೆಂದಂ

ಕಂ॥ ಈ ಚಾರುರೂಪಲಲಿತವ
ನೇಚರಿಯರನೀ ಕುರೂಪರೊಳ್ ಕೂಡಿ ನಿರಾ
ಲೋಚಕನಾ ಬಿದಿ ವೇದಜ
ಡೋಚಿತವೃತ್ತಿಯನದಿಂತು ಕನ್ನಡಿಸುವನೇ ೯೧

ವ॥ ಎಂದು ನುಡಿಯುತ್ತುಂ ಬರ್ಪನ್ನೆಗಮೊಂದು ಪೆಕ್ಕಣಪ್ರಾಂತದೊಳ್
ಮಿನುಪ ಕಿಸುಚಂದನದೊರಲ್ ಸ್ವರ್ಣದಿಂದಮುಜ್ಜಳಿಸೆ

ಚಂ॥ ಮದಗಜದಂತಕಾಂತ ಮುಸಳಂಬಿಡಿದೆತ್ತುವ ತೋಳ ನುಣ್ಪೊಗರ್
ಮದನನ ಬಾಳ ನುಣ್ಪೊಗರನೇೞಿಸೆ ಗಾವರದಿಂಪು ವಲ್ಲಕೀ
ಮೃದುರವದಿಂಪನೀಯೆ ಬಿದಿರಕ್ಕಿಗಳಂ ಚಳಿಸುತ್ತೆ ಪಾಡಿದರ್
ಮದವತಿಯರ್ ಕಿರಾತಸತಿಯರ್ ಪ್ರಭುಮೇರುವ ಲೀಲೆಯೇೞ್ಗೆಯಂ ೯೨

ವ॥ ಮತ್ತಮೊರ್ವಳ್

ಚಂ॥ ಒನಕೆ ಕೊನರ್ತು ಪಲ್ಲವಿಸಿದಪ್ಪುದೊರಲ್ ನಸುದೇಂಕಿದಪ್ಪುದೆಂ
ಬನಿತುವರಂ ಪೊದಳ್ದ ಕಳಗೀತರಸಂ ಕವಿತಂದಡರ್ದವೋಲ್
ವನಮೃಗಮೆತ್ತಲುಂ ತಳರಲಾಱದೆ ಬಿಲ್ದಿರೆ ವೇಣುಬೀಜಮಂ
ವನಚರಿ ಕುಟ್ಟುತಂ ಪದೆದು ಪಾಡಿದಳಾ ಪ್ರಭುವಂಶಮೇರುವಂ ೯೩

ವ॥ ಅದಲ್ಲದೆಯುಂ

ಚಂ॥ ಮೃದುತಳತಾಳಕೀಪ್ರಹತಿ ಕಂಕಣಝುಂಕೃತಿಯುಕ್ಕುತಪ್ಪದೀ
ವದನವಿಳಾಸಮಂ ಶಬರಿ ತೋರ್ಪೆಡೆಯೊಳ್ ಮುಱಿದೇಱಿ ನೋೞ್ಪುದುಂ
ಪುದಿದ ಕಟಾಕ್ಷಕಾಂತಿಗಳಿನೇನಮರ್ದಿರ್ದನೊ ಚಂದ್ರಕಾಂತಿಗೋ
ಡದೆ ಮಲೆದಿರ್ದ ಕಟ್ಟಿಲೆಯ ಮೊತ್ತಮಿದೆಂಬಿನಮೊರ್ವ ಲುಬ್ಧಕಂ ೯೪

ವ॥ ಮತ್ತಮೊಂದೆಡೆಯೊಳ್ ಅನೇಕಮಂಡನಮಂಡಿತೆಯರ್ ನೆರೆದಿರ್ದಲ್ಲಿ

ಚಂ॥ ವನಚರರೆಚ್ಚು ಕೊಂದಿಭದ ಮುತ್ತಿನ ಹಾರಮನಾಳ್ದ ತತ್ತ್ರಿಯಾಂ
ಗನೆಯರ ಯೌವನೋನ್ಮದವನೊರ್ವಳ ಯವ್ವನಗರ್ವಮಂದು ತ
ನ್ನನುಭವದಿಂದ ಹೀನಬಳನಾದ ವನೇಚರನಾಯ್ದು ತಂದು ಕೊ
ಟ್ಟನುಪಮ ಮೌಕ್ತಿಕಾಭರಣಕಾಂತಿಯದೇಂ ನಗುವಂತುಟಾದುದೋ ೯೫

ವ॥ ಅದಲ್ಲದೆಯುಂ

ಕಂ॥ ಪಗೆಯನುೞಿದಪ್ಪಿದುದು ಕಾ
ಳಿಗನಾಗನನೊಂದು ಸೋಗೆನವಿಲೆನೆ ಕಣ್ಬೇ
ಲಿಗಳ ಪಸದನದೆ ಕೋಮಳೆ
ಸೊಗಯಿಸಿದಳ್ ಶಬರಿ ಕಬರಿ ಬೆಂಬಿಡದೆಸೆಯಲ್ ೯೬

ಚಂ॥ ನಿಯಮದಿನಾಗಳುಂ ವನದೊಳಿರ್ಪವಳೀಕ್ಷಿಸಿ ಕಲ್ತಳಕ್ಕುಮೀ
ಕ್ರಿಯೆಗಳನೆಂಬಿನಂ ಶಬರಿ ತಾಳ್ದಿದ ಪುಲ್ಲೆಯ ಕೊಲ್ಲಿನೋಟಮಂ
ಚೆಯ ನಿಮಿರ್ದಿಂಚರಂ ಗಿಳಿಯ ಚುಂಬನವಾಸೆಯ ಸೋಂಕು ವಾನರ
ಕ್ರಿಯೆಯಮರ್ದಪ್ಪು ನೋಟದೊಳೊಱಲ್ದಿತು ಕೂವದೊಳೊರ್ವ ಭಿಲ್ಲನಂ ೯೭

ವ॥ ಬೇಱೊಂದು ಮಧುಪಾನಗೋಷ್ಠಿಯೊಳನೇಕ ಶಬರೀಜನಂಗಳಿರ್ದಲ್ಲಿ

ಕಂ॥ ಓರಂತೆ ತಾಳ ತೆಂಗಿನ
ಸೀರೆಯ ಕಳ್ಗಳ್ ಕಳರ್ಚೆ ನಿತ್ಯಗ್ರಹಮಂ
ಪಾರಯ್ಸೆ ಕುಣಿದರರರೆಬರ್
ಭೋರೆನೆ ಕೆಯ್ಪುಱಿಯ ರಂಜೆವಱಿಯೆನೆ ವನದೊಳ್ ೯೮

ವ॥ ಅದಲ್ಲದೆಯುಂ

ಉ॥ ಕಾಸಿನ ಕಂಜಿ ಜಾಳವಲೆ ಗಾಳದ ಕಟ್ಟಿಗೆ ಸೂರ್ಕುಬೆಂಡು ಬಿಲ್
ಹಾಸವ ಕುನ್ನಿ ದೀವದ ಮೃಗಂ ಬಲೆ ಪೆರ್ವಡಿ ಗೋರಿಗಾಣವೆಂ
ಬೀ ಸಮಕಟ್ಟು ಪಾಪದೆಱೆವಟ್ಟು ಜಳಸ್ಥಳಪಾಱಿದಿಂ ಕ್ರಿಯೋ
ಲ್ಲಾಸಮನುಂಟುಮಾಡಿ ಪೊಱಮಟ್ಟುದು ಬೇಂಟೆಗೆ ಲುಬ್ಧಕವ್ರಜಂ ೯೯

ವ॥ ಮತ್ತಮೊಂದು ಪುಳಿಂದಮಂದಿರದ ಮುಂದೆ ಚಮೂರಚರ್ಮ ಚಮರವಾಳ ಗಜದಂತಾಳಿಗಳನೊಟ್ಟಿದ ದುಷ್ಕೃತಕದ ಬೆಟ್ಟಮೆನಿಪಟ್ಟದಿಂದಂ

ಉ॥ ತೊಟ್ಟನೆ ಬೀೞ್ ಮೇಲೆ ಪುಲಿದೋಲ್ ನಿಜದೀವದ ಪುಲ್ಲೆ ಬೆರ್ಚಿ ಧಿಂ
ಕಿಟ್ಟು ಚಮೂರವೆಂದು ಬಿಱುತೋಡೆ ಬಹಿರ್ಮೃಗಿಯಂದದಂ ತಗು
ಳ್ದಟ್ಟುವ ವಿಶ್ವಕದ್ರುವನಭೀಕ್ಷಿಸಿ ಸಿಂಹಕಿಶೋರಮೆಂದು ಬೆಂ
ಗೊಟ್ಟುವಿಭಂಗಳೇನದು ನಿಮಿರ್ಚಿತೊ ಬೆರ್ಚಿನ ಬಳ್ಳವಳ್ಳಿಯಂ ೧೦೦

ವ॥ ಅಂತವಂ ನೋಡುತ್ತುವೆಯ್ದಿ ಬರ್ಪುದುಂ ತತ್ಸಮಯದೊಳ್ ಸೇನಾಪತಿಪ್ರೇಷಿತ ಪ್ರೇಷ್ಯಜನದೆ ಬೞಿಸಂದು

ಮ.ಸ್ರ॥ ಪಣೆಕಟ್ಟೊಳ್ಸೀಲಿಯಿಂದುಟ್ಟುದು ಪೊಸದಳಿರಿಂ ಹಾರಮುಗ್ರೇಭಮುಕ್ತಾ
ಗಣದಿಂ ಕರ್ಣಾವತಂಸಂ ಫಣಿಫಣಮಣಿಯಿಂ ಸ್ಥಾಸಕಂ ದಂತಿದಾನೋ
ಕ್ಷಣಕಂ ಮಯ್ವೆತ್ತಿರಲ್ ಬಂದೆಱಗಿದನಧಿಕಪ್ರೀತಿಭೀತಾಂತರಂಗಂ
ಗುಣತುಂಗಶ್ರೀಪದಕ್ಕಾ ಗಹನದ ಶಬರಾಧೀಶ್ವರಂ ಶಂಬನೆಂಬಂ ೧೦೧

ವ॥ ಎಱಗಿ

ಮ॥ ಕರಿದಂತಂ ಚಮರೀರುಹಂ ಪುಲಿದೊವಲ್ ಹಂಸಚ್ಛದಂ ಪೀಲಿ ಕ
ಸ್ತುರಿ ಕಾಲಾಗುರು ಚಂದನಂ ಹಿಮಕರಂ ಜಾತೀಫಳಂ ಪೂತಿ ಸೂ
ಕರಮುಕ್ತಾಮಣಿಯಬ್ಜಪತ್ರಮಣಿ ಚೂಡಾರತ್ನಮೆಂಬೀ ವನಾಂ
ತರಸಂಜಾತಮನಾತನೋಲಗಿಸಿದಂ ಸದ್ವಸ್ತುಸಂಘಾತಮಂ ೧೦೨

ವ॥ ಅಂತೋಲಗಿಸಿ ನಿಟಿಲತಟಘಟಿತಕರಯುಗಳನಾಗಿ

ಕಂ॥ ಕಾಡಮೃಗದೊಡನೆ ಮೃಗದವೊ
ಲಾಡುವ ಜಡಮತಿಯೊಳೆಸ್ನೊಳಾವುದಮೂಣಂ
ನೋಡದಿನಿಸೊಸೆಮ ದೇವರ್
ನೋಡುಗೆ ಭಯಭಕ್ತಿಗಿರದೆ ನಡೆವಾಳ್ವೆಸನಂ ೧೦೩

ವ॥ ಎಂದು ಬಿನ್ನಪಂಗೆಯ್ಯಲ್ ಕೇವಳಭೃತ್ಯಭಾವಾವಳಂಬನಂ ಶಂಬನಂ ಸಮುಚಿತಪ್ರಸಾದದಿಂ ಮನ್ನಿಸಿ ನಡೆವ ಯುವರಾಜಂಗೆ ಮುಂದೊಂದೆಡೆಯೊಳ್

ಮ.ಸ್ರ॥ ಅದಟಂ ಲೋಕೈಕಮಿತ್ರಂ ಬರೆ ಪುಗಲೆಡೆಯಂ ಕಾಣದುಳ್ಳಳ್ಕಿ ಬಂದ
ಪ್ಪುದು ಕಾಣ್ಬುದ್ಯೋಗದಿಂದೀ ಗಹನದ ಬಹಳಧ್ವಾಂತಮಂಬಂತೆ ಶಾತ್ವ
ರ್ಯದಿನಾದಾಶ್ಚರ್ಯಗಂಧಕ್ಕೆಳಸೆಯಳಿಕುಳಂ ಕೂಡೆ ಮಂದೈಸಿ ತನ್ನೊಳ್
ಪುದಿದೆತ್ತಂ ಬರ್ಪಿನಂ ಬಂದುದು ವನದಿನದೊಂದದ್ಭುತಂ ಮಾತರಿಶ್ವಂ ೧೦೪

ವ॥ ಆಗಳಾ ಸಮೀರಸೌರಭಂ ತನಗನಾಘ್ರಾತಪೂರ್ವಮುಮತಿಮನೋಹರಮು ಮಪ್ಪುದಱಿಂ ತದ್ಗತಚಿತ್ತನುಂ ನಿಮೀಲಿತಲೋಚನನುಮಾಗಿ ಕಿಱಿದುವೇಗಮಾ ಗಾಳಿವೆಱಗಿನೊಳ್ ರಥಮಂ ನಿಲಿಸಿ ವಿಸ್ಮಯಂಬಡುತ್ತೆ ನಿಂದಿರ್ದ ಯುವರಾಜನಾದೇಶದಿಂ ವಾಸ್ತವ್ಯನಪ್ಪ ಪುಳಿಂದಂ ಮಿಳಿಂದನಂತೆ ವನಜಾತಕುಸುಮಗಂಧಮನಾರಯ್ದು ಎಡೆಮಾಡಿ ಬಂದು ಬಿನ್ನವಿಸಿ ಕುತೂಹಳಂ ಬೆರಸು ತತ್ಪ್ರದೇಶಕ್ಕೊಡಗೊಂಡೊಯ್ದು ತೋರ್ಪುದುಂ

ಕ॥ ಸ್ವೀಕೃತ ಶುಭಲಕ್ಷಣನಂ
ಗೀಕೃತ ರಮಣೀಯ ರೂಪ ಯವ್ವನ ಮತ್ತಂ
ಸ್ವೀಕೃತ ನಮೇರು ಚಾರುಲ
ತಾಕುಸುಮಂ ಖಚರನೊರ್ವನಪಗತಗರ್ವಂ ೧೦೫

ಚಂ॥ ಪೊಸಸಿರಿಖಂಡದಿಂದಮೆಸೆವಣ್ಪಿನ ಕಂಪಿನಲಂಪೊಳಕ್ಕೆಯಿಂ
ಮುಸುಱಿದುವೀತನಂ ಫಣಿಗಳೆಂಬಿನಮೊಂದಿದ ನಾಗಪಾಶದಿಂ
ಮಿಸುಕದೆ ಕಟ್ಟುಪಟ್ಟು ಮಣಿಭೂಷಣಕಾಂತಿ ಕುಜಾತಕುಂಜ ತಾ
ಮಸಮನಗಲ್ಚೆ ದೀನಮುಖನಿರ್ದನದೊಂದು ಮಹಾಕ್ಷವೃಕ್ಷದೊಳ್ ೧೦೬

ವ॥ ಅಂತಿರ್ದ ವಿಯಚ್ಚರನನಚ್ಚರಿವಟ್ಟು ನೋಡುವಲ್ಲಿ

ಚಂ॥ ಇದು ವಿಪರೀತಮಿಾ ದೊರೆತನಾಳ್ದುದು ಬಂಧುರಗಂಧಮಂ ತಮಾ
ಳದ ತಳಿರ್ಗೊಂಚಲೆಂಬಮತಿಮೋಹಮನೀಕ್ಷಿಪ ಪದ್ಮಸೂನುಗಿ
ತ್ತುದು ತನಿಗರ್ಪುವೋಲ್ ಮುಸುಱಿ ನಿಂದೆಳದುಂಬಿಯ ಬಂಬಲಿಂ ಕಱಂ
ಗಿದ ನವಪಾರಿಜಾತದಲರ್ದೊಂಗಲ ಕರ್ಣಿಕ ತತ್ಕಪೋಲದೊಳ್ ೧೦೭

ವ॥ ಆಗಳ್

ಮಾಲಿನೀ॥ ಬಳಿಯಸುಳಿಯದುನ್ಮತ್ತಾಳಿ ತಣ್ಗಾಳಿಯೊಳ್ ಸೈ
ತಟಿಸಿ ಬರೆ ತೆರಳ್ದೆಯ್ದುಯ್ದುಸೌಗಂಧ್ಯಮೀಚೆ

ಲ್ವಬೆಯದೆಸೆವ ಕರ್ಣೋತ್ತಂಸದಿಂ ಬಂದುದೆಂದಂ
ದುಬೆದನಿರದೆ ಚಿತ್ತಭ್ರಾಂತಿಯಂ ರಾಜಪುತ್ರಂ ೧೦೮

ವ॥ ತದನಂತರಂ ದೃಢಪ್ರಬದ್ಧನಾಗಪಾಶಮನಿವಂಗಿದು ವಿರೋಧಿಕೃತ ಮೆಂದಿಂಗಿತದಿನಱಿದು ಚಾತುರ್ಯಚತುರಾನನಂ ತನ್ನ ಮನವಾತನ ಶರೀರಸಹಜ ಸೌಕುಮಾರ್ಯಮಂ ತತ್ಪುರುಷೋಪಲಕ್ಷಿತಾಕಾರಮುಮನಱಿದು ಆಗ್ರಹಂಗೆಯ್ಯೆ

ಚಂ॥ ತನಗೆ ಭವಾಂತರಪ್ರಿಯತೆಯಿಂದೆ ಬಳಾಹಕನೆಂಬ ಖೇಚರಂ
ಮನಮೊಸೆದೀಯೆ ಮುಂ ಪಡೆದು ಬಂದ ವಿಮೋಚನಿಯೆಂಬ ವಿದ್ಯೆಯಂ
ನೆನೆದು ಪಿನದ್ಧನಂ ಬಿಡಿಸಿದಂ ಖಗವಂಶನನಪ್ಪುದಲ್ತೆ ಭೂ
ವಿನುತ ಪರೋಪಕಾರಗುಣರೆಂತುಮುಪೇಕ್ಷಿಪರೇ ವಿಷಣ್ಣರಂ ೧೦೯

ವ॥ ಆಗಳ್ ಮುಕ್ತನಾಗಪಾಶನುಮುದ್ಗತಾಕ್ಷವೃಕ್ಷನುಮಾಗಿ

ಕಂ॥ ಸ್ಫುರಿತಮುಖಾಲೋಕಂ ಸ್ನೇ
ಹರಸಾರ್ದ್ರತೆ ಪಾತ್ರವೃತ್ತಿಯೆಂಬಿವು ತನಗೊ
ಪ್ಪಿರೆ ದೀಪವರ್ತಿಯಂತಿರೆ
ಪರಹಿತನಿಧಿಗೆಱಗಿ ನುಡಿದನಾ ಖಚರೇಂದ್ರಂ ೧೧೦

ಉ॥ ಆರೊಳರೀ ಮಹಾಟವಿಯೊಳಿಲ್ಲಿಗೆ ಮತ್ಕೃತಪುಣ್ಯದೇವತಾ
ಕಾರದೆ ಬಂದು ಬಂಧಮನಗಲ್ಚಿದೆ ನಿನ್ನ ಹಸಾದದಿಂದಮಾ
ವೈರಿಯನಿಂದೆ ಪೋಗಿ ಮಡಿಪಲ್ ಪಡೆದೆಂ ಪಡೆಮಾತದೇನೊ ನಿ
ಷ್ಕಾರಣಬಂಧು ನೀನೆನಗೆ ಗೆಯ್ದುಪಕಾರಮನೆಂತು ನೀಗುವೆಂ ೧೧೧

ವ॥ ಎಂದು ನುಡಿದತಿವಿನತನನಾತನಂ ನೋಡಿ ಹರುಷದಿಂ

ಕಂ॥ ನೀನಾರ್ಗೆ ನಿನ್ನ ನಾಮವ
ದೇನಿಲ್ಲಿಗದೇಕೆ ಬಂದೆ ನಿನಗಿಂತೆಂತಾ
ಯ್ತೆ ನಾಗಪಾಶಬಂಧವಿ
ಧಾನದ ಬಲುಸಿಲ್ಕು ವೈರಿಯೆಂಬವನಾವಂ ೧೧೨

ವ॥ ಎಂದು ಬೆಸಗೊಳ್ವುದುಂ

ಮ॥ ಅಮೃತಸ್ಯಂದಮನಬ್ಜಕಂದಮನುದಂಚತ್ಕುಂಚಮಂ ಸಂದ ಕುಂ
ದಮನಿಂದುದ್ಯುತಿವೃಂದಮಂ ನಿಜಯಶಃಶ್ರೀಕಾಂತಿಸಂತಾನಮಾ

ಕ್ರಮಿಸಲ್ ಸದ್ಗುಣಧಾಮನಾದ ವಿನಯಾಲಂಕಾರನಂ ಸತ್ಯಸಂ
ಯಮನಂ ಸಾರ ಪರೋಪಕಾರಧನನಂ ಸೌಂದರ್ಯಕಂದರ್ಪನಂ ೧೧೩

ಉ॥ ಭೂಪ ಶಿಖಂಡಖೇಚರನನಾಹವದೋಹಳನಂ ಜಿನೇಶ್ವರ
ಶ್ರೀಪದಹೇಮತಾಮರಸಮಂಡಿತಮಾನಸನಂ ವಿವೇಕವಿ
ದ್ಯಾಪತಿಯಂ ಖಗಾಧಿಪತಿ ಕೇಳಿಸಲುದ್ಯತನಾದನಿಂತು ಸಂ
ಕ್ಷೇಪದಿನಾತ್ಮವೃತ್ತಕಮನಂದೊಲವಿಂ ಪ್ರಭುವಂಶಮೇರುವಂ ೧೧೪

ಗದ್ಯ

ಇದು ಸಕಳ ಭುವನಸಂಸ್ತುತ ಜಿನಾಗಮಕುಮುದ್ವತೀ ಚಾರುಚಂದ್ರಾಯಮಾಣಮಾನಿತ ಶ್ರೀಮದುಭಯಕವಿ ಕಮಳಗರ್ಭಮುನಿಚಂದ್ರ ಪಂಡಿತದೇವ ಸುವ್ಯಕ್ತ ಸೂಕ್ತಿ ಚಂದ್ರಿಕಾಪಾನ ಪರಿಪುಷ್ಟಮಾನಸ ಮರಾಳ ಗುಣವರ್ಮ ನಿರ್ಮಿತಮಪ್ಪ ಪುಷ್ಪದಂತ ಪುರಾಣದೊಳ್ ಯುವರಾಜದಿಗ್ವಿಜಯವರ್ಣನಂ ಪಂಚಮಾಶ್ವಾಸಂ

ಷಷ್ಠಾಶ್ವಾಸಂ

ಕಂ॥ ಶ್ರೀವಿದ್ಯಾಧರಪತಿಯ ಕ
ಥಾವಿತತಕ್ಷೀರಮಂ ನಿಜಶ್ರುತಿಮುಖದಿಂ
ಸೇವಿಸಿದಂ ಲುಪ್ತರಿಪು
ಶ್ರೀವನಜಂ ಪ್ರಭುಗುಣಾಬ್ಜಿನೀಕಳಹಂಸಂ ೧

ವ॥ ಅದೆಂತೆಂದೊಡೆ

ಮ॥ ಇದನೇವೇೞ್ವೆನೊ ದೇವ ಭಾವಿಸೆ ಕರಂ ಲಜ್ಜಾವಹಂ ಹೇಮಕೂ
ಟದ ವಿದ್ಯಾಧರರಾಜನಂ ಪೆಸರೊಳಂ ಚಿತ್ರಾಂಗನೆಂಬೆಂ ಮನೋ
ಮುದದಿಂ ಮಂದರಕಂದರಕ್ಕೆ ಪುರದಿಂ ಬಂದಾನುಮೆನ್ನೋಪಳುಂ
ಪದುಳಂ ಕ್ರೀಡಿಸುತಿರ್ದೆವಂದು ವಿಲಸತ್ಕಲ್ಪದ್ರುಮೋದ್ಯಾನದೊಳ್ ೨

ವ॥ ಅಂತು ಯೌವನೋಚಿತಕ್ರೀಡಾವಿನೋದದಿಂದಮಿರ್ದು ಪರಿಶ್ರಾಂತನಂ ಬಾಳುಂಬೇಳು ಮಾಡಿ

ಮ.ಸ್ರ॥ ತೆಱಪಂ ಪಾರುತ್ತುಮಿರ್ದೆನ್ನಯ ರಿಪುವನುಪಾಯಜ್ಞನಂ ಸ್ತ್ರೈಣದಿಂ ಮು
ನ್ನುಱಿ ಬನ್ನಂಬೆತ್ತನಂ ಪುಷ್ಕಲಪುರದ ಹಯಗ್ರೀವನಂ ಕರ್ಮದಿಂದಂ
ಮಱೆದಾಂ ಮೆಯ್ವಿಟ್ಟು ನಿದ್ರಾಸುಖದಿನಟಲೆ ಬಂದೆನ್ನನೀ ವಿದ್ಯೆಯಿಂದ
ಳ್ಕುಱಿ ಕಟ್ಟಿಟ್ಟಲ್ಲಿಗೀಡಾಡಿಸಿ ಖಳನವನೆನ್ನೋಪಳಂ ಕೊಂಡುಪೋದಂ ೩

ಕಂ॥ ಕುತ್ತದ ಬಿತ್ತು ವಿಮೋಹದ
ಪುತ್ತು ವಿವೇಕದ ವಿನಾಶವೆನಿಸುವ ನಿದ್ರಾ
ವೃತ್ತಿಯಿನೀ ಪರಿಭವಮಾ
ದತ್ತಲ್ಲದೊಡವನ ದೊರೆಯರೆನಗಣ್ಮುವರೇ ೪

ವ॥ ಆದೊಡಂ

ಕಂ॥ ಅವನೆನಗಪಕಾರಂಗೆ
ಯ್ದವನಲ್ಲುಪಕಾರಿಯಾದನೆಂತೆನೆ ಗುಣಗೌ
ರವನಿಧಿಯ ನಿನ್ನ ದರ್ಶನ
ಮವನಯೆ ಕಾರಣದಿನೆನಗೆ ದೊರೆಕೊಂಡುದಱಿಂ ೫

ವ॥ ಅಂತು ನಿಜಪ್ರಪಂಚಮಮಂ ಪೇೞ್ ಶೌರ್ಯಸನ್ನಾಹನಾದಂ ಹಯಗ್ರೀವನ ದುರಾತ್ಮವೃತ್ತಿಗೆ ಕುಪಿತಹೃದಯನಾಗಿ ತನಗೆ ಚಕ್ರವಾಲಪುರದ ವಿದ್ಯಾಧರಾಧಿಪತಿಯಪ್ಪ ಬಳಾಹಕಂ ಪರಮಪ್ರೀತನಪ್ಪುದಱಿಂ ಚಿತ್ರಾಂಗಂಗಿಂತೆಂದಂ

ಕಂ॥ ನಿನಗೊರ್ವಖಚರಪತಿಯಂ
ಮೊನೆಗೆ ನೆರಂಬೇೞ್ವಿನೆಯ್ದಿ ತತ್ಪಳನಂ ನೀಂ
ಮುನಿಸಾಱಿ ಕೊಂದು ವಿಜಯಾಂ
ಗನೆಯಂ ನಿಜವಧುಗೆ ಸವತಿಯಾಗಿಸು ರಣದೊಳ್ ೬

ಉ॥ ದೇವ ನಿಜಪ್ರಸಾದಮೆ ನೆರಂ ನೆರಮೆಂಬುದನೊಲ್ಲೆನಿಲ್ಲಿಗಾ
ನಾವುದುಮಂ ಮದುದ್ಧತಬಳಂ ಬೆರಸೀಗಳೆ ಪೋಗಿ ಬೇಗಮಾರ್
ಕಾವೊಡೆ ಮಿಕ್ಕ ಪುಷ್ಕರಪುರಾಧಿಪನಂ ಮಗುೞ್ದಾನುವೆನ್ನ ಮಾ
ದೇವಿಯುಮೆಯ್ದಿ ನೀಂ ಕಳಿಪಿದಿಂ ಬೞಿಕೆನ್ನ ಪೊೞಲ್ಗೆ ಪೋದಪೆಂ ೭

ವ॥ ಎಂದು ಮತ್ತಮನೇಕವಿದ್ಯಾಬಲದೊಳಂ ಭುಜಬಲದೊಳಂ ಸುಭಟಬಲ ದೊಳಂ ಗೆಲಲಾರ್ಪ ನಂಬುಗೆ ನುಡಿದು ಬೀೞ್ಕೊಂಡು ಚಿತ್ರಾಂಗನತ್ತ ಪೋಪುದುಮಿತ್ತಲಾ ಕಾಂತಾರಮಂ ದಾಂಟಿ ಬರ್ಪಲ್ಲಿ

ಉ॥ ಸಾಮಜಸಂಕುಲಂ ಪೆಡೆ ಚಮೂಪತಿ ನೆತ್ತಿಯ ಮಾಣಿಕಂ ಹಯ
ಸ್ತೋಮ ಮುದಗ್ರಜಿಹ್ವೆ ಸುಭಟಾವಳಿ ನಂಜಿನ ದಾಡೆಯೆಂಬಿನಂ
ಭೀಮಪುರಕ್ಕೆ ಕೋಟ್ಮಸಗಿ ನೀೞ್ದೞಿಗೊಂಡುದು ಪದ್ಮಪುತ್ರಸೇ
ನಾಮುಖಮೆಂಬ ಭೀಮಭುಜಗಂ ಮಲೆದಿರ್ದ ಮತಂಗರಾಜನಂ ೮

ವ॥ ಅಂತು ಮಂಗಳನಾಯಕವ್ರಜಮೇ ನಿಜಭುಜಕ್ಕೆ ಮತಂಗನನಾ ಪತಂಗಮಂ ಮಾಡಿ ತತ್ಪುರಮಂ ಕೈಕೊಂಡಿರ್ಪುದುಮಲ್ಲಿಗೆಯ್ದುವಂದು ಸೌಂದರ್ಯಕಂದರ್ಪಂಗಾಸನ್ನಮಾಗಿ

ಚಂ॥ ತರುಣತಮಾಳಕಾಳಿಮವರಚ್ಚವಿವೆತ್ತುಪಕಂಠದೊತ್ತನಾ
ವರಿಸಿ ಶಿಖಂಡಿಮಂಡಲದೊಳೊಂದಿ ಲಸದ್ವನಪುಷ್ಪದಿಂದಲಂ
ಕರಿಸಿ ಸಲೀಲಭಂಗಮನುಪಾರ್ಜಿಸಿ ಭಂಗುರವೇಣಿಯೆಂಬ ಬಂ
ಧುರನದಿ ರಂಜಿಸಿತ್ತು ಮಹಿಕಾಂತೆಯ ಭಂಗುರವೇಣಿಯೆಂಬಿನಂ ೯

ಮ॥ ಕಳಹಂಸೀರವದಿಂದಮಾದರಿಸಿ ವೀಚೀಬಾಹುವಿಂ ಕಾಲ್ಗಳಂ
ತೊಳೆದಂಭಃಕಣಸೇಸೆಯಿಂ ಸರಸಿಜಶ್ರೀಗಂಧದಿಂ ಫೇನನಿ
ರ್ಮಳವಸ್ತ್ರಂಗಳಿನರ್ಘ್ಯಮಂಗಳಮನಿಂಬಿಂ ಮಾಡಲುತ್ಕಂಠೆಯಾ
ದಳಿಳಾನಾಥಸುತಂಗೆ ಸಿಂಧುನದಿಯಂತಭ್ಯಾಗತಪ್ರೀತಿಯೊಳ್ ೧೦

ಕಂ॥ ಎನಸುಂ ನೀರ್ಪೀರಲ್ ಬಂ
ದ ನವಾಭ್ರದಿನೆಸೆವ ವನಧಿವೇಳೆಯ ತೆಱನಂ
ನೆನೆಯಿಸಿದತ್ತಾ ನದಿ ಮ
ಜ್ಜನಕೇಳಿಯೊಳಿರ್ದ ಕಟಕದಾನಗಳಿಂದಂ ೧೧

ಕರಿಗಳವಗಾಹಮಿರೆ ಸಿಂ
ಧುರದ ರಜಂಬೊರೆದು ರಂಜಿಸಿತ್ತು ಕರಂ ಸೌಂ
ದರಿಯ ತನು ಸತ್ಯಾಕರನೆ
ಟ್ಟಿರುತಿರೆ ತಾಂ ಕೂಡೆ ರಾಗವೇಱಿದ ತೆಱದಿಂ ೧೨

ಅೞಿಪಿಂದ ವರುಣವಸ್ತ್ರದ
ಪೞಯಿಗೆಗಳ ನೆೞಲ ನೆರೆಗಳೆಂದೆಳಮೀಂಗಳ್
ಘಟಿಲನೆ ಪಾಯ್ದಡಿಗಡಿಗಳ
ವೞಿಯೆ ಬೞಲ್ದೞಲುತಿರ್ದುವೋರೊಂದೆಡೆಯೊಳ್ ೧೩

ಚಂ॥ ಅಮರೆ ಮಡಲ್ತು ಪರ್ವಿದ ತಮಾಳವನಂ ಜಳಬುದ್ಬುದ ಪ್ರಘೋ
ಷಮನೊಳಕೊಂಡು ಕಟ್ಟಲಿಸೆ ಕಂಡು ಘನಾಗಮಮಾದುದೆಂದು ಸಂ
ಭ್ರಮಿಸಿ ಪಿಕಾಳಿ ಮೂಗುವಡೆ ಚಾದಗೆ ರಾಗಿಸೆ ಕೇಕಿತಾಂಡವಂ
ನಿಮಿರೆ ಮರಾಳಮಳ್ಕೆ ತಟಿನೀತಟ ರಂಜಿಸಿದತ್ತು ಸುತ್ತಲುಂ ೧೪

ವ॥ ಮತ್ತಂ

ಚಂ॥ ಒದವಿಸಲಾರ್ತುದಲ್ಲಿ ಜಳಕೇಳಿಯೊಳಿರ್ದ ನಿತಂಬಿನೀಕದಂ
ಬದ ಮುಖವಬ್ಜಮಂ ನಯನಮುತ್ಪಲಮಂ ಮೊಲೆ ಚಕ್ರವಾಕಮಂ
ಸದಮಲಹಾರಯಷ್ಟಿ ಜಳಶೀಕರಮಂ ನಳಿತೋಳ್ ತರಂಗಮಂ
ಮೃದುನಿನದಂ ವಿಹಂಗರವಮಂ ದಶನಾವಳಿ ಫೇನಪಿಂಡಮಂ ೧೫

ವ॥ ಆಗಳಾ ತರಂಗಿಣೀತಟದೊಳವನೀಶನಂದನಂಗೆ ವೃಷಸೇನನೆಂಬ ವೃದ್ಧಪುರೋಹಿತಂ

ಮ॥	ನಿರುತಂ ತ್ವತ್ಪಿತೃ ಮುನ್ನಮಿಲ್ಲಿವರಮಾಜ್ಞಾನಮ್ರರಂ ಮಾಡಿ ಭೂ
ಪರನೀ ಸಿಂಧುವ ತೀರದೊಳ್ ನಿಱಿಸಿ ಕೀರ್ತಿಸ್ತಂಭಮಂ ಲೀಲೆಯಿಂ
ಚರಿತಾರ್ಥಂ ಮಗುಳ್ದಿಂ ಪುರಕ್ಕೆ ವಿಜಯಶ್ರೀಕಾಂತನೀಮುಂ ಮನೋ
ಹರಮಪ್ಪಿಲ್ಲಿಯೆ ಬೀಡುವಿಟ್ಟು ನಿಱಿಸಲ್ವೇಳ್ಕುಂ ಯಶಸ್ತಂಭಮಂ	೧೭

ಕಂ॥	ಅಟವೀಸಮೀಪಮತ್ತು
ತ್ಕಟ ತೃಣಜಳ ಬಹಳಮೀ ಪ್ರದೇಶಂ ದಿಕ್ಪ
ರ್ಯಟನಶ್ರಮಮಾಱುವಿನಂ
ಕಟಕಂ ವಿಶ್ರಮಿಸುಗಿಲ್ಲಿ ಕತಿಪಯದಿವಸಂ	೧೭

ವ॥	ಅದಲ್ಲದೆಯುಂ ಬೇಱೊಂದು ಸಕಲಸೌಖ್ಯಹೇತುವಪ್ಪ ಮುಖ್ಯಪ್ರಯೋಜನ ಮುಂಟದಾವುದೆಂದೊಡೆ ಮಹಾಪುಣ್ಯಸಿಂಧುಗಾತ್ಮಗಂಭೀರನಾಭಿಮಂಡಳಮುಂ ಜನ್ಮಸ್ಥಾನಮು ಮಾಗೆ ರಂಜಿಪ ಸುಪಾರ್ಶ್ವಪರಮೇಶ್ವರರಿಂದಲಂಕರಿಸಿ ನೆಟ್ಟನಿಲ್ಲಿಗೇಕಗವ್ಯೂತಿಪ್ರಮಾಣಾಂತರದೊಳ್

ಮ॥	ಸುರವಿದ್ಯಾಧರಮಾನವೋರಗಜನಾರಾಧ್ಯಂ ವಿನಿರ್ಧೂತದು
ರ್ಧರಪಾಪಪ್ರಸರಂ ಜಗತ್ರಯಮಹಾತಾಪತ್ರಯೋದ್ರೇಕಸಂ
ಹರಮಾ ತೋಱುವ ಚಿತ್ರಕೂಟಗಿರಿಯೊಳ್ ಚೈರಂತನಂ ಸಿದ್ಧಶೇ
ಖರಮೆಂಬುನ್ನತತೀರ್ಥಮೊಂದೆಸೆಯುತಿರ್ಕುಂ ತ್ರೈಜಗತ್ಪಾವನಂ	೧೮

ವ॥	ಅಲ್ಲಿ

ಕಂ॥	ಬರಿಸಕ್ಕಂ ಭವ್ಯೋತ್ಸವ
ಕರಮೆನಿಸಲ್ ಬರ್ಪ ಸರ್ವಫಾಲ್ಗುಣನಂದೀ
ಶ್ವರಪೂಜೆಗೆ ಖೇಚರಭೂ
ಚರರ ಮಹಾಯಾತ್ರೆ ನೆರೆವುದಷ್ಟಾಹ್ನಿಕದೋಳ್	೧೯

ಆ ದಿವಸಕ್ಕಲ್ಲಿಗೆ ಪು
ಣ್ಯೋದಯ ನೀಂ ಪೋಗಿ ಜಿನಮಹಾಮಹಿಮೆಯನಾ
ಹ್ಲಾದದೆ ಮಾಡಿಸಿ ಬರೆ ನಿ
ನ್ನೀ ದಿಗ್ವಿಜಯಾಗಮಕ್ಕೆ ಸಫಲತೆ ಸಾರ್ಗುಂ	೨೦

ವ॥	ಎಂದು ಜಿನ್ನಪಂಗೆಯ್ದ ಪುರೋಹಿತವಚನಮನೊಡಂಬಟ್ಟ ಗುಣತುಂಗನಾ ದೇಶದಿಂ ಭಂಗುರವೇಣೀತರಂಗಿಣಿಯ ಬಡಗಣ ತಡಿಯೊಳ್ ಪಡೆವಳರ್ ಬೀಡುವಿಡಿಸೆ

ಮ॥ ಕರಿಣೀಕುಂಜರವಾಜಿವೇಸರ ರಥಾಂದೋಳಾದಿ ಯಾನಂಗಳು
ಬ್ಬರಮುಂ ರಾಸಭಸೈರಿಭೋಕ್ಷಕರಭವ್ರಾತಂಗಳೊತ್ತೊತ್ತೆಯುಂ
ನರನಾರೀಜನದೊಂದುಗೊಂದಣಮುಮಂದೆತ್ತಂ ಚತುರ್ಯೋಜನಾಂ
ತರದೊಳ್ ತೀವಿರ ಬಿಟ್ಟುದಲ್ಲಿ ಕಟಕಂ ವ್ಯಾಲೋಲಕೋಲಾಹಲಂ ೨೧

ಶಾ॥ ಆಗಳ್ ಸೆಜ್ಜೆಗೆ ಮಜ್ಜನಕ್ಕೆ ಪಚನಕ್ಕೊಡ್ಡೋಲಗಕ್ಕಾಯುಧಾ
ಭೋಗಕ್ಕಶ್ವಗಣಕ್ಕಿಭಾವಳಿಗೆ ಭಂಡಾರಕ್ಕೆ ಮಂತ್ರಕ್ಕೆ ಕೋ
ಟ್ಟಾಗಾರಕ್ಕನುಮಂಡನಕ್ರಿಯೆಗೆ ಕೀಲಾರಕ್ಕೆ ದೇವಾರ್ಚನೋ
ದ್ಯೋಗಕ್ಕೆಂದಳವಟ್ಟ ಮಂಡವಿಗೆ ಗೂಡಾರಂ ಕುಟೀಮಂಡಳಂ ೨೨

ಕಂ॥ ವರವೇಲಿ ತಟ್ಟಿ ತಳೆ ಗೋ
ಪುರವಾಳ್ವೇಱ್ಪಡಿ ತವಂಗವಂಕದ ಕಳನೋ
ವರಿ ಸೀಯಬಾರವಂತಃ
ಪುರಮುಯ್ಯಲ್ ಕೃತಕಶಿಖರಿಯುದ್ಯಾನವನಂ ೨೩

ಎಂಬಿವು ಮೊದಲಾಗಿರೆ ಮ
ತ್ತಂ ಬಹುವಿಧಪರಿಕರಂಗಳೊರ್ಮೆಯೆ ನೆರೆದಾ
ಡಂಬರದಿಂ ತುಱುಗಿರೆ ಬಂ
ದಿಂಬಿಂದರಮನೆಯೊಳವನಿಪತಿ ನೆಲಸಿರ್ದಂ ೨೪

ವ॥ ಅನ್ನೆಗಮಿತ್ತಲ್

ಮ॥ ವನದೊಳ್ ನೆಟ್ಟನೆ ಕಟ್ಟುಪಟ್ಟ ಸೆಱೆಯುಂ ಕೋಟ್ಟಿತ್ತ ತನ್ನೇವಮಿಂ
ಧನಮುಂ ಗಾಳಿಯುಮಾಗಿ ಪೆರ್ಚಿಸೆ ನಿಜಕ್ರೋಧಾಗ್ನಿಯಂ ತಂತ್ರಮಂ
ಮನದಿಂ ಮುಂ ಬರವೇಟ್ಟು ಪುಷ್ಕರಪುರಕ್ಕೊಟ್ಟೈಸಿ ಧಾಳಿಟ್ಟು ಕಾ
ಪಿನ ಬಲ್ಲಾಳ್ಗಳನಿಕ್ಕಿ ಪೊಕ್ಕಿಱಿದು ಚಿತ್ರಾಂಗಂ ಹಯಗ್ರೀವನಂ ೨೫

ಚಂ॥ ತೊಲತೊಲಗೊಪ್ಪಿಸೊಪ್ಪಿಸು ಲತಾಂಗಿಯನೊಪ್ಪಿಸದಣ್ಮೆ ನೀಗುವೆಂ
ಲಲನೆಯ ದೂಸಱಿಂ ಪಡೆದ ಮುನ್ನಿನ ಬನ್ನಮನೆಂಬೆಯಪ್ಪೊಡಿ
ನ್ನೆಲೆಯೆಲೆಯಿತ್ತಲಿತ್ತಲಿದಿರಾಗಿದಿರಾಗೆನಗೆಂದು ಮುಟ್ಟಿಮೂ
ದಲಿಸುತವಾಂತನಾಂಪ ತೆಱದಿಂ ಶರಭಂ ಸಮದೇಭವೈರಿಯಂ ೨೬

ವ॥ ಅಂತಾಂತು

ಮ॥ ಬಹುವಿದ್ಯಾಬಲದಿಂದಮಿರ್ವರುಮಗುರ್ವುರ್ವೇಜ್ವಿನಂ ಕಾದುವ
ಲ್ಲಿ ಹಿತಂಗೆಯ್ಯದೆ ಪುಣ್ಯಹಾನಿಯೊಳೆ ವಿದ್ಯಾದೇವತಾಶ್ರೇಣಿ ಪೋ
ಗೆ ಹಯಗ್ರೀವನಧಃಪ್ರಭಾವನೆರ್ದೆಗೆಟ್ಟೋಡಿದಂ ವಿಸ್ಮಯಾ
ವಹಮಲ್ತನ್ಯಕಳತ್ರಕಾತರಮನಂಗಾರುಂ ಹಿತಂಗೆಯ್ವರೇ ೨೭

ವ॥ ಅನಂತರಮವನ ಕುಲಧನಮಂ ಸೂಱೆಗೊಂಡು ನಿಜಪ್ರಿಯೆಯನೊಡಗೊಂಡು ವಿಮಾನಾಧಿರೂಢನಾಗಿ ಪುಷ್ಕರಪುರಪ್ರದೇಶದಿಂ ತಳರ್ದು ಹಿಮಕೂಟಕ್ಕೆ ಪೋಗದೆ ಸಕಲಸಾಮಗ್ರಿವೆರಸು ಯುವರಾಜಸಿಬಿರನಿವೇಶಪ್ರದೇಶಮಂ ಗಗನಗಮನದಿಂದೆಯ್ದೆವರ್ಪುದುಂ

ಕಂ॥ ಅಂಬರತಳದರ್ಪಣದೊಳ್
ಬಿಂಬಿಪ ಗುಣತುಂಗನೃಪನ ಪಡೆಯ ನೆೞಲ್ ತಾ
ನೆಂಬಿನಮೊರ್ಮೆಯೆ ತೋರ್ಪ ತ
ದಂಬರಚರಸೈನ್ಯಮಿತ್ತುದತಿವಿಸ್ಮಯಮಂ ೨೮

ವ॥ ಆಗಳದಂ ಕಂಡೊಡಾವನಾನುಮೊರ್ವ ಗರ್ವಿತ ವಿಯಚ್ಚರೇಂದ್ರಂ ಕಾಳಗಕ್ಕೆ ಮೇಲೆತ್ತಿ ಬಂದನಕ್ಕುಮೆಂದು ಪಱಿಯಿಗೆಯ ಪದಿರ ಪಱೆಯ ಕಹಳೆಯ ಕುಱಿಪನಱಿಯದೆ ಕಟಕದ ಜನಮದಿಲ್ಲಿ ಯುದ್ಧಸನ್ನದ್ಧಮಾಗುತ್ತಿರೆ

ಚಂ॥ ಪೆಸರ ಗಜಂಗಳಂ ಬಿಸುಗೆವೇಱಿಸವೇೞೆನೆ ಯುದ್ಧಮುಖ್ಯರಂ
ಬೆಸಸೆನೆ ಸಿಂಹವಿಷ್ಟರದಿನೇೞೆನೆ ಚಾರುಕಳಾಕಳಾಪಮಂ
ಬಿಸುಡೆನೆ ಹಸ್ತಮಸ್ತ್ರನಿಬಿಡಗ್ರಹಣಕ್ಕನುವಲ್ತು ಮುದ್ರಿಕಾ
ಪ್ರಸರಮನೊಯ್ಯನುರ್ಚಿ ಕಳೆದಂ ಗುಣತುಂಗನದೇನುದಾತ್ತನೋ ೨೯

ವ॥ ಆ ಸಮಯದೊಳ್ ತನ್ನ ಬರವನರಸಂಗೆ ಮುಂದಱಿಪಲಟ್ಟಿ ಗಗನತಳದಿನವನೀತಳಕ್ಕವತರಿಸಿ ಸಮುಚಿತಪರಿಗ್ರಹಂಬೆರಸು ದೌವಾರಿಕನಿವೇದಿತನಾಗಿ

ಕಂ॥ ಚಿತ್ರಾಂಗಂ ಮಣಿಭೂಷಣ
ಚಿತ್ರಾಂಗಂ ಪ್ರಬಳಶಬಳರುಗ್ಮಂಜರಿಗಳ್
ಚಿತ್ರಿಸೆ ಸಭೆಯಂ ಪೊಕ್ಕು ಧ
ರಿತ್ರೀನಾಥಂಗೆ ವಿನತಮಸ್ತಕನಾದಂ ೩೦

ಮ॥ ಇದಿರೆಟ್ಟಿಟ್ಟಿಱಿತೊಳಪ್ಪಿಕೊಂಡುಚಿತ ಬಂಧುಪ್ರೀತಿಯಿಂದೇಱಲಿ
ಕ್ಕಿದ ಸಿಂಹಾಸನದೇಶದೊಳ್ ವಿನಯದಿಂ ಕುಳ್ಳಿರ್ದು ಸಂಭಾಷಿತಂ
ಕದನಕ್ರೀಡೆಯೊಳಾತ್ಮಕಾಂತೆಯನಗುರ್ವಿಂ ತಂದ ವೃತ್ತಾಂತಮಂ
ಮೊದಲಿಂದೆಯ್ದೆ ನೃಪಂಗೆ ಸೂಚಿಸಿ ಮನಃಸಂತೋಷಮಂ ಮಾಡಿದಂ ೩೧

ವ॥ ಮಾಡಿ ತನ್ನ ನಚ್ಚಿನ ಕುಲಧನಂಗಳಪ್ಪುಪಾಯನಂಗಳಂ ತರಿಸಿ ನೃಪನ ಮುಂದೊಟ್ಟೈಸಿ ಮುಕುಳಿತಕರಸರೋಜನಾಗಿ

ಕಂ॥ ಜಿತಮದನ ಸಕಳ ಲೋಕ
ಸ್ತುತ ನಿರ್ಮಲಬೋಧ ನಿರಘ ನೀನೆನಗರ್ಹ
ತ್ಪತಿಯಂತೆ ಮೋಕ್ಷಮಂ ಮಾ
ಡಿತನಕ್ಷಯಪದದೊಳಿರ್ದುವಾಂ ಮಱಿದಪೆನೇ ೩೨

ವ॥ ಅದಱಿಂದಂ

ಉ॥ ಪ್ರತ್ಯುಪಕಾರಮಂ ನಿನಗೆ ಮಾಡುವ ಸೈಪೆನಗಿಲ್ಲ ಭಕ್ತಿಗೌ
ಚಿತ್ಯಮಿದೊಪ್ಪುಗೊಳ್ವುದು ಮದನ್ವಯಸಂಚಿತಸಾರವಸ್ತು ವೀ
ಸ್ತುತ್ಯಕೃಪಾಣಮಿಾಲಸತನುಚ್ಛದಮಿಾ ನುತಚಾಪಮಿಾ ಜಯ
ಪ್ರತ್ಯಯಬಾಣಮಿಾ ತರಳಹಾರಕಮಿಾ ಕಳವೀಣೆ ಭೂಪತೀ ೩೩

ಎಂದು ನೃಪಂಗೆ ಪೇೞ್ದು ಖಚರೋತ್ತಮನಿತ್ತನವದ್ಯಕೋಪಮಂ
ಬೊಂದು ಕೃಪಾಣಮಂ ಸಮರಸಾಧಕಮೆಂಬ ತನುತ್ರಮಂ ಜಯಾ
ನಂದಕಮೆಂಬ ಕಾರ್ಮುಕಮನಾಹವದೋಹಳಮೆಂಬ ಬಾಣಮಂ
ನಂದಿನಿಯೆಂಬ ಹಾರಲತೆಯಂ ಕಳಭಾಷಿಣಿಯೆಂಬ ವೀಣೆಯಂ ೩೪

ವ॥ ಇತ್ತು ಮತ್ತಂ ಪರವಿದ್ಯಾಚ್ಛೇದಿನಿಯುಂ ಮೋಹಿನಿಯುಂ ಬಹುರೂಪಿಣಿಯುಮೆಂಬ ಮೂಱುಂ ವಿದ್ಯೆಗಳುಮಂ ತನ್ನುಮನುಚಿತಪ್ರಯೋಜನಕ್ಕೆ ನೆನೆದು ಬರಿಸುವಂತೊಡಂಬಡಿಸಿ ತನಗೆ ಮಾಡಿದಭ್ಯಾಗತ ಪ್ರತಿಪತ್ತಿಯೊಳಮನೂನದಾನಸನ್ಮಾನದಿಂ ಹೃಷ್ಟನಾಗಿ ಬೀೞ್ಕೊಂಡು ನಿಜಪುರಕ್ಕೆ ಚಿತ್ರಾಂಗದಂ ಪೋಪುದುಂ ಇತ್ತ ಚಿತ್ರಭಾನುಮಿತ್ರನಾತನಿತ್ತ ತರವಾರಿ ಸೇವ್ಯತರವಾರಿಯಂತೆಯುಂ ಕವಚಂ ಸತ್ಕವಿಕದಂಬಕವಚನದಂತೆಯುಮಾ ಚಾಪಲತೆ ಕೂರ್ಪ ಕೋಮಳೆಯ ಚಾಪಲತೆಯಂತೆಯುಮಾ ಬಾಣಮುಳ್ಳಲರ್ದಲರ ಬಾಣದಂತೆಯುಮಾ ವೀಣೆ ಸುರತಪ್ರವೀಣೆಯಂತೆಯುಮನುದಿನಂ ಮನಂಗೊಳಿಸೆ ವಿನೋದಿಸುತ್ತುಮಿರ್ಪನ್ನೆಗಂ

ಚಂ॥ ಶರದದೊಳಾದ ಖೇದಮನಿಳೇಶನ ಸೈನ್ಯಜನಕ್ಕೆ ಮಾಣಿಪಂ
ತಿರೆಹಿಮವಂದು ಬಂದುದೆಳನೆೞ್ದಿಲ ಮೆಯ್ದೆಗೆದುರ್ವಗಲ್ದ ನ
ಲ್ಲರ ನರಸುಕ್ಕು ಕೋೞ್ಮಿಗದ ಕೋಟಲೆ ಕಂಜದ ಬಂಜೆವರ್ದು ಪಾಂ
ಥರ ಪಗೆ ಕೋಕಿಳಾಕುಳಕೆ ನೇಸಱನಿಗ್ರಹಮೈಕಿಲಾಕರಂ ೩೫

ವ॥ ಅ ಸಮಯದೊಳ್

ಮ.ಸ್ರ॥ ಕರಿಯೂಥಂ ಭೂರಿಭೂಭೃದ್ವಿಕಟನಿಕಟಮಂ ಭಿಲ್ಲಪಲ್ಲೀಗಣಂ ಭೂ
ಧರಕುಂಜಾಭ್ಯರ್ಣಮಂ ಶ್ವಾಪದಸಮಿತಿದರೀ ದೇಶಮಂ ಪಕ್ಷಿವೃಂದಂ
ತರುನೀಡಕ್ರೋಡಮಂ ಪನ್ನಗವಿತತಿ ರಸಾರಂಧ್ರಮಂ ಪಾಂಥವರ್ಗಂ
ವರ ಕಾಂತಾಶ್ಲೇಷಮಂ ಕೆಯ್ಕೊಳಲಲೆದುದುದೀಚೀಭವಂ ಶೀತವಾತಂ ೩೬

ಕಂ॥ ಮಸುಮಸುಳನಾಯ್ತು ಚಂದ್ರಿಕೆ
ಬಿಸುಪಱಿದುದು ಬಿಸಿಲಶೇಷಭುವನದ ಘರ್ಮ
ಪಸರಮುಡುಗಿದುದು ಹಿಮಸಮ
ಯಸಮೀರಂ ಪಾಱಿ ಬೀಸಿ ತೂಱಿದ ತೆಱದಿಂ ೩೭

ಚಂ॥ ಇದು ತಳರ್ದೆಚತ್ತಿ ಬರ್ಪ ಹಿಮಕಾಲನೃಪಾಲನ ಸೈನ್ಯಚಕ್ರಘಾ
ತದ ಭರದಿಂ ಹಿಮಾದ್ರಿಪಥದೊಳ್ ನೆಗೆದುರ್ವಿದ ಧೂಳಿಜಾಳ ಮ
ಲ್ಲಿದು ತಗುಳ್ದೈಕಿಲಾಕ್ರಮಿಸೆ ಲೋಕಮನೆಯ್ದೆ ಸರೋಜಸಂಭವಂ
ಪೊದಿಸಿದ ಪಾಂಡುಕಂಬಳಮಿದೆಂಬವೊಲಾದುದು ಮಂಜಿನುರ್ವರಂ ೩೮

ಬಳಸಿದ ಮಂಜು ಚಂದ್ರಿಕೆ ರಥಾಶ್ವದ ಮೆಯ್ವಸುರೇಣಲಕ್ಷ್ಮಮು
ರ್ಕಳವಱಿದರ್ಕಬಿಂಬಮಮೃತಾಂಶುವೆನಲ್ಕಿರುಳಂದಮಾಗೆ ಪ
ಜ್ಜಳಿಪ ನೆಗೞ್ತೆಗೆಟ್ಟು ಪಗಲಬ್ಜಿನಿ ಕಾಮಶಿಳೀಮುಖಕ್ಕೆ ಕೋ
ಮಳೆ ಸುಗಿದಿರ್ದಳೋಪನ ತೆಱಂ ಪೆಱತಾದೊಡೆ ಮುಗ್ಧೆ ನಿಲ್ವಳೇ ೩೯

ಮ॥ ಪಗೆ ನೆಯ್ದಿಲ್ ನಗುವಂತು ದೀನತೆ ದಿನಕ್ಕಪ್ಪಂತು ಕೂರ್ಪಂಬುಜಂ
ಸುಗಿವಂತಾಯ್ತು ಸಖಂಗೆ ಕಾಲವಶದಿಂ ತೇಜಃಕ್ಷಯಂ ಭಾನುಗೆಂ
ದಗಿದಾರ್ಗಂಬಡುವಂತೆ ಕೋಡಿ ಹಿಮದಿಂ ಚಕ್ರಾಂಕಮಳ್ಕಿರ್ದುವೀ
ಜಗದೊಳ್ ಮಿತ್ರವಿಪತ್ತಿಗಾರ ಬಗೆಯುಂ ದುಃಖಕ್ಕೆ ಪಕ್ಕಾಗದೇ ೪೦

ಕಂ॥ ಪೊಸತಲರ್ದ ಸಿಂಧುವಾರದ
ಕುಸುಮಸ್ತಬಕಂಗಳೆಂದು ನೀಲದ ಪರಲಿಂ
ಮಿಸುಗುವ ವನದೇವತೆಯರ
ಪೊಸಮುತ್ತಿನ ದಂಡೆಯೆನಿಸಿ ರಂಜಿಸಿ ತೋರ್ಕುಂ ೪೧

ಕಳಿಕೆ ನನೆ ಮೊಗ್ಗೆ ಬಿರಿಮುಗು
ಳಲರೆಂಬಯ್ದುಂ ಮನೋಜನಯ್ದುಂ ಸರಲ್ಗಂ
ತೊಳಗುವಲಗಾಗೆ ವಿರಹಿಯ
ನಳಱಿಸಿದುದುಮುದಿತಮಧುಪವೃಂದಂ ಕುಂದಂ ೪೨

ವನದೇವತೆ ಹಿಮಸಮಯ
ಕ್ಕನುನಯದಿಂ ಸೇಸೆದಳಿದ ಕಳಮಾಕ್ಷತಮಂ
ನೆನೆಯಿಸಿದುವು ನಿಳ್ಪಿನ ಬೆ
ಳ್ಪಿನ ಜಾದಿಯ ನನೆಗಳಳಿಕುಲೋಚ್ಚಲಿತಂಗಳ್ ೪೩

ಹಿಮಸಮಯಪತಿಯ ರೂಪಂ
ಕುಮುದಿನಿ ನೋಡಲ್ಕೆ ಪಲವು ಕಣ್ಬಡೆದಂತೇಂ
ರಮಣೀಯಮಾಯ್ತೊ ವಿದಳಿತ
ಕುಮುದಂಗಳ ಮಿಸುಗುವೆಸಳ ಮಸಕಂ ಕೊಳದೊಳ್ ೪೪

ಚಂ॥ ತರಳಕಟಾಕ್ಷಚಂದ್ರಿಕೆ ಮುಖಾಂಬುರುಹಂ ನಯನೋತ್ಪಳಂ ಪಯೋ
ಧರಮಮೃತಾಧರಂ ಚರಣಪಲ್ಲವಮೆಂಬತಿ ಶೀತಳಸ್ಥಳಾಂ
ತರದನುಬಂಧದಿಂ ಕುಸುಮಕೋಮಳೆಯರ್ಕಳೊಳೊಂದಿ ತಣ್ಣಗಿ
ರ್ದರೆಬರ ಬಿಟ್ಟು ಚೋದ್ಯಮೆನೆ ಪೀಡಿಸಿತೈಕಿಲನಂಗ ತಪ್ತರಂ ೪೫

ಕಂ॥ ಹಿಮಮೆಂಬ ಸುರತಸುಖಸಂ
ಭ್ರಮದೊಳ್ ಜನಮಪ್ಪುಕೆಯ್ದುದುದ್ಗತರೋಮೋ
ದ್ಗಮಮನುಪಜಾತಸೀತ್ಕಾ
ರಮನುತ್ಕಂಪನಮನುದ್ಯದಧರಭ್ರಮಮಂ ೪೬

ಉ॥ ಓತೊಡನಿರ್ಪ ನಲ್ಲರ ಮುಖಾಂಬುರುಹಂ ಪೊಱಗಾಗಿ ಮಿಕ್ಕ ಕಂ
ಜಾತಮಿದಾವ ಲೆಕ್ಕಮಸುರಾರಿಯ ಪೊರ್ಕುೞ ಪದ್ಮಮಂ ಖರ
ದ್ಯೋತಿಯ ಕೆಯ್ಯ ಕಂಜಮನಿದೆಯ್ದೆ ಸುರುಳ್ಚುಗುಮೆಂಬಿನಂ ಜಗ
ತ್ಕೌತುಕಮಾಯ್ತನುಷ್ಣಮಹಿಮಂ ಜನಿತೋತ್ಪಲಬಂಹಿಮಂ ಹಿಮಂ ೪೭

ವ॥ ಎನಿಸಿ

ಚಂ॥ ಇರೆಯಿರೆ ಪಾವೆ ಕಾಲಗತಿಯಿಂ ನೆಲಮುಕ್ಕೆನಿಪಂದದಿಂ ಹಿಮಂ
ಬರೆಬರೆ ಬೆರ್ಚಿನಿಂ ಶಿಶಿರಮಾಗಿ ನಿಮಿರ್ಚಿದುದಾಸೆಯಂಕದಂ
ತಿರೆ ನರಸುರ್ಕಮತ್ಕಳಿಕೆಯಂತಿರೆ ಮೆಯ್ಗೆ ವಿಪಾಂಡುವೃತ್ತಿಯಂ
ಪರಮಸುಖಾಪ್ತಿಯಂತಿರೆ ಜನಕ್ಕೆನಸುಂ ಪುಳಕೋದ್ಗಮಂಗಳಂ ೪೮

ಮ॥ ರಥಮಂ ವಾರ್ಧ್ಯುಪಕಂಠದೊಳ್ ತರುತುಮೈಕಿಲ್ಗೋಡೆ ಸೇಡಿಂವೆ ಸಾ
ರಥಿ ಕಾಲ್ಗೆಟ್ಟಿರೆ ಕಂಡು ಸುರ್ಕುಗಿಡೆ ಕಿಚ್ಚಂ ಕಾಸಿ ತಿರ್ದಲ್ ತ್ರಮೋ
ರಥಮಂ ಸಾರ್ದಪನಾತ್ಮಪಾದಮುಮನಾದಂ ನೀಡಲಂಜುತ್ತಿನಂ
ಪೃಥುನೀಹಾರನಿರುದ್ಧಭಾನುವೊಗೆವಂ ಸಾರ್ದಗ್ನಿದಿಗ್ಭಾಗಮಂ ೪೯

ಷಷ್ಠಾಶ್ವಾಸಂ

ಚಂ॥ ಕಡಲೊಳಗಿರ್ಪ ವಿಷ್ಣುವನಿಶಂ ಬಡಬಾಗ್ನಿಯ ಪೆರ್ಚುಮಿಲ್ಲದಿ
ರ್ದೊಡೆ ಸುರಸಿಂಧುವಂ ತಳೆದ ಶಂಭು ನಿಜಾಕ್ಷಿಯ ಬೆಂಕಿ ಸೋಂಕದಿ
ರ್ದೊಡೆ ಪವನಾಧ್ವದೊಳ್ ಸುೞಿವ ಭಾನು ಕೃಶಾನುವಿನಾಶೆಯಂ ಪಗಲ್
ನಡೆಯದೊಡೆಂತು ನಿತ್ತರಿಪರೆಂಬನಿತಾದುದು ಮಾಘಡಂಬರಂ ೫೦

ಕಂ॥ ಬಿತ್ತರಿಪ ಶಿಶಿರದೊಳ್ ಜನ
ಚಿತ್ತಮನಟ್ಟಿದೊಡೆ ಪೊಕ್ಕು ನೆಲಸಿರ್ದುದೞಿಂ
ಚಿತ್ತಶಯನಾಮಮಂ ಪುರು
ಷೋತ್ತಮಸುತನಾಳ್ದನೆನಿಸಿತದನೇವೊಗೞ್ವೆ ೫೧

ಪಸರಿಸೆ ಜಾದಿಯ ಜೊಂಪಂ
ಮಿಸುಪಲ್ ಪೞಿಗುಟ್ಟೆ ಕೊರಳಸರಮಂ ಕುಕಿಲೆಂ
ದೆಸಗೆ ಕೊಳರ್ವಕ್ಕಿ ಶಿಶಿರಂ
ಪಸದನವಾಡಿದುದು ಕುಂದದುತ್ಸವಮದೞೊಳ್ ೫೨

ಸೆಗಳಿಗೆಪೆಂಡಿರ ಮೊಲೆ ಕಿ
ಚ್ಚಗರುವ ಪೊಗೆ ಕುಂಕುಮಾಂಕಮೋವರಿ ನೆಲವಾ
ಳಿಗೆ ದಡ್ಡಿಯೆಂಬಿವಮರ್ದರ
ನಗಲ್ದುದು ಪೊಲೆಯಾಳ ತೆಱದೆ ಮುಟ್ಟದೆ ಶಿಶಿರಂ ೫೩

ಚಂ॥ ಕರಮೆಸೆದಿರ್ದರಂದು ಸಮಯೋಚಿತದಣ್ಪಿನ ಕುಂಕುಮಾಂಕಮೊ
ಪ್ಪಿರೆ ನವಸಿಂಧುವಾರದಲದೊಂಗಲ ಕೋಮಲಕರ್ಣಪೂರಮೊ
ಪ್ಪಿರೆ ನವಮಾಳಿಕಾಕುಸುಮಶೇಖರಮೊಪ್ಪಿರೆ ಲೋಧ್ರಪುಷ್ಪವಿ
ಸ್ಫುರಿತಪರಾಗಚಂದ್ರಕಬಳಚ್ಛವಿಯೊಪ್ಪಿರೆ ಪೌರನಾರಿಯರ್ ೫೪

ಮ॥ ಪರಿತಾಪಚ್ಯುತಿ ವಾಸರಕ್ಕೆ ಸುಮನಃಶ್ರೀಸಂಪದಂ ಕುಂದವ
ಲ್ಲರಿಗತ್ಯೂರ್ಜಿತಬೋಧಮುತ್ಪಳಿನಿಗುದ್ಯದ್ವೀತರಾಗತ್ವಮಂ
ಬುರುಹಶ್ರೇಣಿಗುದಾತ್ತಮೋಕ್ಷಗತಿ ಪೌಷ್ಯಕ್ಕಾದುದಾದಂ ದಿಗಂ
ಬರಸಾಂಗತ್ಯತಪಃಪ್ರಭಾವಮನಸುಂ ಮಯ್ವೆತ್ತೊಡೇನಾಗದೋ ೫೫

ವ॥ ಅಂತೆನಿಸಿದ ಶಿಶಿರಸಮಯಕ್ಕಲಂಕಾರಮಾದ ಫಾಲ್ಗುಣದ ಶುಕ್ಲಾಷ್ಟಮಿಯಂದು ನಂದೀಶ್ವರಪೂಜೆಗೆಂದು ಸಿದ್ಧಶೇಖರಜಿನಾಲಯಕ್ಕೆ ಮನುಜೇಂದ್ರಮಂದರಂ ಪುರಂದರಗಜೇಂದ್ರರುಂದ್ರ ಲೀಲೆಯಂ ತಳೆದ ನಿಜಗಜೇಂದ್ರಾರೂಢಂ ಸಮಸ್ತ ಮಂಡಳಿಕ ದಂಡನಾಥ ಸಾಮಂತ ಮಂತ್ರಿ ಪುರೋಹಿತಾದ್ಯನೇಕ ಪರಿವಾರ ಜನಪರೀತನಾಗಿ ಪೋಗಿ

ಚಂ॥ ನಿಜಗಜರಾಜದಿಂದಿೞಿದು ಭಕ್ತಿಭರಾನತಮಸ್ತಕನಾಗಿ ದಿ
ಗ್ವಿಜಯಜಯಾಗ್ರಗಣ್ಯನಧಿಕೋತ್ಸವದಿಂ ಬಲಗೊಂಡು ಮೂಱುಸೂೞ್
ತ್ರಿಜಗದಧೀಶಚೈತ್ಯಗೃಹಮಂ ತ್ರಿಜಗಜ್ಜನತಾರ್ಚಿತಾಂಘ್ರಿಪಂ
ಕಜನ ಪದಾಂಬುಜಕ್ಕೆಱಗಿ ಬಂದಿಸಿದಂ ಗುಣರತ್ನಭೂಷಣಂ ೫೬

ಗದ್ಯ

ಇದು ಸಮಸ್ತ ಭುವನಜನಸಂಸ್ತುತ ಜಿನಾಗಮ ಕುಮುದ್ವತೀ ಚಾರುಚಂದ್ರಾಯಮಾಣಮಾನಿತ ಶ್ರೀಮದುಭಯಕವಿ ಕಮಳಗರ್ಭ ಮುನಿಚಂದ್ರ ಪಂಡಿತದೇವ ಸುವ್ಯಕ್ತಸೂಕ್ತಿ ಚಂದ್ರಿಕಾಪಾನಪರಿಪುಷ್ಟಮಾನಸ ಮರಾಳ ಗುಣವರ್ಮನಿರ್ಮಿತಮಪ್ಪ ಪುಷ್ಪದಂತ ಪುರಾಣದೊಳ್ ಶಿಶಿರಸಮಯವರ್ಣನಂ ಷಷ್ಠಾಶ್ವಾಸಂ

ಸಪ್ತಮಾಶ್ವಾಸಂ

ಕಂ॥ ಶ್ರೀಜಿನಪತಿಗೆ ನತಾಮರ
ಭೂಜನಪತಿಗಾತ್ಮನಿಟಿಲದೊಳ್ ಕರಕಮಳಂ
ರಾಜಿಸಲೆಱಗಿದನರ್ಥಿಸ
ರೋಜಾರ್ಕಂ ಪ್ರಭುಗುಣಾಬ್ಜಿನೀಕಳಹಂಸಂ ೧

ವ॥ ಆಗಳ್

ಮ.ಸ್ರ॥ ಘನಘಂಟಾಜಾಳನಾದಪ್ರಸರಮೆಸೆಯೆ ನಾನಾ ಲಸದ್ವಾದ್ಯ ಶುಂಭ
ದ್ಧ್ವನಿಯೆತ್ತಂ ಪೊಣ್ಮೆ ಶಂಖ ಪ್ರಕರವಿರುತಿ ತಳ್ತುಣ್ಮೆ ಗಂಭೀರಭೇರೀ
ನಿನದಂ ಮೆಯ್ವೆರ್ಚೆ ಶಕ್ರಾರ್ಚಿತಜಿನಪತಿಗತ್ಯುತ್ಸವೋದಾತ್ತ ಚಿತ್ತಂ
ವಿನಯಪ್ರಾಕಾರಭೂಮೀಶ್ವರನಭಿಷವಮಂ ಮಾಡಲುದ್ಯುಕ್ತನಾದಂ ೨

ವ॥ ಆಗಿ

ಮ॥ ಮೊದಲೊಳ್ ತೀರ್ಥಕರಂಗೆ ತೀರ್ಥಜಲದಿಂದ ಸ್ನಾನಕ್ರಿಯಾರಂಭಸಂ
ಪದಮಂ ಪಾರ್ಥಿವತುಂಗನರ್ಥಿಜನತಾದೇಯಾರ್ಥನಾದಂ ಮನೋ
ಮುದದಿಂದಷ್ಟವಿಧಾರ್ಚನಾವಿಧಿಗಳಿಂದಭ್ಯರ್ಚನಂ ಮಾಡಿ ನೋ
ಡಿದನತ್ಯೂರ್ಜಿತನತ್ಯನೂನಚರಿತಂ ಶ್ರೀರಾಜವಿದ್ಯಾಧರಂ ೩

ಮ.ಸ್ರ॥ ಕಳಧೌತೋದ್ದಾಮಕುಂಭಪ್ರತತಿ ಮಣಿಗಣಾಕೀರ್ಣಸೌವರ್ಣಕುಂಭಾ
ವಳಿ ಚಂಚಚ್ಚಾರುಚಂದ್ರೋಪಳ ವಿಮಳಘಟತ್ಕುಂಭಸಂದೋಹದೊಳ್ ಭೂ
ತಳನಾಥಂ ರಾಗದಿಂದಂ ಘೃತಮಮೃತದಧಿಸ್ತೋಮಮಂ ತೀವಿ ನಿತ್ಯೋ
ಜ್ವಳತೇಜಂ ದೇವದೇವಂಗಭಿಷವವಿಧಿಯಂ ಮಾಡಿ ಸಂತುಷ್ಟನಾದಂ ೪

ಮ॥ ಘನಸಾರದ್ರವಮಿಶ್ರಿತಾರ್ದ್ರ ಘುಸೃಣಪ್ರೋನ್ಮಿಶ್ರಸಂಸೇವ್ಯ ಚಂ
ದನದಿಂ ತ್ರೈಭುವನೋನ್ನತೈಕತಿಲಕಂಗಪ್ಪಾರ್ಥಘಾತಿಕ್ಷಯಂ
ಗನುಲೇಪಕ್ರಿಯೆಯಂ ವಿನಿರ್ಮಿಸಿ ಬಟೆಕ್ಕಚ್ಚಾಂಬುವಿಂ ಮಾಡಿದಂ
ಜನನಾಥಂ ನೃಪನೀತಿಶಾಸ್ತ್ರನಿಪುಣಂ ಗಂಧೋದಕಸ್ನಾನಮಂ ೫

ಕಂ॥ ಅಷ್ಟವಿಧಕರ್ಮರಿಪುವಿಂ
ಗಷ್ಟೋತ್ತರಶತಸಹಸ್ರಲಕ್ಷಣಗಾತ್ರಂ
ಗಷ್ಟವಿಧಾರ್ಚನೆ ನೆಗೞ್ದಿರ
ಲಷ್ಟಾಹ್ನಿಕಪೂಜೆಯಂ ನೃಪಂ ನಿರ್ಮಿಸಿದಂ ೬

ನಿರ್ಮಿಸಿದನಂತರಂ ಘನ
ಘರ್ಮಚ್ಛೇದಕಮಿದೆಂದು ಗಂಧೋದಕಮಂ
ಧರ್ಮಪ್ರತಿಪಾದನ ಪಟು
ನಿರ್ಮಲಗುಣರತ್ನರಾಶಿ ಕೊಂಡುತ್ಸವದಿಂ ೭

ಮ.ಸ್ರ॥ ಪರಮಶ್ರೀತೀರ್ಥನಾಥಸ್ನಪನಸಲಿಲದಿಂದೆನ್ನ ಗಾತ್ರಂ ಪವಿತ್ರೀ
ಕರಮಕ್ಕೆಂದಕ್ಕರಿಂದಂ ಜನಪತಿ ನಯನದ್ವಂದ್ವದೊಳ್ ವಕ್ತ್ರದೊಳ್ ಬಂ
ಧುರಚೂಡಾಪಟ್ಟದೊಳ್ ವಕ್ಷದೊಳವಯವದೊಳ್ ಕೂಡೆ ಗಂಧೋದಕಪ್ರೋ
ತ್ಕರಮಂ ಹರ್ಷಾಶ್ರು ಪೊಣ್ಮುತ್ತಿರೆ ತಳಿದುಕೊಳುತ್ತಿರ್ದನಾನಂದದಿಂದಂ ೮

ವ॥ ಅಂತನಂತಸಂತೋಷದಿಂ ಮುಕ್ತಿಕಾಂತಾಕಾಂತನ ಕಾಂತಚೈತ್ಯಾಲಯಮಂ ತ್ರಿಃಪ್ರದಕ್ಷಿಣಂಗೆಯ್ದು ತ್ರಿಲೋಕೈಕನಾಥಾಭಿಮುಖನಾಗಿ ಕರಕಮಳಮಂ ಮುಗಿದು

ಉ॥ ಶ್ರೀವಧುಗಿತ್ತುದಾತ್ತಪದಮಂ ವರಮುಕ್ತಿಗೆ ಕೊಟ್ಟು ವಸ್ತ್ರಭೂ
ಷಾವಳಿಯಂ ಸರಸ್ವತಿಗೆ ಸಾರ್ಚೆ ಪದಾರ್ಥಮನೊಲ್ದು ಕೂಡಿಯುಂ
ದೇವ ನಿರಸ್ತರಾಗನೆನಿಪ್ಪೆ ಜಿನ ನಿನ್ನ ವಿರುದ್ಧಮಾರ್ಗಿಯೆಂ
ದಾವ ಸುಬೋಧರುಂ ಪೊಗೞ್ವರೇಕೆಯೊ ಚಿತ್ರಮಿದಿಂದ್ರವಂದಿತಾ ೯

ಚಂ॥ ಜನಿಯಿಸೆ ನೀಂ ಪೊದೞ್ದೊಸಗೆಗಾಗಳೆ ಮಜ್ಜನಪೀಠಮಾಗೆ ಮ
ಜ್ಜನವಳನಾಗೆ ಮಜ್ಜನಪಯೋರಸದಾಯಕವಾಗೆ ಪೆಂಪುವೆ
ತ್ತನಿಮಿಷಶೈಲದೊಳ್ಪನಿಮಿಷಾಧಿಪನೊಳ್ಪನಿಮೇಷವತ್ಪಯೋ
ವನನಿಧಿಯೊಳ್ಪು ಪೇೞವೆ ನಿಜೋನ್ನತಿಯಂ ಧರೆಗಿಂದ್ರವಂದಿತಾ ೧೦

ಒದವಿದ ಘೋರಸಂಸೃತಿಯ ಬಾಧೆಗೆ ತಲ್ಲಣದಿಂದಮನ್ಯತ
ತ್ವದ ಮಱೆವೊಕ್ಕ ಮೂಢಜನದಾಚರಣಂ ಪುಲಿಗಂಜಿ ಪುತ್ತ ನೇ
ಱದೊಡರವಾವುಕೊಂಡುದೆನೆ ಬೇವಸಮಂ ಬಿಡದೀವುದೊಲ್ಲೆ ನಾ
ನದನೆಳಸಲ್ಕೆ ರಕ್ಷಿಸು ಭವಚ್ಚರಣಂ ಶರಣಿಂದ್ರವಂದಿತಾ ೧೧

ಉ॥ ಆರುಮಸತ್ಯದೊಳ್ ಕಳವಿನೊಳ್ ಕೊಲೆಯೊಳ್ ಧನಮೋಹದೊಳ್ ಪರ
ಸ್ತ್ರೀರತಿಯೊಳ್ ತೊಡಂಕದಿರವೆಂಬುದು ನಿನ್ನ ಮತಂ ಕುತತ್ವಸಂ

ಸ್ಕಾರಜನಕ್ಕೆ ದುಸ್ಸಹಮದಂತುಟೆ ಭಾವಿಸೆ ಪಿತ್ತದೋಷಮು
ರ್ವಾರನ ಬಾಯ್ಗೆ ದುಗ್ಧವಿನಿದಪ್ಪುದೆ ಸೇವಿಪೊಡಿಂದ್ರವಂದಿತಾ ೧೨

ರೋಗಿಗೆ ದೇವ ನಿಮ್ಮ ಚರಣಸ್ಮರಣಂ ಪರಮೌಷಧಂ ವಿಷಾ
ವೇಗಿಗೆ ದೇವ ನಿಮ್ಮ ಪದದಕ್ಕರಮಾಲೆ ವಿಷಾಪಹಾರಮು
ದ್ವೇಗಿಗೆ ದೇವ ನಿನ್ನಖಿಳರೂಪಗುಣಸ್ತುತಿ ಹರ್ಷಹೇತುವಂ
ದಾಗಳುವೆನ್ನ ನಂಬುಗೆ ಮನಂಬುಗೆ ಭಾವಿಪೆನಿಂದ್ರವಂದಿತಾ ೧೩

ಚಂ॥ ಮುಳಿಯದೆಯುಂ ಮನೋಭವನನಿಕ್ಕಿದೆ ಕೂರದೆಯುಂ ವಿನೇಯಮಂ
ಡಳಿಗಭಿವೃದ್ಧಿಯಂ ಕುಡುವೆ ರಾಗದೊಳೊಂದದೆಯುಂ ವಿಮುಕ್ತಿಕೋ
ಮಳೆಗೆಳಸಿರ್ಪೆ ಮೋಹವಶನಲ್ಲದೆಯುಂ ತ್ರಿಜಗತ್ಪತಿತ್ವದ
ಗ್ಗಳಿಕೆಯನಪ್ಪುಕೆಯ್ದೆ ಬಿಡೆ ನಿನ್ನೆಸಕಂ ಪೊಸತಿಂದ್ರವಂದಿತಾ ೧೪

ಮುಳಿವೊಸೆವನ್ಯರೋಜೆ ನಿನಗಿಲ್ಲದೆಯುಂ ಹಗೆ ಹಾಱ ತೂಱುಗುಂ
ಕೆಳೆ ದಳವೇಱುಗುಂ ಬಗೆದು ಭಾವಿಸೆ ಧಾತ್ರಿಗೆ ಚಿತ್ರಮಲ್ತೆ ತಿಂ
ಗಳ ಬೆಳಗಂತೆ ರಂಜಿಸೆ ರಜೋಧಿಕಮಂಬುರುಹಂ ಸುರುಳ್ಗುಮು
ತ್ಪಳಮಲರ್ಗುಂ ನಿಸರ್ಗಮಿದು ನಿನ್ನ ಮಹೋನ್ನತಿಗಿಂದ್ರವಂದಿತಾ ೧೫

ಸದಮಳಬೋಧಭಾನುವಿನ ಬಂಧುರಬಂಧು ಸುಧರ್ಮಸೂತ್ರಕಾಂ
ಡದ ಕಣಿ ಪುಣ್ಯಲಕ್ಷ್ಮಿಯ ತವರ್ಮನೆ ಭವ್ಯಜನಾಂತರಂಗಭೃಂ
ಗದ ನೆಲೆ ತತ್ವವಾಸನೆಯ ಗೊತ್ತು ದಯಾರಸದಾಗರಂ ಭವ
ತ್ಪದಶತಪತ್ರಮಾಱಸುಗೆ ಮದ್ಭವತಾಪಮನಿಂದ್ರವಂದಿತಾ ೧೬

ವ॥ ಎಂದನೇಕಸ್ತುತಿಗಳಿಂ ತ್ರಿಭುವನಸ್ತುತ್ಯನಂ ಸ್ತುತಿಯಿಸಿ ಭಕ್ತಿಯಿಂದೆಱಗಿ ಪೊಡೆವಟ್ಟು ಸಿದ್ಧಶೇಷೆಯಂ ಕೊಂಡು ಬೀೞ್ಕೊಂಡನಂತರಂ

ಕಂ॥ ಸಕಳಪ್ರಾಣಿದಯಾಪರ
ರಕಳಂಕರನಂತಬೋಧರೆನಿಸಿದ ದುರಿತ
ಕ್ರಕಚಮುನಿವರರಿಗೆ ಬುಧಜನ
ನಿಕರಸ್ತುತನೆಱಗಿ ಭಕ್ತಿಯಿಂ ವಂದಿಸಿದಂ ೧೭

ವ॥ ಅನಂತರಂ

ಮ.ಸ್ರ॥ ಪರಮಾಶೀರ್ವಾದನಾದಂ ಜನಿಯಿಸೆ ಪರಮೋತ್ಸಾಹಮಾಂಗಲ್ಯ ತೂರ್ಯೋ
ತ್ಕರ ನಾದಂ ಪೊಣ್ಮೆ ರಾರಾಜಿಸೆ ಸುರಗಜಮಂ ಲೀಲೆಯಿಂ ಪೋಲ್ವುದೆಂಬಂ

ತಿರೆ ಪೆಂಪಂ ತಾಳ್ದ ಮತ್ತದ್ವಿರದಮನಧಿಕಪ್ರೀತಿಯಿಂದೇಱಿ ಧಾತ್ರೀ
ಶ್ವರಮಸ್ತನ್ಯಸ್ತಪಾದಂ ತಳೆರ್ದಪನರಸಂ ರಾಜವಿದ್ಯಾಲಲಾಮಂ ೧೮

ಲಳಿತಶ್ವೇತಾತಪತ್ರಂ ಚಮರಸಮಿತಿ ಕೇತುವ್ರಜಂ ತೂರ್ಯಮಾಲಾ
ವಳಿ ಹಸ್ತಿಸ್ತೋಮವುಷ್ಟ್ರಪ್ರತತಿ ತುರಗವೃಂದಂ ಪದಾತ್ಯಾಳಿ ಸನ್ಮಂ
ಗಳಭೇರೀಸಂಕುಲಂ ರಾಜಿಸೆ ಚಟುಲರಿಪುವ್ರಾತಚೈತ್ರಧ್ವಜಂ ನಿ
ಶ್ಚಳತೇಜಂ ಬಂದು ಪೊಕ್ಕಂ ಕಟಕಮನವನೀನಾಥನಾನಂದದಿಂದಂ ೧೯

ವ॥ ಅಂತು ಪೊಕ್ಕು ನಿಜರಾಜಮಂದಿರದ ಬಾಗಿಲ್ವಾಡದೊಳ್ ಬಂದು ಮದಾಂಧಬಂಧುರ ಸಿಂಧುರಸ್ಕಂಧದಿಂ ವಸುಂಧರಾಧಿಪನಿೞಿದು

ಮ॥ ಪ್ರಣತಕ್ಷತ್ರಿಯಪುತ್ರರಂ ಸಚಿವರಂ ಸಾಮಂತರಂ ಶೌರ್ಯಭೂ
ಷಣರಂ ಸಾಹಸತುಂಗರಂ ಸುಭಟರಂ ತಾಂಬೂಲದಾನಾದಿಯಿಂ
ಗುಣತುಂಗಕ್ಷಿತಿಪಾಳನೂರ್ಜಿತಯಶಂ ಸಂತುಷ್ಟರಂ ಮಾಡಿ ಧಾ
ರಿಣಿ ಸಂವರ್ಣಿಸೆ ರಾಗದಿಂ ಕಳಿಪಿದಂ ಶ್ರೀರಾಜಕಂಠೀರವಂ ೨೦

ವ॥ ತದನಂತರಂ ಚಿತ್ರಭಾನುದತ್ತಹಸ್ತಾವಳಂಬನಾಸ್ಥಾನಮಂಟಪಕ್ಕೆ ಬಿಜಯಂಗೆಯ್ದು ಸಿಂಹಾಸನಾಸೀನನಾಗಿ ಜಿನರಾಜಪೂಜಾಸಮಾಜಸಂಜಾತ ಹರ್ಷೋತ್ಕರಚಿತ್ತನಿರ್ಪುದುಮಾ ಸಮಯದೊಳ್

ಮ॥ ಘನಬಾಹಾಬಲದಿಂದಿದಿರ್ಚಿದ ಸುಹೃದ್ಭೂಪಾಳರಂ ಘಣ್ಘಘ
ಣ್ಘನೆ ಕೊಂದಿಕ್ಕಿ ಸಮಸ್ತ ರಾಜ್ಯಪದಮಂ ವಿಕ್ರಾಂತದಿಂ ತಂದು ನ
ಚ್ಚಿನ ಸೇನಾಪತಿ ಕೀರ್ತಿವರ್ಮನಮಲಶ್ರೀಕೀರ್ತಿಗಾಣ್ಮಂ ಜಗ
ಜ್ಜನರಕ್ಷಾಮಣಿಗಾಗಳೋಲಗಿಸಿದಂ ದಂಡೇಶದಿಕ್ಕುಂಜರಂ ೨೧

ವ॥ ಅಂತೋಲಗಿಸಿ ನಿಜೋಚಿತಾಸನದೊಳ್ ಕುಳ್ಳಿರ್ಪುದುಂ ವಿಜಯಸೇನನೆಂಬ ಹಿತಪುರೋಹಿತನಿಂತೆಂದಂ

ಉ॥ ದೇವ ಭವತ್ಪ್ರತಾಪನಿಶಿತಾಸ್ತ್ರದಿನುದ್ಧತ ವೀರವೈರಿ ಪೃ
ಥ್ವೀವರರಂ ಕಱುತ್ತಿಱಿದು ಪಂದಲೆಯಂ ಗಗನಕ್ಕಡುರ್ತು ಕೊಂ
ಡೋವದೆ ಸೆಂಡನಾಡಿ ಜಯಮಂ ಗೆಡೆಗೊಂಡು ಸಮಸ್ತವಸ್ತುಸ
ದ್ಭಾವಮನೀಟ್ಟುಕೊಂಡು ಮೆಱೆದಂ ನಿಜಶೌರ್ಯಮನಾಜಿರಂಗದೊಳ್ ೨೨

ವ॥ ಎಂದು ಬಿನ್ನಪಂಗೆಯ್ದ ಪುರೋಹಿತನ ವಚನರಚನಾಪ್ರಪಂಚಮನವಧರಿಸಿ ಸೇನಾಧಿನಾಥ ಕೀರ್ತಿವರ್ಮನಂ ಸಮಸ್ತಸಾರವಸ್ತುಗಳಿಂ ತಣಿಪಿ ಬೀಡಿಂಗೆ ಕಳಿಪಿ

ಮ.ಸ್ರ॥ ಘನಗಂಭೀರಸ್ವನಂ ಮಂಗಳಪಟಹರವಂ ಗಾಯಿನೀಗೇಯಮಂದ್ರ
ಧ್ವನಿ ಜೈತ್ರೋತ್ಸಾಹಭೇರೀವಿರುತಿ ವಿವಿಧತೂರ್ಯೋತ್ಕರಧ್ವಾನಮುರ್ವೀ
ಜನತಾನಂದ ಪ್ರಘೋಷಂ ನೆಗೞ್ದೆಸೆಯೆ ಜಯಶ್ರೀವಧೂವಲ್ಲಭಂ ಭೂ
ಜನನೇತ್ರೇಂದೀವರೋನ್ಮೀಳನಕರ ವಿಳಸಚ್ಚಾರುಚಂದ್ರಂ ನರೇಂದ್ರಂ ೨೩

ಪ್ರತಿಪಕ್ಷೋರ್ವೀಶವಂಶಕ್ಷಿತಿರುಹತತಿಯಂ ಕಿೞ್ತು ಬೇರಿಂದೆ ಭೀತ್ಯಾ
ನತ ಧಾತ್ರೀನಾಥರಂ ಮನ್ನಿಸಿ ನಿಜನಿಜರಾಜ್ಯಸ್ಥರಂ ಮಾಡಿ ನಿತ್ಯೋ
ರ್ಜಿತತೇಜಂ ಧಾತ್ರಿ ಜೀಯೆಂಬಿನಮುದಿತ ಯಶಸ್ತಂಭಮಂ ವಂದಿವೃಂದ
ಸ್ತುತನತ್ಯಾನಂದದಿಂದಂ ನಿಱಿಸಿದನಧಿಕಂ ರಾಜವಿದ್ಯಾಲಲಾಮಂ ೨೪

ವ॥ ಅಂತು ಶುಂಭಜ್ಜಯಸ್ತಂಭಮನುತ್ತಂಭಿತಂ ಮಾಡಿ ಮತ್ತಮೊಂದು ದೆವಸಂ

ಉ॥ ಸಂತತಮೋಲಗಿಪ್ಪಖಿಳ ಮಂತ್ರಿ ಪುರೋಹಿತ ದಂಡನಾಥ ಸಾ
ಮಂತನಿಯೋಗಿವರ್ಗ ಬುಧ ಗಾಯಕ ವಾದಕರೊಪ್ಪೆ ಸುತ್ತಿ ಶು
ದ್ಧಾಂತವಿಳಾಸಿನೀಜನಸಮೇತನಿಳಾಪತಿ ರಂಜಿಸಿರ್ದನ
ತ್ಯಂತವಿಚಿತ್ರಶೋಭವಡೆದೋಲಗಶಾಲೆಯೊಳಿಂದ್ರಲೀಲೆಯಿಂ ೨೫

ಕಂ॥ ವಿಕ್ರಮಮತ್ಸರದಿಂದುರಿ
ದಾಕ್ರಮಿಸಿದೊಡಗಿದು ಸುಗಿದು ಬಂದಡಿಮೊದಲೊಳ್
ವಕ್ರತೆಗೆಟ್ಟಿರ್ದಿಭರಿಪು
ಚಕ್ರಮಿದೆನಿಸಿದುದು ನೃಪನ ಕೇಸರಿಪೀಠಂ ೨೬

ಇಂಗಡಲೊಳಮರ್ದುವು ನೊರೆ
ದೊಂಗಲ್ ಮಂದರಮನೆನೆ ಮನಂಗೊಂಡುವು ತ
ನ್ನಂಗಿಯರಿಕ್ಕುವ ಚಮರೀ
ಜಂಗಳ್ ಮನುಜೇಂದ್ರಮಂದರಂಗೋಲಗದೊಳ್ ೨೭

ಪಾಣಿತಳಪ್ರಭೆ ಪಸರಿಸೆ
ಶೋಣಿತಚಮರೀಜಮೆನಿಸಿದುವು ಸಿತಚಮರ
ಶ್ರೇಣಿಗಳದಂತೆ ಪೊರ್ದಿದೊ
ಡೇಣಾಕ್ಷಿಯರಂ ಸರಾಗಮಾಗದುದುಂಟೇ ೨೮

ವ॥ ಮತ್ತಂ

ಮ.ಸ್ರ॥ ನಳಿದೋಳ್ಗಳ್ ಶಾಖೆಯಂ ಕೆಂದಳವೆಳದಳಿರಂ ಭ್ರೂಲತಾಭಂಗಿಭಂಗಂ
ಗಳನಾ ಲೋಳಾಕ್ಷಿಗಳ್ ನೀಳ್ದಲರ್ಗಳನಳಕಂ ತುಂಬಿವಿಂಡಂ ಕುಚಂಗಳ್
ಫಲಮಂ ಸುಯ್ಗಂಪು ಕಂಪಂ ಮಿಗೆ ಸೊಗಯಿಸಿತಂಗೋದ್ಭವ ಶ್ರೀಜಗನ್ಮಂ
ಗಳ ಶೃಂಗಾರಾಬ್ಧಿವೇಳಾವನಲತೆಯೆನೆ ಶುದ್ಧಾಂತಕಾಂತಾಕದಂಬಂ ೨೯

ಉ॥ ತೋಳಮೊದಲ್ ಮೊದಲ್ಗಿಡಿಸೆ ಸೋರ್ಮುಡಿ ಸುತ್ತೆ ಕುಚೋರುಮೂಳಮು
ನ್ಮೀಳಿಸೆ ನಾಭಿ ನಾಣ್ಗಿಡಿಸೆ ಬಾಯ್ದರೆ ಬಲ್ಸಱಿಗೆಯ್ಯೆ ಚೆಲ್ಲಗಣ್
ಚಾಳಿಸೆ ಭಂಗಿ ಭಂಗಿಸೆ ಜನಂಗಳ ಚಿತ್ತಮನಿರ್ದರೊಪ್ಪೆ ಭೂ
ಪಾಳನ ಪಕ್ಕದೊಳ್ ಪಲರುಮೋಲಗಕಾರ್ತಿಯರಿಚ್ಚೆಕಾರ್ತಿಯರ್ ೩೦

ಕಂ॥ ತರುಣಿಯರಮುಡಿಯ ಪುಡಿಗ
ತ್ತುರಿ ಸೂಡಿದಮಾಲೆ ಘಸೃಣಲೇಪಂ ನಱುಸುಯ್
ಪರೆದ ಹಿಮರಜಮವಿಂತೈ
ವೆರಕೆಯ ಕಂಪಿಂ ಮದಾಳಿಗಿತ್ತುವು ಮದಮಂ ೩೧

ರಾಣೀವಾಸದ ತುಡುಗೆಯ
ಮಾಣಿಕದೆಳವಿಸಿಲುಮೆಸೆವ ಧವಳಕಟಾಕ್ಷ
ಶ್ರೇಣಿಯ ಬೆಳ್ದಿಂಗಳುಮ
ಕ್ಷೂಣಮವೊಂದೊಂದನೊತ್ತಲಾಱವೆ ಸಭೆಯೊಳ್ ೩೨

ಚಂ॥ ಅಣಕಮಿದೇನೊ ಪೀಲಿದಱಿ ರನ್ನದ ಸತ್ತಿಗೆ ತಳ್ತುವೀ ಸಭಾಂ
ಗಣದೊಳೆನಲ್ಕೆ ಶೇಖರದ ಮಾಳೆಗೆ ಸಾರ್ವಳಿಮಾಲೆ ಮೇಲೆ ಸಂ
ದಣಿಸಿದ ಲೀಲೆಯಂ ಮಕುಟದುನ್ಮುಖರತ್ನಮರೀಚಿಮಾಲೆಗಳ್
ಪೆಣೆದಡರ್ದೇಱಿ ವಿಭ್ರಮಮುಮೊಪ್ಪಿತು ಸುತ್ತಿದ ರಾಜಲೋಕದೊಳ್ ೩೩

ಮ॥ ನೆಱೆ ಕರ್ಣಾಮೃತವೃಷ್ಟಿಯಪ್ಪ ರಸರಾಗೋಪೇತಮಂ ಗೀತಮಂ
ಮೆಱೆಯಲ್ಕಂಗಜವಾರ್ಧಿಘೋಷಮೆನಿಪುರ್ವೀಹೃದ್ಯಮಂ ವಾದ್ಯಮಂ
ಮೆಱೆಯಲ್ಕಾಂಗಿಕ ವಾಚಿಕಾಭಿನಯ ಭಾವಸ್ತುತ್ಯಮಂ ನೃತ್ಯಮಂ
ಮೆಱೆಯಲ್ಕಿರ್ದುದು ಬಂದು ಭಾರತಿಕವೃಂದಂ ಭೂಪನಾಸ್ಥಾನದೊಳ್ ೩೪

ಉ॥ ಬಾರಿಪ ನಿಮ್ಮ ತರ್ಜನದಿನೀಜನದೊಂದುಲಿ ಮಾಣ್ಗೆ ಮಾಣೆವಾ
ವಾರೆಮಗಿಲ್ಲ ವಾರಕರೆನುತ್ತುಮೆಮಾರ್ಜಡಿವಂದದಿಂ ಪ್ರತೀ
ಹಾರಿಯರಂ ಪೊದಱ್ದುವೆಳವೆಂಡಿರ ನೂಪುರದಿಂಚರಂ ಮುಖಾಂ
ಭೋರುಹಭೃಂಗನಾದಮುಡೆನೂಲ ಕಳಧ್ವನಿ ಕಂಕಣಸ್ವನಂ ೩೫

ವ॥ ಅಂತೋಲಗಂಗೊಟ್ಟು ಸೌಂದರ್ಯಕಂದರ್ಪನಿರ್ಪ್ಪದುಮನಂತಮಹಿಮಾವಲಂಬಿಯಾಗಿ

ಮ॥ ಕಮನೀಯಂ ಸಭೆ ಶೋಭಿಸಿತ್ತು ರಮಣೀಲಾವಣ್ಯಲಕ್ಷ್ಮೀಮಯಂ
ಸಮದಾಪಾಂಗಮಯಂ ವಿಭೂಷಣಮಯಂ ಜ್ಯೋತಿರ್ಮ್ಮಯಂ ಚಾರುಗಂ
ಧಮಯಂ ಕಂಕಣಕಿಂಕಿಣೀರವಮಯಂ ಕರ್ಪೂರಧೂಳೀಮಯಂ
ಭ್ರಮರೀಗೇಯಮಯಂ ಸ್ಮರೋತ್ಸವಮಯಂ ತೇಜೋಮಯಂ ಶ್ರೀಮಯಂ ೩೬

ವ॥ ಆ ಪ್ರಸ್ತಾವದೊಳ್ ವಿಚಿತ್ರವೇತ್ರಹಸ್ತನುವಾರ್ಯವೇಷಪ್ರಶಸ್ತನುಮಪ್ಪ ಪ್ರತೀಹಾರನೊರ್ವನುರ್ವೀಶ್ವರಂಗೆ ಪೊಡೆವಟ್ಟು ಕುಟ್ಮಳಿತಕರಸರೋಜನಾಗಿ

ಮ॥ ಧರಣೀವಲ್ಲಭ ಬಿನ್ನಪಂ ಕುರುಕುಳಪ್ರೋದ್ಭಾಸಿ ಭದ್ರಾವತೀ
ಪುರನಾಥಂ ಭವದೀಯತಾತಸಹಜಂ ಶ್ರೀಚಂದ್ರಿಕಾರಾಗಸಾ
ಗರಚಂದ್ರಂ ನೃಪನೀತಿಶಾಲಿ ಜಯವರ್ಮ್ಮಂ ಸಾರಸದ್ಧರ್ಮ್ಮನಾ
ದರದಿಂದಟ್ಟಿದ ರಾಯಭಾರಿ ದಮನಂ ಬಂದಿರ್ದ್ದಪಂ ಬಾಗಿಲೊಳ್ ೩೭

ವ॥ ಎಂದು ಬಿನ್ನಪಂಗೆಯ್ದು ಮಹೀಶಲಬ್ಧಾದೇಶನಾಗಿ ಪೋಗಿ ತಂದು ಕಾಣಿಸುವುದುಂ ದಮನನತಿ ಸುಮನಸನಾಸ್ಥಾನಕುಟ್ಟಿಮ ಪ್ರಘಟ್ಟಿತೋತ್ತಮಾಂಗನಾಗಿ ಪೊಡೆವಟ್ಟು ನಿಜೋಚಿತಾಸನದೊಳಿರೆ ನರೇಂದ್ರನಾ ನರೇಂದ್ರನಟ್ಟಿದ ದೂತನನತಿಪ್ರಸಾದದೃಷ್ಟಿಯಿಂ ನೋಡಿ

ಚಂ॥ ಕುಶಳಮೆ ಮಾತುಳಂಗೆ ಜಯವರ್ಮ್ಮನೃಪಂಗೆ ಪರಿಗ್ರಹಪ್ರಜಾ
ಕುಶಲವಿಧಾಯಿಗೆಂದು ಬೆಸಗೊಂಡೊಡವಂ ಪ್ರಭುಗೆಂದನಿನ್ನೆಗಂ
ಕುಶಲಮ ದೇವ ನಿಮ್ಮ ಬಲವರ್ಗ್ಗದಿನೀಗಳದೊಂದು ಕಾರ್ಯ್ಯಕ
ರ್ಕ್ಕಶಭರಮಾಗೆ ಬೇಗಮಱಿಪಲ್ ನಿಜಸನ್ನಿಧಿಗೆನ್ನನಟ್ಟಿದಂ ೩೮

ವ॥ ಅದಾವುದೆನೆ ದೇವ ಭವದೀಯಜನಕನನುಜಾತೆಯಪ್ಪ ಸೌಂದರ್ಯಶೀಲಗುಣರುಂದ್ರಚಂದ್ರಿಕಾದೇವಿಗಂ ಸಕಲರಾಜಗುಣಭದ್ರ(ನಪ್ಪ) ಭದ್ರಾವತೀಪುರನಾಥನಪ್ಪ ಜಯವರ್ಮ್ಮನೃಪತಿಗಂ ಪುಟ್ಟಿ

ಕಂ॥ ಅಮಳಕುಳವಾಹಿನೀಸತಿ
ಗೆ ಮಹಾಬ್ಧಿಗೆ ಪುಟ್ಟಿದಬ್ಜವಾಸಿನಿಯ ವಿಳಾ
ಸಮನಾಳ್ದು ನೆಗೞ್ದಳತಿವಿ
ಭ್ರಮವತಿ ಭಾನುಮತಿಯೆಂಬ ಕನ್ಯಾರತ್ನಂ ೩೯

ಮ॥ ನಿನಗೇವೇೞ್ವೆನಭೂತಪೂರ್ವಮನಿಳಾಲಂಕಾರಮಂ ನೀರಜಾ
ಸನನಿಷ್ಪಾದಿತ ವಸ್ತುಸಾರಮನನಂಗಪ್ರಾಜ್ಯರಾಜ್ಯಾಭಿವ

ರ್ಥನಮಮಂ ಮಂಗಳಲಕ್ಷಣೈಕನಿಧಿಯಂ ಸಂಸಾರಸಾಫಲ್ಯಸಾ
ಧನಮಂ ಲೋಚನಲೋಚನೀಯರುಚಿಯಂ ತತ್ಕನ್ಯಕಾರೂಪಮಮಂ ೪೦

ಕಂ॥ ಲಪನೇಂದುರುಚಿಗೆ ಮಱಿಗೆ
ಯ್ಯುಪಕರಿಸಿದ ಘನಪಯೋಧರಂಗಳನೊಸೆದೀ
ಕ್ಷಿಪ ಪದಪಯೋಜಲಕ್ಷ್ಮಿಯ
ಚಪಳಾಕ್ಷಿಗಳೆನಿಪುವವಳ ಚರಣನಖಂಗಳ್ ೪೧

ಆ ಕನ್ನಿಕೆಯಂ ಬೇಡಲ್
ಸಾಕಾಂಕ್ಷಂ ಕನಕಪುರದ ಗಜಕರ್ಣಂ ಮ
ದ್ಭೂಕಾಂತನಲ್ಲಿಗಟ್ಟೆ ವಿ
ವೇಕಿ ನಿಸೃಷ್ಟಾರ್ಥನೆನಿಪ ದೂತಂ ಖ್ಯಾತಂ ೪೨

ಬಂದು ನೃಪದರ್ಶನಂ ತನ
ಗಂದಾಗಿರೆ ತಂದ ಪಾಗುಡಂಗಳನಿಂಬಿಂ
ಮುಂದಿಟ್ಟು ವಿನಯನತನಾ
ನಂದಮನಾದರದೊಳೆಯ್ದೆ ಬಟಿಕಂ ನುಡಿದಂ ೪೩

ಮ.ಸ್ರ॥ ಹರಿವಂಶೋತ್ತಂಸಹಂಸಂ ಕನಕಪುರವರಾಧೀಶನುದ್ದಾಮತೇಜಂ
ಪರಭೂಪಶ್ರೀಸಮಾಕರ್ಷಣಪಟು ಗಜಕರ್ಣಂ ನಯಾಕೀರ್ಣನೊಲ್ದೆ
ಮ್ಮರಸಂ ತತ್ಕನ್ಯೆಯಂ ಭಾನುಮತಿಯನೆರೆದಿಂದಟ್ಟಿದಂ ಕೊಟ್ಟು ಸಯ್ಪಂ
ಪರಮ ಪ್ರೇಮಾನುಬಂಧಕ್ಕಡೆಗುಡುವುದು ನೀಂ ದೇವ ಸೌಜನ್ಯಶಾಳೀ ೪೪

ಕಂ॥ ಮಾದೇವಿಪಟ್ಟಮಂ ನೃಪ
ನಾದರದಿಂ ಕುಡೆ ನಿಜಾತ್ಮಜಾತೆಗೆ ನೆಗಟ್ದಿ
ರ್ದಾ ದಿವ್ಯಮಾಲೆ ಶೇಖರ
ಮಾದಪ್ಪುದನೇಕನೃಪರ್ಗದೇಂ ಕೇವಳಮೇ ೪೫

ಆ ದೊರೆಯ ವಲ್ಲಭಂ ತನ
ಗಾದೊಡೆ ನಿಜಕನ್ನೆಗನ್ನೆಯೆಂಬಿನಿತಲ್ಲೇ
ನಾ ದೊರೆಯಳಿಯಂ ನೃಪ ನಿನ
ಗಾದೊಡೆ ಭುವನದೊಳಸಾಧ್ಯಮಾವುದುಮುಂಟೇ ೪೬

ಎಱಗುಗುಮೆಮ್ಮರಸಂ ಮನ
ದೆಱಕದಿನೀ ಭಾನುಮತಿಗಮೆಂಬಿನಿತೇಂ ನಿನ

ಗೆಱಗಿಸುಗುಮೆಱಗದಹಿತರ
ನೆಱಗಿಸದೊಡೆಱಗಿಸುಗುಮಮರಿಯರ್ಕಳನವರ್ಗಂ ೪೭

ಮ॥ ಅನತೋರ್ವೀಶರ ದಂತಿದಂತವಳಯಾಳಂಕಾರದಿಂ ವೀರವೈ
ರಿನೃಪಾಲದ್ವಿಪಮೌಕ್ತಿಕಾವಳಿಗಳಿಂ ಕೆಯ್ಗೆಯ್ಸುಗುಂ ನಿನ್ನ ನಂ
ದನೆಯಂ ಪೇೞ್ ಪೆಱರಂತೆ ಮಿಕ್ಕ ಬಳೆಯಿಂದಂ ಮಿಕ್ಕ ಮುತ್ತಿಂದವಂ
ಗನೆಯರ್ಗಾಹವಧೀರನಾ ನೃಪವರಂ ನೇಪಥ್ಯಮಂ ಮಾಳ್ಪನೇ ೪೮

ವ॥ ಎಂದು ಬಿನ್ನಪಂಗೆಯ್ದ ದೂತನ ನಿಜೇಶವಿಕ್ರಮಪ್ರಕಾಶಕರಮಪ್ಪ ಬಂಧುಕೃತ್ಯ ಸಂಬಂಧ ಬಂಧುರಾಳಾಪಂಗಳಂ ಕೇಳ್ದು ಪರಿತೋಷದರಹಸಿತಲಸಿತವದನಾರವಿಂದನಾಗಿ

ಕಂ॥ ತನ್ನನ್ನನ ಗುಣವೃದ್ಧನ
ಸನ್ನುತನ ಕುಲೀನನೊಂದು ಸೌಹೃದಮಿೞದೆಂ
ಬನ್ನನೆ ಕನ್ನೆಗೆ ಯೋಗ್ಯನೆ
ನಿನ್ನೆಂದುದೆ ಯೋಗ್ಯಮಲ್ಲದಿದು ಕರಣೀಯಂ ೪೯

ವ॥ ಇಂತೆಂದು ಭಂಗಿಭಾಷಿತದಿನಾತನಂ ಪ್ರೀತನಂ ಮಾಡಿ ಬೀಡಿಂಗೆ ಕಳಿಪಿ ವಿಸರ್ಜಿತಾಸ್ಥಾನದಿಂದಮೆೞ್ದು

ಕಂ॥ ಕೃತಮತಿಗಳನ್ವಯಾಗತ
ರತಿಮೋಹಿತರಖಿಳ ನೀತಿಶಾಸ್ತ್ರಕಳಾಪಂ
ಡಿತರೆನಿಪ ಸಚಿವರೊಡವರೆ
ಪತಿ ಮಂತ್ರಾಲಯಕೆ ಬಂದು ಮಂತಣವಿರ್ದಂ ೫೦

ವ॥ ಇರ್ದು ಶಕ್ರಗುರು ಶುಕ್ರಕಾಮಂದಕಾದಿ ನಯವೃದ್ಧರಿಂ ನಿಬದ್ಧಮಾದ ನೀತಿಶಾಸ್ತ್ರ ಪಟುಗಳೊಳಾಳೋಚನಂಗೆಯ್ದಲ್ಲಿ

ಕಂ॥ ಕನಕಪುರಸ್ಥನ ಹರಿವಂ
ಶನ ಗಜಕರ್ಣನ ನಿಸರ್ಗದುನ್ಮತ್ತತೆಯಾ
ರ್ಪಿನ ವಿಕೃತಿ ತರಳಭಾವಂ
ಮನದೊಳಿರಲ್ಕೇವಸುಱನೆ ಕೊಳುಕೊಡೆಗೆ ನೃಪಂ ೫೧

ವ॥ ಅಂತುಱದೆ

ಚಂ॥ ನಿನಗನುರೂಪೆಯೆಂಬುದನೆ ಕಂಡೊಡೆಯಂ ವಧುಗೆಂತುಮೆಂಬುದುಂ
ನೆನೆದು ಕುಮಾರಿ ಭಾನುಮತಿಯಂ ಕುಡಲೊಲ್ಲದನಾದನಾಜಡಾ
ತ್ಮನುಚಿತಮಲ್ತು ಮನ್ಮಥನಿರಲ್ ರತಿ ವಿಷ್ಣುವಿರಲ್ ಸರೋಜವಾ
ಸಿನಿ ದಿವಿಜಾಧಿನಾಯಕನಿರಲ್ ಶಚಿ ಪೇಟ್ ಪೆಱಗೊರ್ಗೆಲ್ದು ಸಾರ್ಗುಮೇ ೫೨

ವ॥ ಅಂತು ಮಂತ್ರಿಗಳ್ವೆರಸು ನಿರ್ನಿಕ್ತಕಾರ್ಯನಾಗಿ ಮಱುದಿವಸಮವಸರಂಗೊಟ್ಟು ಗಜಕರ್ಣದೂತನ ಮುಖಾವಲೋಕನಂ ಮಾಡಿ

ಕಂ॥ ಶ್ರೀಪತಿ ಜನಪತಿಮದ್ಭಗಿ
ನೀಪುತ್ರಂ ಪುಂಡರೀಕಿಣೀಶ್ವರನಖಿಲ
ದ್ವೀಪಾಂತವರ್ತಿಕೀರ್ತಿ ಮ
ಹಾಪದ್ಮಂ ಭಾನುಮತಿಗೆ ವರನೇತೆಱದಿಂ ೫೩

ವ॥ ಅದಱಿಂದಮಲಭ್ಯಮಾನಮಪ್ಪಕನ್ಯಕಾವೃತ್ತಕಂ ಮಾಣ್ಗೆ ಮತ್ತ ಮೊಂದುಪಕ್ಷಮುಂಟದಾವುದೆಂದೊಡೆ

ಚಂ॥ ಬಳೆವನುರಾಗಮಂ ಬಯಸಿ ಕೊಳ್ಕೊಡೆಗಟ್ಟಿದ ತನ್ನ ಮಾತ ನಾ
ಮಿಳಿಪುದು ಪೆರ್ಮೆಯಲ್ಲದೆರ್ದೆವತ್ತುಗೆತೆತ್ತುಗೆವೆತ್ತ ಮಕ್ಕಳೊಳ್
ಗೆಳೆಯಳನಾಕೆಯಂ ಕಿಱಿಯಳಂ ಮದಲೇಖೆಯನುನ್ಮಯೂಖೆಯಂ
ವಿಳಸಿತ ಕಾಮಕಲ್ಪತರುಶಾಖೆಯನಾ ವಿಭುಗೀವೆವಟ್ಕಿಱಿಂ ೫೪

ವ॥ ಎಂದು ನಿಜಪುತ್ರಿಯಂ ಧಾತ್ರೀತನೂಜೆಯಪ್ಪ ಮದಲೇಖೆಯಂ ತೋಱಿ

ಕಂ॥ ಈಕೆ ಮದಲೇಖೆ ತಾನವ
ಳೋಕಿಸೆ ಗಜಕರ್ಣನಿದಱಿನೀಯನುಬಂಧಂ
ಲೋಕದೊಳನುಕ್ತಸಿದ್ಧಮ
ದೇಕೆಡೆಗಟ್ಟಲ್ತು ತಣಿಪುಗಾಪ್ತಾಳಿಗಳಂ ೫೫

ವ॥ ಎಂಬುದುಂ ದೂತಂ ವೀತಾಕೂತನಾಗಿ ಮನಮೊಲ್ದು

ಕಂ॥ ದೇವಭವತ್ಪಟ್ಟಮಹಾ
ದೇವಿಯ ಸುತೆ ಭಾನುಮತಿಯಧೀಶನ ಹೃದಯೇಂ
ದೀವರಮನಲರ್ಚುಗುಮಿವ
ಳೇವಳೊ ನೀರಡಸಿದಂಗೆ ತುಪ್ಪಂ ಮರ್ದೇ ೫೬

ಚಂ॥ ಲಳಿತವಿಳಾಸವಿಭ್ರಮಕಳಾವತಿಯರ್ ತನಗಿಲ್ಲದೆಮ್ಮ ಭೂ
ತಳಪತಿಬೇಡಿಯಟ್ಟಿದನೆ ಕೂಸನನೇಕನೃಪಾಲರಂ ಭುಜಾ
ಬಳದಿನದಿರ್ಪಿ ತತ್ಕುಲಧನಂ ಬೆರಸೀಟ್ಟುಕಿಗೊಂಡ ಕನ್ಯಕಾ
ಕುಳದೊಳಗಾರ ಪೋಲ್ವೆಯವಳೀಕೆಯನೇಕೆಯೊ ಪಾಟದೋಱುವಿರ್ ೫೭

ಕಂ॥ ಮತ್ತಿನ ಬಿಱುನುಡಿಗಳ ಹುಸಿ
ಸುತ್ತಿನೊಳೇನವಳನೀವೊಡೀವುದು ಕುಡೆವೆಂ
ಬುತ್ತರಮನೆ ಕುಡುವುದು ಮೇ
ಲುತ್ತರದೊಳ್ ಕಾಣಲಕ್ಕುಮಲ್ಲಿಯ ಫಳಮಂ ೫೮

ಎಳಸಿ ಮನಮೊಲ್ದನಪ್ಪೊಡೆ
ಬಳವದ್ಭೂಭುಜರ ವಸ್ತು ವಾಹನ ಕನ್ಯಾ
ಕುಳಮೆಮ್ಮರಸನ ನಡುಮನೆ
ಯೊಳಗಿರ್ದಪುವೆಂದು ಬಗೆಯಿಮೊಲ್ಲದೊಡಱಿಯೆಂ ೫೯

ಮ॥ ಇದನಿನ್ನೊಂದನೆ ನಂಬು ಕನ್ನಿಕೆಯನೆನ್ನಾಳ್ದಂಗೆ ನೀನೀಯಲೊ
ಲ್ಲದೆ ಪೇೞ್ದೈ ನೃಪ ನೀಂ ಕುಮಂತ್ರಿಗಳ ಮಾತಂ ಕೇಳ್ದು ಬೇಳಾಗಿ ನಾ
ಳೆ ಧುರಂತಾಂತಕಕೋಪನೆತ್ತಿ ಗಜಕರ್ಣಂ ಬಂದೊಡಾಂತಿಲ್ಲಿದ
ರ್ಪದಿನಡ್ಡೈಸುವ ಕೆಯ್ದುಗೆಯ್ವ ಕಡುಕೆಯ್ದೊಟ್ಟಯ್ಯ ಕಟ್ಟಾಳ್ಗಳಾರ್ ೬೦

ಕಂ॥ ಇನ್ನೊಲ್ದ ಕನ್ನೆಯೊರ್ವಳ
ನೆನ್ನಾಳ್ದಂ ಕೊಳ್ವನಲ್ತು ನಿನ್ನೀ ಪೊಱಲಂ
ನಿನ್ನೀ ರಾಜ್ಯದ ಸಿರಿಯಂ
ನಿನ್ನೀ ಕುಲಧನಮನೊಡನೆ ಬಱಿವಱಿಗೊಳ್ವಂ ೬೧

ವ॥ ಎಂದತಿಕ್ರಮಿಸಿ ವಿಕ್ರಮದಿನಡರೆ ನುಡಿದ ದೂತನ ದುರುಕ್ತಿಗೆ ಮಹೀಶ ನೀಷದುದ್ಗತ ಭೃಕುಟಿಯುಂ ಕಿಂಚಿದಾರಕ್ತಮುಕ್ತನೇತ್ರನುಂ ಸ್ವಲ್ಪನಿಷ್ಪಂದಿತಾಧರನುಮಾಗಿ ನುಡಿಯಲೊಡರಿಸುವುದುಂ ಅದಂ ಕಂಡು ಮನಮಱಿದು ಮಂತ್ರಿಗಳ್ ಮಾರ್ಕೊಂಡು

ಕಂ॥ ಏಂ ಗಳ ಬಾಯುಂಟೆಂದು ಕ
ರಂ ಗಳಪುವೆ ಬಱಿದೆ ನಿನ್ನ ಪವಣಱಿಯದೆ ವೃ
ದ್ಧಂಗೆ ಖಳಂಗೀವುದೆ ಲಲಿ
ತಾಂಗಿಯನೀವಂತೆ ರಾಹುವಿಂಗೆಳವೆಱಿಯಂ ೬೨

ತಾವರೆಯಲ್ಲದೆ ಸಿರಿಗಂ
ತಾವಲೆ ನೆಲೆಯಕ್ಕುಮೇ ಮಹಾಪದ್ಮನೆ ಲೀ
ಲಾವತಿಗೆ ಭಾನುಮತಿಗೆ ಮ
ನೋವಲ್ಲಭನಕ್ಕುಮಕ್ಕುಮೇ ನಿನ್ನರಸಂ ೬೩

ಹೃದ್ಯಗುಣನಿಳಯನಾ ವಿಭು
ಸದೃಶನಿರೆ ಕನ್ನೆ ನಿನ್ನ ಪತಿಗೆಳಸುವಳೇ
ಪ್ರದ್ಯೋತದ್ಯುತಿಗಲ್ಲದೆ
ಖದ್ಯೋತದ್ಯುತಿಗೆ ನಳಿನಿ ಮೊಗಮಿತ್ತಪಳೇ ೬೪

ವ॥ ಮತ್ತಮಿಾ ಭಾನುಮತಿಯನಾ ತಮೋಮೂರ್ತಿಯನುವರ್ತನಕ್ಕಮಿಾ ಹರಿಣಲೋಚನೆಯನಾ ಚಮೂರಾತಿರೌದ್ರಮದನಮದೋತ್ಸವಕ್ಕಮಿಾ ಕುಮುದಗಂಧಿನಿಯನಾ ಖರದಂಡಸಖನ ಸುಖಸಂಗಮಕ್ಕಮಿಾ ಚಂಪಕವಿಕಾಸನಾಸಿಕೆಯನಾ ಮಧುಪವೃತ್ತಮನೋವೃತ್ತಿಗಮಿಾ ಮಯೂರಕಚಭಾರವತಿಯನಾ ದ್ವಿಜಿಹ್ವವಲ್ಲಭನ ನಲ್ಲಳುತನಕ್ಕಮಿಾ ಮರಾಳಗಾಮಿನಿಯುಮನಾ ಘನವಿಳಾಸನಭಿಲಾಷಾಪೋಷಣಕ್ಕಮಿಾ ಮದನಚಾಪಲತೆಯನಾ ವಿರೂಪಾಕ್ಷನೀಕ್ಷಣಕ್ಕಮಿಾ ರಾಜಕಂಠೀರವಾರ್ಹಕೇಸರಿಣಿಯನಾ ಗಜಕರ್ಣನಭ್ಯರ್ಣಕೇಳಿಗಂ ಮೇಳಿಸುವದಘಟಮಾನಮನ್ಯೋನ್ಯವಿರುದ್ಧಮೆಂಬುದನಱಿಯದಾಗ್ರಹಿಪ ನಿನ್ನ ನಿರ್ಬುದ್ಧಿತನಮೇ ನಿನ್ನರಸನ ವಿವೇಕವಿಕಳತೆಯನಱಿಪಿದಪ್ಪುದೆಂಬಂತೆ

ಕಂ॥ ನಿಜದಿಂ ಮದಮಳಿನಂ ಧೃತ
ರಜನುರುಮಾತಂಗಧರ್ಮನಾಱಿಡಿದಾಣಂ
ಸಜಡಾತ್ಮಚರಿತನೆನಿಸುವ
ಗಜಕರ್ಣಂ ಹಸ್ತಿಮೂರ್ಖನೇನೆತ್ತಱಿವಂ ೬೫

ವ॥ ಅದಲ್ಲದೆಯುಂ

ಮ॥ ಪಿರಿದುಂ ಬೀರಮನಾಡಿ ಗರ್ಜಿಸುವ ನಿನ್ನೀ ಗಂಡವಾತಿಂಗೆ ಕಾ
ತರನುಂ ಬೆರ್ಚಿಸು ಬೆರ್ಚನಪ್ರತಿಮಶೌರ್ಯಾಟೋಪನೀ ಭೂಪನೇಂ
ಭರದಿಂದಂ ಬಿಱುಗಾಳಿ ಬೀಸೆ ಮರನಂತಲ್ಲಾಡುಗುಂ ಮೇರುಭೂ
ಧರಮಲ್ಲಾಡುಗುಮೇ ಮಹಾಪ್ರಳಯವಾತಾಘಾತನಿಷ್ಕಂಪಿತಂ ೬೬

ಉ॥ ಬಂದಪನೆತ್ತಿ ವಿಕ್ರಮದಿನೀಱ್ಕುಳಿಗೊಂಡಪನಂತೆ ಕೂಸ ನಿ
ನ್ನಿಂದಮಗೊಳ್ಳೆಯುಂ ಬಿಡುವೆ ಪೇೞ್ ತನಗಿಕ್ಕಿದ ಕೋಂಟೆ ತಾಂ ಜಡಂ
ಬಂದು ನಿಜೇಶನಾತಕೂಱಿಯಂತಿಱಿವಂ ಗಳಪಲ್ಕೆಬೇಡ ಪೋ
ಗೆಂದುಜದೊತ್ತಿ ಚಪ್ಪರಿಸೆ ಪೋದನವಂ ಪಗೆ ಸಾಱಿ ಕೋಪದಿಂ ೬೭

ವ॥ ಅಂತು ಪೋಗಿ ತತ್ಪ್ರಪಂಚಮೆಲ್ಲಮಂ ಗಜಕರ್ಣಂಗೆ ಕರ್ಣಗೋಚರಂ ಮಾಱ್ಪುದುಮುದೀರ್ಣಕೋಪಾಟೋಪನಾಗಿ

ಉ॥ ಮನ್ನಿಸದೆನ್ನ ಬಾಹುಬಲಮಂ ಕುಲಮಂ ಚಲಮಂ ಸಗರ್ವದಿಂ
ಕನ್ನೆಯನೀಯದಿರ್ದ ನೃಪನಂ ಲಪನಂ ಗ್ನಪನಂಕೊಳಲ್ಕೆ ತೂ
ಳ್ದೆನ್ನ ತೊಡರ್ಪುದೋಱದಿನಿಸಂ ಮುನಿಸಂ ಮುನಿಸಾಂಪಪದಂತೆ ಬಿ
ಟ್ಟೆನ್ನಿರೆ ಕೀರ್ತಿಲಕ್ಷ್ಮಿ ಬಿಡುಗುಂ ಕಿಡುಗುಂ ಕಡುಪೆಂಪಿನೆಟ್ಟರಂ ೬೮

ವ॥ ಎಂದಾಡಿ ಸಮಗ್ರಸಾಮಗ್ರಿವೆರಸು ತಳರ್ದು

ಮ॥ ಕರಿವೃಂದಂ ಗಿರಿವೃಂದಮಾಗಿರೆ ತುರಂಗಂಗಳ್ ತರಂಗಂಗಳಾ
ಗಿರೆ ನಕ್ರಾರಥಚಕ್ರಮಾಗಿರೆ ಪಯೋಮತ್ಸ್ಯಾಳಿ ಭೃತ್ಯಾಳಿಯಾ
ಗಿರೆ ತಾಂ ವಾರಿಧಿ ಮೇರೆದಪ್ಪಿ ಕವಿವಂತೆಟ್ಟಿಂದು ಭದ್ರಾವತೀ
ಪುರಮಂ ಮುತ್ತಿದನತ್ಯುದಗ್ರಚತುರಂಗಾಭೀಳಕೋಳಾಹಳಂ ೬೯

ವ॥ ಅನ್ನೆಗಂ ತನ್ನ ಬರವನಱಿದು ಮುನ್ನಮ ಜಳಖಾತಿಕಾವಳಯಮನಳುಂಬಮಾಗೆ ತಿಂಬಿಸಿಯುಮತಿಸ್ಥೂಳತರ ಜಾಳಂಗಳಿಂ ಮೇಳೆಯಮನೋಳಿಗೊಳಿಸಿಯುಂ ವಿಷಮವಿಷವಿಟಂಕದಂಷ್ಟ್ರಾಂಕುರದಂತಗುರ್ವಿಸುವ ವಿಷಲತಾಗುಲ್ಮಕಂಟಕಂಗಳಂ ಗಾಡಿಯಿನಳವಡಿಸಿಯುಂ ಪರಪತಾಕಿನೀಸುಭಟಜನಜಾನು ಭಂಜನಂಗಳಾಗೆ ದಸಿಗಳಂ ಬಸಿದು ನೆಡಿಸಿಯುಂ ಚರಣಸಂಚರಣ ವರ್ಜನೀಯಂಗಳಾಗೆ ವಜ್ರಸೂಚಿಗಳನುಜ್ಜೃಂಭಿತಂ ಗಳಾಗಿಸಿಯುಂ ಮದಮತಂಗಜಾಂಘ್ರಿ ತಳಮನೆಳಱಿಸುವ ಶೃಂಗಾಟಕಂಗಳಂ ಸಂಗಳಿಸಿಯುಂ ಪ್ರಳಯಶಿಖಿಯ ದಳ್ಳುರಿಯು ಬಳ್ಳಿಯಂತೆ ಮಿಳ್ಳಿಸುವ ಮಸಕದುರಿಯೆಣ್ಣೆಯುಂ ಪಣ್ಣಿಸಿಯುಂ ಅರಿಬಳಪ್ರಹರಣನಿವಾರಂಗಳಪ್ಪಾಳ್ವೇಜೆ ತುಱುಗಲಂ ತುಱುಂಬುಗೊಳಿಸಿಯುಂ ಲಗ್ಗೆಯೊಳ್ ಮೊಗ್ಗರದ ಗಿಗ್ಗಿರಿಗೆ ನಡೆವಂದರೆಂಬಿನವನಿಱುಂಕೆ ತೆಗೆವಂಕುಶಂಗಳನಳಂಕೆಗೊಳಿಸಿಯುಂ ಬೆಂಗುಂಡುಗೊಂಡ ಗಂಡಗತ್ತರಿಯು ಸಂಸರ್ಗದರ್ಗಳಮನಮರೆ ಸಾರ್ಚಿಯುಂ ಕುಳಿಸಿವಿಳಸಿತತಾಂಭೋದಮಂ ದುರ್ಗಮಂ ದುರ್ಘಾಟಮಪ್ಪಂತುಗೋಪುರಾವ ಘಾಟನಮಂ ಮಾಡಿಸಿಯುಂ ಪರಬಳದ ಪಿರಿಯ ಸಿರಿಯನಱಿದಳವಿಗೞಿಯೆ ಕಟ್ಟನಿಟ್ಟಳಂ ಮಾಡಿಸಿಯುಂ ಅಲ್ಲಲ್ಲಿ ಜಾವಮುಕ್ಕಡರವಟಿಗೆ ತಳವಱಿಕೆಯಮೆಕ್ಕೆಕ್ಕೆಯೊಳಂ ಠಾಣಾಂತರಮಂ ನಿರವಿಸೆಯುಂ ಅಂತು ಕೆಯ್ಗೆಯ್ದಿದಾಗಳ್

ಕಂ॥ ವಿಳಸಿತವಿಯತ್ತಳಂ ಕೊ
ತ್ತಳಮಧಟರ ಗಂಡಗುಂಡಕಟ್ಟಳೆ ಮುಗಿಲ
ಟ್ಟಳೆ ಪಗೆವರಾಳ್ವಱಿ ಬೀ
ಳ್ವಳೆ ಬಗೆದಾಳ್ವಱಿ ಮೆಱೆದುವರಿವಿಟಂಕ ವಂಕಂ ೭೦

ವ॥ ಅದಲ್ಲದೆಯುಂ

ಕಂ॥ ಕೂಡೆ ವಿಗುರ್ವಿಸಿದುವು ನಿಮಿ
ರ್ದಾಡುವ ಪಟಿಯಿಗೆಗಳಹಿತಬಲಮಂ ನುಂಗ
ಲ್ವೇಡಿ ಪೊಟಿಲೆಂಬ ರಕ್ಕಸಿ
ನೀಡುವ ನಾಲಗೆಗಳೆನಿಸಿ ಲೋಹಿತರುಚಿಗಳ್ ೭೧

ವ॥ ಅಂತು

ಮ॥ ಇದನಾಟಂದಪನೆಂದು ಚಿಂತಿಸುವ ಚಿತ್ತಂ ಪೊತ್ತುಗುಂ ಮಾತನಾ
ಡಿದ ಬಾಯ್ ಬತ್ತುಗುಮೇಱ ನೋಡಿದೆಮೆ ಸೀಗುಂ ಸಾರ್ದ ಮೆಯ್ ಬೇಗುಮೆಂ
ಬುದನೆಂಬೂಷ್ಮೆಯನಾಳ್ದಗುರ್ವಿಸುವ ಕೋಟಾಚಕ್ರದೊಳ್ ನಿಂದನೋ
ವದೆ ಕಾದಲ್ ನೃಪ ನಿನ್ನ ಮಚ್ಚಿನ ಮನಃಪ್ರೇಮಾತುಳಂ ಮಾತುಳಂ ೭೨

ಕಂ॥ ನಿಂದೊಡೆ ಕರಿಗೊಳ್ಗುಂ ರಣ
ಮಿಂದೀಗಳೆ ಕೊಳ್ವಮೆಂದು ಬೊಬಿಱಿದಾರ್ದೆ
ಯ್ತಂದು ಬಳಸಿದುದು ಕೋಂಟೆಯ
ನಂದರಿಬಳಮೊಡನೆಮೊಟಿಗೆ ಲಗ್ಗೆಯ ಪಱೆಗಳ್ ೭೩

ವ॥ ಆಗಳೊಳಗಣಿಂದಂ

ಮ॥ ಕವಿದಿಸುವಂಬು ಪಾರ್ದಿಸುವ ಕಕ್ಕಡೆ ಕುತ್ತುವ ಕೊಂತವಿಕ್ಕುವೊ
ಳ್ಗವಣೆಯ ಗುಂಡು ತೂಳ್ದಿಡುವ ಡೆಂಕಣಿ ಪೊಯ್ವುರಿಯೆಣ್ಣೆ ಕಾಸಿ ಸೂ
ಸುವ ಮಟಿಲೆಂಬಿವೆತ್ತಲುಮಗುರ್ವಿಸೆ ಪೋಗದೆ ಪತ್ತಿ ಲಗ್ಗೆಮಾ
ಡುವ ಭಟಕೋಟಿ ಕೋಟಲೆಯನಾಳ್ದಿರೆ ನೀಳ್ದುದು ಕೋಂಟೆಗಾಳಗಂ ೭೪

ಚಂ॥ ಪೆಣದ ಬಣಂಬೆ ಕೊತ್ತಳದೊಳತ್ತಳಗಂ ತನಿಗಂಡದಿಂಡೆ ಸು
ತ್ತಣ ಪೊಱಕೋಂಟೆಯಟ್ಟಳೆಯೊಳಿಟ್ಟಳಮಾಡುವ ಬೀರರಟ್ಟೆ ಸಂ
ದಣಿಸಿದ ವಂಕದಾರದೊಳಪಾರ ಮಸೃಗ್ಜಲದುಗ್ರಪೂರಪೂ
ರಣ ಮಗುಱಂತರಾಳದೊಳಗುರ್ವೆನೆ ಸತ್ತುದು ಶತ್ರುಸಾಧನಂ ೭೫

ಕಂ॥ ಅವಲವಲೆನೆ ಮರ್ಗುವ ಮು
ಗ್ಗುವ ತಗ್ಗುವ ನುಗ್ಗುವಾತ್ಮತಂತ್ರದ ಕೇಡಿಂ
ಗವನಳ್ಕದೆ ಕಾದಿಸುತಿರೆ
ಜವವಳಿದುದು ಪಗಲುಮಿರುಳುಮೆರಡುಂ ತಂತ್ರಂ ೭೬

ವ॥ ಅಂತು ನಿಚ್ಚಗಾಳೆಗದೊಳುಬ್ಬೆಗಂಬಟ್ಟು ಸುರ್ವಿಯಱಿವ ಪರಿಜನಂಗಳುಂ ಸರ್ವನಿರೋಧದಿಂದುಬ್ಬೆಗಂಬಡುವ ಪುರಜನಂಗಳುಂ ತನ್ನ ಮನಮನನುವಿಸೆ

ಚಂ॥ ಪಶು ಶಿಶು ಸಾಮಜಾಶ್ವ ವನಿತಾದಿಗಳುಮ್ಮಳಿಪಂತು ಕೋಂಟೆಯೊಳ್
ಪ್ರಶಮಿತಶೌರ್ಯನಾಗಿ ಮಱೆಗೊಂಡುಱದಿರ್ಪುದು ಕಷ್ಟಮಾ ಮಹಾ
ವಿಶಸನಕೇಳಿಯಂ ಮೆಱೆದು ತೂಳ್ದುವೆನೆಂದು ಪೊದಟ್ದು ಪೂಣ್ದು ಕ
ರ್ಕಶಭುಜವಿಕ್ರಮಂ ಪೊಱಮಡಲ್ ಬಗೆದಂ ಜಯವರ್ಮಭೂಭುಜಂ ೭೭

ವ॥ ಆಗಳಾ ಮಂತ್ರಿಗಳ್ ಕಂಡು ಮಾರ್ಕೊಂಡು

ಮ॥ ಅಸಮಾನೋಗ್ರಸಮಗ್ರಸೈನ್ಯಬಳನಪ್ಪೀತಂಗೆ ನಾಮೋಡಿ ಘ
ರ್ಜಿಸೆ ಮೇಲ್ವಾಯಲೊಡರ್ಚುವೀ ಶರಭಶೌರ್ಯಾದನ್ವಯಶ್ರೇಯಮು

ಬ್ಬಸಮಾಯ್ತಿನ್ನವನಂ ಕಟಿಲ್ಬು ನಡೆ ನೀಂ ಪೇಳ್ದಿಟ್ಟು ಬಂದಪ್ಪನು
ಬ್ಬಸದಿಂ ನಿನ್ನಳಿಯಂ ಪ್ರತಾಪನಿಳಯಂ ಶ್ರೀರಾಜಕಂಠೀರವಂ ೭೮

ಮದವತ್ಸಿಂಹದಿನಪ್ಪ ತನ್ನ ಕಡುಗೇಡಂ ಕಾಡ ಸೊರ್ಕಾನೆ ನೋ
ಡದೆ ತದ್ಗೋಚರಮಪ್ಪರಣ್ಯನಳಿನೀಕಾಸಾರಮಂ ಸಾರ್ವವೋಲ್
ಕದಡಲ್ ಸಾರ್ದವನಿಂತುಟೀತನಳವೀದರ್ಪಕ್ಕೆ ತಕ್ಕಂತುಟಂ
ಕದನಕ್ಷೋಣಿಯೊಳೆಯ್ದುಗಾ ನೃಪಭುಜಪ್ರೋತ್ಖಾತಶಾತಾಸಿಯಿಂ ೭೯

ವ॥ ಎಂದು ಬಗೆಗೆವರೆ ನುಡಿವುದುಮದನೊಡಂಬಟ್ಟು

ಶಿಖರಿಣೀ॥ ಬಲಂಗೊಂಡಂ ತೊಂಡಂಬಿಡದೆ ಗಜಕರ್ಣಾವನಿಭುಜಂ
ಬಲಂ ಪೋಗಂ ಜೇಗಂ ಬಗವೊಡೆಮಗಿನ್ನಾರೊ ಶರಣೆಂ
ಬಲೋದ್ವೃತ್ತಂಪುತ್ರಂಗೆಸಗುಗೆ ಮಹಾಪದ್ಮನೃಪನುಂ
ಬಲಕ್ಷಾಮಂ ಮಾಮಂ ನಿಮಗೆ ಮೊಱೆವೇಳ್ದಿಟ್ಟಿದನಿದಂ ೮೦

ಕಂ॥ ಆ ಸತಿವಸನಾ ಧರೆಗೊಸೆ
ದೀ ಸಮಯದೊಳೆಮ್ಮನಧಿಪ ಕಾವುದು ಶೌರ್ಯೋ
ದ್ಭಾಸಿಗಳ ನಿಮ್ಮ ದೊರೆಯರ
ಮೈಸಿರಿ ಪರಹಿತಚರಿತ್ರಸೂತ್ರಿತಮಲ್ತೇ ೮೧

ಉ॥ ಎಂದು ಸಮಸ್ತ ಕಾರ್ಯಭರಮಂ ದಮನಂ ಸುಮನಂ ಜಗಜ್ಜನಾ
ನಂದಕನಂ ಪ್ರಶಸ್ತಯಶನಂ ರಿಪುವಂಶವಿನಾಶನಂ ದಯಾ
ನಂದಕಶಸ್ತ್ರಭೂಷಿತವಿಶೇಷ ಕರಾಳಕರಾಗ್ರನಂ ನರೇಂ
ದ್ರೇಂದುವನೆಯ್ದೆ ಕೇಳಿಸಿದಪಂ ಮಿಗೆ ನಾಬ್ರಿಭುವಂಶಮೇರುವಂ ೮೨

ಗದ್ಯಂ

ಇದು ಸಮಸ್ತ ಭುವನಜನಸಂಸ್ತುತ ಜಿನಾಗಮ ಕುಮುದ್ವತೀ ಚಾರುಚಂದ್ರಾಯಮಾಣ ಮಾನಿತ ಶ್ರೀಮದುಭಯಕವಿ ಕಮಳಗರ್ಭ ಮುನಿಚಂದ್ರಪಂಡಿತದೇವ ಸುವ್ಯಕ್ತಸೂಕ್ತಿ ಚಂದ್ರಿಕಾಪಾನ ಪರಿಪುಷ್ಟಮಾನಸ ಮರಾಳಂ ಗುಣವರ್ಮ ನಿರ್ಮಿತಮಪ್ಪ ಪುಷ್ಪದಂತ ಪುರಾಣದೊಳ್ ದೂತವರ್ಣನಂ ಸಪ್ತಮಾಶ್ವಾಸಂ

ಅಷ್ಟಮಾಶ್ವಾಸಂ

ಕಂ॥ ಶ್ರೀಜಯಲಕ್ಷ್ಮೀವದನಸ
ರೋಜಾರ್ಕಂ ದೂತವಚನಮೆರ್ದೆವುಗೆ ನುಡಿದಂ
ರಾಜಶಿಖಾಮಣಿ ವಿಬುಧಸ
ಮಾಜನುತಂ ಪ್ರಭು ಗುಣಾಬ್ಜಿನೀಕಳಹಂಸಂ ೧

ಅಮರ್ದಿನ ಮಱೆಯುಂ ಸಿಡಿಲುಂ
ನಿಮಿರ್ದುದು ಪೆಡೆವರಲ ಬೆಳಗುಮುರಗನ ವಿಷಮುಂ
ನಿಮಿರ್ದುದೆನೆ ರಾಗಖೇದಮ
ನೆಮಗಿತ್ತುದು ನಿನ್ನ ನುಡಿಯ ಮೊದಲುಂ ತುದಿಯುಂ ೨

ವ॥ ಆದೊಡೇನಾದುದು

ಚಂ॥ ಪಲರನದಿರ್ಪಿದುರ್ಕುಮೆಸೆಗುಂ ತನಗೀಯದೆಯೆಂದು ಬಂದು ದೋ
ರ್ವಲದಿನವುಂಕಿಬಿಟ್ಟ ಗಜಕರ್ಣನ[ನೇಂ ಗ]ಜಕರ್ಣದಂತೆ ಸಂ
ಚಲತೆಯೊಳೊಂದೆ ತೂಳ್ದಿ ಜಯವರ್ಮನೃಪಂಗೆ ಜಯಪ್ರಮೋದಮಂ
ಚಲಮುಮನುಂಟುಮಾಡದೊಡೆ ಮತ್ಕುಲಕೀರ್ತಿ ಕಿಲುಂಬುಗೊಳ್ಳದೇ ೩

ಶರಣಾಯಾತರ್ಕಳಂ ಕಾವುದುಮೆರೆದವರ್ಗಾರ್ತಿಯೀವುದುಂ ಕ್ಷತ್ರಧರ್ಮಂ
ನರಪಂಗೆಂತೆಂದೊಡಂ ಲೋಗನೆ ಗಡ ಜನನೀಭ್ರಾತೃವಾ ಭೂಪನೀಗಳ್
ಪರಭೂಪಂ ಮುತ್ತೆ ಪೇಱ್ದಟ್ಟಿದನೆನಗೆನೆ ಮುಳ್ಗೀಳಲಾಳೋಚಿಸುತ್ತಾ
ನಿರಲುಂಟೇಂ ಪಂಥವಿನ್ನಾರದೊ ಪರಿಭವವೇಕಿರ್ಪೆ ನಾನಿಂದೆ ಬರ್ಪೆಂ ೪

ವ॥ ಇಂತೆಂದು ತಱಿಸಂದು ಪೂಣ್ದು ತತ್ಸಮಯದೊಳ್ ಜಯಪ್ರಯಾಣಮಂ ಪಡೆಗೆ ಪಡೆವಳನಿಂ ಸಾಱಿಸಿ (ವಿಸ)ರ್ಜಿತರಾಜಲೋಕನಾಸ್ಥಾನಮಂಟಪದಿನೆೞ್ದು ಮಜ್ಜನಭೋಜನಾದ್ಯುಚಿತದಿಂದಂ

ಕಂ॥ ದಮನನನಧ್ವಶ್ರಮಸಂ
ಕ್ರಮನನನಾತ್ಮೀಯ ಮಾತುಳಾದೇಶಕೃತಾ

ಗಮನನನಾಹಿತಚಿಂತಾ
ಸುಮನನನಾಜಿಸಿದನರಸನಂದಿನ ದಿನದೊಳ್ ೫

ವ॥ ಅನ್ನೆಗಂ

ಚಂ॥ ಅಗಲೆ ನಿಜೇಷ್ಟಚಕ್ರಮೆಸಕಂಗಿಡೆ ಮಂಡಲದೇೞ್ಗೆ ಚಂಡಹೇ
ತಿಗಳ ಪೊಡರ್ಪುಕುಂದೆ ಕಮಲಂ ಕಿಡಲಂಬರಮಂ ಬಿಸುಟ್ಟು ಶ
ತ್ರುಗಳದಿರ್ದೋಡುಗುಂ ನೃಪತಿಯೆತ್ತಿದೊಡೀ ತೆಱದಿಂದಮೆಂದು ಧಾ
ತ್ರಿಗೆ ಹರಿ ಮುನ್ನುದಾಹರಿಸಿ ತೋರ್ಪವೊಲೆಯ್ದಿದನಸ್ತಶೈಲಮಂ ೬

ವ॥ ಅಂತು ನೇಸರ್ಪಡಲೊಡಂ

ಚಂ॥ ನೆಗೞೆ ದಿನಾವಸಾನಪಟಹಧ್ವನಿ ರಂಜಿಸೆ ಸಂಜೆಗೆಂಪು ಸ
ಯ್ತಗಲೆ ರಥಾಂಗಯುಗ್ಮತತಿ ಪೞ್ಕಿಗೆ ಸಾರೆ ವಿಹಂಗಜಾತಿ ಕಾ
ಡಿಗೆವೊಗರೇೞೆ ಮೂಡದೆಸೆ ಪುಟ್ಟೆ ವಿಟೀವಿಟಸಂಧಿವಿಗ್ರಹಂ
ಮುಗಿಯೆ ಸರೋಜರಾಜಿ ದಳವೇೞೆ ಖಳರ್ ಮೊಗಸಿತ್ತು ಮುನ್ನಿರುಳ್ ೭

ವ॥ ಆ ಸಮಯದೊಳ್

ಉ॥ ಮಂಗಳತೂರ್ಯನಾದವಭಿರಂಜಿಸೆ ಮಂಗಳದೀಪಪಾತ್ರಹ
ಸ್ತಂಗಳ ಕಾಮಿನೀತತಿ ನಿವಾಳಿಸೆ ಮಂಗಳಪಾಠಕೋಕ್ತಿ ಚಿ
ತ್ತಂಗೊಳೆ ಮಂಗಳಾರ್ಹದಿನದಂದಪರಾಹ್ನಿಕ[ಸಂತತ]ಕ್ರಿಯಾ
ಮಂಗಳವಾಗೆ ಮಂಗಳಪರಂಪರೆವೆತ್ತೆಸೆದಂ ಮಹೀಭುಜಂ ೮

ವ॥ ತದನಂತರಂ

ಮಸ್ರ॥ ಗಿರಿಗಳ್ ನೀಳಾದ್ರಿಯೆಂಬಂತಿರೆ ನಿಖಿಳನದೀರಾಜಿ ಕಾಳಿಂದಿಯೆಂಬಂ
ತಿರೆ ವೃಕ್ಷಂಗಳ್ ತಮಾಳಾಕೃತಿಯಿನಿರೆ ಮೃಗಶ್ರೇಣಿ ಋಕ್ಷಂಗಳೆಂಬಂ
ತಿರೆ ನಾನಾಪಕ್ಷಿಗಳ್ ಕೋಗಿಲೆವೊಲಿರೆ ನಭಂ ಕಾರ್ಮುಗಿಲ್ ಮುಚ್ಚಿದಂತಾ
ಗಿರೆ ಭೂ ನೀಳಸ್ಥಳೀಕುಟ್ಟಿಮಮೆನಿಸಿರೆ ಪರ್ವಿತ್ತು ಘೋರಾಂಧಕಾರಂ ೯

ವ॥ ಆಗಳ್

ಕಂ॥ ಜನಪನ ಜಯಪ್ರಶಸ್ತಿಯ
ನನಿಮಿಷಪಥಮೆಂಬ ನೀಳಪಟದೊಳ್ ರಾತ್ರ್ಯಂ

ಗನೆ ಬರೆದ ಬರೆಪದಕ್ಕರ
ಮೆನೆ ತೊಳಗಿದುದು ವಿದಿತ ತಾರಾನಿಕರಂ ೧೦

ವ॥ ಮತ್ತಂ

ಕಂ॥ ಸಂಕಳಿತಬಹುಳತಾರಾ
ಸಂಕುಳದಿಂ ಪೋಲ್ತುದಭ್ರಮಾವೃತತಿಮಿರಂ
ತೇಂಕುವ ಮಲ್ಲೀಮುಕುಳದ
ಸಂಕುಳಮಂ ತಳೆದು ನಿಂದ ಜಗುನೆಯ ಮಡುವಂ ೧೧

ವ॥ ಅವಱೊಡನೆ ಬೆಳಗನೊಳಕೊಂಡು ಮನೆಮನೆ ದಪ್ಪದೊಪ್ಪಿ

ಕಂ॥ ಮುನಿದು ತವೆ ನುಂಗಿ ತಿಮಿರಮ
ನಿನಿತಟ್ಕಿಸಲಾಱದಡರೆ ಕಾಱದಪುವಿವೆಂ
ಬಿನಮೆಸೆದುವು ಸೊಡರ್ಗಳ್ ಜಲ
ಕೆನೆ ನಿಜಚೂಳಿಕೆಯಿನೊಗೆವ ಕಾಳಿಕೆಯಿಂದಂ ೧೨

ವ॥ ಅನಂತರಮುದಯಸಮಯದರುಣಕಿರಣಪ್ರವಾಳದಿಂದಮಿಂದ್ರದಿಗ್ವಧೂಶಿಖಂಡಮಂಡನವಿಳಾಸನಮಂ ತಳೆದು

ಶಿಖರಿಣೀ॥ ಕಳಾರುಂದ್ರಂ ಚಂದ್ರಂ ಬೆಳಗೆ ನಭಮಂ ಕಾಂತಿವಿಸರಂ
ಗಳಿಂ ನೆಯ್ದಿಲ್ಗೆಯ್ದಲ್ ಮೊಗಸಿ ನಳಿನೀವೃಂದದಳಿನೀ
ಕುಳಂ ಕೋಕಂ ಶೋಕಂಬಡೆಯೆ ಮನದೊಳ್ ಪುಟ್ಟಿ ಜಗದೊಳ್
ಬಳೋತ್ಕಾರಂ ಮಾರಂಗದಟಿನತಿರುಳ್ ರಂಜಿಸಿತಿರುಳ್ ೧೩

ವ॥ ಅಂತು

ಕಂ॥ ತೊಳಗುವ ನಕ್ಷತ್ರಂಗಳ
ಬೆಳಗಿಂ ಸುರಲೋಕಚಂದ್ರನೊಪ್ಪಿದನತ್ತಲ್
ಬೆಳಗುವ ಕೈದೀವಿಗೆಗಳ
ಬೆಳಗಿಂ ನರಲೋಕಚಂದ್ರನೊಪ್ಪಿದನಿತ್ತಲ್ ೧೪

ವಿಲಸಿತಚಂದ್ರಾಲೋಕದಿ
ನಲರ್ದುವು ಕುಮುದಂಗಳತ್ತಮಿತ್ತಲ್ ನೃಪನ
ಗ್ಗಲಿಪ ಸದಯಾವಲೋಕದಿ
ನಲರ್ದುವು ಸೇವಕರ ನಯನಹೃತ್ಕುಮುದಂಗಳ್ ೧೫

ವ॥ ಅಂತು ಪಳಚ್ಚನಾದಚ್ಚವೆಳ್ದಿಂಗಳೊಳ್ ವಸ್ತುಕಕವಿಗಳ ಕಾವ್ಯಗೋಷ್ಠಿಯುಂ ವರ್ಣಕಕವಿಗಳ ಗೀತಗೋಷ್ಠಿಯುಂ ಮನಂಗೊಳಿಸೆ ಯಾಮಿನೀಪ್ರಥಮಯಾಮಮಂ ಕಳಿಪಿ ಬಳಿಕ್ಕಮೋಲಗಮಂ ವಿಸರ್ಜಿಸಿ ಸೆಜ್ಜೆವನೆಗೆ ಬಿಜಯಂಗೆಯ್ದು

ಕಂ॥ ಅಮೃತಾರ್ಣವದೊಳ್ ಸಿರಿವೆರ
ಸು ಮುಕುಂದಂ ಪವಡಿಪಂದದಿಂ ಪವಡಿಸಿದಂ
ಹಿಮಧವಳಧಾಮಶಯನದೊ
ಳಮರ್ದಿರೆ ಸೂೞಿರಸಿವೆರಸು ರಾಜಮನೋಜಂ ೧೬

ವ॥ ಅಂತು ಸುಖಸುಪ್ತನಾಗಿರೆ ನಿಶಾವಸಾನಸಮಯದೊಳ್

ಕಂ॥ ಸೊಡರ್ಗಳಿರುಳೆಣ್ಣೆಯಂ ನಿಲೆ
ಕುಡಿದಟ್ಟಿಮೆವಟ್ಟುವೆನಿಸಿ ನಮೆದುವು ತನುಗಳ್
ಜಡತೆಯಿನದಂತೆ ಪೊಡರಲ್
ಕುಡುಗುಮೆ ದೋಷಾತಿರೇಕಮರುಚಿನಿಮಿತ್ತಂ ೧೭

ಇದು ತಳರ್ವ ನಿಶಾಸುದತಿಯ
ಮೃದುಪದನೂಪುರದ ನೂಲ ತೊಂಗಲ ದನಿಯೆಂ
ಬುದನೆನಿಸಿ ಪೊಣ್ಮಿದುದು ನಿ
ದ್ದೆದಿಳಿದು ನಲಿದುಲಿಪುತಿರ್ಪ ವಿಹಗರವಂಗಳ್ ೧೮

ಉತ್ಸಾಹ॥ ಎತ್ತಿ ನಡೆಯಲೊಡರಿಪೀತನೆನ್ನುಮಂ ಸದೋಷನು
ದ್ವೃತ್ತನೆಂದು ಮುಳಿದು ಕಿಡುಗುಮೆಂಬ ಶಂಕೆಗುಮ್ಮಳಂ
ಬೆತ್ತನೆನಿಸಿ ಮಸುಳ್ದು ನಿಂದು ತನ್ನ ಹೃದಯದೊಳ್ ಭಯಾ
ಯತ್ತನೆರಳೆವುಳ್ಳಜಡನತಿ ಪ್ರತಾಪಧೀರನೇ ೧೯

ವ॥ ಮತ್ತಮುತ್ತುಂಗಚೈತ್ಯಭವನಂಗಳೊಳಗೆ ಮೊೞಗುವ ವಿಭಾತ ಪೂಜಾಪಂಚ ಮಹಾಶಬ್ದ ಘೋಷಮಮಂ ಸಂವೇದಿಸಿಯುಮತಿ ರಮ್ಯಹರ್ಮ್ಯನಿವಹನೀಡದೊಳ್ ನಿದ್ದೆಗೆಯ್ದ ಪಾರಾವತಂಗಳನೆೞ್ಚಱಿಸಿಯುಂ ಪಕ್ಕದಲೆಯಸೆಕ್ಕೆಯಿಂದಮರ್ದಱಿಂಕೆವಿಡಿರ್ದೆೞ್ದು ಕೂಗುತಿರ್ಪ ಕುಕ್ಕುಟಕುಳಂಗಳ ಸರಂಗಳಂ ಸಂಗಳಿಸಿಯುಂ ಕುಳಿರ್ವಬೆಳ್ದಿಂಗಳಂ ಬಿಡದಡರೆ ಕುಡಿದು ಸೊಕ್ಕಿ ಜೋಂಪಿಸುವಲಂಪಿನ ಚಕೋರಂಗಳನೆಳಸಿರ್ದು ನಸುನಿದ್ರೆಗೆಯ್ಸಿಯುಂ ಮೇಳಿಸಿದ ಸೆಜ್ಜರದಿನೇೞಲುಜ್ಜುಗಂಗೆಯ್ವ ವಿಜಯಕುಂಜರದ ಮಂಜೀರಸಿಂಜಿತಕ್ಕೆ ಪಕ್ಕಾಗಿಯುಂ ಸಪ್ರಭವ ಸುಪ್ರಭಾತ ಮಂಗಳಮೋದುತಿರ್ಪ ವರಗಾಯನಿಯರನಪ್ಪುಗೆಯ್ದುಂ ವಿನೋದಕಲಹದಿಂದ ವಿನತರಾದಿನಿಯರ ನಯಕ್ಕೆ ತಿಳಿಯದಿರ್ದ ಬರ್ದೆಯರ ಮುದ್ದುತನದ ಮುಳಿಸಂ ಬೞಿಕ್ಕೆ ಬಱಿದೆ ನೆಱಿವುಗಿಡಿಸಿಯುಂ ಸುಸಿಲಮಸಕದಿಂ ಬಸವೞಿದು ನಸುನಿದ್ದೆಗೆಯ್ದ ದಂಪತಿಗಳ ಪೀನಕದಂಬವಂ ತುಱುಂಬಿಯುಂ ಗೃಹೋಪವನದ ತಿಳಿಗೊಳದ ನಳಿನೀದಳದ ಸಂಪುಟಪುಟೀಕೋಟರದೊಳೞಗಿಪ ಮಱಿದುಂಬಿವಿಂಡನೆೞ್ಚಱಿಸಿಯುಂ ಸಂಪ್ರಾಪ್ತಸುಪ್ತಿ ಜಾತಜಾಡ್ಯಮೂಢರಾಗಿರ್ದ ಸುಕವಿಗಳ ಮತಿಯನತಿ ಸಿತಮಾಗಿಸಿಯುಂ ಮದಗಜಗ ಮನದಿನೆಯ್ತಂದು

ಕಂ॥ ಶಯ್ಯಾಸದನಗವಾಕ್ಷಮ
ನೊಯ್ಯನೆ ಪೊಕ್ಕುಲಿದು ನೃಪನ ಸುಖನಿದ್ರೆಯುಮಂ
ಕೆಯ್ಯಿಂ ತೊಲಗಿಸಿತು ಮಿಗೆ ಪಟಿ
ಮಯ್ಯ ಪಸಾಯಿತರವೋಲ್ ಪ್ರಭಾತಸಮೀರಂ ೨೦

ವ॥ ಅನ್ನೆಗಂ

ಕಂ॥ ಆದಪುದು ಯಾನದೊಳ್ ಮಿ
ತ್ರೋದಯ ಮಾತೆಱದಿ ಭುವನಮಿತ್ರಂಗೆಂದಾ
ವೇದಿಸುವಂತಾದುದು ಮಿ
ತ್ರೋದಯಮಗ್ಗಳಿಸೆ ರಾಗಮುದಯಿಸೆ ತೇಜಂ ೨೧

ವ॥ ಅಂತು

ಕಂ॥ ಚಂಡಕರಂ ಪ್ರಾಕ್ಶೈಲಶಿ
ಖಂಡಮನೇಱಿದೊಡಖಂಡಮಂಡಳಮಮರ್ದಾ
ಖಂಡಳದಿಗಂಗನಾಮಣಿ
ಕುಂಡಳಮೆನಿಸಿರ್ದುದರುಣಕಿರಣಚ್ಛವಿಯಿಂ ೨೨

ಮ॥ ಮಸಕಂಗುಂದೆ ನಿಶಾಟಕೋಟಿ ಕಿಡೆ ಶುಕ್ರಾಲೋಕಸಂಪತ್ತಿ ಮು
ಟ್ಟೆ ಸುರೇಂದ್ರಾಶೆಗೆ ರಾಗಮೆಂದು ಹರಿ ಪದ್ಮಾನಂದಿ ಪೀತಾಂಬರೋ
ಲ್ಲಸಿತಂ ಚಕ್ರಸಹಾಯನಾಕ್ರಮಿಸಿದಂ ಭೂಚಕ್ರಮಂ ಪಾದದಿಂ
ರಸೆಗಾಗಳ್ ಬಲಿದುಸ್ತಮಂ ತಳರ್ವಿನಂ ದಾನಪ್ರಬದ್ಧಾಕುಳಂ ೨೩

ಕಂ॥ ಮಾಗಧಮಂಗಳಗೀತಾ
ಭೋಗದಿನುನ್ಮಿದ್ರನಾಗಿ ಸಲ್ಲಲಿತ ಮನೋ
ರಾಗಂ ನೃಪನೊಡರಿಸಿದಂ
ಬೇಗಂ ಪ್ರತ್ಯೂಷಕೃತ್ಯಮಂಗಳವಿಧಿಯಂ ೨೪

ವ॥ ಆ ಪ್ರಸ್ತಾವದೊಳ್

ಮ॥ ದೆಸೆಯೊಳ್ ದಿಗ್ಗಜಬೃಂಹಿತಂ ಗಗನದೊಳ್ ಸೂರ್ಯಾಶ್ವಹೇಷಾರವಂ
ವಸುಧಾಭೃತ್ಕುಳದೊಳ್ ವಿನಿರ್ಜರರವಂ ವಾರಾಸಿಯೊಳ್ ಘೂರ್ಣನ
ಪ್ರಸರಂ ಕಾನನದೊಳ್ ಮೃಗೇಂದ್ರರುತಿ ಮೆಯ್ವೆರ್ಚಲ್ಕತಿವ್ಯಾಪ್ತಿಯಾ
ಯ್ತು ಸುಹೃಚ್ಚಕ್ರಮಯಂ ಕರಂ ನೃಪಜಯಪ್ರಸ್ಥಾನಭೇರೀರವಂ ೨೫

ವ॥ ಆಗಳಾ ಘೋಷದ ಮಸಕಮಂ ಕೇಳಲೊಡನೆ ಮಂದರಾದ್ರಿಮಥನಸಮಯಸಮುದ್ಗೀರ್ಣ ಗುಣಾರ್ಣವಕ್ಷೋಭರಭಸಮಮಂ ತಳೆದು ಬಳೆದು ಚತುರಂಗಬಳದ ಕಳಕಳಮಳುಂಬಮಾಗೆ

ಮ॥ ಲಳಿತಾಂತಃಪುರಕೋಟಿ ಪಿಂದೆ ತಳತಂತ್ರಂ ಮುಂದೆ ಸಾಮಂತಸಂ
ಕುಳ ವಿರ್ವಕ್ಕದೊಳಂತೆ ಪತ್ತಿಬರೆ ನಾನಾನೂನ ಯಾನಂಗಳಿಂ
ತಳರ್ದಂ ಕಾರ್ಮುಗಿಲಂ ಮುಸುಂಕುವೆಳಮಿಂಚೆಂಬಂತೆ ತಂದಾನೆಯಂ
ಪೊಳಯಿಪ್ಪಂಕುಶಕಾಂತಿಗಳ್ ಪುದುವಿನಂ ಸದ್ಧವ್ಯಸಂಕ್ರಂದನಂ ೨೬

ಕಂ॥ ಅತಿಸೌಮ್ಯಸಿತಾಸಿತಲೋ
ಹಿತಚಿತ್ರಾಂಕುಶದಿನೆಸೆವ ಕೇತುಗಳಿಂ ಮಾ
ರುತವೀಥಿಯಂತೆ ನೃಪವೀ
ಥಿ ತೋಱೆ ನರಲೋಕಚಂದ್ರನೆಯ್ದಿದನದಱೊಳ್ ೨೭

ವ॥ ಅಂತು ವಿವಿಧ ಧ್ವಜರಾಜಿವಿರಾಜಮಾನಮಾದ ರಾಜಮಾರ್ಗದೊಳಗಣ ವಿಚಿತ್ರಾಂಶುಕ ನಿಚಯರಚಿತಂಗಳುಂ ಸಲ್ಲಲಿತಪಲ್ಲವೋಲ್ಲಲಿತಂಗಳುಂ ಚಂಚತ್ಪಂಚರತ್ನಾಂಚಿತಮುಮಪ್ಪ ವಿವಿಧ ತೋರಣಂಗಳಂ ನುಸುಳುತ್ತುಂ ಬಂದು

ಕಂ॥ ನಾನಾವಸ್ತುವಿತಾನದೆ
ನಾನಾನೃಪಕುಳಜಯಾಂಗನಾ ಪರಿಣಯನಾ
ಸ್ಥಾನಮೆನಿಸಿದ ಜಯಪ್ರ
ಸ್ಥಾನಶ್ರೀಶಿಬಿರಮಂ ಮಹೀಪತಿ ಪೊಕ್ಕಂ ೨೮

ವ॥ ಪೊಕ್ಕಂದಿನ ದಿವಸಮಲ್ಲಲ್ಲಿ ವಲ್ಲಭತುಂಗವಿಜಯಗಜಸಂಚಯಕ್ಕೆ ತಕ್ಕ ಪಲ್ಲಣದ ಬಿಸುಗೆಯ ಮೊಗವಡದಗುಟಿದಳವಡಿಕೆಯಂ ತೋರ್ಪ ಸಾಹಣವೆಗ್ಗಡೆಗಳ ಸಂಸರ್ಗದೊಳಂ ಅಸಿ ಮುಸಲ ಕಣಯ ಕಂಪಣ ಗದಾದಂಡ ಕೋದಂಡ ತೋಮರಾದ್ಯಾ ಮುಕ್ತಾಮುಕ್ತ ಪಾಣಿಮುಕ್ತ ಯಂತ್ರಮುಕ್ತಂಗಳಪ್ಪ ನಿಜನಿಶಿತ ನಿಖಿಳಾಯುಧಂಗಳಂ ವಿಳೋಕಿಪ ಕುತೂಹಳದೊಳಂ ಹರಿಕರಿಕರೇಣು ವೇಸರಾಂದೋಳ ಶಿಬಿಕಾದಿಯಾನಸಂತಾನಮಂ ತಾನೆ ನಿರವಿಸಿ ನಿಜಾಂತಃಪುರವಿಳಾಸಿನೀಜನಕ್ಕಂ ಪಸಾಯಿತವರ್ಗಕ್ಕಂ ಎಸೆವ ಸಮಪ್ರಸಾದರಸವಿನೋದದೊಳಮಿರ್ದು ಮಱುದೆವಸಂ ಮಾರ್ತಂಡಮಂಡಲೋದಯದೊಳ್ ವಿಚಿತ್ರಕ್ರಿಯಾನಿಯಾಮ ನಿರ್ವರ್ತನಾನಂತರಂ ಪ್ರಯಾಣೋತ್ಸುಕನಾಗಿ

ಚಂ॥ ಕೃತಯುಗಚಕ್ರವರ್ತಿ ಭರತೇಶ್ವರನಂತನುಬದ್ಧವಾಜಿ ರಾ
ಜಿತಫಳಭೂಜದಂತೆ ಧೃತಭಾಸುರಹೇತಿಸಹಸ್ರಮರ್ಕನಂ
ತತಿಧೃತರಶ್ಮಿ ರತ್ನಗಣದಂತೆ ಸಮಾಶ್ರಿತಸೂನಮಾಶನಂ
ತತಿಶಯಕೇತುಶೋಭಿ ನಭದಂತೆನೆ ರಂಜಿಪ ತೇರನೇಱದಂ ೨೯

ವ॥ ಅಂತು ಜಯಮನೋರಥಾರೂಢಂ ರಥಾರೂಢನಾಗಿ ಸಹಾಯ ರಾಜನ್ಯರಾಜಿವೆರಸು ಅಪಾರಪರಿವಾರಪರಿವೃತಂ ಪ್ರಸ್ಥಾನಶಿಬಿರನಿಳಯದಿಂ ತಳರ್ವುದುಂ

ಉ॥ ಆಂಕೆಯ ಗಂಡನಾವನುಜಿದೀ ನಡೆತಂದನೆ ವೀರವೈರಿವ
ಜ್ರಾಂಕುಶನಿತ್ತು ತೆತ್ತು ಬೆಸಕೆಯ್ದು ಬರ್ದುಂಕಿಮರಾತಿಗಳ್ ಭಯಾ
ತಂಕದಿನೆಂದು ಸಾಱುವವೋಲಾಯ್ತು ಘನಧ್ವನಿತಾಭಿರಾಮನಾ
ಮಾಂಕಿತ ಕಾಹಳಂ ವಿಜಯದೋಹಳಮಾತ್ತ ಜಗತ್ಕುತೂಹಳಂ ೩೦

ವ॥ ಆಗಳಾ ನಿನಾದಮಂ ಕೇಳಲೊಡಂ

ಕಂ॥ ಸಮುದೀರ್ಣಘೂರ್ಣಿತಾರ್ಣವ
ಸಮಮಾದುದನೂನ ಯಾನಸರಭಸಜನಸಂ
ಭ್ರಮಕಳಕಳದಿಂ ನೃಪವಿ
ಕ್ರಮಲಕ್ಷ್ಮೀರತ್ನಹಸ್ತ ಕಟಕಂ ಕಟಕಂ ೩೧

ವ॥ ಅಂತೆತ್ತಿ ತಳರ್ವುದುಂ

ಮ॥ ಹರಿಹೇಷಾಧ್ವನಿ ಗಂಧಸಿಂಧುರಘಟಾಘಂಟಾಸ್ವನಂ ಸ್ಯಂದನೋ
ತ್ಕರಚೀತ್ಕಾರರವಂ ಭಟೋದ್ಭಟರಟತ್ಕೋಳಾಹಳಂ ಶಂಖಪು
ಷ್ಕರಭೇರೀ ಕಹಳಾಮೃದಂಗಬಹಳಪ್ರಧ್ವಾನಮಾಘೂರ್ಣ ದಿ
ಕ್ಕರಿಕರ್ಣಾಂತರಮಾಗೆ ನೀಳ್ದುದು ನೃಪಶ್ರೀಜೈತ್ರಯಾತ್ರೋತ್ಸವಂ ೩೨

ಚಂ॥ ಬಳೆದುದೊ ಭೂತಳಂ ಬೆಸಲೆಯಾಯ್ತೊ ದಿಶಾವಳಿ ಮೇರೆದಪ್ಪಿತೋ
ಜಳಮಯಮಾಗಿ ವಾರ್ಧಿ ಭುವನತ್ರಯವಾಸಿಗಳೆಲ್ಲಮಿಲ್ಲಿಗೀ
ಗಳೆ ನೆರನಾಗಿ ಬಂದು ನಡೆವಂದಮೊ ಪೇೞಿಮೆನಲ್ಕಗುರ್ವನಾ
ಳ್ದಳವಿಗಳುಂಬಮಾದುದು ಬಳಪ್ರಚಳಂ ಜಯತುಂಗದೇವನಾ ೩೩

ವ॥ ಇಂತು ಸಕಳ ಕ್ಷೋಣೀತಳಕ್ಷೋಭಕಾರಿಯಾಗಿ ನಡೆವಲ್ಲಿ

ಮ॥ ಭರದಿಂ ಶೇಷನನೆತ್ತಿ ಪೊತ್ತಿ ಪೊಗೆಯಲ್ಕುಚ್ಛ್ವಾಸದಿಂದುರ್ವಿಗು
ಬ್ಬರಿಪುದ್ದಾಮ ನಿಕಾಮ ಧೂಮಚಯಮೆಂಬಂತಾಗಿ ಮಾರ್ತಂಡದುರ್ದಿನದೇ
ಪರತೇಜಸ್ವಿಯನೇಕೆ ಸೈರಿಪುದಿದೆಂಬಂತುಷ್ಣರುಗ್ಬಿಂಬಡಂ
ಬರಮಂ ಪೊಟ್ಟಿದುದು ತದ್ಘಟಪ್ರಬಳ ಪಾದೋದ್ಧೂತ ಧೂಳೀಚಯಂ ೩೪

ವ॥ ಮತ್ತಂ

ಮ॥ ಅದು ಸನ್ಮಾರ್ಗವಿಶುದ್ಧಿಯಂ ಕೆಡಿಸಿತಾಶಾಂತಸ್ಫುಟಸ್ವಚ್ಛಭಾ
ವದ ಪೆಂಪಂ ಪೞಗಾಗಿಸಿತ್ತು ಜನಸಮ್ಯಗ್ದರ್ಶನಜ್ಞಾನಂ
ಪದಮಂ ಕೀೞ್ಪಡಿಸಿತ್ತು ತಾಂ ಜಡಧಿಗಳ್ಗಂತಸ್ಥಮಾಗಿರ್ದುದೆಂ
ಬಿದು ಯುಕ್ತೋಕ್ತಿ ಕುಮಾರ್ಗನಿರ್ಗತ ರಜೋಜಾಳಕ್ಕಿದಾಶ್ಚರ್ಯಮೇಂ ೩೫

ಚಂ॥ ಪೆಸರನರೇಂದ್ರನಂದನರ ಚಾಮರವಾಯು ಕಟಿಲ್ಪೆ ಸಾಮಜ
ಪ್ರಸರದ ಕರ್ಣತಾಳಮರುತಂ ಮರಳೊತ್ತೆ ಮದಾಂಬುಶೀಕರಂ
ಪಸರಿಸಿ ಪೀರೆ ವಾಜಿಗಳಲೋಳೆಯ ಫೇನವಿತಾನವೀಂಟೆ ನಿ
ಶ್ವಸಿತದ ಗಾಳಿ ಚಾಳಿಸೆ ತೆರಳ್ಗಡಿಗಟ್ಟಿಗಿತು ಧೂಳಿಜಾಳಮುಂ ೩೬

ಕಂ॥ ಕರಿಯಮದಪಂಕಜಳಮಾ
ವರಿಸಿದ ವಾಹಿನಿಯೊಳಲೆಯೆ ಮಾರುತರಜಕಂ
ಪರೆದ ರಜದಿಂದೆ ಮಾಸಿದ
ಹರಿದಂಬರಮೆಯ್ದೆ ಜಲಕನಾಯ್ತಿದು ಚಿತ್ರಂ ೩೭

ವ॥ ಅಂತು ಜಗತೀದಿಗಂತಗಗನತಳವಳಯಮತಿ ವಿವಿಧ ಪಾಂಸುಪಟಲಮಾಗೆ

ಕಂ॥ ಶತ್ರುಕ್ಷತ್ರಿಯಮುಖ ಶತ
ಪತ್ರಗ್ಲಾನಿಯಿನತುಚ್ಛನೃಪಕಟಕ ಮಹಾ
ಯಾತ್ರಾವಿಳಾಸಚಂದ್ರಿಕೆ
ನೇತ್ರೋತ್ಪಳ ಶುಭದಮಾಯ್ತು ನೋೞ್ಪರ್ಗೆನಸುಂ ೩೮

ವ॥ ಆಗಳಲ್ಲಿ

ಮ॥ ಮುದದಿಂ ಯಾನವಿಳಾಸಮೊಪ್ಪ ಮೆಱೆದರ್ ತಂತಮ್ಮ ಸಂಪತ್ತಿಯಂ
ಕದನೋಚ್ಚಂಡಭುಜರ್ ಮಹಾಮಹಿಭುಜರ್ ಶೌರ್ಯೋಗ್ರಧೀಮಂತರಂ
ಕದ ಸಾಮಂತರುದಾರ ವೀರವಿಭವಶ್ರೀಮನ್ನೆಯರ್ ಮನ್ನೆಯರ್
ಮದವದ್ವೈರಿವಿಮರ್ದನಿರ್ದಯ ಕನತ್ಕೌಕ್ಷೇಯಕರ್ ನಾಯಕರ್ ೩೯

ಕ್ರಮಸಿಂಹಾಸನಮೊಂದೆ ಭೇದಮಿವರ್ಗಂ ಭೂಪಂಗ ಮಂತಾವಭೇ
ದಮುಮಿಲ್ಲಾತ್ಮವಿಳಾಸದಿಂ ವಿಭವದಿಂ ಸಾಮಗ್ರಿಯಿಂ ತೇಜದಿಂ
ಸಮನೆಂಬಂತಿರಶೇಷ ರಾಜ್ಯಭರಧುರ್ಯರ್ ಪೂರ್ಣಕಾರ್ಯರ್ ನಯಾ
ಗಮವಿದ್ಯಾಪುರುಷರ್ ಪ್ರಧಾನಪುರುಷರ್ ಬಂದರ್ ನಿಜಾನಂದದಿಂ ೪೦

ಉ॥ ಪೊನ್ನೊಱೆ ಚಿಕ್ಕಗೇಣ್ ಪಟೆಯ ಟೊಪ್ಪಿಗೆ ಪೆರ್ಗೊಗಸುತ್ತು ನೇಲ್ದಗ
ಡ್ಡನ್ನಸುಜೋಲ್ದ ಡೊಳ್ಳು ಪುಟದಂಗಿಗೆ ಶಿಷ್ಟಪರಿಗ್ರಹಂ ಬುಧೋ

ತ್ಸನ್ನ ಸುಭಾಷಿತಂ ತಱಿಯ ತಣ್ಣೆಲಲರದಣಕಾರ್ಯವೇಷಮಂ
ಕನ್ನಡಿಸಲ್ಕೆ ಬಂದರವನೀಶ ನಿಯೋಗಿಗಳುದ್ಧಭೋಗಿಗಳ್ ೪೧

ಚಂ॥ ನಿರುಪಮಲೀಲ ಕಣ್ದೆಱಿಯೆ ಬೆಜ್ಜರುಮಜ್ಜರುಮಂಗರಕ್ಕರುಂ
ಕರವಳರುಂ ವಿಳಾಸಿನಿಯರುಂ ನಗೆಕಾಱರುಮಿಚ್ಚೆಕಾಱರುಂ
ಸರಸವಿನೋದಿಗಳ್ ಸುಮನದೀಮನೆವಕ್ಕಳುಮಿರ್ಕೆಲಂಗಳೊಳ್
ಬರೆ ನಡೆತಂದರಂದಿರದೆ ರಾಜಕುಮಾರರುದಾರರಬ್ಜೆಯಿಂ ೪೨

ಶಾ॥ ಕಾಳ ವ್ಯಾಳ ಕರಾಳಚಾಪಚಟುಳಂ ಸದ್ಬಾಣತೂಣೀರಬ
ದ್ಧಾಳಂಬಂ ಗುಣಕೃಷ್ಟ ನಿಷ್ಠುರ ಕಿಣಭ್ರಾಜದ್ಭುಜಂ ಬಂಧುರಾ
ಭೀಳಜ್ಯಾರವಭೈರವಂ ಸಚಳಿತಂ ವಿಂಧ್ಯಾಟವೀಯಾಟನೋ
ಲ್ಲೀಳಂ ಬಿಲ್ವಡೆ ಕಾದಿ ಗೆಲ್ವೊಡೆ ಜವಂಗಂ ಮೊಗ್ಗೆ ಪೇಳೆಂಬಿನಂ ೪೩

ಕಂ॥ ಮೊಟಗುವ ಪರಿಗೆಯ ರಭಸಂ
ಮೊಟಗುವ ವಿಳಯಾಭ್ರಘಟೆಯ ಘರ್ಜನವೆನಲಿಂ
ಮೊಟಗುವ ದನಿಗೆಣೆಯೆನೆ ತ
ಕ್ಕಱಿಯದೆ ನಡೆತಂದುದಂದು ನೃಪತಳತಂತ್ರಂ ೪೪

ಕಡಿತಲೆಯವರೇೞ್ಗೆಗೆ ನಾ
ಲ್ಕಡಿತಲೆಗೆಟ್ಟೋದ ದೂತರಾರೆನೆ ನಡೆದರ್
ಕಡಿತಲೆಯ ಭಟರ್ ಮುಂಡದ
ಕಡಿ ತಲೆಯೊಡನುರುಳೆ ಪೊಯ್ದು ಕಡುವಿನ್ನಣಿಗರ್ ೪೫

ವ॥ ಅಂತುಗ್ರೋಗ್ರತರ ಸಮಗ್ರಸಾಮಗ್ರಿವೆರಸು ವಿಗ್ರಹೋದಗ್ರಭೂಪಾಗ್ರಿಮಂ ಕತಿಪಯ ಪ್ರಯಾಣಂಗಳಿಂ ಭದ್ರಾವತೀಪುರಮನೆಯ್ದಿ

ಕಂ॥ ಮೇಲೆತ್ತಿ ಮಹಾಪದ್ಮನೃ
ಪಾಲಕನೆಟ್ಟಿಂದನೆಂದೊಡಗಿದೋಡಿದನಾ
ಲೋಲಬಲಂ ಗತಭುಜಬಲ
ನಾಲಾಪಂಗೆಟ್ಟು ಬಿಟ್ಟವಂ ಗಜಕರ್ಣಂ ೪೬

ವ॥ ಆಗಳವನಖರ್ವಚಾತುರ್ಬಲಮನೆಟ್ಟಿಟ್ಟಿ ಸರ್ವಸ್ವಮಂ ಸೂಱೆಗೊಂಡು ಗಜಕರ್ಣನಂ ಪಿಡಿಮೊಲಂಗೊಂಡು ಜಯಶ್ರೀಯಂ ಕೈಕೊಂಡು ಭದ್ರಾವತೀಪುರಮಂ ಮುಗುವಲ್ಲಿ

ಮ॥ ಲಲಿತೋತ್ತುಂಗವಿಳಾಸದೇವಭವನವ್ರಾತಂಗಳೊಳ್ ನಿಂದು ನಿ
ರ್ಮಲಹರ್ಮ್ಯಂಗಳನೇಱಿ ಸೌಧಶಿಖರಪ್ರಾಗ್ಭಾಗಮಂ ಪತ್ತಿ ಪಾ
ಗಲನಾಶ್ರೈಸಿ ನಿಜಾಂಗಸಂತತಿಗೆ ಸಾರ್ದಟ್ಟಾಳಮಂ ಮೆಟ್ಟಿ ನೋ
ಟ್ಟಿ ಲತಾತನ್ವಿಯರಂಬರೇಚರಿಯರೆಂಬಾಶಂಕೆಯಂ ಮಾಡಿದರ್ ೪೭

ವ॥ ಅಂತು ತಂತಮ್ಮ ಬಹುವಿಧವ್ಯಾಪಾರಂಗಳಂ ಪರಿಹರಿಸಿ ಪರಿತಂದು ಪುರಮಶೇಷಂ ಪುರಂಧ್ರೀನಿಕರಮಯುವಮಾದುದೆಂಬಿನಂ ನೆರೆದು ನೆರವಿಗೊಂಡು ಕೌತುಕಂಗೊಂಡು ಕಾಮರಾಗಸಾಗರದ ಬಹಳಲಹರೀಸಹಸ್ರಂಗಳೆನಿಪನೇಕಭಾವಂಗಳುದಯಿಸೆ ಬಯಸಿ ನೋೞ್ಪ ನಗರೀನಾರೀಕದಂಬಕದ ನಗೆಮೊಗದ ಕಾಂತಿ ಮೃಗಧರನ ಚೆಲ್ವಂ ತಗುಳ್ವೆಯುಂ ಕಡೆಗಣ್ಣಕಾಂತಿಯು ಜೊನ್ನದಜೆನ್ನನೀಂಯೆಂಯುಂ ಕಂಕಣದ ನುಣ್ಚರದ ನುಣ್ಪು ಕಳಕಂಠಸ್ವನಮನವಟಯ್ಸೆಯುಂ ಸುಲಿಪಲ್ಲ ಪೊಳೆಪು ಮಲ್ಲಿಕಾಕುಟ್ಮಳಮನುಜ್ವಳಿಸೆಯುಂ ಭದ್ರಾವತೀಪುರದ ಪರಮೋತ್ಸವಕ್ಷೋಭಶೋಭೆಯಂ ಬಸಂತಸಮಯವನೊಳಗುಮಾಡಿ ಯಧಿರಾಜಂ ರಾಜಮಾರ್ಗದೊಳಗಣಿಂದಗಣ್ಯಪುಣ್ಯಾಂಗನಾಕರಕಮಳವಿಕೀರ್ಯ ಮಾಣಮಂಗಳಲಾಜಾಕ್ಷತಂಗಳುಮಂ ಕುಸುಮೋಪಹಾರಂಗಳುಮಂ ನಿರೀಕ್ಷಿಸುತುಂ ನಡೆತಂದು ನವಾಮ್ರ ಚಂಪಕಾಶೋಕಪಲ್ಲವೋಲ್ಲಸಿತ ಮಣಿತೋರಣಂಗಳೊಳಂ ಪರಿಮುಕ್ತ ಮುಕ್ತಾದಾಮ ಕಮನೀಯ ವಿಚಿತ್ರನೇತ್ರದೇವಾಂಗವಿತಾನದೊಳಂ ಆ ಬದ್ಧರತ್ನರಾಜಿವಿರಾಜಿತ ಶಾತಕುಂಭ ಕುಂಭಂಗಳೊಳವಾಲಿಖಿತ ವಿಚಿತ್ರ ಚಿತ್ರಭಿತ್ತಿಗಳೊಳವಾವೋದಿತ ಮೃಗಮದ ಕರ್ದಮಾಲಿಪ್ತಮಣಿಕುಟ್ಟಿಮರಚಿತ ಕರ್ಪೂರಪರಾಗ ರಂಗವಲ್ಲೀ ವಿತಾನದೊಳ ಮಾಕೀರ್ಣ ಸುವರ್ಣ ಕಲಶಶೋಭಿತಶಿಖರಂಗಳೊಳೆಸೆವ ಸೌಧಾಲಯಂಗಳನೊಳಕೊಂಡ ರಾಜಭವನದ ರಾಜಾಂಗಣಮಂ ಪೊಕ್ಕು

ಕಂ॥ ಸಮದಗಜದ್ವಿಪದಿಂದಿೞಿ
ದು ಮಹಾಪದ್ಮಾವನೀಶ್ವರಂ ತಾಂ ಕರುಮಾ
ಡಮನೇಱಿದನನುನಯದಿಂ
ಕಮಳಪ್ರಿಯನೇಱುವಂತಿರುದಯಾಚಲಮಂ ೪೮

ವ॥ ಈ ಪ್ರಕಾರದಿಂ ಕಱುಮಾಡದುಪ್ಪರಿಗೆಯನೇಱಿ

ಕಂ॥ ನಾನಾಮಂಗಳವಸ್ತುವಿ
ತಾನದಿನೊಪ್ಪುವ ಜಯಾಂಗನಾಪರಿಣಯನಾ
ಸ್ಥನಮೆನಿಸಿರ್ಪ ಜಯವ
ರ್ಮಾನೂನಾವಾಸಮಂ ಮಹೀಶಂ ಪೊಕ್ಕಂ ೪೯

ವ॥ ಪೊಕ್ಕು ಮಾತುಳಂಗಂ ಮಾತುಳಾನಿಗಂ ತುೞಿಲ್ಗೆಯ್ದುಮವರನೇಕ ನಲ್ವರಕೆಗಳ್ವೆರಸು ಪರಮೋತ್ಸವಪರಂಪರೆಯನೆಯ್ದಿ ಮಱುದಿವಸಂ ಮೌಹೂರ್ತಿಕರಂ ಬರಿಸಿ

ತಾಂಬೂಲಮಾಲ್ಯಾದಿ ಪುರಸ್ಸರಂ ವಿವಾಹಲಗ್ನಮಂ ಬೆಸಗೊಳ್ವುದುಂ ನವಗ್ರಹಂಗಳೆಲ್ಲಂ ಸ್ವೋಚ್ಚಸ್ವಕ್ಷೇತ್ರಮಿತ್ರಸ್ಥಾನಂಗಳೊಳೇಕಾದಶಫಳಪ್ರದಂಗಳಾಗೆ ಲಗ್ನಮಂ ನಿಶ್ಚೈಸಿ ಪೇೞ್ವುದುಮಾ ಕ್ಷಣದೊಳೆ ಪುರದೊಳಷ್ಟಶೋಭೆಯಂ ಮಾಡಲುಂ ವಿವಾಹಮಂಟಪಮಂ ಸಮೆಯಿಸಲುಂ ಗೃಹಮಹತ್ತರಂಗೆ ಬೆಸಸುವುದು

ಚಂ॥ ಪುರಜನಮಾಗಳೊಂದಿ ಪರಮೋತ್ಸವದಿಂ ವರಮಾಲ್ಯಮಂಜುಳಾ
ಭರಣ ನವಾಂಗರಾಗ ವಿವಿಧಾಂಶುಕಲೀಲೆಯನೆಯ್ದಿ ತಾಳ್ದಿತಾ
ಪುರದೊಳಗುಣ್ಮಿ ಪೊಣ್ಮೆ ಕೃತಮಂಗಳತೂರ್ಯನಿನಾದವೆತ್ತಲುಂ
ಸುರುಚಿರತೋರಣಂ ತುಱುಗೆ ತಳ್ತಿರೆ ನೇತ್ರವಿಚಿತ್ರಕೇತನಂ ೫೦

ವ॥ ಅಂತುಮಲ್ಲದೆಯುಂ ಪದ್ಮರಾಗದ ನೆಲೆಗಟ್ಟಿನೊಳಂ ಪಳುಕಿನ ಕಂಬಂಗಳೊಳಂ ಹರಿನೀಲದ ನಾಗವೇದಿಕೆಯೊಳಂ ವೈಡೂರ್ಯದ ತೊಲೆಯೊಳಂ ಪವಳದ ಜಂತೆಯೊಳಂ ಕರ್ಕೇತನದ ಸಾಲಭಂಜಿಕೆಗಳೊಳಂ ಗೋಮೇಧಿಕದ ಭಿತ್ತಿಯೊಳಂ ಕಂಬಕಂಬಕೆ ಬಂಗಾರದ ಪುತ್ತಳಿಗಳಂ ಮುತ್ತಿನ ಕುಚ್ಚುಗಳಿಂ ಶೋಭಾಯಮಾನ ಪುಷ್ಯರಾಗದ ಮೊಗಶಾಲೆಗಳೊಳಂ ಚಂದ್ರಕಾಂತದ ಗವಾಕ್ಷಂಗಳೊಳಂ ಕೋದ ಮುತ್ತಿನ ಸೂಸಕದೊಳಂ ಚೆಂಬೊನ್ನ ತಿಂಗಿಣಿಯೊಳಂ ಚೀನದ ದೇವಾಂಗದ ನೇತ್ರದ ಮೇಲ್ಕಟ್ಟಿನೊಳಂ ವಿರಚಿಸಿದ ವಿವಿಧ ಕುಸುಮದಾಮಂಗಳೊಳಂ ಸರಸಸಹಕಾರ ನಾರಂಗ ಮಾತುಳುಂಗ ನಾಳಿಕೇರ ಕದಳೀಫಲಾವಳಿಗಳೊಳಂ ಕತ್ತುರಿನೀರಚಳೆಯದೊಳಂ ಬಿಡುಮುತ್ತಿನ ರಂಗವಲ್ಲಿಯೊಳಂ ವಿಚಿತ್ರಾಂಶುಕ ವಿವಿಧಧ್ವಜಂಗಳೊಳಂ ಬಹುವಿಧನೂತ್ನರತ್ನತೋರಣಂಗಳೊಳಂ ನೆಱೆದು

ಕಂ॥ ಶತಮಖನಿಲ್ಲಿರಿಸಿಟ್ಟಂ
ಕೃತಿಮತಿನುತ ಋತುವಿಮಾನಮಂ ದೈತ್ಯರ ವಿ
ಸ್ತೃತಬಾಧೆಗಳ್ಕಿ ತಾನೆನ
ಲತಿಶಯಮಾದತ್ತು ಪರಮ ಪರಿಣಯನಗೃಹಂ ೫೧

ವ॥ ಅನಂತರಂ ಮಹಾಪದ್ಮರಾಜಂ ಮಾಂಗಲ್ಯಪ್ರಸಾಧನೋಚಿತಾಲಂಕೃತನಾದಾಗಳ್

ಕಂ॥ ಪೇರುರಮೆಂಬಬ್ಧಿನಿಯೊಳ್
ರಾರಾಜಿಪ ಪಿರಿಯ ಸಿರಿಯ ತರಳೇಕ್ಷಣನೀ
ಹಾರದ ರುಚಿಯೆನೆ ಸುರುಚಿರ
ಹಾರಂ ಸೊಗಯಿಸಿತು ತನ್ನರೇಂದ್ರನ ಕೊರಲೊಳ್ ೫೨

ಮಿಸುಗುವ ಮಣಿಮಯಮಂಡನ
ವಿಸರಪ್ರಭೆಯೊಳ್ ಪಳಂಚಿ ತನುರುಚಿ ಚೆಲ್ವಂ
ಪಸರಿಸಿ ದೆಸೆದೆಸೆಯೊಳ್ ಕರ
ಮೆಸೆದಿರಲೆಸೆದಂ ನರೇಂದ್ರಚೂಡಾರತ್ನಂ ೫೩

ವ॥ ಮತ್ತಮಿತ್ತ ಚತುರಚತುರಿಕೆಯರಪ್ಪ ಪರಿಚಾರಕಿಯರುಂ ವಿದಗ್ಧಸೀಮಂತಿನೀಕದಂಬಮುಂ ಭಾನುಮತಿಯಂ ಮಂಗಳವಸದನಂಗೊಳಿಸಲವಸರಂಬಡೆದು

ಮ॥ ನವನೀಳಾಭರಣಾಂಶುಗಳ್ ಮೃಗಮದವ್ಯಾಲೇಪಮಂ ಮೌಕ್ತಿಕಾ
ನಿವಹಾಳಂಕೃತಿರಶ್ಮಿಗಳ್ ಮಳಯಜವ್ಯಾಲೇಪಮಂ ಪದ್ಮರಾ
ಗವಿಭೂಷಾಕಿರಣಂಗಳಾರ್ದ್ರಕುಸುಮವ್ಯಾಲೇಪಮಂ ಬೀಱೆ ಬೀ
ಱೆ ವಧೂವೃಂದಕವಂದು ಬಂದು ಪದಪಿಂ ಕೆಯ್ಗೆಯ್ದಿದರ್ ದೇವಿಯಂ ೫೪

ಕಂ॥ ಪೊಸಮುತ್ತಿನ ತಲೆದುಡುಗೆಯ
ಪಸರಿಪ ಕಾಂತಿಯದಗುಂತಿಮಾಲೆವೊಲಿರೆ ಕಂ
ಡು ಸಮಂತು ಮುಗ್ಧೆಯರ್ ಮುಡಿ
ಯಿಸರೆ ಕೆಲರ್ ಮುಂಚೆ ಮುಡಿದರೆಂಬೀ ಭ್ರಮೆಯಿಂ ೫೫

ಕಟಕಂಗಳಿಂ ಸುರಾದ್ರಿಯ
ಕಟಕಂಗಳ ತೆಱದೆ ರುಚಿರಕಲ್ಯಾಣ ಪ್ರಾ
ಕಟಕರಮೆನುತ್ತುಮರೆಬರ್
ಕುಟಿಳಾಳಕಿಗೊಲ್ದು ಕಂಕಣಂಗಳನಿಟ್ಟರ್ ೫೬

ಕುಚಕೋಕಂಗಳ್ ದಶನಾಂ
ಶು ಚಳಚ್ಚಂದ್ರಿಕೆಯಿನಗಲದಂತು ಮುಖಾಗ್ರ
ಪ್ರಚುರಶ್ರೀಬಿಸಲತೆಯನೆ
ಖಚಿಯಿಸಿದವೊಲಿಕ್ಕೆ ಹಾರಮೆಸೆದುದು ಕೊರಲೊಳ್ ೫೭

ಅರುಣಾಧರರುಚಿಯಿನಧಃ
ಕರಿಸದಿರಿನ್ನೆಮ್ಮನೆಂದು ಕಾಲ್ವಿಡಿದಿರ್ಪಂ
ತಿರೆ ಪದ್ಮರಾಗಮಣಿನೂ
ಪುರಮಂ ನೃಪವಧುಗೆ ತುಡಿಸಿದಳ್ ಮತ್ತೊರ್ವಳ್ ೫೮

ಏಱೆಸದಿಕ್ಷುಶರಾಸನ
ವೇಱೆಸಿದಪುದೀಗಳಂಗಭವನಿಂದೆನೆ ನೀ
ಱೋಱೆದ ಮಂಗಳವಸದನ
ಮೇಱೆ ಮನಂಗೊಳಿಸಲಾರ್ತುದಾ ಕೋಮಳೆಯಾ ೫೯

ವ॥ ಅಂತು ಕೆಯ್ಗೆಯ್ದ ಭಾನುಮತಿಯಂ ಮಂಗಳಾಚರಣೋಚ್ಚಾರಣರವಂಗಳುಂ ಮಂಗಳಗೇಯರವಂಗಳುಂ ಮಂಗಳತೂರ್ಯಸ್ವನಂಗಳುಂ ಪುಣ್ಯಾಹಘೋಷಂಗಳುಮೆಸೆಯೆ

ವೃದ್ಧಕಂಚುಕಿಪುರಸ್ಸರಮೊಡಗೊಂಡುಬಂದು ವಿವಾಹಮಂಟಪಮಧ್ಯಸ್ಥಿತ ವೇದಿಕಾತಳಮನಳಂಕರಿಸಿದ ಮಣಿಮಯಪೀಠದೊಳಿರಿಸಿ ಮಹಾಪದ್ಮರಾಜನಂ ಬರಿಸಿ

ಕಂ॥ ಪುರಿಪುಂಡರೀಕಿಣೀಶಂ
ಗುರುತರಶೌರ್ಯಾಂಬುನಿಧಿಗೆ ಜಯವರ್ಮನೃಪಂ
ಪರಮೋತ್ಸವದೆ ಪುರೋಹಿತ
ಪುರಸ್ಸರಂ ತಾನೆ ಬಂದು ಕೆಯ್ನೀರೆಱೆದಂ ೬೦

ರತಿಪತಿಯುಂ ರತಿಯುಂ ಜನ
ನುತರಕ್ತಾಶೋಕಮಹಿಜಮಂ ಬಲಗೊಳ್ವಂ
ತತಿಶಯದಿಂ ಬಲಗೊಂಡರ್
ಕ್ಷಿತಿಪತಿಯುಂ ಸತಿಯುಮೊಗೆದ ಹೋಮಾನಲನಂ ೬೧

ಭೂಪತಿ ತಳೆದಂ ಪ್ರಗುಣಗು
ಣೋಪೇತಂ ಭಾನುಮತಿಯನುತ್ಸವತೂರ್ಯಂ
ವ್ಯಾಪಿಸೆ ದೆಸೆಯಂ ನೃಪತಿ ಮ
ಹಾಪದ್ಮಂಗಿತ್ತು ಪೆರ್ಮೆಯಂ ಜಯವರ್ಮಂ ೬೨

ವ॥ ಅಂತು ವಿವಾಹೋತ್ಸವಂ ಸಕಳಜನಮನೋತ್ಸವಮಾಗೆ ತದನಂತರಮನಂತ ಸಾಮಂತಸೀಮಂತಿನೀಪ್ರಮುಖವೃದ್ಧಕಂಚುಕಿಸಹಿತಂ ಪುರಪುರಂಧ್ರಿಯರುಂ ಪುರೋಹಿತ ಪುರಸ್ಸರಂ ಧರಾಮರರುಂ ಪರಸಿ ಸೇಸೆಯನಿಕ್ಕೆ ಮಂಗಳಪಾಠಕರ್ ನಿಂದು

ಕಂ॥ ಆಯುಂ ಶ್ರೀಯುಂ ವಿಜಯಮು
ಮಾಯತಿಯುಂ ನಿಮ್ಮೊಳೊದವಿ ಸುಸ್ಥಿರಮಪ್ಪಂ
ತೀಯುತ್ತುಮಿರ್ಕೆ ಕಾಂಚನ
ಕಾಯಂ ಪ್ರಭು ಶಾಂತಿ ನಿನಗೆ ವಿಭುಶಾಂತಿಜಿನಂ ೬೩

ಮ॥ ದಿನಪಾಬ್ಜಾರಬುಧಾಮರೇಜ್ಯಸಿತಮಂದಾಹೀಂದ್ರಕೇತುವ್ರಜಂ
ನಿನಗೇಕಾದಶರಕ್ಕೆ ಸೂಕ್ತಿಸತಿಯುಂ ಶ್ರೀಕಾಂತೆಯುಂ ಜೈನಶಾ
ಸನದೇವೀಕುಳಮುಂ ಸಮಂತು ಸಮಸಂದಿಷ್ಟಾರ್ಥಮಂ ಮಾೞ್ಕೆ ಕಾಂ
ತ ನೃಲೋಕಸ್ತುತ ನಿಮ್ಮೊಳಿಂದು ವಿಜಯಂ ಭದ್ರಂ ಶುಭಂ ಮಂಗಳಂ ೬೪

ಮ.ಸ್ರ॥ ಸ್ಥಿರಲಕ್ಷ್ಮೀಲಾಸ್ಯಲೀಲಾಭವನಮುಗಲ್ದುರಂ ಭಾರತೀಚಂದ್ರಿಕಾಭಾ
ಸುರಚಂದ್ರಂ ಚಾರುವಕ್ತ್ರಂ ಸ್ಮರವಿಜಯವಧೂಕೇಳಿಶೈಳಂ ಭುಜಾಗ್ರಂ
ಪರಮಶ್ರೀಲಕ್ಷ್ಯಸಲ್ಲಕ್ಷಣಮಣಿಗಣಗರ್ಭಾರ್ಣವಂ ಮೂರ್ತಿಯೆಂಬಂ
ತಿರೆ ಪೆಂಪಂ ತಾಳ್ದಿದಂ ನಾಬ್ಜಪ್ರಭು ಗುಣನಿಳಯಂ ಶಾಂತನುತ್ಕೀರ್ತಿಕಾಂತಂ ೬೫

ಚಂ॥ ಪರಹಿತದೊಳ್ ನಯಕ್ರಮದೊಳಾಯತಿಯೊಳ್ ಸುಚರಿತ್ರೆಯೊಳ್ ದಯಾ
ಪರಿಣತೆಯೊಳ್ ಕಾಳವಿಭವದೊಳ್ ಭುಜವಿಕ್ರಮದೊಳ್ ಗಭೀರದೊಳ್
ಗರಿಮೆಯೊಳೂರ್ಜಿತಪ್ರಭುತೆಯೊಳ್ ಪ್ರಭುಮಂಡನ ಶಾಂತಿವರ್ಮ ಸಾ
ಕ್ಷರಸಮಯಾವಳಂಬ ನಿನಗಾರ್ ದೊರೆ ಮಾನವರೀ ಧರಿತ್ರಿಯೊಳ್ ೬೬

ಮ॥ ಜನಕಂ ವಿಶ್ರುತವಂದಿವೃಂದಜನಕಂ ಬಪ್ಪಂ ಲಸನ್ಮಾತೆ ಮಾ
ನಿನಿ ಮಾದಾಂಬಿಕೆ ಭಾಮೆ ಭಾಮಲೆ ಜಿನೇಂದ್ರಂ ದೈವರಮ್ಮಮ್ಮ ಕೀ
ರ್ತಿನಿದಾನಂ ನೃಪಕಾರ್ತವೀರ್ಯನಹಿತಕ್ಷ್ಮಾಭೃದ್ಧ್ವಹದ್ವಜ್ರನಾ
ಳ್ದನೆನಲ್ ನಾಟ್ಪ್ರಭು ಶಾಂತಿವರ್ಮನನದಿನ್ನೇವಣ್ಣಿಪಂ ಬಣ್ಣಿಪಂ ೬೭

ಕಂ॥ ಸಾಸಿರದೈತ್ಯಾಧಿಪರೆ
ಣ್ಬಾಸಿರ ಖಚರೇಂದ್ರರೀವ ಗುಣದೊಳ್ ಪದಿನೆ
ಣ್ಬಾಸಿರರವಿನಂದನರೇಂ
ಪಾಸಟಿಯಾದಪರೆ ಭವ್ಯ ಚೂಡಾಮಣಿಯೊಳ್ ೬೮

ಪೊಳೆವಮೃತಕರನ ಕಿರಣದ
ಬಳಲಿಗೆ ಮಚ್ಚರಿಸುವಂತಿರೆಣ್ದೆಸೆಗಂ ಬ
ಳ್ವಳನೀಳ್ದು ಬಳೆದು ಚೆಲ್ವಂ
ತಳೆದುದು ಸಲೆ ಶಾಂತಿವರ್ಮಕೀರ್ತಿಪ್ರಸರಂ ೬೯

ವ॥ ಎಂದು ಮಂಗಳವೃತ್ತಂಗಳನೋದಿಸುವ ಕವಿಜನನಲ್ಪಕಲ್ಪದ್ರುಮನ ಚತುರ ವಿತರಣದಿಂ ಸಂತೃಪ್ತರಾದರನ್ನೆಗಮಿತ್ತಲ್

ಕಂ॥ ಭೂಪತಿ ತಳೆದಂ ಪ್ರಗುಣಗು
ಣೋಪೇತಂ ಭಾನುಮತಿಯನುತ್ಸವತೂರ್ಯಂ
ವ್ಯಾಪಿಸೆ ದೆಸೆಯಂ ನೃಪತಿಮ
ಹಾಪದ್ಮಂಗಿತ್ತು ಪೆರ್ಮೆಯಂ ಜಯವರ್ಮಂ ೭೦

ಸಗರಂ ಪೃಥುಚಕ್ರವರ್ತಿ
ಭಗೀರಥ ಯಯಾತಿ ನಳ ಹರಿಶ್ಚಂದ್ರ ಭರತ
ನೃಗ ನಹುಷ ಬಾಣ ಬಲಿ ದಶ
ಕಂಠರ್ ಪಾಸಟಿಯೆ ನಿನಗೆ ಜಿನೇಂದ್ರಚರಣಕಮಲಭೃಂಗಾ ೭೧

ವ॥ ಅಂತು ಜೀಯದ ಚಾಗದ ಪೆರ್ಮೆಯಂ ಮೆಱೆದು ಮದುವೆಯಂ ಮಾಡಿ ಕತಿಪಯದಿನಂಗಳಿಂ ಮಗಳನಳಿಯನುಮಂ ಪುಂಡರೀಕಿಣಿಗೆ ಕಳಿಪಿ ಬರ್ಪಾಗಳ್

ಮ॥ ಕಮಳಾನಂದಮನುಂಟುಮಾಡಿದುದು ಭಾಸ್ವನ್ಮಂಡಳಾಗ್ರಪ್ರಭಾ
ವಮನಂಗೀಕರಿಸಿತ್ತುದಗ್ರ ಧರಣೀ ಭೃದ್ವಾಹಿನೀಜೀವನೋ
ದ್ಯಮಮಂ ಪೀರ್ದುದು ವಿದ್ವಿಷತ್ಕುವಳಯಶ್ರೀಯಂ ಕಟಲ್ಚಿತ್ತದೇ
ನೊ ಮಹಾಪದ್ಮನೃಪಪ್ರತಾಪದಹನಜ್ವಾಳೋಷ್ಮಮೋ ಗ್ರೀಷ್ಮಮೋ ೭೨

ಚಂ॥ ನಗಕುಳ ಕುಂಜರಂ ಜಳಧಿ ಕಾನನಮುರ್ವರೆಯೆಂಬಿವೆಲ್ಲಮಾ
ವಗಮೊಳಗಾದುದೊ ಕುಳಿಶವಹ್ನಿಗೆ ವಾರಿದ ವಹ್ನಿಗೌರ್ವವ
ಹ್ನಿಗೆ ವನವಹ್ನಿಗುಗ್ರವಿಷವಹ್ನಿಗೆನಲ್ ಕಡುಕಾಯ್ಪುಗುರ್ವಿಪಲ್
ಪುಗಲೆಡೆವೆತ್ತುದಿಲ್ಲ ಖಗಮುಂ ಮೃಗಮುಂ ಪರಿತಾಪದೇಟ್ಗೆಯೊಳ್ ೭೩

ಉ॥ ಪುತ್ತಿನ ಬಾಯ್ಗಳಿಂದುಗುವ ಚಂಡಮರೀಚಿಮರೀಚಿ ಧಳ್ಳೆನಲ್
ಕುತ್ತಿದ ಕೊಳ್ಳಿಯಂತೆ ಸುಡೆ ನೆತ್ತಿವರಲ್ಗಳರಲ್ಗಳಂದದಿಂ
ಪೊತ್ತಿ ಸಿಡಿಲ್ದು ಪಾಱುದುವು ವಕ್ತ್ರವಿಷಾನಲವಿಸ್ಫುಲಿಂಗಮು
ಣ್ಮುತ್ತಿರೆ ಕೋಪದಿಂ ವಿಷಧರಂಗಳೊಳೆಂಬಿನಮಾ ನಿದಾಘದೊಳ್ ೭೪

ಕಂ॥ ಕೆಂಡದ ಮಟಿ ಕೊಂಡಪ್ಪುದ
ಜಾಂಡದಿನಿಳೆ ದೂವೆಗಿಚ್ಚನುಗುಟ್ಟಿಪ್ಪುದು ದಿ
ಙ್ಮಂಡಲಮಿಂದುರಿಗೊಳ್ಳಿಯ
ತಂಡದಿ ಕೇರ್ಗಟ್ಟಿತೆನಿಸಿ ತೋಱತ್ತದಱೊಳ್ ೭೫

ಉ॥ ತಾಱದ ಬಳ್ಳಿ ಮಿಾಱದ ದವಾನಲನಾಱದ ಬೆಂಚೆ ತಾಯ್ಮಣ
ಲ್ದೋಱದ ಸಿಂಧು ಬೆಂದೊಡೆದು ಪಾಱದ ಬೆಟ್ಟು ಕರಿಂಕುವೋಗಿ ಕ
ರ್ಪೇಱದರಣ್ಯಭೂಮಿ ಬೆಮರೇಱದ ದೇಹಿಸಮೂಹಮೂಷ್ಮೆಯಂ
ಪೇಱದ ಭಾನು ಭಾನುಬಿಸುಪೇಱದಿಳಾತಳಮಿಲ್ಲದೆಲ್ಲಿಯುಂ ೭೬

ಕಂ॥ ನಡುವಗಲ ಪುಗಿಲ ಬಿಸಿಲೊಳ್
ಬಿಡೆ ನಾಲಗೆಗಿಟ್ಟು ತೇಂಕಿ ತನ್ನಯ ನೆಟಲಂ
ಕಡುಗಪ್ಪಲೆಂದು ಪೊರಳ
ಲ್ಕೊಡರಸಿ ಮೆಯ್ಯಿಕ್ಕಲಿರ್ದ ವನ್ಯಲುಲಾಯಂ ೭೭

ನೋಡಿದೆಮೆ ಸೀಗುಮೊಯ್ಯನೆ
ತೀಡಿದ ಬಗೆ ಬೇಗುಮುರಿದೊಡುಗ್ರತೆಯಿಂ ಮಾ
ತಾಡಿದ ಬಾಯ್ ಪೊತ್ತುಗುಮನೆ
ನಾಡೆಯಗುರ್ವಿಸಿದುದನುಗತೋಷ್ಮಂ ಗ್ರೀಷ್ಮಂ ೭೮

ವ॥ ಅಂತೆನಿಸಿದ ನಿದಾಘದೊಳ್ ಬರುತ್ತಿರೆಯಿರೆ ಮುಂದೊಂದೆಡೆಯೊಳ್

ಕಂ॥ ವನಮಿರ್ದುದತನುಗಿದು ಜೀ
ವನಮಂ ಗಜಲಕ್ಷ್ಮಿಗಿದುವೆ ಪುದಿದೇಱುಂಜ
ವ್ವನವಖಿಳಜಗತ್ರಯವಾ
ವನಮೆನೆ ರತಿಯ ನವಲಾಸ್ಯಲೀಲಾಭವನಂ ೭೯

ಮ॥ ವನಮಾಲಾಕಳಿತಂ ಸುಪರ್ಣಮಿಳಿತಂ ಸತ್ಕಾಂತಿಪೀತಾಂಬರಂ
ಘನಸುಚ್ಛಾಯನನಂತಭೋಗನಿಲಯಂ ಲಕ್ಷ್ಮೀಸಮೇತಂ ಸುದ
ರ್ಶನಸೇವ್ಯಂ ಸುಮನಃಪ್ರತಾನನಿಚಿತಂ ತೋಡಾಯ್ತುಪೇಂದ್ರಂಗೆ ಮ
ಜ್ಜನಕಂಗೀಮರನೆಂದು ಮಾಮರಕೆ ಕಾಮಂ ಕೊಟ್ಟನಾತಿಥ್ಯಮಂ ೮೦

ಉ॥ ಕಾದಲರಂ ಪಳಂಚಲೆವ ಪಂಚಶರಕ್ಕದಱಂಕುರಂ ಪಳುಂ
ಬಾದುದು ಕೆಂದಳಿರ್ ಮಿಸುಪ ಕೆಂಗಱಿಯಾದುದು ಹೂದೊಡಂಬೆ ಪಿ
ಟ್ಕಾದುದು ಕೊಂಬು ಕೋಲಕುಟಿಲತ್ವಮನೋಜೆಗೆ ತಿರ್ದಲೊತ್ತುಗೊಂ
ಬಾದುದು ಬಟ್ಟಿನೆಂದು ನಲಿದಂ ನುಡಿದಂ ನಡೆ ನೋಡಿ ಚೂತಮಂ ೮೧

ವ॥ ಅದಲ್ಲದೆಯುಂ

ಮ॥ ಮೊದಲೊಳ್ ಕೂರಿಸಿ ಕೂರ್ತವರ್ ಬಱಿಕಗಲ್ದಿರ್ದಂತೆ ಕೊಲ್ ಹಂದಿ ಸ
ತ್ತುದು ನಾಯ್ ಸತ್ತುದು ಪಾಪಮಿಲ್ಲ ಪಱಿಯಿಲ್ಲೆಂದಂಗಜಂ ತೋಳ ನೀ
ಳದ ಪತ್ರಂ ಬರೆದೀಯೆ ಕೊಂಡು ಮಧುಚೌತಂ ಪೂಸಿ ನೇರಿಟ್ಟ ಮಾ
ರ್ಗದೆ ಕಂಕೆಲ್ಲವ ಶೋಣಪಲ್ಲವಚಯಂ ಚೆಲ್ವಾದುವುದ್ಯಾನದೊಳ್ ೮೨

ವ॥ ಅಂತು ನಯನಾನಂದಮಪ್ಪ ನಂದನಮಂ ನೋಡುತ್ತುಂ ಬರ್ಪಲ್ಲಿ ಆತ್ಮೀಯಸುರಭಿ ನಿಶ್ವಾಸಂಗಳಿಂದಮುದ್ಯಾನಮಂ ಸುರಭಿಸುತ್ತುಂ ಪುಷ್ಪಾಪಚಯನಿರತರಾದಲ್ಲಿ

ಕಂ॥ ರಂಜಿತಮಧುಮಧುಕರಚಯ
ಮಂ ಜಿತನಾನಾಪ್ರಸೂನಚಯಮಮಂ ಮದವ
ತ್ಕುಂಜರಗಾಮಿನಿ ಪೆಱಳೇ
ಱುಂಜವ್ವನೆ ಕೊಯ್ದಳೊಸೆದು ಪೊಸಮಲ್ಲಿಗೆಯಂ ೮೩

ವ॥ ಮತ್ತಮೊಂದೆಡೆಯೊಳವಧಾರಿತ ವಿದ್ಯಾವಿಳಾಸಿನೀ ವಿಭ್ರಮೆಯುಮು ಪಹಸಿತಪುರಂದರ ಕಾಮಿನೀಸೌಂದರ್ಯರೂಪಕೃತ ಸೌಭಾಗ್ಯವತಿಯುಮೆನಿಸಿದಾಕೆ

ಕಂ॥ ತರಳತರ ತಾರಹಾರೋ
ತ್ಕರರಚನೆಗೆ ಸುಟ್ಟಿದೋಱ್ ನೀರೇರುಹಬಂ
ಧುರಗಂಧಿ ರಮಣನಿಂದಂ
ಸುರಹೊನ್ನೆಯ ನನೆಯನೆಸೆಯೆ ಕೊಯ್ಸಿದಳೊರ್ವಳ್ ೮೪

ವ॥ ಮತ್ತಮೊಂದೆಡೆಯೊಳ್ ಅವಿರಳಕುಸುಮಪರಿಮಳಮುದಿತ ಮದವದಳಿಕುಲ ಮೃದುಮಧುರ ರವದಿಂ ಸುರಭಿತ ಸಹಕಾರ ಭೂರುಹಾಂತರದೊಳ್

ಕಂ॥ ಉಪರಿಜಕುಸುಮಮನೋಪನ
ನಪೂರ್ವಮಂ ತನಗೆ ಬೇಡಲಾಲಿಂಗನಲೋ
ಲುಪನೆತ್ತಿ ನೀನೆ ಕೊಯ್ಯೆಂ
ದುಪಾಯದಿಂದಪ್ಪಿಕೊಂಡನಲಘುಸ್ತನಿಯಂ ೮೫

ವ॥ ಮತ್ತಮೊಂದೆಡೆಯೊಳಖಿಳ ಯೌವನೋದ್ದಾಮರಾಮಾಭಿರಾಮ ಕಾಮಿನಿ ಯೆನಿಸಿದಾಕೆ

ಕಂ॥ ಬೆನ್ನಂ ಸೋರ್ಮುಡಿ ಮುಟ್ಟೆ ಸ
ಮುನ್ನತಕುಚೆ ಮರನನಡರ್ವ ಸೋಗೆಯ ತೆಱದಿಂ
ಪುನ್ನಾಗದ ಬಿರಿಮುಗುಳಂ
ತನ್ನಿನಿಯನ ಪೆಗಲನೇಱ ಕೊಯ್ದುಳದೊರ್ವಳ್ ೮೬

ವ॥ ಮತ್ತಮೊಂದೆಡೆಯೊಳೊರ್ವಳ್

ಕಂ॥ ಎಳಮಾವಿನ ತಳಿರಂ ಕೊಳ
ಲೆಳೆಯಳ್ ಕೆಂದಳಮನೊಯ್ಯೆ ತಳಮಂ ತಳಿರ್ಗೆ
ತ್ತೆಳಸಿ ಗಿಳಿ ಕರ್ದುಕೆ ಭಯವಿ
ಹ್ವಳೆ ಚೆಚ್ಚರಮಪ್ಪಿದಳ್ ನಿಜೇಶನ ಕೊರಲಂ ೮೭

ವ॥ ಆಗಳ್

ಕಂ॥ ಖರಕರತಾಪಂ ಕರಮು
ಬ್ಬರಿಸೆ ತರತ್ತರಳ ತಾರ ಹಾರಾವಳಿಯಂ
ತಿರೆ ಘರ್ಮಬಿಂದುಚಯಮಂ
ಕುರಿಸಿದುವಬಲೆಯರ ತನುಲತಾವಿತತಿಗಳೊಳ್ ೮೮

ವ॥ ಅಂತೊಗೆದ ಘರ್ಮೋದಬಿಂದುವಿಂ ಪರೆದಂಗರಾಗಮುಂ ನಸುಗುಂದಿದ ಕುಸುಮವಿಭೂಷಣಂಗಳುಂ ಬೆರಸು ಮದಾಲಸಮರಾಳಗತಿಯಿಂ ಬಂದು ವನಲತಾ ಗೃಹಂಗಳೊಳ್ ವಿಶ್ರಮಿಸುತ್ತೆ ರೂಪಹೃತವನವಿಹರಣರಾಗಿ ಭಾನುಮತಿಪುರಸ್ಸರಂ ಸಕಳ ಪೆಂಡವಾಸಮೊಡವರೆ ಜಲಕೇಳೀಲೋಲನೆನಿಸಿದ ಯೂಥಪತಿ ಕರೇಣುಯೂಥಂ ಬೆರಸು ಬರ್ಪಂತೆ ಬಂದು

ಕಂ॥ ಮುರಹರನಂತೆ ರಥಾಂಗ
ಸ್ಫುರಿತಂ ನಕ್ಷತ್ರದಂತೆ ಮೀನಾನ್ವಿತಮಂ
ಬರದಂತೆ ರಾಜಹಂಸೋ
ದ್ಧುರಶೋಭಾಕರಮೆನಿಪ್ಪ ಕಮಳಾಕರಮಂ ೮೯

ವ॥ ಅದಂ ಕಂಡೆಯ್ದೆವೆಂದು ಜಳಕೇಳೀವಿಳಾಸೋದ್ಯುಕ್ತನಾದಾಗಳ್

ಉ॥ ಆ ಲಲನಾಕದಂಬಕ ವಿಶಾಲನಿತಂಬಸುಪೀವರಸ್ತನಾ
ಸ್ಫಾಲನದಿಂದಮಬ್ಜಿನಿ ಕಲಂಕಿ ತರತ್ತರಳೋರ್ಮಿಮಾಲೆಯಂ
ಲೀಲೆಯಿನಾಂತುದಂತುಟೆ ಮಹದ್ವಿಮಳತ್ವ ಗಭೀರವೃತ್ತಮಾ
ಬಾಲೆಯ ತೋಳ್ ತಗುಳ್ತರೆ ವಿಕಾರಮನೆಯ್ದುವುದಾವ ವಿಸ್ಮಯಂ ೯೦

ಕಂ॥ ಮತ್ತಗಜಕುಂಭಸದೃಶಕು
ಚಾತ್ತಪಯಃಕ್ಷೋಭದಿಂ ರಥಾಂಗಯುಗಂ ಮೆ
ಯ್ವೆತ್ತಿರ್ದಗಲ್ದುದೇನು
ದ್ವೃತ್ತ ಕೃತಾನ್ಯಪ್ರಸಾದಮೆಂಬುದುಮುಂಟೇ ೯೧

ವ॥ ಅದಲ್ಲದೆಯುಂ

ಕಂ॥ ಇನಿಯಳ್ ಮುನಿದೊಡೆ ತಿಳಿಪ
ಲ್ಕಿನಿಯಂ ಕಾಲ್ವಿಡಿಯಲೆಂದು ಮುಱುಗಿದನಾ ಕಾ
ಮಿನಿಗೆ ಜಲದಿವ್ಯದಿಂ ಶು
ದ್ಧನಪ್ಪ ಬಗೆಬಗೆಯೊಳೊಂದಿ ಮುಱುಗುವ ತೆಱದಿಂ ೯೨

ವ॥ ಅದಲ್ಲದೆಯುಂ

ಕಂ॥ ಇದು ವದನಮಿದು ಸರೋರುಹ
ಮಿದು ಕುಚಮಿದು ಚಕ್ರವಾಕಮಿದು ಕಣ್ಣಿದು ಮೀ
ನಿದು ಕುರುಳಿದು ಮಧುಕರಮೆಂ
ಬುದನಱಿಯಲ್‌ಬಂದುದಿಲ್ಲ ಕಮಳಾಕರದೊಳ್ ೯೩

ಪಸರಿಸಿದ ಕೃತಕಸೌಂದ
ರ್ಯಸೌರಭಂ ಪಿಂಗೆ ಪಿಂಗದಂಗಂಗಳೊಳೇ
ನೆಸೆದುದೊ ಹೃದಯಂಗಮಮಾ
ಯ್ತುಸದಳಾತ್ಮಾಂಗಸೌರಭಂ ಲಲನೆಯರಾ ೯೪

ವ॥ ಅಂತು ಜಲಕೇಳೀವಿನೋದದಿಂ ನೀಡುಂಪೊೞ್ತುಗಳೆದಂದಿನ ದಿನಮಲ್ಲಿರ್ದು ಮಱುದಿವಸಂ ಪುಂಡರೀಕಿಣಿಗೆ ನಿಜ್ಜವಯಣಂ ಬಂದು

ಕಂ॥ ಮಂಗಳತೂರ್ಯರವಂ ಮಿಗೆ
ಮಂಗಳಗಾಯಕನಿನಾದಮೊಡರಿಸೆ ಭಾಸ್ವ
ನ್ಮಂಗಳಪಾಠಕನಿನದಂ
ಸಂಗಳಿಸಿರೆ ನೃಪತಿ ರಾಜಗೃಹಮಂ ಪೊಕ್ಕಂ ೯೫

ವ॥ ಪೊಕ್ಕು ಪದ್ಮರಾಜಂಗಂ ವನಮಾಳಿಕಾಮಹಾದೇವಿಗಂ ನಿರ್ಭರಭಕ್ತಿಭರದಿಂ ಪೊಡಮಡುವುದುಮವರ್ ತೆಗೆದು ತೞ್ಕೈಸಿಕೊಂಡು ಪಲವು ನಲ್ವರಕೆಗಳಿಂ ಪರಸಿ ಪರಮೋತ್ಸವ ಪರಂಪರೆಯನೆಯ್ದಿ ಸುಖಮಿರ್ಪುದುಂ ಕತಿಪಯದಿನಂಗಳಿಂ ಮಹಾಪದ್ಮರಾಜನ ಮಹಾದೇವಿಯೆನಿಸಿದ ಭಾನುಮತಿಯ ಗರ್ಭದೊಳ್ ಪೂರ್ವಜನ್ಮಸಂಚಿತಾಗಣ್ಯ ಪುಣ್ಯಪ್ರಭಾವದಿಂ

ಕಂ॥ ಜಿನವಾಕ್ಯಾಮೃತಮಣಿಭಾ
ಜನನಭಿನುತವಂಶವಾರ್ಧಿವರ್ಧನಲೀಲಾ
ವನಧಿಸುತನರ್ಥಿಜನನಂ
ದನನಾ ಧನದೇವನೆಂಬ ಸುತನುದಯಿಸಿದಂ ೯೬

ವ॥ ಅಂತಿರ್ಪುದುಮೊಂದುದಿವಸಂ ಮಹಾಪದ್ಮನಾಭಂ ಮಂಟಪಮಧ್ಯಸ್ಥಿತ ಸಿಂಹಾಸನಾಸೀನನೊಡ್ಡೋಲಗಂಗೊಟ್ಟಿರೆ

ಕಂ॥ ದಿನಲಕ್ಷ್ಮಿ ವಾರುಣೀಸೇ
ವನೆಗಿರದೆೞ್ತಿರ್ಪ ಪದದೊಳವಳಡಿಯಿಂ ಬಿ
ಟ್ಟನುಪಮಮಣಿಮಂಜೀರಕ
ವೆನಲಿನನಪರಾದ್ರಿಶಿಖರಶೇಖರನಾದಂ ೯೭

ಚಂ॥ ಕಮಳಿನಿಯಂ ವಿಯೋಗಿನಿಯನೀಕ್ಷಿಸಿ ಮತ್ತೆ ಬೃಹದ್ವಿಯೋಗವೇ
ಗಮನೊಳಕೊಳ್ಗುಮಾಗಳೆ ಮದಾಗಮನೋತ್ಸವಮಂ ನಿವೇದಿಸಂ
ದಮೃತಮರೀಚಿ ಪೇೞ್ದು ನಿಜದೂತಿಯನುತ್ಸುಳಲಕ್ಷ್ಮಿ ಗಟ್ಟಿದಂ
ತಮರ್ದೆಸೆದಿರ್ದ ಸಂಜೆ ಪರಿರಂಜಿಸುತಿರ್ದುದಪೂರ್ವಶೋಭೆಯಿಂ ೯೮

ಮ॥ ಇನನೆನ್ನಾಸೆಯನೊಲ್ಲದೀಗಳಪರಾಶಾಯೋಷಿದಾಸಕ್ತನಾ
ದನವಂ ಸಂಚಳನೆನ್ನ ಪಕ್ಕದೊಳಗಿರ್ದುಂ ಸಜ್ಜಿರಂ ಪೋಗಿ ಪ
ದ್ಮಿನಿಯಂ ಪೊರ್ದುವೆನೆಂದು ನೊಂದು ಹರಿದಿಕ್ಕಾಂತಾನನಂ ಕಂದಿತೆಂ
ಬಿನೆಗಂ ಮಬ್ಬು ಪೊದಟ್ಟು ಪರ್ವಿದುದಗುರ್ವಿಂ ಪೂರ್ವದಿಗ್ಭಾಗಮಂ ೯೯

ಕಂ॥ ಕಾಲಿಂದಿಯನಮರಾಪಗೆ
ನೀಲಾದ್ರಿಯನಾ ಹರಾದ್ರಿಯಸಿತಾಬ್ಜಿನಿಯಂ
ಪೋಲೆ ಸಿತಾಬ್ಜಿನಿ ಪೋಲ್ತಿರೆ
ಕಾಲದ ಮರ್ವುರ್ವಿ ಪರ್ವಿತುರ್ವೀತಳಮಂ ೧೦೦

ಅ॥ ಅಲ್ಲಿ

ಮ॥ ದೆಸೆಯಂ ನೋಡದಿರಕ್ಕ ನಿನ್ನ ಧವಳಾಪಾಂಗಂ ಪೊದಟ್ದಿಪ್ಪುದಿ
ನ್ನುಸಿರಲ್ವೇಡೆಲೆ ಮುಗ್ಧೆ ನಿನ್ನ ದಶನಾಂಶುಜ್ಯೋತ್ಸ್ನೆ ನೀಳ್ದಪ್ಪುದೆಂ
ದು ಸಮಾಲಿಂಗಿತಮೌನೆಮಾಡಿ ಸಖಿಯಂ ಸಂಕೇತಸದ್ಮಕ್ಕೆ ಪ
ಲ್ಲಿಸರಂದೋಱುತೆ ಮುಂತೆಮುಂತೆ ನಡೆದೊಯ್ದಳ್ ದೂತಿ ಚಾತುರ್ಯದಿಂ ೧೦೧

ಕಂ॥ ಇದು ಸಾಂಧ್ಯತಾಂಡವಾರಂ
ಭದೊಳೀಶ್ವರಬಾಹುನರ್ತನಕ್ಷೇಪದೊಳು
ಣ್ಮಿದ ಪುಷ್ಪಾಂಜಳಿಯೆನಲೇ
ನುದಯಿಸಿದುದೋ ಗಗನದೊಳಗೆ ತಾರಾನಿಕರಂ ೧೦೨

ಇನಿ(ಸಿನಿ)ಸಂ ತಮದೊಡ್ಡೊ
ಯ್ಯನೆ ತಾನೊರಸಿತಮ(ರೇಶ್ವ)ರಾಶಾವನಿತಾ
ನನಮಿನಿಸಿನಿಸಂ ಬೆಳ್ಪಂ
ಜನಿಯಿಸಿದುದಯಾದ್ರಿಯಂ ಸುಧಾಕರನಡರ್ದಂ ೧೦೩

ವ॥ ಆ ಪ್ರಸ್ತಾವದೊಳ್

ಮ॥ ಅಮರಾಧೀಶ್ವರಗಂಧಸಿಂಧುರ ಶಿರಸ್ಸಿಂಧೂರಮಿಂದ್ರಾಲಯಾ
ಗ್ರಿಮಲೀಲಾರುಣನೂತ್ನ ರತ್ನಕಳಶಂ ಜಂಭಾರಿಶುಂಭತ್ಸರಾ
ಗಮಯ್ಯೈಕಾತಪವಾರಣಂ ಶತಮಖಶ್ರೀವಕ್ತ್ರಕಾಶ್ಮೀರರಾ
ಗಮಿದೆಂಬೇಟ್ಗೆಯನಾಂತು ರಕ್ತರುಚಿಯಿಂ ಚೆಲ್ವಾಯ್ತು ಚಂದ್ರೋದಯಂ ೧೦೪

ವ॥ ಅದಲ್ಲದೆಯುಂ

ಮ॥ ಅನಿಮೇಷಧ್ವಜವಶ್ಯಯಂತ್ರವಲಯಂ ಕಂದರ್ಪಶೌರ್ಯಪ್ರಶ
ಸ್ತಿನಿಯುಕ್ತಸ್ಥಿತಶಾಸನೈಕಫಳಕಂ ಪುಷ್ಪಾಸ್ತ್ರಕೇಳೀಲತಾ
ವನಪುಷ್ಪಸ್ತಬಕಂ ಮನೋಜವಿಜಯಪ್ರಸ್ಥಾನಮಾಂಗಲ್ಯಪಾ
ವನಪುಣ್ಯಾಮೃತಕುಂಭಮೆಂಬೆಸಕಮಂ ತಾಳ್ದಿತ್ತು ಚೆಲ್ವಿಂದುವಾ ೧೦೫

ಮಸ್ರ॥ ಗಗನಂ ತೀವಲ್ಕೆ ಮೇಣ್ಕೊರ್ವಿದುದೊ ತುಹಿನಕೃದ್ಬಿಂಬವಾ ಶಾಂತಮಂ ಕೆ
ಯ್ಮಿಗೆ ಮೇಣ್ ದುಗ್ಧಾಬ್ಧಿ ಬೆಳ್ಳಂಗೆಡೆದು ಕವಿದುದೋ ಲೀಲೆಯಂ ತಾಳ್ದಿ ಮೇಣೀ
ಜಗಮಂ ಶ್ರೀಶಾಂತಿವರ್ಮ ಪ್ರಥಿತಯಶಮೆ ತಾಳ್ದಿರ್ದುದೋ ಪೇೞೆಮೆಂಬ
ನ್ನೆಗಮುರ್ವೀಚಕ್ರಮಂ ಕಣ್ಗೊಳಿಸಿದುದು ಲಸಚ್ಚಂದ್ರಿಕಾಶ್ರೀವಿಳಾಸಂ ೧೦೬

ವ॥ ಆಗಳೋಲಗಮಂ ವಿಸರ್ಜಿಸಿ ಸಂಧ್ಯಾಸಮಯ ಸಮುಚಿತ ನಿತ್ಯನಿಯಮಮಂ ನಿರ್ವರ್ತಿಸಿ ಪ್ರಭುಗುಣಾರ್ಣವಪೂರ್ಣಚಂದ್ರಂ ಚಂದ್ರಿಕಾಶ್ರೀಯಂ ನೋಡಿ ಪುರಮಂ ತೊೞಲ್ದು ನೋಡುವ ಬಗೆಯಿಂ ನಾಗರಿಕವಿಟವಿದೂಷಕಾದಿಗಳ್ವೆರಸು ರಾಜಭವನಮಂ ಪೊಱಮಟ್ಟು

ಕಂ॥ ಅಂಗಜನಿಭನೆಯ್ದಿದನರ
ಸಂ ಗಣಿಕಾವಾಟಮಂ ವಿಟೀವಿಟಜನತಾ
ಸಂಗತ ಮಧುರವಚಸ್ತಬ
ಕಂಗಳನಾತ್ಮೀಯ ಕರ್ಣಪೂರಂ ಮಾಡಲ್ ೧೦೭

ವ॥ ಆ ಪ್ರಸ್ತಾವದೊಳ್

ಮಸ್ರ॥ ಲಳನಾಧಮ್ಮಿಲ್ಲಮಾಲಾಕುಸುಮ ಪರಿಮಳಾಮೋದಿ ಕಂದರ್ಪಕೇಳೀ
ಚಳಿತ ಸ್ತ್ರೀಪುಂಸಘರ್ಮೋದಕಲವಶಿಶಿರಂ ಸೌಧವಾತಾಯನಪ್ರೋ
ಚ್ಚಳಿತೋದ್ಯದ್ಧೂಪಧೂಮ ಪ್ರಬಳವಿಲುಳಿತ ಶ್ಯಾಮಳಾಲೀಲೆಯಿಂದಂ
ಸುೞೆಗುಂ ಸೌಭಾಗ್ಯಘಂಟಾರವಮುಖರಿತಮಂದಪ್ರಚಾರಂ ಸಮೀರಂ ೧೦೮

ಮ॥ ವನಿತಾನೂಪುರಜಾಲಚಾರುನಿನದಂ ಸೌಭಾಗ್ಯಘಂಟಾಚಳ
ನ್ನಿನದಂ ಪಂಜರಕೀರಮಂಜುನಿನದಂ ಕಾಂಚೀಕನತ್ಕಿಂಕಿಣೀ
ನಿನದಂ ರಂಜಿತಗೀತವಾದ್ಯನಿನದಂ ಮಾಧುರ್ಯವೀಣಾಲಸ
ನ್ನಿನದಂ ಪೊಂಪುೞೆಯಾದುದಚ್ಚರಿಯೆನಲ್ ವೇಶ್ಯಾಲಯಾನೀಕದೊಳ್ ೧೦೯

ವ॥ ಅಂತು ಮನೋಜರಾಜಲೀಲಾಕರಸೌಧಕೂಟದೊಳ್ ಬರ್ಪಾಗಳ್ ವಿವಿಧ ವಿಚಿತ್ರಭಿತ್ತಿ ಸಂಪತ್ತಿರಮ್ಯಹರ್ಮ್ಯತಳಖಚಿತ ಮರಕತಕುಟ್ಟಿಮಪ್ರಾಂಗಣವಿರಚಿತ ಮತ್ತವಾರಣಂಗಳಂ ನೆಮ್ಮಿ

ಚಂ॥ ಚಲನ ನಿತಂಬಬಿಂಬ ಕುಚ ಕರ್ಣ ಕಪೋಲ ಲಲಾಟದೇಶದೊಳ್
ತೊಲಗಿ ಪಿನದ್ಧನೂತ್ನಮಣಿನೂಪುರ ಕಾಂಚನಸೂತ್ರಹಾರಮಂ
ಡಲಮಕರಾಂಕಪತ್ರತಿಳಕಾವಳಿಗಳ್ ವಿಟಕೋಟಿಯಂ ಪಳಂ
ಚಲೆಯೆ ವಿಳಾಸಮಂ ತಳೆದುದೊತ್ತೆಗೆ ನಿಂದ ವಿಳಾಸಿನೀಜನಂ ೧೧೦

ವ॥ ಮತ್ತಮೊಂದೆಡೆಯೊಳೊರ್ವ ಚಪಳಚತುರವಿಟಂ

ಮ॥ ವನಜಾತಾನನೆ ಪೇಟ್ ಸುಧಾಂಶುಯಶ ಕೇಳ್ ಹಂಸಾಂಗನಾಯಾನೆ ಪೇಟ್
ಘನನಾದಾನ್ವಿತ ಕೇಳ್ ಮದದ್ವಿರದಕುಂಭೋರೋಜೆ ಪೇಟ್ ಸಿಂಹಶೌ
ರ್ಯನಿಭಾ ಕೇಳಳಿಮಾಳಿಕಾ ಕಬರಿ ಪೇಟ್ ಸಚ್ಚಂಪಕಾಮೋದ ಕೇ
ಳೆನಲಾ ಕಾಂತೆಯನಂತೆ ಬಿಟ್ಟನದನಿನ್ನೇನೆಂಬೆನಾಶ್ಚರ್ಯಮಂ ೧೧೧

ವ॥ ಮತ್ತಮೊಂದೆಡೆಯೊಳೊರ್ವಂ ತನ್ನ ಕೆಳದಿಗಿಂತೆಂದಂ

ಚಂ॥ ಅರಸನೆ ರಂಜದಾನೆಹರಿದೆಯ್ದಿದೊಡಾಗಳೆ ನೂಂಕುತಿರ್ದುವಾ
ತುರಗಮನಕ್ಕೆ ಸೈರಿಸದೆ ಹೆಗ್ಗಡೆಗಂಜಿರೆ ಮನ್ಮನೋರಥಂ
ವಿರಥಮನೆಯ್ದಲಾಂ ದ್ವಿವೆದೆಯ್ದಿದೆನಾ ಚತುರಂಗಯುಕ್ತಿ ಬೇ
ರ್ವರಿದಿರೆ ಪಂಡಿರೊಲ್ದೊಲವನೇಟಿಸುವಾತನೆ ಗಾಂಪನಲ್ಲನೇ ೧೧೨

ವ॥ ಮತ್ತಮೊಂದೆಡೆಯೊಳೊರ್ವಳ್

ಮ॥ ಇನಿಯಂ ಮೆಲ್ಲನೆ ತೂಗೆ ಬಣ್ಣಿಸೆ ಜನಂ ತನ್ನಂ ಮನೋರಾಗದಿಂ
ಕನಕಾಂದೋಳಮನೇಜಿ ಮನ್ಮಥಧನುರ್ಜ್ಯಾರಾವಮಂ ಪೋಲ್ತು ಗೀ
ತನಿನಾದಂ ಬಗೆಗೊಂಡು ಕಾಮುಕಜನಪ್ರಕ್ಷೋಭಮಂ ಮಾಡೆ ಕಾ
ಮಿನಿಯೊರ್ವಳ್ ಪ್ರಭುಶಾಂತಿವರ್ಮನ ಯಶಶ್ರೀಲೀಲೆಯಂ ಪಾಡಿದಳ್ ೧೧೩

ವ॥ ಮತ್ತಮೊಂದೆಡೆಯೊಳವಿರಳ ಕುಸುಮಮಾಳಾನಿಚಯರಚಿತ ವಿವಿಧಮಣಿಗಣ ಖಚಿತ ವಿಚಿತ್ರಚೀನಾಂಬರಾಡಂಬರ ಲೀಲಾಂದೋಳಕೇಳಿಯೊಳ್

ಚಂ॥ ಪದಕೊರಲೊಳ್ಪು ಕಣ್ಣಟಿವು ಕೆತ್ತು ತೊದಳ್ ಗಮಕಂ ನಯಂ ಬೆಡಂ
ಗೊದವೆ ಮಱಲ್ದು ವಾರವಧು ವಾರವಧೂತ್ತಮೆ ಪಾಡಿದಳ್ ವಿಳಾ
ಸದೆ ತೆರೆಯಲ್ಕೆ ಮೇಲುದಲೆದತ್ತಿದ ಸುತ್ತಿದ ಸೀಯನಪ್ಪ ಗೇ
ಯದ ಪೊಸಬಣ್ಣದೊಳ್ ಸೊಬಗ ಶಾಂತನನೂರ್ಜಿತ ಕೀರ್ತಿಕಾಂತನಂ ೧೧೪

ವ॥ ಮತ್ತಮೊರ್ವಳ್ ತನ್ನಿನಿಯಂ ತಡೆದು ಬಂದುದರ್ಕೇವಯ್ಸಿ

ಕಂ॥ ಮಾಣ್ಬಕ್ಕನೆ ನೀನವಳೊಳ್
ಕಣ್ಬಲ್ಲದೆ ಪೋಗಿ ನೆರೆದು ಮೆಲ್ಲನೆ ಬಂದ್ಯೆ
ನಾಣ್ಚುವೆಯಲ್ಲೆನುತಂ ಕಿಸು
ಗಣ್ಚಿ ಸರೋಜಾಕ್ಷಿ ಬಡಿದಳಾತ್ಮಪ್ರಿಯನಂ ೧೧೫

ಪೋಗದೆ ತಡೆದಿರ್ದಗಣಿತ
ಭೋಗಾಮರ ಭಾನುಮತಿಯ ಪದಹತದೊಳ್ ಪ
ಕ್ಕಾಗದೆ ನೀಂ ನೃಪ ಸೆಜ್ಜೆಗೆ
ಪೋಗೆಂದೆಂಬಂತೆ ಘಟಿಗೆ ಮೊಟಗಿತ್ತಾಗಳ್ ೧೧೬

ವ॥ ಅಂತು ರಾತ್ರಿಸಂಭೋಗಸ್ವೀಕೃತಮನೋರಾಗನುಮಾಗಿ

ಮ॥ ಮನಮೊಲ್ದಾನಿರೆ ತಾರಕಾನಿಕರದೊಳ್ ಕೂಡಿರ್ಪೆ ನೀನೆಂದು ಯಾ
ಮಿನಿ ಮೆಯ್ವೆರ್ಚಿದ ಕೋಪದಿಂ ವಿಕಳಭಾಷಾವೇಷಮುಣ್ಮಲ್ಕೆ ಪೋ
ಗೆ ನತಾಸ್ಯಂ ವಿಗತಾಂಬರಂ ಶಶಿ ವಿಕಾಸಂಗೆಟ್ಟು ಬೆಂಬಿಟ್ಟು ಪೋ
ದನದೇಂ ಚೋದ್ಯಮೊ ನೋಟಜ್ಪೊಡಂತುಟೆ ವಿಯೋಗೋದ್ಯೋಗಮೇಗೆಯ್ಯದೋ ೧೧೭

ಚಂ॥ ಹಿಮರುಚಿರಾಗದಿಂ ನೆರೆದು ಸತ್ವಫಲಕ್ಷ್ಮಿಯನಸ್ತಶೈಲದೊಳ್
ಸಮರತದಿಂ ಬಟಲ್ದೊಱಗಲಾಕೆಯ ಮೆಯ್ವಿಡಿದಾಱುತಿರ್ಪ ಮೆ
ಯ್ವೆಮರ್ವನಿಯಂತೆ ಬಾಂದೊಱೆಯೊಳೊಂದೆರಡಿರ್ದುವು ತಾರೆ ಬಿಟ್ಟಿ ಕುಂ
ಕುಮರುಚಿರಾಂಬರಂಬೊಲೆಸೆದಿರ್ದುದು ಪೂರ್ವದಿಶಾರುಣಾಂಬರಂ ೧೧೮

ವ॥ ತದನಂತರಂ

ಕಂ॥ ಜಳಜಭವಂ ಮಾನಸುರಾ
ಚಳದ ಸುರಾಚಳದ ಮೈಮೆಯಂ ತೂಗೆ ಸುರಾ
ಚಳದಡರ್ದ ಕೊಱತೆಗಿಕ್ಕಿದ
ತೊಳಗುವ ಗುಂಜೆಯೆನೆ ರಂಜಿಸಿದನುದಯಾರ್ಕಂ ೧೧೯

ವ॥ ಆಗಳ್ ನಿರ್ವರ್ತಿತನಿತ್ಯನಿಯಮನುಂ ಕೃತದೇವತಾರ್ಚನನುಮಾಗಿ ಮಹಾಪದ್ಮನಾಸ್ಥಾನಮಂಟಪದೊಳಿರ್ಪುದುಂ ಋಷಿನಿವೇದಕನೊರ್ವಂ ಪರಿತಂದು ನಿಟಿಳತಟಘಟಿತಕರಸರೋಜನಾಗಿ ಸಾಷ್ಟಾಂಗವೆಱಗಿ ಪೊಡೆವಟ್ಟು ದೇವ ನಿಮ್ಮ ಬಹಿರುದ್ಯಾನದೊಳ್ ಭೂತಹಿತಜಿನರ್ ಬಿಜಯಂಗೆಯ್ದರೆಂದು ಬಿನ್ನಪಂಗೆಯ್ಯಲವರಿರ್ದ ದೆಸೆಗೇಟಡಿಯಂ ನಡೆದು ಸಾಷ್ಟಾಂಗಪ್ರಣತನಾಗಿ ಋಷಿನಿವೇದಕಂಗಂಗಚಿತ್ತಮಂ ಕೊಟ್ಟು ಸನ್ನಾಹಭೇರಿಯಂ ಪೊಯ್ಸಿ

ಮ॥ ಧರಣೀಶಸ್ತ ಸಮಸ್ತ ಮಂಡಳಿಕ ದಂಡಾಧೀಶ ಸಾಮಂತ ಸಾ
ಕ್ಷರ ಪೌರೋಹಿತ ಪೆಂಡವಾಸಲಲನಾಶುದ್ಧಾಂತಕಾಂತಾಲಸ
ತ್ಪರಿವಾರಂ ಬೆರಸರ್ಚನಾವಳಿ ಸಮೇತಂ ನೂತನಾನಂದದಿಂ
ನರನಾಥಂ ಪೊಱಮಟ್ಟನಂದು ಪದೆಪಿಂ ಶ್ರೀಭವ್ಯರತ್ನಾರ್ಣವಂ ೧೨೦

ಗದ್ಯಂ

ಇದು ಸಮಸ್ತ ಭುವನಜನಸಂಸ್ತುತ ಜಿನಾಗಮಕುಮುದ್ವತೀ ಚಾರುಚಂದ್ರಾಯ ಮಾಣ ಮಾನಿತ ಶ್ರೀಮದುಭಯಕವಿಕಮಳಗರ್ಭ ಮುನಿಚಂದ್ರಪಂಡಿತದೇವ ಸುವ್ಯಕ್ತಸೂಕ್ತಿ ಚಂದ್ರಿಕಾಪಾನ ಪರಿಪುಷ್ಟಮಾನಸಮರಾಳ ಗುಣವರ್ಮನಿರ್ಮಿತಮಪ್ಪ ಪುಷ್ಪದಂತ ಪುರಾಣದೊಳ್ ಜಳಕೇಳೀವರ್ಣನಂ ಅಷ್ಟಮಾಶ್ವಾಸಂ

ನವಮಾಶ್ವಾಸಂ

ಕಂ॥ ಶ್ರೀನಿರತಿಶಯಗಭೀರನಿ
ನಾದಂ ಸೌಜನ್ಯಮಂಡನಂ ಜಿನನಿರ್ದು
ದ್ಯಾನವನಕ್ಕೆಯ್ತಂದಂ
ಮಾನಧನಂ ಪ್ರಭು ಗುಣಾಬ್ಜವನಕಳಹಂಸಂ ೧

ವ॥ ಅಂತು ಬಂದು

ಕಂ॥ ಬಲಗೊಂಡನಮರನಗಮಂ
ಬಲಗೊಳ್ವಿನನಂತಗಣ್ಯಪುಣ್ಯಾವಸಥಂ
ಬಲರಿಪು ಪರಿಪೂಜಿತ ಜಿನ
ನಿಲಯಮನನುನಯದಿನೆಸೆವ ಭವ್ಯೋತ್ತಮನಂ ೨

ವ॥ ಅಂತು ಬಲಗೊಂಡೊಳಗಂ ಪೊಕ್ಕು ಪ್ರಗಲ್ಭನಿರ್ಭರಭಕ್ತಿಯಿಂ ನಿಟಿಳತಟಘಟಿತಕರಸರೋಜನಾಗಿ

ಚಂ॥ ಅತನುಮದಪ್ರಭಂಜನ ಜನಸ್ತುತಸೂಕ್ತಿನಿವಾಸ ವಾಸವಾ
ರ್ಚಿತಪದಪದ್ಮ ಪದ್ಮಸದನಾಸ್ಪದವಿಕ್ರಮ ವಿಕ್ರಮಾಂಗಜ
ಕ್ಷಿತಿಧರವಜ್ರ ವಜ್ರಿರಚಿತಪ್ರಥಿತಾಯತತೂರ್ಯಘೋಷ ಘೋ
ಷಿತನವತತ್ವ ತತ್ವರಸವಾರಿಧಿ ನೀನೆ ವಲಂ ಜಿನೇಶ್ವರಾ ೩

ಮ॥ ಸಕಳಜ್ಞಾನಸುಖೈಕಮೂರ್ತಿ ಜಿನ ನಿನ್ನಂ ಕೀರ್ತಿಸಲ್ ನಾಕನಾ
ಯಕರುಂ ಶಕ್ತಿ ವಿಮುಕ್ತರಾದರದಱಿಂದಾವೇವೆವೆಂಬೀ ನಿರ
ರ್ಥಕ ವಾಗ್ಜಾಣಿಕೆವೇಡ ಪೂರ್ಣಮತಿವಿಸ್ತೀರ್ಣಂ ಪ್ರಸನ್ನಂ ಯಶೋ
ಧಿಕಮಾಗಿರ್ದೊಡಮಬ್ಧಿಗೇವಿರಿದೊ ಪೆಂಪಿಂ ಪೇೞ್ ಸರೋಜಾಕರಂ ೪

ವ॥ ಎಂದಿವು ಮೊದಲಾದನೇಕ ವಸ್ತುಸ್ತವ ಗುಣಸ್ತವ ರೂಪಸ್ತವಂಗಳಿಂ ಜಗತ್ತ್ರಣೂತ ಭೂತಹಿತ ಜಿನರಂ ಸ್ತುತಿಯಿಸಿ ಪೊಡವಟ್ಟು ತದನಂತರಂ

ರಗಳೆ॥ ಶ್ರೀಕನಕಕಲಶಭೃತನಿರ್ಮಳಜಲಂಗಳಿಂ
ಹಿಮಘಸೃಣ ಸಮ್ಮಿಶ್ರಮಳಯಜರಸಂಗಳಿಂ॥
ಸುರಭಿಪರಿಮಳವಿರಳಕಳಮಾಕ್ಷತಂಗಳಿಂ
ಮಂದಾರಸಿಂಧುವಾರಾದಿಕುಸುಮಂಗಳಿಂ॥

ಸರಸಮೃದುಭಕ್ಷ್ಯಯುತದಿವ್ಯಚರುಕಂಗಳಿಂ
ಶೋಣಮಣಿಕಿರಣರುಚಿರಚಿತದೀಪಂಗಳಿಂ॥
ಕಾಳಾಗರುಪ್ರಮುಖ ಧೂಪ ಧೂಮಂಗಳಿಂ
ಪನಸಾಮ್ರ ನಾರಂಗ ದಾಡಿಮ ಫಲಂಗಳಿಂ॥
ಮತ್ತಮೆನಿತೊಳವೆಸೆವ ಬಹುವಿಧಾರ್ಚನೆಗಳಿಂ
ಪೂಜಿಸಿದನನಘಜಿನಪಾದಯುಗಳಂಗಳಂ॥
ಭಾರತೀಚರಣಸರಸಿರುಹಯುಗ್ಮಂಗಳಂ
ಜಿನಮುನಿಪದಾಂಬುಜಯುಗಂಗಳಂ ಮಂಗಳಂ॥ ೫

ವ॥ ಅಂತರ್ಚಿಸಿ ಗುರುಭಕ್ತಿಪೂರ್ವಕಂ ಪಂಚಮುಷ್ಟಿಯಿಂ ವಂದಿಸುವುದುಂ

ಕಂ॥ ಕಾರುಣ್ಯಾಂಭೋನಿಧಿಗಂ
ಭೀರರವಂ ಪುದಿದುದೆನಿಸಿ ರಾರಾಜಿಸಿದ
ತ್ತಾ ರಾಜಸಭೆಗೆ ನಿರುಪಮ
ಸೂರಿಜನಂ ಪರಸೆ ಧರ್ಮವೃದ್ಧಿಯ ಘೋಷಂ ೬

ವ॥ ಅಂತು ಪರಸುವುದುಂ ಮಹಾಪದ್ಮರಾಜಂ ಪರಮಾನಂದಮಂ ಪಡೆವಂತೆ ಪರಮಾನಂದ ಪರಂಪರೆಯನೆಯ್ದಿ ಸಮುಚಿತಾಸನದೊಳ್ ಕುಳ್ಳಿರ್ಪುದುಂ ಅವರ್ ಸದ್ಧರ್ಮಸ್ವರೂಪಮಂ ಸಂಕ್ಷಿಪ್ತಮುದಿತನತ್ಯಾಸನ್ನಭವ್ಯನೆಂಬುದನಗಾಧ ಕೇವಳಬೋಧದಿಂದಱಿದು ಪಂಚಾಸ್ತಿಕಾಯ ಷಡ್ದ್ರವ್ಯ ಸಪ್ತತತ್ವ ನವಪದಾರ್ಥ ಸ್ವರೂಪಮಂ ನಿರೂಪಿಸುವುದುಂ ಕೇಳ್ದು ತತ್ವಭಾವನೆಯಂ ಪರಿಭಾವಿಸುತ್ತುಮಿರಲದುವೆ ವೈರಾಗ್ಯಹೇತುವಾಗೆ ಸಂಸಾರಶರೀರಭೋಗ ವಿರಕ್ತನಾಗಿ ತನ್ನ ರಾಜ್ಯಮಂ ಧನದೇವಂಗೆ ಕೊಟ್ಟು

ಕಂ॥ ಒಡಲಂ ಸಂಸೃತಿಲತಿಕೆಯ
ಮಡಿಲಂ ಸಂಸಾರದುಃಖಲಹರಿಕೆಗಳ ಪೆ
ರ್ಗಡಲಂ ಸುಖಮುಖನಿದ್ರೆಯ
ವೊಡಲಂ ಬಿಡಲಱಿಯದಂಗೆ ನಿರ್ವೃತಿಯುಂಟೇ ೭

ವ॥ ಎಂದು ಸಂಸಾರಭೀರುತ್ವದಿಂ ಸಂಸಾರಭೀರುಗಳುಮಪ್ಪ ಸಾಸಿರ್ವರರಸುಮಕ್ಕಳ್ವೆರಸು ದೀಕ್ಷೆಯಂ ಕೆಯ್ಕೊಂಡು

ಮ॥ ಜಿನನಂ ನಮ್ರಮರಾಸುರೇಂದ್ರಜಿನನಂ ದುರ್ವಾರಮಾರಪ್ರಭಂ
ಜನನಂ ಶಾಶ್ವತ ವಿಶ್ವತತ್ವಮನನಂ ಮಾಂಗಲ್ಯಕೈವಲ್ಯಲೋ
ಚನನಂ ಸದ್ವಿನತೋಪಶಾಂತಮನನಂ ಮುಕ್ತ್ಯಂಗನಾಲೋಚನಾಂ
ಜನನಂ ತಾಳ್ದಿದನಾತ್ಮಹೃತ್ಕಮಳದೊಳ್ ಯೋಗೀಂದ್ರವೃಂದಾರಕಂ ೮

ಕಂ॥ ನೆಱೆ ನೃಪತಿ ದೀಕ್ಷೆಗೊಂಡೊಡೆ
ಜಱಿಗೊಂಡಂ ಗೂಡುಗೊಂಡನಾರ್ತಂಗೊಂಡಂ
ಮಱಿಗೊಂಡನೊತ್ತುಗೊಂಡಂ
ಪೇಱಿತೇಂ ಸ್ಮರನಸ್ತಕಾಂಡನಪಕೋದಂಡಂ ೯

ವ॥ ಅಂತು ದೀಕ್ಷೆಯಂ ಕೆಯ್ಕೊಂಡು ಗ್ರಾಮ ನಗರ ಖೇಡ ಖರ್ವಡ ಮಡಂಬಾದಿಗಳಂ ವಿಹಾರಿಸುತ್ತುಂ ಚಿರಕಾಲಮಿರ್ದುಯೇಕಾದಶಾಂಗಧರಂ ಷೋಡಶ ಭಾವನೆಗಳಿಂ ತೀರ್ಥಕರಪುಣ್ಯಮಂ ಕಟ್ಟಿ ತದನಂತರದೊಳಾರಾಧನಾವಿಧಿಯಿಂ ಮುಡಿಪಿ ವಿಂಶತಿ ಸಾಗರೋಪಮಾನಾಯುಷ್ಯನುಂ ಮೂಱುಮೊಟಿನರೆನಿಡಿಯನುಮಾಗಿ

ಕಂ॥ ಪ್ರಾಣತಕಲ್ಪದೊಳತುಳ
ಪ್ರಾಣತ ಸುರರಾಜನಾಗಿ ಪಂಚಮಪೃಥ್ವೀ
ಪ್ರಾಣಾವಧಿಬೋಧದಿನ
ಕ್ಷೂಣತರಾರಣವಿಮಾನದೊಳ್ ಸುಖಮಿರ್ದಂ ೧೦

ವ॥ ಅನ್ನೆಗಮಿತ್ತಲ್ ಜಂಬೂದ್ವೀಪಲಕ್ಷ್ಮಿಗೆ ವಿಲಾಸೋಪಕರಣಮೆನಿಸಿರ್ಪ

ಮ॥ ಸದಯಾರತ್ನಕರಂಡದೊಳ್ ಭರತಧಾತ್ರೀಖಂಡದೊಳ್ ರಂಜಿಸಿ
ರ್ಪುದು ಕಾಶೀವಿಷಯಂ ಮನೋಜವಿಷಯಾರಮ್ಯಂ ಜಗತ್ಕಾಮ್ಯಮಂ
ತದು ಪೃಥ್ವೀತಿಳಕಂ ಕ್ಷಮಾಕಟಕಮುರ್ವೀಕಾಂಚಿ ವಿಶ್ವಂಭರಾ
ವಿದಿತೋತ್ತಂಸಮಿಳಾವತಂಸಮವನೀಹಾರಂ ಮಹೀನೂಪುರಂ ೧೧

ಮ.ಸ್ರ॥ ನವರತ್ನೋತ್ಪತ್ತಿಯಿಂ ಬೆಟ್ಟುಗಳಖಿಳಕುಜೋತ್ಪತ್ತಿಯಿಂ ಕಾಡುಗಳ್ ಕೈ
ರವ ಕಂಜೋತ್ಪತ್ತಿಯಿಂ ಸಿಂಧುಗಳನಘಜನೋತ್ಪತ್ತಿಯಿಂದೂರ್ಗಳಂಗೋ
ದ್ಭವ ಬೀಜೋತ್ಪತ್ತಿಯಿಂ ಭೋಗಿಗಳಖಿಳ ಫಳೋತ್ಪತ್ತಿಯಿಂ ಕೆಯ್ವೊಲಂಗಳ್
ಧ್ರುವಸತೋದೃತ್ತಿಯಿಂ ಕ್ಷತ್ರಿಯರೆಸೆದು ಸುಖೋತ್ಪತ್ತಿಯಂ ಬೀಱುತಿರ್ಕುಂ ೧೨

ಕಂ॥ ಪ್ರಕಟಿಸುವುವಖಿಳಧಾನ್ಯ
ಪ್ರಕರಂಗಳ್ ಕೆಲದ ಪೊಲದ ಸಿರಿಯಂ ಜನತಾ
ಸುಕೃತಂ ಬೆಳೆವಂತಿರೆ ಬೆಳೆ
ದಕೃಷ್ಟಪಚ್ಯಂಗಳತುಳಫಳ ರುಚ್ಯಂಗಳ್ ೧೩

ಚಂ॥ ಕಳಮವನಕ್ಕೆ ಬಂದೆಱಪ ಕೀರದೆಱಂಕೆಯ ಗಾಳಿಯಿಂ ಶ್ರಮಂ
ಗಳೆದಪೆವೆಂದು ನಿಂದು ನೆವದಿಂ ಪಥಿಕರ್ ಗಿಳಿ ಸೋವ ಪಾಮರೀ
ಕುಳಮನಗಲ್ದು ಪೋಗಲಣಮಾಱದೆ ಸೋಲ್ತೆಳೆಸಿರ್ಪರಾ ಲಸ
ಲ್ಲಳನೆಯರಂಗಮೇಂ ಸ್ಮರವಿಳಾಸಕಳಾಪಮೊ ವಜ್ರಲೇಪಮೋ ೧೪

ವ॥ ಮತ್ತಮಲ್ಲಿ

ಮ.ಸ್ರ॥ ಸಕಳೋದ್ಯಾನಂಗಳೊಳ್ ಸಂತತಸರಸಫಳವ್ರಾತದಿಂ ಸೇವ್ಯಮಲ್ಲ
ಲ್ಲಿ ಕರಂ ಖರ್ಜೂರವೃಂದಂ ಕ್ರಮುಕಸಮಿತಿ ನೀಪವ್ರಜಂ ಬೀಜಪೂರ
ಪ್ರಕರಂ ನಾರಂಗಸಂಘಂ ಕದಳಿಸಮುದಯಂ ನಾಳಿಕೇರಾವನೀಭೂ
ನಿಕರಂ ಚೂತೋತ್ಕರಂ ದಾಡಿಮತತಿ ಪನಸಶ್ರೇಣಿ ಜಂಜೀರಜಾಳಂ ೧೫

ಚಂ॥ ಎನಸುಮಶೋಕಭಾಗಿವನಮುಂ ಜನಮುಂ ಸುಮನಶ್ಶ್ರೀಮುಖಾ
ಸನ ಮದನಾನುಷಂಗಿ ವನಮುಂ ಜನಮುಂ ಸುಮನೋವಿಳಾಸನೂ
ತನತಿಲಕಾವಿಶೋಭಿ ವನಮುಂ ಜನಮುಂ ಕಮಳಾಕರಾವಲಂ
ಬನ ಜನಿತಾರ್ದ್ರಭಾವಮಹಿತಂ ವನಮುಂ ಜನಮುಂ ತದುರ್ವಿಯೊಳ್ ೧೬

ನಯವಿದರೆಲ್ಲಮಲ್ಲಿಯೆ ಕಳಾನ್ವಿತರಲ್ಲಿಯೆ ಪುಣ್ಯವಂತರ
ಲ್ಲಿಯೆ ಸಿರಿವಂತರಲ್ಲಿಯೆ ಸುರೂಪಿಗಳಲ್ಲಿಯೆ ದಾನಶೂರರ
ಲ್ಲಿಯೆ ರಣಶೂರರಲ್ಲಿಯೆ ವಿಭೋಗಿಗಳಲ್ಲಿಯೆ ಚಾಗಿವೃಂದವ
ಲ್ಲಿಯೆ ಎನೆ ಸಾರಮಂಜಿನಗಮಾ ಮಹಿ ಪೋಲ್ವುದು ಭೋಗಭೂಮಿಯಂ ೧೭

ವ॥ ಅಂತೆನಿಸಿ

ಉ॥ ಕೂಡೆ ಸಮಸ್ತವಸ್ತು ಶತಸಾರಸಮೃದ್ಧಿಯಿನೊಪ್ಪುತಿರ್ಪುದಾ
ನಾಡು ದಿವಕ್ಕೆ ತೋಡು ಕುಸುಮೇಷುಗೆ ಬೀಡು ವೃಷದ್ವಿಪಕ್ಕೆ ತಾ
ಯ್ಗಾಡು ನಯಕ್ಕೆ ಪಾಡು ವಿಭವಕ್ಕಮದೂಡು ಸುಖಾಮೃತಕ್ಕೆ ನೀ
ರ್ಗೋಡು ತಮಕ್ಕೆ ನೀಡು ನಯನಕ್ಕಳದಿಂಗಳ ಕಾಡಿದೆಂಬಿನಂ ೧೮

ಶಾ॥ ಆ ನಾಡೆಂಬ ಸರೋವರಕ್ಕೆ ವಿಕಸತ್ಪಂಕೇಜಮಂಬಂತೆ ಲ
ಕ್ಷ್ಮೀನೀಡಂ ಭುವನೋನ್ನತಂ ಸುವಿಧಿಜನ್ಮಾವಾಸಮುದ್ಯದ್ಗುಣ
ಸ್ಥಾನಂ ಶಶ್ವದಿನಪ್ರತಾಪಮುದಿತಂ ದೋಷಾಕರದ್ವೇಷಿ ನಿ
ತ್ಯಾನಂದಂ ಕವಿರಾಜಹಂಸರುಚಿರಂ ಕಾಕಂದಿನಾಮಂ ಪುರಂ ೧೯

ಹರಿಣೀ॥ ಅದಱ ಬಹಿರುದ್ಯಾನಂ ನಾನಾ ಕುಜಾತನಿಕೇತನಂ
ಮದವದಳಿನೀಗಾನಸ್ಥಾನಂ ಸದಾನಿಲವಾರಣಾ
ಭ್ಯುದಯವಿಪಿನಂ ಮಲ್ಲೀವಲ್ಲೀನಟೀನಟನಾಂಗಣಂ
ಮದನಕದನಕ್ರೀಡಾನೀಡಂ ವಿಯೋಗಿಭಯಂಕರಂ ೨೦

ಕಂ॥ ವನರಾಶಿಯೊಳಗೆ ಬೆಳೆದೆಸೆ
ವನೇಕ ವಿದ್ರುಮದ ಲತೆಯ ಪೊಂಪುಟಿಯವೊಲಾ

ವನರಾಶಿಯೊಳಗೆ ಬೆಳೆದೆಸೆ
ವನೇಕ ವಿದ್ರುಮದ ಲತೆಯ ಪೊಂಪುಟಿ ರಯ್ಯಂ ೨೧

ವ॥ ಮತ್ತಮಲ್ಲಿ ಮನಸಿಜನಬಿಲ್ಲಬೀಜದಿಂ ಬೆಳೆಯದಿಕ್ಷುದಂಡಮಿಲ್ಲ ಪಂಚಬಾಣಕ್ಕೆ ತಕ್ಕ ಕುಸುಮಶರಮಂ ಬೆಸಲೆಯಾಗದ ಮಲ್ಲೀವಲ್ಲರಿಗಳಿಲ್ಲ ಹರಿಸುತಂಗೆ ಗಿರಿದುರ್ಗಮಾಗಿ ಪಾಳಿಸದ ಕೃತಕಶೈಲಮಿಲ್ಲ ಪದ್ಮಾಸನಸರಸೀದಳನರಸುತನದಿಂದಾ ಕ್ರಮಿಸದಬ್ಜಿನಿಗಳಿಲ್ಲ ದಿನಕರನ ಕರದ ಕಮಳದೊಡವುಟ್ಟದ ಕಮಳವನಂಗಳಿಲ್ಲ ವಸಂತಸಖಿಯರ ನಖನಿಕರಮಂ ನೆನೆಯಿಸದ ಕೇದಗೆಯಿಲ್ಲ ಪಗೆಯನೆನಸುಂ ತುಂಬಿಗಳಂ ಪಲುಂಬಿಸದ ಸಂಪಗೆಗಳಿಲ್ಲ ಮಂದಾರಮಹೀಜಮಂ ನಿಂದಿಸದ ಮಾಕಂದಮಿಲ್ಲ ನನೆವಿಲ್ಲ ಪಟಯಿಗೆಗೆ ತಕ್ಕ ಸುಟಿದಳಿರನೊಳಪೊಯ್ದು ಮಿಸುಗದಶೋಕಮಿಲ್ಲ ಕಾಮಕಾಮಿನಿಯರ ಕಡೆಗಣ್ಣ ನೋಟದಿಂ ಪುಳಕಿಸದ ತಿಳಕಮಿಲ್ಲ ವನದೇವತಾನಯನಾಂಶು ಕ್ಷೀರರಸನಿಷೇಕದಿಂ ಮುಕ್ಕುಳಿಸದ ವಕುಳಮಿಲ್ಲ ಮಧುವಧುವನಪ್ಪಿ ತಳ್ವಿನಂ ಕುಸುಮಿಸದ ಕುರವಕಂಗಳಿಲ್ಲ ಅಗ್ನಿಶಾಪವರೆಯಾಗದರಗಿಳಿಗಳಿಲ್ಲ ಶಂಬರಾರಿಯ ಕರ್ವುವಿಲ್ಲಿನ ಮೌರ್ವಿಯಾಗದಳಿಮಾಲೆಯ ಝುಂಕಾರಮಿಲ್ಲ ವಿರಂಚನಂಚೆಯುಂ ಪಳಂಚಲೆಯದಂಚೆಯಿಲ್ಲ ಕುಮಾರನ ಮಯೂರಮಂ ಕೂರಿಸದ ಸೋಗೆವೆಣ್ಣಿಲ್ಲ ರತಿಯಕೃತಕಾಚಳಂಗಳೊಪ್ಪಮನದಿರ್ಪದ ಕೃತಕಾಚಳಂಗಳಿಲ್ಲದಲ್ಲದೆಯುಂ

ಕಂ॥ ಭೂರಮಣಿಯ ಶೃಂಗಾರಾ
ಗಾರಮಿದೆನೆ ವಿರಹಿಜನಕೆ ಮದನನ ಕಾರಾ
ಗಾರಮಿದೆನೆ ಬಗೆಗೊಳ್ವುವು
ಹಾರಿದ್ರಕ ಜೀರಕಾರ್ದ್ರಕೇಕ್ಷುವನಂಗಳ್ ೨೨

ವ॥ ಮತ್ತಮುತ್ತರಳ ಜಳಚರಾನೀಕಂಗಳೆನಿಸುವ ತಟಾಕಂಗಳುಂ ಸಲ್ಲಲಿತ ಮೃದುಮೃಣಾಳ ದಂಡಂಗಳೆನಿಪ ಕಮಲಷಂಡಂಗಳುಂ ವಿರಹಿಜನಭೀಕರಂಗಳೆನಿಸುವ ಕುಮುದಾಕರಂಗಳುಂ ಅವಗಾಹಿತಪಥಿಕಜನಮನಕರುಣೆಗಳೆನಿಪ ಪುಷ್ಕರಿಣಿಗಳುಂ ವಿಮಳರತ್ನಸೋಪಾನಕಳಾಪಂಗಳೆನಿಪ ಕೂಪಂಗಳುಂ ಸರಸಸಾರಸಕಳಾಪಿಗಳೆನಿಪ ವಾಪಿಗಳುಂ ವನವನಿತೆಯ ದುಕೂಲದಂಚೆಯೆನಿಪ ಬೆಂಚೆಗಳುಂ ಸಂತತಸಂತೃಪ್ತಗೋಕುಲಶ್ರೇಣಿಗಳೆನಿಪ್ಪ ದ್ರೋಣಿಗಳುಂ ಮದನರಾಜ ವಿಜಯತಂತ್ರಂಗಳೆನಿಪ ಘಟೀಯಂತ್ರಂಗಳುಂ ನದೀಲತಾಂಗಿಯ ಮೇಗಾಲ್ಗಳೆನಿಪ್ಪ ಪರಿಕಾಲ್ಗಳುಂ ಅನಂಗಶೃಂಗಾರಲೀಲೆಗಳೆನಿಪ್ಪ ಪಾನೀಯಶಾಲೆಗಳುಂ ಅಧಿಕಸೌಗಂಧಕೋಟಿಗಳೆನಿಪ್ಪ ಪುಷ್ಪವಾಟಿಗಳುಂ ಪರಿಮಳಿತಮಂದಪವನಂಗಳೆನಿಪು ಪವನಂಗಳುಂ ಪೌರಜನಮನೋಭಿರಾಮಂಗಳೆನಿಸುವಾರಾಮಂಗಳುಂ ಆಶ್ರಿತಜನಕ್ಕಶೋಕ ನಿಳಯಮೆನಿಸಿದ ಸತ್ರನಿಳಯಂಗಳುಂ ವಿವಿಧಲೋಕವಿಶ್ರ ಮಣಸುಖಪರಿಣತಂಗಳೆನಿಪ ಬೀಡುದಾಣಂಗಳುಂ ಸಂಚಾರಿತತುರಗಪರಿಮಳಗ್ರಾಹ್ಯಾಳಿಗಳೆನಿಪ ಬಾಹ್ಯಾಳಿಗಳುಂ ಅನುದಿನವಿನೋದಿತಾನೇಕ ಕರಿಗಳೆನಿಸುವಾನೆವಜೆಗಳುಂ ಸತತಾಭ್ಯಾಸನಿರತ ಜನಾನುಗಾಮಿ ಗಳೆನಿಪ್ಪಾಯುಧಶ್ರಮಭೂಮಿಗಳುಂ ಬೀರಸಿರಿಯ ಬಿಂಕದ ಬಳಗಂಗಳೆನಿಸುವವಂ ಕಂಗಳುಂ ವಿವಿಧ ಗೋಕುಲಶ್ರೇಷ್ಠಂಗಳೆನಿಪ ಗೋಷ್ಠಂಗಳುಂ ತನಗನೂನಶೋಭೆಯಂ ಪಡೆಯೆ

ಕಂ॥ ಅಪರಿಮಿತಪೌರಕಳಕಳ
ಮಪೇತಬಾಳಾಪ್ರಪಂಚಮತಿವಿಶ್ರುತಮಿಂ
ತುಪಶಲ್ಯಂ ವಿರಹಿಗಳೆರ್ದೆ
ಗುಪಶಲ್ಯಮಿದೆನಿಸಿ ಸಂತತಂ ಸೊಗಯಿಸುಗುಂ ೨೩

ವ॥ ಅದಕ್ಕನತಿದೂರಮಾಗಿ

ಚಂ॥ ಜಲವಿಹಗೀಸಹಸ್ರವಿರುತಂ ಮರುತಂ ಮರುತಂಗೆ ಕಂಪನೀ
ವಲರ್ಗಳಿನೊಪ್ಪೆ ವಾತಚಳಿತಂ ಲುಳಿತಂ ವಳಿತಮ್ಮೊಳುಣ್ಮೆ ನಿ
ಚ್ಚಲುವೆಸೆದತ್ತು ಮತ್ಸ್ಯಮಕರಂ ಸುಕರಂ ಮಕರಂದರೇಣುವಿಂ
ಕಲಸಿ ಮಹಾಂಬುಖಾತಿ ಮೆಱೆಗುಂ ನೆಱೆಗುಂ ಕಱೆಗುಂ ಸುಶೋಭೆಯಂ೨೪

ವ॥ ಅಲ್ಲಿಂದಮೊಳಗೆ

ಕಂ॥ ಪ್ರಾಕಾರಂ ಕಾಂಚನರಚಿ
ತಾಕಾರಂ ಲಬ್ಧಲಲಿತಮಣಿತತಿಶೀರ್ಷ
ಸ್ವೀಕಾರಂ ಧೃತವಿತತಪ
ತಾಕಾರಂಜಿತವಿಯತ್ತಳಂ ಸೊಗಯಿಸುಗುಂ ೨೫

ಮ॥ ಬಲವದ್ವಜ್ರಮಹಾಕವಾಟಮರ್ದೆಗಟ್ಟಿಕ್ಕಟಂ ರಿಪುಶ್ರೇಣಿಗ
ಟ್ಟಲೆಮಾಕಟ್ಟಳೆ ವೈರಿವೀರರಸಮಂ ತೂಗಲ್ ಚತುರ್ಗೋಪುರಂ
ವಿಲಸನ್ನೂಪುರವಾಳ್ವ ಭೂಭುಜನ ವೀರಶ್ರೀಗೆ ವಂಕಂ ಯುಗ
ಪ್ರಲಯಾತಂಕಮರಾತಿಗಳ್ಗೆನಿಸಿ ಚೆಲ್ವಾಕೋಟೆ ಸಂಗೀಕೃತಂ ೨೬

ಚಂ॥ ತೊಳಗುವ ಪೊನ್ನ ಕೋಟೆಯ ಹರಿನ್ಮಣಿಗೋಪುರದಿಂದ್ರನೀಲದ
ಟ್ಟಳೆಗಳ ಪದ್ಮರಾಗ ಜಿನಗೇಹದ ಸೌಧಗೃಹಂಗಳಂಶುಮಂ
ಡಳಿ ನೆಗೆದಲ್ಲಿ ಮಂಡಳಿಸೆ ಪೌರಜನಕ್ಕೆಸೆಗುಂ ವಿತಾನಮಾ
ಗಳವಡೆ ಪಂಚವರ್ಣದಿನಜಂ ಸಮೆದಂಬರದಂತಿರಂಬರಂ ೨೭

ವ॥ ಅದಱೊಳಗೆ

ಚಂ॥ ಪ್ರಣುತವನಪ್ರದೇಶದೊಳಗಿರ್ಪ ಸಮೇರುವಿನಂತೆ ಪೊನ್ನ ಕೇ
ವಣದೊಳಗಿರ್ಪನರ್ಘ್ಯಮಣಿನಾಯಕದಂತೆ ವಿರಾಜಿಸಲ್ ನಭೋಂ
ಗಣದೊಳಗಿರ್ಪ ಪೂರ್ಣಶಶಿಮಂಡಳದಂತೆ ಸಮಸ್ತವಸ್ತುಲ
ಕ್ಷಣರಚಿತಾಭಿರಾಜಮೆಸೆದಿರ್ಪುದು ಬಂಧುರರಾಜಮಂದಿರಂ ೨೮

ವ॥ ಅಲ್ಲಿ ಸಲ್ಲಲಿತಸಪ್ತತಳವಿಳಾಸಾವಾಸಮುಂ ವಿಚಿತ್ರಚಿತ್ರಕರ್ಮನಿರ್ಮಾಪಣ ಸೌಮ್ಯಮುಂ ಸಕಳರತ್ನಸಂದರ್ಭಸಾರಸೌಂದರ್ಯಸಂಪೂರ್ಣಮುಂ ಸಮಸ್ತವಸ್ತು ವಿಸ್ತೀರ್ಣ ಮುಮಾಗಿ

ಮಸ್ರ॥ ನಿರುತಂ ಶುದ್ಧಾಂತಕಾಂತಾಗೃಹಪರಿವೃತಿಯಿಂ ಹಸ್ತಿಶಾಲಾದಿ ನಾನಾ
ಪರಿವಾರಾವಾಸವಿನ್ಯಾಸದಿನತುಳ ಪತಾಕಾವಳೀಲೀಲೆಯಿಂ ಭಾ
ಸುರಘಂಟಾಜಾಲದಿಂ ತೋರಣರುಚಿನಿಚಿತದ್ವಾರದಿಂ ರಂಜಿಸಿರ್ಕುಂ
ಕರುಮಾಡಂ ಕಾಂತಿನೀಡಂ ಮಣಿಮಯಕಳಶಾಪೀಡಮುತ್ತುಂಗಚೂಡಂ ೨೯

ಚಂ॥ ಅಸುಗೆಯ ಕೆಂಪು ಬಾಳೆಯ ಪಸುರ್ಪು ತಮಾಳದ ಕರ್ಪು ಚಂಪಕ
ಪ್ರಸರದ ಪೊನ್ನಬಣ್ಣವರೆಗುಂದದ ಕುಂದದ ಬೆಳ್ಪು ಸುತ್ತಲುಂ
ಪಸರಿಸಿ ಪರ್ವಿ ಮಾಣಿಕದ ಪಚ್ಚೆಯ ನೀಳದ ಪೊನ್ನ ಬೆಳ್ಳಿಯಾ
ಪಸರದ ಚೆಲ್ವನಿಮ್ಮಡಿಸೆ ಭೂಪಗೃಹೋಪವನಂಗಳೊಪ್ಪುಗುಂ ೩೦

ವ॥ ಅಂತು ಮಗಧವಿಷಯದಂತೆ ರಾಜಗೃಹಸನಾಥಮುಂ ನಾಟಕಪ್ರಕರದಂತೆ ವಿಪುಳವೀಥೀವಿಭಾಸಿಯುಂ ಮೇಘಪಟಳದಂತೆ ತಟಿಚ್ಛೃಂಗಾಟನಿರತಮುಂ ಸಿತಪಕ್ಷದಂತೆ ಚಂದ್ರಕಿರಣಾಂಕಿತ ನಿಶಾಂತಮುಂ ಗ್ರಹಗ್ರಾಮದಂತೆ ವಿತತಕೇತುಶತಶೋಭೆಯುಂ ಸೌಪರ್ಣನಂತೆ ಸಮಗ್ರ ಸಚಿವ ರಾಜಿತಪ್ರಭಾವಮುಂ ವಿಜಯಾರ್ಧಕುಧರದಂತೆ ಅಶೇಷವಿದ್ಯಾಧರನಿವಾಸಮುಂ ಮುಖಕಮಳದಂತೆ ಸದ್ವಿಜಕುಳೋಪಶೋಭಿಯುಂ ದಕ್ಷಿಣಕ್ಷೋಣಿಯಂತೆ ಭರತಜನ ಪರೀತಮುಂ ಚಾಪಗುಣದಂತೆ ಮಾರ್ಗಣನಿಷೇವ್ಯಮುಂ ಸಮುದ್ರದಂತೆ ಸಹಜಲಾವಣ್ಯಕಾಂತಾ ರಾಗರಮ್ಯಮುಂ ಪಾತಾಳದಂತೆ ಬಹುಭುಜಂಗಗಣಭೋಗಭಾಗಿಯುಂ ಪವನಪಥದಂತೆ ದಿವ್ಯಸಿಂಧುರವಿಭಾಸಿಯುಂ ಫಲಿತವನದಂತೆ ಬಹುರಾಜಿವಾಚಿತಮುಂ ಆದಿತ್ಯನಂತೆ ವಿವಿಧಗೋಕುಲಪ್ರಶಸ್ತಮುಂ ಶುದ್ಧಾಂತನಿಳಯದಂತನೇಕಮಹಿಷೀಸಮೇತಮುಂ ನೀಳಾಬ್ಜನಾಳದಂತೆ ನಿಷ್ಕಂಟಕಾತ್ಮಮುಂ ಸತ್ಪುರುಷನಂತೆ ನಿಷ್ಕಪಟಮಹಿಮಾವಳಂಬಿಯುಂ ಯಾಮ್ಯದಿಶೆಯಂತೆ ಧರ್ಮಪ್ರಭಾವವಿಭಾವಿತಮುಮೆಂಬ ಮಹನೀಯಮಹಿಮೆಯಂ ತಳೆದು

ಮ.ಸ್ರ॥ ಅತಿಲಾವಣ್ಯಾಪ್ಸರಃಸಂತತಿಗೆ ನೆಲೆ ಸುರಾಸೇವಿತಾನಂತದಾನಾ
ನ್ವಿತ ಮಾಧುರ್ಯಾಪ್ಸರಃಸಂತತಿಗೆ ನೆಲೆ ಸದಾಸೇವಿತಾನಿಂದ್ರಜನ್ಮಾ
ತತಮಿಂದ್ರಾರಾಧ್ಯಜನ್ಮಪ್ರತಿತಮಹಿಮ ನಾನೆಂದು ಕಾಕಂದಿ ನಾಕೋ
ನ್ನತಿಯಂ ಪ್ರೋತ್ತುಂಗ ಸೌಧಾಂಶುಗಳೊಳೆ ನಗುವಂತಿರ್ಪುದಾಧಿಕ್ಯದಿಂದಂ ೩೧

ಚಂ॥ ಅದು ಸಲೆ ರಾಜಶೂನ್ಯಮುರುರಾಜವಿಭಾಸಿಯೆನಾಂ ದ್ವಿಜಿಹ್ವಸಂ
ಪದಮದು ಸಜ್ಜನಕ್ಕೆ ಶರಣಾನವಿಚಾರಿನಿಪೃಷ್ಠಮಂತದಾಂ
ಸದಮಳಧರ್ಮಮಾರ್ಗಿಯೆನೆ ಭೋಗವತೀಪುರಮೆನ್ನನೆಂತು ಪೋ
ಲ್ವುದು ಚಿರಮೆಂದಧಃಕರಿಸುವಂತಿರೆ ಮೇಲೆನಿಸಿರ್ಪುದಾ ಪುರಂ ೩೨

ಮ॥ ಅದನಾಳ್ವಂ ಶರಣಾರ್ಥಿಪಾರ್ಥಿವಕುಳಕ್ಷೋಣೀಧರಂ ಬೋಧಿದು
ರ್ಮದಭೂಪಾಳಮದಾಂಧಸಿಂಧುರದಳತ್ಕಂಠೀರವಂ ಧರ್ಮಸಂ
ಪದುದೀರ್ಣಾರ್ಣವಪೂರ್ಣಚಂದ್ರನೆನಿಸಿರ್ಪಿಕ್ಷ್ವಾಕುವಂಶೋನ್ನತಂ
ಸದಯಂ ಕಾಶ್ಯಪಗೋತ್ರ ಪೂಜ್ಯತಿಲಕಂ ಸುಗ್ರೀವಭೂಪಾಲಕಂ ೩೩

ಕಂ॥ ಜಗಮೆಲ್ಲಮೊಂದೆ ಕೊರಲೊಳ್
ಪೊಗಟ್ ಕೂರಲ್ಕೊಂಡು ಧರೆಯನುದ್ಧರಿಸಿ ಸಮಂ
ತಗಲದೆ ಸಿರಿಕೊರಲೊಪ್ಪಿರೆ
ಸೊಗಯಿಸಿ ಸುಗ್ರೀವವೆಸರೊಳಾ ನೃಪನೆಸೆದಂ ೩೪

ಎರೆದರ್ಥಿಗೀವ ದಾನದೊ
ಳರಿವಂಶಮನಡಸಿ ಕಡಿವ ದಾನದೊಳಿಳೆಯಂ
ಪರಿಪಾಲಿಪ ದಾನದೊಳೇಂ
ಕರಿಯಂತಿರನಂತದಾನನೆನಿಸಿದನೊ ನೃಪಂ ೩೫

ಆಹವದೊಳಹಿತನೃಪಸಂ
ದೋಹಮನಾಕ್ರಮಿಸೆ ಬೀರಸಿರಿ ಜಯಲಕ್ಷ್ಮೀ
ಗೇಹನೆನಿಸಿದ ಸುಕಂಠನ
ಬಾಹಾಬಳವಿಳೆಗೆ ಪೊಗಟಲೇನೆನ್ನಳವೇ ೩೬

ವ॥ ಮತ್ತಂ

ಚಂ॥ ಅರಿಹರಿಣಂಗಳಂಗಜಜೆ ಬೆರ್ಚಿಸಿ ವೀರವಿರೋಧಿ ಗಂಧಸಿಂ
ಧುರಗಣಮಂ ಪಡಲ್ವಡಿಸಿ ಕೂರಸಿಪಾಡೆಯಸೂನಸನ್ನಖೋ
ತ್ಕರಮಹಿತಾರುಣಾಂಬುರುಚಿ ಕೇಸರಮಾಗಿರೆ ವೀರಲಕ್ಷ್ಮಿಯಂ
ಬುರುವನಸಿಂಹಿಯಂ ಸ್ವಭುಜಪಂಜರದೊಳ್ ಸೆಱೆಗೆಯ್ದನಾ ನೃಪಂ ೩೭

ಕಂ॥ ಘನಸಮಯದೊಳಗೆ ಘರ್ಮಂ
ಜನಿಯಿಸುವುದಾಗಳಂತೆ ಮಱೆಕೊಳ್ವವೊಲಾ
ಜನಪನ ಕೋಪದ ಬೞೆಯೊಳೆ
ಜನಿಯಿಸಿ ಜನಮಂ ಪ್ರಸಾದರಸವಾಜಿಸುಗುಂ ೩೮

ಅನತರೊಳಂ ವಿನತರೊಳಂ
ಘನರಕ್ಷಾನಿಧಿಯಿನಧಿಕಸರಣಂ ತಾನೆಂ
ಬಿನಮೊದವಿಸಿ ಚೋದ್ಯಮಿದೆನೆ
ಮುನಿಸುಮನೊಸಗೆಯುಮನೊಡನೆ ಮೆಱೆವಂ ಭೂಪಂ ೩೯

ವ॥ ಮತ್ತಮಾ ನೃಪಂ ಸಪ್ತಾಂಗಸಂಗಿಯಾಗಿಯುಂ ಸಪ್ತಾಂಗಸಂಗಿಯಲ್ತು ಸಕಳ ಭೂತಳೋಪಕಾರಿಯಾಗಿಯುಂ ಸಕಳ ಭೂತಳೋಪಕಾರಿಯಲ್ತು ಸಮದನಾಗಿಯುಂ ಸಮದನಲ್ತು ವಿಗ್ರಹಕರಾಳನಾಗಿಯುಂ ವಿಗ್ರಹಕರಾಳನಲ್ತು ಮಾರ್ಗಣಾನುರಕ್ತನಾಗಿಯುಂ ಮಾರ್ಗಣಾನುರಕ್ತನಲ್ತು ಪಟುಪ್ರತಾಪನಾಗಿಯುಂ ಪಟುಪ್ರತಾಪಿಯಲ್ತು ವಿದಗ್ಧ ಶರಣನಾಗಿಯುಂ ವಿದಗ್ಧ ಶರಣನಲ್ತು ಮಾನವಾಹಿತನಾಗಿಯುಂ ಮಾನವಾಹಿತನಲ್ತು ಮಾತಂಗಚರಿತನಾಗಿಯುಂ ಮಾತಂಗಚರಿತನಲ್ತು ಕ್ಷಿತಿನಾಥನಾಗಿಯುಂ ಕ್ಷಿತಿನಾಥನಲ್ತು ಅನಂಗಸುಭಗನಾಗಿಯುಂ ಅನಂಗಸುಭಗನಲ್ತು ಪರಾರ್ಥಪರನಾಗಿಯುಂ ಪರಾರ್ಥಪರನಲ್ತು ಅನೀತಿರಹಿತನಾಗಿಯುಂ ಅನೀತಿರಹಿತನಲ್ತು ವಿದಿತಭೀರುಭಾವನಾಗಿಯುಂ ವಿದಿತಭೀರುಭಾವನಲ್ತು ಎಂಬ ವಿರುದ್ಧಗುಣವನಳವಡಿಸಿ

ಕಂ॥ ಭ್ರಮರಹಿತಂ ಗುಣಸಹಿತಂ
ಸುಮನೋರಹಿತಂ ನಿಜಾಜ್ಞೆ ಪೂಮಾಲೆಯವೋ
ಲೆ ಮಹೀಶಮಸ್ತಕಾಗ್ರದೊ
ಳಮರ್ದಿರೆ ಸುಗ್ರೀವನೇನಳಂಕರಿಸಿದನೋ ೪೦

ವ॥ ಅಂತೆನಿಸಿದ ಸುಗ್ರೀವಮಹಾರಾಜಂಗೆ ಸುಗ್ರೀವಕಂಠಿಕೆಯೆನಿಪ್ಪ ಶೋಭಾಸಮೃದ್ಧಿಯುಮ ನಾ ಕಾಶ್ಯಪಗೋತ್ರಪ್ರದೀಪಂಗೆ ದೀಪ್ತಿಮಾಳಿಕೆಯೆನಿಪ್ಪಸಹಜಪ್ರಕಾಶಮುಮಮಾ ಸತ್ಯರತ್ನಾಕರಂಗೆ ಜಾಹ್ನವಿಯೆನಿಪ್ಪ ಜಗತ್ಪವಿತ್ರವೃತ್ತಿಯುಮನಾ ಮನುಜೇಂದ್ರಚಂದ್ರಮಂಗೆ ಚಂದ್ರಿಕೆಯೆನಿಪ್ಪ ಕಾಂತಿಯುಮನಾಯಿಕ್ಷ್ವಾಕುವಂಶಮಾರ್ತಂಡಂಗೆ ದಿನಶ್ರೀಯೆನಿಪ್ಪ ತೇಜಮುಮನಾಪ್ರತಿಪನ್ನಮಂದರಂಗೆ ರುಚಿರಮೇಖಳೆಯೆನಿಪ್ಪ ಮಹಿಮೆಯುಮನಾ ಪರಾರ್ಥಪಾರಿಜಾತಂಗೆ ಕಲ್ಪಲತೆಯೆನಿಪ್ಪನೂನದಾನಮುಮನಾ ವಿವೇಕಚತುರಾನನಂಗೆ ವಾಗ್ವಧುವೆನಿಪ್ಪ ಚಾತುರ್ಯವಿಭವಮುಮನಾ ಸೌಂದರ್ಯಕಂದರ್ಪಂಗೆ ರತಿಯೆನಿಪ್ಪ ಸೌಭಾಗ್ಯಗುಣಮುಮಂ ಸಹಜಾನುಬಂಧ ಬಂಧುಪ್ರೇಮದಿಂದಮಪ್ಪುಕೆಯ್ದು

ಉ॥ ಸಾಮಜಮಂದಗಾಮಿನಿ ಜಿತಾಮರಕಾಮಿನಿ ಭವ್ಯಲೋಕರ
ಕ್ಷಾಮಣಿ ಮಾನಿನೀಜನಶಿರೋಮಣಿ ಸದ್ಗುಣಭೂಮಿ ಭಾಗ್ಯಪೌ
ಳೋಮಿ ವಿಶುದ್ಧಗೋತ್ರೆ ಸುಚರಿತ್ರಪವಿತ್ರೆ ವಿವೇಕದೃಷ್ಟಿ ಧ
ರ್ಮಾಮೃತಸಾರಯಷ್ಟಿ ಜಯರಾಮೆ ಸುಶೀಲದ ಸೀಮೆ ರಂಜಿಪಳ್ ೪೧

ಕಂ॥ ಅನುರಕ್ತೆ ನಚ್ಚಿನಸಿಯವ
ಳನುಪಮವಿಗ್ರಹವಿಳಾಸೆ ತೋಳ್ತುತ್ತುಗೆಯಿಂ
ದೆನೆಗೆ ಸವಟಿಕೆಯ್ಯೆಂದಧಿ
ಪನೀಯ ಜಯರಾಮೆವೆಸರನಾ ಸತಿ ತಳೆದಳ್ ೪೨

ಚಂ॥ ನಡು ಮಡು ಲೋಕಲೋಚನರ್ಝುಷಕ್ಕೆ ಬೆರಲ್ ಸರಲಂಗಜಂಗೆ ಮ
ಲ್ಲಡಿ ಪಡಿ ಪಲ್ಲವಕ್ಕೆ ವದನಂ ಸದನಂ ಸಿರಿಗಕ್ಷಿಪಕ್ಷಿ ಚೆ

ಲ್ವಿಡಿದಲರ್ವಿಲ್ಗೆ ಸೋರ್ಮುಡಿ ಪದಿರ್ಮುಡಿ ಸೋಗೆಗೆ ಪುರ್ವು ಕೂರ್ಪು ಚೆ
ಲ್ವಡೆಗೆ ನಖಂ ಮುಖಂ ಪತಿಗೆ ತೋಳ್ ಕರವಾಳ್ ಮದನಂಗೆ ಕಾಂತೆಯಾ ೪೩

ವ॥ ಅಂತುಮಲ್ಲದೆಯುಂ

ಚಂ॥ ನೆಲೆಮೊಲೆ ಕೊತ್ತಳಂ ಜಘನ ವಟ್ಟಳೆ ಮೇಲುದು ಪೊನ್ನಗೋಂಟೆ ಮೇ
ಖಲೆ ಪರಿಖಾಂಬು ನಾಭಿ ನಡುವೀಥಿ ಮುಖಂ ರಣಮಂಡಲಂ ಕಚಂ
ಲಲಿತಪತಾಕೆ ಕಾಂತಿ ಜಳಸಂಪದಮಕ್ಷಿ ಮರೀಚಿ ಶಸ್ತ್ರಸಂ
ಕುಲಮೆನೆ ನೀಱ್ ತೋಱುವಳನಂಗನ ಜಂಗಮದುರ್ಗಲಕ್ಷ್ಮಿವೋಲ್ ೪೪

ವ॥ ಮತ್ತಂ

ಚಂ॥ ಕಣೆಯದ ಚೆಲ್ವು ಕಂಪಣಮಡಂಗದ ಸುಯ್ ಪದೆಯಿಪ್ಪ ಶಕ್ತಿ ಕ
ಣ್ಪೊಣರ್ಗಳವಟ್ಟ ಚಾಪಲತೆ ಮಿಕ್ಕ ಸರಂ ಕಟಿಮಂಡಲಾಗ್ರದು
ಲ್ಬಣತೆ ಲತಾಂಗಯಷ್ಟಿ ಕುಚಚಕ್ರದ ಮಂಡಲಸದ್ವಿಳಾಸದೊ
ಳ್ಪಣಿಯರವಾದುದಾ ರಮಣಿ ಬಾಲೆಯೊ ಕಾಮನ ಜೇಣಶಾಲೆಯೋ ೪೫

ಮ॥ ಜಗದಾಲೋಕಸುಖಕ್ಕೆ ಕಣ್ದೆಱೆವಿನಂ ಸಂಸಾರಸಾಫಲ್ಯಮು
ರ್ವಿಗೆ ಸರ್ವಾಭರಣಂ ಸ್ಮರಂಗೆ ವಿಜಯಾಸ್ತ್ರಂ(ಸಾರ)ಸೌಂದರ್ಯಸೃ
ಷ್ಟಿಗೆ ಬೀಜಂ ಸೊಬಗಿಂಗೆ ತಾಯ್ಮನೆ ವಿಳಾಸಕ್ಕೋಜೆ ಲಾವಣ್ಯಲ
ಕ್ಷ್ಮಿಗೆ ಸಂಕೇತನಿಕೇತಮೆಂಬುದು ಜನಂ ರೂಪಂ ಮಹಾದೇವಿಯಾ ೪೬

ವ॥ ಅದಲ್ಲದೆಯುಂ

ಚಂ॥ ಅರಸನ ತೇಜಮಾಕ್ರಮಿಸೆ ಬೇವಸಮುತ್ತರಿಭೂಪಕೋಟಿ ವಿ
ಸ್ತರಿಸುವುದಾ ಲತಾಂಗಿಯ ಪದಾಶ್ರಯಮಂ ಗಡೆಗೊಂಡು ಚೋದ್ಯಮ
ಲ್ತುರಿವರಿವುಗ್ರರೋಚಿಯ ಬಿಸಿಲ್ ಸುಡೆ ಬೇವಸಮುತ್ತು ಬಂದು ಪಾಂ
ಥರ ಪಡೆ ಪೊರ್ದಿ ತತ್ತ್ರಿಯಪಯೋಜಿನಿಯಂ ಸುಖಿಯಾಗಲಾಗದೇ ೪೭

ವ॥ ಇಂತೆನಿಸಿದನುಪಮಪ್ರಭಾವಮಂ ತಾಳ್ದಿದಾ ಮಹಾದೇವಿಯೊಡನೆ

ಕಂ॥ ಕೂರ್ಮೆಯೊಳನುಭವಿಸುತ್ತುಮ
ದೊರ್ಮೆಯುಮವಚಱಿದೆ ಕಾಮಸುಖದಿಂ ಜನಪಂ
ಪೆರ್ಮೆಗಿಡದಿರ್ದನಂತಿದು
ಧರ್ಮಾರ್ಥವಿರುದ್ಧಮಲ್ಲದೆನೆ ನಯನಿಪುಣರ್ ೪೮

ಮ॥ ಪ್ರಜೆಯಂ ಪಾಲಿಸಿ ಸತ್ತ್ವರಿಗ್ರಹದ ಪೆರ್ಚಂ ಮಾಡಿ ದುಷ್ಟಾವನೀ
ಭುಜರಂ ಮರ್ದಿಸಿ ದಾನಧರ್ಮರುಚಿಯೊಳ್ ತಳ್ತೊಯ್ದು ಯೋಗ್ಯಪ್ರಧಾ
ನಜನನ್ಯಸ್ತ ಸಮಸ್ತ ರಾಜ್ಯಭರಸಾಗಿರ್ದಾ ನೃಪಾಲಂಬೊಲಂ
ಗಜಕೇಳೀರತನಪ್ಪುದಲ್ಲದೆನಗಂ ಕೊಂಡಾಡೆ ಹಾಸ್ಯಾಸ್ಪದಂ ೪೯

ವ॥ ಎನಿಸಿ ಸುಖಸಂಕಥಾವಿನೋದದಿಂದಿರ್ಪನ್ನೆಗಮಿತ್ತಲ್

ಕಂ॥ ಗೀರ್ವಾಣಲೋಕಸುಖಮಂ
ಪೂರ್ವೋಕ್ತಪ್ರಾಣತೇಂದ್ರನುಪಭೋಗಿಸಿ ತೀ
ರ್ದುರ್ವಿಗೆ ಬರಲಿರೆ ಮುಂಚಿ ಸು
ಪರ್ವಾಗ್ರಣಿಗಾಯ್ತು ವಜ್ರಿಗಾಸನಕಂಪಂ ೫೦

ವ॥ ಅಂತು ತನಗಾಸನಕಂಪಮಾಗೆ ಪಾಕಶಾಸನಂ ಭರತಕ್ಷೇತ್ರದೊಳ್ ಪರಮೇಶ್ವರ ಸ್ವರ್ಗಾವತರಣಕಲ್ಯಾಣಮಿನ್ನಱುದಿಂಗಳಕ್ಕುಮೆಂಬುದಂ ಜಲಕ್ಕನವಧಿಬೋಧದಿಂದಮಱಿದು

ಕಂ॥ ಧನಪತಿಯಂ ನಿತ್ಯಾರ್ಚಿತ
ಜಿನಪತಿಯಂ ಭವ್ಯಜನಮನೋರಥನಳಿನೀ
ದಿನಪತಿಯಂ ಕಿಂಪುರುಷ
ಜ್ಜನಪತಿಯಂ ಬರಿಸಿ ಪೇೞ್ದು ಮನದುತ್ಸವಮಂ ೫೧

ಮ.ಸ್ರ॥ ಜಿನಪಸ್ವರ್ಗಾವತಾರೋದ್ಯಮಮಿದು ಮೞೆಗಾಲಂ ಭವದ್ಭಕ್ತಿ ಕಾದಂ
ಬಿನಿ ಹೇಮದ್ಯೋತಿ ಸೌದಾಮಿನಿ ಮಣಿನಿಚಯಚ್ಛಾಯೆ ಗೀರ್ವಾಣಬಾಣಾ
ಸನಭಾಗಂ ತೂರ್ಯಘೋಷಂ ಸ್ತನಿತಮೆನಿಪ ಕಾಕಂದಿಯೊಳ್ ಭವ್ಯಸಸ್ಯಾ
ವನಿಯೊಳ್ ರತ್ನೋತ್ಕರಾಸಾರಮನಖಿಳ ರಜೋಧೂಮಮಂ ಮಾಡೆನೀಡುಂ ೫೨

ಮ॥ ವರ ಕಾದಂಬಿನಿ ನಿನ್ನ ಭಕ್ತಿ ಮೞೆಗಾಲಂ ಮತ್ಕೃತಾದೇಶಬಂ
ಧುರವಂ ಘೂರ್ಣಿಪ ದಿವ್ಯತೂರ್ಯವೆಳಮಿಂಚುದ್ದಾಮ ಹೇಮಾಂಶುಗಳ್
ಸುರಚಾಪಪ್ರಭೆ ರತ್ನರಶ್ಮಿಯೆನೆ ನೀಂ ಸುಗ್ರೀವರಾಜೇಂದ್ರಮಂ
ದಿರದೊಳ್ ಮಾಡಱುದಿಂಗಳಪ್ಪಿನೆಗಮಿಂ ಮೆಯ್ವೆರ್ಚೆ ರೈವೃಷ್ಟಿಯಂ ೫೩

ವ॥ ಎಂದು ಬೆಸಸಲೊಡಂ

ಕಂ॥ ಶತಮಖನನುಮತವೆಂಬೆಲ
ರ ತೀಟದಿಂ ಯಕ್ಷಕಲ್ಪವೃಕ್ಷದ ಕುಸುಮಂ
ಕ್ಷಿತಿಗಲ್ಲೊಕ್ಕಪುದೆನೆ ಸೂ
ಸಿತಂದು ಸಾರ್ಧತ್ರಿಕೋಟಿ ರತ್ನಾಸಾರಂ ೫೪

ವ॥ ಅಂತುಮಲ್ಲದೆಯುಂ

ಮ॥ ಸುರಿಯತ್ತಿರ್ದಪುವೀಗಳಭ್ರನದಿಯಂಭೋಧಾರೆ ಶೈವಾಲವ
ಲ್ಲರಿ ರಕ್ತೋತ್ಪಲದಂಡಮಂಡಳಿ ಮೃಣಾಲಶ್ರೇಣಿ ಭೃಂಗೀಪರಂ
ಪರೆಯೆಂಬಂತಿರೆ ಮುತ್ತು ಪಚ್ಚೆ ಪವಳಂ ವಜ್ರಂ ಸುನೀಲಂ ತರಂ
ತರದಿಂ ಸಾಲಿಡೆ ಪಂಚರತ್ನಮಯಧಾರಾಸಾರಮೇನೊಪ್ಪಿತೋ ೫೫

ವ॥ ಅಂತು

ಕಂ॥ ಪಂಚಾಶ್ಚರ್ಯಸಮೇತಂ
ಪಂಚಮವಸುಧಾರೆ ಮೂಱುಪೊೞ್ತುಂ ಕಱಿಯ
ಲ್ಕೇಂ ಚೋದ್ಯಮಾಯ್ತೊ ಜಿನವರ
ಸಂಚಿತಪುಣ್ಯಪ್ರಭಾವದಿಂದಾ ಪೊೞಲೊಳ್ ೫೬

ವ॥ ಮತ್ತಂ

ಚಂ॥ ಅನಿಮಿಷರಾಜನಾ ನೆಗೞ್ದ ಭಾವಿಜಿನಾಂಬಿಕೆಯಪ್ಪ ಪುಣ್ಯ ಭಾ
ಗಿನಿಯ ಸುಕಂಠವಲ್ಲಭೆಯ ವಿಭ್ರಮವರ್ಧನಕಂಗಕಾಂತಿವ
ರ್ಧನಕೆ ವಿಳಾಸವರ್ಧನಕೆ ಪುಷ್ಟಿವಿವರ್ಧನಕುದ್ಘ ದಾನವ
ರ್ಧನಕೆ ವಿನೋದವರ್ಧನಕೆ ಕಾರಣಭೂತೆಯರಾಗೆ ಭಾವಿಸಲ್ ೫೭

ವ॥ ಕುಳಾಚಳೋತ್ತುಂಗಶೃಂಗಸದ್ಮಪದ್ಮಾದಿಸರೋವರನಿವಾಸಿನಿಯರಪ್ಪಱುವರಂ ದೇವಿಯರುಮಂ

ಕಂ॥ ಆ ಹ್ರಸವಿಳಾಸಿನಿಯರಂ
ಶ್ರೀ ಹ್ರೀ ಧೃತಿ ಕೀರ್ತಿ ಬುದ್ಧಿ ಲಕ್ಷ್ಮಿಯುಮಂ ಗಂ
ಗಾಹ್ರದವಿಮಳೆಯರಂ ಕಾಂ
ತಾಹ್ರಾದಿನಿಗಮಳತನುಗಳಂ ಬೆಸವೇೞ್ದಂ ೫೮

ವ॥ ಮತ್ತಂ

ಕಂ॥ ಪ್ರಣುತಾಕೃತ್ರಿಮಚೈತ್ಯೋ
ಲ್ಬಣಮಣಿರುಚಿರುಚಿರಮಪ್ಪ ರುಚಕಾದ್ರಿಯ ಮೂ
ಡಣ ತೆಂಕಣ ಪಡುವಣ ಬಡ
ಗಣ ದೆಸೆಗಳೊಳೊಗೆದುವಂದನುಕ್ರಮದಿಂದಂ ೫೯

ವ॥ ಒಪ್ಪುತಿರ್ಪ ವೈಡೂರ್ಯಕಾಂಚನಪ್ರಮುಖ ಕೂಟಾಷ್ಟಕಂಗಳೊಳ್ ರಮಿಯಿಸುವ ವಿಜಯೆ ವೈಜಯಂತೆ ಮೊದಲಾಗೆಯುಂ ಅಮೋಘ ಸುಪ್ರಬುದ್ಧ ಪ್ರಮುಖಶಿಖರಾಷ್ಟಕಂಗಳೊಳ್ ವಸಿಯಿಸುವ ಪ್ರತಿಷ್ಠೆ ಸುಪ್ರಣಿಧಿ ಮೊದಲಾಗೆಯುಂ, ಲೋಹಿತಾಕ್ಷಜಗತ್ಕುಸುಮ ಪ್ರಮುಖಚೂಡಾಷ್ಟಕಂಗಳೊಳ್ ಕ್ರೀಡಿಸುವಿಳಾದೇವಿ [ಸುರಾದೇವಿ] ಮೊದಲಾಗೆಯುಂ ಸ್ಫಟಿಕಕಾಂಚನಪ್ರಮುಖಶೃಂಗಾಷ್ಟಕಂಗಳೊಳ್ ವರ್ತಿಸುವ ಲಂಬೂಷೆಚಿತ್ರಲೇಖೆ ಮೊದಲಾಗೆಯುಂ ನೆಗೞ್ತೆವೆತ್ತ ಮೂವತ್ತಿರ್ಬರ್ ದಿಕ್ಕುಮಾರಿಯರುಮಂ ಮತ್ತಮಾ ನಗದ ವಿಮಳನಿತ್ಯಾಲೋಕ ಪ್ರಭೃತಿಗಳುಂ ವೈಡೂರ್ಯ ರುಚಕಪ್ರಭೃತಿಗಳುಂ ರತ್ನ[ಕೂಟ] ರತ್ನಪ್ರಭಪ್ರಭೃತಿಗಳುಮಪ್ಪ ಪೆಱಪೆಱವುಮಱೆ ಕೆವೆಸರನೇಕಕೂಟಕೋಟಿಗಳೊಳಿರ್ಪ ಚಿತ್ರೆ ಕನಕಚಿತ್ರೆ ಮೊದಲಾದ ವಿದ್ಯುತ್ಕುಮಾರಿಕೆಯರುಮಂ ರುಚಕೆ ರುಚಕಾಂತೆ ಮೊದಲಾದ ದಿಕ್ಕನ್ಯಕಾಮಹತ್ತರಿಯರುಮಂ ವಿಜಯೆ ವೈಜಯಂತಿ ಮೊದಲಾದತಿಪ್ರಬುದ್ಧೆಯರೆನಿಪ ದೇವಿಯರನಿಬರುಮುಂ ಬರಿಸಿ

ಕಂ॥ ಜಿನಮಾತೃಗರ್ಭಸಂಶೋ
ಧನಾದಿರಮಣೀರಹಸ್ಯಕುಶಲಕ್ರಿಯೆಗಂ
ಬಿನದಕ್ಕಂ ಬೆಸಕಂ ಮಂ
ಡನವಿಧಿಗಂ ನೆರೆದು ನೆಗೞ್ಮೆಲ್ಲಂದದೊಳಂ ೬೦

ವ॥ ಎಂದು ಬೆಸಸಿ ಮತ್ತಂ

ರಗಳೆ॥ ಅವರೊಡನನೇಕನಗನಿವಾಸಿನಿಯರಪ್ಪ
ವಿವಿಧ ರಮ್ಯಪ್ರದೇಶಂಗಳೊಳ್ ರಮಿಯಿಪ್ಪ॥
ಮಾಳಿನಿ ಕನತ್ಕನಕದೇವಿ ಮಾಳಿನಿ ಚಿತ್ರೆ
ಮಾಳಾವತಿ ತ್ರಿಸರೆ ಕನಕಚಿತ್ರೆ ಸುಚಿತ್ರೆ॥
ಪುಷ್ಪಮಾಳಿಕೆ ಸುರಾದೇವಿ ಕಾಂಚನಮಾಳೆ
ಪುಷ್ಪಿಕೆಯಿಳಾದೇವಿ ರುಚಕೆ ವಿದ್ಯುನ್ಮಾಳೆ॥
ರತ್ನಪ್ರಭೆಯುಮಾ ಜಯಾನಂದೆ ಮಣಿಮಾಲೆ
ರತ್ನಮಾಳಿಕೆ ಚಂದ್ರರೇಖೆ ಚಂದ್ರಸುಮಾಲೆ॥
ಮದಿರೆ ಮದಲೇಖೆ ಮಂದಾರಿಕೆ ಲತಾಕಳಿಕೆ
ಮದನಿಕೆ ಮರಾಳಿಕೆ ಲವಂಗಿಕೆ ಮಹೋತ್ಪಳಿಕೆ॥
ತರಳಿಕೆ ತಮಾಳಿಕೆ ತರಂಗಿಕೆ ವಿಚಿತ್ರಲತೆ
ಪರಿಮಳಿಕೆ ಗಂಧವಾಹಿನಿ ಪದ್ಮೆ ಪತ್ರಲತೆ॥
ಗಂಧರ್ವಸೇನೆ ಮನ್ಮಥಸೇನೆ ಬಂಧೂಕೆ ಕಳಿಕೆ
....ಮಹಾಸೇನೆತಾಂಬೂಲಕಳಿಕೆ॥
ಎಂಬ ಪೆಱಪೆಱವುಮಱೆಕೆಯ ಪೆಸರ್ಗಳಮರಿಯರ್
ಅಂಬುಜಸುಗಂಧ ಬಂಧುರಭ್ರಮರಿಯರ್॥

ಇಸುವೆಸಕ್ಕಮರಪತಿ ಬೆಸವೇಱೆ ರಾಗದಿಂ
ಬೆಸಕೆಯ್ದು ಜಿನಜನನಿಗೆಱಗುವುದ್ಯೋಗದಿಂ॥
ಪೊಳೆವ ಕಣ್ಗಳ ಬೆಳಗು ಬೆಳ್ದಿಂಗಳಂ ಬೀಱೆ
ಮಿಳಿರ್ವ ಸುಟಿಗುರುಳ ರುಚಿ ಕಾಳದಿರುಳಂ ಕಾಱೆ॥
ಕೆಂದಳಿರ ಕೆಂಪು ಕೆಂದಳಿರ ಚೆಲ್ವಂ ಪರಪೆ
ಮಂದಹಾಸದ ಕಾಂತಿ ವಜ್ರರುಚಿಯಂ ನೆರಪೆ॥
ನಗೆಮೊಗದ ಚೆಲ್ವು ಶಶಿಬಿಂಬಶತಮಂ ಕೆದಱೆ
ಬಿಗಿದೊಗೆದ ತೋರಮೊಲೆ ಕನಕಕಳಶಮನೊದಱೆ॥
ಘನಜಘನವಿಭಕುಂಭವಿಭ್ರಮಮನತಿಗಟೆಯೆ
ತನುಲತೆಯ ಕಾಂತಿ ಸೊಡರ್ಗುಡಿಯ ಚೆಲ್ವಂ ಪಟೆಯೆ॥
ತೊಳಪ ತೊಡವಿನ ಬೆಳಗು ದೆಸೆದೆಸೆಗೆ ನೆಱೆನಿಮಿರೆ
ಕಳನೂಪುರಂ ನೂಲ ತೊಂಗಲೊಡನುಲಿದಮರೆ॥
ಸೌಂದರ್ಯಸಾರಸದನಂಗಳಿವರೆಂಬಂತೆ
ಕಂದರ್ಪಭುಜವಿಜಯವಧುಗಳಿವರೆಂಬಂತೆ॥
ಮನಸಿಜನ ಮಂತ್ರದೇವತೆಯರಿವರೆಂಬಂತೆ
ನನೆಗಣೆಯ ಮೋಹನಕ್ರಿಯೆಗಳಿವರೆಂಬಂತೆ॥
ಶೃಂಗಾರರಸತರಂಗಿಣಿಯರಿವರೆಂಬಂತೆ
ಮಾಂಗಲ್ಯಲಕ್ಷಣದ ಕಳೆಗಳಿವರೆಂಬಂತೆ॥
ಕರಮೊಸೆದು ದೆಸೆ ಬೆಸಲೆಯಾದುದಬಲೆಯರನೆನೆ
ಧರಣಿಸಕಳಂ ವಿವಿಧಯುವತಿಮಯಮಾದುದೆನೆ॥
ಬಂದು ಕಾಕಂದೀಪುರಕ್ಕೆ ಸೋತ್ಸಾಹಮಂ
ಗೊಂದಣಿಸಿ ಪೊಕ್ಕರ್ ಸುಕಂಠನೃಪಗೇಹಮಂ॥ ೬೧

ವ॥ ಅಂತು ಪೊಕ್ಕು ಭಕ್ತಿಭರದಿಂದಮೆಱಗಿ

ಮ.ಸ್ರ॥ ದೊರೆವೆತ್ತಷ್ಟಾರ್ಘ್ಯಮಂ ಮಾಡಿದುದಡಿ ಮೊದಲೊಳ್ ಮಂದಹಾಸಂ ಜಳಂ ಬಂ
ಧುರಗಂಧಂ ಶ್ವಾಸಗಂಧಂ ತಲೆದುಡುಗೆಯ ಮುತ್ತಕ್ಷತಂ ಚೆನ್ನಪೂ ಪೂ
ಕುರುಳ್ಗರ್ಪುಂ ಧೂಪಮಂಗಾಭರಣ ರುಚಿ ಸೊಡರ್ ಕೇಕರಕ್ಷೀರಧಾರಾ
ಚರು ಬಿಂಬೋಷ್ಠಂ ಫಳಂ ತಾನೆನಿಸಿ ಜಿನನ ತಾಯ್ಗಿಂದ್ರಕಾಂತಾಕದಂಬಂ ೬೨

ವ॥ ಅಂತು ಪುರಂದರಂ ಸುರಪುರಂಧ್ರಿಕಾಮಪತ್ತರಿಯರ್ಗೆ ಸಮುಚಿತ ಕ್ರಿಯಾನುಯೋಗಂಗಳಂ ನಿಯಮಿಸಿ

ಕಂ॥ ಅರಮನೆಯೊಳತ್ತಲಿತ್ತಂ
ಚರಿಯಿಪ ದೇವಿಯರ ಪದತಳಾಂಶು ಬಯಲ್ದಾ

ವರೆಯೆಸಳನೆಸಗಿದುವು ನೂ
ಪುರತತಿ ಬೀಱಿದುವು ಮದನಮೌರ್ವೀರುತಿಯಂ ೬೩

ವ॥ ಅವರೊಳೊರ್ವಳ್

ಕಂ॥ ಸತಿಯ ಕುಚಕೋಕಮಂ ಮುಖ
ಶತಪತ್ರಮನೊಲ್ದಲರ್ಚಲೆಯ್ತಂದನಹ
ಸ್ವತಿ ಬಿಸುಪನುೞಿದು ಕೆಲಕೆನೆ
ಶತಮುಖವಧು ಪಿಡಿದಳೊಪ್ಪೆ ಮುತ್ತಿನ ಕೊಡೆಯಂ ೬೪

ವದನೇಂದುವಿನುದಯದೊಳೊದ
ವಿದ ಲಾವಣ್ಯಾಂಬುನಿಧಿಯ ನೊರೆದೊಂಗಲಿವೆಂ
ಬುದನೆನಿಸಿ ಜಿನಾಂಬಿಕೆಗಿ
ಕ್ಕಿದರಮರಿಯರಮರೆ ಧವಳಚಮರೀರುಹಮಂ ೬೫

ನಱುಸುಯ್ಗೆ ಸುೞಿವ ತುಂಬಿಯ
ಮಱಿವಕ್ಕಿಯೊ ಕೇಶಕೃಷ್ಣಭುಜಗಿಗೆ ಕಡುಪಿಂ
ದೆಱಗುವೆಳನವಿಲೋ ಪೇೞೆನೆ
ಮೆಱೆದುದು ಜಯರಾಮೆಗಮರಿ ಬೀಸುವ ಕುಂಚಂ ೬೬

ಮ॥ ಈ ಪ್ರಕಾರದಿಂ ಅಮರಸ್ತ್ರೀನಿವಹಂ ದೇವಿಯ ಸನ್ನಿಧಿಯೊಳ್ ಭಕ್ತಿಪೂರ್ವಕವಾಗಿ ಸೇವೆಯಂಗೆಯ್ಯುತಂ

ಕಂ॥ ಇಂದೆಮ್ಮೊಡನೋಲಗಿಸಲ್
ಬಂದಂ ವಿಧು ದೇವಿ ನಿಮ್ಮನಾದರಿಸುವುದೆಂ
ದಿಂದುವನೆ ತಂದು ಕಾಣಿಸು
ವಂದಮಿದೆನೆ ಕಾಂತೆಗಮರಿ ಕನ್ನಡಿವಿಡಿದಳ್ ೬೭

ಎಳಲತೆಯ ಕುಡಿಯ ತಳಿರೊಳ್
ಬಳೆದುದು ಕಾವುಳ್ಳ ಕನಕಕಮಳಂ ಕೌತೂ
ಹಳಮಿದೆನೆ ಪೊನ್ನ ಡವಕೆಯ
ನೆಳೆಯಳ್ ನಳಿತೋಳ ತಳದೊಳಳವಡೆ ಪಿಡಿದಳ್ ೬೮

ಅನುಭವಿಸುವ ಶಶಿಕಳೆಗಳ
ನಿನಿಸಂ ಸವಿದೋಱಲೆಂದು ನೀಡಿದಪಳ್ ಮಾ

ನಿನಿಗೆನೆ ಬಿಳಿಯೆಲೆಯಂ ಗಟು
ಸಿ ನೀಡುತಿರ್ಪಮರಿ ಪಡೆದಳೀಕ್ಷಣಸುಖಮಂ ೭೯

ಎಳಮಿಂಚುಂ ಸಿಡಿಲುಂ ಬಂ
ದೆಳಸಿದ ಘನಮಾಳೆ ರಂಜಿಪಂಜಿಪ ತೆಱನಂ
ಲಳಿತೆಯ ರಕ್ಷಾಮರಿಯರ್
ತಳೆದರ್ ಭೂಷಣದ ಬಾಳ ಪೊಳೆಪುಗಳಿಂದಂ ೮೦

ರಮಣಿಗೆ ಪಡಿಯಱವೆಸಗೆ
ಯ್ವಮರಿಯರ ವಿಚಿತ್ರವೇತ್ರದಂಡಂಗಳವೇ
ನಮರ್ದುವೊ ಮದನಜಯಶ್ರೀ
ರಮಣಿಯ ಕೆಳದಿಯರ ಕೆಯ್ಯ ಕರ್ಕಡೆಗಳವೋಲ್ ೮೧

ಅಂಗರುಚಿಭೂಷಣಾಂಶುವ
ನಂಗಪ್ರಭೆ ಮಿಸಿಸೆ ಮತ್ತೆ ಮಜ್ಜನವಿಧಿ ತ
ನ್ವಂಗಿಗೆ ಪುನರುಕ್ತಮಿದೆಂ
ದೆಂಗೆ ಜನಂ ದಿವಿಜಯುವತಿಕೃತಮಜ್ಜನಮಂ ೮೨

ಯುವತಿಗೆ ನಿಱಿವಿಡಿದು ದುಕೂ
ಲವನುಡಿಸುವ ದಿವಿಜೆ ಕನಕನಗಮೇಖಳೆಯಂ
ಧವಳಾಭ್ರಮಾಲೆಯಂ ಸು
ತ್ತುವ ವಾರಿದಲಕ್ಷ್ಮಿಯೆಸಕಮಂ ಪೊಸೆಯಿಸಿದಳ್ ೮೩

ಜಿನಜನನಿಯ ಪದಸೇವೆಗೆ
ಘನಸಂಧ್ಯಾರಾಗಲಕ್ಷ್ಮಿಯಂ ತಂದೀಗಳ್
ದಿನಲಕ್ಷ್ಮಿ ಸಮರ್ಪಿಸಿದಪ
ಳೆನಿಸಿದಳಡಿಯೂಡುವಮರಿಯಾವಕರಸದಿಂ ೮೪

ಅಳಿಮಾಳೆಯನರುಣಾಂಬುಜ
ದಳದೊಳ್ ತಂದಿರಿಸುವಂತಿರಿರಿಸಿದಳೊರ್ವಳ್
ಜಳಜಾಕ್ಷಿಯರುಣಚರಣದೊ
ಳಳವಡೆ ರಣಿತೇಂದ್ರನೀಲಮಣಿನೂಪುರಮಂ ೮೫

ಮೇಖಳೆಯಿದತನುಶೈಲದ
ಮೇಖಳೆಯೆನೆ ಸತಿಯ ಗುರುನಿತಂಬದೊಳಳುರ್ವಂ

ತಾಖಂಡಲವಧು ರತ್ನಮ
ಯೂಖೋಜ್ವಳಕಾಂಚಿಯಂ ತೊಡರ್ಚಿದರ್ಳೊರ್ವಳ್ ೭೬

ವ॥ ಮತ್ತೊರ್ವಳ್

ಕಂ॥ ಒಗೆದ ಪಯೋಧರತಟದೊಳ್
ಸೊಗಯಿಪ ನಕ್ಷತ್ರಮಾಲೆಯೆನೆ ಬಾಲೆಯ ಮೇ
ಲೊಗೆದ ಪಯೋಧರತಟದೊಳ್
ಸೊಗಯಿಪ ನಕ್ಷತ್ರಮಾಲೆಯಂ ಯೋಜಿಸಿದಳ್ ೭೭

ನನೆಗಣ್ ಮೀಂಗಳಿನೊಪ್ಪುವ
ಮೊಗಮೆಂಬಲರ್ಗೊಳದ ತಡಿಯೊಳಿರಿಸಿದಳಿವಳಂ
ಚೆಗಳನೆನೆ ಸತಿಯ ಕಿವಿಯೊಳ್
ತಗುಳಿಸಿದಳ್ ಹಂಸರಚನೆಯೋಲೆಯನೊರ್ವಳ್ ೭೮

ಸ್ಮರಮೋಹನಮಂತ್ರಮನು
ದ್ಧರಿಸಿದಳಿವಳಮಳಕನಕಪಟ್ಟದೊಳೆನೆ ಸೌಂ
ದರಿಯ ಕದಪುಗಳೊಳೊರ್ವಳ್
ಸುರವಧು ಬರೆದಳ್ ವಿಚಿತ್ರಪತ್ರಾವಳಿಯಂ ೭೯

ಪೆಱೆಯಂ ಮುಸುಕುವ ಮುಗಿಲಂ
ಪೆಱಪಿಂಗಿಪಳೀ ಮರುತ್ಕುಮಾರಿಕೆಯೆನೆ ಚೆ
ಲ್ವೆಱಗಿಸೆ ಸಮೆದಳರಸಿಯ
ಮಿಱುಗುವ ಪೆಱೆನೊಸಲ ಕುರುಳ ಬಂಬಲನೊರ್ವಳ್ ೮೦

ಮಿಱುಪಲರ್ಗೊಂಚಲಿನೊಪ್ಪುವ
ನಿಱಿದಳಿರ ತಮಾಳಶೋಭೆಯೆನೆ ಬಾಸಿಗದಿಂ
ನಿಱಿಗೆ ಸಲೆಯೆಸೆಯೆ ಮುಡಿಸಿದ
ಳೆಱಕದಿನೊರ್ವಳ್ ಸುಪರ್ವವಧು ನೃಪವಧುವಂ ೮೧

ಉಡಿಸುವ ವಿಚಿತ್ರವಸ್ತ್ರಂ
ಮುಡಿಸುವ ಮಂದಾರಮಾಲೆ ತನುಲತೆಯೊಳ್ ನೇ
ರ್ಪಡಿಸುವ ನವಾಂಗರಾಗಂ
ತುಡಿಸುವ ತೊಡವರಸಿಗಮರ್ದುವಮಱಿಯರಿಂದಂ ೮೨

ವ॥ ಅದಲ್ಲದೆಯುಂ

ಕಂ॥ ಡೋಳಾಕೇಳಿಯ ಕಂದುಕ
ಕೇಳಿಯ ಪರಿಹಾಸಕೇಳಿಯತಿಕುಶಲಕಳಾ
ಕೇಳಿಯ ವನಕೇಳಿಯ [ಜಲ
ಕೇಳಿಯ] ಬಿನದದೊಳೆ ಸತಿಯನವರೊಸೆಯಿಸಿದರ್ ೮೩

ಈಪರಿಯೊಳಮರಸ್ತ್ರೀಯರ್
ತಾ ಪರಿತೋಷದೊ[ಳೆ ವರ]ಜಿನಾಂಬಿಕೆಪದನಂ
ಶ್ರೀಪಯಕೆಱಗಿ ನುತಿಸುತೆ
ತಾ ಪರಿತೋಷದೊಳೆ ಭಕ್ತಿಯಿಂದಿರುತಾಗಳ್ ೮೪

ವ॥ ಮತ್ತಂ

ಚಂ॥ ಅಮರ್ದಿನ ಸೋನೆ ಜೇನಮಟಿ ಕರ್ಣರಸಾಯನಮಿಂತಿದೆಂಬಿನಂ
ಗಮಕದುಪಾಂಗದೊಟ್ಟಜೆಯ ರೀತಿಯ ಕಾಕಿನ ನುಣ್ಪಿನೋಜೆಯಾ
ಕ್ರಮಣೆಯ ಭಂಗಿ ಸಂಗಳಿಸಿದಿಂಪಿನ ಸೊಂಪಿನ ಸುಪ್ರತೀತಗೀ
ತಮನನಿಶಂ ಜಿನಾಂಬಿಕೆಗೆ ಬೀಱೆದುದಿಂದ್ರನ ಗಾಯಿಕಾಜನಂ ೮೫

ಕಂ॥ ಯುವತಿ ತತ ವಿತತ ಘನ 'ಸುಷಿ
ರವಾದ್ಯವಿದ್ಯಾವಿನೋದದಿಂ ಸುರವಧುವಿರ್
ಸವಿಯಂ ಕಿವಿಗೀಯೆ ಸುಖಾ
ರ್ಣವದೊಳಗೋಲಾಡಲಾರ್ತಳಿರುಳುಂ ಪಗಲುಂ ೮೬

ಕಂ॥ ಕರಣಾಂಗಹಾರಪರಿಣತಿ
ನಿರುಪಮ ರಸಭಾವವಸಮಮಾಗಿರೆ ಚೆಲ್ವೊ
ತ್ತರಿಸೆ ನೃಪಸತಿಯ ಸಭೆಯೊಳ್
ಸುರನಟಿಯರ್ ನರ್ತಿಪಂದಮೇನೊಪ್ಪಿದುದೋ ೮೭

ವ॥ ಅದಲ್ಲದೆಯುಂ

ಕಂ॥ ಶ್ರುತದೇವಿಯೆ ಓಲಗಿಸಿದ
ಳತನುಹರಾಂಬಿಕೆಯನೆನಿಸಿ ಪುಸ್ತಕಹಸ್ತಾ
ನ್ವಿತೆ ಪುಣ್ಯಕಥೆಯನೊರ್ವಳ್
ಚತುರಾಸ್ಯಪ್ರಿಯೆ ಸುರಾಗದಿಂ ವಾಚಿಸಿದಳ್ ೮೮

ವ॥ ಮತ್ತಂ

ಚಂ॥ ಮಡದಿಗೆ ಜೋನವೆತ್ತುವೆಡೆಯಾಡುವ ಬಡ್ಡಿಪ ಸೋದಿಪೊಳ್ಳಿತಂ
ನುಡಿಸುವ ಕಂಚನುಪ್ಪಡಿಪ ಕೆಯ್ಗೞಿವಾರತಿದೋರ್ಪ ಕೆಂದಳಂ
ದೊಡವನುಲೇಪನಂಗುಡುವ ವೀಳೆಯಮಂ ತೆಗೆದೀವ ದಂದುಗಂ
ತೊಡರೆ ಮನಂಗೊಳಲ್ ನೆರೆದರಿಂದ್ರಲತಾಂಗಿಯರನ್ನವಾಸದೊಳ್ ೮೯

ಕಂ॥ ಅರುಣಮಣಿಕಂಕಣಪ್ರಭೆ
ಪರೆದಿರೆ ಪಚ್ಚಡಿಸುವಲ್ಲಿ ಕುಂಕುಮರಸದೊಳ್
ಪೊರೆದುದು ಪಚ್ಚಡಮೆಂದೋ
ಸರಿಯಿಸಿದಳೆ ಸಜ್ಜೆವಳ್ತಿತನಮೇಂ ಮುದ್ದೋ ೯೦

ಅಮಳಾಂಗಪ್ರಭೆ ಮುನ್ನಮೆ
ತಮಮಂ ಬೆದಱಿಸೆಯುಮರಸಿಗಿರುಳಾಸ್ಥಾನೀ
ಸಮಯೋಚಿತಮೆಂದು ತಟಿ
ತ್ಕುಮಾರಿಯರ್ ಪಿಡಿವರುಂತೆ ಕೆಯ್ದೀವಿಗೆಯಂ ೯೧

ವ॥ ಆ ಸಮಯದೊಳ್

ಉ॥ ಮಂಗಳಗರ್ಭಶೋಧನಮನಿಂದ್ರನಿವಾಸದ ದಿವ್ಯವಸ್ತುವ
ರ್ಗಂಗಳಿನಂದು ಮಾಡೆ ಸುರಸುಂದರಿಯರ್ ಪೆಱತೊಂದು ಚೆಲ್ವುತ
ನ್ನಂಗದೊಳಾಗೆ ಕಾಂತಿಯ ದಗುಂತಿಯನಾಂತವಲೋಹಮಾವಗಂ
ಪಿಂಗಿದ ಪೊನ್ನ ಪುತ್ತಳಿವೊಲೊಪ್ಪಿದಳಾ ವಧುವಚ್ಚಭಾವದೊಳ್ ೯೨

ವ॥ ಅಂತು ಬಹುವಿಧ ವ್ಯಾಪಾರಪರಿಕರಪರಿಭ್ರಾಂತೆಯರುಂ ವಿವಿಧ ವಿನೋದವಿರಚನೈಕತತ್ಪರಸ್ವಾಂತೆಯರುಮಾಗಿ ದಿವಿಜಕಾಂತೆಯರ್ ಕಣ್ಣಱಿದು ಮನಮಱಿದು ಸಮಯವಱಿದು ಇಚ್ಛೆಯನಱಿದು ನಿಚ್ಚಮೋಲಗಿಸುತಿರ್ಪಿನಂ ಮತ್ತೊಂದು ಪುಣ್ಯದಿನದೊಳಂ

ಚಂ॥ ಸೆಳೆ ಬಿಸನಾಳಮಾಗಿರೆ ತಳಂದಳಮಾಗಿರೆ ಲೋಳನೀಳಕುಂ
ತಳಮಳಿಮಾಲೆಯಾಗಿರೆ ಪರಿಚ್ಛದಮಾದರುಣಾಂಬರಂ ಸಮಂ
ತೆಳೆಸಿದ ಬಾಳಭಾನುರುಚಿಯಾಗಿರೆ ಪುಷ್ಪಿತೆಯಾಗಿ ಪುಷ್ಪಕೋ
ಮಳೆ ಜಯರಾಮೆ ಕಾಮಕಮಳಾಕರದಬ್ಜಿನಿಯಂತಿರೊಪ್ಪಿದಳ್ ೯೩

ಕೃತಸಹಕಾರನಂದನವಿಳಾಸೆ ಲತಾರುಣಪಾದಪದ್ಮರಾ
ಜಿತೆ ಘನಸೌಮ್ಯನಿರ್ಗತಪಯೋಧರೆ ಪೂರ್ಣಹಿಮಪ್ರಭಾಸ್ಯೆ ಸಂ
ಗತಮಧುಕಾಂತೆ ಮಾಸದ ವಿಳಾಸಮೆ ಮೆಯ್ವಡೆದಾದ ದೇವಿ ತಾಂ
ಋತುಮತಿಯಪ್ಪುದಚ್ಚರಿಯೆ ವತ್ಸರಲಕ್ಷ್ಮಿವೊಲಿರ್ಪ ದೂಸಱಿಂ ೯೪

ವ॥ ಎನಿಸಿರ್ದನಂತರಂ ನಿರ್ವರ್ತಿತ ಚತುರ್ಥಸ್ನಾನೆಯಾಗಿ

ಚಂ॥ ವನಿತೆ ವಿಳಾಸದಿಂ ಸುಲಿದ ದಂತಚಯಂ ನಿಜರಾಗದಿಂ ಘನ
ಸ್ತನಕಳಶಾಗ್ರಿಮಕ್ಕರುಣಪಲ್ಲವಲೀಲೆಯನೀವುತಿರ್ಪ ಮು
ನ್ನಿನ ಬೆಸನಂ ಬಿಸುಟ್ಟು ನವಚಂದನಚರ್ಚೆಯನಿತ್ತುವೇನವ
ಕ್ಕನುಪಮ ಮಂಗಳೋಪಕರಣಪ್ರತಿಹಾರನ ಕೇಳಿ ಸಾಜಮೋ ೯೫

ವ॥ ಅದಲ್ಲದೆಯುಂ

ಮ॥ ಧೃತಮುಕ್ತಾಭರಣಂ ಪಯಃಕಣಗಣಂ ಶ್ರೀಖಂಡಲಿಪ್ತಾಂಗದೀ
ಧಿತಿ ತೋಯಪ್ರಸರಂ ದುಕೂಲವಸನಂ ಫೇನೋದ್ಗಮಂ ಮಲ್ಲಿಕಾ
ಸ್ಮಿತದಾಮಂ ತೆರೆಮಾಲೆಯಾಗೆ ವಿಮಳಕ್ಷೀರಾರ್ಣವಶ್ರೀಯನಾ
ಶತಪತ್ರಾನನೆ ಪೋಲ್ತು ಬೆಳ್ಪಸದನಂಗೊಂಡೇಂ ಮನಂಗೊಂಡಳೋ ೯೬

ವ॥ ತದನಂತರಂ

ಚಂ॥ ಅಳವಡೆ ತನ್ನ ಮೆಯ್ಯೊಳಭಿರಾಮತೆಯಿಂ ಧವಳಪ್ರಸಾಧನಂ
ಪಳಿಕಿನ ಪೆಣ್ಣೊ ಕರ್ಪುರದ ಪೆಣ್ಣೊ ಸುರೂಪ್ಯದ ಪೆಣ್ಣೊ ಮಲ್ಲಿಕಾ
ಕಳಿಕೆಯ ಪೆಣ್ಣೊ ಮೌಕ್ತಿಕದ ಪೆಣ್ಣೊ [ಸುವಜ್ರದ ಪೆಣ್ಣೊ] ಪೇಟೆಮಾ
ವಳೊ ದಿಟಮೆಂಬಿನಂ ರಮಣಿ ರಂಜಿಸಿ ಭೂಪನ ಸೂಟ್ಗೆವಂದಪಳ್ ೯೭

ಶಾ॥ ಮಾಳಾಭೃಂಗನಿನಾದದಿಂದಗುರುಧೂಪಾಮೋದದಿಂ ಸಾರತಾಂ
ಬೂಳಾಸ್ವಾದದಿನುದ್ಗವಾಕ್ಷದೆಲರಿಂದಾಹ್ಲಾದದಿಂ ಭಿತ್ತಿಚಿ
ತ್ರಾಳೋಕ್ಯೈಕವಿನೋದದಿಂದಿದು ಮೊದಲ್ ಪಂಚೇಂದ್ರಿಯ ಪ್ರೀತಿಗಂ
ಬಾಳೋಚಕ್ಕಡೆಯಾಗಿ ರಯ್ಯಮೆನಿಸಿತ್ತುರ್ವೀಶ ಶಯ್ಯಾಗೃಹಂ ೯೮

ವ॥ ಅಲ್ಲಿ

ಚಂ॥ ನವಮಣಿಮಂಚದಿಂದೆ ಮಿಸುಪಂಚೆಯ ತುಪ್ಪುಟಿ ತೂಳೆಯಿಂದೆ ಪ
ಚ್ಚವಡಿಸಿದಚ್ಚಸುಣ್ಬುಗುಲದಿಂದೆ ವಿಚಿತ್ರವಿತಾನದಿಂದಮು
ಣ್ಮುವ ತೊಡವಿಂದೆ ಪೊನ್ನ ಪಡಿವಾವುಗೆಯಿಂದೆಸೆದಿರ್ದ ಸೆಜ್ಜೆಯೊಳ್
ಪವಡಿಸಿ ವಲ್ಲಭಂಬೆರಸು ಸಲ್ಲಲಿತಾಂಗಿ ನಿಶಾವಸಾನದೊಳ್ ೯೯

ನಿಜಗಮನಕ್ಕೆ ಮಜ್ಜರಿಪ ಮಂಥರಯಾನದ ದಾನದಂತಿಯಂ
ನಿಜಪತಿಕಂಧರಕ್ಕೆ ದೊರೆಯಾದುರುಕಂದದ ವಕ್ಷರಾಜನಂ
ನಿಜವಿಭುವಿಭ್ರಮಕ್ಕಡರುತಿರ್ಪ ತೊಡರ್ಪಿನ ಸಿಂಹಪೋತಮಂ
ನಿಜನೃಪವಕ್ಷದಿಂದಿರೆಗೆ ತಾಂ ದೊರೆಯಾಪರವಿಂದವಾಸೆಯಂ ೧೦೦

ಉ॥ ತನ್ನಯ ನೀಳ್ದ ತೋಳ್ಗಳ ವಿಳಾಸಮನಾಂತ ಲತಾಂತಮಾಲೆಯಂ
ತನ್ನಯ ವಕ್ತ್ರಕಾಂತಿಯದಗುಂತಿಯನಾಂತ ಸುಧಾಂಶುಬಿಂಬಮಂ
ತನ್ನಯ ಭರ್ತೃತೇಜಮನುದಾಹರಿಪುದ್ಗತ ಭಾನುಬಿಂಬಮಂ
ತನ್ನಯ ಚೆಲ್ಲಗಣ್ಬೊಣರ ಲೀಲೆಯನೇಟಿಪ ಬಾಳೆಮೀನ್ಗಳಂ ೧೦೧

ಚಂ॥ ಬಿಗಿದೊಗೆದಾತ್ಮತುಂಗಕುಚಕುಂಭಮನೊಡ್ಡಿಪ ಪೂರ್ಣಕುಂಭಮಂ
ಸೊಗಯಿಸುವಾತ್ಮಕೇಳಿಕಮಳಾಕರಮಂ ನಗುವಬ್ಜಷಂಡಮಂ
ಪೊಗಟಿಸುವಾತ್ಮಮಾನಸಗಭೀರತೆಯಂ ಮಿಗುವಂಬುರಾಶಿಯಂ
ಬಗೆಗೊಳಿಪಾತ್ಮಪೀನಕಟಿಯಂ ಸರಿಮಾಟ್ಪಿ ಮೃಗೇಂದ್ರಪೀಠಮಂ ೧೦೨

ತನತುವಿಚಿತ್ರಮಪ್ಪ ನಡೆಮಾಡದ ಗಾಡಿಯ ಸದ್ವಿಮಾನಮಂ
ತನತು ಸುರಮ್ಯಹರ್ಮ್ಯದ ವಿಳಾಸದ ರುಂದ್ರಫಣೀಂದ್ರಗೇಹಮಂ
ತನತು ವಿಚಿತ್ರಶೀಲಗುಣರತ್ನವಿಭಾಸುರರತ್ನರಾಶಿಯಂ
ತನತು ಪತಿವ್ರತಾಪದದ ರೂಪದುದಗ್ರಶಿಖಾಮುಖಾಗ್ನಿಯಂ ೧೦೩

ಕಂ॥ ನಿಜಮುಖದೊಳ್ ಪುಗುವ ಮತಂ
ಗಜಪತಿವೆರಸಿಂತು ಕನಸು ಪದಿನಾಱುಮನಂ
ಬುಜವದನೆ ಕಂಡಳಪಗತ
ವೃಜಿನಂಗಳನಖಿಳ ಮಂಗಳೋದ್ಭಾಸಿಗಳಂ ೧೦೪

ವ॥ ಆ ಪ್ರಸ್ತಾವದೊಳ್

ಮ॥ ಎಳಬಿಂದುಶ್ರೀಯನುಚ್ಚಾಟಿಸಿ ರತಿರಭಸಕ್ಲಾಂತಕಾಂತಾನುಲೇಪಂ
ಗಳ ಕಂಪಂ ಪೊತ್ತು ಪೊಂದಾವರೆಯೆಸಳ್ಪೊರೆಯೊಳ್ ಸೊರ್ಕಿ ಸಿಲ್ಕಿರ್ದ ಭೃಂಗಂ
ಗಳ ನಾಟಂದೆತ್ತಿ ನಿದ್ರಾಭರನಿರತಚಕೋರಂಗಳಂ ಸೋಂಕಿ ನೆಯ್ದಿ
ಲ್ಗೊಳದೊಳ್ ಮಿಂದಾಡಿ ತೀಡಿತ್ತಪಹೃತಜನತಾಸುಪ್ತಿಭಾರಂ ಸಮೀರಂ ೧೦೫

ವ॥ ಅನಂತರಂ

ಕಂ॥ ನಿಖಿಳಸರೋರುಹ ಕುಟ್ಮಳ
ಮುಖಲಗ್ನ ಮಯೂಖಲೇಖೆಯಿಂ ಸುಪ್ತಶಿಲೀ
ಮುಖಕಳಮನುರ್ಚೆ ರವಿ ಶತ
ಮಖದಿಙ್ಮುಖಶಿಖರಿಶಿಖರಶೇಖರನಾದಂ ೧೦೬

ವ॥ ಆಗಳ್

ಕಂ॥ ಪಪ್ಪವರ ಮಂಗಳೋಕ್ತಿಯಿ
ನುಪ್ಪವಡಿಸಿ ನೀರೆ ಕೃತ್ಸ್ನಮಂಗಳಮಂ ಸೂ
ಳ್ದಿಪ್ಪದೆ ನಿರ್ವರ್ತಿಸಿ ಕ
ಣ್ಗೊಪ್ಪಿರೆ ಕೆಯ್ಗೆಯ್ದು ದೇವಿ ಪರಿಜನಸಹಿತಂ ೧೦೭

ತಿರುವಿಂ ಪೊಳಕಿದ ಕಾಮನ
ಸರಲಂತಿರೆ ಬಂದಳೆಸೆಯೆ ಪಕ್ಷಾಳಿಯ ಮೆ
ಯ್ಸಿರಿಯುಂ ಋಜತ್ವಮುಂ ಗುಣ
ಪರಿಚಯಮುಂ ಧರ್ಮಸೇವ್ಯಮುಂ ಸಫಲತೆಯುಂ ೧೦೮

ಉ॥ ಅವಳೊ ರೂಪಿನಿಂ ಸೊಬಗಿನಿಂ ಗುಣದಿಂ ಪೊಣರ್ವನ್ನಳೀ ಮಹಾ
ದೇವಿಯೊಳೆಂದು ಕಾಳೆವಿಡಿಸುತ್ತುಱಸಲ್ಬಿರುದಿಂಗೆ ಕಂತು ಕೆ
ಯ್ದೀವಿಗೆಯಂ ಪಗಲ್ವಿಡಿದು ಬರ್ಪವೊಳಾಯ್ತುಡೆನೂಲ ಕಿಂಕಿಣೀ
ರಾವಮುಮಂಗಕಾಂತಿಯುದಗುಂತಿಯುಮಂಗನೆ ಬರ್ಪ ತಾಣದೊಳ್ ೧೦೯

ವ॥ ಅಂತು ಬಂದು

ಮ॥ ಧರಣೀಪಾಳಕ ದಂಡನಾಯಕ ಮಹಾಸಾಮಂತ ಮಂತ್ರಿವ್ರಜಂ
ಬೆರಸಾಸ್ಥಾನದೊಳಿರ್ದುಪೇಂದ್ರನಿಭನಂ ರುಂದ್ರದ್ವಿಪದ್ವಿಷ್ಟವಿ
ಷ್ಟರವಿಶ್ರಾಂತನನಾತ್ಮಕಾಂತನಮಪಾಂತೋದ್ದಾಮಸೀಮಂತಿನೀ
ಕರ ಚಾಮೀಕರ ಚಾಮರೋತ್ಕರ ಮರುದ್ವ್ಯಾಕೀರ್ಣ ಕರ್ಣಾಬ್ಜನಂ ೧೧೦

ವ॥ ಸಾರ್ತಂದು ತದರ್ಧಾಸನಪ್ರದೇಶಮನಳಂಕರಿಸಿ

ಚಂ॥ ಇದು ವದನೇಂದುಬಿಂಬದಿನೊಸರ್ವ ಮರ್ದಂಬಿನಮುಣ್ಮಿಪೊಣ್ಮೆ ದಂ
ತದ ರುಚಿ ಕಾಮಕಾರ್ಮುಕಗುಣಧ್ವನಿಯೆಂಬಿನಮುಣ್ಮಿಪೊಣ್ಮೆ ಸ
ನ್ಮೃದುರುತಿ ತನ್ನ ಕಂಡ ಕನಸೆಲ್ಲಮನಂಗನೆ ಪೇೞೆ ಕೇಳ್ದು ರಾ
ಗದಿನಱೆದೆಂದನಂದವಧಿಬೋಧದಿನಾ ವಿಭು ತತ್ಫಲಂಗಳಂ ೧೧೧

ವ॥ ದೇವಿ ನೀನಿಂದು ವಿದಿತ ರಜತಾಚಳೋಪಮಶೋಭಮಂ ಮಹಾಮದೇಭಮಂ ಕಂಡುದಱೆನವಿಳ ಭದ್ರಲಕ್ಷಣಾಸ್ಥಾನನುಮನೂನ ದಾನನುಂ ಓಮಘವಳೋದ್ದಾಮ ರುಂದ್ರನಂ ಗಜೇಂದ್ರನಂ ಕಂಡುದಱೆನುನ್ನತ ಲಲಾಮನುಂ ವೃಷಭಾಭಿರಾಮನುಂ ಸ್ಫುರದರುಣಕೇಸರ ಕೀರಾಗ್ರಮಂ ಸಿಂಗಮಂ ಕಂಡುದಱೆನನೇಕ ಪಾಪಹರಣನುಮಂ ಮಹಾಮಹೀಭೃಚ್ಚರಣನುಂ ನಿಜಕೃತಾಭಿಮತಕಮಳೆಯಂ ವಿಮಳೆಯಂ ಕಂಡುದಱೆನಚ್ಯುತ ಸುಖೈಕಸದ್ಮನುಂ ಪ್ರಶಸ್ತಪದ್ಮನುಂ ಬಂಧುರಸುಗಂಧದಾಮಂಗಳಂ ಕುಸುಮದಾಮಂಗಳಂ ಕಂಡುದಱೆನಮಳ ಸುಮನೋಗುಣಾಮ

ಬಂಧವಿಹಿತನುಂ ಭ್ರಮರಹಿತನುಂ ಶಿಶಿರಧವಳಚಂದ್ರಿಕಾಸಾಂದ್ರನಂ ಚಂದ್ರನಂ ಕಂಡುದಜಿನುನ್ನತಲಕ್ಷ್ಮೀವಿಳಾಸಿಯುಂ ದಿಗಂಬರಪ್ರಕಾಶಿಯುಂ ಉದಯಗಿರಿಶಿಖರಾಭರಣನಂ ಸಹಸ್ರಕಿರಣನಂ ಕಂಡುದಜಿನಪಗತಾಶೇಷದೋಷಾನುವೃತ್ತನುಂ ಸಮ್ಯಗ್ದರ್ಶನನಿಮಿತ್ತನುಂ ಜಲಕೇಳೀಲುಳಿತ ಸರಸೀಬಿಸಂಗಳಂ ಝುಷಂಗಳಂ ಕಂಡುದಜಿನಮಳಾಪ್ಸರಗೀತಜನ್ಮೋತ್ಸವ ಪ್ರಸಂಗನುಂ ಅನಿಮಿಷೋತ್ತುಂಗನುಂ ಪುಣ್ಯಾಂಬುಪೂರ್ಣಸೌವರ್ಣಕಾಂತಿಸ್ಫುಟಂಗಳಂ ಘಟಂಗಳಂ ಕಂಡುದಜಿನನ್ಯ ಸುಭಟಪ್ರಭಾವಭಾರನುಂ ಜಾತರೂಪಸಾರನುಂ ಲಾಲಿತಮೃಣಾಳ ದಂಡಮುಂ ಕಮಳಷಂಡಮುಂ ಕಂಡುದಜಿನುದ್ದಂಡಪುಂಡರೀಕಲಕ್ಷ್ಮೀವಿಳಾಸಿಯುಂ ಗುಣವಿಭಾಸಿಯುಂ ವಿಲೋಲಕಲ್ಲೋಲ ಭದ್ರಮುಂ ಸಮುದ್ರಮುಂ ಕಂಡುದಜಿನಶೇಷ ಭುವನಾಶ್ರಮಮಹತ್ವನುಂ ಸಂತರ್ಪಿತ ಸಕಳಸತ್ವನುಂ ಕನತ್ಕನಕರುಚಿ ವಿಲುಠಮುಂ ಸಿಂಹಪೀಠಮುಂ ಕಂಡುದಜೆಂ ರುಚಿರರಚನಾಪ್ರಚುರಕಲ್ಯಾಣಾನುವೃತ್ತಿಯುಂ ಹರಿಪೂಜ್ಯಮೂರ್ತಿಯುಂ ನಿರುಪಮನಿಳಿಂಪದಂಪತೀವಿಭಾವಮುಂ ಸುರವಿಮಾನಮುಂ ಕಂಡುದಜಿನಖಿಲವೈಮಾನಿಕ ಸ್ತೋತ್ರಪಾತ್ರನುಂ ಸತ್ಪಥಚರಿತ್ರನುಂ ಪರಿಹಾಸಿತ ಕೈಳಾಸ ವಿಳಾಸನಗಮುಂ ಫಣಿಪತಿನಿವಾಸಮುಂ ಕಂಡುದಜಿನಶೇಷ ಭೋಗಾನುಭವರಕ್ತನುಂ ಕುಸುಮತೋನ್ನತಿರಿಕ್ತನುಂ ಸ್ಫುರಿತಕಿರಣಪ್ರಕಾಶಿಯಂ ರತ್ನರಾಶಿಯಂ ಕಂಡುದಜಿನತಿ ಮಹಾರ್ಘ್ಯಾಯೋಜ್ಯನುಂ ಸದಾಲೋಕಪೂಜ್ಯನುಂ ನಿರ್ಧೂಮಶಿಖಾಳಿಯಂ ಜ್ವಾಳಿಯಂ ಕಂಡುದಜೆಸಾಶ್ರಿತ ಸಂತರ್ಪಣಪ್ರಚಂಡತೇಜಃಪವಿತ್ರನುಂ ಜಗತ್ತ್ರಾಣನುಮಪ್ಪಂ

ಕಂ॥ ತೀರ್ಥಕರಂ ಭವ್ಯಜನ
ಸ್ವಾರ್ಥಕರಂ ನಮಗೆ ಪುತ್ರನಾದಪನಿದು ಸ
ತ್ಯಾರ್ಥಂ ಭಾವಿಸೆ ನಾಮೆ ಕೃ
ತಾರ್ಥರೆಮಿನ್ನಖಿಳ ಜಗದೊಳನುಪಮಚರಿತೇ ೧೧೨

ಸ್ವಾಗತಂ॥ ಅಲ್ಲದೊಂದು ನಿಜಸಸ್ಮಿತವಕ್ತ್ರೋ
ತ್ಫುಲ್ಲ ಪಂಕರುಹದೊಳ್ ಪುಗುತರ್ಪಿಂ
ದ್ರೋಲ್ಲಸದ್ಗಜಮುಮಂ ಕನಸಿಂ ನೀ
ನಲ್ಲದಂಗನೆಗೆ ಕಾಣ್ಬುದು ಮೊಗ್ಗೇ ೧೧೩
ಎಂದು ಪೇಟ್ದಿ ಜಿನನಾಥನ ಮಾತೆಂ
ಬಿಂದುರೋಚಿ ಕುಡೆ ಹೃತ್ಕುಮುದಶ್ರೀ
ಗೆಂದುಮಿಲ್ಲದ ಮಹೋತ್ಸವಮಂ ಕೇ
ಳ್ದಂದು ದೇವಿ ಪುಳಕಾಂಕಿತೆಯಾದಳ್ ೧೧೪

ವ॥ ಆಗಿ ಸಂತೋಷಂಬಟ್ಟನಂತರಮುಚಿತ ತಾಂಬೂಲದಾನಸಮನ್ವಿತೆ ನಿಜನಿವಾಸಕ್ಕೆ ಬಂದು ಸುಖದಿನಿರೆ

ಮ॥ ನಿರುತಂ ಫಾಲ್ಗುಣಮಾಸ ಕೃಷ್ಣ ನವಮೀ ರಾತ್ರ್ಯಂತದೊಳ್ ಮೂಲಮಾ
ಗಿರೆ ನಕ್ಷತ್ರಮಮರ್ತ್ಯನಾಯಕಕೃತಸ್ವರ್ಗಾವತಾರೋತ್ಸವಂ
ಪರಮಂ ಪ್ರಾಣತಕಲ್ಪದಾರುಣವಿಮಾನೋದ್ದೇಶದಿಂ ಬಂದು ಬಂ
ಧುರ ವಕ್ತ್ರಾಬ್ಜನಿವಿಷ್ಟನಾಶ್ರಯಿಸಿದಂ ರಾಮಾಂಬಿಕಾಗರ್ಭಮಂ ೧೧೫

ವ॥ ಅಂತಾಶ್ರಯಿಸಿ ಸುಗ್ರೀವನೆಂಬ ಧರ್ಮರತ್ನಾಕರಗರ್ಭಶುಕ್ತಿ ಸಂಪುಟದೊಳ್ ಸುವೃತ್ತ ಮೌಕ್ತಿಕರತ್ನದಂತೆಯುಂ ಜಠರಜಾಹ್ನವೀಜಳದೊಳಮಳಕಮಳದಂತೆಯುಂ ಪ್ರವರ್ಧಮಾನನಾಗಿ ಬಳೆವಲ್ಲಿ

ಕಂ॥ ನಿಳಯದ ದುಗುಲದ ಜವನಿಕೆ
ಯೊಳಗಣ ಮಾಣಿಕದ ಸೊಡರ ಕುಡಿ ಬೆಳಗುವವೋಲ್
ಬೆಳಗಿದುದು ತಾಯ ತೆಳ್ವಸಿ
ಱೊಳಗಣ ಘನದಿನನ ತೇಜಮಱಿವಿನ ಬೀಜಂ ೧೧೬

ನಳಿನೀವನ ಕಿಂಜಲ್ಕದೊ
ಳೆಳಸಿಯುಮೆಳನೇಸಱಂತೆ ಪೀಡೆಯನವ್ವಾ
ಕುಳಮೀಯದಂತಿರೀಯನೆ
ಲಳಿತೆಯ ಗರ್ಭದೊಳಗಿರ್ದುಮೂರ್ಜಿತತೇಜಂ ೧೧೭

ವ॥ ಅದಲ್ಲದೆಯುಂ

ಮ॥ ತನುರೋಮಾವಳಿಗೊಯ್ಯನೊಯ್ಯನೆ ಪಸುರ್ಪಂ ಚೂಚಕಕ್ಕೊಯ್ಯನೊ
ಯ್ಯನೆ ಕರ್ಪಂ ವಳಿಗೊಯ್ಯನೊಯ್ಯನಟಿವಂ ಶಾತೋದರಕ್ಕೊಯ್ಯನೊ
ಯ್ಯನೆ ಕೊರ್ವಂ ಮೊಗಕೊಯ್ಯನೊಯ್ಯನೆ ಬೆಳರ್ಪಂ ಕುಂತಳಕ್ಕೊಯ್ಯನೊ
ಯ್ಯನೆ ನೀಳ್ಪಂ ಮಿಗೆ ಮಾಡುವಾ ಸತಿಯ ಗರ್ಭಾಧಾನಮೇನೊಪ್ಪಿತೋ ೧೧೮

ವ॥ ಮತ್ತಂ

ಕಂ॥ ತನು ಬಡವಪ್ಪ ತೂಂಕಡಿಸುವಾಗುಳಿ ಮಟ್ಟಿ ಕನಲ್ದೊನಲ್ದು ಸುಯ್
ಜನಿಯಿಸುವಂಘ್ರಿ ಝೊಮ್ಮಡರ್ವ ಪೊಂಗಿ ಬಸಿಱ್ ಬಿಗಿದನ್ಯಗರ್ಭಿಣೀ
ಜನದ ವಿಕಾರಮಾ ಸತಿಯೊಳಾಗವೆ ತಾಂ ನೆಲಸಿರ್ಪ ತಾಣದೊಳ್
ಜಿನನವಿಕಾರಿ ಜಾಡ್ಯದ ವಿಕಾರಮನೇಕಿರಲೀವನೆಂಬಿನಂ ೧೧೯

ವ॥ ಅದಲ್ಲದೆಯುಂ

ಕಂ॥ ಸ್ಮರರಾಗೋದ್ರೇಕಂ ವೀ
ತರಾಗನಿರ್ದೆಡೆಯೊಳೇಕೆ ಪುಟ್ಟುಗುಮೆನೆ ತ
ತ್ಪರತೆಯಿನಂತರ್ವರ್ತಿನಿಯೊ
ಳರಸನಪೇಕ್ಷಿಸನೆ ರತಿರಹಸ್ಯೋತ್ಸವಮಂ ೧೨೦

ವ॥ ಮತ್ತಂ

ಮ॥ ಘನಸಂಭೋಗಸುಖಂ ವಿರಾಮವಿರಸಂ ಭಾವಿಪ್ಪೊಡಿಂಬಿಲ್ಲದೆಂ
ದು ನೃಪಂ ಮಾಣ್ದಹಮಿಂದ್ರನಂತೆ ತಣಿವಂ ಕಾಯಪ್ರವೀಚಾರದೂ
ರನೊಱಲ್ದೊಪಳ ರೂಪನೀಕ್ಷಿಪ ವಿದಗ್ಧಾಳಾಪಮಂ ಕೇಳ್ವ ಸಾ
ರ್ದಿನಿಸಂ ಬಾಯ್ಸವಿವಾನನಾಂಬುಜದ ಕಂಪಂ ಕೊಳ್ವ ಸಂಪ್ರೀತಿಯಿಂ ೧೨೧

ವ॥ ಆ ಸಮಯದೊಳ್

ಮ॥ ಸುರಲೋಕೋದ್ಗತಸಾರವಸ್ತುಶತಮಂ ಶಕ್ರಾಂಗನಾಕೋಟಿಯುಂ
ನರಲೋಕೋದ್ಗತಸಾರವಸ್ತುಶತಮಂ ಸುಗ್ರೀವರಾಜೇಂದ್ರನುಂ
ತರವೇಟ್ಟಾಗಳೆ ತಂದು ಕೂಡೆ ನೆಱೆ ಸಾಫಲ್ಯಕ್ಕೆ ಪಕ್ಕಾದಳಾ
ಹರಿಣೀಲೋಚನೆ ಗರ್ಭದೊಳ್ ಬಳೆಯೆ ಭಾಸ್ವದ್ಭವ್ಯರತ್ನಾರ್ಣವಂ ೧೨೨

ಗದ್ಯ

ಇದು ಸಮಸ್ತ ಭುವನಜನಸಂಸ್ತುತ ಜಿನಾಗಮ ಕುಮುದ್ವತೀ ಚಾರುಚಂದ್ರಾಯಮಾಣ ಮಾನಿತ ಶ್ರೀಮದುಭಯಕವಿಕಮಳಗರ್ಭ ಮುನಿಚಂದ್ರಪಂಡಿತದೇವ ಸುವ್ಯಕ್ತಸೂಕ್ತಿಚಂದ್ರಿಕಾ ಪಾನಪರಿಪುಷ್ಟಮಾನಸಮರಾಳ ಗುಣವರ್ಮನಿರ್ಮಿತಮಪ್ಪ ಪುಷ್ಪದಂತಪುರಾಣದೊಳ್ ಗರ್ಭಾವತರಣಂ ನವಮಾಶ್ವಾಸಂ

ದಶಮಾಶ್ವಾಸಂ

ಕಂ॥ ಶ್ರೀಜಯರಾಮೆ ಮನೋಜ
ಶ್ರೀಜಯರಾಮೆಯವೊಲೆಸೆದಳಿನಿಯಂಗುದ್ಯ
ತ್ತೇಜಂ ಬಳೆದಿರೆ ಗರ್ಭಸ
ರೋಜಿನಿಯೊಳ್ ಪ್ರಭುಗುಣಾಬ್ಜಿನೀಕಳಹಂಸಂ ೧

ವ॥ ಅಂತಾವಿರ್ಭೂತ ಗರ್ಭನಿರ್ಭರವಿಕಾಸೆಯುಂ ಸಫಳೀಕೃತಗರ್ಭದೋಹಳ ಪ್ರಕಾರೆಯುಮಪ್ಪುತ್ತುಮಿರ್ದ ತನ್ಮಹಾದೇವಿಯು ಪರಿಪೂರ್ಣಪ್ರಸವಸಮಯುಂ ಮಾರ್ಗಶಿರಬಹುಳ ದಶಮಿಯಾಗೆ

ಮ॥ ಒದವಂ ಭವ್ಯಮುಖಾಂಬುಜಕ್ಕೆ ಮುದಮಂ ಸದ್ಧರ್ಮಚಕ್ರಕ್ಕೆ ಸಂ
ಪದಮಂ ಲೋಕದ ದೃಷ್ಟಿಗಸ್ತಪದಮಂ ದೋಷಾವಕಾಶಕ್ಕೆ ಹೃ
ದ್ಗದಮಂ ದುರ್ಮತಕೌಶಿಕಕ್ಕೆ ಪಡೆಯುತ್ತಿಕ್ಷ್ವಾಕುವಂಶೇಂದ್ರಶೈ
ಲದಿನತ್ಯೂರ್ಜಿತತೇಜನುದ್ಭವಿಸಿದಂ ತ್ರೈಲೋಕ್ಯನಾಥಂ ಜಿನಂ ೨

ವ॥ ಆ ಪ್ರಸ್ತಾವದೊಳ್

ಮ॥ ಕುಜ ವಲ್ಲೀ ಫಲ ಪುಷ್ಪ ಸಂಪ್ರಯುತಮಾಯ್ತುರ್ವೀತಳಂ ಸ್ವಚ್ಛಮಾ
ಯ್ತು ಜಳಂ ಪ್ರಜ್ವಳಮಾಯ್ತು ವಹ್ನಿ ಹಿಮಗಂಧೋದ್ಗಾರಿಯಾಯ್ತಂದು ಗಾ
ಳಿ ಜಿತಾಂಭೋದಕಳಂಕಮಾಯ್ತು ನಭಮೆಂತುಂ ಸರ್ವಭೂತೋಪಕಾ
ರಿ ಜಿನಂ ಪುಟ್ಟಿದೊಡೊಳ್ಪು ಪುಟ್ಟುವುದು ಪಂಗೇ ಪಂಚಭೂತಂಗಳೊಳ್ ೩

ಕಂ॥ ಅಱಿಪಿಂದೆ ಬಱಿಯ ನುಱಿಯದೆ
ಸುಱಿದುಗುಳುವ ತುಂಬಿವಿಂಡನೆಳೆತರುತುಂ ಪೊಂ
ಪುಱಿವೋಗೆ ಕಂಪು ಪೂಮಱಿ
ಘಱಿಲನೆ ದಱಿದಱಿಸಿ ಸುರಿಯೆ ದೆಸೆಗಳೊಳೆಲ್ಲಂ ೪

ವ॥ ಆಗಳಾ ಸೌಧರ್ಮೇಂದ್ರಂ ತನಗಾಸನಕಂಪಮಾಗಲೊಡಂ ಅವಧಿಬೋಧದಿಂ ತೀರ್ಥಕರೋತ್ಪತ್ತಿಯಂ ಜಲಕ್ಕನಱಿದು

ಚಂ॥ ತಡೆದಿರದೆಯ್ದು ವಿಷ್ಟರದಿನಾನತಮಸ್ತಕನಾಗಿ ಮೂಱುಸೂಳ್
ಪೊಡವಡುವಲ್ಲಿ ಮಾಣಿಕದ ಮೌಳಿಮರೀಚಿ ಸಭಾವಿಭಾಗದೊಳ್
ಪೊಡರ್ದು ಪೊದಟ್ದು ಪಜ್ವಳಿಸೆ ರಾಗರಸಾಪಗೆ ಬಂದು ನಿಂದ ಪೆ
ರ್ಮಡುವಿನೊಳಂದು ಮೂಡಿ ಮುೞುಗಿರ್ಪವೊಲಂದೆಸೆದಂ ಪುರಂದರಂ ೫

ವ॥ ಅನಂತರಂ ಪರಮೇಶ್ವರದ್ವಿತೀಯಕಲ್ಯಾಣಕರಣೋತ್ಸುಕಾಂತಃಕರಣ ನೈರಾವಣಾರೂಢಂ ಶಚೀಸಮೇತನುಂ ಚತುರ್ವಿಧಾಮರಪರೀತನುಮಾಗಿ ಪೊಱಮಡುವುದಂ ನಿಜಮಹಾವಿಭೂತಿಯಂ

ಕಂ॥ ಪ್ರಕಟಿಸೆ ನೆರೆದುದು ಸಾಮಾ
ನಿಕತ್ರಯತ್ರಿಂಶದಾತ್ಮರಕ್ಷಕ ದಿಕ್ಪಾ
ಲಕ ಪರಿಷದಾಭಿಯೋಗ್ಯ
ಪ್ರಕೀರ್ಣಕಿಲ್ಬಿಷಕಭೇದ ಸುರಪರಿವಾರಂ ೬

ವ॥ ಮತ್ತಂ

ಕಂ॥ ಘನಚಂದ್ರೋದಯದಬ್ಧಿಗ
ಳೆನಿಸಿದುವತಿರಭಸಮೆಸೆಯೆ ಕರಿ ತುರಗ ಸ್ಯಂ
ದನ ಪತ್ತಿ ವೃಷಭ ಗಂಧ
ರ್ವನರ್ತಕೀಪ್ರಕರಯುತಸುರಾನೀಕಿನಿಗಳ್ ೭

ವ॥ ಅಂತು ನೆರೆದತಿಬಹುಳಕೋಳಾಹಳಕ್ಷೋಭ ಶೋಭಾವಳಂಬಿಯಾದ ಮರಸೇನಾಸಹಸ್ರ ಸಮಿತಿವೆರಸು

ಸ್ರ॥ ವ್ಯೋಮಂ ಚಿತ್ರಾತಪತ್ರಂಗಳಿನತುಳಪತಾಕಾಪಟಶ್ರೇಣಿಯಿಂ ಪೌ
ಲೋಮೀ ದೃಕ್ಚಂದ್ರಿಕಾಜಾಲದಿನನಿಮಿಷಕಾಂತಾಂಗಶೃಂಗಾರದಿಂ ನಾ
ನಾ ಮಾಂಗಲ್ಯಾನಕ ಧ್ವಾನದಿನಮರ ಗಜೋದ್ಯನ್ಮದಾಮೋದದಿಂ ದಿ
ಕ್ಸೀಮಾ ಪ್ರಾಂತಂಬರಂ ತಿಂತಿಣಿಯೆನಿಸಿರೆ ಕಾಕಂದಿಗೆಟ್ದಿಂದನಿಂದ್ರಂ ೮

ವ॥ ಅಂತು ಬಂದು ತತ್ಪುರಬಹಿರ್ಭಾಗದೊಳ್ ಸಕಳ ದೇವಕೋಟಿಯಂ ನಿಜಿಸಿ ಬರೆ ಪೊೞಲೊಳ್

ಕಂ॥ ಪಸರಿಪ ಪೂಮಱೆಯೊಡನೊಡ
ನೆಸೆವುತ್ಸವತೂರ್ಯನಿನದಮೊಡನೊಡನಲೆದಾ
ಱಿಸುವ ಹಿಮಾನಿಳಮೊಡನೊಡ
ನೆಸೆದುದು ಜಯ ಜೀವ ನಂದ ವರ್ಧಸ್ವರವಂ ೯

ಪರಮೇಶ್ವರನುದಯಿಸಿದಂ
ನೆರೆದೆಲ್ಲರುಮೆಱಗಿಮೀಗಳೆಂದು ಪುರಶ್ರೀ
ಸುರನರಖಚರೋರಗರಂ
ಕರೆವಂತೊಪ್ಪಿದುವಸಂಖ್ಯತೂರ್ಯರವಂಗಳ್ ೧೦

ವ॥ ಮತ್ತಮಾ ಸಮಯದೊಳ್

ಮ॥ ತ್ರಿದಶರ್ ಬಾಜಿಪ ದಿವ್ಯತೂರ್ಯರವಮಂ ನಿಷ್ಕಂಪಕರ್ಣಂಗಳಾ
ಗಿ ದಿಶಾದಂತಿಗಳಾಲಿಪಲ್ಲಿ ಮದಮಂ ಗಂಡಸ್ಥಳೋದೀರ್ಣಕಂ
ಪದೊಳಂ ಸೇವಿಸಿ ತುಂಬಿಗಳ್ ತಣಿದುವೇನುತ್ಸಾಹಮಂ ಮಾಡದಿ
ರ್ಪುದೆ ಸನ್ಮಾರ್ಗದೊಳಂ ಕ್ರಮಾಧಿಕರೊಳುದ್ಯದ್ದಾನ ಸಂಪ್ರೀತಿಯುಂ ೧೧

ವ॥ ಅನ್ನೆಗಮಿತ್ತ ದೇವಲೋಕದೊಳ್

ಹರಿಣೀ॥ ಅಮರಪಟಹಧ್ವಾನಂ ತನ್ನಿಂದೆ ತಾನೆ ವಿಘೂರ್ಣಿಸಿ
ತ್ತಮರ ಮಕುಟಾನೀಕಂ ತನ್ನಿಂದೆ ತಾನೆ ವಿನಮ್ರಮಾ
ಯ್ತಮರ ಕುಸುಮಾಸಾರಂ ತನ್ನಿಂದೆ ತಾನೆ ಪೊದಟ್ದುದಂ
ದಮರನುತನಪ್ಪರ್ಹತ್ಪುಣ್ಯಪ್ರಭಾವದಿನೆತ್ತಲುಂ ೧೨

ಮ॥ ನಿರುತಂ ಭಾವನರುಂ ವನಾವಸಥರುಂ ಜ್ಯೋತಿಷ್ಕರುಂ ಕಲ್ಪವಾ
ಸರುಮಾಗಿರ್ದ ಚತುರ್ವಿಧಾಮರರುದಾರರ್ ಸ್ತೋಮದೊಳ್ ಕೂಡೆ ಭೋ
ರ್ಗರೆಯುತ್ತಿರ್ದುವನೇಕ ಶಂಖರವಭೇರೀಘೋಷಕಂಠೀರವ
ಸ್ವರಘಂಟಾರುತಿಗಳ್ ಯಥಾಕ್ರಮದಿನತ್ಯಾಶ್ಚರ್ಯಮಂಬನ್ನೆಗಂ ೧೩

ಕಂ॥ ಸ್ಮರಹರನುದಯಮನಪ್ಪುವ
ಸುರವಿಷ್ಟರದೊಡನೆ ನಡುಗಿತಲರ್ವಿಲ್ಲುಮಿದ
ಚ್ಚರಿ ನೇಣ ಭೇದವತನುವ
ಶರಾಸನಕ್ಕಂ ಸುರಾಸನಕ್ಕಮದೊಂದೇ ೧೪

ವ॥ ಅಂತು ಸಮುಚಿತಾಮರೇಂದ್ರಸಮಿತಿವೆರಸು ಬಂದು ನಿಜನಿಳಯ ನಿರ್ವಿಶೇಷ ಲೀಲಾವಿಲಾಸಮಂ ವಿವಿಧ ಮಂಗಳ ಪರಂಪರಾ ಪರಿಕರವಿಭಾಸಮಂ ಸುಗ್ರೀವನಿವಾಸಮಂ ಪೊಕ್ಕು ನಿಯಮಿಸೆ

ಕಂ॥ ಶತಮಖನನುಮತೆ ದಿಗ್ಗಜ
ಪತಿಯಿಂದಿಟಿದುಚಿತದೇವಿಯರ್ವೆರಸು ತಿರೋ

ಹಿತದೇಹೆಯಾಗಿ ನಯವಿನಿ
ಭೃತೆ ಪೊಕ್ಕಿಂದ್ರಾಣಿ ಸೂತಿಕಾಮಂದಿರಮಂ ೧೫

ಉ॥ ಸ್ಫಾರಶರೀರಕಾಂತಿ ಜನನೀ ನಯನಾಬ್ಜಮನುಳ್ಳಲರ್ಚೆ ವಿ
ಸ್ತಾರ ಮನೋರಥಾಂಗಮನೊಣರ್ಚೆ ಬೆಳರ್ಪೆಳನೇಸಱಂತೆ ತೇ
ಜೋರುಚಿರಾತ್ಮನಲ್ಲಿರೆ ಜಿನಾರ್ಭಕನೊರ್ಮೆಯೆ ಕಂಡು ನಿಂದು ಕ
ಣ್ಣಾರೆ ಪುಳೋಮಪುತ್ರಿ ನಡೆನೋಡಿದಳಬ್ಬಱನುಂಟುಮಾಡಿದಳ್ ೧೬

ವ॥ ಅಂತು ನೋಡಿ ತನಗದೃಷ್ಟಪೂರ್ವಮಪ್ಪ ಜಿನಾರ್ಭಕನ ಸರ್ವಾಂಗ ಸೌಂದರ್ಯಮುಂ ಸರ್ವಲಕ್ಷಣಸಂಪತ್ತಿಯುಂ ಚಿತ್ತಮಂ ಕೌತುಕಂಗೊಳಿಸೆ ನಿಟಿಳತಟಘಟಿತ ಕರಸರೋಜೆಯಾಗಿ

ಕಂ॥ ಜಿನನಿರ್ದ ಶಯನ ಸದನಮ
ನನಿಮಿಷವಧು ಮೂಮೆ ಭಕ್ತಿಯಿಂ ಬಲಗೊಳುತಂ
ಕನಕಾಬ್ಜಮೊಳಗೆ ಸರಸಿಯ
ನನುನಯದಿಂ ಬಳಸುವಂಚೆಯಂ ನೆನೆಯಿಸಿದಳ್ ೧೭

ವ॥ ಅನಂತರಂ ತಾಯ ಮುಂದೆ ಮಾಯಾಶಿಶುವನಿರಿಸಿ

ಕಂ॥ ಅಂಜಿಯುಮಂಜದೆ ತೆಗೆದಳ್
ರಂಜಿಪ ಜಿನಶಿಶುವನಂದು ಶಚಿಶುಚಿ ತೆಗೆವಂ
ತಂಜಿಯುಮಂಜದೆ ದಿವ್ಯಮ
ನಂಜದರಾರ್ ಮುಟ್ಟುವಲ್ಲಿ ತೇಜಸ್ವಿಗಳಂ ೧೮

ವ॥ ಅಂತು ತೆಗೆದೆತ್ತಿಕೊಂಡು ದೇವಾಂಗನಾಮಂಗಳ ರವಂಗಳುಂ ಮಂಗಳಾನಕಂಗಳುಂ ಭೋರ್ಗರೆಯೆ ಪೊಱಮಟ್ಟು ಬರ್ಪಲ್ಲಿ

ಉ॥ ಭಾಸ್ವರಭಕ್ತಿಯಿಂದೆಱಗೆ ದೇವಗಣಂ ಜಯ ಜೀವ ನಂದ ವ
ರ್ಧಸ್ವ ಘನಸ್ವನಂ ನೆಗೞೆ ಬೀಸುವ ಸೀಗುರಿ ಸೋಗೆಯಾಗೆ ಕಾ
ರ್ತಸ್ವರಮೌಳಿಮಾಳೆ ಕುಡುಮಿಂಚಿನ ಗೊಂಚಲ ಕಾಂತಿ ಸಾರಸ
ರ್ವಸ್ವಮನೀಯೆ ಪೋಲ್ತೆಸೆದುದಂದು ಘನಾಗಮಮಂ ಜಿನಾಗಮಂ ೧೯

ವ॥ ಆಗಳತಿ ಭಕ್ತಿಯಿಂದೆಱಗುವಂತೆಱಗುವಿಭಪತಿಯ ಮೇಗಣ್ಗೆ ದಿಕ್ಕರಿಕರಾನುಕಾರಿ ನಿಜಭುಜಾದಂಡಂಗಳಂ ನೀಡಿ ಶಚೀದೇವಿಯಿಂ ತೆಗೆದು ತತ್ಕರಸರೋಜಂಗಳತ್ತಣಿಂದೆತ್ತಿಕೊಂಡು

ಕಂ॥ ತಲೆಯೊಳ್ ತಾಳ್ದುವ ನೊಸಲೊಳ್
ನಿಲಿಪೆರ್ದೆಯೊಳ್ ತಳೆವ ಕುಳಿಶಿ ಚೂಡಾಮಣಿಗಂ
ತಿಲಕಕ್ಕಮೆಕ್ಕಸರಕಂ
ನಲಿನಲಿದಣಿಮಾಡಿವಂ ಜಿನೇಂದ್ರಾರ್ಭಕನಂ ೨೦

ವ॥ ಆನಂತರಂ ತದಂಗಸಂಗಸಂಜನಿತ ಪರಮಾನಂದ ರೋಮಾಂಚಕಂಚುಕಿತ ಗಾತ್ರಂ ಸಹಸ್ರನೇತ್ರಂ ನಿಜೋತ್ಸಂಗತುಂಗಸಿಂಹಾಸನಸ್ಥಿತಂ ಮಾಡಿದಾಗಳ್

ಕಂ॥ ಇನ್ನೆವರಮಫಳಮೆನಿಸಿದು
ದೆನ್ನಕ್ಷಿಸಹಸ್ರದೊಂದು ಜನ್ಮಮುಮನಿಮೇ
ಷೋನ್ನತಿಯುಮೀಗಳುಂ ಜಿನ
ನನ್ನೋಡುವ ಸಯ್ಪಿನಿಂದಮಾಯ್ತೀ ಸಫಳಂ ೨೧

ವ॥ ಎಂದು ಪರಿತೋಷಪರಾಕಾಷ್ಠೆಯೊಳ್ ನಿಷ್ಠಿತಾತ್ಮನಾಗುತ್ತುಂ

ಚಂ॥ ತಳೆದು ನಿಜಾಂಗಪೀಠತಟದೊಳ್ ಜಿನನಂ ತನಿಸೋಂಕಿ ಹಸ್ತದಿಂ
ಪುಳಕಿತಗಾತ್ರನಾಗಿ ಮಘವಂ ಮೆಱೆದಂ ಪೆಱಗೇಱೆ ಬರ್ಪ ನ
ಲ್ಲಳ ಕುಚಕುಂಭದೊಂದು ತನಿಸೋಂಕಿನ ಸೌಖ್ಯಮದಿಂತೆನಲ್ ಮನಂ
ಗೊಳೆ ತವರಾಜದಿಂಪನಱೆದಿಂ ಬೞಿಕಂ ಪರಿಗಿಂಬು ಸೇವ್ಯಮೇ ೨೨

ವ॥ ಆಗಳತ್ಯಂತ ಕಳಧೌತಶೈಲಸನ್ನಿಧಿಯ ಕುಳಗಿರಿಗಳೆನಿಸಿದ ನಿಜನಿಜಗಜಂಗಳಂ ಸೌಧರ್ಮೇಂದ್ರನೇಱೆದೈರಾವತಕ್ಕೆ ಪಕ್ಕುಮಾಡಿ

ಕಂ॥ ಮುತ್ತಿನಬಿಂಬದ ಜಾಳದ
ಮುತ್ತಿನವಿಭ್ರಮದಿನೆಸೆವ ಬೆಳ್ಗೊಡೆ ಭಗಣಂ
ಸುತ್ತಿರೆ ಮಿಸುಗುವ ಶಶಿಯೆನಿ
ಸುತ್ತಿರೆ ಜಿನಪತಿಗೆ ಪಿಡಿದನೀಶಾನೇಂದ್ರಂ ೨೩

ಮ॥ ನೆಗೞ್ದಿಸ್ಮಜ್ಜಳಮಂ ಜಿನಾಭಿಷವಣಕ್ಕೊಯ್ದೆಮ್ಮ ಜನ್ಮಕ್ಕೆ ಮಾ
ಡುಗೆ ಸಾಫಲ್ಯಮನಿಂದ್ರನೆಂದರೆದು ಗಂಗಾದೇವಿ ಪೇೞ್ದಟ್ಟಿದಂ
ಚೆಗಳೆಂಬಂತೆಸೆವಂತು ಚಾಮರಮನತ್ಯುತ್ಸಾಹದಿಂದಿಕ್ಕಿದರ್
ಜಗದೀಶಂಗೆ ಸನತ್ಕುಮಾರಪತಿಯುಂ ಮಾಹೇಂದ್ರಕಲ್ಪೇಂದ್ರನುಂ ೨೪

ಕಂ॥ ಬಿತ್ತರದಿನಿಕ್ಕಿದರ್ ಭಗ
ವತ್ತೀರ್ಥಕರಂಗೆ ಕುಂಚಮಂ ಬ್ರಹ್ಮಬ್ರ

ಹ್ನೋತ್ತರಲಾಂತವಕಾಪಿ
ಷ್ಠೋತ್ತಮ ಕಲ್ಪಾಮರೇಂದ್ರರಿಂದ್ರನ ಕೆಲದೊಳ್ ೨೫

ವ॥ ಮತ್ತಿತ್ತಮಿತರಕಲ್ಪಂಗಳಪ್ಪ

ಕಂ॥ ನುತಶುಕ್ರಮಹಾಶುಕ್ರದ
ಶತಾರಸಹಸ್ರಾರದಾನತಪ್ರಾಣತದಾ
ವಿತತಾರಣಾಚ್ಯುತೇಂದ್ರರ್
ಪತಿಭಕ್ತಿಗೆ ಪಡೆ ಪಿಡಿದರಖಿಳಪಾಳಿಧ್ವಜಮಂ ೨೬

ವ॥ ಅಂತು ತಮತಮಗೆ ವೀತರಾಗಸೇವಾನುರಾಗರಸರಂಜನಾಯತಚಿತ್ತರ್ ಸುತ್ತಿಮುತ್ತಿ ಸಮುಚಿತಯೋಗದಿಂ ನೆಗೆದು ನಿಂದನೇಕನಾಕನಾಯಕರ್ಬೆರಸು

ಕಂ॥ ಜಿನವರನಂ ಮದುವೆಗೆ ಮು
ಕ್ತಿನಿತಂಬಿನಿಯತ್ತಲೊಯ್ವ ನಿಚ್ಚಣಿಗಳವೋಲ್
ಜನದೊಸಗೆ ನೆಗಟಿ ಪುಟ್ಟಿದ
ಮನೆಯಂ ಮುಂದಿಟ್ಟುಕೊಂಡು ಹರಿ ಪೋಜಿಮಟ್ಟಂ ೨೭

ವ॥ ಆ ಸಮಯದೊಳ್

ಕಂ॥ ಸಕಳ ಜಗಮಿಂದೆ ಶಬ್ದಾ
ತ್ಮಕಮಾಯ್ತೆನೆ ಮೊಟಿಗೆ ಬಧಿರಿತಾಶಾಕರಿಗಳ್
ಪ್ರಕಟಿಸಿದುವಮರತೂರ್ಯ
ಪ್ರಕರಂಗಳ್ ಸಾರ್ಧಸಪ್ತಕೋಟಿಮಿತಂಗಳ್ ೨೮

ವ॥ ಅನಂತರಂ

ಮ॥ ಜಗತೀವಿಶ್ರುತಮಂದರಕ್ಕೆ ನಡೆಯಲ್ ಪೇಟ್ದಿಂದ್ರನಾತ್ಮೀಯ ಸೇ
ನೆಗೆ ಸಂರಂಭದೆ ಸನ್ನೆಗೆಯ್ಯೆ ಜಿನಯಾತ್ರಾಯೋಗ್ಯಮಾಗಧ್ವಶು
ದ್ಧಿಗೆ ಗಂಗಾಂಬುಪವಿತ್ರಪಾಣಿತಳದಿಂದಭ್ಯುಕ್ಷಣಂ ಮಾಡುವಂ
ತೊಗೆದಿಂಬಾದುದು ಕೆಯ್ಯ ಚಾಮರಚಳತ್ಪಾಂಡುಪ್ರಭಾಮಂಡಳಂ ೨೯

ವ॥ ಅಂತು ಸನ್ನೆಗೆಯ್ಯಲೊಡಂ

ಕಂ॥ ಬಡಗಣ ದೆಸೆಗೆ ತೆರಳ್ದಾ
ಗಡೆ ಮಂದರದತ್ತ ಮೊಗಸಿ ಗಗನಮನೋರಂ
ತೆಡೆಗೊಂಡುದು ಗೆಡೆಗೊಂಡುದು
ನಡೆಗೊಂಡುದು ಹಾದಿಗೊಂಡುದಮರಾನೀಕಂ ೩೦

ಚಂ॥ ತಳರ್ವ ವಿಮಾನಕೋಟಿ ನಡೆದೊಪ್ಪುವ ವಾರಣಕೋಟಿ ಬಾಜಿಪ
ಗ್ಗಳಿಕೆಯ ತೂರ್ಯಕೋಟಿ ನೆಗೆವಾತಪವಾರಣಕೋಟಿ ಬೀಸುವು
ಜ್ವಳ ಚಮರೀಜಕೋಟಿ ಮಿಳಿರ್ವುಚ್ಚಮಹಾಧ್ವಜಕೋಟಿ ಮಿಂಚಿ ಸಂ
ಚಳಿಸುವ ಶಸ್ತ್ರಕೋಟಿ ಬಗೆಗೊಂಡುದು ತಂಡದೆ ದೇವಕೋಟಿಯಾ ೩೧

ಅನಿಮಿಷದೇಹದೀಪ್ತಿ ಜಳಮೆತ್ತಿದ ಸತ್ತಿಗೆ ಫೇನರಾಜಿ ಕೇ
ತನಚಯಮೂರ್ಮಿಮಾಳೆ ಬಹುವಾಹನಸಂತತಿ ನಕ್ರಚಕ್ರವಂ
ಗನೆಯರ ಕಣ್ಬೊಣರ್ ಪೊಳೆವ ಮೀಂಬೊಣರೆಂಬಿನಮಾಗಳಿಂದ್ರವಾ
ಹಿನಿಯವೊಲಿಂದ್ರವಾಹಿನಿ ಮನೋಹರಮಾಯ್ತು ನಭೋವಿಭಾಗದೊಳ್ ೩೨

ಉ॥ ಈ ನಿಖಿಳಾಮರರ್ಗೆ ಜಿನಯಾತ್ರೆಯೊಳಾಗದು ಪಾಱುಗೆಯ್ತುಮ
ಧ್ವಾನಮನಿಂಬುಮಾಡಿ ನಡಿಯಿಪ್ಪೆನೆನುತ್ತುಮೆ ಶಕ್ರವಿಕ್ರಿತಂ
ಶ್ರೀ ನಿಜೆಸಿಟ್ಟ ನಿಚ್ಚಣಿಗೆಯೆಂಬಿನೆಗಂ ಸ್ಫಟಿಕೇಂದ್ರನೀಲಸೋ
ಪಾನದ ಮೂಱುಪಂಕ್ತಿ ನಿಮಿರ್ದೇನಸೆದಿರ್ದುದೊ ಮಂದರಂಬರಂ ೩೩

ಕಂ॥ ಸ್ಫುರಯಿಪ ತಮಾಳವೀಥಿಗ
ಳೆರಡಱ ನಡುವಲರ್ದ ಕುಂದವನದವೊಲೆನಿಸಿ
ತ್ತೆರಡುಂ ನೀಲದ ಸೋಪಾ
ನ ರಾಜಿಗಳ ನಡುವಣಿಂದುಮಣಿ ಸೋಪಾನಂ ೩೪

ವ॥ ಅಲ್ಲಿ

ಕಂ॥ ಅಂಚೆಯ ನಡೆಯ ಬೆಡಂಗಂ
ಮುಂಚಲ್ಪಿಡಿದಿರ್ದರಿವರ್ಗಳೆನೆ ಮೃದುಗತಿಯಿಂ
ಕಾಂಚೀಕಳರುತಿ ನಿಮಿರ್ವಿನೆ
ಗಂ ಚೆಲ್ವಂ ಮೆಱೆದರಾಗಳಮರಾಂಗನೆಯರ್ ೩೫

ಚಂ॥ ಅಳಿಕುಳಕುಂತಳಂಗಳ ರಥಾಂಗಕುಚಂಗಳ ಕೋಕಿಳಸ್ವನಂ
ಗಳ ಕಳಹಂಸಮಂದಗಮನಂಗಳ ಚಾರುಚಕೋರಲೋಚನಂ

ಗಳ ಶಶಿಮಂಡಲಾನನೆಯರೀಕೆಗಳೀ ಗುಣಪಕ್ಷದಿಂ ವಿಯ
ತ್ತಳಗಮನಕ್ಕೆ ತಕ್ಕರೆನೆ ಹಾರುವೊಲೊಪ್ಪಿದರಿಂದ್ರನಾರಿಯರ್ ೩೬

ಸುರುಚಿರ ವಿದ್ರುಮಾಧರದಿನುತ್ತಮ ಮೌಕ್ತಿಕದಂತದಿಂ ಮನೋ
ಹರ ಹರಿನೀಳಕುಂತಳದಿನುಜ್ವಳ ವಜ್ರನಖಂಗಳಿಂ ಸ್ಫುರ
ನ್ಮರಕತವರ್ಣದಿಂದೆಸೆದುದಂದಮರೀತತಿ ಪಂಚರತ್ನದಿಂ
ವಿರಚಿಸಿ ಕೊಟ್ಟ ಬಣ್ಣಸರಮಂಬರಲಕ್ಷ್ಮಿಗಿದೆಂಬಿನಂ ಜನಂ ೩೭

ಸ್ಫುರಿತಪಯೋಧರಂಗಳೆ ಪಯೋಧರಮಂ ಮರಲೊತ್ತೆ ಸತ್ಪ್ರಭಾ
ಚರಣಮೆ ಸತ್ಪ್ರಭಾಚರಣಶೋಭೆಯನೀಯೆ ಚಳದ್ವಿಚಿತ್ರತಾಂ
ಬರಮೆ ವಿಚಿತ್ರತಾಂಬರಮದಾಗೆ ಮುಖಾಬ್ಜಮದಬ್ಜಲೀಲೆಯಂ
ತಿರೆ ಸುರಕಾಂತೆಯರ್ ಸಜಳಕಾಂತೆಯರೊಪ್ಪಿದರಾ ಪ್ರಯಾಣದೊಳ್ ೩೮

ಕಂ॥ ಮುಳಿವುೞಿವ ಬಯ್ವ ಬಗ್ಗಿಸು
ವೆಳಸುವ ತಿಳಿವೆರೆವನೆರೆವ ಬಸನದ ಬಿನದಂ
ಗಳನೆ ಮಱೆದಭವನೊಸಗೆಗೆ
ತಳರ್ದುದದೇಂ ಭಕ್ತಿ ಪಿರಿದೊ ಸುರದಂಪತಿಯಾ ೩೯

ವ॥ ಆಗಳ್

ಕಂ॥ ಎಡವಕ್ಕದ ಬಲವಕ್ಕದ
ಪಡಿಯಱಿದೆಡೆಯಱಿದು ನಡೆಯಿಪಿಂದ್ರನ ಪಲರುಂ
ಪಡೆವಳರ ಜಡಿದು ನಡೆಯಿಪ
ಪಡಿಯಱರುಲಿ ಗೆಲಿದುದುಲಿವ ಜಲನಿಧಿಯುಲಿಯಂ ೪೦

ವ॥ ಮತ್ತಂ

ಮ॥ ಪುದಿದಲ್ಲಲ್ಲಿ ಮನೋಜ್ಞವಾದ್ಯರವದಿಂದಲ್ಲಲ್ಲಿ ಮಾಂಗಲ್ಯಗೇ
ಯದಿನಲ್ಲಲ್ಲಿ ಸುರಾಂಗನಾಲಟಹದಿಂದಲ್ಲಲ್ಲಿ ಸದ್ವಂದಿಘೋ
ಷದಿನಲ್ಲಲ್ಲಿನತಾಮರಸ್ತುತಿಗಳಿಂದಲ್ಲಲ್ಲಿ ಪುಷ್ಪೋಪಹಾ
ರದಿನಲ್ಲಲ್ಲಿ ವಿಕೀರ್ಣವರ್ಣರಜದಿಂ ಚೆಲ್ವಾಯ್ತು ದೇವಾಗಮಂ ೪೧

ಕಂ॥ ಪೊೞಲ ವಿಳಾಸಿಜನಂಗಳ
ನೆೞಲ್ ನಭೋಮುಕುರತಳದೊಳೆಸೆದಪುದೆನೆ ಪೊಂ
ಪುೞಿಯಿಂ ನಿಳಿಂಪಸೈನ್ಯಂ
ಕೆೞಗಿರ್ದೀಕ್ಷಿಪರ ಕಣ್ಗೆ ತೋೞಿದುದಿನಿಸಂ ೪೨

ಅಂತಂತೆ ನಡೆಯೆ ನಡೆಯೆ ನ
ಭಾಂತರದೊಳ್ ರೂಪುದೋರ್ಪುದುಂ ಮಾಣ್ಬ ಮರು
ತ್ಸಂತಾನದ ಕಳಕಳಮೆ ನಿ
ರಂತರಿತಂ ಕೇಳಲಾಗಿ ಭಾವಿಸಿತು ಜನಂ ೪೩

ವ॥ ಆಗಳುತ್ಸಾಹಗೇಹದಂತೆ ಧೃತಪೂರ್ಣಕುಂಭಮುಂ ರವಿಮಧ್ಯಸಮಯದಂತೆ ನವಗ್ರಹ ವಿಭಾಸಿಯುಂ ಪಿಪ್ಪಳಮಹೀಜದಂತೆ ಮದವತ್ಕರಟಮುಂ ಜಿನಭವನದಂತೆ ಶ್ರವಣ ಸಂಗಿಯುಂ ವೈದ್ಯಜನದಂತೆ ಸಗರಾನುವರ್ತಿಯುಂ ನರೇಂದ್ರಭವನದಂತಂತಃಪುರಪ್ರಭಾವ ಮುಂ ಮುಕುರದಂತೆ ಸಂಗತಪ್ರತಿಮಾನಮುಂ ಮದಿರಾಂಗವೃಕ್ಷದಂತೆ ಪುಂಡಾನುಬಂಧಿ ಯುಂ ದೇವಮುಖದಂತೆ ಪುಷ್ಕರಸ್ಫುರಿತಮುಂ ವಿಳಾಸಿನೀಕರ್ಣದಂತೆ ಕರ್ಣಿಕಾಕಳಿತಮುಂ ಬಾಳಾಸ್ಪದವಿಳಾಸದಂತೆ ಸಲಿಲತಾಳುತಳಲಾಲಿತಮುಂ ಜಯರಾಮಾಮಹಾದೇವಿಯಂತೆ ಸುಗ್ರೀವಾವಳಂಬಿಯುಂ ವನಪ್ರವೇಶದಂತೆ ವಿಪುಳಾಸನ ಪ್ರಭಾಸಿಯುಂ ದ್ವಿಜನ್ಮನಂತೆ ಸಮುತ್ತುಂಗವಂಶಮುಂ ಸುಕೇಶಿಯಂತೆ ಸಂಸ್ನಿಗ್ಧಜಾಲಮುಂ ಹಿರಣ್ಯದಂತಜಕುಕ್ಷಿಲಕ್ಷ್ಯಮುಂ ಪ್ರವೀಣೇಶಭವನದಂತೆ ಸತ್ಕೋಶಭಾಸಿಯುಂ ಪ್ರಭಾತದಂತೆ ನೂತನಖರಾಂಶುಸಲಿಲಪಾದಮುಂ ರುದ್ರನಂತೆ ಶುಚಿರೋಮಾಂಗಸಂಗಿಯುಂ ನಿಧಿಯಂತನಂತ ಪದ್ಮಾವಳಂಬಿಯುಂ ಬಲಭದ್ರನಂತೆ ದಾನವಾರಿಪ್ರಯುಕ್ತಮುಂ ತಿಮಿರದಂತೆ ಬಹುಲಕ್ಷಣಾವಲಂಬಿತಮುಮೆನಿಸಿ

ಉ॥ ತೋಳ ಕಪೋಲ ಕರ್ಣ ಕರಚೂಚಕ ಲೋಚನ ಕೇಶ ರೋಮಕೂ
ಪಾಳಿಗಳಿನುಣ್ಮಿ ಪೊಣ್ಮುವ ಮದಪ್ರಸರಂ ಲವಲೀಲವಂಗ ತ
ಕ್ಕೋಳಿ ತಮಾಳಸಪ್ತದಳ ಸೌರಭಮಂಗರಸಾಳಿಗಂ ವಿಲೋ
ಳಾಳಿಗಮೊಪ್ಪಿತಲ್ಲಿ ಮಣಿಕುಂಡಸ ಬಂಧುರವಿಂದ್ರಸಿಂಧುರಂ ೪೪

ರಗಳೆ॥ ಆ ನೆಗಲ್ದ ನಿಳಿಂಪಮದದ್ವಿಪಕ್ಕೆ
ಪಕ್ಕನೆ ಮಣಿಘಂಟಾಗಣದ ಮಸಕ
ಮಸಕಟುದ ರವಂಗಳಿನಂದೆಸೆಯೆ
ದೆಸೆಯೆಲ್ಲಂ ಬಧಿರಿತಮೆನಿಸುವನ್ನ
ವನ್ನೆಗ ಮಚ್ಚರದ ವಿವಿಧಶೋಭಿ
ಶೋಭಿಸೆ ಮೂವತ್ತೆರಡೊಗೆದುವಾಸ್ಯ
ವಾಸ್ಯದೊಳೋರೊಂದಱೊಳೆಂಟು ಕೊಂಬು
ಕೊಂಬುಗಳೋರೊಂದಱೊಳೆರಡು ಸರಸಿ
ಸರಸಿಗಳೋರೊಂದಱೊಳೋರೊಂದು ನಳಿನಿ
ನಳಿನಿಗಳೋರೊಂದಱೊಳಾದಮಲರ್ದು
ಮಲರ್ದಿರೆ ಮೂವತ್ತೆರಡೊಪ್ಪುವಬ್ಜ
ವಬ್ಜದೊಳೋರೊಂದಱೊಳೆಸಳ ರಾಜಿ
ರಾಜಿಸೆ ಮೂವತ್ತೆರಡದ[ಱ] ಮೇಲೆ

ಮೇಲೆನೆ ಚೆಲ್ವುಮದರ್ಕೆ ಮತ್ತೆ
ಮತ್ತೆನಿಸದೆ ಮೂವತ್ತಿರ್ವರಾಗಿ
ರಾಗಿಸಿ ನಲಿದಮರಿಯರಾಡುವಲ್ಲಿ
ವಲ್ಲಿಗಳೆನೆ ನಳಿತೋಳ್ಗಳ್ ತುಱುಗೆ
ತುಱುಗೆವೆಗಣ್ಗಳ್ ಮಿಗೆ ತೊಳಗಿ ಬೆಳಗೆ
ಬೆಳಗೆಯ ರಸಭಾವಕ್ಕನಿಸೆ ಮಾರ್ಗ
ಮಾರ್ಗಂ ಮುದಮಂ ದೇಸಿ ಪಡೆಯೆ
ಪಡೆಯೆಲ್ಲಂ ಮೆಚ್ಚಿದುದಮರಪತಿಯ
ಪತಿಯೊಸಗೆಯನೊದವಿಪ ವಿಮಳಮತಿಯ ೪೫

ಚಂ॥ ಜಳರುಹಪತ್ರಪತ್ರಗಳ ಮೇಲೆನಸುಂ ಕುಣಿವಂಗನಾಜನಂ
ಗಳ ನಳಿತೋಳ ತೆಕ್ಕೆ ಬಿಸವಲ್ಲಿಗಳಂ ಪದಪಾಣಿ ಪಲ್ಲವಂ
ಗಳ ಮುಖವಂಬುಜಂಗಳೊದವಂ ತರಳಾಳಕಜಾಳಕಂಗಳು
ಚ್ಚಳದಳಿಮಾಳೆಯಂ ದ್ವಿಗುಣಿಸಲ್ ನೆಱೆದಿರ್ದುವು ತತ್ಪ್ರದೇಶದೊಳ್ ೪೬

ಕಂ॥ ಓವದೆ ತುಟಿದೇಕೇಂದ್ರಿಯ
ಜೀವಮನೀ ಜಳಕುಳಮನಳಿಜಿಸೆ ಸಾರ್ಗುಂ
ಸಾವದ್ಯವೆಮ್ಮನೆಂಬವೊ
ಲಾ ವನಿತೆಯರೆಸಳನಿನಿಸು ಮುಟ್ಟದೆ ಕುಣಿದರ್ ೪೭

ವ॥ ಅಂತುಮಲ್ಲದೆಯುಂ

ಚಂ॥ ಅಮಳಜಿನೋತ್ಸವಾಗಮನದೊಳ್ ಸುಪವಿತ್ರೆಯರೇಕೆ ಮೆಟ್ಟುವರ್
ಕಮಳಮನೀರಜೋಧಿಕಮನಾಱಿಡಿದಾಣಮನಪ್ರಶಸ್ತಜ
ನ್ಮಮನಧರೀಕೃತಾರ್ಘಗುಣಮಂ ಮಧುಪಾತ್ರಮನುಗ್ರರುಕ್ಸಹಾ
ಯಮನುರುಕಂಟಕಾಂಗಮನೆನುತ್ತಿರೆ ಮೆಟ್ಟಿದರಿಲ್ಲ ನೃತ್ಯದೊಳ್ ೪೮

ಕಂ॥ ಆಕೆಗಳಿಂ ತುಱುಗಿದ ತ
ನ್ನಾಕೃತಿ ಬರೆದಣ್ಕೆಗೆಯ್ದ ರಸಚಿತ್ರಗತ
ಸ್ತ್ರೀಕುಂಜರಮಂ ಪೋಲ್ತ
ತ್ತಾ ಕುಂಜರಮಮಳಗಗನಫಳಕಸ್ಥಳದೊಳ್ ೪೯

ವ॥ ಅದಲ್ಲದೆಯುಂ

ಮ॥ ಪಲವುಂ ಕಣ್ಗಳಿನೆಯ್ದೆ ನೋೞ್ಪ ಪಲವುಂ ಹಸ್ತಂಗಳಿಂದರ್ಘ್ಯಮಂ
ಗಲಮಂ ಮಾೞ್ಪನಿತಿಲ್ಲದಾಂತಜನೀ ಶೀರ್ಷೇಶನುತ್ಸಾಹದೊಳ್
ನಲಿದೆಂಬಂತಜುವತ್ತುನಾಲ್ಕುನಯನಂ ಮೂವತ್ತೆರಡ್ಕೆಯ್ ಕುತೂ
ಹಲಮಂ ಪುಟ್ಟಿಸೆ ತಾಳ್ದಿ ವಿಕ್ರಿಯೆಯನೇಂ ಶಕ್ರೇಭಮೊಪ್ಪಿರ್ದುದೋ ೫೦

ಕಂ॥ ಆತತಮದನಿರತಂ ಪುರು
ಹೂತಗಜಂ ಕರ್ಣತಾಳಪವನಾಹತಿಯಿಂ
ಜ್ಯೋತಿರ್ಲೋಕವಿಮಾನ
ವ್ರಾತದ ಜೀಮೂತದೊಡ್ಡನಧರಿಸಿತೆನಸುಂ ೫೧

ವ॥ ಅಂತು ಬರೆವರೆ

ಕಂ॥ ತಪನೀಯಶೈಲಮಮರಾ
ಧಿಪನಕ್ಷಿಗೆ ಲಕ್ಷ್ಯಮಾಗೆ ಸೊಗಯಿಸಿದುದು ರಾ
ಜಿಪ ಋತುವಿಮಾನಮೆಂಬಾ
ತಪತ್ರದುದ್ದಾಮ ಹೇಮದಂಡಾಕೃತಿಯಿಂ ೫೨

ವ॥ ಆ ಸಮಯದೊಳ್

ಮ॥ ಪದುಳಂ ನಿರ್ಝರವಾರಿಯಂ ತಳಿಯುತುಂ ಮಂದಾರಕಾಗಂಧಮಂ
ಕೆದಱಿತ್ತುಂ ಮುಗಿಲಚ್ಚಮುತ್ತನುಗುತಂ ಪುಷ್ಪಂಗಳಂ ಸೂಸುತುಂ
ತ್ರಿದಶಾರಾಧ್ಯನನರ್ಘ್ಯಪೂರ್ವಮಿದಿರ್ಗೊಳ್ವಂತಾಗಿ ಬಂದಾ ನಗೇಂ
ದ್ರದ ಮಂದಾನಿಳನಾಜೆಸಿತ್ತು ನಯದಿಂ ದೇವಾಗಮಶ್ರಾಂತಿಯಂ ೫೩

ವಿಳಸನ್ನಿರ್ಝರನೀರಸಾರಮುಪಕಂಠಾಂಭೋಜಿನೀಗಂಧಸಿಂ
ಧುಲತಾಕುಟ್ಮಳಜಾಳಶಾಳಿನಿಕಟೋದ್ಯಾನಪ್ರಸೂನಾನ್ವಿತಂ
ಜಳಗಂಧಾಕ್ಷತಪುಷ್ಪದಿಂದಮಿದಿರ್ಗೊಂಡಿಂದ್ರಾರ್ಚಿತಂಗರ್ಘ್ಯಮಂ
ಗಳಮಂ ಮಾೞ್ಪವೊಲಾಯ್ತು ಮಂದರನಗೇಂದ್ರಾಯಾತಶೀತಾನಿಳಂ ೫೪

ವ॥ ಅಂತು ಬಂದು ಕಂಡ್ಯೆಸಿದ ಮಂದಪವನನಿಂದಮಖಿಳ ಬೃಂದಾರಕಬೃಂದಂ ಚಿರಸಾನಂದಿತಾಂಗನಾಗಿ ತದನಂತರಂ ಪುರುಹೂತನಿಂದ್ರಾಣಿಗಾ ಗಿರೀಂದ್ರಮಂ ತೋಱಿ

ಚಂ॥ ಬಹುತರಸಾನುಶಾಖಿಗಳಿನುನ್ಮುಖರತ್ನಮಯೂಖಮಂಡಳೀ
ಬಹಳವಿಚಿತ್ರಪತ್ರಚಯದಿಂ ಭಗಣೋಜ್ಜ್ವಳಪುಷ್ಪದಿಂ ನವ

ಗ್ರಹಫಳವೃಂದದಿಂ ದಿವಿಜಯುಗ್ಮವಿಹಂಗಮರಾವದಿಂ ಮಹೀ
ಮಹಿತಮಿದಲ್ತೆ ಮೇರುನಗಮೆಂಬ ನಮೇರುನಗಂ ಮೃಗೇಕ್ಷಣೇ ೫೫

ಕಂ॥ ಪವಣಿಸಿ ಜಿನೇಂದ್ರಮತದಿಂ
ನವನವತಿಸಹಸ್ರಯೋಜನೋಚ್ಛ್ರಯದಿಂ ಸಂ
ಭವಿಸಿದ ಸಹಸ್ರಯೋಜನ
ದವಗಾಹದಿನೆಸೆವುದೀ ನಗಂ ಶಶಿವದನೇ ೫೬

ಜಿನಭವನಚತುಷ್ಟಯನೀ
ವನಮೊಂದೊಂದೆನಿಸಿ ಮಿಸುಪ ಮೇಖಳೆ ನಾಲ್ಕುಂ
ತನಗಮರೆ ನಿಮಿರ್ದುದೀ ಕಾಂ
ಚನಶೈಳಂ ಋತುವಿಮಾನಚುಂಬಿತಚೂಳಂ ೫೭

ಮ॥ ವಿನುತೋದ್ವೃತ್ತಫಲಭದ್ರಶಾಲೆಯೆಸೆದತ್ತೀ ಭದ್ರಶಾಲಂ ಸುನಂ
ದನವಾಗಿರ್ದುದು ದಿವ್ಯನಂದನವಿದಿಂತೊಪ್ಪಿರ್ದುದೀ ಸಾರಸೌ
ಮನಸಂ ಸೌಮನಸಂ ವಿಕಾಸಿಕುಸುಮಶ್ರೀಪಾಂಡುಕಂ ಪಾಂಡುಕಂ
ಮನಕಿಂಬಾಯ್ತುದೆ ನೋಡ ತನ್ನ ಗಿರಿಗೀ ನಾಲ್ಕುಂ ಬನಂ ಜವ್ವನಂ ೫೮

ವ॥ ಅದಲ್ಲದೆಯುಂ

ಮ॥ ವಿಳಸತ್ಪಾಂಡುಕ ಪಾಂಡುಕಂಬಳಶಿಲಾಪಟ್ಟಂ ಶಿಲಾಪಟ್ಟಕಂ
ಬಳಸತ್ಕಾಂತ್ಯತಿರತ್ನಸಂಚಳಶಿಲಾಪಟ್ಟಂಗಳಂ ನಾಲ್ಕುಕೋ
ಣ್ಗಳೊಳೊಪ್ಪಿರ್ಪುವು ಭಾರತಾಪರವಿದೇಹೈರಾವತಪ್ರಾಗ್ವಿದೇ
ಹ ಲಸದ್ಭೂತಜಿನವ್ರಜಕ್ಕೆ ಸವನಸ್ಥಾನಂಗಳೀ ಶೈಳದೊಳ್ ೫೯

ವ॥ ಎಂದು ವಸ್ತುಕಥನಂ ಮೆಱೆದು

ಕಂ॥ ಈನಗದ ನಿಶಿತವಜ್ರದ
ಸಾನುಗಳಿಂದೊಗೆದ ಚಂದ್ರಬಿಂಬದಿನಮೃತಂ
ಸೋನೆ ಸುರಿವಂತು ಸುರಿತರೆ
ಮಾನವರುಂತಮರರಕ್ಕುಮೆಂದಪೆನಬಳೇ ೬೦

ಮೆಚ್ಚಿ ಜಿನಜನ್ಮದೊಸಗೆಯ
ನಚ್ಚರಿವಟ್ಟೀಸುರಾದ್ರಿ ತಲೆದೂಗುವವೋಲ್
ನಿಚ್ಚಮೆಸೆದಪುದು ನೋಡ ಮ
ರುಚ್ಚಂಚಳ ಮೇಘ ಪಟಳ ಪರಿವೃತ ಶಿಖರಂ ೬೧

ಮ॥ ಪರಮಶ್ರೀಪತಿ ಬಂದೊಡಿಂದೊಸಗೆಯೊಳ್ ಸೇಸಿಕ್ಕುತುಂ ಪಾಡುತುಂ
ಪರಸುತ್ತುಂ ನಲಿದಾಡುತುಂ ನಗುತುಮಿರ್ಪಂತಲ್ಲುಗುತ್ತಿರ್ಪ ಪೂ
ಮರದಿಂ ತುಂಬಿಯ ಗೇಯದಿಂ ಬಹುವಿಹಂಗಾಳಾಪದಿಂ ಲೋಲವ
ಲ್ಲರಿಯಿಂ ಪುಷ್ಪವಿಕಾಸದಿಂ ಸೊಗಯಿಕುಂ ನೋಡೀ ನಗೋಪತ್ಯಕಂ ೬೨

ವ॥ ಎಂದು ಪೊಗೞ್ದನಂತರಂ

ಮ॥ ಕ್ಷಮೆಯಂ ತಾಳ್ದಿದ ಪೆಂಪು ಗೋತ್ರನುತಮಪ್ಪಾತ್ಮೋದಯಂ ಮಂದರಾ
ಗಮೆನಿಪ್ಪುನ್ನತಿ ಜಾತರೂಪಧರಮಾಗಿರ್ಪೊಳ್ಪು ಲೋಕತ್ರಯಾ
ಪ್ತಮಹತ್ವಂ ಹರಿವಿಷ್ಟರಾರ್ಹಮಹಿಮಾವಷ್ಟಂಭಮೊಪ್ಪಲ್ಕದೇಂ
ಸಮನಾದತ್ತೊ ಜಿನಂಗೆನುತ್ತೆಱಗಿದಂ ಲೇಖಾದ್ರಿಗಾಖಂಡಳಂ ೬೩

ವ॥ ಅನಂತರಂ

ಕಂ॥ ಅಭಿಷವಮಂಗಳಪೀಠಂ
ತ್ರಿಭುವನಗುರುಗಿಂತೆಂದು ಮಂದರಕ್ಕೆ ಶಚೀ
ಪ್ರಭು ಮಾಡೆ ಭಕ್ತಿಯಿಂದೇಂ
ಪ್ರಭವಿಸಿತೊ ತ್ರಿಃಪ್ರದಕ್ಷಿಣ್ಯೈಕವಿಧಾನಂ ೬೪

ಭೂಷಾಂಶುರುಚಿರಮಪ್ಪನಿ
ಮೇಷಗಣಂ ಬಲಗೊಳುತ್ತುಮಿರ್ಪೆಡೆಯೊಳ್ ಲಂ
ಬೂಷನಗಮೊಪ್ಪಿದುದು ಪರಿ
ವೇಷಂಗೊಂಡರುಣತರಣಿಬಿಂಬದ ತೆಱದಿಂ ೬೫

ವ॥ ಅಂತು ಬಲಗೊಂಡು ತದನಂತರಂ

ಮ॥ ಗುರುಪಾದಂ ಕಳಧೌತಗೌರರುಚಿರಚ್ಛಾಯಂ ಕರಕ್ರಾಂತಪು
ಷ್ಕರದೇಶಂ ಪೃಥುಚೂಳಿಕಾವಿಳಸಿತಂ ನಕ್ಷತ್ರಮಾಳಾವೃತಂ
ಧರಣೀಂದ್ರಂ ಬಹುಕುಂಜರಾಜಿತವಿಳಾಸಂ ತನ್ಮರುದ್ದಂತಿ ಮಂ
ದರಮಂ ಮಂದರವೇಱಿದಪ್ಪುದಿದು ಬೇಱಿಂಬಂತದೇನೇಱಿತೋ ೬೬

ವ॥ ಅಂತುಮಲ್ಲದೆಯುಂ

ಕಂ॥ ಕಾಂಚನಘಂಟಾದ್ಯುತಿ ಕುಡು
ಮಿಂಚೆನಲಾ ಬೃಂಹಿತದ ಮೊಟಗು ಮೊಟಗೆನೆ ಭೂ
ಷಾಂಚಿತ ರುಚಿ ಸುರಧನುವೆನೆ
ಸಂಚಿತಶರದಭ್ರಮೆನಿಸಿತಡರ್ವಭ್ರಗಜಂ ೬೭

ಉ॥ ಲೋಲತೆಯಿಂ ಸುರಾಗದ ಸುರಾಗದ ಪೂವನುದಿರ್ಚುತಂ ಲತಾ
ಜಾಳಕಜಾಳಕಂಗಳನೆಟಲ್ಚುತವಳ್ಳಿಜಿದಭ್ರದಭ್ರಮಂ
ಚಾಳಿಸುತುಂ ಮದಾಳಿಯ ಮದಾಳಿಯನೋವದೆ ಸೋವುತುಂ ಸುರ
ವ್ಯಾಳಗಜಂ ವಿನೋದಿತ ವಿನೋದಿತ ಸಮ್ಮದವೇಜಿತದ್ರಿಯಂ ೬೮

ಕಂ॥ ವಾಸವಗಜದೊಡನಡರ್ವ ವಿ
ಳಾಸದ ಸುರಜನದ ಹಾರಿ ಪೋಲ್ತುದು ಗಿರಿಗ
ಬ್ಜಾಸನನೆ ಪಂಚರತ್ನದ
ಸೂಸಕಮಂ ಮಾಲೆವೂವ ನೆಟಲಿಕ್ಕಿದವೋಲ್ ೬೯

ಚಂ॥ ಸ್ಫುರಿಪ ನಿತಂಬದಿಂ ಗುರಪಯೋಧರದಿಂ ಸುಮನೋವಿಳಾಸದಿಂ
ಪರಿಚಿತರಾಜಹಂಸಗತಿಯಿಂ ನುತಪಾದದಿನುದ್ಧ ಮೇಖಳಾ
ಭರಣದಿನೆಮ್ಮೊಳೊಡ್ಡಿಪುದಿದೆಂದುಜಿದೀಕೆಗಳಿಕ್ಕಿ ಮೆಟ್ಟಿದರ್
ಪುರುಡಿನೊಳೀ ನಗೇಂದ್ರಮನೆನಲ್ಕಡರ್ದೇಜಿದರಿಂದ್ರಕಾಂತೆಯರ್ ೭೦

ಅನಿಮಿಷಕಾಂತೆಯರ್ ಪರಿದನುಕ್ರಮದಿಂದಮೆ ಭದ್ರಶಾಲದೊಳ್
ನನೆಗಳನಾಯ್ದು ನಂದನದ ಕೆಂದಳಿರಂತಳವಾರೆ ಕೊಯ್ದು ಸೌ
ಮನಸದ ಪೂಗಳಂ ತಿಜಿದು ಪಾಂಡುಕದೊಳ್ ಮಿಡಿಯಂ ತೆರಳ್ಚಿ ಮಂ
ಡನಕೆ ವಿನೋದಮಂ ಮೆಜಿದು ತೀರ್ಚಿದರಾತ್ಮಮನೋರಥಂಗಳಂ ೭೧

ವ॥ ಆಗಳಾ ಸುಪರ್ವಪರ್ವತದ ನಾಲ್ಕನೆಯ ಮೇಖಳೆಗೆ ಮೇಖಲೆಯಂತಿರ್ದ ಪಾಂಡುಕವನ ಪ್ರದೇಶಮಂ ವಾಸವಂ ಮುಟ್ಟೆವರ್ಪುದುಂ ಅದಜ ಪೂರ್ವದಿಗ್ಭಾಗದೊಳ್ ಭರತಕ್ಷೇತ್ರ ಜನಿತ ಜಿನಜನನದ ಜನನಸವನಕ್ಕೆ ಯೋಗ್ಯಮಾಗಿರ್ದು

ಕಂ॥ ತನಗೆಸೆಯೆ ನೂಱುಯೋಜನ
ದ ನೀಳ್ಪುಮದಱರ್ಧಮೆನಿಸಿದಗಲಮುಮಱಯೋ
ಜನಮೆನಿಪುನ್ನತಿಯುಂ ಚೆ
ಲ್ವೆನಿಸಿತು ಪಾಂಡುಕಶಿಳಾತಳಂ ಸಮಪಟ್ಟಂ ೭೨

ಅದು ಶರದಭ್ರದ ಶಶಿಬಿಂ
ಬದ ಶಂಖದ ರಸದ ಬಿಸದ ಬೆಳ್ಳಿಯ ಬೆಳ್ಪಿಂ
ಬಿದಿ ಸಮೆದಂತಿರೆ ಥಳಥಳಿ
ಪುದು ವಿಮಳದ್ಯುತಿಯಿನರ್ಧಚಂದ್ರಾಕೃತಿಯಿಂ ೭೩

ಚಂ॥ ಪೊಳೆವಲರ್ಗಣ್ಗಳುನ್ನತಕುಚಂಗಳ ಮುದ್ದುಮೊಗಂಗಳೊಳ್ಗುರು
ಳ್ಗಳ ನಳಿತೋಳ್ಗಳಚ್ಚರಿಯರಿಂ ಪ್ರತಿಬಿಂಬಿತಮಾಗಿ ಬಾಳಮೀಂ
ಗಳ ಪೊಣರ್ವಕ್ಕಿವಿಂಡುಗಳ ತಾವರೆವೂಗಳ ತುಂಬಿವೆಣ್ಗಳು
ದ್ವಳಿಗಳ ಸಂಗದಿಂದೆಸೆವ ಗಂಗೆವೊಲೊಪ್ಪಿದುದಾ ಶಿಳಾತಳಂ ೭೪

ವ॥ ಅಲ್ಲಿ

ಮ.ಸ್ರ॥ ಅತುಳಶ್ರೀದಂಡಿಕಾಮಂಡಿತಮಮರಮಣಿಸ್ತಂಭಸಂಭಾರಮಾಳಾಂ
ಚಿತ ಘಂಟಾಜಾಳಲೀಲಂ ರುಚಿನಿಚಿತವಿಚಿತ್ರಾಂಬರೋದ್ಯದ್ವಿತಾನಂ
ನುತ ಮುಕ್ತಾಲಂಬಚುಂಬಂ ಧೃತವಿತತಪತಾಕಾಳಿ ಸೌಧರ್ಮನಿರ್ಮಾ
ಪಿತಮುತ್ತುಂಗಂ ಷಡಂಗಾಯ್ತಭಿಷವಣ ಮಹಾಮಂಡಪಂ ದಿವ್ಯಸೇವ್ಯಂ ೭೫

ಕಂ॥ ಆ ಮಂಡಪ ಮಧ್ಯದೊಳು
ದ್ದಾಮ ಮೃಗೇಂದ್ರಾಸನಂ ಕನನ್ಮಣಿಕಿರಣ
ಶ್ರೀಮಸೃಣಮೆಸೆದುದಚ್ಚಸ
ರೋಮಧ್ಯದೊಳಲರ್ದಮಲರ್ದ ಪೊಂದಾವರೆವೋಲ್ ೭೬

ಹರಿಪೀಠಕನಕರುಚಿಯಂ
ವರ ಪಾಂಡುಕಪಾಂಡುರುಚಿಯುಮೊಂದೊಂದರ್ಕೋ
ಸರಿಸದೆ ಮಲೆದು ಪಳಂಚುವ
ಪರಿ ಪೋರ್ಕುಳಿಯಾಡುವರ್ಕಶಶಿರುಚಿಯೆನಿಕುಂ ೭೭

ಅದಱೊಳ್ ಸುರಪತಿ ತಂದಿರಿ
ಸಿದೊಡತಿತೇಜಸ್ವಿ ಪೂರ್ವಮುಖನಾಗಿರ್ದೊ
ಪ್ಪಿದನಾಗಳುದಯಗಿರಿಶಿಖ
ರದ ತರುಣದಿನೇಶನಂತೆ ತರುಣಜಿನೇಶಂ ೭೮

ಮ॥ ಜಯರಾಮಾಂಗನೆಯುಂ ಸುರದ್ವಿಪಮುಮಾನುಂ ನೋಂತೆವಮ್ಮಂತು ಪೆ
ರ್ಮೆಯಿನಿಂತಾಂತುವೆ ಬೇಱೆ ಮತ್ತಿನ ವಧೂಗರ್ಭಾಶಯಂ ಮತ್ತಿನಾ
ನೆಯ ಬೆನ್ಮತ್ತಿನ ಪೀಠಮೀ ಜಿನನನೆಂದಕ್ಷೂಣಮಾಣಿಕ್ಯರ
ಶ್ಮಿಜಿನಾಪಿಷ್ಕೃತರಾಗವಾದುದೆನಿಸಿತ್ತುತ್ತುಂಗಸಿಂಹಾಸನಂ ೭೯

ಕಂ॥ ಅದಱರ್ಕೆಲದೊಳ್ ನಸುದ
ಗ್ಗಿ ದಲಿರೆ ಭದ್ರಾಸನಂಗಳುನ್ಮುಖರುಚಿಗಳ್
ಮುದದಿಂ ನೆಲಸಿದರದಱೊಳ್
ಪದುಳಂ ಪ್ರಥಮದ್ವಿತೀಯಕಲ್ಪಾಧೀಶರ್ ೮೦

ವ॥ ಅವರೊಡನೆ ಮತ್ತಮಿತರಕಲ್ಪಾಧಿನಾಯಕರ್ ಬೆಸಸೆ

ಕಂ॥ ನುತಸುರಪತಿಯುಂ ಸ್ವಾಹಾ
ಪತಿಯುಂ ಪಿತೃಪತಿಯುಮಸುರಪತಿಯುಂ ಯಾದಃ
ಪತಿಯುಂ ರಯಪತಿಯುಂ ಧನ
ಪತಿಯುಂ ಪಶುಪತಿಯುಮೆನಿಸಿದಾಶಾಪತಿಗಳ್ ೮೧

ತಂತಮ್ಮ ವಾಹನಾಯುಧ
ಕಾಂತಾಜನ ಪರಿಜನ ಪ್ರಸಾಧನಚಿಹ್ನಾ
ನಂತ ವಿಭೂತಿಯಿನುಚಿತ ದಿ
ಗಂತದೊಳುಚಿತಾಸನಪ್ರದೇಶದೊಳಿರ್ದರ್ ೮೨

ವ॥ ಮತ್ತಂ

ಕಂ॥ ಪರಿಚಾರಕರೆಸೆದಂದಿ
ರ್ದರಮರವೈರೋಚನಾದಿ ಸತ್ಪುರುಷ ಮಹಾ
ಪುರುಷಾದಿ ಚಂದ್ರಸೂರ್ಯಾ
ದಿ ರೂಢಭಾವನವನಾಶ್ರಯ ಜ್ಯೋತಿಷ್ಕರ್ ೮೩

ಜಿನಸಭೆಯೊಳಗನ್ಯೋನ್ಯಂ
ಮುನಿಸಿರ್ಕುಮೆ ನೋಡ ಬಿಸಿಲ ಬೆಳ್ದಿಂಗಳ ಮ
ರ್ಬಿನ ನೆರವಿ ನೆರೆದುದೆನಿಸಿದು
ವನೇಕ ಮಣಿಮಕುಟರುಚಿಗಳಮರಾಧಿಪರಾ ೮೪

ವ॥ ಮತ್ತಮಲ್ಲಿ

ಮ॥ ಕಳಶಂ ಪೆರ್ಮೊಲೆ ರನ್ನಗನ್ನಡಿ ಕಪೋಲಂ ಲಾಜೆ ದಂತಾಂಶು ಕೋ
ಮಳದೂರ್ವಾಲತೆ ಪುರ್ವು ದೀಪಮಧರಂ ಪೂಮಾಲೆ ದೃಗ್ದೀಪ್ತಿ ಕೆಂ

ದಳಿರ್ಗಳ್ ಕೆಂದಳಮಾಗೆ ಮಂಗಳ[ಮೆ] ಮೆಯ್ವೆತ್ತಂತೆ ಬಂದಿರ್ದ ಮಂ
ಗಳ ವಸ್ತುಪ್ರಕರಂಗಳಂ ಪಸರಿಸುತ್ತಿಂದ್ರಾಣಿ ಕಣ್ಗೊಪ್ಪಿದಳ್ ೮೫

ವ॥ ಆಗಳಾಸಭೆಯ ಸನ್ನಿಧಿಯೊಳುಚಿತ ಪರಿಚಾರಿಕಾನಿಯೋಗದೊಳ್ ನೆರೆದು

ಮ॥ ಕುಮುದಂ ದೃಷ್ಟಿ ಶಿರೀಷಮಾಲೆ ನಳಿತೋಳ್ ಬಂಧೂಕವೋಷ್ಠಂ ಮುಖಂ
ಕಮಳಂ ಸಂಪಗೆ ಮೂಗು ಕೇದಗೆ ನಖಂ ಕುಂದೋದ್ಗಮಂ ದಂತವಿ
ಭ್ರಮಮಂಗಚ್ಛವಿ ಕರ್ಣಿಕಾರಮೆನೆ ಮೆಯ್ಯಾಂತಿರ್ದ ಸೌಂದರ್ಯದಿಂ
ಸುಮನಸ್ತ್ರೀಯರೆನಿಪ್ಪುದಪ್ಪುದವರ್ಗೆಂಬಂತೊಪ್ಪಿದರ್ ದೇವಿಯರ್ ೮೬

ಕಂ॥ ಕಳಶಂ ಕನ್ನಡಿ ಸೊಡರೆಳ
ದಳಿರಚ್ಚಗಱುಂಕೆ ಲಾಜೆ ಪೂಮಾಲೆ ಮೊಸರ್
ಫಳವಕ್ಷತೆ ಜಾಗಂ ಮಂ
ಗಳಪರಿಕರಮೆಸೆದುವಿಂದ್ರಸತಿಯರ ಕೆಯ್ಯೊಳ್ ೮೭

ಉತ್ಸಾಹಂ॥ ಚಾರುಚಾಮರಾತಪತ್ರಪಾಳಿಕೇತು ಕಳಶ ಭೃಂ
ಗಾರಮುಕುರಸುಪ್ರತಿಷ್ಠತಾಳವೃಂದಮೆಂಬ ವಿ
ಸ್ತಾರಿತಾಷ್ಟಮಂಗಳಂಗಳೆಸೆದುವಷ್ಟಕರ್ಮಕಾಂ
ತಾರದಾವದಹನಮಪ್ಪ ದೇವನೊಸಗೆಯೆಸಕದೊಳ್ ೮೮

ಕಂ॥ ಅಷ್ಟೋತ್ತರದಶ(ಸ)ಮಿತಿಗ
ಳಷ್ಟೋತ್ತರಮೂರ್ತಿಗಷ್ಟಯೋಜನಗಾಹ
ಕ್ಕಷ್ಟಾರ್ಧಕೋಣಶೋಭೆಗೆ
ವಿಷ್ಟರಮಾದೇಕಯೋಜನಾಸ್ಯಘಟಂಗಳ್ ೮೯

ಮಂಗಳಜಲಪೂರ್ಣಂಗಳ್
ಸಂಗತಮಣಿಭೂಷಣಂಗಳುರುಚಂದನಚ
ರ್ಚಂಗಳ್ ಪಲ್ಲವವಿಹಿತಮು
ಖಂಗಳ್ ಸೊಗಯಿಸಿದುವಮಳಸೂತ್ರವೃತಂಗಳ್ ೯೦

ಮ॥ ಅಮರೀಬಂಧುರದೇಹಗಂಧಮಮಳ ಶ್ರೀಖಂಡ ಕರ್ಪೂರ ಕುಂ
ಕುಮ ಸೌರಭ್ಯಮನಲ್ಪಕಲ್ಪಲತಿಕಾ ಪುಷ್ಪಸ್ರಜಾಮೋದಮು
ತ್ತಮಕೃಷ್ಣಾಗರು ಧೂಪ ಧೂಮಪಟಳೀಸೌಗಂಧ್ಯಮಂದೀಕೃತ
ಭ್ರಮರಂ ತೆಕ್ಕನೆ ತೀವೆ ಗಂಧಮಯಮಾಯ್ತಂದಾ ಮಹಾಮಂಡಪಂ ೯೧

ಕಂ॥ ಕಾಳಾಗರುವಿನ ಹೊಗೆ ಹರಿ
ನೀಳಸ್ತಂಭದ ಮರೀಚಿಯಿಂ ಸುಟಿವಳಿನೀ
ಜಾಳದ ಕರ್ಪಿಂ ಕೊರ್ವಿ ತ
ಮಾಳದ ಲತೆಯೆನಿಸಿ ಪರ್ವಿತಾ ಮಂಡಪಮಂ ೯೨

ಶಾ॥ ನಾನಾ ಮಂಗಳವಸ್ತ್ರ ಭೂಷಣ ಶುಚೀಭೂತಂ ಶಚೀನಾಥನೀ
ಶಾನೇಂದ್ರಂ ಬೆರಸಿರ್ದು ಪಾವನಪಯೋಗಂಧಾಕ್ಷತೋತ್ಫುಲ್ಲ ಪು
ಷ್ಪಾನೀಕಂಗಳಿನಂದು ಮಾಡಿದನುದಂಚನ್ಮಂತ್ರಪೂತಾನನಂ
ತಾನರ್ಘ್ಯೋದ್ಧರಣೋಚಿತಕ್ರಿಯೆಯನಾದಂ ಭವ್ಯರತ್ನಾರ್ಣವಂ ೯೩

ಗದ್ಯ

ಇದು ಸಮಸ್ತ ಭುವನಜನಸಂಸ್ತುತ ಜಿನಾಗಮ ಕುಮುದ್ವತೀ ಚಾರುಚಂದ್ರಾಯಮಾಣ ಮಾನಿತ ಶ್ರೀಮದುಭಯಕವಿಕಮಳಗರ್ಭ ಮುನಿಚಂದ್ರಪಂಡಿತದೇವ ಸುವ್ಯಕ್ತ ಸೂಕ್ತಿ ಚಂದ್ರಿಕಾಪಾನ ಪರಿಪುಷ್ಟಮಾನಸಮರಾಳ ಗುಣವರ್ಮನಿರ್ಮಿತಮಪ್ಪ ಪುಷ್ಪದಂತ ಪುರಾಣದೊಳ್ ದೇವಾಗಮವರ್ಣನಂ ದಶಮಾಶ್ವಾಸಂ

ಏಕಾದಶಾಶ್ವಾಸಂ

ಕಂ॥ ಶ್ರೀಸಕಳಮಂಗಳಾನಕ
ಮಾಸಮಯದೊಳೆಸೆಯಲೆಸಗಿದಂ ಮುಕ್ತಿರಮಾ
ವಾಸಂಗರ್ಘ್ಯಾದಿಯನು
ರ್ವೀಸೇವ್ಯಂ ಪ್ರಭುಗುಣಾಬ್ಜಿನೀ ಕಳಹಂಸಂ ೧

ವ॥ ಅನಂತರಮಾ ಪ್ರಥಮ ದ್ವಿತೀಯ ಕಲ್ಪಾಮರೇಂದ್ರರಿರ್ವರುಂ ಸರ್ವಜ್ಞನು ಭಯಪಾರ್ಶ್ವದೊಳುತ್ತರದಕ್ಷಿಣಾಭಿಮುಖರಾಗಿ ಸಜ್ಜೀಕೃತಮಜ್ಜನೋಪಕರಣರಿರ್ದು ಮಜ್ಜನಕುಜ್ಜುಗಂಗೆಯ್ದು

ಉ॥ ಮಂಗಳತೂರ್ಯಕೋಟಿ ಮೊಳಗುತ್ತಿರೆ ಮಂಗಳಗೇಯಮುಣ್ಮೆ ದೇ
ವಾಂಗನೆಯರ್ ಪಲರ್ ಪರಸೆ ಮಂಗಳವಾಕ್ಯಮನೋದೆ ಪಾಠಕರ್
ಮಂಗಳಮಂ ಸಮಂತು ಕಳಶೋದ್ಧರಣೋಚಿತ ಮಂತ್ರಪೂರ್ವಕಂ
ಪೊಂಗಳಸಂಗಳಂ ನೆಗಪಿ ಸಪ್ರಣವೋಚ್ಚರಣಾನನಾಂಬುಜರ್ ೨

ಕಂ॥ ಬೇರ್ವರಿವ ಪುಣ್ಯವಿಟಪಿಗೆ
ನೀರ್ವೊಯ್ವಂತನಘಜಿನನ ಮಸ್ತಕದೊಳ್ ಪೊ
ಯ್ದರ್ ವಿಪುಳ ಹರ್ಷದಿಂ ನಲಿ
ದಾರ್ವಮರರ ಬೊಬ್ಬೆ ಮಿಗೆ ಪಯೋಧಾರೆಗಳಂ ೩

ಜಯ ಜಯ ಜಿತದುರಿತ ಜಗ
ತ್ರಯವಲ್ಲಭ ದೇವದೇವ ಪರಮೇಷ್ಠಿ ದಯಾ
ಶ್ರಯ ಶರಣವೆಂಬ ಸುರಕೋ
ಟಿಯ ಕಳಕಳಮಸದುದೆಸೆಯ ನೂಸಲೊಳ್ ಕೆಯ್ಗಳ್ ೪

ಮ॥ ಇದು ಮುಕ್ತಿಪ್ರಮದಾಸ್ವಯಂವರದ ಮಲ್ಲೀಮಾಲೆ ಮೇಣಿಂತಿದಾ
ಸುದತೀಕೇಕರ ಕಾಂತಿಜಾಳಮಿದು ಮೇಣ್ ತತ್ಕಾಂತೆ ಲಂಚಂಗುಡಲ್
ಪದೆಪಿಂದಟ್ಟಿದ ಹಾರಯಷ್ಟಿ ಸುಭಗಂಗೀ ಸ್ವಾಮಿಗೆಂಬಂತಿರೊ
ಪ್ಪಿದುದಿಂದ್ರಚ್ಯುತದುಗ್ಧಧಾರೆ ಸವನಪ್ರಾರಂಭ ಸಂರಂಭದೊಳ್ ೫

ವ॥ ಅನಂತರಂ ಶಂಖ ಕಾಹಳಾ ಮೃದಂಗ ಝಲ್ಲರೀ ದುಂದುಭಿಗಭೀರ ತೂರ್ಯಸ್ವನಂಗಳುಮಖರ್ವ ಗೀರ್ವಾಣ ಗಂಧರ್ವಗಾಯಿನೀ ಶ್ರುತಿಸುಖಾಧೇಯ ಗೇಯನಾದಂಗಳುಮನೇಕ ಲೋಕಪಾಳಕನಿಕಾಯ ಜಯಜಯಾನಂದಸಂದರ್ಭಿತಾಶೀರವಂಗಳುಮಶೇಷಾನಿಮಿಷಮುಖ ಮುಖರೀಜನಿತಜಿನಗುಣಸ್ತವಾಲಾಪಕೋಳಾಹಳಂಗಳುಂ ಬಧಿರಿತ ಬ್ರಹ್ಮಾಂಡದಿಙ್ಮಂಡಳಂಗಳಾಗೆ

ಮ॥ ವರ ಪದ್ಮಾದಿ ಪವಿತ್ರತೀರ್ಥಸರಸೀ ಪುಣ್ಯೋದಕಸ್ನಾನಮುಂ
ನಿರವದ್ಯಾಮಳ ನಾಳಿಕೇರಫಲ ತೋಯಸ್ನಾನಮುಂ ನಿರ್ಮಳೇ
ಕ್ಷುರಸಸ್ನಾನಮುಮತ್ಯುದಾರ ಸಹಕಾರೋದ್ಯತ್ಫಳವ್ರಾತಜಾ
ತರಸಸ್ನಾನಮುಮಾಯ್ತುಪಾತ್ತ ಸುರಸೇನಾಚಕ್ರನಿಂ ಶಕ್ರನಿಂ ೬

ವ॥ ಅನಂತರಂ

ಕಂ॥ ಪಂಚಮಜಲನಿಧಿಯಲ್ಲದೆ
ಪಂಚಮಗತಿಪತಿಯ ಸವನಕೆಯ್ದಿಸವು ಪಯಃ
ಸಂಚಯಮನುಟಿದ ತೊಱೆ ಕೆಱೆ
ಬೆಂಚೆ ಕೊಳಂ ಕೂಪಮೆಂದು ಹರಿ ಬೆಸಸುವುದುಂ ೭

ಎಱವೆಸನಾದೊಡಮಕ್ಕೆಮ
ಗಱವೆಸನೆನೆ ಜಿನನ ಸವನಮಿಂದ್ರನ ಬೆಸನಿ
ರ್ತಱದಿಂ ನಿಷ್ಫಲಮಲ್ತೆಮ
ಗುಱುವುದಿದೆಂದುಲಿದು ನಲಿದು ದೇವಸಮೂಹಂ ೮

ಅಮೃತಾರ್ಣವಮನೆ ಮೇರುವಿ
ನಮೇಖಳಾವನಕೆ ತಿರ್ದಿ ಪರಿಯಿಸಲಿಂದ್ರಂ
ಸಮೆದೇಱೆವೊಲೆರಡೋಳಿಯೆ
ನಿಮಿರ್ದೆಸೆದುದು ಹಾರಿಗೊಂಡು ಕೇರ್ಗಟ್ಟಿದವೋಲ್ ೯

ಮ॥ ಚಳಬಾಹಾಲಹರೀಸಹಸ್ರಲಲಿತಂ ದೃಙ್ಮೀನಸಂತಾನಸಂ
ವಳಿತಂ ಕುಂಭಕುಳಾದ್ರಿಕೋಟಿಕಳಿತಂ ಭೂಷಾಮಣಿಶ್ರೇಣಿರು
ಙ್ಮಿಳಿತಂ ಸ್ಫಾರಗಭೀರಘೋಷಲುಳಿತಂ ದೇವಾಳಿ ಕಣ್ಗೊಪ್ಪಿತ್ತಾ
ಗಳಿದೊಂದಿಂಗಡಲಿಂಗಡಲ್ಗೆ ಬಳವಂದತ್ತೊಯ್ಯನೆಂಬನ್ನೆಗಂ ೧೦

ವ॥ ಆ ಪ್ರಸ್ತಾವದೊಳ್

ಮ.ಸ್ರ॥ ಅತುಳ ಸ್ವಚ್ಛಾಂಬುವಿಂ ವಾಃಕಣಗಣಸಿತಶೇಷಾಕ್ಷತ ಶ್ರೇಣಿಯಿಂ ಘೇ
ನತತಿಶ್ರೀಖಂಡಪಿಂಡದ್ರವದಿನಖಿಳ ರತ್ನಾಂಶುಪುಷ್ಪಂಗಳಿಂ ನಿ
ರ್ವೃತಿನಾಥಂಗರ್ಘ್ಯಮಂ ತತ್ಸವನವಿಧಿಯೊಳೀವಂತುಟಾಯುತ್ತರಂಗಾ
ಯತಹಸ್ತಂ ಸ್ತೋತ್ರಮಂತ್ರಸ್ವನವೆನಿಸೆ ಘನಧ್ವಾನಮಂಭೋನಿಧಾನಂ ೧೧

ಮ॥ ಭಗವನ್ಮಜ್ಜನಯೋಗ್ಯಮಾದ ಕಡಲೆನ್ನಂತಾವುದೆಂದುರ್ವಿ ಭೂ
ರಿಗಭೀರಸ್ವನದಿಂದೆ ಪೆರ್ಚಿ ನುಡಿವಂತಾ ಶುಕ್ತಿ ಮುಕ್ತಾಂಶುವಿಂ
ನಗುವಂತುನ್ಮುಖಪದ್ಮರಾಗರುಚಿಯಿಂ ರಾಗಾರ್ಥಮಾದಂತೆ ವೀ
ಚಿಗಳಿಂ ಕೆಯ್ನಿಡಿದಾಡುವಂತೆಸೆದುದೀ ಸುಸ್ನಿಗ್ಧ ದುಗ್ಧಾರ್ಣವಂ ೧೨

ವ॥ ಮತ್ತಂ

ಚಂ॥ ಕವಿದು ನಿಳಿಂಪಕೋಟಿ ಮೊಗೆಯುತ್ತಿರೆ ಶಂಖದ ಬಳ್ಳಿ ತಳ್ತುದೋ
ಪವಳದ ಬಳ್ಳಿ ಪರ್ವಿದುದೊ ಪಾವಸೆಬಳ್ಳಿ ಪಗಿಲ್ತುದೋ ಸಮು
ದ್ರವನೆನೆ ಚಂದ್ರಕಾಂತಕಲಶಾಂಶುಗಳುಂ ಕಿಸುಗಲ್ಲ ಕರ್ಕರ
ಚ್ಛವಿಗಳುಮಶ್ಮಗರ್ಭಘಟರಶ್ಮಿಗಳುಂ ಪುದಿದಿರ್ದುವಬ್ಧಿಯಂ ೧೩

ಕಂ॥ ತುಂಗಘಟಕೋಟಿಮೊಗೆಯೆ ತ
ರಂಗಪರಂಪರೆ ಪೊದಟ್ಟು ನಿಮಿರ್ದುದು ಯುಕ್ತಂ
ಭಂಗಂ ನಿಮಿರ್ವುದು ಕಡಲೊಳ್
ಸಂಗತಮೆನೆ ಕುಂಭಸಂಭವ ವ್ಯತಿಕರದಿಂ ೧೪

ಮ.ಸ್ರ॥ ಕಡಲೊಳ್ ನೀರ್ದರ್ಪುದಭ್ಯಾಸಿಗಳಿವು ನೆರವಕ್ಕೆಂದು ಶಕ್ರಂ ಬೆಸಂಬೇ
ಟ್ಟೊಡೆ ನಾನಾವರ್ಣದಭ್ರಾವಳಿ ನೆರೆದು ನಿಜಾಧೀಶನಾದೇಶದಿಂ ತ
ಮ್ಮೊಡನಧ್ಯಕ್ಷಂ ಬರಲ್ಕೀ ನಡೆಪುದೆನೆ ಚೆಲ್ವಾದುವಾಕಾಶದೊಳ್ ನೇ
ರ್ಪಡೆ ದೇವರ್ ತರ್ಪ ನಾನಾಮಣಿಕನಕಘಟಂಗಳ್ ಪಯಃಪೂರಿತಂಗಳ್ ೧೫

ಮ॥ ಪಗೆಗೊಂಡಾಡದೆ ದೇವನಿರ್ದ ಸಭೆಯೊಳ್ ಕಾರುಣ್ಯಮಂ ವಜ್ರಿ ಮಾ
ಡುಗುವಾಂ ಸಂಧಿಪೊಡಿಂದಿನೀಪದನೆ ಲೇಸೆಂದಬ್ಧಿ ತನ್ನಾಶ್ರಿತಾ
ದ್ರಿಗಳಂ ಕಾಣಿಸಲಿಂದ್ರನಲ್ಲಿಗೆ ತರುತ್ತಿರ್ದಪ್ಪುದೆಂಬಂತೆ ಮೇ
ರುಗಿರೀಂದ್ರಾಗತ ದೇವಕೋಟಿ ಘಟಕೋಟೀಯೂಥಮೇನೊಪ್ಪಿತೋ ೧೬

ಚಂ॥ ಸದಮಳಚಂದ್ರಕಾಂತಮಣಿಕುಂಭದ ರುಂದ್ರಮಹೇಂದ್ರನೀಲಕುಂ
ಭದ ಸುತಶಾತಕುಂಭಮಯಕುಂಭದ ಮೊತ್ತದ ಮಾಲೆ ಲೀಲೆವೆ
ತ್ತುದು ಬಹುರಾಜರಾಪುರವಿಮಂಡಳ ಮಂಡಳಿ ನಣ್ಬುಗೊಂಡು ತಂ
ಡದೆ ನಡೆಗೊಂಡುದೀಗಳೆನೆ ನಿಂದಮರಾವಳಿ ನೀಡೆ ಹಾರಿಯೊಳ್ ೧೭

ವ॥ ಅದಲ್ಲದೆಯುಂ

ಮ॥ ಕೆಲರೋರೊರ್ವರೆ ಪೋಪ ಪೋಗಿ ಕಡಲಂ ಕೆಯ್ಕೊಳ್ವ ಕೆಯ್ಕೊಂಡು ತ
ಜ್ಜಲಮಂ ತೀವುವ ತೀವಿ ಪೊಂಗೊಡನ ನಣ್ಪಿಂದೆತ್ತಿಕೊಳ್ವೆತ್ತಿಕೊಂ
ಡೊಲವಿಂ ಮೇರುಗೆ ಬರ್ಪ ಬಂದು ಮಘವಂಗೀವುತ್ತು ಮತ್ತಾಗಳಂ
ತೊಲೆದಲ್ಲಿಂ ಮಗುೞ್ವೊಂದು ದಂದುಗದಿನಾಟಂದರ್ ಮನೋವೇಗದಿಂ ೧೮

ಚಂ॥ ಉದಧಿಯನೆಯ್ದುವಲ್ಲಿ ಮೊಗೆವಲ್ಲಿ ಘಟಂಗಳನೆತ್ತುವಲ್ಲಿ ನಿ
ಲ್ಲದೆ ಮಗುೞ್ವಲ್ಲಿ ಪೊತ್ತು ಪರಿವಲ್ಲಿ ಸುರಾದ್ರಿಯನೇಱುವಲ್ಲಿ ತಂ
ದಿದಿರೊಳಿಟೆಪ್ಪುವಲ್ಲಿ ಕುಡುವಲ್ಲಿ ಕೆಲರ್ ಮನದಿಂದೆ ಮುಂಚುವರ್
ತ್ರಿದಶಮಹೇಂದ್ರಜಾಲಮೆನೆ ತನ್ಮಯಮಾಗಿರೆ ರೂಪುದೋಱುತುಂ ೧೯

ಕಂ॥ ಎಸೆವಭವಸವನವಿಭವಮ
ನುಸಿರ್ದೇವಣ್ಣಿಪುದೊ ನೆಱೆಯೆ ಬಳೆದಪುದೆನಿಸಿ
ತ್ತೊಸೆದಡಕುವಮರರಿಂ ಕ್ಷೀ
ರಸಮುದ್ರಂ ದಧಿಸಮುದ್ರವಾಜ್ಯಸಮುದ್ರಂ ೨೦

ಅಂತಮರಸೇನೆ ತಂದು ನಿ
ರಂತರಮೆನೆ ನೀಡೆ ಕನಕಘಟಕೋಟಿಯನೊ
ಲ್ದಾಂತನನಿತರ್ಕೆ ವನಿತೆ ಭು
ಜಾಂತರಮನಗುರ್ವಿನಿಂ ವಿಗುರ್ವಿಸೆ ಶಕ್ರಂ ೨೧

ಚಂ॥ ತೊಳಗುವ ಜಂಘೆ ಜಂಘೆಗೆ ಮುಖಂ ಮುಖಶೋಭೆಗೆ ತಾರಹಾರಮು
ಜ್ವಳಮಣಿತೋರಣಕ್ಕೆ ಶಿಖೆ ತಾಂ ಶಿಖರಕ್ಕೆ ಚಳಾಂಚಳಂ ಧ್ವಜಾಂ
ಚಳಕೆಣೆಯಾಗೆ ಸತ್ಕಳಶವೃಂದಮನಾತ್ಮಭುಜಾಸಹಸ್ರದೊಳ್
ತಳೆದು ಸಹಸ್ರಕೂಟಜಿನಮಂದಿರದಂತೆಸೆದಂ ಪುರಂದರಂ ೨೨

ವ॥ ಅಂತೆಸೆದು

ಕಂ॥ ನಿರ್ಭರಜಲವೃಷ್ಟಿಯನಾ
ವಿರ್ಭೂಷಣವಿದ್ಯುದುಜ್ವಳಂ ಪರ್ಜನ್ಯಂ
ಭೋರ್ಭೋರೆನೆ ಸುರಿಯಲ್ಕೆ ಜಿ
ನಾರ್ಭಕನೊದವಿದನಗಣ್ಯಪುಣ್ಯಕ್ಷೇತ್ರಂ ೨೩

ವ॥ ಆಗಳಖಿಳ ಮಜ್ಜನೋಪಕರಣಸರಣಿಯರಪ್ಪ ಸುರಪುರಂಧ್ರಿಕಾಜನಪುರಸ್ಸರೆಯಾಗಿರ್ದು

ಉ॥ ಕೆಂದಳಿರೆನ್ನ ಕೆಂದಳಕೆ ಪೊಂಗೊಡನೆನ್ನ ಘನಸ್ತನಕ್ಕೆ ಚೆ
ಲ್ವಿಂದೆಣೆಯಾಗಲಾರ್ತಪುವೆ ನೋಡೆನುತುಂ ಪಡಿಗಟ್ಟಿ ತೋರ್ಪವೋಲ್
ಕೆಂದಳದಿಂದಮೆತ್ತಿ ಕುಚಕುಂಭದೊಳಾಂತು ವಿಳಾಸದಿಂ ಶಚೀ
ಸೌಂದರಿ ಪಲ್ಲವಾಂಚಿತಘಟಂಗಳನಿಂದ್ರನ ಕಯ್ಗೆ ನೀಡಿದಳ್ ೨೪

ಕಂ॥ ಪೊಂಗಳಸಂಗಳ ರುಚಿಯಿಂ
ಪಿಂಗಳರುಚಿವಡೆಯೆ ಪಾಲಧಾರೆ ಜಿನೇಂದ್ರಂ
ಗೇಂ ಗಳ ಘೃತಾಭಿಷೇಕದ
ಮಂಗಳಮಿದು ಮೊದಲೊಳೆನಿಸಲಾರ್ತುದೊ ಸುರರಿಂ ೨೫

ಚಂ॥ ಪಳಿಕಿನ ಕುಂಭದಿಂ ಕುಳಿಶಿ ಪೊಯ್ವ ಪಯೋರಸಧಾರೆ ಚಂದ್ರಮಂ
ಡಳದಿನುದೀರ್ಣಮಾಗಿ ನಿಮಿರ್ವುಜ್ವಳಚಂದ್ರಿಕೆಯೆಂಬಿನಂ ಸುರ
ರ್ಕಳ ನಯನೋತ್ಪಳಂಗಳಲರ್ವಂತು ಸುಖಾಂಬುಧಿ ಕೊರ್ವುವಂತು ಕೋ
ಮಳಕರಕಂಜಕೋಟಿ ಮುಗಿವಂತೆಸೆದತ್ತು ಜಿನಾಭಿಷೇಕದೊಳ್ ೨೬

ಕಂ॥ ಅರುಣಮಣಿಕಳಶದಿಂ ಹರಿ
ಸುರಿವ ಸುಧಾಧಾರೆ ತನ್ಮಯೂಖಾಹತಿಯಿಂ .
ತರುಣಾರ್ಕಬಿಂಬದಿಂ ಬಿ
ತ್ತರಿಪೆಳೆಬಿಸಿಲೆನಿಸಿ ಕಳೆದುದಘತಾಮಸಮಂ ೨೭

ತುಂಗಹರಿನೀಳಕಳಶಮು
ಖಂಗಳ ಜಳಧಾರೆ ಧಾರ್ತರಾಷ್ಟ್ರಮರಾಳಂ
ನುಂಗಿ ಮುಗುಳ್ದುಗುಳ್ವ ಬಿಸದಂ
ಡಂಗಳನಭಿನಯಿಸಿತಭವನಭಿಷವವಿಧಿಯೊಳ್ ೨೮

ವ॥ ಆಗಳ್

ಚಂ॥ ತ್ರಿದಶಗಣಾಧಿಪರ್ ಸುರಿಯುತಿರ್ಪತಿನಿರ್ಮಳ ದುಗ್ಧವಾರಿಪೂ
ರದೊಳಚಳಾತ್ಮನುಂ ಸಹಜಭದ್ರನುಮಪ್ಪ ವಿಶುದ್ಧಮೂರ್ತಿ ತಾಂ
ಪುದಿದ ತುಷಾರಪುಂಜದೊಳಗಿರ್ಪ ಹಿಮಾದ್ರಿವೊಲಿಂದ್ರಸಿಂಧುಪೂ
ರದೊಳವಗಾಹಮಿರ್ಪ ಸುರದಂತಿವೊಲೊಪ್ಪಿದನಿಂದ್ರವಂದಿತಂ ೨೯

ವ॥ ಅಂತುಮಲ್ಲದೆಯುಂ

ಕಂ॥ ಇಂದ್ರಕರಕಳಿತಕಳಶದೆ
ರುಂದ್ರತರಕ್ಷೀರಪೂರಮಾವರಿಸೆ ಶರ
ಚ್ಚಂದ್ರಿಕೆಯ ಬಳಸಿನೊಳಗಣ
ಚಂದ್ರಮನಂತಿರ್ದನನುಪಮಂ ಜಿನಚಂದ್ರಂ ೩೦

ವ॥ ಆ ಸಮಯದೊಳ್

ಚಂ॥ ಅಱಿಯನನಂತಕುಂಭಶತಮಂ ಪಸುಗೂಸಿನ ಮೇಲೆ ಪೊಯ್ದಪಂ
ನೆಱಿ ಮರುಳಿಂದ್ರನೆಂದೊಣರ್ವ ಮುಗ್ಧನಿಳಿಂಪರ ಶಂಕೆ ಚಿತ್ತದಿಂ
ಪಱಿಪಡುವಂತು ಬಾಲನಿನಿಸಂ ತಱಿಸಂದೊಡೆ ವಕ್ತ್ರವಾಯುವಿಂ
ತಱಗೆಲೆಯಂತೆ ಪಾಱಿದುವು ರುಂದ್ರಸುರೇಂದ್ರವಿಮಾನಕೋಟಿಗಳ್ ೩೧

ವ॥ ಅನ್ನೆಗಂ

ಕಂ॥ ಆಕಾಶಕ್ಕುಚ್ಚಳಿಪಭಿ
ಷೇಕದ ಜಲಬಿಂದುಮಾಲೆಯದುತಾಂ ಮುಕ್ತಾ
ನೀಕದ ತೆಱದಿಂ ಜ್ಯೋತಿ
ರ್ಲೋಕವಿಮಾನಕ್ಕೆ ಪಡೆದುದಿರ್ಮಡಿಚೆಲ್ವಂ ೩೨

ಮ॥ ಅಮರಶ್ರೇಣಿಗೆ ಮುತ್ತಿನಾಭರಣಮಂ ದಿಗ್ದಂತಿಯೂಥಕ್ಕೆ ಚಿ
ಬ್ಬುಮನುದ್ಯಾನವನಕ್ಕೆ ಪೂದುಱುಗಲಂ ವ್ಯೋಮಕ್ಕೆ ತಾರಾಸಮೂ
ಹಮನಭ್ರಾವಳಿಗಾಲಿಗಲ್ಲ ಸಿರಿಯಂ ಮೆಯ್ವೆರ್ಚಿಸಲ್ ಸಾಲ್ದು ತ
ಳ್ತಮರ್ದೊಪ್ಪಿರ್ದುದುದೀರ್ಣಕೀರ್ಣಪವನಾಂಭಃಶೀಕರಂ ಶ್ರೀಕರಂ ೩೩

ವ॥ ಅಂತುಮಲ್ಲದೆಯುಂ

ಕಂ॥ ಸ್ವೇದಾಂಬುಬಿಂದು ಪುಟ್ಟಿದು
ವೀದಿವಿಜರ್ಗಿದು ವಿಚಿತ್ರಮೆನೆ ಕಿಱುಮುತ್ತಂ
ಕೋದಂತೆ ಸಿಡಿಲ್ದಡರ್ದಿಂ
ಬಾದುವು ಜಿನಸವನಜನಿತ ಜಲಲವಮವರೊಳ್ ೩೪

ವ॥ ಅನ್ನೆಗಂ

ಚ॥ ಕಡೆದು ಕಲಂಕಿ ಮುನ್ನಖಿಳ ವಸ್ತುಗಳಂ ಪೊಱಗಿಕ್ಕಿ ಸಂಪದಂ
ಗಿಡಿಸಿದ ಮೇರು ದೈವದಿನಿದಿಂದೊಳಗಾಯ್ತೆನಗೆಂದು ಬಂದು ಪಾ
ಲ್ಗಡಲಮರಾದ್ರಿಯಂ ಮುಳಿದು ಮುತ್ತಿದುದೆಂಬಿನಮೊಪ್ಪಿತೆತ್ತ ನೋ
ಟ್ಪೊಡಮಭವಾಭಿಷೇಕವಿಧಿಯೊಳ್ ಪೊಱಸೂಸುವ ಪಾಲ ಕಾಟ್ಪುರಂ ೩೫

ಕಂ॥ ಗಲ್ಗಲನೆ ಪರಿವ ಪಾಲ ಪೊ
ನಲ್ಗಳೊಳೊಳಗಾಗಿ ನಗದ ನಾಲ್ದೆಸೆಗಳ ತ
ಟ್ಪಲ್ಗಳೊಳೆಸೆದುವು ತೇಂಕುವ
ರಲ್ಗಳ ಸಂಕರಮಿದೆನಿಸಿ ತಾರಾವಳಿಗಳ್ ೩೬

ಜಿನಮಜ್ಜನಾಂಬುವಿಂದಂ
ಕನಕಾಚಳತಳದೊಳಿರ್ದು ಬಿಸುಪಟೆದು ಬೆಳ
ರ್ಪಿನಬಿಂಬವಾಗಳಾಗಳೆ
ವನಧಿಯೊಳೊಗೆವಿಂದುಬಿಂಬಮೆನಿಸಿದುದೆನಸುಂ ೩೭

ಪೊನಲೊಳ್ ಮುಳುಗಿಸಿ ಹಿಮಕರ
ದಿನಕರರಂ ಮಸುಳಿಸಿತ್ತು ಜಿನಸವನಪಯೋಂ
ಬುನಿಕಾಯಂ ದೋಷಾಕರ
ನೆನಿಪನ ಭೂತಾಪಕಾರಿಯೆನಿಪನ ಸಿರಿಯೇಂ ೩೮

ವ॥ ಅದಲ್ಲದೆಯುಂ

ಕಂ॥ ಜಿನಸವನಸಲಿಲದಿಂ ಬೆ
ಳ್ಪನಾಳ್ದುವರ್ಜುನಕುಜಂಗಳೆನಿಸವೆ ಚಿತ್ರಂ
ನನೆವಡೆದು ಪಾಂಡುಕದ ಸೌ
ಮನಸದ ನಂದನದ ಭದ್ರಶಾಲದ ತರುಗಳ್ ೩೯

ಮುಗ್ಧಜನದಜಿತಮೆನಿಸಿ ವಿ
ದಗ್ಧರುಮಿದು ಕನಕಗಿರಿಯೊ ರಜತಾದ್ರಿಯೊ ಸಂ
ದಿಗ್ಧಮೆನಿಸಿದುದು ಸುರಗಿರಿ
ದುಗ್ಧಪ್ರಸರೋಪದಿಗ್ಧಮಧಿಕಸ್ನಿಗ್ಧಂ ೪೦

ವ॥ ಅದಲ್ಲದೆಯುಂ

ಕಂ॥ ಆ ಹೇಮಗಿರಿಯ ವಿಟಪಸ
ಮೂಹದೊಳಿರದೋಡಿದುವು ಪೊನಲ್ಗಳ್ ದಿಕ್ಸಂ
ದೋಹಕ್ಕೆನಿತಾದೊಡಮೇಂ
ವಾಹಂಗಳ್ ಕುಂಜರಾಜಿಯೊಳ್ ನಿಂದಪುವೇ ೪೧

ವ॥ ಮತ್ತಂ

ಕಂ॥ ನೊರೆವಾಲ ಮೊಸರ ತುಪ್ಪದ
ಪರಿವೊನಲಾ ಗಿರಿಯ ಪಿರಿಯ ಸಾನುಗಳೊಳ್ ನಿ
ರ್ಝರಮೆಂಬ ನೆವದಿನಿನ್ನುಂ
ಪರಿದಪುವೇಂ ಪಿರಿದೊ ಜಿನನ ಜನ್ಮಸ್ನಾನಂ ೪೨

ವ॥ ಆಗಳ್

ಮ॥ ಅಕಳಂಕಾಕೃತಿವರ್ತನಂಗೆ ಘನಕಲ್ಕೋದ್ವರ್ತನಂ ವೀತಸ
ರ್ವಕಷಾಯಂಗೆ ಕಷಾಯತೋಯಸವನಂ ದೇಹೋಲ್ಲಸದ್ದಿವ್ಯಗಂ
ಧಕದಂಬಂಗೆ ಸುಗಂಧಬಂಧುರಜಳಸ್ನಾನಂ ಸ್ಫುರದ್ವರ್ಣಪೂ
ರ್ಣ ಕನನ್ಮೂರ್ತಿಗೆ ವರ್ಣಪೂರವಿಳಸನ್ನೀರಾಜನಂ ಮಾಱ್ಕುಮೇ ೪೩

ವ॥ ಆದೊಡಂ ಮಂಗಳೋಪಚಾರಮಿಲ್ಲಿಗವಸರೋಚಿತಂ ಬೇಱ್ಕುಮೆಂದು ವಿವಿಧನವವರ್ಣ ಚೂರ್ಣ ಪಿಷ್ಟೋಪಘೃಷ್ಟಿಯುಮನಕ್ಷರೀ ಕ್ಷೀರವೃಕ್ಷಸಂಸ್ಕಾರವಾರಿಸವನಮುಮನವನಮ್ನ ಭುವನಂಗೆ ಮಾಡಿದಿಂ ಬೞಿಯಂ

ಕಂ॥ ನಂದನವನಸಂಭವ ಹರಿ
ಚಂದನಸಂತಾನ ಪಾರಿಜಾತಕ ವಿಲಸ
ನ್ಮಂದಾರ ನಮೇರುದ್ರುಮ
ಸಂದೋಹದ ಕುಸುಮಕೋಟಿಯಂ ವಾಸಿತಮಂ ೪೪

ಮಳಯಜ ಕುಂಕುಮಜಾತೀ
ಫಳ ಜಾತೀಪತ್ರ[ಕಂ] ತುರುಷ್ಕ ತುಷಾರೋ
ಪಳ ಕಾಳಾಗರುತಕ್ಕೋ
ಳ ಲವಂಗ ಪ್ರಮುಖಸುರಭಿಪರಿಕರಯುತಮಂ

ಮ॥ ಜಳಮಂ ಶೀತಳಮಂ ನಿರಸ್ತಮಳಮಂ ತೀವಿರ್ದ ಕುಂಭಂಗಳಾ
ಗಳೆ ಗಂಧಾಂಧಮದಾಳಿಗಳ್ ಮುಸುಱೆ ನೀಲಿವಸ್ತ್ರಸಂಛಾದಿತಂ

ಗಳವೋಲ್ ತೋರ್ಪಿನಮತ್ತಿ ಚಿತ್ತರಿಸಿದರ್ ಗಂಧೋದಕಸ್ನಾನಮಂ
ಗಳಮಂ ತೀರ್ಥಕರಂಗೆ ಮಂಗಳರವಂ ಕೆಯ್ಗಣ್ಮೆ ಕಲ್ಪೇಶ್ವರರ್ ೪೬

ವ॥ ಆಗಳ್

ಮ॥ ನವಗಂಧೋದಕಪೂರದೊಳ್ ಪುದಿದು ಪೂವುಂ ತುಂಬಿವಿಂಡುಂ ತೆರ
ಳ್ದುವು ಪೇಟ್ ಪುಷ್ಪಶಿಳೀಮುಖಂ ಮಧುಯುತಂ ಭಂಗಕ್ಕೆ ಪಕ್ಕಕ್ಕುವ
ಲ್ಲವಱೊಳ್ ಕೂಡವು ಕಾಂತಿಗುಂದವು ಪರಾಗೋದ್ಭಾಸಿಯರ್ ಪಾಡಿ ತೇಂ
ಕುವ ಜಾಡ್ಯಕ್ಕೆಡೆಯಾಗದೊಡ್ಡುಗುಮೆ ಮೋಹಧ್ವಂಸನಾಸ್ಥಾನದೊಳ್ ೪೭

ಕಂ॥ ಬಂಧುರಸವನೋತ್ಸವ ಸುರ
ಸಿಂಧುವಿನೊಳ್ ಪುಟ್ಟಿ ಜಗಮನಾಱಿಪ ಪೂರ್ಣೋ
ದ್ಗಂಧಿಯನೇವೊಗಟ್ಟುದೊ ಜಿನ
ಗಂಧೋದಕಮಂ ಭವಾಗ್ನಿ ವಿಚ್ಛೇದಕಮಂ ೪೮

ಉ॥ ಆದುದು ಕರ್ಮಘರ್ಮದ ಪೊಡರ್ಪನಡಂಗಿಸಲತ್ಯಗಣ್ಯಪು
ಣ್ಯೋದಯಸಸ್ಯಮಂ ಬೆಳೆಯಿಸಲ್ ಕುಚರಿತ್ರಕಳಂಕಪಂಕಮಂ
ಭೇದಿಸಲಿಂತಿದೆಂದು ದಿವಿಜರ್ ನೆರೆದೀೞ್ಕುಳಿಗೊಂಡು ಕೊಂಡ ಗಂ
ಧೋದಕದಿಂದೆ ತಮ್ಮ ತನುವಂ ಶುಚಿಮಾಡಿದರಿಂಡೆಯಾಡಿದರ್ ೪೯

ಕಂ॥ ಅಗವೆಲ್ಲಂ ನಗವೆಲ್ಲಂ
ಮೃಗವೆಲ್ಲಂ ನದಿಗಳೆಲ್ಲಮುದಧಿಗಳೆಲ್ಲಂ
ಖಗಮೆಲ್ಲಂ ದೆಸೆಯೆಲ್ಲಂ
ಭಗವಜ್ಜಿನಸವನಜಲದಿನಾಯ್ತು ಪವಿತ್ರಂ ೫೦

ವ॥ ಅಂತು

ಉ॥ ಕೂಡೆ ಪವಿತ್ರಮಾಯ್ತು ಜಲಮೊಂದೆಡೆ ಮಾಡುವ ವಜ್ರಪಾಣಿ ಕೆ
ಯ್ಗೂಡಿದ ವಸ್ತು ನೀಡಿದಮರಾವಳಿ ನೋಡಿದ ಲೋಕಪಾಲರೋ
ಲಾಡಿದ ಮೇರು ಪಾಡಿದಮರೀಜನಮೆಯ್ದೆ ಪವಿತ್ರವೃತ್ತಿಯೊಳ್
ಕೂಡುವುದಾವ ಪಂಗೆನಿಸಿತೇವೊಗಟ್ಟಿಂ ಜಿನಪಾಭಿಷೇಕಮಂ ೫೧

ವ॥ ಆಗಳಿಂದ್ರಂಗಿಂದ್ರಾಣಿ ಮುಂದೆ ತಂದವಟಯ್ಸುವುದುಂ

ಕಂ॥ ಬಹುಕುಸುಮಬಹುಫಳಾನ್ವಿತ
ಬಹುತಂಡುಳವರ್ಣಹಾರದಿಂದವತಾರಂ

ವಿಹಿತಕ್ರಮಸಹಿತಂ ಮಳ
ರಹಿತಂಗೆಸೆವಂತು ಮಾಡಿದಂ ಸುರಮಹಿತಂ ೫೨

ವ॥ ಅದಱೊಡನೆ

ಕಂ॥ ಆ ರಾಜನ ಪಕ್ಕದೆ ನುತ
ರಾರಾಜಿಪ ಭಗಣಮೆನಿಸೆ ಮಂಗಳದೀಪಂ
ನೀರಾಜನಮುಂ ಮುಕ್ತಿ
ಶ್ರೀರಾಜನ ಮುಂದೆ ನೆಗೞ್ದುದಮರಾಧಿಪನಿಂ ೫೩

ವ॥ ಅಂತಘಶಾಸನಂಗೆ ಪಾಕಶಾಸನಂ ಮಾೞ್ಪ ಜನ್ಮಾಭಿಷೇಕವಿಧಾನಮಂ ನಿರ್ವರ್ತಿಸಿ ತದನಂತರಂ

ಮ॥ ಹರಿಣಾಂಕದ್ಯುತಿಹಾರಿ ವಾರಿ ಸುರಭಿಶ್ರೀನಂದನಂ ಚಂದನಂ
ಪರಿಮುಕ್ತಾಕ್ಷತಮಕ್ಷತಂ ಪರಿಮಳಾಸ್ಥಾನಂ ಪ್ರಸೂನಂ ಮನೋ
ಹರರೂಪಂ ಹಿಮಧೂಪಮುದ್ಧೃತ ಕಳಾಪಂ ರತ್ನದೀಪಂ ಸುಧಾ
ಗುರು ಭಾಸ್ವಚ್ಚರು ನಿರ್ಮಳಂ ಫಳಮೆನುತ್ತೀ ಮಂಗಳದ್ರವ್ಯದಿಂ ೫೪

ಕಂ॥ ಅಷ್ಟಾರ್ಧಘಾತಿಮಥನಂ
ಗಷ್ಟಾಪದಶಿಖರಿಶಿಖರಶೇಖರರೂಪಂ
ಗಷ್ಟಾಪದರಿಪುಪೀಠಂ
ಗಷ್ಟವಿಧಾರ್ಚನೆಗಳೆಸೆಯೆ ಪದೆದರ್ಚಿಸಿದಂ ೫೫

ಮ॥ ಕ್ರಮದಿಂ ಪೂಜಿಸುವಂ ಶತಕ್ರತುವೆ ಪೂಜಾವಸ್ತು ಕಲ್ಪದ್ರುಜಾ
ತಮೆ ಪೂಜ್ಯಂ ಭುವನತ್ರಯೇಶ್ವರನೆ ಪೂಜಾಲಭ್ಯಮಕ್ಷೂಣಮೋ
ಕ್ಷಮೆ ತಾನೆಂದೆನಲಾವನಿನ್ನದಱ ಪೆಂಪಂ ಸಾಗರಂ ಸಾಗರೋ
ಪಮಮೆಂದೆಂದಿರಲಲ್ಲದೆಯ್ದೆ ಪೊಗೞಲ್ಕುಂತಾರ್ಗುಮೇಂ ತೀರ್ಗುಮೇ ೫೬

ವ॥ ಎಂದು ಬಣ್ಣಿಸುತ್ತೆ ಜಯಜಯಘೋಷಮುಖರಮುಖದ ದೇವಕೋಟಿ ವೆರಸು ನಿಟಿಲತಟಘಟಿತ ಕರಸರೋಜನಾಗಿ

ನಮೋ ಜಿನಾಯ ತೇ ತಸ್ಮೈ ಸರ್ವಸತ್ವಾಶ್ರಯಾತ್ಮನೇ
ಸನ್ಮತಾಂಭೋಧಯೇ ಯಸ್ಮಾದ್ಧತ್ತೇ ಧರ್ಮಾಮೃತಂ ಜಗತ್ ೧

ನಮೋ ಜಿನಾಯ ತೇ ತಸ್ಮೈ ಸತ್ಪಾತ್ರಸ್ನೇಹವರ್ತಿನೇ
ಸುತಮೋದೀಪ್ರದೀಪಾಯ ಯತ್ರಾನಂಗಃ ಪತಂಗವತ್ ೨

ನಮೋ ಜಿನಾಯ ತೇ ತಸ್ಮೈ ದೋಷಾದೋಷವಿಲೋಪಿನೇ
ಕಾಲವ್ಯಾಳೇಭಸಿಂಹಾಯ ಭಾತಿಯತ್ ಸೂಕ್ತಿವರ್ಜಿತಃ ೩

ನಮೋ ಜಿನಾಯ ತೇ ತಸ್ಮೈ ಕಾಂತಾರಾಗಕ್ಷಯಾತ್ಮನೇ
ಸದ್ಜ್ಞಾನಭಾನವೇ ಯಸ್ಯ ಪ್ರಕಾಶೇ ನಿಸ್ತಮೋ ಜಗತ್ ೪

ನಮೋ ಜಿನಾಯ ತೇ ತಸ್ಮೈ ಸರ್ವಾಶಾಂಬರಭಾಸಿನೇ
ಭವ್ಯೋತ್ಪಲೇಂದವೇಯೇನ ಕರ್ಮಘರ್ಮಾತಪೋ ಹೃತಃ ೫

ಕಂ॥ ಜಿನ ನಿನ್ನ ಮೂರ್ತಿ ಜಿನ ನಿ
ನ್ನ ನಯಂ ಜಿನ ನಿನ್ನ ಸಮತೆ ಜಿನ ನಿನ್ನೆಸಕಂ
ಜಿನ ನಿನ್ನ ಮಹಿಮೆ ಜಿನ ನಿ
ನ್ನನಘತೆ ಜಿನ ನಿನ್ನ ಕಾಣ್ಕೆ ವರ್ಣಿಸಲಳವೇ ೫೭

ವ॥ ಎಂದು

ಕಂ॥ ಇವು ಮೊದಲಾಗಿರೆ ವಸ್ತು
ಸ್ತವ ರೂಪಸ್ತವ ಗುಣಸ್ತವಂಗಳಿನಿಂದ್ರಂ
ಭವರಿಪುವಂ ಸ್ತುತಿಯಿಸಿ ಮಕು
ಟವಿಘಟ್ಟಿತಪಾದನಾದನನುನಯದಿಂದಂ ೫೮

ವ॥ ತದನಂತರಂ

ಕಂ॥ ಚಂದನಲತೆ ಕಿಸಲಯಚಯ
ದಿಂದಂ ತೊಡೆದಪುದು ಮಲಯನಗನಿರ್ಝರನಿ
ಷ್ಯಂದಮನೆನೆ ದಿವ್ಯಾಂಬರ
ದಿಂ ಶಚಿ ತೊಡೆದಳಭವಸವನದ್ರವಮಂ ೫೯

ವ॥ ಆಗಳ್

ಕಂ॥ ಜಿನತನುಬಿಂಬಿತ ನೀರಾ
ಜನದೀಪಕಳಾಪರುಚಿಗಳೊಪ್ಪಿದುವು ಜಲ
ಕ್ಕನೆ ಚಿತ್ತದೊಳಗೆ ಬೆಳಗುವ
ಘನಧರ್ಮಧ್ಯಾನದೀಪ್ತಿ ಪೊಜಮೊಣ್ಮುವವೋಲ್ ೬೦

ವ॥ ಅನಂತರಂ ಶಿರೀಷಧಾಮಕೋಮಳಂಗಳಪ್ಪ ನಿಜಭುಜಂಗಳ್ಗೆ ರೋಮಾಂಚ ಸಂಚಯಂ ನೆಗೆಯೆ ನೆಗಪಿಕೊಂಡು

ಮ॥ ಉದಯಾದ್ರೀಂದ್ರದೊಳಿಂದ್ರದಿಗ್ವಧು ಲಸದ್ಬಾಳಾರ್ಕನಂ ತಾಳ್ದುವಂ
ದದಿನಿಂದ್ರಾಣಿ ಜಿನೇಂದ್ರಬಾಳಕನನಾತ್ಮೋತ್ಸಂಗದೊಳ್ ತಾಳ್ದಿ ರಾ
ಗದಿನಿರ್ದಂದಿನ ಮೈಮೆಗಂದಿನ ವಿಳಾಸಕ್ಕಂದಿನಾನಂದದೊಂ
ದೊದವಿಂಗಂದಿನ ಪುಣ್ಯಕಂದಿನೆಸಕಕ್ಕಂತಾವಳುಂ ನೋಂತಳೇ ೬೧

ವ॥ ಎನಿಸಿರ್ದನಂತರಂ

ಕಂ॥ ಪರಮ ಜಿನದಿವ್ಯಗಂಧದ
ಪರಿಚಯದಿಂ ಸಕಳ ಸಾರಸೌರಭ್ಯಮನಾ
ಳ್ದಿರಲಿವು ನೋಂತುವೆನುತ್ತಿರೆ
ವಿರಚಿಸಿದಳ್ ಶಚಿ ಸುಗಂಧಲೇಪನವಿಧಿಯಂ ೬೨

ವ॥ ಮತ್ತಂ ಮುಕ್ತಿಲಲನಾಲಲಾಟತಿಲಕನುಂ ಪಂಚಮಭೂಮಿಭಾಮಿನೀವಶ್ಯಾಂಜನನುಂ ಅಪವರ್ಗಸಂಪದ್ವಿಳಾಸಿನೀಲಲಾಮನುಂ ಅಕ್ಷಯರಮಾಂಗನಾಸುವರ್ಣಕುಂಡಲನುಂ ಆತ್ಯಂತಿಕಗತಿಗ್ರೈವೇಯಕನುಂ ಅಮೃತಕಾಮಿನೀಕನಕಕಂಕಣನುಂ ನಿಶ್ರೇಯಸಶ್ರೀಪ್ರಿಯಾರತ್ನ ಕೇಯೂರನುಂ ಮೋಕ್ಷಲಕ್ಷ್ಮೀಕರಾಂಗುಲೀಯಕನುಂ ನಿರ್ವೃತಿವಧೂಪದವಿಲಾಸನೂಪುರನುಂ ನಿರ್ವಾಣನಿತಂಬಿನೀನಿತಂಬಸೂತ್ರನುಮೆನಿಸಿದೀ ತ್ರಿಭುವನೈಕಭೂಷಣವಿಳಾಸಂಗೆ ಭೂಷಣವಿಳಾಸಮಖಿಳ ಲೋಕಲೋಚನಲೋಭನೀಯ ಸಹಜಾಂಗ ಸೌಂದರ್ಯಸಂಪತ್ತಿಯಂ ಮಱೆಯಿಸಲಲ್ಲದೆ ಮೆಱೆಯಿಸಲ್ ನಿಮಿತ್ತಮಲ್ತು ಆವೆಡೆಗಂ ಮಂಗಳೋಪಚಾರಮಿಲ್ಲಿ ಕರಣೀಯಂ ಎಂದು ಸಂಕ್ರಂದನಂ ಬೆಸಸೆ

ಚಂ॥ ತಿಳಕಮನಿಟ್ಟು ಕಜ್ಜಳಮನೆಚ್ಚಿ ಲಲಾಮಮನಪ್ಪುಕೆಯ್ದಿ ಕುಂ
ಡಳಮನಮರ್ಚಿ ಕಂಠಿಕೆಯನರ್ಪಿಸಿ ಕಂಕಣಮಂ ತಗುಳ್ಚಿ ದೋ
ರ್ವಳಯಮನಿಕ್ಕಿ ಮುದ್ರಿಕೆಯನೇಱಿಸಿ ನೂಪುರಮಂ ತೊಡರ್ಚಿ ಮಂ
ಜುಳ ಕಟಿಸೂತ್ರಮಂ ತುಡಿಸಿ ಕೆಯ್ಗೆಯೆ ಕಣ್ಗೆಸೆದಂ ಜಿನಾರ್ಭಕಂ ೬೩

ಕಂ॥ ಸುರನೇತ್ರ ಪ್ರತಿಬಿಂಬಂ
ಸ್ವರುಚಿಯೊಳಾವರಿಸಿ ತಾನೆ ತನ್ನಂ ನೋಡಲ್
ಪರಮನ ತನು ಕಣ್ದೆಱೆದಂ
ತಿರೆ ಸೊಗಯಿಸಿ ಪೋಲ್ತುದಲರ್ದ ತಾವರೆಗೊಳನಂ ೬೪

ವ॥ ಆಗಳ್

ಮ॥ ವರಭೂಷಾಬಲದಿಂದೆ ಶೋಭೆವಡೆದನ್ಯಾಕಾರದಂತಲ್ಲದಾ
ಭರಣಕ್ಕಾಭರಣಂ ಜಿತಸ್ಮರನ ರೂಪೆಂದೀಕ್ಷಿಸಲ್ ತನ್ನ ಸಾ
ಸಿರ ಕಣ್ಣೆಯ್ದದೆ ಕೋಟಿ ಕಣ್ಗೆ ಬಯಸುತ್ತಲ್ಕಿರ್ತು ತಟ್ಕೆಯ್ಸುತು
ದ್ಧರಿಸಿರ್ದಂ ಹರಿ ಕಾಂಕ್ಷಿಸುತ್ತೊಲವಿನಿಂ ಶ್ರೀ ಭವ್ಯರತ್ನಾಕರಂ ೬೫

ಗದ್ಯ

ಇದು ಸಮಸ್ತ ಭುವನಜನಸಂಸ್ತುತ ಜಿನಾಗಮ ಕುಮುದ್ವತೀ ಚಾರುಚಂದ್ರಾಯಮಾಣ ಮಾನಿತ ಶ್ರೀಮದುಭಯಕವಿ ಕಮಳಗರ್ಭ ಮುನಿಚಂದ್ರಪಂಡಿತದೇವ ಸುವ್ಯಕ್ತ ಸೂಕ್ತಿಚಂದ್ರಿಕಾ ಪಾನ ಪರಿಪುಷ್ಟಮಾನಸ ಮರಾಳ ಗುಣವರ್ಮನಿರ್ಮಿತಮಪ್ಪ ಪುಷ್ಪದಂತಪುರಾಣದೊಳ್ ಜನ್ಮಾಭಿಷೇಕೋತ್ಸವಸಂಪದ್ವರ್ಣನಂ ಏಕಾದಶಾಶ್ವಾಸಂ

ದ್ವಾದಶಾಶ್ವಾಸಂ

ಕಂ॥ ಶ್ರೀಪೃಥುಳೈಶ್ವರ್ಯನಗತ
ಲೇಪನ ದರ್ಶನದೊಳಾದ ಪರಮಾನಂದ
ಶ್ರೀಪದದೊಳ್ ರಂಜಿಸಿದನಿ
ಳಾಪೂಜ್ಯಂ ಪ್ರಭುಗುಣಾಬ್ಜವನಕಳಹಂಸಂ ೧

ವ॥ ಅಂತು ಜನ್ಮಾಭಿಷೇಕೋತ್ಸವವ್ಯಾಪಾರಮಂ ತೀರ್ಚಿ ಮಾರಮದವಾರಣಂ ಬೆರಸು ಮದವಾರಣಸ್ಕಂಧಮನಲಂಕರಿಸಿ ಸರ್ವಗೀರ್ವಾಣ ಸೈನಿಕಸಹಸ್ರಪರಿವೃತಂ ಸಹಸ್ರಲೋಚನಾಮರಂ ಧರಾಮರನಂತೆ ದಕ್ಷಿಣಾಭಿಮುಖನಾಗಿ ತಳರೆ

ಕಂ॥ ನೆಲಸಿರ್ದ ಪಕ್ಕಿವಿಂಡುಗ
ಳುಲಿದೆಬ್ಬು ವಿಭಾತಸಮಯದೊಳ್ ಪೋಗಲೊಡಂ
ಗೆಲೆ ಬಿನ್ನನಪ್ಪ ವೃಕ್ಷಂ
ಬೊಲಿರ್ದುದಮರಾದ್ರಿ ದಿವಿಜಕಳಕಳಶೂನ್ಯಂ ೨

ವ॥ ಆಗಳ್

ಮ॥ ಭುವನಾಭೋಗಮನೆಯ್ದೆ ತೀವಿದಳಿದರ್ಹನ್ಮಜ್ಜನಕ್ಷೀರಪೂ
ರವೆನಲ್ಕಭ್ರಗಜೇಂದ್ರಶುಭ್ರರುಚಿಯುಂ ದೇವೀದೃಗಾಲೋಕಮುಂ
ಧವಳಚ್ಛತ್ರಚಯಾಂಶುವುಂ ಜಿನತನುಪ್ರದ್ಯೋತಿಯುಂ ಪರ್ವೆ ತ
ತ್ಪ್ರವದೊಳ್ ವಾಸವನೀಸುವಂತೆ ತಳರ್ದೆೞ್ತಂದಂ ತದದ್ರೀಂದ್ರದಿಂ ೩

ವ॥ ಅಂತು

ಮ॥ ಅಮರಾನೀಕವಿಮಾನವಿಸ್ತೃತವಿಯಚ್ಚಕ್ರಂ ಶಚೀಲೋಚನ
ಭ್ರಮರಾನಂದಜಿನೇಂದ್ರವಕ್ತ್ರಕಮಳಾಲೋಕೈಕಲಗ್ನಂ ದಿಶಾ
ರಮಣೀಕರ್ಣವಿಹಾರಿತೂರ್ಯರಭಸಂ ಮಾಂಗಲ್ಯಸಾಕಲ್ಯಸಂ
ಭ್ರಮಿ ಕಾಕಂದಿಯನೆಯ್ದಿ ಪೊಕ್ಕನವನೀಶಾವಾಸವಂ ವಾಸವಂ ೪

ವ॥ ಅಂತು ಪೊಕ್ಕು

ಉ॥ ತನ್ನ ನಿಯೋಗದಿಂ ದಿವಿಜಶಿಲ್ಪಿಗಳಿರ್ದು ಸಮಸ್ತವಸ್ತುಸಂ
ಛನ್ನಮತಿಪ್ರಶಸ್ತರಚನಾಂಚಿತಮುರ್ವಿಗಪೂರ್ವಮೆಂಬಿನಂ
ಮುನ್ನಮೆ ನಿರ್ಮಿಸಿಟ್ಟ ಮಣಿಮಂಟಪಮಧ್ಯದ ಸಿಂಹಪೀಠದೊಳ್
ಸನ್ನುತಲೀಲೆಯಿಂದಿರಿಸಿ ಬಾಲಕನಂ ಸುರಲೋಕಪಾಲಕನಂ ೫

ಕಂ॥ ಚಂದ್ರನ ಪಕ್ಕದ ಭಗಣ ಮ
ಗೇಂದ್ರನ ಪಕ್ಕದ ಕುಳಾದ್ರಿಕುಳಮೆನಿಸಿರೆ ಕ
ಲ್ಪೇಂದ್ರತತಿ ಜಿನನ ಪಕ್ಕದೊ
ಳಿಂದ್ರಾಣಿಸಹಿತಮಿರ್ದುದುಚಿತಾಸನದೊಳ್ ೬

ವ॥ ಆಗಳತಿಬಳಕೋಳಾಹಳಕುಳನಿಳಿಂಪಜನದನೇಕ ಮಂಗಳಾನಕಸಮುದ್ರ ಸದ್ರಭಸದಿಂದಮುನ್ನಿದ್ರೆಯಾದ ಮಹಾದೇವಿವೆರಸು ಪುತ್ರಮುಖದರ್ಶನೋತ್ಕಂಠಸುಕಂಠರಾಜ ನೆರಡನೆಯ ದಿವಿಜರಾಜನಂತೆ ಮಹನೀಯಮಹಿಮಸಾ ಮಹಾಮಂಟಪಕ್ಕೆವಂದು ಸಮುಚಿತಾಸನಾಸೀನನಾದಲ್ಲಿ

ಕಂ॥ ನರಪತಿಯುಂ ಸುರಪತಿಯುಂ
ನರೇಂದ್ರವಧುವುಂ ಸುರೇಂದ್ರವಧುವುಂ ನರರುಂ
ಸುರರುಮಣಮಱಿಯಲಾಗದೆ
ಸಿರಿಯೊಳ್ ಮೆಯ್ಸಿರಿಯೊಳವರದೇನನುಪಮರೋ ೭

ವ॥ ಆ ಸಮಯದೊಳ್

ಕಂ॥ ಭುವನತ್ರಯಸಾಮ್ರಾಜ್ಯಮ
ದಿವರ್ಗೇಕಚ್ಛತ್ರಮಾದುದೆನಿಪನಿತು ಮಹೋ
ತ್ಸವಮಾದುದವರ್ಗೆ ಲೋಚನ
ಕುವಳಯಮನಲರ್ಚೆ ಪುತ್ರಮುಖಶಶಿಬಿಂಬಂ ೮

ಬಾಳಕನಂ ವಿಲುಳಿತಲಂ
ಬಾಳಕನಂ ನೋಡುವಲ್ಲಿ ಸುಗ್ರೀವನ ತ
ದ್ಬಾಳೆಯ ನಿಡುನಿಡುಗಣ್ಗಳ್
ಬಾಳೆಯನಿಱಿಸಿದುವು ಹರ್ಷರಸಮಗ್ನಂಗಳ್ ೯

ವ॥ ಅನಂತರಂ

ಕಂ॥ ಆಜಂಪತಿಗಳ ವದನಾಂ
ಭೋಜಂಗಂಗಳನಾತ್ಮ ದೃಕ್ಸಹಸ್ರ ಭ್ರಮರೀ
ರಾಜಿಗೆಡೆಮಾಡಿನೋಡಿ ಬಿ
ಡೌಜಂ ದಶನಾಂಶುರಾಜಿ ರಾಜಿಸೆ ನುಡಿದಂ ೧೦

ಹರಿಣೀ॥ ನಿಮಗೆ ತನಯಂ ತ್ರೈಲೋಕ್ಯಾಧೀಶನೀ ಜಿನನಾಥನಾ
ನಮರಗಿರಿಗೊಯ್ದಿಗಳ್ ಜನ್ಮಾಭಿಷೇಕ ವಿಭೂತಿಯಂ
ನಮೆದು ಸುಕೃತಂಬೆತ್ತೆತ್ತಿಂದೆಂ ಕೃತಾರ್ಥನೇನಾದೆ ನಿ
ನ್ನಿಮತು ದೆಸೆಯಿಂದನ್ಯರ್ ನಿಮ್ಮಂತು ಮಾನ್ಯರೆ ಧನ್ಯರೇ ೧೧

ಕಂ॥ ಗುರುಗಳ್ ನೀಮಿಾ ತ್ರಿಭುವನ
ಗುರುಗದಱಿಂದೆಮಗೆ ಗುರುಗಳಖಿಳಜನಕ್ಕಂ
ಗುರುಗಳ್ ನೀಮೆ ಗುರೋರಪಿ
ಗುರುವೆಂಬೀ ನುಡಿಯ ಪೆಂಪನಾಂತಿರ್ ನೋಂತಿರ್ ೧೨

ವ॥ ಎಂದು ವಿನಯೋಕ್ತಿಪೂರ್ವಕಮಿರ್ವರುಮಂ ಸ್ತುತಿಯಿಸಿ

ಮ॥ ಇದು ಸರ್ವೋರ್ವಿಗಮತ್ಯಪೂರ್ವಮೆನೆ ಗೀರ್ವಾಣವ್ರಜಂ ತಂದು ನೀ
ಡಿದ ವಸ್ತ್ರಾಂಗವಿಭೂಷಣಾಂಗವಿಕಸನ್ಮಾಲ್ಯಾಂಗದೀಪಾಂಗವೃ
ಕ್ಷದ ದಿವ್ಯಾಂಬರದಿಂದಲಂಕರಣದಿಂ ಪೂಮಾಲೆಯಿಂದಂಗರಾ
ಗದಿನುದ್ಭಾಜಿಸುವಂತು ಪೂಜಿಸಿದನಿಂದ್ರಂ ತತ್ಪಿತೃದ್ವಂದ್ವಮಂ ೧೩

ಕಂ॥ ಪುರದೊಳಗಿನ್ನುಂ ರನ್ನದ
ಸರಿ ಸುರಿದಪುದಿಂದ್ರನಿಂತು ಬಂದೋಲಗಿಪಂ
ನರಲೋಕದೊಳಿವರ್ಗಳೆ ನೋಂ
ತರಿಂತು ಪಡೆದನ್ನರಾರೊ ಕುಳದೀಪಕನಂ ೧೪

ಚಂ॥ ಕರಿರಿಪು ಪುಟ್ಟೆ ವಿಂಧ್ಯಗಿರಿ ತಾವರೆ ಪುಟ್ಟೆ ಸರೋವರಂ ಮನೋ
ಹರಮಣಿ ಪುಟ್ಟೆ ರೋಹಣಮಹಾದ್ರಿಸುಧಾರುಚಿ ಪುಟ್ಟೆ ಪಾಲ್ಗಡಲ್
ಸುರತರು ಪುಟ್ಟೆ ನಂದನವಭಿಷ್ಟುತಮಪ್ಪವೊಲಾದುದೀಗಳೀ
ಸ್ಮರರಿಪು ಪುಟ್ಟೆ ಧಾರಿಣಿಗೆ ಕಾಶ್ಯಪಗೋತ್ರವಿದೇಂ ಪವಿತ್ರಮೋ ೧೫

ವ॥ ಎಂದು ಸುರಜನಂಗಳುಂ ಪುರಜನಂಗಳುಂ ಪೊಗೞೆ ಪರಮಾನಂದ ಪರವಶೀಭೂತ ಚೇತಸ್ಕರಾಗಿರ್ದು ಜಾತಕರ್ಮಕಲ್ಯಾಣದೊಸಗೆಯಂ ಮಾಡಿಸಿ

ಕಂ॥ ನಗರದ ಮನೆಮನೆದಪ್ಪದೆ
ಸೊಗಯಿಸೆ ಬಹುವರ್ಣ ವಿವಿಧ ಪಟದೊಳ್ಗುಡಿಗಳ್
ನೆಗಟ್ದಿರೆ ಬಹುಪ್ರಕಾರದ
ಮುಗಿಲೊಗೆದಪುವೆನಿಸಿತಾಗಳಾಕಾಶತಳಂ ೧೬

ಒಸೆದು ದಿಗಧೀಶ್ವರರ್ ಜಿನ
ನೊಸಗೆಗೆ ಬರ್ಪಲ್ಲಿ ತಚ್ಚಮೂಪದಹತಿಯಿಂ
ಮುಸುಕಿದ ಕೆಂಧೂಳಿಯಿದೆನೆ
ಪಸರಿಸಿ ಪಟವಾಸಚೂರ್ಣಮೆಸೆದುವು ದೆಸೆಯೊಳ್ ೧೭

ಎಡೆವಱಿಯದಂತವುರದೊಳ್
ಕಡೆಯಿಕ್ಕುವ ತೋರಮುತ್ತು ಕಟ್ಟುವ ಗುಡಿ ನೇ
ರ್ಪಡೆ ಚೆಲ್ವೆತ್ತುವ ತೋರಣ
ವಡಿಗಡಿಗುತ್ಸವದೆ ತಳಿವ ಪಟವಾಸಚಯಂ ೧೮

ಆವರಿಸುನ ಪೂವಲಿ ತ
ಳ್ತಾವಗಮಿರದುಣ್ಮುವುಚಿತ ಮಂಗಳರುಚಿ ಸ
ದ್ಭಾವದೊಳೆ ಕುಣಿವ ಪೆಕ್ಕಣ
ಮಾವೃತಶುಭನಿಧಿಗಳೀವ ಬಾಯಿನಮೆಸೆಗುಂ ೧೯

ಚಂ॥ ಸುದತಿಯರಾಸ್ಯಗಂಧಮನಪೂರ್ವಮದೆಂದು ನಮೇರುಪುಷ್ಪವ
ರ್ಷದ ಬೞಿಸಂದು ಬಂದ ಸುರಲೋಕದ ತುಂಬಿಗಳಾಸೆಗೆಯ್ದು ಮ
ಚ್ಚಿದುವು ತದಾನನಾಂಬುಜದ ತುಂಬಿಗಳಂ ಸುರಪುಷ್ಪವೃಷ್ಟಿ ತಾಂ
ಪದನಿಸಲಾರ್ತುದಿಲ್ಲ ನಿಜಗಂಧದಿನೇನದಱೊಳ್ಪುಳುಂಬಮೋ ೨೦

ಸುರವನಿತಾಜನಂಗಳೆ ಸುರೂಪವಿಳಾಸೆಯರೆಂದು ಬೀಗಿ ಧಿ
ಕ್ಕರಿಸುವನಿಂದ್ರನೆಮ್ಮುಮನವಂದಿರುಮಂ ಪಡಿಗಟ್ಟಿ ನೋಡುಗೀ
ಬರವಿನೊಳಾದ ಚೆಲ್ವು ಮಿಗಿಲಿಲ್ಲಿಯೆ ಕಂಡಪನೆಂದು ತೋರ್ಪವೋಲ್
ನೆರೆದುದು ಪೆಂಡವಾಸದೆಳವೆಂಡಿರ ತಂಡಮದಿಂಡೆಯಾಟದೊಳ್ ೨೧

ಕಂ॥ ಒಸಗೆ ಮರುಳ್ಗೊಂಡಾಡುವ
ರಸಭಾವಾತ್ಮೆಯರ ನೂಪುರಂಗಳ ದನಿಯುಂ
ಕುಸುಮೋಪಹಾರದಳಿಗಳ
ರಸಿತಮುಮೊದವಿಸಿತು ಮದನಚಾಪಧ್ವನಿಯಂ ೨೨

ವ॥ ಅಂತಶೇಷ ಪುರಜನಾಂತಃಪುರಜನಪ್ರಮೋದಸಮುದ್ಗೀರ್ಣಘೂರ್ಣಿತಾರ್ಣವಕ್ಷೋಭ ಶೋಭಾವಳಂಬಿಯಾದ ತನ್ಮಹೋತ್ಸವದೊಳ್

ಕಂ॥ ಆಡುವರಂ ಕಂಡಾಡುವ
ಪಾಡುವರಂ ಕಂಡು ಪಾಡುವಂದಾನಂದ
ಕ್ರೀಡೆಗೆ ಮಘವನ ಬಗೆಯುಂ
ತೀಡಿದುದೇಂ ಪಿರಿದೊ ಜಿನನ ಪುಣ್ಯಾತಿಶಯಂ ೨೩

ವ॥ ಅಂತು ಜಗತ್ತ್ರಯಪವಿತ್ರಸುಕೃತ ಸೂತ್ರಧಾರನ ಮುಂದೆ ಸುತ್ರಾಮನುದ್ದಾಮ ಸಂಗೀತಕ ಪ್ರಸಂಗಮಂ ಮೆಱೆಯಲ್ ಮನಂದಂದು ತಮ್ಮ ಮೊಗಮಂ ನೋೞ್ಪುದುಂ ಕಲ್ಪಾಮರಮುಖರಿಗಳ್ ತಮಗವಸರಂಬಡೆದು ಸಂಕ್ರಮಿಸೆ

ಮ॥ ಸ್ವರವರ್ಣಶ್ರುತಿಮೂರ್ಛನಾಗತಿಯತಿಸ್ಥಾನಪ್ರಯೋಗಕ್ರಿಯಾ
ನಿರತಂ ತಾಳಲಯಾಶ್ರಯಪ್ರಣಯ ನಾನಾ ವೇಣುವೀಣಾನುಗಂ
ಸರಸಂ ಸಂಗತ ಮಾರ್ಗದೇಸಿಯೆನೆ ರಾಗಪ್ರೌಢಿಯಂ ಬೀಱ್ ಬಿ
ತ್ತರದಿಂ ಪಾಡಿದರೋಜೆಯಿಂ ಶ್ರುತಿಸುಖಶ್ರೀದಾಯಕರ್ ಗಾಯಕರ್ ೨೪

ಉ॥ ಇಂತಿದು ಕಾಮಕಾರ್ಮುಕಲತಾಗುಣದಿಂಚರಮೆಂಬ ಕಾಂತಿವೆ
ತ್ತಿಂತಿದು ವಿಶ್ವಲೋಕಜನಮೋಹನಮಂತ್ರನಿನಾದಮೆಂಬ ಮ
ತ್ತಿಂತಿದು ಕಾೞ್ಪುರಂಬರಿವ ಕರ್ಣರಸಾಯನಮೆಂಬ ನುಣ್ಪಿನಿಂ
ಪಿಂ ತಲೆತೂಗಿಸಿತ್ತು ರಸತುಷ್ಟನರಾಮರರೊಂದು ಗಾವರಂ ೨೫

ವ॥ ಅದಱೊಡನೆ

ಚಂ॥ ಬಹುಲಯಭೇದದೋಜೆ ಗತಿಭೇದದೊಡಂಬಡು ಚಾರಿ ಭೇದದು
ರ್ವಹಿತೆ ತಗುಳ್ದಳಂಕರಣಭೇದದಮರ್ಕೆ ನಿಮಿರ್ಕೆಯಿಂ ರಸಾ
ವಹಮನೆ ಕೆಯ್ಗೆ ನಾಲಗೆ ಕವಲ್ತವೊಲಾಗಿರೆ ಹೃದ್ಯವಾದ್ಯಮಂ
ಬಹಳಿಕೆವೆತ್ತು ಬಿತ್ತರಿಸಿ ಬಾಜಿಸಿದರ್ ದಿವಿಜೇಂದ್ರವಾದಕರ್ ೨೬

ಕಂ॥ ಕಂಕರಿಯ ಸಿವಿಱ ಪೆಂಪಿನ
ಝುಂಕಟ ಬೊಂಬುೞಿಯ ಪಟಿವದುಳಿಕೆಯ ಢಕ್ಕಾ
ಸಂಕುಳದ ತಾಳದುಲಿ ನೆಗ
ೞ್ದೀಂ ಕರ್ಣಾಮೃತಸಮುದ್ರಘೂರ್ಣನಮಾಯ್ತೋ ೨೭

ವ॥ ಅಂತು ವಸ್ತುಗೀತಂ ವಿಸ್ತರಿಸೆಯುಂ ನಿರವದ್ಯಂ ನಿರವದ್ಯವಾದ್ಯಂ ಚೋದ್ಯಮಾಗೆಯುಂ ರಾಗರಸರಂಜಿತಾಂತರಂಗನಾಗಿ

ನ್ಯಾವಸಾಷ್ಟಾಸಂ

ಮಾಲಿನಿ॥ ರಚಿತರುಚಿರನೇಪಥ್ಯಂ ಬೆಡಂಗಾಗೆ ಮಂತ್ರೋ
ಪಚಿತ ಬಲಿವಿಧಾನಂ ಪೂರ್ವರಂಗಪ್ರಸಂಗಂ
ರುಚಿರಮೆನಿಸೆ ನಾಂದೀಪೂಜೆಯಂ ಮಾಡಿ ಚೆಲ್ವಿಂ
ಶಚಿಪತಿ ಕೃತಸತ್ಪುಷ್ಪಾಂಜಲಿಕ್ಷೇಪನಾದಂ ೨೮

ವ॥ ಆಗಿ ರಂಗಂಬೊಕ್ಕು

ಕಂ॥ ಆಖಂಡಳಂ ಸಹಸ್ರಮ
ಯೂಖನ ತೆಱದಿಂ ಪ್ರಕೀರ್ಣಪಾದನ್ಯಾಸಂ
ವ್ಯಾಖಂಡಿತಮೆನಿಸಿದ ವೈ
ಶಾಖಸ್ಥಾನದೊಳಳುರ್ಕೆವೆತ್ತೆಸೆದಿರ್ದಂ ೨೯

ಕಟಿಸೂತ್ರಮೆಸೆದುದಿಂದ್ರನ
ಕಟಿತಟವಿನ್ಯಸ್ತಹಸ್ತನಖರುಚಿಯಿನದಂ
ತುಟೆ ಪುಣ್ಯಾತ್ಮಕರಾಶ್ರಯ
ಘಟನೆಯಿನೆಸೆದಿರ್ಕುಮಲ್ತೆ ಮಧ್ಯಸ್ಥಗುಣಂ ೩೦

ವ॥ ಆಗಳ್

ಕಂ॥ ದೇವೇಂದ್ರನಿಟಿಯಿಸಿದನು
ದ್ಭ್ರೂವಿಭ್ರಮವಿಕಚಕುಂಚಿತಾಲಸದೃಷ್ಟಿ
ಶ್ರೀವಿಭವದಿನೊಳ್ಗಾವಿನ
ಪೂವಿನ ಬಿರಿಮುಗುಳ ನೆಲೆಯ ನೆಯ್ದಿಲ್ಗೊಳನಂ ೩೧

ಭಾವಂಗಳ ವಿಭವಮನನು
ಭಾವಂಗಳ ತುಱುಗಲಂ ವಿಭಾವಂಗಳ ಸ
ದ್ಭಾವಮನಖಿಳರಸಂಗಳ
ಜೀವನಗಳಿವೆನಿಸಿ ಮೆಱೆದನಿಂದ್ರನತಂದ್ರಂ ೩೨

ಶತಮಖನ ಸಂಯುತಾಸಂ
ಯುತಂಗಳಱುವತ್ತುನಾಲ್ಕು ಹಸ್ತಂಗಳುಮಾ
ಯತಭುಜದೊಳೆಸೆಯೆ ಕುಣಿವ
ಲ್ಲಿ ತಳಿರ್ತುಮಡಲ್ತಶೋಕತರುವಂ ಪೋಲ್ತಂ ೩೩

ಉರಚಲ್ಲಿಯ ಕಟಿಚಲ್ಲಿಯ
ಕರಣದ ರೇಚಕದ ಕಣ್ಣ ಕಾಲ್ದುಱುಗಲ ಕಂ
ಧರವಳಯದ ಭುಜಚಳನದ
ಪರಿಣತಿಯಂ ನಾಟ್ಯವೇದಮೂರ್ತಿವೊಲೆಸೆದಂ ೩೪

ಮ। ಸ್ರ॥ ಜಿನಪೂಜಾನಂದಮಂದಾನಿಲನಲೆಪದಿನಂದಾಡುತಿರ್ಪೊಂದು ಸಂಕ್ರಂ
ದನ ಕಲ್ಪೋರ್ವೀಜದೊಳ್ ರಾಜಿಸಿದುದು ವಿಲಸದ್ಬಾಹುಸಂದೋಹಶಾಖಾ
ವನನಂ ಪಾಣಿಪ್ರವಾಳಪ್ರಚಯವಿಚಳನಂ ಸ್ಪಷ್ಟದೃಷ್ಟಿಪ್ರಭಾಪು
ಷ್ಪನಿಕಾಯೋಲ್ಲಾಸಮುದ್ಯನ್ಮಕುಟಮಣಿಫಳಾತುಚ್ಛಗುಚ್ಛಪ್ರಕಂಪಂ ೩೫

ಮ॥ ಪದವಿನ್ಯಾಸದಿನೆಯ್ದೆ ಕಂಪಿಸೆ ಮಹೀಚಕ್ರಂ ಮಹೀಚಕ್ರಭಾ
ರದಿನದ್ರಿವ್ರಜಮದ್ರಿಸಂಚಳನದಿಂ ದಿಗ್ದಂತಿ ದಿಗ್ದಂತಿ ಜೋ
ಲ್ದುದಜೆಂ ವಾಸುಗಿ ವಾಸುಗಿಕ್ಷುಭಿತದಿಂದಾ ಕೂರ್ಮನಾ ಕೂರ್ಮಕಂ
ಪದಿನಂಭೋಧಿ ಕಲಂಕಿದತ್ತೆನಿಸಿತೇನುಚ್ಚಂಡಮೋ ತಾಂಡವಂ ೩೬

ವ॥ ಅಂತುಮಲ್ಲದೆಯುಂ

ಮ॥ ವಿಭುಲೋಕಂ ವಿಹಟತ್ಕಿರೀಟಹತಿಯಿಂದತ್ತತ್ತ ದಿಗ್ಭಿತ್ತಿ ಭೂ
ರಿಭುಜಾದಂಡಸಹಸ್ರಸಂವಳನದಿಂದತ್ತತ್ತ ಭೂಭಾಗಮಂ
ತ್ರಿಭವಸ್ಫೀತನಿಘಾತದಿಂ ತಳರ್ದುದತ್ತತ್ತೆಂಬಿನಂ ರಂಜಿಪಾ
ರಭಟೀವೃತ್ತಿಯೊಳುದ್ಧತಾಭಿನಯದಿಂ ಕಣ್ಗೊಂಡನಾಖಂಡಳಂ ೩೭

ಕಂ॥ ದ್ವಿಗುಣಿಸಿದುವು ಶಕ್ರನ ನಿಮಿ
ರ್ದೊಗೆವ ಭುಜಂಗಳ ನಖಂಗಳಿಂ ಭಗಣಂಗಳ್
ನೆಗೆದ ನವಗ್ರಹಕಂಕಣ
ದ ಗಭಸ್ತಿಗಳಿಂ ನವಗ್ರಹಂಗಳ ರುಚಿಗಳ್ ೩೮

ವ॥ ಅಂತು ನರ್ತಿಸುತ್ತವಂತಂತೆ ಪರಮಹರ್ಷ ಪ್ರಕರ್ಷ ಪ್ರಮತ್ತಚಿತ್ತನಾವಿರ್ಭೂತ ವೈಕುರ್ವಣಾಕರಣನಾಗಿ

ಕಂ॥ ಎಮೆಯಿಕ್ಕುವನಿತುಬೇಗ
ಕ್ಕೆ ಮರುತ್ಪಥದೊಳ್ ದಿಗಂತದೊಳ್ ನೆಲದೊಳ್ ತೋ
ರ್ಪಮರೇಂದ್ರನೊಂದೆ ರೂಪಿಂ
ದಮೆ ತನ್ಮಯಮಾಯ್ತು ಜಗದ ಸಚರಾಚರಮುಂ ೩೯

ವಸುಧಾಗಗನಸ್ಥತೆ ದೂ
ರಸಮಿಾಪತೆ ಸೂಕ್ಷ್ಮಗುರುತೆ ಶಾಂತೋಗ್ರತೆ ನೀ
ಚಸಮುಚ್ಚತೆ ಯುವತರುಣತೆ
ಪಸರಿಸಿತೇಂ ಪಿರಿದೊ ಶಕ್ರವಿಕ್ರಿಯೆಯೆಸಕಂ ೪೦

ಭ್ರಮೆಗೊಂಡು ಸುಕೇಶಿ ತಿಲೋ
ತ್ತಮೆ ಮೇನಕಿ ಮಂಜುಘೋಷೆಯೂರ್ವಶಿಯೆಂಬೀ
ಪ್ರಮದೆಯರಮದೆಯರಾದರ್
ತಮಗಿಂದ್ರನ ನಾಟ್ಯಮಿಾಯೆ ಹೃತ್ಕೌತುಕಮಂ ೪೧

ಬಳರಿಪುವ ನಾಟ್ಯರಸದೊಳೆ
ಬಳೆದೆಳಲತೆಗಳವೊಲೊಡನೆ ಕುಣಿವಮರ ನಟೀ
ಕುಳಮೆಸೆದುದಳಿಗಳಳಕಂ
ತಳಿರ್ಗಳ್ ತಳಮಲರ್ಗಳಕ್ಷಿಯೆನೆ ಜಿನಸಭೆಯೊಳ್ ೪೨

ಗೊಂದಣವೆಕ್ಕಣದಮರೀ
ವೃಂದಗಳ ಬಿಳಿಯ ನಿಡಿಯ ಕಣ್ಗಳ ಬೆಳ್ಪುಂ
ಕೆಂದಳದ ಕೆಂಪುಮಾಂತುವು
ಚಂದನಸಿಂಧೂರರಸದ ಪೊಸಕಾಬ್ಬುರಮಂ ೪೩

ಶತಮುಖನುಮಮರಿಯರುಮಾ
ಡೆ ತಗುಳ್ದಾರಭಟಿಯಿಂದೆ ಕೈಶಿಕೆಯಿಂದು
ದ್ಧತಮೆನಿಪ ಲಲಿತಮೆನಿಪಭಿ
ನುತ ತಾಂಡವಲಾಸ್ಯವೊಡನೆ ತೋಱಿದುವೆರಡುಂ ೪೪

ನಿಜದಿಂ ಪುಳೋಮಬಳಪಾ
ಕಜಂಭನಮುಚಿಗಳನಲೆದ ಜಿಷ್ಣುವ ಪಲರುಂ
ವಿಜಯಶ್ರೀದೇವಿಗಳೆನೆ
ಭುಜಕೋಟಿಯೊಳಿರ್ದು ಕುಣಿದರಮರಿಯರರೆಬರ್ ೪೫

ರೋಚಿಸೆ ನಾನಾರಸ ಭಾ
ವೋಚಿತಕರಣಾಂಗಹಾರವಿಧವಲ್ಲಿ ಕೆಲರ್
ಸೂಚಿಸೆ ನಾಟ್ಯಮನಾಡಿದ
ರಾ ಚತುರಾಮರಿಯರರೆಬರಿಂದ್ರನ ನಖದೊಳ್ ೪೬

ವ॥ ಮತ್ತಂ

ಕಂ॥ ಕೆಲವೞಿೊಳಮರಕುಮಾರರ್
ಕೆಲವೞಿೊಳಚ್ಚರಸಿಯರ್ಕಳಾಡೆ ಭುಜಾಸಂ
ಕುಲದೊಳ್ ಪುಂಸ್ತ್ರೀಜನಮಯ
ಫಲಪನಸಮಿದೊಂದಪೂರ್ವಮೆನಿಸಿದನಿಂದ್ರಂ ೪೭

ವ॥ ಅಂತುಮಲ್ಲದೆಯುಂ

ಮ॥ ಅಳಿಯಿಂ ಶಕ್ರನ ವಿಕ್ರಮಾಂಗದ ಪದಪ್ರಾಗ್ಭಾಗದೊಳ್ ಜಾನುಮಂ
ಡಳದೊಳ್ ಸಿಂಹಕಟೀಪ್ರದೇಶದೊಳುರೋವಿಸ್ತಾರದೊಳ್ ಬಾಹುಸಮ
ಕುಳದೊಳ್ ಕೆಂದಳದೊಳ್ ಕರಾಂಗುಲಿಗಳೊಳ್ ನಿಂದಾಡೆ ದೇವಾಂಗನಾ
ಕುಳಮುಂ ಸ್ತ್ರೀಮಯಮಾಗಿಸಿತ್ತೊ ಮಹಿದಿಗ್ಬ್ರಹ್ಮಾಂಡಮಂ ತಾಂಡವಂ ೪೮

ಉ॥ ಆಡುವ ನಾಕನಾಯಕನ ಬಾಹುಸಮೂಹದ ಮೇಲೆ ಲೀಲೆವೆ
ತ್ತಾಡುವ ದೇವಕನ್ನೆಯರ ಭೂಷಣರಶ್ಮಿ ಕಟಾಕ್ಷಕಾಂತಿ ಕೈ
ಗೂಡಿದ ದೇಹದೀಪ್ತಿ ನಭಮಂ ಬಳಸುತ್ತಿರೆ ಲೋಕಮೆಲ್ಲಮೋ
ಲಾಡುವ ಮಾೞ್ಕೆಯಾಯ್ತು ನವನಾಟ್ಯರಸಾಮೃತಸಾರಪೂರದೊಳ್ ೪೯

ವ॥ ಅಂತು

ಮ॥ ಪ್ರ॥ ಜನಹರ್ಷೋದಾರಕೇದಾರದ ಶಶಿಗೆ ಸುಧಾಸಾರಮಂ ಸೂಸೆ ದೇವೀ
ಜನಗೇಯಂ ಗೇಯಮಂ ನೋಯಿಸಿದನುನಯದಿಂ ಪೊಣ್ಮೆ ನಾನಾಲಯಾಲಂ
ಬನವಾದ್ಯಂ ವಾದ್ಯಮಂ ಹೃದ್ಯಮನನುಗತಮಂ ಮಾಡೆ ಗೀರ್ವಾಣವಾಕ್ಯಾ
ಭಿನುತ ಶ್ರೀಲಾಸ್ಯಮಂ ಲಾಸ್ಯದೊಳಮರ್ದೆಸೆದತ್ತಿಂದ್ರನಾನಂದನೃತ್ಯಂ ೫೦

ವ॥ ಅಂತು

ಮ॥ ರಸಿಕರ್ ಬಣ್ಣಿಪೆ ಭಾವಕರ್ ಪೊಗೞೆ ಜಾಯಾಜೀವಿಗಳ್ ಕೂರ್ತು ಕೀ
ರ್ತಿಸೆ ತಜ್ಞರ್ ತಲೆದೂಗೆ ದೇವಸಭೆ ಸಂತೋಷಕ್ಕೆ ಪಕ್ಕಾಗೆ ತ
ದ್ವಸುಧೇಶಂ ಬೆಱಗಾಗೆ ಮಚ್ಚಿ ಮೆಚ್ಚಿದಂ ಮಿಕ್ಕಿಂತು ಸಂಕ್ರಂದನಂ
ರಸಭಾವಾಂಗಿಕ ವಾಚಿಕಾಭಿನಯ ಲೀಲೋತ್ಪಾಟ್ಯಮಂ ನಾಟ್ಯಮಂ ೫೧

ಕಂ॥ ಮಚ್ಚುಮುಳಿಸಿಲ್ಲದಭವಂ
ಮಚ್ಚುವುದದು ಕೂಡದೆನಗೆ ನಟವೃತ್ತಿ ಕರಂ

ತುಚ್ಚತನವೆನ್ನದಾಡಿದ
ನಚ್ಚರಿಯೆನೆ ವಜ್ರಿ ಭಕ್ತಿವಶರೇಗೆಯ್ಯರ್ ೫೨

ವ॥ ಅಂತು ನರ್ತಿಸಿದ ನರ್ತನದನಂತರಮನಂತ ಮಂಗಳೋಪಕರಣಪರಿಚಿತಮಾಗೆ ನಾಮಕರಣಕಲ್ಯಾಣದೊಸಗೆಯುಮನಸದಳಂ ಮಾಡಿ

ಕಂ॥ ಪ್ರವಿತತ ಪುಣ್ಯೋದಯದಿಂ
ಭುವನಸ್ತುತಸುಕೃತಿಯೆನಿಪ ಕುವಳಯಕಮಳೋ
ತ್ಸವಕರನೆನಿಪೀ ಸ್ವಾಮಿಗೆ
ಸುವಿಧಿವೆಸರ್ ಪುಷ್ಪದಂತವೆಸರನ್ವರ್ಥಂ ೫೩

ವ॥ ಎಂದು ಪೆಸರನಿಟ್ಟು

ಕಂ॥ ಗೋತ್ರಾರಿ ಬೆಸಸೆ ನೆಗೞ್ದಿಪ
ಗೋತ್ರಾರಿಯ ಶೈಶವೋಚಿತಕ್ರಿಯೆಗೆಲ್ಲಂ
ಧಾತ್ರೀಜನಮಾಗಿಸಿದಂ
ಧಾತ್ರೀಜನಚಾರುಚತುರದೇವೀಜನಮಂ ೫೪

ವ॥ ಮತ್ತಂ

ಕಂ॥ ಓರಗೆಗಳಪ್ಪ ಬಹುವ್ರಂ
ದಾರಕದಾರಕರನಂದು ಸಹಪಾಂಸುಕ್ರೀ
ಡಾರಸದೊಳ್‌ಸಮುಚಿತಸೇ
ವಾರತಿಯೊಳ್ ನೆಱೆದು ನೆಗೞ್ಚಿ ನಿರವಿಸಿ ಮತ್ತಂ ೫೫

ಸೆಜ್ಜೆವಳರ್ ಬಾಣಸಿಗರ್
ಮಜ್ಜನವಳರಣಿಗರಂಗರಕ್ಷಕರಾಗಿ
ಪುರ್ಜಜ್ಜುಗಕಮರರ ಗಣಮನೆ
ಪಜ್ಜತಿಯಿಂದಿರಿಸಿ ಶತಮಖಂ ಕೃತಕೃತ್ಯಂ ೫೬

ಹರಿಣೀ॥ ಪರಮಗುರುವಂ ಬೀೞ್ಕೊಂಡಿಂದ್ರರ್ಕಳಂ ಗೆಡೆಗೊಂಡು ಸೌಂ
ದರಿಯನೊಡಗೊಂಡೆಡ್ಡಂ ಕೈಕೊಂಡು ನಾಕದ ಬಟ್ಟೆಗೊಂ
ಡಿರದೆ ನಡೆಗೊಂಡಾರೂಢೈರಾವತದ್ವಿಪನೆಯ್ದಿದಂ
ತ್ವರಿತಗತಿಯಿಂ ಶ್ರೇಯಶ್ರೀತಲ್ಪಮಂ ನಿಜಕಲ್ಪಮಂ ೫೭

ವ॥ ಅಂತಿಂದ್ರನಿಂದ್ರಲೋಕಕ್ಕೆ ಪೋಪುದುಮಿತ್ತಲ್

ಚಂ॥ ಭುವನದ ಪಾಪತಾಪಮಗಿಯಲ್ ಮುಗಿಯಲ್ ಕರಕಂಜಪುಂಜಮೊ
ಪ್ಪುವ ವೃಷವಾರ್ಧಿ ವೃದ್ಧಿವಡೆಯಲ್ ಸೆಡೆಯಲ್ ದುರಿತಾಂಧಕಾರ ಗೌ
ರವಮಿರೆ ತನ್ನ ಶೈಶವಗುಣೋದ್ಗಮದಿಂ ಕ್ರಮದಿಂದಮೇೞ್ಗೆವಾ
ಡಿವದೆಳದಿಂಗಳಂತೆ ಬಳೆದಂ ತಳೆದೊಂದೊದವಂ ಜಿನಾರ್ಭಕಂ ೫೮

ಕಂ॥ ಸಂಕ್ರಂದನನಿಹಿತ ಸುಧಾ
ಸಂಕ್ರಮಣಮನಾತ್ಮಹಸ್ತ ಮಧ್ಯಾಂಗುಳಿಯಂ
ತಾಂ ಕ್ರಮದೆ ಪೀರುತಂ ತಣಿ
ದಂ ಕ್ರೀಡಾಮುದಿತಜನಕನನೀ ಹೃದಯಂ ೫೯

ಕೆಂದಾವರೆಯೆಳವಳ್ಳಿಯ
ಗೊಂದಣದೊಳ್ ಸುೞಿವ ಹಂಸಬಾಲಕನವೊಲಾ
ನಂದದೆ ತಮತಮಗೆತ್ತುವ
ಕೆಂದಳದಮರಿಯರ ತೋಳ ತುಱುಗಲೊಳೆಸೆದಂ ೬೦

ಪರೆದಿರೆ ಕಜ್ಜಳದಳಕಂ
ತರುಣನ ಮೊಗಮುದಿತವಿದಿತಲಾಂಛನಶಶಿಯೊಳ್
ದೊರೆಯಾಗಿ ಮೆಱೆದು ಗೆಲ್ದ
ತ್ತುರುಚಳದಳಿಮಿಳಿತದಳಿತ ಲಳಿತಾಂಬುಜಮಂ ೬೧

ಬಗೆಯೆ ಮಧುಪ ಪ್ರಶಸ್ತಂ
ನೆಗೞ್ದಱಿಡಿದಾಣಮಬ್ಜಮೆನಗಡಱುವುದೇ
ಕೆ ಗಡೆಂದು ನಗುವ ತೆಱದಿಂ
ಸೊಗಯಿಸಿತನಿಮಿತ್ತ ಹಸಿತಲಸಿತಮುಖಾಬ್ಜಂ ೬೨

ಅತಿಸೇವ್ಯದಿವ್ಯಭಾಷಾ
ಲತೆಗಗೆವೊಯ್ದರ್ಥಬೀಜದೆಳಮೊಳೆಯಂತೇಂ
ಸ್ಮಿತರಸದೊಳೆಸೆವ ಪನೆಗಳ್
ಜಿತಮದನನ ವದನದೊಳ್ ಮನಂಗೊಳಿಸಿದುವೋ ೬೩

ಪದಪಿನ ದಾದಿಯರ ಮನ
ಕ್ಕಿದಿಷ್ಟಮೆನೆ ಮುದ್ದುನುಡಿಯನಿನಿಸೆಸಗಿದನಂ
ತದು ತಕ್ಕುದೆ ಧಾತ್ರೀಜನ
ಹೃದಯಪ್ರಿಯ ಹಿತಮಿತೋಕ್ತಿ ಜಿನಪತಿಗೆರವೇ ೬೪

ಅನುಪಾಂಶುಕೇಳಿ ಸದ್ಗುರು
ಜನಕ್ಕೆ ಸಂತಸಮನೀವುದೆಂದಱಿಪುವವೋ
ಲನುಪಾಂಶು ಕೇಳಿ ಸದ್ಗುರು
ಜನಕ್ಕೆ ಸಂತಸಮನೀಯೆ ಬಾಳಕನೆಸೆದಂ ೬೫

ಅಳರೆಲೆಗಳಲುಗೆ ಮಾಂಗಾಯ್
ಚಳಿಯಿಸೆ ಕಿಂಕಿಣಿಗಳುಳಿಯೆ ಶಿಶು ನಡೆಗಲ್ವಂ
ದಿಳಿಸಿದನೆಳದಳಿರುಚ್ಚಳಿ
ಪೆಳಮಿಡಿ ತೊನೆವಳಿಗಳುಲಿವ ನವಸುರತರುವಂ ೬೬

ಮೆಟ್ಟಿದೊಡಕ್ಕುಂ ತ್ರಸಸಮ
ಘಟ್ಟನಮೆಂದೋವುವಂತೆ ಮೆಲ್ಮೆಲನನಘಂ
ದಟ್ಟಡಿಯಿಡೆ ಪದನಖರುಚಿ
ಕುಟ್ಟಿಮದೊಳ್ ನಿಮಿರ್ದುವೊಡನೆ ಪಡಿಲೇಖಿಪವೋಲ್ ೬೭

ವ॥ ಅಂತಗಣ್ಯಪುಣ್ಯವಲ್ಲರೀಜಾಲಕನೆನಿಪ್ಪ ಬಾಲಕಂ ವಿವಿಧ ಮುಗ್ಧಭಾವ ಪಾಲ್ಯಮಂ ಬಾಲ್ಯಮಂ ಪಿಂಗಿಸಿ ಕುಮಾರಕಾಲದೊಳ್

ಮ॥ ಸಮಸಂದೋದದೆ ಸರ್ವಶಾಸ್ತ್ರವಿದನಾದಂ ಬಲ್ಲರೊಳ್ ಕಲ್ಲದೆ
ಲ್ಲಮನಕ್ಷೂಣ ಕಳಾವಳೀ ಕುಶಲನಾದಂ ಪುಷ್ಪದಂತಂ ಭವೋ
ತ್ತಮಸಂಸಾರನದಾವ ಚೋದ್ಯಮಲರ್ಗೊಳ್ಗಂಪುಂ ಶಶಾಂಕಂಗೆ ಶೈ
ತ್ಯಮುಮುಷ್ಣಾಂಶುಗೆ ತೇಜಮುಂ ನಿಜಮವಂ ಮತ್ತೊರ್ವರಾರ್ ಮಾಡಿದರ್ ೬೮

ಸಕಳ ವ್ಯಾಕರಣಾರ್ಥಶಾಸ್ತ್ರ ಗಣಿತಾಲೇಖ್ಯ ಕ್ರಿಯಾಕಾವ್ಯ ನಾ
ಟಕ ನಾಟ್ಯಾಗಮ ವಾಸ್ತು ವೈದ್ಯ ಗಜ ವಾಹಾರೋಹ ಸಾಮುದ್ರ ಚಿ
ತ್ರಕಳಾನೀತಿನಿಮಿತ್ತ ಶಾಸ್ತ್ರಶಕುನಾದಿಪ್ರೌಢಿಯೊಳ್ ರೂಢಿಯಾ
ಯ್ತು ಕುಮಾರಂಗೆ ಮತಿಶ್ರುತಾವಧಿ ವಿಬೋಧಾತ್ಮಂಗಿದಾಶ್ಚರ್ಯಮೇ ೬೯

ವ॥ ಅಂತು ಸಕಳ ವಿದ್ಯಾವಿಳಾಸಭವನನಾಗೆ

ಚಂ॥ ಸುವಿಧಿಕುಮಾರನಂ ಸುರಕುಮಾರಕರಚ್ಚರಿಯಾಗೆ ಮೆಚ್ಚಿಮು
ತ್ತವದೊಳೆ ಮಲ್ಲ ಮೇಷ ಮಹಿಷ ದ್ವಿಪ ಲಾವಕರೂಪರಾಗಿ ಸಂ
ಭವಿಸಿದ ವಿಕ್ರಿಯಾವಿಭವದಿಂದೆ ವಿಗುರ್ವಿಸಿ ಬಂದು ಪೋರ್ವ ತಾ
ಗುವ ತಲೆಯಿಕ್ಕುವಾಂತಿಜಿವ ಕಾದುವ ದಂದುಗದಿಂದಮೊಪ್ಪಿದರ್ ೭೦

ಚಂ॥ ಅರಗಿಳಿಯಾಗಿ ಮಂಗಳಮನೋದುವ ತುಂಬಿಯ ಬಂಬಲಾಗಿ ಗಾ
ವರಿಸುವ ಗಂಡುಗೋಗಿಲೆಗಳಾಗಿ ಗೃಹಪ್ರತಿಹಾರವೃತ್ತಿ ಮಿ
ಕ್ಕಿರೆ ಪುಗಲೆಂಬ ಸೋಗೆನವಿಲಾಗಿ ವಿನರ್ತಿಸುವಂಚೆಯಾಗಿ ಸಂ
ಚರಿಪ ವಿಳಾಸಮಂ ಮೆಱೆವ ದೇವರೊಱಲ್ದಿದರಿಂದ್ರವಂದ್ಯನಂ ೭೧

ವ॥ ಮತ್ತಂ

ಕಂ॥ ಬಹುವಿಧವಾಹನರೂಪದಿ
ನಹಮಿಕೆಯಂ ಬಿಟ್ಟು ರಮ್ಯಮಪ್ಪೆಡೆಗಳೊಳಾ
ಗ್ರಹದಿಂದೊಯ್ದೊಯ್ದರೆಬರ್
ವಿಹಿತ ವಿನೋದಕ್ಕೆ ಪಕ್ಕುಮಾಡಿದರಮರರ್ ೭೨

ಚಂ॥ ಸಮದ ಮಯೂರಮಾಕ್ರಮಿಪ ಪೆರ್ಬುಲಿಯಾಕ್ರಮಿಪುಗ್ರಸಿಂಹಮಾ
ಕ್ರಮಿಪಹಿರೂಪದಿಂದೆ ಹರಿಣಾಕೃತಿಯಿಂದಿಭಮೂರ್ತಿಯಿಂದೆ ಸಂ
ಭ್ರಮಿಸೆ ಶರಣ್ಗೆವಂದ ವಿಕೃತಾಮರರಂ ಪರಿರಕ್ಷೆಗೆಯ್ದಿತು
ತ್ತಮ ಕರುಣಾರಸಂ ವನವಿಹಾರವಿನೋದದೊಳಿಂದ್ರವಂದ್ಯನಾ ೭೩

ವ॥ ಅದಲ್ಲದೆಯುಂ

ಕಂ॥ ಓರಂತೆ ಮಜ್ಜನಂಬುಗ
ಲಾರೋಗಿಸಲುಡೆ ತುಡಲ್ ತುಱುಂಬಲ್ ಪೂಸಲ್
ಸಾರಿರ್ದನುವಿಪ ಸುರವ್ರಂ
ದಾರಕರಿಂ ಸಂದು ವಂದು ನಿತ್ಯಕ್ರಿಯೆಗಳ್ ೭೪

ಮ॥ ಅಮೃತಾಹಾರಮನುಂಡು ದಿವ್ಯ ಸುರಭಿದ್ರವ್ಯಂಗಳಂ ಪೂಸಿ ಕ
ಲ್ಪಮಹೀಜಂಗಳ ಮಾಲೆವೂವನವತಂಸಂ ಮಾಡಿ ದೇವಾಂಗವ
ಸ್ತ್ರಮನುಟ್ಟಗ್ಗದ ಸಗ್ಗದಾಭರಣಮಂ ತೊಟ್ಟಿಂತು ನಿಚ್ಚಂ ಶಚೀ
ರಮಣಪ್ರಾಪಿತವಸ್ತುವಿಂ ಸಲಿಸಿದಂ ಭೋಗೋಪಭೋಗಂಗಳಂ ೭೫

ವ॥ ಅಂತು ಸಮುಚಿತಕ್ರಿಯಾನಿಯೋಗದೊಳ್ ನಿಳಿಂಪನಿಕರಮೋಲೈಸೆ ನಿರಂತರೋಪಚಯದಿಂದಮಂತಂತೆ ಸಂಪೂರ್ಣನಾಗಿ

ಕಂ॥ ಅಮಳತೆಯನಂತವೀರ್ಯತೆ
ಸಮಚತುರಸ್ರಪ್ರಶಸ್ತಸಂಸ್ಥಾನತೆಯು
ತ್ತಮ ವಜ್ರವೃಷಭ ನಾರಾ
ಚ ಮಹಾಸಂಹನನ ದೃಢತೆ ಸೌಮ್ಯತೆ ಮತ್ತಂ ೭೬

ಸುಸ್ವಾದು ಧವಳರುಚಿರತೆ
ನಿಸ್ವೇದೋದ್ಗಮತೆ ಸುರಭಿಗಂಧತೆ ಗಂಭೀ
ರಸ್ವರತೆ ಸುಲಕ್ಷಣತೆ ವಿ
ಭಾಸ್ವರಮೀ ದಶವಿಧಸ್ವಭಾವಾತಿಶಯಂ ೭೭

ಸ್ಫುರಿಯಿಸೆ ತನ್ನೊಳ್ ಪರಮನ
ಪರಮೌದಾರಿಕಶರೀರಮೊಪ್ಪಿದುದು ಸುಧಾ
ಪರಿಪಾಂಡುವರ್ಣದಿಂ ಸುರ
ನರನಯನಚಕೋರಚಂದ್ರಬಿಂಬಮಳುಂಬಂ ೭೮

ವ॥ ಅಲ್ಲಿ ತಿಲಮಸೂರಿಕಾಪ್ರಮುಖನವಶತವ್ಯಂಜನಂಗಳೊಳ್ ಕೂಡಿ

ಕಂ॥ ಶ್ರೀವೃಕ್ಷಸ್ವಸ್ತಿಕ ನಂ
ದ್ಯಾವರ್ತಚ್ಛತ್ರ ಚಾಮರಾದ್ಯಂ ನೂಱೆಂ
ಟಾವರಿಸೆ ಸೊಗಯಿಸಿರ್ದುವು
ದೇವನ ಲಕ್ಷಣಮವಿಂತು ಸಾಷ್ಟಸಹಸ್ರಂ ೭೯

ವ॥ ಮತ್ತಂ

ಉತ್ಸಾಹ॥ ಶೀತ ವಾತ ವಿದ್ಯುದಾತಪಾಗ್ನಿ ಕಾಷ್ಠ ಕಂಟಕ
ವ್ರಾತ ಖಗ ಮೃಗೋರಗೋಪಳಾಭಿಘಾತ ಶಸ್ತ್ರಸಂ
ಘಾತ ಗರಳ ವನಚರಾದಿಬಾಧೆ ಪೊರ್ದವೆಂಬ ವಿ
ಖ್ಯಾತಿವೆತ್ತು ಪರಮಚರಮದೇಹಮಸೆದುದಸದಳಂ ೮೦

ವ॥ ಅಂತಷ್ಟೋತ್ತರಸಹಸ್ರಲಕ್ಷಣ್ಯೈಕಪೂರ್ಣಮುಂ ಕುಂದೇಂದುದಾಮಧವಳ ವರ್ಣಮುಂ ಶತಶರಾಸನೋತ್ಸೇಧಪರಿಮಾಣಮುಂ ದ್ವಿಲಕ್ಷಪೂರ್ವಪರಮಾಯುಃಪ್ರಮಾಣಮುಂ ನಿರಂತರಸುಖಾನುಭವಜನ್ಮಭೂಮಿಯುಂ ನಿಸರ್ಗಮಹಿಮಾತಿಶಯಗುಣಾನುಗಾಮಿಯುಮೆನಿಪ್ಪ ಮೂರ್ತಿಯಿಂ ಸ್ಫೂರ್ತಿವಡೆದಿರ್ಪಲ್ಲಿ

ಮ॥ ಎಳೆಮಾವಂ ಪೊಸಸುಗ್ಗಿ ಸುಗ್ಗಿಯಿರುಳಂ ಶೀತಾಂಶು ಶೀತಾಂಶುಮಂ
ಡಳಮಂ ಚಂದ್ರಿಕೆ ಚಂದ್ರಿಕೋಜ್ಜ್ವಳಿತ ದುಗ್ಧಾಂಭೋಧಿಯಂ ಫೇನಮಂ
ಡಳಿ ಚೆಲ್ವಿಂಗೆಡೆಮಾಡುವಂತಿರೆಡೆಮಾಡಿತ್ತಂಗನಾಲೋಚನೋ
ತ್ಪಳಮಾಲಾರ್ಚಿತಸಂ ಕುಮಾರನ ಜಗತ್ಸೇವ್ಯಾಂಗಮಂ ಜವ್ವನಂ ೮೧

ಸ್ಮರಸಂತಾಪಮನುಂತೆ ಮಾಡಿದೆಳೆವೆಂಡಿರ್ಗಿತ್ತನಂತಾಗುಣಾ
ಭರಣಂ ತಾಂ ಬಸವಾದುದಿಲ್ಲವರ ಸೌಂದರ್ಯಕ್ಕಿದಾಶ್ಚರ್ಯಮ
ಲ್ತರುಣಾಶ್ಮಂ ನಿಜರಶ್ಮಿಯಿಂ ಸ್ಫಟಿಕಮಂ ರಾಗಾತ್ಮಕಂ ಮಾಳ್ಕುಮಾ
ಸ್ಫುರಿತಾಸ್ಫಾಟಕದೀಪ್ತಿ ಶೋಣಮಣಿಯಂ ಪಾಂಡೂಕೃತಂ ಮಾಳ್ಕುಮೇ ೮೨

ಹರಣೀ ॥ ಕಟಿಲನಳಲಂ ಬಾಡಂ ಕೋಡಂ ಹಿಮಾತಪಬಾಧೆಯಿಂ
ಬಟಿಲನೆಳಲಂ ನೋಯಂ ಬೇಯಂ ಮನೋಜಶರಾಗ್ನಿಯಿಂ
ಕುಱಿಯನಱಿಯಂ ಕಂದಂ ಕುಂದಂ ಕ್ಷುಧಾತಿ ತೃಷ್ಣಾರ್ತಿಯಿಂ
ದುಱಿದ ಜನನಜ್ವಾಲಾಮಾಳಾಪ್ರತಪ್ತರವೋಲ್ ಜಿನಂ ೮೩

ವ॥ ಮತ್ತಂ

ಕಂ॥ ಆಗುಳಿಸುವ ತಳಮಳಿಸುವ
ಜೋಗಂಬೋಪಲಸುವಗಿವ ತೂಂಕಡಿಸುವ ಬಿ
ಳ್ತಾಗುವ ಬಿಕ್ಕುವ ತೇಂಕುವ
ತೇಗುವ ಕಂಟಳಿಸುವಖಿಳ ವಿಕೃತಿಗೆ ಸಲ್ಲಂ ೮೪

ವಂದಿಪ ನಿಂದಿಪ ಮೋಹಿಪ
ಸಂದೇಹಿಪ ಮುಸಿವ ಕುಸಿವ ಬೆಸೆವೊಸೆವ ಮನಂ
ಗುಂದುವ ಮಲೆವಲೆವೊಂದುಂ
ದಂದುಗದೊಳಗೆಸಗನೆಲ್ಲಿಯುಂ ಮುನಿಮಾರ್ಗಂ ೮೫

ವ॥ ಅಂತು

ಉ॥ ಆವಂಗೀ ಜಿತಮೋಹವೀ ಜಿನನಜೇಯಂ ಸಲ್ಲದಿನ್ನಿಲ್ಲಿ ವೈ
ರಾವಷ್ಟಂಭವಿಡಂಬವೆಂದತನು ದೇವಂಗಳ್ಕಿ ತದ್ರೂಪವೀ
ಕ್ಷಾವಿಭ್ರಾಂತೆಯರಪ್ಪ ಕಾಂತೆಯರನೆಚ್ಚಾವಿಷ್ಕೃತಂ ಮಾಡಿದಂ
ದೇವಂಗಾಜಿದೆ ಧರ್ಮಿಯಂ ಬಡಿದರೆಂಬೀ ಸಂದ ನಾಟ್ಳಾದೆಯಂ ೮೬

ವ॥ ಅಂತುಮಲ್ಲದೆಯುಂ

ಕಂ॥ ಅಸವಸದಿನಬಲೆಯರನೆ
ಚ್ಚಿಸನೆ ಕುಮಾರನನಿದೇನೋ ಮಾರನ ಬಗೆ ಭಾ
ವಿಸಿದೆಂ ಬಡವಂ ಬಡಿವಂ
ಜಸಮಂಬಲಿಗೆತ್ತನೆಂದನಕ್ಕುಂ ಭ್ರಾಂತಂ ೮೭

ಉ॥ ಕಾತರನನ್ಯದೇವರವೊಲಱ್ಕುಗುವೀ ಜಿನನೆಂದು ಬಂದು ಪೃ
ಜ್ಞಾತನಿದಿರ್ಚಿ ಸೋಲ್ತು ಮಕರಧ್ವಜಮಂ ಬಿಸುಟೋಡಿ ಪೋಗೆ ವಿ
ಖ್ಯಾತಿಯ ಪುಷ್ಪದಂತನದನಿಳ್ಕಿಜಿಗೊಂಡುದನಾವ ಪೇಱದಂ
ದೇತೊದಳೆಂಜಿನಂ ಮಕರಲಾಂಛನನಾದುದು ತಾನೆ ಪೇಱದೇ ೮೮

ವ॥ ಎನೆ ಜನಮನೋಹಾರಿಯಾದ ಮೋಹಾರಿಯ ನವಯವ್ವನವಿಳಾಸಾವಳಂಬನಮುಮಂ ನಿಸರ್ಗನಿಃಕಾಂಕ್ಷತಾಲಂಬನಮುಮಂ ಕಂಡು ಸುಗ್ರೀವಮಹಾರಾಜನೊಂದುದಿವಸಮಾತ್ಮವಲ್ಲಭೆಯ ವದನಾರವಿಂದಮಂ ನೋಡಿ

ಮ॥ ಜಯಮಂ ಕಂತುಗೆ ಮಾಣ್ಬ ಜವ್ವನದೊಳಂ ವೈರಾಗ್ಯಮುದ್ದೀಪನ
ಕ್ರಿಯೆ ತಾನಾಗಿರೆ ಕಾಮಭೋಗಸುಖಮೆಂಬಾಳಾನದೊಳ್ ನಿಲ್ಲದೊ
ಟ್ಟಯಿಪೀ ಪುತ್ರನ ಚಿತ್ತಮತ್ತಗಜಮಂ ಸೀಮಂತಿನೀಶೃಂಖಳಾ
ನಿಯತಂ ಮಾಡಿವುಪಾಯಮಾವುದಱಿಯೆಂ ಪಂಕೇಜಪತ್ರೇಕ್ಷಣೇ ೮೯

ಉ॥ ಈ ವಿಭು ಕಾಮಭೋಗಮನುಪೇಕ್ಷಿಸೆ ಕಾಮನ ಗಂಡುಬೆಂಡು ಕೇ
ಳೀವನಲೀಲೆ ಪಾೞ್ವಿಷಯದೊಟ್ಟಜೆ ಮೊಟ್ಟೆ ನಿತಂಬಿನೀವಪುಃ
ಶ್ರೀವಿಫಲಂ ವಸಂತದೆಸಕಂ ವೃಥೆ ಚಂದ್ರನ ದರ್ಪವೊಪ್ಪದೆಂ
ಬಾವುದುಮೇನೊ ಲೋಕದನಿತುಂ ವ್ಯವಹಾರಮಸಾರಮಾಗದೇ ೯೦

ಕಂ॥ ಅದಱಿಂದಮಿಾ ಮಹಾತ್ಮಂ
ಮದುವೆನಿಲಲ್ವೇೞ್ಕುಮಂತು ನಿಂದೊಡೆ ರಾಜ್ಯಾ
ಭ್ಯುದಯಮಳವಡುಗುಮಳವಡೆ
ಪದುಳಂ ಲೋಕಕ್ಕೆ ಧರ್ಮಸಂತತಿ ನಿಲ್ಕುಂ ೯೧

ವ॥ ಎಂದು ನುಡಿದಿರ್ವರುಂ ಗೀರ್ವಾಣಪೂಜ್ಯಮಪ್ಪ ನಿರ್ವಾಣಪದವಿಗೆ ಪಲುಂಬಿ ನಿಜಾಪತ್ಯನಪತ್ಯಫಲಸಂಕಲ್ಪ ಕಲ್ಪನಿಯಮಮಪ್ಪ ತಮ್ಮನುಷ್ಠಿತಕ್ಕನುಮತಮನೀಗುಮಿಾಯನೆಂಬ ಸಂದಿಗ್ಧದ ದಂದುಗಮೊಳಾಂದೋಳಚಿತ್ತರಾಗುತ್ತುವೆಟ್ಟಿಂದು ವಿನತವಿಷ್ಟಪನ ಕೆಲದೊಳುಚಿತ ವಿಷ್ಟರೋಪವಿಷ್ಟರಾಗಿ ಉಚಿತ ವಿನೇಯಕ್ರಿಯಾನಿಯೋಗದಿಂದಮಿರ್ದು

ಚಂ॥ ಜನಪರಿತಾಪಲೋಪಿಯ ಸುವೃತ್ತವಿಳಾಸನ ನಿರ್ಮಳಸ್ವಭಾ
ವನ ಭುವನಸ್ತುತಾತ್ಮನ ಮಹಾತ್ಮಗುಣಾರ್ಹನ ನಿನ್ನ ಜನ್ಮದಿಂ
ಜನನುತರಾದೆವಾವಮಳಮೌಕ್ತಿಕರತ್ನಕೆ ಜನ್ಮಭೂಮಿಯಾ
ದನುಪಮಶುಕ್ತಿಸಂಪುಟದವೋಲ್ ಸುರಕೇಚರರತ್ನಪೂಜಿತಾ ೯೨

ಕಂ॥ ದೇವ ನಿಜೋದಯ ದಯದಿಂ
ಪಾವನಮಾಗಿರ್ದು ಪೂಜ್ಯರೆನಿಸಿದೆಮಾಮಿಂ

ತಾವನ ತಾಯ್ಗುಂ ತಂದೆಗ
ಮಾವಗಮೆಱಗಿದುದೆ ಸುರನರೋರಗಲೋಕಂ ೯೩

ಉ॥ ನೀನೆ ಸಮಸ್ತವಿಷ್ಟಪಹಿತಾರ್ಥಚರಿತ್ರನೆ ನೀನೆ ಲೋಕರ
ಕ್ಷಾನಿಯಮೈಕಯಾಮಿಕನೆ ನೀನೆ ಜಗತ್ರಯಸೂತ್ರಧಾರವಿ
ಜ್ಞಾನನೆ ದೇವ ನಿನ್ನಱಿತದಿಂ ಪೊಱಗಿಲ್ಲ ಪದಾರ್ಥಮಾದೊಡಂ
ಮಾನಿತಮಕ್ಕೆ ಬಿನ್ನಪಿಪೆವಾವಿನಿಸಂಜದೆ ಪೆತ್ತ ಮೇಳದಿಂ ೯೪

ಮ॥ ಬಹುಜಲ್ಪಂ ವೃಥೆ ಧರ್ಮಸಂತತಿನಿಮಿತ್ತಂ ಧರ್ಮಪತ್ನೀಪರಿ
ಗ್ರಹಮಂ ಕೈಕೊಳವೇಟ್ಪುದಲ್ಲದೊಡೆ ಲೋಕಕ್ಕಿಲ್ಲ ನಿಸ್ತಾರವೀ
ವಿಹಿತಪ್ರಾರ್ಥನೆಗಿಂಬುಗೆಯ್ಯುದೆಮಗೆಂದೆಲ್ಲಂದದಿಂ ಮಾಣದಾ
ಗ್ರಹಮಂ ಮಾಡಿದ ತಾಯ್ಗೆ ತಂದೆಗಿನಿಸಂ ಸಸ್ನೇಹನಾದಂ ಜಿನಂ ೯೫

ವ॥ ಅಂತು ನಿಜಮುಖಾರವಿಂದ ಮಂದಸ್ಮಿತಪರಿಸ್ಪಂದದಶನವಸನಾನುಮತನಾಗಿ

ಮ॥ ಸಮಸಂದಾತ್ಮಗುರೂಪರೋಧದಿನೊಡಂಬಟ್ಟಂ ನಿರಾಕಾಂಕ್ಷನ
ಪ್ಪಮಳಜ್ಞಾನವಿಭಾಸನಪ್ಪ ಜಿನನುಂ ಜಾಯಾಪರಿಸ್ಪಂದಬಂ
ಧಮನಿಂತೊಪ್ಪುಗುಮೇ ಅವಶ್ಯಮನುಭೋಕ್ತವ್ಯಂ ಕೃತಂ ಕರ್ಮಯೆಂ
ಬ ಮುನೀಂದ್ರೋಕ್ತಿ ಶುಭಾಶುಭಾನುಭವ ವಾಕ್ಸಂಸಾರಿಜೀವಂಗಳೊಳ್ ೯೬

ಕಂ॥ ಪರಮಗುರು ಪುಟ್ಟಿದಂದಿನ
ಪರಿತೋಷದ ಪರಮಕೋಟಿ ಪೆಂಪಿನೊಳಿದಱೊಂ
ದೊರೆಗಂ ದೊರೆಗಂ ಬಾರದು
ಪರಿಕಿಪೊಡೆನೆ ಹೃಷ್ಟರಾದರಾ ದಂಪತಿಗಳ್ ೯೭

ವ॥ ಆಗಿ ಮಂತ್ರಶಾಲೆಗೆಟ್ತಂದು ಕುಲವೃದ್ಧ ಬುದ್ಧಿವೃದ್ಧ ವಯೋವೃದ್ಧರಪ್ಪ ಬಂಧುಜನ ಮಂತ್ರಿಜನ ಪರಿಜನಂಗಳಾಲೋಚನದಿಂ

ಚಂ॥ ಒದವಿದ ನಾಥವಂಶದೆಸಕಂ ಕುರುವಂಶದ ಮೈಮೆಯಿಕ್ಷುವಂ
ಶದ ಜಸಮುಗ್ರವಂಶದುದಯಂ ಹರಿವಂಶದ ಪೆಂಪು ಸೂರ್ಯವಂ
ಶದ ದೆಸೆ ಸೋಮವಂಶದ ನೆಗೞ್ತೆಪೊಗೞ್ತೆಗಳುಂಬಮಪ್ಪಿನಂ
ಮದುವೆಗೆ ತತ್ರಭೂತನೃಪಕನ್ನೆಯರಂ ಸಮಕಟ್ಟಿದಂ ನೃಪಂ ೯೮

ವ॥ ಅಂತು ಸಮಕಟ್ಟಿ ಸಮುಚಿತಾನೂನದಾನಸನ್ಮಾನದಿಂದ ತನ್ಮಹೀನಾಥಯೂಥಮಂ ಸಂತೋಷಂಬಡಿಸಿ

ಕಂ॥ ಚೆನ್ನೆಯರಂ ವಿವಿಧಕುಲೋ
ತ್ಪನ್ನೆಯರಂ ಗುಣವಿವೇಕ ನವಯೌವನ ಸಂ
ಪನ್ನೆಯರಂ ಸಾಸಿರ್ವರ್
ಕನ್ನೆಯರಂ ದೇಹದೀಪ್ತಿಸಂಛನ್ನೆಯರಂ ೯೯

ವ॥ ತರಿಸಿ ಶುಭದಿನದೊಳ್ ಗೃಹಮಹತ್ತರಂಗೆ ವಿವಾಹಗೇಹಮಂ ಸಮೆಯಿಸೆಂದು ಬೆಸಸುವುದುಮಲ್ಲಿಂ ಮುನ್ನೆ ಸುತ್ರಾಮಸೂತ್ರಧಾರಸೂತ್ರಿತಮಾಗಿ ಕಲ್ಪಶಿಲ್ಪಿಗಳ್ ಸಮೆಯೆ

ಉ॥ ಶ್ರೀರಮಣೀನಿವಾಸಮೆನೆ ಮುಕ್ತಿನಸೂಸಕದೋಳಿ ತುಂಗಭೃಂ
ಗಾರದ ಶೋಭೆ ಜಾಗದಡಕಿಲ್ಗಳೊಡಂಬಡೆ ಚಿತ್ರಭಿತ್ತಿವಿ
ಸ್ತಾರದ ಚೆಲ್ವು ಚೀನದ ವಿತಾನದ ನೇರ್ಪುರುರತ್ನರಂಜಿತಾ
ಕಾರದ ಕಂಬದೊಪ್ಪಮುಮವರ್ಗಂತೆಸೆದತ್ತು ವಿವಾಹಮಂಡಪಂ ೧೦೦

ವ॥ ಅಲ್ಲಿ

ಕಂ॥ ಗುಡಿ ತೋರಣಮಕ್ಷತೆ ಕ
ನ್ನಡಿ ಕಳಶಂ ದಧಿ ಕಱುಂಕೆ ಪೂಮಾಲೆ ಫಳಂ
ಸೊಡರೆಳದಳಿರೆಂಬಿವು ನೆಗೆ
ದಡೆಗಿಱಿದೊಪ್ಪಿದುವು ಮಂಗಳದ್ರವ್ಯಂಗಳ್ ೧೦೧

ವ॥ ಅದಲ್ಲದೆಯುಂ

ಚ॥ ಕಡೆಯಿಕ್ಕೆಂಬುಪವೇದಿಯಂ ರಚಿಯಿಸೆಂಬೊಳ್ಪೂವನೆತ್ತೆಂಬ ಕ
ನ್ನಡಿಯಂ ಮುಂತಿರಿಸೆಂಬ ಪೊಂಗಳಸಮಂ ನೀಡೆಂಬ ಕಾಶ್ಮೀರಮಂ
ತೊಡೆಯೆಂಬೀಸೊಡವೊತ್ತಿಸೆಂಬ ಪಸೆಯಂ ಪಾಸೆಂಬ ನೀಂ ಬಾಯಿನಂ
ಗುಡು ತಂದೆಂಬ ನರಾಮರಾಂಗನೆಯರಿಂದಾಯ್ತುಂದು ಕೋಳಾಹಳಂ ೧೦೨

ವ॥ ಆಗಳಮರಲೋಕದಿಂದೆ ಬಂದು ಬಂಧುರ ನಮೇರು ಮಂದಾರ ಪಾರಿಜಾತ ಹರಿಚಂದನ ಪ್ರಮುಖಸುರತರುವ್ರಜದ ಸರಸಸರಸೀರುಹ ಸುರಭಿಪರಿಮಳಪರಿಭ್ರಾಂತ ಭೃಂಗಸಂಘಾತಲಂಘಿತ ಲತಾಂತಮಾಲೆಗಳೊಳಮುಭಯಕರ್ಮಕಾರೋಹಣ ದುಕೂಲ ದೇವಾಂಗ ನಾರಂಗ ಪಟ್ಟ ಸೂತ್ರ ನೇತ್ರ ಚೀನಾದ್ಯತಿಸಮೀಚೀನ ವಸನ ವಿಸರಂಗಳೊಳಮಗರು ಸಾರಘನಸಾರ ಕಾಶ್ಮೀರ ಮಳಯರುಹ ಯಕ್ಷಕರ್ದಮಬಂಧುರ ಸುಗಂಧಲೇಪನಂಗಳೊಳಮಖಿಳ ಭುವನಪಾವನಪರಾರ್ಧ್ಯ ರತ್ನರಾಜಿ ರಚಿ ನಾ ವಿಚಿತ್ರಕಟಿಸೂತ್ರ ಕೇಯೂರ ಹಾರಕುಂಡ ಲೋತ್ತಂಸ ಮುಖ್ಯ ವಿವಿಧಭೂಷಣವಿಶೇಷಂಗಳೊಳಮಖಂಡಮಂಡನ ಕ್ರಿಯಾಸುಭಗ ಶೋಭಾಚಮತ್ಕಾರಕರಣ ಪರಿಣತ ಸಾಂದ್ರಸೌಂದರೀ ಸಂದೋಹಮಾ ವಧೂಕದಂಬಕಮುಂ

ಸಮುತ್ತುಂಗಮಾಂಗಲ್ಯ ಶೃಂಗಾರರಸಶಿಕ್ಷಾವಿಚಕ್ಷಣನಿಳಿಂಪನಿಕರಮುಂ ತ್ರಿಲೋಕತಿಲಕನು ಮನಳಂಕರಿಸಿದಾಗಳ್

ಕಂ॥ ರತಿ ಪೊರೆದನಂಗಜಂಗಮ
ಲತೆಗಳ್ ಕುಸುಮಿಸಿದುವಖಿಳಭುವನತ್ರಯಕ
ಲ್ಪಿತ ಕಲ್ಪಭೂರುಹಂ ಪು
ಷ್ಟಿತಮಾಯ್ತನಿಸಿರ್ದರಾಕೆಗಳ್ಮಾ ವಿಭುವಂ ೧೦೩

ಉ॥ ಮಂಗಳಮಂಡನಕ್ಕೆ ನೆಲೆಯಾದ ಕುಮಾರನ ಭೂಷಣಾಂಶು ದಿ
ವ್ಯಾಂಗದ ಕಾಂತಿಯೊಳ್ ತೊಡರ್ದು ರಂಜಿಸಲಾಱವೆ ಧೀಪ್ರದೀಪಿಕಾ
ಸಂಗತದೀಪ್ತಿಜಾಳಮೆನಿತಗ್ಗಳಮಾದೊಡಮೊಂದಿದಚ್ಚವೆ
ಳ್ದಿಂಗಳ ರಶ್ಮಿಯೊಳ್ ತೊಡರ್ದು ಪಳ್ಚನೆ ರಂಜಿಸಲಾಱದಂದದಿಂ ೧೦೪

ವ॥ ಅನಂತರಂ

ಮ॥ಸ್ರ॥ ಸುರತೂರ್ಯಧ್ವಾನಮೆಲ್ಲಾ ದೆಸೆಗೆ ನಿಮಿರೆ ಮಾಂಗಲ್ಯಗೀತಾರವಂ ಕಿ
ನ್ನರನಾರೀವೃಂದದಿಂ ಸಂಧಿಸೆ ಪರಿಣಯನೋತ್ಸಾಹಗೇಹಕ್ಕೆ ಬಂದಂ
ಸುರವೃಂದಂ ಲೀಲೆಯಿಂದಂ ತರೆ ವಿಹಿತಲಸನ್ಮಂಗಳದ್ರವ್ಯ ದೇವೀ
ಪರಿವಾರಂ ನಿರ್ವಿಕಾರಂ ಸುರತರುಸುಮನಃಕರ್ಣಪೂರಂ ಕುಮಾರಂ ೧೦೫

ವ॥ ಆಗಳಾ ಮನೋಜಮಂಗಳಪತಾಕೆಗಳನಾತ್ಮೀಯ ಮಹನೀಯ ಮಹಿಮಾತಿಶಯ ವಿಭೂತಿಯಿಂದೆ ಮುಂದಿಟ್ಟು ತಂದು ತಜ್ಜನಕರಪ್ಪ ಜನಪರಿಜನಂಗಳ್ ವಿವಾಹಮಂಡಪಕ್ಕೆ ಮಂಡನಂ ಮಾಡಿ

ಮ॥ ನಿಮಿರ್ದೊಳ್ಗಣ್ಬೊಣರಿಂ ಕುರುಳ್ವುಜುಗಲಿಂ ವಕ್ಷೋಜದಿಂ ವಕ್ತ್ರ ವಿ
ಭ್ರಮದಿಂ ಕೆಂದಳದಿಂ ಸ್ಮಿತೋತ್ಪಳಮಯಂ ಭೃಂಗೀಮಯಂ ಚಕ್ರವಾ
ಕಮಯಂ ಚಂದ್ರಮಯಂ ಪ್ರವಾಳಮಯಮಾಯ್ತೀ ಲೋಕಮೆಂಬಂತದೇಂ
ಸಮಸಂದಿರ್ದುದೊ ಬಂದು ಗೊಂದಣಿಸಿ ತದ್ರಾಜನ್ಯಕನ್ಯಾಜನಂ ೧೦೬

ವ॥ ಅನಂತರಮಪಾರ ಗಂಭೀರ ಮಂಗಳಾತೋದ್ಯ ನಾದಂಗಳೆಸೆದು ಘೂರ್ಣಿಸೆ ಯಥೋಚಿತ ವಿಧಾನಪೂರ್ವಕಮುದಾರ ತಾರಾಸಮೂಹಮಂ ಚಂದ್ರನೊಳ್ ನೆರಪುವಂತೆ ಇಕ್ಷ್ವಾಕುವಂಶವಾರಾಶಿಚಂದ್ರನೊಳ್ ಪವಿತ್ರಕ್ಷತ್ರಕುಳಗಗನರಂಗನೇತ್ರಮಾಳಿಕೆಗಳಂ ಪಾಣಿಗ್ರಹಣಂ ಗೆಯ್ಸಿದಾಗಳ್

ಮ॥ ಕರಿಣೀವೇಷ್ಟಿತ ಪುಷ್ಪದಂತದಿಗಿಭೇಂದ್ರಾಕಾರದಿಂದಾಗಳಾ
ತರುಣೀವೇಷ್ಟಿತ ಪುಷ್ಪದಂತನೆಸೆದಂ ವಂಶೋನ್ನತಂ ಸ್ಫಾರಮು

ಷ್ಕರಹಸ್ತಂ ಧೃತಭದ್ರಲಕ್ಷಣಗುಣಂ ಪದ್ಮಾಭಿರಾಮಂ ನಿರಂ
ತರದಾನಂ ಮೃದುದೀರ್ಘವಾಳನಧಿಕವ್ಯಾಳಂ ಸದಾಪಾಶ್ರಯಂ ೧೦೭

ಮ.ಸ್ರ॥ ಘನಗಂಭೀರಸ್ವನಂ ಮೌಕ್ತಿಕಮಣಿದಶನಂ ಪದ್ಮರಾಗಾಧರಂ ವ
ಜ್ರನಖಂ ಪಾಠೀನನೇತ್ರಂ ಕಮಠಚರಣನಕ್ಷೂಣಲಾವಣ್ಯಲಕ್ಷ್ಮೀ
ಜನಕಂ ಡಿಂಡೀರಪಾಂಡುಪ್ರಭನೆನಿಪ ಗುಣಾಂಭೋಧಿಯೊಳ್ ಕೂಡಿ ಚೆಲ್ವಾ
ಯ್ತನುಕೂಲಂ ಸ್ವಚ್ಛಶೀಲಂ ಕುಲನದಿಯವೊಲಾ ಕ್ಷತ್ರಪುತ್ರೀಸಹಸ್ರಂ ೧೦೮

ಮ॥ ಪ್ರಣತೇಂದ್ರಂ ವರನಂದು ಬಂದೆಸೆವ ಸೌಧರ್ಮಾದಿಗಳ್ ಬಂದ ನಿ
ಬ್ಬಣಿಗರ್ ಕಲ್ಪದನಲ್ಪವಸ್ತುನಿವಹಂ ತೆಲ್ಲಂಟಿ ದೇವಾಂಗನಾ
ಗಣ ಮತ್ತಿತ್ತೆಡೆಯಾಡುವ್ಯೆದೆಯರದಂ ಕೊಂಡಾಡಿ ಮಾಱ್ಪಂ ನೃಪಾ
ಗ್ರಣಿ ಸುಗ್ರೀವನೆನಲ್ಕದೇವೊಗಳ್ವೆನಾಂ ವೈವಾಹಿಕೋತ್ಸಾಹಮಂ ೧೦೯

ವ॥ ಆಗಳುತ್ಸಾಹಕಾರ್ಯ ಸಹಚರ್ಯಪರ್ಯಷ್ಟಿನಿಶ್ಚಿತನಿಳಿಂಪಕುಳ ನೃಪಕುಳ ಕುಟುಂಬಿ ನೀಜನ ಪರಿವೃತೆಯಪ್ಪ ಜಯರಾಮಾಮಹಾದೇವಿವೆರಸೊಸಗೆ ಮರುಳ್ಗೊಂಡು ವಿತರಣ ಸಮಗ್ರನಪ್ಪ ಸುಗ್ರೀವಮಹಾರಾಜಂ ಮಹಾಮಹಿಮೆಯಂ ಮೆಱೆದು

ಚಂ॥ ಪರಿಜನಮುರ್ವೆ ಬಂಧುತತಿ ಕೊರ್ವೆ ಯಶೋಲತೆ ಪರ್ವೆಯಿಷ್ಟಶಿ
ಷ್ಟರ ಬಗೆ ತೀರೆ ವಂದಿಜನಮಾರೆ ಸುರದ್ರುಮದಾರ್ಪು ಸಾರೆ ಸ
ತ್ಪರಹಿತವೃತ್ತ ನಸ್ಖಳಿತಚಿತ್ತನಲಂಪಿನೊಳಿತ್ತನಂಬರಾ
ಭರಣ ಗಜಾಶ್ವಸಾರ್ಥಮನನರ್ಘ್ಯಪದಾರ್ಥಮನರ್ಥಿ ಸಾರ್ಥಮಂ ೧೧೦

ವ॥ ಅಂತೊಸಗೆಮಾಡಿ ನಿರ್ವರ್ತಿತವಿವಾಹೋತ್ಸವನಾಗಿ ಸುಖದಿನಿರ್ಪಲ್ಲಿ

ಕಂ॥ ಆ ಪುಷ್ಪಚಾಪಮಂಗಳ
ದೀಪಲತಾಕೃತಿಗಳೆಳಸಿ ಬೆಳಗಿದುವೊಲವಿಂ
ಶ್ರೀಪುಷ್ಪದಂತವಿಷಯ
ವ್ಯಾಪಾರಾಭ್ಯುದಯ ಹೃದಯ ರಮ್ಯಸ್ಥಳದೊಳ್ ೧೧೧

ವ॥ ಅದಲ್ಲದೆಯುಂ

ಮ॥ ಚಳಮೀನೇಕ್ಷಣೆಯರ್ ಮೃಣಾಳಭುಜೆಯರ್ ಪದ್ಮಾಸ್ಯೆಯರ್ ಭೃಂಗಕುಂ
ತಳೆಯರ್ ಕೈರವಗಂಧಿಯರ್ ಜಳವಿಹಂಗೀನಾದೆಯರ್ ಶೀತಲೋ
ಲ್ಲಳಿತಭ್ರೂಲತೆಯರ್ ಮರಾಳಗತಿಗಳ್ ಚಕ್ರಾಂಕವಕ್ಷೋಜಮಂ
ಡಳೆಯರ್ ವರ್ತಿಸಿದರ್ ಕುಮಾರನ ಮನಶ್ರೀಸಾರ ಕಾಸಾರದೊಳ್ ೧೧೨

ಕಂ॥ ಜಳಮೆನಿತಗ್ಗಲಿಸಿದೊಡಂ
ಜಳದಿಂದಂ ಮೇಲೆ ಮಿಗುವ ಜಳಜದವೋಲ್ ಕೋ
ಮಳೆಯರನುಬಂಧಮೆನಿತ
ಗ್ಗಳಿಸಿದೊಡಂ ಮೇಲೆ ಮಿಕ್ಕುದರತಿನಿಬಂಧಂ ೧೧೩

ವ॥ ಅನಂತರಂ ಮತ್ತೊಂದು ಪುಣ್ಯದಿನದೊಳ್ ಉತ್ಸವಪರಂಪರಾಗತಸ್ವಾಂತನಾ ಮಹೀಕಾಂತನನೇಕ ಮೂರ್ಧಾಭಿಷಿಕ್ತ ಪಾರ್ಥಿವಜನಂಗಳ್ವೆರಸು ತೀರ್ಥಸಲಿಲಂಗಳಿಂ ರಾಜ್ಯಾಭಿಷೇಕಂಗೆಯ್ದು

ಮ.ಸ್ರ॥ ದಿವಿಜೇಂದ್ರಂ ಬಂದು ಮುನ್ನಂ ಜಿನನ ಸವನಮಂ ಮಾಡುವಂದುಂ ವಿವಾಹೋ
ತ್ಸವಮಂ ಕೊಂಡಾಡುವಂದುಂ ವಿಭವಮನಿನಿತಂ ಕಾಣೆವೆಂಬನ್ನವಿಂಬಿಂ
ಸುವಿಧೀಶಂಗಾತ್ಮಪುತ್ರಂಗಧಿಕಮಹಿಮೆಯಂ ಮಾಡಿದಂ ಪಟ್ಟಬಂಧೋ
ತ್ಸವಮಂ ಸುಗ್ರೀವಭೂಪಾಳಕನತಿಮುದದಿಂ ಭವ್ಯರತ್ನಾರ್ಣವಾಂಕಂ ೧೧೪

ಗದ್ಯ

ಇದು ಸಮಸ್ತ ಭುವನಜನಸಂಸ್ತುತ ಜಿನಾಗಮ ಕುಮುದ್ವತೀ ಚಾರುಚಂದ್ರಾಯಮಾಣ ಮಾನಿತ ಶ್ರೀಮದುಭಯಕವಿ ಕಮಳಗರ್ಭ ಸುವ್ಯಕ್ತಸೂಕ್ತಿ ಚಂದ್ರಿಕಾಪರಿಪುಷ್ಪಮಾನಸ ಮರಾಳ ಗುಣವರ್ಮನಿರ್ಮಿತಮಪ್ಪ ಪುಷ್ಪದಂತ ಪುರಾಣದೊಳ್ ಕುಮಾರಪರಿಣಯನೋತ್ಸವ ಪರಿವರ್ಣನಂ ದ್ವಾದಶಾಶ್ವಾಸಂ ಸಂಪೂರ್ಣಂ

ತ್ರಯೋದಶಾಶ್ವಾಸಂ

ಕಂ॥ ಶ್ರೀರಾಜ್ಯಲಕ್ಷ್ಮಿ ತನ್ನಯ
ಪೇರುರದೊಳ್ ತಾರಹಾರಲತೆಯವೊಲತಿವಿ
ಸ್ತಾರಿಸಿರೆ ಶೋಭೆವೆತ್ತನಿ
ಳಾರಾಧ್ಯಂ ಪ್ರಭುಗುಣಾಬ್ಜವನಕಳಹಂಸಂ ೧

ವ॥ ಆ ಸಮಯದೊಳ್

ಚಂ॥ ಪಿತೃ ಕೃತಕೃತ್ಯನಾಗೆ ಪಸವಂ ಜನಸಂತತಿ ನೀಗೆ ಶತ್ರುಸಂ
ತತಿ ತಲೆವಾಗೆ ಶಿಷ್ಟಜನದಾಱಡಿ ನಾಟ್ಕಿಡಿವೋಗೆ ತೇಜಮು
ದ್ಧತರನೆ ಕೊಂದುಕೂಗೆ ಸಕಳಾವನಿ ರಾಗಿಸಿ ಬೀಗೆ ಕೀರ್ತಿ ದಿ
ಕ್ತತಿಗಳ ಮೇಗೆ ತೇಗೆ ತಳೆದಂ ಭುವನಪ್ರಭು ರಾಜ್ಯಲಕ್ಷ್ಮಿಯಂ ೨

ಮ॥ ಸ್ಥಿರಮೂಲಂ ಪತಿ ಶಾಖೆ ಮಂತ್ರಿನಿಚಯಂ ಕಂದಂ ಮಹೀಚಕ್ರಮಂ
ಕುರಜಾಲಂ ಜಯಸೇನೆ ಪತ್ರನಿವಹಂ ಮಿತ್ರವ್ರಜಂ ಪುಷ್ಪಮಂ
ಜರಿ ದುರ್ಗಂ ಫಲಕೋಟಿ ಕೋಶಮೆನೆ ಮೆಯ್ವೆತ್ತಿರ್ದ ಸಪ್ತಾಂಗಬಂ
ಧುರಲಕ್ಷ್ಮೀಲತೆ ಪತ್ತೆ ತನ್ನನೆಸದಂ ಸಮ್ಯಕ್ತ್ವರತ್ನಾರ್ಣವಂ ೩

ಅತಿಶಾಂತಾತ್ಮಕನಾದೊಡಂ ಹಿಮಕರಂ ಪಂಕೇಜಸಂಕೋಚನ
ಸ್ಥಿತಿಯಂ ಕೌಮುದಸೌಮುದಸ್ಥಿತಿಯನೌದಾಸೀನ್ಯದಿಂ ಮಾಟ್ಪವೋಲ್
ಸತತಂ ಮಾಡಿದನೇಕರೂಪಮಹಿಮಂ ದುಷ್ಟರ್ಗೆ ಶಿಷ್ಟರ್ಗೆ ದು
ಸ್ಥಿತಿಯಂ ಸುಸ್ಥಿತಿಯಂ ನಿಜಂ ಸುವಿಧಿಗಿಂತೀ ವಿಕ್ರಮಂ ಪ್ರಕ್ರಮಂ ೪

ವ॥ ಅಂತುಮಲ್ಲದೆಯುಂ

ಕಂ॥ ಮೃದುಭಾವನಾಗಿಯುಂ ನೃಪ
ನುದಗ್ರವಿಗ್ರಹಕಠೋರರಂ ಬಾಧಿಸಿದಂ
ಮೃದುಶೀತವಚ್ಛವಾಗಿಯು
ಮುದಕಂ ಬಾಧಿಪವೊಲಧಿಕ ವಾತಾತ್ಮಕರಂ ೫

ವ॥ ಮತ್ತಂ

ಚಂ॥ ಎಱಗದ ತೀರಭೂರುಹಮನೆಯ್ದೆ ಮೊದಲ್ಗಿಡೆ ಕೀಳ್ವಿ ಬೆಂಗೆ ಬಿ
ಟ್ಟೆಱಗಿದ ವಂಜುಳಪ್ರಕರಮಂ ಪರಿವರ್ಧಿಪ ಸಿಂಧುತೋಯದಂ
ತೆಱಗದರಂ ತಳಂಗಿಡಿಪ ನಮ್ರರನುರ್ವಿಪ ರಾಜಲೀಲೆ ಕ
ಣ್ದೆಱೆದುದು ಪುಷ್ಪದಂತಮಹಿಪಾಳನೊಳತ್ಯಮಳಾರ್ದ್ರಶೀಲನೊಳ್ ೬

ಕುವಳಯಬಂಧುವಾಗಿಯುಮಿನಂ ನವಯವ್ವನನಾಗಿಯುಂ ದಶೋ
ದ್ಭವತನು ಸೌಮ್ಯನಾಗಿಯುಮಶೇಷಜಗದ್ಗುರು ಭೋಗಿಯಾಗಿಯುಂ
ಪ್ರವಿಗತ ವಕ್ರಮಾರ್ಗನಚಳಾತ್ಮಕನಾಗಿಯುಮತ್ಯುದಾತ್ತಸಂ
ಭವನೆನಿಸಿರ್ದು ಮತ್ತಮವಿರುದ್ಧಗುಣೋನ್ನತನಾದನಾ ನೃಪಂ ೭

ವ॥ ಅಂತು ಗುರುಜನೋಪರೋಧದಿಂ ತನಗಿನಿಸನುಭೂಯಮಾನೆಯಾದ ರಾಜ್ಯಲಕ್ಷ್ಮಿಯಂ ಸಮಧಿಕೈಶ್ವರ್ಯಮದಮತ್ತೆಯೆಂದು ಸಮದಮಾತಂಗಸಂಪತ್ಪ್ರದಾನೆಯೆಂದು ನಿಸರ್ಗದುರ್ಗೋಪ ಸಂಚಿತಾರ್ಥಪ್ರಪಂಚೆಯೆಂದು ಗುರುಜನೌಚಿತ್ಯ ವಿನಯೋಪಚಾರ ದೂರೆಯೆಂದು ಪ್ರತಿಕೂಲ ರಾಜವಿಷಯೋಪಭೋಗಲಂಪಟಾತ್ಮೆಯೆಂದು ದುಸ್ಸಹಮಹಾಕಲಹಕಲುಷಿತಸ್ವಭಾವೆಯೆಂದು ಪರಪುರುಷಕಂಠಗ್ರಹಾನುರಕ್ತಭಾವರಸಿಕೆಯೆಂದು ಮನದೊಳೇವಯಿಸಿ ಪುರುಡು ಪುಟ್ಟಿ ಮೇಗುದೋಱೆ ಸವತಿ ಮಾಡುವಂತೆ

ಉ॥ ಭೂವರನಪ್ಪ ಚಂದ್ರಿಳಪುರಾಧಿಪನಪ್ಪಿನವಂಶನಪ್ಪ ಶೌ
ರ್ಯಾವಹನಪ್ಪ ಸಿಂಹರಥರಾಜನನಂದನೆಗೆಂದು ಚಂದ್ರಿಕಾ
ದೇವಿಗೆ ರೂಪವಿಭ್ರವಿಲಾಸಗುಣಾನ್ವಿತ ಸಚ್ಚರಿತ್ರ ಲೀ
ಲಾವತಿಗಿತ್ತನಗ್ರಮಹಿಷೀಪದಮಂ ಮ[illegible]ೇಂದ್ರಚಂದ್ರಮಂ ೮

ಮ॥ ವಿನಯಂ ರೂಪು ವಿವೇಕಮನ್ವಯದ ಪೆಂಪೊಳ್ಪಾರ್ಪು ಸೌಭಾಗ್ಯಮೆಂ
ಬಿನಿತುಂ ರಾಣಿಯರ್ಗೆಲ್ಲಮುಳ್ಳೊಡಮಧೀಶಂ ಚಂದ್ರಿಕಾದೇವಿಗಿ
ತ್ತನತಿಸ್ನೇಹದಿನಾಣೆಗೋಸಣೆಯನೇಂ ಸದ್ಗಣ್ಯಪುಣ್ಯಪ್ರಭಾ
ವನೆ ಮೆಯ್ವೆತ್ತ ಮಹಾಸತೀಜಯಮನಾರ್ ಕೊಂಡಾಡರಾರ್ [illegible]ನ್ನಿಸರ್ ೯

ವ॥ ಅಂತಾ ಜಗತ್ಪವಿತ್ರ ಚಾರಿತ್ರವಾರ್ಧಿಗರ್ಧಾಂಗಲಕ್ಷ್ಮಿಯಾದಾ ಮಹಾದೇವಿಯ ಗರ್ಭದೊಳ್ ಪೂರ್ವಜನ್ಮಸಂಚಿತಾಗಣ್ಯಪುಣ್ಯಪ್ರಭಾವದಿಂ

ಮ॥ ಸ್ಮರಸೌಮ್ಯಾಕೃತಿ ವಿಶ್ರುತಂ ಶ್ರುತಕಳಾನಾಥಂ ಕಳಾನಾಥಭಾ
ಸುರವಕ್ತ್ರಂ ಸುರವಕ್ತ್ರಪಾವನಸದಾಚಾರಂ ಸದಾಚಾರಚ
ಕ್ಷುರಭಿವ್ಯಕ್ತಪರಕ್ಷಿತೀಶಗ್ಮಹವೃತ್ತಂ ವೃತ್ತದೋರ್ಬಂಧುರಂ
ಧುರಶೌರ್ಯಾರ್ಜಿತಕೀರ್ತಿ ಕೀರ್ತಿಧರನೆಂಬಂ ನಂದನಂ ಪುಟ್ಟಿದಂ ೧೦

ವ॥ ಆತನಿಂ ಬೞಿಕ್ಕೆ ಮಳಯಾನಿಲೆ ಮಣಿಮಾಲೆ ಮದನಲತೆ ಮಹಾನಂದೆ ಜಯನಂದೆ ಚಿತ್ರಲೇಖೆ ಕನಕಲತೆವೆಸರ ಪೞಪೆೞರುಮೞ್ಕೆಯರಸಿಯರ್ಗೆ

ಕಂ॥ ನರದೇವನಿಂದ್ರವರ್ಮಂ
ಹರಿಷೇಣಂ ವಿಜಯನಶನಿಘೋಷನನಂತಂ
ವರುಣನಜಬಾಹು ಸಂಜಯ
ನರನು ಪ್ರಾಣಜಯಮುಖ್ಯವೀರರುದಾರರ್ ೧೧

ಅಂಶುಪ್ರಭರುದ್ಯೋತಿತ
ವಂಶರ್ ಪುಟ್ಟಿದರಪತ್ಯರನುಪಮ ಪುರುಪು
ಣ್ಯಾಂಶರ್ ದ್ವಿಗುಣಿಸಿದ ಚತು
ರ್ವಿಂಶತಿತೀರ್ಥಕರರೆನಿಸಿ ನಾಲ್ವತ್ತೆಣ್ಬರ್ ೧೨

ಚಂ॥ ಅವರ ವಿಳಾಸದೊಳ್ಪವರ ಮಾಂತನದೊಳ್ಪವರಾಭಿಜಾತ್ಯದೊ
ಳ್ಪವರ ವಿವೇಕದೊಳ್ಪವರ ವಿಕ್ರಮದೊಳ್ಪವರೀವ ಚಾಗದೊ
ಳ್ಪವರ ಚರಿತ್ರದೊಳ್ಪು ಪೊಗೞ್ವಾಗಳಚಿಂತ್ಯಮತರ್ಕ್ಯವತ್ಸಸಂ
ಭವಗಣನಾರ್ಹಮಪ್ರತಿಚಕಲ್ಪಮಜೇಯಮಮೇಯಮಕ್ಷಯಂ ೧೩

ಕಂ॥ ಪರಮೌದರಿಕಮೂರ್ತಿಗೆ
ಚರಮಾಂಗಂಗಖಿಳಗುರುಗೆ ಪುಟ್ಟಿದರೆನೆ ಮೆ
ಯ್ಸಿರಿ ತೇಜಮಳವು ಪುಣ್ಯಂ
ಪುರುಷಾರ್ಥಂ ಮಹಿಮೆಯೆಂಬಿವಿವರ್ಗಚ್ಚರಿಯೇ ೧೪

ವ॥ ಎನಿಸಿದಾ ಕುಮಾರಕರೊಳಗ್ರಗಣ್ಯನುಮಗಣ್ಯವಿಕ್ರಮನುಂ ಕ್ರಮಾರ್ಹನುಮಪ್ಪ

ಕಂ॥ ಶ್ರೀಕೀರ್ತಿವರಕುಮಾರಂ
ಗಾಕಂಪಿತರಿಪುನೃಪಂಗೆ ಪರಿಜನಚೇತೋ
ಮಾಕಂದವಸಂತಂಗೆ ಮ
ಹೀಕಾಂತಂ ಯೌವರಾಜ್ಯಪದವಿಯನಿತ್ತಂ ೧೫

ವ॥ ಅಂತಿತ್ತು

ಮ॥ ಪ್ರಿಯದಿಂ ಸೂಡಿದ ಪುಷ್ಪಮಾಳಿಕೆವೊಲಾಜ್ಞಾಲಕ್ಷ್ಮಿಯುಂ ಕೀರ್ತಿಲ
ಕ್ಷ್ಮಿಯುಮುರ್ವೀಶ ದಿಗೀಶಮಸ್ತಕದೊಳೊಳ್ಪಿಂ ನಿಲ್ವಿನಂ ರಾಜ್ಯಲ

ಕ್ಷಿತಿ ಯನಯ್ವತ್ತುಸಹಸ್ರಪೂರ್ವದೊಡನಿಪ್ಪತ್ತಯ್ದುಪೂರ್ವಾಂಗಸಂ
ಖ್ಯೆಯ ಕಾಲಂ ಸಲೆ ತಾಳ್ದಿ ಭೋಗಿಸಿದನಿಂತಿಕ್ಷ್ವಾಕುವಂಶೋನ್ನತಂ ೧೬

ಮ.ಸ್ರ॥ ಸ್ಫುರಿತೋಷ್ಣಾಂಶುಪ್ರಕಾಶಂ ದವದಹನಶಿಖಾಕ್ರಾಂತಕಾಂತಾರದೇಶಂ
ಪರಿಪುಷ್ಯತ್ಸಿಂಧುಪಾಥಂ ಸಲಿಲವಿಹರಣಾಸಕ್ತವನ್ಯೇಭಯೂಥಂ
ನರನಾರೀಸ್ವೇದಬಿಂದುಪ್ರವಣಗುರು ನಿರಾರ್ದ್ರೀಕೃತಾರಣ್ಯವಲ್ಲೀ
ತರು ಬಂದತ್ತಂದು ಸಂತಾಪದೆ ಸಕಳಮೃಗಗ್ಲಾನಿ ದಾಘಂ ನಿದಾಘಂ ೧೭

ವ॥ ಅಂತು ತನ್ನ ಭಾಸ್ವತ್ತೇಜದೊಡನೆ ಭಾಸ್ವತ್ತೇಜಮೆಸೆಯೆಯುಂ ತನ್ನ ಸನ್ಮಾರ್ಗದೊಡನೆ ಸನ್ಮಾರ್ಗಮುಜ್ವಳಿಸೆಯುಂ ತನ್ನ ವೈರಿಭೂಭೃತ್ಕಂಟಕದೊಡನೆ ಭೂಭೃತ್ಕಂಟಕಮುಪತಾಪತಪ್ತಮಾಗೆಯುಂ ತನ್ನ ಶತ್ರುವಾಹಿನಿಗಳೊಡನೆ ವಾಹಿನಿಗಳಂದವೞಿದು ಕುಂದೆಯುಂ ತನ್ನ ನಂದನಸಮೂಹದೊಡನೆ ನಂದನಸಮೂಹಮಾಶ್ರಿತಜನೋಪತಾಪ ಲೋಪಮಾಗೆಯುಂ ಬಂದ ಬೇಸಗೆಯನವನೀಶ್ವರಂ ಕಂಡು ಬಗೆಗೊಂಡು

ಚಂ॥ ವನದೊಳೆ ಪೊಕ್ಕು ವರ್ತಿಸೆ ಜನಂ ಶಿಖಿಗಾಗೆ ಶಿಖಾಕಳಾಪವ
ರ್ಧನಮಿನನಂ ಘನಸ್ಫುರಣಮಾವರಿಸುತ್ತಿರೆ ಬೆಂಚೆಗಂಚೆಗಳ್
ಕಿನಿಸಿ ವಿಮುಗ್ಧಮಾನಸದೊಳೊಂದೆ ಚರತ್ಪಥಿಕರ್ಗೆ ಬೇವಸಂ
ಜನಿಯಿಸೆ ಬಂದು ಮುಟ್ಟಿದುದಿದೇಂ ಘನಕಾಲಮೊ ಘರ್ಮಕಾಲಮೋ ೧೮

ವ॥ ಎಂದುತ್ಪ್ರೇಕ್ಷಿಸಿ ನಿಜಾಂತಃಪುರದ ವಿಗ್ರಹಾಗ್ರಹದಿನುಪವನವಿಹಾರ ಶಿಶಿರೋಪಕೇಳೀ ಲೀಲೆಯಿಂ ಕಾಲೋಚಿತಕ್ರಿಯೆಯನಾಚರಿಸುತ್ತಿರ್ದೊಂದುದೆವಸಂ

ಮ॥ ಸಿರಿಯುಂ ತೇಜಮುಮಿಷ್ಟವರ್ಗದೊಲವುಂ ಸ್ತ್ರೀಸ್ನೇಹಮುಂ ದೇಹಮುಂ
ಸ್ಥಿರಮಲ್ಲೆಂದು ನಿವೇದಿಪಂತೆ ಕಿರಣಶ್ರೀತಾೞ್ ಕಾಯ್ಪೞ್ ರ
ಕ್ತರಥಾಂಗಕ್ಕೆ ವಿಯೋಗಮಾಗೆ ನಳಿನೀರಾಗೋದಯಂ ಪೋಗೆ ಮೆ
ಯ್ಗರೆದಿರ್ದಂ ರವಿ ವಾರ್ಧಿಯೊಳ್ ಭುವನತಾಪೋತ್ಪಾದಿಗಿಂಬಕ್ಕುಮೇ ೧೯

ವ॥ ಅನಂತರಂ

ಕಂ॥ ರಾಗಮೆ ದೊರೆಕೊಳಿಕುಂ ದೋ
ಷಾಗಮನಮನೆಂದು ಪೇೞ್ವ ತೆಱದಿಂ ಸಂಧ್ಯಾ
ರಾಗಮೆ ದೊರೆಕೊಳಿಸಿತು ತಿಮಿ
ರಾಗಮಮಂ ಜಾರಚೋರಜನವಲ್ಲಭಮಂ ೨೦

ದಿವಸದವಸಾನದೊಳ್ ಕಮ
ಳವನಂ ನೀರೋಡಿ ನಾಡೆ ಬಾಡಿದುದೇಂ ಚಿ

ತ್ರವೊ ಮಿತ್ರವಿರಹದೊಳ್ ಕೊರ
ಗುವುದೆರವೆ ರಜೋಧಿಕಂ ಜಡಾಶಯನನಿಳಯಂ ೨೧

ಉ॥ ಬೇ[ರ]ದಿ ವರ್ಕನಸ್ತಮಿಸಿದಂ ಸುಗಿದತ್ತು ತದಿಷ್ಟಕೋಕಪಂ
ಕೇರುಹಮೆಂದು ಬೀಗದಿರು ಗೂಗೆ ಮಲಂಗದಿರುತ್ತಳಾಳಿ ಸಂ
ಸಾರಿಗೆ ನಿಟ್ಟೆಯಲ್ಲದು ಸುಖಂ ನಿಮಗಂ ಮಗುಟುಂತೆ ನಾಳೆ ದಲ್
ದಾರುಣದುಃಖಮೆಂದುಲಿವವೋಲ್ ಕೊಳರ್ವಕ್ಕಿಯಿನಾದುದುಬ್ಬರಂ ೨೨

ಕಂ॥ ಜಿನಮತಮಿಲ್ಲದ ಪದದೊಳ್
ಜನಿಯಿಪ ಕುಮತದೊಳೆ ಯುಕ್ತಿವಲಮೇನಾನುಂ
ಮನಕೆಸೆವಂತೆಸೆದುವು ಪಲ
ವಿನನಿಲ್ಲದ ಪದದೊಳೊಗೆದ ತಮದೊಳ್ ಮಿಂಗಳ್ ೨೩

ವ॥ ಆಗಳರಸನಾಸ್ಥಾನಮಮಂ ವಿಸರ್ಜಿಸಿ ನಿಜಾಭರಣಕಿರಣಜಾಳಂಗಳೊಳ್ ಸೆಣಸಿ ಬೆಳಪ ಕಳದೀಪಿಕಾ ಕಳಾಪಮೆಳಸಿ ಬಳಸೆ ಬಂದು ಕತಿಪಯಾಂಗರಕ್ಷಕ ಪರೀತನಪಸಾರಿ ಕಾಭರಣಭಾರನಾಗೆ

ಮ॥ ಉದಯಾದ್ರೀಂದ್ರಮನೇಱಿದಂ ಹಿಮಕರಂ ಪ್ರಾಸಾದಮಂ ಭೂಪನೊ
ಪ್ಪಿದನಿರ್ವಕ್ಕದ ತಾರಕಾಪ್ರಕರದಿಂ ಚಂದ್ರಂ ನೃಪಂ ರಾಜಲೋ
ಕದಿನುದ್ಯೋತಿಸಿದಂ ಹಿಮಾಂಶುರುಚಿಯಿಂ ದೇಹಾಂಶುವಿಂ ಭೂಭುಜಂ
ಮುದಮಂ ಕೌಮುದಕಿತ್ತನಿತ್ತು ರಮಣೀನೇತ್ರಕ್ಕೆ ಧಾತ್ರೀಶ್ವರಂ ೨೪

ವ॥ ಅಂತು ನಿಜರಾಜಲೀಲೆಯಂತೆ ಜಲಕ್ಕನಾದ ರಾಜಲೀಲೆಯಂ ಸವಯೋವಯಸ್ಯ ರಾಜಲೋಕ ಪರಿವೃತಂ ಪರಿಮಿತಾಂಗರಕ್ಷಕಪರೀತನಮೃತಕರಧಾಮ ಧವಳಪಟಳಪರಿಚ್ಛಿನ್ನ ಪರ್ಯಂಕನಿಷಣ್ಣನವಲೋಕಿಸುತ್ತುಮಿರ್ಪಲ್ಲಿ

ಶಾ॥ ಶ್ವೇತದ್ವೀಪಮಿದೆಂಬ ಶಂಕೆ ಮಿಗೆ ಜಂಬೂದ್ವೀಪಮಂ ಪಾಂಡುರುಕ್
ಖಾತಂ ಕೂಡಿ ಪೊದಟ್ಟು ಪಜ್ಜಳಿಪ ಚಂದ್ರಾಲೋಕಮಂ ಕಂಡು ತ
ತ್ಪೂತಾತ್ಮಂ ನೆನೆದಂ ತನತ್ತು ಜನನಸ್ನಾನಕ್ಕೆ ಕಲ್ಪಾಮರ
ವ್ರಾತಂ ಮೇರುಗೆ ತಂದು ಪೊಯ್ಯೆ ಕವಿದಬ್ಧಿಕ್ಷೀರಪೂರೌಘಮಂ ೨೫

ವ॥ ಆ ಸಮಯದೊಳ್

ಮ॥ ಇದು ರಾಗಾಂಗದ ಮೋಹವಾರ್ಧಿಗೆ ಪೊದಟ್ಬೌರ್ವಾನಳಜ್ವಾಲೆ ಮೇ
ಣಿದು ಸಂಸಾರಸುಖಾತ್ತಚಿತ್ತ ಗಹನಾತಂಕಕ್ಕೆ ಮೇಣ್ ದಾವಮಿಂ

೧ ಗ (ಮೂ)

ತ್ರಿದು ವೈರಾಗ್ಯದ ರೂಪುಗಾಣಿಸುವ ದೀಪಜ್ಯೋತಿಯೆಂಬಂತಿರಾ
ದುದು ಭೋಂಕಲ್ ನಭದಿಂ ಪ್ರಭಾಸುಭಗಮುಳ್ಕಾಪಾತಮತ್ಯದ್ಭುತಂ ೨೬

ವ॥ ಆಗಳದಂ ಕಂಡು ಗರ್ಜನ್ಮೃಗೇಂದ್ರದಂಷ್ಟ್ರಮಂ ಕಂಡ ವೇತಂಡದಂತೆಯುಂ ದಾವ ಪಾವಕಜ್ವಾಲೆಯಂ ಕಂಡ ವನಶಿಖಂಡಿಯಂತೆಯುಂ ಗರುಡಚಂಚುವಂ ಕಂಡ ಕಂಚುಕೀಂದ್ರನಂತೆಯುಂ ಭಯಂಗೊಂಡು

ಕಂ॥ ಪುತ್ರಕಳತ್ರಪರಿಗ್ರಹ
ಗಾತ್ರಧನೈಶ್ವರ್ಯಮೆಂಬಿವಾರ್ಗಮನಿತ್ಯಂ
ಧಾತ್ರಿಯೊಳೆಂಬುದನೀಗಳ್
ಸೂತ್ರಿಸಿತೆನ್ನೆರ್ದೆಯೊಳುಳ್ಕೆ ಬಿೞ್ದೀಯುಳ್ಕಂ ೨೭

ವ॥ ಎಂದು ನಿರ್ವೇಗಪರನಾಗಿ

ಕಂ॥ ಸೊಡರಿರೆ ಕಟ್ಟಿಲೆಗೋಡುವ
ಜಡರವೊಲಿನ್ನವರೆಮಱಿದುಮಱಿಯದೆ ಮಱಿದಿ
ರ್ದುಡುಪನಿನಾದುದು ಸಾಲ್ವುದು
ತಡೆದಿರದಾಂ ಪಱಿವೆನುಱಿದೆ ಸಂಸೃತಿಲತೆಯಂ ೨೮

ಮ॥ ತನು ಪೆಂಪಿಂಗೆಡೆಯೇ ವಯೋಗತಿ ಕುಲೀನಾಚಾರಮೇ ಸೇವೆಯೊಳ್
ಕನಕಂ ಸೊಕ್ಕಿಸದೇ ಕಷಾಯಮಿನಿದೇ ಭೋಗಂ ಭಯಂದೋಱದೇ
ವನಿತಾಸಂಗಸುಖಂ ಜಘನ್ಯಮೆನೆ ತಪ್ಪೇ ರಾಜಲೀಲಾನುವ
ರ್ತನೆ ದೋಷಾವೃತಮಲ್ಲದೇ ಕ್ಷಿತಿಮನಕ್ಕುದ್ವೇಗಮಂ ಮಾಡದೇ ೨೯

ಉ॥ ನಿಟ್ಟೆಯಿದೇ ಬೆಡಂಗೆ ನರರೀಖಿಳಸಂಸೃತಿಯೊಳ್ ಜವಂಜವಂ
ಗೆಟ್ಟೊಡೆ ಮೃತ್ಯು ಸತ್ತೊಡೆ ಬಲಂ ಸಲೆ ನಿಂದೊಡೆ ಮುಪ್ಪು ತಪ್ಪುಕೀ
ಳ್ವಟ್ಟೊಡೆ ಪೊಗದಂತಿರಸುನಂಬುಗೆಗೊಟ್ಟೊಡೆ ರೋಗರಾಜಿ ಕೋ
ಳ್ಪಟ್ಟೊಡೆ ಕಾಲಮೆಯ್ದೆ ಕಡೆಗಾಲಮನೆಯ್ದದೊಡಾತ್ಮದೇಹಮಂ ೩೦

ಮ॥ ಅತಿ ನಿಸ್ಸಾರಮಿದೆಲ್ಲಮೆಂದಱಿದುವೆನ್ನೊಳ್ ಮತ್ತೆ ಸಂಸಾರಮು
ಹ್ಯತೆ ಮತ್ತಾಪ್ತಕಳತ್ರಪುತ್ರಜಿನಮೋಹಂ ಮತ್ತೆ ರಾಜ್ಯಾಂಗಸಂ
ಗತಿ ಮತ್ತಿಷ್ಟಸುಖೋಪಭೋಗರತಿ ಮತ್ತರ್ಥಾರ್ಜನಾಪೇಕ್ಷೆ ಮ
ತ್ತೆ ತದಾನುಗ್ರಹನಿಗ್ರಹಕ್ರಿಯೆ ಗಡೇಂ ಚಿಃ ಕಷ್ಟಮಿಾ ಚೇಷ್ಟಿತಂ ೩೧

ಕಂ॥ ಸಮನಿಸುವ ಸಹಜಶಾರೀ

ರಮಾನಸಾಗಂತುಕಪ್ರಕರಮೆನಿಸಿದ ನಾ
ಲ್ಕುಮುದಗ್ರಪೀಡೆಗೆಡೆಯಾ
ದ ಮಾನವಂಗಾವ ಭವದೊಳಂ ಸುಖಮುಂಟೇ ೩೨

ಒಡಲಂ ಸಂಸೃತಿಲತಿಕೆಯ
ಮಡಲಂ ಬಹುದುಃಖಬಹಳಲಹರಿಕೆಗಳ ಪೆ
ರ್ಗಡಲಂ ಸುಖಮುಖಮುದ್ರೆಯ
ಹೊಡಲಂ ಬಿಡಲಱಿಯದಂಗೆ ನಿರ್ವೃತಿಯುಂಟೇ ೩೩

ಚಂ॥ ಬಗೆಗಿಡೆ ಮುಪ್ಪು ಚಪ್ಪರಿಸದನ್ನೆಗಮುನ್ನತಶಕ್ತಿ ಕುಂದದ
ನ್ನೆಗವೆಳವೆಂಡಿರಿಚ್ಚೆ ಕಿಡದನ್ನೆಗಮೆತ್ತಿದ ಕುತ್ತವೊತ್ತದ
ನ್ನೆಗ ಮನುಜೀವಿಗಳ್ ಮನದೆ ಬೇಸಱದನ್ನೆಗಮುಗ್ರಮೃತ್ಯು ಬಂ
ದುಗುಬ್ಬುಗದನ್ನೆಗಂ ಪರಮದೀಕ್ಷೆಗುಪೇಕ್ಷಿಸಿದಂ ವಿವೇಕಿಯೇ ೩೪

ಗತಬಲನಾಗಿ ವಜ್ರಧರನಲ್ತು ವಯೋಧಿಕನಾಗಿ ತಾರ್ಕ್ಷ್ಯನ
ಲ್ತಿಜಡಭಾವಿಯಾಗಿ ಕಡಲಲ್ತು ನಿಜಶ್ರುತಿಶೂನ್ಯನಾಗಿ ಮಾ
ರುತಭುಗುಮಲ್ತು ದಂಡಧರನಾಗಿ ದಿಟಂ ಜವನಲ್ತು ನೀರದ
ಸ್ಥಿತಿಗವಕಾಶನಾಗಿ ಗಿರಿಯಲ್ತೆನೆ ವೃದ್ಧನಿದೇಂ ವಿರುದ್ಧನೋ ೩೫

ಸುದತಿಯರಾನನಾಂಬುಜವನಕ್ಕೆ ಹಿಮಂ ನಯನೋತ್ಪಲಕ್ಕೆ ಘ
ರ್ಮದ ಬಿಸಿಲಂಗವಲ್ಲರಿಗೆ ರೌದ್ರದವಾಗ್ನಿ ಮನೋಗಜಕ್ಕೆ ಸಿಂ
ಗದ ದನಿ ರಾಗನಾಗನಿವಹಕ್ಕೆ ನವಿಲ್ ಪ್ರಣಯಪ್ರದೀಪಸಂ
ಪದಕೆ ಸಮೀರನಲ್ತೆ ರತಿಲಂಪಟವೃದ್ಧನ ಭೋಗದಾಗ್ರಹಂ ೩೬

ಕಂ॥ ನಿಱಿದಲೆಯಿಂ ಹಲ್ಲಿಂದಂ
ನೆಱೆ ತಣಿದಿರದಾತ್ಮಸಾರ ಸರ್ವಸ್ವಮುಮಂ
ನೆಱೆಗೊಂಡು ತೇಪೆ ಜರೆ ಮ
ತ್ತುಱುದಂಡಂ ಕೊಂಡೊಡಲ್ಲದೆಂತುಂ ನಡೆಸಳ್ ೩೭

ಉ॥ ಚಿಂತಿಪ ಸುಯ್ವ ಜಾನಿಸುವ ಕಂದುವ ಕುಂದುವ ದಿಟ್ಟಿಗೆಟ್ಟು ವಿ
ಭ್ರಾಂತಿಪ ಲಜ್ಜೆಯಂ ಮಱೆವ ಕೊಳ್ಳುಗದಾಪ್ತರ ಮಾತುಗೇಳದಿ
ರ್ಪಂತುಟನೊಲ್ದಗಲ್ದವರೊಳಾಗಿಪರಂಗನೆಯರ್ಕಳೀಜರಾ
ಕಾಂತೆ ನರಂಗೆ ತಾನಗಲದಾಗಿಪಳೇಂ ವಿಪರೀತವೃತ್ತಿಯೋ ೩೮

ವ॥ ಆದಲ್ಲದೆಯುಂ

ಮ॥ ನರಕೋದ್ಯದ್ಗತಿ ಕಟ್ಟು ಕುಟ್ಟು ಕಡಿ ಸೀಳ್ ಕೊಲ್ಲೆಂಬ ದುಃಖಕ್ಕೆ ತಾ
ಯ್ಗುರು ತಿರ್ಯಗ್ಗತಿ ಪೂಡು ಪೊಯ್ ನಡೆಸು ಕೊಯ್ ಮೂಗೂಱ ಪೇಱೆಂಬ ನಿ
ಷ್ಠುರ ನಿಷ್ಪೀಡೆಗಡರ್ಪು ಮರ್ತ್ಯಗತಿ ಕುತ್ತಂ ಮುಪ್ಪು ತೇಱ್ಪಾವುದ
ಳ್ಪುರಿ ಶೋಕಂ ಸಿಡಿಲಸ್ತ್ರಮೆಂಬಿವಱನಪ್ಪುಗ್ರಾರ್ತಿಗಾಲಂಬನಂ ೩೯

ಚಂ॥ ಸುರಗತಿ ಜೀವಿತಾಂತ್ಯಮಱುದಿಂಗಳದಿನ್ನೆನೆ ಮುನ್ನೆ ಶೋಕದಿಂ
ಕೊರಗುವ ಸುಯ್ವು ಬಾಯಟಿವ ನಲ್ಲರಗಲ್ಕೆಗಟಿಲ್ವವಸ್ಥೆಗಾ
ಗರಮದಱಿಂ ಚತುರ್ಗತಿಯ ನಾರಕರೊಳ್ ತಿರಿಕಂಗಳೊಳ್ ಮನು
ಷ್ಯರೊಳನಿಮೇಷರೊಳ್ ಸುಖಮನೀ ಖಲ ಸಂಸೃತಿ ಪುಟ್ಟಲೀಗುಮೇ ೪೦

ಉ॥ ಪುಟ್ಟದ ಯೋನಿ ಪೊಂದದೆಡೆ ಮಾಡದ ಪಾತಕಮೆಯ್ದದಚ್ಚಿಗಂ
ಮುಟ್ಟದ ನೋವು ಮಚ್ಚಿರದತಿವ್ಯಸನಂ ಗೆಡೆಗೊಳ್ಳದಾಶ್ರಯಂ
ಕಟ್ಟದ ಕರ್ಮಮಾಗದ ಪರಾಭವವೊತ್ತದ ಕುತ್ತವನ್ಯರಿಂ
ಕಿಟ್ಟದ ಕೇಡು ದೇಹಿಗಳೊಳಿಲ್ಲೆನೆ ಸಂಸೃತಿ ಸೌಖ್ಯಸಾರಮೇ ೪೧

ಮ॥ ಬಹುಪಲ್ಯೋಪಮಸಾಗರೋಪಮಮೆನಿಪ್ಪಾಯುಷ್ಯರಂ ವಿಸ್ಮಯಾ
ವಹ ಸಾಮರ್ಥ್ಯರುಮಪ್ಪ ದೇವರುಮನೇಕ ಸ್ವರ್ಗದುರ್ಗಸ್ಥರಂ
ಗಹನಂಗೆಯ್ಯದೆ ಕೊಲ್ವನೆಂದೊಡುಟಿದಲ್ಪಾಯುಷ್ಯಸಾಮರ್ಥ್ಯಮಿ
ಮಹಿಯೊಳ್ ಮಾನವಕೀಟಕೋಟಿಯುಮಿದೇಂ ಕಾಳಂಗೆ ಹೇಳಾಂಚಿತಂ ೪೨

ನಿಜಸೇನಾಪತಿ ಮುಪ್ಪು ದಕ್ಷಸಚಿವಂ ಮೋಹಂ ಮಹಾದೇವಿ ತೃ
ಷ್ಣೆ ಜಯೋದಗ್ರಪರಿಗ್ರಹಂ ವಿಷಯರಾಗಂ ಚಕ್ರಮಂಗಾಮಯಂ
ಗಜವಾಜಿಪ್ರಕರಂ ಕಷಾಯಮೆನೆ ಮೆಯ್ವೆತ್ತಿರ್ದ ಸಂಸಾರಘೋ
ರಜಗದ್ರಾಜ್ಯದೊಳಾರನಾಕ್ರಮಿಸನುಗ್ರಂ ಕಾಲಚಕ್ರೇಶ್ವರಂ ೪೩

ವ॥ ಎಂದಿಂತು ಪರಮ ನಿರ್ವೇಗಪರವಾಗಿ ನುಡಿದನಿತಱಿಂ ಮಾಣದೆ ಮತ್ತಂ ದ್ವಾದಶಾನುಪ್ರೇಕ್ಷೆಗಳನನುಗತಿಯಿನನುಸ್ಮರಿಸಲ್ ಬಗೆದು

ಮ.ಸ್ರ॥ ಜಳರೇಖಾಸಂಚಳಂ ಜವ್ವನಮಮಧನುರ್ಜಾಲಮಂಗಂ ತಟಚ್ಚಂ
ಚಳಮೈಶ್ವರ್ಯಂ ನದೀಬುದ್ಬುದಚಯಚಪಳಂ ಪುತ್ರಮಿತ್ರಾನುಬಂಧಂ
ಜಳಭೃದ್ವಾರಿಪ್ಲವಂ ಸಂಚಿಸಿದೊಡಮೆ ಹಿಮವ್ಯಾಕುಳಂ ಸ್ತ್ರೀಕುಳಂ ಸಾ
ನಿಳವೀಥೀದೀಪ್ತರೋಚಿಸ್ತರಳಮಖಿಳಭೋಗೋಪಭೋಗಾನುಬಂಧಂ ೪೪

ಉ॥ ಕಾಯದು ಪುತ್ರಮಿತ್ರತತಿ ಕಾಯದು ತಂದೆಯ ತಾಯ ಕೆಯ್ವೊಲಂ
ಕಾಯದು ದೇವತಾಗಣದ ರಕ್ಷಣೆ ಕಾಯದು ವಜ್ರಪಂಜರಂ
ಕಾಯದು ಮಂತ್ರತಂತ್ರವಿಧಿ ಕಾಯದು ದುರ್ಗಮದುರ್ಗದಾಶ್ರಯಂ
ಕಾಯದನಂತವಾಹಿನಿ ಜವಂ ಕೊಲೆ ಧರ್ಮಮೆ ಕಾಯ್ಗುಮಾರುಮಂ ೪೫

ಕಂ॥ ಸಮಸಂದು ಪುಣ್ಯಮಂ ನೆರ
ಪುವಲ್ಲಿ ಪಾಪಮನುಪಾರ್ಜಿಪಲ್ಲಿ ಬೞಿಕ್ಕಂ
ತವಱ ಫಲಮಪ್ಪ ಸುಖದುಃ
ಖಮನನುಭವಿಪಲ್ಲಿ ಜೀವನೊರ್ವನೆ ಪೇೞನೇ ೪೬

ನೆಗೞ್ದಿನಗೆ ತಂದೆ ತಾಯ್ ಸೊಸೆ
ಮಗಳಕ್ಕಂ ತಂಗಿ ತಮ್ಮನಣ್ಣಂ ಭಾವಂ
ಮಗನಳಿಯಂ ಮೆಯ್ದುನನ
ತ್ತಿಗೆ ನಾದಿನಿ ಮಾವನತ್ತೆ ಪೆಂಡಿತಿ ಗಂಡಂ ೪೭

ಎಂಬೀ ಮೋಹದ ಬಂಬಲ
ಪಂಬಲೊಳೇಂ ಮುನ್ನೆ ತನ್ನ ದೇಹಾಶ್ರಯದಿಂ
ದಂ ಬಂದನು ಬಂಧನ ತನು
ತಾಂ ಬೇಱನೆ ದೇಹಿಗನ್ಯವಸ್ತುವದುಂಟೇ ೪೮

ಮ॥ ಬಿಸುನೆತ್ತರ್ ತೊಗಲೆಲ್ವು ಕರ್ಬಸು ಕರುಳ್ ಹಿಂದೊಂಡೆ ಖಂಡಂ ಮಿದುಳ್
ಬಸೆ ಶುಕ್ಲಂ ಕ್ರಿಮಿ ಕೀವು ಕೀಣಿ ಕೊಳೆ ಸಿಂಬುಳ್ ಸಿಳ್ಪುಗಳ್ ಲೋಳೆ ಲಾ
ಳೆ ಸರನ್ಮೂತ್ರಜಳಂ ಮಳಂ ಮಱುಕಮುಗ್ರವ್ಯಾಧಿ ದುರ್ಗಂಧಮು
ರ್ವಿಸುಗುಂ ಪೇಸುಪತಂಕರಂ ಕಿಸುಗುಳಂ ಕಾಯಂ ಶುಚಿಪ್ರಾಯಮೇ ೪೯

ಕಂ॥ ನಿಯತಂ ಬಳಸಿದ ವಾಯು
ತ್ರಯದಿನಧಸ್ತಿರ್ಯಗೂರ್ಧ್ವಭೇದವಿಕಲ್ಪ
ತ್ರಯದಿಂ ದ್ವಿಸಪ್ತರಜ್ಜೂ
ಚ್ಛ್ರಯದಿಂ ತ್ರಸನಾಳಗರ್ಭಮಿರ್ಕುಂ ಲೋಕಂ ೫೦

ವ್ರತವಂ ಕೊಂಡೞಿದೊಡೆ ಪರ
ಮತವಂ ನಂಬಿದೊಡೆ ಖಳಕಷಾಯಂ ಮನದೊಳ್
ವೃತಮಾದೊಡೆ ವಿಷಯದೊಳಭಿ
ಮತಮಾದೊಡೆವಷ್ಟಕರ್ಮದಾಶ್ರಯಮಕ್ಕುಂ ೫೧

ಪರಮಗುಣಮೊಂದೆ ಸಂಯಮಿ
ಗೆರಡು ತಪಂ ಮೂಱು ಗುಪ್ತಿ ನಾಲ್ಕು ಕಷಾಯೋ
ತ್ಕರದಱಿವೆಯ್ದಾಚಾರಂ
ದೊರೆಕೊಳಿಸಿದ ಸುಕೃತದೊದವು ಸಂವರೆಯಕ್ಕುಂ ೫೨

ಚಾರುತಪೋವ್ರತಗರುಡೋ
ದ್ಗಾರದ ಮಣಿಯಿಂದೆ ದೋಷವಿಷಧರವಿಷಸಂ
ಹಾರಮನಾಗಿಪ ಮುನಿವೃಂ
ದಾರಕನ ನೆಗೞ್ತೆ ಕರ್ಮನಿರ್ಜರೆಗಾರ್ಮಂ ೫೩

ಪ್ರತಿಭೆಗೆ ಫಲಮಱಿವಿನ ಗತಿ
ಗತಿಗೆ ಫಲಂ ವಿಷಯವಿರತಿ ವಿರತಿಗೆ ಫಲಮಾ
ರ್ಹತಪರಮದೀಕ್ಷೆ ದೀಕ್ಷೆಗೆ
ಸುತಪಂ ಫಲಮೆನೆ ನೆಗೞ್ದುದದೆ ಬೋಧಿವಲಂ ೫೪

ದಯೆ ವೃಕ್ಷಮೂಲಮೆನಿಕುಂ
ನಿಯಮಂ ವ್ರತಶೀಲಮಾಳವಾಳಮೆನಲ್ಕೇ
ೞ್ಗಿಯನಾಳ್ದು ಸುಖದ ಫಲಪ್ರಾ
ಪ್ತಿಯನಾಗಿಪ ಕಲ್ಪವೃಕ್ಷಮಲ್ಲದೆ ಧರ್ಮಂ ೫೫

ನಾರಕತಿರ್ಯಗ್ನರ ಬೃಂ
ದಾರಕರೆನೆ ಗತಿಚತುಷ್ಟಯಂಗಳೆ ಸಲೆ ಸಂ
ಸಾರದ್ರವ್ಯಕ್ಷೇತ್ರಾ
ದ್ಯಾರೋಪಿತಭೇದದಿಂದಮದು ಪಂಚಾತ್ಮಂ ೫೬

ವ॥ ಎಂದು ಭಾವಿಸುತ್ತುಮಾ ಮಹಾತ್ಮಂ

ಕಂ॥ ಆವಳುಮನುೞಿದು ಮುಕ್ತಿ
ಶ್ರೀವಧುಗೆ ಪಲುಂಬುತಿರ್ಪನೀ ವಿಭು ಬಿಡನೆಂ
ದೇವಯ್ಸಿ ಮುಳಿದವೋಲ್ ನಿ
ದ್ರಾವಧು ಬಾರದಿರೆ ಕಳೆದನಂದಿನ ದಿನಮಂ ೫೭

ವ॥ ಆ ಸಮಯದೊಳ್

ಕಂ॥ ಕಮಳಾರ್ಥಿ ಮಂದಭಾವಂ
ಕುಮುದಾತ್ತಮಪಾಯಗಮನಮೋಚನಚತುರಂ
ಭ್ರಮರಹಿತಂ ವೈಭಾತಿಕ
ಸಮೀರನೆಸಗಿದುದು ಪೋಲ್ತು ಸುವಿಧಿಯ ಬಗೆಯಂ ೫೮

ಉ॥ ಮಿತ್ರಸಮಾಗಮಕ್ಕೆ ಸೆಡೆದಂಬರಮಂ ಬಿಡುವಾತ್ಮಸೇವ ನ
ಕ್ಷತ್ರಗಣಂ ಕಳಲ್ವಿನಮಗಲ್ದಿ ನಿಶಾಂತವಿರಕ್ತನಪ್ಪ ನಿ
ರ್ಗೋತ್ರನೆನಿಪ್ಪ ಸತ್ಕುವಳಯೋದ್ಗತಲಕ್ಷ್ಮಿಯನೊಕ್ಕು ಪೋಗಲಿ
ರ್ಪತ್ರಿಜನೆಂದು ಕನ್ನಡಿಸಿದಂ ಸುವಿಧೀಶನ ಚಿತ್ತವೃತ್ತಿಯಂ ೫೯

ವ॥ ತದನಂತರಂ

ಚಂ॥ ತವೆ ತಮದೊಡ್ಡು ರಾಜಿಸಲೊಡರ್ಚೆ ದಿಗಂಬರಲೀಲೆ ಪುಟ್ಟೆ ಭೂ
ಭುವನಜನಕ್ಕೆ ದರ್ಶನವಿಶುದ್ಧತೆ ಕುಂದೆ ಬಹುಪ್ರತಾರಕೋ
ದ್ಭವರುಚಿ ನೀರಜಸ್ಥಿತಿಯನಾತಪದೇೞ್ಗೆಯನಾಗಿಸಲ್ ಜಿನಂ
ಸಿವಿಗೆಯನೇಱುವಂತುದಯಶೈಲಮನೇಱಿದನಂಬುಜಪ್ರಿಯಂ ೬೦

ಕಂ॥ ಕ್ರಮರಾಜ್ಯಲಕ್ಷ್ಮಿಗವಚ
ತ್ತಮಳ ತಪೋಲಕ್ಷ್ಮಿಗೆಳೆಸುವನಘನ ಮನಮಂ
ಕುಮುದಿನಿಗವಚತ್ತ ದಳ
ತ್ಕಮಳಿನಿ ಪೇೞಾಗಳೇನುದಾಹರಿಸಿದಳೋ ೬೧

ವ॥ ಅಂತು ನೇಸರ್ಮೂಡಲೊಡಮಾ ಮಹಾನುಭಾವನ ವಿರಾಗನಿರತಮಾನಸ ಸರೋಜಮನಲರ್ಚಲ್ ಮನಂದಂದು

ಮ॥ ನೆರೆದೆೞ್ತರ್ಪಿನಮಂಡಳಂಗಳಿವು ಬೇೞಿಂಬಂತೆ ಬಂದರ್ ದಿಗಂ
ಬರಮಂ ವ್ಯಾಪಿಸೆ ಭೂಷಣಾಂಶುಪಟಳಂ ಸಾರಸ್ವತಾದಿತ್ಯವ
ಹ್ನ್ಯರುಣವ್ಯಾಹತಗರ್ದತೋಯತುಷಿತಾರಿಷ್ಟರ್ಕಳೆಂಬೆಣ್ಬರುಂ
ವರಲೋಕಾಂತಿಕದೇವ ರತ್ಯಮಳಭಾವರ್ ಬ್ರಹ್ಮಲೋಕಾಂತದಿಂ ೬೨

ವ॥ ಅಂತು ಬಂದು

ಕಂ॥ ಸುರಲೋಕಸುರಭಿಕುಸುಮೋ
ತ್ಕರಗಂಧಾಕ್ಷತದಿನಭವನಡಿದಳಿರ್ಗಳನಾ
ದರದಿಂದರ್ಚಿಸೆ ಮುಕುಳಿತ
ಕರಕಮಳರ್ ನುಡಿದರತಿಗಭೀರಧ್ವನಿಯಿಂ ೬೩

ಪರಮೇಷ್ಠಿಯೆ ಸಕಳ ಚರಾ
ಚರಗುರುವೆನೆ ವಿದಿತ ಸಕಳತತ್ವನೆ ತೀರ್ಥಂ
ಕರನೆ ಭವಜಲಧಿಕರುಣಾ
ಕರನಾದ್ಯ ಪುಟ್ಟಿದಱಿತಸಂತಸಮೆಮ್ಮೊಳ್ ೬೪

ಮ॥ ಸಹಜಂ ಮುನ್ನಮೆ ದೇವ ನಿನ್ನ ಮನದೊಳ್ ವೈರಾಗ್ಯಮುಂಟಾದೊಡಂ
ಮಹಿಶಂ ರಕ್ಷಿಪ ಧರ್ಮಸಂತತಿನಿಮಿತ್ತಂ ರಾಜ್ಯಮಂ ತಾಳ್ದಿ ನಿ
ಸ್ಪೃಹನಾಗಿರ್ಪವೊಲಿರ್ದೆನಿನ್ನೆವರಮೀಗಳ್ ದ್ರೋಹದುರ್ಮೋಹನಿ
ಗ್ರಹನಿಷ್ಠಾಗ್ರಹನಾದೆ ಲೋಕಹಿತರಾರೆಲ್ಲಂದ[1][ದಿನ್ನೇವರಂ][1] ೬೫

ನವ ಮಂದಾರಲತಾಂತಗಂಧಮಿರೆ ಮೆಯ್ವೆತ್ತನ್ಯಪುಷ್ಪಪ್ರತಾ
ನವನಾಘ್ರಾಯಿಪ ತುಂಬಿಯಂತೆ ವಿನಮದ್ಗೀರ್ವಾಣ ಸೌ
ಖ್ಯವಿರಲ್ಕೀ ಕ್ಷಿತಿರಾಜ್ಯಸಂಪದಮನುಂತುಂ ನಚ್ಚೆ ಮೆಚ್ಚಿರ್ದೊಡೀ
ಭುವನಾಧೀಶ್ವರ ನಿನ್ನ ಬೋಧದೆಸಕಂ ಚುನ್ನಕ್ಕೆ ಪಕ್ಕಾಗದೇ ೬೬

ಕಂ॥ ಕಾಗೆ ಸವಿವಂತು ಸವಿಗುಮೆ
ರಾಗಿಸೆ ಮಿಂದುಟಿಯ ನೀರನಂಚೆ ಜಡಾತ್ಮರ್
ಭೋಗಿಪವೋಲ್ ನಿಮ್ಮನ್ನರ್
ಭೋಗಿಸುವರೆ ದುರಿತಸುಖವನೈಹಿಕಸುಖಮಂ ೬೭

ನಖದಿಂ ಕೆಱಿಂಕು ದುಱಿಸುವ
ಸುಖಮುಂ ಬೞಿಕೊಳ್ಳನುರಿವ ದುಃಖಮುಮೆಂತಂ
ತಖಿಳ ವಿಷಯೋಪಭೋಗದ
ಸುಖಲವ ಮನುದುಃಖಮನಘ ನೀನಱಿಯದುದೇ ೬೮

ನಿನ್ನಂ ಪ್ರತಿಬೋಧಿಪುದೆ
ಗ್ಗೆನ್ನದಿರಧಿಕಾರಮೆಮಗಿದಱಿವಿನ ಮದವ
ಲ್ತುನ್ನತ ಪೇಟಿ ಬೆಳಗುವುದೇ
ಕನ್ನಡಿಯಂ ಬೆಳಗುವಂತೆ ಕೆಯ್ಗಾವಲಿಯಂ ೬೯

ಗುರುಗಳ ಮುಂದೋದುವುದುಂ
ಪರಿವಿಡಿಗೆಯ್ವಂತೆ ನಿನ್ನ ಬಗೆದುದನೆ ಪುನಃ
ಸ್ಮರಣಕ್ಕೆ ತಂದೆವಲ್ಲದೆ
ಪರಿಬೋಧಿಪರಲ್ಲವಖಿಳ ರತ್ನಾಂಬುನಿಧೀ ೭೦

೧.ದಿಂ ನೀಂ ಬರಂ (ಮೂ)

ವ॥ ಆದಱಿಂದಂ

ಮ॥ ಅದಟಂ ಮಿಱುವಮೊತ್ತಮಂ ಮಿದಿವ ಕಾಳವ್ಯಾಳದಂತಾಳಿಯಂ
ಮೊದಲಿಂ ಕೀಳ್ವ ಸದರ್ಪದರ್ಪಕನ ಕೂರ್ಪಂ ಮೊಟ್ಟೆಮಾಱುಗ್ರಮೋ
ಹದವಜ್ವಾಳೆಯನಾಂತು ತಟ್ಟಿಸುವ ಮುಕ್ತಿಶ್ರೀಯ ಶೃಂಗಾರಪೂ
ರದೊಳೋಲಾಡುವ ನಿನ್ನಪೇಕ್ಷೆ ನಿಮಿರ್ಗುಂ ಭದ್ರಂ ಶುಭಂ ಮಂಗಳಂ ೭೧

ವ॥ ಎಂದು ಪ್ರತಿಬೋಧಿಸಿ ಬೀಱ್ಕೊಂಡು ಪೋಗಲೊಡಂ

ಉ॥ ಶಾರದನೀರದಪ್ರಸರಮಧ್ಯದೊಳುಜ್ವಳಿಸಿರ್ದ ಚಂದ್ರಮ
ಶ್ರೀರುಚಿ ಗೌರಸಂಗತಿಯಿನಿರ್ಮಡಿನಿರ್ಮಳಮಪ್ಪವೋಲ್ ರಜೋ
ದೂರನ ನಿಶ್ಚಳಾಶಯದೊಳಾಗಳವರ್ ಪ್ರತಿಬೋಧಿಸಲ್ಕೆ ಸಂ
ಸಾರಶರೀರಭೋಗವಿರತಿತ್ರಯಮಗ್ಗಳವಾಯ್ತನರ್ಗಳಂ ೭೨

ವ॥ ತದನಂತರಂ

ಮ॥ ಅವನೀಶಂ ನಿಜಮಂತ್ರಿಮಂಡಳಮಹಾಸಾಮಂತಶುದ್ಧಾಂತಬಾಂ
ಧವವರ್ಗಕ್ಕೆ ಸಮಂತು ಸೂಚಿಸಿ ನಿಜಾಭಿಪ್ರಾಯಮಂ ತೂರ್ಯಘೋ
ಷವಶ್ಯಂ ದೆಸೆಯಂ ಪಳಂಚೆ ಪಿರಿದೊಂದುತ್ಸಾಹಮಂ ಮಾಡಿ ಗೌ
ರವದಿಂ ಕೀರ್ತಿಧರಂಗೆ ಕೊಟ್ಟನಖಿಳಾಂಗಪ್ರಾಜ್ಯಮಂ ರಾಜ್ಯಮಂ ೭೩

ವ॥ ಅಂತು ಚಿರಂತನನರೇಂದ್ರ ಚಾರುಚರಿತಕೀರ್ತಿಧರನಪ್ಪ ಕೀರ್ತಿಧರನ ನನ್ವಯಶ್ರೀಯೊಳಿಟ್ಟು ಮತ್ತುೞಿದ ನರದೇವಪ್ರಮುಖತನಯರುಮನವರ್ಗವರ್ಗೆ ತಕ್ಕ ವೃತ್ತಿ ಪ್ರಪತ್ತಿಯಿಂದೊಡಂಬಡಿಸಿದಾಗಳ್

ಚಂ॥ ಮಣಿಯದೆ ರಾಜ್ಯಲೋಭವಶದಿಂ ಪುರುಷಾರ್ಥಮನೊಕ್ಕು ಪಾರ್ಥಿವಾ
ಗ್ರಣಿಗಳನೇಕರುಂ ಜವನ ದಾಡೆಯೊಳೞ್ದರಿಂತು ಬಿಟ್ಟರಾ
ರಣ ಮಱೆದುಟ್ಟ ಮೈಲಗೆಯ ಸೂಡಿದ ಬಾಸಿಗದೊಲ್ಮೆಗುಂಡ ಮೇ
ಲುಣಿಸಿನ ಮೆಲ್ದ ತಂಬುಲದ ಪಾೞಿಗೆದಂದು ಸಮಸ್ತರಾಜ್ಯಮಂ ೭೪

ವ॥ ಎಂದು ಲೋಕಮೆಲ್ಲಂ ಪೊಗೞೆ

ಕಂ॥ ಬಿಡಿಸಿ ವಧೂಜನಮನೊಡಂ
ಬಡಿಸಿ ಪಿತೃದ್ವಯಮನಖಿಳ ವಿಷಯಸುಖಕ್ಕೋ
ಗಡಿಸಿ ಭವಪಾಶಮಂ ಪಱೆ
ಪಡಿಸಿ ವಿಮೋಹಮನಳುರ್ಕೆಗಿಡಿಸಿ ನರೇಂದ್ರಂ ೭೫

ಪರಿಚಿತಪರಿಜನಮಮಂ ಪರಿ
ಹರಿಸಿ ಪರಿಸ್ಪಂದಮೊಂದುಮಿಲ್ಲೆನೆ ತನ್ನೊಳ್
ಪರಿನಿಷ್ಕ್ರಮಣಕ್ಕೆ ಮನಂ
ಪರಿಯೆ ಪರಿಚ್ಛೇದಿಸಿದನದೇಂ ಪರಿಣತನೋ ೭೬

ವ॥ ಆ ಪ್ರಸ್ತಾವದೊಳ್

ಮ॥ ತ್ರಿಜಗತ್ಕ್ಷೋಭಿಚತುರ್ವಿಧಾಮರಚಮೂಕೋಳಾಹಳಂ ವ್ಯೋಮಸಾ
ಮಜದಾನಾಂಬು ಕರಂಬಿತಾಂಬರತಳಂ ದೇವೀಜನಾಪಾಂಗದೀ
ಪ್ತಿಚಯಪ್ರಾವೃತದಿಕ್ತಟಂ ದಿವದಿನೆಟ್ಟಿಂದಂ ಮಹೋತ್ಸಾಹದಿಂ
ನಿಜನೇತ್ರಾಳಿನಿಪೀಯಮಾನಶಚಿವಕ್ತ್ರಾಬ್ಜಾಸವಂ ವಾಸವಂ ೭೭

ವ॥ ಅಂತು ಬಂದಾ ಸಕಲಕಲ್ಪಾಮರಪ್ರಕರಪರಿವೃತಂ ರಾಜಭವನಮಂ ಪೊಕ್ಕು ಪೌಲೋಮಿವೆರಸು ಪರಮನಡಿಗೆಱಗಿ ಪಿರಿದುವೊಸಗೆಮರುಳ್ಗೊಂಡು ಜಗತ್ರಿತಯಮಂಗಳನ ನುತ್ತುಂಗಮಂಗಳಸ್ನಾನಪೀಠದೊಳ್ ಕುಳ್ಳಿರಿಸಿ

ಕಂ॥ ಮಂದರದೊಳ್ ಮಾಡಿದೆವೀ
ಯಂದದೆ ಜನ್ಮಾಭಿಷವಮನಭವನ ಕಿಱಿಯಂ
ದಿಂದು ಪುರಜನಕೆ ತೋರ್ಪವೊ
ಲೆಂದಮರರ್ ನೀಡೆ ದುಗ್ಧಜಲನಿಧಿಜಲಮಂ ೭೮

ಉ॥ ನೋಡೆ ಸಮಸ್ತಪೌರಜನವಾಡೆ ಮರುದ್ಗಣಿಕಾಳಿಮಂಗಳಂ
ಬಾಡೆ ಪುಳೋಮಪುತ್ರಿ ಮಿಗೆ ಮಾಡೆ ವಿಭೂತಿಯನಿಂದ್ರಕೋಟಿ ಕೈ
ಗೂಡೆ ನಿಳಿಂಪತೂರ್ಯರವಮೋಡೆ ವಿನೇಯರ ಪಾಪಪೀಡೆ ಕೊ
ಡಾಡೆ ಜಗಂ ಜಿನಂಗೆಸಗಿದಂ ಪರಿನಿಷ್ಕ್ರಮಣಾಭಿಷೇಕಮಂ ೭೯

ವ॥ ಅನಂತರಂ
ಕಂ॥ ದಿವ್ಯಾಂಬರ ಭೂಷಣಕುಸು
ಮವ್ಯಾಲೇಪನದೆ ವಜ್ರಿ ಕೆಯ್ಗೆಯ್ಸೆ ಜಗ
ತ್ಸೇವ್ಯ ತಪಃಶ್ರೀಯ ವಿವಾ
ಹವ್ಯಾಪ್ತಿಯ ನವವರಂಬೊಲೊಪ್ಪಿದನನಘಂ ೮೦

ವ॥ ಅಂತೊಪ್ಪಿ ವೃಂದಾರಕವಂದಿವೃಂದ ಜಯಜಯಧ್ವಾನವಗ್ಗಳಿಸೆ ಹರಿಪೀಠ ದಿಂದೆಟ್ಟು

ಮ॥ ಅನಿಮೇಷಾನಕ ಕೋಟಿಗಳ್ ಮೊಟಿಗೆ ಕಲ್ಪೇಂದ್ರಪ್ರತೀಹಾರತ
ರ್ಜನಕೋಳಾಹಳಮುಣ್ಮೆ ದೇವಗಣಿಕಾಸಂಗೀತಕಂ ಸೇವ್ಯಮಾ
ಗೆ ನಿಜಾವಾಸದಿನಿಂದ್ರಸಿಂಧುರ ಕರಸ್ಕಂಧಾವಳಂಬಂ ತಪೋ
ವನದತ್ತಲ್ ತಳರ್ದಂ ಪದದ್ಯುತಿವಿಳಾಸಂ ಪಾಸೆ ಪಂಕೇಜಮಂ ೮೧

ವ॥ ಆಗಳ್

ಚಂ॥ ಇದು ದಿವಿಜೇಂದ್ರಮಂದಿರದ ಮಾಱ್ಕೆಯನೀಟ್ಕಳಿಗೊಂಡುದಿಕ್ಕಿ ಮೆ
ಟ್ಟಿದುದಿದು ಕಿನ್ನರೇಶ್ವರನ ಪುಷ್ಪಕದೊಪ್ಪಮನೊಪ್ಪುಗೊಂಡುದಿಂ
ತಿದು ನಿಜಲೀಲೆಯಿಂ ರಿತುವಿಮಾನದ ಲೀಲೆಯನೆಂಬ ಚೆಲ್ವನಾ
ಳ್ದಿದಿರೊಳಳಂಕೃತಂ ಸಿವಿಗೆ ಬಂದೆಸೆದಿರ್ದುದು ದಿವ್ಯಕಲ್ಪಿತಂ ೮೨

ಉ॥ ಯಾಮಿನಿಯಂತೆ ಚಂದ್ರರುಚಿರಾಜಿತವಕ್ಷಯಮೂರ್ತಿಯಂತೆ ಮು
ಕ್ತಾಮಯಭಾಸಿ ಬಾಲರವಿಯಂತೆ ಸಮುದ್ಗತಪದ್ಮರಾಗಮಿಂ
ದ್ರಾಮರನಂತೆ ವಜ್ರಕರಶೋಭಿ ವನಸ್ಥಳದಂತೆ ವಿದ್ರುಮ
ಸ್ತೋಮವಿಳಾಸಿ ವಾಯುಪಥದಂತದು ತಾಂ ಹರಿನೀಳಭಾಸುರಂ ೮೩

ಕಂ॥ ಬಿಸುಪಂ ಬೀಱಿದು ಕುವಳಯ
ದ ಸೊಂಪನುಡುಗಿಸದು ಮಿಕ್ಕ ಶತಪತ್ರಮನೆ
ಟ್ಟಿಸುತಂ ಸೂರ್ಯಪ್ರಭೆಯಂ
ತೆಸೆದುದು ಸೂರ್ಯಪ್ರಭಾಖ್ಯ ಶಿಬಿಕಾಯಾನಂ ೮೪

ವ॥ ಅಂತಾ ಮಹೋತ್ಸವದೊಳುಚಿತಶಿಬಿಕಾನಿಜೋಪಖಚಿತ ಪದ್ಮರಾಗ ರುಚಿಯಿಂದೆ ರಾಗಮಂ ಬೀಱುವಂತೆ ಸೂಸಕದ ಮುತ್ತುಗಳ ಬೆಳಗಿನಿಂ ನಸುನಗೆಯನೆಸಗುವಂತೆ ಬಳಸಿಯುಮೆಟಲ್ವ ಬಾಸಿಗದ ಬಣ್ಣದಿಂ ಕಣ್ಣಾರೆ ನೋಡುವಂತೆ ಮಿಱುಪ ಕಿಱುಗೆಜ್ಜೆಯುಲಿಗಳಿಂ ನಲಿನಲಿದು ನುಡಿವಂತೆ ಘನಘಟಿತಘಂಟಾರವಂಗಳಿಂ ಮಂಗಳಂ ಬಾಡುವಂತೆ ಮಿಳಿರ್ವ ಪಳಯಿಗೆಯ ತುಱುಗಲಿಂ ಕೈನಿಱಿದು ನರ್ತಿಸುವಂತೆ ತೆತ್ತಿಸಿದ ಪುತ್ತಳಿಗಳಾಭರಣಕಿರಣದಿಂ ಸೇಸೆಯಂ ಸೂಸುವಂತೆ ದೇಸೆವಡೆದೆಸೆವ ಸಿವಿಗೆಯಂ ನಿರ್ವಾಣನಿಳಯ ನಿಶ್ರೇಣಿಕಾರೋಹಣಮಂ ಮುಂದುದೋಱಿದಂತೇಱಿದಾಗಳ್

ಕಂ॥ ಏಟಡಿಯಂ ಮುನ್ನವನಿಪ
ರೇಟಡಿಯಂ ಬೞಿಕೆ ನಭದೊಳಂಬರಚರರ
ತ್ತೇಟಡಿವರಂ ಸುರಾಸುರ
ರೇಟಡಿಯೊಯ್ದರ್ ಬೞಿಕ್ಕಮಭವನನಿಂದ್ರರ್ ೮೫

ಬಂಧುರ ಮಣಿಮಯಶಿಬಿಕಾ
ಕಂಧರರೊಯ್ವಲ್ಲಿ ಜಿನನ ದೇಹಪ್ರಭೆಯಿಂ
ಕಂಧರಪದಮೆಸೆದುದು ಸುರ
ಸಿಂಧುವ ಪೊನಲೊಳಗೆ ಮೂಡಿ ಮುಳ್ಕಾಡುವವೋಲ್ ೮೬

ಧೃತಪುಷ್ಪದಂತ ಸೌಮ್ಯ
ದ್ಯುತಿ ಗುರುಸಿತನೀಳಕೇತು ಚಿತ್ರಾರಸವಿ
ಸ್ತೃತಮೇಂ ಜ್ಯೋತಿರ್ಲೋಕ
ಸ್ಥಿತಿಯವೊಲೆನಿಸಿದುದು ಸಿವಿಗೆ ಖಚರರ ಮನದೊಳ್ ೮೭

ವ॥ ಅಂತು ಪುರವರಕ್ಕನತಿದೂರಮಪ್ಪ ಪುಷ್ಪಕೋದ್ಯಾನಕ್ಕೆ ಪುಷ್ಪದಂತ ಪರಮೇಶ್ವರಂ ಪೋಗೆವೋಗೆ

ಕಂ॥ ಬೞಸಂದು ಗುರುಜನಂಗಳ
ಪೞಯರ ಮಂತ್ರಿಗಳ ನೃಪರ ಕುವರರ ಮೊತ್ತಂ
ಕೞಪಲ್ಕೆ ಪೋಗೆ ವಿಭುವಂ
ಪೊೞಲನುಕರಿಸಿದುದು ಬೀತ ನಂದನವನಮಂ ೮೮

ವ॥ ಅಂತು ಪೊೞಲ ಜನ ಮೞಲನಪ್ಪುಕೆಯ್ದು

ಮ॥ ಪ್ರಕಟರ್ ನೀತಿವಿದರ್ ನೃಪರ್ ಪೞಯರಿರ್ದಂತಾಪ್ತರಿರ್ದಂತೆ ಸೇ
ವಕರಿರ್ದಂತೊಳಪೊಯ್ದುದೋ ಪೆಱರನೆಂದುಂ ಬಂದು ಬಂದಾಗಳ
ರ್ಥಕಮನ್ಯಕ್ರಿಯೆಯನ್ಯಜಾತಿಯೆನಿಪಿಂದ್ರರ್ ಪೊರ್ದಿ ವಿಶ್ವಾಸಘಾ
ತಕರೊಯ್ದರ್ ಮಱಪಿಕ್ಕಿ ನಮ್ಮರಸನಂ ತಮ್ಮಲ್ಲಿಗಿನ್ನೇವೆವೋ ೮೯

ಕಂ॥ ಪೊಡವಿಯೊಳಿಲ್ಲದ ವಸ್ತುವ
ನಡಿಗಡಿಗೆಡೆಯಾಗಿ ತಂದು ತಂದೀಯುತ್ತುಂ
ಕಡುಠಕ್ಕನಿಕ್ಕಿ ಖಳರೆಡೆ
ವಡೆದಿಂತೊಯ್ವನ್ನಮೆಯ್ದೆ ಮಱುಗಿದರರೆಬರ್ ೯೦

ವ॥ ಎಂದು ನೊಂದು ನುಡಿವ ಜಡಮತಿಗಳಂ ಕೆಲರ್ ಕೃತಮತಿಗಳ್ ಮಾರ್ಕೊಂಡು

ಮ॥ ಪರಮಜ್ಞಾನಿ ಮರಳ್ವನೇ ಪೆಱರ್ಗಣಂ ನಿರ್ವೇಗಚಿಂತಾನಿರಂ
ತರಿತಸ್ವಾಂತನನಂತಲಕ್ಷ್ಮಿಗೆ ಮರಳ್ದೀ ರಾಜ್ಯಲಕ್ಷ್ಮೀಲವಂ
ಸ್ಥಿರಮಲ್ತೆಂದು ಬಿಸುಟ್ಟೊಡಂಬಡಿಸಿ ಪುತ್ರಂಗಿತ್ತು ತನ್ನಿಚ್ಛೆಯಿಂ

ದರಸಂ ದೀಕ್ಷೆಗೆ ಪೋದನೇಕೆ ನುಡಿವಿರ್ ವೃಂದಾರಕರ್ ನಿಂದ್ಯರೇ ೯೧

ವ॥ ಎಂದೋರೋರ್ವರ್ಗೆ ನುಡಿವ ಪುರಜನಂಗಳ ಗುಜುಗುಜಿಯನಂತಃಪುರಮಹತ್ತರಿನಱಿದು

ಮ.ಸ್ರ॥ ಬರುತುಂ ಪೋಗುತ್ತುಮುಳ್ಳಾಭರಣಕುಸುಮವಸ್ತ್ರಂಗಳಂ ಲಂಚಮಿತ್ತಿ
ತ್ತಿರದಿಂಬಿಂ ಸಗ್ಗದಗ್ಗಾಯಿಲೆಯರರಸನಂ ಮೆಚ್ಚಿಸಲ್ಕಾರ್ತು ಕೊಂಡೊಯ್ದು
ರಲಂಪಿಂದೇವವೆಂದಂದಗಿದು ಸುಗಿದು ಸುಯ್ಯುತ್ತಟಿಲ್ದರ್ ಕಟಿಲ್ದರ್
ಪುರಡಿಂ ಪ್ರಾಯೇಣ ಸೇರ್ಷ್ಯಾಃಸ್ತ್ರಿಯ ಎನೆ ನೃಪಶುದ್ಧಾಂತಕಾಂತಾಜನಂಗಳ್ ೯೨

ವ॥ ಅಂತು ವಿಹ್ವಳೆಯರಾಗಿ

ಚಂ॥ ಪರಿಚಯಮಿಲ್ಲದಂತೆ ನೆಱೆ ಕಂಡಱಿತಂ ತನಗಿಲ್ಲದಂತೆ ನಿ
ಷ್ಕರುಣನಗಲ್ದುಪೋದನಧಿರಾಜನಿಳಾತಿಳಕಂ ರಮಾಧವಂ
ಸರಳನಶೋಕವೃತ್ತನಭಯಾತ್ಮಕನುದ್ಗುಣಪೂರನಾರ್ಜವಂ
ಪರಿಚಿತಸತ್ಕದಂಬನೆನಸುಂ ಮರವಾನಿಸನಾದನೆಂಬಿನಂ ೯೩

ಕಂ॥ ಆವಿರೆಯಿರೆ ಭರ್ತೃ ತಪಃ
ಶ್ರೀವಧುಗೆಳಸಿರ್ದನೆಮಗದೆತ್ತಣ ಸೊಬಗೆಂ
ದೇವೈಸಿದಂತೆ ಜಿನದೀ
ಕ್ಷಾವಿಧಿಯನಪೇಕ್ಷೆಗೆಯ್ದರರಸಿಯರಾಗಳ್ ೯೪

ಆದರಿಸಿ ಪಿರಿಯಸಿರಿಗಾ
ಹ್ಲಾದದಿನೆಡೆಮಾಡಿ ಸುಖದಿನಿರಿಸಿದಧೀಶಂ
ಪೋದೊಡೆ ಪೆಂಡಿರ್ ಬಟೆಸಂ
ದಾದುದನಾಗದೊಡೆ ಸಜ್ಜನಿಕ್ಕೆಗೆ ಪೆಂಪೇಂ ೯೫

ವ॥ ಎಂದಾ ವಿರಕ್ತೆಯರು ಮಾವಲ್ಲಭಾನುಗಮನಾಸಕ್ತೆಯರುಮೊಂದಾಗಿ

ಚಂ॥ ಅಡಪಮನತ್ತಲೊಯ್ ಡವಕೆಯಂ ಕಳೆ ಸೀಗುರಿ ಬೇಡ ಬೀಸದಿರ್
ಕೊಡೆಯ ವಿಡಂಬಮೇಕೆ ಸಿರಿಗನ್ನಡಿಯಂ ಪೆಱಸಾರ್ಚು ಭೂಮಿಯು
ಗ್ಗಡಣೆಯ ಮಾತು ಮಾಣ್ಗೆ ಬಿಸುಡಂದಣಮಂ ದಯೆಗೆಯ್ದು ವಲ್ಲಭಂ
ನಡೆದನದಾರ್ಗೆ ತೋಱಿದಪೆವಾಂ ನೆಱೆದೀ ಬಹುರಾಜ್ಯಚಿಹ್ನಮಂ ೯೬

ಮ॥ ಎವಗಿನ್ನಂಜನರಂಜನಂ ತಿಲಕಲೀಲಾಡಂಬರಂ ಪತ್ರಂಭಂ
ಗವಿಳಾಸಂ ಮಣಿಮೇಖಳಾವಿಳಸನಂ ಮಂಜೀರಕೋಳಾಹಳಂ
ನವಶೃಂಗಾರವಿಕಾರಮೇವುದೆನುತುಂ ಬಾಷ್ಪಾಂಬುವುಂ ಗದ್ಗದಾ
ರವಮುಂ ಪೊಣ್ಮೆ ಸಖೀಜನಕ್ಕೆ ನುಡಿದರ್ ವಿಭ್ರಾಂತೆಯರ್ ಕಾಂತೆಯರ್ ೯೭

ವ। ಅಂತು ನುಡಿದನಂತರಂ ನಿಜವಾಸದ ವಿಳಾಸವಿಹಗಂಗಳಂ ನೋಡಿ ಬಂಬಬಿಂಬಾಡಿ

ಚಂ॥ ಬಿಡದಿರದಿಂತೆ ತಮ್ಮ ಬಿನದಕ್ಕೆನಸುಂ ಸೆಱಿಗೆಯ್ದರೆಮ್ಮನೆಂ
ದಡಱ್ ಮನಃಕ್ಷತಂ ಬಿಡದೆ ಪಾಳಿಸಿ ಮೇಳಿಸಿ ಪುತ್ರಮೋಹದಿಂ
ನಡೆಪಿದ ಕೂರ್ಮೆಯಂ ಬಗೆವುದಿಲ್ಲಿ ಸಲೀಲಮರಾಳವೇ ಮನಂ
ಬಡೆವ ಮಯೂರವೇ ಚಳಚಕೋರವೆ ರಾಜಿಪ ರಾಜಕೀರಮೇ ೯೮

ವ॥ ಎಂದವರ್ಕೆ ಕ್ಷಮೆಗೊಂಡು

ಕಂ॥ ಲೀಳೆಯೊಳೆ ತಾಮೆ ನಡೆಪಿದ
ಕೇಳೀವನಲತೆಗಳಂ ನಿರೀಕ್ಷಿಸಿ ಸುಯ್ದಾ
ವಾಳವಳಯಂಗಳಂ ಭ್ರಮ
ರಾಳಕಿಯರ್ ಬಾಷ್ಪವಾರಿಯಿಂ ಪೂರಿಸಿದರ್ ೯೯

ವ॥ ಅದಲ್ಲದೆಯುಂ

ಚಂ॥ ಪಡಿಯಿಡೆ ನಿಮ್ಮನೆಮ್ಮವಯವಂಗಳಿನೇಡಿಸಿ ಕಾಡುತಿರ್ದುದಂ
ಕಡುದಿಟಮೆಂದು ನೋಯದೊಡನಾಡಿದ ನಣ್ಪನೆ ನೋಟ್ಪುದೆಂಬಿನಂ
ನುಡಿದನುನೈಸಿದರ್ ಕುಸುಮಕೋಮಳೆಯರ್ ವನಕುಂದ ಕೇತಕೀ
ಜಡರುಹ ಕರ್ಣಿಕಾರ ವಕುಳೋತ್ಪಳ ಪಾಟಳ ಚಂಪಕಂಗಳಂ ೧೦೦

ವ॥ ಅಂತು ಸಮುಚಿತಚರಾಚರಪರಿಗ್ರಹಂಗಳಂ ಸರಸಸಾತ್ವಿಕೋಕ್ತಿಯಿಂದ ಮಾಱಿನುಡಿದನಂತರ ಮಂತಃಪುರದ್ವಾರದಿಂ ಪೊಱಮಡುವ ಶುದ್ಧಾಂತಕಾಂತೆಯರ ತಂಡಮಂ ಕಂಡು

ಮ॥ ಅರಸಂ ಬಂದಪನೀಗಳಿಂತೆ ನಿಮಗಿಂ ಭ್ರಾಂತೇಕೆ ಕೊಂಡೊಯ್ಯುತುಂ
ತರುತುಂ ಸ್ವಾಮಿಯೆನಿಪ್ಪುದೇಂ ಪೊಸತೆ ಪೇೞ್ ದೇವರ್ಕಳಂತಾದೊಡಂ
ಧರಣೀಶಾಜ್ಞೆಯನಲ್ಲದೊರ್ವರುಮನಿಲ್ಲಿಂ ಪೋಗಲಾವೀಯೆವಿಂ
ತಿರಿಮೆಂದಲ್ಲಿಯೆ ತಾಗಿದರ್ ವಿಹಿತರಕ್ಷಾಕೋವಿದರ್ ಸೌವಿದರ್ ೧೦೧

ವ॥ ಅನ್ನೆಗಮಿತ್ತ

ಕಂ॥ ವನದೇವಿಯರಭವನ ಬರ
ವನಾರಯಲ್ ಮುದದಿನಿದಿರನಟ್ಟಿದ ಚರನೆಂ
ಬಿನಮಾಜಿಸೆ ಬಂದೆಲರನ
ಘನನಂದೊಯ್ದಿರಿಸಿದಮರರಂದಾ ಬನದೊಳ್ ೧೦೨

ವ॥ ಆಗಳಲ್ಲಿ

ಮ॥ ಇದಿರೆಟ್ಟಿಂದಮರ್ದಪ್ಪುವಂತೆ ನಯದಿಂ ಸಂಭಾವಿಪಂತರ್ಘ್ಯಮಂ
ಪದೆದೀವಂತಸೆದಿರ್ದುದುಚ್ಚಳಿಪ ಕೇತುವ್ರಾತದಿಂ ರೂಪಗಂ
ಧದ ತಣ್ಗಾಳಿಯಿನಾದ ಪೂವಲಿಯ ಭೃಂಗೀರಾವದಿಂ ಪಂಚರ
ತ್ನದ ಸಂದರ್ಭದಿನಿಂದ್ರಶಿಲ್ಪಿರಚಿತ ಶ್ರೀಮಂಡಿತಂ ಮಂಡಪಂ ೧೦೩

ಚಂ॥ ಅದು ಭುವನಕ್ಕೆ ಮಂಗಳದ ಮುಂಗುಡಿ ಮೋಹದಪೋಹಭೂಮಿ ಸ
ಗ್ಗದ ಸಿರಿಯೊಗ್ಗು ಧರ್ಮದ ತವರ್ಮನೆ ಶೋಭೆಯ ನಾಭಿ ಭವ್ಯರ
ಭ್ಯುದಯದ ಸಂಕುಮುತ್ಸವದ ತಾಯ್ಗರು ಚಿತ್ತದ ಗೊತ್ತಗಣ್ಯಪು
ಣ್ಯದ ಬೆಳಸೊಳ್ಪಿನುದ್ಭವಗೃಹಂ ಬಹುಲಕ್ಷ್ಮಿಯ ಲಾಸ್ಯಮಂದಿರಂ ೧೦೪

ವ॥ ಅಂತು ಮಹನೀಯಮಹಿಮಾವಳಂಬಿಯಾದ ತನ್ಮಹಾಮಂಟಪದೊಳ ಮರೇಂದ್ರವೃಂದಮಿಬ್ಬೆ ಶಿಬಿಕೆಯಿಂದಮವತರಿಸಿ ವಿವಿಧ ಮಂಗಳೋಪಕರಣ ಪ್ರಶಸ್ತಹಸ್ತ ವಾಸವವಿಳಾಸಿನೀವಿಕೀರ್ಣಶೇಷಾಕ್ಷತಂಗಳುಮನೇಕ ವೃಂದಾರಕಾನಂದ ದುಂದುಭೀಗಭೀರ ಸ್ವರಂಗಳುಮಶೇಷಾನಿಮಿಷ ಜಯಜಯವಿಶೇಷಘೋಷಂಗಳುಂ ನೆಗೞೆ ತಳರ್ವಘಬಲಾಂತಕಂಗೆ ಬಲಾಂತಕ ಕೆಯ್ಗೊಟ್ಟೊಳಯಿಂಕೆ ಬಿಜಯಂಗೆಯ್ಸಿಸಿ

ಕಂ॥ ಧೃತಕನಕವೇತ್ರಲತೆ ಚಿ
ತ್ರಿತಮಾಗೆ ಕರಾಂಗುಳೀಯಕ ಪ್ರಭೆಯಿಂದಂ
ಪ್ರತಿಹಾರಪದವಿಯಂ ತಳೆ
ದು ತರ್ಜಿತದ್ಯುಚರಖಚರಕಳಕಳನಿರ್ದಂ ೧೦೫

ವ॥ ಆಗಳಾ ಗೃಹಾಭ್ಯಂತರದೊಳ್

ಮ॥ ವಿಶದೋತ್ತಾಳ ದುಕೂಲ ಕಾಂಡಪಟದಿಂ ಮಂದಾರಪುಷ್ಪೋಪಹಾ
ರ ಶತಶ್ರೀಯನನೇಕ ಮಂಗಳಶುಚಿದ್ರವ್ಯಂಗಳಿಂ ಪ್ರಾಡಕ
ರ್ಮಶಚೀನಿರ್ಮಿತರತ್ನರಂಗವಲಿಯಿಂದೊಪ್ಪಿರ್ದುದಂ ಚಂದ್ರಕಾಂ
ತಶಿಲಾಪಟ್ಟಮನೇಱದಂ ದೃಢಗುಣಂ ನೀರೇಜಿ ಭವ್ಯೋತ್ಕರಂ ೧೦೬

ವ॥ ಅಂತು

ಚಂ॥ ಸದಮಲಬೋಧನಾ ಶಿಲೆಯನೇಱಿದೊಡಂಗಜನಂಜಿ ಪುತ್ತನೇ
ಱಿದನಿನನುಟ್ಟುದಂ ಬಿಸುಡೆ ತಲ್ಲಣದಿಂ ಮದನಂ ಬಿಸುಟ್ಟನು
ಟ್ಟುದನಘಮರ್ದನಂ ಕಳೆಯೆ ಮಂಗಳಭೂಷಣಮಂ ವಿಯೋಗವೇ
ಗದೆ ಕಳೆದಳ್ ಮನೋಜವಧು ತನ್ನಯ ಮಂಗಳಭೂಷಣಂಗಳಂ ೧೦೭

ಬಳಸಿದ ಬೆಳ್ಮುಗಿಲ್ ತೊಲಗೆ ನಿರ್ಜರವಂಚಿರವಾಗೆ ಮಿಂಚು ಸಂ
ಚಳಿಸಿಯಡಂಗೆ ರಂಜಿಪ ದಿನಾಧಿಪನಂತಿರೆ ಜಾತರೂಪಮಂ
ಜುಳನೆಸೆದಂ ತ್ರಿಸಾಕ್ಷಿಯಿನಪೇತ ನತಾಂಶುಕನಾಗಿ ಮುಕ್ತಿಮಂ
ಗಳಶುಚಿಧಾಮನಾಗಿ ವಿಗತಾಭರಣಪ್ರಭನಾಗಿ ನಿಶ್ಚಳಂ ೧೦೮

ವ॥ ಅನಂತರಂ

ಕಂ॥ ಬಗೆ ವನದಾನದ್ವಿಪದಾ
ದಿಗಳೊಳ್ ಮಿಥ್ಯಾತ್ವಮಾನಮಾಯಾದಿಗಳೊಳ್
ಪುಗದಿರೆ ಬಾಹ್ಯಾಭ್ಯಂತರ
ಯುಗಲಪರಿಸ್ಪಂದರಹಿತನುಪಶಮಸಹಿತಂ ೧೦೯

ಮಾಲಿನಿ॥ ಸ್ವಗತ ನಿಬಿಡ ಪಲ್ಯಂಕಾಸನೋಲ್ಲಸನ್ನೈಂದ್ರೀ
ದಿಗಿಭಮುಖನುದಂಚತ್ಪಂಚಮುಷ್ಟಿಪ್ರಪಂಚಂ
ಪ್ರಗುಣಮತಿ ನಮಸ್ಸಿದ್ಧೇಭ್ಯಯೆಂದಾತ್ಮಕೇಶಾ
ಳಿಗಳನಘದ ಬೇರಂ ತೀರೆ ಕೀಳ್ವಂತೆ ಕಿಳ್ತಂ ೧೧೦

ಕಂ॥ ನಾಕೇಶನಾಗಲೊಡನೊಡ
ನಾಕೇಶಮನಾಂತ ಶೋಣಮಣಿಪಟಳಕಮಾ
ಲೋಕನದ ತಣಿವನಿತ್ತುದು
ಕೋಕನದಮಿದಳಿಕಳಾಪವೃತಮೆಂಬಿನೆಗಂ ೧೧೧

ವ॥ ಆಗಳಮರಭೇರಿಗಳ್ ಮೊಱಗೆ

ಮಾಸ್ರ॥ ಜಳದೇವೀಪತ್ರರೇಖಾಮೃಗಮದರುಚಿ ವೇಳಾವನಂ ತುಚ್ಛತಾಪಿ
ಚ್ಛಳತಾಗುಚ್ಛಪ್ರಭಾಮಂಜರಿ ವಿಮಳಜಳಸ್ಪಷ್ಟದೃಷ್ಟೇಂದ್ರ ನೀಳೋ
ಪಳರೋಚಿರ್ಜಾಳಮೆಂಬಂತೆಸೆದಮೃತಸಮುದ್ರಕ್ಕಳಂಕಾರಮಾಯ್ತಾ
ಗಳೆ ದೇವೇಂದ್ರರ್ಕಳೊಯ್ದಿಂತಭವನ ನವಲೋಲಾಳಿನೀಲಾಳಕೌಘಂ ೧೧೨

ವ॥ ಅಂತು ಷಷ್ಠೋಪವಾಸದಿಂ

ಕಂ॥ ನುತಮಾರ್ಗಶಿರದ ಶುದ್ಧ
ಪ್ರತಿಪದ್ದಿನದಪರಯಾಮದೊಳ್ ಸಾಸಿರ್ವರ್
ಕ್ಷಿತಿಪತಿಗಳ್ವೆರಸು ಜಗ
ತ್ಪತಿ ತಳೆದಂ ತಪಮನತನು ತಿಮಿರಾತಪಮಂ ೧೧೩

ವ॥ ಅಂತು ಪಂಚಶರಪ್ರಮಾದವಿಜಯಿ ಪಂಚಮಗತಿಪ್ರಾಪ್ತಿಗೆ ಸಂಚಕರಮಂ ಕೊಳ್ವಂತೆ ದೀಕ್ಷೆಯಂ ಕೆಯ್ಕೊಳಲೊಡಂ

ಕಂ॥ ಪ್ರವರಮನಃಪರ್ಯಯಬೋ
ಧಮೊಗೆಯೆ ಸಪ್ತರ್ಧಿನಿಧಿ ಚತುರ್ಜ್ಞಾನಧರಂ
ಸುವಿಧಿ ಮಣಿದೀಪರುಚಿ ಬೆಳ
ಗುವ ಪಳಿಕಿನ ನಿಳಯದೆಸಕಮಂ ಪೊಸಯಿಸಿದಂ ೧೧೪

ವ॥ ಆಗಳನೇಕಾರ್ಚನೆಗಳಿಂದೆ ನಿರ್ವಾಣಪತಿಯನರ್ಚಿಸಿ ಗೀರ್ವಾಣಪತಿ ನಿರ್ವರ್ತಿತ ತೃತೀಯಕಲ್ಯಾಣನಾಗಿ

ಮ.ಸ್ರ॥ ಪರಮ ವ್ಯಾಮೋಹದಿಂ ಬೆಂಬಱಿಯನುಱಿಯದೆತ್ತಿಂದ ಸುಗ್ರೀವಧಾತ್ರೀ
ಶ್ವರನಂ ತತ್ಕಾಂತೆಯಂ ಕೀರ್ತಿಧರಸಹಿತಮಾತ್ಮಪ್ರಬೋಧೋಕ್ತಿಯಿಂದಂ
ನಿರುತಂ ಸಂತೈಸಿ ಕಾಕಂದಿಗೆ ಕಳಿಪಿ ಬಳಿಕ್ಕಂತೆ ಬೀಱ್ಕೊಂಡು ತೀರ್ಥೇ
ಶ್ವರನಂ ಪೋದಂ ಶಚೀಲೋಚನಚಪಳಚಕೋರೀಶರಚ್ಚಂದ್ರನಿಂದ್ರಂ ೧೧೫

ವ॥ ತದನಂತರಮಾ ಮುನೀಶ್ವರಂ ಧ್ಯಾನಾಧೀನಮಾನಸನಂದಿನ ದೆವಸ ಮಿರ್ದು ಮಱುದೆವಸಂ ಕೆಯ್ಯೆತ್ತಿ ಪಾರಣೆಯಿರ ಮಾರ್ಗಪ್ರಕಾಶಮಂ ಮಾಡಲೆಂದು

ಕಂ॥ ಆರ್ಯನುತಂ ಕಣ್ಗಳ್ ತಾ
ತ್ಪರ್ಯದೆ ಯುಗಮಾತ್ರಧಾತ್ರಿಯಂ ಪರಿಕಿಸೆ ಮುಂ
ದೀರ್ಯಾವಿಶುದ್ಧಿ ಸಮನಿಸೆ
ಚರ್ಯೆಗೆ ನಡೆತಂದನಮಳಹೃದಯಂ ಸದಯಂ ೧೧೬

ದ್ರುತವಿಳಂಬಿತಂ॥ ದ್ರುತವಿಳಂಬಿತಸಂಭ್ರಮವಿಸ್ಮಯಾ
[ವೃ]ತದಿಗಂತವಿಲೋಕವಿಕಾರವ
ರ್ಜಿತಗತಿಕ್ರಮಮೊಪ್ಪೆ ವನಾಂತದಿಂ
ವ್ರತಿ ಬರುತ್ತಿರೆ ಕಂಡತಿರಾಗದಿಂ ೧೧೭

ಮ॥ ಪುಳಕಂ ಕೆಯ್ಮಿಗೆ ಪುಷ್ಯಮಿತ್ರಮಹಿಪಂ ಕೈಗೆಯ್ಸೆ ಸಂಪೂರ್ಣಮಂ
ಗಳಮಂ ಶೈಳಪುರಂ ವಿರಾಜಿಸಿತೊ ಕಾಶ್ಮೀರಾಕ್ಷತಾಲೀಲೆಯಿಂ
ವಿಳಸದ್ವಂದನಮಾಳೆಯಿಂ ತತಪತಾಕಾನೀಕದಿಂ ಕೀರ್ಣ ಪು
ಷ್ಪಳಸತ್ಸಂಗದಿನಂಗನಾಲಟಹ ವಾದ್ಯವ್ರಾತದಿಂ ಗೀತದಿಂ ೧೧೮

ವ॥ ಆಗಳ್

ಉ॥ ಪಾಸುವ ಪಲ್ಲವಂಬೊಲಿರೆ ಕೇಸಡಿಗೆಂಪುಪಹಾರಪುಷ್ಪವಿ
ನ್ಯಾಸಮನುಂಟುಮಾಡೆ ನಖದೀಪ್ತಿ ಮುಖೇಂದುಮಯೂಖಮಾನತೋ
ಪಾಸಕಪಾಣಿಪದ್ಮವನಮಂ ಮುಗಿಸುತ್ತಿರೆ ತತ್ಪುರಾಂತದೊಳ್
ಸೂಸೆ ಲತಾಂತವೃಷ್ಟಿ ಪುಗುದಂತನನಶ್ವರನಾ ಮುನೀಶ್ವರಂ ೧೧೯

ವ॥ ಅಂತು ಪೊಕ್ಕು ವಿಳೋಕನಕುತೂಹಳಾಕಳಿತಪುರಜನಾನುಗಮ್ಯಮಾನನಾ ನರೇಂದ್ರ ಮಂದಿರದ ಮುಂದಣ್ಗೆ ಬರಲೊಡಂ

ಉ॥ ಬಾಜಿಸೆ ತೂರ್ಯಕೋಟಿ ಕಳಶಂ ಗುಡಿ ಕನ್ನಡಿ ಸೇಸೆ ಬಾಸಿಗಂ
ಲಾಜೆ ಫಲಂ ಕಱುಂಕೆ ಲಲನಾಜನಮೆಂಬುಪಚಾರಮಂಗಳಂ
ರಾಜಿಸೆ ಹೇಮವರ್ಣದ ನಿಜಚ್ಛವಿ ಮಂಗಳದೀಪದಂತೆ ನೀ
ರಾಜಿಸೆ ಪುಷ್ಯಮಿತ್ರನಿದಿರ್ಗೊಂಡನಖಂಡಿತ ಭವ್ಯಮಿತ್ರನಂ ೧೨೦

ವ॥ ಅಂತಿದಿರ್ಗೊಂಡು ಪಂಚಮುಷ್ಟಿಯಿಂ ಬಂದಿಸಿ

ಕಂ॥ ಅವನೀಪತಿ ನಿಲ್ಲಿಸಿದಂ
ಸುವಿಧಿಮುನೀಶ್ವರನನಂದು ಸಮಸಂದಿರೆ ಸ
ಪ್ತವಿಧಗುಣಂ ಶ್ರದ್ಧಾದ್ಯಂ
ನವವಿಧಪುಣ್ಯಂ ಪ್ರತಿಗ್ರಹಾದ್ಯಂ ತನ್ನೊಳ್ ೧೨೧

ವ॥ ಆಗಳ್

ಕಂ॥ ಸುರಧೇನುವೊಸೆದು ಬಂದಂ
ತಿರೆ ನಿಧಿ ಬಂದಂತಿರಮರಭೂಜಂ ಬಂದಂ
ತಿರೆ ಚಿಂತಾಮಣಿ ಬಂದಂ
ತಿರೆ ಸಿರಿ ಬಂದಂತಿರೊಸಗೆಯಾಯ್ತರಮನೆಯೊಳ್ ೧೨೨

ಮ॥ ಮುನಿರಾಜಕ್ರಮಕಂಜಪುಂಜಿತರಜೋಲಾಲಾಮನುದ್ದಾಮ ಕಾಂ
ಚನಪೀಠಾಗ್ರದೊಳುಯ್ದು ಕುಳ್ಳಿರಿಸಿ ತತ್ಪಾದೋದಕಶ್ರೀನಿಷೇ
ಚನದಿಂ ಪುತ್ರಕಳತ್ರಮಿತ್ರಸಹಿತಂ ಧಾತ್ರೀಪವಿತ್ರಾತ್ಮನಾ
ದನುಮಾಹ್ಲಾದನತಿ ಪ್ರಮೋದನರಸಂ ಶ್ರೀಭವ್ಯರತ್ನಾಕರಂ ೧೨೩

ಗದ್ಯ

ಇದು ಸಮಸ್ತ ಭುವನಜನಸಂಸ್ತುತ ಜಿನಾಗಮ ಕುಮುದ್ವತೀಚಾರುಚಂದ್ರಾಯಮಾಣ ಮಾನಿತ ಶ್ರೀಮದುಭಯಕವಿಕಮಳಗರ್ಭ ಮುನಿಚಂದ್ರ ಪಂಡಿತದೇವ ಸುವ್ಯಕ್ತ ಸೂಕ್ತಿ ಚಂದ್ರಿಕಾಪಾನಪರಿಪುಷ್ಟಮಾನಸಮರಾಳಂ ಗುಣವರ್ಮ ನಿರ್ಮಿತಮಪ್ಪ ಪುಷ್ಪದಂತ ಪುರಾಣದೊಳ್ ಪರಿನಿಷ್ಕ್ರಮಣಕಲ್ಯಾಣವರ್ಣನಂ ತ್ರಯೋದಶಾಶ್ವಾಸಂ

ಚತುರ್ದಶಾಶ್ವಾಸಂ

ಕಂ॥ ಶ್ರೀಪದಮನೀವ ಮುಕ್ತಿ
ಶ್ರೀಪದಮಂ ಪುಣ್ಯಜಲದಿನರ್ಚಿಸಿದಂ ಧಾ
ತ್ರೀಪಾವನನುದ್ಭೂತ ರ
ಮಾಪೂರ್ಣಂ ಪ್ರಭುಗುಣಾಬ್ಜವನಕಳಹಂಸಂ ೧

ಘನಸಾರಘನಸೃಣಚಂದನ
ಘನಸಾರದ್ರವದಿನಖಿಳ ಭವ್ಯಮನಃಕೋ
ಕನದಂಗಳನತಿಕೃತದೋ
ಕನದಂಗಳನನಘನಂಘ್ರಿಗಳನರ್ಚಿಸಿದಂ ೨

ಕಂದದ ಕುಂದದ ನವಬಿಸ
ಕಂದದ ಕುಂದದ ಬೆಡಂಗನಾಳ್ದಮಳತೆಮೆ
ಯ್ಸಂದಕ್ಷತದಿಂ ರುಚಿವೆರ
ಸಂದಕ್ಷತಗುಣರ ಚರಣಮಂ ಪೂಜಿಸಿದಂ ೩

ಭ್ರಮರಹಿತಂ ಪೂಜಿಸಿದಂ
ಭ್ರಮರಹಿತಪ್ರಚುರಗಂಧಮೆನಿಸಿದ ನಾನಾ
ಸುಮನಸ್ಸಮಿತಿಯಿನಮಳಿನ
ಸುಮನಸ್ಸಮಿತಿಯುತ ಯತಿಪದಾಂಭೋರುಹಮಂ ೪

ಪೊಗೆವಗರುವ ಧೂಪದಿನೊ
ಳ್ಪೊಗೆವೊಗೆದ 'ವಧೂಪದಾರ್ಥ ವಿರತಾತ್ಮನ ಕೆಂ
ಪಗಲದಕಳಂಕಪದಮಂ
ಪಗಲದಳಂ ನಳಿನವೆನಿಪುದಂ ಪೂಜಿಸಿದಂ ೫

ತರಣಾಂಶುಬಿಂಬಮೆಂಬಂ
ತರಣಾಂಶುವಿನೆಸೆದು ತಮಮನಳಜಿ್ಪ ಮಣಿಭಾ

ಸುರದೀಪಕದಂಬಕದಿಂ
ಸುರದೀಪಕನರುಣಚರಣಮಂ ಪೂಜಿಸಿದಂ ೬

ಕಾಂಚನಭಾಜನರತಮಧಿ
ಕಾಂಚನಭಾಜನಮೆನಿಪ್ಪ ಸುರುಚಿರಚರುವಿಂ
ಸಂಚಿತ ಗುಣನುಡಿಗಳನಿನಿ
ಸಂಚಿತಗುಣನಳಿನನಿಭಮನೊಸೆದರ್ಚಿಸಿದಂ ೭

ಪೂಗದ ನವನಾಗಲತಾ
ಪೂಗದ ಫಲಪತ್ರದೊಡನೆ ಬಹುವಿಧಫಲದಿಂ
ರಾಗಯುತಕ್ರಮ ವಿರಹನ
ರಾಗಯುತಕ್ರಮಮನವನಿಭುಜನರ್ಚಿಸಿದಂ ೮

ವ॥ ಅಂತಷ್ಟವಿಧಾರ್ಚನೆಗಳಿನರ್ಚಿಸಿ

ಕಂ॥ ಎರಡನೆಯ ಪದಾರ್ಚನೆಯಿಂ
ವಿರಚಿಸಿದಪನೆನಿಸಿ ಪೆರ್ಚೆ ನಿಜಮಕುಟಹಟ
ತ್ಕಿರಣಗಣನೆಱಗಿದಂ ಮುನಿ
ವರನಂಘ್ರಿಗೆ ಪುಷ್ಪಮಿತ್ರನಮಳ ಚರಿತ್ರಂ ೯

ವ॥ ತದನಂತರ ವಿಧಿಪೂರ್ವಕಂ ಪ್ರಯತ್ನಪರನಾಗಿ

ಕಂ॥ ಪಸರಿಸಿದ ಮುನೀಂದ್ರನ ಮೃದು
ಕಿಸಲಯ ಸಮಪಾಣಿಪಾತ್ರದೊಳ್ ಶುದ್ಧಮನಂ
ವಸುಧೇಶನಿಕ್ಕಿದಂ ಪಾ
ಯಸಮಂ ಪುಣ್ಯಫಲಭೂತನಿಶ್ರೇಯಸಮಂ ೧೦

ವ॥ ಅಂತಾ ಜಗತ್ಪವಿತ್ರಚಾರಿತ್ರಪಾತ್ರಂಗೆ ಪುಷ್ಪಮಿತ್ರಂ ವಿಶುದ್ಧಮಪ್ಪಾಹಾರ ದಾನಮಂ ನಿರಂತರಾಯಮಾಗಿ ಮಾಡಿದಾಗಳ್

ಕಂ॥ ಆ ರಾಜಭವನದೊಳ್ ವಸು
ಧಾರೆಯ ತಣ್ಣೆಲರ ಪುಷ್ಪವೃಷ್ಟಿಯ ಸುರಭೇ
ರೀರವದ ಪೊಗಳ್ತೆ ದೇವರ
ಹೋರಭಸದ ಪುದುವಿನಾಯ್ತು ಪಂಚಾಶ್ಚರ್ಯಂ ೧೧

ವ॥ ಆಗ

ಮ॥ ಕ್ಷಿತಿಗೆಯ್ದೆನ್ನ ಗುಣಂ ಶಿಖಂಡಮಣಿಯಾಯ್ತೆನ್ನನ್ವಯಂ ಲೋಕಪೂ
ಜಿತಮಾಯ್ತೆನ್ನ ಪೆಸರ್ ಪ್ರಸಿದ್ಧಿಗೆಡೆಯಾಯ್ತೆನ್ನೀ ಭವಂ ಭವ್ಯಭಾ
ವಿತಮಾಯ್ತೆನ್ನ ಮನೋರಥಂ ಸಫಳಮಾಯ್ತೆನ್ನುಳ್ಳ ಸದ್ಭಕ್ತಿ ಚಿಂ
ತಿತ ಚಿಂತಾಮಣಿಯಾಯ್ತು ನಿನ್ನ ಬರವಿಂ ಕಾರುಣ್ಯಪುಣ್ಯಾಂಬುಧೀ ೧೨

ವ॥ ಎಂದು ಪೊಡೆವಡುವುದುಂ

ಮ॥ ನಿನಿಗಿನ್ನಕ್ಷಯದಾನಮೆಂಬ ಪರಮಶ್ರೀರತ್ನಮಂ ಪುಷ್ಪಮಿ
ತ್ರನ ಕರ್ಣಕ್ಕವತಂಸಮಾಗಿಸಿ ಬಟಿಕ್ಕಲ್ಲಿಂದವೆಟ್ದಿಂತೆ ಬೆ
ನ್ನನೆ ಭವ್ಯರ್ ಕಟಿಪುತ್ತೆ ಬಂದು ನಿಲೆ ಬಾಹ್ಯೋದ್ಯಾನದೊಳ್ ಬಂದನಂ
ದು ನಿಜಪ್ರಾಪ್ತಿನಿಮಿತ್ತ ಶೈಲಪುರದಿಂ ಶೀಲವ್ರಜಾಲಂಕೃತಂ ೧೩

ವ॥ ಅಂತು ಸಫಳೀಕೃತಭವ್ಯಜನಮನೋರಥನಿಕಾಯಸ್ಥಿತಿಯಪ್ಪ ಕಾಯಸ್ಥಿತಿಯಂ ನಿರ್ವರ್ತಿಸಿ ಕೆಯ್ಯೆತ್ತಿಕೊಂಡು

ಕಂ॥ ತನತುಪದಪಾಂಸುವಿಂ ಗ್ರಾ
ಮ ನಗರ ಖರ್ವಡ ಮಡಂಬ ಖೇಟ ದ್ರೋಣಾ
ಖ್ಯನಿಗಮಪತ್ತನತತಿ ಪಾ
ವನಮಾಗೆ ವಿಹಾರಿಸುತ್ತೆ ಮೌನವ್ರತದಿಂ ೧೪

ಗತಗೌರವತ್ರಯಂ ನಿ
ರ್ಜಿತದಂಡತ್ರಯನಪೇತಶಲ್ಯತ್ರಯನ
ಪ್ರತಿಹತಯೋಗತ್ರಯನಪ
ಗತಕಾಲತ್ರಯನನಾಪ್ತಗುಪ್ತಿತ್ರಿತಯಂ ೧೫

ಪತ್ತುಂ ಧರ್ಮಂಗಳ್ ಮೂ
ವತ್ತಾಱುಂ ಗುಣದೊಳಮರೆ ಸನ್ಮಾರ್ಗಣ ಮೋ
ಕ್ಷಾತ್ತ ದೃಢಚಿತ್ತನುದ್ಭಟ
ವೃತ್ತಂ ಘಾತಿಸಲೊಡರ್ಚಿದಂ ಘಾತಿಗಳಂ ೧೬

ವ॥ ಅಂತೊಡರ್ಚಿ ಬುದ್ಧಿಕ್ರಿಯಾದ್ಯಷ್ಟವಿಧರಿದ್ಧಿಯುಂ ನಾಮಸತ್ಯರೂಪ ಸತ್ಯಾದಿ ದಶವಿಧ ಸತ್ಯಮುಂ ಕಾಯಶುದ್ಧಿವಿನೇಯಶುದ್ಧ್ಯಾದ್ಯಷ್ಟವಿಧಶುದ್ಧಿಯುಂ ಉತ್ತಮಕ್ಷಮಾದಿ ದಶವಿಧ ಷಡಂತರಂಗತಪಮುಂ ಕ್ಷುತ್ಪಿಪಾಸಾದಿ ದ್ವಾವಿಂಶತಿಪರೀಷಹಸಹಿಷ್ಣುತ್ವಮುಂ ಷಡ್ಜೀವನಿಕಾಯ

ಜೀವದಯೆಯುಂ ಜೀವಾಜೀವಾದಿ ಸಪ್ತತತ್ತ್ವಚಾರಮುಂ ನೈಗಮಸಂಗ್ರಹಾದಿ ಸಪ್ತನಯಭಾವನೆಯುಂ ಅನಂತಾನುಬಂಧಿ ಕ್ರೋಧಮಾನಾದಿ ಚತುಃಕಷಾಯವ್ಯಪಾಯಮುಂ ಶಬ್ದಸ್ಪರ್ಶನಾದಿ ಪಂಚೇಂದ್ರಿಯವಿಷಯ ವಿಚ್ಛಿತ್ತಿಯುಂ ತನ್ನೊಳುಂ ಸಚ್ಛನ್ನಮಾಗಿ

ಕಂ॥ ಬಗೆಗೆ ಸುಖದುಃಖಮುಂ ಪೞಿ
ಪೊಗೞ್ತೆಯುಂ ಹಾನಿವೃದ್ಧಿಯುಂ ಪೞುಪೊಱಲುಂ
ಪಗೆಕೆಳೆಯುಂ ಸಮನೆನೆಯಾಯೋ
ಗಿಗೆ ಸಮತೆ ಸಮಂತು ಸಮನಿಸಿತ್ತು ಸಮಗ್ರಂ ೧೭

ವ॥ ಅಂತು ಪುಷ್ಪದಂತಯೋಗೀಶ್ವರಂ ಪುಷ್ಪದಂತಮಹಾತಪಶ್ರೀನಿವಾಸಿಯಾಗಿ ಮುನ್ನಿನ ಪುಷ್ಪೋದ್ಯಾನಕ್ಕೆ ವಂದು ಪರಮಯೋಗನಿಯೋಗದೊಳ್ ನಿಲೆ

ಉ॥ ಸಿಂಗದ ದಾಡೆಯಂ ಸೆಳೆಯೆ ದಂತಿಗಳಂತೆ ಮೃಣಾಳಮೆಂದು ಸಾ
ರಂಗದ ಪಿಂಡು ಪೆರ್ಬುಲಿಯ ಪಿಂಡಿನೊಳೊರ್ಬುಳಿಯಾಡೆ ಕೇಕಿ ಪಿಂ
ಛಂಗಳ ತಣ್ಣೆೞಲ್ಗೆಳಸಿ ಪಾವುಗಳಾತಪಭೀತಿಯಿಂ ಜಿತಾ
ನಂಗಮುನೀಂದ್ರಶಾಂತರಸದಿಂದತಿಪಾವನಮಾದುದಾ ವನಂ ೧೮

ಕಂ॥ ಶರಭಂಗಳ್ ಕೇಸರಿಕೇ
ಸರಂಗಳಂ ಕ್ರೂರಘೋರಮಾರ್ಜಾರಂಗಳ್
ತರುಣಾಖುಶಾಬಶತಕಂ
ಧರಮಂ ನಖಮುಖದಿನುಱಿಸಿತುಱಿಸಿದುದೊಲವಿಂ ೧೯

ಗಿಡಗಂಗಳೊಡನೆ ಸಾರಿಕೆ
ಬಿಡುಗುದುರೆಗಳೊಡನೆ ವನಲುಲಾಯಚಯಂ ಕಾ
ಡೊಡೆಯರ ಕೌಲೇಯವ್ರಜ
ದೊಡನೆ ಮೊಲಂ ನಲಿದು ಸಂತವಿರ್ದುವು ಪದಪಿಂ ೨೦

ವ॥ ಅಂತು ಪರಸ್ಪರವಿರೋಧಿಗಳಪ್ಪ ಬಹುವಿಧಪ್ರಾಣಿಗಳ್ ನಿಜನಿಸರ್ಗ ವೈರಮಂ ಮಱೆದು ಶಾಂತರಸತರಂಗಿಣಿಯೊಳೋಲಾಡುತ್ತಿರ್ದುವದಲ್ಲದೆಯುಂ

ಚಂ॥ ಉಪಶಮನಿಶ್ಚಳಾಸನಗತಂ ವಿಮಳಾಯತನೇತ್ರಶೋಭಿತಂ
ವಿಪುಳಜಟಾವಳಂಬಿ ಸುಮನೋದೃಢಬೋಧವಿಭಾಸಿ ಮನ್ಮಥಾ
ನಪಹತರಾಗಿ ತಾಱ ತಱಿಸಂದಿರವಿಂ ಸಮನಾಯ್ತು ಯೋಗಿಗಾ
ವಿಪಿನಮುಮಂತೆ ದಲ್ ಸಮತೆ ಸನ್ಮುನಿಸಂಗದಿನಾರಿಗಾಗದೋ ೨೧

ವ॥ ಮತ್ತಂ

ಮ॥ ವನದುರ್ಗಸ್ಥಿತಕಾಮನಾಮುನಿಗೆ ಬೆಂಗೊಟ್ಟೋಡೆ ಪಿಂದಿರ್ದ ಪ
ದ್ಮಿನಿ ನೀರ್ವೊಕ್ಕುದು ತುಂಬಿ ಸಂಭ್ರಮಿಸಿತಾಮ್ರಂ ಕೈದೊವಲ್ಗೊಂಡುದಂ
ದನಿಲಂ ಸಂಚಳವಾಯ್ತು ಕೀರಪಿಕವೃಂದಂ ಗೂಡುಗೊಂಡಿರ್ದುವೆಂ
ಬಿನವಂತಿರ್ದವನಾಥತಂತ್ರಮಧಿಕರ್ ಬಂದೆಯ್ದೆ ಬಲ್ಗೆಯ್ಗುಮೇ ೨೨

ಚಂ॥ ಅರಗಿಳಿವಿಂಡು ಬಂಡಲಿಪ ಸಾರಿಕೆ ಚಾವಳಿಪುನ್ಮದಾಳಿಗಾ
ವರಿಸುವ ಸೋಗೆ ಕೇಗುವ ಪಿಕಂ ಜಡಿವಂಚೆ ಕುಕಿಲ್ವ ಕೊಂಚೆಯ
ಬ್ಬರಿಪ ವಿಕಾರಮಿಲ್ಲದಿರೆಯುಂ ಬನಮೊಪ್ಪಿದುದಾ ಮುನೀಂದ್ರನೊಳ್
ಪರಿಚಯವಾದೊಡೊಪ್ಪದವರಾರೊ ಬಿಸುಟ್ಟು ವಯೋವಿಕಾರಮಂ ೨೩

ವ॥ ಅಂತುಮಲ್ಲದೆಯುಂ

ಚಂ॥ ಸ್ಮರಪರಿವಾರಮಂದು ಮುನಿದೀ ಮುನಿ ದೀಪ್ತ ತಪೋಗ್ನಿಯಿಂ ಕಱು
ತ್ತುರಿಪುಗುಮೆಂದು ಬಿರ್ಚಿ ಬೆಸಕೆಯ್ದೊಸೆದುಳ್ಳುದನಿತ್ತು ತೆತ್ತು ನಿ
ತ್ತರಿಪವೊಲಾದುದಲ್ಲುಗುವ ವೃಕ್ಷಲತಾಫಲಪುಷ್ಪದಿಂ ವನಾಂ
ತರಮೆನೆ ಸಾಮಿ ಬಂದೊಡೆ ವಿನೀತಗುಣರ್ ಬೆಸಕೆಯ್ಯದಿರ್ಕುಮೇ ೨೪

ವ॥ ಮತ್ತಂ

ಚಂ॥ ಉಲಿಯದಿರೀ ತಪೋನಿಧಿ ಸಮಾಧಿಯೊಳಿರ್ದಪನೆಂದು ಸನ್ನೆಯಿಂ
ಜಲವಿಹಗವ್ರಜಕ್ಕೆ ಜಲದೇವತೆಯರ್ ತಲೆದೂಗಿ ಬಾರಿಪಂ
ತಲೆವೆಲರಿಂದವೊಯ್ಯನಲುಗಾಡುವ ತಾವರೆಗಳ್ ನಿಜಾಗ್ರಮಂ
ಡಲಿತಮದಾಲಿಗಳ್ ಸೊಗಯಿಸಿರ್ದುವು ಪಾಂಡುಸರಃಪ್ರದೇಶದೊಳ್ ೨೫

ವ॥ ಮತ್ತಂ

ಉ॥ ಆಱಡಿಗೊತ್ತುಗೊಟ್ಟು ಮಧುವಂ ತವೆ ಪೀರ್ದು ರಜೋವಿಕಾರಮಂ
ಪೇಱ್ ಕುಜಾತಿಯೊಳ್ ಬೆರಸಿ ಪುಷ್ಪಿತೆಯಂ ಲತೆಯಂ ಪಳಂಚಿ ಮೆ
ಯ್ದೋಱುವುದಿಲ್ಲಿ ಸಲ್ಲದೆನಗೆಂಬವೊಲೋಸರಿಗೊಂಡು ಪೋಗುತಂ
ತೂಱದೆ ಪಣ್ಣನೂದಿದುದು ತಣ್ಣೆಲರಾ ಮುನಿಯಿರ್ದ ತಾಣದೊಳ್ ೨೬

ವ॥ ಅದಲ್ಲದೆಯುಂ

ಕಂ॥ ಮನಮೊಸೆದು ಗೂಢಕಮಳಾ
ಸನಮಂ ಗುಪ್ತಾತಪತ್ರಮಂ ಶತಪತ್ರಾ
ನನೆ ಸುಖನೀರಧರಂಗಾ
ಮುನಿಗವಟಯಿಸಿದಳದೇನಗಣ್ಯವೊ ಪುಣ್ಯಂ ೨೭

ಖರಕಿರಣತಾಪಮೆನಿತು
ಬ್ಬರಿಸಿದೊಡಂ ಕಂದಿ ಕುಂದಿದರವಿಂದದವೋಲ್
ಕೊರಗದೆ ಕರಗದೆ ಪರಮನ
ಚರಮಾಂಗಂ ದೀಪ್ರದೀಪಮೆನಿತೊದವಿದೊಡಂ ೨೮

ಮುನಿಪನ ಪರಮೌದಾರಿಕ
ತನುವಂ ದುಸ್ಸಹಪರೀಷಹಂ ಬಾಧಿಸಿತಿ
ಲ್ಲೆನಿಸುವುದು ಚಿತ್ರಮಲ್ಲದು
ತನಿಗೆಂಡಮನೊಱಲೆ ಪತ್ತಲೇನಱಿದಪುದೇ ೨೯

ವ॥ ಎನಿಸಿದನುಪಮ ತಪಃಪ್ರಭಾವದಿಂದೆಸೆದು ತದ್ವನಮಧ್ಯಪ್ರದೇಶದೊಳ್ ಚಿರಂತನಚಿತ್ರಕರನಪ್ಪ ಚೀರಘಟ್ಟಿ ಶಂಖವಿಟ್ಟ ಬಟ್ಟಗೆವಲಗೆಯಂತಚ್ಚಬೆಳ್ಪಿನಿಂ ಪಳಚ್ಚನಿರ್ದ ಪಳಿಕಿನ ವಿಶಾಲಪಟ್ಟದ ಮೇಲೆ ನೂಲುವೊಯ್ದು ತಿಟ್ಟವಿಟ್ಟಣ್ಕೆಗೆಯ್ದು ರುಜಾಸ್ಥಾನಕದ ಸಮವರಿಜಿನ ನಂದನಕ್ಕೆ ಪಡಿಚಂದಮಾಗಿ

ಕಂ॥ ಚತುರಂಗುಲಪ್ರಮಾಣಂ
ವಿತಸ್ತಿಪರಿಮಾಣಮೆರಡುಮಡಕಂಗುಷ್ಠ
ದ್ವಿತಯದ ತೆಱಪೆನೆ ಸುವಿಧಿ
ವ್ರತಿ ಕಾಯೋತ್ಸರ್ಗಮಿರ್ದನಾಲಂಬಭುಜಂ ೩೦

ವ॥ ಮತ್ತಂ

ಮ॥ ಕರಣಗ್ರಾಮಮಳುರ್ಕೆಗುಂದಿರೆ ಮನಂ ಭ್ರೂಮಧ್ಯದೊಳ್ ಸಯ್ತು ತ
ಳ್ತಿರೆ ನಾಸಾಗ್ರದೆ ದಿಟ್ಟಿ ಮಟ್ಟಮಿರೆ ಹಸ್ತದ್ವಂದ್ವಮೇಕಸ್ಥಮಾ
ಗಿರೆ ದಂತಂ ಸಮಸಂದು ತಮ್ಮೊಳಿರೆ ಪರ್ಯಂಕಾಸನನಾಸೀನನೇಂ
ಕರಮೊಪ್ಪಿರ್ದನೊ ಪುಷ್ಪದಂತಮುನಿಪಂ ಯೋಗೋಪಯೋಗಸ್ಥಿತಂ ೩೧

ಕಂ॥ ಧ್ಯಾನಾಧೀನೈಕಸಮಾ
ಧಾನಮನಂ ಸ್ತಿಮಿತದೃಷ್ಟಿ ಪೋಲ್ತಂ ಮುನಿ ಮಂ
ದಾನಿಳನಲೆಪಿಲ್ಲದ ಪಾ
ಠೀನಕುಲಂ ಪೊಳೆಯದಮಳ ಕಮಳಾಕರಮಂ ೩೨

ತವದಾಜ್ಞಾವಿಚಯಮಪಾ
ಕವಿಚಯವೆನೆಯುಂ ವಿಪಾಕವಿಚಯಂ ಸಂಸ್ಥಾ
ನವಿಚಯವೆನೆಯುಂ ಪೆಸರ್ವೆ
ತ್ತುವು ನಾಲ್ಕುಂ ತಮ್ಮೊಳೆಸೆಯೆ ಧರ್ಮಧ್ಯಾನಂ ೩೩

ಸತತಮನಂತಚತುಷ್ಟಯ
ವಿತರ್ಕಮವಗಹನ ಶಕ್ತಿ ಸೂಕ್ಷ್ಮತೆ ನಿರ್ಬಾ
ಧತೆ ಗುರುಲಘುತ್ವ ಬಾಹ್ಯಾ
ತ್ಮತೆ ಸಿದ್ಧಗುಣಂಗಳೆಂಟವೆನುತುಂ ನೆನೆದಂ ೩೪

ಸನ್ನುತ ಸಿದ್ಧಪದಾಂಬುಜ
ಮನ್ನೆನೆದನಿತಱೊಳೆ ತಣಿದು ಮಾಣ್ದನೆ ಮುನಿಪಂ
ಪನ್ನೆರಡುಮನುಪ್ರೇಕ್ಷೆಗೆ
ತನ್ನ ಮನಂ ಲಕ್ಷ್ಯಮಾಗೆ ನಿಲೆ ಭಾವಿಸಿದಂ ೩೫

ಭಾವದೊಳೆ ಪಾರಿಣಾಮಿಕ
ಭಾವಮನೊಳಪೊಯ್ದು ಬಿಟ್ಟು ಸಕಳೇಂದ್ರಿಯ ದು
ರ್ಭಾವಮನವಿನಾಭಾವದಿ
ನಾವಿಷ್ಕೃತತತ್ವನಿರ್ದಪಂ ಸುವಿಧೀಶಂ ೩೬

ಮ॥ ಉರುಬೋಧಾವರಣೀಯವಾರ್ಧಿಗೆ ಪೊದಟ್ಬೌರ್ವಾನಳಂ ದರ್ಶನಾ
ವರಣೀಯೋತ್ಕರತಾಮಸಕ್ಕೆ ರವಿಬಿಂಬಂ ಮೋಹನೀಯಾದ್ರಿಗು
ದ್ಧುರಚಂಡಾಶನಿಯಂತರಾಯವನಕುದ್ದ್ಯದ್ದಾವಮೆಂಬಂತು ಘಾ
ತಿರಿಪುವ್ರಾತವಿಘಾತಿಯಾಯ್ತು ಭವಶುಕ್ಲಧ್ಯಾನಚಾತುರ್ಬಳಂ ೩೭

ವ॥ ಅಂತು ಘಾತಿಕರ್ಮಚತುಷ್ಟಯಂ ನಷ್ಟಮಾಗಲೊಡಂ

ಕಂ॥ ವಿಭುದಾನಲಾಭಭೋಗೋ
ಪಭೋಗ ವೀರ್ಯಾಂತರಾಯ ಪಂಚಕಹಾನಿ
ಪ್ರಭವಮನಂತಚತುಷ್ಟಯ
ವಿಭವಂ ನಿಜವಾದಬೋಧಮಂ ಕೆಯ್ಕೊಂಡಂ ೩೮

ಸ್ಮರಮಥನನೆಂಬರೋಹಣ
ಗಿರಿಯೊಳ್ ಕೈವಲ್ಯಬೋಧಚಿಂತಾಮಣಿ ಭಾ

ಸ್ವರವೊಗೆದು ಬೆಳಗಿತವಿನ
ಶ್ವರಲಕ್ಷ್ಮಿಯನೀವುದಿನ್ನದಕ್ಕಚ್ಚರಿಯೇ ೩೯

ಸವಿದಂ ದೂರಂ ಪ್ರತ್ಯಂ
ತವಿದೆನ್ನದೆ ಭೂತಭಾವಿಭವದಖಿಳಪದಾ
ರ್ಥವನೊರ್ಮೆಯೆ ಕರಣವನಾ
ಸೆವಡೆಯದೆ ನೆಗೞ್ದಿತ್ತಗಾಧಭೋಧಂ ಜಿನನೊಳ್ ೪೦

ವ॥ ಆ ಪ್ರಸ್ತಾವದೊಳ್

ಕಂ॥ ಸುರಿದುದು ನಮೇರುಕುಸುಮದ
ಸರಿ ಮೊೞಗಿದುದಮರಪಟಹಮೆೞಗಿದುದು ನಿಳಿಂ
ಪರ ಮಕುಟಕೋಟಿ ನೆಗೞ್ದುದು
ಸುರಜಯರವಮಾದುದಿಂದ್ರನಾಸನಕಂಪಂ ೪೧

ವ॥ ಮತ್ತಂ

ಕಂ॥ ಅನುಗತಿಯಿನೊಡನೆ ಶಂಖ
ಧ್ವನಿ ಭೇರೀಧ್ವನಿ ಮೃಗಾಧಿಪಧ್ವನಿ ಘಂಟಾ
ಧ್ವನಿಯಭವನ ಜ್ಯೋತಿಃಕ
ಲ್ಪನಿವಾಸದೊಳೆಸೆದುದಮರರಜಿದೆೞಗುವಿನಂ ೪೨

ವ॥ ಅಂತೀ ಸ್ಪಷ್ಟವಿಷ್ಟಪಾಶ್ಚರ್ಯದೃಷ್ಟಹೇತುವಾದ ನಷ್ಟಘಾತಿ ಚತುಷ್ಟಯನ ಚತುರ್ಥ ಕಲ್ಯಾಣದೊಸಗೆಗೆ ನಿಜಮನೋಮಧುಕರಕ್ಕೆ ಮಂದಾರಮಕರಂದ ಸುಂದರಸುಗಂಧ ಸಂದೋಹಮಾಗಿಬರೆ ತೆಗೆಯೆ ಸರಭಸಾನಂದನಿರ್ದು

ಕಂ॥ ಸುರಪತಿ ಕರಿಪತಿಯಂ ಶಚಿ
ವೆರಸೇಱಿ ವಿಳಾಸದಿಂದೆ ತಳರ್ವುದುಮಖಿಳಾ
ಮರಕೋಟಿ ತಳರ್ದುದೊಡನೆಯೆ
ನೆರೆದು ನಿಗುಂಬಿಸೆ ನಿಯುಕ್ತನಿಜ ನಿಜವಿಭವಂ ೪೩

ಚಂ॥ ಬಳಸಿಚತುರ್ವಿಧಾಮರನಿಕಾಯದ ವಾಹನಕೋಟಿ ಭೂಷಣಾಂ
ಗಳ ಬೆಳಗಿಂದಮೊಪ್ಪಿ ನಿಲೆ ಶಕ್ರಶರಾಸನರಶ್ಮಿ ರಾಜಮಂ
ಡಳಿತವಿಚಿತ್ರಮೇಘಪಟಳಂ ಬಳಸಲ್ಕೆಸೆದಿರ್ದು ಮಂದರಾ
ಚಳಮನೆ ಪೋಲು ಬಂದುದು ಪುರಂದರನೇಱಿದ ಗಂಧಸಿಂಧುರಂ ೪೪

ವ॥ ಅಂತು ಬರೆ

ಮ॥ ಅಮರಸ್ತ್ರೀನಿಚಯಂ ವಿಚಿತ್ರಲತೆಯಂ ಛತ್ರಾಳಿ ಭೂಜಂಗಳಂ
ಚಮರೀಜಾವಳಿ ಪುಷ್ಪಮಂಜರಿಯನುತ್ಕೇತುವ್ರಜಂ ಪಲ್ಲವೋ
ದ್ಗಮ ಶಾಖಾಳಿಯನಾನಕಧ್ವನಿ ವಿಹಂಗಧ್ಯಾನಮಂ ಪೋಲೆ ವಿ
ಭ್ರಮದಿಂ ಬಂದನದೊಂದು ನಂದನವನಂ ಬರ್ಪಂತೆ ಸಂಕ್ರಂದನಂ ೪೫

ತ್ರಿದಶಾಧೀಶನ ಮುಂದೆ ಸಿಂಧುರಘಟಾಸಂದೋಹದಿಂ ವಾಜಿವ
ರ್ಗದ ಪರ್ವಿಂ ರಥಕುಡ್ಯದೊಡ್ಡಣದಿನೊಳ್ಪಾಳೋಳಿಯಿಂದುಕ್ಷಯೂ
ಥದ ಸೊಂಪಿಂ ನವನರ್ತಕೀನಿವಹದಿಂ ಗಂಧರ್ವಸಂದೋಹದಿಂ
ದಿದು ಸಪ್ತಾಬ್ಧಿಯೆನಲ್ಕೆ ಸಪ್ತವಿಧ ಸೇನಾಚಕ್ರಮೇನೊಪ್ಪಿತೋ ೪೬

ಮುಗಿಲೊಡ್ಡಂ ಕುಡುಮಿಂಚನಬ್ದರವಮಂ ಶಕ್ರಾಸ್ತ್ರಮಂ ತಂದಲ
ನಗಭಿದ್ಗೋಪಕಳಾಪಮಂ ಕಚಭರಂ ದೃಗ್ದೀಪ್ತಿ ಕಾಂಚೀರವಂ
ಸೊಗಯಿಪ್ಪಾಭರಣಾಂಶು ದೇಹರುಚಿ ಕೆಂಬಾಯ್ ಪೋಲೆ ಕಾರ್ಗಾಲಮಂ
ಗಗನಾಭೋಗದೊಳೆಯ್ದೆ ತೋಱುತಿಳೆಗೆಟ್ಟರ್ಪಿಂದ್ರಕಾಂತಾಜನಂ ೪೭

ಮದನಾರಾತಿಯ ಮುನ್ನಿನುತ್ಸವಕೆ ಬರ್ಪಂದಲ್ಲಮಿಾಯೊಪ್ಪವಿ
ಲ್ಲಿದು ಮತ್ತೊಂದು ಮದೇಭಶೋಭೆಯಿದು ಮತ್ತೊಂದಿಂದ್ರಸೌಂದರ್ಯಮಿಂ
ತಿದು ಮತ್ತೊಂದಮರೀವಿಲಾಸಮಿದು ಮತ್ತೊಂದುದ್ವಲಾಟೋಪಮೆಂ
ಬುದುನೆಂಬಂತೆಸೆದುರ್ವಿಗೇಂ ಪಡೆದುದೋ ದೇವಾಗಮಂ ರಾಗಮಂ ೪೮

ವ॥ ಅಂತು ಚತುರ್ನಿಕಾಯಾಮರಕುಳ ಕಳಕಳನಿನಾದಂ ದೆಸೆಯಂಪಳಂಚಲೆಯೆ ಸೌಧರ್ಮೇಂದ್ರಂ ಬಂದು ಧನದಂಗೆ ಸಮವಸೃತಿಯಂ ನಿರ್ಮಿಸಲ್ವೇಡಿ ಬೆಸಸುವುದುಂ

ಸ್ರ॥ ಶ್ರೀಮತ್ಪ್ರಾಸಾದಚೈತ್ಯಾವನಿ ವನಪರಿಖಾಶೋಭೆ ವಲ್ಲೀವನಂ ದೃ
ಗ್ರಾಮೋದ್ಯಾನಂ ಕನತ್ಕೇತನಮಹಿ ಸುರಭೂಜೋರ್ವಿ ಸಂಗೀತಸದ್ಮ
ಸ್ತೋಮಂ ಲಕ್ಷ್ಮೀಲಸನ್ಮಂಡಪಮೆಸೆಯೆ ಗಣವ್ಯಾವೃತೋದ್ಯತ್ತ್ರಿಪೀಠೀ
ಧಾಮಾಗ್ರೋದ್ಭಾಸಿ ಸಿಂಹಾಸನದೊಳೆಸೆದಪಂ ಪುಷ್ಪದಂತಾಧಿನಾಥಂ ೪೯

ವ॥ ಅಂತು ಯಕ್ಷನಿರ್ಮಿತ ಸಮವಸೃತಿಯಂ ನೋಡಿ ಶಚಿಯುಂ ಶಚೀಪತಿಯುಂ ಪರಮಭಕ್ತಿಯಿಂ ಪರಮನಿರ್ದ ಗಂಧಕುಟಿಯಂ ತ್ರಿಪ್ರದಕ್ಷಿಣಂ ಬಂದನೇಕ ವಸ್ತುಸ್ತವ ರೂಪಸ್ತವ ಗುಣಸ್ತವಂಗಳಿಂ ಸ್ತುತಿಯಿಸಿ ದೇವಲೋಕದನೇಕನವ್ಯದಿವ್ಯಾರ್ಚನೆಗಳಿಂದರ್ಚಿಸಿ ಕೇವಲಜ್ಞಾನಮಹಾಕಲ್ಯಾಣಪೂಜೆಯಂ ಮಾಡಿ

ಕಂ॥ ಸಾಸಿರದೆಂಟನ್ವರ್ಥೋ
ದ್ಭಾಸುರನಾಮಂಗಳಂ ಮಹೋತ್ಸವದಿಂದಂ
ವಾಸವನೊಲ್ದಿಡೆ ತಾಳ್ದಿದ
ನಾ ಸುವಿಧಿಜಿನೇಂದ್ರನುರು ದಯಾಂಬುಧಿಚಂದ್ರಂ ೫೦

ವ॥ ಅಂತರ್ಚಿಸಿ ಸುರಪತಿ ಜಿನಪತಿಯಂ ಬೀೞ್ಕೊಂಡು ಪೋದನನ್ನೆಗಮಿತ್ತಲ್ ವಿದರ್ಭಸ್ವಾಮಿಗಳ್ ಮೊದಲಾಗೆಂಭತ್ತೆಣ್ಬರ್‌ಗಣಧರರುಂ, ಸಾಸಿರದಯ್ನೂರ್ವರ್ ಪೂರ್ವಧರರುಂ ಪೊಂಬತ್ತುಲಕ್ಕೆಯುಮಯ್ವತ್ತುಸಾಸಿರದಯ್ನೂರ್ವರ್ ಶಿಕ್ಷಕರುಂ ಎಂಟುಸಾಸಿರದ ನಾನೂರ್ವರವಧಿಜ್ಞಾನಿಗಳುಮೆಣ್ಬಾಸಿರ್ವರ್ ಕೇವಳಿಗಳುಂ ಪದಿಮೂಱುಸಾಸಿರ್ವರ್ ವಿಕ್ರಿಯರ್ಧಿಪ್ರಾಪ್ತರುಂ ಎಣ್ಬಾಸಿರದೈಯ್ನೂರ್ವರ್ ಮನಃಪರ್ಯಯಜ್ಞಾನಿಗಳುಂ ಆಱುಸಾಸಿರದಱುನೂರ್ವರ್ ವಾದಿಗಳುಂ ಘೋಷಾರ್ಯಿಕೆಯರ್ ಮೊದಲಾಗೆ ಮೂಱುಲಕ್ಕೆಯುಮೆಂಭತ್ತು ಸಾಸಿರರ್ಜಿಕೆಯರುಮೆರಡುಲಕ್ಕೆ ಶ್ರಾವಕರುಂ ನಾಲ್ಕುಲಕ್ಕೆ ಶ್ರಾವಕಿಯರುಮಸಂಖ್ಯಾತದೇವರುಂ ದೇವಿಯರುಮಸಂಖ್ಯಾತತಿರ್ಯಗ್ಜಾತಿಗಳುಂ ಬೆರಸು ಧರ್ಮೋಪದೇಶಂಗೆಯ್ಯುತ್ತುಮಿಪ್ಪತ್ತೆಂಟು ಪೂರ್ವಾಂಗಮುಂ ನಾಲ್ಕುವರ್ಷದಿಂ ಕುಂದಿದೊಂದುಪೂರ್ವಂ ವಿಹಾರಿಸುತ್ತುಮಿರ್ದು

ಕಂ॥ ಮಹಿಮಾಬ್ಧಿಪೊಂದುತಿಂಗಳ
ವಿಹರಣಮಂ ಮಾಣ್ದು ಬಂದು ಸಮ್ಮೇದಮಹಾ
ಮಹಿಧರದೊಳ್ ಸಾಸಿರ್ವರ್
ಮಹಿಮಹಿತಮುನೀಂದ್ರರೊಡನೆ ಯೋಗದೊಳಿರ್ದಂ ೫೧

ವ॥ ಅಂತಪ್ರತಿಮ ಪ್ರತಿಮಾಯೋಗಾನಿಯೋಗದೊಳಿರ್ದನಂತರಂ ಸ್ವಸ್ಥಾನಸ್ವಯೋಗ ಕೇವಳ ಪ್ರದೇಶ ನಿರ್ಜರೆಯಂ ಮಾಡುತ್ತುಮಂತರ್ಮುಹೂರ್ತಕಾಲದೊಳ್ ದಂಡಕವಾಟಪ್ರಕರಣಾಲೋಕಪೂರಣಸಮುದ್ಭೂತಕ್ರಿಯಾಸಮಾಪ್ತಿಯಂ ಕ್ರಮಕ್ರಮದಿಂ ಮಾಡಿಮತ್ತಂ ಸೂಕ್ಷ್ಮಕ್ರಿಯಾಪ್ರತಿಪತ್ತಿಯೆಂಬ ಮೂಱನೆಯಶುಕ್ಲಧ್ಯಾನಾಧೀನನಾಗಿ ನಾಮಗೋತ್ರವೇದನೀಯಾಯುಷ್ಯಾಭಿಧಾನಾಘಾತಿಚತುಷ್ಟಯಮಂ ದಗ್ಧರಜ್ಜುಸಮಾನಂ ಮಾಡಿ ಪಂಚಾಕ್ಷರೋಚ್ಚಾರಣ ಕಾಲಪರ್ಯಂತಂ ತಱಿಲೊಳಗಣ ಬೀಜದಂತೆ ದ್ರವ್ಯಮನೋವಾಕ್ಕಾಯ ದೊಳೊಂದದೆ ಸಮುಚ್ಛಿನ್ನಕ್ರಿಯಾ ಪ್ರತಿಪತ್ತಿ ಶುಕ್ಲಧ್ಯಾನಾಪೂರ್ಣತೆಯಿನ ಶೇಷಶೀಲಗುಣನಿಳಯನಘಾತಿಸಮ್ಮಂಧಮಪ್ಪವುತ್ತರೋತ್ತರ ಪ್ರಕೃತಿಗಳಂ ಕ್ರಮಕ್ರಮದಿಂ ನಿರವಶೇಷಂ ಕಿಡಿಸಿ

ಕಂ॥ ಅನುಪಮಮಪ್ಪೆಂಟುಗುಣಂ
ತನಗಮರ್ದಿರೆ ಸೌಖ್ಯನಿಧಿಯುಮಖಿಳಜಗತ್ಪಾ

ವನನೇಂ ಮುನಿಜನಗಮ್ಯನು
ಮೆನೆ ತನ್ನೊಳೆ ನೆಱೆದು ಸುವಿಧಿ ಮುಕ್ತಿಗೆ ಸಂದಂ ೫೨

ಸ್ಥಿರಭಾದ್ರಪದಸಿತಾಷ್ಟಮಿ
ಗಿರದೊಪ್ಪಿರೆ ಮೂಲಭಗಣಮಪರಾಹ್ಣಕದೊಳ್
ವರ ಪುಷ್ಪದಂತಜಿನಪತಿ
ಪರಮಶ್ರೀಮುಕ್ತಿಲಕ್ಷ್ಮಿಯಂ ಕೆಯ್ಕೊಂಡಂ ೫೩

ವ॥ ಅಂತು ಪುಷ್ಪದಂತಸ್ವಾಮಿ ಸಕಳ ಕರ್ಮವಿಪ್ರಮೋಕ್ಷೋಮೋಕ್ಷಃ ಎಂಬ ನಿಜಮುಖಕಮಳನಿರ್ಗತಾರ್ಹತಮತವಚನಮನನ್ವರ್ಥಂ ಮಾಡಿ ತ್ರಿಲೋಕ ಶಿಖರಿಶೇಖರನಾಗಿಯನಂತಸಹಜ ಸೌಖ್ಯಾಮೃತವನಧಿವಿಧುವಾಗಿ ನೆಲಸಿರ್ದನ್ನೆಗಮಿತ್ತ ಚತುರ್ನಿಕಾಯಾಮರನಿಕಾಯಂ ಸುವಿಧೀಶ್ವರಂಗೆ ಪರಿನಿರ್ವಾಣಕಲ್ಯಾಣಮಹಾಪೂಜೆಯಂ ಮಾಟ್ಪ ಭಕ್ತಿಯಿಂ ಬಂದು ನಿರ್ವಾಣಭೂಮಿಯಂ ದೇವಲೋಕದನೇಕಸುರಭಿ ಸುರತರುಕುಸುಮವಿಸರ ಬಂಧುರಗಂಧಾಕ್ಷತೆಗಳಿಂದರ್ಚಿಸಿ

ಕಂ॥ ಮನದನುನಯದಿಂದಾನಂ
ದನೃತ್ಯಮಂ ದಿವಿಜರಾಜನಖಿಳ ಧರಿತ್ರೀ
ಜನದ ಮನಕ್ಕಚ್ಚರಿಯ
ಪ್ಪಿನಮೊಡರಿಸಿ ಪರಮಸುಖಮನೇಂ ತಾಳ್ದಿದನೋ ೫೪

ವ॥ ಆಗಳ್ ನಿಜಗುರುವಿಯೋಗದಿಂ ಕೀರ್ತಿವರ್ಮನಾದಂ ರೋದನಾನಳದಂದಹ್ಯಮಾನನಾ ವಿದರ್ಭಗಣಧರಸ್ವಾಮಿಗಳ್ ಬೆಸಸೆ ರೋದನಂ ಮಾಣ್ದು ತಾನುಂ ಗುರುನಿಯಾಮದಿಂ ಗುರುನಿರ್ವಾಣಭೂಮಿಯನಪೂರ್ವಾರ್ಚನೆಗಳಿಂದರ್ಚಿಸಿ ಕೃತಾರ್ಥನಪ್ಪೆನೆಂದು

ಮ॥ ಸುರಪಂ ಮಾಡಿದನೂನದಿವ್ಯಪರಿನಿರ್ವಾಣೋದ್ಧಕಲ್ಯಾಣ ವಿ
ಸ್ತರಪೂಜಾತಿಶಯಕ್ಕಮಿಂತಿದೆನಸುಂ ಮೇಲೆಂಬಿನಂ ಮಾಡಿದಂ
ಪರಮಾರ್ಹತ್ವದಪೂಜೆಯಂ ಬಹುವಿಧದ್ರವ್ಯಾರ್ಚನಾನೀಕದಿಂ
ಧರಣೀವಿಶ್ರುತಕೀರ್ತಿ ಕೀರ್ತಿಧರಭೂಪಂ ಭವ್ಯರತ್ನಾರ್ಣವಂ ೫೫

ಚಂ॥ ನವರಸಮಂ ನಿಮಿರ್ಚುವ ಬೆಡಂಗನಮರ್ಚುವ ದೋಷಮಂ ತಳ
ರ್ಚುವ ಗುಣಮಂ ಕಟಿಲ್ಚುವಮರ್ದಿಂಪನೊಡರ್ಚುವ ಬಂಧಮಂ ತೊಡ
ರ್ಚುವ ಕಿವಿವೊಕ್ಕಲರ್ಚುವೆಳೆನುಣ್ಪನೊಡರ್ಚುವ ಕಾವ್ಯಸತ್ಕಳಾ
ರ್ಣವ ಮೃಗಲಕ್ಷ್ಮಲಕ್ಷಣ ವಚೋವಧುವಂ ಬುಧರೊಲ್ದು ವರ್ಣಿಕುಂ ೫೬

ಗದ್ಯ

ಇದು ಸಮಸ್ತಭುವನಸಂಸ್ತುತ ಜಿನಾಗಮ ಕುಮುದ್ವತೀ ಚಾರುಚಂದ್ರಾಯಮಾಣ ಮಾನಿತ ಶ್ರೀಮದುಭಯಕವಿ ಕಮಳಗರ್ಭ ಮುನಿಚಂದ್ರಪಂಡಿತದೇವ ಸುವ್ಯಕ್ತ ಸೂಕ್ತಿ ಚಂದ್ರಿಕಾಪಾನ ಪರಿಪುಷ್ಟಮಾನಸ ಮರಾಳ ಗುಣವರ್ಮನಿರ್ಮಿತಮಪ್ಪ ಪುಷ್ಪದಂತ ಪುರಾಣದೊಳ್ ಪರಿನಿರ್ವಾಣ ಮಹಾಕಲ್ಯಾಣಾಭಿವರ್ಣನಂ ಚತುರ್ದಶಾಶ್ವಾಸಂ ಪುಷ್ಪದಂತಪುರಾಣಂ ಸಂಪೂರ್ಣಂ ಮಂಗಳಮಹಾಶ್ರೀ

---

* ಈ ಕೆಳಗಿನ ಎರಡು ಪದ್ಯಗಳು ಲಿಪಿಕಾರರಿಗೆ ಸಂಬಂಧಪಟ್ಟಿದ್ದು ಚೆನ್ನೈ ಓರಿಯಂಟಲ್ ಲೈಬ್ರರಿಯಿಂದ ಬಂದ ಪ್ರತಿಯಲ್ಲಿ ಮಾತ್ರ ೫೬ನೆಯ ಪದ್ಯದ ಬಳಿಕ ಬಂದಿದೆ.

ಶಲ್ಯವಿದೂರ ಬಂಕರಸನಂಕದ ಮಾಚೆಯ ತಂದೆ ನಿತ್ಯಮಾಂ
ಗಲ್ಯಸುಶೀಲಯುಕ್ತೆ ಮಹದೇವಿಯ ವಲ್ಲಭನೊಬ್ಬುವೆತ್ತ ಸಾ
ಕಲ್ಯ ಕುಲಾಮೃತಾಂಬುನಿಧಿ ಸೋಮನ ಚಾಮನ ಸೂನುವೊಲ್ದು ಸಾ
ಕಲ್ಯ ಗುಣಾಸ್ಪದಂ ಬರೆದಪಂ ಬುಧಮಾಧವನೀಪ್ರಬಂಧಮಂ ೫೭

ಬಿಂದುಪಿನೊಂದು ಶೋಭೆ ತಲೆಕಟ್ಟಿನ ಪೊರ್ಕುಳಿ ಚೆಲ್ವು ಮಾತ್ರೆಯೊಳ್
ನಿಂದ ಬೆಡಂಗು ಬಳ್ಳಿಯೊಳೊಡಂಬಡುತಿರ್ಪ ನಯಂ ವಿಸರ್ಗದೊ
ಳ್ಪೊಂದಿರಲಕ್ಕರಕ್ಕೆ ಬರೆವಂ ಚತುರರ್ ಪರಿವರ್ಣಿಸಲ್ ನವಿ
ಲ್ಗುಂದದ ಮಾದಿರಾಜಪಿಬುಧಂ ಪಿಬುಧೋತ್ಥಿತ ನವ್ಯಕಾವ್ಯಮಂ ೫೮

ಪಾರ್ಶ್ವನಾಥ ಪುರಾಣಂ

ಪ್ರಥಮಾಶ್ವಾಸಂ

ಸ್ರ ॥ ಶ್ರೀ ವಾಚಾಸಿದ್ಧಿಗಂ ನಿರ್ಮಳನಿಖಿಳಕಳಾವೃದ್ಧಿಗಂ ಶುದ್ಧ ಚಾರಿ
ತ್ರಾವಷ್ಟಂಭಕ್ಕಮಾದರ್ಪಿತಮದನಲ ಸನ್ಮೂರ್ತಿಗಂ ತನ್ಮೊಳೇಕೀ
ಭಾವಕ್ಕಂ ಮಚ್ಚಿ ಮುಕ್ತ್ಯಂಗನೆ ವರಿಯಿಸೆ ಸತ್ಸೌಖ್ಯದೊಳ್ ನಿಂದು ಸಂದಾ
ದೇವೇಂದ್ರಾಹೀಂದ್ರವಂದ್ಯಂ ಕುಡುಗೆ ನಮಗಭೀಷ್ಟಾರ್ಥಮಂ ಪಾರ್ಶ್ವನಾಥಂ ೧

ಮ॥ ಪರಮಾಗಿರ್ದಘಮೆಯ್ದೆ ಪಿಂಗೆ ನಿಜಮಾದಾತ್ಮೀಯ ನಾನಾಗುಣಂ
ಪರಮಾನಂದದೊಳೊಂದಿ ನಿಂದಖಿಳಲೋಕೋತ್ತಂಸರಾಗಿರ್ದ ಸಿ
ದ್ಧರ ಸಂಯೋಗವಿದೇಹಸಿದ್ಧಿಗೆ ನಿಜಧ್ಯಾನಂ ದಲೆಂಬೀ ಪ್ರಸಿ
ದ್ಧರಸಂಖ್ಯರ್ ನಮಗೀಗೆ ಸಿದ್ಧರನಘಶ್ರೀಶುದ್ಧ ಸಂಸಿದ್ಧಿಯಂ ೨

ಸ್ರ ॥ ಮಾರಂಗಂ ಕಾಮಚಾರಂ ನಡೆಗಿಡೆ ವಿಷಯೇಭಂಗಳಂ ಗೆಲ್ದು ಪಂಚಾ
ಚಾರಂ ಪಂಚಾಸ್ಯದಂತೊಪ್ಪಿರೆ ಧೃತಿಗಿರಿಯಂ ಸಾರ್ದು ಶಿಷ್ಯರ್ಕಳಂ ಸ
ಚ್ಚಾರಿತ್ರೋದ್ಯುಕ್ತರಪ್ಪಂತಿರೆ ನಿಯಮಿಸುವಾಚಾರ್ಯರತ್ಯುನ್ನತರ್ ಸಂ
ಸಾರಾಂಭೋರಾಶಿಯಂ ದಾಂಟಿಸುಗೆ ಚರಣಸತ್ಪೋತದಿಂ ಖ್ಯಾತರೆಮ್ಮಂ ೩

ಶಾ॥ ನ್ಯಾಯಂ ಸ್ಯಾತ್ಪದಯುಕ್ತ ಸೂಕ್ತಮಿತರೈಕಾಂತಪ್ರಯುಕ್ತೋಕ್ತಮ
ನ್ಯಾಯಂ ಭಾವಿಪೊಡೆಂದು ಭವ್ಯನಿಕರಕ್ಕಾದೇಯ ನಿಶ್ರೇಯಸೋ
ಪಾಯಂ ನೋಟಿಪ್ಪೊಡದೊಂದು ಸಂಸ್ಕೃತಿಗಪಾಯಂ ನಂಬಿದಂದೆಂಬುಪಾ
ಧ್ಯಾಯರ್ ನ್ಯಾಯಪಥಾಗ್ರದೊಳ್ ನಿಱಿಸುಗೆಮ್ಮಂ ತಮ್ಮ ಕಾರುಣ್ಯದಿಂ ೪

ಮ॥ ಸಮಪೀಯೂಷಕಳಾಭಿವೃದ್ಧಿತಮಮಂ ನಿರ್ಮೂಳನಂ ಮಾಳ್ಪ ವೃ
ತ್ತಮನುಜ್ಜೀವಿಸಿ ಸಜ್ಜನಪ್ರಕರ ಸಮ್ಯಗ್ದರ್ಶನಶ್ರೀಯನೀ
ವ ಮುನಿಪ್ರಸ್ತುತಮಾದ ಸಾಧುನಿವಹೋದ್ಯಚ್ಚಂದ್ರಪಾದಂಗಳೆ
ಮ್ಮ ಮನೋನಿರ್ಮಳಕೈರವಕ್ಕೆ ಪಡೆಯುತ್ತಿರ್ಕೆಂದುಮಾನಂದಮಂ ೫

ಕಂ॥ ಮಳವಿರಹಿತರತಿಶಯಕೇ
ವಳಿಗಳ ನಿರತಿಶಯಪುಣ್ಯಸಂಪೂರ್ಣರ ಕೇ
ವಳಿಗಳ ವಿತತ ಶ್ರುತಕೇ
ವಳಿಗಳ ಚರಣಂಗಳೀಗೆ ಶಾಶ್ವತಸುಖಮಂ ೬

ಉ॥ ಧಾತ್ರಿಗೆ ಚಕ್ರರತ್ನಮಧಿಪತ್ವಮನೀಶನೊಳೆಂತು ಮಾಳ್ಕುಮಂ
ತೀ ತ್ರಿಜಗತ್ಪತಿತ್ವಮುಮನಾತ್ಮನೊಳುದ್ಭವಿಪಂತೆ ಮಾಳ್ಪ ರ

ತ್ನ ತ್ರಯಮೆಮ್ಮ ಚಿತ್ತಗೃಹದೊಳ್ ನೆಲಸಿರ್ದು ಸಮಿಾಹಿತಾರ್ಥಮಂ
ಸೂತ್ರಿಸುತಿರ್ಕೆ ದುಷ್ಟದುರಿತಾರಿಸಮೂಹಮನೆಯ್ದೆ ತೂಳ್ದುತುಂ ೭

ಉ॥ ಭಾವಿಸೆ ಕುಂಕುಮೋಪಮ ತನುಪ್ರಭೆ ಸೂಚಿಸೆ ರಾಗಸಾಗರ
ಶ್ರೀವಧುವೀಕೆಯೆಂದು ಪುರುಷಾರ್ಥಚತುಷ್ಟಯಮಂ ಪದಾನತ
ಗ್ರೀವುದನೆಯ್ದೆ ಸೂಚಿಸೆ ಚತುರ್ಭುಜಮೊಪ್ಪುವ ಪುಣ್ಯಮೂರ್ತಿ ಪ
ದ್ಮಾವತೀದೇವಿ ಮಾಳ್ಕೆಮಗೆ ಸೌಖ್ಯಸಮಾಗಮ ಧರ್ಮರಾಗಮಂ ೮

ಚಂ॥ ಅಗಣಿತ ಸಾಹಸೈಕನಿಧಿ ಸಜ್ಜನಪೂಜ್ಯ ಗುಣಪ್ರಕಾಶಕಂ
ಮಿಗೆ ಕಮಠೋಪಸರ್ಗಮನಡಂಗಿಸಿ ಪಾರ್ಶ್ವಜಿನಪ್ರಬೋಧಸಿ
ದ್ಧಿಗೆ ನೆರಮಾದ ಮಾಟ್ಕೆಯೊಳೆ ತಜ್ಜಿನನಾಥಕಥಾಪ್ರಬಂಧ ಸಿ
ದ್ಧಿಗೆ ನೆರಮಕ್ಕೆ ನಾಗಪತಿ ಮಾಡೆ ಮದೀಯಮನಃಪ್ರಸಕ್ತಿಯಂ ೯

ಉ॥ ಶ್ರೀವಧು ವಿಶ್ವವಿಶ್ರುತಯಶೋವಧು ನಿರ್ವೃತಿಲಕ್ಷ್ಮಿಯೆಂಬಿವರ್
ಮೂವರುಮಾವಗಂ ವಿಶದವಾಗ್ವಧು ಪೊರ್ದಿದಳಾತನಂ ಸಮಂ
ತಾವಗಮೋಲಗಿಪ್ಪರೆನಿಪಳ್ ಜಿನವಾಣಿಯೆನಿಪ್ಪ ಭಾರತೀ
ದೇವಿಯತಿಪ್ರಸನ್ನೆ ನೆಲಸಿರ್ಕೆ ಮದೀಯಮುಖಾರವಿಂದದೊಳ್ ೧೦

ಕಂ॥ ವಿರಚಿಸಿ ಕೃತಿಯೊಂದಂ ಕವಿ
ವರರೆನಿಸುವರೆಂದೊಡಪರಿಮಿತಮಂ ಶ್ರುತಮಂ
ವಿರಚಿಸಿದ ಗಣಧರರ್ ಕವಿ
ಪರಮೇಷ್ಠಿಗಳೆನಿಸಿ ನೆಗಟ್ದುದೊಂದಚ್ಚರಿಯೇ ೧೧

ದುರಿತೋದ್ಭವಶಿಖಿಯಿಂದೊಗೆ
ದುರಿ ತಮ್ಮಂ ಪೊರ್ದದಂತು ಕಿಡೆ ಶಾಂತರಸಂ
ಕರಮೆಸೆಯೆ ಬುಧರ್ ಮುಕುಳಿತ
ಕರರೆಸೆದಿರೆ ಪೊಗಟ್ವ ಗುಣಿಗಳೀಗೆಮಗಜಿ‌ವಂ ೧೨

ಅನುಪಮ ತತ್ವಾರ್ಥಂ ಪು
ಣ್ಯನಿಬಂಧನಮಪ್ಪುದೆಂತು ಮನಮನದೊಳ್ ನೆ
ಟ್ಟನೆ ನೆಲಸಿತಂತೆ ನೆಲಸಿ
ರ್ಕನಿಶಮುಮಾಸ್ವಾತಿಪಾದ ಯತಿಪಾದಯುಗಂ ೧೩

ಬಿದಿರ ಪೊದರ್ ತೊಲೆಯೆನೆ ತೂ
ಗಿದೊಡಾ ಬಿದಿರಿಂ ಮುನಿಪ ಜಟಾಚಾರ್ಯರ ಧೈ
ರ್ಯದ ಪೆಂಪು ಗೆಲ್ದುದುಪಸ
ರ್ಗದಳುರ್ಕೆಯನೆನೆ ನೆಗಟ್ದು ಮಿಗೆ ಸೊಗಯಿಸಿದಂ ೧೪

ಮುನಿರಾಜಹಂಸರೆನಿಸಿಯು
ಮನುಪಮಸುಚರಿತ್ರ ಕುಂದಕುಂದಾಚಾರ್ಯರ್

ಜಿನಚರಣದ್ವಂದ್ವಸ್ಮಿತ
ವನರುಹ ಷಟ್ಚರಣರೆನಿಪರೆನಗಿದು ಚಿತ್ರಂ ೧೫

ಉ॥ ಜಿತ್ವರಶಾಸ್ತ್ರವೇದಿ ಗಮಕಿತ್ವಮುಮಂ ಪರವಾದಿಭೇದಿ ವಾ
ದಿತ್ವಮುಮಂ ರಸಾವಹ ಕವಿತ್ವಮುಮಂ ಬುಧಚಿತ್ತಹಾರಿ ವಾ
ಗ್ಮಿತ್ವಮುಮಂ ನೃಪಾಳಸಭೆ ಮಚ್ಚೆ ಸಮರ್ಥಿಸಿ ರಂಜಿಪಂ ಮಹಾ
ಸತ್ವ ಸಮಂತಭದ್ರನುರುಶೀಲಸಮುದ್ರನಿಳಾತಳಾಗ್ರದೊಳ್ ೧೬

ಕಂ॥ ನಿಷ್ಠಾಪರತ್ವದಿಂ ಪರ
ಮೇಷ್ಠಿಸ್ತವನಮನನೂನಮಂ ಮಾಡಿ ಗುಣ
ಜ್ಯೇಷ್ಠನೆನಿಸಿರ್ದ ಕವಿಪರ
ಮೇಷ್ಠಿ ಗುಣಸ್ತವನಮೆಮಗೆ ದಲ್ ಕರಣೀಯಂ ೧೭

ಮ॥ ಸಕಳೋರ್ವೀನುತ ಪೂಜ್ಯಪಾದಮುನಿಪಂ ತಾಂ ಪೇಟ್ದ ಕಲ್ಯಾಣಕಾ
ರಕದಿಂ ದೇಹದ ದೋಷಮಂ ವಿತತ ವಾಚಾದೋಷಮಂ ಶಬ್ದಸಾ
ಧಕಜೈನೇಂದ್ರದಿನೀ ಜಗಜ್ಜನದ ಮಿಥ್ಯಾದೋಷಮಂ ತತ್ತ್ವಬೋ
ಧಕ ತತ್ತ್ವಾರ್ಥದ ವೃತ್ತಿಯಿಂದೆ ಕಳೆದಂ ಕಾರುಣ್ಯದುಗ್ಧಾರ್ಣವಂ ೧೮

ಮ॥ ಸುಕರಶ್ರೀನಯಶಾಸ್ತ್ರ ವಿಶ್ರುತ ವಚಶ್ಚಂದ್ರಾಂಶುವಿಂ ದುಃಖದಾ
ಯಕ ಮಿಥ್ಯಾತ್ವಕಳಂಕಮಂ ಕಿಡಿಸಿ ಸನ್ಮಾರ್ಗಪ್ರವೃತ್ತಿಪ್ರಭಾ
ವಕರಾಗಿರ್ದಕಳಂಕದೇವರಮಳಾತ್ಮೀಯಾಖ್ಯೆಯಂ ನನ್ನಿಮಾ
ಡಿ ಕವೀಂದ್ರಸ್ತುತರಾದರೀಗೆಮಗೆ ಸಮ್ಯಗ್ದರ್ಶನಪ್ರಾಪ್ತಿಯಂ ೧೯

ಶಾ॥ ಶ್ರೀನಿಷ್ಪನ್ನ ಸಮಂತಭದ್ರತೆಯನೆಮ್ಮೊಳ್ ಮಾಡುತಿರ್ಕೊರ್ಮೆಯುಂ
ಜ್ಞಾನಾಂಬೋಧಿ ಸಮಂತಭದ್ರನಕಳಂಕಂ ನಿಷ್ಕಳಂಕತ್ವಮಂ
ನಾನಾವಾದಿ ವಿಭೇದಿ ಭೂವಿದಿತವಿದ್ಯಾನಂದಮಂ ಹೃದ್ಯವಿ
ದ್ಯಾನಂದಪ್ರಭು ಪೂಜ್ಯಪಾದಮುನಿಪಂ ಸತ್ಪೂಜ್ಯಸಂಪತ್ತಿಯಂ ೨೦

ಕಂ॥ ರತಿಪತಿಯಂ ಬೆದಱಿಪ ಸುಚ
ರಿತದಿಂದಂ ವೀರನೆನಿಸುಗಚ್ಚರಿ ಗಣಿತಾ
ನ್ವಿತಬುದ್ಧಿಯೆನಿಸಿ ಮತ್ತಗ
ಣಿತಬುದ್ಧಿಯೆನಿಪ್ಪನಿಳೆಗೆ ವೀರಾಚಾರ್ಯಂ ೨೧

ಶುದ್ಧಾಂತರಂಗನಂ ವಾ
ಕ್ಸಿದ್ಧ ಶ್ರೀವೀರಸೇನಮುನಿಪೋತ್ತಮನಂ
ಸಿದ್ಧಾಂತಕರ್ತೃವೆನೆ ಸಮ
ಯೋದ್ಧಾರಕನೆಂದು ಪೊಗೞದಿರ್ಪರೆ ವಿಬುಧರ್ ೨೨

ಉ॥ ಶ್ರೀನರಪಾಳಮೌಳಿಮಣಿದೀಪ್ತಿವೃತಾಂಘ್ರಿ ನಖಾಳಿಕಾಂತಿಸಂ
ತಾನರನನ್ವಿತಾರ್ಥ ರಸಭಾವ ವಿಶೇಷಕವಿತ್ವರಂಜಿತಾ

ಸ್ಥಾನರನಾರು ಬಣ್ಣಿಸರೊ ಶೀಲನಿಧಾನರನತ್ಯನೂನ ವಿ
ಜ್ಞಾನರನಾತ್ತವೃತ್ತ ಜಿನಸೇನರನಾರ್ಯಗಣಪ್ರಧಾನರಂ ೨೩

ಮ॥ ವಿನುತ ಶ್ರೀಗುಣಭದ್ರದೇವಮುನಿಪರ್ ದುರ್ಮೋಹಸಂದೋಹನಾ
ಶನಮಂ ಧರ್ಮಗುಣಪ್ರಕಾಶನಮನಾತ್ಮೀಯೋದ್ಧ ವೈರಾಗ್ಯಶಾ
ಸನಮಂ ಸಚ್ಚರಿತ ಪ್ರಭಾಸನಮನತ್ಯಾನಂದದಾತ್ಮಾನುಶಾ
ಸನಮಂ ಪೇೞ್ದು ವಿನೇಯರಲ್ಲಿ ಮೆಱೆದರ್ ತಮ್ಮೊಂದು ಕಾರುಣ್ಯಮಂ ೨೪

ಶಾ॥ ಸ್ಯಾದ್ವಾದಾಚಳಸಿಂಹನೆನ್ನ ತಪದೋಪನ್ಯಾಸದಿಂ ನ್ಯಾಯಸಂ
ಪದ್ವಜ್ರಾಭನಖಂಗಳಿಂ ಮಹಿಭೃದುದ್ಭಾಸ್ಥಾನದೊಳ್ ನಿಚ್ಚಲುಂ
ವಿದ್ವಿಷ್ಟಾಖಿಳ ದುಷ್ಟವಾದಿಗಜಮಂ ನಿರ್ಭೇದನಂ ಮಾಡುವಂ
ಸ್ಯಾದ್ವಾದೀಶ್ವರಸೋಮದೇವಮುನಿಪಂ ಸಾಹಿತ್ಯವಿದ್ಯಾಧಿಪಂ ೨೫

ಕಂ॥ ಶ್ರೀವಾದಿರಾಜದೇವವ
ಚೋವಿನ್ಯಾಸಕ್ಕೆ ಭಾರತೀಶನೆ ದೊರೆಯೆಂ
ದೀ ವಸುಧೆ ನುಡಿವುದೆನೆ ಪರಿ
ಭಾವಿಸುವಂದವರ ವಿದ್ಯೆ ಬುಧಜನಹೃದ್ಯಂ ೨೬

ಸೂತ್ರಿಸಿದ ಸದುತ್ತರತ
ರ್ಕತ್ರಯದಿಂ ವಾದಿರಾಜನೆನಿಸಿದ ತೆಱದಿಂ
ಚಿತ್ರಮೆನೆ ವಿರಚಿಸಿದ ಕಾ
ವ್ಯತ್ರಯದಿಂ ಸುಕವಿರಾಜನಾ ಮುನಿರಾಜಂ ೨೭

ಯಾವಂತಿ ಗಣಿತಭಾಸ್ಕರ
ಪಾವನಮುನಿಚಂದ್ರನುದಯನಮಳಿನ ಗುಣಿ ಸ
ದ್ಭಾವ ದಿಗಂಬರಕುಳರಂ
ಭಾವಿಸೆ ಬೆಳಗುವುದು ಯುಕ್ತಮವನೀವ್ಯಕ್ತಂ ೨೮

ಶ್ರುತದಿಂದಮುಪಾರ್ಜಿಸಿ ವಿ
ಶ್ರುತಕೀರ್ತಿಯನಾತ್ಮನಾಮವಂ ಶ್ರುತಕೀರ್ತಿ
ವ್ರತಿ ಕಟಕೋಪಾಧ್ಯಾಯಂ
ಪ್ರತೀತಮೆನೆ ಮೆಱೆದನಿಳೆಗೆ ಸಿದ್ಧಾಂತೇಶಂ ೨೯

ಅತನುಪಟುಭಟನನದಟಲೆ
ದತನು ತಪಃಶ್ರೀಯನಾಂತ ತತ್ಪತಿಮೋಹ
ಕ್ಷಿತಿಪತಿಯುಮನಲೆದವರಂ
ಸ್ತುತಿಯಿಸರಾರ್ ನೇಮಿಚಂದ್ರಭಟ್ಟಾರಕರಂ ೩೦

ಭಾವತಪದಿಂದೆ ಬೆದಱಿಸಿ
ಭಾವಜನಂ ಪರಮ ಸಂಯಮೋಪಾಯಮನು

ಜ್ಜೀವಿಸಿದ ವಾಸುಪೂಜ್ಯ
ತ್ರೈವಿದ್ಯಪದಂಗಳಲ್ತೆ ಲೋಕನುತಂಗಳ್ ೩೧

ಏವೊಗಟ್ಟೆ ವಾಸುಪೂಜ್ಯ
ತ್ರೈವಿದ್ಯರ ವಿದ್ಯೆಯೇೞ್ಗೆಯಂ ಶ್ರುತಕೀರ್ತಿ
ತ್ರೈವಿದ್ಯರ್ ಸಕಳಕಳಾ
ಕೋವಿದರೆನೆ ನೆಗೞ್ದ ಗುಣಿಗಳವರ್ಗಳ ಶಿಷ್ಯರ್ ೩೨

ಉ॥ ಮುಂ ತಿಳಿವಂದು ಚಕ್ರಧರನಂದನರಾದವರುಂಟೆ ಚಕ್ರಿಗಳ್
ಕಂತುವಿರೋಧಿ ಜಾವಳಿಗೆಯಾ ಮುನಿಚಂದ್ರಮಹೀಪ್ರಸಿದ್ಧಸೈ
ದ್ಧಾಂತಿಕಚಕ್ರವರ್ತಿಯ ಸುತಂ ಬುಧವಂದಿತ ವೀರನಂದಿ ಸೈ
ದ್ಧಾಂತಿಕಚಕ್ರವರ್ತಿಯೆನಿಪಂದದಿನಂದಿಳೆ ಕೂರ್ತು ಕೀರ್ತಿಕುಂ ೩೩

ಭ್ರಾಂತಿವಿಹೀನಜೈನಸಮಯಪ್ರವಿಕಾಸನದಿಂ ಸುಖಪ್ರದಾ
ನಂತಗುಣಾಬ್ಧಿಧರ್ಮರಥವರ್ತನದಿಂ ಬುಧಸಸ್ಯವೃದ್ಧಿಯಿಂ
ಕಾಂತಸುಬೋಧದಿಂ ನಿಜಸಮಾಖ್ಯೆಯನನ್ವಿತಮಾಗೆ ಮಾಡಿ ಸೈ
ದ್ಧಾಂತಿಕನೇಮಿಚಂದ್ರಮುನಿಪಂ ಪೆಸರ್ವೆತ್ತನಶೇಷಧಾತ್ರಿಯೊಳ್ ೩೪

ಕಂ॥ ಶ್ರೀಶಾರದೇಂದುಕೈರವ
ಕಾಶಸಮುತ್ಫುಲ್ಲ ಮಲ್ಲಿಕಾಸಂಕುಳಸಂ
ಕಾಶವಿಶುದ್ಧಯಶೋಗಂ
ಗೇಶಂ ಮುನಿ ನೇಮಿಚಂದ್ರಸೈದ್ಧಾಂತೇಶಂ ೩೫

ಉ॥ ಆರ ಗಭೀರಮುಂ ತನಗೆ ಕಾಲ್ವೊಟಿಯೆಂಬಸಮಾಸ್ತ್ರನಂ ಬಲಾ
ತ್ಕಾರದೆ ಗೆಲ್ದು ಸಂದುದಯಚಂದ್ರಮುನೀಂದ್ರನೊಳೊಪ್ಪದೇ ಬಲಾ
ತ್ಕಾರಗಣಾಗ್ರಗಣ್ಯನೆನಿಪುನ್ನತಿಯೆಂದು ತಪಶ್ಚಯೋರ್ವರಾ
ವಾರಿಧಿಯಂ ದಯಾತುಳಸುಧಾನಿಧಿಯಂ ಪೊಗೞ್ಗುಂ ಜಗಜ್ಜನಂ ೩೬

ಕಂ॥ ನಿರತಿಶಯಪಾದಸೇವಾ
ಪರಿಣತ ಪುಣ್ಯಾಂಬುರಾಶಿಯಂ ಪೆರ್ಚಿಪುದ
ಚ್ಚರಿಯಲ್ತು ರಾಗದಿಂದಂ
ಪೊರೆವನಿದಚ್ಚರಿ ದಲುದಯಚಂದ್ರಮುನೀಂದ್ರಂ ೩೭

ಉ॥ ಚಾರುಚರಿತ್ರನಿರ್ಮಳಿನದರ್ಶನ ವಿಶ್ರುತಬೋಧಶಸ್ತ್ರದಿಂ
ಮಾರನನಿಕ್ಕಿ ಮಾರನುರುಮೋಹಮನಿಕ್ಕಿ ವಿಮೋಹನಾದ ಭ
ಟ್ಟಾರಕ ನೇಮಿಚಂದ್ರಮುನಿಪಾದಚಕೋರಕ ವಾಸುಪೂಜ್ಯ ಭ
ಟ್ಟಾರಕರಂಘ್ರಿಪದ್ಮಮಿರೆ ಮಾನಸಮೇಂ ನಯದೊಪ್ಪದಿರ್ಪುದೇ ೩೮

ಕಂ॥ ಏನಿದು ಚೋದ್ಯಮೊ ಬುಧರು
ರ್ವೀನುತ ಮಧ್ಯಾಹ್ನ ಕಲ್ಪವೃಕ್ಷಮಿದೆಂಗುಂ

ಭೂನಾಥ ಪೂಜ್ಯ ಪರಮ ತ
ಪೋನಿಧಿಯಂ ವಾಸುಪೂಜ್ಯಭಟ್ಟಾರಕನಂ ೩೯

ಮ॥ ಸುಮತಾಭಾವನೆ ತನ್ನೊಳೊಪ್ಪೆ ಪರಮ ಧ್ಯಾನಾರ್ಥಿಯಷ್ಟೋಪವಾ
ಸಮುಮಂ ಪಕ್ಷ ದಿನೋಪವಾಸಮುಮನೆಂತೋರಂತೆ ಮಾಸೋಪವಾಸ
ಮುಮಂ ಮಾಡಿಯುಮೇನೊ ಮತ್ತತನುಪೀಡಾಪ್ರೌಢಿಯಿಂ ರಾಮಚಂ
ದ್ರಮುನೀಂದ್ರಂ ದೊರೆವೆತ್ತನಚ್ಚರಿ ಕರಂ ಚಾರಿತ್ರಚಕ್ರೇಶ್ವರಂ ೪೦

ಮ.ಸ್ರ॥ ನಿಯತಂ ಯೋಗೀಂದ್ರರೇಕೇಂದ್ರಿಯಮುಮನೆನಸುಂ ಬಾಧಿಸಲ್ಕಾಗದೆಂಬು
ಕ್ತಿಯನೆಲ್ಲಾ ಶಿಷ್ಯವರ್ಗಕ್ಕನುಪಮ ದಯೆಯಿಂ ಶಿಕ್ಷಿಪರ್ ತಾಮೆ ಪಂಚೇಂ
ದ್ರಿಯಮಂ ನಿರ್ವಂದದಿಂ ನಿಗ್ರಹಿಸಿಯುಮತುಳ ಸ್ವಾಂತರಾಂತರ್ ಕರಂ ಶಾಂ
ತಿಯನಾ ಶ್ರೀನಂದಿಯೋಗೀಶ್ವರರವರ ಚರಿತ್ರಂ ಧರಿತ್ರೀವಿಚಿತ್ರಂ ೪೧

ಕಂ॥ ಶ್ರೀನಂದಿಮುನೀಂದ್ರಂ ಸು
ಜ್ಞಾನತಪೋವಿಭವದಿಂದೆ ಭಟ್ಟಾರಕನೆಂ
ಬೀ ನಾಮಕ್ಕನುಗುಣಮೆನೆ
ನಾನಾ ನೃಪಪೂಜ್ಯನೆನಿಸಿ ನೆಗಟ್ದಂ ಜಗದೊಳ್ ೪೨

ಶುಭಚಂದ್ರತ್ರೈವಿದ್ಯರ
ನಭಿನವ ಗಣಧರರನಖಿಳ ಶಾಸ್ತ್ರಜ್ಞತೆಯಿಂ
ತ್ರಿಭುವನವಿದ್ಯಾಗುರುಗಳ
ನಭಿವರ್ಣಿಪ ಭಕ್ತಿವೆತ್ತ ಕೃತಿಯೆ ಕೃತಾರ್ಥಂ ೪೩

ಸೂರಿಪ್ರಭು ಶುಭಚಂದ್ರೋ
ದಾರಯಶಶ್ಚಂದ್ರದೀಪ್ತಿ ಸತ್ಪಥದೊಳ್ ವಿ
ಸ್ತಾರಿಸುತಿರೆ ಪರದರ್ಶನ
ಮೋರಂತಿರೆ ಮುಂದುಗಿಡುವುದೆನಗಿದು ಚಿತ್ರಂ ೪೪

ಉ॥ ಸ್ತ್ರೀಜಿತರಾರುಮಂ ತೊಱೆವರೆಂಬಿದು ನಿಶ್ಚಯಮಾದುದೀ ಜಗ
ತ್ಪೂಜಿತವೃತ್ತದಿಂ ಕುಮುದಚಂದ್ರಮಹಾಮುನಿನಾಥನಿಂತತಿ
ಸ್ತ್ರೀಜಿತನಾಗಿ ಮುಂ ನಿಜಪರಿಗ್ರಹಮಂ ತೊಱೆದೆಯ್ದೆ ತೂಳ್ದಿದಂ
ರಾಜಿಸುತಿರ್ಪ ತನ್ನ ಹೃದಯಂಗಮನಂ ವಿದಿತಾಂಗಜನ್ಮನಂ ೪೫

ಕಂ॥ ಅತಿಚಿತ್ರತರಂ ಗುಪ್ತಿ
ತ್ರಿತಯಮುಮಿರೆ ಕುಮುದಚಂದ್ರಯತಿಪತಿ ತತ್ತ್ವಾ
ನ್ವಿತಮತಿಯೆಚ್ಚಿತ್ತಿರೆಯುಂ
ರತಿವೆರಸಿರದೋಡಿದಂ ಮನೋಜಂ ಮನದಿಂ ೪೬

ಚಾರುಗುಣನಿಳಯರಂ ವಿ
ಸ್ತಾರಿಯಶಃಪೂತಭುವನವಳಯರನೊಲವಿಂ

ದಾರಭಿವರ್ಣಿಸರಯನಿ
ಸ್ತಾರಕರಂ ಕಮಳಸೇನಭಟ್ಟಾರಕರಂ ೪೭

ಮ.ಸ್ರಾ॥ ಅಕಳಂಕಾಕಾರಜಾತಂ ತ್ರಿಭುವನವಳಯವ್ಯಾಪ್ತಬೋಧಪ್ರಭೂತಂ
ಸಕಳ ತ್ಯಾಗಪ್ರಸೂತಂ ವಿಧುವಿಹರತೆಯಂ ತಾಳ್ದಿ ಮೂಲೋಕಮಮಂ ಸು
ತ್ತಿ ಕರಂ ಸರ್ವೋರ್ವರಾ ಸಂಸ್ತುತಮೆನಿಸಿದುದೇಂ ಚೋದ್ಯಮೋ ಮಾಧವೇಂದು
ಪ್ರಕಟತ್ರೈವಿದ್ಯವಿದ್ಯಾಧಿಪ ವಿಶದಯಶಂ ಶಂಭುಹಾಸಪ್ರಕಾಶಂ ೪೮

ಮ। ಎನಸುಂ ಕಾಮನಧರ್ಮಮಂ ನಿಜಸುಧರ್ಮಂ ಬಾಣಮಂ ಬಾಣಮಂ
ತೆನೆ ಬಿಲ್ಲೊಳ್ಗುಣಮಂ ಗುಣಂ ಕಿಡಿಸೆ ಪೆಂಪಂ ತಾಳ್ದಿದಂ ಭಾವಜಾ
ತನನಾ ಭಾವತಪಃಪ್ರಭಾವಮನಿಶಂ ನಿರ್ಮೂಳನಂ ಮಾಡೆ ಭೂ
ವಿನುತಂ ಮಾಧವಚಂದ್ರದಿವ್ಯಮುನಿಪಂ ತ್ರೈವಿದ್ಯವಿದ್ಯಾಧಿಪಂ ೪೯

ಉ॥ ಚಾರುಚರಿತ್ರಕೈರವವಿಕಾಸಿ ವಿನಿರ್ಮಳವರ್ತಿಚಂದ್ರಿಕಾ
ಶ್ರೀರುಚಿ ಸತ್ಪಥೋಚಿತಕಳಾವಿಳಸಚ್ಛುಭಚಂದ್ರದೇವಭ
ಟ್ಟಾರಕಗೌರವೋನ್ನತಿ ಶರತ್ಸಮಯರ್ ಸಮಯಾಬ್ಧಿಚಂದ್ರಭ
ಟ್ಟಾರಕರೊಪ್ಪುವರ್ ಲಲಿತಕೀರ್ತಿಗಳಾಶ್ರಿತಪುಣ್ಯಮೂರ್ತಿಗಳ್ ೫೦

ಶಾ॥ ಶ್ರೀನಂದಿವ್ರತಿನಾಥಶಿಷ್ಯತಿಳಕಂ ಪ್ರಸ್ತುತ್ಯಸಾಹಿತ್ಯ ವಿ
ದ್ಯಾನಿಸ್ತಾರಕದೇವನಂದಿಪದವಿದ್ಯಾಪ್ರೌಢಿಯಿಂ ಭೂನುತಾ
ಖ್ಯಾನ ಶ್ರೀಪ್ರಭುಪೂಜ್ಯಪಾದನೆನಿಪಂದಾಶ್ಚರ್ಯಮೇಂ ತರ್ಕವಿ
ದ್ಯಾನಂದಪ್ರಭುವಾದನಚ್ಚರಿ ಕರಂ ತ್ರೈವಿದ್ಯಚಕ್ರೇಶ್ವರಂ ೫೧

ಸ್ರಾ॥ ಏವೇಳ್ವೆಂ ವಾಕ್ಯವಜ್ರಾಂಕುಶವಿದಳಿತವಾದಿದ್ವಿಪಂ ಸುಪ್ರಮೇಯ
ಪ್ರಾವೀಣ್ಯಶ್ರೀಯನಾರ್ಯಪ್ರತತಿ ಪೊಗೞ್ವಿನಂ ತಾಳ್ದಿಯುಂ ಮತ್ತಮೇಯ
ಪ್ರಾವೀಣ್ಯಶ್ರೀಯನಾಂತಂ ಸ್ವಪರಸಮಯತರ್ಕಂಗಳೊಳ್ ಭಾವಸೇನ
ತ್ರೈವಿದ್ಯಂ ಚೋದ್ಯಮಾದ್ಯಪ್ರತಿಮಪೃಥುಯಶಂ ಹೃದ್ಯಸಾಹಿತ್ಯವಿದ್ಯಂ ೫೨

ಉ॥ ತತ್ತ್ವವಿಚಾರಮಾಚರಣಮಂ ಸುಕವಿತ್ವಮತಿಪ್ರಸನ್ನ ವಾ
ಗ್ಮಿತ್ವಮನಪ್ರತರ್ಕ್ಯ ಸುವಿತರ್ಕ ವಿವೇಕ ವಿಶೇಷಬುದ್ಧಿ ವಾ
ದಿತ್ವಮನೊಂದಿ ನಿಂದೆಸೆಯೆ ಸಜ್ಜನವಂದಿತ ವೀರನಂದಿ ಸಾ
ಧುತ್ವಮನೊಂದಿದಂ ಕುಮುದಚಂದ್ರಮುನೀಂದ್ರ ಸಮಗ್ರನಂದನಂ ೫೩

ಕಂ॥ ಕ್ಷೋಣಿನುತ ಧರ್ಮಜಾತ
ಪ್ರೀಣಂ ಗುಣಧಾರಿ ಧೀರನತಿಶಯಲಕ್ಷ್ಮಾ
ಕ್ಷೂಣಂ ಪರಹೃದಯಂಗಮ
ಬಾಣಾಳಿ ಧನಂಜಯಂ ಧನಂಜಯನೆ ವಲಂ ೫೪

ಭೂಪಾಳವಂದ್ಯಚರಿತಂ
ಭೂಪಾಳಾಸ್ಥಾನಹೃದ್ಯವಿದ್ಯಾಸ್ಥಾನಂ

ಜ್ಞಾಪಿಸಿದನಿಂತು ಕೃತಿಕುಲ
ದೀಪಂ ಭೂಪಾಳದೇವನೆಂಬೀ ಪೆಸರಂ ೫೫

ಶ್ರೀಗುಣಗರ್ಭಂ ಕೀರ್ತಿಕ
ಳಾಗರ್ಭಂ ಸೂಕ್ತಿಸಂಗತಾಧ್ಯಾತ್ಮಂ ಜೈ
ನಾಗಮಗರ್ಭಮಿದೆನೆ ಜಗ
ತೀಗುರು ನೆಗಲ್ದಿಂ ಪ್ರಸನ್ನಗುಣನಾಚಣ್ಣಂ ೫೬

ನವರಸದೊಳಮಿತರ ರಸ
ಕ್ಕವಕಾಶಂ ಗುಡದೆ ತಳೆಯೆ ಶಾಂತರಸಮನಂ
ತವಿಚಳನಮವುಂ ಕರೆಗ
ಣ್ಮುವುವೆನೆ ಪೃಥುಹೃದಯನಾದನೆಂತಾಚಣ್ಣಂ ೫೭

ಗುಣವರ್ಮಂ ಸತ್ಕವಿತಾ
ಗುಣಮುಂ ಭವ್ಯತ್ವಗುಣಮುಮಾತ್ಮಯಶೋರ
ಕ್ಷಣಮೆನೆ ಮೆಱೆದಂ ಪೆಸರಂ
ಪ್ರಣೂತಮೆನೆ ಪೇೞ್ದು ನೇಮಿನಾಥಾನ್ವಯಮಂ ೫೮

ಚದುರರೆನಿಸಿದರ ಚಿತ್ತ
ಕ್ಕಿದು ಪೊಸತೆನಿಸಿರ್ದ ರೀತಿಯಂ ನಿರ್ವಹಿಪ
ಗ್ಗದ ಬಲ್ಮೆ ಬಗೆಯೆ ತನಗ
ಲ್ಲದೆ ಪೆಱರ್ಗಿಲ್ಲೆನಿಪ ಪೊನ್ನನಂ ಪೊಗೞದರಾರ್ ೫೯

ಚತುರಚಮತ್ಕೃತಿಯುದ್ಘಾ
ಟಿತರಮಣೀಯಂ ದಿಟಕ್ಕೆ ಪಂಪನ ಕೃತಿ ಮಿ
ಕ್ಕಿತರರ ಕೃತಿತತಿಯವಿಚಾ
ರಿತ ರಮಣೀಯಂ ವಿದಗ್ಧರಂ ಮೆಚ್ಚಿಕುಮೇ ೬೦

ರತ್ನಕೃತಿಪದಕಮಂ ನುತ
ನೂತ್ನಾರ್ಥವ್ಯಕ್ತಿಯುಕ್ತಮಂ ಸತ್ಕೃತಿಯಂ
ಯತ್ನದೆ ಸುಜನರ್ ವಿಜಿತಸ
ಪತ್ನಮನತಿಪೃಥುಳಹೃದಯದೊಳ್ ತಳೆಯದರಾರ್ ೬೧

ವಾಸ್ತವಭಕ್ತಿಯುತಂ ರೂ
ಪಸ್ತವನ ಮಣಿಪ್ರವಾಳಮಂ ಜಿನನಾಸ್ಥಾ
ನಸ್ತವನಮನೊದವಿಸಿ ಭುವ
ನಸ್ತುತನಾದಗ್ಗಳಂಗಮಗ್ಗಳರೊಳರೇ ೬೨

ಇಂಪೆಸೆಯೆ ವಿಪಂಚಿಯ ದನಿ
ಯಂ ಪೋಲ್ತಿರೆ ಸುಕರ ಸರಸ ಸೂಕ್ತಿವಿಳಾಸಂ
ಪಂಪನೆ ನುಡಿದಂತಭಿನವ
ಪಂಪನೆ ನುಡಿದಂ ಬೞಿಕ್ಕೆ ಕಳಕಂಠನವೋಲ್ ೬೩

ಘನಕಲೆಗೆ ಮಾಣಿಕಮನೀ
ವನ ತೇಜದಿಂ ಪೆಜರ್ಗೆ ಕಾವ್ಯಮಂ ಕುಡದೆ ಯಶೋ
ಧನಕೆ ಬುಧಜನಕೆ ಕೊಟ್ಟೊ
ರ್ವನೆ ಸುಜನೋತ್ತಂಸನೆನಿಸಿದಂ ಬೊಪ್ಪಣ್ಣಂ ೧೪

ಅಂಹಮನಪಹರಿಸುವ ಗುಣ
ಸಂಹತಿಯಂ ತಳೆದ ಕೇಶಿಯಣ್ಣಂ ಬುಧಬೃಂ
ದಂ ಪೊಗಟ್ ಸುಕೃತಸಿಂಹಂ
ಸಿಂಹಪ್ರಾಯೋಪಗಮನಮಂ ವಿರಚಿಸಿದಂ ೧೫

ಕಾಮನ ಬಾಣಕ್ಕಂ ಕವಿ
ಕಾಮನ ಬಾಣಕ್ಕಮಿಲ್ಲ ಭೇದಂ ಸುಮನೋ
ರಾಮತೆಯಿಂ ಸ್ತನಶತಕೋ
ದ್ದಾಮತೆಯಿಂ ಭುವನಮಂ ವಶಂ ಮಾಬ್ದುದಜಿಂ ೧೬

ಜಿನಚಂದ್ರಸ್ತವನದೆ ಪಾ
ವನಮೆನಿಸುವ ಸೂಕ್ತಿ ಕೀರ್ತಿದೀಪಿಕೆಗುಜ್ಜೀ
ವನಕರಮೆನೆ ಕೌತುಕಮಂ
ಜನಿಯಿಸುಗುಂ ಕವಿಗಳೊಳಗೆ ನೆಗಬ್ದಿಗ್ಗಳನಾ ೧೭

ಸುಮನೋಧರ್ಮಗುಣಂಗಳೊ
ಳಮರ್ದಮರ್ದಂ ಕಜಿವ ನೇಮಿಚಂದ್ರನ ಬಾಣಂ
ಭ್ರಮರಹಿತಂ ಮೃದುಹೃದಯಂ
ಗಮಮೆನಿಪುದಿದಾವ ಕೌತುಕಂ ಬುಧಜನದಾ ೧೮

ವಕ್ರೋಕ್ತಿಭವಯಶೋಜ್ಯೋ
ತ್ಸ್ನಾಕ್ರಾಂತಪರಾವಲೇಪತಿಮಿರಂ ಧರಣೀ
ಚಕ್ರದೊಳತಿಚಿತ್ರಂ ಕವಿ
ಚಕ್ರಪ್ರಿಯನೆನಿಸಿ ಬಾಳಚಂದ್ರಂ ನೆಗಬ್ದಂ ೧೯

ಶ್ರುತಿನೂತ್ನಾರ್ಥೋತ್ಪಾದನ
ಚತುರತೆಯುಂ ವಿವಿಧಕೀರ್ತಿಲಕ್ಷ್ಮೀಸತಿಯುಂ
ಕ್ಷಿತಿತಳದೊಳ್ ಕಾವ್ಯಕಳಾಪಂ
ಚತುರ್ಮುಖಂಗೆಸೆವ ವಾಸುದೇವಂಗರಿದೇ ೨೦

ನೂತನಕವಿಗಳುಮೆನಗೆ ಪು
ರಾತನಕವಿಗಳಸಮಾನರತಿಶಯಸುಗುಣಾ
ನ್ವೀತರೆನಿಸುವೊಡೆ ಗುಣಸಂ
ಪ್ರೀತಿಯಿನವರುಂ ವಿನೂತರತಿವಿಖ್ಯಾತರ್ ೨೧

ಉ॥ ಪಂಪನ ಸುಬ್ಬುವೆತ್ತ ನುಡಿ ಪೊನ್ನನ ಬಿನ್ನಣದೋಜೆ ರತ್ನನೊ
ಳ್ಪುಂ ಪುದಿದಿರ್ದ ಲಕ್ಷಣವಿಚಕ್ಷಣತೋನ್ನತಿ ಕಣ್ಣಮಯ್ಯನಿಂ

ಪಂ ಪುದಿದಿರ್ಪ ಗೌರವಗುಣಂ ಗುಣವರ್ಮನ ದೇಸೆವೆತ್ತ ಮಾ
ತಿಂ ಪರಿಕಿಪ್ಪೊಡೀ ಕೃತಿಯೊಳುಂಟೆನೆ ಪೇೞ್ವುದು ಪೇೞಲೊಲ್ವವಂ ೭೨

ಚಂ॥ ನುಡಿ ಪೊಸತಾಯ್ತು ದೇಸೆ ಪೊಸತಾಯ್ತು ನಯಂ ಪೊಸತಾಯ್ತು ರೇಖೆ ನೋ
ೞ್ಪೊಡೆ ಪೊಸತಾಯ್ತು ಕಾಕು ಪೊಸತಾಯ್ತು ಛಲಂ ಪೊಸತಾಯ್ತು ಜಾಣೊಡಂ
ಬಡೆ ಪೊಸತಾಯ್ತು ಕೊಂಕು ಪೊಸತಾಯ್ತು ರಸಂ ಪೊಸತಾಯ್ತು ತನ್ನಿನಂ
ದೊಡೆ ಕವಿ ಪೇೞ್ವುದಲ್ಲದೊಡೆ ಕಾವ್ಯಮದೇಂ ಬುಧಸೇವ್ಯಮಕ್ಕುಮೇ ೭೩

ಕಂ॥ ಸಾರ ಪ್ರಸನ್ನತರ ಗಂ
ಭೀರ ಗುಣಾಧಾರ ಪದದೊಳಿರ್ಪಂದದೆ ಶೃಂ
ಗಾರಾದಿ ರಸಸಮೃದ್ಧಿ ವಿ
ಚಾರಿಪೊಡುತ್ತಾನಪದದೊಳಿರಲಱಿದಪುದೇ ೭೪

ನಿರಳಂಕೃತಿ ವನಿತೆ ಮನೋ
ಹರೆಯೆನಿಸದ ತೆಱದೆ ಸರಸಕೃತಿಯುಚಿತಾಳಂ
ಕರಣದಿನಪಗತ ಮಾಡು
ತ್ತಿರೆ ಚದುರರ ಸರಸಹೃದಯಮಂ ಮೆಚ್ಚಿಕುಮೇ ೭೫

ಮಸೃಣಂ ಪ್ರಸನ್ನತರಮಾ
ಗಸಕಳಿವಂತೆಡೆಯೊಳಿರ್ದುಮಿಲ್ಲದವೋಲ್ ತೋ
ಱಸುವಂತಿರರ್ಥಮಂ ಪ್ರಕ
ಟಿಸಿ ಪೇೞದೊಗಂಟುವೇೞ್ವ ಕವಿಯುಂ ಕವಿಯೇ ೭೬

ಇದು ಚಿತ್ರಂ ಕವಿತಾಧ
ರ್ಮದೊಳೊಂದಿದ ಬಾಣಮೆನಿತು ತಿರ್ದಿದೊಡಂ ಕೊಂ
ಕಿದುದೆ ಬಗೆವಂದು ಬಲ್ಲರ
ಹೃದಯಮನದು ಪೋಗಿ ತಾಗಿ ತಲೆದೂಗಿಸುಗುಂ ೭೭

ಪ್ರವಿರಳಮಣಿಯಿರೆ ವರ್ತಿಯ
ನವಿರಳಗುಣಸಹಜಕವಿಯ ಕಾವ್ಯಮದಿರೆ ಬ
ಲ್ಲವರಿತರಕಾವ್ಯಮಂ ಮಾ
ಡುವನ್ನರಾರ್ ಕರ್ಣಹೃದಯನವಭೂಷಣಮಂ ೭೮

ಕನಕಂ ನಿಘರ್ಷಣಚ್ಛೇ
ದನಾದಿಯಿಂ ಕಾಂತಿವಡೆವವೋಲ್ ದೋಷಜ್ಞರ್
ಮುನಿದೊಸೆದು ಪರೀಕ್ಷಿಸಿದೊಡ
ಮನುಪಮಗುಣಮೊಂದದಂದು ಕೃತಿ ಸಂದಪುದೇ ೭೯

ದೋಷಜ್ಞರಖಿಳಕಾವ್ಯವಿ
ಶೇಷಜ್ಞರ ಗುಣವಿಶೇಷಮಂ ಪ್ರಕಟಿಪೊಡೇಂ

ದೂಷಣಪರರಪ್ಪೊಡವರ್
ದೋಷಜ್ಞರೆನಿಪ್ಪರೊಪ್ಪುವನ್ವರ್ಥತೆಯಿಂ ೮೦

ಪರಮಾಣುಪ್ರಾಯಂ ಗುಣ
ಮಿರೆ ಮಚ್ಚುವ ಸುಜನರಿಂದೆ ದುರ್ಜನರೆಮಗಂ
ಗುರುಗಳ್ ದೋಷ ಲವಮುಮಿರೆ
ಪರಿಹರಿಪಂ ತೂಱಿ ತೋಱಿ ನುಡಿವುದಱಿಂದಂ ೮೧

ಮಾನಿತಕವಿಕೃತಿಬುಧಸಂ
ತಾನಕ್ಕುತ್ಸವಮನೊದವಿಪಂತಿರಸೂಯಾ
ಧೀನಂಗೊದವಿಸದಂತೆ ಕ
ಳಾನಿಧಿಯುದಯಂ ಖಳಂಗೆ ಸುಖದಾಯಕಮೇ ೮೨

ಉ॥ ಇಂದು ಮರೀಚಿ ಮಾವು ಪೊಸಮಲ್ಲಿಗೆ ಪಾದರಿ ಜಾದಿ ಚಂಪಕಂ
ಕುಂದಮಿವಾದಿಯಾದ ಕುಸುಮಂ ಕಳಕಂಠವಿರಂಚಿಯಿಂಚರಂ
ಚಂದನದಣ್ಬು ಕರ್ಪುರದ ತಂಬುಲಮೆಂಬಿವಗಲ್ದವರ್ಗೆ ಕಾ
ವ್ಯಂ ದೊರೆಗೆಟ್ಟ ದುರ್ಜನರ್ಗೆ ಸಹ್ಯಮೆ ಪಾಲ್ ಜ್ವರಿತಂಗೆ ಪಥ್ಯಮೇ ೮೩

ಕಂ॥ ಪೊನ್ನೊಳೊಡಗೂಡಿಯವಲೋ
ಹನ್ನಾಶಮನೆಯ್ದಿ ತಾಪಮಂ ಪಡೆದುಮದ
ಕ್ಕುನ್ನತಿಯನಿತ್ತುದಂತೆ ಗು
ಣೋನ್ನತನೊಳ್ ಖಳನ ಮುಳಿಸು ಗುಣಮನೆ ಪಡೆಗುಂ ೮೪

ಮುಂದುಗಿಡೆ ಗೂಗೆ ಬೆಳಗದೆ
ನಿಂದನೆ ರವಿ ಜಗಮನಂತೆ ಕವಿ ದುರ್ಜನನೇಂ
ಮುಂದುಗಿಡೆ ಬುಧರ್ಗೆ ಪರಮಾ
ನಂದಂ ಬಳೆವಂತು ಪೇೞದಿರ್ಕುಮೆ ಕೃತಿಯಂ ೮೫

ಇನಿದೆನಿಸುವ ವಸ್ತುಗಳಱಿ
ವನನಱಿಯದವನುಮನೊಲಿಸುವಂತೆವೊಲಿಂಪಂ
ಜನಿಯಿಸುವೆನ್ನಯ ಕೃತಿ ಸ
ಜ್ಜನರುಮನಿತರರುಮನೊಲಿಸುವುದು ವಿಸ್ಮಯಮೇ ೮೬

ಶಾ॥ ಸತ್ಕೀರ್ತಿಪ್ರಮದಾ ವಶೀಕರಣಮಂತ್ರಂ ಕಾಂತಿಯುಕ್ತಂ ಮನ
ಕ್ಕುತ್ಕೀಳಪ್ರಭವಂ ಪ್ರಸಿದ್ಧಮತಿನಿರ್ದುಷ್ಟಂ ಪರೀಕ್ಷಾಕ್ಷಮಂ
ಮತ್ಕಾವ್ಯಂ ಗುಣರತ್ನ ಶೋಭಿ ಸರಸಂ ಸಾರಂ ಸುವರ್ಣಪ್ರಿಯಂ
ಹೃತ್ಕರ್ಣಾಭರಣಂ ಸಮಸ್ತಬುಧವೃಂದಕ್ಕಪ್ಪುದೇನೊಪ್ಪದೇ ೮೭

ಮ.ಸ್ರ॥ ಘನಶಬ್ದಾಡಂಬರೋತ್ಪತ್ತಿಯಿನಖಿಳರಸೋತ್ಪಾದನಪ್ರೌಢಿಯಿಂ ಸ
ಜ್ಜನಚೇತಶ್ಚಾತಕಾಸ್ವಾದಿತವಚನಸುಧಾಬಿಂದುಸಂದೋಹದಿಂ ಭೂ

ವಿನುತಶ್ರೀಕೀರ್ತಿವಲ್ಲೀಜನನವಿಭವದಿಂ ನಿಟ್ಟಿಸಲ್ ನೆಟ್ಟನಿಂತೀ
ತನೆ ಸಂಪಚ್ಚಾರುಮೇಘಂ ಸುಕವಿಜನಮನೋಹರ್ಷಸಸ್ಯಪ್ರವರ್ಷಂ ೮೮

ಮ.ಸ್ರ॥ ಪ್ರಕಟಪ್ರಜ್ಞೋದಯಂ ವ್ಯಾವೃತವಿಪುಳಪದಾರ್ಥತ್ವದಿಂ ದುಷ್ಟ ಹೃತ್ಕೌ
ಶಿಕ ದೃಕ್ಸಂಪಾದಿತಾಂಧತ್ವದಿನಮಳತೆಯಿಂ ಲೋಕದೀಪ ಪ್ರರೂಪಾ
ಧಿಕ ವಿಖ್ಯಾತತ್ವದೀತಂ ಬಗೆಯೆ ಜಗದೊಳಾನಂದಮಂ ಭವ್ಯಚಕ್ರಾ
ಹ್ವಕುಳಕ್ಕೊಲ್ದೀವ ಪೆಂಪಿಂ ವಿಬುಧಜನಮನಃಪದ್ಮಿನೀ ಪದ್ಮಮಿತ್ರಂ ೮೯

ಕಂ॥ ಘನಚಂದನರಸರುಚಿರಂ
ಸುನಿರ್ಮಳಂ ಶೀತಳಂ ಜಗನ್ಮಂಗಳಮು
ಖ್ಯನಶೇಷಸುಜನಮುಖಮಂ
ಡನನೆನಿಸುವ ವಿಭವದಿಂದೆ ಕವಿಕುಳತಿಳಕಂ ೯೦

ಎಂಬನುಪಮ ನಿಜಗುಣನಾ
ಮಂ ಬುಧನಿಕರಕ್ಕೆ ರತ್ನಕಂಠಿಕೆಯವೊಲೊ
ಪ್ಪಂಬೆತ್ತಿರೆ ಕೀರ್ತಿಸುಧಾ
ಬಿಂಬೋದಯದಿಂದೆ ಬೆಳಗಿದಂ ಕುಲಗಿರಿಯಂ ೯೧

ಉ॥ ಲೋಕಣನಾಯಕಂ ವಿಬುಧಲೋಕನುತಂ ಪಿತೃ ಕಾಮಿಯಕ್ಕನ
ವ್ಯಾಕುಳಶೀಲೆ ತಾಯ್ ತನಗೆ ನಾಗಣನುತ್ತಮಭೋಗನಗ್ರಜಂ
ಶ್ರೀಕುಮುದೇಂದು ನಿರ್ಮಳಯಶಃಪ್ರಸರಂ ಗುರು ವಾಸುಪೂಜ್ಯನಾ
ತ್ಮೀಕೃತತತ್ತ್ವನಾಗಿ ನೆಗಟ್ದಂ ಗುಣಮಂಡನ ಪಾರ್ಶ್ವಪಂಡಿತಂ ೯೨

ಕಂ॥ ತನ್ನೊಳ್ಪನೀವ ಗುಣಸಂ
ಪನ್ನನನೊಲ್ದಱಿಸಿ ಪೊಗೞ್ವುದೀ ಗುಣದಿಂ ಸಂ
ಪನ್ನಂ ಜಿನೇಂದ್ರನದಱಿಂ
ತನ್ನಱಿವಂದದೊಳೆ ಭಕ್ತಿಯಿಂ ಬಣ್ಣಿಸುಗುಂ ೯೩

ವಾಸ್ತವಗುಣಯುತನಖಿಳ ಮ
ಹೀಸ್ತುತ ತೀರ್ಥಕರಚರಿತಮಂ ಸುಕೃತಜನ
ಪ್ರಸ್ತುತಮಂ ಸ್ತುತಿಯಿಸದ
ಪ್ರಸ್ತುತಮಂ ಸ್ತುತಿಯಿಪಂದು ಪಡೆಗುಮೆ ವಿಬುಧರ್ ೯೪

ಚಂ॥ ಪುರುಜಿನಪಾರ್ಶ್ವದೊಳ್ ವೃಷಭಸೇನಗಣಾಗ್ರಣಿ ತಜ್ಜಿನೋಕ್ತಮಂ
ಭರತನೃಪಂಗೆ ವೀರಜಿನಪಾರ್ಶ್ವದೊಳಾ ಜಿನರಾಜಸೂಕ್ತಮಂ
ಗುರುಗುಣಗೌತಮರ್ ಮಗಧಮಾಂಡಳಿಕಂಗೊಲವಿಂದೆ ಪೇೞ್ದುದಂ
ನಿರುಪಮವಿಶ್ರುತಶ್ರುತಧರೌಘಪರಂಪರೆಯಿಂದೆ ಬಂದುದಂ ೯೫

ಕಂ॥ ಪಾರ್ಶ್ವಜಿನಪತಿಯ ನಿಜಪದ
ಪಾರ್ಶ್ವಾನತಭುವನಪತಿಯ ಚರಿತಮನೊಲವಿಂ

ಪಾರ್ಶ್ವಬುಧಂ ಸತ್ಕೃತಿಕೃತಿ
ಪಾರ್ಶ್ವದೊಳತಿಚದುರರೋದುವಂತಿರೆ ಪೇೞ್ದಂ ೯೬

ರಸಭಾವಂ ಪೊಸತೆನೆ ನ
ರ್ತಿಸಲಱಿದ ಬಟಿಕ್ಕೆ ನರ್ತಿಪಂತೀ ಕೃತಿಯಂ
ಪೊಸಯಿಸಿದಂ ಮುನ್ನುಳ್ಳೊಡ
ಮಸಮ ರಸಪ್ರಸರಮೆಸೆಯೆ ಕವಿಕುಳತಿಳಕಂ ೯೭

ವ॥ ಅದೆಂತೆನೆ
ಎಡೆಗೊಟ್ಟು ಜೀವಸಮಿತಿಗೆ
ಬಿಡದನಿಲತ್ರಿತಯವಸ್ತ್ರವೃತಿಯಿಂದೆ ಜಗಂ
ಕಡೆದೋಱದಿರ್ಪ ಗಗನದ
ನಡುವಿರ್ಪುದು ನೂಲ ಸೆಜ್ಜೆಯನ್ನೇಱಿದವೋಲ್ ೯೮

ಕಂ॥ ಪದಿನಾಲ್ಕೆ ರಜ್ಜು ನೆಗೞ್ದುದ
ಯದೆ ಮತ್ತದುಹಾನಿಯಂಮು ಮೇಣೊಂದಯ್ದೊಂ
ದದು ರಜ್ಜುವ ಪವಣಿಂದೆನೆ
ಮೊದಲಿಂ ತುದಿವರೆಗಮಗಲದಗಲಮೆ ಚೆಲ್ವಿಂ ೯೯

ಅವ್ಯಾಬಾಧಮಕೃತ್ರಿಮ
ಮವ್ಯಾಹತಮುಕ್ತಿಚಿತ್ತವಲ್ಲಭಜಿನಬೋ
ಧವ್ಯಾಪ್ತಂ ಸಂಚಿತ ಷ
ಡ್ದ್ರವ್ಯಮಧಸ್ತಿರ್ಯಗೂರ್ಧ್ವಭೇದಂ ಭುವನಂ ೧೦೦

ವ॥ ಆ ಭುವನತ್ರಯದ ನಟ್ಟನಡುವೆ

ಕಂ॥ ಉತ್ತಮಗುಣಭುವನಪ್ರಭು
ಗೆತ್ತಿದ ಸತ್ತಿಗೆಯನಿಟಿಸೆ ಗಗನಸ್ಥಳಿ ತಾ
ಳ್ದಿತ್ತದಱ ಕಾವಿನೊಳ್ಪುಮ
ನೆತ್ತಂ ತ್ರಸನಾಳಮೇಕರಜ್ಜುವಿಶಾಳಂ ೧೦೧

ಶೋಭಿಪ ಭುವನತ್ರಯಲ
ಕ್ಷ್ಮೀಭಾಸುರಮಧ್ಯಮೆನಿಸೆ ಮಧ್ಯಮಲೋಕಂ
ಶ್ರೀಭೃತಜಂಬೂದ್ವೀಪಂ
ನಾಭಿ ವಳಿತ್ರಿತಯಮೆನಿಸೆ ಪವನತ್ರಿತಯಂ ೧೦೨

ವ॥ ಅಲ್ಲಿ

ಕಂ॥ ತತ್ತದ್ದ್ವಿಗುಣಕ್ರಮದಿಂ
ದೆತ್ತಂ ದ್ವೀಪಾಬ್ಧಿಗಳ್ ಸ್ವಯಂಭೂರಮಣೋ

ದಾತ್ತಾಂಬುಧಿಪರ್ಯಂತಂ
ಸುತ್ತಿರ್ಪುವು ಖಾತಮೆನಿಸಿ ವಳಯಾಕೃತಿಯಿಂ ೧೦೩

ವ॥ ಅವಱೊಳಗೆ

ಮ॥ ಅವಿಲಂಘ್ಯಂ ನಿಜತೇಜಮೊಪ್ಪೆ ಶರಣಾಯಾತಂ ಕುಭೃದ್ವಾಹಿನೀ
ನಿವಹಂ ಕೂಡಿರೆ ಪೆಂಪುವೆತ್ತವನಿಯಂ ತನ್ನಂತೆ ಮರ್ಯಾದೆಯಿಂ
ಭುವನಪ್ರಸ್ತುತರಾಗಿ ಪಾಲಿಪುದು ರಾತ್ರೀಪಾಲರೆಂದೊಲ್ದು ಪೇ
ಳ್ವವೊಲುತ್ತುಂಗತರಂಗಘೋಷದೆ ಕರಂ ವಾರಾಶಿ ಕಣ್ಗೊಪ್ಪುಗುಂ ೧೦೪

ವ॥ ಅಂತುಮಲ್ಲದೆಯುಂ

ಮ॥ ಉರಗೇಂದ್ರಾಭಿನುತಾಂತರಂಗಬಹಿರಂಗಶ್ರೀಯುತಂ ವೃತ್ತರ
ತ್ನರುಚಿ ವ್ಯಾವೃತನಿಷ್ಕಳಂಕಹೃದಯಂ ನಿತ್ಯಂ ಗಭೀರಂ ಸುರಾ
ಸುರಸೇವ್ಯಂ ಕಮಠಪ್ರಣೂತವಿಭವಂ ಶ್ರೀಪಾರ್ಶ್ವತೀರ್ಥೇಶನಂ
ತಿರೆ ಪೂರ್ಣಂ ಲವಣಾರ್ಣವಂ ಸೊಗಯಿಕುಂ ನೀಲಪ್ರಭಾಡಂಬರಂ ೧೦೫

ವ॥ ಆ ಜಳನಿಧಿಯಿಂದೊಳಗೆ

ಕಂ॥ ಜಂಬೂವೃಕ್ಷದಿನೆಸೆವುದು
ಜಂಬೂದ್ವೀಪಂ ಸುಧಾಂಶುವಟವೃಕ್ಷದಿನಿಂ
ತೆಂಬುದೆ ಭೇದಮವೆರಡ
ಕ್ಕಂ ಬಗೆವೊಡೆ ಭೇದಮಿಲ್ಲ ಕಡುಚೆಲ್ವಿಂದಂ ೧೦೬

ವ॥ ಅದಱ ಮಧ್ಯಪ್ರದೇಶಕ್ಕಳಂಕಾರಮೆನಿಸಿ

ಮ॥ ಪುದಿದಿಂದ್ರಾಚಳದೊಂದುಚೆಲ್ವನದನಿನ್ನೇವಣ್ಣಿಪೆಂ ನಾಗಲೋ
ಕದ ಚೆಲ್ವಂ ಬಿಡದಿಕ್ಕಿ ಮೆಟ್ಟಿದುದು ರತ್ನಶ್ರೇಣಿಯಿಂ ಮಧ್ಯಲೋ
ಕದ ಚೆಲ್ವಂ ಗೆಡೆಗೊಂಡುದಿಂದ್ರಮಹಿಜಾತವ್ರಾತದಿಂ ನಾಕಲೋ
ಕದ ಚೆಲ್ವಂ ಸಲೆ ತಾಳ್ದಿ ನಿಂದುದದು ಚಂಚಚ್ಚೂಳಿಕಾಲೀಲೆಯಿಂ ೧೦೭

ವ॥ ಅದಲ್ಲದೆಯುಂ

ಕಂ॥ ಜಂಬೂದ್ವೀಪದ ನಡುವೆ ನಿ
ತಂಬದ ಮಣಿಕಾಂತಿ ನಿಮಿರೆ ದೆಸೆದೆಸೆಗೆ ದಿಶಾ
ಸ್ತಂಬೇರಮಕ್ಕೆ ಬಿದಿ ನ
ಟ್ಟಂಬಿನ ಪೊಂಗಂಬಮೆನಿಸಿ ಮಂದರಮೆಸೆಗುಂ ೧೦೮

ತುಂಬಿದ ತಿಳಿಗೊಳನೆನೆ ಲವ
ಣಾಂಬುಧಿಯಂಬುರುಹಮೆನಿಸೆ ಜಂಬೂದ್ವೀಪಂ
ಪೊಂಬೆಟ್ಟಮದಱ ಕರ್ಣಿಕೆ
ಯೆಂಬಂದದೆ ಮಧ್ಯದಲ್ಲಿ ಕಣ್ಗೆಸೆದಿರ್ಕುಂ ೧೦೯

ಆ ಗಿರಿಯಿಂ ದಕ್ಷಿಣದಿ
ಗ್ಭಾಗದೊಳಿರ್ಪುದು ಶುಭರತಭರತಂ ಚೆಲ್ವಿಂ
ಗಾಗರಮದಱೊಳಗೆಸೆವುದು
ರಾಗಾಮೃತಮಣಿಕರಂಡಮಾರ್ಯಾಖಂಡಂ ೧೧೦

ವ॥ ಅಲ್ಲಿ

ಉ॥ ಸೌಮ್ಯನವೀನಯೌವನವಧೂಜನದಿಂ ಭರತೇಂದ್ರವಾಹಿನೀ
ಹಿಮ್ಯನಗೋಪಮಾನಮಹನೀಯಕಳಾಗಮಕೋವಿದರ್ಕಳಿಂ
ಭ್ರಾಮ್ಯದಳಿಪ್ರಸೂನಸಹಕಾರಸರೋರುಹದಿಂದೆ ಕಾಮ್ಯಮ
ಗ್ರಾಮ್ಯಮತೀವ ರಮ್ಯಮೆನೆ ಬಣ್ಣಿಸರಾರೊ ಸುರಮ್ಯದೇಶಮಂ ೧೧೧

ವ॥ ಆ ಸಕಳಜನ ಸುಖನಿವಾಸ ದೇಶವಿಳಾಸಿನಿಯ ಭಾಸುರ ಮಧ್ಯಪ್ರದೇಶಕ್ಕೆ ಶೋಭಾನಾಭಿಯೆನಿಸಿ

ಚಂ॥ ಧನದನಿವಾಸದಿಂ ಮಣಿಮಯೋಜ್ವಳದೇವಕುಲಂಗಳಿಂದೆ ನಂ
ದನವನದಿಂ ಸುಧರ್ಮಸಭೆಯಿಂ ಸುಮನಃಪರಿಶೋಭೆಯಿಂದೆ ಭೂ
ವಿನುತ ಜಿನಾರ್ಚನಾಭಿಷವವರ್ಣನ ಶಕ್ರ ನಿಜೇಶನಿಂದೆ ಪೌ
ದನಪುರಮೊಪ್ಪುತಿರ್ಪುದಮರಾವತಿಯಂತೆ ಸುವರ್ಣಗೋಪುರಂ ೧೧೨

ಕಂ॥ ಏಮಾತೊ ಬಲ್ಪಿನಿಂ ಬಹು
ಸಾಮಗ್ರಿಯಿನೊಳ್ಪುವೆತ್ತ ಚೆಲ್ವಿಂದಂ ರ
ಕ್ಷಾಮಣಿ ಚಿಂತಾಮಣಿ ಚೂ
ಡಾಮಣಿಯೆನೆ ಜನಪದಕ್ಕೆ ನಗರಮದೆಸೆಗುಂ ೧೧೩

ಅರವಿಂದನೆನಿಸಿಯುಂ ತ
ತ್ಪುರನೃಪತಿ ಜಡಪ್ರಸಂಗರಹಿತಂ ರಜದಿಂ
ಪೊರೆಯಂ ಮಧುಪೋತ್ಕರದಿಂ
ಪರಿವೇಷ್ಟಿತನಲ್ಲನಿಂತು ಚಿತ್ರಚರಿತ್ರಂ ೧೧೪

ಧರಿಯಿಸಿದಂ ವಿಶದಗುಣೋ
ತ್ಕರಕಳಿತಂ ರಾಜಹಂಸಸಂಕುಳಸೇವ್ಯಂ
ಸಿರಿಯಂ ಪ್ರತಾಪದಿಂದಂ
ಧರಿಯಿಸಿ ತನ್ನೃಪತಿ ತನ್ನ ಪೆಸರ್ಗನುಗುಣಮಂ ೧೧೫

ಉತ್ತಮ ಸಚಿವಾಯತ್ತನು
ದಾತ್ತಾತ್ಮಾಯತ್ತನವನಿವಲ್ಲಭನುಭಯಾ
ಯತ್ತನೆನಿಸಿರ್ದು ನಿತ್ಯಾ
ಯತ್ತಂ ತಾನೆನಿಸಿ ನೆಗಳ್ದಿನೇಂ ಗುಣನಿಧಿಯೋ ೧೧೬

ಅಸಮಪ್ರಜ್ಞಾನಿಧಿ ರಣ
ರಸಿಕಂ ತನ್ನೃಪನ ಮಂತ್ರಿ ಪರಹಿತನಧಿಪಂ
ಗೆಸೆಪ ನಿಜಮಂತ್ರದಿಂ ಸಾ
ಧಿಸಿ ಕೊಟ್ಟಂ ವಿಶ್ವಭೂತಿ ವಿಶ್ವಾವನಿಯಂ ೧೧೭

ಏಕಪ್ರಧಾನನೆಂಬುದ
ನೇಕಚ್ಛತ್ರಮನೆ ಮಾಡಿ ಮೆಱೆದಂ ಪತಿಗೀ
ಲೋಕಾಧಿಪತ್ಯಮಂ ವಿ
ದ್ಯಾಕುಶಲಂ ವಿಶ್ವಭೂತಿ ವಿಶ್ವಂಭರೆಯೊಳ್ ೧೧೮

ಧರಿಯಿಸಿದಳ್ ಚೆಲ್ವನನುಂ
ದರಿ ರತಿಯಂ ಗೆಲ್ದಳೆಂಬಿನಂ ಬಂಧೂಕಾ
ಧರೆ ಗುಣಮಣಿಜನನವಸುಂ
ಧರೆ ಗುರುಕುಚೆ ವಿಶ್ವಭೂತಿರಮಣೀರತ್ನಂ ೧೧೯

ಕಮಠಂ ಪಿರಿಯಮಗಂ ಕಿಱಿ
ಯಮಗಂ ಮರುಭೂತಿಯವರ್ಗೆ ಕಮಠನ ಚೇತೋ
ರಮೆ ವಾರುಣಿ ಮರುಭೂತಿಯ
ರಮಣಿ ಲತಾಲಲಿತತನು ವಸುಂಧರೆಯೆಂಬಳ್ ೧೨೦

ಕಮಠಂ ಕಠಿನನಧೋಗಮ
ನಮನಂ ಜಡಸಂಗತಂ ಮಹಾದುರ್ದಮಕ
ರ್ದಮಲೋಲನೆನಿಪವಂ ಭವ
ಸಮುದ್ರದೊಳ್ ಮಗ್ನನಪ್ಪುದೇಂ ವಿಸ್ಮಯಮೇ ೧೨೧

ಮರುಭೂತಿಯೆನಿಸಿ ವಿತರಣ
ಸುರಭೂಜವಿರಾಜಿತಂ ವಿಶುದ್ಧ ಯಶೋವ
ಲ್ಲರಿಯಿಂ ಪರಿಶೋಭಿಪನ
ಚ್ಚರಿ ಬಗೆವೊಡೆ ಸರಸಹೃದಯನಾ ಮಂತ್ರಿಸುತಂ ೧೨೨

ವ॥ ಅಂತಾ ವಿಶ್ವಭೂತಿ ವಿಶ್ವಭೂತಿ ಪ್ರದಾಯಕಸ್ವಕೀಯನಯೋಪಾಯಪ್ರಮುದಿತ ಹೃದಯಸ್ವಾಮಿಪ್ರಸಾಧಿತಪ್ರಮೋದನು ಮನುಕುಲಕಾಂತಾಸಂಭೋಗಸಂಭೂತರಸಾಸ್ವಾದನುಂ ನಯವಿನಯಸಮಾಜತನೂಜಮುಖಾವಲೋಕನಸಂಜಾತಪುಳಕನುಂ ನಿಜಕುಳತಿಲಕನುಂ ದಾನಸನ್ಮಾನಸಂತರ್ಪಿತ ಸುಜನಸಂತಾನನುಂ ದಿಗ್ವಳಯವರ್ತಿಕೀರ್ತಿಲತಾವಿತಾನನುಮೆನಿಸಿ ಸಂಸಾರಸುಧಾರಸಮಂ ಪಲವುಕಾಲಮತಿಲೋಲುಪತೆಯಿನನುಭವಿಸುತ್ತುಮಿರೆ

ಚಂ॥ ಪಳಿತದುಕೂಲವಸ್ತ್ರವಳಿಚಂದನ ಚರ್ಚಿತೆ ನಿಚ್ಚಲುಂ ಮನೋ
ಬಳಮೊಳಸೋರೆ ಕಾಯಬಳಮೋಸರಿಸುತ್ತಿರೆ ಮುಂದುಗಾಣದಂ
ತಳವಟಿದಾರ ಮಾತುಗಳನಾಲಿಸದಂತು ಜರಾಲತಾಂಗಿ ತ
ನ್ನೊಳೆ ನಿಲೆ ಯಕ್ಷ್ಮಶಕ್ತಿ ಮಿಗೆ ಮೋಹಿಸಿದಳ್ ನೆರೆದಾ ಪ್ರಧಾನನಂ ೧೨೩

ಕಂ॥ ನೆಟ್ಟನೆ ಬಲವಟಿಯೆ ಜವಂ
ಗೆಟ್ಟಿರೆ ತನು ಶಿಥಿಲಮಾಗೆ ಕಾಯಂ ಸಲೆ ಥಾ
ಳಿಟ್ಟೊಡ್ಡಿಪ ಜವನುಪ್ಪರ
ವಟ್ಟವನನುಕರಿಸಿ ನರೆಗಳೊಗೆದುವು ಶಿರದೊಳ್ ೧೨೪

ಚಂ॥ ಅವಿರಳಕೋಪದಿಂ ಪಗೆಯನೊರ್ಮೆಯೆ ಕೊಲ್ಲದೆ ನಿಂದುನಿಂದು ತ
ಳ್ತವಯವಮಂ ವಿಭೇದಿಸುವನಂದದೆ ಪಲ್ಗಳನೊರ್ಮೆ ಪೂಣ್ಕೆಯಿಂ
ಕಿವಿಗಳನೊರ್ಮೆ ಕಣ್ಗಳನದೊರ್ಮೆ ಪದಂಗಳನೊರ್ಮೆ ಭೇದಿಸು
ತ್ತವಯವದಿಂದೆ ಕೊಲ್ವ ಯಮಕಿಂಕರನೀ ಪಿರಿದಪ್ಪುಮುಪ್ಪುದಲ್ ೧೨೫

ಕಂ॥ ಅಪವರ್ಗಮನುಪದೇಶಿಸ
ಲಪಗತದಂತತ್ವದಿಂದ ಬಾರದೊಡಿನ್ನೆಂ
ತಪವರ್ಗಮನದಟಿಂ ಸಾ
ಧಿಪನೊ ನರಂ ಕರಣಹೀನನಕಟೇಗೆಯ್ವಂ ೧೨೬

ಇಂದ್ರಿಯಪಾಟವವಟಿದೊಡ
ತೀಂದ್ರಿಯಪದನಿಯತಮಾದುದೀ ತನು ಜರೆಯಿಂ
ರುಂದ್ರತಪೋಭರದಿಂದಮ
ತೀಂದ್ರಿಯಪದನಿಯತನಾಗದಿರ್ಪನೆ ಚದುರಂ ೧೨೭

ಅಣಿಯರಮಾಡಲ್ಕೆಡೆಯಿ
ಲ್ಲಣಮಿಾ ವಳಿಪಳಿತರಾಜಿ ಮುನ್ನಿರ್ದಾಯುಃ
ಕ್ಷಣದಲ್ಪತೆಯಂ ಪೇಳ್ದುಂ
ಗಣಿಯಿಸುವೊಡೆ ಕಾಶಪರ್ವಮೆನಿಪಿರಿದಕ್ಕುಂ ೧೨೮

ಆರಯ್ಯದೆ ಸಂಸಾರದ
ಸಾರಾಸಾರತೆಯನಿನ್ನೆವರಮಳಿಪಿಂದಂ
ದಾರ ತನೂಭವ ಧನ ಕೇ
ದಾರಪಿಮೋಹದೊಳೆ ತೊಡರ್ದು ನಮೆದುದೆ ಸಾಲ್ಗುಂ ೧೨೯

ಮಾನ್ಯಂ ಸಪ್ತತ್ಯೂರ್ಧ್ವಂ
ಸನ್ಯಸನಮೆಸಿಪ್ಪ ವಚನಮಂ ನೆನೆವವನೇ

ಧನ್ಯಂ ಮತ್ತಳಿಪಿದವಂ
ದೈನ್ಯಕ್ಕೊಳಗಾಗಿ ಶೂನ್ಯಹೃದಯನೆನಿಕ್ಕುಂ ೧೩೦

ಆನಿನಿತುಕಾಲಮಾತ್ಮಾ
ಧೀನನೆನೆದನುಱಿದು ಮುಪ್ಪು ಚಪ್ಪರಿಸೆ ಪರಾ
ಧೀನನೆನಿಸುವೆನೆ ತಪದಿನ
ನೂನ ಸ್ವಾಧೀನಸೌಖ್ಯಮಂ ಸಾಧಿಸುವೆಂ ೧೩೧

ಎಂದು ತಱಿಸಂದು ಮನದೊಳ್
ನಿಂದಿರೆ ವೈರಾಗ್ಯಮಖಿಳಪರಿಜನಮಮಂ ಪು
ಲ್ಲಿಂದಿಱಿಸಿ ಭವಪಯೋನಿಧಿ
ಯಂ ದಾಂಟುವ ಸತ್ತ್ವವಿಭವಮಂ ಪ್ರಭು ತಳೆದಂ ೧೩೨

ವ॥ ಅಂತು ತಳೆದು ತನ್ನಂತರಂಗದೊಳೆ ಚಿಂತಿಸುತ್ತುಮಿರ್ದು

ಕಂ॥ ಪ್ರಾಜ್ಞಂ ಪತಿ ಪರಿಜನಕೆ ಮ
ನೋಜ್ಞಂ ಮರುಭೂತಿಯಾತನಿರೆ ಕಮಠನನ
ತ್ಯಜ್ಞನನಸ್ಮತ್ಪದವಿಗ
ವಜ್ಞಾಯೋಗ್ಯನನದೆಂತೊ ಪತಿಗಪ್ಪಯ್ಪೆಂ ೧೩೩

ವ॥ ಎಂದು ನಿಶ್ಚಯಿಸಿ ನಿಜಚಿತ್ತವೃತ್ತಿಯೊಳ್ ಮುಂಪುಟ್ಟಿದ ಸಂಸಾರಕಾರಣಮಪ್ಪ ಜ್ಞಾನಮನುದಾಸೀನಂ ಮಾಡುವಂತೆ ಕಮಠನನುದಾಸೀನಂ ಮಾಡಿ ಬೞಿಕ್ಕುದಯಿಸಿದ ವಿವೇಕಮಂ ಸ್ವೀಕರಿಪಂತೆ ಮರುಭೂತಿಯಂ ಸ್ವೀಕರಿಸಿ ಅರವಿಂದಮಹಾರಾಜನಲ್ಲಿಗಾ ಮರುಭೂತಿಯನೊಡಗೊಂಡು ಪೋಗಿ

ಮ॥ ದೇವ ಭವತ್ಪ್ರಸಾದದೊಳೆ ಸಾಧನಮಾಯ್ತಿಹಲೋಕಸೌಖ್ಯಮಾ
ಶಾವಧಿಯಪ್ಪ ಕೀರ್ತಿ ಪರಲೋಕದ ಸೌಖ್ಯಮಗಾಧಬೋಧಮ
ರ್ಥಾವಧಿ ನಿನ್ನದೊಂದು ದಯೆಯಿಂ ದೊರೆಕೊಂಡಪುದೆನ್ನ ಮಾತನು
ರ್ವೀವರ ಕೇಳ್ದೊಡಂಬಡುವುದಾಂ ಜಿನದೀಕ್ಷೆಯನೊಲ್ದು ತಾಳ್ದುವೆಂ ೧೩೪

ಕಂ॥ ಒಸೆದೆನ್ನನಧೀಶ್ವರ ಶಿ
ಕ್ಷಿಸಿ ನಡೆಯಿಸಿಕೊಂಡ ತೆಱದಿನೀತನುಮಂ ಶಿ
ಕ್ಷಿಸಿ ನಡೆಯಿಸಿಕೊಳ್ವುದೆನು
ತ್ತೆ ಸಚಿವನಪ್ಪಯಿಸಿದಂ ನೃಪಂಗಾತ್ಮಜನಂ ೧೩೫

ವ॥ ಅಂತು ತನ್ನ ಕನಿಷ್ಠತನೂಜನಂ ನಿಜರಾಜಂಗಪ್ಪಯಿಸಿ ದುಷ್ಕರ್ಮಬಂಧನಮಂ ಬಿಡಿಸುವಂತೆ ಬಂಧುಜನಮಂ ಬಿಡಿಸಿ ಮೋಕ್ಷಲಕ್ಷ್ಮಿಯನಪ್ಪುಕೆಯ್ವಂತೆ

ಬಾಹ್ಯಾಭ್ಯಂತರ ಪರಿಗ್ರಹನಿವೃತ್ತಿಲಕ್ಷಣಮಪ್ಪ ತಪೋಲಕ್ಷ್ಮಿಯುಂ ವಿಶ್ವಭೂತಿಯು ನಶ್ವರಸುಖಸಮರ್ಪಕಮನಪ್ಪುಕೆಯ್ದನಿತ್ತಲ್

ಮ.ಸ್ರ॥ ಗುರುಭಾವಕ್ಕಿನ್ನದೆಂತುಂ ನೆಱೆಯೆನೆನುತೆ ನಿರ್ಯಜ್ವರಾಜರ್ಝರಾಂಗಂ
ಗುರು ತನ್ನೊಳ್ ಕೂರ್ಮೆಯಿಂದಂ ನಿಱಿಸೆ ನಿಜಮಹಾಮಾತ್ಯಸಂಪೂರ್ಣ ಸಂಪ
ದ್ಭರಮಂ ನಿರ್ವ್ಯಗ್ರನಾಂತಂ ದೃಢನಯನಿಪುಣಸ್ವಾಂತನಾಜ್ಞಾನಿಧಾನಂ
ಮರುಭೂತ್ಯಾಖ್ಯಪ್ರಧಾನಂ ಸುಕವಿಜನಮನೋಹರ್ಷಸಸ್ಯಪ್ರವರ್ಷಂ ೧೩೬

ಗದ್ಯ

ಇದು ವಿದಿತಬುಧಲೋಕನಾಯಕಾಭಿಪೂಜ್ಯ ವಾಸುಪೂಜ್ಯಜಿನಮುನಿ ಪ್ರಸಾದಾಸಾದಿತನಿರ್ಮಳಧರ್ಮ ವಿನುತವಿನೇಯಜನವನಜವನ ವಿಳಸಿತ ಕವಿಕುಳತಿಕಪ್ರಣೂತ ಪಾರ್ಶ್ವನಾಥಪ್ರಣೀತಮಪ್ಪ ಪಾರ್ಶ್ವನಾಥ ಚರಿತಪುರಾಣದೊಳ್ ಕಥಾವತಾರವರ್ಣನಂ

ದ್ವಿತೀಯಾಶ್ವಾಸಂ

ಕಂ॥ ಶ್ರೀಪತಿ ಹೃದಯಂಗಮನಭಿ
ರೂಪಂ ಶುಭವೃತ್ತನೊಪ್ಪಿದಂ ಪೃಥುತೇಜೋ
ವ್ಯಾಪೃತಯಶನಾಸ್ಥಾನಸು
ದೀಪಂ ಕೌಸ್ತುಭವಿಭಾಸಿ ಕವಿಕುಳತಿಳಕಂ ೧

ಚಂ॥ ಅತುಳಪರಾಕ್ರಮಕ್ಕೆ ಸುನಯಂ ವಿಭವಕ್ಕೆ ಪರೋಪಕಾರಮ
ನ್ವಿತ ವಚನಕ್ಕೆ ಸತ್ಯಮಱಿವಿಂಗೆ ಸದಾಚರಣಂ ಕುಲಕ್ಕೆ ಪೆಂ
ಪತಿಶಯ ಪುಣ್ಯದೇೞ್ಗೆಗೆ ನಿಜೋದ್ಯಮಮೆಯ್ದೆ ಸಹಾಯಮಪ್ಪವೋಲ್
ಪತಿಗೆ ಸಹಾಯನಾಗಿ ಪಡೆದಂ ಮರುಭೂತಿ ಮಹಾವಿಭೂತಿಯಂ ೨

ಮ॥ ಪತಿಯಾಶಾಪತಿ ಕೌಶಿಕಂ ಹತಬಳಂ ತನ್ನಾಖ್ಯೆಯುಂ ನೋಡೆ ಗೋ
ಪತಿಯೆಂದಂದು ಸುಮಂತ್ರಿಯಪ್ಪನೆ ದಿಟಕ್ಕೆಂದೇೞ್ಕುಂ ಸ್ವಾಮಿಗಾ
ಶ್ರಿತಚಿಂತಾಮಣಿ ರಾಜಹಂಸನತುಳೋದ್ಯತ್ತಂತ್ರನೆಂಬೀ ಮಹೋ
ನ್ನತಿಯಂ ಮಾಡುವ ಮಂತ್ರಿ ಮುಖ್ಯನನಯೋದ್ಯೋಗಂ ಗುರೂದ್ಯೋಗಮಂ ೩

ಕಂ॥ ಉದರಪರಿಪೂರ್ತಿಯುೞಿದಂ
ಗದ ಪುಷ್ಟಿನಿಮಿತ್ತಮಕ್ಕುಮಂತವನಿಪ ಸಂ
ಪದಮಂ ನಿಖಿಳಾಂಗದ ಸಂ
ಪದಕ್ಕೆ ಮೊದಲಾಗೆ ಮಾಡಿದಂ ಮಂತ್ರಿವರಂ ೪

ವ॥ ಅಂತು ಮರುಭೂತಿ ನಿಜನಾಥಂಗೆ ನೀತಿನಿಧಾನಂ ಪ್ರೀತಿಯನೊದವಿಸುತ್ತುಂ ಬೆಸಕೆಯ್ಯುತ್ತುಮಿರೆ

ಕಂ॥ ಕೊಟ್ಟೆಯ್ದೆ ಕಪ್ಪಮಂ ಮಗು
ೞ್ದಿಟ್ಟಿದ ಬಱಿಗೊಲ್ಲು ಪೇೞ್ದು ತಾಣಕ್ಕೆ ನೃಪರ್
ಬಿಟ್ಟು ಭುಜಗರ್ವಮಂ ಮೂ
ವಿಟ್ಟಿಗೆ ಬರೆ ನೆಗೞ್ದನಿಳೆಯೊಳರವಿಂದನೃಪಂ ೫

ಮ॥ ಮುಳಿಸಿಂದೀಕ್ಷಿಸೆ ಸಾರ್ದುವೆಮ್ಮ ಧನಮುಂ ದೇಶಂಗಳುಂ ನಿನ್ನನ
ಗ್ಗಳಮಿನ್ನೆಮ್ಮಯ ಜೀವಮೆಂದಸಿಲತೋದ್ಯತ್ಪತ್ರಮಂ ನೆತ್ತಿಯೊಳ್
ತಳೆದಾ ವೈರಿಗಳಂಬು ದಿವ್ಯಮನೆ ಪೊಕ್ಕಂತುದ್ಧಕೌಕ್ಷೇಯಕೋ
ಜ್ಜ್ವಳಧಾರಾಜಳದಲ್ಲಿ ಮುೞುಗುವುದು ನಿಚ್ಚಂ ತದ್ಧರಾಧೀಶನಾ ೬

ವ॥ ಅಂತಖಿಳ ಧರಾವಳಯಂ ವಳಯದಂತೆ ನಿಜಭುಜಮಂಡನಕ್ಕಳವಡೆ ವಿಜಯಲಕ್ಷ್ಮಿಯುಮಂ ವಶಂ ಮಾಡಿ ರೂಢಿವಡೆದತಿಪ್ರಾಜ್ಯಸಾಮ್ರಾಜ್ಯಸುಖಮನನು ದಿನಮನುಭವಿಸುತ್ತಮಿರ್ದೊಂದುದೆವಸಂ

ಕಂ॥ ನವಯುವತಿಲೋಚನದ್ಯುತಿ
ಧವಳಿಸೆ ಮಣಿಭೂಷಣಾಂಶು ಚಿತ್ರಿಸೆ ನೇತ್ರೋ
ತ್ಸವಮೆನಿಪೋಲಗಸಾಲೆಯೊ
ಳವನೀಶ್ವರನಿಂದ್ರಲೀಲೆಯಿಂದೆಸೆದಿರ್ದಂ ೭

ಮ॥ ನಗೆಗಣ್ಗಳ್ ನಗೆನೆಯ್ದಿಲಂ ನಗೆಮೊಗಂ ಸಸ್ಮೇರ ನೀರೇಜಮಂ
ನಗೆದಂತಾವಳಿ ಕುಂದಮಂ ನಗೆಶಿರೀಷೋದ್ದಾಮದಾಮಂಗಳಂ
ನಗೆತೋಳ್ಗಳ್ ದಶನಚ್ಛದಂ ವಿಕಸಿತ ಶ್ರೀಬಂಧುಬಂಧೂಕಮಂ
ನಗೆಪುಷ್ಪಾಸ್ತ್ರಕುಲಾಧಿದೇವತೆಯರೆಂಬಂತೊಪ್ಪಿದರ್ ಕಾಂತೆಯರ್ ೮

ಕು೦॥ ಎಣೆ ತಮಗಿಲ್ಲೆನಿಪರ್ ಕಣ್
ತಣಿಯದ ಚೆಲ್ವಿಂದೆ ಚತುರಜನಚೇತೋಗ್ರಾ
ಹಿಣಿಯರನಂಗಶ್ರೀಗ್ರಾ
ಹಿಣಿಯರ್ ತನ್ನೃಪನ ಚಾಮರಗ್ರಾಹಿಣಿಯರ್ ೯

ವ॥ ಅಂತು ಸಮಸ್ತಾಂತಃಪುರ ಪುರಂಧ್ರಿನೀರಂಧ್ರಘನಸ್ತನೋದಾರಹಾರವಾರವಿಳಾಸಿನೀಸಮೇತಂ ನೀತಿನಿಧಾನ ಪ್ರಧಾನಪ್ರಮುಖನಿಖಿಳಪರಿವಾರಪರೀತನುತ್ತುಂಗಸಿಂಹಾಸನಾಸೀನನಾಸ್ಥಾನಮಂಡಳಮಧ್ಯಮನಳಂಕರಿಸಿ

ಮ.ಸ್ರ॥ ಎನಸುಂ ಕಾಮಂಗೆ ಕಾಂತಾಭಿನಯತತಿ ಷಡಂಗಂ ಷಡಂಗಂ ಬಳಂ ನ
ರ್ತನಭಾವಂ ತತ್ತ್ರಭಾವಂ ಲಯಗತಿ ಗತಿ ನೃತ್ಯಾನುಗಂ ಹೃದ್ಯವಾದ್ಯ
ಸ್ವನಮುದ್ಯಜ್ಜೈತ್ರಭೇರೀಘನರುತಿ ಕಳಗೀತಾರವಂ ಪುಷ್ಪಚಾಪಾ
ಭಿನವಜ್ಯಾರಾವಮೆಂಬಂತಿರೆ ನೃಪನೊಸೆದಂ ಸಾರಸಂಗೀತದಿಂದಂ ೧೦

ವ॥ ಅಂತು ಕಂತುರಾಜನಂತೆ ರಾಜರಾಜಂ ರಾಗಸಾಗರದೊಳ್ ನೀಡುಮೋಲಾಡುತ್ತುಮಿರೆ

ಮ॥ ಚರನೊರ್ವಂ ಪರಿತಂದು ಭೂಪತಿಗೆ ಬೇಗಂ ಕಾರ್ಯವಿಜ್ಞಾಪನಾ
ತುರಚಿತ್ತಂ ಪೊಡೆವಟ್ಟು ಬಿನ್ನವಿಸಿದಂ ನಿಮ್ಮಾಜ್ಞೆಯಂ ಮಿಾಱ ದೇ
ವರ ಠಾಣಾಂತರಮಂ ತಿರಸ್ಕರಿಸಿ ನಾಡಂ ವಜ್ರವೀರಂ ಧುರೋ
ದ್ಧುರಶೌರ್ಯಂ ಬಿಡೆ ಕಾದಿ ಗೋಳ್ಡಿಸಿದಂ ಸ್ತ್ರೀ ಬಾಲರಂ ವೃದ್ಧರಂ ೧೧

ಕಂ॥ ಅನುಕೂಲಜನಕ್ಕಿಂದ್ರನ
ನನುಕೂಲಜನಕ್ಕೆ ಯಮನೆ ನೀನೆಂಬುದನಿಂ
ತಿನಿತಂ ಬಗೆಯದೆ ವಿಘಟಿಸಿ
ದನುದಗ್ರಂ ವಜ್ರವೀರನತಿದುರ್ವಾರಂ ೧೨

ಸಂದ ನಿಜಸ್ನೇಹಭರಂ
ಕುಂದಿದೊಡಿನನುದಯದಲ್ಲಿ ತನಗಪದಶೆಯೊಳ್
ಮುಂದಱಿಯದತಿಮದಾಂಧಂ
ಸಂದುವ ಸೊಡರುದ್ದಮುರಿವ ಮಾಱ್ಕೆಯಿನುರಿದಂ ೧೩

ಶಲಭಂ ಪ್ರದೀಪತೇಜ
ಕ್ಕಲಘುತರಕ್ಕಿರದೆ ಕಾಯ್ವ ತೆಱದಿಂ ತೇಜೋ
ಬಲದ ಸಮೃದ್ಧಿಗೆ ಕಾಯ್ದಂ
ಚಲಪಕ್ಷೋದ್ವೃತ್ತನನಧಿಗತ ನಿಜಸತ್ತ್ವಂ ೧೪

ವ॥ ಅಂತು ಶೃಂಗಾರರಸದಿನವಿರುದ್ಧ ವೀರರಸಾಭಿನಯವಿಶಾರದಸೂತ್ರಧಾರ ನೆನಿಪ ದೂತನ ಮಾತಿಂಗೆ ಸಭೆಗಂ ಸಭಾಪತಿಗಂ ರೌದ್ರರಸಂ ಪಸರಿಸೆ

ಕಂ॥ ಕಡೆಗಣ್ಣೊಳ್ ಕೆಂಪಿಡಿದಿರೆ
ಕಡುಗೊರ್ವಿರೆ ಬೆಮರ ಬಿಂದು ಗಂಡಸ್ಥಳದೊಳ್
ಬಿಡದೊಪ್ಪುವ ವೀರಾಂಗನೆ
ಯೊಡಗೂಡಿದ ತೆಱದಿನವನಿಪತಿ ಸೊಗಯಿಸಿದಂ ೧೫

ಅರವಿಂದಾಧಿಪನುದಯಿಸು
ವರವಿಂದಾಧಿಪನನಿೞಿಸಿ ಕೋಪೋದಯದಿಂ
ದರುಣೋದಯಮುಖನೆಸೆದಂ
ನಿರುಪಮಸಿಂಹಾಸನೋದಯಾದ್ರಿಯೊಳಾಗಳ್ ೧೬

ವ॥ ಅದಂ ಕಂಡೊರ್ವ ದೋರ್ವಳಶಾಲಿಯಿಂತೆಂದಂ

ಚಂ॥ ಪುದಿದಿರೆ ಕೆಂಪು ನಿನ್ನ ನಯನಂಗಳೊಳನ್ಯರ ರಕ್ತದಿಂದೆಮಾ
ಯದೆ ತುಟಿ ಕಿಟ್ಟಿ ಶಸ್ತ್ರಕುಲಮಂ ಕಿಱುದುಣ್ಮೆ ಬೆಮರ್ ಕಪೋಳದೊಳ್
ಮದವದರಾತಿಕಾಂತೆಯರ ಲೋಚನವಾರಿಗಳಿಂ ಕಪೋಲಪ
ತ್ರದ ಸಿರಿಯಂ ವಿಮರ್ದಿಸದೆ ಮಾಣ್ಬವನಲ್ತೆ ರಸಾಧಿನಾಯಕಾ ೧೭

ವ॥ ಆಗಳ್ ಮತ್ತೊರ್ವಂ

ಉ॥ ಏಂ ಧರಣೀಶ ನೀಂ ಮುನಿದು ಕಾದಲೊಡರ್ಚುವೊಡೇನವಂ ಸಮ
ಸ್ಕಂಧನೆ ವಜ್ರವೀರನೆನಗೀ ಬೆಸನಂ ಬೆಸಸಾತನಂ ಗಜ
ಸ್ಕಂಧಕಳಾಧಿರೂಢನನಗುರ್ವಿಪ ಮಾರ್ಪಡೆ ನೋಡೆ ನೋಡೆ ಕೊ
ಲ್ವೆಂ ಧುರದಲ್ಲಿ ನಿಂದೊಡೊಳಸಾರ್ದೊಡೆ ಕೋಡಗಗಟ್ಟಗಟ್ಟುವೆಂ ೧೮

ವ॥ ಮತ್ತೊರ್ವಂ

ಉ॥ ಆರಿದಿರಾಂತೊಡಂ ಯಮಮುಖಾಂತರದೊಳ್ ಮಿಗೆ ತೂಂತಿದೇವ ಕೈ
ಸಾರದ ವಜ್ರವೀರನನುಪಾಶ್ರಿತವೀರನನಿಕ್ಕುವೆಂ ಗೃಹೇ

ಶೂರ ಎನಿಪ್ಪ ನಾಣ್ನುಡಿಗೆ ಕೇಳೆಡೆಯಪ್ಪವನಲ್ಲನೆಂದು ದು
ರ್ವಾರಪರಾಕ್ರಮಂ ನುಡಿದನೀ ಕ್ರಮದಾಹವಲಂಪಟಂ ಭಟಂ ೧೯

ವ॥ ಮತ್ತೊರ್ವಂ

ಶಾ॥ ಸಿಂಗಂ ತುಂಗಕರೀಂದ್ರ ಕುಂಭತಟಮಂ ಸೀಳ್ದಿಕ್ಕುವಂತಟ್ಟಿದ
ಷ್ಟಾಂಗದ್ರೋಹನನಾಹವಾಂಗಣದೊಳತ್ಯುಗ್ರಾಸಿಯಿಂ ಸೀಳ್ದು ದೋ
ರ್ಭಂಗಂಬೆತ್ತನ ವಜ್ರವೀರನ ದಳತ್ಖಂಡಂಗಳಿಂದಷ್ಟದಿ
ಕ್ಕಿಂಗಂ ಕೇಳ್ ಬಲಿಗೊಟ್ಟು ದೇವ ಮೆಱೆವಂ ದುರ್ವಾರಮಂ ವೀರಮಂ ೨೦

ವ॥ ಮತ್ತೊರ್ವ ವೀರಭಟಂ

ಮ॥ ಕದನಕ್ರೂರನ ವಜ್ರವೀರನ ಸಮಗ್ರೋತ್ತುಂಗಮಾತಂಗನು
ನ್ಮದವತ್ಕುಂಜರದುಗ್ರದಂತಯುಗಮಂ ಸಂಘಟ್ಟದಿಂದೆನ್ನ ಖ
ಡ್ಗದ ಬಲ್ವೊಯ್ಗಿಡೆಯಾದ ತನ್ನೃಪ ಶಿರಃಪ್ರೋದ್ಘಾಳದಿಂದುಣ್ಮಿ ಪೊ
ಣ್ಮಿದ ಕಿರ್ಚಿಂದಮೆ ಕಾಸಿ ದೇವ ಕಳೆವಂ ದೋರ್ದಂಡ ಕಂಡೂತಿಯಂ ೨೧

ವ॥ ಮಗುಳ್ದೊರ್ವಂ

ಉ॥ ತುಂಗಪರಾಕ್ರಮೈಕನಿಧಿ ನೀಂ ಬೆಸಸೆನ್ನನಧೀಶ ಪಿಂಗದೇ
ಕಾಂಗದಿನಾಜಿರಂಗದೊಳಿದಿರ್ಚಿದುದಂ ಚತುರಂಗಸೈನ್ಯಮಂ
ಭಂಗಿಸಿ ವಜ್ರವೀರನ ವಿರೋಧಿಕಠೋರನ ಸಾರಮಪ್ಪ ಸ
ಪ್ತಾಂಗಮನೀಲ್ದುತಂದು ನಿನಗಿತ್ತಪೆನೇವುದಿದಕ್ಕೆ ಮಂತಣಂ ೨೨

ವ॥ ಮತ್ತೊರ್ವನೇಕಾಂಗವೀರಂ

ಚಂ॥ ಮಣಿಯೆ ಮಹೋಗ್ರಖಡ್ಗಹತಿಯಿಂದ ಸುಹೃಚ್ಚತುರಂಗಸೈನಿಕಂ
ತಣಿಯೆ ವಿರೋಧಿಭೂಪರುಧಿರಾಸವಪಾನದೆ ರಾಕ್ಷಸೀಕುಳಂ
ಕುಣಿಯೆ ಕಬಂಧಕೋಟಿಯೊಡನೆಯ್ದೆ ಪಿಶಾಚಸಮೂಹಮಾಹವಾಂ
ಗಣದೊಳೆ ಕೊಂದಪೆಂ ಕದನಧೀರನನಗ್ಗದ ವಜ್ರವೀರನಂ ೨೩

ವ॥ ಮತ್ತೊರ್ವನಾರೂಢವಿದ್ಯಾಪ್ರೌಢಂ

ಉ॥ ಬಿಲ್ವಡೆಯೊಡ್ಡಿದಡ್ಡಣಮನಡ್ಡಣಮಾ ರಥಮಂ ರಥೋತ್ಕರಂ
ಸಾಲ್ವಿನಮಶ್ವಮಂ ತುರಗಮಾನೆಯಸೇನೆಯನಾನೆ ಪೊರ್ದೆ ಬಂ
ಬಲ್ವರಿದೆನ್ನ ದಂತಿ ತುಟಿದಾತನ ದಂತಿಯನೆಯ್ದೆ ಕೊಲ್ವಿನಂ
ಕೊಲ್ವೆನುದಗ್ರಖಡ್ಗಮುಖದಿಂದೆ ವಿದಾರಿಸಿ ವಜ್ರವೀರನಂ ೨೪

ಈಗಳೆ ದೇವ ನೀಂ ಬೆಸಸು ಶತ್ರುನೃಪಾಳಕಕಂಠರಕ್ತಧಾ
ರಾಗಣದೊಳ್ ವಿರೋಧಿಕರಿಮಸ್ತಕಮೌಕ್ತಿಕರಮ್ಯಖಡ್ಗಧಾ
ರಾಗೃಹದೊಳ್ ಜಯಪ್ರಮದೆ ಮುನ್ನಿನ ವೀರವಿಯೋಗವೇಗದು
ದ್ವೇಗಮನಾಱಿಸಲ್ ನೆಲಸುವಂತಿರೆ ಮಾಡುವೆನಾಜಿರಂಗದೊಳ್ ೨೫

ಶ್ರೀಪರಿಪೂರ್ಣ ನೀನೊಸೆದೊಡಿಂದ್ರನೊಳಿಂದ್ರಸಮಾಖ್ಯೆ ವೈರಿಸಂ
ತಾಪಕರೂಪ ನೀಂ ಪಡೆದೊಡಾ ಯಮನೊಳ್ ಯಮಸಂಜ್ಞೆ ಶೋಭಿಕುಂ
ಜ್ಞಾಪಿಪೊಡಂತೆ ನೀಂ ಮುನಿಯದಿರ್ದುದಱಿಂದಮ ವಜ್ರವೀರನೆಂ
ಬೀ ಪೆಸರಿರ್ದುದಾ ಖಳನೊಳಲ್ಲದೆ ನೀಂ ಮುಳಿದಂದದಿರ್ಕುಮೇ ೨೬

ಕರ್ಕಶಗಂಧಸಿಂಧುರಕರಪ್ರಕರಂ ನಿಶಿತಾಸಿಘಾತದಿಂ
ದಿರ್ಕಡಿಯಾಗಿ ಜೀರ್ಕೊಳವಿಯಾಗಿರೆ ವೀರವಿರೋಧಿರಕ್ತದಿಂ
ಸೊರ್ಕಿದ ಶಾಕಿನೀನಿವಹಮೋಕುಳಿಯಾಡೆ ಪಿಶಾಚಸಂಕುಳಂ
ಪೋರ್ಕುಳಿಯಾಡೆ ಪಂದಲೆಗೆ ಕೊಲ್ವೆನಿದಿರ್ಚಿದ ವಜ್ರವೀರನಂ ೨೭

ವ॥ ಎಂದಿಂತು ವೀರರಸಾರ್ಣವಂ ಘೂರ್ಣಿಸುವಂತೆ ತಮತಮಗೆ ವೀರಭಟರಾರ್ಭಟೆಯಿಂ ಘೂರ್ಣಿಸುವುದುಂ ನಿರೂಢಾಹಂಕಾರನುಂ ಧೀರೋದಾತ್ತವಚನಾಧಾರನುಮದಂ ನಿವಾರಿಸಿ

ಕಂ॥ ಮುನಿಸೊಸಗೆಗಳಂ ರಿಪುಜನ
ವಿನಾಶದಿಂ ಮಿತ್ರಜನಸಮೀಹಿತಸುಖವ
ರ್ಧನದಿಂದುಪಲಕ್ಷಿಸುವಂ
ತು ನೆಗಲ್ದಿತರರವೊಲಾಚರಿಪ್ಪಂ ಪ್ರಭುವೇ ೨೮

ಬೆಸನಂ ಬೇೞ್ಪುದಱಿಂ ಭಟ
ರ್ಗುಸಿರ್ವುದೆ ಗುಣಮಲ್ಲದಧಿಪನುಂ ಮಾಮಸಕಂ
ಮಸಗಿ ನುಡಿದಂದು ಪೆಂಪೆಂ
ತೆಸೆದಪುದದಱಿಂದೆ ಮಾಡಿ ತೋರ್ಪೆಂ ಕೂರ್ಪಂ ೨೯

ವ॥ ಎಂಬಿದಂ ಬಗೆಯೊಳ್ ಬಗೆದು ಬೞಿಕ್ಕಮಿಂತೆಂದಂ

ಕಂ॥ ಇನ್ನೆವರಂ ಪರಚಕ್ರ
ಕ್ಕೆನ್ನಯ ದೆಸೆಯಿಂದೆ ಭೀತಿಯಲ್ಲದೆ ಪೆಱರಿಂ
ದೆನ್ನ ಜನಪದಕೆ ಭಯಮಿ
ಲ್ಲಿನ್ನದು ವಿಪರೀತಮಾದೊಡಾಂ ಸೈರಿಪೆನೇ ೩೦

ಪಗೆವಂ ದೂರದೊಳಿರೆ ಗ
ರ್ದುಗೆವೊಯ್ದೊಡೆ ತೀರ್ವುದುಂಟೆ ವಿಜಯಪ್ರಸ್ಥಾ
ನ ಗಭೀರಭೇರಿಯಂ ಪೊ
ಯ್ಸು ಗಡೆಂದು ಬಳಾಧಿಪಂಗೆ ವಿಭು ನಿಯಮಿಸಿದಂ ೩೧

ವ॥ ಅಂತು ಬಳಾಧ್ಯಕ್ಷನಂ ಬರಿಸಿ ನಿಯಮಿಸುವುದುಮದಂ ನಿವಾರಿಸಲೆಂದು ಸಹಜ ಪ್ರಜ್ಞನುಮಶೇಷನೀತಿಶಾಸ್ತ್ರಜ್ಞನುಮಪ್ಪ ಮರುಭೂತಿಮುಖ್ಯರಪ್ಪ ಮಹಾಪ್ರಧಾನರ್ ಮಂತ್ರಪೂರ್ವಕಾಸ್ಸರ್ವೇಪ್ಯಾರಂಭಾಃ ಕ್ಷಿತಿಪತೀನಾಮೆಂಬ ನೀತಿಯುಂ ದೇವರ್

ಪರಿಭಾವಿಸುವುದೆಂಬುದುಮದಂ ಮನದೆಗೊಂಡು ಸಮಸ್ತರಾಜನ್ಯಕಮಂ ಬೀಡಿಂಗೆ ತಾಂಬೂಲ ದಾನಪುರಸ್ಸರಂ ವಿಸರ್ಜಿಸಿ ಮಂತ್ರಿಮಂಡಳಿವೆರಸು

ಕಂ ಅಪವಿವರಾಪ್ರತಿಶಬ್ದಮ
ನಪಸಾರಿತ ಕೀರಸಾರಿಕಾಸಂಕುಳಮಂ
ನೃಪಚೂಡಾಮಣಿ ಹಿತಚರ
ಸುಪರೀಕ್ಷಿತಮಂತ್ರಶಾಲೆಯಂ ಪುಗುತಂದಂ ೩೨

ವ॥ ಅಂತು ಮಂತ್ರಶಾಲೆಯಂ ಪೊಕ್ಕು

ಕಂ॥ ಬೆಸಗೊಳ್ಳದೊಡಂ ಕಾರ್ಯಮ
ನುಸಿರ್ಗುಂ ಪರಿಣಾಮಪಥ್ಯಮಂ ಪತಿಹಿತಮಂ
ಬೆಸಗೊಳೆ ನಿರ್ಭಯದಿಂ ನೀ
ತಿಸಾರಮಂ ನುಡಿಯದಿರ್ಪರೇ ನೀತಿವಿದರ್ ೩೩

ಉಚಿತಮನುಸಿರಲೆವೇಳ್ಬುದು
ಸಚಿವಂ ವಿಭುವದನೆ ನೆಗಱವೇಳ್ಬುದು ಭಯದಿಂ
ಸಚಿವನುಸಿರದೊಡೆ ವಿಭುವದ
ನೆ ಚಿರಂ ನೆಗಱದೊಡೆ ಮೂರ್ಖರಾಜ್ಯಮದಕ್ಕುಂ ೩೪

ಆಗಳೆ ಪುಟ್ಟಿದ ಕಾರ್ಯಮ
ನಾಗಳೆ ನಿರ್ಣಯಿಸುವಂದು ದುಷ್ಕರಮದಱಿಂ
ಬೇಗಂ ತ್ರಿಕಾಲದರ್ಶಿ ದ
ಲಾಗಲೆವೇಳ್ಕುಂ ನಿಯೋಗಿ ಯೋಗಿಯ ತೆಱದಿಂ ೩೫

ವ॥ ಎಂದು ಸುಪ್ರಸನ್ನ ಮುಖೇಂದುನಿಸ್ಸರನ್ನಯ ಪ್ರಚುರಪ್ರಶ್ನವಚೋಮೃತ ರಶ್ಮಿಗಳಿಂ ಮಂತ್ರಿಜನದ ಮಾನಸಕುಮುದಿನಿಗೆ ಮುದಮನೊದವಿಸುವುದುಮಾ ಪ್ರತಿಭಾವಿಭೂತಿ ಮರುಭೂತಿ ಮುಕುಳಿತಾಂಜಲಿಪುಟನಾಗಿ

ಕಂ॥ ಅಂಬುಜಸಖನಿರ್ದಂತಿರೆ
ಮಿಾಂಬುಱು ಖದ್ಯೋತಮೆನಿಪವೊಲ್ ಮಂತ್ರಿವೆಸರ್
ನೀಂ ಬಹುನಯವಿದನಿರೆ ಬೇ
ಳಂಬವಿದೆಮ್ಮಂದಿಗರ್ಗೆ ವಸುಧಾಧಿಪತೀ ೩೬

ನಯಶಾಸ್ತ್ರದರ್ಥಮಂ ನಿ
ನ್ನಯ ನಡೆವಳಿ ಜಡರ್ಗಮಱಿಯೆ ಕನ್ನಡಿಸುವುದೆಂ
ದಯನಯನಿಧಿ ನೀಂ ಮಾಡಿದ
ನಿಯೋಗಿಗಳಮೆಂದು ದೇವ ನೀಂ ಬೆಸಸಿದಪೈ ೩೭

ಉಕ್ಕೆವಮಿಲ್ಲದ ಶಕುನದ
ಪಕ್ಕಿಗಳಂ ನುಡಿಸಿ ನಯವಿದರ್ ನಯಮಂ ಕೆ

ಯ್ಮಿಕ್ಕುದನಱಿವವೊಳಱಿದಪೆ
ಯಕ್ಕುವದರ್ಕಱ್ಕಿದಧಿಪ ಬಿನ್ನವಿಸಿದಪೆಂ ೩೮

ನಯನಿಪುಣರುಪಾಯಚತು
ಷ್ಟಯದೊಳ್ ಸಾಮಮನಗಣ್ಯಷಾಡ್ಗುಣ್ಯದೊಳಾ
ರಯೆ ಸಂಧಿಯಂ ಮೊದಲ್ ಮಾ
ಡಿಯೆ ಪೇೞ್ದರ್ ನಾಮುಮಂತೆ ನೆಗೞಲೆವೇೞ್ಕುಂ ೩೯

ವ॥ ಎಂಬುದುಮರಸನಿಂತೆಂದಂ

ಕಂ॥ ಸಾಮದೊಳಳವಡುವೊಡೆ ಸಂ
ಗ್ರಾಮಂ ರಿಪುನೃಪರೊಳೇಕೆ ಪಾಲ್ಸಕ್ಕರೆಯಿಂ
ದಾಮಯಮುಪಶಮಿಪೊಡೆವಿ
ದ್ಯಾಮಯ ಸೇವಿಸಲದೇಕೆ ಕಟುಕ ತ್ರಯಮಂ ೪೦

ಅವನಳ್ಕದೆ ನಮ್ಮೊಳ್ ಕಾ
ದುವ ಭರದಿಂ ನಾಡನಿಱಿದೊಡಂ ಕಾದದೆ ಮ
ತ್ತವನೊಳ್ ಸಾಮಮನಾಚರಿ
ಸುವುದೆಂಬುದು ನೋಡೆ ನಾಡೆ ನಗೆಗೆಡೆಯಲ್ತೇ ೪೧

ನಯವಿದನಂ ಸಾಮದಿನಪ
ನಯನಂ ದಂಡದೊಳೆ ಗೆಲ್ವುದೆಂತೆನೆ ಕಟುಕ
ತ್ರಯದಿಂದಲ್ಲದೆ ಮಧುರ
ಪ್ರಯೋಗದಿಂ ಕಫಮನಾವನುಪಶಮಿಸಿದಪಂ ೪೨

ವ॥ ಎಂಬುದುಮಾ ಭೂಪತಿಯ ಮಾತಿಂಗೆ ಮರುಭೂತಿಯಿಂತೆಂದಂ

ಕಂ॥ ಜನಿಯಿಸಿದ ಶೋಫಮದು ಲೇ
ಪನದಿಂ ಪೋಗದೊಡೆ ಶಸ್ತ್ರಕರ್ಮವನೆಸಪಂ
ತನುನಯಕೊಳಗಾಗದನಂ
ಮೊನೆಯೊಳ್ ದಂಡಿಸುವುದು ನಯಪರಾಕ್ರಮಯುಕ್ತಂ ೪೩

ವ॥ ಎಂಬುದುಂ ಪುರುಭೂತಿನಿಮಿತ್ತ ಮರುಭೂತಿಸಮರ್ಪಿತಮಂತ್ರರತ್ನಮುಂ ಮುನ್ನಮೆ ತನ್ನ ಮನೋಮುದ್ರಿಕೆಯನಳಂಕರಿಸಿರ್ದೊಡಂ ತತ್ಪರೀಕ್ಷಾವ್ಯಾಜದಿಂದವರ ನಯವಿಚಕ್ಷಣತೆಯಂ ಪರೀಕ್ಷಿಸಲೆಂದಿತರಮಂತ್ರಿಗಳ ಮೊಗಮಂ ನಿರೀಕ್ಷಿಸುವುದುಮವರ್ ವಿನಯವಿನಮಿತ್ತೋತ್ತಮಾಂಗರಾಗಿ

ಕಂ॥ ಆನನಸನ್ನಿಧಿಯಿಂ ಪಂ
ಚಾನನಪಾದಕ್ಕಮಾನನವ್ಯಪದೇಶಂ
ತಾನೆಸೆವ ತೆಱದಿನೀತನ
ಧೀನತೆಯಿಂದಂ ಪ್ರಧಾನವೆಸರೆಮಗೆಸೆಗುಂ ೪೪

ವ॥ ಎಂಬುದುಂ ನಿರ್ಮತ್ಸರಚಿತ್ತರುಂ ಗುಣವತ್ಸಲಾನುವೃತ್ತರುಮಪ್ಪುದಱಿಂ ಮರುಭೂತಿದೃಷ್ಟಮಂತ್ರಮೆ ಗುಣಗರಿಷ್ಠಮುಮನುಷ್ಠೇಯಮುಮೆಂದದನೆ ಪುರಸ್ಕರಿಸಿ ಇಂತೆಂಗುಂ

ಕಂ॥ ಅನುವಶನೆನಿಸಿರ್ದಂ ಭೋಂ
ಕೆನೆ ಶಂಕೆಯನುೞಿದು ಕಲಹಮಂ ಮಾಡುವುದಾ
ತನ ಗರ್ವದುರ್ವೊ ಮೇಣ
ನ್ಯ ನೃಪೋದ್ಭಳಬಳವೊ ತಿಳಿಯವೇೞ್ಪುದು ನೃಪತೀ ೪೫

ರಾಯಸಮಂ ಪೆಸರ್ವೆತ್ತ ಪ-
ಸಾಯಂಬೆರಸಟ್ಟಿ ದೂತನಿಂ ಪಗೆವನಭಿ
ಪ್ರಾಯಮನುಜ್ಜುಗಮನವಂ
ಗಾಯತ್ತರನಹಿತರಂ ವಿಚಾರಿಪುದುಚಿತಂ ೪೬

ವ॥ ಎನಲೊಡಮಖಿಳಾಮಾತ್ಯೈಕಮತ್ಯನಿಶ್ಚಿತಮಂತ್ರಮೆ ಕೃತ್ಯಮೆಂದು

ಮ॥ ಸಹಜಪ್ರಜ್ಞನಶೇಷ ದೇಶಲಿಪಿ ಸದ್ಭಾಷಾವಿಶೇಷಜ್ಞತಾ
ಸಹಿತಂ ನೀತಿವಿನೂತಸೂಕ್ತಿಸಹಿತಂ ದಕ್ಷಂ ಜಿತಾಕ್ಷಂ ನಿರಾ
ಗ್ರಹನುದ್ಯದ್ಗುಣರತ್ನ ಸಂಗ್ರಹನೆನಿಪ್ಪಂಗಾ ಮಹಾಸಂಧಿವಿ
ಗ್ರಹಿಗಾಳೋಚಿಸಿದಂದದಿಂದೆಸಗು ನೀನೆಂದಂ ಧರಾಧೀಶ್ವರಂ ೪೭

ವ॥ ಅಂತು ಸಮಯೋಚಿತವೇದಿಯುಂ ಪದೇಕವಾದಿಯುಮಪ್ಪ ಸಂಧಿವಿಗ್ರಹಿಗೆ ನೆಗೞ್ವ ರಾಜಕಾರ್ಯಮಂ ನಿಯೋಜಿಸಿ

ಉ॥ ಸಾಧಿತಮಂತ್ರನುನ್ನತಗಿರೀಂದ್ರಗುಹಾಂತರದಿಂ ಪ್ರಸಿದ್ಧ ವಿ
ದ್ಯಾಧರನಾತ್ಮಮಂದಿರಕೆ ಬರ್ಪವೊಲೊಪ್ಪುವ ಮಂತ್ರಶಾಲೆಯಿಂ
ದಾ ಧರಣೀಶ್ವರಂ ಸೊಗಯಿಪೋಲಗಶಾಲೆಗೆ ಸಿದ್ಧಮಂತ್ರನಾ
ಜ್ಞಾಧರನಟ್ಟಿಱಿಂದೆ ನಡೆತಂದು ವಿನೋದದೊಳಿರ್ದನೂರ್ಜಿತಂ ೪೮

ವ॥ ಅಂತಿರ್ಪುದುಮತ್ತಿತ್ತಲಾ ಪ್ರಧಾನೋತ್ತಮಂ

ಕಂ॥ ಬೆಸಗೊಳ್ಳದೆಡಪದನುಮಾ
ನಿಸದುಚಿತಮೆನಿಪ್ಪ ವಚನದಿಂದೆಸೆದಿರೆ ರಾ
ಯಸಮಂ ಬರೆದಾಗಳೆ ಮು
ದ್ರಿಸಿ ಕಟ್ಟಿ ಪಸಾಯಮಂ ನೃಪೋಕ್ತಕ್ರಮದಿಂ ೪೯

ದೃಷ್ಟಂ ವರವಕ್ರೋಕ್ತಿವಿ
ಶಿಷ್ಟಂ ನಿಃಶಂಕನನ್ವಿತಂ ನಯನಿಪುಣಂ
ಸ್ಪಷ್ಟಪರಚಿತ್ತವೃತ್ತಿ ನಿ
ಸೃಷ್ಟಾರ್ಥನೆನಿಪ್ಪ ದೂತಮುಖ್ಯನನಾಗಳ್ ೫೦

ವ॥ ಕರೆದು ಬರೆದ ರಾಯಸಮುಮಂ ಕಟ್ಟಿ ಮುದ್ರಿಸಿದ ಪಸಾಯಮುಮಂ ಕೊಟ್ಟು ವಿಜಯಕಾರ್ಯಸಿದ್ಧಿಯಕ್ಕೆಂದು

ಕಂ॥ ಇರದೆ ನಿಜಾಂತರ್ಗತಮಂ
ನಿರವಿಸಿ ಕೞುಪಿದೊಡೆ ಕೞಿದು ಬಹುಜನಪದಮಂ
ತ್ವರಿತಗತಿಯಿಂದೆ ಪದ್ಮಾ
ಪುರಿಯಂ ಕಡು ಚೆಲ್ವಿನಾಗರಮನೆಯ್ತಂದಂ ೫೧

ವ॥ ಅಂತು ಬರುತ್ತುಮನತಿದೂರಾಂತರದೊಳ್

ಮ॥ ಅದೆ ತೋಱಿತ್ತೆ ಕೞಂಗಿ ಸುತ್ತಿದ ವನಾನೀಕಂ ವನಾನೀಕಮ
ಧ್ಯದೊಳಾ ತೋರ್ಪುದೆ ಹೇಮಗೋಪುರಮದಾ ತೋಱಿತ್ತೆ ಜೈನೇಂದ್ರಗೇ
ಹದುದಂಚತ್ಕನಕೋಜ್ವಳತ್ಕಳಶಮಾ ತೋಱಿತ್ತೆ ಭೂಪಾಳನ
ಗ್ಗದ ಸೌಧಾಗ್ರಮೆನುತ್ತೆ ದೂತನಿರದೆಯ್ತಂದಂ ಪುರೋಪಾಂತಮಂ ೫೨

ವ॥ ಅಂತೆಯ್ದೆವಂದು ಕಂತುರಾಜನ ರಾಜಧಾನಿಯಂತೆ ವನರಾಜಿಯಿಂ ವಿರಾಜಿಸುವ ಪೊಱವೊೞಲ ಸಿರಿಯಂ ನಿರೀಕ್ಷಿಸುತುಂ ಪುರಗೋಪುರಮಂ ಪೊಕ್ಕು ವಾರಾಂಗನಾ ಸಮುತ್ತುಂಗಪಯೋಧರಕುಧರಸಮುತ್ಪನ್ನಪ್ರಸನ್ನಶೃಂಗಾರರಸತರಂಗಿಣೀ ಸಂಗತಾಭಿನವಖೇಟಮೆನಿಪ ವೇಶ್ಯಾವಾಟಮುಮಂ ನಿಜಕಾಂತಿವಿಜಿತಫಣಿಪತಿಫಣಾಮಣಿಗಣ ಮರೀಚಿಮೇಚಕಿತಮರುನ್ಮಾರ್ಗಮೆನಿಪ ವಿಪಣಿಮಾರ್ಗಮುಮಂ ನೋಡಿ ನೀಡುಂ ಕೌತುಕಂಬಡುತ್ತುಂ ನಯನೋತ್ಸವಕಾರಣ ಮಣಿತೋರಣಯೂಥಸನಾಥಮಪ್ಪ ರಾಜವೀಥಿ ಯೊಳಗನೆ ರಾಜಮಂದಿರಕ್ಕೆ ವಂದು ದೌವಾರಿಕನಿವೇದಿತ ನಿಜಾಗಮನವೃತ್ತಾಂತನಾಗಿ ಪೋಗಿ

ಮ॥ ಸಮರೋದಗ್ರಭಟಪ್ರತಾನಮನುದಾರೋರ್ವೀಶಸಂತಾನಮಂ
ಪ್ರಮದಾಸ್ಯಾಂಬುಜಗಂಧಮಗ್ನಮಧುಪಪ್ರಧ್ವಾನಮಂ ನೃತ್ಯವಾ
ದ್ಯಮಿಳಧ್ಧ್ವಾನಮನಾರ್ಯವರ್ಯಸುವಚಃಪೀಯೂಷದತ್ತಾವಧಾ
ನಮನೈಶ್ವರ್ಯನಿಧಾನಮಂ ಪದೆಪಿನಿಂ ಪೊಕ್ಕಂ ನೃಪಾಸ್ಥಾನಮಂ ೫೩

ವ॥ ಅಂತಾಸ್ಥಾನಮಂಟಪಮಂ ಪೊಕ್ಕು ಸ್ವಕೀಯಾಜ್ಞಾಮಾತ್ರಸ್ವೀಕೃತಾನೇಕ ಭೂಕಾಂತದೇಶಕೋಶನೆನಿಪ ಮದೀಶನಾದೇಶಮಿದೆಂದು ತನ್ನ ತಂದುಪಾಯನರತ್ನಕರಂಡಕಮಂ ಪ್ರಚಂಡಮಂಡಳಾಧೀಶನಪ್ಪ ವಜ್ರವೀರನ ಮುಂದಿಟ್ಟಿಸಿ ನಿಜೋಚಿತಸ್ಥಾನದೊಳ್ ಕುಳ್ಳಿರ್ಪುದುಮದಂ ಸಮಗ್ರಸಂಧಿವಿಗ್ರಹಗುಣಾಗ್ರಣಿ ಕಳೆದುಕೊಂಡಪಮುದ್ರಿತಂ ಮಾಡಿಯುನ್ಮಯೂಖಲೇಖಾಮುದ್ರಿತ ಸಭಾವಳಯಮಪ್ಪ ಕರವಳಯಾದಿ ನೂತ್ನರತ್ನಾ ಭರಣಂಗಳಂ ಬೇಱವೇಱ ತೋಱ ತದನಂತರಂ

ಕಂ॥ ಅವಧಾರಿಸುವುದು ದೇವರ್
ಭುವನೇಶಾದೇಶಮೆಂದು ಬಿನ್ನವಿಸಿ ಸಭಾ
ಶ್ರವಣರಸಾಯನಮೆನಿಪಂ
ತವಿರಳಗಂಭೀರರಾವದಿಂ ಬಾಜಿಸಿದಂ ೫೪

ಉ॥ ಸ್ವಸ್ತಿ ಸಮಸ್ತರಾಜಗುಣರಾಜಿತ ರಾಜಸಮಾಜಮಸ್ತಕ
ನ್ಯಸ್ತ ಪದಾರವಿಂದನರವಿಂದಮಹೀಪತಿ ವಜ್ರವೀರನಂ

ವಾಸ್ತವಭಕ್ತಿಯುಕ್ತನನನಾಗ್ರಹದಿಂ ಬೆಸದಿರ್ಪನೆಂಬುದುಂ
ದುಸ್ತರ ಕೋಪವಹ್ನಿಗೆ ಘೃತಾಹುತಿಯಾಯ್ತುದು ತನ್ನೃಪಾಳನಾ ೫೫

ವ॥ ತತ್ಪತ್ರವಾಚನಾನಂತರಂ

ಚಂ॥ ಕುಡುವುದು ಕಪ್ಪಮಂ ನಡೆವುದಾಳ್ವೆಸದಿಂದಮೆ ಮುನ್ನಿನಂದದಿಂ
ಬಿಡುವುದು ದರ್ಪಮಂ ಪಡೆವುದಾಳ್ದನದೊಂದು ಮನಃಪ್ರಸಾದಮಂ
ತಡೆವುದು ಬುದ್ಧಿಯಲ್ತಧಿಕನಪ್ಪವನೊಳ್ ಬಳಹೀನನಪ್ಪವಂ
ತೊಡರ್ದೊಡೆ ಕೇಡು ತಪ್ಪದೆನುತುಂ ನುಡಿದಂ ನಯಶಕ್ತಿಕೋವಿದಂ ೫೬

ಕಂ॥ ಎಱಗಿದನಿತಱೊಳೆ ಮಱೆವಂ
ಪೆಱರಱಿಯಮೆಗಳನೆನಿತ್ತನಾದೊಡಮದಱಿಂ
ದೆಱಗಿ ಪತಿಗಾತ್ಮಪದದೊಳ್
ಮೆಱೆದಿರು ನೃಪರೊಳಗೆ ಧರ್ಮವಿಜಯಿ ಮದೀಶಂ ೫೭

ನಿನ್ನಾಚರಿಸಿದ ತಪ್ಪಂ
ಮುನ್ನಂ ಬೆಸಕೆಯ್ದುದರ್ಕೆ ಮನ್ನಿಪೆ ನಾನೆಂ
ಬುನ್ನತಿಗೆ ನೃಪತಿ ಕಟುಪಿದ
ನೆನ್ನನಿದಂ ಬಗೆದು ಪತಿಗೆ ವಿನಮಿತನಾಗಾ ೫೮

ವ॥ ಎಂದು ತನ್ನನರ್ಥಃಕರಿಸಿದ ದೂತನ ಮಾತಂ ಕೇಳ್ದು

ಮ॥ ಘನದೂತೋಕ್ತಿಸಮೀರಣಪ್ರಚಳಿತಂ ಸ್ಥೂಳಾಯತಶ್ಮಶ್ರುಲೇ
ಖೆ ನವೀನೋದ್ಧತಧೂಮಲೇಖೆ ನಯನೋದ್ಯಚ್ಛೋಣಿಮ ಜ್ವಾಲೆ ಸಂ
ಜನಿತಸ್ವೇದಜಲಂ ಘೃತಾಹುತಿಯೆನಿಪ್ಪನ್ನಂ ಸ್ವವಂಶಪ್ರಣಾ
ಶನದಾವಾಗ್ನಿವೊಲುರ್ವಿ ಕೊರ್ವಿದುದು ಭೂಪಾಲಂಗೆ ಕೋಪಾನಳಂ ೫೯

ವ॥ ಅಂತು ಮುನಿಸಂ ಮೊಗಕ್ಕೆ ತಂದಿಂತೆಂದಂ

ಕಂ॥ ಅಹಿತಹಿತ ನಿಗ್ರಹಾನು
ಗ್ರಹವಿಧಿದಕ್ಷಂಗೆ ವಿಹಿತಮಂ ನೀಂ ನಿನ್ನಾ
ಮಹಿಪಾಳನೊಳಾರೋಪಿಸಿ
ಮಹತ್ವಮಂ ನುಡಿದೊಡಾರುಮೇಂ ಸೈರಿಪರೇ ೬೦

ವಸುಧೆಗಧೀಶ್ವರನಾನೆಂ
ಬೆಸಕಂ ಮಿಗೆ ನಿನ್ನನಟ್ಟಿದಂ ನೆಟ್ಟನೆ ಭಾ
ವಿಸದಣಮೆ ವೀರಭೋಜ್ಯಾ
ವಸುಂಧರಾಯೆಂಬ ವಾಕ್ಯಮಂ ನಿನ್ನರಸಂ ೬೧

ಕಪ್ಪಮನೆನ್ನೊಳ್ ಬೇಡುವ
ತಪ್ಪಂ ಸಾಧಿಸುವ ಸುಭಟನೃಪನಾವನೊ ಮುಂ
ತಪ್ಪವನಾಹವದೊಳ್ ಮುಂ
ತಪ್ಪವನೆಂದೆನೆ ಮದುಗ್ರಖಙ್ಗಾಹತಿಯಿಂ ೬೨

ಆಳ್ವೆಸನಂ ಪೇೞಿಸ್ವೊಡದಂ
ಕೇಳ್ವುದು ನೀನೆಂಬುದುಚಿತಮಿದಿರಂ ಗೆಲ್ವೀ
ತೋಳ್ವಲಮನೆನ್ನ ದುರ್ಗಮ
ನಾಳ್ವಲಮಂ ಗೆಲ್ವ ಬಲ್ಪುದುಳ್ಳೊಡೆ ಧುರದೊಳ್ ೬೩

ಉ॥ ತನ್ನ ಪೊಡರ್ಪಿನಿಂದಮೆ ಸಮಸ್ತ ಧರಿತ್ರಿಯ ದರ್ಪಮಪ್ಪುದಂ
ಮುನ್ನಮಡಂಗಿಪಾ ಸಿಡಿಲ ಡಾಣೆಗೆ ವಜ್ರದ ಕಟ್ಟುಗೊಟ್ಟವೋ
ಲೆನ್ನಯ ತೋಳ್ವಲಕ್ಕೆ ನೆರಮಾದರನೇಕ ಧರಾಧಿನಾಥರ
ತ್ಯುನ್ನತಶೌರ್ಯರೆಂದೊಡಿದಿರಾಂಪವರಾರೆನಗಾಜಿರಂಗದೊಳ್ ೬೪

ಕಂ॥ ವಾಹಿನಿ ಮೊದಲೊಳ್ ಕಿಱಿದೆಂ
ದಾ ಹದದೊಳ್ ದಾಂಟಿದಂತೆ ಬಹುವಾಹಿನಿಯಾ
ದೀ ಹದದೊಳ್ ದಾಂಟುವರಾ
ರೀ ಹದನಂ ನಿನ್ನಧೀಶನವಧಾರಿಸನೇ ೬೫

ಬಿಡದೆನ್ನ ಕೋಂಟೆಯಂ ನೆನೆ
ವೊಡೆ ಮನಮಿಕ್ಕಿಪೊಡೆ ದಿಟ್ಟಿ ಕೊಳ್ಳವು ಕೇಳೆಂ
ದೊಡೆ ಮುಳಿದು ಕೊಳ್ವನಾವಂ
ಗಡೆನುತ್ತುಂ ನುಡಿದನಾರ್ಪುಮಂ ದರ್ಪಮುಮಂ ೬೬

ಮಾರ್ಗವಿರೋಧಮನೊಡರಿಸಿ
ದುರ್ಗಮನಿದನಾರೊ ಕೊಳ್ವ ತೇಜಸ್ವಿಗಳಿಂ
ನಿರ್ಗಹನದಿನನ ತೇರ್ಗಂ
ಮಾರ್ಗವಿರೋಧಮನೆ ಮಾಳ್ಪುದೆನೆ ತುಂಗತೆಯಿಂ ೬೭

ಆಶಂಕೆಯನುೞಿದು ನಿಜಾ
ಧೀಶಂ ನಯಹೀನನಟ್ಟಿದೊಡೆ ನೀಂ ತಂದಾ
ದೇಶಮಿದು ನಿಮ್ಮ ದೇಶವಿ
ನಾಶಮನಾಂ ಮಾಡುವೆಡೆಗೆ ಸಿದ್ಧಾದೇಶಂ ೬೮

ಆದರಿಪರಲ್ಲಿಗಟ್ಟವು
ದಾದೇಶಮನುಚಿತಮಲ್ಲದೆನಗಟ್ಟಿದ ನಿ
ಮ್ಮಾದೇಶವೆಲವೊ ಚರ ನಿ
ಮ್ಮಾದೇಶಮನೀವುದರ್ಕೆ ಸೂಚಕಮಲ್ತೆ ೬೯

ಅರಸಂ ವೃದ್ಧನಮಾತ್ಯಂ
ಪರಿಕಿಸೆ ಶಿಶು ದೇಶ ಕಾಲಮಂ ಸ್ವಪರಬಳಾಂ
ತರಮನಱಿವನ್ನರಿನ್ನಾರ್
ನಿರುಪಮಮತಿ ವಿಶ್ವಭೂತಿಯಿಲ್ಲಪ್ಪುದಱಿಂ ೭೦

ಉ॥ ಅಲ್ಲದೊಡೇಕೆ ನಿನ್ನನಿನಿತಂ ನುಡಿದಟ್ಟಿದನಟ್ಟಿದಂದದಿಂ
ನಿಲ್ಲದೆ ನಾಳೆ ಕಾಳೆಗಕೆ ಸಂಗರರಂಗದೊಳಕ್ಕದೊಡ್ಡವೇೞ್

ಬಲ್ಲಿದರಾರ್ ವಿಹೀನಬಳರಾರ್ ವಿಭುವಾರ್ ಗಟಿ ಭೃತ್ಯರಾರಿವಿಂ
ತೆಲ್ಲವನಲ್ಲಿ ನಿನ್ನ ಪತಿಗಂ ನಿನಗಂ ನೆಱೆ ತೋಱೆದಪ್ಪೆನಾಂ ೭೧

ವ॥ ಎನೆ ದೂತನಿಂತೆಂದಂ

ಕಂ॥ ವಿಕ್ರಮಜಸದೊಳ್ ಸೀಮಾ
ತಿಕ್ರಮಮಂ ಯುವತಿಕುಚದೊಳುದ್ವೃತ್ತತೆಯಂ
ವಕ್ರೋಕ್ತಿಯನತಿಶಯಕವಿ
ಚಕ್ರಂಗಳೊಳಲ್ಲದಧಿಪನೇಂ ಸೈರಿಪನೇ ೭೨

ಲೋಕಾಧಿಪತಿಯನೇೞಿಸು
ವೀ ಕುನಯಮನಿತ್ತು ಕೇಡನೊಡರಿಸುವ ನೃಪಾ
ನೀಕದ ಪಕ್ಷಂಬಡೆದಿಂ
ತೇಕಿಱುಪೆಗೆಱಂಕೆ ಮೂಡಿದವೊಲಾದಪೆ ನೀಂ ೭೩

ಚಂ॥ ಅಸಮಪರಾಕ್ರಮಾಧಿಕ ಮೃಗಾಧಿಪನೊಳ್ ಸಮರಕ್ಕೆವರ್ಪ ಸಾ
ಹಸದಿನಿಭೇಂದ್ರಮನ್ಯಮೃಗಜಾತಿಗಳೊಳ್ ನಿಜಜಾತಿವೈರಮಂ
ಬಿಸುಟೊಡಗೂಡುವಂದದೊಳೆ ನಿನ್ನೊಡಗೂಡಿದ ಭೂಪರುಂ ಮದ
ಪ್ರಸರದೆ ನೀನುಮಾಂತು ನಿಲೆ ಗೆಲ್ಲದೆ ನಿಲ್ಲನಧೀಶನಾಜಿಯೊಳ್ ೭೪

ಕಂ॥ ಪೆಸರ ಗಿರಿದುರ್ಗಮೊಲೆಗ
ಲ್ಗೆಸರ್ಗೆ ಜಲದುರ್ಗಮಿಂಧನಕ್ಕೆಯ್ದುವಗು
ರ್ವಿಸುವ ವನದುರ್ಗಮೆನೆ ಮ
ದ್ವಸುಧಾಧೀಶ್ವರನ ಬಲಮನಾಂಪವರೊಳರೇ ೭೫

ಜನಪತಿಯ ಸೇನೆಗಾಪೋ
ಶನಕ್ಕೆ ಜಲದುರ್ಗವಚಳದುರ್ಗಂ ಪದಘ
ಟ್ಟನೆಗದಱ ಗುಡಿಯ ಗೂಂಟ
ಕ್ಕನಸುಂ ವನದುರ್ಗಮಯ್ದುವೆನೆ ಕಾದುವರಾರ್ ೭೬

ರಣಬಾಳಕನಪ್ಪೈ ನೀಂ
ರಣಪರಿಣತವಯಸನಪ್ಪನವನೀಪತಿ ನೀ
ನೊಣರ್ದಂತೆ ತರುಣತರಣಿಯೊ
ಳೆಣೆ ಸಚಿವಂ ನಯಪಥಪ್ರಕಾಶನಗುಣದಿಂ ೭೭

ಪತ್ರಮನಿದನವನೀಪತಿ
ಸೂತ್ರಿಸಿದವೊಲುತ್ತಮಾಂಗದೊಳ್ ತಾಳ್ದಿ ಭವ
ದ್ಧಾತ್ರಿಯನಾಳಲ್ಲದೊಡಸಿ
ಪತ್ರಂ ನಿಜಮಸ್ತಕಕ್ಕೆ ತಡೆಯದೆ ಬರ್ಕುಂ ೭೮

ವ॥ ಎಂದು ನುಡಿದ ನುಡಿಗೆ ಕಿಡಿಕಿಡಿವೋಗಿ ಸಿಡಿಲ ಕಿಡಿಯಂ ತಳದೊಳೊರಸುವಂತೋಲೆಯಂ ಮುಱಿದೊರಸಿ ಕಳೆಯೆ ದೂತಂ ಯಮದೂತನಂತೆ ಕನಲ್ದಿಂತೆಂದಂ

ಕಂ॥ ಆಳೋಚಿಸದವಲೇಪದಿ
ನೋಲೆಯಿನಿದನುಱದೆ ಮುಱಿದು ಕಳೆದೈ ನಿನಗಂ
ಕಾಳನೆ ಕನಲ್ದು ನಿಜವಂ
ಶ್ಯಾಳಿಗಮೋಲೆಯನೆ ಮುಱಿದನೆಂದಱಿ ಪೆಱತೇಂ ೭೯

ನಯಮಂ ಕೈಕೊಳ್ಳದ ನಿ
ನ್ನಯ ವಕ್ರತೆಯಂ ಮದೀಶನಿಶಿತಾಸಿಭವಾ
ಗ್ನಿಯೆ ನೀಳ್ದು ತಿರ್ದುಗುಂ ಪು
ಳಿಯ ಕೊಂಕಂ ಕಿರ್ಚು ತಿರ್ದುವಂತಾಹವದೊಳ್ ೮೦

ಮೃದುನಯಯುತಬಾಣಂ ನಿಜ
ಹೃದಯಂಗಮಮಾಗದಿರ್ದೊಡಂ ರಿಪುಭಯದಿಂ
ಮದಧೀಶನ ಘನಬಾಣಂ
ಹೃದಯಂಗಮಮಾಗದಿನಿಸಿದೇಂ ನಿಂದಪುದೇ ೮೧

ಎನೆ ಮುನಿದು ವಜ್ರವೀರಂ
ಘನಪೀಠದಿನೆೞ್ದು ವಜ್ರನಿರ್ಘೋಷದವೋ
ಲನಯಪರಂ ಪೊಳೆವಸಿ ಮಿಂ
ಚನಿಟ್ಟಸೆ ಪೊಯ್ಯಲ್ಕೆ ನಿಳ್ಕಿದಂ ನೃಪಚರನಂ ೮೨

ವ॥ ಅಂತು ಕಲ್ಪಾಂತಕೃತಾಂತನಂತೆ ಮುಳಿದು ನಯಮನುೞಿದು ಬಾೞಿನೆಂಬುದಂ ಪೇೞ್ವಂತೆ ಬಾಳಂ ಕಿೞ್ತು ಪೊಯ್ಯಲೆೞ್ದನನಾರಯ್ಯದಿಂತಕಾರ್ಯಮಂ ದೂತನೇಗೆಯ್ದೊಡಂ ಪ್ರಭುವೆನಿಪಂ ನೆಗೞಲಾಗದೆಂದು ನುಡಿದು ಕೆಯ್ಯಂ ಪಿಡಿದಾತನಿಗಾಪ್ತರೆನಿಪ್ಪ ಮಾತ್ಯರ್ ನಯವಿದರ್ ನಿವಾರಿಸೆ ತದನಂತರಮಿಂತೆಂದಂ

ಕಂ॥ ಅವಿನಯಮಂ ಗೞಪಿದ ಚರ
ನವಧ್ಯನಾದೊಡಮಿವಿನಿತುಮಂ ಗೞಪಲ್ ಪೇ
ೞ್ದವನೆ ದಿಟನವಧ್ಯನೆ ಆ
ಹವದೊಳ್ ಚಂಡಾಸಿಯಿಂದೆ ಖಂಡಿಪೆನವನಂ ೮೩

ವ॥ ಅಂತಾತನುದ್ಧತೆಯುಮನುನ್ಮತ್ತತೆಯುಮಂ ಕಂಡು ದೂತಂ ಮತ್ತಮಿಂತೆಂದಂ

ಮ॥ ಪ್ರತಿಕೂಲೋಕ್ತಿಗಳೆನ್ನ ಮಾತುಗಳಿವಜ್ಞರ್ಗಂ ವಿವೇಕಾನ್ವಿತ
ರ್ಗತಿಪಥ್ಯಂಗಳೆನಿಕ್ಕುಮಿಂತಿನಿತುಮಂ ನೀನೀಗಳೆಂತುಂ ಮದೋ
ದ್ಧತನೈ ಕಾಣೆ ಮದೀಶ್ವರಂ ಬರೆ ರಣಪ್ರಾರಂಭದೊಳ್ ನಾಳೆ ನೀ
ಕ್ಷಿತಮಾಗುತ್ತಿರೆ ಕಾಣ್ಪೆಯೆಂದು ನುಡಿದಂ ನಿರ್ಭೀತಚೇತಂ ಚರಂ ೮೪

ಚಂ॥ ಅವನತನಾದೊಡಂ ವಿಭುಗೆ ಭೀತಿಯಿನಾಜಿಯೊಳೋಡಿಪೋದೊಡಂ
ವಿವಿಧಮೃಗೇಕ್ಷಣಾಳಿ ವಿಳಸದ್ಭುವನಾಶ್ರಯಮುದ್ಧಸಾಲಮೊ
ಪ್ಪುವ ಕಟಕಂ ಸುವಂಶವಿಭವಂ ನೆಗಟ್ದೀಂ ಧನಮುಳ್ಳ ದೇಶಮಂ
ಜಿವು ದೊರೆಕೊಳ್ವುವೆಂಬ ಬಗೆಯಿಂದಮ ನೀಂ ನುಡಿವೈ ದುರುಕ್ತಮಂ ೮೫

ಕಂ॥ ಎಂತುಱದಿಱದೈ ದೇಶಮ
ನೆಂತೀಶಾದೇಶಮಂ ಸಮುಲ್ಲಂಘಿಸಿದೈ
ಎಂತೆನ್ನೊಳೆಡಱ ನುಡಿದೈ
ಅಂತೆ ರಣಾಂಗಣದೊಳೊಡ್ಡಿ ನಿಲ್ ನಿರ್ಭಯದಿಂ ೮೬

ವ॥ ಅಂತು ನಯಾಕ್ರಾಂತಸ್ವಾಂತರ್ಗೆ ಸಂತೋಷಮುಮಂ ದುರಾಗ್ರಹಗ್ರಸ್ತರ್ಗೆ ವಿಗ್ರಹಾಗ್ರಹಮುಮಂ ಪುಟ್ಟಿಸುತ್ತುಮಾಸ್ಥಾನಮಂ ಪೊಱಮಟ್ಟು ಕತಿಪಯಪ್ರಯಾಣದಿಂ ನಿಜರಾಜಧಾನಿಯನೆಯ್ದುವಂದು ಪುರಮುಮನರಮನೆಯುಮಂ ಪೊಕ್ಕು ಸಮುದ್ದಂಡ ಮಂಡಳಿಕಮಂಡಳಿಮಂಡಿತಾಸ್ಥಾನಮಂಡಪ ಮಧ್ಯಸ್ಥಿತ ಸಿಂಹಾಸನಾಸೀನನಾಗಿರ್ದರವಿಂದ ಮಹಾರಾಜನ ಪಾದಾರವಿಂದಕ್ಕೆ ಸಾಷ್ಟಾಂಗಮೆಱಗಿ ಪೊಡಮಟ್ಟು ತನ್ನ ಪೋದ ಬಂದ ವೃತ್ತಾಂತಮೆಲ್ಲಮಂ ಮುಕುಳಿತಹಸ್ತಂ ಸವಿಸ್ತರಂ ಬಿನ್ನವಿಸಿ ಮತ್ತಮಿಂತೆಂದಂ

ವೃ॥ ಘನವಜ್ರೋದ್ಧರ್ವದವಾಗ್ನಿ ಮತ್ತಿತಿಯ ಕೋಪಾಟೋಪಮೆಂದಂದು ವೈ
ರಿನಿಕಾಯಕ್ಕೆ ಮಹೀಧ್ರವಾರಿವನದುರ್ಗಂ ನಿಷ್ಫಳಂ ದುರ್ಗಮಾ
ತನ ಕಾರುಣ್ಯಮ ನೀನಿದಂ ಪಡೆವುದೆಂದಾನೆಂದೊಡಂ ವಜ್ರವೀ
ರನುದಗ್ರಂ ನಿಜದುರ್ಗಮಂ ಬಲಿದುಕೊಂಡಿರ್ಪಂ ರಣೋದ್ಯೋಗದಿಂ ೮೭

ಕಂ॥ ಭೀತರನಪಮಾನಿತರಂ
ಮಾತೇನೊಡಗೂಡಿಕೊಂಡು ನಮ್ಮೊಳ್ ರಣಸಂ
ಜಾತಪ್ರೀತಿಯೊಳಿರ್ದಪ
ನೀ ತೆಱದಿಂ ವಜ್ರವೀರನತಿದುರ್ವಾರಂ ೮೮

ಬವರಂ ನಮ್ಮೊಳ್ ಬೇಡೆಂ
ಬವರಂ ಕಡೆಗಣಿಸಿ ಜಡಿದು ಕಡುಪಿಂ ನುಡಿವಂ
ಜವನಂ ತೊಡರ್ದೆಡೆಯೊಳಗಂ
ಜವನಂ ನೀನಲ್ಲದುೞದರಳವಡಿಸುವರಾರ್ ೮೯

ವ॥ ಎಂದಿಂತು

ಶಾ॥ ದೂತಂ ಸಂಗರಮಂ ನಿರೂಪಿಸೆ ಜಯಶ್ರೀಸಂಗಮಂ ತನ್ನೊಳೀ
ಮಾತಿಂದಾದಪುದೆಂಬ ವಾರ್ತೆಯನೆ ಕೇಳ್ದಂತಾಹವಕ್ಷೋಣಿ ಸಂ
ಕೇತ ಸ್ಥಾನಮನುತ್ತುಮಾದೊಲವಿನಿಂದೇಕಾಂಗದಿಂ ಪೋಪ ವಿ
ಖ್ಯಾತೋತ್ಸಾಹಮನಪ್ಪುಕೆಯ್ದನತಿ ಧೀರೋದಾತ್ತ ಭೂಪೋತ್ತಮಂ ೯೦

ಕಂ॥ ಸ್ಪಷ್ಟಮೆನಗಿಷ್ಟಮೇವ ಹಿ
ಚೇಷ್ಟಿತಮೆಂಬುಕ್ತಿಯಾಯ್ತು ನೆರೆದರ್ ತಮ್ಮೊಳ್
ದುಷ್ಟನೃಪರೆಂದು ಭೂಪಂ
ಧೃಷ್ಟತೆಯಂ ತಳೆದನೊರ್ಮೆಯುಂ ತವಿಪಾರ್ಪಿಂ ೯೧

ರಿಪುವೆನಿಪ ಚಂದ್ರನಂ ರಾ
ಹು ಪೂರ್ಣನಂ ಕಿಡಿಸುವಂತೆ ವಿಕ್ರಮಿಯೆನಿಪಾ
ನೃಪನುಂ ಪಗೆಯಂ ಲಕ್ಷ್ಮೀ
ಪ್ರಪೂರ್ಣನಂ ಕಿಡಿಸದಂದದೇಂ ಸಾಹಸಮೇ ೯೨

ವ॥ ಎಂದು ತನ್ನುದಾತ್ತವೃತ್ತಿಯಂ ರಾಜಲೋಕಕ್ಕೆ ತಿಳಿಪಿ ಬೞಿಯಂ ಬಳಾಧ್ಯಕ್ಷನ ನಕ್ಷೂಣಸಮರದಕ್ಷನಂ ಬರಿಸಿ ವಿಜಯಪ್ರಯಾಣಭೇರಿಯಂ ಪೊಯ್ಸೆಂದು ನಿಯಾಮಿಸೆ

ಮ॥ ಧರೆಯೊಳ್ ತುಂಗತರಂಗವಾರಿಧಿರವಂ ಶೈಳಂಗಳೊಳ್ ಸಿಂಹಸಂ
ಘರವಂ ನೀರದಮಾರ್ಗದೊಳ್ ಘನರವಂ ದಿಗ್ಭಾಗದೊಳ್ ದಿಕ್ಕರೀಂ
ದ್ರರವಂ ಪೊಣ್ಮಿದುದೆಂಬಿನಂ ಭುವನಮಂ ತೀವಿತ್ತು ವಿಖ್ಯಾತನ
ಪ್ಪರಪಿಂದಕ್ಷಿತಿನಾಥವಿಸ್ತೃತಜಯಪ್ರಸ್ಥಾನಭೇರೀರವಂ ೯೩

ಜಯಸಂವಾದಕವಂದಿವೃಂದಕುಲವೃದ್ಧಾಶೀರ್ನಿನಾದಂ ಶುಭೋ
ದಯಗೇಯಧ್ವನಿ ಪುಣ್ಯಪಾಠಕರವಂ ತೂರ್ಯಸ್ವನಂ ತೀವೆ ದಿ
ಕ್ಚಯಮಂ ಪುಣ್ಯ ವಧೂಜನಂ ಪರಸಿ ಮುಕ್ತಾನೀಕದಿಂ ತೀವೆ ಶೇ
ಷೆಯನುದ್ಯಚ್ಛುಭಲಗ್ನದೊಳ್ ವಿಜಯಯಾತ್ರೋದ್ಯುಕ್ತನಾದಂ ನೃಪಂ ೯೪

ವ॥ ಅಂತು ಸಮರೋದ್ಯುಕ್ತಚಿತ್ತನಾಗಿ ಮೌಹೂರ್ತಿಕ ಸಂಕೀರ್ತಿತ ಶುಭಮುಹೂರ್ತದೊಳುತ್ತುಂಗ ಮದಾಂಧಸಿಂಧುರಸ್ಕಂಧಾಧಿರೂಢನಾಗಿ ಆರೂಢವಿದ್ಯಾಪ್ರೌಢಂ ಪ್ರಬಳ ಬಳರಾಜಸಮಾಜಂಬೆರಸು ಪಣಿತೋರಣರಾಜಿವಿರಾಜಿತ ರಾಜವೀಥಿಯೊಳಗಾನೆಯ ಮೇಲಪೂರ್ವ ರೂಪಕಂದರ್ಪನಂತೆ ಬರ್ಪಲ್ಲಿ

ಕಂ॥ ಅರವಿಂದರಾಜನಂ ಪುಂ
ಡರೀಕಮೋಲಗಿಸಲೆಂದು ಬರೆ ಹಂಸೆಗಳಾ
ದರದಿನೊಡವಂದುವೆಂಬಂ
ತಿರೆ ಬೆಳ್ಗೊಡೆ ಚಾಮರಂಗಳೆಸೆದುವು ನಿಸದಂ ೯೫

ಕೂರಂಕುಶದಿಂದರಸಂ
ವಾರಣಮಂ ಪಿಡಿಯೆ ಹಾರಮಬಳಾಚೇತೋ
ವಾರಣಮನಮರೆ ಪಿಡಿದುದು
ರೋರಂಗದೊಳೆಸೆಯೆ ನರ್ತಿಸುತ್ತಾ ಕ್ಷಣದೊಳ್ ೯೬

ಕಂ॥ ಅರವಿಂದಮಹಾರಾಜನ
ಬರವಿಂ ಮುಖಕಮಳಮಲರೆ ನಲಿವ ರಥಾಂಗ
ಕ್ಕಿರದೆ ಕದಕ್ಕದಿಪ ಕುಚಂ
ದೊರೆಯೆನೆ ಪರಿತಂದು ತರುಣಿ ನೋಡಿದಳೊರ್ವಳ್ ೯೭

ಮ॥ ಅಲರಂಬಂ ಗೆಲೆ ಕಣ್ಮಲರ್ ಮದನಚಾಪಾಟೋಪಮಂ ಪುರ್ವುಗಳ್
ಗೆಲೆ ಪೂರ್ಣೇಂದುವನಾನನಂ ಗೆಲೆ ಶಿರೀಷೋದ್ದಾಮದಾಮಂಗಳಂ
ಗೆಲೆ ತೋಳ್ಗಳ್ ಗೆಲೆವಂದು ಕಾಮಸತಿಯಂ ಕಣ್ಗೊಪ್ಪುತಿರ್ಪಾಕೆ ಪೋ
ಲ್ತಿಳೆಯಂ ಪಾಲಿಸುವಂಗೆ ವೈರಿಜಯಮಂ ಸೂಚಿಪ್ಪವೋಲ್ ನೋಡಿದಳ್ ೯೮

ವ॥ ಅಂತು ಸಕಲಕಾಂತಾಜನಸ್ವಾಂತಮಂ ಕಂತುಶರಾಕ್ರಾಂತಮಂ ಮಾಡುತ್ತುಂ ರಾಜರಾಜಂ ರಾಜಧಾನಿಯಂ ಪೊಱಮಟ್ಟು

ಕಂ॥ ಎತ್ತಿದ ಗುಡಿಗಳೆ ಗೆಲ್ವಿಂ
ಗೆತ್ತಿದ ಗುಡಿ ತೂರ್ಯರವಮೆ ಜಯತೂರ್ಯರವಂ
ಮತ್ತನಿಸದಪ್ಪುದೆನೆ ಭೂ
ಪೋತ್ತಮನಾತ್ಮೀಯಶಿಬಿರಮಂ ಪುಗುತಂದಂ ೯೯

ವ॥ ಅಂತು ಮುನ್ನಮೆ ತನ್ನ ನಿಯಮದಿಂ ಗೃಹಮಹತ್ತರಂ ಚಿತ್ತರಿಸಿದ ಬೀಡಿನ ಚೆಲ್ವಂ ನೀಡುಂ ಭಾವಿಸಿ ನೋಡೆ

ಉ॥ ಕೆಂಗುಡಿಗಳ್ ತಳಿರ್ತಸುಕೆ ಕರ್ಗುಡಿ ಜಾಳತಮಾಳಮಾ ಪಸು
ರ್ಪಿಂಗಡೆಗೊಂಡು ತೋರ್ಪ ಗುಡಿ ತಳ್ತ ಮಡಲ್ತೆಳಮಾವು ಬೆಳ್ಪನಾ
ಲಿಂಗಿಸೆ ಚೆಲ್ವುವೆತ್ತ ಗುಡಿ ಮಲ್ಲಿಗೆಯಂದದಿನೊಪ್ಪೆ ಕಂತುರಾ
ಜಂಗಿರವಾದ ನಂದನವನಕ್ಕೆಣೆಯಾದುದು ಬೀಡು ಭೂಪನಾ ೧೦೦

ವ॥ ಮತ್ತಮಲ್ಲಿ

ಕಂ॥ ಅಳಿರುತಿಯಂ ಗೆಲೆ ಲಲನಾ
ವಳಿ ಮಂಗಳಗೀತಕಳನಿನಾದಂ ಕ್ರೀಡಾ
ಚಳಮಂ ಗೆಲೆ ಗೂಡಾರಂ
ಗೆಲೆವಂದುದು ಚಂಪೆಯಂ ಲತಾಮಂಡಪಮಂ ೧೦೧

ವ॥ ಅಂತಪೂರ್ವೋಪಮೆ ಗಡರ್ಪಾಗಿರ್ಪುದುಂ

ಮ.ಸ್ರ॥ ಅರವಿಂದಕ್ಷೋಣಿಪಾಳಂ ಪಟುಪಟಹರವಾಕ್ರಾಂತ ದಿಕ್ಚಕ್ರವಾಳಂ
ಪುರುಸೈನ್ಯಂ ಸದ್ವದಾನ್ಯಂ ಸಕಳಶಕುನಸಂಸೂಚಿತಾರಾತಿಜೈತ್ರಂ
ಸ್ಥಿರಸತ್ತ್ವೋದ್ಯಚ್ಚರಿತ್ರಂ ನಿಜಶಿಬಿರಮಂ ಬಂದು ಪೊಕ್ಕಂ ಯಶೋಮಂ
ದಿರವಂದಿಸ್ತೋತ್ರಪಾತ್ರಂ ಸುಕವಿಜನಮನಃಪದ್ಮಿನೀಪದ್ಮಮಿತ್ರಂ ೧೦೨

ಗದ್ಯ

ಇದು ವಿದಿತವಿಬುಧಲೋಕನಾಯಕಾಭಿಪೂಜ್ಯ ವಾಸುಪೂಜ್ಯಜಿನಮುನಿ ಪ್ರಸಾದಾಸಾದಿತ ನಿರ್ಮಳ ಧರ್ಮ ವಿನುತ ವಿನೇಯಜನವನಜವನ ವಿಳಸಿತ ಕವಿಕುಳತಿಳಕ ಪ್ರಣೂತ ಪಾರ್ಶ್ವನಾಥಪ್ರಣೀತಮಪ್ಪ ಪಾರ್ಶ್ವನಾಥಚರಿತಪುರಾಣದೊಳ್ ಅರವಿಂದಮಹಾರಾಜ ವಿಜಯಯಾತ್ರೋತ್ಸವ ವರ್ಣನಂ ದ್ವಿತೀಯಾಶ್ವಾಸಂ

ತೃತೀಯಾಶ್ವಾಸಂ

ಕಂ॥ ಶ್ರೀರಮಣನನಂತರಮವ
ನೀರಾಜಿತ ರಾಜಭವನಮಂ ಮಣಿವಿಳಸ
ತ್ತೋರಣಮಂ ನಯನೋತ್ಸವ
ಕಾರಣಮಂ ಪೊಕ್ಕನೊಸೆದು ಕವಿಕುಳತಿಲಕಂ ೧

ಅರಸನೊಡವಂದ ಮಂತ್ರೀ
ಶ್ವರರಂ ಮಂಡಳಿಕರಂ ಮಹೀನುತ ಸಾಮಂ
ತರನಖಿಳಪರಿಗ್ರಹಮಂ
ಪರಿವಿಡಿಯಿಂದಱಿದು ಬಿಡಿಸಿದಂ ಪಡೆವಳ್ಳಂ ೨

ವ॥ ಅಂತರಸಂ ಪೊಱವೀಡಂ ಬಿಟ್ಟಿರೆ ಮರುಭೂತಿ ಭೂತಳಪತಿಯೊಡನೆ ನಡೆಯಲ್ವೇಡಿ ನಿಜಜನನಿಯಪ್ಪನುಂದರಿಯ ನಿಜಾಗ್ರಜನಪ್ಪ ಕಮಠನ ಸಮೀಪಕ್ಕೆ ವಂದು

ಕಂ॥ ಅರಸಂ ವೈಹಾಳಿಗೆ ಸಂ
ಚರಿಸಲೊಡಂ ಪಿಂದೆ ನಿಲ್ವುದನುಚಿತಮೆನೆ ಸಂ
ಗರದೆಡೆಗೆ ನಡೆಯೆ ತಡೆವುದು
ಪರಿಭಾವಿಸೆ ಸೇವಕಂಗೆ ಪಾೞಿಯೆ ಪೇೞಿಂ ೩

ಅದುಕಾರಣದಿಂ ನೀಮುಂ
ಮದಗ್ರಜನುಮೆನಗೆ ನಿಯಮಿಸುವುದಂ ತಡಮಿ
ಲ್ಲದೆ ನಿಯಮಿಸಿ ಕಳಿಪುವುದೆಂ
ದುದಾತ್ತಮತಿ ನುಡಿದು ಮತ್ತವರ್ಗಿಂತೆಂದಂ ೪

ನಿಮ್ಮ ಪರಿವಾರಮಂ ಸೊಸೆ
ಯಮ್ಮನ್ನಿನ ಮಾೞ್ಕೆಯಿಂದೆ ಬೆಸಕೆಯ್ಸಿಕೊಳು
ತ್ತುಮ್ಮಳಿಸದಿರ್ಪುದಂಬಿಕೆ
ನಿಮ್ಮಾಶೀರ್ವಾದಮೆನಗೆ ವಜ್ರದ ಕವಚಂ ೫

ಎನ್ನಿಂದಮಧಿಕಮೆನೆ ಸೊಸೆ
ಯನ್ನಡೆಯಿಪ ಸೊಸೆಯಿನಗ್ಗಳಂ ಕೆಳದಿಯರಂ
ಮನ್ನಿಸಿ ನಡೆಯಿಪ ಮೈಮೆ ನಿ
ಜನ್ನಿಮಗೆನೆ ಮಗುೞೆ ಜನನಿ ಬಿನ್ನವಿಸಲದೇಂ ೬

ವ॥ ಎಂದು ಪರಿಜನಮಂ ಸಮರ್ಪಿಸುವ ನೆವದಿಂದ ಚತುರವಚನವಿಚಕ್ಷಣಂ ಪ್ರಾಣೇಶ್ವರಿಯೆನಿಪ್ಪ ವಸುಂಧರೆಯಂ ಸಮರ್ಪಿಸಿ

ಕಂ॥ ಭರದಿಂದೆಜಗಿವನನನುಂ
ವರಿ ಮಗನಂ ತೆಗೆದು ಜಿಗಿದು ತಟ್ಕೈಸಿ ಗುಣಾ
ಭರಣ ನಿಜವಿಜಯಭುಜದೊಳ್
ಧರಿಯಿಸು ಜಯವಧುವನೆಂದು ಪರಸಿದಳೊಲವಿಂ ೭

ವ॥ ಅಂತು ತಾಯ ನಲ್ವರಕೆಗಳಂ ತಳೆದು ಬೞಿಯಂ ನಿಜಾಗ್ರಜಂಗೆ ಕೆಯ್ಗಳಂ ಮುಗಿದು

ಕಂ॥ ಗುರು ನಿಮ್ಮಂ ನಿಶ್ಚಿಂತದೊ
ಳಿರಿಸುವ ಭರದಿಂದೆ ಭಾರಮಪ್ಪುದನೆನ್ನೀ
ಶಿರದೊಳ್ ತಂದಿಟ್ಟೊಡಮಾ
ಗುರುಭಾರಂ ನಿಮ್ಮದೆನಗೆ ಗುರುವಪ್ಪುದೞಿಂ ೮

ಮ॥ ನಿಯತಂ ಸೇವಕನಪ್ಪವಂಗೆ ಪಸಿವಂ ನೀರಟ್ಕೆಯಂ ನೋಡದ
ಪ್ರಿಯಶೀತಾತಪಬಾಧೆಗೊಡ್ಡಿ ತನುವಂ ದುಃಖಂಬಡಲ್ವೇೞ್ಕುಮಾ
ರಯೆ ನೀಮಪ್ಪೊಡೆ ಸೌಖ್ಯಮೂರ್ತಿಗಳೆ ಪುಟ್ಟಿರ್ದಂತೆ ಕೆಯ್ ಬೇಯಲೇ
ಕೆಯೊ ಪೇೞಿಂದಿದನಾಂತೆನೀ ಪದಕೆ ನೀಮಿರ್ದಂತಿರಾಂ ಯೋಗ್ಯನೇ ೯

ಕಂ॥ ಜಗತೀಭಾರಮನಿತರೋ
ರಗನಹಿರಾಜಂಗೆ ನಿರವಿಪುದನನುಕರಿಕುಂ
ನೆಗೞ್ದ ಗುರುಭಾರಮಂ ನೆ
ಟ್ಟಗೆ ನಿನಗಾನಗ್ರಜನ್ಮ ಬಿನ್ನವಿಪಂದಂ ೧೦

ತಂದೆಯ ಪರೋಕ್ಷದೊಳ್ ನೀಂ
ತಂದೆಯೇ ಎನಗದಱಿನಮಳಗುಣಸಂಪದದೊಳ್
ನಿಂದ ನಿನಗಾವ ತೆಱದಿಂ
ನಿಂದೆ ದಿಟಂ ಪೊರ್ದದಂತು ನಡೆ ನಿಯತತೆಯಿಂ ೧೧

ಜನನಿಗೆ ಬೆಸಕೆಯ್ವುದು ನಾ
ದುನಿಯಿಂ ಬೆಸಕೆಯ್ಸಿಕೊಳ್ವುದನವರತಂ ಸ
ಜ್ಜನಗೋಷ್ಠಿಯೊಳಿರ್ಪುದು ದು
ರ್ಜನವಂ ಪರಿಹರಿಪುದುೞಿವುದಸದಾಗ್ರಹಮಂ ೧೨

ಭೋಗಮನನುಭವಿಸುವುದು
ದ್ವೇಗಂ ಪೆಱಗಾಗದಂದದಿಂ ತ್ಯಾಗಮನು
ದ್ಯೋಗಿಸುವುದು ಯಶಮಂ ಪು
ಣ್ಯಾಗಮಮಂ ಮಾಡಲಾರ್ಪುದಂ ನಯನಿಪುಣಾ ೧೩

ವ॥ ಅಂತು ಮಂತ್ರಿಮುಖ್ಯಂ ಕಮಠಂಗೆ ಸಮಸ್ತಭಾರಮಂ ಸಮರ್ಪಿಸಿ ವಿನಯ ಪುರಸ್ಸರಂ ಬೀೞ್ಕೊಂಡಖಂಡಿತಪ್ರೇಮವಸುಂಧರೆಯೆನಿಸಿದ ವಸುಂಧರೆಯಂ ಸಾರ್ದು ಕರೆದು

ಕಂ॥ ತಡೆಯದೆ ಬರ್ಪೆಂ ನೆನೆದಿರ್ದೆ
ಗಿಡದಿರು ಮಜ್ಜನನಿಯಲ್ಲಿ ನೀಂ ನಯ ವಿನಯಂ
ಗಿಡದಿರು ದುಷ್ಟರ ನುಡಿಗೆಡೆ
ಗುಡದಿರು ಬಿಡದಿರು ಕುಲಕ್ರಮೋಚಿತಗತಿಯಂ ೧೪

ಮ॥ ಇನಿಯಂ ಪೋದಪೆನೆಂದು ಬಂದೞಿಪೆ ದೀರ್ಘಶ್ವಾಸಮುಣ್ಮೆತ್ತು ಪ
ವ್ವನೆಪಾೞೆತ್ತಿರ್ದೆ ಗದ್ಗದಕ್ಕೆ ನುಡಿಗಳ್ಪಕ್ಕಾದುವಾಸ್ಯಂ ಹಿಮಂ
ತನಿ ಪೊಕ್ಕಿರ್ದಸರೋರುಹಕ್ಕೆ ಸರಿಯಾಯ್ತಂಗಂ ಗುರು ಗ್ರೀಷ್ಮತ
ಪ್ತ ನವೋದ್ಯಲ್ಲತೆಯಂತೆ ಕಂದಿತು ವಿಯೋಗೋದ್ವೇಗದಿಂ ಕಾಂತೆಯಾ ೧೫

ಕಂ॥ ಇನನ ಬೞಿವಿಡಿದು ಪೋಗ
ಲ್ಕನುವಿಸಲಿನಿಯಂ ರಥಾಂಗಮಂ ಪೋಲೆ ಘನ
ಸ್ತನಿ ಚಕ್ರವಾಕದಂಗನೆ
ಯನೆ ನಿರ್ಭರವಿರಹವಿಧುರೆ ವಿಹ್ವಳೆಯಾದಳ್ ೧೬

ದಂಡಿಂಗೆ ಪೋಪೆನೆಂದೆನೆ
ಗಂಡಂ ನವಯುವತಿ ಭೀತಿಗೊಂಡಳ್ ಕೇಳ್ದು
ದ್ದಂಡಲತಾಂತಾಯುಧ ಕೋ
ದಂಡನ ದಂಡಿರದೆ ಮೇಲೆವಂದಂತಾಗಳ್ ೧೭

ವ॥ ಅದಂ ಕಂಡಿಂತೆಂದಂ

ಕಂ॥ ಕುಸುಮಸುಕುಮಾರ ತನು ನಸು
ವಿಸಿಲೞಸಿದ ಗಾಳಿ ಸೋಂಕಿಮೊಡಮಿದು ಪೂವಂ
ಪೊಸೆದಂತೆ ಕಂದಿದಪುದೆಂ
ದಸಿಯಳೆ ಪೆಱಗಿರಿಸಿ ಪೋಪೆನಲ್ಲದಂದಿರಿಸುವೆನೇ ೧೮

ವ॥ ಎಂದಿಂತು ಮೊದಲಾದ ಪಲವು ತೆಱದ ಸಾಂತ್ವವಚನಂಗಳಂ ನುಡಿದೆಂತಾನುಂ ಸಂತಯ್ಸೆ

ಮ॥ ಪುರುಷ ಕ್ಷೇಮವಿಶೇಷಮಂ ಬಯಸಿ ತನ್ನಂ ತಾನೆ ಸಂತೈಸಿ ಚೆ
ಚ್ಚರಮಾದ್ರಾಕ್ಷತಪುಂಜಮಂ ಪಿಡಿಯೆ ಮೆಯ್ವೆತ್ತಂಗಸಂತಾಪದಿಂ
ಪುರಿದಂತಾದುವು ಮತ್ತೆ ಘರ್ಮಜಲದಿಂದಂ ನಾಂದು ಸಾರ್ದ್ರಂಗಳಾ
ಗಿರೆ ಸಸ್ಮೇರಸರೋಜನೇತ್ರೆ ಭರದಿಂದಂ ಶೇಷೆಯಂ ತೀವಿದಳ್ ೧೯

ವ॥ ಅಂತುಮಲ್ಲದೆ

ಚಂ॥ ಸಮಧಿಕದೇಹದಾಹಮನೆ ಸೈರಿಸಲಾರದೆ ಮಂಗಳೋಪಚಾ
ರಮೆ ಶಿಶಿರೋಪಚಾರಮೆನಿಸುತ್ತಿರೆ ತನ್ನಯ ಮೆಯ್ಗೆ ದೂರ್ವೆಯಿಂ
ದಮೆ ಮೊಸರ್ವಟ್ಟನಿಟ್ಟು ಹಿಮಚಂದನಗಂಧಮನಿಟ್ಟನಂತರಂ
ರಮಣಿ ಮನೋರಮಂಗೆ ಬಿಡುಮುತ್ತಿನ ಸೇಸೆಯನೊಲ್ದು ತೀವಿದಳ್ ೨೦

ವ॥ ಅಂತು ನಿಜಪ್ರಿಯಕಾಂತಾಕೇಕರಕಾಂತಿಸಂತಾನ ನವೀನವಾಳತೀ ಮಾಳೆಯೊಡನೆ ಬಿಡುಮುತ್ತಿನ ಸೇಸೆಯಂ ತಳೆದು ವಿಜಯರಮಣೀಪರಿಣಯನೋತ್ಸವಕ್ಕೆ ಪೂಜಮಡುವ ಪೊಸಮದವಣಿಗನಂತೆ ಶುಭಶಕುನಪುರಸ್ಸರಮಂ ಸಚಿವಾಗ್ರೇಸರಂ ಸಮಗ್ರ ಪರಿಗ್ರಹಂಬೆರಸರಸನಿರ್ದ ವಿಜಯಶಿಬಿರಕ್ಕೆ ನಡೆತಂದು ಮುನ್ನಮೆ ತನ್ನ ಪದವಿಗುಚಿತಮೆನಿಸಿದ ಪ್ರವೇಶದೊಳ್ ಸುರುಚಿರಮೆನೆ ರಚಿಯಿಸಿರ್ದ ಚೆಲ್ವಿಂಗಾಲಯಮಾದ ವಸ್ತ್ರಾಲಯದೊಳ್ ಲೀಲೆವೆತ್ತಿರೆ ಮತ್ತಮಾ ಭೂಪೋತ್ತಮನ ಬೀಡಿನೊಳೊರ್ವಂ ವಿಪುಳಕಳಾಪ್ರವೀಣಂ ಪ್ರಾಣವಲ್ಲಭೆಗಾತ್ಮೀಯಪ್ರಯಾಣಮಂ ಸೂಚಿಸುವ ಬಾಣಂ ಕಾಮಬಾಣದಂತಾಗೆ ತಾಗೆ ನಿಡುಸುಯ್ದೊಡನೆ ಕಾಂತೆಯಿಂತೆಂದಳ್

ಕಂ॥ ಪೋದಪೆನೆಂಬೀ ನುಡಿಯಿಂ
ಪೋದಪೆನಾಂ ಮುನ್ನಮೆಂದು ಮತ್ಪ್ರಾಣಂ ಚೇ
ತೋದಯಿತ ಪೇೞ್ವ ತೆರದಿಂ
ದಾದಮೆ ಸುಯ್ ನಿಮಿರ್ದುವೆಂತು ಪೇೞ್ ಪೆಱಗಿರ್ಪೆಂ ೨೧

ವ॥ ಮತ್ತೊರ್ವಂ ಚಿತ್ತಪ್ರಿಯೆಗೆ ನಿಜಗಮನವೃತ್ತಾಂತಮನಱಿಪೆ ಬಗೆ ಬೆದಱೆ ಮೃಗನಯನೆ ಇಂತೆಂದಳ್

ಕಂ॥ ಅಪ್ಪು ಸಡಿಲ್ದೊಡೆ ಕೇಳಿನಿ
ಸಪ್ಪೊಡಮಿಲ್ಲದೊಡೆ ಚುಂಬನಂ ನಲ್ಲನೆ ಕೆಯ್
ತಪ್ಪಂ ಸ್ಮರನೆನ್ನೊಳ್ ಬಾ
ಯ್ತಪ್ಪಂ ಪೊರ್ದಿಸುವನೆನ್ನ ನೀನೆಂತಗಲ್ವೈ ೨೨

ವ॥ ಮತ್ತೊರ್ವಂ ತನ್ನಗಲ಼್ಕೆಗೆ ತಲ್ಲಣಿಸುವ ನಲ್ಲಳಂ ತಡವಿಲ್ಲದೆ ಬರ್ಪೆನುಮ್ಮಳಿಸದಿರ್ಪುದೆಂದೊಡಾಕೆ ಇಂತೆಂದಳ್

ಕಂ॥ ಕ್ಷಣದರ್ಶನವಿಘಟಸಮ
ರ್ಪಣ ಪಕ್ಷ್ಮಸ್ಪಂದನಕ್ಕಮಗಿವ ಮದೀಯ
ಪ್ರಣಯಕ್ಕೆ ಪಯಣಮಂ ಹೃ
ತ್ತ್ರಣಯಿಯೆ ಪೇೞಿದಱ ಪೇೞ್ಕೆಯಿಂದಾನೆಸೆಪೆಂ ೨೩

ವ॥ ಮತ್ತೊರ್ವಂ ತನ್ನ ಕನಸಿನೊಳಮಗಲ್ದೊಡಂ ಬೆಗಡುಗೊಳ್ವ ಸಾತ್ವಿಕಸ್ನೇಹ ಸಂಪನ್ನೆಗೆ ತನ್ನ ಪಯಣಮಂ ಕಲ್ಲೆರ್ದೆತನದಿಂದ ನಿಲ್ಲದೆ ಪೇೞೆ ಬಾಲೆ ಇಂತೆಂದಳ್

ಕಂ॥ ಮನಮನೆ ಮನೆಯಂ ಮಾಡಿ
ರ್ಪಿನಿಯನೆ ನೀನಿಂತು ಬಂಚಿಸುತ್ತಿಸುವವನೀ
ತನುವಂ ಬಂಚಿಸುತೆನ್ನಯ
ಮನಮಂ ಮನಸಿಶಯನಿಸುವುದೇಂ ವಿಸ್ಮಯಮೇ ೨೪

ವ॥ ಮತ್ತೊರ್ವಂ ಚಿತ್ತವಲ್ಲಭೆಯಗಲ್ಕೆಗೆ ನಿತ್ತಸಱ್ಲಾರದಾ ವೃತ್ತಸ್ತನೆಗಿಂತೆಂದಂ

ಕಂ॥ ಪ್ರಾಣದಿನಧಿಕಮೆನಗೆ ನೀಂ
ಪ್ರಾಣಮನಾಂ ತೃಣಮೆಗೆತ್ತು ನಡೆಯುತ್ತಾಜಿ
ಕ್ಷೋಣಿಗೆ ನಿನ್ನ ವಿಯೋಗಮ
ನೇಣೇಕ್ಷಣೆಯಿನಿತು ಸೈರಿಸದ ಕಾರಣದಿಂ ೨೫

ಅಲಗಂಬಿಂಗಟ್ಕಿದ ಮನ
ಮಲರಂಬಿಂಗಟ್ಕಿದಪ್ಪುದಸಿಯಳೆ ಮಸೆದಿ
ರ್ದಲಗಂಬು ತನುವನಲ್ಲದ
ದಲರಂಬಿನ ತೆಱದೆ ಮನಮನೇಂ ಭೇದಿಕುಮೇ ೨೬

ವ॥ ಅಂತು ತಂತಮ್ಮ ಕಾಂತರ ಗಮನಕ್ಕೆ ಮನಂ ವಿಕಳಮಾಗೆ ತಳಮಳಿಸುವ ಕಾಂತೆಯರಗಲ್ಕೆಗೆ ಬಗೆ ಬೆದಱ್ ಮಱುಗುವ ಕಾಂತರ ಸಂತತಿಯಸ್ತಮಯಸಮಯದ ರಥಾಂಗಮಿಥುನಂಗಳೆನಿಸಿಯುಂ ಸುರತಸುಖಸುಧಾಸೇವನೆಗೆ ವಿಘ್ನಕಾರಿಯೆನಿಪ ಸೂರ್ಯೋದಯಕ್ಕೆ ಕಂಗನೆಕನಲ್ವ ಚಕೋರಮಿಥುನಂಗಳನಿಟ್ಸಿಯುಂ ಕಣ್ಣೊಳೆ ಬೆಳಗಂ ಮಾಡುತ್ತುಮಿರೆ

ಮ.ಸ್ರ॥ ಸುರತಾಂತಶ್ರಾಂತ ಕಾಂತಾಶ್ರಮಜಳಗಿಳನೋಪಾತ್ತಶೈತ್ಯಂ ತದಾಸ್ಯಾಂ
ಬುರುಹಾಮೋದಪ್ರಮೋದಂ ತದಳಕಲತಿಕಾನರ್ತಕೀಸೂತ್ರಧಾರಂ
ಸ್ಮರಚಕ್ರಾಧೀಶ ಚಂಚಚ್ಚಮರರುಹ ಸಮಾರೋಪಮಾನ್ಯೈಕಪಾತ್ರಂ
ವಿರಹಾಗ್ನಿ ಪ್ರಾಣಮಿತ್ರಂ ಸುಟ್ದುದು ಪವನಂ ಸುಪ್ರಭಾತಪ್ರಭೂತಂ ೨೭

ವ॥ ಅನಂತರಂ

ಮ॥ ಪಿರಿದುಂ ಶೋಕಿಪ ಕೋಕಸಂತತಿ ವಿಯೋಗೋದ್ವೇಗಮಂ ನೀಗೆ ನೀ
ರರುಹಕ್ಕುತ್ಸವಮಾಗೆ ಪರ್ವಿದ ತಮಂ ನಿರ್ವ್ಯಾಕುಳಂ ಪೋಗೆ ಭಾ
ಸುರ ವೈಭಾತಿಕಶಂಖತೂರ್ಯನಿನದಂ ರೋದೋಂತಮಂ ತಾಗೆ ಶೇ
ಖರನಾದಂ ರುಚಿರೋದಯಾದ್ರಿಶಿಖರಕ್ಕುದ್ಯತ್ಕರಂ ಭಾಸ್ಕರಂ ೨೮

ವ॥ ಆ ಸಮಯದೊಳ್

ಕಂ॥ ಪರಿಪಾಂಡುರತನುಗೆ ನಿಶಾ
ಕರಕರಪೀಡಿತೆಗೆ ಸರಸಿಜಾಂಗನೆಗೆ ಸರೋ
ವರಮಗ್ನೆಗೆ ವಿರಹಾರ್ತೆಗೆ
ಕರದಿಂ ರವಿ ಸೋಂಕಿ ಹರ್ಷಮಂ ಪುಟ್ಟಿಸಿದಂ ೨೯

ಮ॥ ಘನತೇಜಂ ಸ್ಮಿತಪುಂಡರೀಕನಕಳಂಕಂ ನೂತನಕ್ಷತ್ರವೇ
ಷ್ಟನವಿಭ್ರಾಜಿತರಾಜರಾಜಿತಮಹೌಜೋಹಾರಿ ಧಾತ್ರೀಪ್ರಸಿ
ದ್ಧನಿಜೋದ್ಯತ್ಕರಸಾಂತಸಭ್ಯುದಯಮಂ ನಿನ್ನಿಂದದಿಂ ದೇವ ಪಾ
ವನವೃತ್ತಂ ನಯಮಾರ್ಗದರ್ಶಿಯರವಿಂದಾಧೀಶ್ವರಂ ಭಾಸ್ಕರಂ ೩೦

ವ॥ ಎಂದು ಪೊಗೞ್ವಗಣ್ಯ ಪುಣ್ಯಪಾಠಕರ ಮೃದುಮಧುರಗಂಭೀರಾರವಮ ಕರ್ಣಾವತಂಸಮಾಗೆ ರಾಜಹಂಸನುಪ್ಪವಡಿಸಿ ಮಂಗಳಮಣಿದರ್ಪಣ ನಿರೀಕ್ಷಣಾಜ್ಯಾವೇಕ್ಷಣಾದಿ ಪ್ರಾಭಾತಿಕಕ್ರಿಯೆಯಂ ನಿರ್ವರ್ತಿಸಿ ಶುಚಿಜಳಸ್ನಪನಪವಿತ್ರಿತಗಾತ್ರನಾಸಾದಿತ ಧೌತವಸ್ತ್ರಂ ನಾನಾಮಣಿವಿತಾನಾಂದವಾನಿತ ಜ್ಯೋತಿರ್ಲೋಕಮನನೇಕಪ್ರಕಾರ ಪೂಜಾವಿಶೇಷ ಸಂತೋಷಿತವಿನೇಯಾನೀಕಮಂ ನವ್ಯದಿವ್ಯೋಪಕರಣಪ್ರವ್ಯಕ್ತ ಸಮವಸೃತಿ ವ್ಯವಹಾರಮಂ ದೇಹಾರಮಂ ಪೊಕ್ಕು ವಿರಚಿತ ಪರಮೇಶ್ವರ ಶ್ರೀಮುಖದರ್ಶನಸಸ್ತವಂ ದೂರೀಕೃತಕೈತವಂ ಕೃತೇರ್ಯಾಪಥಶುದ್ಧಿ ವಿಶುದ್ಧ್ಯತಿಶಯಬುದ್ಧಿ ಸಮಾಧಿರೂಢಸಾಮಾಯಿಕನನಂತೈಶ್ವರ್ಯಪ್ರಸಿದ್ಧ ಸಿದ್ಧಭಕ್ತಿಯಿಂ ಸಮೀಪೀಕೃತ ಸಮೀಚೀನ ಸಮುಚಿತೋಪಕರಣದ್ರವ್ಯನವ್ಯಗ್ರಚಿತ್ತಂ ಸಪರಿ ಚಾರಕೇಂದ್ರನಿಂದ್ರಲೀಲೆಯಿಂ

ಉ॥ ಶ್ರೀ ವಿಳಸತ್ಕುಶಾಳಿ ಮಹಿತೋಜ್ವಳಪೀಠದೊಳಿಂದ್ರವಂದ್ಯನಂ
ದೇವನನೊಪ್ಪಿ ಪೂಜಿಸಿ ದಿಶಾಧಿಪರ್ಗಿತ್ತಖಿಳೋಚಿತಾರ್ಘ್ಯಮಂ
ಪಾವನವಾರಿಸಾರಘೃತದುಗ್ಧದಧಿಸ್ತುತಕಲ್ಕಸತ್ಕಷಾ
ಯಾವಿಳಗಂಧತೋಯದೊಳೆ ಮಜ್ಜನಮಂ ಜಿನಪಂಗೆ ಮಾಡಿದಂ ೩೧

ವ॥ ಅಂತು ಮುಕ್ತಿಮುಗ್ಧಸ್ನಿಗ್ಧಾವಲೋಕನ ದುಗ್ಧಾಭಿಷಿಕ್ತಂಗೆ ಪುನರುಕ್ತಂ ಮಾೞ್ಪಂತ ಭಿಷೇಕಮಂ ಮಾಡಿ ಸುಗಂಧಬಂಧುರಗಂಧೋದಕಪವಿತ್ರೀಕೃತೋತ್ತಮಾಂಗನಾಗಿ

ಶಾ॥ ಆನಂದಾಶ್ರುವಿಮಿಶ್ರನೇತ್ರನರಸಂ ರೋಮಾಂಚಸತ್ಕಂಚುಕಾ
ದಾನಾಳಂಕೃತಗಾತ್ರನಪ್ರತಿಮ ಸೇವಾಯತ್ತಚಿತ್ತಂ ಜಿನಾ
ನೂನಸ್ತೋತ್ರಪವಿತ್ರರಂಗಕೃತಜಿಹ್ವಾನರ್ತಕೀನೃತ್ಯನ
ನ್ನೂನ ಶ್ರೀಜಿನರಾಜನಂ ಸುರನರಸ್ತುತ್ಯಕ್ರಮಾಂಭೋಜನಂ ೩೨

ವ॥ ವಿಕಸಿತಸಿತಾಂಬುಜಾತಜಾತಪರಿಮಳಮಿಳಿತ ಕಳಧೌತ ಕಳಶಕಳಿತ ಸಂಸಾರ ಕಾರಣ ಪಾಪಸಂತಾಪಾಪನೋದನ ಸಮಸ್ತತೀರ್ಥಜಲಂಗಳಿಂದಂ ತರುಣತರಣಿಕಿರಣಶಂಕಾವಹ ಕುಂಕುಮಪಂಕಪಂಕಿಳಸಾರ ಘನಸಾರ ಸಾರೀಭೂತ ಶಾರದೇಂದು ನಯನಾನಂದನ ಚಂದನ ಚರ್ಚೆಗಳಿಂದಂ ಮುಕ್ತಿವಿಳಾಸಿನೀವಿಕಸಿತ ಮುಖಸರಸಿರುಹ ದರಹಾಸವಿಳಾಸ ಭಾಸುರ ಸುರಭಿಧವಳಕಳಮಾಕ್ಷತಾಪುಂಜಂಗಳಿಂದಂ ಬಂಧುರಗಂಧಪ್ರವಾಹಪವನಚಂಚಳಚಂಚರೀ ಕಾಂಚಿ ತವಿಕಚವಿಚಕಿಳೋನ್ಮೀಳಿತ ಮಾಳತೀ ವಕುಳಾದಿ ಕುಸುಮಸಂಕುಳಂಗಳಿಂದಂ ಸುಸ್ವಾದುಸೌರಭಾಕರಶಾಕಾನೀಕಘೃತಪೂರಪೂರಿಕಾದಿ ವಿವಿಧಮಧುರಭಕ್ಷ್ಯ ಪರಿವೃತಸುರುಚಿರಪರಮಾನ್ನನಿರವದ್ಯನೈವೇದ್ಯಂಗಳಿಂದಂ ವಿಶದಶಶಿಕಳಾಶಕಳಾನುಕಾರಿ ಕರ್ಪೂರಪಾಳೀನಿರೂಪಿತದೀಪ್ತದೀಪಕಳಾಪಂಗಳಿಂದಂ ದಶದಿಶಾವಳಯವಳಯಿತನಿಜಾಮೋದ ಮತ್ತಾಳಿಮಾಳಾದ್ವಿಗುಣಿತೋದ್ದಾಮ ಧೂಮಲೇಖಾನೀಕ ದಶಾಂಗಧೂಪಂಗಳಿಂದಂ

ಪರಿಪಕ್ವರಸಸೌರಭಸಾರ ಸಹಕಾರ ಜಂಬು ಜಂಬೀರ ನಾರಂಗ ಮಾತುಳುಂಗ ಕನಕ ಕದಳಾದಿ ವಿಪುಳಫಳಂಗಳಿಂದಂ ಗಂಗಾತರಂಗರುಚಿರಚಮರರುಹ ನಿಜಾತ್ಮಸಂವೇದನ ಸಮರ್ಪಣ ಮಣಿದರ್ಪಣದುರಿತಾತಪ ವಾರಣಾತಪ ವಾರಣನೇತ್ರ ರಮಣೀಯನೇತ್ರಾದಿ ವಿಚಿತ್ರವಸ್ತ್ರ ಪ್ರಮುಖ ನಿಖಿಳಮಂಗಳದ್ರವ್ಯಂಗಳಿಂದಮಾರಾಧಿಸಿ, ಪರಿಮಳಮತ್ತಾಳಿಕಳರುತಿಮಂಜುಳ ಪುಷ್ಪಾಂಜಲಿಪುರಸ್ಸರಂ ಸಕಳಶಾಂತಿಕರಶಾಂತಿಧಾರೆಯುಂ ಸಂಗೀತಕಪ್ರಸಂಗಂ ಮನಂಗೊಳುತ್ತಮಿರೆ ಕೊಟ್ಟು ಮತ್ತಂ ವಿಶಿಷ್ಟಾಷ್ಟಮಹಾಪ್ರಾತಿಹಾರ್ಯೋಪೇತ ಗುಣಧರ ಗಣಧರಪ್ರಣೂತಾಷ್ಟಸಹಸ್ರಲಕ್ಷಣಲಕ್ಷಿತಾಮೇಯಕಾಯಸೌಂದರ್ಯಸಂಪನ್ನನಂ ವಿನಮಿತ ವಿನೇಯಜನಪ್ರಸನ್ನನಂ ಜಿನೇಂದ್ರಚಂದ್ರನನಗಣಿತಗುಣ ವಸ್ತು ರೂಪ ಸ್ತವನರೂಪಾನವದ್ಯ ಹೃದ್ಯಪದ್ಯಂಗಳಿಂ ಸಹಜಸಾಹಿತ್ಯವಿದ್ಯಾಧರಂ ಚತುರ್ಥಕ್ತಿಪೂರ್ವಕಂ ಸ್ತುತಿಯಿಸಿ ಪ್ರಪಂಚಿತಾಂಚಿತ ಪಂಚೋಪಚಾರದಿಂ ನಿರ್ವರ್ತಿತ ದೇವತಾರ್ಚನಂ ತ್ರಿಳೋಕಶೇಖರಚರಣಸರಸಿರುಹಸಮರ್ಚಿತಕುಸುಮಶೇಖರಂ ಜಗತ್ತಿಳಕಪದನಳಿನ ಮಳಯಜ ಲಲಿತಲಲಾಟತಿಳಕಂ ಪುನಃಪುನಃಪ್ರಾರ್ಥ್ಯಮಾನ ಪುನರ್ದರ್ಶನನನಂತದರ್ಶನನಂ ಬೀೞ್ಕೊಂಡು ಪೊಱಮಡುವ ಸಮಯದೊಳ್

ಚಂ॥ ಪುರದ ಸಮಸ್ತ ಚೈತ್ಯನಿಳಯಂಗಳೊಳೆಯ್ದೆ ಜಿನೇಂದ್ರಪೂಜೆಯುಂ
ನಿರುಪಮಭಕ್ತಿಯಿಂ ಹಿತಪುರೋಹಿತನೊಪ್ಪಿರೆ ತನ್ನ ಪೇೞ್ಕೆಯಿಂ
ನಿರವಿಸಿ ಗಂಧಶೇಷೆಗಳನುತ್ಸವದಿಂ ಕುಡೆ ಕೊಂಡು ಹರ್ಷಮಂ
ಧರಿಯಿಸಿದಂ ಜಯಕ್ಕಿದುವೆ ಸಂಚಕರಂ ತನಗಾದುದೆಂಬಿನಂ ೩೩

ವ॥ ಅಂತು ಸಿದ್ಧಶೇಷೆಯನಶೇಷಗುಣಾಭರಣಂ ತಳೆದುಕೊಂಡನಂತರಂ ರನ್ನದ ಪಡಲಿಗೆಗಳೊಳ್ ತೀವಿದ ವಿಚಿತ್ರವಸ್ತ್ರಾಭರಣಂಗಳಂ ಭಂಡಾರಿಗಂ ಕೊಂಡು ಬಂದು ಮುಂದಿಟ್ಟಪೆ

ಕಂ॥ ಅಳವಡೆ ದುಕೂಲವಸನಮ
ನಿಳೇಶನುಟ್ಟುದಯರಾಗಮಂ ಕುಡೆ ಪೆೞ್ಗಿಂ
ಗಳನೊಳಕೆಯ್ದುದು ತಪನೋ
ಜ್ಜ್ವಳರುಚಿಯಂಬೊಂದು ಶಂಕೆಗೇನೆಡೆಯಾಯ್ತೋ ೩೪

ಭಾವಭವಂಗಣೆಯಾದಂ
ಭೂವಲ್ಲಭನೊಪ್ಪೆ ಕುಂಡಳಂ ಕಂಕಣಮೇ
ಕಾವಳಿ ಮುತ್ತಿನತಲೆಸು
ತ್ತಾವಗಮೆಸೆವಂಗುಳೀಯಕಂ ಕೇಯೂರಂ ೩೫

ವ॥ ಅಂತು ನಿಜೇಚ್ಛೆಯ ಶೃಂಗಾರಮಂ ಮಾಡಿ ಮಣಿಮಯ [illegible] ಗೃಹೀತ ತಾಂಬೂಳನಾಲೋಕಿತಮಂಗಳಮಣಿದರ್ಪಣಂ ದರ್ಪಕನಂತೆ ಪೊಱಮಟ್ಟು ಮಹಾ… ಪಣ್ಣೆ ಬಂದಿರ್ದ

ಉ॥ ವಾರಣಮಂ ವಿರೋಧಿಮದವಾರಣಮಂ ಶುಭಚಿಹ್ನತೋಷಿತಾ
ಧೋರಣಮಂ ಲಸದ್ವಿಭವಕಾರಣಮಂ ಸಮದಪ್ರಚಾರಸಂ
ಧಾರಣಮಂ ವಿನಿರ್ಜಿತಮಹಾರಣಮಂ ನೃಪನೇಱಿದಂ ನಯ
ಪ್ರೇರಣನೋಜೆಯಿಂ ಘನಗುಣಸ್ತವನಪ್ರತಿಪನ್ನಚಾರಣಂ ೩೬

ವ॥ ಆ ಸಮಯದೊಳ್

ಕಂ॥ ಅರವಿಂದರಾಜತೇಜಃ
ಸ್ಫುರಿತಕ್ಕುಳ್ಳಟ್ಕೆ ಚಂದ್ರದೀಧಿತಿ ಚಂದ್ರಂ
ಭರದಿಂದೋಲಗಿಪಂತಿರೆ
ಕರಮೆಸೆದುವು ಚಾಮರಂಗಳುಂ ಬೆಳ್ಗೊಡೆಯುಂ ೩೭

ಚಂ॥ ಮೃಗರಿಪುವಿಕ್ರಮಾಕ್ರಮಿತವೈರಿಗಳುಜ್ವಳಹಾರ ಚಿತ್ತಹಾ
ರಿಗಳತಿ ದುಷ್ಟಚೇಷ್ಟಿತ ತುರಂಗಮಶಿಕ್ಷಣ ಸೂರ್ಯಜಾನುಕಾ
ರಿಗಳಸಿಘಾತವಾರಿತವಿರೋಧಿಮತಂಗಜ ಪೀನದಾನವಾ
ರಿಗಳಧಿರಾಜಸನ್ನಿಧಿಯೊಳೊಪ್ಪಿದರಂದರಸಾ ಸವಾರಿಗಳ್ ೩೮

ಕಂ॥ ಭದ್ರಗಜಂಗಳ್ ಸೈನ್ಯಸ
ಮುದ್ರದೊಳೊಪ್ಪಿದುವು ಹರಿಯ ಭಯದೆ ಶರಣ್ಬೊ
ಕ್ಕದ್ರಿಗಳೆನೆ ಘನಮದಸಲಿ
ಲದ್ರುತಕರ ನಿರ್ಝರಂಗಳತಿ ತುಂಗಂಗಳ್ ೩೯

ಹರಿಯೊರ್ವನ ಚರಣದ ಸಂ
ಚರಣಕ್ಕೆಯ್ದದ ಧರಿತ್ರಿ ಪರಿಭಾವಿಪೊಡೀ
ಹರಿಸೇನೆಯ ಚರಣದ ಸಂ
ಚರಣಕ್ಕಿನ್ನೆಯ್ದದೆಂಬುದೊಂದಚ್ಚರಿಯೇ ೪೦

ತರದಿಂ ತೀವಿದ ಮೂವ
ತ್ತೆರಡಾಯುಧಮೆಸೆಯಲಾಂತರಂ ರಿಪುನೃಪರಂ
ನಿರಿವ ಕೃತಾಂತನ ಮುಖದಂ
ತರವಿಂದನೃಪಾಳರಥವಿತತಿ ಸೊಗಯಿಸುಗುಂ ೪೧

ಬಿತ್ತರಿಸಿದ ಪತ್ತಿಯ ಸಂ
ಪತ್ತಿಯನಾರ್ ಪವಣಿಪನ್ನರಾ ಬಲದೊಳ್ ತ
ಳ್ತಿತ್ತಿದ ಪಟಿಯಿಗೆಗಳುಮಂ
ಸತ್ತಿಗೆಯುಮನೆಣಿಸುವನ್ನರಿಲ್ಲೆನೆ ನಿರುತಂ ೪೨

ವ॥ ಅಂತು ನೆರೆದ ಸಮಸ್ತ ಸಾಧನಮುಂ ಮಕುಟಬದ್ಧರುಂ ಬೆರಸು ಧರಣೀಶ್ವರಂ ನಡೆವಾಗಳ್

ಕಂ॥ ವಾರಣದುರಗನ ಗರುಡನ
ಭೇರುಂಡನ ಪುಲಿಯ ಸೂಕರದ ಮಕರದ ಕಂ
ಠೀರವದ ಕಪಿಯ ಚಿಹ್ನದ
ಭೂರಮಣರ ಬೀಡು ಕೂಡೆ ನಡೆದತ್ತಾಗಳ್ ೪೩

ತುರಗ ರಥ ಗಜ ಪದಾತಿಯ
ಖುರಪುಟಪಟುಚಕ್ರರದನಪದಹತಿಯಿಂದಂ
ಗಿರಿಗಳೊಡೆದವನಿ ಸಮಮಾ
ಗಿರೆ ನಡೆದುದೆ ಬಟ್ಟೆಯೆನಿಸಿ ನಡೆದುದು ಸೈನ್ಯಂ ೪೪

ವ॥ ಆ ಸಮಯದೊಳ್

ಉ॥ ಸಂದಣಿಸಿರ್ದ ಮಲ್ಲಿಗೆಯ ಮೊಲ್ಲೆಯ ಜಾದಿಯೆಸಳ್ಗಳೊಳ್ ಕರಂ
ಸಂದು ಸುಗಂಧಮಂ ಬಿಡದೆ ತಂದು ಸರೋವರಶೀಕರಂಗಳಿಂ
ನಾಂದು ನವಪ್ರಸೂನತರುಶಾಖೆಗಳಲ್ಲಿಯೆ ನಿಂದು ಬಂದು ತಾಂ
ಮಂದಸಮೀರಣಂ ಕಳೆದುದಾ ಬಳದಧ್ವದೊಳಾದ ಖೇದಮಂ ೪೫

ಕಂ॥ ಅಂತಕರಾಕ್ಷಸಚಾತು
ರ್ದಂತಬಳಂ ತನ್ನೃಪಾಳನುನ್ನತ ಚಾತು
ರ್ದಂತಬಳಂ ನಡೆತಂದೋ
ರಂತಿರೆ ಮುತ್ತಿದುದು ವಜ್ರವೀರನ ಪುರಮಂ ೪೬

ಪಡೆಯಂ ಪವಣಿಸಲಱಿಯೆಂ
ಕಡುವಿರಿದೆನಿಸಿರ್ದ ವಜ್ರವೀರನ ದುರ್ಗಂ
ಪಡೆ ಮುತ್ತಲೊಡಂ ಜಳಧಿಯ
ನಡುವಣ ಭ್ವೈತ್ರದವೊಲಿರ್ದುದೆಂಬದನಱಿವೆಂ ೪೭

ವ॥ ಅಂತು ಮೂವಳಸಾಗಿ ಸುತ್ತಿ ಮುತ್ತಿರ್ಪುದುಮಿತ್ತಲ್

ಕಂ॥ ರವಿಶಶಿಗಳಗಲೆ ಗಗನ
ಕ್ಕವತಮಸಮಧೀಶನಪ್ಪವೋಲ್ ನೃಪಸಚಿವರ್
ಭುವನೇಕ್ಷಣರಗಲೆ ಪುರ
ಕ್ಕವಿನಯಪರನೆನಿಪ ಕಮಠನಧಿಪತಿಯಾದಂ ೪೮

ಪತಿ ಯೆಬ್ಬಿತ್ತೆರಡುನಿಯೋ
ಗತತಿಗಳೊಳಮೊಂದನಪ್ಪೊಡಂ ಕುಡದೊಡಮೇ
ನತಿನಿರ್ಲಜ್ಜಂ ಪೆಱಗು
ದ್ಧತನಾಸ್ಥಾಪಿತ ಮಹತ್ವಮಂ ತಳೆದನವಂ ೪೯

ವ॥ ಅದೆಂತೆನೆ

ಚಂ॥ ನೃಪನ ಲಸಲ್ಲತಾಂಗಿಯರೆ ತನ್ನ ಲತಾಂಗಿಯರಾವಗಂ ನೃಪ
ದ್ವಿಪಮೆ ನಿಜದ್ವಿಪಂ ನೃಪನ ಭೂಷಣರಾಜಿಯೆ ತನ್ನ ಭೂಷಣಂ
ನೃಪನ ತುರಂಗಮಂ ನಿಜತುರಂಗಮಮಾಗೆ ನೃಪಾಳಲೀಲೆಯಂ
ಚಪಳಚರಿತ್ರನಾಂತು ನೃಪಮಂದಿರದೊಳ್ ನೆಲಸಿರ್ದನುದ್ಧತಂ ೫೦

ಕಂ॥ ಇರುಳಾತಪವಾರಣಮಂ
ತರತರದಿಂ ಪಗಲೆ ಪಲವು ಕೆಯ್ದಿವಿಗೆಯಂ
ತರಳತೆಯಿಂ ಪಿಡಿಯಿಸುವಂ
ನಿರರ್ಥಕಂ ತನ್ನ ಚರಿತಮೆಂದಱಿಪುವವೋಲ್ ೫೧

ಕುಂಕುಮದ ಕಸ್ತುರಿಯ ಪುಡಿ
ಯಿಂ ಕನಕದ ಪುಡಿಯಿನಾದ ಪಿಷ್ಟಾತಕಮಂ
ಬಿಂಕದೆ ಕೆದಱಿಸುತುಂ ನಡೆ
ವಂ ಕಮಠಂ ಸಿರಿಯನಿರದೆ ತೂಱುವ ತೆಱದಿಂ ೫೨

ಪರಿಮಳಮಂ ಪರಪುತ್ತುಂ
ಪರಕಲಿಸಿಯು ನೆಗೆವ ಧೂಪವರ್ತಿಯ ಪೊಗೆ ತ
ನ್ನುರಿಗೊಳ್ಳಿತನಮನವನಿಗೆ
ನಿರವಿಸುತಿರೆ ಪೊೞಲ ಬೀದಿಯೊಳ್ ಸುೞಿವನವಂ ೫೩

ಏವೇೞ್ದುದವನ ಸಿರಿಗು
ಜ್ಜೀವನಮಿಲ್ಲೆಂಬ ತೆಱದಿನಿರುಳುಂ ಪಗಲುಂ
ಭಾವಿಪರೋವೋ ಎನೆ ಕೆ
ಯ್ದಿವಿಯು ಕಪ್ಪುರದ ತೈಲದಿಂ ಪೊತ್ತಿಸುಗುಂ ೫೪

ಉ॥ ವಾರಣಮೇಱ್ ಬೆಳ್ಗೊಡೆಯನೆತ್ತಿಸಿ ಬರ್ಪುದದೊರ್ಮೆ ಮಲ್ಲರಂ
ಪೋರಿಪುದೊರ್ಮೆ ಕಂದುಕದ ಕೇಳಿಯೊಳಿರ್ಪುದದೊರ್ಮೆ ಸಾರಶೃಂ
ಗಾರವಿಳಾಸಮಂ ಮೆಱೆದೊರ್ಮೆ ಖಗೋದ್ಧತಮೇಷಯುದ್ಧಮಂ
ವಾರವಧೂಜನಂಬೆರಸು ನೋಡುವುದೊರ್ಮೆ ವಿನೋದಮಾತನಾ ೫೫

ಕಂ॥ ಬಾಳಕನ ಕೆಯ್ಯ ಖಜ್ಗಂ
ಬಾಳಕನಂ ಕಿಡಿಸುವಂದದಿಂ ಮೂರ್ಖನ ದು
ಶ್ಶೀಳನ ಧನಮವನನೆ ನಿ
ರ್ಮೂಳಿಸುಗುಂ ತಕ್ಕುದಱಿಯದಾಚರಿಪುದಱಿಂ ೫೬

ಚಂ॥ ಪಲತೆಱದಿಂದೆ ಜೊತ್ತಿಸಿ ಪರಾಂಗನೆಯರ್ಕಳೊಳೊಯ್ದು ಕೂಡುವ
ಗ್ಗಲಿಸಿದ ಜೂದನಾಡಿಪತಿಧೂರ್ತವಿಟರ್ಗೆ ನಟರ್ಗೆ ಭಂಡಮಂ
ಪೞಿಗೊಳಿಪನಾಡುವರ್ಗೆ ಗಣಿಕಾಳಿಗೆ ಬೇಡಿತನಿತ್ತಹರ್ನಿಶಂ
ಕುಲಧನಮಂ ಖಳಂ ಕಿಡಿಸಿದಂ ನಿಸದಂ ಕಮಠಂ ಮಹಾಶಠಂ ೫೭

ವ॥ ಅದಂ ಕಂಡು ಮಹೀಮಂಡಳದ ಜನಂಗಳೆಲ್ಲಮಿಂತೆಂಗುಂ

ಕಂ॥ ತನಗಂಜಿದ ತೆಱದೆ ಯಶೋ
ಧನಮಂ ಪಿತೃವೆಸೆಯ ಕಡೆಯೊಳಿರಿಸಿದೊಡಂ ನ
ಟ್ಟನೆ ಕಿಡಿಸುವವಂ ಧನಮಂ
ಮನೆಯೊಳಗಿರಿಸಿದುದನಿರದೆ ಕಿಡಿಸುವುದರಿದೇ ೫೮

ತೊಟ್ಟಂಗಿಗೆಯಂ ಕುಡದಿ
ನ್ನುಟ್ಟುದನುಡದೀವುದಾವ ಕೌತುಕಮಾತಂ
ತೊಟ್ಟಾಭರಣಮನಾಗಳೆ
ನೆಟ್ಟನೆ ಪಿಡದೀವನರ್ಥಿಗಂದೊಡೆ ಕಮಠಂ ೫೯

ಒಡೆಯರ ಕಣ್ ತಪ್ಪುವುದನೆ
ತುಡುಗುಣಿ ನಾಯಳಿಪಿ ನೋಡುವಂತೆವೊಲೀತಂ
ಜಡಮತಿ ತೆಱಪನೆ ಪಾರ್ದಿ
ರ್ದೆಡೆವಡೆದೊಡೆ ಸ್ವತು ನಡೆಯಲೇನಱಿದಪನೇ ೬೦

ಕಲಿ ತರುಣಂ ಪ್ರಬಲಂ ಮದ
ಕಳಿತನನಾರೋಹಕಂ ಗಡೆನೆ ಮಾತಂಗಂ
ಖಳನಬಳನಧಿಪನುಚ್ಛ್ರಂ
ಖಳನಪನಯನೆಂದೊಡಿನ್ನವಂ ನೆಗೞ್ದುದೇಂ ೬೧

ಶೂಲದ ಮೇಲಣ ಪುಯ್ಯಲಿ
ನೀ ಲೋಲಚರಿತ್ರನುಣ್ಬ ತೆಱದಿಂದಂ ಭೂ
ಪಾಳಕನ ತೀವ್ರತೇಜಮ
ನೇಱಿಸಿ ಮಿಗೆ ರಾಜಲೀಲೆಯಂ ತಳೆದಿರ್ದಂ ೬೨

ಭೂವಲ್ಲಭನಾಜ್ಞೆಯನುಜ
ದಾವನುಮಿಂತೆಸಗಲಣ್ಮನಿವನುಱದೆಸಪಂ
ಜೀವನಮನೊಲ್ಲನಕ್ಕುಂ
ಸಾವಂಗೆ ಸಮುದ್ರವಗಲಮೇಂ ನೀಳಮದೇಂ ೬೩

ಸಿರಿಯಿಂದೊಗೆವ ಮದಂ ಬ
ಲ್ಲರುಮಂ ಬಗೆಗಿಡಿಸಿ ದುಶ್ಚರಿತ್ರದೊಳೆಸಪಂ
ತಿರೆ ಮಾಱ್ಮುಮೆಂದೊಡಿವನಂ
ಮರುಳಂ ಮರುಳಾಗಿ ಮಾೞ್ಪುದೇಂ ವಿಸ್ಮಯಮೇ ೬೪

ತಲೆಗೆ ಪದರಕ್ಷೆಯಂ ನಾ
ಣೆಲಿ ಕಟ್ಟಿಸಿಕೊಂಡ ತೆಱದ ಲೋಕವಿರುದ್ಧಂ

ದಲಿದೆನಿಸಿ ನಡೆದಕೀರ್ತಿಗೆ
ನೆಲೆಯಾದಂ ಪಾಪಕರ್ಮಕರ್ಮಠಕಮಠಂ ೬೫

ಜೋಕೊವರಂ ನೆಗಟ್ಟಿಂ ಸುರ
ಲೋಕವಿರುದ್ಧಮನೆ ಕಮಠನಂದಧಿಕಂ
ಲೋಕವಿರುದ್ಧಮುಮಂ ಸುರ
ಲೋಕವಿರುದ್ಧಮುಮನಿರದೆ ನೆಗಟ್ಟುದಱಿಂದಂ ೬೬

ಖಳನೆಂದು ತನ್ನ ಪದದೊಳ್
ನಿಲಿಸದೊಡಂ ತಂದೆ ಮಗುಟ್ಟೆ ಮುಖ್ಯತೆಯಿವನೊಳ್
ನೆಲಸಿರ್ದುದು ನಿಯತಿಃ ಕೇ
ನ ಲಂಘ್ಯತೇಯೆಂಬ ನೀತಿ ಸಂಭವಿಸುವಿನಂ ೬೭

ಸಿರಿಯುಂ ಪ್ರಭುತ್ವಮುಂ ಸ
ಚ್ಚರಿತಂಗಾದಂದು ತನಗಮಾಶ್ರಿತರ್ಗಮಿಹಂ
ಪರಸುಖದಾಯಕಮುಟ್ದಂ
ದೆರಡುಂ ಬಹುದುಃಖಜನಕಮೆನಿಕುಮಮೋಘಂ ೬೮

ವಂ॥ ಎಂದಿಂತನೇಕರುಮನೇಕಪ್ರಕಾರದಿಂ ತನ್ನ ದೌರ್ಜನ್ಯದ ಮಾತಂ ನುಡಿವಿನ ಮಾತಂ ಸ್ವೀಕೃತಾಪನಯಾನೀಕನೇಕಪ್ರಭುವಾಗಿರೆ

ಉ॥ ಧೂರ್ತಜನಂ ನಿಜವ್ಯಸನಮಂ ಪರಿತರ್ಪಿಸಲೆಂದಧರ್ಮದೊಳ್
ವರ್ತಿಸುವಂತು ಯೋಜಿಸುಗುಮಾಳ್ದರನೆಂದೊಡವಂ ಸ್ವಭಾವದಿಂ
ಕೂರ್ತಪನೀತಿಯೊಳ್ ನೆಗಟುತಿರ್ದೊಡೆ ನಾಗರಕಂ ವಿಟಂ ಮೃಷಾ
ಮೂರ್ತಿ ವಿದೂಷಕಂ ಪದೆದು ಪೊರ್ದದೆ ಮಾಣ್ಗುಮೆ ಪೀಠಮರ್ದಕಂ ೬೯

ಕಂ॥ ಬೆಸನಿಗಳುಮಧರ್ಮದೊಳೊಸೆ
ದೆಸಗುವರೆ ಪಲಂಬರದಱಿನವಱೊಳ್ ನೆಗಟ್ವಂ
ಗೆ ಸಹಾಯರಾಗದಿರ್ಪರೆ
ನಿಸದಂ ಧರ್ಮದೊಳೆ ನೆಗಟ್ವವಂಗಸಹಾಯರ್ ೭೦

ವ॥ ಎಂಬಂತಾ ದುಷ್ಟಚತುಷ್ಟಯರಾ ದುರಾತ್ಮನ ಚತುರ್ಗತಿಭ್ರಮಣಕಾರಣಮಪ್ಪ ಚತುಷ್ಕಷಾಯದಂತೆ ಸಹಾಯರಾಗಿ ಮೂಗಿನೊಳುಟ್ವವಂಗೆ ಕುಟುವಂ ಕುಡುವಂತೆ ವಾತ್ಸ್ಯಾಯನಾದಿ ಕಾಮಕಳಾಶಾಸ್ತ್ರಮಂ ಕಲಿಸೆ

ಕಂ॥ ವ್ಯಸನಂ ಜೂದಿನೊಳೆ ರತಿ
ವ್ಯಸನಂ ಪರದಾರಗಮನದೊಳ್ ನಿಜದಾನ
ವ್ಯಸನಮಸಜ್ಜನರೊಳೆ ಪಸ
ರಿಸಿತು ಖಳಾನ್ವಿತರ್ಗೆ ಸದ್ಗುಣಂ ಸಮನಿಕುಮೇ ೭೧

ಕಂ॥ ನಂಟರ್ ಕಿತವರೆ ಜೂದಿನ
ದೀಂಟೆಯೆ ನೆಲಸಿರ್ಪ ತಾಣಮನ್ಯಾಂಗನೆಯುಂ
ಕಂಟಿಸದೆ ತಂದು ಕೂಡುವ
ಕುಂಟಣಿಗಳವಂಗೆ ಮಾನ್ಯರಿನ್ನೇವೇೞ್ವಿಂ ೭೨

ನೋಡುವೊಡವನೇಕಾಂತದೊ
ಳಾಡುವೊಡದು ಪಾರದರಮೆ ದಿಟಮೆಲ್ಲರ ಮುಂ
ತಾಡುವೊಡೆಜೋಡೆಯೆನೆ ಮೆ
ಯ್ಮಾಡಿದನೀ ತೆಱದೆ ಪಾತಕಂ ಪಾತಕಮಂ ೭೩

ಸಂದೆಯಮಿಲ್ಲದೆ ನಿಲ್ಲದೆ
ಮುಂದೀ ವಿಧಿ ತನಗುಮಕ್ಕುಮೆಂದಱಿಪುವವೋಲ್
ಕುಂದಱಿಯದೆ ಪೆಱವೆಣ್ಗಳ
ಮುಂದಲೆಯಂ ಕೊಯ್ವನಂತವಂ ಕಾಮಾಂಧಂ ೭೪

ಮದಯುತನನ್ಯವಧೂನಿವ
ಹದ ಮೆಯ್ಯೊಳ್ ದುರ್ಯಶಃಪ್ರಶಸ್ತಿಯ ತೆಱದಿಂ
ಪುದಿದಿರೆ ವಿರಚಿಸುವಂ ನಖ
ಪದಮಂ ನಿಜಪದವಿನಾಶಮಂ ಪ್ರಕಟಿಪುದಂ ೭೫

ವ॥ ಜನನಾಥಪ್ರಿಯಮಪ್ಪನರ್ಘ್ಯಮಣಿಭೂಷಾವ್ರಾತಮಂ ತೊಟ್ಟು ವ
ಸ್ತ್ರನಿಕಾಯಂಗಳನುಟ್ಟು ವಾಹಮನಲಂಪಿಂದೇಱಿ ವಾರಾಂಗನಾ
ಜನಮಂ ಭೋಗಿಸಿ ಮಾಣದಾ ಕುಮತಿ ಗಂಡಸ್ಯೋಪರಿ ಸ್ಫೋಟಮೆಂ
ಬ ನಯಜ್ಞೋಕ್ತಿಯನಾಂತು ನಾದಿನಿಯೊಳಂ ಸಂಸಕ್ತಿಯಂ ಮಾಡಿದಂ ೭೬

ಕಂ॥ ವಾರುಣಿಯವಂಗೆ ಮದಮಂ
ತಾರಳೆ ನೆರೆದಿರ್ದುಮಸಮ ಲಾವಣ್ಯಸುಧಾ
ಧಾರೆ ವಸುಂಧರೆ ತಂದಳ್
ದೂರದೊಳಿರ್ದುಂ ಗಡಿನ್ನವಘಟಿತಮೊಳವೇ ೭೭

ಸಿಂಧುರಬಂಧುರಗತಿಯ ವ
ಸುಂಧರೆಯ ವಿಳಾಸವಿಭ್ರಮಂ ಮನಮಂ ನಿ
ರ್ಬಂಧದಿನಲೆಯೆ ಲತಾಂತಶ
ರಂ ಧೃತಿಯಂ ತೂಳ್ದೆ ತಾಳ್ದಿದಂ ವಿಕಳತೆಯಂ ೭೮

ವ॥ ಅಂತು ವಿಕಳನಾಗಿ

ಮ॥ ಅಸಿಧಾರಾಗ್ಯಹಮಿಂದುಕಾಂತವಿಳಸದ್ಧಾರಾಗೃಹಂ ಶಸ್ತ್ರಶ
ಯ್ಯೆ ಸಮುತ್ಫುಲ್ಲಲತಾಂತಶಯ್ಯೆ ಮದನೋಗ್ರಾಗ್ನೀಂಧನಂ ಚಂದನಂ

ನಿಸದಂ ನಂಜಿನ ಗಾಳಿ ಶೀತಳತೆಯಂ ತಾಳ್ದಿರ್ದ ತೆಂಗಾಳಿಯೆಂ
ದು ಸರೋಜಾಸ್ಯೆಯ ಚಿಂತೆಯಿಂದೆ ಪಿರಿದುಂ ವಿಭ್ರಾಂತಿಯಂ ತಾಳ್ದಿದಂ ೭೯

ವ॥ ಅಂತು ದುಃಖಿತೇ ಮನಸಿ ಸರ್ವಮಸಹ್ಯಮೆಂಬೀ ನುಡಿಯೆ ದಿಟಮಾಗೆ

ಮ॥ ಮನದಿಂದಂ ಧೃತಿ ದೇಹದಿಂದೆ ಪಸಿವುಂ ನೀರಟ್ಟೆಯುಂ ನಿದ್ರೆ ಲೋ
ಚನದಿಂ ಪಿಂಗೆ ಮನೋಭವಾಗ್ನಿ ತನುವಂ ದಾವಾಗ್ನಿವೋಲುರ್ವೆ ನಂ
ದನಮಂ ಚಂದನಮಂ ಸರೋಜವನಮಂ ಶೈತ್ಯೋರುಧಾರಾನಿಕೇ
ತನಮಂ ಪೊರ್ದುವನುಣ್ಮಿ ಪೊಣ್ಮಿದ ವಿಯೋಗೋದ್ವೇಗದಿಂದೇಗಳುಂ ೮೦

ಉ॥ ಆವಳ ರೂಪುಮಾವಳ ವಿಳಾಸಮುಮಾವಳ ಕಾಂತಿಯೊಳ್ಪುಮುಂ
ತಾವಳ ಸೋಂಕುಮಾವಳನುರಾಗಮುಮಾವಳ ಜಾಣುಮಾವಳಾ
ಭಾವಮುಮಾವಳೊಳ್ನುಡಿಯುಮಾವಳ ಯೌವನಮಂ ಮನಕ್ಕೆ ರಾ
ಜೀವನಿಭಾಸ್ಯೆ ಬಂದಿರೆ ವಸುಂಧರೆ ಬಾರವೆಯಾ ದುರಾತ್ಮನಾ ೮೧

ವ॥ ಅಂತವನೆಂತುಂ ನಿಜಾಂತರಂಗಮಂ ಸಂತಯ್ಸಲಾಱದೆ ತನ್ನ ಮನದನ್ನನಪ್ಪ ಕೆಳೆಯನಂ ಕರೆದು

ಚಂ॥ ಪ್ರಿಯ ನಿನಗೆನ್ನವಸ್ಥೆಯನೆ ಪೇೞ್ವೊಡೆ ಚಂದನದಣ್ಪನೊಲ್ಲದಾ
ಕೆಯ ಕುಚಲಿಪ್ತಚಂದನಮನಲ್ಲದೆ ಮೆಯ್ ಮಿಗೆ ಕೇಳಲೊಲ್ಲದಾ
ಕೆಯ ನುಡಿಯಿಂಪನಲ್ಲದೆ ಪಿಕಸ್ವನಮಂ ಕಿವಿ ನೋಡಲೊಲ್ಲದೆ
ನ್ನಯ ನಯನಂ ವಸುಂಧರೆಯ ಚಾರುಮುಖೇಂದುವನಲ್ಲದಿಂದುವಂ ೮೨

ಕಂ॥ ಕಳಹಂಸಲಲಿತಗತಿಯಂ
ಕಳಹಂಸಕ ನೆರಪು ನೆರಪದಿರ್ದೊಡೆ ಕೇಳೀ
ಕಳಹಂಸಚಕ್ರಸಮ್ಮದ
ಕಳಹಂಸಮೆನಿಪ ಸರಂ ದವಾಗ್ನಿಯ ಪಸರಂ ೮೩

ಉ॥ ಬಾಲೆಯ ಬಾಹುಶಾಖೆಗೆ ಮೃಣಾಳಮನಾನನಕಂಬುಜಾತಮಂ
ಲೋಲವಿಲೋಚನಕ್ಕೆ ನವಕೈರವಮಂ ಕುಟಿಳಾಳಕಕ್ಕೆ ಭೃಂ
ಗಾಳಿಯನಿಂಚರಕ್ಕೆ ಪಿಕನಿಸ್ವನಮಂ ಸರಿಮಾಡಿ ತಮ್ಮನಾ
ನೇಳಿಪೆನೆಂಬುದರ್ಕನಗಿವಿತ್ತವುವುತ್ಕಟಮಾದ ಖೇದಮಂ ೮೪

ವ॥ ಎಂದಿಂತುರಿವರಿವ ವಿರಹರಹಸ್ಯಮಂ ಪ್ರಿಯವಯಸ್ಯಂಗಱಿಪಿದೊಡಾತನಿಂತೆಂದಂ

ಕಂ॥ ಪರಿಭಾವಿಸೆ ತಮಗಮಗೋ
ಚರಮನುಪಾಯಪ್ರವೀಣರಳವಡಿಪರ್ ಗೋ
ಚರಮೆನಿಪ ಕಾರ್ಯಮಿದನಾಂ
ತ್ವರಿತಂ ನಿನಗಾಗುಮಾೞ್ಪುದಾವುದು ಗಹನಂ ೮೫

ಎನಗಿನಿತು ದೆವಸಮಱಿಪದೆ
ನಿನಗಿನಿತಾಯಾಸಮಾದುದಲ್ಲದೆ ಪೇೞಾ

ವನಿತೆಯನೀಗಳೇ ತಂದಾಂ
ಮನೆದೊಟ್ಟಿಂ ಮಾಡಿ ಕುಡುವೆನುೞಿಯದವಳಲಂ ೮೬

ವ॥ ಎಂದು ಸಂತೋಷಂಬಡೆ ನುಡಿದು ಕಳಹಂಸಂ ಕಳಹಂಸಗಮನೆಯಪ್ಪ ವಸುಂಧರೆಯ ಸಮೀಪಕ್ಕೆ ವಂದು ನಿಮ್ಮ ಭಾವನುಣ್ಮಿದತನುಪರಿತಾಪದಿಂ ಬೇಸಗೆಯ ಬಿಸಿಲೆಸಕದಿಂ ಬಱಿವಱಿಬತ್ತಿದ ಕೆಱೆಯ ಕಮಠನಂತೆ ಕಮಠಂ ಮಮ್ಮಲಮಱುಗುತ್ತುಮಿರ್ದಪನೆಂಬುದುಂ ಬೆಗಡುಗೊಂಡೀಗಳಿಂತೆನ್ನನೊಡಗೊಂಡು ಪೋಗೆಂದೊಡಾತನಿಂದುಮುಖಿಯನಂದಳಮ ನೇಱಿಸಿಕೊಂಡು ಡೋಳಾಯಮಾನಮಾನಸನುಂ ಕುಸುಮಿತಲತಾಂತಾಗಾರ ಲೀಲೋಪಕಂಠದೊಳುತ್ಕಂಠತೆಯಿಂ ತನ್ನ ಬರ್ಪ ಬಟ್ಟೆಯತ್ತಲೆ ದತ್ತದೃಷ್ಟಿಯಾಗಿರ್ದ ಕೆಳೆಯನ ಕೆಲಕ್ಕೆ ತಂದೊಡನೆ ಬಂದಂಗರಕ್ಕರೆಲ್ಲರುಮಂ ಮೊಱಗೆ ನಿಲಿಸಿಯೊಳಗಣ್ಗೊರ್ವಳನೆ ಕಳಿಪುವುದುಮಾಕೆಯಾ ಕಮಠನೆಯ್ದೆವಂದಿಂತೆಂದಳ್

ಕಂ॥ ಒಗೆದೊಡೆ ರುಜೆ ನಿನಗೆಮ್ಮ
ತ್ತೆಗಮೆಮ್ಮಕ್ಕಂಗಮೆನಗಮಱಿಪದೆ ನೀನು
ಬ್ಬೆಗದಿಂ ಪ್ರವಾಸಿಗನವೋ
ಲಗಲದೆ ವನದೊಳಗೆ ನಿಲ್ವುದನುಚಿತಮಲ್ತೇ ೮೭

ಕಳಹಂಸಕನಱಿಪಿದೊಡೀ
ಗಳಱಿದೆನೀ ರೋಗಮಾವುದಾವನೊ ವೈದ್ಯಂ
ತಳರದೆ ನೋಡುವನೆನಿತಾ
ಯ್ತೊ ಲಂಘನಂ ಯೋಗಮಾವುದೀ ರುಜೆಗಱಿಪಿಂ ೮೮

ವ॥ ಅಂತಾ ಕಾಂತೆ ತನ್ನ ಋಜುಸ್ವಭಾವದಿಂ ನುಡಿದೊಡಾ ವಕ್ರಸ್ವಭಾವಂ

ಕಂ॥ ಶ್ಲೇಷಾರ್ಥಿಯವಳ ನುಡಿಯಂ
ಶ್ಲೇಷಮನಭಿರೂಪರೂಪಮಂ ಬಯಸುವವಂ
ತೋಷಕರರೂಪಕಮನಘ
ಪೋಷಕನೀ ತೆಱದೆ ಮಾಡಿ ಧೂರ್ತಂ ನುಡಿದಂ ೮೯

ಕುವಳಯದಳಲೋಚನೆ ನಿ
ನ್ನ ವಚನಮಿದು ಸತ್ಯಮಲ್ತೆ ಪರಿಭಾವಿಪೊಡಾಂ
ಭವದೀಯವಿರಹದಿಂದಂ
ಪ್ರವಾಸಿಗನುಮಾದೆನಿಂತು ವನವಾಸಿಗನುಂ ೯೦

ರೋಗಂ ನಿನ್ನ ವಿಯೋಗಮೆ
ಯಾಗಮನಮೆ ವೈದ್ಯನಿಂದುಚಂದನ ಹಿಮಧಾ
ರಾಗೃಹಲಂಘನಮಾದುದು
ಯೋಗಂ ಸಂಯೋಗಮಿಾ ರುಜೆಗೆ ಪೆಱತುಂಟೇ ೯೧

ಎನಗಾದ ರುಜೆಗೆ ನಿನ್ನೊಂ
ದು ನೋಟಮೆಂಬ ಮರ್ದಿನಿಂದಮಲ್ಲದೆ ವಿಚ್ಛೇ
ದನಮಿಲ್ಲಂತೆ ಸುಹೃದ್ದ
ರ್ಶನಮೌಷಧಮೆಂಬ ಸೂಕ್ತಿಯುಂಟಪ್ಪುದಱಿಂ ೯೨

ಚಂ॥ ಹಿಮರುಚಿಯಂ ಮುಖೇಂದು ಲತೆಯಂ ತನು ಚಂದನಮಂದರಸ್ಮಿತಂ
ಕಮಳಮನಂಘ್ರಿ ಕುಂದಕುಳಮಂ ದಶನಾಳಿ ಮೃಣಾಳಮಂ ಭುಜಂ
ಕುಮುದಮನಕ್ಷಿಗಳ್ ಪುಳಿನಮಂ ಜಘನಂ ಗೆಲೆವಂದುವಂಗತಾ
ಪಮನುಟಿದಂತಿರೆಂತು ಕಳೆದಪ್ಪುವೊ ಸೋಂಕಲೊಡಂ ತಳೋದರೀ ೯೩

ಕಂ॥ ಎಂದು ಮನದಳಿಪನಱಿಪೆ ಖ
ಳಂ ದೃಢಘನರವಮನಾಲಿಸಿದ ಹಂಸಿಯಿದೆಂ
ಬಂದದೆರ್ದೆಗೆಟ್ಟು ಕೋಗಿಲೆ
ಯಂದದೆ ವಧು ಮೂಗುವಟ್ಟು ವಿಸ್ಮಿತೆಯಾದಳ್ ೯೪

ವ॥ ಅಂತು ವಿಸ್ಮಯಾಕ್ರಾಂತಸ್ವಾಂತೆಯಾಗಿ

ಕಂ॥ ಈ ತೆಱದೆ ನುಡಿದು ತನ್ನಯ
ಚೇತೋವೃತ್ತಿಯನೆ ಧೂರ್ತನಱಿದಪನೆಂಬೀ
ಭೀತಿಯೊಳೆ ಬಗೆಯನೊಪ್ಪಿಸ
ದಾ ತರುಣಿಯವಂಗೆ ಕೃತಕದಿಂದಿಂತೆಂದಳ್ ೯೫

ಪೊಲ್ಲದುದಂ ಬಗೆದೈ ನಿನ
ಗಲ್ಲದುದಂ ನೆಗೞ್ದೆ ನಮ್ಮ ಕುಲದುನ್ನತಿ ಮೇ
ಗಿಲ್ಲದಪವಾದ ಭರದಿಂ
ನಿಲ್ಲದೆ ಕುಸಿದಪ್ಪುದುೞಿವುದಸದಾಗ್ರಹಮಂ ೯೬

ಎಂದುಚಿತಮನುಸಿರ್ದೊಡೆಯದ
ನೊಂದುಮನವಧರಿಸದವಳನೊಲಿಸುವ ಬಗೆಯಂ
ತಂದಂ ಕಾತರನಂತೆ ದ
ಲೆಂದುಮದೇಂ ಮುಂದುಗಾಣ್ಬರೇ ಕಾಮಾಂಧರ್ ೯೭

ಪೆಱದೆಗೆದ ಬಾಣಮಪ್ಪುದು
ನೇಱಿ ನಡುವಂತವನ ಮನಮನಾಕೆಯ ಬಾಣಂ
ಪೆಱದೆಗೆದುದು ನೇಱಿ ನಟ್ಟುದು
ಪೆಱತೇಂ ವಾಮೋರುಧರ್ಮಗುಣಸಮ್ಮಿಳಿತಂ ೯೮

ಆವೆಡೆ ದುರ್ಗಮಮಲ್ಲಿಯೆ
ಭಾವಭವಂ ಬಟ್ಟೆಗಳ್ವ ಕಳ್ಳನ ತೆಱದಿಂ

ದೋವೋವೋ ಮೇಲ್ವಾಯ್ದಿಸು
ತೋವದೆ ಧೃತಿಗೆಡಿಪನಾರುಮಮಂ ಕ್ರೂರಾತ್ಮಂ ೯೯

ವ॥ ಅಂತವಳೆಱಗಿಯುಮೆಱಗದಂತೆ ಬಿಡೆ ಬೀಸಿದ ನುಡಿಯೆ ತನ್ನ ವಿರಹಾಗ್ನಿಯ ಸುದ್ದಮುರಿಸಲ್ ಬಿಡದೆ ಬೀಸಿದ ಗಾಳಿಯಂತಾಗೆ ಕಂತುಶರಮಂತರಂಗಮಮಂ ತಾಗೆ ಬೇಳಾಗಿ ಮತ್ತಮಿಂತೆಂದಂ

ಕಂ॥ ಅಂಬುರುಹವದನೆ ಮನಸಿಜ
ನಂಬಿನ ನೆಱೆಯೇೞು ಮುಚ್ಚುವೊಡೆ ಕಪ್ಪುರದಿಂ
ದಂ ಬೆರಸಿ ಮಿಸುಪ ನಿನ್ನಯ
ತಂಬುಲದೀ ಕವಳದಿಂದೆ ಮುಚ್ಚುಗುಮಲ್ತೇ ೧೦೦

ವ॥ ಅಂತು ಧೈರ್ಯಂಗೆಟ್ಟು ಬಾಯ್ಬಿಟ್ಟು

ಚಂ॥ ಬಿರಿಯಿಸಿ ಬೇಂಟದೊಳ್ ಮನಮದಾಟಿಸೆಯುಂ ಮನಮಿಾಯದಿರ್ದುಮಂ
ತಿರದೆ ಬಱಿಕ್ಕಮಾ ಖಳನ ಲಲ್ಲೆಗೆ ತಾನೊಳಗಾದಳಾ ವಸುಂ
ಧರೆ ಮತಿಗೆಟ್ಟು ನೀಚಪಥವರ್ತಿನಿ ಮುನ್ನೆ ವಿರುದ್ಧಮಾದುದಂ
ಪರಿವವೊಲುದ್ಘಸೇತುವನೆ ಮಿಾಱಿ ನದೀಜಲಮಾತ್ತವೇಗದಿಂ ೧೦೧

ಕಂ॥ ಚಿರವಿರಹದಿಂದೆ ಪೋಕುಂ
ತರುಣೀಜನದೊಲ್ಮೆಯಲ್ಲದಂದೇಕೆ ವಸುಂ
ಧರೆ ಮರುಭೂತಿಯೊಳೊದವಿದ
ಪರಮಪ್ರೀತಿಯನೆ ಮಱೆದು ಮೋಹಂಗೊಂಡಳ್ ೧೦೨

ಆಗಳೆ ಪೆಱತಿನ ಕರಸಂ
ಯೋಗಂ ಸಮನಿಸೆ ಸಮಗ್ರಮೆನಿಸಿಯುಮಬಳಾ
ರಾಗಂ ಪೊರೆದ ಹರಿದ್ರಾ
ರಾಗದವೋಲಿರದೆ ಪಾಱಿಪೋಕುಂ ಕ್ಷಣದಿಂ ೧೦೩

ಉ॥ ಬೂದಿಯ ಬೊಟ್ಟು ಬೀದಿಯ ಸೊಡರ್ ವನಿತಾಜನದೊಲ್ಮೆಯಲ್ಲದಂ
ದಾ ದೊರೆವೆತ್ತ ವಲ್ಲಭನನೀಕ್ಷಿಸದಾ ಖಳನೊಂದು ಲಲ್ಲೆಗಂ
ತಾದಮ ತೂಂಕಡಿಪ್ಪವರನೊಪ್ಪುವ ಪಾಸಿನ ಮೇಲೆ ನೂಂಕಿದಂ
ತಾದುದೆನಿಪ್ಪಿನಂ ಸಲೆ ವಸುಂಧರೆ ತನ್ನಯ ಚಿತ್ತಮಿಾವಳೇ ೧೦೪

ಕಂ॥ ತರುಣಿ ಗಡ ಸಕಳ ಸುಖಪರಿ
ಕರೆ ಗಡ ವಿರಹಿಣಿ ಗಡಳಿಮಿಳಿತ ಕುಸುಮ ಮನೋ
ಹರಲತೆ ಗಡಲ್ಲಿ ನವವಯ
ನೆರೆವಂ ಗಡ ನೆರೆಯದಾಕೆಯೇಂ ಸೈರಿಪಳೇ ೧೦೫

ತಱಗೆಲೆ ತೆಂಕಣ ಗಾಳಿಯ
ನಱಸದೆ ಬಿಱುಗಾಳಿ ಸೋಂಕಿಯುಂ ಬಱಿಸಲ್ವಂ

ತಱಿಕೆಯ ಪುರುಷನನಬಲೆಯ
ರಱಿಸದೆ ಕಠಿಣನುಮನೆಳಸುವರ್ ಸಂಚಳಿಯರ್ ೧೦೬

ಪೆಱರೊಲ್ಲದೊಡೆಡೆಯಿಲ್ಲದೊ
ಡಱಿಯೆಂ ಕಾಮಿನಿಯರಲ್ಲದಂದೊಲವಂ ಮೇ
ಣಱಿಕೆಯ ಕುಲಮಂ ಕಾಯಲ್
ಮಱೆದುಂ ನೆರೆದಪರೆ ದೋಷದೂಷಿತಮತಿಗಳ್ ೧೦೭

ರುಚಿ ಸಂಧ್ಯಾರುಚಿ ಪೆಂಡಿರ
ಶುಚಿತ್ವಮಚಿರಾಂಶು ಸೂನೃತಂ ಸುರಚಾಪಂ
ರುಚಿರಾಚಾರಂ ಮಾಯಾ
ಪ್ರಚಾರಮಾಯತಿಕೆ ಮಿಕ್ಕ ಮಂಜಿನ ಪುಂಜಂ ೧೦೮

ಸುಗತಮತಕ್ಕೆಣೆಯೆನೆ ಶೌ
ಚಗುಣಂ ಕ್ಷಣಿಕಂ ಸಗರ್ವಚಾರ್ವಾಕಮತ
ಕ್ಕೆ ಗಡೆಣೆಯೆಂದೆನೆ ಪೆಂಡಿರ
ನೆಗಟ್ತೆ ಪರಲೋಕಸೌಖ್ಯಘಾತುಕಮಲ್ತೇ ೧೦೯

ಪತಿಹಿತೆಯರೆನಿಪ ವನಿತೆಯ
ರತಿ ದುರ್ಲಭಮಂದುಮಿಂದುಮಲ್ಲದೆ ಕುಲಟಾ
ತತಿ ಸುಲಭಂ ಸುಸ್ಪರ್ಶಮ
ದತಿ ದುರ್ಲಭಮಂತೆ ಕಾಚದೇಂ ದುರ್ಲಭಮೇ ೧೧೦

ವ॥ ಇಂತಾ ಪಾತಕಿ ಭೂತಳಂ ಪೞಿಯೆಯುಂ ಭೀತಿಯಿಲ್ಲದಾ ಕಾತರನೊಳೆ ಚೇತಃಪ್ರೀತಿಯಂ ಮಾಡೆ

ಕಂ॥ ಕಾಪೞಿಯೆ ಪೞಿಯೆ ಜಗಮವ
ನೇಪೊಟ್ತುಂ ತಾಯ ಪೆಂಡಿತಿಯ ಪೇೞ್ವ ಹಿತಾ
ಳಾಪಮನಾಪ್ತರ ನೀತಿಕ
ಳಾಪಮನುಱದವಳೊಳಾ ಖಳಂ ಮಱೆವಾೞ್ದಂ ೧೧೧

ಡಾಳಂಗಪ್ಪಯಿಸಿದುದು ಬಿ
ಡಾಳಕ್ಕಂ ಪಾಲ ಕಾಪನಿತ್ತವೊಲಾಯ್ತಂ
ದೀ ಲೋಕಮುಲಿಯೆ ನೀತಿನು
ತಾಲೋಕನ ರಹಿತನಹಿತಚರಿತದೆ ನೆಗೞ್ದಂ ೧೧೨

ವ॥ ಅಂತವಂ ತನ್ನ ತಾಯ ಕುಲಸ್ತ್ರೀಯ ಕುಲವೃದ್ಧರ ಬುದ್ಧಿಯೊಳೊಂದುಮಂ ಬಾೞ್ತೆಗೆಯ್ಯದೆ ಧೂರ್ತರ ತನಗಾಪ್ತರಾಗೆಯುದ್ವೃತ್ತನಾಗಿ ನೆಗೞುತ್ತುಮಿರ್ದನನ್ನೆಗಮತ್ತಲಾ ಭೂಪೋತ್ತಮಂ ಪದ್ಮನಗರಮಂ ಪತ್ತೆ ಸಾರ್ದುಬಿಡುವುದುಂ ಕಂಡು ಕಡುಮುಳಿದು ವಜ್ರವೀರನಿಂತೆಂದಂ

ಕಂ॥ ನಡೆದಿದಿರನೆನ್ನ ದೇಶದ
ಗಡಿಯೊಳೆ ಕಾದಲ್ಕೆವೇಟ್ಕುಮದು ಮಾಣ್ದೆನ್ನಿ
ರ್ದೆಡೆಗೆ ಪಗೆ ಬರೆಯುಮಿಂತಾಂ
ಸೆಡೆದೊಳಗಿರ್ದಂದು ನಾಡ ನಗೆಗೆಡೆಯಲ್ತೇ ೧೧೩

ವ॥ ಎಂದು ವಜ್ರವೀರಂ ವೀರಭಟರಂ ಮೊದಲಿಸಿ ಪೊಱಮಟ್ಟು ಕಾದಲೆಂದು ಪರಿಚ್ಛೇದಿಸಿ

ಕಂ॥ ಕರಿ ತುರಗ ರಥ ಪದಾತಿಯ
ಪರಿಸಂಖ್ಯೆಯನಱಿವನಾವನವನೊಡ್ಡುಗಳಂ
ನಿರುತಂ ಪವಣಿಪರಿಲ್ಲೆನೆ
ಪುರಮಂ ಪೊಱಮಟ್ಟು ಧುರದೊಳೊಡ್ಡಿದನಧಟಂ ೧೧೪

ವ॥ ಅದಂ ಕಂಡು

ಕಂ॥ ಕ್ಷೋಣೀಪತಿ ಬರೆ ಜೀವ
ತ್ರಾಣಕ್ಷಮಮೆನಿಪ ದುರ್ಗಮಂ ಪೊಱಮಟ್ಟ
ಕ್ಷೂಣಬಳನಿದಿರ್ಗೆ ಬೀಸುವ
ಡಾಣೆಗೆ ತಲೆಯೊಡ್ಡುವಂತಿರೊಡ್ಡಿದನಲ್ತೇ ೧೧೫

ವ॥ ಎಂದು ತನ್ನನೆಂತುಂ ಸಂತೈಸಲಾಱದ ನಿಜಮಂತ್ರಿಗಳ್ ತಮ್ಮೊಳಗೆ ನುಡಿವಿನಂ ವಜ್ರವೀರಂ ವೀರರಸಾವೇಶದಿಂ ರೋಷಾವೇಶಂ ಕೆಯ್ಗಣ್ಮೆಯುಣ್ಮಿ ಬಂದೊಡ್ಡಿ ನಿಲ್ವುದುಂ ಮುನ್ನಮೆ ತನ್ನ ಬಲಮಂ ಕಾಳೆಗಕ್ಕೆ ತೆಱಪಪ್ಪಂತು ಪೆಱತೆಗೆದೊಡ್ಡಿ ಯರವಿಂದಮಹಾರಾಜನುಂ ಯಮರಾಜನಂತೆ ಯುದ್ಧಸನ್ನದ್ಧನಾಗಿ

ಕಂ॥ ಬೀಸೆ ಬಿಱುಗಾಳಿ ತಮ್ಮೊಳ
ಗಾಸುರಮೆನೆ ತಾಗುವಭ್ರದೊಡ್ಡುಗಳೆನೆ ಕೆ
ಯ್ವಾಸೆ ನೃಪರೊಡ್ಡಿ ರಕ್ತಂ
ಸೂಸುವಿನಂ ತಾಗಿ ಮಚ್ಛಿದರ್ ಕಡುಪಿಂದಂ ೧೧೬

ವ॥ ಆ ಸಮಯದೊಳ್

ಕಂ॥ ನೆಱೆತೆಗೆದಿಸೆ ಸೈಗೋಲರ್
ನೆಱೆಗೋಲುಂ ಪೆಣನುಮೊಡನೆ ಕೆಡೆದುವು ಲೆಕ್ಕಂ
ನೆಱೆದವರನೆ ಜವನಾಳ್ಗಳ್
ಮಱೆಯದೆ ಕೋಲ್ವೊಯ್ದು ಲೆಕ್ಕಿಪಂತೆವೊಲಾಗಳ್ ೧೧೭

ಪೂಣಿಗರೆನಿಸಿದರಱೆಯ
ಪ್ರಾಣದ ಬಿಲ್ದಗೆದ ಬಲ್ಮೆಯಂ ತೋಱುವವೋಲ್
ಬಾಣಂ ನೆಱೆಗೊಳೆ ತೆಗೆದರ್
ಪ್ರಾಣಮನಪಯಪದಿನೆಚ್ಚು ರಿಪುನೃಪಬಲದೊಳ್ ೧೧೮

ಕೋಡುಂ ಬೀಡುಂ ಕಾಣ್ಬುದು
ನಾಡೆಯುಮರಿದೆನಿಸಿ ಬಿಲ್ಲ ಬಲ್ಲಾಳೆಚ್ಚ
ಲ್ಕಾಡಿದುದಡ್ಡಣದೊಡ್ಡ
ಲ್ಕಾಡದೆ ತಾಗಿದುದು ತಾಳಮಂ ಕೊಟ್ಟೆನಸುಂ ೧೧೯

ವ॥ ಅಂತು ನೆಲನುಮನಾಗಸಮುಮಂ ತಾಳಂಗುಟ್ಟಿದಂತೆ ಭಯಂ ಪುಟ್ಟೆ ತಾಳಂಗುಟ್ಟಿಯಸಿಫಟ್ಟನದಿಂ ನೆಟ್ಟನಾಡುವ ವೀರರಟ್ಟೆಯಾಟದೊಡನೆ ರುಧಿರಾಸವಸೇವೆಯಿಂ ಸೋಂಕಿದ ಭೂತಬೇತಾಳಜಾಳಮುಮನಾಡಿಸಿಯವರಾಟಕ್ಕಡ್ಡಂ ಬೀೞ್ವಂತೆ ಬಿೞ್ದಡ್ಡಣದೊಡ್ಡಣಂ ಪಡಲ್ವಡುವುದುಂ

ಕಂ॥ ಖುರಪುಟದ ದೂಳಿಯೇೞ್ವೊ
ಲಿರೆ ಮಿಸುಪಸಿಘಾತದಿಂದೆ ಪೊಱಪೊಣ್ಮೆ ಕರಂ
ಪರಿವಿನಮಸೃಕ್ಪ್ರವಾಹಂ
ಭರದಿಂ ತಾಗಿದುವು ವಾಹಮಾಹವಧರೆಯೊಳ್ ೧೨೦

ಚಂ॥ ಖುರಪುಟಘಾತದುಬ್ಬರಿಪ ದೂಳಿ ದಿಶಾಳಿಯನುರ್ವಿ ಪರ್ವೆ ಮುಂ
ಪರಿಸಿಯಿಸಿದಾ ಸವಾರಿಗಳುದಗ್ರಭುಜಾಸಿಗಳಿಂದಮೊರ್ವರೊ
ರ್ವರನದಟಿಂದೆ ಪೊಯ್ಯೆ ಪೊಱಪೊಣ್ಮಿತನಾಱದೆ ದಾಂಟಲಾಗದು
ದ್ಧುರ ರಣರಂಗದೊಳ್ ಬಱಿಕೆ ನೂಂಕಿದ ವಾಹಮಸೃಕ್ಪ್ರವಾಹಮಂ ೧೨೧

ವ॥ ಅಂತು ಘೋಟಾಯ್ಲರ ಕಾಳೆಗಮುಗುರ್ವುವಡೆಯೆ

ಕಂ॥ ಆವರಿಸಿದ ಸೂನಗೆ ನ
ಟ್ಟೋವದೆ ಬಿೞ್ದವರ ಮೇಲೆ ಪರಿಯೆ ರಥಂ ನೀ
ರಾವಳಿ ಮುಮ್ಮಳಿಯಾದುದು
ಲೋವಿಸರದ ಮೇಲೆ ಭಂಡಿ ಪರಿದಂತಾಗಳ್ ೧೨೨

ವ॥ ಅಂತು ಚಕ್ರಹತಿಯಿಂ ದೋಣಿವೋದ ರಣಕ್ಷೋಣಿಯನಕ್ಷೂಣಬಾಣಘಾತದಿಂ ಹತಮಾದ ಹಯದ ಸಾರಥಿಗಳ ರಥಿಗಳಟ್ಟೆಗಳೆಂಬ ಬೆಟ್ಟುಗಳಿಂ ಪೂೞ್ದು ಸಮತಳಂ ಮಾಡಿಯಾಡುವ ಮರುಳ ತಂಡದ ಮನೋರಥಮಂ ತೀರ್ಚುವ ಮಹಾರಥರ ಸಮರಂ ಕರಮಾಸುರಮಾಗೆ

ಕಂ॥ ಕ್ರೋಧಯುತರ್ ಮದಜಳಧಾ
ರಾಧರಮಂ ವಿಜಿತವಿಳಯಧಾರಾಧರಮಂ
ಯೋಧರ ಶರದಿಂ ಮುಂಚ
ಲ್ಕಾಧೋರಣರಣೆದು ನೂಂಕಿದರ್ ವಾರಣಮಂ ೧೨೩

ವಾರಣದ ಬಿದು ಪಿಸುಟ್ದಾ
ಧೋರಣನಿರದುರುಳೆ ಬಿಸುಗೆ ರಿಪುನೃಪಕಾಂತಾ

ದಾರಾಭರಣದ ಬಿಸುಗೆವೊ
ಲೋರಂತಿರೆ ಕಟಿಲೆ ಭರದಿನೆಚ್ಚರ್ ಜೋದರ್ ೧೨೪

ಮದದಿಂದಂ ಕರಿಗಳ್ ದೋ
ರ್ಮದದಿಂದಾರೋಹಕವ್ರಜಂ ಮುಂದಂ ಕಾ
ಣದೆಯುಮಿಱಿದೇರ್ಗಳವು ತ
ಪ್ಪದೆ ನಟ್ಟುವು ನೆಟ್ಟನದ್ಭುತಂ ನೆಗೞ್ವಿನೆಗಂ ೧೨೫

ವ॥ ಅಂತು

ಕಂ॥ ಕರಿ ಕರಿಯೊಳ್ ತೇರ್ ತೇರೊಳ್
ಹರಿ ಹರಿಯೊಳ್ ಪತ್ತಿ ಪತ್ತಿಯೊಳ್ ನೆತ್ತರ ಸು
ಟ್ಟುರೆ ಪುಟ್ಟೆ ತಾಗಿ ತಳ್ತಿಱಿ
ದೆರಡುಂಬಳಮೊಡನೆ ಜಿಡದೆ ಮಡಿದುವು ಧುರದೊಳ್ ೧೨೬

ವ॥ ಅಂತು ಸಮಬಟ್ಟಾಗೆ ಪೆಣದ ಬೆಟ್ಟಾಗೆ ಪಡಲ್ವಡುವ ಪಡೆಯ ಸಾವಿಂಗೇವೈಸಿ

ಕಂ॥ ಎಕ್ಕತುಳದಿಂದೆ ಕಾದುವ
ತಕ್ಕಿಂದಂ ಭೂಪರಿರ್ವರುಂ ದೋರ್ವಳದಿಂ
ದಿಕ್ಕರಿಗಳನವಯವದಿಂ
ಧಿಕ್ಕರಿಪುದನಣೆದು ನೂಂಕಿದರ್ ನಿಜಗಜಮಂ ೧೨೭

ವ॥ ಅಂತು ತಂತಮ್ಮ ದಂತಿಯಂ ನಿಃಶಂಕರಂ ಕುಶದಿಂದವುಂಕಿ ನೂಂಕೆ

ಕಂ॥ ಇರ್ವರ್ಗಂ ಮೆಯ್ಮಱಿದವ
ರಿರ್ವರ ದೋರ್ವಳದಗುರ್ವನೀಕ್ಷಿಸೆ ಕಡುಪಿಂ
ಪೂರ್ವಾದ್ರಿಯೊಳಪರಾದ್ರಿಯೆ
ನಿರ್ವಂದದೆ ತಾಗುವಂತೆ ತಾಗಿದುವು ಗಜಂ ೧೨೮

ವ॥ ಆ ಸಮರಸಮಯದೊಳ್

ಚಂ॥ ಮದಜಳಧಾರೆಯಿಂ ಜಗುನೆ ಪುಟ್ಟಿದ ಪರ್ವತದಂತಗುರ್ವನ
ಪ್ಪಿದುದರವಿಂದರಾಜಗಜಮಾ ಗಜದುನ್ನತದಂತಘಾತದಿಂ
ಮದಮೊಳಸೋರೆ ಶೋಣನದಿ ಪುಟ್ಟಿದ ಪರ್ವತದಂತೆ ತೋಱುತಿ
ರ್ದುದು ಮಿಗೆ ವಜ್ರವೀರನ ಗಜಂ ಪೊಱಪೊಣ್ಮುವಸೃಕ್ಪ್ರವಾಹದಿಂ ೧೨೯

ವ॥ ಅಂತು ವಜ್ರವೀರನ ವಾರಣೇಂದ್ರಂ ನೊಂದು ಬೆಂಗುಡುವುದುಂ ಕಂಡಾತನ ಚಾತುರ್ದಂತಬಳಮೊಂದಾಗಿಯರವಿಂದನರೇಂದ್ರನ ಕರೀಂದ್ರಕ್ಕೆಡೆವೊಕ್ಕು ಬೇಗದಿಂ ತಾಗೆ

ಮ॥ ಕರದಿಂ ದ್ವಾದಶಮಾಯತೋರುರದದಿಂದಷ್ಟಾದಶಂ ಸಪ್ತಮಾ
ಸುರವದ್ವಾಳಧಿಯಿಂ ಪದಪ್ರಕರದಿಂ ನಾಲ್ವತ್ತುನಾಲ್ಕಾ ವಧೋ
ತ್ಕರಮಾಗುತ್ತಿರೆ ಪೊಯ್ದು ಸೀಱ್ದುಗಿದುದೆತ್ತಂ ಮೆಟ್ಟಿ ಕೊಂದತ್ತು ದು
ರ್ಧರವಿದ್ವಿಟ್ಚತುರಂಗಮಂ ನಿಮಿಷದಿಂ ಮತ್ತೇಭಮಾ ಭೂಪನಾ ೧೩೦

ವ॥ ಅಂತುಮಲ್ಲದೆ

ಮಸು॥ ತಲೆಗಳ್ ಕಲ್ಪಟ್ಟೆ ಮಾಂಸಂ ರಿಪುಗಳ ರುಧಿರಂ ತೋಯಮಾಗಿರ್ಪಿನಂ ಮುಂ
ಗೆಲೆ ಪಾದಾಘಾತದಿಂ ಘಟ್ಟಿಸೆ ನಿಹತಗಜಂ ತೋರಗುಂಡಾಗೆ ಬೇಗಂ
ನೆಲಗಟ್ಟಂ ಕಟ್ಟಿ ಜೈತ್ರಧ್ವಜಮನೆ ನಿಱಿಸಲ್ಕೆಂದು ಬಂದಿರ್ದ ಕರ್ಮಾ
ಯಿಲನಂ ಪೋಲ್ತಿರ್ದುದಾ ರಾಜನ ವಿಜಯಗಜಂ ಕಾಲರೂಪಪ್ರಕೋಪಂ ೧೩೧

ವ। ಅಂತು ಕೃತಾಂತನೆ ದಂತಿರೂಪಂ ಕೆಯ್ಕೊಂಡಂತರವಿಂದರಾಜನ ದಂತಿ ವಾಮುಸಕಂ ಮುಸಗಿ ಕೊಲುತ್ತುಂ ಬರೆ ಬಯಲೊಳ್ ನಿತ್ತಱಿಸಲಾಱದಾನೆಯಂ ಬಿಟ್ಟವುಡಲಕ್ಕೆಯಂ ಮಱಿಗೊಂಡರೆಂಬಂತೋಡಿ ಪೋಗಿ ಕೋಂಟೆಯಂ ಮಱಿಗೊಂಡುಂ ಗಂಡನುೞಿಯದೆ ತನ್ನ ಸಮುನ್ನತದುರ್ಗಮಂ ಬಲಿದು ವಜ್ರವೀರಂ ಕಾದಲೆಂದು ನಿಂದುದ ನರವಿಂದಮಹಾರಾಜಂ ಕಂಡು ದೂಳಿಗೋಂಟೆಯಂ ಕೊಂಡಲ್ಲದೆ ನಿಲ್ಲೆನೆಂದದಱ ಪಕ್ಕದೆಡೆಯನೊಳಪೊಕ್ಕು ನೋೞ್ಪಾಗಳ್

ಕಂ॥ ದಸಿಗಳುಱಿ ಬಸಿದ ಸೂಲದ
ಸಸಿಗಳವೋಲಗಱೊಳೆಯ್ದೆ ನಟ್ಟುವು ಮುಗದಂ
ತಸದಳದ ಕುದುರೆಗಂಡಿಗ
ಳೆಸೆದುವದಂ ಮೂಱದೆಂತು ಮೂಣಿಗರೆನಿಪರ್ ೧೩೨

ಅರಿವಿತತಿ ತೆನೆಗೆ ಪಾಯ್ದಪು
ದುರವಣೆಯಿಂದೆಂದದಂ ನಿವಾರಿಪ ಬಗೆಯಿಂ
ನೆರಪಿದ ಕಲ್ಲುಂ ಕವಣೆಯು
ಮಿರೆ ಮಂಚಿಗೆಯಂತಿರೆಸದುವಟ್ಟಳೆ ಪಲವುಂ ೧೩೩

ಜೆಟ್ಟಿಗರ ವೀರರಸಮಂ
ನೆಟ್ಟನೆ ತೂಗಲ್ಕೆ ದಿಟ್ಟಿದೊಲೆಯಿಂದಧಟರ್
ಕಟ್ಟಿದ ಕಟ್ಟಳೆಯೆನಿಸಿದು
ದಿಟ್ಟಳಮನೆ ಕೋಟೆವೞಿಯ ಸೆಱಿಗೆಯ್ದಱಿಗಳ್ ೧೩೪

ತೆನೆಯೆಡೆಯ ಗಾಳಿಗೋಟೆಯ
ತೆನೆಯೆಡೆಯಿಂ ಪೋಪ ರವಿರಥದ ಗಾಲಿಗೆ ಮ
ತ್ತೆನಿಸದೆಣೆಯಾದುದೆಂಬಂ
ತೆನಸುಂ ಸೊಗಯಿಸಿದುವೀಕ್ಷಣಕ್ಕಾ ಕ್ಷಣದೊಳ್ ೧೩೫

ವ॥ ಮತ್ತಂ ತರಂತರಂಗೊಂಡ ಗಂಡಶೈಳಂಗಳನಿೞಿಸೆ ಬೞಿಯೊಳ್ ಸೆಱಿಗೆಯ್ದ ಸೆಲೆಯ ಗುಂಡುಗಳಿಂ ಬಿದಿರ ಪೊದಱಿನಂತೆ ತುಱುಗೆ ನಿಱಿಸಿದ ಡೆಂಕಣಿಯ ಸಬಳಂಗಳಿಂ ಕುಂಜಂಗಳಂತೆ ರಂಜಿಸುವ ಕೊತ್ತಳಂಗಳಿಂ ಶಿಖರಂಗಳಂತೆ ಮುಗಿಲಂ ಮುಟ್ಟುವಟ್ಟಳೆಗಳಿಂದ ಪೂರ್ವಪರ್ವತದಂತಗುರ್ವುವಡೆದರ್ವಿಸುವ ಕೋಂಟೆಯಂ ಬಳಸಿ ಬಂದವರ್ಕವರ್ಕೆ ತಕ್ಕ ಪೆಡ್ಡಿಯಂ ಸಮಕಟ್ಟಿಸಿ ಸಬ್ಬಲಗ್ಗೆಯಂ ಮಾಡಿಸಲುರ್ವೀಶ್ವರ ಕೆಯ್ವೀಸೆ

ಕಂ॥ ಆಲೋಕಿಸೆ ಮೊದಲೊಳ್ ಬಾ
ಯ್ಗಾಳೆಗಮಲ್ಲಿಂ ಬೞಿಕ್ಕನುಕ್ರಮದಿಂ ಕ
ಲ್ಗಾಳೆಗಮುಮಗುರ್ವಿಪ ಬಿ
ಲ್ಗಾಳೆಗಮುಂ ನೆಗೞ್ದುದದ್ಭುತಂ ನೆಗೞ್ವಿನೆಗಂ ೧೩೬

ಕಣೆ ವೀರಕ್ಕೆನಿಸುವ ಬ
ಲ್ಕಣೆಯಣೆಯುಂ ಬೆದಱಿದತ್ತು ಬಿಡೆ ಭೈರವಡೆಂ
ಕಣೆಯಿಂದಂ ಚಿಮ್ಮುತೆ ಡೆಂ
ಕಣೆಯಿಂದಂ ಪಾಯ್ವ ಕಲ್ಗೆ ಭೋಂಕೆನಲಾಗಳ್ ೧೩೭

ಕಲ್ಲೊಳ್ ತಾಗಿದ ಡೆಂಕಣೆ
ಗಲ್ಲೊಡೆದು ಸಿಡಿಲ್ದು ಸಿಡಿಲ ಗಡಣದವೋಲ್ ತ
ಳ್ವಿಲ್ಲದೆ ಪೊಡೆದೊಡೆ ಸೆಡೆದೆರ್ದೆ
ಝುಲ್ಲೆಂದೋಡಿದುದು ನೆರವಿ ನಗೆ ಪುರವರದಾ ೧೩೮

ಉ॥ ದೂರದೊಳಿರ್ದ ಮೋಹರಕೆ ಭೈರವಡೆಂಕಣಿ ಪತ್ತೆ ಸಾರ್ದುದ
ರ್ಕ್ಕಾರಯೆ ಬಿಮ್ಮನುತ್ತಿರದೆ ಚಿಮ್ಮುವ ಡೆಂಕಣಿ ಮತ್ತುಮಂತಱಿಂ
ಸಾರೆಯದರ್ಕೆ ಬಲ್ಗವಣೆಮಿಟ್ಟೆಗಳುಂ ಪುಗುತಿರ್ಪುದರ್ಕೆ ವೀ
ರಾರಿಗೆ ಕೆಯ್ಯ ಕಲ್ಸರಿಗೆ ಪತ್ತುವುದರ್ಕೆಳಸಿತ್ತು ಪೊತ್ತ ಕಲ್ ೧೩೯

ಕಂ॥ ಪುದಿದಸಿಘಟ್ಟನದಿಂ ಪು
ಟ್ಟಿದ ಕಿಡಿಯುಂ ಕವಣೆಗಲ್ಗಳುಂ ಕೆಯ್ಗಲ್ಲುಂ
ಮದವದರಿಪ್ರಳಯದೊಳೊದ
ವಿದ ಕೆಂಡದ ಕಲ್ಲ ಮೞೆಯನನುಕರಿಸಿರ್ಕುಂ ೧೪೦

ಬಿಟ್ಟೇಱಿಂ ನೊಂದನ ಬಾ
ಯ್ವಿಟ್ಟೇಱಿಂದುಗುವ ಖಂಡಮಂ ಕಂಡಭಟಂ
ಬಿಟ್ಟೇಱಿಂದಂ ಸೆಡೆದನೆ
ನೆಟ್ಟನೆ ಮೆಯ್ವತ್ತಿ ಲಗ್ಗೆಯಂ ಮಾೞ್ಪಾಗಳ್ ೧೪೧

ವ॥ ಅಂತು ಮೆಯ್ವತ್ತಿ ಲಗ್ಗೆಯಂ ಮಾೞ್ಪಳ್ಗಳಂ ದುರ್ಗದವರ್ಗಳ್ ನುರ್ಗುಮಾಡೆ ನಾಡೆಯುಂ ಸಿಗ್ಗಾಗಿ ಲಗ್ಗೆಯಂ ತೆಗೆಸಿ ಕಱಿಗೊಂಡು ಪೋಗದೆ ನಿಂದು ಕೋಂಟೆಯಂ ಕೊಳ್ವುಪಾಯಕೋಟಿಯಂ ಚತುರುಪಾಯಪ್ರೌಢನಪ್ಪ ಮರುಭೂತಿ–ಭೂತಳಪತಿಗಱಿಪಿದೊಡಾ ಸಚಿವನೆಂದ ತೆಱದಿಂದೆಲ್ಲಮಂ ನೆಱೆಯೆ ಮಾಡಿಸಿ ಮಱುದೆವಸಂ ದಿವಸಮುಖದೊಳ್ ಪಲವುಮುಖದಿಂ ಗುಮ್ಮನಂ ಸಾರ್ಚಿಯಣ್ಮಿ ಕಾದುವರ ಗುಣ್ಪಂ ಕಿಡಿಸುವಂತಗೞ ಗುಣ್ಪಂ ಕಿಡಿಸಿಯುಂ ಲಗ್ಗೆಯಂ ಪೊಯ್ಸಿಯುಂ ದುರ್ಗದ ನಾಯಕನ ಗರ್ವಪರ್ವತಮಮಂ ನುರ್ಗ್ಗುಮಾಡುವಂತೆ ತೆನೆಗಳಂ ನುರ್ಗುಮಾಡಿಸಿಯುಂ ನೆಲಗನ್ನದಿಂ ನೆಲವಲಕ್ಕೆ ಲಕ್ಕ ತೆಱದಿಂ ಕಾದುವರೆರ್ದೆ ಬಿಕ್ಕನೆ ಬಿರಿಯೆ ಕೋಂಟೆಯಂ ಜರಿಯಿಸಿಯುಂ ಲಗ್ಗೆಯಂ ಮಾಡಿಸೆ

ಕಂ॥ ಎಡಱಿದ ವಿಪಕ್ಷಬಲಮಂ
ಗಿಡಿಗಂ ಕಡುಪಿಂದೆ ಕಿಡಿಸಿ ರಣಬಾಳಕರಂ
ಬಿಡದೆಸೆವ ಗುಮ್ಮನಂಜಿಸಿ
ಪಡೆದುವು ತಂತಮ್ಮ ಸಂಜ್ಞೆಗನ್ವರ್ಥತೆಯಂ ೧೪೨

ಸ್ಸಾರಂ ವೈರಿಗಳಂ ನಿ
ಸ್ಸಾರಂ ಮಾಡಿದುದು ಗುಱುವನೊಳವುಗುವವರಂ
ವೀರರನಧಟಲೆದುದು ನಿ
ರ್ಧಾರಂ ನಿರ್ಧಾಟಿಸಿತ್ತು ವೀರರ ಧೃತಿಯಂ ೧೪೩

ಕಲ್ಲೆರ್ದೆಯಂ ತಾಗಿದೊಡಂ
ಕಲ್ಲೆರ್ದೆಗಳ್ ಬೆದಱಿದಿದಿರನದಿರದೆ ನಡೆದಾ
ಬಿಲ್ಲಾಳ್ಗಳ್ ಭೇಗದಿನಿಂ
ಬಿಲ್ಲಾಳ್ಗಿನ್ನಿಱಿಯಲೆನಿಸಿ ನೆಱಿತೆಗೆದೆಚ್ಚರ್ ೧೪೪

ಗವನಿಯ ಮಱಿಗೊಂಡಿಱಿವಿಸು
ವವರ್ಗಳ ಕೆಯ್ಮಿಕ್ಕು ಮಿಕ್ಕು ತೋಱದವೋಲು
ಕ್ಕೆವಮಿಲ್ಲದೆಚ್ಚು ಪರಿದೇ
ಱುವಾಳ್ಗೆ ಸನ್ನಾಹಮೆನಿಸಿದರ್ ಬಿಲ್ಲಾಳ್ಗಳ್ ೧೪೫

ಬಾಳ್ಗಿತ್ತು ಬಸಿರ್ ತೊಡೆ ನಡು
ತೋಳ್ ಗಂಟಲುರಂ ಕರಂಗಳುಂ ಪಱಿವಿನೆಗಂ
ತೋಳ್ಗಡಿಯರಿಱಿಯೆ ಬಿಡೆ ಬಿ
ಲ್ಲಾಳ್ಗಳ್ ಸರಿಗೇಱಿ ಮಟ್ಗಿದರ್ ಕಡುಪಿಂದಂ ೧೪೬

ಅಳವಿಂದಂ ಪೊಯ್ದೊಡೆ ಕೆ
ಯ್ಗಳ ಬಳೆಗಳ್ ಪೋಗೆ ಪೋಗದಾಂತಿಱಿದರ್ ಕೆ
ಯ್ಗಳ ಬಳೆಗಳ್ ಪೋದೊಡೆ ಪೆ
ಣ್ಗಳಟ್ಟುಗುಂ ಗಂಡರಟ್ಕೆ ಮಾಣ್ಬರೆ ಧುರಮಂ ೧೪೭

ರಯ್ಯಮೆನಿಸಿದುವು ಮಿಗೆ ಮುಂ
ಗೆಯ್ಯೇಱುಂ ಮುಡುಹಿನೇಱುಮುರದೇಱುಮವಾ
ರಯ್ಯೆ ವರವೀರವನಿತೆಗೆ
ಜಯ್ಯನವರ್ ಕೂರ್ತು ಕೊಟ್ಟವೋಲ್ ಕೂರಾಳ್ಗಳ್ ೧೪೮

ಬಿಟ್ಟಱಿಯ ಪೊಯ್ಲಿನಸುವೆಯೊ
ಳಿಟ್ಟರೆದವೊಲಾಗೆ ಮುನ್ನಮೇಱಿದವರ್ ಪಿ
ಮ್ಮೆಟ್ಟದವಂದಿರ ಪೆಣನಂ
ಮೆಟ್ಟಿಯೆ ಬೊಬ್ಬಿಟ್ಟು ಸರಿಗೆವತ್ತಿದರಧಟರ್ ೧೪೯

ಅಳವಳಿಯದೆ ಕೋಟೆಯ ತೆನೆ
ಗಳೊಳೆತ್ತಂ ಸುತ್ತಿ ನೇಲ್ವ ಬಿರುದರ ಕರುಳಂ
ತಳದಿಂ ಪಿಡಿದಡರ್ದರ್ ಬ
ಲ್ಮಿಳಿಯಂ ಪಿಡಿದಡರ್ವ ಮಾಱ್ಕೆಯಿಂ ಮಯ್ಗಲಿಗಳ್ ೧೫೦

ಸರಿಗೆವರಲಾರುಮಿಲ್ಲನೆ
ಸರಿಗೇೞ್ ಬೆಡಂಗುವಡೆದು ಸುಗ್ಗಿಯ ಗಿಳಿಯಂ
ತಿರೆ ತೆನೆಗಳನೆಡಗಲಿಸಿದು
ದುರುಕೋಪಾರುಣಿತತುಂಡಮಥಟರ ತಂಡಂ ೧೫೧

ಮ॥ ಮದವತ್ಕುಂಭಿಯ ಕುಂಭಮಂಡಳಕೆ ಕೋಪಾಟೋಪದಿಂ ಪಾಯ್ವ ಸಿಂ
ಗದವೋಲ್ ಲಂಘಿಸಿ ದುರ್ಗದಟ್ಟಳೆಗೆ ಕಟ್ಟಾಳ್ ಖಟ್ಗದಿಂ ಪೊಯ್ಯೆ ಕೊ
ಳ್ಮಿದುಳುದ್ವೃತ್ತರ ನೆತ್ತಿಯಿಂ ಸುರಿದು ದೇವಾನೀಕಮಾ ಯುದ್ಧಮಂ
ಪದೆಪಿಂದೀಕ್ಷಿಸಿ ಪುಷ್ಪವೃಷ್ಟಿಯನೆ ನೀಡುಂ ಮಾಡಿದಂತೊಪ್ಪುಗುಂ ೧೫೨

ವ॥ ಆ ಸಮಯದೊಳ್

ಕಂ॥ ಖಂಡಂ ಕೆದಱ್ದೊಡಂ ಕೆಯ್
ಕಂಡಿಕೆವೋಗಿರ್ದೊಡಂ ಕರುಳ್ ಸೂಸಿದೊಡಂ
ಕಂಡಿಯ ಬಾಯಿಂ ತೊಲಗದೆ
ಕಂಡರ್ ಕಂಟಳಿಸೆ ಕಾದಿದರ್ ಬಲ್ಗಂಡರ್ ೧೫೩

ಪಲ್ಗಳ್ ಕೆದಱ್ದೊಡಂ ಕಂ
ದಲ್ಗಳ್ ಕನ್ನೆತ್ತರಿರ್ಪಿನಂ ಪುಟ್ಟಿದೊಡಂ
ಬಲ್ಗಂಡಂ ಸೂಸಿದೊಡಂ
ಬಲ್ಗಂಡರ್ ಬೆದಱಿದಿೞ್ದು ಕುೞಿದೞಿಯಾದರ್ ೧೫೪

ವ॥ ಅಂತು ದುರ್ಗಾಧಿಪ ವಾಚಾಳಭೂಪಾಳನ ತೋಳ್ಗಳ್ ಬೀೞ್ವಂತೆ ಬಲ್ಲಾಳ್ಗಳ್ ಬೀೞ್ವುದುಂ ಕೋಂಟೆ ಡಿಳ್ಳಮಾದೊಡಳ್ಳೆರ್ದೆಗಳ್ ಕೆಲಬರ್ ಬಾಳಂ ಬಿಟ್ಟು ಬಾಟಿನಾಸೆಗೆಯ್ಯೆಯುಂ ಬಿಲ್ಲ ಬಲ್ಕಣಿಗಳ್ ಕೆಲರ್ ಕಣೆಯುಮನೀಡಾಡಿ ಕಣೆಯಮಂ ಕೊಂಡಾಡೆಯುಂ ಸಬಳಿಗರ್ ಮಾನಸ ಬಳವೞಿಯೆ ಸಬಳಮಂ ಬಿಸುಡೆಯುಂ ಕುಂತದವರ್ ಪಿಡಿವಡೆದ ಶಕುಂತದಂತೆ ಬಾಯ್ಬಿಡೆಯುಂ ಕೆಲರ್ ಬಲ್ಲಾಳ್ತನಮಂ ಬಿಟ್ಟಾಳ್ತನಮಂ ಪೂಣೆಯುಂ ಶಕ್ತಿಧರರ್ ಶಕ್ತಿಯಂ ಬಿಟ್ಟು ಶಕ್ತಿಯಂ ಮಱುಗೊಳೆಯುಂ ಮಾಸವಾರಿಗಳಾಸವಾರಿಗಳಾಗೆಯುಮಿಂತು ತನ್ನ ತಂತ್ರಂ ಭಯಾಕ್ರಾಂತಸ್ವಾಂತಮಾದುದಂ ಕಂಡು

ಕಂ॥ ಆರಯ್ಯೆ ವಜ್ರವೀರನ
ವೀರರಸಂ ಪಾದರಸದವೋಲರವಿಂದೋ
ರ್ವೀರಮಣನ ತೇಜೋವಿ
ಸ್ತಾರಾಗ್ನಿ ಮುಖಕ್ಕೆ ಪಾಱ್ ಪೋದತ್ತಾಗಳ್ ೧೫೫

ಭ್ರಾಂತೇಂ ವಜ್ರದ ತೆಱದಿಂ
ದಂ ತನ್ನಯ ವೀರಮಾಜಿಯೊಳ್ ತೂಗಿದೊಡ
ತ್ಯಂತಲಘುವಾದುದಱಿನಾ
ಯ್ತಿಂತವನೊಳ್ ವಜ್ರವೀರವೆಸರನ್ವರ್ಥಂ ೧೫೬

ಬಲವಟ್ಟೆಯೆ ವಜ್ರವೀರಂ
ಚಲಮಂ ದೋರ್ವಲಮನುೞಿದು ಜೀವನದೊಳ್ ತ
ನ್ನೊಲವಿರೆ ರಂಜಿಪ ಸಂಜೆಯ
ಬಲದಿಂದಂ ಪಾರ್ವನಂತಿರೊರ್ವನೆ ಸರಿದಂ ೧೫೭

ಬಿಡೆ ಬೆಳಗುವ ಗುಣಮಣಿಗಳ
ನಡಿಗಟ್ಟುವ ತರಳಸತ್ತ್ವನತ್ಯುದ್ವೃತ್ತಂ
ಜಡಧಿಯ ಸೇವ್ಯಂ ಭಂಗಂ
ಬಡುವುದು ನೆಲೆಗಿಡುವುದೆಂಬುದದು ತಕ್ಕುದೆ ದಲ್ ೧೫೮

ವ॥ ಅಂತು ವಜ್ರವೀರಂ ತನ್ನ ಜಸದೆಸಕಂ ಮೆಯ್ಗರೆಯೆ ಮೆಯ್ಗರೆದೋಡಿಪೋಗೆ

ಕಂ॥ ಮಾನಸದೊಳೆಸೆವ ಗುಣಮಭಿ
ಮಾನಂ ಕಿಡೆ ಹರಿಯಿಪಂತೆ ಬಸನಂ ಭಟಸಂ
ತಾನಂ ಕೆಟ್ಟೊಡೆ ನಗರದ
ನಾನಾವಸ್ತುವನೆ ಹರಿಯಿಸಿತ್ತಹಿತಜನಂ ೧೫೯

ಸ್ರ॥ ರಾಮಂ ಮುಂ ಲಂಕೆಯಂ ವಾರಿಧಿಪರಿವೃತಮಂ ಕೋತಿಭಾರಃ ಸಮರ್ಥಾ
ನಾಮೆಂಬೀ ಮಾತ ಮೆಯ್ವೆತ್ತೆಸೆದಿರೆ ತನಗಾಯತ್ತಮಂ ಮಾಡಿದಂತು
ದ್ದಾಮಂಬೆತ್ತಿರ್ದ ವಿದ್ವಿಟ್ಪುರಮನತಿಭರಂಗೆಯ್ದು ತಾಂ ಕಾದಿ ಕೊಂಡಂ
ಸಾಮರ್ಥ್ಯಂ ಧಾತ್ರಿಯೊಳ್ ಬಿತ್ತಿರಿಪಿನಮರವಿಂದಾಹ್ವಯಂ ಕ್ಷೋಣಿಪಾಳಂ ೧೬೦

ಕಂ॥ ಆ ಪದದೊಳಮೆಱಗೆ ನಿಜ
ಶ್ರೀಪದಕಾ ವಜ್ರವೀರತನಯಂ ನಯದಿಂ
ಭೂಪತಿ ಕಾದನದಂತುಟೆ
ಶಾಪಾನುಗ್ರಹಸಮರ್ಥನಲ್ಲದನರಸೇ ೧೬೧

ಉ॥ ಓಡಿಸಿ ವಜ್ರವೀರನ ಕುಲಾಗತಭಾಸುರಕೋಶಮಂ ರಣ
ಕ್ರೀಡನ ಯೋಗ್ಯಭದ್ರಗಜವಾಜಿಗಳಂ ಮದನಂಗೆ ಹರ್ಷಮಂ
ಮಾಡುವ ರೂಪ ಯೌವನ ಕಳಾವಿಳಸದ್ಗಣಿಕಾಜನಂಗಳಂ
ನೋಡಿ ನೃಪಾಳಕಂ ತರಿಸಿಕೊಂಡನಖಂಡಿತಶೌರ್ಯಮಂಡಿತಂ ೧೬೨

ವ॥ ಎಂದು ತನ್ನಂ ಜಗಂ ಪೊಗೞೆ ಪದ್ಮನಗರದೊಳ್ ಗುಣಸದ್ಮನಾ ವಜ್ರವೀರನ ಸುತನಪ್ಪ ಸುವೀರನಂ ನಿಲಿಸಿಯಾತನ ಮನೋರಥಮಂ ಸಲಿಸಿ

ಕಂ॥ ನಿಜರಾಜಧಾನಿಗನ್ವಿತ
ವಿಜಯಂ ಶ್ರೀಧರ್ಮನಂದನಂ ತಾನೆನೆ ಭೂ
ಭುಜನಭಿಮುಖನಾದಂ ತ
ನ್ನ ಜಸಂ ದಶದಿಙ್ಮುಖಕ್ಕೆ ಪಸರಿಸುವಿನೆಗಂ ೧೬೩

ಮಸ್ರ॥ ಲಲಿತಶ್ರೀಪುಂಡರೀಕಂ ಸೊಗಯಿಸೆ ಕುಮುದಂ ಕೊರ್ವೆ ಪುನ್ನಾಗಪತ್ರಾ
ವಳಿ ಚೆಲ್ವಂ ತಾಳ್ದೆ ತೇಜೋರವಿಯೆಸೆಯೆ ಯಶಶ್ಚಾರುಚಂದ್ರಾಂಶು ದಿಙ್ಮಂ
ಡಳಮಂ ತಳ್ಪೊಯ್ಯೆ ಜೈತ್ರೋತ್ಸವಮೆನೆ ಪುರಮಂ ರಾಜನಂದೆಯ್ದೆವಂದಂ
ಕಳಕಂಠೋದ್ಭೂತಗೀತಂ ವಿಬುಧಜನಮನಃಪದ್ಮಿನೀಪದ್ಮಮಿತ್ರಂ ೧೬೪

ಗದ್ಯ

ಇದು ವಿದಿತವಿಬುಧಲೋಕನಾಯಕಾಭಿಪೂಜ್ಯ ವಾಸುಪೂಜ್ಯಜಿನಮುನಿ ಪ್ರಸಾದಾಸಾದಿತ ನಿರ್ಮಳಧರ್ಮ ವಿನುತವಿನೇಯಜನವನಜವನವಿಳಸಿತ ಕವಿಕುಳತಿಳಕಪ್ರಣೂತ ಪಾರ್ಶ್ವನಾಥಪ್ರಣೀತಮಪ್ಪ ಪಾರ್ಶ್ವನಾಥಚರಿತಪುರಾಣದೊಳ್ ಅರವಿಂದಮಹಾರಾಜ ವಿಜಯವರ್ಣನಂ ತೃತೀಯಾಶ್ವಾಸಂ

ಚತುರ್ಥಾಶ್ವಾಸಂ

ಕಂ॥ ಶ್ರೀದಯಿತಂ ಪೊಕ್ಕನಿಳಾ
ಹ್ಲಾದಕರಂ ರತ್ನತೋರಣಾದ್ಯಷ್ಟವಿಧೋ
ತ್ಪಾದಿತಶೋಭಾಕರಮಂ
ಪೌದನಪುರಮಂ ಯಶೋರ್ಥಿ ಕವಿಕುಳತಿಳಕಂ ೧

ವ॥ ಅಂತಖಿಳಭೂತಳನಾಥಸಮೇತಂ ಮಹಾವಿಭೂತಿಯಿಂದರವಿಂದ ಮಹಾರಾಜನಪಗತಗ್ಲಾನಿಯಂ ನಿಜರಾಜಧಾನಿಯಂ ಪೊಕ್ಕು ಸುಖದಿನಿರೆ

ಕಂ॥ ಮರುಭೂತಿಯುಮತಿಶೋಭಾ
ಕರಮಂ ದೃಕ್ಸೌಖ್ಯಕರಮನತಿಶಯಲೀಲಾ
ಕರಮಂ ಪೊಕ್ಕಂ ನಿಜಮಂ
ದಿರಮಂ ಶರದಿಂದುವಿಶದತರಕೀರ್ತಿಯುತಂ ೨

ವ॥ ಅಂತು ಸಕಳ ಸುಖಾವಾಸಮಂ ನಿಜನಿವಾಸಮಂ ಕೂಡೆ ಪೊಕ್ಕು

ಕಂ॥ ಜನನಿಗಮಗ್ರಭವಂಗಂ
ವಿನಯದೆ ಪೊಡೆವಟ್ಟು ಪತಿಯ ಜಯಮಂ ರಿಪುಭೂ
ಪನ ವಸ್ತುವಾಹನಂ ನೆ
ಟ್ಟನಱಿಪೆಯುಂ ತೆಱೆಯೆ ನೆಱಿಯೆ ನಯನಿಧಿ ಪೇೞ್ದಂ ೩

ವ॥ ಅಂತು ಪೇೞ್ದನಂತರ ಪರಿಜನಪರಿವೃತೆಯಾಗಿ ಕೆಯ್ಗೆಯ್ದುಂ ಕೆಯ್ಗೆಯ್ಯದಂತಿರ್ದ ನಿಜಲಲನೆಯ ಕೆಲಕ್ಕೆವರೆ

ಕಂ॥ ಅಳವಿಗಿಡೆ ನೆಗೞ್ದ ದೋಷ
ಕ್ಕೆ ಲಜ್ಜೆಯಿಂ ಬೆಮರುಮೊಡನೆ ಕಂಪನಮುಂ ಬಂ
ದೆಳಸೆ ವಸುಂಧರೆಗದನಾ
ಗಳೊಲವುಗೆತ್ತಾತನೆಯ್ದಿದಂ ಮುದದೊದವಂ ೪

ಲಲನೆಯರ ಚರಿತಮನಿತುಂ
ಪಳಾಳಮದು ದಿಟವೆಗೆತ್ತು ಹರ್ಷಮನನ್ನಂ
ತಳೆದಪನೆಂದೊಡೆಯುಱಿದವ
ರ್ಗಳನಬಲೆಯರಾಳಿಗೊಳ್ವುದೇಂ ವಿಸ್ಮಯಮೇ ೫

ಅಂತು ಕೆಲದೆವಸಮಿರ್ಪುದು
ಮಂತರ್ವರ್ತಿಗಳುದಗ್ರನಪ್ಪಗ್ರಜವೃ
ತ್ತಾಂತಮನಱಿಪಿದೊಡೆ ನಿಜ
ಸ್ವಾಂತದೊಳಿಂತೆಂದು ಚಿಂತಿಸಿದನಾ ಸಚಿವಂ ೬

ಮಡದಿಯರನರ್ಥಮುಳ್ಳೊಡೆ
ಪಡೆಯಲ್ಬರ್ಕುಂ ಸಹೋದರರ್ಕಳನೆನಿತು
ಪಡೆವರೆ ಪೆಂಡಿರ ದೂಸಱಿ
ನೊಡವುಟ್ಟಿದರ್ಗೆಂತು ಮುಳಿಯಲಕ್ಕುಂ ತಕ್ಕಂ ೭

ಎಂದು ನಿಜಪ್ರಿಯೆಯಂ ಪು
ಲ್ಲಿಂದಂ ಕೀೞಾಗಿ ಬಗೆದು ತೊಱೆದುಂ ಮನದೊಳ್
ನೊಂದಪನಗ್ರಜನದಱಿಂ
ದೆಂದೆನುತುಂ ಮುನ್ನಿನಂತೆ ನಡೆಯಿಸುತಿರ್ದಂ ೮

ಅನಿತೊಂದಗ್ರಜನ ನಯ
ಕ್ಕೆನಸುಂ ಮುನಿಯನೆ ನೃಪಾಳಕಂ ಕೇಳಲೊಡಂ
ಜನಿಯಿಕುಮಪಾಯಮಣ್ಣಂ
ಗೆನುತುಂ ಚಿಂತಿಸಿದನೇಂ ಮಹಾತ್ಮನೊ ಸಚಿವಂ ೯

ವ॥ ಅಂತು ಚಿಂತಿಸುತಿರ್ಪುದುಂ ಅಂಜಲಂಜಲ್ವೆಳಗಾದುದು ಎಂಬಂತೆ ಭೂಕಾಂತನಾ ಕಮಠನ ದುರ್ವೃತ್ತವೃತ್ತಾಂತಮನಂತಶ್ಚಾರರಿಂದಂ ತಿಳಿದು ತನ್ನಂ ಬರಿಸೆ ಮರುಭೂತಿ ಬಂದು ಪೊಡೆವಟ್ಟು ಕಟ್ಟುಕಡೆದು ಸಶಂಕಿತನಾಗಿ ಸಿಂಹಾಸನದ ಕೆಲದೊಳ್ ತನಗಿಕ್ಕಿದುಚಿತಾಸನದೊಳ್ ಕುಳ್ಳಿರ್ಪುದುಂ ಸಚಿವಂಗರಸನಿಂತೆಂದಂ

ಕಂ॥ ಏಕಾಂತಮಾಗಿಯುಂ ಮಗು
ೞ್ದೇಕಾಂತಮೆನಿಪ್ಪುದಲ್ತು ನಿಮ್ಮಗ್ರಜನ
ವ್ಯಾಕುಳತೆಯಿಂದೆ ನೆಗೞ್ದುದು
ಲೋಕಾಂತಮದಂ ವಿಚಾರಿಪಂದಱಿಯದರಾರ್ ೧೦

ಆಮಿನಿತು ದೆವಸಮಱಿದುಂ
ನೀಮೆ ನಿಜಾಗ್ರಜನನಱಿದು ನೆಱೆ ತೊಱೆದಪಿರೆಂ
ಬೀ ಮನದೊಳಿರ್ದೆವುಚಿತಮ
ನೇಮಾತಱಿದಪರೆ ಮೋಹವಿಘಟಿತಮತಿಗಳ್ ೧೧

ಮುನ್ನಮೆ ನಿಜಪಿತೃ ನಯಸಂ
ಪನ್ನನನಾಗತಮನಱಿದು ತೊಱೆದವನಂ ನೀ
ಮಿನ್ನೆವರಮಱಿದುಮೊಳಕೊಂ
ಡನ್ನೆಯಮಿದೆ ಸಾಲ್ಪುದಿರಿಸದಿಂ ಪರಿಹರಿಸಿಂ ೧೨

ಎನೆ ಜನಪತಿ ಸಚಿವಂ ಭೂ
ಪನ ಕೋಪಮನಱಿದು ದೇವ ಕೇಳದುದಂ ನೀ
ಮೆನಗೆ ಬೆಸಸುವಿರಿಯಾದೊಡ
ಮನುಕಂಪೆಯಿನಧಿಪ ನೀಂ ವಿಚಾರಿಪುದಿನ್ನುಂ ೧೩

ವ॥ ಎಂಬುದುಂ ಜಗತೀಪತಿ ಮುಗುಳ್ನಗೆ ನಗುತ್ತುಮಿಂತೆಂದಂ

ಕಂ॥ ಮುಚ್ಚುಮಱಿಯಿಲ್ಲದರ್ಕೆ
ಪಚ್ಚು ನಿಜಾಗ್ರಜನ ಧೂರ್ತವೃತ್ತಿಗೆ ನೆಗೞ್ದ
ಮ್ಮಚ್ಚರದಿನೆಂತೊ ನೀಮಿಂ
ಮುಚ್ಚುವಿರೂರುಟ್ಟು ನಾಡು ಮೇಲ್ಕೊಂಡುದುದಂ ೧೪

ವ॥ ಅದಂದಾ ದುರಾಚಾರಂ ವಿಚಾರಗೋಚರಮಲ್ಲದಂತು ನೆಗೞ್ದದಂ ನಾಮೆಂತು ವಿಚಾರಿಸುವಮೆಂದು ಮಱುಮಾತುಗುಡದಂತು ನುಡಿಯೆ ಲಜ್ಜಿತನಾಗಿ ತಲೆಯಂ ಬಾಗಿರೆಯರಸಂ ಮರುಭೂತಿಯ ಮನದ ಕಳಂಕಮಂ ಕಳೆಯಲೆಂದಿಂತೆಂದಂ

ಕಂ॥ ವಿನಯನಿಧಿ ವಿಶ್ವಭೂತಿಗೆ
ಜನಿಯಿಸಿ ನಿಮ್ಮಗ್ರಜಾತನೆನಿಸಿಯವಂ ದು
ರ್ಜನನಾದನಿಂಗಡಲ್ಗಮ
ರ್ದಿನೊಡನೆ ವಿಷಮುದಯಿಪಂದದಿಂದಂ ಕಮಠಂ ೧೫

ಜನನಸ್ಥಾನಮದೊಂದಾ
ದನಿತಱೊಳೆ ಸಮಾನಶೀಲಮಕ್ಕುಮೆ ಜನಕೇಂ
ಜನಿಯಿಸಲಾರ್ತುದೆ ಸಿಡಿಲದು
ಘನಸಂಭವಮೆನಿಸಿ ಹರ್ಷಮಂ ವರ್ಷದವೋಲ್ ೧೬

ವ॥ ಅದು ನಿಮಿತ್ತಮಾ ದುರ್ವೃತ್ತನ ಕೇಡಿಂಗೆ ಅಳಲಲಿಲ್ಲೇಕೆಂದೊಡೆ ಛಿಂದಿ ಬಾಹುಮಸಿ ದುಷ್ಟಮಾತ್ಮನಾಯೆಂಬ ನೀತಿಯಂ ನೀಮಱಿಯದವರಲ್ಲೆಂದು ತನ್ನಂ ಪ್ರತಿಬೋಧಿಸಿದ ನಿಜಸ್ವಾಮಿಪ್ರಸಾದದೊಳಾದ ತೋಷಮುಮಗ್ರಜನ ಕೇಡಿನೊಳಾದ ದೋಷಮುಂ ಮನದೊಳಿರೆ ಪೀಯೂಷಮುಮಂ ಬಡಬಾನಳನುಮನೊಳಕೊಂಡ ಪಯಃಪಯೋಧಿಯಂ ನೆನೆಯಿಸುತ್ತುಂ ಜನಪತಿಯ ನಿಯಮದಿಂ ಮನಮಿಲ್ಲದ ಮನದಿಂ ಮನೆಗೆ ಪೋಪುದುಮಿತ್ತಲ್

ಕಂ॥ ಪರಿಹರಿಸಲ್ ಮರುಭೂತಿಗ
ಮರಿದಾದುದು ರಾಜಯಕ್ಷ್ಮಮನುಭವಿವೈದ್ಯಂ
ಗರಿದಪ್ಪ ತೆಱದೆ ಕಮಠನೊ
ಳರಸನ ರೋಷಂ ಸಮಸ್ತದೋಷಪ್ರಭವಂ ೧೭

ವ॥ ಅಂತರವಿಂದಮಹಾರಾಜನುದ್ದೀಪಿತಕೋಪನಾಗಳೆ ತಳಾಱನಂ ಬರಿಸಿ

ಕಂ॥ ಅತಿಕುಪಿತನಾಗಿಯುಂ ಕ್ಷಿತಿ
ಪತಿ ಯತಿಗಂ ಬ್ರಾಹ್ಮಣಂಗಮಾವುದು ಶಾಸ್ತ್ರೋ

ದಿತದಂಡಮದನೆ ಕಮಠಂ
ಗೆ ತಡೆಯದೆಸಗೆಂದು ಬೆಸಸಿದಂ ನೀತಿವಿದಂ ೧೮

ವ॥ ಅಂತು ವಸುಧೇಶಂ ಬೆಸಸೆ

ಕ॥ ಮರುಭೂತಿಯ ಕೂರ್ಪಿಂಗೋ
ಸರಿಸಿಯೆ ಕಮಠಂಗದೇನುಮಂ ಮಾಡದೆ ಪ
ಲ್ಮೊರೆವವನರಸನ ನಿಯಮವ
ನೆರಡಿಲ್ಲದೆ ಪಡೆದು ತಡೆಯಲೇನಱಿದಪನೇ ೧೯

ವ॥ ಅಂತು ಪಲವು ದೆವಸದಿಂದುದ್ದಂಡನಂ ದಂಡಿಸಲ್ ಪಡೆದೆನೆಂದು ಸಂತಸಮನಾಂತು

ಕಂ॥ ಪುಟ್ಟಿದ ಮುಳಿಸಿಂದಂ ಚೌ
ವಟ್ಟದೆಡೆಗೆ ತಂದು ಕಟ್ಟಿ ಕುಟ್ಟುವೆನೆನುತಂ
ನಿಟ್ಟಿಸಿ ಕಂಡನವಂ ಚೌ
ವಟ್ಟದ ದೀಂಟೆಯೊಳೆ ನಿಂದು ಜೂದಾಡುವನಂ ೨೦

ವ॥ ಅಂತು ನೀಡುಂ ಜೂದಾಡುವ ಕಮಠನಂ ಕಂಡು ತನ್ನಂತರಂಗದೊಳಿಂತೆಂದಂ

ಕಂ॥ ನಿಯಮಮನೀವನ ಸಂಗಂ
ನಿಯತಂ ಶಿಕ್ಷಿಸಲೆವೇಡಿದೆನಗಂ ಮನದೊಳ್
ದಯೆ ಪುಟ್ಟುವಂತೆ ನೆಗಟ್ದನೆ
ನಯಹೀನಂ ಮೆಚ್ಚಿದಂದದಿಂದಂ ನೆಗಟ್ದಿಂ ೨೧

ವ॥ ಆದೊಡಮಿ-ದುರಾಚಾರಪರಿಣತಂ ಮರುಭೂತಿಯ ಮನೆಯೊಳಿರದೀ ಯೆಡೆಯೊಳಿರ್ದನಾಯಾಸಮಂ ಮಾಡಿದನಲ್ಲದಂದಕ್ಷೂಣಗುಣನಿಧಿಯ ದಾಕ್ಷಿಣ್ಯಮನೆಂತುಂ ಮಿಱಲ್ಪಾರದೆಂದಾ ಕ್ರೂರಾತ್ಮನುಂ ತನ್ನ ಚಿತ್ತದೊಳ್ ಬಗೆಯುತ್ತುಮೆಯ್ದೆವಂದು

ಕಂ॥ ನೃಪನೀಯೆ ನಿಯಮಮಂ ದಂ
ಡಪಾಶಿಕಂ ಕಟ್ಟಿ ಕುಟ್ಟಿ ಕಮಠನನವನಂ
ತಪಮಾನಮನೆಯ್ದಿಸಿತ
ನ್ನ ಪೆಸರನನ್ವರ್ಥಮನಿಸಿದಂ ಜನದಿಂದಂ ೨೨

ವ॥ ಅನಿತರ್ಕಲ್ಲಿ ನೆರೆದು ಜೂದಾಡುತಿರ್ದ ಧೂರ್ತಜನಂಗಳೆಲ್ಲಂ ತಮತಮಗೆ ಕಮಠಂಗನಯಪರಂಗೆ ಮುನಿದು

ಕಂ॥ ವನಮಂ ಸುಡುವಗ್ನಿಗೆ ವಾ
ಯು ಸಂಟನದೆ ದೀಪನಾಶಮಂ ಮಾಡುವವೋಲ್
ಘನತೇಜಂ ಕಿಡೆ ಕಮಠಂ
ಗನುಕೂಲಜನಾಳಿಯಾಯ್ತು ತಾಂ ಪ್ರತಿಕೂಲಂ ೨೩

ವ॥ ಅಂತವನ ಘನಶ್ರೀಯಪರ ಸಂಧ್ಯಾಶ್ರೀಯಂದದಿಂ ದೋಷಾಭಿವೃದ್ಧಿಗೆ ಕಾರಣಮಾಗಿ ಪಾಱ್ ಪೋಗೆ ರಾಗಿಜನಂಗಳೊಂದಾಗಿಯುದ್ದಂಡನ ಮಂಡೆಯನೇಱುಬಟ್ಟೆಗಿಱಿದು ಸಗಣದಿನಿಡಿಸುತ್ತುಂ

ಕಂ॥ ಕುಂದಾಗೆ ಗುಣಕೆ ಕಾಮದೊ
ಳೊಂದಿರೆ ಗೋಧರ್ಮಮಿರದೆ ಕೆಱಹಂ ಸೊರೆಯಂ
ತಂದಾ ಚೆಂಡಿಕೆಯೊಳ್ ತರ
ದಿಂದಮವಂಗುಚಿತಮೆನಿಸೆ ಕಟ್ಟಿದರರೆಬರ್ ೨೪

ವ॥ ಅಂತು ಕಟ್ಟಿ ಮಿಟ್ಟೆಯಿಂ ಬೂತುಗಳಿನಾತನ ಮಂಡೆಯನಣೆಯಿಸುತ್ತುಂ

ಕಂ॥ ಮತ್ತಗಜಮೇಱ್ ಬೆಳ್ಗೊಡೆ
ಯೆತ್ತಿಸಿ ಬರುತಿರ್ದ ಬೀದಿಯೊಳ್ ಕಟ್ತೆಯನು
ದ್ವೃತ್ತನನೇಱ್ಸಿ ಹಱಿಮೊಱ
ನೆತ್ತಿಸಿ ಜೀಯೆಂಬ ಜನಮೆ ಚೀಯೆನೆ ತಂದರ್ ೨೫

ಕಿಱ್ದೆಡೆಯಯಶದ ಭವದಿಂ
ತಱಟಾದವೊಲಣೆಯೆ ಬುಗುಟು ನೆಗೆದೊಡೆ ಶಿರದೊಳ್
ತರದಿಂದೆ ತರ್ದು ನೆಗೆದಂ
ತಿರೆ ಪಿರಿದಪಮಾನಮೆಯ್ದಿದಂ ದುಶ್ಚರಿತಂ ೨೬

ಎಟ್ತೆನೊಳೆಣೆಯೆನಿಪಿವನ ನೆ
ಗಟ್ತೆಯದಂ ನೆಱಿಯೆ ಗೆಲ್ದುದೆಂದಱ್ಪುವವೋಲ್
ಕಟ್ತೆಯನೇಱ್ಸೆಯಂತಾ
ಪೊಟ್ತೆಱೊಳೀತಂಗಿದುಚಿತಮೆಂದರ್ ಕೆಲಬರ್ ೨೭

ಹಱಿಮೊಱನಂ ಪಿಡಿಯಿಸೆ ಮುಂ
ದಱ್ಯದಿವಂ ತನ್ನ ವಂಶದೌನ್ನತ್ಯಮನೀ
ತೆಱದಿಂ ನೆಱಿ ಕಿಡಿಸಿದನೆಂ
ದಱ್ಪುವ ತೆಱದಿಂದಮಿರ್ದುದಱ್ವರ ಬಗೆಯೊಳ್ ೨೮

ಬಿಡದಯಶಮೆಂಬ ಕಸದೊಂ
ದೆಡೆಯಿವನೆಂದಱ್ಪುವಂದದಿಂ ಸಗಣದಿನಾ
ರ್ದಿಡುತುಂ ಧೂರ್ತನ ಮಂಡೆಯ
ನಡೆಯುತ್ತುಂ ಪೊಗಟ್ವಿ ವಂದಿಗಳ್ ತೆಗಳುತ್ತುಂ ೨೯

ವ॥ ಅಂತು ಬೆಚ್ಚರಂ ಬೆಂಬೆನ್ನೊಳ್ ಬರೆ ತನ್ನ ನಾದುನಿಯೋಳೀ ಖಳಂ ಮಱಿವಾಟ್ದನ್ಯಾಯವರ್ತಿಯೆಂದು ಡಂಗುರಂಬೊಯ್ಸುತ್ತುಂ ನಾಡಿಂದಮೆತ್ತಿ ಕಳಪುದುಮಾಗಳ್ ಕೆಲರಿಂತೆಂದರ್

ಕಂ॥ ಆ ತಂದೆಗೆ ಪುಟ್ಟಿಯುಮಿಾ
ಖ್ಯಾತನ ಮರುಭೂತಿಯೊಡನೆ ಪುಟ್ಟಿಯುಮಿವನಿಂ
ತೀ ತೆಱದವಸ್ಥೆವಡೆದನ
ನೀತಿಪರಂಗಿನಿತಱಿಂದಮಗ್ಗಳಮಕ್ಕುಂ ೩೦

ಗುಣಹೀನನೆನಿಪ ಕಮಠನ
ಪಣಮುಂ ಕುಲಮುಂ ಮಹೋನ್ನತಿಯುಮದೇಕ
ಕ್ಷಣಮಿರಿಸಲಾಱವದಱಿಂ
ಗುಣಮೆ ಮಹೋನ್ನತಿಗೆ ಕಾರಣಂ ಪೆಱತುಂಟೇ ೩೧

ಪಲರಂ ಬಾಧಿಪ ಪುಲಿಯಂ
ಕೊಲೆ ಸಂತಸಮಪ್ಪ ತೆಱದೆ ಕಮಠನನನಯಾ
ಕಲಿತನನರಸಂ ದಂಡಿಸೆ
ತಲೆದೋಱಿದುದಖಿಳಪುರಜನಕ್ಕನುರಾಗಂ ೩೨

ಪರದಾರಗಮನಪರರೆನಿ
ಪರದಾರ ಮನಕ್ಕೆ ವರ್ಪರದಱಿಂದವನಂ
ಕರಮೆ ಪರಿಭವಿಸೆ ವಿಬುಧೋ
ತ್ಕರಮೆ ಸುಖಂಬಡೆಮುದುಱಿದವರ್ ಪಡೆಯದರಾರ್ ೩೩

ವ॥ ಅಂತು ಪರಿಭವಿಸಿ ಪುರದಿಂ ಪೊಱಮಡಿಸಿ ಕಳೆಯೆ

ಕಂ॥ ಭೂತಾದ್ರಿಗೆ ಶೋಭಾಪರಿ
ಭೂತಾದ್ರಿಗೆ ಚಂದ್ರಕಾಂತನಿರ್ಮಳಜಳಸಂ
ಭೂತಾದ್ರಿಗೆ ರತಿ ಚೇತೋ
ಭೂತ ಕ್ರೀಡಾದ್ರಿಗದ್ರಿಗಳ್ ಸಮನೊಳವೇ ೩೪

ವ॥ ಅಂತಾ ರಾಜಧಾನಿಗೆ ದಶಯೋಜನದೊಳ್ ವಿರಾಜಿಸುತಿರ್ಪ

ಉ॥ ಭೂತನಗಕ್ಕೆ ಪೋಗಿ ಪರಿಭೂತನನಕ್ಷರಕುಕ್ಷಿಯಂ ಜಟಾ
ವ್ರಾತ ಸಮಗ್ರ ಭಾರವಹ ಗರ್ದಭನಂ ದೃಢಕಿಲ್ಮಿಷಾಭನಂ
ಭೌತಿಕನಂ ಕರಂ ವಟುಕನಂ ಕಮಠಂ ಶಠನೆಯ್ದಿ ಪೊರ್ದಿ ನಿ
ನ್ನೀ ತಪಮಂ ಕುಡೆಂದೊಡಪನೀತಿಯನಾತನುಮಂದು ಪೊೞ್ತಱೊಳ್ ೩೫

ಕಂ॥ ತಡೆಯದೆ ಮುಂತಿಱಿದ ಶಿರಂ
ಜಡೆಗಟ್ಟಲ್ ಬಾರದೆಂದು ಬೋೞಿಸಿ ಬೋಧಂ
ಗುಡೆ ಕೊಂಡನವಂ ತಪಮಂ
ಗಡೆಗೊಂಡಿರೆ ದಂಡು ಬೂದಿ ಸೊರೆ ರುದ್ರಾಕ್ಷಂ ೩೬

ನಿರವಿಸಿದುದ ಸೇವ್ಯತೆಯಂ
ಸೊರೆ ಭಸ್ಮಂಶ್ವಪದೃತ್ತಿಯಂ ದಂಡು ವಿನಿ

ಷ್ಫುರದಂಡದಂತೆಯಂ ತಾಂ
ಧರಿಸಿದ ರೌದ್ರಾಕ್ಷನೆಂಬುದಂ ರುದ್ರಾಕ್ಷಂ ೩೭

ವ॥ ಅಂತಾ ದುರಾಚಾರಂ ದುರಾಚರಣಕ್ಕೆ ಬೆರಲೆತ್ತುವಂತೂರ್ಧ್ವಬಾಹುವಾಗಿ ತಪಮಂ ಮಾಡುತ್ತುಮಿರ್ದನಿತ್ತಲ್

ಕಂ॥ ಆಳೋಚಿಸಿ ನರಪತಿ ದುಃ
ಶೀಲನನಿರದೆತ್ತಿ ಕಳೆಯೆ ನೆನೆದಗ್ರಜನಂ
ಮೇಳಿಸಿದ ಮೋಹದಿಂ ಕರ
ಮೇೞ್ಸಿದಂ ಕೂಟಿ ನೀರ ನಿದ್ದೆಯ ದೆಸೆಯಂ ೩೮

ವ॥ ಅಂತು ನಿಜಾಗ್ರಜಂ ಪೋದ ದೆಸೆಯನಱಿಯದೆ ದೆಸೆಗೆಟ್ಟ ಪುಲ್ಲೆಯಂತೆ ಚಿಂತಿಸುತಿರ್ಪನ್ನೆಗಮಾತಂಗೆ ಯಮದೂತಂ ಬರ್ಪಂತಿರೊರ್ವ ದುರ್ಬೋಧಂ ಬೋಧಲಿಂಗಿ ಬಂದು ನಿಮ್ಮಗ್ರಭವನುಗ್ರವ್ಯಾಘ್ರತೀಕ್ಷ್ಣತರಕ್ಷು ಕ್ರೂರಕಂಠೀರವ ಗಂಡಭೇರುಂಡ ಪರುಷತರ ಶರಭ ರಭಸಾತಿಗಹನ ಗಹನಪರೀತ ಭೂತಶೈಳದ ಸಮೀಪದ ತಾಪಸಾಶ್ರಮದೊಳ್ ತಾಪಸನಾಗಿರ್ದನಂ ಕಂಡೆವೆಂದೊಡಾನಂದಮಂದಿರಹೃದಯನರವಿಂದಮಹಾರಾಜನ ಮಂದಿರಕ್ಕೆ ವಂದು

ಉ॥ ದೇವ ದಯಾಳು ನೀನೆ ವಲಮಲ್ಲದೊಡುಗ್ರಮದಗ್ರಜನ್ಮನು
ದ್ಗ್ರೀವತೆಗಾರೊ ಸೂಕ್ತ ವಿಧಿಯಂ ನೆಱೆ ಮಾಡದೆ ಮನ್ನಿಪನ್ನರು
ರ್ವೀವರರೆಂಬಿದಂ ಬಗೆದು ನಿರ್ಭಯನಾಗಿಯೆ ಬಿನ್ನನಿಪ್ಪೆನೊ
ಲ್ದೀವುದದಾಗದೆನ್ನದೆ ನಿಯಾಮಮನಪ್ರತಿಮಪ್ರಭಾವ ನೀಂ ೩೯

ವ॥ ಎಂದು ನುಡಿದ ನಿಜಸಚಿವನ ವಚನಮನರಸನವಧಾರಿಸಿ

ಕಂ॥ ಏನೆನೆ ಮದಗ್ರಭವನವ
ಮಾನಾನಳದಗ್ಧನೆಂಬುದಂ ಭೌತಿಕನೆಂ
ಬೀ ನೆವದಿಂದಱಿಪುತ್ತುಂ
ತಾನಿರ್ಪಂ ಭೂತನಗದೊಳೆಂದೆನಗೀಗಳ್ ೪೦

ಮಾನವನೊರ್ವಂ ಬಂದವ
ಮಾನಮನೆಯ್ದಿದನ ವಾರ್ತೆಯಂ ಪೇೞ್ದನದ
ರ್ಕಾನಲ್ಲಿಗೆ ಪೋಗಿ ಮನೋ
ಗ್ಲಾನಿಯನಪಹರಿಪೆನುಚಿತವಚನಾಮೃತದಿಂ ೪೧

ವ॥ ಎಂದೊಡರವಿಂದಮಹಾರಾಜಂ ಮುಗುಳ್ನಗೆಯಂ ನಗುತ್ತುಮಿಂತೆಂದಂ

ಕಂ॥ ಮನೆಯೊಳಗಣ ಪಾವಂ ನೆ
ಟ್ಟನೆ ಕಳೆವಂತವನನೆತ್ತಿ ಕಳೆದೊಡೆ ನಿಮಗೇ
ಕಿನಿತೊಂದು ಖೇದಮಾ ದು
ರ್ಜನನಿರೆ ಕೇಡಲ್ಲದೊಳ್ಳಿತೇನಾದಪುದೇ ೪೨

ಅವನನಪನೀತಿಭವನನ
ನವಿವೇಕದೆ ಪೋದ ಪಡಣಮಂ ತಲೆವಿಡಿವಂ
ತೆವೊಲಱಿಸಿ ಪೋಪುದಿದು ಮಿ
ಱ್ತುವನಱಿಸಿಯೆ ಪೋಪ ತೆಱನನಱಿಪುಗುಮಲ್ತೇ ೪೩

ಮತಿಗೆಟ್ಟವನಿರ್ದೆಡೆಗಱಿ
ಸಿ ತಿಂಬ ದೈವಕ್ಕೆ ಪೋಗಿ ಪಾಳಂ ಬಡುವಂ
ತತಿಮೋಹದಿಂದೆ ಪೋದೊಡೆ
ಗತಿ ಕಿಡುಗುಂ ಪ್ರಾಣಬಾಧೆಯಕ್ಕುಮಮೋಘಂ ೪೪

ಒಡೆತನಮನಿತ್ತು ಹರ್ಷಮ
ನೊಡರಿಸಿ ಮುಂ ಪಡೆದ ಲೇಸದೇಂ ಪರಿಭವದಿಂ
ಕಡುಮುಳಿಸು ತೊಡರ್ದ ಜಡನಿ
ರ್ದೆಡೆಗಟ್ಟದೆ ಪೋಗಿ ಪಡೆವುದೇನೆಮಗಱಿಪೈ ೪೫

ನೀತಿವಿದರ್ ನಿಮ್ಮಂದಿಗ
ರೀ ತೆಱದಿಂ ನುಡಿವುದಪನಯಂ ಮಗುೞ್ದಿನ್ನೀ
ಮಾತಂ ನುಡಿಯದಿರಿಂ ಪರಿ
ಭೂತನವಂ ನಿಮಗಪಾಯಮಂ ಚಿಂತಿಸುಗುಂ ೪೬

ವ॥ ಅದುಕಾರಣದಿನಾ ದುರಾತ್ಮನೆಂತುಂ ಪರಿಹರಣೀಯನಲ್ಲದೆ ಸ್ವೀಕರಣೀಯನಲ್ಲೆಂದು ಮಱುಮಾತು ಪುಟ್ಟದಂತು ಮುಟ್ಟೆ ಮೊದಲಿಸಿ ಪಲತೆಱದಿಂ ನಯಮಂ ಕಲಿಸಿಕಳಿಪಿ ಮನಮಿಲ್ಲದ ಮನದಿಂ ಮನೆಗೆ ವಂದು

ಮ॥ ಅತಿಮೋಹಂ ಗತಿಯಂ ಕರಂ ಕಿಡಕುಮೆಂಬೀ ಮಾತೆ ಕೆಯ್ಗೂಡೆ ಸ
ನ್ಮತಿಹೀನಂ ಮರುಭೂತಿಯಗ್ರಭವನೊಳ್ ಮೆಯ್ವೆತ್ತ ದುರ್ಮೋಹಸಂ
ಗತಿಯಿಂ ಮುಂದಣಜನ್ಮದೊಳ್ ಜನಿಯಿಪಾ ಹಸ್ತಿತ್ವದಿಂ ಮುನ್ನೆ ಮೂ
ರ್ಖತೆ ಬಂದಿರ್ದವೊಲಣ್ಣನಂ ತಿಳಿಪಿ ತರ್ಪುದ್ಯೋಗಮಂ ತಾಳ್ದಿದಂ ೪೭

ವ॥ ಅಂತು ತಿಳಿಪಿ ತರ್ಪುಪಾಯಮಪ್ಪ ಬಗೆಯನೆ ಬಗೆದು

ಚಂ॥ ಅಱಲಿರದಗ್ರಜಾತನ ವಿಯೋಗದೊಳಾಗೆ ಮನಕ್ಕೆ ಮೊಕ್ಕಳಂ
ಪೞುಗಳಿದಿರ್ದ ತನ್ನ ಸಿರಿಯಂ ಮರುಭೂತಿ ಬಿಸುಟ್ಟು ಕಟ್ಟಿತಂ
ಕಱೆವವನಾವನೆಂಬಿನೆಗಮೊರ್ವನೆ ಕಪ್ಪಡಮುಟ್ಟು ನಟ್ಟಿರುಳ್
ಘಱಲನೆಯೆೞ್ದು ಪೋಗಿ ಪರಿದೆಯ್ದಿದನಾಗಳೆ ಭೂತಶೈಳಮಂ ೪೮

ಕಂ॥ ವಸುವಿರಹಿತನಂಬರಮಂ
ಬಿಸುಟೆಯ್ದಿದನಾತ್ಮಬಂಧುಚಕ್ರದೊಳಱಲ
ರ್ವಿಸೆಯಸ್ತಸಮಯ ರವಿಯಂ
ತೆ ಸಚಿವನಾ ನಗಮನಪರಶೋಭಾಪರಮಂ ೪೯

ವ॥ ಅಂತಾ ಗಿರೀಂದ್ರಮನೆಯ್ದೆವಂದು ತಾಪಸರೂಪಮಂ ಸ್ವೀಕರಿಸಿರ್ದ ಸಹೋದರನ ವಿಳೋಕನದಿಂ ಶೋಕೋದ್ರೇಕಮಾಗೆ ಮನ್ಯುಮಿಕ್ಕಾ ಕಮಠನಂ

ಕಂ॥ ನೀನಿಲ್ಲದೊಡೆನಗೇವುದೊ
ಭೂನಾಯಕನಿತ್ತಮಾತ್ಯಪದಮದಱಿಂದಂ
ನೀನಾದುದನಪ್ಪಂ ಪೆಱ
ತೇನಗ್ರಜ ನಿನ್ನದೊಂದುಲೋಕಮೆ ಲೋಕಂ ೫೦

ವ॥ ಎಂದು ಮರುಭೂತಿ ಬಂದು ಕಾಲ್ಗೆಱಗೆ

ಕಂ॥ ಅಲ್ಲಿ ಪರಿಭವಮನೆನಗಳ
ವಲ್ಲದುದಂ ತನ್ನ ನೃಪತಿಯಿಂ ಮಾಡಿಸಿ ಮ
ತ್ತಿಲ್ಲಿಗಮಱಿಪಲ್ ಬಂದಂ
ನಿಲ್ಲದಿವಂ ಧೂರ್ತನೆಂದು ಮುಳಿಸಂ ತಳೆದಂ ೫೧

ಅಂತು ಮುಳಿದುಗ್ರತಪದಿಂ
ದಂ ತನಗಾಯ್ತುಗ್ರವೃತ್ತಿಯೆನೆ ಕಿಡಿ ಕಣ್ಣಿಂ
ದಂತರದೆ ಸೂಸುತುಂ ಭ
ಸ್ಮಾಂತರಿತ ಹುತಾಶನಂಬೊಲಿರ್ದಂ ಗೊರವಂ ೫೨

ಕೊಲ್ವ ಮುಳಿಸುಳ್ಳನಿನ್ನೇಂ
ಕೊಲ್ವನವಂ ಕ್ಷಮೆಯನೆನಿಸಿ ತಾಪಸಪಾಶಂ
ಕಲ್ವೊತ್ತು ನಿಂದ ಕಮಠಂ
ಕಾಲ್ವಿಡಿದನ ತಲೆಯೊಳಿಕ್ಕಿದಂ ಸೆಲೆಯನದಂ ೫೩

ವ॥ ಅಂತು ಪೊಡಮಡಲ್ ಪೋಗೆ ದೇಗುಲಂ ಮೇಲ್ಕೆಡೆದುದೆಂಬ ನುಡಿ ನನ್ನಿಯಾಗೆ ತನ್ನ ತಲೆವೊಱೆಯಾಗಿರ್ದ ತಪಮನೊಡೆಯಿಕ್ಕುವಂತೆ

ಕಂ॥ ಪಾತಕನಿಕ್ಕಿದ ದೃಷದಭಿ
ಘಾತದೆ ನಿರ್ಘಾತಘಾತದಿಂ ಗಿರಿಶಿಖರಂ
ಮಾತೇನೊಡೆವಂದದೆ ಮರು
ಭೂತಿಯ ತಲೆಯೊಡೆದು ನುಚ್ಚುನೂಱಾಯ್ತಾಗಳ್ ೫೪

ವ॥ ಅಂತಾರ್ತಧ್ಯಾನಾಧೀನಮಾನಸಂ ಪ್ರಾಣಪರಿತ್ಯಾಗಮಂ ಮಾಡಿ

ಮ॥ ಧರಣೀಮಂಡನಮೊಪ್ಪುಗುಂ ಮಳಯದೇಶಂ ತನ್ಮಹಿಶ್ರೀಗೆ ಕುಂ
ಜರಶೈಳಂ ತೊಡವಂತದರ್ಕೆ ತಿಳಕಂ ವೇಗಾವತೀಸಿಂಧುವಾ
ಯೆರಡಕ್ಕಂ ಸಿರಿ ಸಲ್ಲಕೀಘನವನಂ ತನ್ನಂದನಕ್ಕಾದುದಾ
ಭರಣಂ ಬಬ್ಬುರಿ ತತ್ಪ್ರಿಯಂ ಪೃಥಿವಿಘೋಷಾಖ್ಯಾನಗಂಧದ್ವಿಪಂ ೫೫

ಕಂ॥ ದೊರೆವೆತ್ತಾ ಕರಿಣಿಗಮಾ
ಕರಿಪತಿತಾಂ ವಜ್ರಘೋಷಮೆಂಬೀ ಪೆಸರಂ

ಧರಿಯಿಸಿ ವಿವೇಕವಿರಹಿತ
ಚರಿತಂ ಮರುಭೂತಿ ವಜ್ರಗಂಧಸಿಂಧುರಮಾದಂ ೫೬

ವ॥ ಅಂತು ಮರುಭೂತಿ ವಜ್ರಘೋಷಮೆಂಬ ನಾಗಮಾಗಿ ಪುಟ್ಟಿ ಬಳೆಯುತ್ತುಮಿರ್ದನತ್ತಲಾ ಭೂತಪರ್ವತದ

ಕಂ॥ ತಾಪಸರೆಲ್ಲರುಮಂತಘ
ರೂಪನ ನಿಸ್ತ್ರಿಂಶವೃತ್ತಿಯಂ ಕಂಡನುಜಂ
ಗಾಪತ್ತಂ ಮಾಡುವವಂ
ಕೋಪಿಸಿದೊಡೆ ನಮಗಮಿಾ ಖಳಂ ಮಾಡದುದೇಂ ೫೭

ನಯಯುಕ್ತರಗ್ನಿವತ್ಸ್ವಾ
ಶ್ರಯಮೇವ ದಹಂತಿ ದುರ್ಜನಾಯೆಂಬುದನಾ
ರಯದಿರಿಸಿದಂದು ನಮ್ಮ
ನ್ವಯಕಂ ಕೇಡಕ್ಕುಮಿವನನೀಗಳೆ ಕಳೆವಂ ೫೮

ವ॥ ಎಂದು ತಮ್ಮೊಳಗಾಳೋಚಿಸಿಯಾ ಕ್ರೂರಕರ್ಮನಪ್ಪ ಕಮಠನನವರುಮಾರ್ದೆತ್ತಿ ಕಳೆಯೆ

ಮ॥ ಜಗತೀವಿಶ್ರುತದೇವಸಿಂಧು ಹಿಮಚ್ಛೈಳಾಗ್ರದೊಳ್ ಪುಟ್ಟಿಯುಂ
ಪುಗುವಂತಾದಮಸೇವ್ಯಮಾದ ಲವಣಾಂಭೋರಾಶಿಯಂ ಪೊಕ್ಕನಾ
ಕುಗತಿಪ್ರಾಪ್ತನೆನಿಪ್ಪನುತ್ತಮಕುಲಪ್ರೋದ್ಭೂತನಾಗಿರ್ದೊಡಂ
ಪುಗುಗುಂ ನೀಚರನೆಂಬಿನಂ ಕಮಠನುದ್ಯತ್ಕ್ರೋಧರಂ ವ್ಯಾಧರಂ ೫೯

ವ॥ ಅಂತು ಬೇವಿನಮರನಂ ಕೈಪೆಸೊರೆ ಪೊರ್ದುವಂತೆ ನೀಚಾಚಾರರಪ್ಪ

ಚಂ॥ ಶಬರರೊಳೊಂದಿಯೂರನಿಱಿವಲ್ಲಿ ನಿಶಾತಶತಾಸ್ತ್ರಘಾತದಿಂ
ದವಿರಳರಕ್ತಧಾರೆ ನಿಜಕೋಪದವೋಲ್ ಪೊಱಪೊಣ್ಮೆಜೀವನಂ
ತವುತರೆ ಪಾಪಕರ್ಮಕಮಠಂ ಗಜಭೂಷಣವಜ್ರಘೋಷನು
ದ್ಭವಿಸಿದ ಸಲ್ಲಕೀವನದೊಳಾದನವಂ ವಿಷಕುಕ್ಕಟೋರಗಂ ೬೦

ವ॥ ಅಂತು ಮರುಭೂತಿಯುಂ ಕಮಠನುಂ ವಾರಣಮುಂ ಕುಕ್ಕುಟೋರಗನುಮಾಗಿ ಬಳೆಯುತ್ತುಮಿರ್ಪುದುಮಿತ್ತಲ್

ಮ॥ ಕರಿಯಂ ಭಂಗಿಸೆ ಸಿಂಗಮನ್ಯಮೃಗಮೆಲ್ಲಂ ಭೀತಿಗೊಳ್ವಂತೆ ಸಂ
ಗರದೊಳ್ ಭಂಗಿಸೆ ವಜ್ರವೀರನೃಪನಂ ಮೇಲಾದರುಳ್ಳಳ್ಕಿ ಭೂ
ವರರಾತ್ಮೀಯಪದಾರವಿಂದಮನೆ ಬಂದಾರಾಧಿಸುತ್ತಿರ್ಪಿನಂ
ಕರಮೊಪ್ಪಿರ್ದರವಿಂದನಾಂತನವನೀಸಂಪೂಜ್ಯಸಾಮ್ರಾಜ್ಯಮಂ ೬೧

ಉಪೇಂದ್ರವಜ್ರಂ॥ ನಿರಂತರಶ್ರೀಹೃದಯಾರವಿಂದಂ
ಸರಸ್ವತೀಚಾರುಮುಖಾರವಿಂದಂ

ನರೇಶ್ವರಾರಾಧ್ಯಪದಾರವಿಂದಂ
ವಿರಾಜಿಸಿರ್ದಂ ವಿನುತಾರವಿಂದಂ ೬೨

ವ॥ ಅಂತು ಸಮಸ್ತ ಧಾತ್ರಿಯನೇಕಚ್ಛತ್ರಮಮಂ ಮಾಡಿಯಾ ಕ್ಷತ್ರಿಯಪವಿತ್ರಂ ಪ್ರತಿಪಾಳಿಸುತ್ತುಮಿರೆ

ಚಂ॥ ತಿಳಿಯೆ ಜಳಾಶಯಂ ತೊಳಗಿ ತೋಱೆ ದಿಗಂಬರರಾಜಹಂಸಸಂ
ಕುಳಮಿತರಾರ್ಥಯುಕ್ತಸಮಯಂ ಕರಮೇೞ್ದಮಾಗೆ ಭವ್ಯನಿ
ರ್ಮಳಮುಖಪುಂಡರೀಕಮಲರ್ದೊಪ್ಪೆ ಶರತ್ಸಮಯಪ್ರಭಾವಮು
ಜ್ವಳಿಸಿ ಜಿನೇಂದ್ರರುಂದ್ರಸಮಯಾನುಗಮಾಯ್ತು ಸಮಸ್ತಧಾತ್ರಿಯೊಳ್ ೬೩

ಕಂ॥ ಜಳದಂಗಳ ಮಳಿನತೆಯಂ
ಕಳೆದುದು ನಿಜದಿಂದಮೆನೆ ಜಳಾಶಯ ಜಳದಾ
ಮಳಿನತೆಯಂ ಕಳೆದುದಿದ
ತ್ತಳಗಮೆ ಪೇೞೆನಿಸಿ ವಿಮಳಮಾದುದು ಶರದಂ ೬೪

ವ॥ ಅಂತು ತನ್ನ ಸಮುನ್ನತರಾಜಲಕ್ಷ್ಮಿಯಂತೆ ಸಕಳಜನ ಮನೋಹರಮಾಗಿರ್ದ ಶರತ್ಸಮಯದೊಳಮರರಮಣಿಯರಂ ಪರಿಹಾಸಂ ಮಾೞ್ಪ ವಿಳಾಸಿನಿಯರ್ಬೆರಸರವಿಂದ ಮಹಾರಾಜಂ ದಿವಿಜರಾಜವಿಭವದಿಂ ಋತುವಿಮಾನದ ಸಿರಿಯನಧಃಕರಿಸುವುತ್ತುಂಗಸಪ್ತ ತಳಪ್ರಾಸಾದಪರಾಂಗಣದೊಳಿರ್ದು ಶರಲ್ಲಕ್ಷ್ಮಿಯಂ ನಿರೀಕ್ಷಿಸುತ್ತುಮಿರ್ಪನ್ನೆಗಂ

ಕಂ॥ ಜನನಾಥನ ನಯನಾನಂ
ದನಮಂ ಜನಿಯಿಸಿತು ಜಳದಜಂ ವಿಶದಶರ
ದ್ವನಿತೇಂದುಕಾಂತಮಣಿಸಂ
ಜನಿತ ಪ್ರಾಸಾದ ಸುರುಚಿರ ಪ್ರಾಸಾದಂ ೬೫

ವ॥ ಅಂತುಮಲ್ಲದೆ

ಮ॥ ಪ್ರಕೃತಿಪ್ರೋದ್ಭವಮಲ್ತು ಜೈನರುಸಿರ್ವಂತಾರಯ್ಯೆ ಲೋಕಂ ಸಕ
ರ್ತೃಕಮೆಂಬಾ ಮತಮಂ ನಿರಾಕರಿಪವೋಲ್ ಪ್ರಾಸಾದಮಾಸಾದಿತಾ
ಧಿಕಶೋಭಾಖಿಳಲಕ್ಷಣಂ ಜಳದಜಾತಂ ತೋಱೆ ತತ್ಸಾಮ್ಯಮಾ
ಗೆ ಕಳಾಸಿಂಧು ಜಿನೇಂದ್ರಮಂದಿರಮನಾದಂ ಮಾಡಿಪುದ್ಯೋಗದಿಂ ೬೬

ಕಂ॥ ಬಟ್ಟಗೆವಲಗೆಯೊಳಾಗಳೆ
ದಿಟ್ಟಿಗೆ ನೇರ್ವಟ್ಟು ತೋಱೆ ನೆಟ್ಟನೆ ಭೂಪಂ
ತಿಟ್ಟಮಿಡಲ್ ಬಗೆವುದುಮದು
ತೊಟ್ಟನೆ ಕರಗಿದುದು ನೃಪತಿಯೆರ್ದೆ ಕರಗುವಿನಂ ೬೭

ವ॥ ಅಂತು ಸಂಸಾರವೈಚಿತ್ರ್ಯಂ ತನ್ನ ಚಿತ್ತಭಿತ್ತಿಯೊಳ್ ತಿಟ್ಟಮಿಟ್ಟಂತು ನಿಲೆ ಬೞಿಕಮಿಂತೆಂದಂ

ಕಂ॥ ಪರಿಭಾವಿಸೆ ಪೀನಪಯೋ
ಧರಾಳಿಯಿಂ ಪೊಳೆವ ಸೌಖ್ಯಮಿಾ ತೆಱದಿಂದಂ
ಚಿರಮಲ್ಲದೆಂದು ಪೇೞ್ವಂ
ತಿರೆ ಪೀನಪಯೋಧರಾಳಿ ಕರಗಿದುದಲ್ತೇ ೬೮

ವಿಭ್ರಮವತಿಯರ ಮಿಸುಗುವ
ದಭ್ರವಿಳಾಸಂ ನವೀನಯೌವನದೊದವೀ
ಶುಭ್ರಾಭ್ರವಿಭ್ರಮದವೋಲ್
ವಿಭ್ರಂಶಮನೆಯ್ದದೇಂ ಕ್ಷಣಂ ನಿಂದಪುದೇ ೬೯

ಪೆಱರಾಪತ್ತಂ ಕಂಡುಂ
ತೊಱೆವರ್ ವಿಷಯಾಭಿಲಾಷೆಯಂ ಸತ್ಪುರುಷರ್
ನೆಱೆ ತಮಗಾಪತ್ತಾದೊಡ
ಮೆಱಗುವವರ್ ವಿಷಯಸುಖಕದೇಂ ಸಾಸಿಗರೋ ೭೦

ಕಿವಿ ಕಣ್ ದಶನಂ ಮೊದಲಾ
ದವಯವಮುಂ ಕರಗೆ ಮುಪ್ಪಿನೊಳ್ ವಿಷಯಸುಖ
ಕ್ಕವಚಱಿತರರ್ ನರಪತಿ
ಯವಚಿತ್ತಂ ಕರಗೆ ಮುಗಿಲದೇಂ ವಿಸ್ಮಯಮೋ ೭೧

ವ॥ ಅಂತು ನಿಸ್ಸಾರಸ ಸಾರಸ್ವರೂಪವಿಶಾರದಂ ಶಾರದ ನೀರದ ಸಂಚಳಾಕಾರವಿಳೋಕನಪ್ರಭೂತ ಪರಮವೈರಾಗ್ಯಪರಾಯಣಂ ವಿಮಳಗುಣಾಧಾರಂ ಧವಳಾರವಿಂದದಂತರ ವಿಂದಹಾರಾಜ ನಿರ್ಪುದಮಾ ಸಮಯದೊಳ್

ಕಂ॥ ವನಪಾಳಕನೊರ್ವಂ ಪಾ
ವನವನಸುರಭಿ ಪ್ರಸೂನಫಳಸಂಕುಳಮಂ
ಜನಪತಿಗೋಲಗಿಸಿ ಪದಾ
ವನತಂ ಹಿತಸಮುಚಿತೋಕ್ತಿವಿದನಿಂತೆಂದಂ ೭೨

ಉ॥ ಶ್ರೀನರಪಾಳ ನಿನ್ನತುಳಪುಣ್ಯದಿನಪ್ರತಿಮರ್ ಸ್ವಯಂಪ್ರಭಾ
ಖ್ಯಾನಮುನೀಶ್ವರರ್ ವಿಮಳಿನಾವಧಿಬೋಧವಿಳೋಚನರ್ ನವೋ
ದ್ಯಾನವನಕ್ಕೆ ವಂದು ನೆಲಸಿರ್ದರೆನುತ್ತಿರೆ ಬೇಗದಿಂ ನಿಜಾ
ಸೀನ ಗಜಾರಿವಿಷ್ಟರದಿನೆೞ್ದವರಿರ್ದೆಡೆಯತ್ತಲಟ್ಟಿಯಿಂ ೭೩

ವ॥ ಸಪ್ತಪರಮಸ್ಥಾನಮಂ ಪೊರ್ದುವುದರ್ಕಿದುವೆ ಕಾರಣಂಗಳೆಂದು

ಕಂ॥ ಕೇಳೇೞಡಿಯಂ ಧಾತ್ರೀ
ಪಾಳಂ ನಡೆದೆಱಗಿ ಮುನಿಗೆ ನಿರ್ಮಳಗುಣಭೂ
ಷಾಳಿಗಳನೆ ಧರಿಯಿಸಿ ವನ
ಪಾಳಂಗಿತ್ತಂ ನಿಜಾಂಗಚಿತ್ತಮನಾಗಳ್ ೭೪

ತಾನಱಿಸಿ ಪೋಗಲಿರ್ಪ ನಿ
ಧಾನಮೆ ತನಗಿದಿರ್ಗೆ ವಂದುದೆಂಬುತ್ಸವದಿಂ
ದಾನಂದಭೇರಿಯಂ ಭ
ವ್ಯಾನಂದಂ ನೆಗಟೆ ಪೊಯ್ಸಿದಂ ವಸುಧೇಶಂ ೭೫

ಲಬ್ಧಿವಶದಿಂದೆ ಸಂಸಾ
ರಾಬ್ಧಿಯನಾನೀಸಲೆಂದು ಬಗೆದಾರೆ ಸಮಾ
ರಬ್ಧಮನೆ ತೀರ್ಚಲೆಂದು ಗು
ಣಾಬ್ಧಿಗಳಾ ಯಾನಪಾತ್ರದಂದದೆ ಬಂದರ್ ೭೬

ಉ॥ ಎಂದು ನರೇಂದ್ರನಿಂದ್ರನ ವಿಳಾಸಮನೇೞ್ಪಲೀಲೆಯಿಂದಮಂ
ತೊಂದಿ ಸಮಸ್ತ ಧಾರ್ಮಿಕಜನಂ ಬೆರಸಾ ಮುನಿಪಾದಸೇವೆಯೊಳ್
ಸಂದಿರೆ ಚಿತ್ತವೃತ್ತಿ ಶುಕಕೋಕಿಳಭೃಂಗಕಳಸ್ವನಂಗಳಿಂ
ಕುಂದದ ಶೋಭೆಯಂ ತಳೆದ ನಂದನಮಂ ಮುದದಿಂದಮೆಯ್ದಿದಂ ೭೭

ವ॥ ಅಂತೆಯ್ದೆವಂದು ಮುನೀಂದ್ರನ ಬರವಿಂ ತನ್ನ ಜನ್ಮದಂದದಿಂ ಸಫಳಮಾದ ನಂದನವನಶ್ರೀಯಂ ನೋಡಿ

ಕಂ॥ ಅತುಳಸ್ವಯಂಪ್ರಭಾಹ್ವಯ
ಯತಿಚರಣಾಂಬುರುಹಸೇವೆಯಭಿಮತಫಳಮಂ
ಚತುರರ್ಗೇಂ ಕುಡದೆ ವನ
ಸ್ಪತಿಗಂ ಪಡೆದಿತ್ತುದೆಂದೊಡಭಿಮತಫಲಮಂ ೭೮

ವ॥ ಎಂದು ಪಾವನವನಮಂ ಪೊಗೞ್ದು ನೆವದಿಂದವರ ತಪಸ್ಸಾಮರ್ಥ್ಯಮಂ ಮುನಿಜನಪ್ರಾರ್ಥ್ಯಮಂ ಕೀರ್ತಿಸುತ್ತುಂ ಕ್ಷತ್ರಿಯಪವಿತ್ರಂ ಬರುತ್ತುಮಿರೆ

ಚಂ॥ ಮಿಸುಪ ಶಿಳಾತಳಂ ನೆಗೞ್ದ ಕೇಸರಿವಿಷ್ಟರಮಾಗೆ ಪಲ್ಲವೋ
ಲ್ಲಸಿತಮಶೋಕಭೂರುಹಮಶೋಕಮಹೀರುಹಮಾಗೆ ಚೆಲ್ವುವೆ
ತ್ತಸದೃಶನಂದನಂ ಸಮವಸೃತ್ಯವನೀತಳಮಾಗೆ ಯೋಗಿ ರಂ
ಜಿಸಿದನಗಾಧಬೋಧನಿಧಿಯಪ್ಪ ಜಿನೇಶ್ವರನಿರ್ಪ ಮಾೞ್ಕೆಯಿಂ ೭೯

ವ॥ ಅಂತು ರಂಜಿಸುವಕ್ಷೂಣಗುಣನಿಧಿಯೆನಿಸಿದ ಮುಮುಕ್ಷುವಂ ನಿರೀಕ್ಷಿಸುತ್ತುಂ ಬಂದಪ್ರತಿಮಭಕ್ತಿಯಿಂ ತ್ರಿಃಪ್ರದಕ್ಷಿಣಂಗೆಯ್ದು

ಕಂ॥ ಮುನಿಪದಮಂ ಭಕ್ತಿಭರಾ
ವನತಂ ಜಲಗಂಧಕಳಮತಂಡುಳಪುಷ್ಪಾ
ಶನ ದೀಪ ಧೂಪ ಫಳದಿಂ
ಜನಪತಿ ಪೂಜಿಸಿದನಖಿಳಸುಖಸಾಧಕಮಂ ೮೦

ವ॥ ಆ ಸಮಯದೊಳ್

ಕಂ॥ ಧವಳಾಕ್ಷತಹರಿಚಂದನ
ನವ ಗಂಧದೊಳಲರೊಳೆಱಗದೆಱಗಿದುವು ಯತಿ
ಪ್ರವರಪದಾಂತಿಕದೊಳ್ ಮಧು
ನಿವೃತ್ತಿಯಂ ಮಾಡಿದಂದದಿಂ ಮಧುಪಂಗಳ್ ೮೧

ವ॥ ಅಂತಾ ಮುನಿರಾಜಹಂಸನಂ ರಾಜಹಂಸಂ ಪೂಜಿಸಿ ತತ್ಪದಪಯೋಜಾಸನ್ನ ಪ್ರದೇಶದೊಳಾಸನ್ನಭವ್ಯಂ ಕುಳ್ಳಿರ್ದು ಕರಕಮಲಯುಗಳಮಂ ಮುಗಿದು

ಕಂ॥ ಜೀವಾದಿ ದ್ರವ್ಯಪದಾ
ರ್ಥಾವಳಿ ತತ್ತ್ವಸ್ವರೂಪಮಂ ದರ್ಶನಮಂ
ಶ್ರಾವಕಯತಿಧರ್ಮಮನಘ
ದಾವಾನಳಮಂ ಸಮಸ್ತಸುಖಸತ್ಫಳಮಂ ೮೨

ಬೆಸಗೊಳೆ ನರಪತಿ ಯತಿಪತಿ
ಬೆಸಸಿದನತಿವಿಶದದಶನವಿಸರಾಂಶು ದಯಾ
ರಸಮುಚ್ಚಲಿಸಿದಪುದು ಹೃದ
ಯಸರೋವರದಿಂದಮೆನಿಸಿ ಸೊಗಯಿಸುವಿನೆಗಂ ೮೩

ಮುನ್ನಮೆ ವಿರಾಗತಾಸಂ
ಪನ್ನನನಾ ಮುನಿ ತಿಳಿಪುವುದು ಬೆಳಗುವವೋಲ್
ಕನ್ನಡಿಯಂ ಪದೆಪಿಂ ವ್ಯ
ತ್ಪನ್ನನನೋದಿಸುವ ತೆಱದಿನಾದುದು ಸುಗಮಂ ೮೪

ವ॥ ಅಂತು ತತ್ತ್ವವಿದಂ ತತ್ತ್ವಸ್ವರೂಪನಿರೂಪಣಮಂ ಮಾೞ್ಪುದುಮಪಗತ ಪದಾರ್ಥಸಂಶಯ ತಮಸ್ಸಮೂಹಾಶಯಕುಶೇಶಯಂ ವಿಕಾಸಿವಿಳಾಸ ಭಾಸುರವದನಾರವಿಂದನರ ವಿಂದಮಹಾರಾಜನನಂತರಂ ಶಾಂತರಸಾಕ್ರಾಂತಸ್ವಾಂತಂಗೆ ಮತ್ತಮಿಂತೆಂದಂ

ಕಂ॥ ಶಾಂತಗುಣನೆೞ್ದುಪೋಗಿ ಕ
ರಂ ತಡೆದಂ ಸಚಿವನೇಕೆ ತಡೆದನದೆಲ್ಲಿ
ರ್ಪಂ ತಿಳಿಪಿಮೆಂದೊಡಾ ವೃ
ತ್ತಾಂತಮನಱಿದವಧಿಬೋಧದಿಂ ಯತಿ ಪೇೞ್ದಂ ೮೫

ಪೇೞಲೊಡಮದುವೆ ಧಾತ್ರೀ
ಪಾಳನ ವೈರಾಗ್ಯಮಪ್ಪುದಂ ದ್ವಿಗುಣಿಸೆ ತ
ಚ್ಛೀಳನಿಧಿ ಸನ್ನಿಧಿಯೊಳಘ
ಜಾಳಮನಳಱಿಸುವ ದೀಕ್ಷೆಯಂ ತಳೆವಾರ್ಪಿಂ ೮೬

ವ॥ ಅಂತಾ ವೈರಾಗ್ಯಸಂಪನ್ನಂ ತನ್ನಂತರಂಗದೊಳಿಂತೆಂದಂ

ಕಂ॥ ತನ್ನೊರ್ವನ ದೆಸೆಯಿಂದಾ
ದನ್ನೆರಪಿದ ದುರಿತಬಂಧಮಂ ಗೆಲಲರಿದೋ

ವಿನ್ನೆಂತಖಿಳಪರಿಗ್ರಹ
ದಿಂ ನೆರಪಿದ ದುರಿತಬಂಧಮಮಂ ವಿಭು ಗೆಲ್ವಂ ೮೭

ಎಂತುಂ ರಾಜ್ಯಮನಜೀವ ನೃ
ಪಂ ತೊಱೆಯಲೆವೇೞ್ಕುಮನುಭವಿಪ ಕಾಲದೊಳಂ
ಚಿಂತೆಯನೊದವಿಪುದಂ ರಾ
ಜ್ಯಾಂತಂ ನರಕಂ ದಲೆಂಬ ನುಡಿಯುಂಟದಱಿಂ ೮೮

ವ॥ ಎಂದು ತನ್ನ ರಾಜ್ಯಮನಭೋಜ್ಯಮಂ ಸಚ್ಚರಿತಂ ಪರಿಹರಿಪಂತೆ ಪರಿಹರಿಸಿ

ಕಂ॥ ನರಪತಿ ನಿಜಸಮಪದಮಂ
ನರೇಂದ್ರನೆಂಬಗ್ರನಂದನಂಗಾನಂದಂ
ಬೆರಸಿತ್ತಂ ಮಂಗಳತೂ
ರ್ಯರವದೊಡನೆ ತೀವೆ ನಿಜಯಶಂ ದಶದಿಶೆಯಂ ೮೯

ಭೂರಾಜ್ಯಂ ತನುಜರ್ಗೆ ತ
ಪೋರಾಜ್ಯಂ ತಮಗೆ ಯೋಗ್ಯಮೆಂಬವಸರಮಂ
ಭೂರಮಣರ್ ಮುಂ ಕಳಿಪದೆ
ಚಾರುಗುಣರ್ ನೆಗೞ್ದರೇನವರ್ ಪರಿಣತರೋ ೯೦

ಒದವಿದ ನಿಜರಾಜ್ಯಪರಿ
ಚ್ಛದಮಂ ಭೋಗಿಸದೆ ಜೀರ್ಣಮೆನಿಸಿದುದಂ ಪ್ರ
ಚ್ಛದಮಂ ಬಿಸುಡುವ ತೆಱದಿಂ
ದುದಾತ್ತಮತಿ ಬಿಸುಟನೇಂ ಮಹಾತ್ಮನೊ ಮಹಿಪಂ ೯೧

ಚೊಕ್ಕಳನೆನಿಪಂ ನಿಜವಧು
ಮಕ್ಕಳ್ವಡೆದಂದು ಭೋಗಿಸಲೆ ಪೇಸಿಯೆ ಪಿಂ
ತಿಕ್ಕುವ ತೆಱದಿಂದಂ ಪಿಂ
ತಿಕ್ಕಿದನಾ ರಾಜ್ಯವನಿತೆಯಂ ತತ್ತ್ವವಿದಂ ೯೨

ಈ ತೆಱದಿಂ ತನ್ನುಪಮಾ
ತೀತ ಪರಿಚ್ಛೇದಗುಣಮನಜೀವವರ್ಗಳ್ ಸಂ
ಪ್ರೀತಿಯೊಳೆ ಪೊಗೞೆ ದುರಿತಾ
ರಾತಿಯನವಯವದೆ ಗೆಲ್ವ ಬಗೆಯನೆ ಬಗೆದಂ ೯೩

ವ॥ ಅಂತು ಬಗೆದು

ಕಂ॥ ಜ್ಞಾನಂ ವೈರಾಗ್ಯಂ ದುರಿ
ತಾನಳದಳನಾಂಬುವಿಮಳಚಾರಿತ್ರಂ ಸು
ಧ್ಯಾನಂ ದೊರೆಕೊಂಡುದಱಿಂ
ನೀನೆ ಕೃತಾರ್ಥನೆ ಮುನೀಂದ್ರ ನಿರ್ಜಿತತಂದ್ರಾ ೯೪

ವ॥ ಎಂದು ಗುಣಾರ್ಥಿ ತನ್ನಂ ಹಿತೋಪದೇಶದಿಂ ಕೃತಾರ್ಥನಂ ಮಾಡಿದ ಗುಣನಿಧಿಗಳಂ ಪೊಗೞ್ದು

ಕಂ॥ ನಿಧಿಗಂಡು ಜರಗು ಕೞ್ತುವ
ನಧಮನೆನಿಕ್ಕುಂ ಗಡಖಿಳ ಸುಖದಾಯಿ ತಪೋ
ನಿಧಿ ನಿನ್ನಂ ಕಂಡ್ಯೆಹಿಕ
ವಿಧಿಗೊಡರಿಪೊಡಾನುಮಧಮನೆನಿಸನೆ ಪೇೞಿಂ ೯೫

ವ॥ ಎಂದು ತನ್ನ ಪರಿಚ್ಛೇದಮಂ ಪ್ರಕಟಿಸೆ

ಕಂ॥ ದೀಕ್ಷೆಯನೀವುದೆನುತ್ತೆ ಮು
ಮುಕ್ಷುಗೆ ಬಿನ್ನವಿಸೆ ಪತಿ ಮಹಾಬ್ರತಮಂಬೋ
ಧೇಕ್ಷಣನಿತ್ತನಹಿಂಸಾ
ಲಕ್ಷಣಲಕ್ಷಿತಮನತುಳವಿಧಿರಕ್ಷಿತಮಂ ೯೬

ವ॥ ಅಂತು ಸಾಕ್ಷಾನ್ಮೋಕ್ಷಮಾರ್ಗಮೆನಿಪ ದಿಗಂಬರದೀಕ್ಷೆಯಂ ಕೆಯ್ಕೊಂಡು

ಉ॥ ಮೂಲಗುಣೋತ್ಕರೋತ್ತರ ಗುಣೋತ್ಕರ ಸದ್ಗುಣದೊಳ್ ಮುನೀಶ್ವರಂ
ಶೀಲಸಮನ್ವಿತಂ ನೆಱೆದು ಪನ್ನೆರಡುಂ ತಪಮಯ್ದುಸಂಯಮಮಂ
ಮೇಳಿಸೆ ತತ್ತ್ವಭಾವನೆಯೊಳಾವಗಮುದ್ಯತನಾಗಿ ಕರ್ಮನಿ
ರ್ಮೂಳನಧರ್ಮತತ್ಪರತೆಯಂ ತಳೆದಂ ವಿಜಿತಾಖಿಳೇಂದ್ರಿಯಂ ೯೭

ಕಂ॥ ದೀಕ್ಷಾಕಾಲಮನಾಗಮ
ಶಿಕ್ಷಣದಿಂ ಕಳೆದ ಬೞಿಕೆ ಕಳೆದಂ ಗುಣಸಂ
ರಕ್ಷಣಕಾಲಮನಖಿಳವಿ
ಚಕ್ಷಣರಂ ಮಾಡಿ ಶಿಷ್ಯರಂ ಮುನಿತಿಳಕಂ ೯೮

ವ॥ ಅಂತು ಕಳೆದು

ಮ॥ ಬುಧಸಂಪೂಜಿತ ದರ್ಶನೋರ್ಜಿತ ತಪೋವಿಜ್ಞಾನಶುಂಭದ್ದಯಾಂ
ಬುಧಿ ಚಾರಿತ್ರಮೆನಿಪ್ಪ ನಾಲ್ಕು ತೆಱನಪ್ಪಾರಾಧನಾರೂಪ ಸ
ದ್ವಿಧಿಯಂ ನಿರ್ಮಳನೊಲ್ದು ತಾಳ್ದೆ ಸುಜನಸ್ತುತ್ಯಂ ಗುಣಪ್ರತ್ಯಯಾ
ವಧಿ ಪುಟ್ಟಿತ್ತು ಯತೀಂದ್ರನೊಳ್ ಸಕಳರೂಪಿ ದ್ರವ್ಯಸಂವ್ಯಾಪಕಂ ೯೯

ಕಂ॥ ಸ್ಫುರಿತಾವಧಿಬೋದಧಿನಾ
ಯುರವಧಿ ಪನ್ನೆರಡುಬರಿಸಮೆಂದಱಿದು ಗುಣಾ
ಭರಣಂ ಸಲ್ಲೇಖನೆಯಂ
ನಿರಂತರಂ ಮಾೞ್ಪ ಕಾಲಮೆನಗಿದೆನುತ್ತುಂ ೧೦೦

ಮ॥ ಕ್ರಮದಿಂ ದೀಕ್ಷೆ ಸುಶಿಕ್ಷಣಂ ಸ್ವಗುಣಪೋಷಂ ಕೂಡೆ ಶುದ್ಧೋಪಯೋ
ಗಮನೆಯ್ದಲ್ಕೆ ಶುಭೋಪಯೋಗಮನದಂ ತನ್ನಗ್ರಶಿಷ್ಯಂಗೆ ರಾ

ಜ್ಯಮನಾತ್ಮೀಯಸುತಂಗೆ ಕೊಟ್ಟ ತೆಱದಿಂ ಸಂಪ್ರೀತಿಯಿಂ ಕೊಟ್ಟು ಸಂ
ಯಮರಾಜಂ ಪರಿಹಾರಶುದ್ಧಿಯನುರುಶ್ರೀಸಿದ್ಧಿಯಂ ತಾಳ್ದಿದಂ ೧೦೧

ಕಂ॥ ದುರಿತಪರಿಹಾರಕರಮಂ
ಪರಿಹಾರವಿಶುದ್ಧಿಸಂಯಮಮನಾ ಮುನಿಪಂ
ಧರಿಯಿಸಿ ಸಮಸ್ತತೀರ್ಥೋ
ತ್ಕರಮಂ ವಿಹರಣದಿನೊಸೆದು ಬಂದಿಸಿ ಬೞಿಯಂ ೧೦೨

ಉ॥ ಶ್ರೀದೊರೆವೆತ್ತ ತೀರ್ಥಕರನಷ್ಟವಿಧಾತುಳಕರ್ಮಬಂಧಮಂ
ಭೇದಿಸಿ ಮುಕ್ತಿವೆತ್ತೆಡೆಯನುತ್ತಮಭಕ್ತಿಯೊಳಿಷ್ಟಸಿದ್ಧಿಸಂ
ಪಾದಕಮಂ ಸಮಸ್ತಜನಸಮ್ಮದಸಾಧಕಮಂ ಪ್ರಸಿದ್ಧ ಸ
ಮ್ಮೇದಗಿರೀಂದ್ರಮಂ ಮಣಿವಿನಿರ್ಮಿತನಿರ್ಮಳಜೈನಹರ್ಮ್ಯಮಂ ೧೦೩

ವ॥ ಬಂದಿಸಿ ಮುನೀಂದ್ರಂ ಬರುತ್ತುಮಿರೆ

ಉ॥ ಶ್ರೀವಿಭು ತಂತ್ರಗುಪ್ತನತಿನಿರ್ಮಳ ಧಾರ್ಮಿಕ ಚಂದ್ರಗುಪ್ತನೆಂ
ಬಾ ವರಸಾರ್ಥನಾಥರು ಮಾರ್ಗಪರಿಶ್ರಮದಿಂದೆ ಬಂದು ವೇ
ಗಾವತಿ ಸಲ್ಲಕೀವನವಿಹಾರಸಮೀರಣಮಂದಚಾರುಶೋ
ಭಾವತಿ ಭಾವಿಪಂದು ಬಗೆಗೊಂಡಿರೆ ಬಿಟ್ಟರುದಾರತೀರದೊಳ್ ೧೦೪

ಕಂ॥ ಸೂರಿಗಳುಂ ತತ್ಸಿಂಧುವ
ತೀರದ ನಿರ್ಜಂತುಕಪ್ರದೇಶದೊಳುಚಿತಾ
ಚಾರಿಗಳೀರ್ಯಾಶುದ್ಧಿಯ
ನೋರಂತಿರೆ ಮಾಡಿ ನಿಯಮನಿಯಮಿತರಿರ್ದರ್ ೧೦೫

ವ॥ ಅಂತಿರ್ಪುದುಮಾ ಶಾಂತಾತ್ಮರಂ

ಕಂ॥ ಸಾರ್ಥಾಧಿಪತಿಗಳತಿಶಯ
ತೀರ್ಥಮೆ ತಮ್ಮಿದಿರ್ಗೆ ವಂದುದೆಂದನುಪಮಪು
ಣ್ಯಾರ್ಥಿಗಳಮಳಚರಿತಕೃ
ತಾರ್ಥರನೊಲವಿಂದೆ ಬಂದು ಬಂದಿಸಿದರವರ್ ೧೦೬

ವ॥ ಅಂತು ನಿರ್ಭರ ಗುರುಭಕ್ತಿಪೂರ್ವಕಂ ಬಂದಿಸಿ

ಮ॥ ವಿತತಾನೂನಜಡಾತ್ಮಿಕಾಪಗೆಯ ಸೇವಾಸಕ್ತಿಯಿಂದಂ ಚತು
ರ್ಗತಿಸಂಸಾರಪರಿಭ್ರಮಶ್ರಮಮನೀ ಯೋಗೀಂದ್ರರುಂದ್ರಾಚಳೋ
ತ್ಥಿತ ವಾಕ್ಯಾಮೃತಪೂರ್ಣಸಿಂಧು ಕಳೆಗುಂ ಕೇಳ್ದಂದೆನುತ್ತುಂ ಸಮು
ನ್ನತ ಧರ್ಮಶ್ರವಣಕ್ಕೆ ಸಾರ್ಥಪತಿಗಳ್ ತಾಮೞ್ತಿಯಂ ಮಾಡಿವರ್ ೧೦೭

ವ॥ ಅಂತವರ ಪರಿಣಾಮವಿಶೇಷಮಂ ಕಂಡು

ಕಂ॥ ಮದವಜ್ರಘೋಷಗಜಮಂ
ವಿದಿತಂ ತಿಳಿಪಲ್ಕೆ ಪೂರ್ವರಂಗಮಿದೆಂಬಂ
ದದೆ ತಿಳಿಪುತ್ತಿರ್ದರ್ ನವ
ಪದಾರ್ಥತತ್ತ್ವಸ್ವರೂಪಮಮಂ ಯತಿಪತಿಗಳ್ ೧೦೮

ವ॥ ಅಂತಾ ಧರ್ಮಶ್ರವಣಮಮಂ ಶ್ರವಣರಮಣೀಯಮಾಗೆ ಶ್ರಮಣಾಗ್ರಣಿ ಏಕಾಗ್ರದಿಂ ಕೇಳ್ವ ಶ್ರಾವಕನಿಕಾಯಕ್ಕೆ ಮಾಡುತ್ತಿರ್ಪನ್ನೆಗಂ

ಕಂ॥ ಕುಂಜರಶೈಳಂ ತನ್ನಿಂ
ದಂ ಜಗದೊಳ್ ನೆಗಱ್ದುದಾ ಪೆಸರಿನೆಂಬವೊಲೇಂ
ರಂಜಿಸಿ ಬಳೆಯುತ್ತಿರ್ದುದೊ
ಕುಂಜರಮಾ ವಜ್ರಘೋಷನಾಮಸುಧಾಮಂ ೧೦೯

ಸಲೆ ಪೋತ ಚಿಕ್ಕ ಸುಲಲಿತ
ಕಲಭ ಜವನ ಕಾಂತರೂಪಕಲ್ಯಾಣಸಮು
ಜ್ವಳಯೋದಯೋದತರ ಕೃಶ
ಬಳಹೀನ ಸ್ಥವಿರ ವೃದ್ಧಮೆಂಬಿವುದಶೆಗಳ್ ೧೧೦

ವ॥ ಅಂತೊಗೆದು ಸೊಗಯಿಸುವ ದಶವಿಧದಶೆಗಳೊಳ್

ಕಂ॥ ಜವನಮೆನಿಸಿರ್ದ ನಿಜದಶೆ
ಜವನನಧಃಕರಿಸೆ ವಿಳಯಜಳಧರಕುಲಭೈ
ರವರವಮನಿೞಿಸೆ ದೃಢಘನ
ರವರಭಸಂ ಕಣ್ಗೆವಂದುದಂದು ಗಜೇಂದ್ರಂ ೧೧೧

ಕಮನೀಯಕಾಯಮುಚ್ಚ್ರಯ
ಸಮಹಸ್ತಾಯತ್ತಮಖಿಳಶುಭಲಕ್ಷಣಮು
ತ್ತಮಭದ್ರಜಾತಿಜಾತಂ
ಸಮಸರ್ವಾಂಗಾತಿಸುಂದರಂ ಪ್ರೌಢಗಜಂ ೧೧೨

ಉ॥ ಶ್ರೀವರಸಲ್ಲಕೀವನದ ಪಲ್ಲವಮಂ ನಲವಿಂದೆ ಮೇದು ರಾ
ಜೀವಪರಾಗಪುಂಜಪರಿಪಿಂಜರಿತೋರುತರಂಗಸಂಗವೇ
ಗಾವತಿಯಂಬುವಂ ಕುಡಿದು ನಂದನಚಂದನಕುಂಜರಾದ್ರಿಕುಂ
ಜಾವಳಿಯೊಳ್ ವಿಹಾರಿಸಿ ವಿರಾಜಿಸುತ್ತಿರ್ಪುದು ಗಂಧಸಿಂಧುರಂ ೧೧೩

ಚಂ॥ ಕದಪಿನ ಚಿಕ್ಕಪೋತ ಕರಿಣೀಗಣಮಂ ನವಪಲ್ಲವಂಗಳಂ
ಮುದದೊಳೆ ಮುನ್ನೆ ಮೇಯಿಸಿ ಬೞಿಕ್ಕದು ಮೇದು ನದೀಜಳಂಗಳಂ

ಪದಪಿನೆ ಮುನ್ನ ಮೂಡಿಸಿ ಬಱಿಕ್ಕೊಲೆದೂಡಿ ಪೊದಟ್ಟಿ ಶಯ್ಯೆಯೊಳ್
ಮದಕರಿ ಮುನ್ನಮೊಯ್ದಿರಿಸಿ ತಾಂ ಬಱಿಕಿರ್ಪುದು ರಮ್ಯಶಯ್ಯೆಯೊಳ್ ೧೧೪

ಕಂ॥ ವಿಕಸಿತ ಕನಕಾಂಬುರುಹಾ
ಧಿಕರೇಣು ಕರೇಣು ಸೂಸೆ ಸಿಂಧುರಮೆನೆ ಮ
ಸ್ತಕದೊಳೆ ರಂಜಿಸುತಿರೆ ಸಲಿ
ಲಕೇಳಿಯೊಳ್ ಲೀಲೆವಡೆದುದಾ ಶುಂಡಾಳಂ ೧೧೫

ಅತಿನಿಷ್ಠುರತರನಿಜಬೃಂ
ಹಿತಸಂಹತಿಯಿಂದಮೊಡೆಯೆ ವಿತತಕ್ಷಿತಿಭೃ
ತ್ತತಿಯಾ ಗಜಪತಿಗಂದ
ನ್ವಿತಮಾದುದು ವಜ್ರಘೋಷಮೆಂಬಭಿಧಾನಂ ೧೧೬

ಅತಿಚಿತ್ರಂ ಮದದಿಂ ಶುಂ
ಗತೆಯಿಂ ಶುಭಲಕ್ಷಣಂಗಳಿಂ ಬಳದಿಂದ
ಪ್ರತಿಮಾನಮೆನಿಸಿ ಮತ್ತಂ
ಪ್ರತಿಮಾನವಿರಾಜಮಾನಮಾ ಗಜರಾಜಂ ೧೧೭

ವ॥ ಅಂತು ಬಳೆಯುತ್ತುಮಿರೆ

ಕಂ॥ ನವಯೌವನಲಕ್ಷ್ಮಿಯೊಳಾ
ಗೆ ವಿವಾಹಂ ತಿಳಕಮಿಟ್ಟವೋಲ್ ತಿಳಕೆಯದೊ
ಪ್ಪುವ ಕತ್ತುರಿಯಂ ತೊಡೆದಂ
ತೆವೊಲರ್ಧಕಪೋಳೆ ಪುಟ್ಟಿದುದು ಗಜಪತಿಯೊಳ್ ೧೧೮

ವ॥ ಅನಂತರಂ

ಕಂ॥ ನೀಳದ ಕಂಠಿಕೆಯಂ ಶುಂ
ಡಾಳಶಿರೋಮಣಿಗೆ ಕಟ್ಟಿದಂತಿರೆ ಚೆಲ್ವಂ
ಪಾಳಿಸುತಿರ್ದುದು ಮಧುಕರ
ಮಾಳಾಶೋಭಿತಮದಾನುಬಂಧಿನಿಧಾನಂ ೧೧೯

ಮ॥ ನದಿಯೊಳ್ ನೀರಜಗಂಧಮಂ ಕುಧರದೊಳ್ ಕಸ್ತೂರಿಕಾಗಂಧಮಂ
ಹೃದಯಾನಂದನ ನಂದನಾಂತರದೊಳುದ್ಯನ್ಮಾಲತೀಗಂಧಮಂ
ಮದಗಂಧಂ ಗೆಲೆವಂದ ಚಾರಿಣಿಯಿನುನ್ಮತ್ತಾಳಿಸಂದೋಹಸ
ಮ್ಮದಸಂಧಾರಿಣಿಯಿಂ ವಿರಾಜಿಸುತುಮಿರ್ಕುಂ ವಜ್ರಘೋಷದ್ವಿಪಂ ೧೨೦

ಕಂ॥ ಕಟನಿಕಟೋತ್ಕಟಮದಲಂ
ಪಟ ಮಧುಕರನಿಕರ ಮಧುರ ಝುಂಕಾರರವಂ

ಪಟುಪಟಹಮೆನಿಸೆ ನೆರೆದು
ತ್ಕಟಕರಿಣೀಗಣದ ಸೋಂಕಿನಿಂದೆಸೆದಿರ್ಕುಂ ೧೨೧

ಎಡೆಯುಡುಗದ ದಾನಿಗಿದ
ಕ್ಕೆಡೆಯಜಿಯದೆ ಕೊಟ್ಟು ಮಾಣ್ಬ ಮಿಕ್ಕ ಗಜಂಗಳ್
ಪಡಿಯಪ್ಪುವೆ ಪೇಟಿಂಬವೊ
ಲೆಡೆಗಿಜಿದಳಿರುತಿಯಿನಾ ಗಜಂ ಸೊಗಯಿಸುಗುಂ ೧೨೨

ಮಾತಂಗದಾನವಿಭವಂ
ಮಾತೇನೆನಿವಿರಿದದಾದೊಡಂ ಚೇತಸ್ಸಂ
ಪ್ರೀತಿಯನತೀವಮಳಿನವಿ
ಜಾತಿಗೆ ಮಧುಪವ್ರಜಕ್ಕೆ ಮಾಟ್ಪುದೆ ಸಹಜಂ ೧೨೩

ಒದವಿದ ಮದಜಲದಿಂ ತೀ
ವಿದ ನಗದಿಡುವುಗಳೊಳೆಯ್ದೆ ಮುಱುಗಿರೆ ಯಮುನಾ
ಹ್ರದದೊಳ್ ಮುಱುಗಿದವೋಲ್ ತೋ
ರ್ಪುದು ನೋಟ್ಪೊಡೆ ನಾಡೆ ಚೆಲ್ವುವಡೆದು ಕರೀಂದ್ರಂ ೧೨೪

ಎರಡುಂ ತಟಮಳಿಮಿಳಿತಂ
ಸರೋವರಂ ಸುರಿವ ಮದಜಲಂ ನದಿಯೆನೆ ಪು
ಷ್ಕರ ವರಕರಪ್ರಣಾಳೀ
ಪರಿಕಳಿತಂ ನೀಳಗಿರಿಗೆ ಕರಿ ದೊರೆಯೆನಿಕುಂ ೧೨೫

ಗಗನೋನ್ನತಗಜದ ಮದಂ
ಪ್ರಗಂಡಗಳಿತಂ ಪ್ರವಾಹಮೆಸೆಗುಂ ಯಮುನಾ
ಪಗೆಯುಂ ಗಂಗೆಯವೋಲ್ ತ್ರಿಪ
ಥಗೆಯೆನಿಸಿ ತ್ರಿಪ್ರವಾಹಮಮಂ ತಾಳ್ದಿದವೋಲ್ ೧೨೬

ಆ ವಜ್ರಘೋಷದಾನಾಂ
ಭೋವಿಸರಪಟುಪ್ರವಾಹಭರದಿಂದಂ ವೇ
ಗಾವತಿಯೆಂಬೀ ಪೆಸರಂ
ಭಾವಿಸೆ ತತ್ಸಿಂಧು ತಳೆದುದೆನೆ ಪೊಗಟದರಾರ್ ೧೨೭

ಮಸ್ರ॥ ಮದಗಂಧಕ್ಕನ್ಯವನ್ಯದ್ವಿರದನತತಿ ಬೆನ್ನಿತ್ತು ಮತ್ತೆಲ್ಲಿಯುಂ ನಿ
ಲ್ಲದೆ ಶಂಕೋದ್ರೇಕದಿಂದಂ ದೆಸೆಯ ಕಡೆವರಂ ಪೋದುವಾಶಾಧಿನಾಥ
ರ್ಗೆ ದಿಟಂ ವಾಹಂಗಳಾಗಿರ್ದಪುವೆನೆ ಪೆಱತೇಂ ವಜ್ರಘೋಷದ್ವಿಪೇಂದ್ರ
ಕ್ಕಿದಿರಾಂಪುಸ್ತತ್ರ ಹಸ್ತಿಪ್ರತತಿಯಜಿಸುವಂದಿಲ್ಲ ದಲ್ ಕಾಡೊಳೆಲ್ಲಂ ೧೨೮

ಮ॥ ಮದಗಂಧಂ ಪುದಿದಿರ್ದ ಕುಂಜರಕುಭೃತ್ಕುಂಜಕ್ಕೆ ವೇಗಾವತೀ
ನದಿಗುತ್ಪಲ್ಲವ ಸಲ್ಲಕೀವನಕೆ ವನ್ಯೇಭವ್ರಜಂ ಪೊರ್ದದಿ

ರ್ಪುದಱಿಂ ನಿಷ್ಪ್ರತಿಪಕ್ಷರಾಜ್ಯಪದದೊಳ್ ತೇಜಸ್ವಿ ರಾಜಂ ಮನೋ
ಮುದದಿರ್ಪಂದದಿನಿರ್ಪುದಾ ವನಗಜಂ ನಾನಾವಿನೋದಪ್ರಿಯಂ ೧೨೯

ಚಂ॥ ಮದಜಳನೀಳಕಂಠಕಳಿತಂ ವಿಷಮಾನಳಭೀಮಲೋಚನಂ
ಪದನತದಾನವಾರಿ ಗಿರಿಶಂ ಗಿರಿಜಾಧಿಕನೂತ ಕೇಳಿ ಕ
ಣ್ಗೊದವಿದ ಶೋಭೆಯಂ ಕುಡುತುಮಿರ್ಪುದು ನಾಗಶಿರೋವಿಭೂಷಣಂ
ವಿದಿತಗಜಾಸುರೇಂದ್ರನನೆ ಮರ್ದಿಸಲುಗ್ರನಿಭೇಂದ್ರನಾದವೋಲ್ ೧೩೦

ಕಂ॥ ಕ್ರೋಧಿನಿ ಸಮಗ್ರತರ ಜಯ
ಬೋಧಿನಿ ದುರ್ವಾರವಾರಣಾಧಿಕಮದಸಂ
ರೋಧಿನಿ ನಗಮೃಗನಿಕರವಿ
ರೋಧಿನಿ ಮದಲಕ್ಷ್ಮಿಯುದಯಿಸಿತ್ತಿಭಪತಿಯೊಳ್ ೧೩೧

ವ॥ ಆ ಸಮಯದೊಳ್

ಕಂ॥ ಬಿಸುನೆತ್ತರೊಗೆಯೆ ರದಮಂ
ಬಿಸಮಂ ಕೀಱ್ವಂತೆ ಕಿಱ್ತು ಮತ್ತಗಜೇಂದ್ರಂ
ಮಸಕಮನಾಂತಿಭಕುಳಮಂ
ಮಸಕಮನೊರಸುವವೊಲೊರಸುವುದು ನಿಜಕರದಿಂ ೧೩೨

ವ॥ ಅಂತುದಯಿಸಿದ ಕ್ರೋಧಿನಿಯಿಂ ಕ್ರೋಧಾವಿಳನುಮತಿವರ್ತಿನಿಯೊಳತಿವರ್ತಿಯುಂ ಸಂಭಿನ್ನಮದಮರ್ಯಾದೆಯೊಳ್ ಮರ್ಯಾದೆಯಂ ಮೀಱಿ ಸ್ವಾತಂತ್ರ್ಯಮದಾಕ್ರಾಂತಸ್ವಾಂತನುಂ ಯೌವನಮದಿರೋನ್ಮತ್ತಚಿತ್ತನುಂ ದ್ರವಿಣಮದಗ್ರಹಗ್ರಸ್ತನುಮವಿವೇಕಮದನವಿದ್ರಾವಿತವಿವೇಕನುಮಪ್ಪ ರಾಜಕುಮಾರನಂತಾ ಗಜರಾಜಕುಮಾರಂ ಮದಾಂಧಕಾರದಿಂ ಮುಂದುಗಾಣದನರ್ಥಸಾರ್ಥತತ್ಪರನಾಗಿ

ಮಸ್ರ॥ ವಿಳಯಾಬ್ಧಿಕ್ಷೋಭಮುಜ್ಜೃಂಭಿತ ಸಕಳಮದಕ್ಷೋಭಮುದ್ದೀಪ್ತಕಾಳಾ
ನಳನಾತ್ಮೀಯಪ್ರಕೋಪಂ ಪ್ರಳಯಸಮಯತೀವ್ರಾನಳಂ ವೇಗಮುಚ್ಚೃಂ
ಖಳಕಲ್ಪಾಂತಾಂತಕಂ ತಾನೆನೆ ಮಸಗಿ ಜಗಂ ಭೀತಿಗೊಳ್ವಂತು ಭೂತಾ
ವಳಿಯಂ ಕೊಂದತ್ತು ರಕ್ತಾರ್ಣವಮೊಗೆವಿನೆಗಂ ವಜ್ರಘೋಷದ್ವಿಪೇಂದ್ರಂ ೧೩೩

ಸ್ರ॥ ಕೋಡೊಳ್ ಕೋದೆತ್ತುತುಂ ದಂತಿಗಳನೆ ತಿಱಿಕಲ್ಲಾಡುವಂತಂಬರಕ್ಕೀ
ಡಾಡುತ್ತುಂ ತುಂಗಶೈಳಂಗಳನೆ ಮೃಗಸಮೂಹಂಗಳಂ ಮೆಟ್ಟಿ ಸೀ
ಳ್ದೀಡಾಡುತ್ತುಂ ನೋಡಲಾರುಂ ನೆಱೆವ ಸುಭಟರಿಲ್ಲೆಂಬಿನಂ ತನ್ನ ಕಾಯ್ಪಂ
ನೀಡುಂ ನೀಡುತ್ತುಮೆಯ್ತಂದುದು ಪವನಜವಂ ರುಂದ್ರಗಂಧದ್ವಿಪೇಂದ್ರಂ ೧೩೪

ಉ॥ ಪೆರ್ಚಿದ ಕೋಪದಿಂದೆ ಮುಱಿಯುತ್ತೆ ಮಹೀರುಹಮಂ ಕಡಂಗಿ ಕೋ
ಡುರ್ಚೆ ಮೃಗಂಗಳಂ ವನಗಜಂಗಳನೋವದೆ ಸೀಱ್ದು ನೀಳ್ದ ಕಾ
ಲ್ಕಿರ್ಚಿನ ಮಾಱ್ಕೆಯಿಂ ತವಿಸುತುರ್ವಿದ ತೀವ್ರತೆಯಿಂ ಮದಾಂಧನಾ
ಸಾರ್ಚುಮನೆಯ್ದೆವಂದುದು ಜಗಂ ಬೆದಱುತ್ತಿರೆ ಗಂಧಸಿಂಧುರಂ ೧೩೫

ವ॥ ಅಂತಾ ಸಾರ್ಥಪತಿಗಳುಂ ಯತಿಪತಿಗಳುಮಿರ್ದ ಸಾರ್ಥಮನೆಯ್ದುವಂದು

ಚಂ॥ ಬೆದಱಿದ ಬಾಳವೃದ್ಧರನೆ ಬಾಯ್ಬಿಡೆ ಬಾಯ್ಬಿಡೆ ಸೀೞ್ದು ಬಂ
ದದಿರದೆ ನಿಂದ ಬೀರರನೆ ಬೊಬ್ಬಿಡೆ ಬೊಬ್ಬಿಡೆ ತಗ್ಗುಗುಟ್ಟಿ ಲಾ
ಯದ ತುರಗಂಗಳಂ ತರವೆ ಗೋಳಿಡೆ ಗೋಳಿಡೆ ಕೋಡೊಳೆತ್ತಿ ಕ
ಟ್ಟಿದ ಮದದಂತಿಯಂ ಜಿಡದೆ ಘೀಳಿಡೆ ಘೀಳಿಡೆ ಕೊಂದುದಾ ಗಜಂ ೧೩೬

ಕಂ॥ ಏಕಾಶೀತಿವಿಧಂ ವಧೆ
ಲೋಕಸ್ಥಿತಿ ಚತುರಶೀತಿಲಕ್ಷಪ್ರಮಿತಾ
ವ್ಯಾಕುಳಯೋಗಿಯ ಜೀವ
ಕ್ಕಾಕಂಪಮನೀಯೆ ಕೊಂದುದಿಭಪತಿ ಪಲರಂ ೧೩೭

ಅನುಪಮಯೋಗೀಶ್ವರನವೊ
ಲೆನಿತೊಳವು ಧರಿತ್ರಿಯಲ್ಲಿ ಸಚರಾಚರಮಂ
ತನಿತುಮನೊರ್ಮೊದಲೊಳೆ ನೆ
ಟ್ಟನೆ ತನ್ನಿಂ ಭಿನ್ನಮೆನಿಸಿ ಭಾವಿಸಿತು ಗಜಂ ೧೩೮

ರದನದೊಳೆರಡಱೊಳಂ ಸು
ತ್ತಿದ ಕರುಳ ಪಿಣಿಲ್ಗಳಲ್ಲಿ ತೊಡರ್ದೆಟಿಲ್ವ ಪೆಣಂ
ಮದಲಕ್ಷ್ಮಿಯ ಲೀಲಾಂದೋ
ಳದ ಲೀಲೆಯನಾಂತುಗೊಂಡಾ ಶುಂಡಾಳಂ ೧೩೯

ಉ॥ ಅಂತು ಕೃತಾಂತನಂತೆ ಕೊಲುತೆಯ್ದುವ ದಂತಿಯನಾ ಮುನೀಶ್ವರಂ
ಶಾಂತರಸಾಬ್ಧಿ ಕಂಡಿದಱಿನಪ್ಪುಪಸರ್ಗಮೆ ಪಿಂಗುವಂತಿರೋ
ರಂತೆ ಶರೀರಸನ್ನ್ಯಸನಮಿನ್ನೆಮಗೆಂದಿರೆ ಸಾರ್ಥನಾದರುಂ
ಭ್ರಾಂತಿವಿಹೀನರಾ ತೆಱದೆ ನಿಶ್ಚಳರಾಗಿರೆ ಮಂದರಾದ್ರಿವೋಲ್ ೧೪೦

ಕಂ॥ ಅತಿನಿಷ್ಠುರತರವಾತಾ
ಹತಿಗೆ ಪರಲ್ ಪಾಱುವಂದದಿಂದಮದೇಂ ಪ
ರ್ವತಮುಂ ಪಾಱುಗುಮೋಯೆನೆ
ಧೃತಿಧೃತಿಗಳ್ ನಿಂದರಿತರರಿರದೋಡಿದೊಡಂ ೧೪೧

ವ॥ ಅಂತು ಮೂವರುಮಜಯ್ಯಮನರ್ ಜನಮೆಲ್ಲಂ ಪುಯ್ಯಲಿಡೆಯಿಡೆ ಕೆಯ್ಯಿಕ್ಕಿ ನಿಲೆ

ಕಂ॥ ಕೋಡಿಸೊಳೊತ್ತುವೆನಿರ್ವರ
ನೀಡಾಡುವೆನಿರದೆ ಕರದಿನೊರ್ವನನೆನುತುಂ
ಕಾಡಾನೆ ಕಡುಪಿನಿಂ ಜನ
ಮೋಡುವಿನಂ ಮುಟ್ಟೆವಂದುದಾ ಮೂವರುಮಂ ೧೪೨

ಮಾತೇಂ ಋಷಿವಧೆಗಂ ವಿ
ಖ್ಯಾತೋನ್ನತಜಾತಿ ಜಾತವಧೆಗಂ ಕ್ರೋಧಾ
ನ್ವಿತಂ ಪೇಸುಗುಮೇಯೆನೆ
ಮಾತಂಗಂ ಮುಳಿದು ಮುಟ್ಟಿವಂದತ್ತವರಂ ೧೪೩

ಮುನಿಕುಂಜರನಾಮಕ್ಕದು
ಮುನಿದೆಯ್ದುವ ತೆಱದಿನೆಯ್ದಿ ಘನಸತ್ವಂ ನೆ
ಟ್ಟನೆ ಕೆಯ್ಯಿಕ್ಕಿರೆ ಬೆದಱ್
ತ್ತನೆ ಪೆಱಮೆಟ್ಟಿತ್ತು ವಿಸ್ಮಯಂ ಪುಟ್ಟುವಿನಂ ೧೪೪

ಮ॥ ಮುನಿವಕ್ಷಸ್ಸ್ಥಿತಮಂ ಸ್ವಕೀಯಹಿತಮಂ ಶ್ರೀವತ್ಸವಿಖ್ಯಾತಲಾಂ
ಛನಮಂ ತತ್ತ್ವವಿವೇಕಲೋಚನಮನಾತ್ಮಾತೀತಜನ್ಮಪ್ರಕಾ
ಶನಮಂ ಸಚ್ಚರಿತೋಪದೇಶನಮನಾಗಳ್ ಕಂಡು ಕೆಯ್ಕೊಂಡು ತಾ
ನೆನಸುಂ ಶಾಂತಿಯನಪ್ರಮತ್ತನವೊಲೇನಿರ್ದತ್ತೊ ಮತ್ತದ್ವಿಪಂ ೧೪೫

ಮಸ್ರ॥ ಮಹನೀಯಂ ಮಂತ್ರಸಿದ್ಧಂ ಬಿಡೆ ಪಿಡಿದ ಮಹಾಮುದ್ರೆಯಂ ಕಂಡು ದುಷ್ಟ
ಗ್ರಹಮಾದಂ ಶಾಂತಿಯಂ ತಾಳ್ದುವ ತೆಱದರವಿಂದಾಖ್ಯಯೋಗೀಂದ್ರವಕ್ಷೋ
ವಿಹಿತಶ್ರೀವತ್ಸಮಂ ಲಾಂಛನಮನೊಲವಿನಿಂ ಕಂಡು ಮೆಯ್ವೆತ್ತುದಂ ದು
ರ್ವಹಕೋಪಾಟೋಪಮುಂ ಬಿಟ್ಟೆಸೆದುದು ಶಮದಿಂ ವಜ್ರಘೋಷದ್ವಿಪೇಂದ್ರಂ ೧೪೬

ಚಂ॥ ರವಿರುಚಿಯಿಂದೆ ಬೆಂದಚಳಮಾಗಳೆ ನೀಳಘನಂಗಳಿಂದಮಾ
ಱುವವೊಲುದಗ್ರಕೋಪವಶಮಾಗಳೆ ಪೆತ್ತುಪಶಾಂತಮಾದುದೊ
ಪ್ಪುವ ಕರಿ ಕಾಲಲಬ್ಧಿವಶದಿಂ ಕ್ಷಣದಗ್ಗಳಮಾತ್ಮನಲ್ಲಿ ಪು
ಟ್ಟುವ ಪರಿಣಾಮಮಪ್ಪುದಿರದೆಂಬ ಜಿನೋಕ್ತಿಯೆ ಸತ್ಯಮಪ್ಪಿನಂ ೧೪೭

ಉ॥ ಅಂತು ನಿರಂತರಂ ತಳೆದ ಶಾಂತರಸಂ ಕರೆಗಣ್ಮುವಂದದಿಂ
ದಂ ತರದಿಂದೆ ಸೂಸುತಿರೆ ಕಣ್ಬನಿ ಸಂಯತನಪ್ಪುದಕ್ಕಿದೋ
ರಂತಿರೆ ಸೂಚಕಂ ಗಡೆನೆ ದುರ್ಮದಮಂ ಬಿಸುಟಾ ಮುನೀಂದ್ರಪಾ
ದಾಂತಿಕದಲ್ಲಿ ಬಂದೆಱಗಿದತ್ತುಪಶಾಂತಮನಂ ಮಹಾಗಜಂ ೧೪೮

ವ॥ ಅಂತು ಜಾತಿಸ್ಮರನಾಗಿ ಭದ್ರಜಾತಿ ಜಾತರೂಪಧರರ ಪಾದಪಯೋಜಾತಕ್ಕೆ ಪೂರ್ವಭವದ ನಿಜಸ್ವಾಮಿಯೆಂಬುದನಱಿದೆಱಗಿದಪ್ಪುದುಮದಱ ಮುನ್ನಿನ ತೀವ್ರತೆಯುಮಂ ಬಟಿಕ್ಕಾದುಪಶಮಭಾವಮುಮಂ ಕಂಡಿದು ಜಾತಿಸ್ಮರಣಪರಿಣತಮಾಗಲೆವೇೞ್ಕುಮೆಂದು ನಿಶ್ಚಯಿಸಿ ಸಾರ್ಥಪತಿಗಳುಂ ಯತಿಪತಿಗಳ್ಗೆ

ಕಂ॥ ಅಧಿವಿಲೋಚನದಿಂದೆಸೆ
ವವರ್ಗಳೆ ತಿರಿಕಂಗಳಪ್ಪುವಂ ತಿಳಿಪುಗುಮೆಂ
ದವಱ ಪರಿಣಾಮಮಂ ಮಿ
ಕ್ಕವರ್ಗಳ್ ತಿಳಿಗುಮೆ ವಿವೇಕವಿರಹಿತಮತಿಗಳ್ ೧೪೯

ಮಾತಂಗಂ ನಿಜತಿರ್ಯ
ಗ್ಜಾತಿತ್ವಮನೀಗಳಿಂತೆ ಭವದಂಘ್ರಿಪಯೋ
ಜಾತಪ್ರಸಾದದೊಳೆ ಬಿಡು
ವೀ ತೆಱನಂ ಜಳಕನೆಮಗಮಱಿಪುಗುಮಲ್ತೇ ೧೫೦

ವ॥ ಎಂದದಱ ಜಾತಿಸ್ಮರತ್ವಮಂ ತಿಳಿದು ಬಿನ್ನವಿಸೆ ಬುದ್ಧಿಗಸಾಧ್ಯಮಿಲ್ಲೆಂದು ಮೆಚ್ಚುತ್ತುಮವಧಿಬೋಧದಿನವಗತವೃತ್ತಾಂತರಾಗಿ ನಾಗಪತಿಯಂ ತಿಳಿಪುವ ನೆವದಿಂದ ವರ್ಗಮದಱತೀತಜನ್ಮಮಂ ಪ್ರಕಟಂ ಮಾಡಲ್ವೇಡಿ ಮುನಿಪತಿಗಳಾ ಕರಿಪತಿಗಿಂತೆಂದರ್

ಕಂ॥ ಮಾತಂ ಕೇಳದೆ ಮುಂ ಮರು
ಭೂತಿಯನೀತಿಯೊಳೆ ನಡೆದು ಪುಟ್ಟಿದೆ ತಿರ್ಯ
ಗ್ಜಾತಿಯೊಳವಿವೇಕಮೆ ಸುಖ
ಘಾತುಕಮಱಿವೊಂದೆ ದೇಹಿಗಪ್ಪುದು ಸುಖದಂ ೧೫೧

ಒಂದಾರ್ತದಿನೊಗೆದಘದಿಂ
ದಂ ದುರ್ಗತಿವಡೆದೆಯೆಂದೊಡವಿರಳ ಹಿಂಸಾ
ನಂದನದಿನಾರ್ತರೌದ್ರದಿ
ನೊಂದುವ ದುಷ್ಕರ್ಮದಳವನಾರ್ ಪವಣಿಸುವರ್ ೧೫೨

ಎನೆ ವಿನಯವಿನತಮಿಭಪತಿ
ಮುನಿಪತಿಯ ಮುಖಾರವಿಂದಮಂ ನೋಡಲ್ ನೆ
ಟ್ಟನೆ ನಾಣ್ಚಿತಂತೆ ಸಜ್ಜನ
ಗನುಚಿತವರ್ತನಮೆ ಲಜ್ಜೆಯಂ ಮಾಡ್ಪುದೆ ದಲ್ ೧೫೩

ವ॥ ಅಂತಾ ದಂತಿ ತಾಗಿಬಾಗುವಂದದಿಂದವರ ಪದಾಂಬುಜಕ್ಕೆ ಬಾಗಿ ಕೆಯ್ಯಗ್ಗಮುವ ಕಣ್ಬನಿಯ ಪೊನಲೊಳೋಲಾಡುತ್ತುಮಿರೆ ಕಾರುಣ್ಯರಸಾರ್ದ್ರಚಿತ್ತಂ ಮುನಿಕುಂಜರಂ ಕುಂಜರಂಗೆ ಮತ್ತಿಂತೆಂದರ್

ಮಸ್ರ॥ ಅವಿವೇಕಂ ಪೂರ್ವಜಾತಂ ಕಮಠನದು ದಲೆಂದೊಲ್ಲದನ್ಯೂನವಿಜ್ಞಾ
ನವಿದಂ ನೀನೆಂದು ನಿಮ್ಮಮ್ಮನೆ ನಲಿದೆಮಗಪ್ಪಯ್ಸೆ ದುರ್ಮೋಹದಿಂದ ನೀ
ನವನಂ ತರ್ಪಂತು ದೇವರ್ ಬೆಸಸುವುದೆನಲಾಂ ಬೇಡಬೇಡೆಂದೊಡಂ ನೀ
ನವಕರ್ಣಂಗೆಯ್ದನಿತ್ತುಗ್ರತರವಿಷಮದುಃಖಕ್ಕೆ ಪಕ್ಕಾದೆಯಲ್ತೇ ೧೫೪

ಕಂ॥ ಅಂದಱಿಯದೆಸಗಿದ ನಯ
ಕ್ಕಿಂದೀ ತೆಱದಿಂದಮಟಲುತಿರ್ದೊಡೆ ನಿನಗೇ
ವಂದಪುದೊ ಪೋದ ತೊೞಿಯಂ
ಪಿಂದಂ ಕಟ್ಟುವರೆ ಧರ್ಮಮಂ ನೆನೆ ಮನದೊಳ್ ೧೫೫

ವ॥ ಅಂತು ಕಾರುಣ್ಯಜಳಧಿಗಳ್ ತಿಳಿಪೆ ತಿಳಿದು

ಮಸ್ರ॥ ಶುಭದ ಪ್ರಾಯೋಗ್ಯತಾಘೋಪಶಮನ ಸುವಿಶಾದಾಖ್ಯ ಲಬ್ಧಿತ್ರಯಂಗಳ್
ವಿಭವಂಬೆತ್ತೊಪ್ಪೆ ಸದ್ದರ್ಶನಮಹಿತ ಸಮಾಲಬ್ಧಿ ಮೆಯ್ದೋಱೆ ವಿದ್ಯಾ
ವಿಭು ಕಾರುಣ್ಯಾರ್ದ್ರಚಿತ್ತಂ ಯತಿ ಬೆಸಸುವುದಂ ಕೇಳಲುದ್ಯುಕ್ತಮಾದ
ತ್ರಿಭರಾಜಂ ಪುಣ್ಯಬೀಜಂ ಸುಕವಿಜನಮನೋಹರ್ಷಸಸ್ಯವರ್ಷಂ ೧೫೫

ಗದ್ಯ

ಇದು ವಿದಿತ ವಿಬುಧಲೋಕನಾಯಕಾಭಿಪೂಜ್ಯ ವಾಸುಪೂಜ್ಯಜಿನಮುನಿ ಪ್ರಸಾದಾಸಾದಿತ ನಿರ್ಮಳಧರ್ಮ ವಿನುತವಿನೇಯಜನವನಜವನವಿಳಸಿತ ಕವಿಕುಳತಿಳಕಪ್ರಣೂತ ಪಾರ್ಶ್ವನಾಥಪ್ರಣೀತಮಪ್ಪ ಪಾರ್ಶ್ವನಾಥಚರಿತಪುರಾಣದೊಳ್ ಮರುಭೂತಿಚರ ಗಜರಾಜಾರವಿಂದ ಮುನಿರಾಜದರ್ಶನವರ್ಣನಂ ಚತುರ್ಥಾಶ್ವಾಸಂ

ಪಂಚಮಾಶ್ವಾಸಂ

ಕಂ॥ ಶ್ರೀಮುನಿಮುಖಮಂಬೋಧ
ಶ್ರೀಮಿತ್ರಾಭ್ಯುದಯದಿವಸಮುಖಮಂ ವಿಪುಳ
ಪ್ರೇಮದಿನೀಕ್ಷಿಸುತಿರ್ದುದು
ಸಾಮಜಪತಿ ಕೋಕದಂತೆ ಕವಿಕುಳತಿಳಕಂ ೧

ಅಂತವರ ಮುಖಾಂಬುಜಮಂ
ಮುಂತನಿಮಿಷಪದಮದೀ ತೆಱದೆ ತನಗಕ್ಕುಂ
ಭ್ರಾಂತಿಲ್ಲದೆಂಬುದಂ ಪೇ
ಳ್ವಂತೆಮೆಯಿಕ್ಕದೆ ನಿರೀಕ್ಷಿಸುತ್ತಿರೆ ಭರದಿಂ ೨

ಚಂ॥ ಅದಱುಪಶಾಂತಿಯಂ ನೆಗಟ್ದಿ ಓಂಸೆಗೆ ಕೊಕ್ಕರಿಸುತ್ತುಮಿರ್ಪುದಂ
ಪುದಿದಘಬಂಧಮಾಪತೆಱದಿಂದಮ ಪೋಕುಮೆನುತ್ತೆ ಚಿಂತಿಮೊಂ
ದುದಿತವಿವೇಕಮಂ ನಿಜಪದಾಂಬುಜಭಕ್ತಿಯನಾತ್ಮನಿಂದೆಗೋ
ವದೆ ತಱಿಸಂದುದಂ ಮುನಿ ಪರೀಕ್ಷಿಸಿದಂ ಪರಬೋಧದೃಷ್ಟಿಯಿಂ ೩

ವ॥ ಅಂತು ನಿರೀಕ್ಷಿಸುತ್ತುಮಿರೆ

ಕಂ॥ ಎಲ್ಲಮುಮಂ ತಿಳಿಪಲ್ ಮಿಗೆ
ಬಲ್ಲರಿವರ್ ಬಗೆಗೆ ವಂದುದಂ ಬೆಸಗೊಳ್ವೊ
ಳ್ಳೆನಗದಱಿನುಣಲ್ ಕ
ಲ್ತಲ್ಲಿಯೆ ಪಸವಾದುದೆಂಬುದೆನಗಾಯ್ತಾಗಳ್ ೪

ವ॥ ಎಂದು ಚಿಂತಾಕ್ರಾಂತಮಾದ ದಂತಿಯಭಿಪ್ರಾಯಮನಱಿದು

ಕಂ॥ ಚಿಂತಿಸದಿರು ಭವದೀಯ
ಸ್ವಾಂತದೊಳೇನೇನನಱಿವದಕ್ಕುಂಟದನೋ
ರಂತೆ ನುಡಿದಾಮೆ ನಿನಗೆ ಸ
ಮಂತಱಿಪುವೆವವಧಿಲೋಚನಕ್ಕರಿದುಂಟೇ ೫

ಸ್ವರ್ಮೋಕ್ಷದೊಳ್ ನಿರತಿಶಯ
ಶರ್ಮಪ್ರದದೊಳ್ ಸಮಾಶ್ರಿತರನಿರಿಪುದೆ ಸ
ದ್ಧರ್ಮಮದು ತಾಂ ವಿಚಾರಿಸೆ
ನಿರ್ಮಳರತ್ನತ್ರಯಾತ್ಮಕಂ ತೊದಳುಂಟೇ ೬

ವ॥ ಆ ಪವಿತ್ರ ರತ್ನತ್ರಯಸ್ವರೂಪಮಂ ನಿರೂಪಿಸುವೊಡೆ

ಕಂ॥ ವಿನುತಪದಾರ್ಥದ ನಂಬುಗೆ
ಮನನಂ ನಿಷ್ಪಾಪವೃತ್ತಿಯೆನಿಸುವ ಸದ್ಧ
ರ್ಶನಬೋಧವೃತ್ತರೂಪಂ
ಜಿನಮಾರ್ಗಂ ಪೊರ್ದೆ ಸುಖದಮೆನಿಸುಗುಮಾರ್ಗಂ ೭

ವ॥ ಆ ನೂತ್ನರತ್ನತ್ರಯಂಗಳೊಳ್ ಸಮ್ಯಗ್ದರ್ಶನವಿಷಯವಿಶೇಷಮಂ ವಿಶೇಷಿಸುವೊಡೆ

ಉ॥ ಆಪ್ತನಶೇಷದೋಷರಹಿತಂ ಜಿನನಾಗಮಕರ್ತೃ ವಿಶ್ವಸಂ
ವ್ಯಾಪ್ತಸಮಗ್ರಬೋಧನಿಧಿಯಾ ಜಿನಭಾಷಿತಮುತ್ತಮಂ ಸುಖ
ಪ್ರಾಪ್ತಿನಿಮಿತ್ತಮೆಂದದಱ ಪೇೞ್ಕೆಯಿನಾಚರಿಪರ್ ಮುನೀಂದ್ರರೀ
ವ್ಯಾಪ್ತಿಯನೊಲ್ದು ನಂಬುವುದೆ ದರ್ಶನಮಷ್ಟವಿಧಾಘಕರ್ಶನಂ ೮

ಕಂ॥ ಪರಮಹಿತಂ ಪೂರ್ವಾಪರ
ವಿರೋಧರಹಿತಂ ತ್ರಿಲೋಕಮಹಿತಂ ಕುಮತೋ
ತ್ಕರಸಂಹರಣಂ ಬುಧಜನ
ಶರಣಂ ಸರ್ವಜ್ಞಗದಿತಮಾಗಮಮಕ್ಕುಂ ೯

ಆಗಮವಿದುರಂ ವಿಷಯವಿ
ರಾಗಂ ಪರಿಹೃತಪರಿಗ್ರಹಂ ಗತಪಾಪೋ
ದ್ಯೋಗನಿಜಾತ್ಮಂ ಯೋಗನಿ
ಯೋಗನಿಯೋಜಿತಮನಂ ಮುನೀಶ್ವರನೆನಿಕುಂ ೧೦

ವ॥ ಆ ಸಮ್ಯಕ್ತ್ವಸ್ವರೂಪಸಾಮರ್ಥ್ಯಮಂ ಕೀರ್ತಿಪೊಡೆ

ಮ. ಸ್ರ॥ ಜ್ಯೋತಿಷ್ಕಂ ವ್ಯಂತರಂ ವಿಶ್ರುತಭವನಭವಂ ನಾರಕಂ ಕುತ್ಸಿತಾಂಗಂ
ಸ್ತ್ರೀ ತಿರ್ಯಗ್ಜಾತಿ ಷಂಡಂ ಬಡವನಕುಲನಲ್ಪಾಯುವಜ್ಞಾನಿಯಾಗಂ
ಮಾತೇಂ ಸಮ್ಯಕ್ತ್ವಯುಕ್ತಂ ವ್ರತವಿಕಳನುಮಾಗಿರ್ದುಮೆಂದಂದು ವೃತ್ತ
ವ್ರಾತಕ್ಕಂ ಪಾತ್ರಮಾದಂ ಪಡೆವುದಱಿಂದೆ ನಿರ್ವಾಣಮಮಂ ಸೇವ್ಯಭವ್ಯಂ ೧೧

ಕಂ॥ ಸಂದ ಸುಚರಿತ್ರ ಬೋಧದೊ
ಳೊಂದದೆಯುಂ ದುಃಖಜನಕಮೆನಿಸುವ ನಾಲ್ವ
ತ್ತೊಂದು ತೆಱದಘದ ಬಂಧಮ
ನೆಂದುಂ ಕಿಡಿಸುವುದು ನಿರ್ಮಳಂ ಸಮ್ಯಕ್ತ್ವಂ ೧೨

ಅಸವಸದಿಂ ದೇಹಿಗೆ ಸಮ
ನಿಸಿ ಜಿನರುಚಿ ಮಾಣ್ಬುದಾದೊಡಂ ಲೇಸಂ ಪು
ಟ್ಟಿಸುಗುಂ ಸುವರ್ಣತೆಯನಾ
ಯಸದೊಳ್ ರಸಮೊರ್ಮೆ ಮುಟ್ಟೆಯುಂ ಪುಟ್ಟಿಪವೋಲ್ ೧೩

ಅದೆ ಸತ್ಕುಲಮದೆ ಸದ್ಗುಣ
ಮದೆ ಸಚ್ಛಕ್ತಿಯದೆ ಸಚ್ಚರಿತ್ರಂ ನೋೞ್ಪೊಡಮಂ
ತದೆ ಸಮುಪದೇಶಮೆನಿಸುಗು
ಮುದಯಿಸಿತಾವುದಱೊಳತಿಶಯಂ ಶ್ರದ್ಧಾನಂ ೧೪

ಎನಿತೊಳವು ಸೌಖ್ಯರಾಶಿಗ
ಳನಿತುಂ ಜೀವಕ್ಕೆ ಜನಿಯಿಕುಂ ದರ್ಶನದಿಂ
ದೆನಿತೊಳವು ದುಃಖಕೋಟಿಗ
ಳನಿತುಂ ಮಿಥ್ಯಾತ್ವದಿಂದೆ ಸಮನಿಕುಮಲ್ತೇ ೧೫

ಅದುಕಾರಣದಿಂ ಸಮ್ಯ
ಕ್ತ್ವದ ಸರಿ ಜೀವಕ್ಕೆ ಪೆಱತು ಮಿತ್ರಂ ಮಿಥ್ಯಾ
ತ್ವದ ಸರಿ ಪಗೆವಂ ಪೆಱನಿ
ಲ್ಲಿದು ನಿಶ್ಚಯಮಲ್ತೆ ಭದ್ರಗುಣ ಗಜರಾಜಾ ೧೬

ಜನಿಯಿಪ ಶಂಕಾದಿಗಳೆಂ
ಟನಾಯತನಸೇವೆಯಾಱುಂ ಮೂಢಂ ಮೂಱಂ
ತನುಗತಮದಮೆಂಟಿವು ದ
ರ್ಶನಕ್ಕೆ ಮಳಮೆಣಿಸೆ ಪಂಚವಿಂಶತಿಯಕ್ಕುಂ ೧೭

ವ॥ ಮತ್ತಮಾ ಸಮ್ಯಗ್ದರ್ಶನಮಂ ದರ್ಶನಮೋಹನೀಯಮುಮನಂತಾನುಬಂಧಿನಾಮಕಷಾಯಮುಮಾಗಲೀಯವವಱೊಳಗೆ

ಕಂ॥ ತತ್ತ್ವದೊಳತತ್ತ್ವಮತಿಯನ
ತತ್ತ್ವದೊಳಾ ತತ್ತ್ವಬುದ್ಧಿಯಂ ಪುಟ್ಟಿಸಿ ಮಿ
ಥ್ಯಾತ್ವಂ ಜೀವನೊಳಜ್ಞಾ
ನಿತ್ವಮನೀಗುಂ ಕುಯೋನಿಯೊಳ್ ತೊಡಲಿಸುಗುಂ ೧೮

ತಥ್ಯಮುಮನತಥ್ಯಮುಮಂ
ತಥ್ಯಮೆನಿಪ್ಪ ತನುಬುದ್ಧಿಯಂ ಸಲೆ ಸಮ್ಯ
ಙ್ಮಿಥ್ಯಾತ್ವಂ ಮಾಡುತ್ತುಮ
ಪಥ್ಯಮನಾಗಿಪುದು ದುಃಖಮಂ ದೇಹಿಗಳೊಳ್ ೧೯

ಖಳಕರ್ಮಮನಳಱಿಸಿ ನಿ
ರ್ಮಳನಿಶ್ಚಳಸುಖಮನೀವ ದೃಢದರ್ಶನದೊಳ್
ಸಲೆ ಸಮ್ಯಕ್ತ್ವಪ್ರಕೃತಿಯೆ
ಚಳಮಳಿನಾಗಾಧ ಕಿಟ್ಟಮಂ ಪುಟ್ಟಿಸುಗುಂ ೨೦

ಮ॥ ಅಲಘುಶ್ರೀಯುತನಂ ದರಿದ್ರನಖಿಳಾರ್ಥತ್ಯಾಗಿಯುಂ ಲೋಭಿ ನಿ
ರ್ಮಲನಂ ಕರ್ಮಿ ಜಗತ್ತ್ರಯೈಕಪತಿಯುಂ ಭೃತ್ಯಂ ದಯಾನ್ವಿತನಂ

ಖಳಕೋಪಂ ಸುಖಿಯಂ ಸುದುಃಖಿ ವಿಗತವ್ಯಾಮೋಹನಂ ವ್ಯಾಕುಳಂ
ಸಲೆ ಸರ್ವಜ್ಞನಜ್ಞನೆಂದೆನಿಸುಗುಂ ಮಿಥ್ಯಾತ್ವಮಿಾ ಜೀವನೊಳ್ ೨೧

ಕಂ॥ ಮತಿ ಕುಮತಿ ಸುಶ್ರುತಂ ಕು
ಶ್ರುತಮವಧಿ ವಿಭಂಗಮೆನಿಸುಗುಂ ಮಿಥ್ಯಾತ್ವಾ
ನ್ವಿತಮಾದೊಡೆ ಕರ್ಪೂರಂ
ಸತತಂ ತೈಲದೊಳೆ ಕೂಡೆ ವಿಷಮೆನಿಸುವವೋಲ್ ೨೨

ಸದಮಳದರ್ಶನಮಂ ಭೂ
ವಿದಿತ ಸ್ವರ್ಗಾಪವರ್ಗಸುಖಕರಮಂ ತ
ಪ್ಪದೆ ನಿರ್ಮೂಳಿಕುಮಾತ್ಮನೊ
ಳೊದವಿದನಂತಾನುಬಂಧಿ ನಾಮಕಷಾಯಂ ೨೩

ಕೋಪಾವಿಳನೊಳ್ ದಯೆ ಮಾ
ಯಾಪರನೊಳ್ ಋಜುತೆ ಮೃದುತೆ ಮಾನಿಯೊಳಾ ಲೋ
ಭಾಪೀಡಿತನೊಳ್ ಶೌಚಂ
ಪಾಪಹರಂ ಪುಟ್ಟದಲ್ತೆ ಧರ್ಮಂ ಕರ್ಮಂ ೨೪

ಪ್ರಕಟಿಪೊಡಿಂತಿವು ಸಪ್ತ
ಪ್ರಕೃತಿಗಳವಱ ಕ್ಷಯೋಪಶಮದಿಂದಂ ವೇ
ದಕಮಕ್ಕುಂ ಕ್ಷಯದಿಂ ಕ್ಷಾ
ಯಿಕಮುಪಶಮದಿಂದಮುಪಶಮಂ ಸಮ್ಯಕ್ತ್ವಂ ೨೫

ನಿತ್ಯಮಣುವ್ರತಮನದ
ಪ್ರತ್ಯಾಖ್ಯಾನಂ ಮಹಾವ್ರತಪ್ರತತಿಗಳಂ
ಪ್ರತ್ಯಾಖ್ಯಾನಂ ಕಿಡಿಕುಂ
ಸ್ತುತ್ಯ ಯಥಾಖ್ಯಾತಚರಿತಮಂ ಸಂಜ್ವಳನಂ ೨೬

ವ॥ ಅದುಕಾರಣದಿಂ

ಕಂ॥ ಹೇಯಂ ಮಿಥ್ಯಾತ್ವಮುಪಾ
ದೇಯಂ ಸಮ್ಯಕ್ತ್ವಮಖಿಳವಿಷಯಕಷಾಯಂ
ಹೇಯಂ ನಿನಗೆಂದುಮುಪಾ
ದೇಯಂ ವ್ರತವಿತತಿ ಸೌಖ್ಯಫಳಕಲ್ಪಕುಜಂ ೨೭

ಮ॥ ಸ್ತುತಿವೆತ್ತುತ್ತಮಜಾತಿ ಸದ್ಗೃಹತೆ ಪಾರಿವ್ರಾಜ್ಯಮಿಂದ್ರತ್ವಮೂ
ರ್ಜಿತರಾಜ್ಯಂ ತ್ರಿಜಗತ್ತ್ರಪೂಜ್ಯಪರಮಾರ್ಹಂತ್ಯಂ ಸುಖಾಕ್ರಾಂತನಿ
ರ್ವೃತಿಕಾಂತಾಪರಿರಂಭಮೆಂಬ ಪರಮಸ್ಥಾನಂಗಳೊಳ್ ಪುಟ್ಟುಗುಂ
ವ್ರತಮಂ ತಾಳ್ದಿದ ಸೇವ್ಯಭವ್ಯನೆ ವಲಂ ಸಮ್ಯಕ್ತ್ವಸಂಯುಕ್ತಮಂ ೨೮

ವ॥ ಆ ವ್ರತಂಗಳಾವುವೆನಿತು ಭೇದಮಕ್ಕುಮೆನೆ

ಕಂ॥ ಅತಿಶಯಸುಖಜನಕಮಣು
ವ್ರತಮಯ್ದು ಗುಣವ್ರತತ್ರಯಂ ವರಶಿಕ್ಷಾ
ವ್ರತಮವು ನಾಲ್ಕೀ ದ್ವಾದಶ
ಮತುಳವ್ರತವಿತತಿ ಜೈನಜನಕಾದೇಯಂ ೨೯

ಶ್ರುತಸಮ್ಯಕ್ತ್ವಮಹಿಂಸಾ
ಋತವಿಗತಸ್ತೇಯವಸ್ತ್ವಮೂರ್ಛಾಬ್ರಹ್ಮಂ
ನುತಕರಿಪತಿ ಪೆಸರೊಳಣು
ವ್ರತಮಲ್ಲದೆ ನಿನಗಿವನಣುಸೌಖ್ಯಮನೀಗುಂ ೩೦

ಮ॥ ಋತದಿಂ ಸೂಕ್ತಿಯ ಹಿಂಸೆಯಿಂ ಸಕಳಮೈತ್ರೀಭಾವಮಸ್ತೇಯದಿಂ
ವಿತತ ಶ್ರೀಪರದಾರದೊಳ್ ವಿರತಿಯಿಂ ಸೌಭಾಗ್ಯಮಾಕಾಂಕ್ಷಣ
ಕ್ಷತಿಯಿಂದಕ್ಷಯಮೋಕ್ಷಸಂಜನಿತಸೌಖ್ಯಂ ಮತ್ತಸತ್ಯಾದಿಯಿಂ
ಪ್ರತಿಕೂಳಂ ಫಳಮಿಂತಿವರ್ಕೆ ಸಮನಿಕ್ಕುಂ ಕುಂಜರಾಧೀಶ್ವರಾ ೩೧

ವ॥ ಎಂದಿಂತು

ಮಸ್ರ॥ ನಯನಿಕ್ಷೇಪಪ್ರಮಾಣಂಗಳಿನಿಭಪತಿಗಾವಾವ ತತ್ತ್ವಂಗಳೊಳ್ ಸಂ
ಶಯಮುಂಟಾಗಿರ್ಕುಮಂತೆಲ್ಲಮನಱಿಪಿ ದಯಾಂಬೋಧಿ ಹಸ್ತಸ್ಥರೇಖಾ
ತ್ರಯಮಂ ಪ್ರತ್ಯಕ್ಷಮಂ ಮಾಡುವ ತೆಱದಿನಪಂ ವ್ಯಕ್ತಮಂ ಮಾಡೆ ಬೋಧ
ತ್ರಯಸನ್ನ್ಯೂನಾತಿರಿಕ್ತಂ ತಿಳಿದು ತಳೆದುದಾನಂದಮಂ ತತ್ಕರೀಂದ್ರಂ ೩೨

ಕಂ॥ ಅವಿವೇಕರುಜೆಯನಿಭಪಂ
ಗವನಱಿಪಲ್ಕಱಿಯದಿರ್ದೊಡಂ ಕಳೆದರ್ ತ
ಮ್ಮವಧಿರಸಾಯನದಿಂ ಬಾ
ಳವೈದ್ಯನವೊಲಱಿದು ಬೋಧನಿಧಿ ಯತಿಪತಿಗಳ್ ೩೩

ಎಂತೆಂತು ತಿಳಿಪುಗುಂ ಯತಿ
ಯಂತಂತಾ ದಂತಿಯಂತರಂಗದೊಳುದ್ಬೋ
ಧಂ ತಲೆದೋಱಿದುದಿನರುಚಿ
ಸಂತತಿ ತಟ್ಟೈಸಿದಮಳಕಮಳದ ತೆಱದಿಂ ೩೪

ಚಂ॥ ಪರಿಪರಿಸುತ್ತೆ ಸಂಶಯವಿಮೋಹನವಿಭ್ರಮಮಂ ಸ್ವಕೀಯ ವಾಕ್
ಸ್ಫುರಿತ ಖನಿತ್ರದಿಂ ನಯಪವಿತ್ರದಿನಪ್ರತಿಮಂ ಯತೀಶ್ವರ
ಕರಿವರಹೃತ್ಸರೋಭವ ವಿವೇಕಶುದ್ಧಜಲಪ್ರವಾಹಮಂ
ನಿರುಪಮ ಧರ್ಮನಂದನಮನೆಯ್ದಿಸಿದಂ ವನಪಾಳನಂದದಿಂ ೩೫

ಕಂ॥ ಈಯಂಶಂ ತಿಳಿದುದು ಮ
ತ್ತೀಯಂಶಂ ತಿಳಿಯದೆಂಬುದಂ ತಿಳಿದು ಸುಖೋ

ಪಾಯದಱವದಱೊಳೆಸೆದಿರೆ
ಹೇಯೋಪಾದೇಯ ತತ್ತ್ವಮಂ ನಿರವಿಸಿದರ್ ೩೬

ವ॥ ಅಂತು ಸಮ್ಯಗ್ದರ್ಶನಾದ್ಯುಪಾದೇಯತತ್ತ್ವಮುಮಂ ಮಿಥ್ಯಾತ್ವಾದಿ ಹೇಯ ತತ್ತ್ವಮುಮಂ ಪ್ರಶಸ್ತಮತಿಗಳ್ ಸವಿಸ್ತರಮಱಿಪೆ ಕರಿಪತಿ ತನ್ಮುನಿಪತಿಯ ನಯ ರುಚಿರುಚಿರವಚನದೀಪವರ್ತಿಯಂ ಪಿಡಿದನೂನ ಶ್ರದ್ಧಾನನಿಧಾನಮಂ ಸಾಧಿಸಲೆಂದುದರ್ಕ ತುಚ್ಛಾಚ್ಛಾದನಮೆನಿಸಿದ ದರ್ಶನಮೋಹನೀಯಕ್ಷೋಣೀಪಟಳವಿಘಟನಪಟುಖನಿತ್ರ ಮೆನಿಸಿದುದವಂ

ಕಂ॥ ಅವಿಕಳಮಂ ತಳೆದುದಧಃ
ಪ್ರವೃತ್ತಕರಣಮನಪೂರ್ವಕರಣಮನನಿವೃ
ತ್ತಿವಿಶೇಷಕರಣಮಂ ಕೃತ
ಭವದರ್ಶನ ಮೋಹನೀಯಬಳಭೇದಕಮಂ ೩೭

ವ॥ ಅಂತನಂತಸುಖಸಂತತಿ ನಿಮಿತ್ತಸಮ್ಯಕ್ತ್ವಲಕ್ಷ್ಮೀನೇತ್ರಶತಪತ್ರತರುಣತರಣಿ ಕಿರಣಮೆನಿಪ ಕರಣತ್ರಯದೊಳ್ ಪ್ರತಿಸಮಯಮನಂತಗುಣವಿಶುದ್ಧಿಯುಂ ಸ್ಥಿತಿಬಂಧಾಪ ಸರಣಮುಂ ಪ್ರತಿಕ್ಷಣಮನಂತಗುಣಾಧಿಕಹೀನ ಶುಭಾಶುಭಕರ್ಮಾನುಭಾಗಬಂಧಂಗಳುಮೆಂಬ ಚತುರಾವಶ್ಯಕಚತುರಂ ಪ್ರಥಮಕರಣದೊಳಂತರ್ಮುಹೂರ್ತಂ ಪ್ರವರ್ತಿಸಿ ಮತ್ತಂ ಪೂರ್ವೋಕ್ತಾ ವಶ್ಯಕಯುಕ್ತಂ ಗುಣಶ್ರೇಣಿ ಗುಣಸಂಕ್ರಮಣಸ್ಥಿತ್ಯನುಭಾಗ ಕಾಂಡಕಘಾತ ವಿನೂತಾವಶ್ಯಕ ಚತುಷ್ಟಯ ವಿಶಿಷ್ಟಂ ದ್ವಿತೀಯಕರಣದೊಳನಿತೆ ಪೊೞ್ತು ವರ್ತಿಸಿ ಸದ್ದರ್ಶನವನಿತಾವಶೀ ಕರಣವಶ್ಯಾವಶ್ಯಕೋತ್ಕೃಷ್ಟಾನಿವೃತ್ತಿಕರಣ ಪರಿಣತಂ ಸ್ವಾಂತಮುಹೂರ್ತ ಚರಮಭಾಗದೊಳ್ ದರ್ಶನಮೋಹನೀಯಭಾಗಾಂತರ ಕರಣಾಂತಃಕರಣಮಂ ನಿರ್ವರ್ತಿಸಿ ಮತ್ತಂ ಕಿಱಿದುಪೊೞ್ತಿಱೊಳಧೋನಿಷೇಕ ಪ್ರಥಮಸ್ಥಿತಿಯನನುಭವಿಸುತ್ತುಮುಪರಿತನ ದ್ವಿತೀಯಸ್ಥಿತಿಯೊಳ್

ಕಂ॥ ಘನವಿಷಯವಿಷಾನ್ವಿತ ದ
ರ್ಶನ ಮೋಹಮಹಾಹಿಕೋಪದೃಢದಾಡಾಬಂ
ಧನಮನುಪಶಮವಿಧಿಯಿಂ
ಜನಿಯಿಸಿತದು ತರಳವೈದ್ಯನೆನೆ ಗಜರಾಜಂ ೩೮

ವ॥ ಆಗಳುಪಶಾಂತದೃಙ್ಮೋಹಧ್ವಾಂತಾಂತರ ಪ್ರಥಮಸಮಯದಿವಸಮುಖದೊಳ್

ಕಂ॥ ಪ್ರತಿಕೂಲಕರ್ಮಮೇಘಂ
ಪ್ರತಿಸಮಯಾನಂತಗುಣವಿಶೋಧಿ ಮಹಾಮಾ
ರುತನಿಂ ಕಿಡೆ ದರ್ಶನರವಿ
ಮತಂಗಭವಹೃದಯನಭದೊಳೇನೊಪ್ಪಿದುದೋ ೩೯

ಕತಕಫಳೋಪಮಶುಭಪರಿ
ಣತಿಯಿಂದೆ ನಿಜಾಂತರಂಗವಿಪುಳಸರಸ್ಸಂ

ಗತಸಪ್ತಪ್ರಕೃತಿ ಕಳಂ
ಕತೆ ತೊಲಗಿರೆ ಪುಟ್ಟಿತುಪಶಮಮಂ ಸಮ್ಯಕ್ತ್ವಂ ೪೦

ಘನಬೋಧಲೋಹರಸಸಂ
ಜನಿತಸ್ಪರ್ಶನಮನಮೃತಯುವತಿಮುಖಾದ
ರ್ಶನಮಮಂ ಕರಿ ಸಮ್ಯಗ್ದ
ರ್ಶನಮಮಂ ಪಡೆದತ್ತನಾದಿಭವದುರ್ಲಭಮಮಂ ೪೧

ವ॥ ಅಂತುದಯಿಸಿದ

ಕಂ॥ ವರ ದರ್ಶನಕುಳಿಶದಿನು
ದ್ಧರ ಮಿಥ್ಯಾತ್ವಾದ್ರಿಪಕ್ಷಮಂ ದ್ವಿರದೇಂದ್ರಂ
ಭರದಿಂ ಖಂಡಿಸೆ ಮುಕ್ಕಡಿ
ನಿರತಂ ತಾನಾಯ್ತು ದುಸ್ತರಂ ಮಿಥ್ಯಾತ್ವಂ ೪೨

ವ॥ ಅಂತಾ ಪ್ರಥಮೋಪಶಮ ಸಮ್ಯಕ್ತ್ವಮಂತರ್ಮುಹೂರ್ತ ನಿಃಪ್ರತಿಪಕ್ಷವೃತ್ತಿಯಿಂ ಮತ್ತಗಜಚಿತ್ತಗೃಹದೊಳ್ ತೊಳಗಿ ಬೆಳಗುತ್ತುಮಿರೆ

ಕಂ॥ ಪ್ರಕೃತಿಗಳೊಳ್ ಸಮ್ಯಕ್ತ್ವ
ಪ್ರಕೃತಿಯೆ ತಲೆದೋಱೆಯುಪಶಮಕ್ಕುೞಿದಾಱುಂ
ಪ್ರಕೃತಿಗಳೊಳಗಾಗಿರೆ ವೇ
ದಕಮುದಯಿಸಿತಾ ಗಜೇಂದ್ರನೊಳ್ ಸಮ್ಯಕ್ತ್ವಂ ೪೩

ವ॥ ಅಂತಾ ಸುದೃಷ್ಟಿರತ್ನಂ ಗಜರತ್ನದದೃಷ್ಟವಶದಿನನಂತಾನುಬಂಧಿ ಪ್ರತಿಬಂಧಿಕ ಪ್ರಕರಕರಕ್ಕೊಳಗಾಗದೆ ಮಿಥ್ಯಾತ್ವದ ವಜ್ರಘಾತದಿಂ ಶತಚೂರ್ಣಮಾಗದೆ ಸಮ್ಯಗ್ಮಿಥ್ಯಾತ್ವಕರ್ದಮಮಂ ಪೊರ್ದದೆ ಸಮ್ಯಕ್ತ್ವಪ್ರಕೃತಿಯೆಂಬ ಮಿತ್ರನ ಕೆಯ್ಗೆವಿಟ್ಟು ಬರ್ದುಂಕಿ ಬಂದುದನಾ ಮುಮುಕ್ಷುಗಳ್ ಪ್ರತ್ಯಕ್ಷೇಕ್ಷಣದಿಂ ನಿರೀಕ್ಷಿಸಿ ತಮ್ಮಂತರಂಗದೊಳ್

ಕಂ॥ ಉಗ್ರತರ ದುರಿತವಿಪಿನ ಸ
ಮಗ್ರದವಾನಳಮೆನಿಪ್ಪ ನಿರ್ಮಳ ಸಮ್ಯ
ಕ್ತ್ವಗ್ರಹಣಂ ನಿರ್ವೃತಿಪಾ ೪೪
ಣಿಗ್ರಹಣಂ ಪ್ರಾಣಿಗಳ್ಗದೇಂ ತೊದಳುಂಟೇ

ಆ ನೆಗಟ್ದಿ ಸಪ್ತಪರಮ
ಸ್ಥಾನಂ ಸಮ್ಯಕ್ತ್ವದಿಂದಮತಿದುಃಸಹದುಃ
ಖಾನೀಕಸಪ್ತನರಕ ೪೫
ಸ್ಥಾನಂ ಮಿಥ್ಯಾತ್ವದಿಂದೆ ಜೀವಕ್ಕಕ್ಕುಂ

ಭವಜಳಧಿಯ ತಡಿ ಕಡುಸಾ
ರೆ ವಲಂ ನಿನಗಲ್ಲದಂದು ಸಮನಿಪುದೆ ಸುಖಾ

ರ್ಣವಪೂರ್ಣಚಂದ್ರನಘತಿಮಿ
ರ ವಿಭೇದನ ತರಣಿ ಗುಣದ ಕಣಿ ಸಮ್ಯಕ್ತ್ವಂ ೪೬

ಮೊದಲೊಳುದಯಸಿದುದುಪಶಮ
ಮದಱಿಂ ಬೞಿಕಾದುದಲ್ತೆ ವೇದಕಮದು ತ
ಪ್ಪದೆ ನಿನ್ನ ಹೃದಯದೊಳ್ ನೆಲ
ಸಿದೊಡಕ್ಕುಂ ಕ್ಷಾಯಿಕಂ ಸುದರ್ಶನರತ್ನಂ ೪೭

ಮ॥ ಪರಮಾರ್ಥಂ ಪರಮೋಪಶಾಂತಿಗೆ ನಿಧಾನಂ ಜೈನಧರ್ಮಕ್ಕುದಾ
ಹರಣಂ ನೀನಿನಿತರ್ಕ್ಕದಾಹರಣಮಾ ನಿನ್ನಗ್ರಜನ್ಮಂ ದುರಾ
ಚರಣಂ ಚಂದ್ರಮನಂ ತಮಂ ವಿಮಳನಂ ನಿಷ್ಕಾರಣಂ ಪೀಡಿಪಂ
ತಿರೆ ನಿನ್ನಂ ಬಿಡದೆಯ್ದೆ ಪೀಡಿಸುತವಂ ದುಸ್ಸ್ಥಾನದೊಳ್ ಪುಟ್ಟುಗುಂ ೪೮

ವ॥ ಅದೆಂತೆನೆ

ಮ॥ ಕಮಠಂ ಕುಕ್ಕುಟಸರ್ಪನುಗ್ರಭಯಕೃದ್ಧೂಮಪ್ರಭೋತ್ಥಂ ಮಹಾ
ಹಿಮವಚ್ಛೈಳಮಹಾಹಿ ಷಷ್ಠನರಕೋರ್ವೀನಾರಕಂ ವ್ಯಾಧನ
ಪ್ರಮದುಃಖಾಬ್ಧಿತಮಃಪ್ರಭಾವನಿಭವಂ ಕಂಠೀರವಂ ಷಷ್ಠಭೂ
ಭ್ರಮಿತಂ ತೀವ್ರತಪಸ್ವಿ ದೈತ್ಯನೆನೆ ಕೇಳ್ ಮುಃಖಕ್ಕೆ ಪಕ್ಕಾದಪಂ ೪೯

ವ॥ ಗುರುತ್ವಾದಧಃಪಾತಯೆಂಬ ಉಕ್ತಿಯಂ ವ್ಯಕ್ತಂ ಮಾಳ್ಪ ದುರ್ಗತಿಭಾಜನಂ ನಿಸರ್ಗಕೋಪದಿಂ ನಿನಗೆಸಗುವುಪಸರ್ಗಂ ಸುವರ್ಣಕಗ್ನಿಸಂಯೋಗಂ ವರ್ಣೋತ್ಕರ್ಷಮಂ ಪಡೆವಂತುತ್ತರೋತ್ತರಸುಖಪದಮನೊದವಿಸುತ್ತುಂ ಸಕಳ ಕಳಂಕನಿರ್ಮುಕ್ತಿಪದಮಂ ಕೆಲವೆ ಭವದೊಳೆ ಪಡೆಗುಮದೆಂತೆನೆ

ಮ॥ ಅಭಿಜಾತಂ ಮರುಭೂತಿ ಭದ್ರಗುಣಮಾತಂಗಂ ಸಹಸ್ರಾರಕ
ಲ್ಪಭವಂ ಖೇಚರನಚ್ಯುತಂ ನೃಪವರಂ ಗ್ರೈವೇಯಕೋದ್ಭಾಸಿ ಭೂ
ವಿಭುವಾನಂದಕನಾನತೇಂದ್ರನಮರೇಂದ್ರಾಹೀಂದ್ರಭೂಪೇಂದ್ರವ
ಲ್ಲಭ ಪಾರ್ಶ್ವಾಧಿಪನಾಗಿ ನೀನೆ ಪಡೆವೈ ಸತ್ಸೌಖ್ಯ ಸನ್ಮೋಕ್ಷಮಂ ೫೦

ಕಂ॥ ಎಂದಿಂತು ಪೇೞೆ ಯತಿಪತಿ
ಸಂದೆಯಮಿಲ್ಲೆಂದೆ ನಂಬಿ ಪೊಣ್ಮಿದ ಪರಮಾ
ನಂದಭವ ಬಾಷ್ಪಜಳದಿಂ
ಮಿಂದೆಯ್ದೆ ಪವಿತ್ರಗಾತ್ರನಾಗಿರೆ ನಾಗಂ ೫೧

ತೊಳಗುವ ನೊಸಲೊಳ್ ನಖರುಚಿ
ಮಳಯಜದಿಂ ತಿಳಕಮಿಟ್ಟು ಕಾರುಣ್ಯಸುನಿ
ರ್ಮಳಗಂಧೋದಕಮಂ ಯಮಿ
ತಳಿದು ಕರೀಂದ್ರದ ವಿಶಾಳಕುಂಭಸ್ಥಳದೊಳ್ ೫೨

ವ॥ ವೃಕ್ಷಾಯುರ್ವೇದನಿವೇದಿತ ದಿವ್ಯೌಷಧವಿಧಾನದಿಂ ಸದ್ಬೀಜಾಂಕುರಂ ಪಲ್ಲವ ಪ್ರಸವಸಂಪತ್ತಿಯನೊರ್ವರ್ೊದಲೆ ಪಡೆವಂತೆ ಸದುಪದೇಶಲಬ್ಧಿವಶದಿಂ ನಿನ್ನಂತ ರಂಗದೊಳ್ ಮುನ್ನಮ ಸಮ್ಯಗ್ದರ್ಶನರತ್ನಂ ಭಾವವ್ರತಪರಿಣತಮಾಗಿಯೆ ಪುಟ್ಟಿತ್ತಾದೊಡಂ ವ್ಯವಹಾರ ಸಮಾಶ್ರಯದಿಂ ನಿನಗವಂ ದೃಢಂ ಮಾಡಲ್ವೇಡಿಯಾತ್ಮಾದಿ ಸಾಕ್ಷಿಕಮಾರಾಧಿಸಿದಪ್ಪೆವೆಂದು

ಮ॥ ಸಕಳ ಶ್ರಾವಕವಿಶ್ರುತವ್ರತಮನಾ ನಾಗಕ್ಕೆ ಸಮ್ಯಕ್ತ್ವಪೂ
ರ್ವಕಮಾಗಿತ್ತು ಮುನೀಶ್ವರರ್ ಮಗುಟ್ದ್ ನಾನಾತೀರ್ಥಮಂ ಪುಣ್ಯಸಾ
ಧಕಮಂ ಬಂದಿಸಲೆಂದು ಪೋದರಿಭಮುಂ ತಾಂ ಮಾಡಿದತ್ಯುಗ್ರಪಾ
ತಕಮಂ ಚಿಂತಿಸಿ ನೋಂತೊಡಲ್ಲದಿದನಿನ್ನೆಂತುಂ ಗೆಲಲ್ ಬರ್ಕುಮೇ ೫೩

ವ॥ ಎಂದಾ ಸಿಂಧುರಮರವಿಂದಮುನೀಂದ್ರರ್ ಪರಮಕಾರುಣ್ಯದಿನಿತ್ತುತ್ತಮವ್ರತ ವಿತ್ತಮಂ ಚಿತ್ತದೊಳ್ ತಾಳ್ದಿ ತತ್ಪರಿರಕ್ಷಣಪ್ರವರ್ಧನತತ್ಪರಂ ತನ್ನಂತರಂಗದೊಳಿಂತೆಂಗುಂ

ಕಂ॥ ಜೀವದಯಾಸಮಮೆನಿಸವ
ವಾವುಂ ಚರಿತಂಗಳಂತೆ ಚಿಂತಾಮಣಿಯೊ
ಲ್ದೀವುದನೀಪ್ಸಿತವಸ್ತುವ
ನೀವುದೆ ಶಿಲೆಯೆನಿಪುಘನತೆಯಂ ಮಾಡಿದೊಡಂ ೫೪

ವ॥ ಎಂದು ಸಕಳಧರ್ಮಕಲ್ಪತರುಮೂಳಮೆನಿಪಖಿಳ ಸತ್ವಾನುಕಂಪಾಂಕುಶವಶನಾಗಿ

ಕಂ॥ ಪೋಪೆಡೆಯೊಳೊಱಗುವೆಡೆಯೊಳ್
ಮೇಪಂ ಕೊಳ್ವೆಡೆಯೊಳುದಕಮಂ ಕುಡಿವೆಡೆಯೊಳ್
ಪಾಪಲವಮಾಗದಂತೆವೊ
ಲೇಪೊಟ್ಟುಂ ನೆಗೞ್ದುದಱಿದು ಕರಿ ಭದ್ರಗುಣಂ ೫೫

ಪಸಿವಿಂದಸು ಪೋಪೊಡಮದು
ಪಸಿಯಂ ಪಲ್ಲವಮನುಡಿದು ಮೇಯದು ತೃಷೆ ಭಾ
ಧಿಸೆಯುಂ ಕುಡಿಯದು ಸೈ
ರಿಸಿ ನಿರ್ಜರಜಳಮನಲ್ಲದುೞ್ದಂಬುಗಳಂ ೫೬

ಉಪವಾಸದಿನಂಗಳೆ ಪಲ
ವು ಪಾರಣಾದಿನಮೆ ಕೆಲವುಮೆನೆ ನಮೆದೊಡಲಂ
ಕ್ಷಪಿಯಿಸಿತಿಭಮಘಬಂಧ
ಕ್ಷಪಚಯಮದಱಿಂದಮಪ್ಪುದೆಂಬೀ ಮನದಿಂ ೫೭

ಅವಮೋದರ್ಯದಿನುಪವಾ
ಸವಿಧಿಗಳಿಂ ಕರಮ ನೋಂತು ಬಡವಾಯ್ತು ಭವಾ
ರ್ಣವಮಂ ದಾಂಟಿಪ ಜಿನಮತ
ನವಪೋತಮನೇಱಿತಕ್ಕೆ ಕರಿಗುಚಿತಮೆ ದಲ್ ೫೮

ತ್ರಸಮಂ ಕರಿಪತಿ ಪರಿರ
ಕ್ಷಿಸುವುದದೇವಿರಿದು ಬಹುವಿಧಸ್ಥಾವರಮಂ
ಪಸರಿಪ ದಯೆಯಿಂ ಪರಿರ
ಕ್ಷಿಸಿದಪುದೆನೆ ವಿಮುಳಪಾಪಭೀತಮನಸ್ಕಂ ೫೯

ಸತ್ವಂಗಳೊಳನುಗತಮಿ
ಥ್ಯಾತ್ವಂ ತಲೆದೋಱಿ ದೋಷಮಕ್ಕುಂ ಮಿಗೆ ಭ
ವ್ಯತ್ವಮಿರೆ ಗುಣವಿಕಾಸಂ
ತತ್ತ್ವವಿದರ ಮತದಿನದುವೆ ದಿಟಮಾಯ್ತಿಭದೊಳ್ ೬೦

ವ॥ ಅಂತು ನಿರಂತರಮುತ್ತರೋತ್ತರಚರಿತ್ರದಿಂ ನೆಗೞುತ್ತುಮಿರ್ದೊಂದುದೆವಸಂ

ಉ॥ ಆವಗಮನ್ಯವನ್ಯಕರಿಸಂತತಿ ನೀರುಣೆ ತಾಂ ಬೞಿಕ್ಕೆ ವೇ
ಗಾವತಿಗಾ ಗಜಾಳಿ ನಡೆದಧ್ವದೊಳೊಯ್ಯನೆ ನೀರನೂಡಲೆಂ
ದಾ ವರವಜ್ರಘೋಷಕರಿ ಪೋಗುತೆ ತತ್ತಟದಾನೆಗಂಪಲೊಳ್
ಭಾವಿಸದೆಯ್ದೆ ಪೊಕ್ಕು ಬಳವಟ್ಟಿರೆ ಕಂಡತಿರೋಷದೂಷಿತಂ ೬೧

ಕಂ॥ ಕಮಠಚರಕುಕ್ಕುಟೋರಗ
ಮಮರ್ದಿರೆ ಮಸ್ತಕಕ್ಕೆ ವಾರಣಾರಿಯ ತೆಱದಿಂ
ದಮೆ ಪಾಯ್ದುಕೊಂಡೊಡದಱ ವಿ
ಷಮವಿಷಮಾವರಿಸೆ ತನ್ನನವಹಿತಚೇತಂ ೬೨

ಚಂ॥ ಪರಮ ಸಹಾಯಮಾದುದಘದುರ್ದಮ ಕರ್ದಮಕ್ಕಿದೆಂ
ಬುರುತರ ಶಾಂತಿ ತನ್ನೊಳಿರೆ ತಾನಘಕರ್ದಮಮಂ ಜಿನಕ್ರಮಾಂ
ಬುರುಹನಖಾಂಶುನಿರ್ಮಳತರಾಂಬುಗಳಿಂ ತೊಳೆವೆಂ ದಲೆಂದು ಸಿಂ
ಧುರಪತಿ ಪೂಣ್ದು ಭಾವಿಸಿತು ಪಂಚಪದಂಗಳನುತ್ತಮಂಗಳಂ ೬೩

ಕಂ॥ ಕರ್ದಮದೊಳ್ ಗಜರಾಜಂ
ಬಿಟ್ಟಿಲ್ಲಿಂದೆಟ್ವ ಬಗೆಯನೊಲ್ಲದದೇನಃ
ಕರ್ದಮದಗಲ್ವ ಬಗೆಯಂ
ಪೊರ್ದಿದುದು ಜಿನೇಂದ್ರಚಾರುಚರಣಸ್ಮರಣಂ ೬೪

ಒಡಲುಮನಾ ಕರ್ದಮದೊಳ್
ಪಡಿಯನೆ ಬೇರ್ಕೆಯ್ದು ನಿಜದ ಭಾವನೆ ಮನದೊಳ್
ತೊಡರ್ದಿರೆ ಕರ್ಮದ ತೊಡರಂ
ತೊಡರಂ ಪಱಿವಂತೆ ಪಱಿದುದಾ ಗಜರಾಜಂ ೬೫

ಜೈನಪದಂಬಿಡಿದು ಸುಖ
ಸ್ಥಾನಾಮರಪದವಿಗಾನೆ ಬೀೞ್ಕೊಡೆ ತನ್ನಂ

ತಾನೆ ನೆಗಪುವುದೆನಿಪ್ಪಿದ
ನಾ ನಾಗಂ ನನ್ನಿ ಮಾಡಿ ನೆಗಪಿತು ತನ್ನಂ ೭೬

ಉ॥ ಅಗ್ಗಳಮಪ್ಪ ವಿದ್ಯೆ ಕುಲಮೆಂಬಿವು ದರ್ಶನಶುದ್ಧಿಯಿಲ್ಲದಿ
ರ್ಪಗ್ಗನೊಳಪ್ಪುವಲ್ತೆ ವಿಫಳಂ ಮರುಭೂತಿಗಿವಿರ್ದುಮಾಯ್ತು ತಿ
ರ್ಯಗ್ಗತಿಯಂತಮಿಲ್ಲದ ಕುಯೋನಿಯೊಳಂ ಜಿನಭಕ್ತಿಯೊಂದಱಿಂ
ಸಗ್ಗಮದಾದುದಂತದಱಿನಾರ್ಜಿಸುಗೂರ್ಜಿತ ಜೈನಭಕ್ತಿಯಂ ೭೭

ವ॥ ಆ ನಾಕಲೋಕದಾಕಾರಮೆಂತೆಂದೊಡೆ ಮಂದರಶೈಳಮೂಳದಿಂ ಲೋಕಾಗ್ರಕ್ಕಮಗ್ರಮೆನಿಸಿದ ಸಪ್ತರಜ್ಜ್ವಾಯಾಮಕ್ಕೆ ವ್ಯೋಮದೊಳೇಕಲಕ್ಷಯೋಜನಂ ಕುಂದಿದೊಂದುವರೆರಜ್ಜುವರಂ ಷಷ್ಟಿಲಕ್ಷಸಂಖ್ಯಾನವಿಮಾನಂಗಳನೊಳಕೊಂಡು ಗಗನ ಮಂಡಳಮಂಡನಮೆನಿಸಿ ಸೌಧರ್ಮೇಶಾನಕಲ್ಪದ್ವಯಂ ಅಲ್ಲಿಂ ಮೇಲೆ ತತ್ಪ್ರಮಾಣಾಯಾಮ ರಜ್ಜುವಿನೊಳ್ ವಿಂಶತಿಲಕ್ಷತ್ರಿದಶಸದನಶೋಭಿತ ಸನತ್ಕುಮಾರಮಾಹೇಂದ್ರ ಕಲ್ಪದ್ವಂದ್ವಂ ತತ್ಪರಿಮಿತನಭೋಭಾಗದೊಳನುಕ್ರಮದಿಂದಾಱಿಡೆಯೊಳರ್ಧಾರ್ಧರಜ್ಜುವಿಸ್ತಾರಿಗಳಾಗಿ ಚತುರ್ಲಕ್ಷವಿಬುಧಾಲಯೋಪಲಕ್ಷಿತ ಬ್ರಹ್ಮಬ್ರಹ್ಮೋತ್ತರಕಲ್ಪದ್ವಿತಯಂ ಪಂಚಾಶತ್ಸಹಸ್ರನಿರ್ಜರನಿವಾ ಸಾಂಚಿತ ಲಾಂತವಕಾಪಿಷ್ಠ ಕಲ್ಪಯುಗ್ಮಂ ಚತ್ವಾರಿಂಶತ್ಸಹಸ್ರದೇವಗೇಹಮಹಿತಶುಕ್ರಮಹಾಶುಕ್ರಕಲ್ಪಯುಗಂ ಷಟ್ಸಹಸ್ರದಿವಿಜಭವನವಿನುತ ಶತಾರ ಸಹಸ್ರಾರಕಲ್ಪಯುಗಳಂ ಸಪ್ತಶತಾಮರಧಾಮಾಭಿರಾಮಾನತಪ್ರಾಣತಕಲ್ಪಯುಗಂ ಆರಣಾಚ್ಯುತಕಲ್ಪಯುಗದೊಳ್ ಶತಚತುಷ್ಟಯಂ ತದಗ್ರಿಮಭಾಗದೊಳೇಕರಜ್ಜೂಚ್ಛ್ರಯವಿಯತ್ತಳದೊಳ್ ಮೇಲೆ ಮೇಲೆ ಲೀಲೆವಡೆದೇಕಾದಶೋತ್ತರಶತಾಮರ್ತ್ಯಹರ್ಮ್ಯರಮ್ಯಾಧಸ್ಥನವಗ್ರೈವೇಯಕತ್ರಯಂ ಸಪ್ತಾಧಿಕಶತಸುಮನಶ್ಶರಣಸಮುದಿತಮಧ್ಯಮಗ್ರೈವೇಯಕತ್ರಿತಯಮೇಕಾಗ್ರನವತಿನಾಕಿನಿವಸನಲಸಿತೋಪರಿಮ ಗ್ರೈವೇಯಕತ್ರಯಂ ನವರತ್ನರಂಜಿತನವಾನುದಿಶೆ ಪಂಚರತ್ನಾಂಚಿತಪಂಚಾಣೂತ್ತರೆ ಚೆಲ್ವುವೆತ್ತಿರ್ಕುಂ ಇವೆಲ್ಲಂ ಕೂಡಿಚತುರಶೀತಿಲಕ್ಷಸಪ್ತನವತಿಸಹಸ್ರತ್ರಯೋವಿಂಶತಿಸಂಖ್ಯಾನಂಗಳುಮಿಂದ್ರಕಶ್ರೇಡೀಬದ್ಧಪ್ರಕೀರ್ಣಕಾಭಿಧಾನಂಗಳುಂ ಸಂಖ್ಯಾತಾಸಂಖ್ಯಾತೋಭಯ ವಿಸ್ತಾರಂಗಳುಮಮರಸಮಿತಿರುಚಿರಚಿತ ನಿತ್ಯಪೂಜಾವಿರಾಜಿತಾವಳಯ ಜಿನನಿಳಯವಿಳಸಿತಂಗಳುಮಾಗಿರ್ಪುವು ಮತ್ತವಱ ಚೆಲ್ವಂ ಬಿತ್ತರಿಸುವೊಡೆ

ಕಂ॥ ಸುರಕುಧರಮಧಿಷ್ಠಾನದ
ಸಿರಿಯಂ ಪಡೆವಿನೆಗಮಿರ್ತರದಿನೆಂಟೆಂಟಂ
ಕರುಮಾಡಮನಡಕಿಲ್ದೊಂ
ಡಿರೆ ಸರಸಿಜಭವನೆ ಮಾಡಿದಂತೆಸೆದಿರ್ಕುಂ ೭೮

ಕಲ್ಪಂಗಳ್ ಪದಿನಾಱು ವಿ
ಕಳ್ಪಿಸೆ ಶಶಿಕಳೆಗಳಂದದಿಂದಂ ನಯನ
ಕ್ಕೊಳ್ಪಂ ಪಡೆಯುತ್ತಿರ್ಪುವ
ನಳ್ಪಸುಖಾಮೃತಮನಾವಗಂ ಕಱೆಯುತ್ತುಂ ೭೯

ಗ್ರೈವೇಯಕಮಮರಶ್ರೀ
ಗ್ರೈವೇಯಕಮೆನಿಸಿ ಸೊಗಯಿಕುಂ ನವರತ್ನ

ಶ್ರೀವಿಳಸಿತಮದು ನಯನೇಂ
ದೀವರಹರ್ಷಾವಕಾಶ ಶಶಿಸಂಕಾಶಂ ೭೦

ಸುರಸದ್ಮಪ್ರಾಸಾದ
ಕ್ಕುರುಮಣಿರುಚಿರಂ ನವಾನುದಿಶೆ ಘಂಟೆಯವೋಲ್
ಪರಿಶೋಭಿಸೆ ಪಂಚಾಣೂ
ತ್ತರೆ ಶಶಿಮಣಿಕಳಶದಂತೆ ಕಣ್ಗೊಳಿಸಿರ್ಕುಂ ೭೧

ವ॥ ಅಂತುಮಲ್ಲದೆ

ಮಸ್ರ॥ ವರ ಮುಕ್ತಿಸ್ಥಾನಜೈನಾಶ್ರಯದ ಸುಖನಿವಾ[ಸಂ ಕರಂ] ಸನ್ನುತಾನೂ
ತ್ತರೆ ಲಕ್ಷ್ಮೀಮಂಡಪಂ ಮಿಕ್ಕನುದಿಶೆ ವಿತತ ದ್ವಾರವಾ ರತ್ನರಾಜಿ
ಸ್ಫುರಿತಗ್ರೈವೇಯಕಶ್ರೇಣಿಗಳೆನೆ ಗಣಿಕಾವಾಟದೊಂದಂದದಿಂದಿ
ರ್ತೆರದಿಂದೆಂಟೆಂಟು ಕಲ್ಪಂ ಮಿಗೆ ಸೊಗಯಿಸುಗುಂ ದೇವಕಾಂತಾಳಿಕಾಂತಂ ೭೨

ವ॥ ಆ ಕಳ್ಪಜರ ಕಳ್ಪಾತೀತರನಲ್ಪಸುಖಸುಧಾಸಮುದ್ರಮೆನಿಸಿದಾಯುರಾದಿಗಳಂ ವಿಕಳ್ಪಿಸುವೊಡೆ

ಕಂ॥ ವರ ಸೌಧರ್ಮೇಶಾನದೊ
ಳೆರಡೆಸೆವ ಸನತ್ಕುಮಾರಮಾಹೇಂದ್ರದೊಳೇೞ್
ನಿರುತಂ ಬ್ರಹ್ಮಬ್ರಹ್ಮೋ
ತ್ತರದೊಳ್ ಪತ್ತಕ್ಕುಮಾಯುರಂಭೋನಿಧಿಗಳ್ ೭೩

ಲಾಂತವ ಕಾಪಿಷ್ಠದೊಳೋ
ರಂತಿರೆ ಪದಿನಾಲ್ಕು ಮತ್ತಮುೞಿದಿರ್ದವಱೊಳ್
ಭ್ರಾಂತೇನೆರಡೆರಡಧಿಕಂ
ಕಾಂತಾಚ್ಯುತಕಲ್ಪಮವಧಿಯೆನೆ ವನನಿಧಿಗಳ್ ೭೪

ಗ್ರೈವೇಯಕಮೊಂಬತ್ತಱೊ
ಳಾವಗಮೊಂದೊಂದೆ ಪೆರ್ಚೆಯನುದಿಶೆಗಕ್ಕುಂ
ಮೂವತ್ತೆರಡುಸಮುದ್ರಂ
ಭಾವಿಸೆ ಮೂವತ್ತುಮೂಱನುತ್ತರೆಗಕ್ಕುಂ ೭೫

ದ್ವಿತಯ ದ್ವಿತಯ ಚತುಷ್ಕ
ದ್ವಿತಯ ಚತುಷ್ಕ ಪ್ರತೀತ ತ್ರಿತಯ ತ್ರಿತಯ
ತ್ರಿತಯಚತುರ್ದಶ ಸ್ಥಳದೊಳ್
ವಿತತಸ್ಥಳದಮರಸಮಿತಿಯಂಗೋತ್ಸೇಧಂ ೭೬

ಮೊದಲಿಂ ಮೊಟನೇೞಱ
ಯ್ದದಱಿಂ ನಾಲ್ಕು ಮೂಱುವರೆ ಮೂಱು ಬೞಿ

ಕ್ಕದಱಿಂ ದಳಹೀನಂ ಬೞಿ
ಕದಱೆಂದಂ ಬೞಿಕಮೊರ್ಮೊಟಿನೆ ತೊದಳುಂಟೇ ೭೭

ಮೊದಲೆರಡೆರಡಱೊಳಂ ತ
ಪ್ಪದೆ ಕಾಯಸ್ಪರ್ಶನಪ್ರವೀಚಾರಂ ಭೂ
ವಿದಿತತ್ರಿ ಚತುಷ್ಕದೊಳ
ಪ್ಪುದು ದಿವದೊಳ್ ರೂಪಶಬ್ದಚೇತಃಕಾಮಂ ೭೮

ಕ್ರಮದಂಗಸ್ಪರ್ಶನರೂ
ಪ ಮನೋಹರಶಬ್ದ ಹೃತ್ಪ್ರವೀಚಾರಮನಂ
ತಮರತತಿ ನಿಃಪ್ರವೀಚಾ
ರಮನಾಂತುದು ಕಾಮಸುಖಮುಮೆಂದಱಿಪುವವೋಲ್ ೭೯

ಒಳ್ಪಿಂ ನೆಗೞ್ದಿಂದ್ರಾದಿ ವಿ
ಕಳ್ಪಾತೀತರ್ ಸ್ವಯಂಪ್ರಭಾತ್ತ ವಿಶಿಷ್ಟರ್
ತಳ್ಪೊಯ್ದು ಕಾಮಸುಖದೊಂ
ದೊಳ್ಪಡರಹಮಿಂದ್ರರತಿಶಯಾನಲ್ಪಸುಖರ್ ೮೦

ಒಳಗಣ ಶುಭಲೇಶ್ಯಾಸಂ
ಕುಳಕ್ಕೆ ಸಲೆ ಸದೃಶಮೆನಿಸಿ ಸುರರ ಶರೀರಂ
ಪಳಿಕಿನ ಕರಡಿಗೆಯೆನೆ ನಿ
ರ್ಮಳಿನಂ ತದ್ರುಚಿಯನಾಂತು ಕಣ್ಗೊಳಿಸಿರ್ಕುಂ ೮೧

ಮಾಸಾರ್ಧಕ್ಕೊರ್ಮೆ ಗಡು
ಚ್ಛ್ವಾಸಂ ಸಮನಿಸುವುದೇಕಸರಧಿಸ್ಥಿತಿವೆ
ತ್ತಾ ಸುರರ್ಗಮೃತಾಹಾರದೊ
ಳಾಸಕ್ತಿ ಸಹಸ್ರವತ್ಸರಕ್ಕೊಡರಿಸುಗುಂ ೮೨

ದಿವ್ಯ ಕಳೇವರ ಕಳಿತರ್
ದಿವ್ಯಾಂಬರ ದಿವ್ಯಗಂಧ ದಿವ್ಯಾಭರಣರ್
ದಿವ್ಯಾನ್ನ ದಿವ್ಯಮಾಳಾ
ದಿವ್ಯವಧೂಮಧುರಭೋಗನಿಧಿಗಳ್ ದಿವ್ಯರ್ ೮೩

ಮೇಗಣಮೇಗಣ ಸುರರ ಸು
ಖಾಗಮಮಱಿವಾಯು ಬೋಧಮಧಿಕಂ ದೇಹಾ
ಭೋಗಂ ಕುಂದುವುದೆಂದು ಜಿ
ನಾಗಮವಿದರಱಿವರುೞಿದ ಜಡರಱಿದಪರೇ ೮೪

ವ॥ ಅಂತು ನಿರಂತರೈಕಾಂತನಿಸರ್ಗಸುಖಸಂಸರ್ಗಮೆನಿಪ್ಪ ಸ್ವರ್ಗಂಗಳೊಳಗೆ

ಕಂ॥ ಮನದೊಳ್ ಭಾವಿಸಿ ಪನ್ನೆರ
ಡನನೂನವ್ರತಮನನಿತನುಪ್ರೇಕ್ಷೆಗಳಂ
ಜನಿಯಿಸಿತದು ಕರಿ ಪನ್ನೆರ
ಡನೆಯ ಸಹಸ್ರಾರಕಲ್ಪದೊಳ್ ಸುಖಪದದೊಳ್ ೮೫

ಕರಮೆಸೆವ ಮುತ್ತು ಸಿಪ್ಪಿನ
ಪೊರೆಯೊಳ್ ಪಜ್ಜಳಿಸಿ ತೋರ್ಪ ತೆಱದಿಂ ಚೆಲ್ವಾ
ವರಿಸಿದುಪಪಾದತಳ್ಪದ
ಪೊರೆಯೊಳ್ ಸಂಭವಿಸಿ ತೊಳಗಿ ಬೆಳಗಿದನಮರಂ ೮೬

ಅಱಿಕೆಯ ಮನಸಿಜಸುಖದೊಂ
ದೆಱೆವೆಟ್ಟೆನಿಪಮರರಮಣಿಯರ ಪುಣ್ಯಮೆ ಕ
ಣ್ದೆಱೆವಂತೆ ವಿಮಾನದ ಪಡಿ
ತೆಱೆದುದು ದೆಸೆದೆಸೆಗೆ ಕಂಪು ಪಸರಿಸುವಿನೆಗಂ ೮೭

ಸುಮನೋವಲ್ಲಭನಿವನೆಂ
ದಮರಗಣಕ್ಕೆಲ್ಲಮಱಿಪುವಂತಾ ಕ್ಷಣದೊಳ್
ಸುಮನೋವರ್ಷಂ ಸುರಿದುದು
ನಮೇರುಮಂದಾರಪಾರಿಜಾತಪ್ರಭವಂ ೮೮

ಪರಿವೃಢಜನನಸಮುದ್ಭವ
ಪರಿವಾರಮನೋನುರಾಗಲತಿಕಾಂಕುರಮಂ
ತರದಿಂ ನೆಗೆಪುತ್ತುಂ ಬಿ
ತ್ತರದಿಂ ತೀಡಿತ್ತು ಮಂದಚಾರುಸಮೀರಂ ೮೯

ಚಂ॥ ಗುಡಿ ಗೃಹದೇವತಾನಿಕರದೊಳ್ ನಿರಿಯಂತೆ ವಿಮಾನರಾಜಿಯೊಳ್
ಗೆಡೆಗೊಳೆ ರತ್ನ ತೋರಣದ ಸಂತತಿ ತತ್ಕಟಿಸೂತ್ರಶೋಭೆಯಂ
ಪಡೆಯೆ ತದೀಯನರ್ತನಲಯೋಚಿತವಾದ್ಯನಿನಾದದಂದದಿಂ
ದೊಡರಿಸೆ ಮಂಗಳಾನಕರವಂ ಜನನೋತ್ಸವಮೊಪ್ಪಿತಾತನಾ ೯೦

ವ॥ ಅಂತು ಪುಣ್ಯಪುಂಜನ ಜನನಕ್ಷಣ ವಸಂತಸಮಯದೊಳಮರಸಮಿತಿಚೇತೋನಂದನಾನಂದಮನೆತ್ತಂ ಬಿತ್ತರಿಸೆ

ಚಂ॥ ಸ್ತನಕಳಶಕ್ಕೆ ಪೊಂಗಳಸಮಾನನಶೋಭೆಗೆ ರತ್ನದರ್ಪಣಂ
ವಿನುತವಿಶಾಳಲೋಚನಮರೀಚಿಗೆ ಮಲ್ಲಿಗೆಯಚ್ಚಮಾಲೆ ಬೆ
ಳ್ಪನೆ ಕಱೆಯುತ್ತುಮಿರ್ಪ ನಗೆಗಕ್ಷತಮಂತೆಣೆಯಾಗೆ ಬಂದರಂ
ದನುಪಮರಾಗದಿಂದ ತಳೆದು ಮಂಗಳವಸ್ತುಗಳಂ ಲತಾಂಗಿಯರ್ ೯೧

ವ॥ ಅಂತು ತನತನಗೆ ಸೇಸೆಯಿಕ್ಕಲೆಂದು ಬಂದ ನಿಕಾಮಕೋಮಳಾಮರಕಾಮಿನಿಯರುಮನೇಕ ಭಂಗಿ ಸಂಗತ ಸರಸಭಾವ ಸಂಭಾವನಾ ರಂಭೋರುಹ ರಂಭಾನೃತ್ಯಾನುಗ

ಗಂಧರ್ವಗಣಗೇಯಮಾನ ಬಂಧುರಗೇಯ ದಿವಿಜವಾದಕವಾದ್ಯಹೃದ್ಯನಿನಾದಮುಂ ನಿಳಿಂಪ ಪುಣ್ಯಪಾಠಕವರ್ಯಸಮುಚ್ಚಾರ್ಯಮಾಣ ಜಯಜೀವನಂದವರ್ಧಸ್ವ ರವಮುಂ ಲೋಚನಗೋಚರಮುಂ ಶ್ರವಣರಮಣೀಯಮುಮಾಕಸ್ಮಿಕಮುಮಾಗೆ

ಚಂ॥ ತುಱುಗಿದನೂನಕಾನನದೊಳೊರ್ವನೆ ದಿಗ್ಭ್ರಮೆಯಿಂ ತೊೞಲ್ದು ಬಂ
ದೊಱಗಿದನಂ ತದರ್ಜಿತ ಸಮೂರ್ಜಿತಪುಣ್ಯದಿನೂರ್ವನಿಂದ್ರನ
ಟ್ಟಿಱೊಳೆ ನಿಜಾಲಶಾಲಯದ ಶಯ್ಯೆಯೊಳೊಯ್ದಿರಿಸಿಟ್ಟೊಡಾಗಳೆ
ಟ್ಟೆಱುತುಮೆ ವಿಸ್ಮಯಂಬಡುವವೋಲ್ ಮಿಗೆ ವಿಸ್ಮಿತನಾದನಾ ಸುರಂ ೯೨

ಮ॥ ಇದು ತಾನಾವುದೊ ಲೋಕಮಿಾ ಪರಿಜನಂ ತಾನಾವುದಾನಾರ್ಗೆ ಆ
ವುದನಾರಿಂದಮೆ ನೋಂತೆನೆಂಬಿನೆಗಮಾ ದೇವಂ ಭವತ್ತ್ರಯಂ
ವಿದಿತಂ ತೊಟ್ಟನೆ ಪುಟ್ಟೆ ಬೋಧಮದಱಿಂ ಸ್ವರ್ಲೋಕಮಿಾ ಸೈನ್ಯಮೆ
ನ್ನದು ಮುನ್ನಾಂ ಗಜಮಂದು ನೋಂತೆನರವಿಂದಶ್ರೀಮುನೀಂದ್ರೋಕ್ತಿಯಿಂ ೯೩

ಚಂ॥ ಸೊಗಯಿಪ ಪಾರಿಜಾತ ಹರಿಚಂದನಪುಷ್ಪದಿನಾದ ಬಣ್ಣವಾ
ಸಿಗಮುಮನೊಪ್ಪುತಿರ್ಪತಿವಿಚಿತ್ರಸುವಸ್ತ್ರಸುರತ್ನಭೂಷಣಾ
ಳಿಗಳುಮನಾಗಳೋಲಗಿಸಿ ಮುತ್ತಿನ ಸೇಸೆಯನಿಕ್ಕಿ ಸಂತಸಂ
ಮಿಗೆ ಪೊಡೆವಟ್ಟು ಬಿನ್ನವಿಸಿದರ್ ವಿಭುಗಾ ಸುರಮಂತ್ರಿಕಾಂತೆಯರ್ ೯೪

ತ್ರಿದಶನಿವಾಸಮಿಂತಿದು ನಿಜಾರ್ಜಿತಪುಣ್ಯದಿನಾದುದೀ ವಿಮಾ
ನದೊಳನುಬಂಧಿಸಿರ್ಪ ವನಿತಾಜನಮಿಾ ಪರಿವಾರಮಯ್ದೆ ನಿ
ನ್ನದು ಮದನಾಸ್ತ್ರಮೂರ್ತಿ ರಮಣೀನಯನೋತ್ಪಲಹರ್ಷದಾಯಿಯ
ಪ್ಪುದಱೊಳೆ ದೇವ ನೀಂ ವರಶಶಿಪ್ರಭನೆನ್ನೆ ಸುಖವಾರ್ಧಿವರ್ಧನಾ ೯೫

ಕಂ॥ ಇನಿತುವಿಭವಂ ನಿನಗೆ ಸಂ
ಜನಿಯಿಸಿದುದು ಜಿನಪದಾಬ್ಜಭಕ್ತಿಯಿನಿನ್ನುಂ
ಜಿನನನೆ ಪೂಜಿಸು ಪುಣ್ಯಮ
ನನುಭವಿಸುತುಮಱಿವನದನೆ ನೆರಪಲ್ವೇೞ್ಕುಂ ೯೬

ಎನೆ ಮನದೆಗೊಂಡು ವಿವಿಧಾ
ರ್ಚನೆಯಿಂ ಜಿನಚೈತ್ಯರಾಜಿಯಂ ಭಕ್ತಿಭರಾ
ವನತಂ ಪೂಜಿಸಿ ತಳೆದಂ
ಘನಪುಳಕಮನಮರಕಾಮಿನೀಮುಖತಿಳಕಂ ೯೭

ವ॥ ಅಂತು ತಳೆದು ಬೞಿಯಂ

ಮ॥ ಪರಿವಾರಂಬೆರಸಾ ಶಶಿಪ್ರಭಸುರಂ ತಾರೇಶನೆಂತಂತುಟಂ
ಬರಮಂ ಚಿತ್ರಿಸೆ ಬಂದು ದಿವ್ಯಮಣಿಯಿಂ ದಿವ್ಯಾರ್ಚನಾದ್ರವ್ಯದಿಂ
ದರವಿಂದಪ್ರತಿನಾಥನಿರ್ದ ಶಿಲೆಯಂ ತತ್ಕುಂಜರೋದ್ವೃತ್ತಕೀ
ವರಮಂ ಪೂಜಿಸಿದಂ ಸ್ವಕೀಯಸುರಲೋಕಶ್ರೀನಿಮಿತ್ತಂಗಳಂ ೯೮

ವ॥ ಅಂತು ಪೂಜಿಸಿ ಮಗುಳ್ದು ಬಂದು

ಕಂ॥ ಪರಿವೃತವಿಮಾನಮಣಿಗಣ
ಮರೀಚಿಯಂ ತನ್ನ ರುಚಿಯಿನಿನರುಚಿ ದೀಪಾಂ
ಕುರಮನಿಱಿಪಂತಿರಿಱಿಪುದು
ವರ ಸ್ವಯಂಪ್ರಭವಿಮಾನಮಪ್ರತಿಮಾನಂ ೯೯

ನಾನಾರತ್ನ ವಿಮಾನಾ
ನೂನಪ್ರಭೆಯಂ ಸ್ವಯಂಪ್ರಭಾಖ್ಯಾನಸುಖ
ಸ್ಥಾನವಿಮಾನಪ್ರಭೆ ಗೆ
ಲ್ದಾ ನಾಮಂ ತನಗೆ ಸಾಮ್ಯಮೆನೆ ಸೊಗಯಿಸುಗುಂ ೧೦೦

ವ॥ ಆ ವಿರಾಜಮಾನವಿಮಾನದೊಳ್

ಚಂ॥ ಸುರುಚಿರರತ್ನ ಗೇಹಸಹಜಾಭರಣಪ್ರಭೆಯಂ ಸ್ವದೀಪ್ತಿ ಬಿ
ತ್ತರಿಸೆ ಸುರದ್ರುಮಪ್ರಸವಶೇಖರಸೌರಭಮಂ ನಿಜಾಂಗಬಂ
ಧುರತರಗಂಧಮಿರ್ಮಡಿಸೆ ಕಾಂತಿಯ ತಿಂಥಿಣಿ ಸಾರಸೌರಭಾ
ಕರನೆನೆ ಕಣ್ಗೆ ವಂದನಮರೀಜನಕಂತುನಿಭಂ ಶಶಿಪ್ರಭಂ ೧೦೧

ಕಂ॥ ಮೂಱುವರೆಮೊೞನೆನಿಪ ತನು
ಬೀಱುತ್ತಲರಂಬಿನಂದದಿಂ ತನಿಗಂಪಂ
ನೀಱೆಯರ ಮನಮನೆೞಗಿಸೆ
ಜಾಱೇಂ ಜವ್ವನದಿನಮರನೆಸೆದಂ ನಿಸದಂ ೧೦೨

ಅಯಮೂರ್ತಿ ಶುಕ್ಲಶೋಣಿತ
ಮಯಮಲ್ಲಂ ಮೌಕ್ತಿಕಾರುಣಾಶ್ಮದ್ಯುತಿಸಂ
ಚಯದಿಂದೆ ಶುಕ್ಲಶೋಣಿತ
ಮಯನೆನಿಪಂ ದಿವಿಜನಿಂತು ಚಿತ್ರಚರಿತ್ರಂ ೧೦೩

ಸಹಜಾಂಬರಭೂಷಾಸ್ತ್ರ
ಕ್ಸಹಿತಂ ಮಳರಹಿತನಾತ್ತ ಯೌವನಶೋಭಾ
ವಿಹಿತಂ ನೆನೆವಂ ಷೋಡಶ
ಸಹಸ್ರವರ್ಷಕ್ಕದೊರ್ಮೆ ದಿವ್ಯಾಶನಮಂ ೧೦೪

ಲಲಿತಮುಖಕಮಳಪರಿಮಳ
ಮಿಳಿತಂ ಮಳಯರುಹಪವನನಂ ನೆನೆಯಿಸೆ ನಿ
ರ್ಮಳನೆಂಟುತಿಂಗಳಂದಿಂ
ಗಲಘುಸುಖಾಂಭೋಧಿ ಸುಯ್ವನೊರ್ಮೆ ಸುರೇಶಂ ೧೦೫

ಮಾತಿನೊಳೆ ವಿನೂತಮನೋ
ಜಾತಸುಖಮನಮರರಮಣಿಯರ್ ಸಕಳಕಳಾ

ನ್ವಿತಂಗೆ ಪಡೆದು ಶಬ್ದಾ
ದ್ವೈತಮನಭಿನಯಿಪ ವಾಣಿಯಂ ನೆನೆಯಿಸಿದರ್ ೧೦೬

ಮ॥ ಹರಿ ನೀಳಂ ಶನಿ ಮಾಣಿಕಂ ಮಹಿಸುತಂ ಮುಕ್ತಾಫಳಂ ಭಾರ್ಗವಂ
ಗರುಡೋದ್ಗಾರ ಶಶಾಂಕಜಂ ಮರಕತಂ ಸ್ವರ್ಭಾನು ಗೋಮೇಧಿಕಂ
ಗುರುವಾಗಂಬರಮಂ ಸ್ವಯಪ್ರಭವಿಮಾನಂ ಪೋಲೆ ಪುಣ್ಯೋದಯಂ
ಬೆರಸಿರ್ದಂ ಶಶಿವೋಲ್ ಶಶಿಪ್ರಭಸುರಂ ರುಕ್ಚಂದ್ರಿಕಾಭಾಸುರಂ ೧೦೭

ಚತುರಸ್ತ್ರೀಕಮಳಾಂಚಿತಂ ವಿನಯರತ್ನಂ ಪುಣ್ಯವೇಳಾಸಮ
ನ್ವಿತಮಾಹ್ಲಾದಿವಿನೋದವಿಭ್ರಮಯುತಂ ನಾನಾಮರೋರ್ವೀಜರ್
ಜಿತಮಾ ಷೋಡಶಸಾಗರೋಪಮಮಲಂಪಿಂ ಸಾರಸೌಖ್ಯಾಮೃತೋ
ನ್ನತಿಯಿಂ ಮಾಡೆ ಶಶಿಪ್ರಭಂ ಸೊಗಯಿಸುತ್ತಿರ್ದಂ ಕಳಾವಲ್ಲಭಂ ೧೦೮

ಉ॥ ಮೆಲ್ಪಳವಟ್ಟು ತೋಱೆ ನಡೆಯಲ್ ದನಿ ಮುಟ್ಟೆಪಾಡಲೊಂ
ದಲ್ಪೊಸತಾಗೆ ನರ್ತಿಸಲಭೀಕ್ಷಿಸೆ ನಲ್ಮೆಯನುಂಟುಮಾಡೆ ಪೊ
ರ್ದಲ್ ಪರಿಹಾಸಮಂ ಮೆಱೆಯಲಿಂಬೆನೆ ಬಲ್ಲಮರಾಂಗನಾಳಿ ಸಂ
ಕಲ್ಪಿತಸೌಖ್ಯಮಂ ಸಲಿಸೆ ಕಲ್ಪಜನೊಪ್ಪುತುಮಿರ್ಪನಾಗಳುಂ ೧೦೯

ಕಂ॥ ದೃಶ್ಯಂ ಸುರವನಿತಾಜನ
ವಶ್ಯಂ ನಿಜಮೂರ್ತಿ ವಾಣಿ ಸರಸಂ ವಾಣೀ
ವಶ್ಯಮೆನೆ ಶುಕ್ಲಶುಭಕರ
ಲೇಶ್ಯೆಯನೊಳಕೊಂಡು ಸೊಗಯಿಪಂ ಸುರರಾಜಂ ೧೧೦

ಚಂ॥ ಗರಿಮಮಯಕ್ಕೆ ಮಿಕ್ಕಣಿಮಮಜ್ಞತೆಗರ್ಚ್ಯಜಿನೇಶ್ವರಾರ್ಚನಾ
ಪರಿಕರವೃದ್ಧಿಯೊಳ್ ಮಹಿಮೆಯಿಶಿತೆ ತತ್ಪರಿಚರ್ಯೆಯಲ್ಲಿ ಬಿ
ತ್ತರಿಸುವ ಕಾಮರೂಪತೆ ಸುಭೃತ್ಯವಶಿತ್ವಮದೊಪ್ಪೆ ವಿಶ್ರುತಾಂ
ಬರತಳಯಾನದೊಳ್ ಲಘಿಮಮಾಖ್ಯೆಯೊಳೊಪ್ಪೆ ಸುರಂ ವಿರಾಜಿಪಂ ೧೧೧

ಮ.ಸ್ರ॥ ರಸಗೇಯಂ ಭಾವನೃತ್ಯಂ ಪಡೆಯಲೆಸೆವ ವಾದ್ಯಂ ಮನಕ್ಕೆಂದುಮೊಳ್ಪಂ
ಪಸಿವುಂ ನೀರಳ್ಕೆಯುಂ ನಿದ್ದೆಯುಮಲಸುಗೆಯುಂ ಮಾಣ್ದುದೆಂಬಂದದಿಂ ಮಾ
ಣಿಸೆ ಲೀಲಾಪಾಂಗದೇವೀನಿವಹಸರಸಶಬ್ದ ಪ್ರವೀಚಾರದಿಂ ಸಂ
ತಸಮಂ ತಾಳ್ದುತ್ತುಮಿರ್ದಂ ವಿಬುಧಜನಮನಃಪದ್ಮಿನೀಪದ್ಮಮಿತ್ರಂ ೧೧೨

ಗದ್ಯ

ಇದು ವಿದಿತವಿಬುಧಲೋಕನಾಯಕಾಭಿಪೂಜ್ಯ ವಾಸುಪೂಜ್ಯಜಿನಮುನಿ ಪ್ರಸಾದಾಸಾದಿತ ನಿರ್ಮಳಧರ್ಮ ವಿನುತ ವಿನೇಯಜನವನಜವನವಿಳಸಿತ ಕವಿಕುಳತಿಳಕಪ್ರಣೂತ ಪಾರ್ಶ್ವನಾಥಪ್ರಣೀತಮಪ್ಪ ಪಾರ್ಶ್ವನಾಥಚರಿತಪುರಾಣದೊಳ್ ಶಶಿಪ್ರಭದೇವವಿಭವವರ್ಣನಂ ಪಂಚಮಾಶ್ವಾಸಂ

ಷಷ್ಠಾಶ್ವಾಸಂ

ಕಂ॥ ಶ್ರೀಸುರಲಲನಾಪಾಂಗವಿ
ಳಾಸ ಲತಾಲಲಿತ ಕಲ್ಪತರು ಚೇತೋವ
ಲ್ಲೀಸಂಶೋಭಿತಜಿನಪತಿ
ಭಾಸುರಪದಕಲ್ಪಶಾಖೆ ಕವಿಕುಳತಿಳಕಂ ೧

ವ॥ ಅಂತಾ ನಾಕಪತಿ ನಾಕಲೋಕಸಂಜನಿತಸುಖಾನೀಕಮನನಾಕುಳಚಿತ್ತನನು ಭವಿಸುತ್ತುಮಿರೆ

ಉ॥ ಘಾಸಿಸಲೆಂದು ಬರ್ಪ ಯಮತೇಜದಳುರ್ಕೆಗೆ ಬಾಡುವಂದದಿಂ
ಬಾಸಿಗಮೆಯ್ದೆ ಬಾಡಿದುದು ತತ್ಪದರೇಣುಗೆ ಮಾಸುವಂದದಿಂ
ಮಾಸಿತು ಸೀರೆ ತನ್ನೃಪನ ಸೈನ್ಯದ ಘಟ್ಟನದಿಂದೆ ಕಂಪಿಪಂ
ತಾಸುರಮಾಗಿ ಕಂಪಿಸಿತು ನೆಟ್ಟನೆ ರತ್ನಪಿನದ್ಧಕುಟ್ಟಿಮಂ ೨

ವ॥ ಅಂತು ತನ್ನಾಯುರವಸಾನಸೂಚಕದುಶ್ಚಿಹ್ನಂಗಳ್ ತೋಱೆ ಬಗೆ ಬೆದಱೆ ಬೞಿಯಮವಧಿಯಂ ಪ್ರಯೋಗಿಸಿ ಷಣ್ಮಾಸಾವಧಿಯೆ ನಿಜಜೀವಿತಮೆಂದು ನಿಶ್ಚಯಿಸಿ

ಉ॥ ಸೂಡಿದ ಬಾಸಿಗಂ ಬಿಡದೆ ಬಾಡಿದೊಡಂ ನಿಜವಕ್ತ್ರಪಂಕಜಂ
ಬಾಡದೆ ತನ್ನ ಸನ್ನುತವಿಮಾನದ ರತ್ನಪಿನದ್ಧಭೂಮಿಯ
ಲ್ಲಾಡಿದೊಡಂ ಸ್ವಕೀಯಧೃತಿಮೂಳಮನೋಲತಿಕಾಗ್ರಮೆಂದುಮ
ಲ್ಲಾಡದದೊಪ್ಪೆ ದರ್ಶನವಿಶುದ್ಧತೆಯಂ ಮೆಱೆದಂ ಸುರೇಶ್ವರಂ ೩

ಕಂ॥ ಅಱಿಯದರ್ಗಿವು ದುಶ್ಚಿಹ್ನಂ
ಪೆಱತೇನಱಿವುಳ್ಳವಂಗೆ ಶುಭಚಿಹ್ನಂ ಮೆ
ಯ್ಮಱೆದಿಂತಿರವೇಡೆಂದೆ
ೞ್ಚಱಿಸಿ ಶುಭಾಕ್ರಾಂತಚಿಂತೆಯಂ ಮಾೞ್ಪುದಱಿಂ ೪

ಪಡೆಯಲ್ಕಾರ್ಪವನರ್ಥಂ
ಕಿಡೆ ಧೃತಿಗಿಡದಂತು ದಿವಿಜನುಂ ಮುಂದೆ ಸುಖಂ
ಬಡೆವಾರ್ಪಿನಿಂದೆ ಧೈರ್ಯಂ
ಗಿಡದೆ ಜಿನೇಶ್ವರಪದಾಬ್ಜಮಂ ಪೂಜಿಸಿದಂ ೫

ವ॥ ಅಂತಱುದಿಂಗಳ್ ನೆಱೆವಿನಮನುದಿನಂ ಧರ್ಮಧ್ಯಾನಾಧೀನಮಾನಸಂ ಸಮಸ್ತ ಕೃತ್ರಿಮಾಕೃತ್ರಿಮಚೈತ್ಯಾಲಯ ಸಕಳ ತೀರ್ಥಕರ ಸಮವಸರಣಾದಿ ಪರಮತೀರ್ಥವಂದನಾರ್ಚನ ತತ್ಪರನಾಗಿರ್ದು ಸಮಾಧಿಸಮಯದೊಳ್

ಕಂ॥ ತೃಣಕುಟಿಯೊಳ್ ಮಣಿಭವನಂ
ತೃಣಕಲ್ಪಿತಪುತ್ರಿಕಾಳಿಯೊಳ್ ಯುವತಿಗಣಂ
ತೃಣರಚಿತಭೂಷಣಂಗಳೊ
ಳೆಣೆ ಮಣಿಭೂಷಣಮೆನುತ್ತುಮಿರ್ದನುದಾತ್ತಂ ೬

ಭಾವನೆ ಚಳಮಾಗೆ ಚಳಂ
ಭಾವನೆ ಚಿರಮಾಗೆ ಸುಸ್ಥಿರಂ ಶ್ರೀವಿಭವಂ
ಜೀವಕ್ಕೆ ಸಮನಿಕುಂ ಯ
ದ್ಭಾವಃ ತದ್ಭವತಿಯೆಂಬ ನುಡಿಯುಳ್ಳುದಱಿಂ ೭

ವ॥ ಎಂದಿಂತು ದೂರೀಕೃತ ಬಾಹ್ಯಾಭ್ಯಂತರಪರಿಗ್ರಹಮೋಹಗ್ರಹನಂ ಕೃತಾತ್ಮ ಭಾವನೈಕಪರಿಗ್ರಹನುಮಾಗಿ

ಕಂ॥ ಜೀವನವಿರಹಿತಮಭ್ರಂ
ಭಾವಿಸುತಿರೆ ಕರಗುವಂತೆ ಕರಗೆ ಶರೀರಂ
ದೇವಂ ಜಿನಪತಿಪದಮಂ
ಭಾವಿಸುತೆ ಸಮಾಧಿಮರಣಮಂ ಸಾಧಿಸಿದಂ ೮

ವ॥ ಅಂತು ಸಮಾಧಿಯಂ ಸಾಧಿಸಿಕೊಂಡು

ಕಂ॥ ಮದನಾಸ್ಪದಜಂಬೂದ್ವೀ
ಪದೊಳೊಪ್ಪುವಪೂರ್ವಸೌಖ್ಯಕೃತ್ಪೂರ್ವವಿದೇ
ಹದ ಪುಷ್ಕಳಾವತೀವಿಷ
ಯದೊಳಖಿಳಪದಾರ್ಥಪುಷ್ಕಳಂ ವಿಜಯಾರ್ಧಂ ೯

ರಣಿತಮಧುಕರಸರೋಜ
ಪ್ರಣುತಾಸ್ಯೆಯ ಪುಷ್ಕಳಾವತೀವಿಷಯಮೃಗೇ
ಕ್ಷಣೆಯ ತೆಗೆದುಟ್ಟ ದುಗುಲದ
ಕಣೆಯಕ್ಕಣೆಯೆನಿಸಿ ರಜತಗಿರಿ ಸೊಗಯಿಸುಗುಂ ೧೦

ಮ॥ ಕುಜಪಾಷಾಣಮೃಗಾವಲಂಬಮಿತರಕ್ಷ್ಮಾಭೃನ್ನಿತಂಬಂ ಸ್ಫುರ
ದ್ವಿಜಯಾರ್ಧಾದ್ರಿನಿತಂಬಬಿಂಬಮನಿತುಂ ವಿದ್ಯಾಧರಾಧೀಶದೇ
ವಜಗತ್ಪೂಜ್ಯಜಿನೇಶ್ವರಾಶ್ರಯಮಯಂ ತಾನೆಂದೊಡೇನೆಂದು ಪೇ
ೞ್ವ ಜಡಾವಾಸಮೆನಿಪ್ಪುವಂ ವಿಬುಧಲೀಲಾವಾಸದೊಳ್ ಪೋಲಿಪೆಂ ೧೧

ನಿಜಸಾನುದ್ವಯಖೇಚರಾಮರಸಮೂಹಂ ಸಿದ್ಧಕೂಟಪ್ರಸಿ
ದ್ಧಜಿನಾಧೀಶನಸಾದಮೋಲಗಿಸೆ ನಾನಾಖೇಚರೀನೃತ್ಯನಾ

ಕಜತೂರ್ಯಸ್ವನ ಕಿನ್ನರೀಸರಸಗೇಯಶ್ರೀ ಮನಂಗೊಳ್ಪಿನಂ
ವಿಜಯಾರ್ಧಂ ನವರತ್ನರಾಜಿತಜಿನೇಂದ್ರಾಸ್ಥಾನದಂತೊಪ್ಪುಗುಂ ೧೨

ಮಸ್ರ॥ ಅಳಿನೀಝುಂಕಾರಮುಂ ಕೋಕಿಳಕಳರವಮುಂ ನಂದನಾಕ್ಷೂಣಲಕ್ಷ್ಮೀ
ನಿಳಯೋದ್ಯದ್ದೇವವಿದ್ಯಾಧರಗೃಹದ ಲಸದ್ವಲ್ಲಕೀನಾದಮುಂ ಕೋ
ಮಳ ನಾನಾ ಕಿನ್ನರೀಗೇಯದ ಮೃದುರವಮುಂ ಕೀರ್ತಿಪಂತೊಪ್ಪೆ ತನ್ನು
ಜ್ವಳಕೀರ್ತಿಶ್ರೀಯನೋರಂತೆಸೆವುದು ವಿಜಯಾರ್ಧಂ ಮನೋಜಾತಹೃದ್ಯಂ ೧೩

ಕಂ॥ ರಾಜಿತವಿಜಯಾರ್ಧಾಚಳ
ರಾಜಕಟೀಸೂತ್ರಘಟಿತಮಣಿಗಣಮೆನೆ ವಿ
ಭ್ರಾಜಿಕುಮುಭಯಶ್ರೇಣಿ
ಶ್ರೀಜನ್ಮಾವಾಸಮಖಿಳಖಚರಾವಾಸಂ ೧೪

ವ॥ ಅವಱೊಳಗಮೇಯನಾಯಕರತ್ನವಿಳಾಸಮಂ ತಳೆದು

ಉ॥ ಉತ್ತಮ ಧರ್ಮವರ್ತನಸಮಾಶ್ರಯಮುತ್ತಮ ಭೋಗಗೇಹಮ
ತ್ಯುತ್ತಮ ಕಾಮಿನೀಜನನಿಕೇತನಮುತ್ತಮ ವರ್ಣಪೂರ್ಣಸಂ
ಪತ್ತಿನಿಧಾನಮುತ್ತಮಕಳಾನಿಧಿಮಂದಿರಮಂತಱಿಂ ತ್ರಿಳೋ
ಕೋತ್ತಮಮಿಂತು ತನ್ನ ಪೆಸರ್ಗನ್ವಿತಮಂ ಪಡೆದೊಪ್ಪುಗುಂ ಪುರಂ ೧೫

ಕಂ॥ ಹೃದ್ಯಮೆನಿಸುವುದು ಚೋದ್ಯಮೆ
ವಿದ್ಯಾಧರಗಾಯಿಕಾನಿಕಾಯದ ಮಂದ್ರಂ
ಚೋದ್ಯಮಿದು ಮಧ್ಯತಾರಂ
ಹೃದ್ಯಮೆನಿಕ್ಕುಂ ಗಡಲ್ಲಿ ಪಾಡುವ ಪದದೊಳ್ ೧೬

ಮಣಿನೂಪುರರಶನಾಕಂ
ಕಣನಿನದಂ ಗೀತವಿರುತಿ ಕರಧೃತವೀಣಾ
ರಣಿತಂ ಸ್ಮರಶರಪಾತ
ಕ್ವಣನಕ್ಕೆಣೆಯೆನಿಸೆ ಸುೞಿವರಂಬರಚರಿಯರ್ ೧೭

ಸ್ರ॥ ವಿದ್ಯುನ್ಮಾಳಾಪ್ರಿಯಂ ಸಾಧಿತಕುಳವಿಳಸಜ್ಜಾತಿಸಂಭೇದಶುಂಭ
ದ್ವಿದ್ಯಾವಷ್ಟಂಭದಿಂದಾಕ್ರಮಿಸಿ ಖಚರರಂ ನೀತಿನಿಷ್ಣಾತನುರ್ವೀ
ಹೃದ್ಯಂ ವಿದ್ಯುತ್ಪ್ರಭಂ ಪೂಜಿತಜಿನಚರಣಾಂಭೋರುಹಂ ರಾಜವಿದ್ಯಾ
ನದ್ಯಂಭೋರಾಶಿಯಂತಾ ನಗರದೊಳೆಸೆದಿರ್ಪಂ ಜಿತಾರಾತಿದರ್ಪಂ ೧೮

ಕಂ॥ ವಿದ್ಯುತ್ಪ್ರಭೆಯಂ ಗೆಲೆ ತ
ನ್ನ ದ್ಯುತಿ ನಯನಾಂಶು ನಖಮರೀಚಿಪ್ರಚಯಂ
ವಿದ್ಯುತ್ಪ್ರಭವಲ್ಲಭೆಗಾ
ವಿದ್ಯುನ್ಮಾಳಾಭಿಧಾನಮಿಂತನ್ವರ್ಥಂ ೧೯

ಆ ನೆಗಟ್ದ ರಾಜಹಂಸೀ
ಯಾನಂ ನಿರುಪಮಪಯೋಧರಾಗಮದೊಳ್ ವಿ
ದ್ಯಾನಿಳಯಕುಭೃನ್ನಾಯಕ
ಮಾನಸದೊಳ್ ಸೊಗಯಿಸಿರ್ಪುದದು ತಕ್ಕುದೆ ದಲ್ ೨೦

ಪಾಳಿಪುದುಚಿತಂ ವಿದ್ಯು
ನ್ಮಾಳೆ ಪಯೋಧರಸಲೀಲಲಾವಣ್ಯಪಯೋ
ಜಾಳದೆ ವಿದ್ಯುತ್ಪ್ರಭ ಖಗ
ಪಾಳ ಮನೋರಾಗವಲ್ಲರಿಯನನವರತಂ ೨೧

ಅಂತಾ ಕಾಂತೆಯೊಳಂ ಶ್ರೀ
ಕಾಂತೆಯೊಳಂ ವಿಬುಧವಿನುತವಿಶದಯಶಃಶ್ರೀ
ಕಾಂತೆಯೊಳಂ ನೆರೆದವನೀ
ಕಾಂತಂ ಸುಖಸಂಕಥಾವಿನೋದದೊಳಿರ್ದಂ ೨೨

ವ॥ ಅಂತಾ ದಂಪತಿಗಳ ಸಂಪತ್ಸುಧಾಸಾಗರಸಮೃದ್ಧಿಸಂಪಾದನ ಸಮಗ್ರ ಪುಣ್ಯಮೂರ್ತಿಯೊಂದು ಶುಭಮುಹೂರ್ತದೊಳ್

ಕಂ॥ ಸಿತದೀಧಿತಿ ಕುಮುದಿನಿಯೊಳ್
ಪ್ರತಿಬಿಂಬಿಸುವಂತೆ ಸತ್ಪಥದ್ಯೋತಕನಾ
ಕ್ಷಿತಿಪತಿಯ ಸತಿಯ ಮಹಿತಳ
ಹಿತಗರ್ಭದೊಳಾ ಶಶಿಪ್ರಭಂ ಜನಿಯಿಸಿದಂ ೨೩

ವ॥ ಅಂತಾ ನಿರ್ಮಳಗುಣವಿರಾಜಿತಂ ರಾಜಹಂಸನಂದದಿಂದವಾ ಸರೋಜಮುಖಿಯ ಗರ್ಭಸರೋಜಿನಿಯೊಳ್ ಬಂದು ನೆಲಸೆ

ಕಂ॥ ಕುಡುವ ಗುಣದಿಂದೆ ಲೋಕದ
ಬಡತನಮಂ ಕಿಡಿಸಲಾರ್ಪ ತನುಜಂ ತನ್ನಿ
ರ್ದೆಡೆಯ ಬಡತನಮನೋವದೆ
ಕಿಡಿಸುವುದೇಂ ಚೋದ್ಯಮೆನೆ ಪೊದಟ್ದುದು ಗರ್ಭಂ ೨೪

ತನುತೆಯನೊಲ್ಲದೆ ನಡುವುಂ
ಘನತ್ವದಿಂ ತಮ್ಮ ತೆಱದಿನಿನಿಯನ ಚಿತ್ತ
ಕ್ಕನುರಾಗಮನೊದವಿಸಿದಪು
ದೆನುತುಂ ಮೊಲೆಮೊಗದ ಕರ್ಪನಾಂತಂತೆಸೆಗುಂ ೨೫

ವ॥ ಅಂತಾ ಚಂದ್ರಾನನೆಯ ಬಂಧುಜನಹರ್ಷಗರ್ಭಮೇೞ್ಗೆವಾಡಿವದಚಂದ್ರನಂತನುದಿನಮನುಕ್ರಮದಿಂ ಬಳೆದು ನವಮಾಸಂ ನೆಱೆಯೆ ದಿಶಾಚಕ್ರಂ ಕಣ್ದೆಱೆಯೆ ಸಕಳ ಜಳಾಶಯಂ ಕಲುಷತೆಯಂ ತೊಱೆಯೆ ಶೈತ್ಯಸೌರಭ್ಯಮಾಂದ್ಯಗುಣದಿಂ ಪರಿಣತೆಯಿಂ ಸಮೀರಣಮಲೆಯೆ ದಕ್ಷಿಣಾವರ್ತದಿಂ ಮಱೆಯೆ ವಸುಂಧರಾಲಕ್ಷ್ಮಿ ಪವಿರ್ಭಜಂ ಚತುರ್ಮುಖಶಂಖದಂತೆ

ದೃಷ್ಟಿಗೆ ಸೌಂದರ್ಯವೃಷ್ಟಿಯಂ ಕಱೆಯೆ ಗರ್ಭದರ್ಭಕನ ಪುಣ್ಯದೆಸೆಯಂ ಪ್ರಕಟಿಸುವಂತೆ ನವಗ್ರಹಂಗಳೇಕಾದಶಸ್ಥಂಗಳಾಗೆ ಪರಿಜನ ಪುರಜನ ಸನಾಭಿಜನಂಗಳನುರಾಗ ರಸಸಾಗರದೊಳ್ ಮಗ್ನರಾಗೆ ಉದಯಕಾಲದ ಶುಭಲಗ್ನದೊಳ್ ಹಿಮರಶ್ಮಿಯಂತುದಯಿಸಿ ನಿಜಜನ್ಮೋತ್ಸವಾನೂನವಸುದಾನದಿಂ ವಸುಂಧರೆಗನ್ವರ್ಥಾಭಿಧಾನಮಂ ಸಮರ್ಥಿಸಿ ರಶ್ಮಿವೇಗಾಭಿಧಾನಮಂ ಪಡೆದು ಬಳೆಯುತ್ತುಮಿರೆ

ಕಂ॥ ಪ್ರಮದಾಕ್ಷಿಕುಮುದವಿಕಸನ
ಹಿಮರಶ್ಮಿ ವಿರೋಧಿಖಚರಗರ್ವತಮೋವಿ
ಭ್ರಮ ತೀವ್ರರಶ್ಮಿ ಗುಣರಾ
ಗಮನಾಳ್ದಂ ರಶ್ಮಿವೇಗನನುಪಮಭೋಗಂ ೨೬

ಮ॥ ಲಲನಾಲೋಚನಕೈರವಕ್ಕೆ ಮುದಮಂ ತಂದೀವ ವಕ್ತ್ರೇಂದುಮಂ
ಡಳದೊಳ್ ಶ್ಮಶ್ರುವಿಲೇಖೆ ನುಣ್ಗಱೆಯವೋಲ್ ಕಣ್ಗೊಪ್ಪೆ ಕಾಂತಾಕುಚಾ
ವಳಿ ಭಾಸ್ವನ್ನಿಕಷಾಶ್ಮಸಂಗತಿಯಿನಂಗಂ ಷೋಡಶಸ್ವರ್ಣನಿ
ರ್ಮಳವರ್ಣಾಂಗಮರೀಚಿ ಯೌವನಮನಾಂತಂ ಖೇಚರಾಧೀಶ್ವರಂ ೨೭

ಮದನಾಸ್ತ್ರಂ ನಿಜಮೂರ್ತಿ ಮೋಹನಶರಂ ಸೌಭಾಗ್ಯಸಂಪತ್ತಿಯು
ನ್ಮದನಾಖ್ಯೇಷು ಕಳಾವಿಚಕ್ಷಣಗುಣಂ ಸಂತಾಪಬಾಣಂ ರತಿ
ಪ್ರದಬಾಣಂ ಸುದತೀವಶೀಕರಣಮಸ್ತ್ರಂ ಯೌವ್ವನಾರಂಭಮಾ
ಗೆ ದಿಟಂ ದರ್ಪಕನಂದದಿಂದೊಲಿಸಿದಂ ವಿದ್ಯಾಧರಸ್ತ್ರೀಯರಂ ೨೮

ಉ॥ ಕೈರವನೇತ್ರೆಯರ್ ವಿಕಚಕೈರವಮಂ ವರವಾರಿಜಾಸ್ಯೆಯರ್
ವಾರಿಜಷಂಡಮಂ ಕುಸುಮಕೋಮಳೆಯರ್ ಕುಸುಮೋರುಶಯ್ಯೆಯಂ
ಚಾರುನವೀನಚಂದನಸುಗಂಧಿಯರುಜ್ವಳಚಂದನದ್ರವಾ
ಸಾರಮನಾರೊ ಸಾರದವರೊಲ್ದಭಿವೀಕ್ಷಿಸಿ ರಶ್ಮಿವೇಗನಂ ೨೯

ವ॥ ಅಂತು ಸಂಪ್ರಾಪ್ತಯೌವನಪ್ರಾಯನುಂ ಸಮನುಭೂತಸಮಸ್ತಶಾಸ್ತ್ರಾಭಿಪ್ರಾಯನುಂ ಸಮಾಸಾಧಿತ ಸಕಳಕಳಾವಿದ್ಯಾಸಮೂಹನುಂ ನವಯೌವನಶ್ರೀಜನ್ಮಗೇಹನುಂ ನಿಜಾಕಾರನಿರ್ಜಿತ ಮನೋಜನುಮಾದ ತನೂಜನಂ ಕಂಡು ಯುವರಾಜಪದವಿಗೆ ಯೋಗ್ಯನಾದನೆಂದಾ ನಂದಮಂದಿರಹೃದಯನಾಗಿ

ಕಂ॥ ಕುಂಠಿತರಿಪುಮದನವೆನಿಪ
ಕಂಠೀರವನಾತ್ಮಜಂಗೆ ಯುವನೃಪಪದವೀ
ಕಂಠಿಕೆಯಂ ಕಟ್ಟಿದನು
ತ್ಕಂಠತೆಯಿಂ ತೀವೆ ದಿಶೆಗಳಂ ತೂರ್ಯರವಂ ೩೦

ವ॥ ಅಂತನಂತಸಾಮಂತಸಮೇತಂ ಯುವರಾಜಂಗೆ ಖೇಚರರಾಜಂ ಯುವರಾಜ ಲಕ್ಷ್ಮಿಯೊಳ್ ಪಾಣಿಗ್ರಹಣಮಂ ಮಾಡಿಸಿ ನಿಜಾನ್ವಯಲಕ್ಷ್ಮಿಯೆನಿಪ ಕನ್ಯಾರತ್ನಪಾಣಿಗ್ರಹಣಮಂ ಮಾಡಿಸಲೆಂದುದ್ಯುಕ್ತಚಿತ್ತನಾಗಿರೆ

ಕಂ॥ ತಮತಮಗುಭಯಶ್ರೇಣಿಯ
ಸಮಸ್ತ ಖಚರಾಧಿನಾಥರಾತನ ಭುಜವಿ
ಕ್ರಮಮಂ ಕ್ರಮಮಂ ವಿದ್ಯಾ
ಶ್ರಮರೂಪಮನೊಲ್ದು ಕೇಳ್ದು ನಿಜತನುಜೆಯರಂ ೩೧

ಮದನಶರಾಕಾರೆಯರಂ
ಮದನೋನ್ಮದಕುಂಭಿಕುಂಭಕುಚಯುಗಳೆಯರಂ
ಮದನಕಳಾಕುಶಳೆಯರಂ
ಮದನಮಹೀಪಾಳಭಾಗ್ಯಸೌಭಾಗ್ಯೆಯರಂ ೩೨

ವ॥ ಕನ್ಯಾರತ್ನಮಂ ಕುಡುವುದರ್ಕಿದುವೆ ಸಂಚಕರಮೆಂಬಂತೆ ಪುರುಷರತ್ನೋಪಾರ್ಜನೋಪಾಯಮೆನಿಸಿದ ರತ್ನೋಪಾಯನಂಗಳುಮನುಚಿತವಚನಚತುರ ಸಚಿವೋತ್ತಮರ ಕೆಯ್ಯೊಳಟ್ಟುವುದುಮಟ್ಟಿದುದೆ ಮುಹೂರ್ತಮಾಗೊಡ್ಡೋಲಗಂಗೊಟ್ಟು ಕುಳ್ಳಿರ್ದು ಕಾಣಿಸಿಕೊಂಡು ತಂದ ಪಾಗುಡಮುಮಂ ಲೇಖಾರ್ಥಮುಮಂ ಮಹಾಸಂಧಿವಿಗ್ರಹಿಯಂ ಕೆಯ್ಕೊಳಲ್ವೇೞ್ವುದು ಮಾತಂ ಮಹಾಪ್ರಸಾದಮೆಂದು ಕೆಯ್ಕೊಂಡು ರತ್ನಕರಂಡಕದ ಮುದ್ರೆಯನುನ್ಮುದ್ರಿತಂ ಮಾಡಿಯಲ್ಲಿರ್ದ ರತ್ನಾಭರಣಂಗಳಂ ಖಚರವಲ್ಲಭಂಗೆ ಬೇಱವೇಱ ಬಿರ್ಚಿ ತೋಱ ಸುವರ್ಣಪತ್ರಲಿಖಿತಲೇಖಾರ್ಥಮಂ ಕಳೆದುಕೊಂಡಸ್ಖಳಿತವಾಚಕಂ ಸಭಾಮಂಡಳ ಶ್ರವಣರಮಣೀಯಮಾಗೆ ಖಚರಾಧೀಶನಾದೇಶದಿಂ

ಉ॥ ಖೇಚರನಾತ್ಮಜಾತಸುಭಗತ್ವಗುಣಪ್ರಕಟಪ್ರಶಸ್ತಿಯಂ
ವಾಚಿಸೆ ಸಂಧಿವಿಗ್ರಹಿಶಿಖಾಮಣಿ ಮೆಯ್ಯುವಿರುಣ್ಮೆ ಹರ್ಷಮಂ
ಸೂಚಿಸೆ ಕೇಳ್ದು ರಾಜಸಚಿವಪ್ರಚಯಕ್ಕುಚಿತಾರ್ಥಮಂ ನಿರಾ
ಳೋಚದಿನಿತ್ತು ಮನ್ನಿಸಿದನೊಪ್ಪಿರೆ ತನ್ನುಚಿತಜ್ಞತಾಗುಣಂ ೩೩

ವ॥ ಅಂತು ಮನ್ನಿಸಿ ಸಮುನ್ನತಪ್ರತ್ಯುಪಾಯನಂಬೆರಸು ಕನ್ಯಾರತ್ನಾಕರ್ಷಣಮಂತ್ರ ನಿಪುಣರೆನಿಪ ಮಂತ್ರಿಗಳಂ ಕಳಿಪುವ ವಿದ್ಯುತ್ಪ್ರಭವಿಭುವಿನುದ್ಯೋಗಮಂ ರಶ್ಮಿವೇಗಂ ಕಂಡೀ ಸಂಭ್ರಮಮೇನೆಂದು ತಂದೆಯಂ ಬೆಸಗೊಳೆ ನಿನ್ನ ವಿವಾಹಸಂಬಂಧಮೆಂದಱಪೆ ಲಬ್ಧಿವಶದಿಂ ಸಂಸಾರಾಬ್ಧಿತೀರಂ ತನಗನತಿದೂರಮಪ್ಪುದಱಂ

ಕಂ॥ ಸಮನಿಪ ವಿವಾಹಸಂಬಂ
ಧಮನತಿದೃಢಬಂಧಮೆಂದೆ ತನಗದು ಬಂದಂ
ತಮರದಮಂ ನೋಡುವ ಚಿ
ತ್ತಮನಾಳ್ದಂ ಚೋರನಂದದಿಂದಾ ಖಚರಂ ೩೪

ಮಾರಂ ಮಿಗೆ ಚಿತ್ತಗೃಹ
ದ್ವಾರಮನೊಳಪುಗಲೆ ಬಗೆಯೆ ವೈರಾಗ್ಯಗುಣಂ
ಬಾರಿಸಿದುದು ಚತುರಪ್ರತಿ
ಹಾರನ ತೆಱದಿಂ ಕುಮಾರಕಂಠೀರವನಾ ೩೫

ವ॥ ಅಂತೊಗೆದ ವೈರಾಗ್ಯಭಾವನಾವಿಶೋಧಿಯೆ ಜಾತಿಸ್ಮರಣಕಾರಣಮಾಗೆ

ಮ॥ ಅಣಿಮಾದ್ಯಷ್ಟಗುಣಕ್ಕೆ ವಿದ್ಯೆ ದಿವಿಜಸ್ತ್ರೀಯರ್ಗೆ ವಿದ್ಯಾಧರೀ
ಗಣಮೆಂದುಂ ಕಿಡದಿರ್ಪ ಯೌವನಕೆ ನಿತ್ಯಂ ಯೌವನಂ ನಾಕಜ
ಪ್ರಣುತಶ್ರೀವಿಭವಕ್ಕೆ ಖೇಚರಪದಂ ನೋಲ್ಪಂದು ಹೇಮಾಚಳ
ಕ್ಕಣುವೆಂತಂತೆ ಸಮಾನಮೆಂದಿಱಿಸಿದಂ ಜಾತಿಸ್ಮರಂ ಖೇಚರಂ ೩೬

ಕಂ॥ ದೇವಗತಿ ವಿಷಯಿಗಲ್ಲದ
ದೇವುದೊ ಮೋಕ್ಷಾರ್ಥಿಗದಱೊಳಲ್ಪವ್ರತಮುಂ
ಜೀವಕ್ಕೆ ಸಮನಿಸದು ಪರಿ
ಭಾವಿಪೊಡೆ ತಪಕ್ಕೆ ಮನುಜಗತಿಯೊಂದೆ ವಲಂ ೩೭

ಮುನ್ನಿನ ತಿರ್ಯಗ್ಗತಿ ಬೞಿ
ಕ್ಕನ್ನೆರಪಿದ ದೇವಗತಿ ವಿನಿಷ್ಫಲಮಾದ
ತ್ತಿನ್ನೀಭವಮಂ ತಪದಿಂ
ದನ್ನೆಗಱ್ದಾಂ ಸಫಳಮಾಗೆ ಮಾಱ್ಪೆನಮೋಘಂ ೩೮

ವರ ಬೋಧನಿಶಿತಖಡ್ಗಂ
ನಿರವಧಿವೈರಾಗ್ಯಖೇಟಕಂ ಕೆಯ್ಗಳವ
ಟ್ಟಿರೆ ದುರಿತರಿಪುವನಲೆವುದು
ನೆರವಂ ಪಡೆದಲ್ಲಿ ಪಗೆಯನಿಱಿಯದರೊಳರೇ ೩೯

ವ॥ ಎಂದಿಂತು ತನ್ನಂತರಂಗದೊಳ್ ನಿಶ್ಚಯಿಸಿ

ಕಂ॥ ವಿಮಳಗುಣಪ್ರಕಟನದ
ತ್ತಮನಸ್ಕಂ ಖಚರನಿಂದುವೆಂತಂತಿರೆ ರಾ
ಗಮನಾಗಳೆ ನೂಂಕಿ ಸದ್ವೃ
ತ್ತಮನುತ್ತಮನೊಲ್ದು ಮೆಱೆಯಲುದ್ಯತನಾದಂ ೪೦

ವಿದ್ಯುತ್ಪ್ರಭನ ಸುತಂ ಸಂ
ಪದ್ಯೌವನ ರೂಪ ವಿಭ್ರಮಾಧಿಕಮನಿತುಂ
ವಿದ್ಯುದ್ವಿಳಸಿತಮೆನುತನ
ವದ್ಯಗುಣಂ ಬಗೆದನೇಂ ಮಹಾತ್ಮನೊ ಮಹಿಯೊಳ್ ೪೧

ವ॥ ಅಂತು ಬಗೆದು ಬೞಿಯಂ ತಂದೆಗಿಂತೆಂದಂ

ಕಂ॥ ಸುತನಿರೆ ಘನಬಂಧನದೊಳ್
ಪಿತೃ ಜಿಡಿಪುದುಗೆಟ್ಟು ಮದುವೆಯೆಂಬೀ ನೆವದಿಂ
ಮತಿವಿಕಳರಂತೆ ಭವಸಂ
ತತಿಬಂಧದೊಳೆನ್ನನಿರಿಪುದುಚಿತಮೆ ಪೇೞಿಂ ೪೨

ವ॥ ಅವಜ್ಞೆನೀ ಶೋಭನಮೆನಗಶೋಭನಂ ಕೆಯ್ಸಾರೆಂಬುದು ಸಂಸೃತಿಲತಾಮೂಳಕ್ಕೆ ಪೊಯ್ವನೀರ್ ಪಾಣಿಗ್ರಹಣಂ ಪವಿತ್ರಚಾರಿತ್ರೆಂಮಗೆ ರಾಮಗ್ರಹಣಮೆಂದು ತನ್ನ ವಿಷಯವಿರಕ್ತಿಯಂ ವ್ಯಕ್ತಂ ಮಾಡೆ

ಮ॥ ಒದವಿರ್ದೀ ನವಯೌವನಂ ನಿರುಪಮಂ ರೂಪಂ ಕಳಾಪ್ರೌಢಿಯ
ಗ್ಗದ ಸೌಭಾಗ್ಯಮುದಗ್ರಮಪ್ಪ ವಿಭವಂ ವಿದ್ಯಾಧರಸ್ತ್ರೀಸಮೂ
ಹದೊಳಪ್ಪೊಂದು ವಿವಾಹಮುತ್ಸವಕರಂ ನೋೞ್ಪಂದು ವೈರಾಗ್ಯಮಾ
ವುದಱಿಂದಾದುದಿವಂಗೆನುತ್ತೆ ಖಚರಂ ವಿಭ್ರಾಂತಿಯಂ ತಾಳ್ದಿದಂ ೪೩

ವ॥ ಅಂತು ವಿಭ್ರಾಂತಿಯಂ ತಾಳ್ದಿ

ಕಂ॥ ಅಂಬರಚರಪದಮಂ ಕುಡ
ಲಾಂ ಬಯಸಿರೆ ನಚ್ಚಿನೆರ್ಮೆ ಕೋಣನನೀದ
ತ್ತೆಂಬವೊಲೀ ಮಗನಿರದೆ ತ
ಪಂಬಡಲೆಳಸಿರ್ದನೆಂದು ಬೆಚ್ಚನೆ ಸುಯ್ದಂ ೪೪

ಸ್ಮರರೂಪನಿವಂ ಜಾತಿ
ಸ್ಮರನಾಗಲೆವೇೞ್ಕುಮಲ್ಲದೊಡೆ ವೈರಾಗ್ಯಂ
ದೊರೆಕೊಳ್ಳದೆಂದು ಖಚರಂ
ಪರಿಭಾವಿಸಿ ಮಗುೞ್ ಮೋಹಮೂರ್ಛಿತನಾದಂ ೪೫

ದೊರೆಕೊಂಡ ರಾಜ್ಯಸುಖಮಂ
ಪರಿಹರಿಸಿ ತಪಕ್ಕೆ ಪೋಗಲುದ್ಯೋಗಿಸುವಂ
ಪರಿಪಕ್ವಕ್ಷೇತ್ರಮನುೞ್
ದರಣ್ಯಮಂ ಮಾಣದುೞುವ ಮರುಳಂ ಪೋಲ್ಕುಂ ೪೬

ವ॥ ಅದುಕಾರಣದಿಂ

ಮ॥ ಕ್ರಮಮಂ ಮಿಾಱಲೆಬಾರದೀ ಮದುವೆಯಂ ಸಂತಾನಸಂರಕ್ಷಣಾ
ರ್ಥಮೊಡಂಬಟ್ಟಧಿರಾಜ್ಯಮಂ ತಳೆದು ನೀನೆನ್ನಂ ತಪೋರಾಜ್ಯಭಾ
ರಮನಾಂಪಂತಿರೆ ಮಾಡಿ ಪುತ್ರ ಬೞಿಕಂ ನೀನುಂ ತಪೋರಾಜ್ಯಭಾ
ರಮನಾನಿಂತಿದು ರಾಜನೀತಿಗುಚಿತಂ ಮನ್ನಿಪ್ಪುದೆನ್ನುಕ್ತಿಯಂ ೪೭

ವ॥ ಅದಲ್ಲದೆಯುಮಾ ತಪೋಭೂಮಿಕಾರೋಹಣಂ ಪರಿಣತವಯಸರಪ್ಪೆಮ್ಮಂದಿಗರ್ಗುಚಿತಮಲ್ಲದೆ ನವಯೌವನನಪ್ಪ ನಿನಗೀಗಳುಚಿತಮಲ್ಲೆಂದನೇಕಪ್ರಕಾರ ಲೌಕಿಕಯುಕ್ತಿಗಳಿಂದಬಳಾಮಪಾಶದೊಳ್ ತೊಡರ್ಚುವ ನುಡಿಗಳಂ ನುಡಿಯೆ ರಶ್ಮಿವೇಗನಿಂತೆಂದಂ

ಕಂ॥ ಭಾವಿಸುವೊಡೆ ನಿಮ್ಮಯ ನುಡಿ
ದೀ ವಚನಮೆ ಸತ್ಯಮೆನಗೆ ಕೃತ್ಯಂ ಪೃಥುಕೋ
ಪಾವಿಳನಂತಕನಿಂತಿದ
ನಾವಗಮನುಸುರಿದೊಡವನೊಳದು ಕೂಡುಗುಮೇ ೪೮

ಎಱಗಿ ವಿಷಯಕ್ಕೆ ಮೆಯ್ಯಂ
ಮಱಿದಿರೆ ನಿಜಜೀವಿತಾಬ್ಧಿ ಗಱಿಯಿಸೆ ಬೞಿಕಂ
ತಱುನೀರ ಮೀಂಬೊಲಮರರ್
ಮಱುಗುವರುೞಿದವರ ಬಾೞ್ಕೆ ನಿಟ್ಟೆಯೆ ಪೇೞಿಂ ೪೯

ಉ॥ ಪುಟ್ಟೆ ವಿರಕ್ತಿ ಲಬ್ಧಿವಶದಿಂ ಬೞಿಯಿಕ್ಕದೆ ಕಾಲಮಂ ತಪಂ
ಬಟ್ಟು ಪರತ್ರೆಯಂ ಸುಜನನಾರ್ಜಿಸವೇೞ್ಪುದು ಭೋಗಕಾಂಕ್ಷೆಯಿಂ
ನೆಟ್ಟನೆ ನಿಂದು ಮೆಯ್ಮಱಿದನಪ್ಪೊಡೆ ದುಷ್ಟವಿಚೇಷ್ಟಿತಾಂತಕಂ
ತೊಟ್ಟನೆ ಬಂದು ಮುಟ್ಟೆ ಬೞಿಕೇಂ ದೊರೆಕೊಳ್ಗುಮೆ ದುರ್ಲಭಂ ತಪಂ ೫೦

ಕಂ॥ ಆರಯೆ ಮೃಗತೃಷ್ಣಿಕೆಯಂ
ನೀರೆಂದತಿತೃಷಿತನೀಂಟುವಂತೆವೊಲೀ ಸಂ
ಸಾರಸುಖಂ ಸುಖಮೆಂದವಿ
ಚಾರಿಗಳನುಭವಿಪರಱಿವರನುಭವಿಸುವರೇ ೫೧

ವ॥ ಅದೆಂತೆನೆ

ಕಂ॥ ಅನುಭವಿಸುವೊಡಿಂದ್ರಿಯಸುಖ
ಮನಿತುಂ ಸ್ವರ್ಗದೊಳೆ ಸುಲಭಮಾ ದಿವಿಜರ್ಗಂ
ಜನಿಯಿಸುಗುಮಸುಖಮಂತ್ಯದೊ
ಳೆನೆ ಸುಖಮಂ ಬಯಸುವಂಗೆ ಶಿವಪದಮೆ ಪದಂ ೫೨

ತಪಮಿಲ್ಲದೊಡದು ಸಾರದು
ತಪಮಿಂದ್ರಿಯಜಯಮೆ ತಜ್ಜಯಂ ಜವ್ವನದೊಳ್
ತಪಮಂ ತಳೆವಂಗಕ್ಕುಂ
ತಪಮಂ ಜವ್ವನದೊಳದಱಿನಾಂಪುದು ಚದುರಂ ೫೩

ಉ॥ ಆವನುದಗ್ರನಪ್ಪ ಪಗೆಯಂ ತವೆ ಕೊಲ್ವನವಂಗೆ ತಜ್ಜಯ
ಶ್ರೀವಧು ಕೂರ್ಪಳಂತೆ ನವಯೌವನದೊಳ್ ಕರಣಂಗಳಂ ಪೊಡ
ರ್ಪಾವರಿಸಿರ್ದುವಂ ಕಿಡಿಸಲಾವವನಾರ್ಪನವಂಗೆ ತಾಂ ತಪಃ
ಶ್ರೀವಧು ಕೂರ್ಪಳಲ್ಲದೊಡೆ ಕಾಮಿನಿಯರ್ಕಳ ಕೂರ್ಮೆ ಬಿಟ್ಟಿಯೇ ೫೪

ವ॥ ಎಂದಿಂತು

ಕಂ॥ ಉತ್ತರವಿತ್ತಯ್ಯನನೆ ನಿ
ರುತ್ತರನಂ ಮಾಡಿ ಭವಸಮುದ್ರಮನಿರದಿ
ನ್ನುತ್ತರಿಸುವೊಡೆ ದಿಗಂಬರ
ವೃತ್ತಿಯೆ ತನಗುಚಿತಮೆಂದು ಖಚರಂ ಬಗೆದಂ ೫೫

ರವಿ ಗಗನಹೃದಯಮಂ ಬೆಳ
ಗುವ ತೆಱದಿಂ ರಶ್ಮಿವೇಗನಯ್ಯನ ಮನದೊಂ

ದವಿವೇಕತಮಮನುಕ್ತಿ
ಪ್ರವಿಮಳರುಚಿಯಿಂದೆ ತೂಳ್ದಿದಂ ಕುಳದೀಪಂ ೫೬

ವ॥ ಅದಂ ಕಂಡು ಸಚ್ಚರಿತ್ರವತ್ತಚಿತ್ತರಪ್ಪ ಸಭಾಸದರಿಂತೆಂದು ತಲೆದೂಗಿದರ್

ಉ॥ ಆವ ಪದಾರ್ಥದಿಂದಮಘಬಂಧಮಬೋಧಿಗೆ ಬಾಹ್ಯವಸ್ತುಸಂ
ಭಾವನೆವೆತ್ತವಂಗೆ ಮಗುಟ್ದಂತವೆ ತತ್ತ್ವವಿದಂಗರಾಗತಾ
ಭಾವಯುತಂಗೆ ಬಂಧನವಿನಾಶನಕಾರಣಮಪ್ಪುದೆಂದೊಡಿ
ನ್ನಾವನೊ ಭೇದಿಪಂ ವಿಭುಧವೃತ್ತಮನನ್ಯಜನಾಪ್ರವೃತ್ತಮಂ ೫೭

ಕಂ॥ ಕುಡದೆಟೆದುಕೊಳ್ವನಧಮಂ
ಕುಡೆ ಕೊಳ್ವವನಲ್ತೆ ಮಧ್ಯಮಂ ಪಿತೃ ಪದೆಪಿಂ
ಕುಡೆ ರಾಜ್ಯಮನೊಲ್ಲದವಂ
ಪಡೆವಾತೇಂ ಪುತ್ರನೀತನುತ್ತಮನಲ್ತೇ ೫೮

ಮ॥ ಸುದೃಢೋದಗ್ರಚರಿತ್ರಮೋಹನಿಗಳು ವೈರಾಗ್ಯಮಂಬೊಂದು ಜಾ
ಣದೆ ವಿಚ್ಛೇದಮನೆಯ್ದೆ ತನ್ನ ಗುಣಮಂ ನಿರ್ಬಂಧದಿಂದಂ ಸಭಾ
ಸದರೆಲ್ಲಂ ಪರಿಕೀರ್ತಿಸುತ್ತಿರೆ ಪರಿಚ್ಛೇದೋ ಹಿ ಪಾಂಡಿತ್ಯಮಂ
ಬುದನಾದಂ ದಿಟಮಾಗೆ ಮಾಡಿ ತೋಱಿದಂ ವಿದ್ಯಾಧರೈಶ್ವರ್ಯಮಂ ೫೯

ವ॥ ಅಂತಾ ಮಹಾತ್ಮನಾತ್ಮವಿದ್ಯಾಧರವಿಭವಸಂಭವ ವಿಷಯಸುಖಶ್ರೀಫಳಮಂ ಶ್ರೀಫಳಮನೀಡಾಡುವಂತೀಡಾಡಿ ಮುಕ್ತಿರಮಣೀರಮಣೀಯಕೂಟಮಂ ಬಯಸಿ ಸಿದ್ಧಕೂಟಕ್ಕೆ ವಂದವಂ ತ್ರಿಃಪ್ರದಕ್ಷಿಣಂ ಮಾಡಿ ತನ್ನಿಂ ಮುನ್ನಮಾ ಪ್ರಸಿದ್ಧ ಸಿದ್ಧಕೂಟಚೈತ್ಯವಂದನಾ ನಿಮಿತ್ತಮಲ್ಲಿಗೆಯ್ತಂದಿರ್ದ

ಉ॥ ಆಪ್ತನಿರೂಪಿತಾಗಮವಿದಾತ್ಮವಿಚಾರಸಮುತ್ಥಸೌಖ್ಯಸಂ
ತೃಪ್ತ ಸಮಾಧಿಗುಪ್ತಯತಿಪಾದಪಯೋರುಹಸನ್ನಿಧಾನದೊಳ್
ದೃಪ್ತಮನೋಜಕುಂಜರವಿಭಂಜನನೊಪ್ಪಿರೆ ತಾಳ್ದಿದಂ ಯಶೋ
ವ್ಯಾಪ್ತದಿಶಂ ಗುಣಾಂಬುಧಿ ದಿಗಂಬರದೀಕ್ಷೆಯನಂಬರೇಶ್ವರಂ ೬೦

ವ॥ ಅಂತುಭಯಪರಿಗ್ರಹನಿವೃತ್ತಿಲಕ್ಷಣಮಪ್ಪ ಜಿನದೀಕ್ಷೆಯನಕ್ಷೂಣವಿಶುದ್ಧಿಯಿಂ ಕೆಯ್ಕೊಂಡು

ಮ॥ ಮುನಿನಾಥಂ ಮನಮಂ ಪ್ರತೀತವಿಷಯವ್ಯಾಪಾರದತ್ತೊಯ್ಯದೊ
ಯ್ದು ನಿಜಪ್ರಸ್ತುತ ತತ್ತ್ವಭಾವನೆಗಮೋಘಂ ಸಂಚಿತಾಘಪ್ರಬಂ
ಧನಮಂ ಭೇದಿಸುತುಂ ಪರೀಷಹಜಯಂ ಮೆಯ್ಯಪ್ಪಿನಂ ಪಂಪುವೆ
ತ್ತನುದಾತ್ತಂ ಶುಭಚಿತ್ತನುತ್ತಮ ತಪೋನುಷ್ಠಾನನಿಷ್ಠಾಪರಂ ೬೧

ಕ್ಷಯಿ ವೈಷಮ್ಯಯುತಂ ಸಬಾಧಮಘಸಂಬಂಧಂ ಪರಾಧೀನಮಿಂ
ದ್ರಿಯಜಂ ಸೌಖ್ಯಮುದರ್ಕನೇಕಭವದೊಳ್ ದುಃಖಂಬಡುತ್ತಿರ್ದನ
ನ್ನಯದಿಂದೆಂದೊಡತೀಂದ್ರಿಯಾಪ್ರತಿಮಸೌಖ್ಯಾರ್ಥಂ ತಪೋದುಃಖಮಂ
ನಿಯತಂ ಸೈರಿಪುದಾವಗಾಹನಮನುತ್ತಾ ಯೋಗಿ ತಾಂ ಸೈರಿಪಂ ೬೨

ಕಂ॥ ಎನಿತೆನಿತು ಪರೀಷಹಮಾ
ಯ್ತನಿತನಿತೆ ವಿಶುದ್ಧಭಾವಮಂ ಮುನಿ ತಳೆದಂ
ಕನಕಂ ಶಿಖಿಯೋಗಮದೆನಿ
ತೆನಿತೆನೆ ನಿರ್ಮಳಿನವೃತ್ತಿಯಂ ತಾಳ್ದುವವೋಲ್ ೬೩

ವ॥ ಅಂತು ನಿಜವಿಶುದ್ಧಭಾವನಾಪ್ರಧಾನನಪ್ಪ ಮುನಿಪ್ರಧಾನಂ ನಿಯಮಿಸಿದಂತೆ ಪಲವುಕಾಲಂ ಗುರುಪಾದಮೂಲದೊಳ್ ನೆಗಳುತ್ತುಮಿರ್ದು

ಚಂ॥ ವನಗಜಕುಂಭಸಂಭವಸಮುಜ್ವಳಮೌಕ್ತಿಕಜಾಳಮೌಳಿವೇ
ಷ್ಟನದಿನಳಿಪ್ರತಾನ ವಿಳಸನ್ಮೃಗನಾಭಿಸುಗಂಧಸಿಂಧುಚಂ
ದನಭುಜಪತ್ರದಿಂ ತಿಳಕದಿಂ ಮಣಿಮೇಖಳೆಯಿಂ ಸಮಗ್ರಮಂ
ಡನಮಧಿರಾಜನಂತಿರೆಸೆದತ್ತು ಮಹಾಹಿಮವನ್ಮಹೀಧರಂ ೬೪

ವ॥ ತನ್ಮಹೀಧರಾಭ್ರಂಕಷವಿಭ್ರಮಮಂ ಪೊಗಳ್ವೊಡೆ

ಕಂ॥ ಉತ್ಪನ್ನಪ್ರೇಮದಿನಲ
ರ್ದುತ್ಪಳಮಂ ಚಂದ್ರನಬ್ಜಮಂ ರವಿ ತದ್ಭೂ
ಭೃತ್ಪತಿ ಶಿಖರಸರೋಜಸಿ
ತೋತ್ಪಳದಳ ತಳ್ಪತಳದೊಳೊಪ್ಪುತ್ತಿರ್ಪರ್ ೬೫

ಚಂ॥ ಉರಗವಿಷಾವಿಳಾನಿಳವಿಘಾತವಿಮೂರ್ಛಿತಜೀವಜಾತಮಂ
ಸ್ಫುರಿತಮಹೌಷಧಿಪ್ರಯುತಮಾರುತನೆಬ್ಬಿಸುತ್ತುಮಿರ್ಪ್ಪಮಾ
ಗಿರಿವರದೊಳ್ ದ್ವಿಜಿಹ್ವಪರಿಪೀಡಿತರಂ ಸುಜನಂ ಲಸತ್ಸುಧಾ
ಪರಿಗತದಿವ್ಯಸೇಕಮಿದೆಬ್ಬಿಪಂತವನೀಶವಾಸದೊಳ್ ೬೬

ಮಸ್ರಾ॥ ಸ್ಫುರಿತಚ್ಛಾಯಂ ಸ್ವಕೀಯಾನುಜವಿಷಯಮಸಂ ವ್ಯಾಳಪಾಶಾವಕಾಶಂ
ಖರದಂಷ್ಟ್ರಂ ಲೋಕಸಂತ್ರಾಸನಕರಚರಿತಂ ಪ್ರೋತ್ಫಣಾಚಂಡದಂಡಂ
ಧರೆಯಂ ಘೂತ್ಕಾರತೀವ್ರಾನಳನೆ ಬಳಸೆ ನಾನಾಮೃಗಾನೀಕಮಂ ಸಂ
ಹರಿಸುತ್ತಂ ಕ್ರೋಧದಿಂದಂ ನೆನೆಯಿಪುದದಱೊಳ್ ಕಾಳನಂ ಕಾಳಸರ್ಪಂ ೬೭

ಚಂ॥ ಉರಿಯನೆ ತೋರ್ಪ ದಿಟ್ಟಿ ಸಿಡಿಲರ್ವಿಪ ನಾಲಗೆ ನೀಳ್ದ ಮಿಂಚು ಘೂ
ತ್ಕರಣಮೆ ಗರ್ಜನಂ ತನಗದಾಗೆ ಭಯಂಕರಮೂರ್ತಿ ಲೋಕಸಂ
ಹರಣವಿಷಯಂಗಳಂ ವಿಷಧರಂ ವಿಳಯಾಂಬುದಮಂಬ ಮಾೞ್ಕೆಯಿಂ
ಸುರಿಯುತುಮಿರ್ಪುಮಾ ಗಿರಿಗುಹಾಂತರಸಂತತಿಯಲ್ಲಿ ಸಂತತಂ ೬೮

ವ॥ ಅಂತಗುರ್ವನೊಳಕೊಂಡ ದರ್ವೀಕರನಿಕರಭೀಕರಪರ್ವತಪ್ರದೇಶಕ್ಕೆ ಘುಲ್ಲಶರಪ್ರತಿಮಲ್ಲನನೇಕಭವಗಹನೈಕ ವಿಹಾರಶ್ರಮಹಾರಿಯಪ್ಪೇಕವಿಹಾರಿತ್ವಮಂ ಪೂಣ್ದು ಬಂದು

ಕಂ॥ ಶೀಳನಿಧಿ ತನ್ಮುನೀಂದ್ರಂ
ಮೂಳಗುಣೋತ್ಕರಮನುತ್ತರೋತ್ತರಗುಣಮಂ

ಪಾಳಿಸುತುಮನುದಿನಂ ತ
ಚ್ಛೈಳಗುಹಾಂತರದೊಳಚಳಯೋಗದೊಳಿರ್ದಂ ೬೯

ವ॥ ಅಂತಿರ್ಪುದುಮುತ್ತಲಾ ಕುಂಜರಕುಧರತಟದೊಳಿರ್ಪ ಕಮಠಚರನಪ್ಪ

ಕಂ॥ ಸ್ಥೂಳಾಂಗದೊಳ್ ಮೊದಲ್ ಶುಂ
ಡಾಳಂ ತನುತನುಗಳಲ್ಲಿ ಕುಂಥುವೆ ಕಡೆ ಜೀ
ವಾಳಿಯೊಳೆನೆ ತವೆ ಕೊಂದುದು
ಕಾಳನವೋಲ್ ಕುಕ್ಕುಟೋರಗಂ ಕ್ರೂರಾತ್ಮಂ ೭೦

ಪೞುಗೞಿದ ಪಾಪಮಂ ತಾಂ
ತಱಿವಿನಮಿಾ ತೆಱದೆ ನೆರಪಿ ಪಾಪದ ಭರದಿಂ
ದಿೞಿವಂತೆ ಜೀವಿತಾಂತ್ಯದೊ
ಳಿೞಿದುದು ಗೞಗೞನೆ ನರಕಧರೆಗೆ ತದುರಗಂ ೭೧

ವ॥ ಆ ನರಕಧರೆಗಳಿರವಿನಂದಮೆಂತೆಂದೊಡೆ ಮಂದರಮಹೀಧರಾಧಸ್ತನಭಾಗಂ ಬಿಡಿದು ಸಲಕ್ಷಾಶೀತಿ ದ್ವಾತ್ರಿಂಶದಷ್ಟಾವಿಂಶತಿ ಚತುರ್ವಿಂಶತಿವಿಂಶತಿ ಷೋಡಶಾಷ್ಟಸಹಸ್ರ ಯೋಜನಬಾಹುಲ್ಯಸಹಿತಂಗಳುಂ ರತ್ನ ಶರ್ಕರಾವಾಳುಕಾಪಂಕಧೂಮ ತಮೋಮಹಾತಮಃ ಪ್ರಭಾಭಿಧಾನಾಭಿಹಿತಂಗಳುಂ ಸರ್ವೇಂದ್ರಿಯ ದುಸ್ಸಹದುಃಖಕರ ಸಮಸ್ತ ವಸ್ತುಭರಿತ ಬಿಲಪರಿಕಳಿತಂಗಳುಂ ಕಿಂಚಿದೂನೈಕೈಕ ರಜ್ಜ್ವಂತರಿತಂಗಳುಮಾಗಿರ್ಪುಮವಱಲ್ಲಿ

ಕಂ॥ ಸಂಧಿಸಿ ಪದಿಮೂಱುಂ ಪ
ನ್ನೊಂದುಮದೊಂಬತ್ತುಮೇೞುಮಯ್ದುಂ ಮೂಱುಂ
ತೊಂದುಮೆನೆ ಪಟಳಮಿಾ ಕ್ರಮ
ದಿಂದೇೞಾ ನರಕಧರಣಿಯೊಳ್ ನೆಲಸಿರ್ಪುಂ ೭೨

ಸಯ್ದುಮೆ ಮೂವತ್ತಿರ್ಪ
ತ್ತಯ್ದುಂ ಪದಿನಯ್ದು ಪತ್ತು ಮೂಱಿಲ್ಲಿಂದ
ತ್ತಯ್ದೂನಮೊಂದುಲಕ್ಕೆಯ
ವಯ್ದು ಬೞಿಕ್ಕೆಣಿಸೊಡವಱ ನರಕಬಿಲಂಗಳ್ ೭೩

ಕ್ರಮದೇೞುಂ ನರಕದೊಳೊಂ
ದು ಮೂಱು ಬೞಿಕೇೞು ಪತ್ತು ಪದಿನೇೞಾಯುಃ
ಪ್ರಮಿತಿಯದಿರ್ಪತ್ತೆರಡ
ತ್ತಮದಿರ್ಪುದು ಮೂವತ್ತುಮೂಱು ಪಾರಾವಾರಂ ೭೪

ಪದಿನೆಂಟಂಗುಳದಿಂ ಕುಂ
ದಿದೆಂಟು ಧನು ಮೊದಲ ನಾರಕರ್ಗುತ್ಸೇಧಂ
ಅದೆ ತದ್ದ್ವಿಗುಣಕ್ರಮದಿಂ
ದೊದವುಗುಮೇೞನೆಯ ನಿರಯಮೇದಿನಿವರೆಗಂ ೭೫

ಮೊದಲ ನರಕಂ ಮೊದಲ್ಗೊಂ
ಡುದಯಿಸುಗುಮಸಂಜ್ಞಿ ಸರಿಸೃಪಂ ವಿಹಗಂ ತ
ಪ್ಪದೆ ಪಾವು ಸಿಂಹಸಂತತಿ
ಸುದತೀತತಿ ಮರ್ತ್ಯ ಮತ್ಸ್ಯನಿಕರಂ ಕ್ರಮದಿಂ ೭೬

ತಮಮನಿತುಂ ನರಕಂಗಳೊ
ಳಮರ್ದಿರ್ಕುಂ ನಿರಯಜಾತಚೇತೋಮಿಥ್ಯಾ
ತಮಮಶುಭಲೇಶ್ಯೆಗಳ್ ಪೊಱ
ಗುಮನಾವರಿಸಿರ್ದುವೆಂಬಿನಂ ನಿಬಿಡತಮಂ ೭೭

ಓರೋರ್ವರ ಮರ್ಮಂಗಳ
ನೋರೋರ್ವರ್ ಕಂಡು ದಂಡಿಪರ್ ನಾರಕರಾ
ಘೋರತಮಮಾದೊಡಂ ಮಾ
ರ್ಜಾರಂ ಕಾಣ್ಬಂದದಿಂದೆ ನರಕಾವನಿಯೊಳ್ ೭೮

ಅಹಿಲೋಕ ಸರ್ಪಸಂಕುಳ
ಮಹನೀಯವಿಷಪ್ರವಾಹಸಂತತಿಯಂತಾ
ಮಹಿಗಿೞಿದುದೆಂಬ ತೆಱದಿಂ
ದಹರ್ನಿಶಂ ಪರಿವುವುಗ್ರತರವಿಷನದಿಗಳ್ ೭೯

ಪೀರ್ವೊಡೆ ವಿಷಮಯಮುದಕಂ
ಸಾರ್ವೊಡೆ ವಿಷಯಮೆನಿಪ್ಪ ಮೃತ್ತಿಕೆ ನೆಲಲಂ
ಪಾರ್ವೊಡೆ ವಿಷಮಯರಸಮಂ
ಸೋರ್ವ ವಿಷದ್ರುಮಸಮೂಹಮೆಲ್ಲೆಡೆಗಳೊಳಂ ೮೦

ಕ್ರೂರತೆಯಿಂ ಜೀವಂಗಳ
ನೋರಂತಿರೆ ಕೊಂದು ತಿಂಬವಂ ಬಿಡೆ ಪಾಣ್ಬಂ
ಚೋರಂ ಮೃಷಾರತಂ ಬ
ಹ್ವಾರಂಭಕನೆಯ್ದುಗುಂ ಮಹಾರೌರವಮಂ ೮೧

ಅಯ್ದಿಂದ್ರಿಯದಿಚ್ಛೆಗೆ ಸಂ
ದೆಯ್ದಿ ಮಹಾಪಾತಕಂಗಳೊಳ್ ವರ್ತಿಸುವರ್
ಮಾಯ್ದು ನರಕದೊಳೆ ದುಃಖಮ
ನೆಯ್ದುವುದಂ ಪೊಗೞಲಾರುಮೇನೆಯ್ದುವರೇ ೮೨

ಉ॥ ಬಟ್ಟೆಯ ಹಂದಿಯಾನನದ ಮಾೞ್ಕೆಯಿನರ್ಬಿಸುತಟ್ಟೆನಾೞುತಿ
ರ್ಪಟ್ಟುಗಳಲ್ಲಿ ಪುಟ್ಟಿ ಬೞಿಕೊಟ್ಟಿದ ಶಸ್ತ್ರದ ಮೇಲೆ ಬಿೞ್ದು ಬಾ
ಯ್ಬಿಟ್ಟೆರ್ದೆಗೆಟ್ಟು ಪುಯ್ಯಲಿಡೆಯಾ ದನಿಗೆಯ್ದಿ ಪುರಾಣನಾರಕರ್
ಕಟ್ಟೆಱೆ ಕುಟ್ಟು ಸೀೞಿಸುತುಮೆಯ್ದುವರುಗ್ರತರ ಪ್ರಕೋಪದಿಂ ೮೩

ಕಂ॥ ಆತತ ದುಃಖಾನಳ ಸಂ
ಭೂತಿಗೆ ತಳ್ತರಣಿಯುಂ ಪ್ರತಾಪಕ್ಕಿನ್ನೇ
ವೈತರಣಿಯುಮೆನಿಸಿರ್ದಾ
ವೈತರಣಿಯನಧಿಕ ತೃಷ್ಣೆಯಿಂದಂ ಪುಗುವರ್ ೮೪

ಆವಾವ ಜೀವನಿವಹಮ
ನೋವದೆ ಮುಂಕೊಂದರವಱಿವಱಿ ರೂಪಂ ಕೋ
ಪಾವಿಳರಾಂತೋರೊರ್ವರ
ನಾವಗಮುಱಿದಿಱಿವರಲ್ಲಿ ನಿರಯಭವರ್ಕಳ್ ೮೫

ಅಡಗಿಲ್ಲದೆತ್ತೆ ತುತ್ತಿದೆ
ಯಡಗಂ ಪಿಡಿಯೆಂದು ಕತ್ತಿಗೆಯಿನವನೊಡಲೊಳ್
ಬಿಡದಡಗುಳ್ಳೆಡೆಯನೆ ಕೊ
ಯ್ದಡಗಿಲ್ಲದ ಬಾಯೊಳಡಿಸಿ ಗಿಡಿವರ್ ಕಡುಪಿಂ ೮೬

ಕುಡಿಯದೊಡಾಗಳೆ ನಾಲಗೆ
ಯೊಡೆವುದು ಗಡ ಕಳ್ಳನದಱೆನೆಡೆಯುಡುಗದೆ ನೀಂ
ಕುಡಿಯೆಂದು ಲೋಹರಸಮಂ
ಕುಡಿಯಿಪರೊಡನೊಡನೆ ನಾಲಗೆಯುಮೊಡೆವಿನೆಗಂ ೮೭

ಮಧುಮಧುರಮೆಂದು ಬಹುತರ
ವಧೆಯಿಂ ಸಮನಿಪುದನಱಿದು ತೊಱೆಯದವಂದಿರ್
ಮಧುಬಿಂದು ಕಲಹಕಿಕ್ಕಿತೆ
ನೆ ಧರಣಿ ವಧಿಯಿಸುಗುಮಲ್ಲಿಯೋರ್ವರನೋರ್ವರ್ ೮೮

ಒಪ್ಪುವ ವರವನಿತಾಜನ
ದಪ್ಪು ಸಡಿಲ್ದಂದು ನಿಲ್ಲನಿವನೆಂದಱಿದಿ
ನ್ನಪ್ಪು ಸಡಿಲದವೊಲಿರ್ಕೆಂ
ದಪ್ಪಿಸುವರ್ ಕಾಯ್ದು ಕಾಯ್ದಯಃಪುತ್ರಿಕೆಯಂ ೮೯

ಸುಲಿಪಲ್ಲಂ ಮೆಱೆವೈ ಪರ
ಲಲನೆಯರ್ಗೆಂದಿರ್ಕುಟಿಂದೆ ಕೀೞ್ವರ್ ಪಲ್ಲಂ
ಸಲೆ ಕಣ್ಣಂ ಕೆತ್ತುವೆಯೆಂ
ದು ಲಕ್ಕಚಣದಿಂದೆ ಮಿಾಂಟಿ ಕಳೆವರ್ ಕಣ್ಣಂ ೯೦

ಪಡೆಮಾತೇಂ ಹಿಂಸಾದಿಯ
ನೊಡರಿಸೆಯುಂ ಸ್ವರ್ಗಮೆಂಬ ಕಾಳಾಗಮಮಂ
ಪಿಡಿದು ಪುಸಿನುಡಿವ ಧೂರ್ತರ
ಪೆಡತಲೆಯಿಂ ತೆಗೆವರಿರ್ಕುಟಿಯೊಳ್ ನಾಲಗೆಯಂ ೯೧

ಉ॥ ಒರ್ಮೆಯುಮಾತ್ರ ರೌದ್ರದೊಳ್ ವರ್ತಿಸುತುಂ ಸುಖಕಾರಿಯಪ್ಪ ಸ
ದ್ಧರ್ಮಮನೊಲ್ಲದಾರ್ಜಿಸಿದವಂದಿರ ದಾರುಣದುಃಖದಾಯಕಂ
ಕರ್ಮಮೆ ಮೂರ್ತಿಗೊಂಡಿರದೆ ದಂಡಿಸುವಂತೆವೊಲೂರ್ವರೊರ್ವರಂ
ಮರ್ಮಮನುರ್ಚೆ ಶಸ್ತ್ರದೆ ವಿಘಾತಿಸುವರ್ ಕಡುಕೆಯ್ದು ನಾರಕರ್ ೯೨

ಕಣ್ಣೆಮೆಯಿಕ್ಕುವನ್ನೆವರಮುಂ ಬಳಿದಲ್ಲಿರದೋರ್ವರೋರ್ವರಂ
ಬಣ್ಣಿಗೆಗೆಯ್ದುವಂ ಪಿಡಿದು ನಾರಕರೋವದೆ ಕುತ್ತಿ ಕೊಯ್ದೊಡಂ
ಸಣ್ಣಿಗೆಯಿಂದಮಿಟ್ಟರೆದೊಡಂ ತನು ಮುನ್ನಿನ ಮಾಟ್ಕೆಯಕ್ಕುಮಾ
ತಿಣ್ಣಮೆನಿಪ್ಪ ಪಾಪಪರಿಪಾಕದೆ ಪಾದರಸಪ್ರಕಾರದಿಂ ೯೩

ಚಂ॥ ಝುಷಮಕರಾದಿ ಪಾದಹತಿ ನಾರಕಶಸ್ತ್ರವಿಘಾತಿ ಬಾಡವಂ
ವಿಷಮಸಮಗ್ರಕೋಪಶಿಖಿಯಾ ಸುರರೋಗ ಶತಪ್ರಭೂತಮಾ
ನುಷ ಸಹಜಾತದುಃಖನಿವಹಂ ಬಹುತುಂಗತರಂಗಮಪ್ಪಿನಂ
ವಿಷನಿಧಿಯಾದುದಿಂತು ಪರಮಾಯು ವಿಚಾರಿಸೆ ನಾರಕರ್ಕಳಾ ೯೪

ಶಾ॥ ಏನಂ ಪೇಳ್ವೆನೊ ನಾರಕರ್ಗೆ ಸಲೆ ಸಂಸ್ಥಾನಂಗಳೊಳ್ ಹುಂಡಸಂ
ಸ್ಥಾನಂ ವಿಶ್ರುತವೇದನೀಯದೊಳಸಾತಾವೇದನೀಯೋದಯಂ
ಜ್ಞಾನಾನೀಕದೊಳಪ್ರಯೋಜಕವಿಭಂಗಜ್ಞಾನಮಾ ಧ್ಯಾನದೊಳ್
ನಾನಾದುಃಖಕರಾರ್ತರೌದ್ರಮಶುಭಧ್ಯಾನದ್ವಯಂ ವರ್ತಿಕುಂ ೯೫

ಕಂ॥ ಉದಧಿಯನೀಂಟಿದೊಡಂ ತ
ಗ್ಗದು ತೃಷೆ ಮೂಜಗಮನೆಯ್ದೆ ನುಂಗಿದೊಡಂ ಪೋ
ಗದು ಪಸಿವು ನಿರಯಭವರ್ಗಿ
ನ್ನುದಕಾಶನಲವಮುಮಿಲ್ಲದೇಂ ದುಃಖಿತರೋ ೯೬

ಮ.ಸ್ರ॥ ಪಸಿವಿಂ ನೀರಟ್ಕೆಯಿಂ ತೀರದ ಬಹುರುಜೆಯಿಂ ನಾರಕಾನೀಕಶಸ್ತ್ರ
ಪ್ರಸರಪ್ರೋದ್ಭೂತದಿಂ ತಾಪಮನತಿಹಿಮಮಂ ಬೀಱುತಿರ್ಪುರ್ವಿಯಿಂ ಮಾ
ನಸ ಕೋಪಾಟೋಪದಿಂ ನಿರ್ದಯ ದನುಜಸಮೂಹಂಗಳಿಂದುಣ್ಮುವೀ ದುಃ
ಖಸಮುದ್ಭಾಂಭೋಧಿಯೊಳ್ ನಾರಕತತಿ ಸತತಂ ಮೂಡಿ ಮುಳ್ಕಾಡುತಿರ್ಕುಂ ೯೭

ವ॥ ಅಂತು ನಿರಂತರಾನಂತದುಃಖಸಂತತಿಸಾಗರಮನಿಪೇೞುಂ ನರಕಂಗಳೊಳಗೆ

ಕಂ॥ ಸಂಚಳಿಸದೆ ಕರಿಗಳನೆ ಪ
ಳಂಚಲೆವ ಪಟುಪ್ರತಾಪದಿಂದಾದುದು ತಾಂ
ಪಂಚಾನನನೆಂಬವೊಲಹಿ
ಪಂಚಮನರಕಮನೆ ಪಡೆದುದಘಸಂಚಯದಿಂ ೯೮

ವ॥ ಆ ನಿರಯಧರಣಿಯ ಮಧ್ಯಪ್ರದೇಶದೊಳ್ ಪಾಪಕ್ಕೆ ನೆಲೆಯಾದವರಂ ನುಂಗಲೆಂದು ನೆಲನೆ ಬಾಯ್ದೆಱೆದಂತಿರ್ದ ಬಿಲದ ಮೇಗಣಭಾಗದ ದುರ್ವರ್ಣದುಃಸ್ಪರ್ಶ

ದುರ್ಗಂಧಾನುಬಂಧಿಗಳಪ್ಪುಷ್ಟ್ರಾದಿಮುಖಾಕಾರೋಪಪಾದ ಸ್ಥಾನದೊಳ್ ಪುಟ್ಟಿ ಪುಟ್ಟಿದಂತರ್ಮುಹೂರ್ತಕ್ಕೆ

ಕಂ॥ ವ್ಯವಧಾನಂ ದುಃಖಮನನು
ಭವಿಸುವೊಡೇಕೆಂಬ ತೆಱದಿನಾಹಾರಾದಿ
ಪ್ರವಿಪುಳಪರ್ಯಾಪ್ತಿಗಳಂ
ತವಾಱುಮಘವಶದಿನಾವಗಂ ನೆಱೆಯಲೊಡಂ ೯೯

ವ॥ ಇಟ್ಟಳಮಾಗಿ ಮುಂ ಕಟ್ಟಿದ ದುಷ್ಕರ್ಮದವೊಟ್ಟೆಯೆ ಭುಜ್ಯಮಾನ ತಿರ್ಯಗಾಯುಷ್ಯಮೆಂಬ ಕಟ್ಟು ಪಱಿಯೆ ತೊಟ್ಟನೆ ಬೀೞ್ವಂತೊಟ್ಟಿದ ಶಸ್ತ್ರಕೋಟಿ ಕೋಟಿನಿಶಿತ ವಜ್ರದ ಶಿಲೆಯ ಮೇಲಪ್ಪಳಿಸಿ ದೊಪ್ಪನೆ ಬಿೞ್ದು ನಿರಯಜರ್ ನೆರಂ ಬರ್ಪನ್ನೆವರಂ ತಡವೆಂಬಂತು ತ್ವುಕತೆಯಿಂ ತನ್ನ ಮುಂ ನೆರಪಿದ ಪಾಪಮೆ ಕೋಪದಿಂ ಪೊಡೆಸೆಂಡುವೊಡೆಯುತ್ತಿರ್ದುದೆಂಬಂತೆ ಪೊಡೆದೊಡೆ ಪುಟಂ ನೆಗೆದು ಮಗುೞ್ ಮಗುೞಾ ಶಿಲೆಯ ಮೇಲೆ ನುಚ್ಚು ನೂಱಾಗಿ ಬಿೞ್ದು ಪಾಪಪರಿಪಾಕದಿಂ ಪರೆದ ಪಾದರಸಮೊಂದಿದಪ್ಪಂತವಯವಂಗಳವಯವದಿಂ ಸಂಧಿಸೆ ಕಿಱಿದುಬೇಗಂ ಮೂರ್ಛೆಯಿನಿರ್ದೆೞ್ಚಱುತಿರ್ಪನ್ನೆವರಂ ಬೇಡರ ಬೀಡಿಂಗೆ ಬೆಳ್ಮಿಗಮೋಡಿ ಪುಗೆ ನೀಡುಮಿರದೆ ಕೂಡಿ ಕೆಯ್ದುಗೊಂಡು ಕವಿತರ್ಪಂತೆ

ಸ್ರ॥ ಕರ್ಣವ್ಯಾಘಾತಗಾಂಡೀವದ ಜಯವೊಡೆವೋಲ್ ರಾವಮಂಗಾರಪುಂಜೋ
ತ್ಕೀರ್ಣಂಬೋಲ್ ರೂಪು ರೂಕ್ಷಂ ತಮಗಳವಡೆ ಕೊಲ್ ಕೊಲ್ ಭರಂಗೆಯ್ಯೆನುತ್ತ
ಭ್ಯರ್ಣಕ್ಕೆಯ್ತಂದು ತನ್ನೊಳ್ ಬಹುವಿಧವಧೆಯಂ ಮಾಡೆ ಸಂಪೂರ್ಣದುಃಖಾ
ಕೀರ್ಣಾತ್ಮಸ್ವಾಂತದೊಳ್ ತೊಟ್ಟನೆ ನೆಗೞ್ ವಿಭಂಗಂ ಕ್ಷತಕ್ಷೋಭಿತಾಂಗಂ ೧೦೦

ಕಂ॥ ಅಂತುದಯಿಸಿದಶುಭವಿಭಂ
ಗಂ ತನಗಂ ಪೆಱರ್ಗಮಧಿಕದುಃಖಮನಿರದೋ
ರಂತೀವ ಕೋಪಶಿಖಿಬೀ
ಜಂ ತಾನೆನೆ ಪುಟ್ಟಿಸಿತ್ತು ತೊಟ್ಟನೆ ಮುನಿಸಂ ೧೦೧

ಪುಟ್ಟಿದ ಮುನಿಸೆನಸುಂ ಕೈ
ಗೊಟ್ಟೆತ್ತಿದ ತೆಱದಿನೆೞ್ದು ಕೋೞ್ಮಿಗಮಿಱಿದೆ
ೞ್ಬಟ್ಟುವ ತೆಱದಿಂದಂದಱ್
ಯಟ್ಟಿಱಿದಂ ನಿಶಿತಶಸ್ತ್ರದಿಂ ನಾರಕರಂ ೧೦೨

ಕ್ರೂರಾನ್ಯೋನ್ಯಕ್ಷೇತ್ರೋ
ದೀರಿತ ಸಹಜಾತಮಾನಸಾಗಂತುಕ ಶಾ
ರೀರೋತ್ಥದುಃಖನಿಚಯಮ
ನೋರಂತನುಭವಿಸಿ ಷೋಡಶಾಂಬುಧಿಮಿತಮಂ ೧೦೩

ಕಮಠಚರ ಕುಕ್ಕುಟೋರಗ
ನಮಿತಾಖಿಳದುಃಖಧಾಮಧೂಮಪ್ರಭೆಯೊಳ್
ನಮೆದಲ್ಲಿಂ ಬಂದು ಮಹಾ
ಹಿಮವದ್ಗಿರಿಯೊಳ್ ಮಹಾಹಿಯಾದುದು ಮಗುಳ್ದುಂ ೧೦೪

ಪ್ರೇಮದೊಳೆ ತನ್ನ ಬೆನ್ನನೆ
ಧೂಮಪ್ರಭೆನಾರಕತ್ವಮೆಟ್ಟಿಂದವೊಲಾ
ಧೂಮಪ್ರಭೆ ವಿಕಟಾಂಗತೆ
ಏಮಾತತ್ಯುಗ್ರವೃತ್ತಿ ನೆಲಸಿತ್ತಹಿಯೊಳ್ ೧೦೫

ಘನಕಾಯಂಗಳನವಯವ
ದೆ ನುಂಗಲಹಿ ಬಯಸಿ ಮನದ ತೃಷ್ಣೆಗೆ ಪಡೆದ
ತ್ತನುಕೂಲತನುವನೆನೆ ಯೋ
ಜನಶತವಿಸ್ತೀರ್ಣಮಾಯ್ತು ಕರ್ಬುರವರ್ಣಂ ೧೦೬

ಚಂ॥ ಗಿರಿತಟದೊಳ್ ಗುಹಾಮುಖಮೆಗೆತ್ತಟವೀನಿಕಟಂಗಳಲ್ಲಿ ಭೂ
ಮಿರುಹದ ಪೋಟಲೆಂದು ತೆಱೆದಾನನಮಂ ಮೃಗಸಂಕುಳಂ ಪೊದ
ಱ್ದುರಿವರಿವಂದು ಬೇಸಗೆಗೆ ಬೆರ್ಚಿ ಕರಂ ಪುಗುತಿರ್ಪುದೆಂದೊಡಾ
ಯುರಗನ ದೇಹದುನ್ನತಿಯನಾಯತಿಯಂ ನೆಱೆ ಬಣ್ಣಿಪನ್ನರಾರ್ ೧೦೭

ವ॥ ಅಂತಗುರ್ವಿಸುವ ಪೆರ್ವಾವಾಗಿ

ಕಂ॥ ಪಲಕಾಲಂ ನರಕದೊಳಶ
ನಲವಮುಮಂ ಪಡೆಯದಿರ್ದ ತನ್ನಯ ಜಠರಾ
ನಳನಳುರೆ ಪಲವುಜೀವಾ
ವಳಿಯನಱಿಸಿ ನೊಣೆದು ನುಂಗಿ ತಣಿಯದೆ ಮತ್ತಂ ೧೦೮

ವ॥ ಎರೆಗೊಳಲ್ ತೊಟಲುತ್ತುಮಾರಾಧಕಜನಪುಣ್ಯಾಗಮನದ್ವಾರಮುಂ ವಿರೋಧಕಲೋಕಾನೀಕಪಾಪಾಗಮನದ್ವಾರಮುಮೆನಿಸಿದ ರಶ್ಮಿವೇಗಯೋಗೀಶ್ವರರಿರ್ದ ಗುಹಾದ್ವಾರಕ್ಕೆ ವಂದಖಂಡಿತಯೋಗನಿಯೋಗದೊಳಿರ್ದವರಂ ಕಂಡು

ಭವಬದ್ಧಕ್ರೋಧಂ ಸಂ
ಭವಿಸಿರೆ ಭವವಾರ್ಧಿವರ್ಧನೋದ್ಯೋಗಪರಂ
ಭವಹಾರಿಯೆನಿಪ ಮುನಿಪತಿ
ಗೆ ವಿಶೇಷಂ ಮುನಿವುದುಚಿತಮೆನೆ ಮುನಿದೆನಸುಂ ೧೦೯

ಅಹಿ ತನ್ನಂ ನುಂಗಿದೊಡೇ
ನಹಿತಂ ತನಗೆಂದು ಬಗೆದನೇ ಮುನ್ನಿರ್ದಾ
ಗುಹೆಯಿಂದಹಿಮುಖಗುಹೆಯೊಳ
ಗು ಹಿತಂ ತನಗೆಂದು ಬಗೆದನೇಂ ಗುಣನಿಧಿಯೋ ೧೧೦

ಉ॥ ಕ್ರೂರಮಹಾಹಿ ನುಂಗುತಿರೆ ತನ್ಮುಖದಿಂದಮಗಲ್ವ ಚಿತ್ತಮಂ
ತಾರದೆ ದಿವ್ಯಯೋಗಿ ನಿಜಯೋಗನಿಯೋಗದಿನುಗ್ರಕಾಳಕಾ
ಳೋರಗತೀವ್ರವಕ್ತ್ರದಿನಗಲ್ವದಟಂ ಗೆಡೆಗೊಂಡು ನಿಶ್ಚಳಂ
ಘೋರತರೋಪಸರ್ಗಮನೆ ಸೈರಿಸಿದಂ ಗಡ ಧೀರರನ್ನರಾರ್ ೧೧೧

ಕಂ॥ ಚ್ಯುತಿಯುಳ್ಳ ತನುವನುಳಿದ
ಚ್ಯುತಮೆನಿಪಾತ್ಮಸ್ವರೂಪಮಂ ಭಾವಿಸಿಯ
ಚ್ಯುತನಪ್ಪುದುಚಿತಮೆನೆಯ
ಚ್ಯುತೇಂದ್ರನಾದಂ ಖಗೇಂದ್ರನಪ್ಪ ಮುನೀಂದ್ರಂ ೧೧೨

ಮಸ್ರ॥ ಉಪಪಾದಾಸಳ್ವತಳ್ವಂ ಸಿತಜಳಧರಮಂ ಪೋಲ್ವಿನಂ ರಶ್ಮಿವೇಗಂ
ಚಪಳೋದ್ಯಲ್ಲೇಖೆಯಂಬಂತುದಯಿಸಿ ಪುಳಕಾನೀಕಸಸ್ಯಂಗಳಂ ಹ
ರ್ಷಪಯೋವರ್ಷಂಗಳಿಂ ಕೊರ್ವಿಸಿ ಸುರವನಿತಾದೇಹಕೇದಾರದೊಳ್ ದೇ
ವಪರೀತಂ ರಂಜಿಸಿರ್ದಂ ಸುಕವಿಜನಮನೋಹರ್ಷಸಸ್ಯಪ್ರವರ್ಷಂ ೧೧೩

ಗದ್ಯ

ಇದು ವಿದಿತವಿಬುಧಲೋಕನಾಯಕಾಭಿಪೂಜ್ಯ ವಾಸುಪೂಜ್ಯಜಿನಮುನಿ ಪ್ರಸಾದಾಸಾದಿತ ನಿರ್ಮಳ ಧರ್ಮವಿನುತ ವಿನೇಯಜನವನಜವನವಿಳಸಿತ ಕವಿಕುಳತಿಳಕಪ್ರಣೂತ ಪಾರ್ಶ್ವನಾಥಪ್ರಣೀತಮಪ್ಪ ಪಾರ್ಶ್ವನಾಥಚರಿತ ಪುರಾಣದೊಳ್ ರಶ್ಮಿವೇಗಮುನೀಶ್ವರಾಚ್ಯುತಕಳ್ಪಪ್ರಭವವಿಭವವರ್ಣನಂ ಷಷ್ಠಾಶ್ವಾಸಂ

ಸಪ್ತಮಾಶ್ವಾಸಂ

ಕಂ॥ ಶ್ರೀಸುರಯುವತಿಮುಖಾಬ್ಜವಿ
ಕಾಸಿ ಸುರಾಶಯಸರಃಪ್ರಸಾದಕರಂ ಸಂ
ದಾ ಶರದದಂದದಿಂದೆ ವಿ
ಭಾಸಿಸಿದಂ ವಿಶದಕೀರ್ತಿ ಕವಿಕುಳತಿಳಕಂ ೧

ಷೋಡಶಕಳೇಂದುವಿಶದಂ
ಷೋಡಶಸಹಜಾತಮಣಿವಿಭೂಷಣಮಹಿತಂ
ಷೋಡಶನಾಕಪ್ರಭವಂ
ಷೋಡಶವರ್ಷಪ್ರಪೂರ್ಣಯೌವನವಿಭವಂ ೨

ಸ್ಥಿತಿಯಿಪ್ಪತ್ತೆರಡಂಬುಧಿ
ಮಿತಮನಿತೆ ಸಹಸ್ರವತ್ಸರಕ್ಕೊರ್ಮೆ ಸುಧಾ
ಸ್ಮೃತಿಯಂ ಮಾಳ್ಪಂ ಪನ್ನೊಂ
ದುತಿಂಗಳಿಂಗೊರ್ಮೆ ಸುರಭಿತರಮೆನೆ ಸುಯ್ವಂ ೩

ಉ॥ ಚಾರುವಿಲೋಚನಾಂಶು ನವಕೌಮುದಿ ಕೈರವಮಂ ಪ್ರಮೋದವಿ
ಸ್ತಾರದಿನಪ್ಪಿದಂತೆಸೆವ ದೇವನಿತಂಬಿನಿಯರ್ಕಳೊಳ್ ಕಳಾ
ಧಾರನುದಾರನನ್ಯದಿವದೊಳ್ ದೊರೆಕೊಳ್ಳದುದಂ ನಿರಂತರಂ
ಸಾರಮನೋಜಸೌಖ್ಯಸುರಸಾಮೃತಮಂ ಸವಿದಂ ಸುರಾಧಿಪಂ ೪

ಮ॥ ಜಿನಜನ್ಮಾಭಿಷವಕ್ಕದೊರ್ಮೆ ಜಿನಪಾರಿವ್ರಾಜ್ಯಪೂಜ್ಯಪ್ರಭಾ
ವನೆಗಂತೊರ್ಮೆ ಜಿನಪ್ರಬೋಧಜನನಶ್ರೀಗೊರ್ಮೆ ಸರ್ವಜ್ಞಪಾ
ವನನಿರ್ವಾಣವಿಭೂತಿಗೊರ್ಮೆ ದಿವಿಜಂ ದಿವ್ಯಾರ್ಚನಾದ್ರವ್ಯಧಾ
ರಿ ನಿಜೋದ್ಯತ್ಪರಿವಾರನಂತನುದಿನಂ ಪೋಪಂ ಸುಧರ್ಮೋದ್ಯಮಂ ೫

ವ॥ ಅಂತಮರಲೋಕಸುಖಮಂ ನಿರಂತರಮನುಭವಿಸುತ್ತುಮಿರ್ಪಿನಮನ್ನೆಗಮಿತ್ತಲ್

ಕಂ॥ ಸಮವೃತ್ತಶೋಭೆಯಿಂ ಕವಿ
ಗಮಕೋಚಿತ ನವಪದಾರ್ಥದಿಂ ಜಂಬೂದ್ವೀ
ಪಮದೆಸೆಗುಂ ಕವಿಕುಳತಿಳ
ಕಮುಖಾಂಭೋಜಾತ ಜಾತ ಕಾವ್ಯಾಕೃತಿಯಿಂ ೬

ವ॥ ಆ ಜಂಬೂದ್ವೀಪಲಕ್ಷ್ಮೀವಕ್ಷೋರುಹಾಳಂಕಾರಮೆನಿಸಿ ವಿದೇಹಂಗಳೊಪ್ಪುತ್ತಿರ್ಪುವವಱ ವಿಭವಮಂ ಪ್ರಭಾವಿಸುವೊಡೆ

ಮ॥ ಗಣನಾತೀತತಟದ್ರುಮಂಗಳೆಮೆಯಂ ಪೋಲ್ತೊಪ್ಪೆ ಸೌಂದರ್ಯಧಾ
ರಿಣಿ ವಿದ್ಯಾನಿಧಿ ಚಿತ್ತಹಾರಿಣಿ ವಿದೇಹಂ ತತ್ಸಮುದ್ಭೂತೆ ಸ
ತ್ತ್ರಿಣುತಾಚ್ಛತ್ವ ಸಮನ್ವಿತಾಯತೆ ಕರಂ ಸೀತೋದೆ ಸೀತಾತರಂ
ಗಿಣಿ ನೇತ್ರದ್ವಯದಂತೆ ರಂಜಿಪುದು ಜಂಬೂದ್ವೀಪಭೂಕಾಂತೆಯಾ ೭

ವ॥ ಆ ನದಿಗಳಿರ್ತಡಿವಿಡಿದಿರ್ಪುವು

ಕಂ॥ ಎಂಟೆಂಟುನಾಡುಗಳ್ ನಿ
ಷ್ಕಂಟಕವೃತ್ತಿಯೊಳೆ ತಮಗೆ ಪಾಸಟಿ ಕೀೞ್ ಮೇ
ಲುಂಟವಱೊಳದಱನುಪಮೆಗೆ
ಗೆಂಟೆನುತವಯವದೆ ದಿವಮನವಕರ್ಣಿಸುಗುಂ ೮

ಪದಿನಾಱನಿಪ್ಪ ಸಂಖ್ಯೆಯೊ
ಳೆ ದಿವಂಗಳ್ ತಮಗೆ ಪಾಟಿಯುನ್ನತಿಯಂ ಪೊ
ರ್ದಿದ ಜನಕೆ ಸಮಾನಸ್ಥಿತಿ
ಯೊದವಂ ಮಾೞ್ಪಿಮಗೆ ಪಾಟಿಯಲ್ತೆನುತಿರ್ಕುಂ ೯

ಮ॥ ಕಮನೀಯಾಕೃತಿ ಕಾಮದೇವ ವಿಜಯಿ ಶ್ರೀವಿಷ್ಣುನೀಲಾಂಬರೋ
ತ್ತಮ ಬೋಧಾಧಿಪ ತೀರ್ಥನಾಥ ಸಕಲಶ್ರೀಚಕ್ರಿಸಪ್ತರ್ಧಿಯು
ಕ್ತ ಮುನೀಂದ್ರಾದಿ ವಿಶಿಷ್ಟದೇಹಜನತಾಸಂಭೂತಿಯಿಂದಂ ವಿದೇ
ಹಮೆನಿಪ್ಪಾ ಪೆಸರಂತವರ್ಕನುಗುಣಂ ವಿಶ್ವಂಭರಾಭಾಗದೊಳ್ ೧೦

ಚಂ॥ ಜನಪತಿಗಳ್ ಷಡಂಶಮನೆ ಕೊಂಡಿಳೆಯಂ ಪ್ರತಿಪಾಳಿಪರ್ ಪದ
ಕ್ಕನುವಶಮಾಗಿ ಕೊಳ್ವ ಮಱೆಯಿಲ್ದು ಬಱಂ ನೆಗೞ್ದಂಜೆ ಪಾಪವ
ರ್ತನಮನಯಂ ಪ್ರವರ್ತಿಸದು ವರ್ತಿಪುದೆಯ್ದೆ ಚತುರ್ಥಕಾಲವ
ರ್ತನಮನೆ ಕೂರ್ತು ಕೀರ್ತಿಸದರುಂಟೆ ವಿದೇಹಮಹೀವಿಳಾಸಮಂ ೧೧

ಮ.ಸ್ರ॥ ಜಿನಧರ್ಮಂ ವರ್ತಿಕುಂ ಮಿಕ್ಕಿನ ಕುನಯಚಯಕ್ಕಾ ವಿದೇಹಂಗಳೊಳ್ ವ
ರ್ತನಮಿಲ್ಲೇಕೆಂದೊಡಾ ಕೇವಳಿಗಳುಮವಧಿಜ್ಞಾನಸಂಪನ್ನರುಂ ನೆ
ಟ್ಟನದೆಂದುಂ ವರ್ತಿಸುತ್ತಿರ್ಪುದಱನಮಳಭಾನೂದಯಂ ಕುಂದದಿರ್ದಂ
ದೆನಸುಂ ಘೋರಾಂಧಕಾರಂ ನೆಱೆಗುಮೆ ಜಗತೀಚಕ್ರಮಂ ಕೂರ್ವಿ ಪರ್ವಲ್ ೧೨

ಕಂ॥ ದಿವದೊಳ್ ಪುಟ್ಟಿದವರ್ ಸಂ
ಭವಿಪರ್ ಕುಗತಿಗಳೊಳಲ್ಲಿ ಪುಟ್ಟಿದವರ್ ಸಂ
ಭವಿಸುವರುತ್ತಮಗತಿಗಳೊ
ಳೆ ವಿದೇಹಂ ಸಗ್ಗದಿಂದಮಗ್ಗಳಮಲ್ತೇ ೧೩

ವ॥ ಅದುಕಾರಣದಿಂ

ಕಂ॥ ಆ ವಿಷಯದೆ ಜನನಮನಾ
ದೇವರ್ಕಳೆ ಬಯಸುತಿರ್ಪರಲ್ಲಿಯ ಭವ್ಯರ್
ಭಾವಿಸಲೊಲ್ಲರ್ ದಿವಮನ
ದೀವುದೆ ನಿರ್ವೃತಿಯನವಱಿವೋಲ್ ಸುಖತತಿಯಂ ೧೪

ದೇವಾನಾಂಪ್ರಿಯನೆ ವಲಂ
ದೇವಗತಿಪ್ರೀತನಪ್ಪವಂ ತದ್ಗತಿಯಂ
ದೇವಗತಿಯೆಂದೆ ಬಯಸರ್
ಭಾವಿಸೆ ಭವ್ಯರ್ಕಳಲ್ಲಿ ನಿರ್ವೃತಿನಿರತರ್ ೧೫

ಪರಮಾಯು ಪೂರ್ವಕೋಟಿಯೆ
ನರರುದಯಂ ಪಂಚಶತಶರಾಸನಮೆ ನರೇ
ಶ್ವರ ಸಂಪೂಜ್ಯಶಲಾಕಾ
ಪುರುಷೋತ್ತಮರತ್ನಖನಿಯೆನಿಪ್ಪಾ ಧರೆಯೊಳ್ ೧೬

ವ॥ ಅಲ್ಲಿ ವಿಪಶ್ಚಿನ್ನಿವಾಸಮೆನಿಸಿದ ಪಶ್ಚಿಮವಿದೇಹಲಕ್ಷ್ಮೀಮಧ್ಯಮದೇಶಮಂ ಬಾಸೆಯಂತಳಂಕರಿಸಿ

ಮ॥ ಗಣನಾತೀತತಟೋರುಚೂತರಸಸಂದೋಹಪ್ರವಾಹಪ್ರಧಾ
ರಣದಿಂ ವಾಹಿನಿ ನಾಗಯೂಥ ಜಳಕೇಳೀಲೀಲೆಯಿಂದಂ ತರಂ
ಗಿಣಿಯೆಂಬೀ ನಿಜನಾಮಮನ್ವಿತಮೆನಿಪ್ಪಂತಂಬುಜಾಮೋದವೀ
ಕ್ಷಣ ಸಂತೋಷಕರಪ್ರಸಾದೆಯೆನಸುಂ ಸೀತೋದೆ ಕಣ್ಗೊಪ್ಪುಗುಂ ೧೭

ಕಂ॥ ದಕ್ಷಿಣನುತಮಾ ಸಿಂಧುವ
ದಕ್ಷಿಣದೊಳ್ ನಿಷಧಶೈಳದುತ್ತರದಿಶೆಯೊಳ್
ವಕ್ಷಾರದಿಂದ ಮೂಡಲ್
ವೀಕ್ಷಣಸುಖಭದ್ರಶಾಳಿವನದಿಂ ಪಡುವಲ್ ೧೮

ಮ॥ ವಿಳಸತ್ಸೌರಭಶಾಲಿ ವಾರವನಿತಾದೃಗ್ಭಾಸಿ ಷಟ್ಖಂಡಮು
ಜ್ಜ್ವಳಪತ್ರಕ್ಕೆಣೆಯಪ್ಪಿನಂ ವೃಷಭಶೈಳಂ ಕರ್ಣಿಕಾಕಾರಮಂ
ತಳೆದೊಪ್ಪುತ್ತಿರೆ ರಾಜಹಂಸಸದನಂ ಪದ್ಮಂಬೊಲೊಪ್ಪಿರ್ಪುದ
ಸ್ಖಳಿತಶ್ರೀನಿಧಿ ಪದ್ಮೆ ಸದ್ಭ್ರಮರಲೀಲಾವಿಭ್ರಮಭ್ರಾಜಿತಂ ೧೯

ಚಂ॥ ವಿಳಸಿತಸತ್ಪಥಂ ಬುಧಸಮುದ್ಭವಶೋಭಿ ಸುಧಾನಿಧಾನಗೋ
ಕುಳಮಬಳಾಮನೋಹರಮನಂಗಸಹಾಯವಿಳೇಶಕೋಶಸ
ಜ್ಜ್ವಳನಿಧಿವರ್ಧಕಂ ಸಕಳಸಸ್ಯಸಮೃದ್ಧಿಯನಾಂತು ಚಂದ್ರಮಂ
ಡಳಮನೆ ಪೋಲ್ತು ಮಂಡಳಮದಚ್ಚರಿಯೆಂದುಮನೂನಸಂಪದಂ ೨೦

ಕಂ॥ ಶಾಳಿ ನಿಜಗಂಧಮತ್ತಾ
ಶಾಳಿನಿ ಕಣ್ಗೊಳಿಸಿದತ್ತು ಪರಿಮಳಮಿಳಿತಾ
ಶಾಳಿ ನಿರತಿಶಯಗುಣಕಣಿ
ಶಾಳಿ ನಿಮಗ್ನೋರು ಕೀರಕುಳ ಪರಿಕಳಿತಂ ೨೧

ಕಳಮಕಣಿಶಂಗಳಂ ಬ
ಲ್ಗಿಳಿಗಳ್ ನಲಿಗರ್ಚಿ ಜಡಿಯೆ ಪಾಮರಿಯರ್ ಮಂ
ಡಳಿಸಿ ನಭದಲ್ಲಿ ತಳೆದುವು
ವಳಯಾಕೃತಿವೆತ್ತು ಶಕ್ರಚಾಪದ ಚೆಲ್ವಂ ೨೨

ಚಂ॥ ಮಡಿಗಳೊಳಿರ್ದ ಕೈರವಮನಾನನಚಂದ್ರಮನಿಂದಲರ್ಚಿ ಕಂ
ಪೊಡರಿಸುವಾ ಸುಗಂಧದಲರ್ದುತ್ಪಳಗಂಧದೆ ಗಂಧಶಾಳಿಯಂ
ಬಿಡೆ ಪೊರೆದೊಲ್ದು ಬಂದೆಱಪ ತುಂಬಿಯ ಗಾವರದಿಂದಮಾವಗಂ
ಗಡ ಗಿಳಿಸೋವುದಾ ವಿಷಯಭೂಮಿಯ ಕೋಮಳಪಾಮರೀಜನಂ ೨೩

ವ॥ ಅಂತು ಬೆಳೆದ ಕಳವೆಯ ಕೆಯ್ವೊಲಂಗಳ ಸಿರಿಯೆ ಕಣ್ಬೊಲಸಾದಂತೆ

ಚಂ॥ ನಿರುಪಮಪಾಮರೀಮುಖಸರೋರುಹಸೌರಭಗಂಧಶಾಳಿಬಂ
ಧುರತರಗಂಧಮಂ ಮೃಗಮದಾಕಳಿತಾಚಳಸಾನುಗಂಧಸಿಂ
ಧುರಮದಗಂಧಮಂ ತಳೆದು ಗಾಳಿ ಸುಗಂಧವಹಾಭಿಧಾನಮಂ
ಧರಿಯಿಸಿ ತೀಡುತಿರ್ಪುದು ನಿರಂತರಮಾ ವಿಷಯಾಂತರಾಳದೊಳ್ ೨೪

ಮ॥ ನವನೀರೇಜವನಂ ಸಿತೇಕ್ಷು ಸಹಕಾರಶ್ರೇಣಿ ಮತ್ತಾಳಿ ನೀ
ರವಮುನ್ಮೀಳಿತ ಮಾಳತೀಪರಿಮಳಂ ತೆಂಗಾಳಿಯಲ್ಲೆಲ್ಲಿ ನೋ
ಡುವೊಡಲ್ಲಲ್ಲಿಯೆ ರಯ್ಯಮೆಂದೆಸೆ ವಿಯೋಗೋದ್ವೇಗದಿಂದಿರ್ಪ ಮಾ
ನವರಂ ಮರ್ದಿಸುವಲ್ಲಿಯಿಲ್ಲ ಮದನಂಗಾಯಾಸಮಾ ದೇಶದೊಳ್ ೨೫

ಕಂ॥ ವನಮೆನಿತನಿತುಂ ಮದನನ
ವನಕೇಳಿಗೆ ತಿಳಿಗೊಳಂಗಳೆನಿತನಿತುಂ ನೂ
ತನ ಜಳಕೇಳಿಗೆ ಶೈಳಮ
ವೆನಿತನಿತುಂ ಶೈಳಕೇಳಿಗೆನೆ ಪೊಗಟದರಾರ್ ೨೬

ವ॥ ಅಂತು ಸಕಳವಿಷಯಸುಖಕ್ಕಂ ವಿಷಯಮಾದಾ ವಿಷಯದೊಳ್

ಕಂ॥ ಶ್ರೀಪದಮಾ ಜನಪದಲ
ಕ್ಷ್ಮೀಪದಕಮಿದೆನಿಸಿ ವಿನುತನಾಯಕತೇಜೋ
ವ್ಯಾಪೃತಮಶ್ವಪುರಂ ಮಣಿ
ಗೋಪುರಮೆಸೆಗುಂ ವಿಳಾಸಜಿತದಿವಿಜಪುರಂ ೨೭

ಚಂ॥ ಅದು ವಿಬುಧಾಶ್ರಯತ್ವದಮರಾವತಿಯಂ ಧನದಾಲಯತ್ವದಿಂ
ದದು ವಿದಿತಾಳಕಾಪುರಮನಂತದನಂತಭುಜಂಗಸಂಗಮ

ತ್ವದಿನಹಿರಾಜಪತ್ತನಮನೀ ತೆಱದಿಂ ನೆಱೆ ಪೋಲ್ತು ಚೆಲ್ವಿನಿಂ
ದೊದವಿಯಿರ್ಪರ್ಕೆ ಮೇಲೆನಿಪುದೆಂದೊಡೆ ಪೋಲಿಸಲುಂಟೆ ಪಟ್ಟಣಂ ೨೮

ಕಂ॥ ಒಸರ್ವ ಸಿತಸಿತೇಕ್ಷುವ ರಸ
ವಿಸರದ ಪರಿಕಾಲ್ಗಳಿಂದೆ ಕಳಮವನಂಗಳ್
ಪಸರಿಸಿ ಬೆಳೆದೊಱಗಿದುವೆಱ
ಗಿಸುವುವು ಗಿಳಿಗಳುಮನಾ ಪುರದ ಪೊಱವೊಳಲೊಳ್ ೨೯

ದೆಸೆವೆಣ್ಗಳ ಪಸುರ್ವಟ್ಟೆಯ
ಪಸರಿಸಿ ತೋರ್ಪಂಶುಕಂಗಳೆನಿಸಿ ಶುಕಂಗಳ್
ದೆಸೆದೆಸೆಯಿಂ ಬಂದೆಱಗುವ
ವಸದೃಶ ಪರಿಮಳ ವಿಶಾಳಶಾಳಿಯೊಳೊಲವಿಂ ೩೦

ಉ॥ ತೀವಿದ ನಿರ್ಮಳಾಂಬು ಶಶಿಕಾಂತದ ಕುಟ್ಟಿಮಭೂಮಿ ಕಾಂತಪೊಂ
ದಾವರೆ ಹೇಮಪೀಠಮೆಱಗಿರ್ದಳಿಮಾಳೆ ಪಿನದ್ಧನೀಳರ
ತ್ನಾವಳಿ ರಾಜಹಂಸಿ ಪರಿಚಾರಕಿಯಾಗೆ ಮನೋಜರಾಜಲ
ಕ್ಷ್ಮೀವಧುವಿರ್ಪ ಮಂದಿರದವೋಲ್ ಬನದೊಳ್ ಕೊಳನಿರ್ಪುದೊಪ್ಪುತುಂ ೩೧

ಉ॥ ತುಂಗಸಿತೇಕ್ಷುದಂಡಸಹಕಾರ ರಸಾಕುಳಮಾತುಳುಂಗ ನಾ
ರಂಗಫಳಂಗಳಿಂ ಸುರಯಿ ಸಂಪಗೆ ಮಲ್ಲಿಗೆ ಮೊಲ್ಲೆಯೆಂಬ ಪು
ಷ್ಪಂಗಳಿನಲ್ಲಿ ಪಾಡುವ ಮದಾಳಿಯಿನೋದುವ ರಾಜಕೀರದಿಂ
ದಂಗಜರಾಜಮಂಗಳನಿವಾಸಮೆನಿಪ್ಪುದು ತದ್ಬಹಿಃಪುರಂ ೩೨

ವ॥ ಅಂತುಮಲ್ಲದೆ

ಮ॥ ಪರಿರಂಭೋರುಪಯೋಧರಸ್ಮಿತಸರೋಜಾತಾನನಾಮೋದಿ ಸು
ಸ್ಥಿತ ಮತ್ತಭ್ರಮರಾವಳೀವಿಳಸಿತಂ ಸಂಪನ್ನಪುನ್ನಾಗಮಂ
ದಿರಮಾನಂದಿತರಾಜಹಂಸತತಿ ನಾನಾಚಿತ್ರಪತ್ರೋತ್ಕರಾ
ಕರಮಂತಾ ಪುರಮುಂ ಬಹಿಃಪುರಮುಮೇಕಾಕಾರದಿಂದೊಪ್ಪುಗುಂ ೩೩

ವ॥ ಅಂತು ಸೊಗಯಿಸುವ ವನಮೆ ವೇಳಾವನಂ ಸಿತಾಂಬುಜಂಗಳೆ ಕಂಬುಗಳ್ ಎಂಬಂತೆಸೆಯೆ ಮಿಸುಪರುಣಕಂಜಕಿಂಜಲ್ಕ ರಜೋರಂಜಿತ ತರಂಗಮಾಳೆಗಳೆ ನವಪ್ರವಾಳ ಲತಾಮಾಳೆಗಳಾಗೆ ಸಾಗರಮೆ ಬಡವಾನಳಭೀತಿಯಿಂ ಭೂಭೃತ್ತತಿಯಂ ಶರಣ್ಬೊಕ್ಕುದೆಂಬಂತೆ ಕಣ್ಗಿಂಬಾಗಿ

ಕಂ॥ ಎಲರಲೆಪದಿನುದಿರ್ಪವನ
ದಲರ್ದಲರ್ವುಡಿಯಿಂದೆ ಪೊರೆದು ಪರಿಖಾವಳಯಂ
ಸುಲಲಿತೆ ಘುಸೃಣೋಜ್ವಲೆ ಪುರ
ಲಲನೆ ಜಲಕ್ರೀಡೆಯಾಡಿದವೊಲೆಸೆದಿರ್ಕುಂ ೩೪

ಬಳಸಿರ್ದುಪವನದೊಳರ
ಲ್ದಲರ್ಗಳ ಬಳಗಂ ಬಳಸೆ ಮುಟ್ಟ ಮುಗಿಲಂ ಪೊಸಪೊಂ
ಗಳ ತೊಳಪ ಕೋಂಟೆ ತಾರಗೆ
ಬಳಸಿದ ಕನಕಾಚಳಂಬೊಲೆಸೆವುದು ನಿಸದಂ ೩೫

ವ॥ ಮತ್ತಮದುತ್ತುಂಗ ವಿಶಾಳಾಟ್ಟಾಳಚೂಳಿಕಾಪಿನದ್ಧ ಚುಂಬಿತಾಂಬರಕೇತುಹಸ್ತ ವಿಸ್ತಾರದಿಂ ನಿಳಿಂಪನಗರಸಂಪತ್ತಿಯೆಲ್ಲಂ ತನಗೆ ಹಸ್ತಸ್ಥಿತಮಂಬುದನಭಿನಯಿಸುವಂತೆ ಕಮನೀಯಮಾಗಿರ್ಪುದಕ್ಷೂಣಲಕ್ಷ್ಮೀಸಮಾಗಮನದ್ವಾರೋಪಮ ನಿರುಪಮ ನೂತ್ನ ರತ್ನ ತೋರಣಕಳಾಪಗೋಪುರಮೆನಿಪ ಗೋಪುರದಿಂದಂ ರೂಪುವಡೆದುದದಱೊಳಗಭ್ಯುದಯ ನಿಃಶ್ರೇಯಸ ನಿಶ್ರೇಣಿಯುಂ ನಿರೀಕ್ಷಣಸುಖಸಸ್ಯಕ್ಷೋಣಿಯುಮೆನಿಸಿ

ಕಂ॥ ಆವಾವ ಬೀದಿಯೊಳ್ ಪರಿ
ಭಾವಿಸೆ ಭಾವುಕರ ಭಾವಮಂ ಸೋಲಿಪ ವೇ
ಶ್ಯಾವಾಟಿ ರುಚಿರ ನವರಚ
ನಾವಳಿ ಮಣಿಕಳಶಕಳಿತಜಿನಗೃಹಮೆಸೆಗುಂ ೩೬

ಮಾರನ ಚಾಪಾಗಮವಿ
ಸ್ತಾರಮನೀಕ್ಷಿಪ ತವಂಗಮಂಗನೆಯರ ಶೃಂ
ಗಾರರಸಂ ತೀವಿದ ನಡು
ಗೇರಿಯಿದೆನೆ ಸೂಳೆಗೇಱಿ ಮಿಗೆ ಸೊಗಯಿಸುಗುಂ ೩೭

ಚಂ॥ ಮಸೆದ ಮನೋಜನಸ್ತ್ರನಿಚಯಂ ನಗೆಗಣ್ ನಿಡುವುರ್ವು ಕರ್ವುವಿ
ಲ್ಲಸದೃಶಚಿತ್ತಹಾರಿ ಹೊಗರೆತ್ತಿದ ಕೂರಸಿ ಬಾಸೆಯಿಂ ಕರಂ
ಮಿಸುಗುವ ತೆಳ್ವಸಿರ್ ಪಳಕಮಾಗೆ ಕಪೋಳತಳಂ ವಿಳಾಸದಿಂ
ದಸದಳಮೇಱಿಕುಂ ಜಯನಶಾಲೆಯ ಲೀಲೆಯನಲ್ಲಿ ಬಾಲೆಯರ್ ೩೮

ಶಾ॥ ಆಕಾಶಸ್ಫಟಿಕಾಶ್ರಯೋಪರಿಮ ಭೂಭಾಗಂಗಳೊಳ್ ಕೇಕರಾ
ಳೋಕಂ ಭಾವುಕಚಿತ್ತಮಂ ತೆಗೆಯೆ ಚಾರುಸ್ಮೇರಮಂಗೋದ್ಭವಂ
ಗೇಕಚ್ಛತ್ರಜಗತ್ತ್ರಯಪ್ರಭುತೆಯಂ ತಂದೀಯೆ ನಿಂದಂಗನಾ
ನೀಕಂ ತಮ್ಮ ವಿಳಾಸದಿಂದಿಱಿಸುತಿರ್ಕುಂ ಖೇಚರಸ್ತ್ರೀಯರಂ ೩೯

ಮ॥ ವಿದಿತಂ ವಪ್ರಭೆ ವಜ್ರವೇದಿಕೆ ವಧೂಲಾವಣ್ಯಪುಣ್ಯಾಂಬು ತೀ
ವಿದ ಶುಂಭತ್ಪುರಮಂಬುರಾಶಿಯೆನೆ ನಾನಾವಸ್ತುಸಂಪತ್ತಿಗೆ
ತ್ತಿದ ತುಂಗಧ್ವಜದಿಂ ಮಣಿವ್ರಜದಿನೊಪ್ಪಂಬೆತ್ತು ಬಿಣ್ಪುಂಡನಿ
ಕ್ಕಿದ ಭೈತ್ರಕ್ಕಣೆಯಾಗಿ ಕಣ್ಗೊಳಿಸುಗುಂ ವೈಶ್ಯಾಳಿವೇಶ್ಮೋತ್ಕರಂ ೪೦

ಕಂ॥ ಪುರದ ಮನೆಯೆನಿತದನಿತುಮು
ಪರಿಮಾಡಂ ಮನೆಯ ಪಿಂತಿಲೆನಿತವನಿತ್ತುಂ
ಸರಸಿರುಹಾಕರಕಳಿತಂ
ಪುರುಷರೆನಿಬರನಿಬರುಂ ವದಾನ್ಯರ್ ಧನ್ಯರ್ ೪೧

ಚಂ॥ ಮೃಗಮದಗಂಧಮಂ ಸುರಭಿಚಂದನಗಂಧಮನಬ್ಜಗಂಧಮಂ
ನಗನಿಕಟಪ್ರಸೂನನವಗಂಧಮನುತ್ಪಳಗಂಧಮಂ ಸಮಂ
ತೊಗುಮಿಗೆ ಪೇಱ್ ನೀಱೆಯರ್ಗೆ ಬೀಱುತುಮಾ ಪುರಮಂ ನಿರಂತರಂ
ಪುಗುವುದು ಘಟ್ಟಿವಳ್ಳನೆನೆ ಗಂಧವಹಂ ಬಹುಗಂಧಬಂಧುರಂ ೪೨

ಮ॥ ತನುಗಂಧಕ್ಕೆಱಗಿರ್ದ ತುಂಬಿ ಮುಗಿಲಂ ನೇತ್ರಾಂಶು ಮಿಂಚಂ ಸುಕಾಂ
ಚನಕಾಂಚೀರುತಿ ಮೇಘನಾದಮನನೂನಂ ಪೋಲೆ ಲಾವಣ್ಯವಾ
ಹಿನಿ ಮೆಯ್ವೆರ್ಚೆ ಮನೋಜಕೇಕಿ ಕುಣಿವನ್ನಂ ಕಾರವೋಲಂಗನಾ
ಜನಮಿಾಯುತ್ತುಮೆ ಬರ್ಪುದೊಪ್ಪಿ ಪುರದೊಳ್ ಶೃಂಗಾರದಾಸಾರಮಂ ೪೩

ಕಂ॥ ಪೊಱಗಣ ಚೆಲ್ವಱೆಯದರ್ಗಳ
ನೆಱಗಿಸಿ ತನಗೊಳಗುಮಾಳ್ಪುದೆನೆ ಪುರದೊಳಗಿಂ
ತುಱುಗಿದ ಚೆಲ್ವಱಿವರ್ಗಳ
ನೆಱಗಿಸಿ ತನಗೊಳಗುಮಾಳ್ಪುದೇಂ ಕೌತುಕಮೇ ೪೪

ವ॥ ಅಂತಳವಿಗಱಿದ ಚೆಲ್ವನೊಳಕೊಂಡ ನಗರವಿಳಾಸಿನಿಗೆ ಮಂಡನಮೆನಿಸಿಯನೂನ ದಾನಾಮೋದ ಮತ್ತಮಧುಕರ ಝಂಕಾರಾಕರ್ಣನಾಸಕ್ತಿ ತ್ಯಕ್ತದುಷ್ಟಚೇಷ್ಟಿತಗಂಧ ಸಿಂಧುರರುಂದ್ರೇಂದ್ರನೀಳ ಶಾಲಾವಿಸರವಿವಸ್ವದಶ್ವಸದೃಶವಾಜಿರಾಜಿವಿರಾಜಿತ ವಿಶಾಲಶಾಲಾ ನಿಚಯರುಚಿರಪಂಚರತ್ನಾಂಚಿತ ಕಾಂಚನಪಂಚದಳ ಪ್ರಾಸಾದಂ ಮನಃಪ್ರಸಾದ ಸಂಪಾದ ಕಾಂತಃಪುರ ಕಾಂತಾನಿವಾಸಭಾಸುರ ಪ್ರತ್ಯಂತಪರ್ವತಸಂವೃತಿರತ್ನರೋಚಿರ್ಜಾಳನಿರ್ಝರ ಪ್ರವಾಹದಿಂ ರೋಹಣಾಚಳಮನಿಳಿಸಿ ಮನಂಗೊಳಿಸೆ

ಮ॥ ಪುರಪೀತಾಂಬರನಾಭಿಮಂಡಲದವೋಲ್ ಮಧ್ಯಪ್ರದೇಶಕ್ಕಳಂ
ಕರಣಂ ರಾಜಿತರಾಜಹಂಸನಿವಹಂ ಪ್ರೀತಿಪ್ರದಶ್ರೀಸುಮಂ
ದಿರಕಾಂತಾಸ್ಯಪಯೋಜಗಂಧಸಹಿತಂ ವಿಖ್ಯಾತವಾಣೀವಧೂ
ವರವಿಭ್ರಾಜಿ ವಿರಾಜಿಕುಂ ಸುಖಪದೋರ್ವೀಪಾಳಲೀಲಾಗೃಹಂ ೪೫

ವ॥ ಅಂತುಮಲ್ಲದೆ

ಮ.ಸ್ರ॥ ವಿನುತ ಶ್ರೀಭದ್ರಶಾಲಂ ವಿಚಕಿಳವಿಳಸತ್ಪಾಂಡುಕಂ ಶ್ರೀಲಸತ್ಸೌ
ಮನಸಂ ಸನ್ನಂದನಂ ಬಂಧುರಸುರಭಿಮಧೂಚ್ಚಾರಸಾರಪ್ರದೇಶಂ
ಘನಪುನ್ನಾಗಾನ್ವಿತಂ ಸತ್ಪಥನುತರುಚಿಮದ್ರಾಜಹಂಸಪ್ರಸೇವ್ಯಂ
ಕನಕಾದ್ರೀಂದ್ರಂಬೊಲಿಂಬಾಗೆಸೆವುದು ಮಣಿವಿಭ್ರಾಜಿತಂ ರಾಜಗೇಹಂ ೪೬

ಉ॥ ಮಂದರದಂತೆ ರಾಜಿಸುವ ರಾಜಗೃಹಾಂತರದೊಳ್ ಜಿನಾರ್ಚನಾ
ನಂದವಿಳೋಕನಂ ವಿತರಣಪ್ರಭು ವಿಕ್ರಮಶಾಳಿ ಸಂದಸಂ
ಕ್ರಂದನನಿಂದ್ರಶಾಖ ಹರಿಯಿರ್ಪವೊಲೂರ್ಜಿತಶೌರ್ಯವಜ್ರವೀ
ರ್ಯಂ ದೊರೆವೆತ್ತು ರಂಜಿಸುತುಮಿರ್ಪನಿಳಾವಳಯಾಧಿನಾಯಕಂ ೪೭

ಮ॥ ಅತುಳಾನರ್ಘ್ಯಗುಣಪ್ರಸನ್ನವದನಂ ಸ್ವಚ್ಛಂ ಪ್ರತಾಪಾರ್ಜಿತೋ
ರ್ಜಿತತೇಜಂ ನಿರವದ್ಯವೃತ್ತನಬಳಾಹೃತ್ಕಾಂತರೂಪಂ ಸಮಾ
ಶ್ರಿತ ಸರ್ವೇಷ್ಟಫಳಪ್ರದಂ ಸಮುಚಿತಾಸ್ಥಾನಪ್ರದೀಪಂ ಜಗ
ನ್ನುತನಾ ನಾಯಕರತ್ನದಂತಿರೆಸೆವಂ ಸರ್ವೋರ್ವರಾನಾಯಕಂ ೪೮

ಕಂ॥ ಅಶ್ವಪುರವಲ್ಲಭಂ ಹರಿ
ದಶ್ವಪ್ರತಿಮಪ್ರತಾಪನಿಧಿ ವೈಭವನಾ
ಕೇಶ್ವರನಾಕ್ರಮಿಸಿದನೀ
ವಿಶ್ವಾವನಿಯಂ ಮನೋರಥಾಗ್ರಸಮಗ್ರಂ ೪೯

ಸಸ್ಯನಿಧಿ ನಿಖಿಳಧರೆಯಂ
ಯಸ್ಯಾಶ್ವಾಸ್ತಸ್ಯ ಮೇದಿನೀಯೆಂಬುದನ
ಬ್ಜಾಸ್ಯಂ ದಿಟಮೆನಿಸಲನಾ
ಲಸ್ಯನನೂನಾಶ್ವನಾಳ್ದನಶ್ವಪುರೇಶಂ ೫೦

ಆರ್ಯಪ್ರತೋಷಕರಚಾ
ತುರ್ಯಂ ದೃಢಧೈರ್ಯನಂಗನಾಮೋಹನಸೌಂ
ದರ್ಯಂ ವಚನೋಚಿತಮಾ
ಧುರ್ಯಂ ವಿಭು ವಜ್ರವೀರ್ಯನವನಿಪವರ್ಯಂ ೫೧

ವಿಜಿಗೀಷುವನಾ ನೃಪನಂ
ಸುಜನನನವಯವದೆ ಗೆಲ್ವ ಚೆಲ್ವಿಂ ಚದುರಿಂ
ವಿಜಯಾಂಗನೆಯಂಗಜನೃಪ
ವಿಜಯಾಂಗನೆಯಂದದಿಂದಮೇನೊಪ್ಪಿದಳೋ ೫೨

ಎನಸುಮದಿಟಿಕುಂ ಭ್ರೂ ಕ
ರ್ವಿನ ಬಿಲ್ಲಂ ಪಕ್ಷ್ಮಪಾಳಿ ತುಂಬಿಯ ತಿರುವಂ
ನೆನೆಯಿಸೆ ನಯನದ್ಯುತಿ ಪೂ
ವಿನ ಸರಮಂ ಮದನನೆಸೆಯನಾಕೆಯ ನೋಟಂ ೫೩

ಚಂ॥ ಮೊಗಮಲರ್ದಬ್ಜದಂತೆ ನಯನಂ ನಗುವುತ್ಪಳದಂತೆ ಮೂಗು ಸಂ
ಪಗೆಮುಗುಳಂತೆ ದಂತರುಚಿ ಮಲ್ಲಿಗೆಯಂತಧರಂ ಸಮಂತು ಬಂ
ದುಗೆಯಲರಂತಿರೊಪ್ಪೆ ಕುಸುಮಾಯುಧಚಕ್ರಿಗೆ ಪಂಚಬಾಣಮಂ
ಬಗೆಗೊಳುತೀವ ಕಳ್ಪಲತೆಯಂತೆ ಲತಾಂಗಿ ಕರಂ ವಿರಾಜಿಪಳ್ ೫೪

ಕಂ॥ ಜನನಾಥನ ವನಿತೆ ಜಗ
ಜ್ಜನಸಂಸ್ತುತೆಯುಗ್ರಮಹಿಷಿಯೆನೆ ಪೆಸರ್ವಡೆದುಂ
ಮುನಿಜನ ಸನಾಭಿಜನ ಬುಧ
ಜನ ಪರಿಜನಕಾಮಧೇನುವೆನಿಪಳಿದಣಕಂ ೫೫

ವ ॥ ಆ ವಿಜಯಾಂಗನೆಯುಂ ಜಯಾಂಗನೆಯುಮಾ ಮಹೀಭುಜನ ಭುಜಮಂಡಲಕ್ಕೆ ಮಂಡನಮೆನಿಸಿಯತನುಸಾಮ್ರಾಜ್ಯಸುಖಸಂಪತ್ತಿಯಂ ಪಡೆಯುತ್ತುಮಿರೆ ಪರಸ್ಪರಪ್ರಣಯರೋಹಣವೃತ್ತಿಯಿಂದನೇಕ ದಿವಸಂ ಕ್ಷಣಂಗಳಂಗಜಸುಖರಕ್ಷಣಂಗಳಾಗಿ ಪೋಗುತ್ತುಮಿರೆ ಕೆಲವು ದಿವಸದಿಂ

ಕಂ॥ ಪುಷ್ಪವತಿಯಾಗಿ ಚೇತಃ
ಪುಷ್ಪಲಿಹಕ್ಕೆ ಹರುಷಮಂ ಪುಟ್ಟಿಪುದುಂ ಪತಿ
ಪುಷ್ಪೇಷುಗೆ ಸಮ್ಮದಮಂ
ನಿಷ್ಪಾದಿಪುದುಂ ಲತಾಂಗಿಗನ್ವಿತಮಲ್ತೇ ೫೬

ವ॥ ಅಂತು ನಿಜಪತಿಮನೋರಥಫಳಪ್ರದಕಾಮಕಲ್ಪಲತೆಯಂತೆ ಪುಷ್ಪವತಿಯಾಗಿ ಚತುರ್ಥಸ್ನಪನಪವಿತ್ರಗಾತ್ರೆ ತೀರ್ಥಮೆನಿಸಿ ಬೆಳ್ವಸದನಂಗೊಂಡು

ಉ॥ ರಾಜಿತಮೌಕ್ತಿಕಾಭರಣಕಾಂತಿಯುಮಿಾಕ್ಷಣಕಾಂತಿಯು ದಿಶಾ
ರಾಜಿಯನಾವಗಂ ಬೆಳಗೆ ಚಾರುತನೂಭವಸೌಖ್ಯರೂಪೆಯಾ
ರಾಜನ ಸೂೞ್ಗೆ ರಾಗದೊದವಿಂ ಬರುತುಂ ಸ್ಮರಸಾರಸೌಖ್ಯಕೃ
ದ್ರಾಜನ ಸೂೞ್ಗೆವರ್ಪಸಮರೋಹಿಣಿಯಂತಿರೆ ಕಾಂತೆಯೊಪ್ಪಿದಳ್ ೫೭

ವ॥ ಆ ಸಮಯದೊಳ್

ಕಂ॥ ಕನಕಶಯನಗೃಹವಾತಾ
ಯನದಿಂದೊಗೆವಗುರುಧೂಪಧೂಮಾವಳಿ ಕಾಂ
ಚನಮಂಚರುಚಿರಮಣಿರುಚಿ
ಗೆನಸುಂ ತಲ್ಲಣಿಸಿ ತಳರ್ವ ಕಟ್ಟಿಲೆಯೆನಿಕುಂ ೫೮

ಕಾಂಚನಮಂಚಮುದಯಗಿರಿ
ಯಂ ಚೆಲ್ವಿಂ ಪೋಲೆ ತಳ್ಪತಳಲಲಿತದುಕೂ
ಲಂ ಚಂದ್ರಿಕೆಯವೊಲಿರೆ ರಾ
ಜಂ ಚಾರುವಿಳಾಸರಾಜನೆನೆ ರಾಜಿಸಿದಂ ೫೯

ಬೆಳ್ವೆಳಗಂ ದೆಸೆದೆಸೆಗಮು
ಗುಳ್ವಿಲರ್ಗಣ್ಮಲರ ಸರಲ ತೆಱದಿಂ ಬಗೆಯಂ
ತಳ್ವಿಲ್ಲದುಗಿಯೆ ತೆಗೆದಂ
ತೋಳ್ವೊಣರಿದಿರ್ಗೊಳ್ಪಿನಂ ಲತಾಂಗಿಯನರಸಂ ೬೦

ವ॥ ಅನಂತರಂ

ಮ.ಸ್ರ॥ ನೆರೆದಂ ಸ್ವೇದಾಂಬು ತೀರ್ಥೋದಕದಭಿಷವಮಂ ಮಾಡೆ ರೋಮಾಂಚದರ್ಭಾಂ
ಕುರ ಲಾವಣ್ಯಾಂಬುಪೂರ್ಣಸ್ತನಕಳಶಧರಂ ಕಂಠನಾದೋಚ್ಚತೂರ್ಯೋ
ದ್ಧುರರಾವಂ ಪೊಣ್ಮೆ ಕಾಂತಂ ವಿಷಮಶರಶಲಾಕಾಧಿಪಾಚಾರ್ಯನೆಂಬಂ
ತಿರೆ ಮೋಹಶ್ರೀಗೆ ತಾಂ ಕಣ್ದೆಱವಿಯನೊಸೆದಿತ್ತಂತೆ ಚೆಲ್ವಾಗೆ ಕಣ್ಗಳ್ ೬೧

ವ॥ ಅಂತಾ ರಂಭೋರು ನಿರ್ಭರಪ್ರಣಯಪರಿರಂಭಸಂಭವಾಭಾವಶಂಕಾವಹ ಕುಂಭಿ ಕುಂಭಾಭೋಗ ಭೋಗಸಾಗರಪಾರಗೆಯಾಗಿ

ಮ॥ ವಿಳಸತ್ಕೈರವನೇತ್ರೆ ಚಂದ್ರಮನನಂಭೋಜಾಸ್ಯೆ ಬಾಳಾರ್ಕಮಂ
ಡಳಮಂ ಕಲ್ಪಲತಾಂಗಿ ಕಲ್ಪತರುವಂ ಗಂಭೀರೆಯಂಬೋಧಿಯಂ
ಕುಳಮಾನೋನ್ನತೆ ಮೇರುವಂ ಕಮಳಲೀಲಾಹಸ್ತೆ ಸಲ್ಲಕ್ಷ್ಮಿಯಂ
ಬೆಳಗಪ್ಪಾಗಳನೂನರಾಗದೊದವಿಂ ಕಂಡಳ್ ಶುಭಸ್ವಪ್ನಮಂ ೬೨

ಕಂ॥ ತೇಜಶ್ಚಕ್ರಧರಂ ರಿಪು
ರಾಜೋಜೋಹಾರಿ ತನ್ನವೋಲುರ್ವೀವಿ
ಭ್ರಾಜಿತಕರನುದಯಿಸುವ ತ
ನೂಜಂ ನಿನಗೆಂದು ಪೇಟ್ಟವೋಲಿನನೊಗೆದಂ ೬೩

ವ॥ ಆಗಳನೂನಾನುರಾಗಭರದಿಂ ಭುವನೇಶಭವನೋಪವನದ ವನರುಹವನದೊಳ್ ನೆರೆವ ಚಕ್ರವಾಕಂಗಳ ಕಳರವಮುಂ ಚಕ್ರವಾಕಸ್ತನಿಯರೆನಿಪ ಗಾಯಿನಿಯರಿನಿದೆನಿಸುವ ಗೇಯರವಮುಂ ವಿಕಸಿತಸಿತಕಮಳಪರಿಮಳಮಗ್ನಮಧುಕರಝುಂಕಾರಮುಂ ವ್ಯಾಪಾರ ಪರಿಚಕಿತಕಮಳಮುಖನಿಖಿಳಪರಿಚಾರಕೀ ಚಾರುತರಚರಣಮಣಿನೂಪುರ ಘನಜಘನಕಾಂಚೀದಾಮ ನಿಕಾಮ ಕೋಮಳ ಜಲತಾಕಳಿತ ಮಳಯ ಕಳಧೌತಕಂಕಣಝುಂಕಾರಮುಂ ನವಪಲ್ಲವ ಕುಸುಮವಿಸರ ಶೋಭಾವಹ ಸಹಕಾರಕಳಿಕಾಸ್ವಾದ ವಿನೋದಲಂಪಟ ಕಳಕಂಠಪ್ರಣಾದಮುಂ ಕಳಕಂಠಪ್ರಾಭಾತಿಕಪಠನೀಯಪ್ರಚುರವಾಚಾಪ್ರಣಾದಮುಂ ಸುಖಪ್ರಬೋಧಮನೀಯೆ ಪುಳಿನತಳದಿನೆಟ್ಟಿತ್ತ ರಾಜಹಂಸಿಯಂತೆ ಶಯ್ಯಾತಳದಿನೆಟ್ಟಿತ್ತು ತ್ರಿಲೋಕಮುಖ್ಯ ಮಂಗಳಭಗವದರ್ಹತ್ಪರಮೇಶ್ವರಶ್ರೀಮುಖಾದರ್ಶನಹರ್ಷೋತ್ಕರ್ಷಪುಳ ಕಾಳಂಕಾರ ಕಮನೀಯಕಾಯೆ ವಿಮಳಮಣಿಮಯಮುಕುರಾವಳೋಕನಪ್ರಸಾದಿತ ಮಂಗಳ ಪ್ರಸಾಧನ ರಮಣೀಯಪರಿವಾರರಮಣೀಪರಿವೃತೆ ನಿಜಮನೋರಮಣನ ಸಮಿಾಪಕ್ಕೆ ವಂದು ನಿಜಾಂಗ ಸಂಗಸಂಗತರೋಮಾಂಚದಿಂ ಸರ್ವಾಂಗಮನಳಂಕರಿಸಿ ತದರ್ಧಾಸನಮನಳಂಕರಿಸಿ ನಿಜಾದೃಷ್ಟದೃಷ್ಟಶುಭಸ್ವಪ್ನಂಗಳೆಲ್ಲಮಂ ನಿಜವಲ್ಲಭಂಗೆ ನಿವೇದಿಸುವುದುಮುದಿತ ಪ್ರಮೋದ ಹೃದಯಂ ತತ್ಫಳಂಗಳನಿಂತೆಂದು ವಿದಿತಂ ಮಾಡಿ

ಮ॥ ಪರಿಪೂರ್ಣೇಂದುವಿನಿಂದಖಂಡಧರಣೀನಾಥಂ ನಭಃಶೋಭಿಭಾ
ಸ್ಕರನಿಂ ಸತ್ಪಥವರ್ತಿ ಕಲ್ಪತರುವಿಂದಂ ನಂದನೋದ್ಭಾಸಿ ಸಾ
ಗರದಿಂದಂ ಮಹಿರಕ್ಷಣಕ್ಷಣಭುಜಂ ಶ್ರೀಕಾಂತೆಯಿಂದಂ ನರೇ
ಶ್ವರಪೂಜ್ಯಂ ಸುತನಾದಪಂ ನಿನಗೆ ಪಂಕೇಜಾತಪತ್ರೇಕ್ಷಣೇ ೬೪

ಕಂ॥ ಎನಲೊಡನೆ ಪುಳಕಗರ್ಭಂ
ತನು ಹೃದಯಂ ಹರ್ಷಗರ್ಭಮಾಕ್ಷಣಮಾನಂ
ದನಬಾಷ್ಪಗರ್ಭಮೆಸೆದಿರೆ ೬೫
ಜನಪತಿಸತಿ ವಿನುತಗರ್ಭವತಿ ಸೊಗಯಿಸಿದಳ್

ವ॥ ಅನ್ನೆಗಮತ್ತಲ್

ಕಂ॥ ಅವಸಾನವಿರಸಮನಿತುಂ
ಭವಸುಖಮೆಂದಱಿಪುವಂದದಱುದಿಂಗಳೆ ತ
ದ್ದಿವಿಜಸ್ಥಿತಿಯೆನೆ ಬಾಡಿ
ದುರ್ದುವು ಸೂಡಿದ ಮಾಲೆ ಮಾಸಿತುಟ್ಟ ದುಕೂಲಂ ೬೬

ವ॥ ಆ ಸಮಯದೊಳ್

ಕಂ॥ ಚ್ಯುತಿಯಿಲ್ಲದ ತಾಣಂ ನಿ
ರ್ವೃತಿಯೊಂದೆ ದಲುೞಿದ ತಾಣಮೆನಿತನಿತಱೊಳಂ
ಚ್ಯುತಿ ನಿಶ್ಚಯಮೆಂದಱಿದ
ಚ್ಯುತಸತ್ವಂ ಜೀವತತ್ತ್ವಮಂ ಭಾವಿಸಿದಂ ೬೭

ವ॥ ಅಂತು ಪರಿತ್ಯಕ್ತಶರೀರಭಾರನಾಗಿ ಅಚ್ಯುತಕಲ್ಪದಿಂದಚ್ಯುತೇಂದ್ರಂ ಬಂದು ವಿಜಯಾಂಗನಾಮಹಾದೇವಿಯ ಗರ್ಭದೊಳ್ ನೆಲಸೆ ಗರ್ಭಮಂ ತಾಳ್ದಿ

ಚಂ॥ ಪ್ರಗುಣಚರಿತ್ರಗರ್ಭೆ ಜಿನಭಕ್ತಿಗೆ ಹೃದ್ಯನವಾರ್ಥಗರ್ಭೆ ಸೂ
ಕ್ತಿಗೆ ಜಯಗರ್ಭೆ ವಿಕ್ರಮವಿಭೂತಿಗೆ ಶಶ್ವದುದಾತ್ತಗರ್ಭೆಲ
ಕ್ಷ್ಮಿಗೆ ಬುಧಗರ್ಭೆ ತತ್ಸಭೆಗೆ ಭೂತಳ ಮೋಹನಗರ್ಭೆ ಮಂತ್ರಸಿ
ದ್ಧಿಗೆ ಪರಿಪೂರ್ಣಗರ್ಭವತಿಯೇಂ ಸಮನಾಗಿ ಮನಕ್ಕೆವಂದಳೋ ೬೮

ಕಂ॥ ಕರ್ಪು ಪಯೋಧರಮುಖದೊಳ್
ತೋರ್ಪೊಡೆ ನವರೋಮರಾಜಿ ನವಲೇಖೆಯೊಳಂ
ಕರ್ಪೆಸೆಗಾಸ್ಯೇಂದುವಿನೊಳ್
ತೋರ್ಪುದು ಚೆಲ್ವಿದುವೆ ವಿಸ್ಮಯಂ ನೃಪಸತಿಯಾ ೬೯

ಬಿಡೆ ಕೊರ್ವುವ ಮೊಲೆಯಿಂ ನಡು
ವುಡಿದಪುದತಿ ಭರದಿನೆಂದು ಬಡನಡುವದಱೊಳ್
ಕಡುಪುರುಡಿಂ ಬಳೆದಪುದೀ
ಗಡೆನೆ ಪೊದಟ್ದಿಸೆವುತಿರ್ಪುದಾಕೆಯ ಮಧ್ಯಂ ೭೦

ನತರ್ಗುನ್ನತಿಯಪಯಶಮು
ನ್ನತರ್ಗೀ ಸುತನಿಂದಮಕ್ಕುಮೆಂದಱಿಪುವವೋಲ್
ನತನಾಭಿಯೊಳುನ್ನತಿಯು
ದ್ಧತಕುಚಮುಖದಲ್ಲಿ ಕರ್ಪು ನೆಗಟ್ದುದು ಸತಿಯಾ ೭೧

ವ॥ ಅಂತಾ ಕಾಂತೆಗೆ ಗರ್ಭಚಿಹ್ನಂಗಳುಂ ತೋಱಿಯವಿಧೇಯಧರಾನಾಯಕರುಳ್ಳಟ್ಕೆ ಕಳಿಪಿದನೇಕ ರತ್ನೋಪಾಯನಮಂ ಗಾಯಕಸ್ತ್ರೀಯರ್ಗೆ ಬಾಯಿನಮಂ ಕುಡಲುಂ ಶರಣಾಗತಧರಣೀಕಾಂತಸೀಮಂತಿನೀ ಸಿಂಧೂರಸೀಮಂತರಜಃಪುಂಜದಿಂ ಪದಕಂಜಮಂ

ರಂಜಿಸಲುಂ ಖಚರವಧೂಜನಪ್ರಧಾನೆಯರ್ ಮಾನಸಸೇವಾದತ್ತಾವಧಾನೆಯರ್ ಕಳಹಂಸಯಾನೆಯರೆಂಬಾಖ್ಯಾನಮಂ ನನ್ನಿಮಾಡಿ ತನ್ನನಾಗಳುಮಗಲದೋಲಗಿಸೆ ಲೀಲೆಯೊಳಿರಲುಂ ಪರಿಮಳವಿಳಸದ್ರಮಣಿಯರ್ ಸುಮನಃಸ್ತ್ರೀಯರೆಂಬುದಂ ಸುಮನೋವಿಭೂಷಣಮಂ ತನಗೆ ತುಡಿಸಿ ಪಡೆಯುತ್ತುಂ ಸುತ್ತಲುಮಿರೆ ಚೆಲ್ವುವೆತ್ತಿರಲುಂ ಬಯಸುವಳಂತುಮಲ್ಲದೆಯುಂ

ಚಂ॥ ವರಕರಿಯಾನಕಾಂತೆಯರ ನರ್ತನಮಿರ್ದವೊಲನ್ಯವನ್ಯ ಕುಂ
ಜರಕುಳಯಾನಮಂ ನಯದಿನೀಕ್ಷಿಸಲಂಬುಜನೇತ್ರೆ ಕಂಬುಕಂ
ಧರೆಯರ ಗೇಯನಾದಮಿರೆ ಕಂಬುನಿನಾದಮನಾಲಿಸಲ್ ಮನೋ
ಹರಿ ಬಯಸುತ್ತುಮಿರ್ಪಳೆ ತನೂಭವವೈಭವಸೂಚಕಂಗಳಂ ೭೨

ಕಂ॥ ತರಳತರವಿಮಳಮುಕ್ತಾ
ಭರಣಂ ತನಗೆಸೆಯೆ ಖಡ್ಗದಳಿತಾಹಿತಕುಂ
ಜರಕುಂಭಗಳಿಂ ಮುಕ್ತಾ
ಭರಣಂಗಳನಬಳೆ ತಳೆಯಲೆಂದೆಸೆದಿರ್ಪಳ್ ೭೩

ವ॥ ಅಂತಾ ಕಾಂತೆಯ ಬಯಕೆ ತನ್ನ ಬಯಕೆಯಂ ಕೂಡಿ ರೂಢಿವಡೆಯೆ

ಮ॥ ವಿಳಸತ್ಪಂಕಜನೇತ್ರೆ ಸಚ್ಚರಿತೆ ದಾನೋದ್ಯುಕ್ತೆ ಸಾಧೂಕ್ತಿಯೆಂ
ಬುದಱಿಂದಂ ಪತಿ ಭವ್ಯರಾಜಿ ಪರಿವಾರಂ ಬಂಧುಗಳ್ ಕೂಡಿ ಬೇ
ಡಿದ ಕಾಡೊಳ್ ಮಱಿಕೊಂಡುದೆಂಬ ತೆಱದಿಂ ಸಂತೋಷಮಂ ತಾಳ್ದೆ ತಾ
ಳ್ದಿದಳಂತಾ ಗುಣಗರ್ಭೆ ಗರ್ಭಮನಶೇಷೋರ್ವೀಶಚಕ್ರೇಶನಾ ೭೪

ಕಂ॥ ಕಾಂತೆಗೆ ಪುಂಸವನಂ ಸೀ
ಮಂತೋನ್ನೀಳನಮೆನಿಪ್ಪ ಮಂಗಳವಿಧಿಯಂ
ಸಂತಸದಿಂದಖಿಳಮಹೀ
ಕಾಂತಂ ಮಾಡಿಸಿದನೊಸೆಯೆ ಬಾಂಧವನಿವಹಂ ೭೫

ವ॥ ಅಂತು ನವಮಾಸಂ ಸುರಭಿಮಾಸದಂತೆ ಮಾಕಂದನಂದನಸಂಪತ್ತಿಯುಮಂ ಧಾತ್ರೀಜನಸುಖಸಂಪತ್ತಿಯುಮಂ ಪಡೆಯುತ್ತುಂ ಪರಿಪೂರ್ಣಮಾಗೆ

ಮ॥ ಕುಲಹೇಮಾದ್ರಿಸುರದ್ರುಮಂ ಕುಲಧರಿತ್ರೀಭಾರಧಾತ್ರೀಧರಂ
ಕುಲವಾರಾಶಿಸುಧಾಕರಂ ಕುಲಮರುನ್ಮಾರ್ಗಸ್ಫುರದ್ಭಾಸ್ಕರಂ
ವಿಲಸದ್ದಾನನಿಧಾನನುನ್ನತಗುಣಂ ನೇತ್ರಪ್ರಿಯಾಕಾರನು
ಜ್ವಲತೇಜೋನಿಧಿ ಪುಟ್ಟಿದಂ ಪದನತೋರ್ವೀಚಕ್ರಚಕ್ರಾಧಿಪಂ ೭೬

ವ॥ ಆಗಳ್

ಕಂ॥ ರಸೆ ಗಗನಂ ದಿಶೆಯನಿತುಂ
ಜಸದವೊಲತಿವಿಶದಮಾದುವನಲಂ ತೇಜಃ
ಪ್ರಸರದವೊಲೆಸೆದುದಮಳನ
ಮಿಸುಗುವ ಸುಯ್ಯಂತೆ ಸುರಭಿಯೆನಿಸಿತ್ತನಿಲಂ ೭೭

ಪರಿದು ಕುಮಾರೋತ್ಸವಮಂ
ನಿರವಿಸಿ ರೋಮಾಂಚಕಂಚುಕಮನಿತ್ತವನೀ
ಶ್ವರನಂಗಚಿತ್ತಮಂ ಸಾ
ದರದಿಂ ದಯೆಗೆಯ್ಯೆ ವೃದ್ಧಕಂಚುಕಿ ಪಡೆದಂ ೭೮

ಪರಿಚಾರಕಿಯರುಮತ್ಯಾ
ದರದಿಂ ಪರಿವೆಡೆಯೊಳಮಳಮಣಿಕಂಕಣನೂ
ಪುರರಶನಾರವಮಂತಃ
ಪುರದೊಳ್ ನೆಗೞ್ದಿತ್ತು ರಾಗಸಾಗರದುಲಿವೋಲ್ ೭೯

ಚಂ॥ ಲಲನೆಯರಟ್ಟಿಱಿಂ ತಳಿಯುತಿರ್ಪ ಲಸತ್ಕುಸುಮೋಪಹಾರಮು
ಜ್ವಳನಖಕಾಂತಿಯಂ ಪರಪುವಂತಿರೆ ಸೂಸುವ ಸೌಸವಂ ಮನಂ
ಗೊಳಿಪಧರಾಂಶುವಂ ಕೆದಱುವಂತಿರೆ ನಿರ್ಮಿಸುತಿರ್ಪ ಮೌಕ್ತಿಕಂ
ಗಳ ಕಡೆಗಣ್ಣ ಕಾಂತಿಯನೆ ಬೀಱುವವೋಲಿರೆ ಲೀಲೆವೆತ್ತುದೋ ೮೦

ಕಂ॥ ಮನದೊಳ್ ಗುಡಿಗಟ್ಟಿದುದಂ
ಮನೆಯೊಳ್ ಗುಡಿಗಟ್ಟಿ ಕುಂಕುಮಾಂಬುಗಳಂ ನೆ
ಟ್ಟನೆ ತಳಿದಂಗಣದೊಳ್ ಮನ
ದನುರಾಗಮನಱಿಪಿದತ್ತು ಪುರಜನಮನಿತುಂ ೮೧

ವಿಕ್ರಮಚಕ್ರದಿನಾಸೆಯ
ನಾಕ್ರಮಿಸುಗುಮೆಂದು ಪೇೞ್ವ ತೆಱದಿಂದಾಶಾ
ಚಕ್ರಮನಾತನ ಜನನದೊ
ಳಾಕ್ರಮಿಸಿದುದಖಿಳಮಂಗಳಾನಕನಿನದಂ ೮೨

ಮಂಗಳಪಾಠಕರವಮಂ
ಮಂಗಳಗಾಯಕನಿಕಾಯಗೇಯಸ್ವನಮಂ
ಮಂಗಳತೂರ್ಯಧ್ವನಿಯಂ
ಪೊಂಗಳ ದನಿ ಮಿಕ್ಕುದವನಿಪಂ ಕುಡುವೆಡೆಯೊಳ್ ೮೩

ನಿಧಿಪುರುಷಂ ಪುಟ್ಟುವುದುಂ
ನಿಧಿಗಂಡುದು ನಿಖಿಳಲೋಕಮೆನೆ ಜನನದೊಳ
ತ್ಯಧಿಕೋತ್ಸವದಿಂದ ಧನ
ರ್ಗಧನತೆ ತಲೆದೋಱದಂತು ಪಾರ್ಥಿವನಿತ್ತಂ ೮೪

ಮ॥ ನವರತ್ನಚ್ಛವಿ ಭೂಷಣಾವಳಿಗಳೊಳ್ ಕಸ್ತೂರಿಕಾಚಂದನ
ದ್ರವಕಾಶ್ಮೀರಸಮಗ್ರಗಂಧಮನುಲೇಪವ್ರಾತದೊಳ್ ಮಿಕ್ಕು ತೋ
ರ್ಪವನೀಪಾಳಕಮಂತ್ರಿವರ್ಗವಿಳಸತ್ಸಾಮಂತಸೀಮಂತಿನೀ
ನಿವಹಂ ಬಂದಿರೆ ಕಣ್ಗೆವಂದುದು ಧರಿತ್ರೀಕಾಂತನಂತಃಪುರಂ ೮೫

ವ॥ ಅಂತು ಶೋಭಿಸುವಂತಃಪುರದ ಮನೆಗೆ ಸಕಳಮಕುಟಬದ್ಧರುಂ ಬಾಂಧವರುಂ ಬೆರಸರಸಂ ಬಂದು ಜಾತಕರ್ಮೋತ್ಸವಮನುತ್ಸವದಿಂ ಮಾಡೆ ಮಱುದೆವಸಂ

ಕಂ॥ ಜಳಜಾನನೆ ಕುೞಿವುಗೆ ಕ
ಣ್ಗೊಳಿಸುವ ಖೇಡಕುೞಿವೊಕ್ಕಳೆಂಬಂತೆವೊಲು
ಚ್ಚಳಿಸುವನುರಾಗರಸದೋ
ಕುಳಿಯಾಡಿದುದಾಗಳಖಿಳಬಾಂಧವನಿವಹಂ ೮೬

ಅತಿಚಿತ್ರಂ ಕುೞಿವೊಕ್ಕುಂ
ಕ್ಷಿತಿಪಾಳಕನಗ್ರಮಹಿಷಿ ಮಹಿತಳದೊಳಗು
ನ್ನತಿಯಂ ತಳೆದಳೆನುತ್ತುಂ
ಚತುರಜನಂ ಸ್ತುತಿಯಿಸಿತ್ತು ತನತನಗಾಗಳ್ ೮೭

ವನಿತೆಯರ್ಗೆ ಬೀಱಿದರ್ ತೆಂ
ಗಿನ ಹೋಱಂ ಬೀಱುವಂತೆ ಕಪ್ಪುರವಳಿಕಂ
ತನತನಗೆ ಪಚ್ಚೆಗಪ್ಪುರ
ಮನೆ ಜಳಜಾನನೆಯರಕ್ಕಿಯಂ ಬೀಱುವವೋಲ್ ೮೮

ವಸುಧೇಶಂಗಂ ಬಾಂಧವ
ವಿಸರಕ್ಕಂ ಪರಿಜನಕ್ಕಮೆಯ್ದೆ ಕುಮಾರ
ಪ್ರಸವಂ ಸುಖಫಳಮಂ ಪು
ಟ್ಟಿಸುವುದು ಕರಮುಚಿತಮನಿಸಿ ಜನಿಯಿಸಿತೆನಸುಂ ೮೯

ಎಡೆಗಿಡಿದೆಲ್ಲೆಡೆಗಳೊಳಂ
ಗುಡಿ ನಾನಾರತ್ನತೋರಣಾವಳಿ ಚೆಲ್ವಂ
ಕುಡೆ ಬೇಟ್ಪರ್ಗಭಿಮತಮಂ
ಕುಡೆ ಜನಪತಿ ಸೊಗಯಿಸಿತ್ತು ಜನನೋತ್ಸಾಹಂ ೯೦

ದಶಮದಿನದಂದು ವಿಭು ದಶ
ದಿಶೆಯಂ ಯಶದಂತೆ ತೀವೆ ತೂರ್ಯಧ್ವನಿ ವ
ಜ್ರಶರೀರನೆಂಬುದರ್ಕಸ
ದೃಶವಿಭವಂ ವಜ್ರನಾಭಿನಾಮಮನಿಟ್ಟಂ ೯೧

ವ॥ ಅಂತು ಪೆಸರ್ವಡೆದಾ ಕುಮಾರಂ ಸುಕುಮಾರಶರೀರನುಮಾರಕ್ತ ಚಾರುಚರಣಕರತಳಾಧರಪಲ್ಲವನುಂ ಬಂಧುಜನನಯನಕುಮುದಸೌಂದರ್ಯ ಸಿಂಧುವುಮೆನಿಸಿ ಬಳೆಯುತ್ತುಂ

ಸ್ಖಳನಂ ಪದದೊಳ್ ನೆಗೞ್ವಿನ
ಮಿಳಾಮನೋಹರಿಯನಡಿಗಡಿಗೆ ಪಿಡಿದಪ್ಪ

ಲ್ಕೆಳಸಿದವೋಲಖಿಳಮಹೀ
ತಳಪತಿ ತನುಸಂಭವಂ ತಳರ್ನಡೆ ನಡೆದಂ ೯೨

ಪೊಡೆ ಸೇಡುಗೊಂಡು ತನ್ನಯ
ಪಡೆವುರವಣಿಗಗಿದೆಸೆವ ತೊದಳ್ನುಡಿ ಪೊದಲ್ದಾ
ನುಡಿ ಬಾಳನ ರಂಜಿಪ ತಳ
ರ್ನಡೆ ಪದಮೊಸೆಯಿಸಿತು ತಾಯುಮಂ ತಂದೆಯುಮಂ ೯೩

ನೆಗಟ್ದಹಿತಮಹಿಪರೊಡನೇ
ೞಗಮಂ ಬಂದೇಱ ತನ್ನ ಕೀರ್ತ್ಯಂಗನೆಯೇ
ೞಗಮನೊಸೆದೇಱ ಮಿಗೆ ಬಂ
ಧುಗಳುಮನಾ ತಂದೆಯೊಡನೆ ಪೊರೆಯೇಱಸಿದಂ ೯೪

ವದನಾಬ್ಜದೊಡನೆ ಮಾಣಿಕ
ದೊದವುಳ್ಳರಳೆಲೆಯ ಪುಲಿಯುಗುರ ಕೆಂಜೆಡೆಯ
ಗ್ಗದ ಕಾಂತಿಯ ತಿಂತಿಣಿ ಕೆಂ
ಗದಿರಂತಿರೆ ಬಾಳರವಿಯ ಪೋಲ್ತಂ ಬಾಳಂ ೯೫

ಶೈಶವಕೇಳಿ ಮನಕ್ಕಮೃ
ತಾಶನಸೇವನೆವೊಲೀಯೆ ಸುಖಮಂ ಶಿಶುಗು
ರ್ವೀಶಂ ಮಾಡಿದನನ್ನ
ಪ್ರಾಶನ ಚೌಲೋಪನಯನವಿಧಿಯಂ ಕ್ರಮದಿಂ ೯೬

ವ॥ ಮತ್ತಮಯ್ದನೆಯ ವರ್ಷಮೆಯ್ದುವನಿತರ್ಕೆ ಶುಭಮುಹೂರ್ತದೊಳ್ ರೂಢರಾಜವಿದ್ಯಾಪ್ರೌಢಾಚಾರ್ಯವರ್ಯರಿಂ ಶಬ್ದಶಾಸ್ತ್ರಾದ್ಯರ್ಥಶಾಸ್ತ್ರಂಗಳುಮಂ ಮುಕ್ತಾಮುಕ್ತ ಮುಕ್ತಕರ ಮುಕ್ತಯಂತ್ರ ಮುಕ್ತಮಂತ್ರ ಮುಕ್ತಪ್ರಭೇದ ವಿವಿಧ ಶಸ್ತ್ರವಿದ್ಯೆಗಳುಮಂ ಸೂಕರಾಶ್ವವ್ಯಾಳಶುಂಡಾಳಶಿಕ್ಷಣಾಕ್ಷೂಣರೂಢವಿದ್ಯೆಗಳುಮಂ ಶಿಕ್ಷಿಸುವಂತು ನಿಯೋಜಿಸೆ

ಕಂ॥ ಒಂದುಕೊಡದಮೃತಮಂ ಮ
ತ್ತೊಂದುಕೊಡದೊಳೆಱವ ಮಾೞ್ಕೆಯಾಯ್ತೆನೆ ವಿಬುಧರ್
ಸಂದೇಹಸ್ಥಿತಿಯಿಂ ಕ
ಲ್ತಂ ದುರ್ಗಮಶಾಸ್ತ್ರಮೆಲ್ಲಮಂ ಗುರುಮುಖದಿಂ ೯೭

ವಿಶದಪ್ರಜ್ಞಂಗೆ ಚತು
ರ್ದಶವಿದ್ಯಾರತ್ನಮೆಯ್ದೆ ಸಮನಿಸಿತು ಚತು
ರ್ದಶರತ್ನಮುಮಿಾ ತೆಱದಸ
ದೃಶವಿಭವಂಗಕ್ಕುಮೆಂಬುದಂ ಸೂಚಿಪವೋಲ್ ೯೮

ಚತುರಾಸ್ಯನತುಳಮತಿಯಿಂ
ವಿತತ ಚತುಃಷಷ್ಟಿಕಳೆಯನವಯವದಿಂದ

ನ್ವಿತಮೆನಿಸೆ ಕಲ್ತು ನೆಗಳ್ದಿಂ
ಚತುರ್ಗುಣಂ ಸಕಳರಾಜನೀತಿಯೊಳಾತಂ ೯೯

ಚಂಡಿಕೆ ಭೃಗು ಬೇತಾಳಂ
ಚಂಡತೆಯಿಂ ಕೆಯ್ದುವಿಡಿದು ನಿಂದಾಂತೊಡೆ ಮಾ
ರ್ಕೊಂಡು ಗೆಲಲ್ನೆಱೆವೆಡೆಗೆಡೆ
ಗಂಡಿಕೆಯಾಚಾರ್ಯನೆನಿಸಿದಂ ಬಿನ್ನಣದಿಂ ೧೦೦

ತನುಶಸ್ತ್ರಕ್ರಮದಿಂ ಬ
ಲ್ಪೆನಿಪ್ಪ ಮನಮರ್ಥಶಾಸ್ತ್ರನಿಯತಶ್ರಮದಿಂ
ದನುಪಮವಿವೇಕದಿಂ ನೆ
ಟ್ಟನೆ ತಾಳ್ದಿರೆ ಶಸ್ತ್ರಶಾಸ್ತ್ರ ಪರಿಣತನಾದಂ ೧೦೧

ಚಂ॥ ಪ್ರವಿಮಳವಿದ್ಯೆ ಮೂರ್ತಿ ತನಗೆಂಬರಮಾತನೆ ನನ್ನಿಮಾಡುವಂ
ತವಯವವೃದ್ಧಿಯೊಳ್ ಬಳೆಯೆ ವಿದ್ಯೆಗಳುಂ ಶಶಿಯಂದದಿಂದೆ ಶೈ
ಶವದಿನಗಲ್ದು ಷೋಡಶಕಳಾಪರಿಪೂರ್ಣತೆಯಂ ಕುಮಾರನೆ
ಯ್ದುವುದುಮಶೇಷಕಾಂತೆಯರ್ಗೆ ಸಜ್ಜನಸಂತತಿಗಾಯ್ತು ಸಂತಸಂ ೧೦೨

ಸುದತಿಯರಿಗೆ ತೋಷಂ ರಿಪು
ಹೃದಯಕ್ಕೆ ಭಯಂ ಧನಾರ್ಥಿಗತ್ಯುತ್ಸವಮೊ
ರ್ಮೊದಲೆ ಬಳೆವಂತು ಬಳೆದಂ
ಮದನಾಭಂ ವಜ್ರನಾಭಿಯಪಗತಲೋಭಂ ೧೦೩

ಮ॥ ಲಲಿತಾಸ್ಯಂ ಶಶಿಯಂ ಪಳಂಚಲೆವ ಚೆಲ್ವಂ ತಾಳ್ದಿತೀ ರಾಜಮಂ
ಡಳಮಂ ಭೂಪತಿ ಧಿಕ್ಕರಿಪ್ಪೆಸಕಮಂ ಪೇೞ್ವಂತೆ ಹಸ್ತಂ ದಿಶಾ
ಖಿಳಶುಂಡಾಳಕರಕ್ಕೆ ಮಚ್ಚರಿಸಿ ನೀಳ್ಪಂ ತಾಳ್ದಿತೀ ವಿಶ್ವಭೂ
ತಳಮಂ ತಾನಸಹಾಯವೃತ್ತಿಯೊಳೆ ತಾಳ್ದಿರ್ಪೇಱ್ಗೆಯಂ ಪೇೞ್ವವೋಲ್ ೧೦೪

ಕಂ॥ ವಾರವಧೂಮದಹಾರಕು
ಮಾರನ ಸುಕುಮಾರಬಾಹುದಂಡಂ ಮಕರಾ
ಧಾರಕರತಳಪತಾಕಂ
ಮಾರನ ವಿಜಯಧ್ವಜೋರುದಂಡಮೆನಿಕ್ಕುಂ ೧೦೫

ಶ್ರೀರಮಣಿಯ ಸುರುಚಿರಕಾ
ಶ್ಮೀರಾರುಣಕಠಿನಕುಚದ ಸಂಸ್ಪರ್ಶನದಿಂ
ದಾರಕ್ತತೆ ಕಠಿನತೆ ವಿ
ಸ್ತಾರಿಸಿತೆನೆ ನೃಪಕುಮಾರ ಕರತಳಮೆಸೆಗುಂ ೧೦೬

ಅಸದಳಮೆನಿಸುವ ತೇಜಃ
ಪ್ರಸರಮನುಜ್ಜ್ವಳಿಪ ಕೀರ್ತಿಯಂ ಲೋಕದೊಳೀ

ಕ್ಷಿಸೆ ಪಸರಿಪುದಂ ಕುವರನ
ಕಿಸುಸೆರೆವರೆದಿರ್ದ ಲೋಚನಂ ಸೂಚಿಸುಗುಂ ೧೦೭

ಧರಣೀಚಕ್ರಂ ಪದಪಂ
ಕರುಹಮನೀ ತೆಱದಿನಗಲದೋಲಗಿಸುವುದಂ
ನಿರವಿಸುತಿರ್ದುದು ನೃಪಸುತ
ಚರಣಾಂಬುಜಚಾರುಚಕ್ರಚಿಹ್ನವಿಳಾಸಂ ೧೦೮

ಲಲನಾಸಹಸ್ರಕುಚಮಂ
ಡಳಕುಳಮಂ ಸಕಳಸಾರ್ವಭೌಮಶ್ರೀಯಂ
ತಳೆವ ನೃಪಾಲನ ವಕ್ಷ
ಸ್ಥಳದ ವಿಶಾಲತೆಯನಾವವಂ ನೆಱೆ ಪೊಗೞ್ವಂ ೧೦೯

ವ॥ ಅಂತು ಸಂಸಾರಸುಖಾನುಭವನಜೀವನಮಾದ ಯೌವನಂ ಬಳೆಯೆ ಬಳೆದ ನಿಜಕುಮಾರನಕ್ಷೂಣ ವಿಜಯಲಕ್ಷ್ಮೀವಿಳಾಸವಿಹರಣೋಚಿತ ವಿಶಾಳ ಕೇಳೀಶೈಳಮೆನಿಪ ದಕ್ಷಿಣಭುಜಾದಂಡಮಂ ಕಂಡು ಪಲದೆವಸಕ್ಕಂ ನಿನ್ನನೆನ್ನ ತೋಳ್ವಲಕ್ಕೆ ನೆರವಂ ಪಡೆದನೆಂಬ ಸಂತೋಷದಿಂ ತಿಂತಿಣಿಯನಾಂತು ವಜ್ರವೀರ್ಯಂ ಸಮಸ್ತ ಸಾಮಂತಮಂತ್ರಿಮಂಡಲಮಂ ಬರಿಸಿ

ಮ॥ ವಿವಿಧಾತೋದ್ಯನಿನಾದಮಾವರಿಸೆ ಧಾತ್ರೀವ್ಯೋಮದಿಗ್ಭಾಗಮಂ
ನವಮಾಣಿಕ್ಯಮಣಿಪ್ರತಾನಸುವಿತಾನೋದಂಶು ಮಧ್ಯಾಹ್ನಭಾ
ನುವ ಬಿಂಬಕ್ಕುದಯಾರ್ಕಬಿಂಬತೆಯ ಚೆಲ್ವಂ ಬೀಱೆ ಕೊಟ್ಟಂ ಮಹೀ
ಶವರಂ ತನ್ನ ಸುತಂಗೆ ಚಾರುಯುವರಾಜ್ಯಪ್ರಾಜ್ಯಸಂಪತ್ತಿಯಂ ೧೧೦

ವ॥ ಅಂತು ವಜ್ರನಾಭಿಯುವರಾಜಂ ನೃಪಸಮಾಜಮಂ ನಿಜಾಜ್ಞಾವಿಧೇಯತೆಗೆ ಸಲಿಸಿ ತಾನುಂ ತನ್ನ ತಂದೆಯಾಜ್ಞೆಯೆಂಬ ವಜ್ರಪ್ರಾಕಾರಾಂಕಮಾಳದೊಳ್ ಸುಖದಿನಿರೆಯಿರೆ

ಉ॥ ಅಂತು ನಿರಂತರೋಪಚಯದಿಂ ತನು ಯೌವನಮಂ ಲಸತ್ಕಳಾ
ಸಂತತಿ ಭಾವಕತ್ವಮನುದಾರಮುದಾರಯಶೋವಿಳಾಸಮಂ
ಸಂತತಮಿಂತಳಂಕರಿಸೆ ವಿಕ್ರಮಲಕ್ಷ್ಮಿಗೆ ಚಕ್ರರತ್ನಮೋ
ರಂತನುಕೂಲಮಾಗೊಗೆದುದಾಯುಧಶಾಲೆಯೊಳಾ ನೃಪಾಲನಾ ೧೧೧

ವ॥ ಅಂತು ಚಕ್ರರತ್ನಂ ತನ್ನಗಣ್ಯ ಪುಣ್ಯೋದಯಮಂ ನೆಲಕ್ಕೆ ಜಲಕ್ಕನಱಿಪುತ್ತ ಮುದಯಂಗೆಯ್ವುದುಮದನಾಯುಧಾಗಾರ ನಿಯೋಗಿ ಬಂದು ಬಿನ್ನಪಿಸೆ ಪ್ರಸನ್ನವದನಾರ ವಿಂದನಾಗಿ ಕುಮಾರನ ಮೊಗಮಂ ನೋಡಿ

ಮ.ಸ್ರ॥ ನಿನಗೇಕಚ್ಛತ್ರಮಾಯ್ತುರ್ವರೆ ಜಿನಪದರಾಜೀವಸೇವಾಸುರೇಂದ್ರಾ
ವನಿಜಂ ಪ್ರಾಗ್ಜನ್ಮಸಂವರ್ಧಿತಮದು ಸಫಳಂ ನೋೞ್ಪೊಡಿಂದಾದುದಿನ್ನುಂ

ತನುಜಾತ ಪ್ರೀತಿಯಿಂ ಪೆರ್ಚಿಪುದದನೆ ಜಗನ್ಮಂಗಳಂ ಮುಖ್ಯಮಲ್ಲಿ
ನ್ನೆನಸುಂ ಬೇಱುಂಟೆ ಪೇೞಿಂದೆನೆ ಗುರು ಮನದೊಳ್ ಕೂರ್ತು ಕೆಯ್ಕೊಂಡನಾಗಳ್
೧೧೨

ವ॥ ಅಂತು ನಿಜಗುರೂಪದೇಶಂ ಸಹಕಾರಭೂರುಹಕ್ಕೆ ಮಧುಸಮಯಪವನ ಸಂಸ್ಪರ್ಶದಂತುತ್ಸುಕಕಳಿಕಾವಿಶೇಷಮಂ ಪಡೆಯೆ ಚಕ್ರವರ್ತಿನಿರ್ವರ್ತಿತಮಪ್ಪ ಮಹಾಮಹಿಮೆಗಳಂ ಸಮಸ್ತ ಚೈತ್ಯಾಲಯಂಗಳೊಳ್ ನಿರ್ವರ್ತಿಸಿ

ಕಂ॥ ಉದ್ಧತರಾಜ್ಯಾಕರ್ಷಣ
ಸಿದ್ಧಿಗೆ ನಿರ್ಮಳಯಶೋವಶೀಕರಣಕ್ಕಾ
ಯುದ್ಧಾರ್ಥಿ ಮಾರಣಕ್ಕಂ
ದುದ್ಧರಿಸಿದ ಸಿದ್ಧಚಕ್ರದಂತಿರೆ ಚಕ್ರಂ ೧೧೩

ಮ.ಸ್ರ॥ ಅವಿಧೇಯೋಚ್ಚಾವಲೇಪಾಪ್ರತಿಮತಿಮಿರವಿಚ್ಛೇದಕಾಚ್ಚಾಂಶುಚಕ್ರ
ಕ್ಕವತಂಸಂ ಲೋಕಪಾಳರ್ಗೆನಿಸೆ ವಿವಿಧಮಾಂಗಲ್ಯತೂರ್ಯಪ್ರಣಾದಂ
ಧವಳಾಬ್ಜವ್ರಾತದಿಂದರ್ಚಿಸಿ ರುಚಿರುಚಿತಾನರ್ಘ್ಯರತ್ನಂಗಳಿಂದಂ
ರವಿಗೀವಂತರ್ಘ್ಯಮಿತ್ತಂ ವಿಬುಧಜನಮನಃಪದ್ಮಿನೀಪದ್ಮಮಿತ್ರಂ ೧೧೪

ಗದ್ಯ

ಇದು ವಿದಿತ ವಿಬುಧಲೋಕನಾಯಕಾಭಿಪೂಜ್ಯ ವಾಸುಪೂಜ್ಯಜಿನಮುನಿ ಪ್ರಸಾದಾಸಾದಿತ ನಿರ್ಮಳಧರ್ಮವಿನುತ ವಿನೇಯಜನವನಜವನವಿಳಸಿತ ಕವಿಕುಳತಿಳಕಪ್ರಣೂತ ಪಾರ್ಶ್ವನಾಥಪ್ರಣೀತಮಪ್ಪ ಪಾರ್ಶ್ವನಾಥಚರಿತಪುರಾಣದೊಳ್ ವಜ್ರನಾಭಿನಾಮಾಭಿರಾಮ ಚಕ್ರಧರ ಚಕ್ರಾಭ್ಯುದಯವರ್ಣನಂ ಸಪ್ತಮಾಶ್ವಾಸಂ

ಅಷ್ಟಮಾಶ್ವಾಸಂ

ಕಂ॥ ಶ್ರೀಚಕ್ರರತ್ನಮಂ ಬಾ
ಹಾಚಳ ಬಾಳಾರ್ಕವಿಭವಮಂ ಪೂಜಿಸಿ ಧಾ
ತ್ರೀಚಂದನರಸಶೀತಳ
ವಾಚಂ ಸಂತಸಮನಾಂತು ಕವಿಕುಲತಿಳಕಂ ೧

ವ॥ ಅಂತು ಸಂತಸಮನಾಂತಿರೆ

ಕಂ॥ ಜನಿಯಿಸೆ ಸುದರ್ಶನಂ ಸಂ
ಜನಿಯಿಕುಮಖಿಳೇಪ್ಸಿತಾರ್ಥಮೆಂದಱೆಪುವವೋಲ್
ಜನಿಯಿಸಿದುವು ಚಕ್ರಧರಂ
ಗನಿತುಂ ಮೇಲಾದ ರತ್ನನಿವಹಂ ಕ್ರಮದಿಂ ೨

ಮಣಿ ವರಚಿಂತಾಮಣಿ ಕಾ
ಕಿಣಿ ಚಿಂತಾಜನನಿ ಚರ್ಮರತ್ನಂ ಜಳರ
ಕ್ಷಣಕಾರಣ ವಜ್ರಮಯಂ
ರಣರತಮದಭೇದಚಂಡವೇಗಂ ದಂಡಂ ೩

ಅಸಿ ಸೌನಂದಕಮಂಗನೆ
ಬಿಸಜಾಕ್ಷಿ ಸುಭದ್ರೆ ಭದ್ರಮುಖಿನಖಿಳಕಳಾ
ವಸತಂ ತಕ್ಷಕರತ್ನಂ
ಪ್ರಸನ್ನಮತಿ ಕಾಮವೃಷ್ಟಿ ಗೃಹಪತಿರತ್ನಂ ೪

ಗಜರತ್ನಂ ತುಂಗತೆಯಿಂ
ನಿಜಮಸ್ತಕವರ್ತಿಗಳ್ಗೆ ಖೇಚರಪದಮಂ
ಸೃಜಯಿಸುವುದಱಿಂ ತನಗದು
ವಿಜಯಾಚಳಮೆಂಬ ನಾಮಮನ್ವಿತಮೆನಿಕುಂ ೫

ಹಯರತ್ನಂ ಪವನಂಜಯ
ಮಯೋಧ್ಯನಾಮಂ ಚಮೂಪ ರತ್ನಂ ನಯಸಂ
ಚಯಬುದ್ಧಿಸಾಗರಂ ಸ
ತ್ಕ್ರಿಯಾವಿಧಂ ಪತಿಹಿತಂ ಪುರೋಹಿತರತ್ನಂ ೬

ಛತ್ರಂ ಸೂರ್ಯಪ್ರಭಮತಿ
ಚಿತ್ರಮನೊದವಿಸುಗುಮಖಿಳ ಕುವಳಯವಿಳಸ
ನ್ನೇತ್ರಾನಂದಕರಂ ಸುಚ
ರಿತ್ರೋರ್ಜಿತರಾಜನುದಯದೊಳ್ ರಾಜಿಸುಗುಂ ೭

ವೃತ್ತಘನಸ್ತನೆಯರ್ ತೊಂ
ಭತ್ತಱುಸಾಸಿರಮದಿರ್ದೊಡಂ ಸ್ತ್ರೀರತ್ನಂ
ಚಿತ್ತಜಸುಖಮಂ ಚಕ್ರಿಗೆ
ಬಿತ್ತರಿಕುಂ ಶಶಿವೊಲುಡುಶತಂ ನೆರೆದಿರೆಯುಂ ೮

ಆ ರಾಜನ ತೇಜೋವಿ
ಸ್ತಾರಂ ತಾನೆನಿಪ ಚಕ್ರಧಾರೆ ತೊಡರ್ದಂ
ದಾರಂ ಪರಿಭವಿಸದೊ ಕದ
ನಾರಂಭಕರೆನಿಪ ವೈರಿಭೂಪಾಳಕರಂ ೯

ವ॥ ಅಂತನ್ವರ್ಥನಾಮಮಂ ಪೆತ್ತುದಯಿಸಿದ ಚಕ್ರರತ್ನಂ ಮೊದಲಾದ ಚತುರ್ದಶ ಜೀವಾಜೀವರತ್ನಂಗಳಂ ಯಥಾಕ್ರಮದಿಂ ನೃಪಚೂಡಾರತ್ನಂ ಪೂಜಿಸಿ ರಾಜಲೀಲೆಯಿಂ ವಿರಾಜಿಸುತ್ತುಮಿರೆ ನಿಜದಿಗ್ವಿಜಯಪ್ರಯಾಣಶ್ರೀಯನನುಕರಿಸಿ

ಮ॥ ನಿರುತಂ ಸೋಗೆಯ ಸೋಗೆ ಸೀಗುರಿಯವೋಲ್ ಚೆಲ್ವಪ್ಪಿನಂ ಮೇಘಡಂ
ಬರಮಿಂಬಾಗಿರೆ ಮುಂದೆ ವಾಹಿನಿ ಪೊದಟ್ಟೊಪ್ಪಿರ್ಪಿನಂ ಖಟ್ಗಿದಂ
ತಿರೆ ಮಿಂಚುಟ್ಕಿಸೆ ಮಿಂಚಿ ತೀವ್ರಕರರಾಜಸ್ಫುರತ್ತೇಜದೆ
ಟ್ತಿರಮಂ ಭಂಗಿಸಿ ಪೆಂಪುವೆತ್ತನಿಳೆಯೊಳ್ ಕಾರಂಬ ಭೂಪಾಳಕಂ ೧೦

ವ॥ ಅಂತುಮಲ್ಲದೆ

ಮ॥ ಸಸಿ ಜಾಗಂ ಕುಡುಮಿಂಚು ಸೊನ್ನಲಿಗೆ ಚಿತ್ರಾಭ್ರಾಳಿ ಭೃಂಗಾರಮಾ
ಗಸಮುತ್ಸಾಹಮಯೂರನಾಟ್ಯನಟನಪ್ರಾರಂಭಮೇಘಸ್ವನಂ
ನಿಸದಂ ಮಂಗಳತೂರ್ಯಮಾಗೆ ಸುರಚಾಪಂ ಬಾಸಿಗಂಬೋಲ್ ವಿರಾ
ಜಿಸೆ ಕಾರ್ಗಾಲಮಿಳಾ ವಧೂವರನ ಪೋಲ್ತೆಂ ಲೀಲೆಯಂ ತಾಳ್ದಿತೋ ೧೧

ಕಂ॥ ಚಾದಗೆಯುತ್ಕಂಠತೆಗೊಳ
ಗಾದುದು ವಿರಹಿಗಳ ತೆಱದೆ ಕಡವಲರ್ದುದು ನೃ
ತ್ಯಾದರಶಿಖಿಹೃದಯದವೋ
ಲೂದೆ ಜನಾಹ್ಲಾದಕಾರಿ ಪಶ್ಚಿಮಪವನಂ ೧೨

ಚಂ॥ ಅತಿಶಯಸಿಂಹಪೀಠ ಚಮರೀಚಮರೀಜವಿಭಾಸಿ ಭೂಮಿಭೃ
ತ್ಪತಿಗೆ ನಿದಾಘಸಂಜನಿತಘರ್ಮಮನಾಜಿಪ ಮಜ್ಜನಾಂಬುಸಂ
ಭೃತನವನೀಳರತ್ನ ಕಳಶಂಗಳಿವೆಂಬಿನಮುನ್ನತಾಭ್ರಸಂ
ಗತಿ ಬಳಸಿರ್ದು ಕಣ್ಗೊಳಿಸುತಿರ್ದುವು ಶೈಲವಿಶಾಳವಪ್ರದೊಳ್ ೧೩

ಮ॥ ಪಗಲರ್ಕಂ ವಿಧು ರಾತ್ರಿಯೊಳ್ ನಿಜಕರವ್ರಾತಂಗಳಿಂ ತಮ್ಮನಾ
ವಗಮೆಟ್ಟಿಟ್ಟದರೆಂದು ಸೊಂದು ಮುಳಿಸಿಂದಾಯಿರ್ವರಂ ಗೆಲ್ವ ಬ
ಲ್ವಗೆಯಿಂ ತೀವ್ರತಮಂಗಳಂಬುದಸಮಗ್ರಾಕಾರಮಂ ಪೆತ್ತವೋಲ್
ಮುಗಿಲಂ ಕಾರ್ಮುಗಿಲೇಟ್ಟಿಗೆ ಪರ್ವಿದುವಗುರ್ವಿಂ ಕೊರ್ವಿ ಕಾರ್ಗಾಲದೊಳ್ ೧೪

ಕಂ॥ ಪ್ರಿಯಮೆನಿಪ ಮೇಘವೆಟ್ಟಿರೆ
ನಯನಯುಗಂ ನೆಱೆಯದೆಂದು ನೋಡಲ್ ಪಲವುಂ
ನಯನಂಗಳನಾಂತಂತಿರೆ
ಮಯೂರಿ ನಲಿದತ್ತು ಕೆದಱೆ ಕಣ್ಬೀಲಿಗಳಂ ೧೫

ಮ॥ ಸುರಚಾಪಂ ಸ್ಮರಚಾಪಮೂರ್ಜಿತ ಶರಾಸಾರಂ ಶರಾಸಾರಮ
ಭ್ರರವಂ ಜ್ಯಾರವಮೆಯ್ದೆ ಸಂಚಳಿಪ ಮಿಂಚುಗ್ರಾಸಿ ದಂಭೋಳಿ ಭಾ
ಸುರತೇಜಂ ಶಿಖಿನರ್ತನಂ ಝಷಪತಾಕಾನರ್ತನಂ ತನ್ನೊಳಾ
ಗಿರೆ ಕಾಮಿಪ್ರಕರಂ ಕರಂ ಬೆದಱೆದತ್ತಭ್ರಾಗಮೋದ್ಯೋಗದೊಳ್ ೧೬

ಪರಿಗೊಂಡತ್ತು ಕಲಂಕುತುಂ ಕುಜುವಮಂ ಪೂಜ್ದಿತ್ತು ತೀರಕ್ಕೆ ತಾಂ
ಸರಿಯಾಗುತ್ತೆರಡುಂ ತಟಂಗಳನೆ ಮಾಱುತ್ತಂಬಿಗರ್ ನಾವೆಯಂ
ಭರದಿಂದಿಕ್ಕದ ಮಾಟ್ಕೆಯಾಯ್ತು ನದಿಯೆಂದೆಂಬನ್ನೆಗಂ ಧಾತ್ರಿ ಭೋ
ರ್ಗರೆದೆತ್ತಂ ಕಱೆದತ್ತು ಕಾರಮಟಿ ಝುಂಝಾಮಾರುತಪ್ರೇರಿತಂ ೧೭

ಕಂ॥ ಜಡಹೃದಯರನಾಶ್ರಯಿಸಿ
ರ್ದೊಡೆ ಮೂಲೋಚ್ಛಿತ್ತಿಯಪ್ಪುದೆಂಬಿನೆಗಮೆರ
ಲ್ತಡಿವಿಡಿದಿರ್ದ ಮರಂಗಳ
ನಡಿಗೆಡಪಿದುವಿರದೆ ಪರಿವ ಪೂರದೆ ನದಿಗಳ್ ೧೮

ಪಿರಿದೆನಿಸಿ ಪುಗುವ ಪೊನಲಿಂ
ಸರೋವರಂ ಕದಡೆ ಮಾನಸಕ್ಕೆ ಮರಾಳೋ
ತ್ಕರಮಿರದೆ ಪೋಯ್ತು ವಿನುತಾ
ಚರಣಯುತಂ ಮಳಿನಹೃದಯರಂ ಪೊರ್ದುವರೇ ೧೯

ಚಂ॥ ಸಿರಿ ಪರಿಪಾಳಿಸಲ್ ನೆಱೆವ ಬುದ್ಧಿಯನುಳ್ಳ ನರಂಗೆ ಸಾರೆ ಸು
ಸ್ಥಿರತೆಯಿನಿರ್ಕುಮಲ್ಲದೊಡೆ ನಿಲ್ಲದೆ ನೆಟ್ಟನೆ ಪೋಕುಮೆಂಬುದಂ
ನಿರವಿಸುವಂತೆ ತೀವಿದುವು ಪೆರ್ಗೆಱೆ ಕೋಡಿಯನುಳ್ಳವಿಲ್ಲದಿ
ರ್ಪರಗೆಱೆ ಪೂರದಿಂದೊಡೆದುಪೋದುವದಾಗಳೆ ಮೇಘಕಾಲದೊಳ್ ೨೦

ಕಂ॥ ಪದನಱೆದೀವ ಬೊಜಂಗಂ
ಸುದತಿಯನನುರಾಗಸಂಪದದಿನೊಂದಿಪವೋಲ್
ಪದವಟಿ ಸಸ್ಯಂಗಳ ಸಂ
ಪದದಿಂದೊಂದಿಸಿತಗುರ್ವಿನಿಂದುರ್ವರೆಯಂ ೨೧

ವ॥ ಅಂತು ಮಹೀಕಾಂತೆ ಸಕಳಮಹೀಕಾಂತನ ತೋಳೊಳಿರ್ದು ತಳೆದ ಪುಳಕಂಗಳಂತಳುಂಬಮಾಗಿ ಬೆಳೆದ ಸಸ್ಯಂಗಳಿಂ ಮನಂಗೊಳಿಸುತ್ತುಮಿರೆ

ಚಂ॥ ದಿವಸಪತಿಪ್ರಸಾದದೊದವಿಂ ದಿವಸಾಂಗನೆಯಾನನಾಬ್ಜದಂ
ತವಿರಳಮಂಬುಜಾಳಿಯಲರ್ದೊಪ್ಪಿದುವಾ ಸತಿಯಾಶಯಪ್ರಶೋ
ಭೆವೊಲೆ ಜಳಾಶಯಂ ತಿಳಿದುವಾ ವಧು ವುಟ್ಟಮಳಾಂಬರಪ್ರಲೀ
ಲೆವೊಲಮಳಾಂಬರಂ ಬಗೆಗೆವಂದುದು ರುಂದ್ರಶರತ್ಪ್ರವೇಶದೊಳ್ ೨೨

ಮ॥ ನೆಗಟ್ದಂಭೋನಿಧಿ ನೀರುಮಂ ನೆಱೆಯೆ ತಂದೀಗಳ್ ಸುಧಾವಾರ್ಧಿವಾ
ರಗಳಂ ಪೇಱೆಯೆ ತಂದುವೆಂದೆನಿಸಿ ಕಣ್ಗಿಂಬಾಗಿ ಶುಭ್ರಾಭ್ರಮಾ
ಲೆಗಳೊಪ್ಪಿರ್ದುವು ಮಿತ್ರನಾತ್ಮಕರದಿಂ ಶ್ರೀಮಚ್ಚರಚ್ಚಕ್ರಿಗಾ
ವಗಮರ್ಘ್ಯಂಗುಡಲಿಂದುಕಾಂತಕಳಶಾನೀಕಂಗಳಂ ಪೊತ್ತವೋಲ್ ೨೩

ಕಂ॥ ಗಡಣದಿನದೆ ಮಾನಸದಿಂ
ನಡೆತರ್ಪುದು ರಾಜಹಂಸತತಿ ನಯದಿನದ
ಕ್ಕೆಡೆಗಿಱಿದಿರದೆತ್ತಿದ ಬೆ
ಳ್ಗೊಡೆಗಳಿವೆನೆ ಬಿಳಿಯ ಜಳದಮೊಗೆದುವು ನಭದೊಳ್ ೨೪

ಜಾದಿಯ ತನಿಗಂಪುಂ ಕೆಂ
ಜಾದಿಯ ತನಿಗಂಪುಮೆತ್ತಲುಂ ಪಸರಿಸೆ ಬೆ
ಳ್ಪಾದಂ ಚಂದ್ರಿಕೆಯೊಳೆ ರವಿ
ಪಾದಂ ಚಂಡತೆಯೊಳೊಂದಿ ನೆಗಟ್ದುದು ಶರದಂ ೨೫

ಶರದಂ ಬರೆ ಮದನೇಭಂ
ಶರದಂ ತಾವೆನಿಸಿ ಮಾಣ್ದುದೇಂ ತುಂಬಿಯ ಮೆ
ಲ್ಲರದಂದಮರಲ ಸರಲ ಪ
ಸರದಂದಂ ವಿರಹಿಗೆನಿಸಿತಲರ್ದುತ್ಪಳದೊಳ್ ೨೬

ಮುದಮುದಿತ ಪರಿಮಳಂ ರುತಿ
ಮದಾಳಿಯುಲಿ ಕುಂಭಮೆನಿಸೆ ಕುಸುಮಸ್ತಬಕಂ
ಮದನೇಭಮೆಂದೆ ಸಪ್ತ
ಚ್ಛದಕ್ಕೆ ಬೆದಱಿದುದು ವಿರಹಿ ಶರದಾಗಮದೊಳ್ ೨೭

ಚಂ॥ ದ್ಯುಮಣಿಗೆ ತೇಜಮುಜ್ಜಳಿಸೆ ಪಜ್ಜಳಿಕುಂ ದ್ಯುತಿಳಂ ಸರೋಜಷಂ
ಡಮುಮಲರ್ದೊಪ್ಪೆ ನಿರ್ಮಳತೆಯಂ ತಳೆಗುಂ ಬಳಬಾಶತಾಳಿಯು
ಕ್ತಮ ವಲಮೆಂದು ಬಂದು ಶರದಾಗಮದೊಳ್ ಪೆಜರಂ ಪ್ರಭಾವಿಸು
ತ್ತಮ ತಮಗೊಳ್ಳನಾರ್ಜಿಸುವರೇಜೆಗ್ಗಿಯೊಳಾಳ್ಗಳ ಕೂಡೆ ರಂಜಿಸಲ್ ೨೮

ಉ॥ ಚಾರುತರೇಂದುವಕ್ತ್ರೆ ಚಪಳೇಕ್ಷಣೆ ಹಂಸವಿಳಾಸಯಾನೆ ನೀ
ಹಾರಕರ ಪ್ರಭಾಂಬರೆ ಸರೋವಿಮಳಾಶಯೆ ತಾರತಾರಕಾ

ಹಾರಮರೀಚಿ ಪಾಂಡುರಪಯೋಧರೆ ಕಾಶಲತಾಂತಕಾಂತಿ ವಿ
ಸ್ತಾರಸಿತಪ್ರಸಾಧನೆವೊಲೇಂ ಶರದಂಗನೆ ಕಣ್ಗೆವಂದಳೋ ೨೯

ವ॥ ಅಂತು ಬಂದ ಶಾರದಲಕ್ಷ್ಮಿಯೆ ವಿಜಯಲಕ್ಷ್ಮಿಯು ತನಗೋತು ಕಳಿಪಿದ ದೂತಿಯಾಗೆ ವಜ್ರನಾಭಿ ದಿಗ್ವಿಜಯೋದ್ಯೋಗಮಂ ಮನದೆಗೊಂಡನೇಕ ಮೌಹೂರ್ತಿಕ ಸಂಕೀರ್ತಿತ ಶುಭಮುಹೂರ್ತದೊಳ್ ದಿಗ್ವಿಜಯಪ್ರಯಾಣಭೇರಿಯಂ ಪೊಯ್ಸೆ

ಕಂ॥ ನವಖಂಡಾವನಿಯೊಳಗಿ
ರ್ಪವನೀಶರ ಹೃದಯಮೆಯ್ದೆ ಶತಖಂಡಮೆನಿ
ಪ್ಪವೊಲೊಡೆಯೆ ಭೂರಿಭೇರೀ
ರವಮೊಗೆದುದು ಚಕ್ರಿವಿಜಯಯಾತ್ರೋತ್ಸವದೊಳ್ ೩೦

ವ॥ ಆಗಳನೂನಸನ್ಮಾನಂಬೆರಸಿದ ದಾನಗುಣಮಂ ಪಡೆವ ಬಯಕೆಯಿಂ ಸನ್ಮಾನ ದಾನವಿನೋದಿಯಂ ಮೆಯ್ವೞಿಯಿಂದಾರಾಧಿಸಿದಪುದೆಂಬಂತಿರೆ ಹರಿಚಂದನರಸದಿನಣ್ಪು ವಡೆವಿನಮಣ್ಪನಿಕ್ಕಿ ಶೃಂಗಾರಗಂಗಾನದೀಕೂಲಮೆನಿಸಿದ ದುಕೂಲಮನುಟ್ಟು ಶತಪತ್ರನೇತ್ರೆಯರ್ಗನುರಾಗೋದಯಮನಾಗಿಸುವುದಯರಾಗದಂಗಿಗೆಯಂ ತೊಟ್ಟು ಸಕಳ ತೇಜಸ್ವಿಗಳ ತೇಜಂ ತನಗೆ ಹಸ್ತಸ್ಥಮೆಂಬುದನಱಿಪುವಂತೆಸೆವ ನವಗ್ರಹದ ಕಂಕಣಮನಿಕ್ಕಿ ವಿಜಯ ರಮಣೀರಮಣೀಯ ಮಣಿಮಯಾಸನವಿಳಾಸನವಿಳಾಸಕ್ಕಾವಾಸಮಾಗೆ ಕೇಯೂರಮಂ ಭೂರಿಭುಜದೊಳ್ ತಳೆದು ಮನಮೊಸೆದು ಮನಸಿಶಯನಂ ಮುಖಮೆಂಬ ತಾರಾಪತಿಯ ಬೆಸದಿಂ ತಾರಾವಳಿಗಳಗಲದೋಲಗಿಸುವ ಲೀಲೆಯಂ ಪಾಲಿಸೆ ಪೇರುರದೊಳ್ ತೋರ ಮುತ್ತಿನ ಹಾರಮನಾಂತು ನಿಜಮಣಿಕಿರಣಾಂಕರಂಗಳ್ ಪುಲಕಾಂಕುರಂಗಳಾಗೆ ರಾಗದುತ್ಕಟತೆಯಿಂ ಕಂಠಮಂ ಶ್ರೀಲಲನೆಯಾಲಿಂಗಿಸಿದ ಭಂಗಿಯಿಂ ಬೆಡಂಗುವಡೆಯೆ ಕಂಠಿಕೆಯಂ ರಾಜಕಂಠೀರವಂ ರಾರಾಜಿಸುವಂತಿರಾಂತು ಲಲಿತಾಕೃತಿ ವಿಜಿತಮಕರಧ್ವಜಂ ಮಕರ ಕುಂಡಳಮನಿಕ್ಕಿಕೊಂಡು ಗುಣಸಮನ್ವಿತಮಪ್ಪುತ್ತಮಜಾತಿಯನಾರಾದೊಡಮಾದರಿಸುವರೆಂಬುದಂ ಪ್ರಕಟಸುವಂತೆ ವಿನೂತಜಾತಿವಮಾಳೆಯಿಂ ಮುಕುಟತಟಮನಳಂಕರಿಸಿ ಮದನಂ ಮದಿರಾಕ್ಷಿಯರನೀಕ್ಷಣಮಾತ್ರದೊಳೆ ತನ್ನ ಪಾದಾಕ್ರಾಂತರಂ ಮಾೞ್ಪ ಮಿತ್ರನ ಚರಿತ್ರಕ್ಕೆ ಮೆಚ್ಚಿ ಚಂದ್ರಮನಮರ್ದಪ್ಪಿದೊಪ್ಪಮನಪ್ಪುಕೆಯ್ಯೆ ಜಗತ್ತಿಳಕಂ ಕತ್ತುರಿಯ ತಿಳಕಮನಿಟ್ಟು, ಕರ್ಪೂರ ಪಾರೀಪರಿಚುಂಬಿತತಾಂಬೂಳನಾಳೋಕಿತ ಮಂಗಳಮಣಿದರ್ಪಣಂ ದರ್ಪಕನಂತೆ ಕಾಂತಾಹೃದಯಹಾರಿ ಶೃಂಗಾರಾಗಾರದಿಂ ಪೊಱಮಡುವ ಸಮಯದೊಳ್

ಕಂ॥ ಕ್ಷಿತಿಚತುರಯುವತಿನವಸಂ
ಗತಿಯೊಲ್ ಕಂಪನಮನಾಂತುದೆಂಬಂತೆವೋಲು
ನ್ನತದಕ್ಷಿಣಭುಜದಂಡ
ಕ್ಷಿತಿಧರದೊಳ್ ರಂಜಿಸಿತು ಮಂದಸ್ಪಂದಂ ೩೧

ಮದದೊದವನುೞಿದು ನಿಜಮೃದು
ಪದಮಂ ಕುಲಧನಮನಿತ್ತು ಧಾತ್ರೀಶರ್ ಕಾ

ಙ್ಬುದನೊಲ್ದು ಕಾಣ್ಬುದಂ ಪೇ
ೞ್ದುದು ಚಕ್ರಧರಂಗೆ ದಕ್ಷಿಣಾಕ್ಷಿಸ್ಪಂದಂ ೩೨

ವ॥ ಅಂತು ನೆಗೞ್ದ ಪಲತೆಱದ ಶುಭಚಿಹ್ನಕ್ಕೆ ಸಂತಸಬಡುತ್ತುಮಿದು ದಿಗ್ವಿಜಯ ರಮಣೀಪಾಣಿಗ್ರಹಣಮುಹೂರ್ತಮತ್ಯಾಸನ್ನಮೆಂದು ಬಿನ್ನವಿಸೆ ಪರಸುವ ಹಿತ ಪುರೋಹಿತರ ಪರಮಾಶೀರ್ವಚನನಿಚಯಂಗಳಂ ಸುವರ್ಣಕರ್ಣಾವತಂಸಂ ಮಾಡುತ್ತುಂ ಪಣ್ಣಿ ಬಂದಿರ್ದ ಗಜೇಂದ್ರದ ಸಮೀಪಕ್ಕೆವಂದಾನಂದದಿಂದದಂ ನೋಡಿ

ಕಂ॥ ವಾರಣಮಿಂತಿದು ರಿಪುಕಾ
ಳೋರಗನೆಂದಱಿಪುವಂತಿರಲ್ಲಲ್ಲಿಗೆ ಕ
ಸ್ತೂರಿರಸದಿಂದೆ ಬರೆದಸಿ
ತೋರಗತತಿ ನೋಡೆ ನಾಡೆಯುಂ ಕಣ್ಗೊಳಿಕುಂ ೩೩

ಮದಲಕ್ಷ್ಮಿಯ ಕೇಕರರುಚಿ
ಕೆದಱಿದವೊಲೆ ಕರ್ಣಚಾಮರಂ ಸಿಂಧೂರಂ
ಮೃದುಕರದ ಕೆಂಪು ಪುದಿದುದು
ಪದೆದು ಪಿಡಿಯೆ ಕುಂಭಯುಗಮನೆನೆ ಸೊಗಯಿಸುಗುಂ ೩೪

ವ॥ ಮತ್ತಮಾ ಹಸ್ತಿ ನಿಜಾಗ್ರಹಸ್ತದ ಹತಿಯಿಂದುದಿರ್ದ ತಾರಾಳಿಯಂ ಮಾಲೆಗೋದು ಕಟ್ಟಿದಂತೆಸೆವ ನಕ್ಷತ್ರಮಾಲೆಯಿಂ ಲೀಲೆವಡೆದು ಚಂದನದಣ್ಣನಿಕ್ಕಿದಂತೆ ಚಂದಂಬಡೆಯೆ ಪೂಸಿದ ಶಂಖದಿಂ ಬೆಳ್ಳಿಯ ಬೆಟ್ಟಮೆಂಬ ಶಂಕೆಯನಾಂಕೆಗೊಂಡು ಭೂಮಂಡಳಮನುಂಡಿಗೆ ಸಾಧ್ಯಂ ಮಾಡಿ ಕುಡುವೆನೆಂದಱಿಪುವಂದದಿಂ ದಕ್ಷಿಣಪಾದದಿಂ ಮೇದಿನಿಯಂ ಬಱಂಟುತ್ತುಮುತ್ತುಂಗವಿಜಯಧ್ವಜಮನೆತ್ತುವಂತೆ ದಕ್ಷಿಣದಂತದೊಳ್ ತೋಱೆ ಕೆಯ್ಯುಂ ಪೇೞ್ ಶುಭಚಿಹ್ನಮಂ ಬೀಱುತ್ತಂ ತನ್ನಂ ಪೊಱೆಯೇಱಿಸುತ್ತುಮಿರ್ದ ವಿಜಯಾಚಳಮೆಂಬ ಗಜರತ್ನದ ಪೂರ್ವಾಚಳಶಿಖರಮಂ ರಮಣಿಯರ್ ತಮತಮಗೆಕ್ಕೆಯಿಂ ತನಗಿಕ್ಕುವ ಬಿಡುಮುತ್ತಿನ ಸೇಸೆಗಳರ್ಘ್ಯಮಂ ಕುಡುವನರ್ಘ್ಯರತ್ನಂಗಳಾಗೆಯುಂ ಮಂಗಳತೂರ್ಯಗೇಯ ಪುಣ್ಯಪಾಠಕಕೋಲಾಹಳಮೆ ಕೊಳರ್ವಕ್ಕಿಗಳ ಕೋಳಾಹಳ ಮಾಗೆಯುಮಲರ್ವ ಪುಂಡರೀಕಂಗಳಲರ್ವ ಪುಂಡರೀಕಂಗಳಾಗೆಯುಂ ಬೀಸುವ ಧವಳಚಾಮರಂಗಳೆ ನಲಿವ ಕಳಹಂಸಸಂಕುಳಮಾಗೆಯುಮರುಣಮಣಿಕಿರಣಂಗಳೆ ಕಿರಣಸಹಸ್ರಂಗಳಾಗೆಯುಂ ಚಕ್ರಧರಂ ಬಂದು ಚಕ್ರ ಮನೋಹರಾಗಮಂ ಬಾಳಭಾಸ್ಕರನಂತೆ ಬಳೆಯಿಸುತ್ತುಮಳಂಕರಿಸಿ

ಕಂ॥ ದ್ವಾತ್ರಿಂಶಚ್ಚಮರರುಹಂ
ಛತ್ರೇಂದುಮರೀಚಿ ಮದವದಿಭಮೆ ನಭಃಶ್ರೀ
ಪಾತ್ರಮೆನೆ ಚೆಲ್ವುವಡೆಯೆ ಧ
ರಿತ್ರೀಪತಿ ಖಚರರಾಜನನೆ ರಾಜಿಸಿನಂ ೩೫

ಕುಂಭನಿಭಸ್ತನಿಯರ್ ಗಜ
ಕುಂಭದೊಳಿರೆ ಚಕ್ರ ಜಯವಧೂಪರಿಣಯನಾ

ರಂಭೋಚಿತಪೂರ್ಣಚತುಃ
ಕುಂಭಂಗಳ ತೆಱದಿನೇಂ ಮನಂಗೊಳಿಸಿದುದೋ ೩೬

ಶಾ॥ ಸ್ತ್ರೀರತ್ನಂ ಸಿರಿ ಚಕ್ರಮಿಂದು ಹಯರತ್ನಂ ವಿಶ್ರುತೋಚ್ಚೈಶ್ರವಂ
ಮೇರೂತ್ತುಂಗಮದೇಭಮಿಂದ್ರ ಕರಿ ಚಂಚಚ್ಚಾಮರಂ ವೀಚಿನಾ
ನಾರತ್ನಂ ನವರತ್ನಮಿಂತಮರ್ದಿರಲ್ ಕ್ಷೀರಾಬ್ಧಿವಿಸ್ತಾರದಿಂ
ಭೇರೀಭಾಂಕೃತಿ ಘೋಷಮಾಗೆ ನಡೆದತ್ತನ್ಯೂನಸೈನ್ಯೋತ್ಕರಂ ೩೭

ಮಾಲಿನಿ॥ ನೆಗೞೆ ಪಟಹಭೇರೀಶಂಖತೂರ್ಯಪ್ರಣಾದಂ
ಪೊಗೞೆ ಪರಸೆ ನಾನಾವಂದಿವಿಪ್ರಪ್ರತಾನಂ
ಮಿಗೆ ಸೊಗಯಿಸೆ ವೀಣಾಸಂಗಿ ಮಾಂಗಲ್ಯಗೀತಂ
ನೆಗೆಯೆ ಪದರಜಂ ಶ್ರೀ ಶ್ರೀವಧೂವಶ್ಯಚೂರ್ಣಂ ೩೮

ಕಂ॥ ಶುಭತಿಥ್ಯಂ ಶುಭ ದಿವಸಂ
ಶುಭನಕ್ಷತ್ರಂ ಶುಭಗ್ರಹಶ್ರೇಣ್ಯುದಯಂ
ಶುಭಯೋಗಂ ಶುಭಕರಣಂ
ಶುಭಶಕುನಂ ನೆಗೞೆ ಧರಣಿಪತಿ ಪೊಱಮಟ್ಟಂ ೩೯

ವ॥ ಅಂತು ಚಕ್ರಾಯುಧಂ ವಜ್ರಾಯುಧನನಧಃಕರಿಸಿ ಸಕಳ ಮಕುಟಬದ್ಧಪರಿವೃತಂ ರತ್ನತೋರಣರಾಜಿವಿರಾಜಿತರಾಜಭವನದಿಂ ಪೊಱಮಟ್ಟು ವಾರನಾರೀದೃಗ್ವಿಜಯ ಸೂಚಕಮಂ ನಿಜರೂಪಾತಿಶಯದಿಂ ಪಡೆಯುತ್ತುಂ ನಡೆತರ್ಪಾಗಳ್

ಕಂ॥ ಮದಲೇಖೆಗೆ ಸದೃಶಂ ಮೃಗ
ಮದತಿಳಕಂ ಕರಿಕರಕ್ಕೆ ಸರಿ ಕರಮೆನುತುಂ
ಮದಗಜಮನೇಱೆ ಬರುತಿರೆ
ಸುದತಿ ನಿರೀಕ್ಷಿಸಿದಳೊಸೆದು ವಸುಧಾಧಿಪನಂ ೪೦

ಪಿಡಿವೆತ್ತಧರಂ ಮನಮಂ
ಪಿಡಿವಿನಮುಗಿವೆತ್ತ ವೃತ್ತಕುಚಕುಂಭಯುಗಂ
ಬಿಡದುಗಿಬಗಿಮಾಳ್ಪನೆಗಂ
ಬೆಡಂಗಿ ಮೆಯ್ಮಱೆದು ನೋಡಿದಳ್ ಮತ್ತೊರ್ವಳ್ ೪೧

ಗಾಡಿಗೆ ಸೋಲ್ತಂಗನೆ ಕ
ಣ್ಗಾಡಿಗೆ ಸರಿದಿರೆಯುಮಂಶುಕಂ ಜೋಲ್ದಿರೆಯುಂ
ನೋಡದೆ ಕೆಳದಿಯ ನುಡಿಗಿ
ನ್ನೋಡದೆ ನೋಡಿದಳದೊರ್ವಳುರ್ವೀಶ್ವರನಂ ೪೨

ಮದನಮದದ್ವಿರದಂ ಕದ
ಡಿದ ಚೇತೋನದಿಯೊಳುಣ್ಮಿ ಪೊಣ್ಮಿದ ಝಷಯು

ಗ್ಮದ ತೆಱದಿನೊಪ್ಪೆ ನಗೆಗಣ್
ಪದೆದೊರ್ವಳ್ ಸಾರ್ವಭೌಮನಂ ವೀಕ್ಷಿಸಿದಳ್ ೪೩

ಉ॥ ಕಂಜನಿಭಾಸ್ಯೆ ಪೀವರಪಯೋಧರೆ ರತ್ನ ವಿಭೂಷಣಾಂಶುವಿಂ
ರಂಜಿತಗಾತ್ರೆ ಸೌಮ್ಯನೃಪರೂಪನಿರೀಕ್ಷಣದಿಂದೆ ಚಿತ್ರರೂ
ಪಂಜನನೇತ್ರಹಾರಿ ತನಗಂ ದೊರೆವೆತ್ತಿರೆ ರಮ್ಯಹರ್ಮ್ಯದೊಳ್
ಲಂಜಿಕೆ ಸಾಲಭಂಜಿಕೆಯನೇೞಿಸುತೀಕ್ಷಿಸಿದಳ್ ನೃಪಾಳನಂ ೪೪

ಅಂತು ಪುರಾಂಗನಾತರಳಲೋಚನ ಚಾರುಮರೀಚಿಮಾಳತೀ
ಸಂತತಿಯಂ ಸ್ವಕೀಯಸುಭಗತ್ವಗುಣಂ ತಳೆದೊಪ್ಪೆ ಶೇಷೆಯಂ
ಸಂತಸದಿಂದೆ ತೀವಿ ಪರಸುತ್ತಿರೆ ಪುಣ್ಯವಧೂಜನಂ ಪುರೋ
ಪಾಂತದೊಳಿರ್ದು ತನ್ನ ಬರ ಪಾರ್ವವನೀಶ್ವರರಂ ನೃಪೇಶ್ವರಂ ೪೫

ವ॥ ಎಯ್ದೆವಂದಾಗಳ್

ಚಂ॥ ಗಿರಿ ಪರಲಾತ್ಮಸನ್ನಿಧಿಯೊಳೆಂದೆನಿಪುನ್ನತ ಮತ್ತಹಸ್ತಿಯಂ
ಗರುಡನುದಗ್ರ ವೇಗವಿಭವಂ ತುಷಮೆಂಬ ತುರಂಗಮಂ ರಿಪೂ
ತ್ಕರಮಣುಸನ್ನಿಭಂ ತನಗೆನಿಪ್ಪ ರಥವ್ರಜಮಂ ರಣಾಂಗಣಂ
ತರುಣಿಯರಂಗಣಂ ಗಡಮೆನಿಪ್ಪ ಪದಾತಿಯನೊಲ್ದು ನೋಡಿದಂ ೪೬

ಕಂ॥ ಪದಪಿಂದೆ ಸಾರ್ವಭೌಮನ
ಪದಪಂಕರುಹಕ್ಕಶೇಷನೃಪಮಕುಟಂ ರ
ತ್ನದ ಕಾಂತಿ ಮಿಱುಗುವಿನಮೆಱೆ
ಗಿದುದಾಗಳ್ ದೀಪವರ್ತಿ ನಿಧಿಗೆಱಗುವವೋಲ್ ೪೭

ವ॥ ಅಂತಾತ್ಮೀಂಯುವಮೌಲೀಕೀಳಿತಪದ್ಮರಾಗದಿಂ ಪದಪದ್ಮರಾಗವಮಂ ದ್ವಿಗುಣಿಸಿದಶೇಷ ದೇಶಾಧೀಶ ಮನೋರಾಗಮಂ ಪ್ರಚುರಪ್ರಸಾದದಿಂ ಸಂಪಾದಿಸುತ್ತುಂ ಸ್ಥಪತಿರತ್ನಂ ನೂತ್ನರತ್ನಂಗಳಿನತಿ ಪ್ರಯತ್ನದಿಂ ಬೊಮ್ಮಂಗಂ ನಿರ್ಮಿಸಲರಿದೆನಿಸಿ ಕೂರ್ಮೆಯಿಂ ನಿರ್ಮಿಸಿದುದಂ

ಕು॥ ಭೂರಮಣೀರಮಣಂ ರಣ
ಧೀರ ಧರಾಧೀಶ ವಾರನಾರೀವಿಭವಾ
ಧಾರತೆಯಿಂ ವೀರದ ಶೃಂ
ಗಾರದ ನೆಲೆವೀಡೆನಿಪ್ಪ ಬೀಡಂ ಪೊಕ್ಕಂ ೪೮

ವ॥ ಅಂತು ಕಾಂತಮಪ್ಪ ನಿಜವಿಜಯಶಿಬಿರಮಂ ಶುಭಶಕುನಂಗಳುಮಂ ಮಂಗಳ ತೂರ್ಯಗೇಯನಾದಂಗಳುಮನಾಲಿಸುತ್ತುಮುತ್ಸಾಹಚಿತ್ತಂ ಪೊಕ್ಕನಂತರಂ

ಕಂ॥ ಸೊದೆವಳಿದ ಭಿತ್ತಿ ಪೊಸದುಗು
ಲದ ಮೇಲ್ಕಟ್ಟಿಂದುಕಾಂತಕುಟ್ಟಿಮಧರೆ ರ

ನ್ನದ ದೀವಿಗೆಯಿವಱಿಂದಮ್ಮ
ತದ ಕಡಲಂ ಪೋಲ್ತುದನ್ನವಾಸವಿಳಾಸಂ ೪೯

ವ॥ ಅದಲ್ಲದೆಯುಂ ವಿಬುಧಭವ್ಯಂ ಮಾೞ್ಪನೂನ ದಾನದಂತೆ ಸುವರ್ಣಸತ್ಪಾತ್ರ ಪವಿತ್ರಮಾಗಿ ಮನಂಗೊಳಿಸುವ ಭೋಜನಗೃಹಕ್ಕೆ ರಾಜಾಧಿರಾಜಂ ಜಾಂಗಳವಿದ್ಯಾ ವಿದುರರ್ ಬೆರಸು ಬಿಜಯಂಗೆಯ್ವುದುಂ

ಕಂ॥ ಸರವಳಿಗೆಗಳನಿತುಂ ಪಾ
ಲುರುಳಿವೊಲಿರೆ ಪಾಲೊಳೊಂದಿ ಮಗಮಗಿಸುವುದಂ
ಸರವಳಿಗೆಯ ಪಾಯಸಮಂ
ಸುರುಚಿರ ಸಿತಘೃತವಿಮಿಶ್ರಿತಮನತಿಹಿತಮಂ ೫೦

ನಿಳ್ಪಂ ಬೆಳ್ಪಂ ತೆಳ್ಪಂ
ತಳ್ಪೊಯ್ದಿರೆ ಸುಗ್ಗಿಯಚ್ಚ ಬೆಳ್ದಿಂಗಳನೀ
ಗಳ್ಪೊರೆಯೆತ್ತಿದರೆಂಬಂ
ತೊಳ್ಪಂ ಗೆಡೆಗೊಂಡು ಸೊಗಯಿಸುವ ಮಂಡಿಗೆಯಂ ೫೧

ಕೀರಸಮನಿನಿದೆನಿಪ ಸಹ
ಕಾರರಸಮನಸಮಸುರಭಿಘೃತಮಂ ಸಿತಮಂ
ಕ್ಷೀರಮನಮರ್ದಿರೆ ತೀವಿ ಮ
ನೋರಾಗದೆ ಬೇಱಿವೇಱಿ ಬಟ್ಟಲೊಳಿಟ್ಟರ್ ೫೨

ಪೊಂಗಿರ್ದಂಗರವೋಱಿಗೆ
ಯಂ ಗರಗರಮಪ್ಪ ತುಪ್ಪಮಂ ಸಕ್ಕರೆಯಂ
ಪಿಂಗದ ಹೂರಣಮೆನಿಸಿ ಮ
ನಂಗೊಳಿಪುವನಮೃತಪೂರಮಂ ಹೂರಿಗೆಯಂ ೫೩

ಲುಡ್ಡುಗೆಯನಿನಿದೆನಿಪ ಬಿಡು
ಲಡ್ಡುಗೆಯಂ ತುಪ್ಪದಲ್ಲಿ ತೇಂಕುವ ಕಂಪು
ಳ್ಳಿಡ್ಡಲಿಗೆಗಳಂ ಬೇಗಂ
ಬಡ್ಡಿಸಿದರ್ ಜಾಣರೆಂಬಿನಂ ಬಾಣಸಿಗರ್ ೫೪

ಪ್ರಣತಹಿಮಕರಸುರಭಿಧಾ
ರಿಣಿಯಂ ಪಂಚೇಂದ್ರಿಯಪ್ರಿಯಾಕುಳಸುಖಕಾ
ರಿಣಿಯಂ ಪೊಸತೆನಿಸುವ ಶಿಖ
ರಿಣಿಯಂ ರಸರಸಿಕಜನಮನೋಹಾರಿಣಿಯಂ ೫೫

ಶಾಲ್ಯನ್ನಂ ಸ್ಮಿತಮಲ್ಲೀ
ಮಾಲ್ಯಮನತಿಮೃದುತೆಯಿಂದೆ ಪರಿಮಳದಿಂ ನೈ

ಮಾರ್ಲ್ಯದಿನೇಟಿ‌ಸಿ ಸಕಳಜ
ನಾಲ್ಯಾಶಯಹಾರಿಯಾಗಿಯೇಂ ಸೊಗಯಿಸಿತೋ ೫೬

ಕಳಧೌತದ ಪರಿಯಣದೊಳ್
ಕಳಮಾನ್ನಂ ತನ್ನ ಬೆಳ್ಪಿನಿಂದದಱೊಂದು
ಜ್ವಳಿಕೆಯನೇಟಿ‌ಸೆ ಬೆಳ್ಳಿಯೊ
ಳಳವಡೆ ದುರ್ವರ್ಣನಾಮಮೆಸೆದುದು ನಿಸದಂ ೫೭

ಪಲತೆಱದ ಪಾನಕಂ ಪರಿ
ಮಳಮಂ ತಳ್ಕೈಸಿ ಹಿಮಮನೊಳಕೊಂಡಿಂಪಂ
ನೆಲೆಗೊಳಿಸಿ ಪಲ್ಲವಾಧರ
ಫಳರಸಪಾನದವೊಲೇಂ ಮನಂಗೊಳಿಸಿದುದೋ ೫೮

ಪಾಕವಿಶೇಷದೊಳೊಂದಿದ
ಶಾಕಚಯಂ ಬೇಱೆವೇಱೆ ಸಂಪ್ರೀತಿಯನ
ವ್ಯಾಕುಳದೊದವಿಸಿ ರಾಜಾ
ನೀಕದೊಳೊದವಿಸಿತು ಶಾಕಪಾರ್ಥಿವವೆಸರಂ ೫೯

ಸವಿದೊಡೆ ಕೂಟದಲಂಪಂ
ನವಯುವತಿಯರಧರಪಲ್ಲವಂ ಪಲ್ಲವಿಪಂ
ತೆವೊಲೂಟದಲಂಪಂ ಪ
ಲ್ಲವಿಸಿತು ಪುಳಿಯಲ್ಲ ಮಿಟಿಸಿ ಪವಳದ ಕುಡಿಯಂ ೬೦

ಚಂ॥ ಒಡನೆ ಕುಮಾರಕರ್ ಕೆಲದೊಳಾಪ್ತನಿಯೋಗಿ ನೃಪಾಳಪಾಳಿ ಕಾ
ಣ್ಪೆಡೆಯೊಳೆ ಪಂಡಿತಪ್ರತತಿ ಕಣ್ಗೊಳಿಸಿರ್ಪ ವಿಳಾಸಿನೀಜನಂ
ಬಿಡದಿರೆ ಸುತ್ತಲುಂ ಮಧುರಗಾಯಕಗಾಯಿನಿಯರ್ ನಿರಂತರಂ
ಗಡಣವೆ ಚಕ್ರಿಯಾರೊಗಿಸಿದಂ ಸುರರಾಜನವೋಲ್ ಸುಧಾನ್ನಮಂ ೬೧

ಮ॥ ಸಕಳೋರ್ವೀಪತಿ ಸಾರವಸ್ತುತತಿಯಂ ಕಾರುಣ್ಯದಿಂದಟ್ಟೆ ಗಾ
ಯಕಿಯರ್ಗಂ ಮುದದಿಂ ವಿಳಾಸವತಿಯರ್ಗಂ ವ್ಯಂಜನಾಂತ್ವಾರ್ಥಮಾ
ತ್ರಕಮೆಂಬೀ ನುಡಿಹೀನಮಾಗೆ ತಣಿದತ್ತೆಲ್ಲಾ ಜನಂ ಪಾಲ್ಗಳಿಂ
ದೆ ಕುಳಿರ್ಕೋಡುವ ಕಂಪುವೆತ್ತ ದಧಿಯಿಂದಿಂಪುಳ್ಳ ತಕ್ರಂಗಳಿಂ ೬೨

ಕಂ॥ ಕಾರುಣ್ಯಾಮೃತದಿಂ ಪರಿ
ವಾರಂ ತಣಿದೊಡಮುದಾರವಿಭವಂ ವಿನಯಾ
ಧಾರಂ ತಣಿಪಿದನಮೃತಾ
ಹಾರದೆ ಪುನರುಕ್ತಮಪ್ಪಿನಂ ಚಕ್ರಧರಂ ೬೩

ವ॥ ಅಂತು ಕಲ್ಯಾಣಕಾಹಾರಮನಾರೋಗಿಸಿ ಸಾರ ಘನಸಾರಮಿಶ್ರಿತ ಶ್ರೀಖಂಡಮಂ ಕೆಯ್ಗಟ್ಟಿಗೊಂಡಖಂಡಪರಿಮಳಪಿಂಡಖದಿರಘಟ್ಟಿಕಾ ಕರ್ಪೂರಪಾರೀಪರಿಕಳಿತ ತಾಂಬೂಳ

ರಾಗದ್ವಿಗುಣಿತಾಧರರಾಗಂ ಸುಖವಿಹಾರಾಧಾರಂ ಕತಿಪಯಪದಂಗಳಂ ವಿಹಾರಿಸಿ ವಿಸ್ತಾರಿತ ಕಸ್ತೂರೀವಿಲೇಪನನುನ್ಮೀಳಿತ ಮಾಳತೀಮಾಳಾಳಂಕೃತನುಮಾಗಿ

ಚಂ॥ ಕೆಲದೊಳತಿಪ್ರಸಿದ್ಧ ಕವಿಪುಂಗವರಗ್ರಭಾಗದೊಳ್ ಸುಮಂ
ತೊಲಿಸುವ ಗಾಯಿನೀಪ್ರತತಿ ಪಿಂತೆ ಚಳಚ್ಚಮರೀಜಧಾರಿಣೀ
ವಳಯಕಳಸ್ವನಂ ನೆಗಟೆ ಚಕ್ರ ಮರಾಳ ಸುತೂಳತಳ್ಪದೊಳ್
ನೆಲಸಿ ವಿಳಾಸಿನೀಪರಿವೃತಂ ಕರಮೊಪ್ಪಿದನನ್ನವಾಸದೊಳ್ ೬೪

ವ॥ ಆ ಸಮಯದೊಳ್

ಕಂ॥ ರಸನೆಯಿನಮೃತಮನಾಸ್ವಾ
ದಿಸಿ ತಣಿದ ರಸಜ್ಞ ಜನಮೆ ಪೊಸತೆನಿಪ ಸುಧಾ
ರಸಮಂ ಕಿವಿಯಿಂದಾಸ್ವಾ
ದಿಸುವಿನಮಿನಿದೆನಿಸಿ ಪಾಡಿದರ್ ಗಾಯಿನಿಯರ್ ೬೫

ಇದು ಗಾಯಿನಿಯರ ಕಳರವ
ಮಿದು ವೀಣಾನಾದಮೆಂದು ತೋಱದವೋಲ್ ಪಾ
ಡಿದೊಡೊಂದೆ ಶ್ರುತಿಯೊಳಚ್ಚರಿ
ಯೊದವಿಸಿತು ಪಲವು ಶ್ರುತಿಯೊಳೊಲವಂ ಬುಧರಾ ೬೬

ಕಿವಿಯಂ ತಾಗುವ ಸರಮೇ
ಱೆ ವಿಚಿತ್ರಂ ಬಾಜಿಪೋಜೆಯಿಂ ವೈಣಿಕರಾ
ಭುವನೇಶನ ಮನಮಂ ತಾ
ಗುವ ಮೆಲ್ಪಿನ ಪೂವಿನಯ್ದುಸರಮೆಂದೆನಿಕುಂ ೬೭

ಅಂದಿನ ದಿನಮಂ ಪರಮಾ
ನಂದದಿನೀಯಂದದಿಂದೆ ಕಳೆದು ಸುಖಶ್ರೀ
ಮಂದಿರದಧಿಪಂ ಮಱುದೆವ
ಸಂ ದಿನಪೋದಯದೊಳತುಳ ಭಾಗ್ಯಾಭ್ಯುದಯಂ ೬೮

ಪೊಯ್ಸಲೊಡಮವನಿಪತಿ ತ
ಟ್ಟಿಯ್ಸಿದುದೆಣ್ದೆಸೆಯನಬ್ಧಿಘನಘೋಷಮನೊ
ಟ್ಟಯ್ಸಿದುದು ರಿಪುಮದಮನು
ಜ್ಜಯ್ಸಿದುದುರುಶಂಖ ಪಟಹ ಭೇರೀನಿನದಂ ೬೯

ಅಂಭೋಧಿವೃತಧರಿತ್ರೀ
ಸಂಭೂತಾರಾತಿಭೂಪ ಗಂಭೀರತೆಯಂ
ಸ್ತಂಭಿಪ ರವದಿಂ ಪಡೆದುವು
ಗಂಭೀರಾವರ್ತನಾಮಮಂ ಶಂಖಂಗಳ್ ೭೦

ಪಟುಪಟಹರವಮೆ ಧೂಳೀ
ಪಟಮಂ ಮಾಡಿದುದು ರೂಢಿವೆತ್ತವನೀಭೃ
ತ್ಕಟಕಮುಮಂ ರಿಪುಭೂಭೃ
ತ್ಕಟಕಮುಮಂ ತನ್ನಿತಂಬಿನೀಕಟಕಮುಮಂ ೭೧

ಪನ್ನೆರಡುಂ ಭೇರಿಗಳಾ
ತ್ಮೋನ್ನತಘೋಷಂ ಸಮುದ್ರಘೋಷಮಿದೆನಿಪಂ
ತುನ್ನತಮೊಗೆವುತ್ತಿರ್ಪುದ
ಱಿನ್ನೆಗಟ್ಟಿ ಸಮುದ್ರಘೋಷವೆಸರಂದೆಸೆಗುಂ ೭೨

ವ॥ ಅಂತು ನೆಗೆದು ಸೊಗಯಿಸುವ ಶಂಖಪಟುಪಟಹಭೇರೀರವಂ ದಿಕ್ತಟಸಂಚಯಮಂ ಪಳಂಚಲೆಯೆ

ಕಂ॥ ಗೋತ್ರೋನ್ನತಂಗಳಖಿಳ
ಕ್ಷತ್ರಿಯಪೂಜ್ಯಂಗಳತುಳ ದಾನಯುತಂಗಳ್
ಧಾತ್ರೀಶನಂತೆ ಸುಮಹಾ
ಮಾತ್ರಂಗಳ್ ಚತುರಶೀತಿಲಕ್ಷಗಜಂಗಳ್ ೭೩

ಸ್ರ॥ ಮತ್ತಸ್ತಂಭೇರಮಕ್ಕೀ ಗಗನವಳಯಮಿನ್ನೆಯ್ದದೆಂದೇಟ್ಗೆಯಿಂದಂ
ಪೊತ್ತೆತ್ತುತ್ತಿರ್ಪವೋಲೆತ್ತಿದ ಕದಳಿಕೆ ಚೆಲ್ವಾಗೆ ಘಂಟಾರವಂ ದಿ
ಗ್ಭಿತ್ತಿವ್ರಾತಕ್ಕೆ ಧೀಂಕಿಟ್ಟೆಱಗಿಮೆಱಗಿಮಾಶಾಂಘ್ರಿಯೊಳ್ ಭೂಪರೆಂಬಂ
ತೆತ್ತಂ ತಾಂ ತೀವಿ ಕಣ್ಗೊಪ್ಪಿದುದು ನೆಱೆಯದೆಂಬನ್ನೆಗಂ ಭೂಮಿಭಾಗಂ ೭೪

ಕಂ॥ ಪವನಗತಿಪ್ರಯುತಂಗಳ್
ಧ್ರುವಾಭಿರಾಮಂಗಳುದ್ಧಕಲಿಗಳ್ ಚಾರು
ಶ್ರವಣಂಗಳ್ ನಭದವೊಲೆಸೆ
ದುವು ಮಿಗೆ ಪದಿನೆಂಟುಕೋಟಿ ಜಾತ್ಯಶ್ವಂಗಳ್ ೭೫

ಅನತನೃಪಕುವಳಯದ ಸಿರಿ
ಯನನಾರತಮಲೆವುದುಚಿತಮಿದು ಚೋದ್ಯಂ ಸಂ
ದಿನರಥಸಮುದಯಮಸುಹೃ
ಜ್ಜನಪಮನೋರಥರಥಾಂಗಮಂ ವಿಘಟಿಸುಗುಂ ೭೬

ಆರ್ಕಪ್ಪುಮನೀಯದೆ ತೋ
ರ್ಪರ್ಕಡುಪಂ ಚಕ್ರಿಗೊಂದೆ ಮೆಯ್ಯೊಳಜೇಯರ್
ಸೊರ್ಕಾನೆಗಿದಿರ್ಚುವ ರಣ
ಕರ್ಕಶರೆಣ್ಬತ್ತುನಾಲ್ಕು ಕೋಟಿ ಭಟರ್ಕಳ್ ೭೭

ಚಂ॥ ಶರಧಿಸಮಗ್ರ ಬಂಧನಿಪುಣಂ ಗುಣಸಂಪದುದಾತ್ತನಾಯಕಂ
ನಿರುಪಮ ಧರ್ಮಧಾರಣವಿವೇಕನಿದಾನಮಮೋಘಬಾಣಮಾ

ಸುರರಣರಂಗಸಂಗತಜಯಂ ನೆಱೆ ಪೋಲ್ತುದು ರಾಮನಂ ಧನು
ರ್ಧರಬಳಮತ್ಯುದಗ್ರರಿಪುಭೇದನ ಭಾಸ್ವದಖರ್ವದೋರ್ವಳಂ ೭೮

ಕಂ॥ ಒದವಿದ ಪದಾತಿಬಳಮೆ
ತ್ತಿದ ತೃಷೆಯಿಂದೀಂಟಿ ನೆಱೆಯೆ ಬತ್ತಿದ ನದಿಗಳ್
ಮದಲಾಳಾಜಳದಿಂ ತೀ
ವಿದುವೆನೆ ಪವಣಿಸುವರಾರೊ ಚಕ್ರಿಯ ಪಡೆಯಂ ೭೯

ಪಡೆಗೀ ನೆಲನೆಯ್ದದು ಕಾ
ಲಿಡಲೆಂದಱಿಪಂತೆ ದೇವವಿದ್ಯಾಧರರಾ
ಗಡೆ ನೆಗೆದು ಗಗನಮಂ ನೇ
ರ್ಪಡೆ ತೀವಿದರೆನೆ ವಿಮಾನಮೆಸೆದುವು ನಭದೊಳ್ ೮೦

ವ॥ ಅಂತು ಪೆಂಪನೊಳಕೊಂಡು ತಳರ್ವ ಷಡಂಗಬಲಂಗಳೊಳ್

ಕಂ॥ ವಿಪುಳಪ್ರತಾಪಮಂ ತೋ
ರ್ಪ ಪಗೆವರಾರೆಂದು ಚುಂಬಿಸುತ್ತಂಬರಮಂ
ತಪನಪ್ರತಾಪಮಂ ಲೋ
ಪಿಪ ನಾಲ್ವತ್ತೆಂಟುಕೋಟಿ ಪಟಿಯಿಗೆಯೆಸೆಗುಂ ೮೧

ಉ॥ ವಾರಣದಿಂದಮಂಕಿತಮರಾತಿನೃಪಾಳಕವಂಶಹಾರಿ ಕಂ
ಠೀರವಲಾಂಛಿತಂ ರಿಪುಮದೇಭವಿದಾರಿ ಗರುತ್ಮಲಕ್ಷಿತಂ
ವೈರಿನೃಪಾಹಿವೀರವಿಷಭೇದಿಯೆನಿಪ್ಪುದನೆಯ್ದೆ ಪೇೞ್ವವೋಲ್
ನೀರದಮಾರ್ಗದೊಳ್ ಪವನರೋಧಕಮಾದುವು ಕೇತನೋತ್ಕರಂ ೮೨

ಕಂ॥ ಪದರಜದಿಂ ಗಿರಿದುರ್ಗಂ
ಮದಲಾಳಾಜಳಕುಳಂಗಳಿಂ ಜಳದುರ್ಗಂ
ಪುದಿದುತ್ತುಂಗಧ್ವಜದಂ
ಡದಿನದು ವನದುರ್ಗಮೆನಿಸಿದುದು ನೃಪಸೈನ್ಯಂ ೮೩

ನೆಗೆದುದು ಬಳಪಾದರಜಂ
ಗಗನಮನಾವರಿಸೆ ಧರಣಿಗೆತ್ತಿನನ ಹಯಂ
ಗಗನಾಧ್ವಶ್ರಮಮಂ ಗೆಲ
ಲೆ ಗಡಂ ಖುರಪುಟಮನೂಱಲೆಂದನುಗೆಯ್ಗುಂ ೮೪

ಪರವಾಹಿನಿಗಳ ಪೆಂಪಂ
ಶರದದವೋಲ್ ಕಿಡಿಸಿ ಕೀರ್ತಿಚಂದ್ರಿಕೆಗಿನನು
ದ್ಧುರತೇಜಕ್ಕುನ್ನತಿಯಂ
ನಿರಂತರಂ ಪಡೆದು ನಡೆಯೆ ಪಡೆ ಕಡುಪಿಂದಂ ೮೫

ವ॥ ದಿಕ್ಚಕ್ರಮಮಂ ತನ್ನಂತೆ ತೇಜಶ್ಚಕ್ರದಿನಾಕ್ರಮಿಸುವ ಚಕ್ರರತ್ನಪುರಸ್ಸರನಾಗಿ

ಕಂ॥ ಕ್ಷಿತಿಭೃತ್ಕುಳದೌದ್ಧತ್ಯಮ
ನತುಳಬಳಂ ಕಿಡಿಸಿ ನಮ್ರಧರಣಿಗೆ ನೆಗಬ್ದು
ನ್ನತಿಯನೊದವಿಸುತೆ ಸೇನಾ
ಪತಿರತ್ನಂ ಮುಂದೆ ನಡೆಯೆ ತನ್ನಯ ಬೆಸದಿಂ ೮೬

ಆಕ್ರಮಿಸಲ್ಕಿರ್ದೆಡೆಯಿಂ
ಚಕ್ರಂ ನೆಱೆವೊಡಮಶೇಷದಿಗ್ವಿಜಯಕ್ಕಾ
ಚಕ್ರಿ ರವಿ ನಭಮನಂಶುಗ
ಳಾಕ್ರಮಿಸೆಯುಮಿರದೆ ನಡೆವ ತೆಱದಿಂ ನಡೆದಂ ೮೭

ಮಯಮಂ ವೇಗೋಚಿತಗತಿ
ಮಯಮಂ ಮುಂತೇಱಿ ತೋಱುತುಂ ಕೂಡೆ ನಿರಾ
ಮಯಮಂದು ಬಂದುದೊಡನೆ ಸ
ಮಯಮಂ ಪಾರ್ದಯ್ದೆ ಸುದ್ದಿಯಂ ಪೇಳ್ವ ಜನಂ ೮೮

ಗಜಗಮನೆಯರ್ಗಿದು ಯುಕ್ತಂ
ಗಜಗಮನಮೆನುತ್ತೆ ಕೀರ್ತಿಸುತ್ತಿರೆ ಸುಜನರ್
ಗಜಕುಂಭಸ್ಥಳಮಂ ಮದ
ಗಜಕುಂಭಸ್ತನಿಯರೇಱಿ ನೀಱೆಯರೆಸೆದರ್ ೮೯

ಉ॥ ಪೀಲಿಯ ದಡ್ಡಿ ಪೀಲಿದಟಿ ವಾರುವಚೋವರ ಚೆಲ್ವುವೆತ್ತ ಕ
ಣ್ಪೀಲಿಯದೆತ್ತಲುಂ ಕುಸುಮಸೌರಭಚಂದನಗಂಧಮಗ್ನ ಮ
ತ್ತಾಳಿಗಳೊಪ್ಪೆ ನಂದನವನಕ್ಕೆಣೆಯಾಗೆ ವಸಂತಲಕ್ಷ್ಮಿವೋಲ್
ಲೀಲೆಯನಪ್ಪುಕೆಯ್ದು ನಡೆತಂದುದು ರಾಣಿಯ ವಾಸಮಿಾಶನಾ ೯೦

ಗಾಡಿಯ ಬೀಡು ಕೊರ್ಮೆಯ ತವರ್ಮನೆ ಕಂಪಿನ ಪೆಂಪು ಕಂತು ಕೊಂ
ಡಾಡುವ ದೇಸೆಯಾಸವನೆ ಕಾಂತಿಯ ತಿಂತಿಣಿ ಮೆಲ್ಪಿನೊಳ್ಪು ಮೆ
ಯ್ಮಾಡಿದ ಭೋಗದಾಗರಮಲಂಪಿನ ಪೊಂಪುಟಿ ಜಾಣ ಜವ್ವನಂ
ರೂಢಿಯ ಪೆಂಡವಾಸಮೆಸೆದೇನೊಡವಂದುದೊ ಚಕ್ರವರ್ತಿಯಾ ೯೧

ಕಂ॥ ಶೃಂಗಾರಮೆ ಸಹವಾಸಿಯ
ನಂಗನೆ ಮೆಯ್ಗಾಪಿನಂಗರಕ್ಷಕನೆನೆ ಚೆ
ಲ್ವಿಂಗೆ ತವರ್ಮನೆಯೆನಿಸಿ
ರ್ದಂಗನೆಯರ್ ನಡೆದರೊಡನೆ ಚಕ್ರಾಯುಧನಾ ೯೨

ಉ॥ ರಾಣಿಯ ವಾಸದಂದಳಕೆ ದಡ್ಡಿ ಮುಸುಂಕುಮದುಂಟು ತಮ್ಮನೇ
ರಾಣಿಯ ಪೊಂಗಳದಳಕೆ ದಡ್ಡಿ ಮುಸುಂಕದನಿತ್ತೆ ಭೇದಮಾ

ರಾಣಿಯ ವಾಸದೊಳ್ ತವಗೆನಿಪ್ಪ ವಿಳಾಸಿನಿಯರ್ ವಿಳಾಸದಿಂ
ಜಾಣರ ಚಿತ್ತಮಂ ಪಿಡಿಯುತುಂ ನಡೆತಂದರದೊಂದು ಲೀಲೆಯಿಂ ೯೩

ಚಂ॥ ಕವಿದಿರೆ ದಡ್ಡಿ ರಾಣಿಯರ್ಗೆ ತಮ್ಮೊಳದಿಲ್ಲದೊಡೊಪ್ಪುತಿರ್ದೊಡೀ
ಯವಯವ ಶೋಭೆಯಿಲ್ಲವರೊಳುಳ್ಳೊಡದೇಕೆ ಮುಸುಂಕದೆಂದು ನೋ
ಡುವರೊಲವಿಂದೆ ನೋಡೆ ಪರಿಚಾರಿಕೆಯರ್ ಬರುತಿರ್ದರೊಡ್ಡಿಸು
ತ್ತವರನೆ ಕೆಯ್ತದಿಂ ಮೊಗವಡಂಗಳೆದಂಗಜಕುಂಭಿಯೆಂಬಿನಂ ೯೪

ವದನಸರೋಜಸೌರಭಕೆ ಮಂಡಳಿಸಿರ್ದ ಮದಾಳಿಯಿಂದಮೆ
ತ್ತಿದ ಧವಳಾತಪತ್ರಮದು ಪೀಲಿಯ ಸತ್ತಿಗೆಯಂತೆ ತೋಱೆ ಚೆ
ಲ್ವಿದಿರ್ಗೊಳುತಿರ್ಪ ಪೀಲಿದಱಿ ಬೆಳ್ಗೊಡೆಯಂತೆ ಕಟಾಕ್ಷಕಾಂತಿಯಿಂ
ಪುದಿದೆಸೆವಂತೆ ಲೀಲೆಯೊಳೆ ಬಂದುದು ವಾರವಧೂಕದಂಬಕಂ ೯೫

ಮ॥ ಕರಿದಾನಾಂಬುಗಳಿಂದಮಬ್ದಸಮಯಂ ಶ್ವೇತಾತಪತ್ರಾಭ್ರದಿಂ
ಸರದಂ ಚಾಮರವಾತದಿಂದೆ ಹಿಮಕಾಲಂ ಚಂದನಾಲೇಪದು
ಬ್ಬರದಿಂದಂ ಶಿಶಿರ ವಧೂತನುಲತಾಶ್ರೀಯಿಂ ವಸಂತಂ ನೃಪಾ
ಭರಣಾಸ್ತ್ರದ್ಯುತಿಯಿಂದೆ ಬೇಸಗೆ ಕರಂ ಮೆಯ್ದೋಱಿತಾ ಸೈನ್ಯದೊಳ್ ೯೬

ಕರಿಘಂಟಾರುತಿ ವಾಜಿರಾಜಿಖುರಹೇಷಾನಿಸ್ವನಂ ಸ್ಯಂದನೋ
ತ್ಕರಚಕ್ರವ್ರಜಚೀತ್ಕೃತಂ ಪಟಹಭೇರೀಶಂಖನಾದಂ ದಿಶಾಂ
ತರಮಂ ತೀವಿದುವಾವಚೋದ್ಯಮವನೀಚಕ್ರಂ ದಿಶಾಚಕ್ರಮಂ
ಬರಚಕ್ರಂ ಕಿಱಿದಾಯ್ತು ಚಕ್ರಿಯ ಚಮೂಚಕ್ರಕ್ಕೆ ತದ್ಯಾತ್ರೆಯೊಳ್ ೯೭

ವ॥ ಅಂತು ಪಗೆವರ ಬಗೆಗಂ ಸಂದಣಿಯಾಗೆ ಸಂದಣಿಸಿ ಬಲ್ಕಣಿಯೆನಿಸಿದಣಿ ಬರುತ್ತುಮಿರೆ ದುರ್ವಾರಪೌರುಷಂ ವಾರುಣವಾಯವ್ಯದಿಶಾಮುಖಕ್ಕೆ ಅಭಿಮುಖವಾಗಿ

ಕಂ॥ ಎಡೆಯಣ ಬಡವುಗಳಂ ಗಡ
ಕಿಡಿಸುವುದಂ ಮಾಣ್ದು ಕೆಱೆಯನಗುಱ್ವೊಡೆ ಕೊರಡಂ
ಕಡಿಯಲ್ವೇೞ್ಕು ಪೇೞಿನೆ
ನಡೆದಂ ಬಲ್ಲಿದರ ಮೇಲೆ ಮುಂ ಚಕ್ರಧರಂ ೯೮

ಚಂ॥ ನಡೆಯದೆ ಮುಂದೆ ಬಂದು ಶರಣೆಂದು ಬರ್ದುಂಕುವೆವೆಂಬ ಭೂಭುಜರ್
ನಡೆದೊಡೆ ಬಂದು ಕಂಡರೆನೆ ವಿಸ್ಮಯಮೇನೆನೆ ಚಕ್ರವಲ್ಲಭಂ
ನಡೆವ ದಿಶಾಮುಖಸ್ಥಿತ ಮಹೀಶರವೋಲಿತರಾಶೆಯಲ್ಲಿ ನೇ
ರ್ಪಡೆ ನೆಲಸಿರ್ದ ಭೂಭುಜರ ಕಾಣ್ಬೆನೆಗಂ ನಡೆದಂ ಜಯಾಶ್ರಯಂ ೯೯

ವ॥ ಅಂತು ನಿಖಿಳಭುವನತಳವಿಳಸಿತಸರೋಜರಾಜ ರಾಜತೇಜಕ್ಕೆ ಸುಗಿಮೊರ್ಮೆದ ಲಾತ್ಮೀಯಶ್ರೀಯನೊಪ್ಪಿಸಿ ತಲೆವಾಗುವಂತೆ ಪ್ರಸ್ಥಾನಗಭೀರಭೇರೀಭಾಂಕಾರಭಿನ್ನ ಹೃದಯರಾಗಿ

ಉ॥ ಸುಸ್ವರಗಾಯಕಪ್ರತತಿ ಜಾತಿಹಯಂ ಮದಗಂಧಸಿಂಧುರಂ
ಭಾಸ್ವರರತ್ನ ಭೂಷಣಗಣಂ ಮೃಗನಾಭಿ ಮೃಗಾಯತಾಕ್ಷಿ ಕಾ
ರ್ತಸ್ವರರಾಶಿ ಸಾರವಸನಂ ಘನಸಾರಮಿವಾದಿಯಾದ ಸ
ರ್ವಸ್ವಮನಿತ್ತು ಚಕ್ರಿಯ ಮನಂಬಡೆಯಿತ್ತು ನೃಪಾಳಜಾಳಕಂ ೧೦೦

ನೋಡಲಗಮ್ಯಮಪ್ಪಡವಿಯಂ ಗಿರಿಸಾನುವಿನಗ್ಗದಿಕ್ಕೆಯುಂ
ಮಾಡಿದ ಬೇಡರುಂ ಪುಲಿಯ ಚರ್ಮಮನಾನೆಯ ದಂತಮಂ ತಡಂ
ಮಾಡದೆ ತಂದು ತಮ್ಮೊಡಮೆಯಂ ವಿಭುಗೊಪ್ಪಿಸಿ ಕಂಡರೆಂದೊಡಿಂ
ನಾಡು ಪೊದಟ್ಟಿ ಬೀಡು ತಮಗಣ್ಣವರಾರ್ಗಳ ಕಪ್ಪಮೀಯದರ್ ೧೦೧

ವ॥ ಅಂತು ಸಕಳ ದಿಶಾನೀಕಸ್ಥಿತರಾಲೋಕಮೊರ್ಮೊದಲೆ ತಲೆವಾಗಿ ನಿಜಕು
ಳಧನಕುಳಮನೊಪ್ಪಿಸಿಯಾಳ್ವೆ ಸಮನಪ್ಪುಕೆಯ್ವಿನಮಾಜ್ಞಾವಿಧೇಯಮಂ ಮಾಡುತ್ತುಂ

ಕಂ॥ ಸುದತಿಯ ಸೌಮ್ಯಾಕೃತಿಯಂ
ಮುದದಿಂದೀಕ್ಷಿಸುವತೀವಭಾವುಕನ ನಯಾ
ಸ್ಪದನಯನದಂತೆ ರಮ್ಯ
ಪ್ರದೇಶದೊಳ್ ಚಕ್ರಿ ಬೀಡುವಿಡುತುಂ ನಡೆದಂ ೧೦೨

ಮ॥ ವನಜಾಮೋದಮನಂಗ ನಾಸ್ಯವನಜಾತಾಮೋದದೊಳ್ ವಾರಿಬಿಂ
ದುನಿಕಾಯಂಗಳನುದ್ಘಘರ್ಮಜಳದೊಳ್ ಸಪ್ತಚ್ಛದಾಮೋದಮಂ
ಘನಮಾತಂಗ ಮದೋತ್ಥಸೌರಭದೊಳೋತಂತೊಂದಿಸುತ್ತುಂ ನದೀ
ವನಮಂದಾನಿಳನೊಂದಿಸಿತ್ತು ಪಡೆಗತ್ಯಾನಂದಸಂದೋಹಮಂ ೧೦೩

ವ॥ ಅಂತು ವನಜಳಕೇಳಿಗನುಕೂಳಮಾದ ನದ್ಯುದ್ಯಾನವಿಳಾಸಪ್ರದೇಶದೊಳೇನು
ಮನುದಾಸೀನಂ ಮಾಡದೆ ಬೀಡುವಿಡುತ್ತುಂ ಪೋಗೆವೋಗೆ

ಮ॥ ಪನಿಪುಲ್ ಕುಂಭಿಮದಾಂಬುವಿಂ ಹಿಮಸಮೀರಂ ಸಾರಕರ್ಪೂರರಚಂ
ದನ ಗಂಧೋಚಿತಮಾಚರಾನಿಳನಿನಾದಂತುಣ್ಮೆ ಚಕ್ರೇಶಸಾ
ಧನಮಂ ಪೋಲ್ತೊದವಿತ್ತು ತೀವ್ರಕರತೇಜೋವೈಭವಂ ವಿದ್ವಿಷ
ದ್ವನಿತಾಸ್ಯಾಂಬುಜಲಕ್ಷ್ಮಿಯೋಸರಿಪಿನಂ ಹೇಮಂತಮೇಂ ಮಂತಣಂ ೧೦೪

ಚಂ॥ ದಿವದೊಳಮೌಷ್ಣ್ಯಮಂ ಬಿಸುಟು ಶೀತಕರಂಗೆಣೆಯಾಗೆ ಭಾನು ಕೈ
ರವಮಲರ್ದಿರ್ದುವಂಬುಜವನಂ ಮುಗಿದಿರ್ದುವು ಬೆಳ್ಮುಗಿಲ್ಗಳ
ರ್ದುವು ಹಿಮಮಂ ಕಱುತ್ತು ಕಱದಂತೆ ಚರಕ್ಕಚರತ್ವಮಾಗೆ ಕೋ
ಡುವ ಪವನಂ ಪೊದಟ್ಟು ಪೊದಟ್ಟರೆ ಪಾಗಿ ಮಹೀವಿಭಾಗದೊಳ್ ೧೦೫

ಕಂ॥ ಹಿಮಮಂ ಪೊತ್ತೆಸೆಪನಿಳ
ಶ್ರಮಜಳಮಲ್ಲೊಕ್ಕುವೆನೆ ಸುರಿವ ಪನಿಪುಲ್ಗಳ್
ಗಮನಕ್ಕೆ ಜಳಾಂಜಳಿಯಂ
ನಿಮಿರ್ಚೆ ಪಥಿಕರ್ಗೆ ಪೆರ್ಚಿದುದು ಹೇಮಂತಂ ೧೦೬

ಹಿಮಸಮಯದೊಳಹಿಮಕರಂ
ಹಿಮಹತಿಗುಳ್ಳಿಕ್ಕಿ ಕರಮನುಡುಗುವನುಱಿದಂ
ತಮಳಕ್ಕಮಳಂಗಳೆ ಕೊ
ಪ್ಪಮರಲ್ ಪರಿವಾ ಬಿಸಿಲ ಪಸರಮ್ಮೆಕಿಲ್ಗಳ್ ೧೦೭

ದಿವಸವಧು ಕುಂದುವಳ್ ರಾ
ತ್ರಿವನಿತೆ ಪೆರ್ಚುವಳದುಚಿತಮಿಾ ಮಾಗಿಯೊಳೊ
ಪ್ಪುವ ಪತಿಯ ಹಾನಿವೃದ್ಧಿಯೆ
ಯುವತಿಯರೊಳಮಕ್ಕುಮೆಂಬುದದು ತಕ್ಕುದೆ ದಲ್ ೧೦೮

ಕರಚರಣಂಗಳ್ ಹಿಮದಿಂ
ದುರೆ ಕೋಡಗಗಟ್ಟಿದಂತಿರೆ ಶಾಖಾ
ಚರಮಾಗಿಯುಮೇಂ ಶಾಖಾ
ಚರಮೆನಿಸಿದುವಂದು ಕೋಟಿ ಕೋಡಗಮನಿತುಂ ೧೦೯

ಚಂ॥ ಕರಿ ನಗದೊತ್ತುಗೊಂಡುಮಿಡುಕಲ್ಕಣಮಾಱದೆ ನಿಂದೊಡಂದು ಕೇ
ಸರಿ ಹಿಮಸಂಗಮಕ್ಕಗಿದಳುರ್ಕೆಯನೊಕ್ಕು ಕರೀಂದ್ರಪಾರ್ಶ್ವಮಂ
ಗಿರಿಯ ನಿತಂಬಮೆಂದು ಗಡ ಸಾರ್ದು ನಿಕುಂಚಿತಗಾತ್ರಮಿರ್ದುದಾ
ಯೆರಡಱ ಕೋಪವಹ್ನಿಯುಮಡಂಗಿದುದಕ್ಕುಮೆ ಶೀತಘಾತದಿಂ ೧೧೦

ಕಂ॥ ಸರದೊಳ್ ಸಲಿಲಂ ವಿಮಳ
ಸ್ವರೂಪಮಂ ಪಡೆದು ಮಾಗಿಯೊಳ್ ಶೈತ್ಯಗುಣಾ
ಕರಮೆನಿಸಿತಂತೆ ಶಾಂತತೆ
ದೊರೆಕೊಳ್ವುದು ಸುಪ್ರಸನ್ನಹೃದಯರ್ಗರಿದೇ ೧೧೧

ಒದವಿಸೆ ಸರದಂ ಸಪ್ತ
ಚ್ಛದದೊಳ್ ಸಮ್ಮದಮನಳಿಗೆ ಮನುಜಾಳಿಗೆ ತಾ
ನೊದವಿಸಿತೆಸೆವ ನವಪ್ರ
ಚ್ಛದದೊಳ್ ಸಮ್ಮದಮನೊರ್ಮೆಯುಂ ಹಿಮಸಮಯಂ ೧೧೨

ಘನಘುಸೃಣಮಲ್ಲದನುಲೇ
ಪನಮಂ ಸಂಶ್ಲೇಷಮಲ್ಲದಣಮೊಲ್ಲದು ಮಿ
ಕ್ಕಿನ ಕಾಮಕೇಳಿಯಂ ವಿಷ
ಯನಿಮಗ್ನಂ ಭಗ್ನಮಾಗಿ ಮಾಗಿಯೊಳೆ ಜನಂ ೧೧೩

ಚಂ॥ ಮಡದಿಯರಾತ್ಮಕೇಕರವಿಲೋಕನದಿಂ ಜನಚಿತ್ತಮಂ ಪದಂ
ಬಡಿಸೆ ಬಱಿಕ್ಕೆ ತಮ್ಮ ಕೆಲಸಂ ಗಡದಲ್ಲದೆ ಮಾಗಿಯಲ್ಲಿ ತಾ
ವೆಡೆವಱಿಯುತ್ತುಮಿರ್ದಪುವಿವೇವುವೆನುತ್ತಿಱಿಕೆಯ್ದು ಪೂಗಳಂ
ಗಡ ಕಡೆಗಣ್ಣ ಕೂರ್ಗಣೆಗಳಿಂದಿಸುವಂ ಮದನಂ ವಿಯೋಗಿಯಂ ೧೧೪

ಜಗಕಪಕಾರಿ ತೀವ್ರನೆನಿಸಿರ್ದಧಿಕಾರಿ ನಿರಾಕುಳಂ ಕುಟುಂ
ಬಿಗಳ ಧನಂಗಳಂ ಕವರ್ದು ಮೇಲುದುಮಂ ಸುಗಿವಂತೆ ವೃಕ್ಷರಾ
ಜಿಗಳ ನವಪ್ರಸೂನಫಳಮಂ ಶಿಶಿರಾನಿಳನೀಱ್ದುಕೊಂಡು ನೆ
ಟ್ಟಗೆ ನೆಲಸಿರ್ದ ಪಣ್ಣೆಲೆಯನೆಯ್ದೆ ಕಳಲ್ಚಿದುದೆಲ್ಲಿ ನೋೞ್ಪೊಡಂ ೧೧೫

ಮ॥ ಘನಸಾರಾನುಭವಕ್ಕೆ ಚಂದನರಸಾಶ್ಲೇಷಕ್ಕೆ ವಿದ್ವೇಷಿಯಾ
ಗಿ ನಿತಾಂತಂ ಶಿಶಿರಂ ವಸಂತಸಮಯಶ್ರೀಪ್ರೀತಿಯಂ ಪುಟ್ಟಿಸಿ
ತ್ತೆನಸುಂ ಭೂವಳಯಕ್ಕನಿಷ್ಟದೊದವಂ ಸಂಪಾದಿಸುತ್ತಿರ್ಪ ಭೂ
ಪನ ಸಂಪತ್ತಿ ಜನಪ್ರಸನ್ನನೃಪತಿಶ್ರೀಪ್ರೀತಿಯಂ ಮಾೞ್ಪವೋಲ್ ೧೧೬

ಚಂ॥ ಹಿಮವಿಭವಂ ಪ್ರತೀತ ಶಿಶಿರಂ ಸಮಯಾಸಮಯಜ್ಞನಂದದಿಂ
ದಮೆ ಪೆಱಪಿಂಗಿದತ್ತು ಜಳಕೇಳಿಗೊಡರ್ಚಿದಪಂ ಸಮಸ್ತಭೂ
ರಮಣನದಕ್ಕೆ ತಮ್ಮಿರವು ಸಲ್ಲದೆನುತ್ತುೞಿದಂತೆ ಸಿಂಧುತೀ
ರಮನವನೀಜಪುಷ್ಪಫಳಸಾರಮನೆಯ್ದದ ಮುನ್ನಮಾವಗಂ ೧೧೭

ಕಂ॥ ವಿಶದಸುಮನಸ್ಸಮೂಹ
ಪ್ರಶಸ್ತವಿಭವಾಪಹಾರಿಯೆಂಬೀ ಮುಳಿಸಿಂ
ಕುಶಳನೃಪನಂತೆ ಬಂದುದು
ಶಿಶಿರಮನದಟಲೆಯ ಕಾಂತಮೆನಿಸಿ ವಸಂತಂ ೧೧೮

ವ॥ ಅದೆಂತೆನೆ

ಚಂ॥ ಅಲರ್ದಲರ್ಗಣ್ಗಳೊಪ್ಪೆ ನಳಿನಾನನಮಾಗೆ ವಿಕಾಸಮಂ ಸುಪಾ
ಟಳದಶನಚ್ಛದಂ ಸ್ಮಿತದೊಳೊಂದೆ ಸಮುನ್ನತರಾವದಂತೆ ಕೋ ॥
ಕಿಳಕಳರಾವಮುಣ್ಮೆ ನವನಂದನಲಕ್ಷ್ಮಿಗೆ ಪುಷ್ಪಧಾಮಕೋ
ಮಳೆಗೆಸುವಂದು ಬರ್ಪ ತೆಱದಿಂದಮೆ ಬಂದುದು ದಕ್ಷಿಣಾನಿಳಂ ೧೧೯

ಮ.ಸ್ರ॥ ಲಲನಾಲಾವಣ್ಯವಾರಾಶಿಯೊಳೆ ಗುರುಕುಚಂ ಪೊನ್ನ ಬಿಣ್ಗುಂಡು ಶುಂಭ
ತ್ಕಳಿತಾಮ್ರಂ ಕೂವಕಂಬಂ ವಿಚಕಿಳಮೆಸಳಂ ಚಂದ್ರಮಂ ಕೂವಕಂಬ
ಕ್ಕೆಳಸಿರ್ಪಂ ಕಂತು ಸಾಂಯಾತ್ರಿಕನೆನಿಸೆ ಮನೋವೇಗದಿಂ ದಕ್ಷಿಣಾಶಾ
ನಿಳ ಸಂಪಚ್ಫೋದಿತಂ ಬಂದುದು ಸುಖಭರಿತಂ ಚೈತ್ರಮಂ ಪೋಲ್ತು ಚೈತ್ರಂ ೧೨೦

ಮ॥ ಹರಿ ಪುನ್ನಾಗದಿನುದ್ಘಖೇಟನ ಮರುದ್ಮಾತಂಗಳಿಂ ಚಾರುಬಾ
ಣರುಚಿಸ್ಯಂದನದಿಂ ವನೇಚರಪದಾತಿ ವ್ಯೂಹದಿಂ ಷಡ್ವಿಧಂ
ಪರಿವಾರಂ ತನಗೊಪ್ಪೆ ಚಕ್ರಪದವೀ ಸಂಪೂಜಿತಂ ರಾಜನಂ
ತಿರೆ ವಿಭ್ರಾಜಿಸಿ ಬಂದದೇನೆಱಗಿಸಿತ್ತೋ ಚೈತ್ರಮಿಾ ಧಾತ್ರಿಯಂ ೧೨೧

ಚಂ॥ ಸುರಗಿ ಮನೋಹರಂ ಸುರಭಿ ಕಳ್ಗುಜಂ ಸಹಕಾರಭೂರುಹಂ
ಪಿರಿಹಿಗಿರಿಪ್ರಭೇದಿ ಕಳಕಂಠರವಂ ಪವಿ ಬಿಂಬಕುಂಭಭಾ

ಸ್ವರಶಶಿಕಾಂತಿದಂತಿಯೆನೆ ಬಂಧುರಗಂಧಮರುದ್ವಿಳಾಸ ಭಾ
ಸುರತರನಂದನಪ್ರಭು ಸುರೇಶ್ವರನಂತೆ ವಸಂತಮೊಪ್ಪುಗುಂ ೧೨೨

ಮ.ಸ್ರ॥ ಲತಿಕಾಲಕ್ಷ್ಮೀವಿಳಾಸಂ ಮಳಯಪವನವಿನ್ಯಾಸಮಬ್ಜಪ್ರಹಾಸಂ
ಚತುರಾಶ್ವಾಸಂ ಸಮುತ್ಪಾದಿತವಿರಹಿಜನತ್ರಾಸಮರ್ಕಪ್ರತಾಪಾ
ಪ್ರತಿಮವ್ಯಾಸಂ ಶಶಾಂಕದ್ಯುತಿವಿಭವವಿಭಾಸಂ ವರಸ್ತ್ರೀವಿಳಾಸಂ
ಕ್ಷಿತಿಗತ್ಯಾನಂದಮಂ ಸಂಧಿಸಿತು ಸುರಭಿಮಾಸಂ ಸ್ಮರಶ್ರೀವಿಳಾಸಂ ೧೨೩

ವ॥ ಅಂತು ಸಮಸ್ತಧಾತ್ರಿಯೊಳಂ ಪ್ರಶಸ್ತಪ್ರಮೋದಮಂ ವಿಸ್ತಾರಿಸಿ

ಉ॥ ಇತ್ತುದಶೇಷರಾಜನಿವಹಂ ತನಗುಳ್ಳ ಸುವಸ್ತುವಾಹಮಂ
ತೆತ್ತಪೆನಾನುಮೆಂಬ ಬಗೆಯಿಂದಮೆ ಬಂದು ವಸಂತರಾಜನೇ
ನಿತ್ತನೊ ಪಲ್ಲವಪ್ರಸವಸತ್ಫಳಮಂ ಕಳಕಂಠಗಾಯಕೋ
ದ್ಯತ್ತತಿಯಂ ಜಗತ್ಪ್ರಭುಗೆ ದಕ್ಷಿಣಮಾರುತಚಾಮರೌಘಮಂ ೧೨೪

ವ॥ ಅಂತು ವಸಂತರಾಜಂ ತನಗಿತ್ತಪೂರ್ವ ವಸ್ತುಗಳಂ ಸಮಸ್ತ ಧಾತ್ರೀಪತಿ ಕೊಳ್ಳುತ್ತುಂ

ಮ.ಸ್ರ॥ ಅನುಕೂಲಾಗಾಧ ಪದ್ಮಾಕರ ಗುಣವಿಳಸದ್ರಾಜಹಂಸಾಳಿವಿಭ್ರಾ
ಜಿನಿಯಂ ದಾನಾಂಬುವಾಹೋಚಿತಗತಿ ವಿಳಸಚ್ಚಕ್ರಸಂರಾವ ಸಂಶೋ
ಭಿನಿಯಂ ತನ್ನೊಪ್ಪುವೀ ವಾಹಿನಿಯವೊಲೆಸೆಯುತ್ತಿರ್ಪ ರಕ್ತಾಖ್ಯೆಯಂ ವಾ
ಹಿನಿಯಂ ತಾನೆಯ್ದೆವಂದಂ ಸುಕವಿಜನಮನೋಹರ್ಷಸಸ್ಯಪ್ರವರ್ಷಂ ೧೨೫

ಗದ್ಯ

ಇದು ವಿದಿತವಿಬುಧಲೋಕನಾಯಕಾಭಿಪೂಜ್ಯವಾಸುಪೂಜ್ಯಜಿನಮುನಿ ಪ್ರಸಾದಾಸಾದಿತ ನಿರ್ಮಳಧರ್ಮ ವಿನುತ ವಿನೇಯಜನವನಜವನವಿಳಸಿತ ಕವಿಕುಳತಿಳಕಪ್ರಣೂತ ಪಾರ್ಶ್ವನಾಥ ಪ್ರಣೀತಮಪ್ಪ ಪಾರ್ಶ್ವನಾಥಚರಿತಪುರಾಣದೊಳ್ ವಸಂತಾಗಮನವರ್ಣನಂ ಅಷ್ಟಮಾಶ್ವಾಸಂ

ನವಮಾಶ್ವಾಸಂ

ಕಂ॥ ಶ್ರೀವಲ್ಲಭನಖಿಳ ಕಳಾ
ಕೋವಿದನೀಕ್ಷಿಸಿದನೀಕ್ಷಣಾಕ್ಷೂಣಸುಖೋ
ಜ್ಜೀವನಜೀವನಮಂ ಶೋ
ಭಾವಿಳಸಿತನದಿಯನೊಸೆದು ಕವಿಕುಳತಿಳಕಂ ೧

ವ॥ ಆ ಸಮಯದೊಳ್

ಕಂ॥ ಅಱಿಪಿಂ ಪೆಂಡಿರ ಪೊರ್ಕುಟಿ
ಸುೞಿಯೊಳ್ ಸುೞಿತರ್ಪ ನೃಪನ ಕಣ್ಬೊಣರ್ಗಳನೇ
ನಿಱಿಸಿದುವೊ ನದಿಯೊಳೊದವಿದ
ಸುೞಿಗಳ ಬೞಿವಿಡಿದು ಸುೞಿದು ಪೊಳೆವೆಳಮಿಾಂಗಳ್ ೨

ವ॥ ಅಂತಾ ಮಹೀಕಾಂತನನುರಕ್ತತೆಯಿಂ ರಕ್ತಾಖ್ಯಾನನದೀಲಕ್ಷ್ಮಿಯಂ ನಿರೀಕ್ಷಿಸುತ್ತುಮಿರೆ

ಕಂ॥ ಭೂಮಿಾಶನ ಮನಮಱಿದು ಮ
ಹಾಮಾತ್ಯಂ ನಿಲಿಸಿ ದಂತಿಯಂ ಬಿನ್ನವಿಕುಂ
ಪ್ರೇಮದ ಮಡದಿಯ ನುಡಿಯವೊ
ಲೇಮಾತಿದು ದಾಂಟಲರಿದು ನದಿ ನೃಪತಿಳಕಾ ೩

ವ॥ ಅಂತುಮಲ್ಲದೆ

ಚಂ॥ ಅನುಪಮಪುಂಡರೀಕಪರಿಶೋಭಿ ವಿನೋದನಿಮಗ್ನ ಕಾಮಿನೀ
ಘನಕುಚಕುಂಕುಮಾಂಕಭಿನಂದಿತನಂದನರಾಜಿ ರಾಜಹಂ
ಸನಿವಹಸೇವಿತಂ ವಿಧೃತಚಕ್ರಮುದಾರ ಪರೋಪಕಾರಜೀ
ವನನಿಧಿ ನಿನ್ನವೋಲಧಿಪ ರಂಜಿಪುದೀ ನದಿಯಾತ್ತ ಸಮ್ಮದಂ ೪

ಉ॥ ಈ ವನವೀಥಿಯೊಳ್ ಬೆಳೆದ ಬಾಳದ ಬೇರ್ಗಳ ಚಂದನಂಗಳಿಂ
ದೀವರದೊಕ್ಕ ಪಾದರಿಯ ಜಾದಿಯ ಕೇದಗೆಯಿಂಪುವೆತ್ತ ಕಂ
ಪಾವಗಮಿಲ್ಲಿ ಪಲ್ಲವಿಸೆ ಪಾಣಿಯವಾಸಮನಿಕ್ಕಿದಂತೆ ಸೌ
ಖ್ಯಾವುದೆಂದೊಡೀ ನದಿಯನೀಕ್ಷಿಸೆ ಪಾಂಥನ ತೃಷ್ಣೆ ಪೋಗದೇ ೫

ಕಂ॥ ಇಂಬಾದಿದಱೆರ್ತಡಿಯ ಬ
ನಂ ಬಯ್ತಲೆದೆಗೆದ ಕೇಶವನಮೆನಿಸೆ ಪರಾ

ಗಂಬೊರೆದ ಸಿಂಧು ಸೀಮಂ
ತಂಬೊಲಿಳಾಕಾಂತೆಗಧಿಪ ಮಿಗೆ ಸೊಗಯಿಸುಗುಂ ೬

ಭುವನಪತಿ ಬೆಸಸೆ ಸಂಚಳಿ
ಸುವರಸಿಯಂ ಮಿಾಱಲೀಯದೊಯ್ವಾ ಸಹವಾ
ಸಿವೊಲಿದಱ ವಜ್ರವೇದಿಕೆ
ನವವೇತ್ರಲತಾವನಂ ಕರಂ ಕಣ್ಗೊಳಿಕುಂ ೭

ವ॥ ಅಂತುಮಲ್ಲದೆಯುಂ

ಕಂ॥ ಪ್ರವಿಪುಳಲಕ್ಷ್ಮೀನಂದನ
ಮವಿಲಂಘ್ಯಂ ಭುವನರಕ್ಷಕಂ ಪ್ರಾಪ್ತಮಹಾ
ರ್ಣವಮಪ್ಪುದಱಿಂದವನಿಪ
ಭವದಾಜ್ಞೆವೊಲಿದಱ ಕನಕವೇದಿಕೆಯೆಸೆಗುಂ ೮

ಮ॥ ತನಿವಣ್ಣಾದುವು ಮೃಂದವಾಟಿ ಸವಿಗಂ ಕಂಪಿಂಗಮಾಯ್ತಿರ್ಕೆ ಪ
ಣ್ತೆನಸುಂ ಬರ್ಕೆ ರಸಕ್ಕೆ ಪಕ್ಕೆನಿಸಿ ಕೊರ್ವಿತ್ತಾವಗಂ ಕರ್ವು ಸಾ
ಲ್ದನಿತಂ ಕಾಯ್ತುದು ತೆಂಗು ಪಣ್ಣಡಕೆಯಂ ಪೇಱರ್ದುದೀ ಕೌಂಗು ಪ
ಣ್ಣನೆ ತಿಣ್ಣಂ ತಳೆದತ್ತು ಮಾವೆನೆ ವನಂ ಚಿತ್ತೋತ್ಸವಾಲಂಬನಂ ೯

ಕಂ॥ ತಿಳಿನೀರಿಂದಂ ತೆಂಗಂ
ಬೆಳೆಯಿಸೆ ನದಿ ನದಿಯನೊಸರ್ವಯೆಳನೀರಿಂದಂ
ಬೆಳೆಯಿಸೆ ತೆಂಗೊಪ್ಪಿದುವವಿ
ರಳಮೊಂದಱ ಕಡವನೊಂದು ನೀಗುವ ತೆಱದಿಂ ೧೦

ಕಟ್ಟಿಲಿಪೆಲೆವಳ್ಳಿಗಳಿಂ
ತಳ್ತೆಳೆಗೌಂಗಲ್ಲಿ ಮಲ್ಲಿಗೆಯ ವಲ್ಲರಿಯಿಂ
ತಳ್ತೆಳಮಾವು ಲತಾಂಗಿಯ
ತೋಳ್ತಳ್ತಿರ್ದೆಸೆವ ಕಾಂತನಂತೆಸೆದಿರ್ಕುಂ ೧೧

ಎನಿತೊಳವು ಕುಸುಮಸಮುದಯ
ಮನಿತುಮನಾತ್ಮೀಯಗಂಧದಿಂ ಪೊರೆದಳಿಗಂ
ತೆನಸುಂ ಚೌತಮನೊದವಿಪು
ದೆನಿಸುವ ಸಂಪಗೆಯ ಕಂಪು ಪೊಂಪುಳಿ ಬನದೊಳ್ ೧೨

ಪೊಂಕಂಪಂ ಪಡೆದತ್ತೆನೆ
ಪೊಂಕಂ ಪಂಚೇಷುಗೊದವೆ ಚೈತ್ರದ ಪೆಸರ್ವೆ
ತ್ತಂಕಂ ಬಿರಯಿಗೆ ನೆಗಟ್ದಾ
ತಂಕಂ ಬಿಡವೆಡರೆ ಪೂತ ಸಂಪಗೆಯೆಸೆಗುಂ ೧೩

ಝುಂಕಾರದಿಂದೆ ವಿರಹಿಯ
ಹಂಕಾರಮನುಗಿಯೆ ಚೈತ್ರಮೊಸೆದಳಿಮಾಳಾ
ಕಿಂಕರರ್ಗೆ ಕೊಟ್ಟ ಕಣಿಗಿಲೆ
ಯಂ ಕಣಿಗಿಲೆ ಪೋಲ್ತು ಪೂತು ಮಿಗೆ ಸೊಗಯಿಸುಗುಂ ೧೪

ಕತ್ತುರಿಗನುಲೇಪಂ ಕಂ
ಪೊತ್ತರಿಪೀ ಪೈತಿಗಲರ್ಗೆ ಎಣೆಯಿಲ್ಲೆನುತುಂ
ಚಿತ್ತಭವನಿತ್ತ ಜಯಸಂ
ಪತ್ತಿಯ ಕಹಳಾರವಂಬೊಲಳಿರವಮೆಸೆಗುಂ ೧೫

ಮಧುಬಿಂದು ಮಲ್ಲಿಗೆಯೊಳಿರೆ
ಮಧುಕರರುತಿ ಮಂತ್ರಮೆನಪಿನಂ ದ್ವಿಜರಾಜಂ
ಮಧುಮಿತ್ರನ ಮದುವೆಗೆ ಮಿಗೆ
ಮಧುಪರ್ಕಮನಟ್ಟಿಱಿಂದೆ ಮಾಟ್ಪಂತೆಸೆಗುಂ ೧೬

ಶ್ರೀಗಂಧವಿನೂತನವ
ಶ್ರೀಗಂ ಧವಳಾಬ್ಜ ಸುರಭಿಸುರಭಿತಸಲಿಳಾ
ಭೋಗಕ್ಕಂ ಮನಮೆಱಗಿರೆ
ಭೋಗಕ್ಕಂಗನೆಯರೆಳಸಿದರ್ ನೃಪತಿಳಕಾ ೧೭

ಕಾಂತಿಯನಾಂತೆಸೆವ ಲಲಾ
ಟಂ ತೊಳಗುವ ಸಸಿವೊಲೊಪ್ಪಿ ಕಾಯ್ವಂತೆ ಲಲಾ
ಟಂತಪನಾದಂ ತಪನಂ
ಶ್ರಾಂತಿಗೆ ನೆಲೆಯಾದರಂತಪುರದಂಗನೆಯರ್ ೧೮

ಇನನಾರಂ ಮನ್ನಿಪನವ
ರನೆ ಪೊರ್ದುವುದುಚಿತಮೆಂಬ ತೆಱದಿಂದಂ ನೆ
ಟ್ಟನೆ ಕಾಯೆ ತಪನನಂಬುಜ
ವನಮಂ ಪೊರ್ದಿದುದು ರಾಜಹಂಸಸಮಾಜಂ ೧೯

ಕಡುಗಾಯ್ದಂ ರವಿ ಲೇಸಂ
ಕಡೆಗಣಿಸಲ್ಕಾಗದೆಂಬ ತೆಱದಿಂ ಲೇಸಿಂ
ಗೆಡೆಗೊಂಡಿರ್ದುದು ನದಿಯುಂ
ತಡಿವಿಡಿದೀ ಬನಮುಮಿಲ್ಲಿ ಬಿಡುವುದು ಬೀಡಂ ೨೦

ಈ ವನಲಕ್ಷ್ಮೀ ದಿಟಂ ತಾ
ನೀ ವನ ಲಕ್ಷ್ಮಿವೊಲೆ ಸರ್ವಜನಸೇವ್ಯಮಿದಂ
ಭಾವಿಸಿ ತಡೆಯದೆ ನಡೆವುದು
ದೇವರ್ ವನಕೇಳಿಗುಟಿವುದಾಳೋಚನಮಂ ೨೧

ಎನೆ ಮನದೆಗೊಂಡು ಬೀಡಂ
ಜನಪತಿ ಬಿಡಿಸಲ್ಕೆವೇೞ್ದು ತಡೆಯದೆ ನಿಜವಾ
ಹನದಿನಿೞಿದು ಗಜಪತಿಯಂ
ನೆನೆಯಿಸಿ ವನಮಂ ವಿನೋದಪತಿ ಪುಗುತಂದಂ ೨೨

ವ॥ ಆ ಸಮಯದೊಳ್

ಚಂ॥ ಕೞಿಯ ಬೞಲ್ದು ತೋರಮುಡಿ ಜೋಲ್ದುಡೆ ಘರ್ಮಜಳಂಗಳಿಂದೆ ನಾಂ
ದೞಿದ ಲಲಾಮಕಂ ನಿಮಿರ್ವ ಸೂರ್ಯಮರ್ದೊಪ್ಪಿರೆ ವಾಹನಂಗಳಿಂ
ದಿೞಿಯುತುಮಿಕ್ಕಿಪರ್ಗೆ ವಿಪರೀತರತಕ್ಕೆಳಸಿರ್ದು ಮಂಚದಿಂ
ದಿೞಿವ ಬೆಡಂಗು ಸಂಗಳಿಸೆ ಕಣ್ಗೊಳಿಸಿತ್ತು ವಿಳಾಸಿನೀಜನಂ ೨೩

ಕಂ॥ ಲಲನೆಯರ ಲಲಾಟದಿನು
ಚ್ಚಳಿಸುವ ಬೆಮರಿಂದೆ ನಾಂದು ಪತ್ತಿದ ಮೃದುಕುಂ
ತಳಮೆಸೆದುವು ಸಾರ್ದ್ರತೆ ಸಂ
ಚಳರುಮನಳವಡಿಸಿ ಪಿಡಿಗುಮೆಂದೞಿಪುವವೋಲ್ ೨೪

ವೃತ್ತ ಕುಚೆಯರ್ಗೆ ಬೆಮರಿಂ
ದೊತ್ತರಿಸಿತ್ತಂಗದಲ್ಲಿ ಕತ್ತುರಿಯ ಹದಂ
ಬೆತ್ತಂತೆಲರೊಳ್ ನೀರ್ದಳಿ
ದತ್ತನೆ ದೊರೆವೆತ್ತು ಸುರಭಿ ಪರಿಮಳಮಾಗಳ್ ೨೫

ಕಳಿಕೆಯನರಲಂ ತಳಿರಂ
ತಳೆವುತ್ಕಳಿಕೆಯೊಳೆ ಋೞಿದು ಗಮನಶ್ರಮಮಂ
ಗಳಗಳನೆ ನಡೆದರಬಲೆಯ
ರಳಸತೆಯೊಲ್ದೆಡೆಗೆ ಪೋಪರೊಳ್ ಪುಟ್ಟುಗುಮೇ ೨೬

ಪಿಡಿಗಳ್ ಮನೋಭವನ ಕೆ
ಯ್ಪಿಡಿಗಳ್ ವನಕೇಳಿಗೆಳಸಿ ಗಜರಾಜನ ಬೆಂ
ಬಿಡಿದು ನಡೆತರ್ಪ ತೆಱದಿಂ
ನಡೆವರೆ ನೃಪನೊಡನೆ ಲಲಿತಗತಿಯರ್ ಸತಿಯರ್ ೨೭

ಗುರುಕುಚದ ಪತ್ರಭಂಗಂ
ಪರೆದುದು ಬೆಮರಿಂದೆ ಪಲ್ಲವಗ್ರಾಹಿಣಿಯರ್
ತರುಣಿಯರಾಗದ ಮುನ್ನಂ
ಪರಿಹರಿಸುವುದೆಂದು ವಿಟರ್ಗೆ ಸೂಚಿಪ ತೆಱದಿಂ ೨೮

ವ॥ ಅಂತು ಬಟ್ಟೆವಯಣದಾಯಾಸದಿಂ ಘಾಸಿಯಾಗಿಯುಂ ಕತ್ತುರಿಯಂ ಪೂಸಿ ಮಾಡಿದಂತೆ ಲೇಸೆನಿಸುವ ಪರಿಮಳಮಂ ಸೂಸುತ್ತುಂ ಬರ್ಪ ವಿಳಾಸಿನೀಜನಂಬೆರಸರಸಂ ಬೆಮರ್ತ ಮೆಯ್ಗೆ ತಂಗಾಳಿಯಂತೆ ತನ್ನ ಮೇಳದಿಂದಾ ಲತಾಲಲಿತಾಂಗಿಯರನಲರ್ಚಿ

ನವಯುವತೀ ಯೌವನವನವಸಂತವೆಂದುದನಿಂಬಾಗಱಿಮುತ್ತುಂ ಬಂದು ವಿರಹಿಗಳಂ ಪುಗಲ್ ಪುಗಲೆಂದು ಜಡಿವ ಪಡಿಯುಱಿವಕ್ಕಿಗಿರ್ಕೆಯಾಗಿ ತೋರಣವಾಗಿ ಬೆಳೆದ ಬಾಳ ಸಹಕಾರಭೂರುಹಂಗಳ ದಾರವಟ್ಟದಿಂದಳವಟ್ಟ ಚೆಲ್ವಿಂಗಡರ್ಪಾದ ಪಾದರಿಯೊಳ್ ಕೋದು ಬಳೆದ ಪೊಂಗೇದಗೆಯ ಬಲ್ಲಾಳ್ದಟ್ಟಿಯಿಂದೊಳಗೆ ದಿಟ್ಟಗಲಂಪಂ ಪುಟ್ಟಿಸುವ ಸಂಪಗೆಯ ಚಂಪೆಯದಿಂದುಳ್ಳಲರ್ದ ಬಳ್ಳಿಮಲ್ಲಿಗೆಯ ಮೊಗಸಾಲೆಯ ಲೀಲೆಯಂತೆಡೆಗೊಂಡು ಮಡಲ್ತ ಮಾಮರದ ಮಂಡವಿಗೆಯಿಂ ಮನೋಜರಾಜಂಗೆ ವಸಂತರಾಜಂ ವಿರಚಿಸಿದ ವಿಜಯ ಶಿಬಿರದಂತೆ ಸಮುಲ್ಲಸಿತಪಲ್ಲವಲಕ್ಷ್ಮಿಗಾಗರಮಾದಶೋಕಭೂಜರಾಜಿಯಂ ರಾಜವಿದ್ಯಾಧರನಳಂಕರಿಸುವುದುಮಲ್ಲಿ

ಕಂ॥ ತಳಿರ ನೆಲಗಟ್ಟು ಪೊಸದಳಿ
ರ್ಗಳ ಕಂಬಂ ತಳಿರ ಭಿತ್ತಿ ತಳಿರ್ಗಳ ಲೊವೆ ಕೆಂ
ದಳಿರ್ಗಳ ಜಂತೆಗಳೊಪ್ಪಿರೆ
ತಳಿರೋವರಿ ತಳಿಲವಯಣಮೆನೆ ಕಣ್ಗೊಳಿಕುಂ ೨೯

ವ॥ ಅದಱೊಳಗೆ

ಕಂ॥ ಅಲರೆ ಮನಮವನಿಪಾಳಕ
ನಲರ್ಗಳ ತಲೆಗಿಂಬಿನಿಂದಮಲರಮಲಂಗಿಂ
ದಲರ ದಳಿಂಬದಿನಿಂಬಾ
ದಲರ್ವಾಸಿನ ಮೇಲೆ ಲೀಲೆಯಿಂ ಕುಳ್ಳಿರ್ದಂ ೩೦

ವ॥ ಅಂತವಿಶ್ರಾಂತ ವಿದ್ಯಾವಿನೋದಮಂದಿರಂ ಮಂದಾನಿಳಾಂದೋಳಿತ ಬಾಳಚೂತಲತಿಕಾ ನರ್ತನಕ್ಕನುಗತಮಾದ ಕೋಕಿಳಕಳನಾದಗೀತನಾದದಿಂ ಮಧುಕರನಿಕರ ಝುಂಕಾರದಿಂ ಮನಂಗೊಳಿಸಿ ಸಂಗೀತಕ್ಕಾಶ್ರಯಮನಿಪ ಲತಿಕಾಶ್ರಯದೊಳ್ ವಿಶ್ರಮಿಸಿರೆ ಸಮಗ್ರ ಸೌಭಾಗ್ಯದ ಮದದೊದವಿಂದೊರ್ವರೊರ್ವರ ಗಂಧಕ್ಕೆ ಬಾರದೆ ತಮ್ಮ ತನುಗಂಧಕ್ಕೆಱಗಿ ಮಱಿದುಂಬಿವಿಂಡು ಮಂಡಳಿಸಿ ಮೊರೆಯುತ್ತುಂ ಮದಡಿಂಡಿಮಮನನುಕರಿಸೆ ಕಪ್ಪುರದೊಪ್ಪುವ ಜಗಲಿ ಧೂಳಿ ಸೆಜ್ಜರಮೆನಿಸೆ ಮನೋಭವನೆ ಬೆನ್ನ ತಕ್ಕಿನವನಾಗೆ ಶಿಶಿರೋಪಚಾರಮೆ ಮದೋಪಚಾರಮಾಗೆ ಚಾರುಕುಚಕುಂಭಸಂಭೃತೆಯರ್

ಕಂ॥ ಷಣ್ಣವತಿಸಹಸ್ರಂ ಪಸು
ರ್ವಣ್ಣದಲಸಗತಿಯರೆಸೆವ ದಂತದ್ಯುತಿಯಿಂ
ನುಣ್ಣಿಸುತುಂ ತರುಷಂಡದ
ತಣ್ಣೆಲಲೊಳ್ ಮದನ ಮತ್ತಗಜದವೊಲೆಸೆದರ್ ೩೧

ವ॥ ಅಂತಂತಃಪುರಪುರಂಧ್ರಿಯರೊಪ್ಪಮನಪ್ಪುಕೆಯ್ದಿರ್ಪುದುಮುಱಿದ ವಿಳಾಸವತಿಯರ್

ಚಂ॥ ತಿಳಕದೊಳಂಗನಾತಿಳಕೆಯರ್ ಲತಿಕಾಭವನಂಗಳೊಳ್ ಲತಾ
ಲಲಿತೆಯರುಲ್ಲಸತ್ಕುಸುಮಪಾಟಳದೊಳ್ ನವಪಾಟಳಾಧರಾ
ಕಳಿತೆಯರುದ್ಘಚಂದನದೊಳುಜ್ವಳಚಂದನಗಂಧಿಯರ್ ಕರಂ
ಕೆಳೆತನಮೊಪ್ಪೆ ನಿಂದು ಗಮನಶ್ರಮಮಂ ಕಳೆದರ್ ಲತಾಂಗಿಯರ್ ೩೨

ವ॥ ಅಂತು ಕಾಂತೆಯರ್ ತಂತಮ್ಮ ಮನಕ್ಕಿಂಬಾದ ತಣ್ಬುಟ್ಟಿಲ್ಗಳೊಳಂ ರತಿರಹಸ್ಯ ಗೃಹಂಗಳೆನಿಪ ಧಾರಾಗೃಹಂಗಳೊಳಮಂಗಭವನ ಭವನಂಗಳೆನಿಪ ಲತಾಭವನಂಗಳೊಳಂ ಸುಕುಮಾರಮುಕುಳಪರಿಮಳಮಗ್ನಮಧುಕರಸಂರಾವಕುಳಮೆನಿಪ ವಕುಳದೊಳಂ ಸುರತರತ ಪಾರಾವತಮಾಳಮೆನಿಪ ತಮಾಳವನದೊಳಂ ಮನಮೆಳಸಿ ನಿಲ್ವುದುಮಲ್ಲಿ

ಕಂ॥ ಕುಸುಮದ ಪರಿಮಳದಿಂದಲ
ರ್ವಾಸಲರ್ದಂಬುರುಹ ಬಹಳ ಸೌರಭದಿಂ ನೀ
ರ್ವಾಸು ಪೊರೆದಿರ್ದು ಕಂಪಿನ
ರಾಸಿಯೆ ಪರಿಕಲಿಸಿದಂತೆ ಕರಮೆಸೆದಿರ್ಕುಂ ೩೩

ವ॥ ಅಂತು ರಮ್ಯಮಪ್ಪ ಶಯ್ಯೆಗಳೊಳೊಯ್ಯನೆ ಮೆಯ್ವಟೆಯನೆ ಮೆಯ್ನವಿರಂ ಕೊನರಿಸುತ್ತುಂ ಸೋಂಕುವಿನಿಯನಂತೆ ಸೋಂಕುವ ತೆಂಕಣೆಲರ್ಗೆ ಲಲನೆಯರ್ ಮೆಯ್ಯಂ ಸಾರ್ಚೆ ಕುಳ್ಳಿರೆ ಪರಿಚಾರಿಕೆಯರ್ ಪದಪಲ್ಲವಕ್ಕೆ ಮೆಲ್ಲಿದುವಪ್ಪ ಪಲ್ಲವಮಂ ಮೆಲ್ಲನಿಚ್ಚೆಯಱಿದು ಸಾರ್ಚೆ

ಕಂ॥ ಬಾಲೆಯರಸುಕೆಯ ತಳಿರ್ಗಳ
ಮೇಲಿಡೆ ಕಾಲಂ ವಿಳಾಸದಿಂ ಮೇಲೆಂತುಂ
ಮೇಲೆನಿಪುದುಚಿತಮಾಯ್ತೆನೆ
ಮೇಲೆನಿಸಿದುದೆಸೆವ ಕೆಂಪಿನಿಂ ಮೆಲ್ಪಿಂದಂ ೩೪

ವ॥ ಅಂತು ವಿಳಾಸಕ್ಕಾವಾಸಮಾಗಿರ್ದು

ಕಂ॥ ಈಟಿಯ ತನಿವಣ್ಣಂ ಸ್ಮರ
ಕೇಳಿಯನೀವಿಕ್ಷುರಸಮನಾಸ್ವಾದಿಸಿ ಮೆ
ಲ್ಲಾಳಿಗೆ ಮೆಯ್ಯಂ ತಮತಮ
ಗಾಳಿಗೆ ಕಪ್ಪುರಮನಿತ್ತರೊಸೆದಂಗನೆಯರ್ ೩೫

ಉಳ್ಳಲರ್ದ ಬಳ್ಳಿಮಲ್ಲಿಗೆ
ಯೊಳ್ಳಲರಂ ಮುಡಿದು ಮುದದಿನೆಳ ಅಡಕೆಯನಿಂ
ಪುಳ್ಳವನೊಪ್ಪುವ ಕಪ್ಪುರ
ವಳ್ಳಿಯ ಬಿಳಿಯೆಲೆಯನೊಲ್ದು ಮೆಲ್ದರ್ ಸತಿಯರ್ ೩೬

ರಾಗಾನ್ವಿತೆಯರ್ ಪಾಡಿದ
ರಾಗಳ್ ರಮಣರ್ಗೆ ಚುಂಬನಾಲಿಂಗನಸಂ

ಭೋಗಂಗಳಂತಿರೊದವಿಸೆ
ರಾಗಮನುದ್ದಾಹಮೇಳದಾಭೋಗಂಗಳ್ ೩೭

ವ॥ ಅಂತು ಚಾಪಳವಿಲೋಚನೆಯರಭಿರೂಪರೂಪಕಳಾಸಮುದ್ದೀಪನಭಾವಮಂ ಪಡೆಯೆ

ಕಂ॥ ತಳಿದು ಮಳಯರುಹಜಳಮಂ
ತಳಿರ್ವಾಸಿನೊಳಿರಿಸಿ ಪೊಸತಳಿರ್ಗಳನಿನಿಯರ್
ಕಳೆದರ್ದ್ಧಶ್ರಮಮನದೇಂ
ಬಳೆಯಿಸಿದರೊ ತರುಣಿಯರ್ಗೆ ಸುರತಶ್ರಮಮಂ ೩೮

ಮ॥ ತಳಿರ್ಗಳ್ ತಳ್ಪತಳಂ ಲಸತ್ಕುಸುಮಪುಂಜಂ ಪ್ರಚ್ಛದಂ ಸೌರಭ
ಕ್ಕೆಳಸುತ್ತಿರ್ಪಳಿಸಂಕುಳಂ ಶಕುನಿ ನೀರ್ವೇಱಿರ್ದ ಚೆಂದೆಂಗು ತ
ಣ್ಗಳಸಂ ತಣ್ಪಿನ ಗಾಳಿ ಬಿಜ್ಜಣಿಗೆಯೆಂಬಂತೊಪ್ಪೆ ಸಂಭೋಗಲಂ
ಪಳರಾ ದಂಪತಿಗಳ್ ಲತಾಭವನದೊಳ್ ಸಂಭೋಗಮಂ ಮಾಡಿದರ್ ೩೯

ಮ॥ ಪುಳಕಾನೀಕ ಲತಾಂತಮುಣ್ಮೆ ತನುವಲ್ಲಿಶ್ರೀಯೊಳತ್ಯಂತ ಕೋ
ಮಳಕಾಂತಾಧರನೂತಚೂತಕಳಿಕಾಸ್ವಾದಪ್ರಮೋದೋತ್ಥಿತಂ
ಕಳಕಂಠಧ್ವನಿ ಪೊಣ್ಮೆ ಚಂದನಸುಗಂಧೋಚ್ಛ್ವಾಸದಿಂ ದಕ್ಷಿಣಾ
ನಿಳನೆಂತಂತೆಸಗುತ್ತುಮೊಪ್ಪೆ ರತಿಯೇಂ ಚೈತ್ರಂಬೊಲಿಂಬಾದುದೋ ೪೦

ವ॥ ಅಂತು ನಿಜಪ್ರಿಯರ ಬಯಕೆಯಂ ತೀರ್ಚಿ ತರುಚಯದ ಬಯಕೆಯಂ ತೀರ್ಚಲೆಂದು

ಕಂ॥ ನಲ್ಲಳೊಸೆದೊದೆಯೆ ರಾಗಂ
ಪಲ್ಲವಿಸುವ ನಲ್ಲನಂತೆ ಪಲ್ಲವಿಸಿತು ಕಂ
ಕೆಲ್ಲಿ ನವಯುವತಿ ಮೃದುಪದ
ಪಲ್ಲವದಿಂದೊದೆಯೆ ಚೆಲ್ವು ಪಲ್ಲವಿಸುವಿನಂ ೪೧

ಎತ್ತಾನುಮೊರ್ಮೆ ತಾನೊದೆ
ವೆತ್ತುಂ ಕಂಕೆಲ್ಲಿ ರಾಗಪಲ್ಲವಮಂ ತಾ
ಳ್ದಿತ್ತನೆ ಸಲೆ ಸತಿಯರಿನೊದೆ
ವೆತ್ತಿನಿಯರ್ ತಳೆವುದೆಂಬುದೇಂ ವಿಸ್ಮಯಮೇ ೪೨

ವ॥ ಮತ್ತೊರ್ವಳುತ್ತುಂಗಪೀನಪಯೋಧರೆ ಮನಃಪ್ರಿಯನಂ ಸೋಂಕಿ ಪುಳಕಾಂಕುರಮಂ ಕೊನರಿಸುವುದಂ ತೋರ್ಪಂತೆ ಜಿಗಿದಪ್ಪಿ ಕುರವಕಮನಂಕುರಿತಂ ಮಾಡೆ ಪ್ರೌಢೆಯೊರ್ವಳಿಂತೆಂದಳ್

ಕಂ॥ ಕುರವಕತರುಗಂಕುರಮಂ
ಪರಿರಂಭಾರಂಭದಿಂದಮೊದವಿಸಿ ನಿರುತಂ
ನಿರುಪಮ ಲಾವಣ್ಯಪಯೋ
ಧರತ್ವಮಂ ತಳೆದುವಮಳಕುಚಕುಂಭಂಗಳ್ ೪೩

ಅವಲೋಕನದಿಂ ತಿಳಕದೊ
ಳವಿರಳಕಳಿಕೆಗಳನಿತ್ತಳುತ್ಕಳಿಕೆಗಳಂ
ನವಯುವರೊಳ್ ಪಡೆವುದನವ
ಯವದಿಂ ತೋರ್ಪಂತೆ ಲೋಳಲೋಚನೆಯೊರ್ವಳ್ ೪೪

ವ॥ ಮತ್ತೊರ್ವಳಾಸವಾಸೇಕದಿಂ ಸುರಭಿಶ್ವಾಸೆ ವಕುಳಮಂ ಮುಕುಳದಿನಳಂಕರಿಸೆ

ಕಂ॥ ಸೂಸುವ ಸುದತಿಯ ಮುಖಕಮ
ಳಾಸವದಿಂದಲರ್ದ ವಕುಳಮಳಿಯಂ ಸ್ಮಿತಮು
ಷ್ವಾಸವದಿಂ ಸೊರ್ಕಿಸುವ ವಿ
ಳಾಸಮುಚಿತಮೆಂದು ಚತುರಭಾಷಿಣಿ ನುಡಿದಳ್ ೪೫

ಅಂಗನೆಯರ ಸೊಗಯಿಪ ಕೆ
ಯ್ತಂಗಳೊಳೊಂದೊಂದೆ ತರುಚಯಕ್ಕಮಲಂಪಂ
ಸಂಗಳಿಕುಮೆಂದೊಡನಿತ
ಕ್ಕಂ ಗುಜಿಯೆನಿಸಿದರ ಸುಖಮನಾನೇವೊಗಟ್ವೆಂ ೪೬

ವ॥ ಅಂತಾ ಕಾಂತೆಯರ್ ತರುಸಂದೋಹದ ದೋಹದಮಂ ತೀರ್ಚೆ ಅಲ್ಲೊರ್ವಳ್ ಮಲ್ಲಿಗೆಯ ಮುಗುಳ ಹಾರಕ್ಕೊಯ್ಯಾರಮಪ್ಪ ಪಚ್ಚೆಸಾರಮಂ ಸಮೆಯಲೆಂದು ಮಿಡಿದೊಡೆದಪುದೆನಿಪುದೇಱುಂ ಜವ್ವನದ ಮಡದಿ ಮಾಮಿಡಿಯಂ ಮಾಮರದ ಮೇಲ್ಗೊಂಬಿಗಿಂಬಾಗಿ ನೀಟ್ಕೆ ತಿಱಿಯೆ ನುಡಿಜಾಣೆಯೆನಿಪ ಕೆಳದಿಯಾಕೆಗಿಂತೆಂದಳ್

ಕಂ॥ ನಿಡಿದಡರೆ ಮಿಗೆ ಬಳೆದ ಮೊಲೆ
ಗೊಡನುಂ ಪೊಱವಾಱುಮೆಲಗೆ ಮಾಮಿಡಿಯಂ ಚೆ
ಲ್ವೊಡರಿಸಿರೆ ನೀಟ್ಟು ನೀಂ ತಿಱಿ
ವೆಡೆಯೊಳ್ ತೆರಪಾದುವಲ್ತೆ ಲಲಿತಲತಾಂಗೀ ೪೭

ವ॥ ಮತ್ತೊರ್ವಳ್ ಸಹಜಸೌಂದರ್ಯಸಂಪನ್ನೆ ತನ್ನಂತೆ ಕಂತುವಿಜಯ ಸಹಕಾರಿಯಾದ ಸಹಕಾರಮಂ ನೋಡಿ

ಕಂ॥ ಬರಲೊಡನೆ ಮಲ್ಲಿಕಾವ
ಲ್ಲರಿ ತಳ್ತಮರ್ದಪ್ಪೆ ಘರ್ಮಜಳಮುಂ ಪುಳಕಾಂ
ಕುರಮುಮೊಗೆದಂತೆ ಸೊನೆ ಬಿಡು
ತರೆ ಕಳಿಕೆಗಳೊದವೆ ಬಾಳಚೂಲಮಿದೆಸೆಗುಂ ೪೮

ಚಂ॥ ಸೊನೆ ತನಗಿಂಬುವೆತ್ತ ಮದಧಾರೆ ಕವಲ್ತೆಳಗೊಂಬು ಕೊಂಬು ಮೆ
ಲ್ಲನೆ ತೊನೆದಾಡುತಿರ್ಪ ಸೆಳೆಗೊಂಬು ಕರಂ ತಳಿರಗ್ರಪಲ್ಲವಂ
ಧ್ವನಿ ಮಧುಪಸ್ವನಂ ಕುಸುಮಮಂಜರಿ ರಂಜಿಸುತಿರ್ಪ ಕುಂಭಮೆಂ
ಬಿನಮಿದೆ ಬಂದು ಕೊಂದಪುದು ಕಾಮಿಗಳಂ ಸಹಕಾರಕುಂಜರಂ ೪೯

ವ॥ ಅಂತುಮಲ್ಲದೆ

ಚಂ॥ ತುಱುಗಿದೆ ಕೆಂದಳಿರ್ ತಟದ ಶೋಣಮಣಿಪ್ರಭೆ ಪುಷ್ಪಸಂಚಯ
ಕ್ಕೆಱಗಿದ ಚಂಚರೀಕತತಿ ಮೇಘಚಯಂ ಸೊನೆ ನಿರ್ಝರಾಂಬು ಕಾಯ್
ಮಿಱುಗುವ ಪಚ್ಚೆಗಲ್ಲನೆ ಮನೋಜಮಹೀಶನ ಕೇಳಿಶೈಳಮಂ
ನೆಱೆನಗುತಿರ್ಪುದೊಪ್ಪಿ ಸಹಕಾರಕುಜಂ ಜನತಾಮನೋಹರಂ ೫೦

ಮ॥ ಕಳಕಂಠಂ ಕಳಿಕಾರಸಕ್ಕಳಿಕುಳಂ ಪುಷ್ಪಕ್ಕೆ ಕೀರಂ ಫಳಾ
ವಳಿಗೆನ್ನಂ ಬಳಸಿರ್ಪುವಾನವನವರ್ಕಾನಂದದಿಂದೀವೆನೆಂ
ದೆಳಮಾವೊಂದೆಳಗೊಂಬಿನೊಳ್ ಕಳಿಕೆಯಂ ಮತ್ತೊಂದಱೊಳ್ ಪೂಗಳಂ
ಫಳಮಂ ಮಿಕ್ಕಿನ ಕೊಂಬಿನೊಳ್ ತಳೆದುದೆಂದಾನಂದದಿಂ ನೋಡಿದಳ್ ೫೧

ಚಂ॥ ಚಿಗುರ್ಗಳನೊರ್ಮೆ ಕರ್ಚಿ ತಳಿರ್ದೊಂಗಲನೊರ್ಮೆ ಕರ್ದುಂಕಿ ಕೋಕಿಳಂ
ಮುಗುಳನದೊರ್ಮೆ ಜಕ್ಕುಲಿಸಿ ಪೂಗಳನೊರ್ಮೊದಲೀಂಟಿ ಷಟ್ಪದಂ
ಬಗೆಗೊಳೆ ಬಂದಮಾವುಗಳ ಕಾಯ್ಗಳನೊರ್ಮೆ ತುಡುಂಕಿ ತುಂಡದಿಂ
ಸೊಗಯಿಪ ಪಣ್ಣನೊರ್ಮೆ ಸವಿದೇಂ ಸೊಗಮಂ ಶುಕನೊಲ್ದು ತಾಳ್ದಿತೋ ೫೨

ಕಂ॥ ನನೆವೊಱೆಯಿಂ ಬಳ್ಕಿದ ಮಾ
ವಿನ ಕೊಂಬಿನೊಳಳಿಯ ಮಾಲೆ ಮೊಱೆಯುತ್ತುಂ ಪೂ
ವಿನ ಬಿಲ್ಲನತನು ಜೇವೊಡೆ
ದನುಗೆಯ್ದೇಱಿಸುವ ಚೆಲ್ವನೇಂ ಬೀಱಿದುದೋ ೫೩

ಸುಚ್ಛಾಯಮಲರ ಗೊಂಚಲ
ಗುಚ್ಛಂ ಮೇಗಣ್ಗೆ ನೆಗೆದ ಕೊಂಬಿನೊಳಿರ್ದಾ
ಹೃಚ್ಛಯನಂ ಕೂರ್ತಿತ್ತಸಿ
ತಚ್ಛತ್ರಮಿದೆನಿಸಿ ಚೂತರಾಜಂಗೆಸೆಗುಂ ೫೪

ಒಂದೊಂದಱಿಂದೆ ಚೆಲ್ವಂ
ಸಂದಿಸುವುವು ಸಕಳತರುಗಳುಂ ಕಳಿಕೆ ಚಿಗುರ್
ಕೆಂದಳಿರಲರ್ ಮಿಡಿ ಕಾಯ್ ಪ
ಣ್ಣೆಂದಿವಱಿಂದೆ ಚೆಲ್ವುವೆತ್ತುದೀ ಚೂತಕುಜಂ ೫೫

ವ॥ ಎಂದು ತನ್ನ ಮನೋನಯನವಲ್ಲಭನಂತೆ ಸರ್ವಾಂಗಸೌಂದರ್ಯ ಮನಂಗೀಕರಿಸಿದ ಚೂತಕುಜಾತಮನತಿಪ್ರೀತಿಯಿಂ ಗುಣಪ್ರಿಯೆ ಪೊಗೞ್ದಳ್ ಮತ್ತೂರ್ವಳ ಪೂರ್ವ ವಿಭ್ರಮಸಮನ್ವಿತೆ ಭ್ರಮರಸಮುದಯಮಂ ಸಮುಲ್ಲಸಿತಹಸಿತದಿಂ ತಮ್ಮಲ್ಲಿಗೆ ತೆಗೆವ ಮಲ್ಲಿಗೆಯಲ್ಲಿಗೆವಂದು

ಕಂ॥ ನನೆಯೊತ್ತೆ ಮಿಸುಪ ಮಲ್ಲಿಗೆ
ನನೆಯೊತ್ತುವುದತನುಸತಿಯ ಲಾವಣ್ಯರಸಾ

ಭಿನವನದಿ ಸುರಭಿಗಂಧದಿ
ನೆನಸುಂ ತೀವಿದೊಡೆ ತೀವುವುದು ತೊದಳುಂಟೇ ೫೬

ವರನೆನಿಸಿದ ಸಹಕಾರದ
ಬರವಂ ಪೇಳ್ವಂತೆ ಕರೆಯೆ ಕೋಗಿಲೆ ಕೇಳ್ದು
ಬ್ಬರಿಸಿದ ಹರ್ಷದೆ ಬಿರಿವಂ
ತಿರೆ ಬಿರಿದುವು ಸುರಭಿಮಾಸದೊಳ್ ಮಲ್ಲಿಗೆಗಳ್ ೫೭

ನನೆಯಿಂದಂ ತುಱುಗಿರೆ ತ
ನ್ನನೆಯಿಂದಿಮ್ಮಾವು ಕೂರ್ಮೆಯಿಂದಪ್ಪಿದುದೆಂ
ದನುರಾಗದಿಂದೆ ಮಲ್ಲಿಗೆ
ಘನಪುಳಕಮನಾಂತುದೆನಿಸಿ ಮುಗುಳ್ಗಳಿನೆಸೆಗುಂ ೫೮

ಅಲರಲರ್ದಪ್ಪದೆ ಪದಪಿಂ
ನೆಲಸಿರೆ ಮಱಿದುಂಬಿ ತುಂಬಿಗಳ್‌ಗಟ್ಟಿದ ಕೂ
ರಲರ್ಗಣೆಯ ದೊಣೆಯಿದೆನೆ ವಿಚ
ಕಿಳವಿಳಸಿತಲತೆಯದೇಂ ಮನಂಗೊಳಿಸಿದುದೋ ೫೯

ತನಿಗಂಪನುಳ್ಳ ಪಗಲೊಳ
ಮನುನಯದಿಂದೊಪ್ಪುತಿರ್ಪ ತಾರಗೆಯೋ ವಾ
ಸನೆವೆತ್ತ ಮುತ್ತೊ ಪೇೞೆನೆ
ನನೆಗಳ್ ಮಿಗೆ ಮಿೞುಗಿ ತುಱುಗಿದುವು ಮಲ್ಲಿಗೆಯೊಳ್ ೬೦

ವ॥ ಎಂದೊರ್ವಳ್ ಮಲ್ಲಿಕಾ ಕುಸುಮಕೋಮಳೆ ಮಲ್ಲಿಗೆಯಂ ಕೊಂಡುಕೊನೆಯುತ್ತುಮಿರೆ ಮತ್ತೊರ್ವಳ್ ಚಂಪಕಚಾರುವರ್ಣಸೌರಭಾಕೀರ್ಣೆ ಚಂಪಕಪಾದಪಮಂ ಪೊರ್ದಿ

ಚಂ॥ ಇದು ಕುಸುಮಾಸ್ತ್ರನೋಲಗದ ಸಾಲೆಯೊಳೊಪ್ಪುವ ಕಲ್ಪವೃಕ್ಷಮ
ಲ್ತಿದು ಮದನಂಗೆ ಚೈತ್ರನೊಸೆದೆತ್ತುವ ಮಂಗಳದೀಪಜಾಳಮ
ಲ್ತಿದು ರತಿದೇವಿಗೆಂದು ಮಧುಮಾಡಿದ ರನ್ನದ ಚೆನ್ನಮಾಡಮ
ಲ್ತಿದು ನವರಾಗಮಂ ಕಱೆವ ಮೇಘಮದಲ್ತಿದು ಪೂತ ಚಂಪಕಂ ೬೧

ಕಂ॥ ಬಿಡೆ ಮಧುವಂ ಕುಡಿವಾಱಡಿ
ಪೊರ್ದರ್ದಿರ್ಪತಿ ಮಳಿನವರ್ಣಮೆಂದಳಿಸಂಗ
ಕ್ಕೆಡೆಗುಡದು ಸುವರ್ಣತೆಯುಂ
ಪಡೆದುದಱಿಂದುಂತೆ ಚಂಪಕಕ್ಕೆಱಗದುದೇ ೬೨

ವ॥ ಎಂದು ತುಂಬಿಗಳೊಳ್ ಸಂಪಗೆ ಪಗೆಗೊಂಡುದರ್ಕೆ ನಿಮಿತ್ತಮನುತ್ಪ್ರೇಕ್ಷಿಸುತ್ತುಮಿರೆ ಮತ್ತೊರ್ವಳತಿಚತುರದೂತಿಕಾಪ್ರೇಷಣಪ್ರವೀಣೆ ವಸಂತದೂತಿಯೆನಿಸಿದ ವಾಸಂತಿಕಾಂತೆಯಂತಿಕಕ್ಕೆ ವಂದು

ಉ॥ ತಾನಿದು ಮುನ್ನಮುಲ್ಲಸಿತಪಲ್ಲವದಿಂ ಗುಡಿಗಟ್ಟಿ ತೊಟ್ಟು ಭೂ
ಷಾನಿಚಯಂಗಳಂತಲರನೀ ಮಧು ಬಂದಪನೆಂದು ಮುಂದೆ ಮಂ
ದಾನಿಳನೆಯ್ದೆವಂದುದೆನೆ ನೀಮುಮಳಂಕೃತೆಯರ್ಕಳಾಗಿಮೆಂ
ದೀ ನವವಲ್ಲರೀವನಿತೆಯರ್ಗುಸಿರ್ವಂತಳಿರಾವಮೊಪ್ಪುಗುಂ ೬೩

ಉ॥ ಇಂತು ವಸಂತಮೂತಿವೆಸರೀ ಲತೆಗಾದುದದೊಂದೆ ಕಾಮಸೀ
ಮಂತಿನಿಗಾಳಿಗಾಳಿಯ ಗುಣಕ್ಕಡೆ ತುಂಬಿಯ ಪಾಡುತಿರ್ಪ ನಿ
ಶ್ಚಿಂತಗೃಹಂ ಲತಾವಳಿಗಳಂಕರಿಸಲ್ಕಳಿಯಂ ಸುಗಂಧಮಿ
ತ್ತಂತಿರೆ ಪೋಷಿಸಲ್ ಕಲಿಪ ನಾಯಿಕೆ ಕಾಮನಿಕಾಮಸಂಪದಂ ೬೪

ಕಂ॥ ಕಾಂತಾತಿಚತುರಮೆನಿಪ ವ
ಸಂತಂ ಬರೆ ಹರ್ಷಪುಳಕಮೆನಿಪಲರಂ ವಾ
ಸಂತಿ ತಳೆದಿರ್ದುದುಂತುಂ
ಕಾಂತರ ಬರವಾರ್ಗೆ ಹರ್ಷಮಂ ಪುಟ್ಟಿಸದೋ ೬೫

ವ॥ ಎಂದು ತನ್ನ ಬಗೆಯ ಬಯ್ಕೆಯಂ ಬಯಕೆಯ ಕಾಂಕ್ಷೆಯ ಮೇಲೆ ಲತಾಂಗಿಯಿಕ್ಕಿ ಜಳಕ್ಕನಜ್ಜಿಪಿದಳ್ ಮತ್ತೊರ್ವಳ್ ಬಂದುಗೆಯಂದಮಂ ತಳೆದ ಬಾಯ್ದೆಱೆಯ ವನಿತೆ ಬಂದುಗೆಯ ಕೆಲದೊಳ್ ನಿಂದು

ಕಂ॥ ರಾಗರತಿ ಸತಿಯರಧರದ
ರಾಗಮನನುಕರಿಸಿ ಕಂತುಕಾಂತಂಗೆ ಮನೋ
ರಾಗಮನೊದವಿಸಿ ನನೆಯಿಂ
ಬಾಗಿರ್ದುದು ಚಂಚರೀಕವೃತಬಂಧೂಕಂ ೬೬

ಪೋಗದೆ ಬಿರಯಿಗಳೆರ್ದೆಯಂ
ಪೂಗಣೆಯವನೆಚ್ಚೊಡುರ್ಚಿ ನೆತ್ತರ್ ಪೊರೆದಿಂ
ತೀಗಳೆ ಬಂದಂತಿರೆ ಕೆಂ
ಪಾಗಿರ್ದುದು ಗಂಧಬಂಧುರಂ ಬಂಧೂಕಂ ೬೭

ಬಂದುಗೆಯ ಕುಸುಮರಸಮಂ
ಬಂದುಗೆಮಿಗೆ ಪೀರ್ವ ಷಟ್ಪದಂ ನೆನೆಯಿಸಿತೆ
ಯ್ತಂದು ನಯದಿಂದೆ ಪತಿ ಸಾ
ರ್ತಂದರುಣಾಧರಮನೀಂಟುವುದನಂಗನೆಯಾ ೬೮

ವ॥ ಎಂದು ಚಿತ್ತವಲ್ಲಭನ ಚುಂಬನದಿಂಬನಿಂಬಾಗಿ ನುಡಿಯದಂತು ನುಡಿದಳ್ ಮತ್ತೊರ್ವಳಭಿಜಾತಕೇತಕೀದಳಧವಳಾಪಾಂಗೆ ಕೇತಕೀದಳಂಗಳನಪಾಂಗದ ನೀಳ್ಪಿನೊಳ್ ಪಡಿಯಿಡುವಂತಡರೆ ನೋಡಿ,

ಕಂ॥ ಬೆಳ್ದಿಂಗಳನಂಗಭವಂ
ನೀಳ್ದಿರೆ ಪೊರೆಯೆತ್ತಿ ರತಿಯ ಮುಖಗಂಧಮನಂ

ತಾಳ್ದಿರೆ ತೊಯ್ದುವೊಲೊಳ್ಪಂ
ತಾಳ್ದಿದುವೆನೆ ಸುರಭಿಕೇತಕೀಕುಸುಮಂಗಳ್ ೬೯

ವ॥ ಎಂದದಱ ಮೆಯ್ಸಿರಿಗನುಸಾರಿಯಾಗಿರಿಸಿ ನಿರಿವಿಸಿದಳ್ ಮತ್ತೊರ್ವಳುದ್ದಾಮ ಮಾಲತೀದಾಮ ಕೋಮಳೆ ವಿರಹಾಕುಳೆಯಲರ್ದ ಲತೆಗಳಂ ಪೊರ್ದಲಣ್ಮದೆ ತನ್ನಂತೆ ಬಂಬಲಂ ಬಾಡಿರ್ದ ಜಾದಿಯಂ ನೋಡಿಯದಱ ನೆವದಿಂ ವಸಂತಮನಿಂತೆಂದಳ್

ಕಂ॥ ನೀತಿಯನೊಕ್ಕು ವಿಜಾತಿಯ
ಮಾತನೆ ಮನ್ನಿಪ ವಸಂತನೃಪನಿಂ ಕಿಡುಗುಂ
ಜಾತಿಯ ಸಿರಿಯುೞಿದಿರ್ಪ ಕು
ಜಾತಕುಲದ ಲಕ್ಷ್ಮಿ ಬಳೆವುದೇಂ ವಿಸ್ಮಯಮೇ ೭೦

ವ॥ ಎಂದು ತೆಱಪಱಿದು ವಸಂತಮಂ ತೆಗೞ್ದು ಮಗುೞ್ದಳ್ಕಿಯದಂ ಮಱಿಯಿಸಲೆಂದಿಂತೆಂದಳ್

ಉ॥ ಪಾದರಿ ಪಂಕಜಂ ಸುರಯಿ ಸಂಪಗೆ ಮಲ್ಲಿಗೆ ಮೊಲ್ಲೆ ಕೈರವಂ
ಕೇದಗೆಯಾದಿಯಾದ ಕುಸುಮಾವಳಿ ನೀನಲರ್ದಿರ್ದೊಡೆಮ್ಮನಾ
ರಾದರಿಪನ್ನರೀ ಸಮಯಮಂ ಕುಡು ನೀನೆಮಗೆಂದೊಡೆಂದುದಂ
ಜಾದಿ ವಸಂತದೊಳ್ ಸಲಿಸಿ ಮಾಣ್ದುದು ತನ್ನ ವಿಕಾಸಲಕ್ಷ್ಮಿಯಂ ೭೧

ವ॥ ಎಂದುತ್ಪ್ರೇಕ್ಷಿಸುತ್ತುಮಿರೆ ಮತ್ತೊರ್ವಳತ್ಯಭಿನವಸುರಭಿನಿಶ್ವಾಸೆ

ಕಂ॥ ಪರಿಮಳದಿಂದಮೆ ದಳಮಂ
ವಿರಚಿಸಿದಂ ಸುರಯಿಗಬ್ಜಭವನಲ್ಲದೊಡೋ
ಸರಿಸದ ಕಂಪಿನ ಪೊಂಪುೞಿ
ಮರುೞ್ಚಿ ಮಧುಕರಮನೆಂತು ಸೆಱೆವಿಡಿದಪುದೋ ೭೨

ಕುಸುಮಾಪಚಯಕ್ಕೆಳಸಿದ
ಬಿಸಜಾನನೆಯೆಸೆದಳಂಗಜಂಗಲರಂಬಂ
ಪೊಸನನೆಯನಾಯ್ದು ರತಿ ರಚಿ
ಯಿಸುತಿರ್ದಪಳೆಂಬ ಶಂಕೆಯಂ ಕೊನರಿಸುತುಂ ೭೩

ಬಂದುಗೆಯ ನನೆಗಳೊಳ್ ತರ
ದಿಂದಂ ಮಲ್ಲಿಗೆಯ ನನೆಗಳಂ ಕೋದೊರ್ವಳ್
ಬಂಧಂಬಿಡದಿರೆ ಚಳಕಿಗೆ
ಯಂ ದರಹಸಿತಾಸ್ಯೆ ಮಾಡಿ ತೊಟ್ಟಳ್ ಮುದದಿಂ ೭೪

ಎಳವೆಱೆಯಂ ಪೊಸಗೇದಗೆ
ಗಳ ಗಱಿಯಿಂ ಸಮೆದು ಚಿನ್ನಪೂಗಳ್ ತಾರಾ
ವಳಿವೊಲಿರೆ ತುಱುಬಿ ಮಿಱುಗಿದ
ರೆಳವೆಂಡಿರ್ ಮುಗಿಲನಿೞಿಸಿ ಸೊಗಯಿಸೆ ಮುಡಿಗಳ್ ೭೫

ಚಂ॥ ಸುರಯಿಯ ಚಿನ್ನಪೂವು ಸುರಹೊನ್ನೆಯ ಕನ್ನವುರಂ ಪೊದಟ್ಟಿ ಕೇ
ಸರದಲವೊರ್ಟ್ಟು ಮೊಲ್ಲೆಯ ಬಟಿಲ್ಮುಡಿ ಬಣ್ಣದ ಬಣ್ಣದ್ಯೆಸರಂ
ಸುರುಚಿರಮಪ್ಪ ಸಂಪಗೆಯ ಕಂಕಣಮಂಬುಜನಾಳದುಂಗುರಂ
ತರುಣಿಯರ್ಗಚ್ಚಮಲ್ಲಿಗೆಯರಲ್ಗಳ ಹಾರಮದೊಪ್ಪಿತಾಗಳುಂ ೭೬

ಕಂ॥ ಕರಕಂಜಂ ಶಿಶಿರದವೋಲ್
ವಿರಚಿಸೆ ಪುಷ್ಪಾಪಚಯಮನುಗುರ್ವೆಳಗುಂ ಪೆಂ
ಡಿರ ಕಣ್ಬೆಳಗು ಚೈತ್ರದ
ದೊರೆಯನೆ ಕುಸುಮೋಪಚಯಮನಿತ್ತವು ಲತೆಯೊಳ್ ೭೭

ಕಡುಗೆಂಪಿಂದಧರಂ ಪ
ಣ್ಣಡಕೆವೊಲಿರೆ ಕೂರಳ ರೇಖೆಯಿಂ ಪೊಂಬಳೆಯಂ
ಪಿಡಿದಿರವಿಂ ಕೋಮಳಿಕೆಯಿ
ನಡಕೆಯ ಸಸಿಯಂತಿರಸಿಯಳೆಸೆದಳ್ ನಿಸದಂ ೭೮

ಯುವತಿಯರ್ಗೆ ಚೂತಪಲ್ಲವ
ದವತಂಸಂ ಕಿವಿಗೆ ಸಾರ್ದು ನಲ್ಲರನಗಲ್ದಿ
ರ್ದವರಂ ಸ್ಮರನೆಚ್ಚಪಸಂ
ದವು ಮಧುಕರಮಧುರರವದಿನುಸಿರ್ವಂತೆಸೆಗುಂ ೭೯

ಮಳಯಜದಣ್ಪಿಂದಂ ಕೋ
ಮಳೆಯರ ಕುಚಮಂಡಳಂಗಳಂ ಗಜರಾಜಂ
ಗಳವಡೆ ಪಿಡಿದಿರ್ಪಮಳ್ಗೊಡೆ
ಗಳಿವೆನೆ ತೊಳಗಿದುವು ಸುರಭಿಮಾಸೋದಯದೊಳ್ ೮೦

ವನಿತೆ ಮಕರಂದಮಂ ಕೊಸ
ಗಿನ ಕುಸುಮದೊಳಿರಿಸೆ ಕರ್ಣಿಕಾರಕ್ಕೊಲವಿಂ
ವನದೇವತೆ ತನಿಗಂಪಂ
ಜನಿಯಿಸಲೆಂದಿರಿಸಿದಂದಮಂ ನೆನೆಯಿಸುಗುಂ ೮೧

ಒಗೆದ ಕುಚದಲ್ಲಿ ಪೊಸಮ
ಲ್ಲಿಗೆಗಳ ಮುತ್ತುಗಳ ಹಾರಮಂ ರಮಣಿ ಸಮಂ
ಬಗೆದಿಕ್ಕೆ ಮಿಕ್ಕು ಚೆಲ್ವಿಂ
ನಗುವಂತವನರ್ದುವಂದು ವಿಚಕಿಳಮುಕುಳಂ ೮೨

ಬೀಸುವ ತೆಂಬೆಲರ್ ಕೊಂಬಿಂ
ದೀಸುವ ತೆಪ್ಪಮನೆ ಪೋಲೆ ಕಂಪಂ ತನ್ನಿಂ
ದೀಸುವಲರ್ದಲರ ಕಂಪಿನೊ
ಳೀಸುವವೋಲ್ ಮೆಲ್ಲನಂದು ಬಂದುದು ಬನದೊಳ್ ೮೩

ಅಲರ್ವಜ್ಚಮನಜ್ಚರಿಯೆನೆ
ಜಲಜಾಕ್ಷಿಯರಿಟ್ಟು ನೆಟ್ಟನೊಲವಿಂ ತಮಗ
ಗ್ಗಲಿಸಿದ ಚೆಲ್ವಿಂದೆ ಲತಾ
ಲಲಿತಾಂಗಿಯರೆಂಬ ಪೆಸರಿನಸದಳಮೆಸೆದರ್ ೮೪

ವ॥ ಅಂತು ತಮ್ಮ ಬಗೆಗೆ ವಂದಳಂಕಾರಕ್ಕಾಧಾರಮಾದ ಸಾರಭೂರುಹಂಗಳಂ ಮೆಚ್ಚಿ ಬಿಚ್ಚಳಿಸಿ ಇಚ್ಚೆಗೆ ವಂದಲರ್ವಜ್ಚಮನಜ್ಚರಿ ಪುಟ್ಟಿ ತೊಟ್ಟು ಚಿತ್ತಜನ ಚಿತ್ತಮನಲರ್ಚುತ್ತುಂ

ಚಂ॥ ಇದು ಕಳಕಂಠನಾದಮಿದು ಕಾಮಿನಿಯರ್ಕಳ ಗೇಯನಾದಮಿಂ
ತಿದು ಕಳಹಂಸಯಾನಮಿದು ಕಾಮಿನಿಯರ್ಕಳ ಮಂದಯಾನಮಿಂ
ತಿದು ನವಪದ್ಮಗಂಧಮಿದು ಸೌಂದರಿಯರ್ಕಳ ವಕ್ತ್ರಗಂಧಮಿ
ನ್ನಿದವಜೆವನ್ನರಿಲ್ಲೆನಿಸಿದರ್ ವನಕೇಳಿಯೊಳಾ ಲತಾಂಗಿಯರ್ ೮೫

ವ॥ ಅಂತು ವನಕೇಳೀಪರಿಶ್ರಮಸಮನ್ವಿತೆಯರ್ ಜಳಕೇಳೀಲೀಲೆಯಂ ಬಯಸುತ್ತು ಮಿರ್ಪುದುಮಿತ್ತಲ್

ಉ॥ ಕಳಕಂಠಧ್ವನಿ ಪಂಚಮಸ್ವರಮದಂ ವೀಣಾಪ್ರವೀಣಾಂಗನಾ
ವಳಿಯಿಾಗಳ್ ಶ್ರುತಿನಿಶ್ಚಯಕ್ಕೆಳಸಿ ಮೆಲ್ಪಿಂ ಬಾಜಿಸುತ್ತುಂ ಮನಂ
ಗೊಳೆ ಪಾಡುತ್ತಿರೆ ತಂತ್ರಿ ಗಾತ್ರಮೆರಡುಂ ಸಮ್ಮೇಳಮಂಬೆತ್ತುವೀ
ಗಳೆನುತ್ತುಂ ಪತಿ ಮೆಚ್ಚಿ ಬಿಚ್ಚಳಿಸಿದಂ ನಾನಾಕಳಾಕೋವಿದಂ ೮೬

ವ॥ ಅಂತು ಚಕ್ರವರ್ತಿ ಮೆಚ್ಚುತ್ತುಮಿರ್ಪುದುಮಾ ಪ್ರಸ್ತಾವದೊಳ್

ಚಂ॥ ಅನುಪಮಪದ್ಮವಕ್ತ್ರೆಯ ನವೋತ್ಪಳನೇತ್ರೆಯ ಪುಷ್ಪಮಂಜರೀ
ಸ್ತನಿಯ ಲತಾಂಗಿಯಪ್ಪ ವನಲಕ್ಷ್ಮಿಯ ಯೌವನಲಕ್ಷ್ಮಿ ದೇವ ನಿ
ನ್ನನುಭವಸೌಖ್ಯದಿಂದೆ ಸಫಳಂ ಬಿಜಯಂಗೆಯವೇಱ್ಕುಮೆಂಬ ತ
ದ್ವನಿತೆಯ ದೂತನಂದದೊಳೆ ಬಂದುದು ನಂದನಮಂದಮಾರುತಂ ೮೭

ವ॥ ಅಂತು ಬಂದಮಂದಮೆನಿಪ ರಾಗಮನೀವ ಪರಾಗಮಂ ಸ್ತುತ್ಯಮೆನಿಪ ಶೈತ್ಯಮನಲಭ್ಯಮೆನಿಪ ಸೌರಭ್ಯಮನೋಲಗಿಸಿ ತನ್ನ ಗುಣಕ್ಕನುಚರಂಗಳೆನಿಸಿದ ಚಂಚರೀಕಂಗಳಿಂ ಬಿನ್ನವಿಸುವ ಮಂದಾನಿಳನ ಮಾತಂ ಮನ್ನಿಸಿ

ಚಂ॥ ಬಿಡದೆಡಗೆಯ್ಯೊಳೊಪ್ಪೆ ಮಜಿದುಂಬಿಯನಾಂತಲರ್ಗೊಂಬು ಚಿತ್ತಮಂ
ಪಿಡಿಯೆ ಪೊದಟ್ಟಿ ಮಲ್ಲಿಗೆಯಲರ್ ಬಲಗೆಯ್ಯೊಳುದಾತ್ತಚೈತ್ರನಂ
ತೊಡವರುತೊಪ್ಪೆ ನರ್ಮಸಚಿವಂ ರತಿಯಂ ಸತಿ ಪೋಲೆ ಮೂರ್ತಿಯಂ
ಪಡೆದ ಮನೋಜನಂತೆ ನಡೆತಂದನಿಳೇಶ್ವರನಾ ವನಾಂತದೊಳ್ ೮೮

ವ॥ ಆಗಳಶೇಷಭಾಷಾವಿದುರವಿದೂಷಕನಿಂತೆಂದಂ

ಚಂ॥ ಜಡಮೆನಿಸಿರ್ದ ಮೇಘಸಮಯಂ ನಿಜಜೀವನಮಂ ಲತಾಂಗಿಗಿ
ತ್ತೊಡಮಲರ್ದೊಪ್ಪದೂರ್ಜಿತಕಳಾಧರಮೂರ್ತಿ ವಸಂತಮಿಾಯದಿ

ದೋಡಮಲರ್ದೋಪ್ಪುತಿರ್ದುವು ಲತಾಂಗಿಯರೀವನನೊಲ್ಲದಿಚ್ಚೆಯೊಳ್
ನಡೆವನನೊಲ್ದು ಮನ್ನಿಸುವರೆಂಬುದನಿಂಬೆನೆ ಸೂಚಿಪಂದದಿಂ ೮೯

ವ॥ ಅಂತು ವಸಂತವರ್ಣನಾಪ್ರಸ್ತಾವಮಂ ವಿಸ್ತರಿಸಿ ಮತ್ತಮಿಂತೆಂದಂ

ಕಂ॥ ಇಂದೋಳಗೀತದಾಗರ
ಮಿಂದುವಿನ ವಿಳಾಸಮಖಿಳಲತೆಗಳ ಕಾಂತಂ
ಸುಂದರಿಯರ ಸುರತಸುಖಂ
ಬಂದುದು ಮಧುಮಾಸಮತನುವಿಭವಾವಾಸಂ ೯೦

ಎಳಮಾವುಗಳೊಡನಿಳೆಗಂ
ಪುಳಕಾಂಕುರಮೊದವೆ ಮಳಯರುಹಪರಿಮಳಮಂ
ತಳೆದು ಮಳಯಾನಿಳಂ ಬಂ
ದೆಳಸುತ್ತಿರೆ ಸುರಭಿಮಾಸಮಾದುದು ಚೈತ್ರಂ ೯೧

ಚಂ॥ ಸ್ಮರಶಶಿಯಿಂದಮೊಂದಿ ಶಶಿರಶ್ಮಿಶರದ್ಗುಣಮಂ ನಿದಾಘಮಂ
ತರೆ ತಮಗಂಬುಸೇಚನದೆ ವೃಷ್ಟಿಯನಂಬುಜಪತ್ರವೀಜನೋ
ತ್ಕರದೊಳೆ ಮಾಗಿಯಂ ಬರಿಸುತುಂ ಋತುಸಂಕರಮಾಗೆ ಮಾಡಿದರ್
ವಿರಹಿಗಳಿಂತಿದಚ್ಚರಿ ವಸಂತದೊಳಂ ಶಿಶಿರೋಪಚಾರಮಂ ೯೨

ವ॥ ಅಂತು ವಸಂತವಿಭವಮಂ ವ್ಯಾವರ್ಣಿಸಿಯದರ್ಕೆ ಮಂಡನಮಾಗಿ ಬಂದ ಮಾಕಂದಮನಿಂತೆಂದಂ

ಉ॥ ಕಳಕಂಠಾಖ್ಯಾನಮಂ ಕೋಕಿಳಕೆ ಕಳಿಕೆಯಿಂ ಮಾಡಿ ಮತ್ತಂ ವಸಂತ
ಕ್ಕೆ ಲತಾಂತಶ್ರೇಣಿಯಿಂದಂ ಸುರಭಿಸಮಯಮುದ್ಯನ್ಮಧುವ್ರಾತದಿಂದಂ
ವಿಳಸಚ್ಛ್ರೀಮಾಧವಂ ಪಲ್ಲವಕುಸುಮಫಳಾನೇಕವರ್ಣಂಗಳಿಂ ಕೆ
ಯ್ಯೊಳಿಸುತ್ತುಂ ಚೈತ್ರಮೆಂಬೀ ಪೆಸರಿನಸದಳಂ ಕಣ್ಗೆ ವಂದತ್ತು ಚೂತಂ ೯೩

ಮ॥ ತಳಿರಿಂ ಮಂಗಳಗೇಹಮಜ್ಜನನೆಯಿಂ ಭೂಷಾಗೃಹಂ ಪುಷ್ಪಸಂ
ಕುಳದಿಂ ಕಾಮನ ಶಸ್ತ್ರಶಾಲೆ ಮಿಡಿಯಿಂ ಭಂಡಾರಮಿರ್ಪಾಲಯಂ
ಫಳದಿಂ ಸಿದ್ಧರಸಪ್ರಪೂರ್ಣಕಳಶಸ್ಥಾನಂ ರುವತ್ಕೋಕಿಳಾ
ವಳಿಯಿಂದೋಲಗಸಾಲೆಯೆಂಬ ತೆಱದಿಂ ಚೆಲ್ವಾಯ್ತು ಚೂತದ್ರುಮಂ ೯೪

ಉ॥ ಕಾಮನ ವೀರಮಂಕುರಿಸುತ್ತಿರೆ ಭೂಮನೋಜ ತೇ
ಜೋಮಯಮಾಯ್ತು ಕಂದಳಿರ್ಗಳಿಂ ತುಱುಗುತ್ತಿರೆ ಚಿತ್ತಜನ್ಮನು
ದ್ದಾಮಯಶಂ ವಿಶೇಷತರಮಾದುದು ಪುಷ್ಪಿತಮಾಗೆ ಕಂತು ನಿ
ಸ್ಸೀಮಮನೋರಥಂ ಸಫಳಮಾಯ್ತು ಫಳಾನ್ವಿತಮಾಗೆ ಸಾಮರಂ ೯೫

ಕಂ॥ ಶ್ರುತಿಸುಭಗರವದ್ವಿಜಸಂ
ತತಿಯಿಂದಂ ಸಾಮರುಚಿರ ಶಾಖೆಗಳಿಂದ

ನ್ವಿತಮೆನಿಸಿ ರಂಜಿಕುಂ ರತಿ
ಪತಿಸರ್ವನಮಸ್ಯದಂದದಿಂ ಮಾಕಂದಂ ೯೬

ಎಳಗಿಳಿಯ ತುಂಡಮಮಂ ಕೆಂ
ದಳಿಕೆಯಿದೆಂದೆಳಸಿ ಕೋಕಿಳಂ ಕರ್ದುಕಿತ್ತಂ
ತೆಳವೆಯೊಳಜೀವಕ್ಕುಮೆ ಸಂ
ಚಳಿಸುವ ಪರಪುಷ್ಟಪಲ್ಲವಗ್ರಾಹಕದೊಳ್ ೯೭

ವ॥ ಅಂತು ಚೂತಕುಜಾತಮಮಂ ಸಮವೇತಮಪ್ಪ ಮಾತುಗಳಿಂ ಪೊಗೞ್ದು ಚೂತವಲ್ಲಭನ ಮನೋವಲ್ಲಭೆಯಪ್ಪ ಮಲ್ಲಿಕಾವಲ್ಲರಿಯ ಸಮುಲ್ಲಸಿತ ಕುಸುಮಗಳಂ ನೋಡಿ

ಚಂ॥ ಕುಸುಮಶರಾಸ್ತ್ರಮಂ ಸಸಿಯ ಸಾಣೆಯೊಳೀ ಮಧುವೆಂಬ ಕಮ್ಮರಂ
ಮಸೆಯಲೆವೇಡಿ ತೀಡಿದನೊ ಮುನ್ನೆ ಪಸುರ್ಪಿನೊಳೆಂಬವೋಲ್ ಪಸು
ರ್ಪಸೆದುದು ಮುಂ ಬೞಿಕ್ಕೆ ಮಸೆದಂತಿರೆ ಬೆಳ್ಪೆಳಸಿತ್ತು ಕಂಪನೆ
ಣ್ದೆಸೆಗಮಲಂಪಿನಿಂ ಪರೆಯ ಚೆಲ್ಲುವ ಮಲ್ಲಿಗೆಯೊಳ್ ಮಹೀಪತೀ ೯೮

ವ॥ ಎಂದು ತನ್ನ ಮಚ್ಚಱಿದು ಬಿಚ್ಚಳಿಸಿದ ಚತುರವಚನವಿಚಕ್ಷಣಂಗಾ ಕ್ಷಣದೊಳೆ ಮಚ್ಚುಗೊಟ್ಟೆಲ್ಲಾ ಮೆಯ್ಯಿಂ ಮೆಚ್ಚಿಸಿದ ಮಾಕಂದಕ್ಕೆ

ಚಂ॥ ಇದು ತಳಿರೊಂದುಲೀಲೆಗಿದು ನಿನ್ನಯ ಬಲ್ನನೆಯೊಂದು ಲಕ್ಷ್ಮಿಗಿಂ
ತಿದು ಕುಸುಮಂಗಳೊಂದೆಸಕಕಿಂತಿದು ಕಾಯ್ಗಳದೊಂದು ಕಾಂತಿಗಿಂ
ತಿದು ಪೊಸಪಣ್ಗಳೊಂದುರಸಪುಷ್ಟಿಗೆನುತ್ತುಮೆ ಚಕ್ರವರ್ತಿ ಸ
ಮ್ಮದದೊದವಿಂದೆ ಚೂತತರುಗಿತ್ತನಶೇಷವಿಭೂಷಣಂಗಳಂ ೯೯

ಕಂ॥ ಪಾದರಿ ವಸಂತನೊಸೆದಿ
ರ್ಪಾದರಿಸುವ ರಮಣಿಯಲ್ಲದಂದೇಕೆಯೊ ಮೇ
ಲಾದ ಲತೆಗಿನಿತು ಸಿರಿಯಿ
ಲ್ಲಾದಮೆನುತ್ತದನೆ ನೋಡಿದಂ ನೃಪತಿಳಕಂ ೧೦೦

ಚಂ॥ ಸ್ಮರರಿಪು ದರ್ಪಕಂಗಿದುವೆ ಕೇದಗೆ ಕೈಪಿಡಿಯೆಂಬ ಕೋಪದಿಂ
ಪರಿಹರಿಸಿರ್ಪನುಂತಿದಱಿಸಲ್ಗಳ ಚೆಲ್ವಿದಱೊಂದು ಗಂಧಬಂ
ಧುರತೆಯೊಳಾವ ಪೂವುಗಳೊಳುಂಟದನೇಟಿಸುವಲ್ಲಿಗೆಂದು ನಿಂ
ದರಸನದಂ ಮುಂದಂಬೆರಸು ಬಣ್ಣಿಸಿದಂ ಕವಿರಾಜಶೇಖರಂ ೧೦೧

ಪರಿಮಳಕೀ ಮಧುವ್ರತಮೆ ಪಾಯ್ದೊಡೆ ಕಾಯ್ದುಮನಂಗನೆಂದದಂ
ಮೊರೆಯಲೆವೇಡಿ ಮಾಡಿದನೆಸಳ್ ಪುದಿದಿರ್ಪವೊಲೆಯ್ದೆ ಕಂಟಕಂ
ಬೆರಸು ಬಸಂತನೆಂಬ ತೆಱದಿಂದೆಸೆದಿರ್ದಪುದೆಂದು ನಿಂದು ಭೂ
ವರವಿಭು ಮಚ್ಚಿ ಬಿಚ್ಚಱಿಸಿದಂ ಸ್ಮಿತಕೇತಕಿಯಂ ಕೃತೀಶ್ವರಂ ೧೦೨

ಕಂ॥ ಸ್ವೀಕೃತರಾಗಂ ರಾಗಮ
ನಾ ಕಂದರ್ಪಂಗೆ ಪಡೆಗದುಚಿತಂ ವಿದಿತಾ

ಶೋಕಮೆನಿಸಿರ್ದು ವಿರಹಿಗೆ
ಶೋಕಮನೊದವಿಪುದಿದನುಚಿತಂ ಪಲ್ಲವಿತಂ ೧೦೩

ತಳಿರ್ದೊಂಗಲನುಟ್ಟಲರ್ದಲ
ರ್ಗಳ ಗುಂಜೆಯ ಭೂಷಣಂಗಳಂ ತೊಟ್ಟು ಮನಂ
ಗೊಳಿಸಿರ್ದಶೋಕಲತೆ ರುವ
ದಳಿಮಿಳಿತಂ ಪಾಡುತಿರ್ಪ ಬೇಡಿತಿಯೆನಿಕುಂ ೧೦೪

ಪಂಬಲಿಸಿ ಪಾಯ್ದ ಮಧುಪಕ
ದಂಬಂ ನವಕರ್ಣಿಕಾರಕುಸುಮದೊಳೆನಸುಂ
ಚೆಂಬೊನ್ನ ಬಟ್ಟಲೊಳ್ ರತಿ
ತಿಂಬಿದ ಕತ್ತುರಿಯ ತೆಱನನುಱುಸೆಱೆವಿಡಿಗುಂ ೧೦೫

ವ॥ ಎಂದದಱ ಮೆಯ್ಸಿರಿಯಱಿದು ಪೊಗೞ್ದು ಜಗತೀವಲ್ಲಭಂಗಾ ಸಮಯದೊಳ್ ಸಮಯಂಬಡೆದು ಮಚ್ಚುಗುಡುವಂತೆ

ಮ॥ ಬರೆ ಭೂಪಂ ವನದೇವಿಯರ್ ಪದೆಪಿನಿಂದೆಲ್ಲರ್ಗಮಭ್ಯಾಗತಂ
ಗುರುವೆಂದರ್ಘ್ಯಮನಿತ್ತನರ್ಘ್ಯಮಣಿಯಂ ಪ್ರಸ್ತುತ್ಯವಸ್ತ್ರಂಗಳಂ
ನಿರವದ್ಯಾಮೃತ ಹೃದ್ಯಪಕ್ವಫಳಮಂ ದಿವ್ಯಾನುಲೇಪಂಗಳಂ
ಧರಣೀಶಂಗೆ ಮನಃಪ್ರಮೋದದೊದವಿಂದಿತ್ತರ್ ಗುಣೋದ್ಯುಕ್ತೆಯರ್ ೧೦೬

ವ॥ ಅಂತು ವನದೇವತೆಯರ್ ಸಂಭಾವಿಸಿದಭ್ಯಾಗತಿಯುಮಂ ವನಲಕ್ಷ್ಮಿ ಯೋಲಗಿಸಿದ ಸರಸಕಿಸಲಯಕುಸುಮಫಳಾನೀಕಂಗಳುಮಂ ಕೆಯ್ಕೊಳುತ್ತುಂ ಸಂತುಷ್ಟಚಿತ್ತನಾದ ಚಕ್ರವರ್ತಿ ಜಳಕ್ರೀಡೆಯಾಡುವ ಖೇಟಕುಟಿಯ ಚೆಲ್ವನೊಳಕೊಂಡ ಸರೋಜಷಂಡಮಂ ಕಂಡನದೆಂತ ಪ್ಪೊಪ್ಪಮಂ ತಳೆದಿರ್ದುದೆಂದೊಡೆ

ಕಂ॥ ವರ ನೃಪತಿಯಂತೆ ವಸುಧಾ
ಭರಣಂ ಪ್ರಾಸಾದದಂತೆ ಕುಮುದಾಕೀರ್ಣಂ
ಧುರದಂತರಣ್ಯದಂತಿರೆ
ಶರಭಾಕೀರ್ಣಂ ಸರೋವರಂ ಕರಮೆಸೆಗುಂ ೧೦೭

ಮ॥ ವರಕಾಂತಾಮುಖದಂತೆ ಸಸ್ಮಿತಸರೋಜಶ್ರೀವಿಳಾಸಂ ದ್ವಿಜೋ
ತ್ಕರಕಾಂತಂ ಪ್ರಚುರಪ್ರಸಾದ ಹಿತಂ ಕಿಂಜಲ್ಕ ಸೀಮಂತ ಭಾ
ಸುರಮುನ್ಮತ್ತಮಧುವ್ರತಪ್ರಿಯತರಂ ಶ್ರೀರಾಜಹಂಸಾವಳೀ
ಪರಿಸೇವ್ಯಂ ಮಧುರಾಮೃತಂ ಸೊಗಯಿಕುಂ ಶ್ರೀಸದ್ಮಪದ್ಮಾಕರಂ ೧೦೮

ವ॥ ಎಂದದಱ ಸೌಂದರ್ಯಮಂ ರಾಜಹಂಸಂ ಪ್ರಶಂಸೆಯಂ ಮಾಡುತ್ತುಂ ತನ್ನ ವಿನೋದಕ್ಕನುರಕ್ತೆಯಪ್ಪ ರಕ್ತೆಯನೆಯ್ದೆವರ್ಪುದುಮಾ ಪ್ರಸ್ತಾವದೊಳ್

ಕಂ॥ ನೀರ್ವೂಗಳ ಪರಿಮಳಮಂ
ಪೀರ್ವಳಿಗಳ ಕಳಕಳಂಗಳೊಗೆದುವು ನದಿಯೊಳ್

ನೇರ್ವಡೆ ಮಕರಪತಾಕನ
ದುರ್ವಾರಜಯಪ್ರಶಸ್ತಿಯಂ ಪಾಡುವವೋಲ್ ೧೦೯

ಉ॥ ಭೂರಮಣಂ ಮಣಿಪ್ರಕರಮಂ ನದಿ ಸಿಂಧುಸಮಾಖ್ಯೆಗಾಗಳಾ
ಧಾರಮೆನಿಪ್ಪಿನಂ ಕೆದಱಿ ಮಿಶ್ರಿತ ವಿಶ್ರುತ ಯಕ್ಷಕರ್ದಮೋ
ದಾರ ರಸಪ್ರಸಂಗಪರಿಶೋಭಿತ ತುಂಗತರಂಗದಿಂದೆ ಶೃಂ
ಗಾರನದೀವಿಳಾಸಮನೆ ತಾಳ್ದಿರೆ ರಕ್ತೆ ವಿನೋದತತ್ಪರಂ ೧೧೦

ವ॥ ಅಂತು ನಿಜಾಂತರಂಗಮಂ ಪೋಲೆ ನದೀತರಂಗಮಂ ಕಸ್ತೂರಿ ಕರ್ಪೂರ ಕಾಶ್ಮೀರ ಕಾಳಾಗರುವಿಂದನುರಾಗಿಯಾಗೆ ಮಾಡಿ

ಕಂ॥ ನೀರಾಟಕ್ಕಾದರದಿಂ
ದೈರಾವತಮಿಂದ್ರಸಿಂಧುವಂ ಪುಗುವವೊಲು
ವೀರರಮಣನಿಂದ್ರವಿಭವಾ
ಧಾರಂ ಪೊಕ್ಕಂ ಪ್ರಸನ್ನ ಗುಣಸಂಪನ್ನಂ ೧೧೧

ಪರವಾಹಿನಿಯ ಮಹತ್ವಂ
ಸ್ಥಿರತೇಜೋನಿಧಿಯ ಸನ್ನಿಧಿಯೊಳಿರದೆಂಬಂ
ತಿರೆ ದೇವೀಪ್ರೇರಣೆಯಿಂ
ಪರವಾಹಿನಿಯಾದುವಾಗಳೂರುದ್ವಯಸಂ ೧೧೨

ವ॥ ಅಂತು ಪೊಕ್ಕು ಮಹೀತಳಪತಿ ತಮ್ಮ ಶಂಕೆಯಂ ಕಳೆವುದುಮವನಿಪನ ಹೃದಯಮನೊಳಪುಗುವಂತೆ ನದೀಹೃದಯಮಂ ಮೃಗನಯನೆಯರ್ ಪುಗಲೊಡನೆ

ಕಂ॥ ಶೃಂಗಾರವಾರಿನಿಧಿಯನ
ನಂಗನೃಪಂ ಸೇತುಗಟ್ಟಿದಂತೆಸೆಗುಂ ವಾ
ರಾಂಗನೆಯರ ಕುಚಗಿರಿಯ ಬೆ
ಡಂಗಿಡಿದಿರೆ ಮೃಗಮದಾಂಬುಸಂಭೃತನದಿಯೊಳ್ ೧೧೩

ಸರಸಿರುಹದೆ ಸತಿಯರ ಮುಖ
ಸರಸಿರುಹಕ್ಕಾಸ್ಯಕಮಳದಿಂ ಪೀನಪಯೋ
ಧರಹತವೀಚೀವಿತತಿಗೆ
ಪರಿಮಳಲೋಭದೊಳೆ ಪರಿದುವಳಿಗಳ ಬಳಗಂ ೧೧೪

ತರುಣಿಯರ ಕುಚದ ಕತ್ತುರಿ
ಪೊರೆದಿರ್ದ ತರಂಗಮಾಳೆಗಳ ಬೞಿಯಿಂದಂ
ಪರಿವಳಿಮಾಳೆಗಳೆಸೆದುವು
ತೆರೆ ತೆರೆಗಳನಟ್ಟುತಿರ್ಪ ತೆಱದಿಂ ನದಿಯೊಳ್ ೧೧೫

ಊರುದ್ವಯಸಂ ದೇವೀ
ಪ್ರೇರಣೆಯಿಂದಾಗಿ ರಕ್ತೆ ನಿಜಸತಿಯರ ಶೃಂ
ಗಾರರಸದಿಂದೆ ಮಗುಳ್ದುಂ
ಪೂರಿಸಿಯುಮಲಂಘ್ಯಮಾದುದವನಿಪನಿಂದಂ ೧೧೬

ವ॥ ಅಂತು ಪುಣ್ಯನದಿಯನಗಣ್ಯಲಾವಣ್ಯತೋಯದಿಂ ತೀವಿ

ಚಂ॥ ಜಳರುಹವಕ್ತ್ರೆಯರ್ ಜಳರುಹೋಪಮಮಂ ಕಳಹಂಸಯಾನೆಯರ್
ಸುಲಲಿತಹಂಸಸನ್ನಿಭಮನುತ್ಪಳನೇತ್ರೆಯರುತ್ಪಳಾಭಮಂ
ವಿಳಸಿತ ಚಕ್ರವಾಕಕುಚೆಯರ್ ಘನಚಕ್ರಸಮಾನಮಂ ಸಮು
ಜ್ವಳಜಳಯಂತ್ರಮಂ ತಳೆದುಕೊಂಡರಿಳೇಶನ ವಾರನಾರಿಯರ್ ೧೧೭

ಕರಿಣಿಗಳಚ್ಚಿಱಿಂದಮೆ ಕರೀಂದ್ರನ ಮೇಲೆ ಪರಾಗಪುಂಜಪಿಂ
ಜರಿತಜಲಂಗಳಂ ನಿಜಕರಂಗಳಿನಾಂತು ತುಳುಂಕುವಂದದಿಂ
ನಿರುಪಮ ಭದ್ರಲಕ್ಷಣನೃಪಾಲನ ಮೇಲೆ ಸಕುಂಕುಮಾಂಬುವಂ
ಗುರುಕುಚಕುಂಭೆಯರ್ ಲಲಿತಯಾನೆಯರಾದರದಿಂ ತುಳುಂಕಿದರ್ ೧೧೮

ಉ॥ ಕುಂಕುಮಪಂಕದಿಂದುದಯಿಪಿಂದುವಿನಂದಮನಪ್ಪುಕೆಯ್ಯೆ ವ
ಕ್ತ್ರಂ ಕುಡೆ ಕುಂಕುಮಾಂಬುಜಳಯಂತ್ರದಿನಂಗನೆಯೊತ್ತೆ ತತ್ಪ್ರಭಾ
ಳಂಕೃತಲಕ್ಷ್ಮಿಯಂ ನೃಪನ ಹೃತ್ಕುಮುದಂ ಮುದವೇಱೆತಂಗಸ
ಸ್ಯಂ ಕಡುಚೆಲ್ವನೆಯ್ದಿದುದು ನರ್ತಿಸುತಿರ್ದುವು ದೃಕ್ಚಕೋರಿಗಳ್ ೧೧೯

ಕಂ॥ ಲಲನೆ ಜಲಯಂತ್ರಮಂ ಕುಚ
ಕಳಶದೊಳಿಟ್ಟೊತ್ತೆ ನೃಪತಿಯುರದೊಳ್ ಘುಸೃಣೋ
ಜ್ವಳರಸಮೆಸೆದುದು ರಾಗಂ
ಬಳೆದಿರೆ ತನ್ನೃಪನ ಮನಮುಮಂ ತೀವುವವೋಲ್ ೧೨೦

ಮ॥ ಪ್ರಿಯಕಾಂತಾಕುಚಕುಂಭಕುಂಕುಮ ಸುಪಂಕಕ್ಲೇಶದಿಂದಂ ಜಡಾ
ಶಯಮುಂ ರಾಗದೊಳೊಂದಿತೆಂದೊಡಬಳಾಸಂಸರ್ಗದಿಂ ಚಕ್ರವ
ರ್ತಿಯ ಚೇತಕ್ಕನುರಾಗಮಪ್ಪುದರಿದೇ ಪೇಱೆಂಬವೋಲ್ ವಾರಿಕೇ
ಳಿಯೊಳಾದತ್ತು ಸುವರ್ಣಶೃಂಗವಿಳಸತ್ಕಾಶ್ಮೀರನೀರಂಗಳಿಂ ೧೨೧

ವ॥ ಅನಂತರಂ ಮಹೀಕಾಂತಂ ಶಶಿಕಾಂತಮುಖಜಳಯಂತ್ರಮಂ ತಳೆದುಕೊಂಡು

ಕಂ॥ ವಾರಾಂಗನೆಯರ ಕಬರೀ
ಭಾರಕ್ಕನುರೂಪಮಪ್ಪ ಕರ್ಪುಂ ಕಂಪಂ
ಭೂರಮಣಂ ಪಡೆಯಲ್ ಕ
ಸ್ತೂರೀ ಪ್ರಸ್ತುತ್ಯಜಳಮನೇನೊತ್ತಿದನೋ ೧೨೨

ಕುಂದನಿಭದಶನೆಯರ ವದ
ನೇಂದುಗೆ ಮುದದಿಂದೆ ಚಂದ್ರಿಕೆಯನಧಿರಾಜಂ
ತಂದೋಲಗಿಸುವ ತೆಱದಿಂ
ಚಂದನಸಮ್ಮಿಶ್ರಜಳಮನೊತ್ತಿದನಾಗಳ್ ೧೨೩

ರಮಣಿಯರ ವಿಮಳಲೋಚನ
ಕುಮುದಕ್ಕೆ ವಿಕಾಸಲಕ್ಷ್ಮಿ ಪಸರಿಸುವಿನೆಗಂ
ಹಿಮಕಳಿತ ಮಳಯರುಹ ತೋ
ಯಮನೊತ್ತಿದನಿಂದುರಶ್ಮಿಯಂ ಸೂಸುವವೋಲ್ ೧೨೪

ಬಾಲೆಯರ ಬಾಹುಲತಿಕೆ ಮೃ
ಣಾಳಕ್ಕೆಣೆ ಕಂಟಕೌಘದಿಂ ಪುದಿದೊಡೆನು
ತ್ತಾಳೋಚಿಸಿ ಭೂಪಂ ಭುಜ
ಮೂಳಕ್ಕೊತ್ತಿದನತೀವ ಹಿಮಯುತಜಳಮಂ ೧೨೫

ವೃತ್ತಸ್ತನಿಯರ ಘನಕುಚ
ಕೊತ್ತಿದ ಜಳಧಾರೆ ಮಗುಟ್ಟು ತನ್ನಯ ಮೊಗದೊಳ್
ತೆತ್ತಿಸಿದೊಡಗಿದು ಕದಪಿಂ
ಗೊತ್ತಿದನತಿಮೃದುವನುಱದೆ ಬಾಧಿಸದವರಾರ್ ೧೨೬

ವೃತ್ತಸ್ತನಿಯರ ಕುಚತಟ
ಕೊತ್ತೆ ನೃಪಂ ಮೃಗಮದಾಂಬುವಂ ಬಗೆಗೊಳಿಕುಂ
ಚಿತ್ತಜಗಜಕುಂಭತಟಾ
ಯತ್ತಾಯತದಾನವಾರಿಧಾರೆಯ ತೆಱದಿಂ ೧೨೭

ಮಳಯಜಮೃಗಮದಕುಂಕುಮ
ಜಳಮಂ ಜಳಜಾತದೆಲೆಗಳಿಂ ಕಟ್ಟಿ ಮನಂ
ಗೊಳಿಸುತೆ ಪೊಟ್ಟಳದಿಂದವಿ
ಚಳನಿಟ್ಟಂ ಕಠಿನಕುಚೆಯರಂ ಚಕ್ರಧರಂ ೧೨೮

ಕರಮಚ್ಚರಿ ಕಾಮಿನಿಯರ
ಗುರುಕುಚದೊಳ್ ತೊಳಪ ಕದಪಿನೊಳ್ ಕತ್ತುರಿಯಿಂ
ವಿರಚಿಸಿದ ಪತ್ರಭಂಗಮ
ನರಸಂ ವಿರಚಿಸಿದನೊತ್ತಿ ವಾರ್ಧಾರೆಗಳಿಂ ೧೨೯

ಸೂಸಿದ ಮೃಗಮದಜಳದಿಂ
ಬಾಸೆ ಕುಚಂ ಕರ್ಪನಾಳ್ದು ಕಂದರ್ಪಜಯ
ಶ್ರೀಸಂಪತ್ತಂ ಪಡೆದ ವಿ
ಳಾಸಿನಿಯರ ಗರ್ಭಚಿಹ್ನಮೆನೆ ಸೊಗಯಿಸುಗುಂ ೧೩೦

ಜಳಯಂತ್ರದಿಂದೆ ಮೃಗಮದ
ಜಳಮಂ ನೃಪನೊತ್ತೆ ನಾಭಿಮಂಡಳಮೇಂ ಕ
ಣ್ಗೊಳಿಸಿತೊ ಶೃಂಗಾರಸರೋ
ವಿಳಾಸಮಂ ತಳೆದು ವಿಮಳಕಮಳಾಸ್ಯೆಯರಾ ೧೩೧

ವಾರಿಯ ಬಱಿಯನೆ ಸವತಿಯ
ತೋರಿದುವೆನಿಸಿರ್ದ ಮೊಲೆಯ ಮೇಲಧಿಪನ ಕ
ಣ್ಣೋರಂತೆ ಪರಿದು ನೆಲಸಿರೆ
ನೀರೊಳಗಿರ್ದುಂ ಬೆಮರ್ತಳೊರ್ವಳ್ ಮುಳಿಸಿಂ ೧೩೨

ಸವತಿಯ ಗಾಡಿಗೆ ಸೋಲ್ತಾ
ಡುವುದಂ ಮಱೆದೀಕ್ಷಿಸಿನಿಯನಲರ್ಗಣ್ಗಳೊಳಾ
ಡುವ ನೆವದಿಂ ತುಳ್ಕಿದಳಂ
ಬುವನೊರ್ವಳ್ ತರುಣಿಯರ್ಗೆ ಪುರುಡಿಪುದೆ ನಿಜಂ ೧೩೩

ತುಳ್ಕುವ ಜಳದಿಂ ಮುನ್ನಮೆ
ತುಳ್ಕುವ ಚೆಲ್ವಕ್ಕೆ ಸೋಲ್ತು ಪೂಗಣೆ ಮನಮಂ
ಪಿಳ್ಕುವರಂ ನಡೆನೀರಿಂ
ತುಳ್ಕುವುದಂ ಮಱೆದು ಮೊಗಮನಿನನೀಕ್ಷಿಸಿದಂ ೧೩೪

ಮ॥ ಜನಚೇತೋಮೃಗಮಂ ಸಮಂತಿಸಲೆ ಕೊಂಬಾಗಿರ್ದ ಸೌಭಾಗ್ಯನಂ
ದನಕಂಗೋದ್ಭವನೊಲ್ದು ನೀರೆರೆವ ಚೆಲ್ವಂ ಬೀಱಿತಾ ಪುಷ್ಪಮಂ
ಡನಸಂಶೋಭಿತ ಕಾಮಿನೀತನುಲತಾನೀಕಂಗಳೊಳ್ ಚಕ್ರವ
ರ್ತಿ ನಿತಾಂತಂ ಜಳಯಂತ್ರದಿಂ ತಳಿಯೆ ಶುಂಭಚ್ಚಂದನಾಚ್ಛಾಂಬುವಂ ೧೩೫

ನಯಸಂಪಲ್ಲತೆಯುಂ ವಸಂತನೃಪನುಂ ಶ್ರೀಕಾಮದೇವಪ್ರತಿ
ಷ್ಠೆಯನೊಪ್ಪುತ್ತಿರೆ ಮಾಡಿ ಮಿಕ್ಕವಭೃಥಸ್ನಾನೋಚಿತೋತ್ಸಾಹದೇ
ಟ್ಟೆಯೊಳಾಳ್ದೋಕುಳಿಯಾಡುವಂತೆ ವನಿತಾಸಂದೋಹಮುಂ ಚಕ್ರವ
ರ್ತಿಯುಮಾಡುತ್ತಿರೆ ಮಾಡಿದತ್ತು ಪದೆಪಂ ವಾಃಕೇಳಿಲೀಲೋದ್ಯಮಂ ೧೩೬

ವ॥ ಅಂತು ರತಾಂತದೊಳ್ ತನ್ನ ವಿಮಳಾಶಯದೊಳುತ್ಕಳಿಕೆಯಂ ಬಳೆಯಿಸುವಂತೆ ಜಳಕ್ರೀಡಾಂತದೊಳಾ ಜಳಾಶಯದೊಳುತ್ಕಳಿಕೆಯಂ ಕಠಿಣಕುಚಹತಿಯಿಂ ಬಳಯಿಸುತ್ತುಮಿರ್ದ ವೃತ್ತಸ್ತನಿಯರ್ಪೆರಸು ಜಳಕ್ರೀಡೆಯಂ ನಿರ್ವರ್ತಿಸಿ ಪೊಱಮಡಲೊಡನೆ

ಕಂ॥ ಕದಡಿದ ಕುಂಕುಮದಿಂ ಮೃಗ
ಮದದಿಂ ಮಳಯಜದೆ ಪೊರೆದ ತೆರೆಗಳ್ ಬಹುವ
ರ್ಣದ ರಂಗವಲಿವೊಲಿರೆ ನದಿ
ಮದನನ ಮಂಗಳ ಗೃಹಾಂಗಣಕ್ಕೆಣೆಯಾಯ್ತೋ ೧೩೭

ವ॥ ಅಂತುಮಲ್ಲದೆ

ಚಂ॥ ಮಳಯಜಪಂಕದಿಂ ಮೃಗಮದದ್ರವದಿಂ ಘುಸೃಣಾನುಲೇಪದಿಂ
ವಿಳಸಿತಯಕ್ಷಕರ್ದಮದ ಕರ್ದಮದಿಂ ಘನಸಾರದಿಂ ಮನಂ
ಗೊಳಿಪ ತರಂಗಸಂಗದೆ ತರಂಗಿಣಿ ಕಣ್ಗೆಸೆದಿರ್ದುದಾಗಳು
ಜ್ವಳಿಸುವ ಪಂಚರತ್ನ ರುಚಿಯಿಂ ಪುದಿದಿರ್ದ ಸಮುದ್ರದಂದದಿಂ ೧೩೮

ಕಂ॥ ಮುಂ ಪೂಸಿದ ಕುಂಕುಮಪಂ
ಕಂ ಪೋದೊಡೆ ರಕ್ತಕಂಜಕಿಂಜಲ್ಕಂ ಮೆ
ಯ್ಯಂ ಪುದಿದಿರೆ ನವಯೌವನ
ಸಂಪನ್ನೆಯರಂದು ಮುನ್ನಿನಂದದಿನೆಸೆದರ್ ೧೩೯

ಚಿತ್ರಿಸಲೆಂದಂಗೋದ್ಭವ
ಚಿತ್ರಕನೊಲವಿಂದಮಿತ್ತ ಪಟವಾಸದವೋಲ್
ನೇತ್ರಕ್ಕೆಸೆದಿರ್ದುದು ಶತ
ಪತ್ರಾಕ್ಷಿಯರಂಗದಲ್ಲಿ ಪತ್ತಿದ ದುಗುಲಂ ೧೪೦

ವನಕೇಳಿ ಯುವತಿಯೌವನ
ವನಕೇಳಿಗೆ ಸುಜಲಕೇಳಿ ಶೃಂಗಾರನದೀ
ಘನಜಳಕೇಳಿಗೆ ಕಾರಣ
ಮೆನೆ ಮೆಱೆದಂ ಚಕ್ರಿ ತಾಂ ಸಕಲ ಭೋಗಮುಮಂ ೧೪೧

ಮ.ಸ್ರ॥ ಅರಸಂ ನಾನಾವಿನೋದಪ್ರಿಯನಮಳಜಳಕ್ರೀಡೆಯೊಳ್ ಮಗ್ನರಾಗಿ
ರ್ದರನುದ್ಯದ್ರತ್ನನೂತ್ನಾಭರಣ ವಿವಿಧವಸ್ತ್ರಂಗಳಂ ಕೊಟ್ಟು ಶೃಂಗಾ
ರರಸಕ್ರೀಡಾನಿಮಗ್ನಾಶಯರೆನಿಸಿ ವರಸ್ತ್ರೀಯರಂ ಕೀರ್ತಿಸುತ್ತುಂ
ಸುರಭೂಜೋದಾರವೃತ್ತಂ ವಿಬುಧಜನಮನಃಪದ್ಮಿನೀ ಪದ್ಮಮಿತ್ರಂ ೧೪೨

ಗದ್ಯ

ಇದು ವಿದಿತವಿಬುಧಲೋಕನಾಯಕಾಭಿಪೂಜ್ಯ ವಾಸುಪೂಜ್ಯಜಿನಮುನಿ ಪ್ರಸಾದಾಸಾದಿತ ನಿರ್ಮಳ ಧರ್ಮ ವಿನುತ ವಿನೇಯಜನವನಜವನವಿಳಸಿತ ಕವಿಕುಳತಿಳಕಪ್ರಣೂತ ಪಾರ್ಶ್ವನಾಥಪ್ರಣೀತಮಪ್ಪ ಪಾರ್ಶ್ವನಾಥಚರಿತಪುರಾಣದೊಳ್ ವಜ್ರನಾಭಿಚಕ್ರವರ್ತಿಯ ವನಕೇಳೀವರ್ಣನಂ ನವಮಾಶ್ವಾಸಂ

ದಶಮಾಶ್ವಾಸಂ

ಕಂ॥ ಶ್ರೀಲಲನಾಪತಿ ಕೃತಜಳ
ಕೇಳಿವಿಲಾಸಾವಭಾಸಿ ಶಿಬಿರಕ್ಕವನೀ
ಪಾಳಂ ನಡೆತಂದಂ ಸುಖ
ಲೋಲಂ ಕುಸುಮಾಸ್ತ್ರಮೂರ್ತಿ ಕವಿಕುಳತಿಲಕಂ ೧

ವ॥ ಅಂತು ಕುವಳಯವಿಳಸಿತವಿಳೋಕನಜಳಯಂತ್ರದಿಂ ಕಾಂತಿ ಮಳಯರುಹಜಳಮಮಂ ತಳಿಯುತ್ತುಮಪೂರ್ವ ಜಳಕೇಳಿಯ ಲೀಲೆಯಂ ಪಾಳಿಸುತ್ತುಂ ಸುತ್ತಲುಂ ಬರ್ಪಬಳಾ ಜನಂ ಬೆರಸು ನಿಜಶಿಬಿರಕ್ಕೆ ಬಿಜಯಂಗೆಯ್ದು ನೂತ್ನರತ್ನಂಗಳಿಂ ಸ್ಥಪತಿರತ್ನಂ ರಚಿಯಿಸಿದ ರಾಜಮಂದಿರಮಂ ರಾಜಾಧಿರಾಜಂ ಪುಗುವುದುಂ ನೀರಾಜನವಿಧಾನಕ್ಕಿಂಬಾಗೆ ಚೆಂಬೊನ್ನ ಪರಿಯಣಂಗಳೊಳ್ ಬೆಳಗಿದ ಮಂಗಳಮಣಿದೀಪಂಗಳ ಬೆಳಗು ನವಯುವತಿಯರ ಕರತಳದ ರಮಣೀಯ ಕೆಂಪಿನಿಂ ಪುದಿದು ಪರಿಕಲಿಸಿದುದೆಂಬಂತೆ ಸಂಜೆಗೆಂಪು ರಂಜಿಸಿತ್ತದಲ್ಲದೆಯುಂ

ಕಂ॥ ಪಗಲೆಂಬಂಬುಜಮುಖಿಯುಂ
ಗಗನಮಣಿಯುಮೆಳಸಿ ಸಲಿಲಕೇಳಿಗೆ ತಾಮುಂ
ಮಿಗೆ ಪೂಸಿದ ಕುಂಕುಮಮೆನೆ
ಸೊಗಯಿಸಿದತ್ತಾಗಳೊಗೆದ ಸಂಧ್ಯಾರಾಗಂ ೨

ವ॥ ಅಂತುಮಲ್ಲದೆಯುಂ

ಕಂ॥ ತಡೆಯದಿನನಪರಯುವತಿಯೊ
ಳೊಡಗೂಡಲ್ ಪೋಪ ತೆಱನನಱಿದರುಣಂ ಕೆಂ
ಪಿಡಿದಿರ್ದ ಕಾಂಡಪಟಮಂ
ಪಿಡಿದಿರ್ದವೊಲೆಸೆದುದಂದು ಸಂಧ್ಯಾರಾಗಂ ೩

ಉ॥ ಆಂ ಬಹುತಾಪಮಂ ಪಡೆದೆನೀ ಸಚರಾಚರಜೀವಸಂಕುಳ
ಕ್ಕಂಬ ವಿರಕ್ತಿಯಿಂ ತರಣಿ ಮುನ್ನಿನ ತೀಕ್ಷ್ಣತೆಯಂ ಬಿಸುಟ್ಟು ಲೀ
ಲಾಂಬುಜಲಕ್ಷ್ಮಿ ಪತ್ರಕರಮಂ ಮುಗಿಯುತ್ತಿರೆ ಮೀಱಿ ತಾಂ ಕಷಾ
ಯಾಂಬರಧಾರಿಯಾದನೆನೆ ಸಂಜೆಯನಾಂತಪರಾದ್ರಿಗೆಯ್ದಿದಂ ೪

ಕಂ॥ ಕೞಿಕುಳಮಸ್ತಾಚಳದಿಂ
ದಿೞಿವೆಡೆಗಳೊಳಾಗೆ ರವಿರಥಂ ಕೋಕಂಗಳ್

ಚಟಿಯೊಳೆ ರಥಾಂಗವೆಸರಂ
ಕಟಿಕುಳಮಾಗಿಯೆ ಜಲಕ್ಕನಱಿದುವಾಗಳ್ ೫

ಉ॥ ರೋಚಿಗಳಂ ದಿಶಾಂಬರಮಹೀತಳವರ್ತಿಗಳಂ ಖರಾಂಶು ಸಂ
ಕೋಚಿಸಿ ಪೋರ್ದೆ ಪಶ್ಚಿಮಪಯೋನಿಧಿಯಂ ಕಮಳಂಬೊಲಾತ್ಮಕಾಂ
ತಾಚಳಲಕ್ಷ್ಮಿ ಪಿಂಗೆ ಮದನಾಗ್ನಿಪರಾಗವಿಳಾಸಭಾಸಿ ಸಂ
ಕೋಚಿತಚಿತ್ತಮಂದತುಳಶೋಕಮನಾಂತುದು ಕೋಕಮಾವಗಂ ೬

ಕಂ॥ ಇನನಗಲಲೊಡನೆ ಮುಗಿವ
ಬ್ಜಿನಿಯೊಳಗೊಳಪೊಕ್ಕು ಮೊಱೆವುದಂ ಮಾಣ್ದಳಿ ಕಾ
ಮನ ಕಣೆಯಮೆರ್ದೆಯನುಱೆನ
ಟ್ಟಿನಿಸುಂ ದನಿಯುಡುಗಿದಂದಮಂ ನೆನೆಯಿಸುಗುಂ ೭

ಉ॥ ಏವಿರಿದಾದೊಡಂ ಸಿರಿಯದೇವುದಿನಂ ಪ್ರಿಯಕಾಂತೆಯೆಂಬಿದಂ
ಭಾವಿಸದೆನ್ನನೀಗಳನುರಾಗದೆ ಸಂಜೆಯೊಳಿರ್ದನೆಂಬ ತ
ನ್ನೇವದಿನಟ್ಟಿಪಳ್ ಪಿರಿದುಮಬ್ಜಿನಿಯೆಂಬವೊಲಸ್ತಕಾಲದೊ
ಳ್ಗಾವರಿಸುತ್ತುಮಿರ್ದುದಳಿಸಂಕುಳಮಂಬುರುಹಾನನಂಗಳೊಳ್ ೮

ಕಂ॥ ಇನನ ಬಟೆಸಲಲೆ ಸಲೆ ಜೀ
ವನಮಂ ಬಿಟ್ಟಿರ್ಪ ವನಜವಧು ನಿಜಪತಿ ನೆ
ಟ್ಟನೆ ಪೋಗೆ ಸಿರಿಯನುಟಿವುದು
ಮನುನಯಮಂ ವಿಧುಗೆ ಮಾಡದುದುಮಚ್ಚರಿಯೇ ೯

ಇನನನುರಾಗದೆ ಸಂಧ್ಯಾಂ
ಗನೆಯೊಳ್ ನೆರೆದಿರೆ ವಿಷಾದಮಂ ತಳೆವವೊಲ
ಬ್ಜಿನಿ ಮೊಗಸಿದಳಿಯನೊಳಕೊಂ
ಡೆನಸುಂ ಮುಗಿದುದು ದಿನಾವಸಾನದೊಳಾಗಳ್ ೧೦

ವ॥ ಅಂತು ಪಸರಿಸಿದ ಸಂಧ್ಯಾಸಮಯಮನವಂಧ್ಯಮಂ ಮಾಡಲೆಂದು

ಕಂ॥ ಅಯಜನಕಜಿನೇಂದ್ರಪದ
ದ್ವಯಕ್ಕೆ ಮಣಿಮಕುಟಕಿರಣನೀರಾಜನಮಂ
ಪ್ರಿಯದಿಂದೊಡರಿಸಿ ಸಂಧ್ಯಾ
ನಿಯಮಮನಾ ಚಕ್ರವರ್ತಿ ನಿರ್ವರ್ತಿಸಿದಂ ೧೧

ವ॥ ಅಂತು ಸಂಧ್ಯಾಸಮಯನಿಯಮಮಂ ವಜ್ರನಾಭಿ ವಜ್ರಾಯುಧನಂದದಿಂ ಜಿನೇಂದ್ರಚಂದ್ರ ಚರಣಾರವಿಂದಮಂ ದಿವ್ಯಾರ್ಚನಾದ್ರವ್ಯಂಗಳಿಂದರ್ಚಿಸಿ ನಿಜಪದಾಂಬುಜ ಸೇವಾಸಕ್ತ ಸಕಳ ಮಕುಟಬದ್ಧ ಮೌಳಿಕೀಲಿತ ಶೋಣ ಮಾಣಿಕ್ಯರಶ್ಮಿಕಾಶ್ಮೀರಾರುಣಿತಪಾವನಾ ಸ್ಥಾನಮಂಡಳ ನಭೋಮಂಡಳಮಂಡನಂ ಮಂತ್ರಿ ಕವಿ ಬುಧಸಮನ್ವಿತಂ ನವಯುವತಿನಯನ ಕುವಳಯಮನಲರ್ಚುತ್ತುಂ ನರೇಂದ್ರಚಂದ್ರಮಂ ಲೀಲೆವೆರಸೋಲಗಂಗೊಟ್ಟಿರ

ಚಂ॥ ಉದಯವಿಶಾಳಶೈಳದ ತಮಾಳವನಂ ನವನೀಳರತ್ನಜಾ
ಳದ ರುಚಿ ನೀರಜಾಕರದ ನೀರರುಹಂ ಮುಗಿದಿರ್ದೊಡಿಂದ್ರದಿ
ಙ್ಮದಗಜದಾನಸೌರಭಕೆ ಬಂದೆಜಿಗಿರ್ದ ಮದಾಳಿಯೆಂಬವೋ
ಲಿದು ಬಗೆಗುಣ್ಮೆ ಪರ್ವಿದುದು ಪೂರ್ವದಿಗಂತಮನಾವಗಂ ತಮಂ ೧೨

ವ॥ ಅಂತುಮಲ್ಲದೆ

ಕಂ॥ ದಿಗಧೀಶಕಾಂತೆಯರ್ ಮಿಂ
ದು ಗಡಾಗಳ್ ತಂದು ಕೇಶಸಂಸ್ಕಾರಕ್ಕಾ
ವಗಮಾಂತ ಧೂಪವರ್ತಿಯ
ಪೊಗೆ ನೆಗೆದತ್ತೆನಿಸಿ ದೆಸೆಯೊಳೆಸೆದತ್ತು ತಮಂ ೧೩

ಮ.ಸ್ರ॥ ಒದವಿರ್ದುನ್ಮಾರ್ಗವರ್ತಿತ್ವಮನಖಿಳಪದಾರ್ಥಂಗಳೊಳ್ ಸಂದ ಸಂದೇ
ಹದ ಕೊರ್ವಂ ಪರ್ವಿಸುತ್ತುಂ ಜನತತಿಗಕಳಂಕಾಗಮದ್ವೇಷಿ ಸೌಖ್ಯ
ಪ್ರದಸಮ್ಯಗ್ದರ್ಶನಶ್ರೀವಿಮಳಿನ ಗುಣಸಂರೋಧಕಂ ತೀವ್ರ ಮಿಥ್ಯಾ
ತ್ವದವೋಲ್ ಭೀಮಾಂಧಕಾರಂ ಭುವನಭವನಮಂ ತೀವಿತತ್ಯಂತಘೋರಂ ೧೪

ಕಂ॥ ವರ್ಣವ್ಯವಸ್ಥೆ ವಾಸ್ತವ
ನಿರ್ಣಯಮಕಳಂಕ ಸುಜನವರ್ತನಮಿನಿತುಂ
ದುರ್ಣಯ ನೃಪರಾಜ್ಯದೊಳವ
ಕರ್ಣಿತಮಪ್ಪಂತೆ ತಮದೊಳಾದತ್ತಾಗಳ್ ೧೫

ಶಾ॥ ದುರ್ವಾರಂ ವಿಪುಳಾಂಧಕಾರಮನಯಾಧಾರಂ ಮಹಾಘೋರಮಂ
ತುರ್ವಿವ್ಯೋಮದಿಶಾಂಬುಧಿಪ್ರಕರ ನಾನಾವಸ್ತುವಿಸ್ತಾರಮಂ
ಪರ್ವಿತ್ತರ್ವಿಸುತುರ್ವಿಕೊರ್ವಿ ಜಗಮಂ ಕೃಷ್ಣತ್ವದಿಂ ಕೂಡೆ ತಾಂ
ಸರ್ವಂ ಕೃಷ್ಣಮಯಂ ಜಗತ್ತೆನಿಪ ಮಾತೇಂ ತಥ್ಯಮಾಗಿರ್ದುದೋ. ೧೬

ಕಂ॥ ಮರಕತಮಣಿಕುಟ್ಟಿಮದೊಳ್
ಪರಪಿದ ಪೂವಲಿಯನಿಟ್ಟಿಸಿ ತೊಳಗಿದುದಸಿತಾಂ
ಬರ ವಿಪುಳಸ್ಥಳದೊಳ್ ಸುರು
ಚಿರ ತಾರಾನಿಕರಮಸಮರೋಚಿಃಪ್ರಕರಂ ೧೭

ಬಿತ್ತರದಿಂ ಬೆಳ್ದಿಂಗಳ
ಬಿತ್ತೆನೆ ತೊಳತೊಳಗಿ ತೊಳಪ ತಾರಗೆಯಿಂ ತಾ
ಳ್ದಿತ್ತದು ಮದನಂಗೆತ್ತಿದ
ಮುತ್ತಿನ ಮಂಡವಿಗೆಯೊಪ್ಪಮಂ ಗಗನತಳಂ ೧೮

ವ॥ ಅಂತು ಸ್ವೈರಿಣಿಯರ ಸ್ವೈರಾಚಾರಕ್ಕುಪಕಾರಿಯಾಗಿ ಕಾಮಾಂಧಕಾರದಂತೆ ವಿಸ್ತಾರಿಸಿದಂಧಕಾರದೊಳ್

ಚಂ॥ ಮಸುಳ್ದಿರೆ ಕಾಂತಿ ನೀಳಪಟದಿಂ ಮಸಿಗಪ್ಪಡದಿಂದೆ ರತ್ನಮಂ
ಮುಸುಕುವ ಭಂಗಿಯಿಂ ಮುಸುಕನಿಕ್ಕಿದೊಡಂ ನಱುಸುಯ್ಗೆ ಪಾಯ್ದು ಸೂ
ಚಿಸೆ ನಿಜಮಾರ್ಗಮಂ ಮುಡಿದ ಪೂಗಳನಾಯಳಿಗೊತ್ತುಗೊಳ್ಳದಿ
ತ್ತ್ರ ಸತಿಯರಬ್ಬುತುಂ ನಡೆದರಂತೆ ಸಶಂಕಿತರಲ್ತೆ ದೋಷಿಗಳ್ ೧೯

ವ॥ ಅಂತು ತಮಸ್ಸಮುದಯಂ ಸೂಚೀನಿರ್ಭೇದ್ಯಮುಂ ಸ್ವೈರಿಣೀಹೃದ್ಯಮುಮಾಗಿರೆ

ಶಾ॥ ದಿಕ್ಕಾಂತಾಧರಪಲ್ಲವಕ್ಕೆ ಬೞಿಕಾ ದಿಕ್ಕಾಮಿನೀಭಾಳಪ
ಟ್ಟಕ್ಕಂ ತಾಂ ಬೞಿಕಾ ದಿಶಾಂಗನೆಯ ಕಾಶ್ಮೀರಾಂಗರಾಗೋಜ್ವಳಾ
ಸ್ಯಕ್ಕೆಯ್ದೆ ಸಮಾನಮಾಗಿ ನಯನಕ್ಕಿಂಬಾಗಿ ಪೂರ್ವಾದ್ರಿಕೂ
ಟಕ್ಕೆತ್ತಿಂದನೊಡರ್ಚುತುಂ ಕುವಲಯಕ್ಕಾನಂದಮಂ ಚಂದ್ರಮಂ ೨೦

ವ॥ ಅಂತುಮಲ್ಲದೆ

ಚಂ॥ ಸ್ಮರಶಿಖಿಯಂ ವಿಯೋಗಿಹೃದಯಕ್ಕನುರಾಗಮನಾಗಳಾಗಳುಂ
ನೆರೆದೆಸೆದಿರ್ಪ ಕಾಮುಕಜನಾಶ್ರಯಕೊರ್ಮೊದಲೀಯಲೆಂದು ಬಿ
ತ್ತರಿಸಿರೆ ತಾಳ್ದುದೆಂದುದಯ ಶೋಣತೆ ಶೋಭೆಯನೀಯೆ ಪೂರ್ವದಿ
ಕ್ತರುಣಿಯ ಪದ್ಮರಾಗಮಣಿದರ್ಪಣದಂತೆಸೆದಂ ಸುಧಾಕರಂ ೨೧

ಕಂ॥ ಅಲರ್ವಿಲ್ಲನ ತೇಜೋಮಂ
ಡಲಮೆನೆ ಬಗೆಗೊಂಡು ಮಂಡಳಂ ವಿರಹಿಗಳೊಳ್
ತಲೆದೋಱುವ ಧೈರ್ಯಮನದ
ಟಲೆವಿನಮುದಯಿಸಿದನುತ್ಪಳೇಂದ್ರಂ ಚಂದ್ರಂ ೨೨

ಬಳೆದ ತಮಂ ಮಿತ್ರನ ಮಂ
ಡಳಮಂ ಬೆದಱಿಟ್ಟೆ ಮುಳಿದ ರಾಜನ ಕೋಪಾ
ನಳಮುಗುಟ್ಟೆ ತೋರಗಿಡಿಯೆನೆ
ತೊಳಗಿದುವರುಣಾಂಶುರುಚಿರತಾರಾನಿಕರಂ ೨೩

ವೃತ್ತಮುಮಖಿಳ ಕಳಾಸಂ
ಪತ್ತಿಯುಮತಿ ವಿಶದಮೆನಿಕುಮಾಶೆಯನುೞಿಂಚಂ
ದುತ್ತಮರ್ಗೆಂದಱಿಪುವವೊಲು
ದಾತ್ತಂ ವಿಧುವುರ್ಚಿದು ಬೞಿಕೆ ಧವಳತೆವೆತ್ತಂ ೨೪

ಮ.ಸ್ರ॥ ಚಲದಿಂದಂ ಸಾಂದ್ರಚಂದ್ರದ್ಯುತಿಗಳುಗಿವುತುಂ ಕೂರ್ವಿ ಪರ್ವಿರ್ದ ಬಲ್ಗ
ತ್ತಲೆಯಂ ಬೆನ್ಸಟ್ಟೆ ಮುನ್ನಂಬರಮನುೞಿದು ತೋರ್ಪಾಶೆಯೊಳ್ ನಿಲ್ಲದಲ್ಲಾ
ನೆಲನಂ ಬಿಟ್ಟೋಡಿ ಬೆಟ್ಟಂಗಳ ಗುಹೆಗಳನಾ ಕುಂಜದೇಶಂಗಳಂ ತಾಂ
ತಲೆದೋಱಲ್ಕಬ್ಬಿ ಪೊಕ್ಕುಂ ಮಿಸುಗಮ ಶಶಿಕಾಂತೇಭದಂತಾಂಶುವಿಂದಂ ೨೫

ಮ॥ ಅಮೃತಾಂಭೋನಿಧಿಯಂ ಶಶಾಂಕಘಟಸಂಭೂತಂ ಭರಂಗೆಯ್ದು ಪೀ
ರ್ದುಮದಂ ಮತ್ತುಗುಟ್ಟಿಂತೆ ಚಂದ್ರಮಣಿಧಾರಾಯಂತ್ರದಿಂ ವಾರಿಪೂ
ರಮನಾ ಚಂದನಸಾರಸಂಸ್ಕೃತಮನಾದಂ ಪೂರ್ವದಿಕ್ಕಾಂತೆ ದಿ
ಗ್ರಮಣೀಜಾಳದ ಮೇಲೆ ಸೂಸುವವೊಲಾ ಚಂದ್ರಾಂಶುವೇಂ ಸೂಸಿತೋ ೨೬

ಚಂ॥ ಕುವಳಯದಂದದಿಂ ಕುವಳಯಂ ಸಿರಿಯಂ ಕರಮೊಲ್ದು ತಾಳ್ದೆ ಕೈ
ರವದೆಸಳಂದದಿಂ ದೆಸೆ ವಿರಾಜಿಸೆ ರಾಜಿಪ ಲಕ್ಷ್ಮಿಗೆತ್ತಿ ತೋ
ಱುವ ಧವಳಾತಪತ್ರದವೊಲೊಪ್ಪೆ ನಭಂ ಪರಿಪೂರ್ಣಮಂ ಸುಧಾ
ರ್ಣವಮೆನೆ ಚಂದ್ರನಪ್ಪಿದವೊಲಿರ್ದುದು ಚಂದ್ರಿಕೆ ಸಾಂದ್ರಭಾವದಿಂ ೨೭

ಉ॥ ಅಂಗಜಭೂಭುಜಂಗೆ ವಸುರಾಶಿ ಸುಕೋಶಮತುಚ್ಛಮಚ್ಛವೆ
ಳ್ದಿಂಗಳೆ ನಾಡು ಮಂಡಳಮೆ ಕೋಟೆ ಕಳಾಳಿಯೆ ಸೈನಿಕಂ ಪ್ರಧಾ
ನಂ ಗಡ ತಾಂ ಪ್ರಸನ್ನತೆ ಸಹಾಯನೆನುತ್ತಿರೆ ತನ್ನ ಪೆಂಪು ಸ
ಪ್ತಾಂಗಸಮೃದ್ಧಿಯಂ ಪಡೆಯೆ ಕಣ್ಗೆಸೆದಂ ನಿಸದಂ ಸುಧಾಕರಂ ೨೮

ಮ.ಸ್ರ॥ ಮಸೆದು ಮನೋಜನಸ್ತ್ರಮನಲಂಪಿನೊಳೇಱಿಸಿ ಪುಷ್ಪಚಾಪಮಂ
ಪೊಸೆಯಿಸಿ ಶೌರ್ಯಮಂ ಮೆಱೆದು ಮೈಮೆಯನಾಗಿಸಿ ರಾಗಮಂ ನಿಮಿ
ರ್ಚಿಸಿ ಜಸಮಂ ಪೊರಳ್ಚಿ ವಿರಹಾರ್ತರನಂಗಜನಂ ಜನಕ್ಕೆ ತೋ
ಱಿ ಕರದಿಂದಮಿಂದುವೆಸೆದಂ ನಿಸದಂ ಕುಸುಮಾಯುಧಪ್ರಿಯಂ ೨೯

ಚಂ॥ ಸಮಧಿಕಕಾಮಕಾರ್ಮುಕಮನೇಱಿಸೆ ಪುಷ್ಪಶರಕ್ಕೆ ಕೂರ್ಪನಿ
ತ್ತಮೃತಕರಂ ಕರಪ್ರಕರದಿಂ ವಿರಹಾರ್ತರ ಮೂರ್ತಿಚಿತ್ತಲ
ಕ್ಷ್ಯಮನುಱೆ ತೋಱೆಮಿತ್ರತೆಗೆ ಪೂಗಣೆಯಂ ತಿರುವಾಯೊಳಿಟ್ಟುತೊ
ಟ್ಟಮರೆ ಮನೋಜನಾರ್ದಿಸುವ ತಾಣದೊಳಂ ನೆರಮಾದನೂರ್ಜಿತಂ ೩೦

ಉ॥ ಕಾಡೆ ಮನೋಭವಂ ವಿರಹಿಯಂ ಸಕಳೋರ್ವಿ ಸುಧಾಂಶುವಿಂದೆ ತೇಂ
ಕಾಡೆ ಚಕೋರಮುಂ ಯುವತಿಲೋಚನಕೈರವಮುಂ ಪ್ರಮೋದದಿಂ
ಕೂಡೆ ಶಶಾಂಕಕಾಂತಮಣಿಭಿತ್ತಿಗಳಂತೆ ದಿಶೋರು ಭಿತ್ತಿಗಳ್
ಕೂಡೆ ವಿರಾಜಿಸುತ್ತುಮಿರೆ ಕಣ್ಗೆಸೆದತ್ತಮೃತಾಂಶುಮಂಡಳಂ ೩೧

ಚಂ॥ ಇದು ವಿಧುಮಂಡಳಂ ಭಗಣಮಿಂತಿದು ಕಾಂತಿಯಿದೆಂಬ ಭೇದಮಾ
ದುದು ಮೊದಲೊಳ್ ಬೞಿಕ್ಕೆ ವಿಧು ತಾರಗೆ ಕಾಂತಿಯಿದೆಂಬ ಭೇದಮಿ
ಲ್ಲದೆ ಗುಣಿಗಂ ಗುಣಾಳಿಗಮಭೇದಮೆನಿಪ್ಪ ಮತಾನುಸಾರಿಯಾ
ದುದು ನೆಲೆವೆರ್ಚಿ ಸಾಂದ್ರತರ ಚಂದ್ರಿಕೆ ರುಂದ್ರನಭೋವಿಭಾಗದೊಳ್ ೩೨

ಕಂ॥ ಕುವಳಯಮಂ ರಾಜನ ಪೆಂ
ಡವಾಸಮೆಂದಱಿದು ಮಂಡಳಾಗ್ರದ್ಯುತಿಗೋ
ಡುವ ತಿಮಿರತತಿ ಶರಣ್ಬೊ ೩೩
ಕ್ಕವೊಲೊಪ್ಪಿದುವೆಳಸಿ ಬಳಸಿ ಮೊರೆವಳಿನಿವಹಂ

ಉದಯದೊಳೆ ರಾಗಿ ರಾಗಮ
ನೊದವಿಸುಗುಚಿತಂ ಬೞಿಕ್ಕಮತಿ ಧವಳತೆಗಾ
ಸ್ಪದಮೆನಿಸಿಯುಮೊದವಿಸಿದಪ
ನಿದು ಚಿತ್ರಂ ಧಾತ್ರಿಗೆಲ್ಲಮುತ್ಪಳಮಿತ್ರಂ ೩೪

ಆತನು ತಮಮಂ ನಿವಾರಿಸು
ತತನು ತಮಮನೀವುದತನುತಾಪಮನುಗಿಯು
ತ್ತತನುಪ್ರತಾಪಮಂ ಮ
ತ್ತತಿಶಯಿಪುದು ಚಿತ್ರಮಮೃತಕರನ ಚರಿತ್ರಂ ೩೫

ಸನ್ನುತಚಂದ್ರಿಕೆ ವಿರಹಿಗ
ಳಂ ನೋಯಿಸಿ ನನ್ನಿಮಾಡಿದುದು ಜಗದೊಳ್ ಕೈ
ಗನ್ನಡಿಯೆನಿಸಿದ ರಾಜಾ
ಸನ್ನಃ ಕೋ ನಾಮ ಸಾಧುವೆಂಬೀ ನುಡಿಯಂ ೩೬

ಮ॥ ಮಿಗೆ ಸಸ್ಯೋನ್ನತಿಯಂ ನಿಮಿರ್ಚಿ ಘನಕಾಲಂ ಕೂಡೆ ನೈರ್ಮಲ್ಯಮಂ
ಮುಗಿಲೊಳ್ ಪುಟ್ಟಿಪ ಪೆಂಪಿನಿಂದೆ ಸರದಂ ಶೀತಕ್ಕೆ ಪಕ್ಕಾಗಿ ಮಾ
ಗಿಗುರು ಶ್ರೀ ಶಿಶಿರಂ ಜನೋತ್ಸವಕರಶ್ರೀಯಿಂದೆ ಚೈತ್ರಂ ವಿಯೋ
ಗಿಗೆ ಸಂತಾಪಮನಿತ್ತು ಬೇಸಗೆಯೆನಿಕ್ಕುಂ ಚಾರುಚಂದ್ರಾತಪಂ ೩೭

ವ॥ ಅಂತಾತ್ಮೀಯಸಾಮ್ರಾಜ್ಯಶ್ರೀಯಂತೆ ಸಾರ್ವಭೌಮಮುಂ ಉದ್ದಾಮ ಸುದರ್ಶನಾಭಿರಾಮಮುಮಾದ ಕೌಮುದೀಮಹೋತ್ಸವದೊಳ್ ವಾರಾಂಗನಾಶೃಂಗಾರಜಲನಿಧಿ ನೆಲೆವೆರ್ಚೆ ಪೆರ್ಚಿದುತ್ಸವದಿನದನಾಳೋಕಿಸಲೆಂದೋಲಗಮಂ ಪರೆಯಲ್ವೇೞ್ದೊಂದೆ ಹರೆಯದ ತನ್ನ ಮನದನ್ನರಪ್ಪತಿಚತುರತ್ರಿಚತುರಜನಂಬೆರಸರಮನೆಯಂ ಪೊಱಮಟ್ಟು ಪುಷ್ಪಾಯುಧ ನಂದದಿಂ ಮೆಯ್ಗರೆದು ಚಕ್ರಾಯುಧಂ ರಾಜವೀಥಿಯೊಳಗನೆ ಬರೆವರೆ

ಚಂ॥ ವಿರಹಿಗೆ ತಾಪಮಂ ಪ್ರಿಯಜನಕ್ಕನುರಾಗಮನೀಯುತಾವಗಂ
ಮರುಗಮನಾಳ್ದ ಮಲ್ಲಿಗೆಯ ಸಂದಿರುವಂತಿಯೊಳೊಂದಿ ನಿಂದ ಪಾ
ದರಿಯಲರಚ್ಚಗಂಪನಱಿದೋಲಗಿಸಿತ್ತು ವಸಂತನಟ್ಟೆ ಮುಂ
ಪರಿಚಿತನಂತೆ ಬಂದು ಭುವನಪ್ರಭುಗಂದತಿ ಮಂದಮಾರುತಂ ೩೮

ವ॥ ಅಂತು ಪರಿಮಳಮಾಲಾಧಾರಿಣಿಯರಪ್ಪ ಮಾಲಾಧಾರಿಣಿಯರ ನಱುಸುಯ್ಯ ಕಂಪಿನಿಂ ಬೆರಸಿದ ಬೆರಕೆಗಂಪನುಪಾಯನಮನಿತ್ತು ಚಿತ್ತಮನೀೞ್ಕುಳಿಗೊಳುತ್ತುಂ ಬಂದ ಮಂದಾನಿಳದ ಪರಿಮಳದ ಪಜ್ಜೆವಿಡಿದು ಪೋಗಿ

ಕಂ॥ ಕಂತುನೃಪಾಯುಧಶಾಲೆ ವ
ಸಂತದ ಸಿರಿಯೇೞ್ಗೆ ಮಧುಪ ಮಧುಪಾನಗೃಹಂ
ಭ್ರಾಂತೆನಿಸುತಿರ್ಪ ಪೂವಿನ
ಸಂತೆಯನೀಕ್ಷಿಸಿದನೊಸೆದು ವಸುಧಾಧೀಶಂ ೩೯

ಕಂಡರಿಸಿದ ಕಪ್ಪುರದ ಕ
ರಂಡಗೆಯಂ ನಗುವ ಬಾಯ್ತೆಱಿಗೆ ನೃಪನಯನಂ
ಮಂಡನಮೆನಿಸಿರ್ದರಲ ಕ
ರಂಡಗೆಗಳಿಯೆಱಗೆ ಮಾಲೆಗಾರ್ತಿಯರೆಸೆದರ್ ೪೦

ಉ॥ ತೋಳೊ ಶಿರೀಷಮಾಳೆಯೊ ವಿಲೋಕನಕಾಂತಿಯೊ ಫುಲ್ಲಮಲ್ಲಿಕಾ
ಮಾಲೆಯೊ ಕುಂತಳೋತ್ಕರಮೊ ವಕ್ತ್ರಸರೋರುಹಗಂಧಮಗ್ನಮ
ತ್ತಾಳಿಯೊ ಪೇೞನುತ್ತುಮೊಸೆದೀಕ್ಷಿಪರಕ್ಷಿಯುಮಂ ಬೆಡಂಗಿನಿಂ
ಮಾಲೆಯುಮಂ ಕರಂ ತಳೆದು ರಂಜಿಸಿದರ್ ಪೊಸಮಾಲೆಗಾರ್ತಿಯರ್ ೪೧

ಚಂ॥ ಮಿಱುಗೆ ಮನೋಜಭೂಪತಿ ಮನೋಗೃಹಮಂ ಪುಗೆ ಯಾನನೇಂದುವ
ಟ್ಟಿಱಿಗೊಳೆ ಮೃಣಾಳನಾಳದೊಳೊಡಂಬಡೆ ದೀಪ್ತಿ ದುಕೂಲವಸ್ತ್ರಮಂ
ನಿಱಿಬಿಡಿದೊಪ್ಪೆ ಕಟ್ಟಿದವೊಲಳ್ಗುಡಿಯಂ ಪಿಡಿದಿರ್ದರೊರ್ಮೆಯುಂ
ತುಱುಗಿರೆ ತುಂಬಿ ಮಲ್ಲಿಗೆಯ ಮಾಲೆಯನಗ್ಗದ ಮಾಲೆಗಾರ್ತಿಯರ್ ೪೨

ಹೃದಯದೊಳಿರ್ಪನಂಗಪತಿಗೆಮ್ಮಯ ನಿರ್ಮಳಕೇಕರಾಸ್ತ್ರಪಾ
ತದೊಳೆ ಮಗುಳ್ದು ನೋೞ್ಪರೆರ್ದೆಗಳ್ ಮೃದುವಾದುವು ನೋಡಿ ಮುನ್ನ ಮೆ
ಚ್ಚಿದ ಕುಸುಮಾಸ್ತ್ರದಿಂದಿಸುವುದೆಂದವನೀವವೊಲೆತ್ತಿ ಪೂಗಳಂ
ಪದೆದು ಕಟಾಕ್ಷದಿಂ ನೃಪನನೀಕ್ಷಿಸಿದರ್ ಮಿಗೆ ಮಾಲೆಗಾರ್ತಿಯರ್ ೪೩

ವ॥ ಅಂತೊಪ್ಪಮನಪ್ಪುಕೆಯ್ದು ಪುಷ್ಪಲಾವೀನಿವಹಧವಳಕಟಾಕ್ಷ ಕುವಳಯ ಮಾಳೆಯಂ ಕುವಳಯಪತಿ ನಿಜನವಸೌಂದರ್ಯ ಸಂಪೂರ್ಣ ಸುವರ್ಣಸಂಪತ್ತಿಯಂ ಬೀಱು ಮಾಱುಗೊಳುತ್ತುಮೀ ಪ್ರಸೂನಂಗಳನೂನ ಸೌರಭಕ್ಕಂ ಸುಕುಮಾರತೆಗಂ ಸೈರಿಸದೆ ನಿಚ್ಚಂ ಮಚ್ಚರಿಸುವುವೆಂದು ಪಿಡಿಗಟ್ಟಿಂಗೊಳಗುವಮಾಡಿದುದೆಂಬಂತೆ ಪುಷ್ಪಲಾವೀಕದಂಬಂ ಪುಷ್ಪಮಾಲೆಗಳಂ ಪಿಡಿದಿರ್ದಪುದೆಂದುತ್ಪ್ರೇಕ್ಷಿಸುತ್ತುಂ ಚತುರರಂ ಚಾತುರ್ಯಚತುರ್ಮುಖಂ ಮೆಚ್ಚಿಸುತ್ತುಂ ಪೋಗಿ ಸೂಱೆಗೇರಿಗಳಂಕಾರಮಾಗೆ ಮಕರಧ್ವಜಂ ಮರಕತದ ಮಕರತೋರಣಮಂ ವಿರಚಿಸಿದಂತೆ ವಿಚಿತ್ರಪತ್ರಕಳಿಕಾಸಂಕುಳಂ ಮನಂಗೊಳಿಸುವ ಸಹಕಾರಭೂರುಹಂಗಳ ಕಂಭಂಗಳೊಳಿಂಬಾಗೆ ಕಟ್ಟಿ ದಿಟ್ಟಿಗಳವಟ್ಟಿರೆ

ಉ॥ ಏಱಿ ಪೊಗರ್ ಕದಂಪಿನೊಡನಂಗರಾಜನ ತೋಳ ಬಾಳ್ಗೆ ಕೂ
ರ್ಪೇಱಿ ಕಟಾಕ್ಷಬಾಣದೊಡನಂಗಭವಾಸ್ತ್ರಕುಳಕ್ಕೆ ಕಾಮನು
ರ್ಕೇಱಿ ಘನಸ್ತನಂಗಳೊಡನುತ್ಸವದಿಂ ಪೊರೆಯೇಱಿ ರೂಪು ಕ
ಣ್ಗೇಱಿ ವಿಳಾಸದಿಂದೆ ತಳಿರುಯ್ಯಲನೇಱಿಬ ನೀಱಿಯೊಪ್ಪಿದಳ್ ೪೪

ವ॥ ಈಕೆಯನಾಳೋಕಿಸಲೊಡಮೀಂಯಾಂದೋಳದಂತಾರ ಮನಮುಂ ಡೋಳಾಯಮಾನ ಮಾಗದಿರದೆನುತ್ತವಳ ಮೇಲೆ ನಟ್ಟ ದಿಟ್ಟಿಯನಂತಾನುಂ ತೆಗೆದು ಪೋಗೆವೋಗೆ ಮುಂದೊಂದಿಂದುಕಾಂತದ ಕಾಂತವಾದ ಕುಡುಪಾಟವಲ್ಲದೆ ಮತ್ತೊಂದಲ್ಲವೆಂದು ಸೌಂದರ್ಯಮಂ ಸೌಂದರ್ಯ ಸಂಕ್ರಂದನಂ ಪೊಗೞುತ್ತುಂ ನಡೆಯ ನಡೆಯೆ ಮುಂದೊಂದೆಡೆಯೊಳ್

ಮ.ಸ್ರ॥ ಅಲರ್ಗಣ್ಣಳ್ ಬೀಱಿ ಪೂಮಾಲೆಗಳನೆ ಬೆಳಗಂ ಬೀಱಿ ದಂತಚ್ಛದಂ ಪಾ
ಟಳವರ್ಣಂ ಬೀಱಿ ಕಾಶ್ಮೀರಮನನುನಯದಿಂ ಬೀಱಿ ತಾನುಂ ಲತಾಕೋ
ಮಳೆ ಕಾಂತಾಸಂಕುಳಕ್ಕಾ ಕುಸುಮಘುಸೃಣಮಂ ಬೀಱಿ ತನ್ನಂದದಿಂದಂ
ಸಲೆ ಚೆಲ್ವಂ ಬೀಱುತಿರ್ಪುಯ್ಯಲನತಿಮುದದಿಂದೇಱಿದಳ್ ನೀಱೆಯೊರ್ವಳ್ ೪೫

ಉ॥ ಚಾರುವಿಳಾಸಮೀಕ್ಷಿಸುವರೀಕ್ಷಣಮಂ ಸೆಱೆಗೆಯ್ಯೆ ಪೀನವ
ಕ್ಷೋರುಹಪಾತದಿಂದಮೊಲೆದಾಡುವ ನಾಯಕರತ್ನರಂಜಿತಂ
ಹಾರಮನಂಗನುಯ್ಯಲವೊಲೊಪ್ಪಿರೆ ತಾನೊಸೆದಾಡಿದಂದದಿಂ
ಮಾರನುಮಾಡುತಿರ್ಪುದನೆ ತೋರ್ಪವೊಲಾಡಿದಳೊರ್ವಳುಯ್ಯಲಂ ೪೬

ವ॥ ಅಂತುಮಲ್ಲದೆ

ಚಂ॥ ಲಲಿತಪಯೋಧರೋನ್ನತಿಗೆ ನರ್ತಿಸುವಂತೆವೊಲಾಗಳೇಱು
ಯ್ಯಲೆ ನಮಿಲುಯ್ಯಲೆಂದೆನಿಸೆ ಸೋರ್ಮುಡಿ ಸೋಗೆವೊಲಾಡೆ ಕಾಮನೆ
ಚ್ಚಲರ್ಗಣೆಯಂತೆ ಕೇಳ್ವರೆರ್ದೆಯಂ ಕಳನಾದಮೆ ತಾಗೆ ರಾಗಮ
ಗ್ಗಲಿಸೆ ವಸಂತರಾಗದೊಳೆ ಪಾಡುತುಮಾಡಿದಳೊರ್ವಳುಯ್ಯಲಂ ೪೭

ಉ॥ ಇಂಚರಮೀಂಟಿಪಂತಮೃತಮಂ ಕಿವಿಯಿಂ ಸವಿಯಪ್ಪ ನುಣ್ಪಿನಿಂ
ದಂಚೆಯ ತುಪ್ಪುಳಂ ತಿರಿಪಿದಂತೆವೊಲಾ ತಿರಿಪೆಯ್ದೆ ಮೆಲ್ಪನಾ
ಳ್ದಂ ಚಿರಮಲ್ಲದೊಪ್ಪೆ ವಳಿ ನಲ್ಲಳ ಮೆಯ್ವಳಿಯಂತೆ ರಾಗಮಂ
ಸಂಚಿಸೆ ನಾಯಿಕಾಮಧುರಗೇಯಮದೇಂ ಮನಮಂ ಮರುಳ್ಚಿತೋ ೪೮

ವ॥ ಅದಂ ಕೇಳ್ದೀ ಕುಸುಮಸುಕುಮಾರಿಯ ಸರಸಗೇಯಮಲರಂಬಿನ ತನಿಗಂಪಿನಂತೆ ಮನಮನುರಾಗದಿಂ ಪೊರೆದಪುದೆಂದು ಭರತಕಳಾಪರಿಣತರಂ ನಿರವಿಸುತ್ತುಂ ನಡೆಯೆ ಮುಂದೊಂದು ಸಮುತ್ತುಂಗಮತ್ತವಾರಣದೊಳ್

ಉ॥ ಆರಮನಕ್ಕಮೀಕ್ಷಿಪೊಡೆ ಮೂರ್ಛೆಯನರ್ಪಿಸುತಿರ್ಪ ಕಾಮಕಾ
ಳೋರಗವಕ್ತ್ರದುಣ್ಮುವ ವಿಷಂಬೊಲಳುಂಬಮೆನಿಪ್ಪ ಕೇಶಸಂ
ಸ್ಕಾರದ ಧೂಪವರ್ತಿಗಳ ಧೂಮಲತಾವಳಿ ಸುತ್ತೆ ಮನ್ಮಥಾ
ಕಾರರ ಮುಂದುಗಾಣದಿರೆ ಮೋಹಿಸಿದರ್ ಮಿಗೆ ವಾರನಾರಿಯರ್ ೪೯

ವ॥ ಆ ಲತಾಕೋಮಳೆಯರೊಳಗೆ

ಚಂ॥ ವಿಳಸಿತಚಂದ್ರಮಂಡಳಮನೊಪ್ಪಿರೆ ರೋಹಿಣಿಯಪ್ಪಿದಂತೆ ನಿ
ರ್ಮಳಮುಖಚಂದ್ರದೊಳ್ ತೊಳಗೆ ಮುತ್ತಿನ ಮೂಗುತಿ ಲೋಳಲೋಚನೋ
ತ್ಪಳರುಚಿ ವಿಭ್ರಮದ್ಭ್ರಮರಸಂಕುಳಮಂ ತೆಗೆವುತ್ತುಮೊಪ್ಪೆ ಕೋ
ಮಳೆ ಮದನಾಜ್ಞೆ ಮೂರ್ತಿವಡೆದಿರ್ದವೊಲೊತ್ತೆಗೆ ನಿಂದಳೊಪ್ಪಿದಳ್ ೫೦

ವ॥ ವೃತ್ತಸ್ತನಿ ಮತ್ತೊರ್ವಳ್

ಉ॥ ಪಂಕಜನೇತ್ರೆ ಹಂಸಗಮನಾನ್ವಿತೆ ನಿರ್ಮಳೆ ಚಂಚರೀಕನೀ
ಳಾಂಕಿತಕೇಶಪಾಶೆ ಕಮನೀಯಪಯೋಧರೆ ನುಣ್ಬುವೆತ್ತ ಸ
ತ್ಕುಂಕುಮದಣ್ಪಿನಿಂದೆಳವಿಸಿಲ್ ಮುಸುಕಿರ್ದ ಸರೋವಿಳಾಸಮಂ
ಮಾಂಕರಿಪಾಕೆ ಪೇೞ್ ಭ್ರಮರಜಾಳಮನೇಟಿಸೆ ಪೋಗಲೀಗುಮೆ ೫೧

ಸಂಗತಮಧ್ಯಲಕ್ಷ್ಮಿ ಮದನಾಧಿಪದಿಗ್ವಿಜಯಕ್ಕೆ ಹರ್ಷದಿಂ
ಪೊಂಗಳಸಂಗಳಂ ರುಚಿರಪಲ್ಲವದರ್ಪಣಶೋಭಿತಂಗಳಂ
ಪಿಂಗದೆ ಪೊತ್ತವೋಲ್ ಕುಚಯುಗಂ ಲಲಿತಾಧರಗಂಡಮಂಡಳಾ
ಲಿಂಗಿತಮೊಪ್ಪಿದತ್ತೆನುತೆ ನೋಡಿದನೊರ್ವಳನುರ್ವರೇಶ್ವರಂ ೫೨

ವ॥ ಮತ್ತೊರ್ವಳ್ ಚಿತ್ತಪ್ರಿಯನಿನಿಸು ಪೊೞ್ತಿಂ ತಡೆಯೆ ಮನಮಂ ಸೈರಿಸಲಾಱದೆ ರೂಪಕಂದರ್ಪನ ಬರ್ಪ ಬಟ್ಟೆಯತ್ತಲೆ ದತ್ತ ದೃಷ್ಟಿಯಾಗಿ

ಉ॥ ಬಂಬಳಬಾಡಿ ಮುಂಬಗಲನೆಯ್ದಿದ ನೆಯ್ದಿಲವೋಲ್ ಕುರುಳ್ಗಳಾ
ತುಂಬಿಯ ಮಾೞ್ಕೆಯಿಂ ಪರೆಯೆ ದೂರಿಸಿ ತನ್ನನೆ ಕಣ್ಣ ನೀರ ಫ
ರ್ಮಾಂಬುವ ಕಾೞ್ಬುರಂಗಳೊಳೆ ತೇಂಕುವ ಕಾಂತೆಯನೆಯ್ದುವಂದು ಚಂ
ದ್ರಂಬೊಲಲರ್ಚಿದಂ ಕರದಿನಪ್ಪಿ ಕಳಾನಿಳಯಂ ಮನಃಪ್ರಿಯಂ ೫೩

ವ॥ ಮತ್ತೊರ್ವಳೆಂತೆಂತು ಕಂತುಪ್ರತಾಪದಂತೆ ಚಂದ್ರಾತಪಂ ಪಸರಿಸುಗುಮಂತಂತಂತರಂಗಮಂ ಸಂತಯ್ಸಲಾಱದಿಂತೆಂದಳ್

ಚಂ॥ ಎನಗೆ ಮನಃಪ್ರಿಯಂ ಮುನಿದುಪೋದನಿವಂ ಸನೆಗೋಲ ಕೋೞ್ಗದೆ
ನ್ನನೆ ಗುಜಿಮಾಡಿದಂ ಮನಸಿಜಂ ಪತಿಯಂ ಗುಜಿಮಾಡನಕ್ಕ ಮ
ನ್ಮನದೊಳಹರ್ನಿಶಂ ನೆಲಸಿ ನಿಂದೊಡನಾಡಿಗಳಾದ ದೂಸಱಿಂ
ದಿನಿಯನದರ್ಕೆ ಚಾರಸವನಂ ಬರಿಸಲ್ಲದೊಡಿಲ್ಲ ಜೀವನಂ ೫೪

ವ॥ ಮತ್ತೊರ್ವಳುರ್ವಿದ ಬೆಳ್ದಿಂಗಳನಂಗಜನೆಂಬ ಬೇಂಟೆಕಾಱಿಂ ತಗುಳ್ಚಿದ ಕಾೞ್ಗಿರ್ಚಿಗೆತ್ತು ಮೃಗನಯನೆ ಭಯಂಗೊಂಡು

ಚಂ॥ ಇನನುಱಿದಂದು ರಾತ್ರಿಗಿನನಾಗಿಯೆ ನಿಂದವನಲ್ಲನಿಂದು ಕೇ
ಳೆನಗಮಿನಂ ದಲಾಗಿ ಸಖಿ ಸಾಧಿಸಿ ಕಾಯ್ದುಪನೇವೆನೆಂದು ಕಾ
ಮಿನಿ ಬಿಸುಸುಯ್ದು ಹಾಸಿದ ತಳಿರ್ನನೆಗಳ್ ತನುತಾಪದಿಂದೆ ಕ
ಣ್ಣಿನಿಗಳಿನಾವಗಂ ನೆಗಪಿದಂತಿರೆ ತಾಪಮನೋಪಳೆಯ್ದಿದಳ್ ೫೫

ವ॥ ಮತ್ತೊರ್ವಳಿಂದುಮುಖಿ ಪೂರ್ಣೇಂದುವಂ ನೋಡಿ

ಕಂ॥ ಅಗಲೆ ಮದೀಶ್ವರನೆರ್ದೆವ
ತ್ತುಗೆಮಾಡಿರಿಸಿದ ಮನೋಜನುಗಿಬಗಿ ಮಾೞ್ಕುಂ
ಬಗೆಯನೆನೆ ಮಾಡದಿರ್ಕುಮೆ
ಮೊಗದೊಳ್ ಮಚ್ಚರಿಪ ಚಂದ್ರನೆಂದಳವಟಿದಳ್ ೫೬

ವ॥ ಮತ್ತೊರ್ವಳ್ ಕುಂಟಣಿಯ ನಿವಹಕ್ಕೆ ಕಿನಿಸಿ ಗೆಂಟಾದ ಕಾದಲನಂ ನೆನೆದು

ಕಂ॥ ಇನಿಯನೊಡಗೂಡದೆನ್ನಂ
ಮುನಿದಿಸುವಂಗಜನುಮಲೆವ ತೆಂಬೆಲರುಂ ಕೇ
ಳೆನಗೆ ಪಗೆಯಲ್ಲಗಲ್ಚಿದ
ಜನನಿಯೆ ಪಗೆಯೆಂದು ನೊಂದು ಕೆಳದಿಗೆ ನುಡಿದಳ್ ೫೭

ವ॥ ಮತ್ತೊರ್ವಳ್ ತನ್ನ ಕನ್ನೆವೇಟದ ಕಾಂತಂ ಗ್ರಾಮಾಂತರಕ್ಕೆ ಪೋಗಿ ತಡೆಯೆ

ಕಂ॥ ಸ್ತನದ ಕಠಿನತೆಯ ನೆವದಿಂ
ಮನದೊಳ್ ನೆಲಸಿರ್ದ ಕಠಿನಭಾವಂ ಪೋದ
ತ್ತೆನೆ ಮೆಲ್ಪುವಡೆದು ಸೆಡೆದುದು
ವನಿತೆಯ ಮನಮರಲಸರಲ ಹತಿಗತನುವಿನಾ ೫೮

ವ॥ ಅಂತು ಕಂತುಶರಜಾಳಮುದರಂಬುಗೆ ಬೆಗಡುಗೊಂಡು ಗಂಡುನೊಟಿದ ಸೋಂಕುಮಂ ಸೈರಿಸದೆ

ಕಂ॥ ಇನಿಯವನಿಲ್ಲದೊಡೂರ್ ಕಾ
ನನಮೆನಗದಱಿಂದಮೆನ್ನ ಜವ್ವನದೊದವಂ
ಗನೆ ಮೊಲದ ಜವ್ವನಂ ಗಿಡು
ವಿನೊಳಟ್ಟಾಡುವವೊಲಕ್ಕುಮೆಂದುಱಿ ಸುಯ್ದಳ್ ೫೯

ವ॥ ಮತ್ತೊರ್ವಳ್ ತನಗೆ ಶಿಶಿರೋಪಚಾರಮಂ ಮಾಡಲೆಂದು ಚಂದನಮಂ ತಂದಕೆಳದಿಗಿಂತೆಂದಳ್

ಕಂ॥ ಅಮೃತಕರಂ ಮೃತಿಯಂ ಕೌ
ಸುಮಹಾರಂ ದುಃಖಮಂ ನಿಜಾಂಗಭವಂ ತಾ
ಪಮನಕ್ಕ ಮಾೞ್ಕುಮೆನೆ ತಾ
ಪಮನೀಯದೆ ಪೇೞು ಚಂದನಂ ವಿಷಜನಿತಂ ೬೦

ವ॥ ಮತ್ತೊರ್ವಳ್ ತನ್ನನಹರ್ನಿಶಮಿಸುವ ಕುಸುಮಶರನ ವಿದ್ಯೆ ಚೋದ್ಯಾವಹಮೆಂದಿಂತೆಂದಳ್

ಕಂ॥ ಪೂವಿಲ್ಲದೆಯುಂ ಪಲಸು ಫ
ಳಾವಳಿಯಂ ತಳೆವ ತೆಱದೆ ಪುಣ್ಣಿಲ್ಲದೆಯುಂ
ಪೂವಿಲ್ಲನ ಶರಹತಿಯಿಂ
ನೋವನೆ ತಳೆದಪುದಿದೆನ್ನ ಹೃದಯಂ ಕೆಳದೀ ೬೧

ವ॥ ಮತ್ತೊರ್ವಳ್ ವಿರಹಾನಳದಗ್ಧೆಯಪ್ಪತಿವಿದಗ್ಧೆ ಸಂಸರ್ಗಜಾ ದೋಷಗುಣಾ ಭವಂತಿಯೆಂಬ ನುಡಿಯೆನ್ನೊಳೆ ತಪ್ಪದಾದುದೆಂದು ನೊಂದು ನಿಜಸಖಿಗಿಂತೆಂದಳ್

ಕಂ॥ ವಿಷಸಂಗಮದಿಂ ಪಾಲುಂ
ವಿಷಮಪ್ಪವೊಲೆಯ್ದೆ ವಿಷಮಬಾಣನ ಕೆಳೆಯಿಂ
ವಿಷಮಕರನಾಗಿ ನಿಂದನೆ
ವಿಷಯುತಕರನಾಗಿ ಕೊಲ್ಗುಮೀಯಮೃತಕರಂ ೬೨

ವ॥ ಅಂತು ನೆಗಟ್ವೆ ವಿರಹಾಕ್ರಾಂತೆಯರಪ್ಪ ಕಾಂತೆಯರ ಕರುಣಾರಸದು ಚಿತವಚನಂಗಳಂ ಕೇಳ್ದು ದುಃಖಿತೇ ಮನಸಿ ಸರ್ವಮಸಹ್ಯಮೆಂಬ ನುಡಿಯಿವಳ್ದಿರೊಳ್ ಪೊದಟ್ಟುದೆಂದೋರೋರ್ವರೊಳ್ ನುಡಿಯುತ್ತುಂ ಪೋಗೆವೋಗೆ ಮುಂದೊಂದೆಡೆಯೊಳ್ ಸೂಱೆಕೆಳೆಯರೆಲ್ಲಂ ನೆರೆದಿರ್ದಲ್ಲಿಯೊರ್ವನಿಂತೆಂದಂ

ಉ॥ ಆಳ್ಗುಣಿ ಭೋಗಿ ಚಾಗಿ ಚತುರಂ ಸುಭಗಂ ಮೃದುಚಿತ್ತನುತ್ತಮಂ
ತೋಳ್ಗೆಸೆವಂ ಗಭೀರನವರಿಚ್ಚೆಯ ಮಚ್ಚುವ ರೂಪುಗೊಂಡವೋ
ಲೇಱ್ಗೆ ಸೊಗಕ್ಕೆ ಪೆರ್ಚು ಹರಿಸಕ್ಕೊದವೊಲ್ಮೆಗೆ ಕೂಡೆ ಕೂಡಿ ತ
ನ್ನೊಳ್ಗಣಿಕಾಳಿಯಂ ನಿಲಿಪನಲ್ಲದೆ ಸೂಱೆಗೆಯಲ್ಕೆ ಬಲ್ಲನೇ ೬೩

ವ॥ ಮತ್ತೊರ್ವ ವಚನರಚನಾಚತುರನಿಂತೆಂದಂ

ಚಂ॥ ಒಲಿಸುವ ಗಾಡಿ ಪಂಬಲಿಸುವಿಂಬಿನ ಚುಂಬನಮರ್ಥಿತಾರ್ಥಮಂ
ಸಲಿಸುವ ಚಾಗಮಗ್ಗಲಿಪ ಭೋಗಮೊಡಂಬಡೆ ಕೂಡೆ ಪೆರ್ಮೆಯಿಂ
ನಿಲಿಸುವ ಪೆಂಪು ಗೊಟ್ಟಿಗಳವಟ್ಟಿರೆಯೋದುವ ಪಾಡುವೋಜೆಯಂ
ಕಲಿಸುವ ಬಲ್ಮೆಯುಳ್ಳ ವಿಟನಂಗನೆಗಂಗಜನಸ್ತ್ರಮಲ್ಲನೇ ೬೪

ವ॥ ಮತ್ತೊರ್ವ ವಾತ್ಸ್ಯಾಯನತಾತ್ಪರ್ಯವಿಚಕ್ಷಣನಿಂತೆಂದಂ

ಉ॥ ಲೋಳಕಟಾಕ್ಷತೀಕ್ಷ್ಣಕರದಿಂ ತೆಗೆದಿಚ್ಚೆಗೆ ಸಲ್ವ ಮೇಳದಿಂ
ಮೇಳಿಸಿ ಕೇಳಿಯಿಂ ಪರಿಚಯಂಬಳೆದಂದೊಳಗಾದ ನಲ್ಲನಂ
ತೋಳ ತೊಡರ್ಪಿನಿಂ ಪಿಡಿದು ಚುಂಬನದಿಂದೆ ಮರಳ್ಚಿ ಸೌಖ್ಯಮಂ
ಪಾಳಿಪ ಕೂಟದಿಂಧೊಲಿಸುವಾಕೆಯ ಕಾಮನ ಲೀಲೆಗಾಲಯಂ ೬೫

ವ॥ ಮತ್ತೊರ್ವ ಕಾಮಕಳಾಕಳಾಪಕುಶಳನಿಂತೆಂದಂ

ಉ॥ ರೂಪು ಮನೋಹರಂ ಹರೆಯವೀಕ್ಷಣಸೌಖ್ಯಕರಂ ಕಳಾಕಳಾ
ಪೋಪಚಯಂ ಪ್ರಗಲ್ಭಜನಮೋಹನಸಂಜನಕಂ ಸ್ವಭಾವವಿ
ಚ್ಛಾಪರಿಪಾಳಕಂ ರಸಿಕಸಂತತಿಗೆಂಬ ಸಿತಾಂಬುಜಾಕ್ಷಿಯು
ದ್ದೀಪನಭಾವನಾಯಕಿಯೆ ನಾಯಕಿಯಲ್ತೆ ಮನೋಜರಾಜನಾ ೬೬

ವ॥ ಮತ್ತೊರ್ವ ಸಂಭೋಗಸಂಭೂತಸುಖಸಾರ ಸರ್ವಸ್ವಸ್ವೀಕಾರಲೋಲುಪನಿಂತೆಂದಂ

ಉ॥ ಚುಂಬನದಿಂಬು ಚುಂಬನದ ವಾಂಛೆಯನಪ್ಪಿನೊಳಪ್ಪ ಸೌಖ್ಯಮಂ
ದುಂ ಬಿಡದಪ್ಪುತಿರ್ಪುದನೊಡಂಬಡೆ ಕೂಡುವ ಬಲ್ಮೆ ಕೂಟಮಂ

ಪಂಬಲಿಸುತ್ತುಮಿರ್ಪುದನೆ ಮಾಳ್ಪುದೆನಿಪ್ಪ ಕಳಾಪ್ರಗಲ್ಭೆಯಂ
ಚುಂಬಿಸುವಪ್ಪುವೊಲ್ದೆರೆದು ಕೂಡುವ ನಲ್ಲನೆ ಧನ್ಯನಲ್ಲವೇ ೬೭

ವ॥ ಮತ್ತೊರ್ವನೊಲ್ದೊಲಿಸಬಲ್ಲ ಬಸನದ ಲವಲವಿಕೆ ಕುಸಿಯದ ಬಸನಿಯಿಂತೆಂದಂ

ಚಂ॥ ಘನಜಘನಂ ಘನಸ್ತನಯುಗಂ ಘನವೇಣಿ ಮನಕ್ಕೆ ರಾಗಮಂ
ಜನಿಯಿಸುವಂದದಿಂ ಕುಸುಮಕೋಮಳೆಗಾದೊಡಮಿಂಪನೀವ ನ
ಲ್ಲನ ರತಿಕೇಳಿಭಾರಮೆನಿತುಂ ಘನಮಾದುದನಿತ್ತೆ ರಾಗಮಂ
ಜನಿಯಿಕುಮಂತೆ ಬೇಟಮಿರೆ ಕೂಟದೊಳಿಂ ತಣಿವರ್ಗೆ ಸಾರ್ಗುಮೇ ೬೮

ವ॥ ಮತ್ತೊರ್ವಳ ಗರ್ವದುರ್ವು ಮನಕ್ಕುಬ್ಬೆಗಮಂ ಕೊರ್ವಿಸೆ ಮುಳಿದು ಬಂದಿಂತೆಂದಂ

ಚಂ॥ ಬಗೆಯದ ಬಾೞ್ತೆಗೆಯ್ಯದೊಲವಂ ಪ್ರತಿಪಾಳಿಸದಾಳಿದೋರ್ಪ ಬ
ಲ್ಮೆಗೆ ಬೆಸೆದಿರ್ಪ ಭಾವಮಱೆದಪ್ಪದ ಕಣ್ಗೆನಿಸೊಪ್ಪದಿೞ್ಪೆಗ
ೞ್ತೆಗಮನೆ ಮಾೞ್ಪ ಬೇೞ್ಪುದನೆ ಪೋಗೆನಿತಿತ್ತೊಡಮಿತ್ತನೆಂಬ ಮ
ೞ್ಚುಗೆ ತನಗಿಲ್ಲದಂಗನೆಗೆ ಕೂರ್ತವನಗ್ಗದ ಕೞ್ತೆಯಲ್ಲವೇ ೬೯

ವ॥ ಮತ್ತೊರ್ವನೆಲ್ಲಾ ತೆಱದಿಂ ತನ್ನ ಮನವಱೆದು ನಡೆವ ವನಿತೆಯಂ ನೆನೆದಿಂತೆಂದಂ

ಉ॥ ದಿಟ್ಟಿಯನಾಣೆಯಿಟ್ಟ ತೆಱದಿಂ ತೆಗೆವಾ ಕೃತಿ ಪಾಡುವೊಂದುವೀ
ಗೊಟ್ಟಿಗೆ ಸಲ್ವ ಬಲ್ಮೆ ಪಣಮುಳ್ಳವನಿಂ ಗುಣಮುಳ್ಳ ನಲ್ಲನಂ
ಕೊಟ್ಟುದೆ ಕೋಟಿಯೆಂದಱೆದು ಮನ್ನಿಪ ಮೈಮೆ ನಿಮಿರ್ಕೆ ಕೂಟದೊಳ್
ಪುಟ್ಟುವ ಸೋಂಕುಮುಳ್ಳವಳೆ ಕಾಮವಶೀಕರಣಾಸ್ತ್ರಮಲ್ಲಳೇ ೭೦

ವ॥ ಎಂದಿಂತು ತಂತಮ್ಮ ಬಗೆಗೆವಂದ ಭಂಗಿಯಿಂದಂ ನುಡಿವುದುಮದಂ ವಿದೂಷಕಂ ಕೇಳ್ದಿವಂದಿರ ವಚನಮುಂ ಭಿನ್ನರುಚಿಯಾದೊಡಂ ರಸಾವಹಮಾದುದೆನುತ್ತರಸನಂ ಮೆಚ್ಚಿಸುತ್ತುಂ ಪೋಗೆ ವೃದ್ಧವಿಟಿಯೊರ್ವಳ್ ತನ್ನ ಮೊಗದ ತೆರೆಯುಮಂ ಕಂಡಪರೆಂದಡಿಗಡಿಗೆ ಮೊಗಕ್ಕೆ ಸೀರೆಯಂ ತೆಗೆವುದಂ ಕಂಡು ಅಯಂ ಪಟಃ ಸಂವೃತಯೇವ ಶೋಭತೇಯೆಂಬ ನೀತಿಯಿಂ ಸಂವರಿಸುವ ಮುಸುಕಿನಿಂ ಮುಪ್ಪನೊಪ್ಪಮಂ ಮಾಡಿಕೊಂಡಿರ್ದಪ್ಪಳೆಂದಱೆದವಳ ಕೆಲಕ್ಕೆ ಪೋಗಿ

ಮ॥ ಇದು ಚಿತ್ರಂ ಮೃದುಪಾದಪಲ್ಲವದ ಮೆಲ್ಪುಂ ನೋೞ್ಪೊಡೀ ಕೇಶಪಾ
ಶದ ನೀಳ್ಪುಂ ಮೊಲೆಯಲ್ಲಿ ಲೋಚನದ ಬೆಳ್ಪುಂ ಮಧ್ಯದಲ್ಪತ್ವಮ
ಪ್ಪುದುಮಿಂತೀ ಮುಡಿಯಲ್ಲಿ ಮಾನಿನಿ ಕರಂ ಲಾವಣ್ಯವಾರಾಶಿ ಬ
ತ್ತಿದೊಡೇಂ ಪೇೞ್ ತೆರೆ ಕಾಣಲಾದಪುದಿದೇಂ ನಿನ್ನೊಂದು ಸಾಮರ್ಥ್ಯಮೋ ೭೧

ವ॥ ಎಂದವಳಂ ಮುಗುಳ್ಚಿತ್ತೆಗೆ ಪೊಱಮಡದಂತು ಕೂಂಟಿಮಾಡಿ ಜಗತೀಪತಿಯ ಮೊಗಕ್ಕೆ ಮುಗುಳ್ನಗೆಯನೋಲಗಿಸುತ್ತುಂ ಪೋಗೆ ಮುಂದೊಂದಿಂದುಕಾಂತ ರಮ್ಯಹರ್ಮ್ಯವಿಳಾಸನಿವಾಸನಿಳಯದೊಳ್

ಉ॥ ಈ ರತಿಗಾಸಾಗರೆಯೆನಿಪ್ಪ ಲತಾಂಗಿಯೊಳಸ್ವರಾಗಮಂ
ಸೈರಿಸನೆಂಬವೋಲಧರಪಲ್ಲವರಾಗಮುಮಂ ಕಪೋಳ ಕಾ
ಶ್ಮೀರ ಸುಪತ್ರರಾಗಮುಮನೀಂಟಿವನಟ್ಟಿಯೊಳಂಗರಾಗಮಂ
ಸಾರೆಡೆವೊಕ್ಕೆಯೇಕೆನುತೆ ಮರ್ದಿಪವೋಲ್ ಬಿಗಿದಪ್ಪಿದಂ ಪ್ರಿಯಂ ೭೨

ಚಂ॥ ಇನಿಯಳ ಮೆಯ್ಗೆ ಮೆಯ್ಸುವಿರನಕ್ಷಿಗೆ ಸಂಚಳವೃತ್ತಿಯಂ ಮನ
ಕ್ಕನುಪಮಹರ್ಷಮಂ ಪಡೆದು ಕೂಡೆ ಕಳಾಕುಶಳಂ ನಿರಂತರಂ
ಘನಕುಚದೊಳ್ ಕಪೋಳತಳದೊಳ್ ನಳಿತೋಳ್ಗಳೊಳೋಪನಿತ್ತ ನೂ
ತನ ನಖರೇಖೆಗಳ್ ಸೊಗಯಿಸಿರ್ದುವು ರಾಗದ ಬಳ್ಳಿವಳ್ಳಿವೋಲ್ ೭೩

ವ॥ ಮತ್ತೊಂದುತ್ತುಂಗ ಮನಃಪ್ರಸಾದ ಪ್ರಾಸಾದೋಪರಿಮ ಭೂಮಿಭಾಗದೊಳ್

ಚಂ॥ ಲಳನೆ ಮನೋಭವಾಂಬುಧರ ಮಾಟ್ಕೆಯವೋಲ್ ಪದನಿತ್ತು ಮಾಣೆ ಕಣ್
ಪೊಳೆಯದ ಮಿಂಚಿನಂತಿರೆ ಗಳಧ್ವನಿ ಪೊಣ್ಮದ ಮೇಘನಾದದಂ
ತಳವಡೆ ಕೇಶಪಾಶವೊಲೆದಾಡದ ಕೇಕಿಯವೋಲ್ ರತಾಂತಮಂ
ತಲಘುತರೋಪಶಾಂತಘನಕಾಲದ ಲೀಲೆಯನಾಂತುದಾವಗಂ ೭೪

ವ॥ ಅಂತು ಮದನೋನ್ಮಾದಮಂದಿರವಾದ ನಿಜಕಟಕವಿಟವಿಟೀಜನ ವಿನೋದಮಂ ವಿನೋದಚತುರಂ ನಿರೀಕ್ಷಿಸುತ್ತುಮಿರೆ ರಾಗಸಾಗರದ ವೇಳೆಯಂತೆ ವೇಳಾತಿಕ್ರಮಮಾದುದೆಂದು ವಿದೂಷಕನಿಂತೆಂದಂ

ಕಂ॥ ಕಡೆಗಣ್ಗಳ ಸೆಳೆಯಿಂ ಪೊ
ಯ್ದೊಡೆ ತಡೆದಿರ್ಪುದಲ್ಲದಿರ್ದೊಡೆ ದೇವರ್
ನಡೆವುದು ದೇವಿಯರ ಮನಂ
ಬಿಡಿವುದು ಕಾಲ್ವಿಡಿದು ಕೇಳ್ವೊಡೆನ್ನಯ ನುಡಿಯಂ ೭೫

ವ॥ ಎನೆ ದರಹಸಿತಮುಖಸರಸಿರುಹನರಮನೆಯತ್ತಲಭಿಮುಖನಾಗಿ ಪೋಗಿ ನರ್ಮಸಚಿವರಂ ಕಪ್ಪುರಂ ಬೆರಸಿದ ವೀಳೆಯಂಗಳಂ ಕೊಟ್ಟು ಕಳಿಪಿ ರಾಜಮನೋಜಂ ರತಿಗೃಹಮಂ ಪುಗುವಂತೆ ರಯ್ಯಮಪ್ಪ ಶಯ್ಯಾಗೃಹಮಂ ಪುಗುವುದುಂ ಮುನ್ನಮೆ ತನ್ನ ಬರವಂ ಪಾರುತ್ತಮಿರ್ದು ತಡೆದು ಬಂದುದರ್ಕೆ ಮುನಿದುಂ ಮುನಿದಿರಲೞಿಯದತಿಮುಗ್ಧೆ ಮುಸಿನಿದ್ದೆಯಂ ಮೊಗಕ್ಕೆ ತೆಗೆದು ಪಟ್ಟಿರ್ದುದನಱಿದು ನಿದ್ದೆ ಕೆಟ್ಟಪುದೆನುತ್ತುಂ ಮೆಲ್ಲನೆ ಸೋಂಕುವುದುಮೆಟ್ಟಿತ್ತ ಮೆಯ್ಸುವಿರ್ಗಳೆಟ್ಟಿತ್ತಿರ್ದುದನಱಿಪೆ ಮುನಿಸುಮಂ ನಿದ್ದೆಯು ಮನುಜ್ಜಯಿಸಿ ಲಜ್ಜೆಯನುಜ್ಜೀವಿಸುತ್ತುಮಿರ್ದ ಬಾಳೆಯಂ ಮೇಳದಿಂ ಮೇಳಯಿಸಿ

ಚಂ॥ ಪಲವು ಮತಂಗಳಿಂ ನೆಗಟ್ಟಿ ಚುಂಬನದಿಂ ಪಲವಪ್ಪುವಪ್ಪಿನಿಂ
ಪಲವು ತೆಱಂಗಳಾಸನದಿನಂಬುರುಹಾಸ್ಯಗೆ ರಾಗದೇಟ್ಟೆಯುಂ
ಪುಳಕಮುಮಪ್ಪಿನಂ ಸಮರತಂ ಸಮನಪ್ಪಿನಮೋತು ಕೂಡಿ ಭೂ
ತಳಪತಿ ಮಾಡಿದಂ ಸೊಗದ ಸೊರ್ಕನಶೇಷಕಳಾವಿಚಕ್ಷಣಂ ೭೬

ವ॥ ಅಂತು ಸಂತಸಮಂ ಬಳೆಯಿಸುತ್ತುಂ ಬಳೆದ ಸುರತಶ್ರಾಂತಿಯೆ ಸುಖಸುಪ್ತಿಯನೀಯೆ ಕಾಂತೆಯ ನಳಿತೋಳ ತಳ್ಪಿಂಗೊಳಗಾಗಿ ಮೃದುತಳ್ಪತಳದೊಳವನೀನಾಥಂ ಪವಡಿಸಿರೆ

ಚಂ॥ ವಿರಹಿಯ ಮನ್ಮಥಾನಳಮುಖೋದಿತಧೂಮದೆ ಕಂದಿದಂತೆ ಕಂ
ದಿರೆ ಶಶಿಬಿಂಬಮಸ್ತಗಿರಿಮಸ್ತಕದೊಳ್ ಭಗಣಂ ನಿಶಾಂಗನಾ
ಭರಣದ ಮೌಕ್ತಿಕಂಬೊಲೊಡವೋಗೆ ಸುರೇಶದಿಶಾವಧೂಮುಖಾಂ
ಬುರುಹಪರಾಗರಾಗಮೆನೆ ಸಂಜೆ ಪೊದಟ್ಟುದು ಪೂರ್ವದಿಕ್ಕಿನೊಳ್ ೭೭

ಬಿಸಜದೆಸಳ್ಗಳಂ ಬಿಡೆ ಸಡಿಲ್ಚಿ ವಿಯೋಗವಿಷಾದದಿಂದೆ ಮೂ
ರ್ಛಿಸುವ ರಥಾಂಗಯುಗ್ಮಮನಲರ್ಚಿ ಸರೋವರವೀಚಿಮಾಳೆಯೊಳ್
ಪಸರಿಸಿ ತೇಂಕಿ ಪುಷ್ಪಿತಲತಾವಳಿಯಂ ನಲವಿಂದೆ ಸೋಂಕಿ ಬಂ
ದೆಸಗಿತು ಸುಪ್ರಭಾತದ ಸಮೀರಣಮಾಶ್ರಿತಸೌಖ್ಯಕಾರಣಂ ೭೮

ಕಂ॥ ಉದಯಗಿರಿಯರುಣಮಣಿಗಳ್
ಪೊದಟ್ಟು ಪರಿತರ್ಪ ಹರಿಯ ಹರಿಪದರಥಚ
ಕ್ರದ ಹತಿಯಿನೊಡೆಯೆ ರಜಮೊಗೆ
ದದೆ ತೋಱುವುದೆನಿಸಿತೆಸೆವ ಸಂಧ್ಯಾರಾಗಂ ೭೯

ನೆರೆಯೆ ರುಚಿ ಚಕ್ರವಾಕಂ
ನೆರೆಯೆ ತಮಂ ಪರಿಯೆ ಪರೆಯೆ ನಿಜದೀಧಿತಿ ಭಾ
ಸ್ಕರನಬ್ಜಾಕರಲಕ್ಷ್ಮೀ
ಕರನನುಪಮನೊಗೆದನುದಯಗಿರಿಮಸ್ತಕದೊಳ್ ೮೦

ಮ॥ ಜಿನಪೂಜಾಷ್ಟವಿಧಾರ್ಚನಾವಿವಿಧ ದಿವ್ಯಾಮೋದದೊಳ್ ಶ್ರವ್ಯನೂ
ತನಸಂಗೀತನಿನಾದದೊಳ್ ವನಲತಾಂತಾಮೋದಮಂ ಮತ್ತಭೃಂ
ಗನಿನಾದಂಗಳನೊಯ್ದು ಕೂಡಿ ಜನತಾಸಂಪ್ರೀತಿಯಂ ಮಾಡಿ ಮೆ
ಲ್ಲನೆ ತೀಡಿತ್ತಘಜಾಳಚಾಳನಸುಶೀಳಂ ಸುಪ್ರಭಾತಾನಿಳಂ ೮೧

ವ॥ ಅಂತು ನೇಸರ್ಮೂಡುವುದುಮಾ ಸಮಯದೊಳ್ ಮಂಗಳಪಾಠಕಂ ಬಂದು

ಚಂ॥ ಕಿಡೆ ರಿಪುರಾಜತೇಜದೊಡನೂರ್ಜಿತರಾಜನ ತೇಜಮನ್ಯರೊ
ಳ್ಗೊಡೆಗಳೊಳೊಂದಿ ಕಣ್ಗೆಸೆವ ಮೀಂಗಳಡಂಗೆ ವಿರೋಧಿಭೂಪರೊ
ಳ್ಗಿಡಿದ ಸಹಾಯಹರ್ಷದೊಡನೊಂದಿ ಚಕೋರದ ಹರ್ಷಮೋಡೆ ಪೆಂ
ಪೊಡರಿಪ ನಿನ್ನ ತೇಜದುದಯಕ್ಕೆಣೆಯಾಯ್ತುದಯಂ ದಿನೇಶನಾ ೮೨

ಕಂ॥ ರವಿರಥಹಯದಂತೆ ದಿಶಾ
ನಿವಹಮನಾಕ್ರಮಿಸಲೆಂದು ನಿಜಹಯಮಾಶಾ
ಪ್ರವರಗಜದಂತೆ ಗಜತತಿ
ಭುವನಾಧಿಪ ದಿಗ್ಗಜಕ್ಕೆ ಬಯಸಿದುದಲ್ತೇ ೮೩

ವ॥ ಎಂದು ಬಿನ್ನವಿಸಿದನಂತರಂ

ಕಂ॥ ಜಿನಪದನಖಮಣಿದೀಧಿತಿ
ಜಿನಮುಖಮಣಿದರ್ಪಣಂ ಜಿನಾಭಿಷವಾಜ್ಯಂ
ಜಿನದಿವ್ಯಾಷ್ಟವಿಧಾರ್ಚನೆ
ಯನವರತಂ ಚಕ್ರವರ್ತಿಗೊದವಿಸುಗೊಳ್ಪಂ ೮೪

ವ॥ ಎಂದು ಪೊಗೞ್ವ ಪುಣ್ಯಪಾಠಕರವದೊಡನೆ ನೆಗೞ್ವ ಸುಪ್ರಭಾತಶಂಖ ತೂರ್ಯರವಮುಂ ಹಯಹೇಷಾರವದೊಡನೆ ಪೊಡರ್ದ ಸಮದಗಜಸಂಹತಿರವ ಮುಮುಪವನವನರುಹಷಂಡ ಚಂಡಾಳಿರವದೊಡನೆ ಸಮನಾಗಿ ನೆಗೆವ ಭಂಡಾಳಿಮಧುರಗೇಯರವಮುಂ ಕಿವಿಗವತಂಸಮಪ್ಪುದುಮುಪ್ಪವಡಿಸಿ

ಕಂ॥ ನಯನಿಳಯಂ ಪ್ರಾಭಾತಿಕ
ನಿಯಮಮನಾಚರಿಸಿ ತೊಟ್ಟು ಮಣಿಭೂಷಣ ಮಂ
ಜಯ ಜೀವ ರವಂ ನೆಗೞೆ ವಿ
ಜಯಪರ್ವತಗಜದ ಬೆಂಗೆವಂದು ನರೇಂದ್ರಂ ೮೫

ಪಡೆಮಾತೇಂ ಮಾಗಧನಂ
ಪಿಡಿದಲ್ಲದೆ ಮಾಣೆನೆಂದು ತನ್ನಯ ಪಡೆಯಂ
ಪಡೆವಳ ಬಡಗಮೊಗದೆ ನೀಂ
ನಡೆಯಿಸುವುದೆನುತ್ತೆ ಕರೆದು ನಿಯಮಮನಿತ್ತಂ ೮೬

ವ॥ ಅಂತು ಬಳಾಧ್ಯಕ್ಷನಂ ಬರಿಸಿ ನಿಯಮಿಸುವುದುಮಾತನ ಮಾತಂ ಕೇಳ್ದು ಪಡೆ ನಡೆಯೆ ನಡೆಯೆ

ಕಂ॥ ಆದರದೆ ರಕ್ತೆಯಿಂ ರ
ಕ್ತೋದೆವರೆಗಮಗಲನಗಿದು ಮಾಗಧವಿಭು ಸೀ
ತೋದೆಗೆ ನೇರ್ಗಿಱಿದೆನೆ ಸಂ
ಪಾದಿಸಿದವೊಲೆಸೆದುದಾ ನದೀಜಲಪೂರಂ ೮೭

ವ॥ ಅದಂ ರಕ್ತಾನದೀವೇದಿಕೆವಿಡಿದು ದಾಂಟಿ

ಮ॥ ಪಡೆಯೆಯ್ದಿತ್ತಧಿನಾಥನೆಂದ ತೆಱದಿಂ ರಕ್ತಾನದೀತೀರಮಂ
ಪಿಡಿದಂತಾ ನದಿಯುಂ ನಿಸರ್ಗವಿಳಸತ್ಸೀತೋದೆಯುಂ ಕೂಡಿದೊಂ
ದೆಡೆಯುಂ ಭೂಪತಿ ಬರ್ಽ ಸಂತಸದೆ ಸೀತೋದಾನದೀದೇವಿ ನೇ
ರ್ಪಡೆ ತಾಂ ಕಟ್ಟಿದ ತೋರಣಮೆಂಬೊಲೆಸೆದಿರ್ದಾ ತೋರಣದ್ವಾರಮಂ ೮೮

ಕಂ॥ ಪನ್ನೆರಡುಯೋಜನಂ ನೀ
ಳನ್ನವಯೋಜನಮದಗಲಮೆನೆ ಬಿಡಿಸಲ್ ಬೀ
ಡನ್ನೆಲನೆಯ್ದದೆ ಪಡೆವ
ಳನ್ನೆಱೆಯೆ ಕುಱುಂಬುಗೊಳಿಸಿ ಬಿಡಿಸಿದನಾಗಳ್ ೮೯

ಕಂ॥ ಭೃಂಗವೃತವನಜಸುರಭಿತ
ರಂಗೋಭಯಸಿಂಧು ಸಂಗಮೋದಿತಮರುದಾ
ಸಂಗಮಮಭಿನವಮಂ ಸುಖ
ಸಂಗಮಮಂ ಪಡೆಗೆ ಪಡೆದದೇಂ ಸೊಗಯಿಸಿತೋ ೯೦

ಚಕ್ರಧರಂ ವಾಹನದಿಂ
ಚಕ್ರಘನಸ್ತನಿಯರೊಡನೆ ಕಡೆಗಣ್ಗಳ್ ದಿ
ಕ್ಚಕ್ರಮನೆಳವೆಳಗುಗಳಿಂ
ದಾಕ್ರಮಿಸುತ್ತಿಱಿಯೆ ಮೂರ್ತಿಮನ್ಮಥನಿಱಿದಂ ೯೧

ವ॥ ಅಂತು ಪೆರ್ವಿಡಿಗಳಿನಿಱಿದ ವಿಳಾಸಿನೀಜನಂಬೆರಸು ನದೀವಿಳಾಸಮಂ ನೋಡಿ

ಮ॥ ಇದು ಕೂಡುತ್ತಿರೆ ವಾರಿರಾಶಿವೆಸರಂ ತಾಳ್ದಿತ್ತು ಗಂಭೀರಮಾ
ದುದು ಮುನ್ನೀರೆನೆ ಪೆಂಪಿನೊಪ್ಪುವ ನಿಳಿಂಪರ್ ಕ್ರೀಡಿಪರ್ ಬಂದು ಸ
ಮ್ಮದದಿಂದೆಂದೊಡೆ ಚೆಲ್ವನಾರ್ ಪೊಗೞಿರೆಂದುರ್ವೀಶ್ವರಂ ಸಮ್ಮದ
ಪ್ರದಸೀತೋದೆಯನಟ್ಟಿವಟ್ಟು ಪೊಗೞ್ದಂ ವಿಶ್ವಾರ್ತಿವಿಚ್ಛೇದೆಯಂ ೯೨

ಮ॥ ಗಗನಂ ತನ್ನವೊಲಾವಗಂ ಭುವನಮಂ ತಾಳ್ದಿರ್ಪುದೆಂಬೊಂದು ಮೈ
ಮೆಗೆ ಮುಯ್ವಾಂತಮರ್ದೊಪ್ಪುವಂತೆ ನಳಿತೋಳಿಂ ತೋರಮುಕ್ತಾಫಳಾ
ಳಿಗಳಂ ತಾರಗೆಯಲ್ಲಿ ತಾಂ ಪಡಿಯಿಡಲ್ ಪೋದಪ್ಪುದೆಂಬಂತೆ ನೆ
ಟ್ಟಗೆ ಸೀತೋದೆ ಪೊದೞ್ದು ಪೆರ್ದೆರೆಗಳಿಂ ತಳ್ಕೈಸಿತಾಕಾಶಮಂ ೯೩

ವ॥ ಎಂದು ಗುಣಸಿಂಧು ಸಿಂಧುವಿನ ಗಭೀರತೆಯನಭಿವರ್ಣಿಸಿ

ಕಂ॥ ಜಲಮಂ ಪೊಕ್ಕಿರ್ದಪನೆನೆ
ಜಲಮಂ ಮಾಗಧನೊಳಱಿಂಸಲಲ್ಲಿ ವಿಲಂಘ್ಯಂ
ದಲಿದೆಂದು ಬಂದು ಕಾಣದೆ
ನಿಲೆ ತವಿಸುವೆನದನೆ ಬೞಿಕವನ ಜೀವನಮಂ ೯೪

ತವಿಸುವೆನೆಂದುದ್ಯೋಗಿಪ
ಭುವನಾಧೀಶ್ವರನನಖಿಳಕುಳವೃದ್ಧರ್ ಬಿ
ನ್ನವಿಸಿದರಂತುಱಿ ದೇವ
ರ್ಗವಿಧೇಯಮೆನಿಪ್ಪ ಜನಕೆ ಜೀವನಮುಂಟೇ ೯೫

ಆದೊಡಮೇನವನಿಪ ನೀ
ನಾದಿನೃಪಾಳಕಚರಿತ್ರನದಱಿಂದಾದ್ಯ
ಶ್ರೀದಯಿತಚಕ್ರಿಗಳ್ ಪರ
ಮಾದರದಿಂದೆ ನೆಗೞ್ದ ತೆಱದೆ ನೆಗೞಲೆವೇೞ್ಕುಂ ೯೬

ವ॥ ಎನೆ ಮನದೆಗೊಂಡು

ಕಂ॥ ಧೃತಧವಳವಸ್ತ್ರನಧಿವಾ
ಸಿತ ಜೈತ್ರಶರಾಸನಾಸ್ತ್ರಚಯನುಪವಾಸ
ತ್ರಿತಯಯುತಂ ಜಲ್ಪಿತಜಲ
ನುತಮಂತ್ರಂ ದರ್ಭಶಯ್ಯೆಯೊಳ್ ವಿಭುವಿರ್ದಂ ೯೭

ಇರೆ ದರ್ಭಶಯ್ಯೆಯೊಳ್ ವಿಭು
ವಿರಚಿಸಿ ಪರಮೇಷ್ಠಿಪೂಜೆಯಂ ಶಾಂತಿಕಮಂ
ನಿರುತಂ ಪೌಷ್ಟಿಕಮಂ ಹಿತ
ಪುರೋಹಿತಂ ಮಾಡೆ ಸಿದ್ಧಮಾದುದು ಮಂತ್ರಂ ೯೮

ವ॥ ಅಂತು ಸಿದ್ಧಮಂತ್ರನಾಗಿ ಮಱುದೆವಸಂ ಪ್ರಾತಃಸಮಯದೊಳ್

ಕಂ॥ ಮಂಗಳವಸದನದಿಂದೆ ಮ
ನಂಗೊಳಿಸುತುಮಿರ್ದು ಪಡೆಯ ಕಾಪಂ ಪಡೆವ
ಳ್ಳಂಗೆ ಸಮರ್ಪಿಸಿ ಮಾಗಧ
ನಂ ಗೆಲ್ವುದ್ಯೋಗದಿಂದಮುತ್ತಮಸತ್ವಂ ೯೯

ರವಿರಥಹಯದೊಳ್ ಮಚ್ಚರಿ
ಸುವ ವೇಗದ ಗಿಳಿಯಬಣ್ಣದಶ್ವಂಗಳಿನೊ
ಪ್ಪುವಿನಂ ಪೂರಿತನೇಱಿದ
ನವನೀಶ್ವರನೊಸೆದು ರಥಮನಜಿತಂಜಯಮಂ ೧೦೦

ವ॥ ಅಂತು ವಿವಿಧಾಯುಧಂಗಳಿಂ ಮನಂಗೊಳಿಸುವ ಮನೋರಥಮಂ ಶೀರ್ಘವ ರಥಮನೇಱಿ ಮಾಗಧನ ವಿಕ್ರಮಮನತಿಕ್ರಮಿಸುವುದಂ ನಿವೇದಿಸಿ ವಜ್ರವೇದಿಕೆಯಂ ದಾಂಟಿ ಸೀತೋದೆಯಂ ತೋರಣದ್ವಾರದಿಂ ಪೊಕ್ಕು ಚೋದಿಸೆನೆ

ಕಂ॥ ಸಾರಥಿ ಮನೋರಥಕ್ಕಂ
ಸಾರಥಿಯೆನೆ ಹರ್ಷಮೊದವೆ ಚಕ್ರಿಗೆ ರಥಮಂ
ಧಾರಿಣಿಯೊಳ್ ಪರಿಯಿಪವೋಲ್
ನೀರೊಳ್ ಚೋದಿಸಿದನೇನವಂ ಪರಿಣತನೋ ೧೦೧

ತೆರೆಮುಗಿಲ ಬಟೆವಿಡಿದು ಭಾ
ಸ್ಕರರಥಹರಿ ಹರಿವ ತೆಱದೆ ತೇಜಶ್ಚಕ್ರಾ
ಭರಣನ ರಥಹರಿ ಹರಿದುವು
ತೆಱೆದುಱುಗಲನಟ್ಟುವಂದದಿಂ ಸಿಂಧುವಿನೊಳ್ ೧೦೨

ಹಯಖುರಮುಂ ಚಕ್ರದ ನೇ
ಮಿಯುಮೂರ್ಜಿತವಜ್ರಮಕ್ಕುಮೆನೆ ವಾಹಿನಿಯೊಳ್

ನಿಯತಮದಾಟಿದೆ ಸಮಭೂ
ಮಿಯೊಳದಿರದೆ ಪರಿವ ತೆಱದೆ ಪರಿದತ್ತು ರಥಂ ೧೦೩

ಸರಸಿಜಪರಾಗದಿಂದಂ
ಪೊರೆದ ತರಂಗಾಳಿ ರಂಗವಲಿಯಂ ಭೂಪಂ
ಬರುತಿರೆ ತಜ್ಜಲದೇವತೆ
ವಿರಚಿಸಿದವೊಲೆಸೆದುವಸದಳಂ ಸಿಂಧುವಿನೊಳ್ ೧೦೪

ಮ॥ ಸಕಳೋರ್ವೀಶನಲಂಘ್ಯಮೆಂದಿರದೆ ಕೇಳಕ್ಲೇಶದಿಂ ವಜ್ರವೇ
ದಿಕೆಯಂ ದಾಂಟಿದನೆನ್ನ ಗುಣ್ಪನೆನಸುಂ ಕೀೞ್ಮಾಡಿದಂ ನಿನ್ನನಿಂ
ಪ್ರಕಟಂ ರಕ್ಷಿಪರಿಲ್ಲ ಮಾಗಧ ಶರಣ್ಪೊಕ್ಕೆಯ್ದೆ ಬಾೞಿಂದು ವೀ
ಚಿಕಳಾಪಧ್ವನಿಯಿಂದೆ ಪೇೞ್ವ ತೆಱದಿಂ ಸೀತೋದೆಯೇನೊಪ್ಪಿತೋ ೧೦೫

ಕಂ॥ ಪನ್ನೆರಡುಯೋಜನಂ ಬರೆ
ಗಂ ನಿಲ್ಲದೆ ಪರಿದು ಜಳಚರಂ ರಥಹತಿಯಿಂ
ದಂ ನೊಂದಪುವೆಂದಾ ನದಿ
ಯುನ್ನತದೇವತೆಯೆ ಕರುಣದಿಂ ನಿಲಿಸಿದವೋಲ್ ೧೦೬

ಪರಿಯದೆ ನಿಲೆ ರಥಮುರಿವರಿ
ವರಿದಧಿಪನ ಕೋಪಮಳುರ್ವ ಬಡಬಾನಳನಂ
ತುರಿಪಲೊಡರ್ಚಿತ್ತಹಿತನ
ಪುರದೊಡನಂಬುಧಿಗೆ ಸದೃಶಮೆನಿಸಿದ ನದಿಯಂ ೧೦೭

ಮುಳಿದು ಕುಳುಂಪೆಯ ಜಳಮೀ
ಜಳಮೆಂದು ತುಳುಂಕಲಿದಱ ಜಳಚರಮನಿತುಂ
ಪೆಳಱುಗುಮೆಂದೊಲ್ಲದೆ ರಿಪು
ನಿಳಯಮನನಳಾಸ್ತ್ರದಿಂದ ಮುಱಿಪುವೆನೆನುತಂ ೧೦೮

ಪೊಡವಿ ಪೆಳಱಿತ್ತು ಕುಳಗಿರಿ
ನಡುಗಿತ್ತಾಶಾಗಜಾಳಿ ಮದವುಡುಗಿತ್ತಾ
ಜಡಧಿ ಕಲಂಕಿತ್ತರಿಯೆರ್ದೆ
ಯೊಡವಿನೆಗಂ ನೃಪತಿ ಜೇವೊಡೆಯೆ ನಿಜಧನುವಂ ೧೦೯

ಮ॥ ಅರಿದರ್ಪೋಚ್ಚಾಟನಾನ್ಯಕ್ಷಿತಿಪತಿವಿಭವಾಕರ್ಷನಾಕ್ಷೋಣಮಂತ್ರಾ
ಕ್ಷರಮೆಂಬಂತಿರ್ದ ನಾಮಾಕ್ಷರಮನೆ ತಳೆದಿರ್ದಸ್ತ್ರಮಂ ಜ್ಯಾರವಂ ಮೇ
ಘರವಪ್ರಸ್ಪರ್ಧಿ ಪೊಣ್ಮುತ್ತಿರೆ ನರಪತಿ ತೊಟ್ಟೆಚ್ಚೊಡುರ್ಚಿತ್ತು ವಜ್ರ
ಸ್ಫುರಿತಾಂಗಂ ಮಾಗಧಾತ್ಯುನ್ನತನಿಳಯಶಿಲಾಸ್ತಂಭಮಮಂ ಚಕ್ರಿಬಾಣಂ ೧೧೦

ಕಂ॥ ಸ್ತಂಭಮನಂಬುಜಿರ್ಗೆ ಗತಿ
ಸ್ತಂಭಂ ಕೆಲಬರ್ಗೆ ಕೆಲರ್ಗೆ ದೋರ್ವ್ವಳ ಗರ್ವ
ಸ್ತಂಭಂ ಕೆಲಬರ್ಗೆ ಮತಿ
ಸ್ತಂಭಂ ಸಂಭವಿಸಿತಮರವಿಭುವಿನ ಸಭೆಯೊಳ್ ೧೧೧

ವ॥ ಅಂತಾ ಶಿಳೀಮುಖಸಂಭವರವಕ್ಕೆ ವಿರಹಿಗಳಂತೆ ಭಯಾಕ್ರಾಂತಸ್ವಾಂತರಾದರಂ ವೀರಾಂಗನಾಸಂಗತರಾದರೆಂತಾನುಂ ಸಂತೈಸಿ ಹಸ್ತಾಂಜಳಿ ಮೌಳಿಯೊಳ್ ಲೀಲೆವಡೆಯೆ ತಮ್ಮೊಡೆಯಂಗಿಂತೆಂದರ್

ಕಂ॥ ಪಲದೇವಸಕ್ಕೆತ್ತಾನುಂ
ಕಲಹಂ ದೊರೆಕೊಂಡೊಡಿಲ್ಲಿ ದೋರ್ವ್ವಳದಿಂ ಮಾ
ರ್ಬಲಮನದಟಲೆಯದಿದಿರ್ದೊಡೆ
ನಲವಿಂ ರಕ್ಷಿಸಿತು ದೇವ ನಿಷ್ಫಳಮಲ್ತೇ ೧೧೨

ವ॥ ಎಂದು ನುಡಿವ ಸುಭಟಾಳಾಪಮೆ ಕೋಪಾನಳಕ್ಕುದ್ದೀಪನಭಾವಮಂ ಪಡೆಯೆ

ಕಂ॥ ಬಿಡದೆ ಮಱಿಯೊಡನೆ ಕಾಯ್ಪಿಂ
ಸಿಡಿಲೊಡರಿಪ ತೆಱದೆ ಘರ್ಮಜಳದೊಡನೆ ಪೊಡ
ರ್ಪುಡುಗದ ಕೋಪಾನಳಮಂ
ದೊಡರಿಸಿದುದು ಘನಮದಾಂಧನೊಳ್ ಮಾಗಧನೊಳ್ ೧೧೩

ಮೆಚ್ಚನನುವರದೊಳೆಂಬಿನ
ಮೆಚ್ಚವನೀ ಶರಮೆ ಮಗುಳ್ದು ತಾಗಿದ ತೆಱದು
ಮ್ಮಚ್ಚಮಿರದೊದವೆ ಮನದೊ
ಳ್ಮಚ್ಚರಮಟೆವಿನೆಗಮಳಱಿಪೆಂ ದೋರ್ವ್ವಳದಿಂ ೧೧೪

ವ॥ ಎನೆ ಸಚಿವಂ ಮಾರ್ಕೊಂಡು

ಕಂ॥ ಆರಿದನೆಚ್ಚವರೆಂಬುದ
ನಾರಯ್ಯದೆ ವೀರವೃತ್ತಿಯಂ ನುಡಿವುದೆ ಸಾ
ಧಾರಣನೋ ರಣಧೀರನೊ
ಬಾರಿಸಿ ನೋಡುವುದು ತತ್ತ್ರಶಸ್ತ್ರಕ್ರಮಮಂ ೧೧೫

ಭರತೈರಾವತದೊಳ್ ನಿಯ
ತರೆನಿಸಿ ಸಂಜನಿಯಿಕುಂ ತ್ರಿಷಷ್ಟಿಶಲಾಕಾ
ಪುರುಷರ್ ವಿದೇಹದೊಳ್ ಕುಂ
ದರೆಂದುಮದಱಿಂದೆ ಚಕ್ರಿಯಾಗಲೆವೇಟ್ಕುಂ ೧೧೬

ನಿನ್ನನೆಱಗಿಪೊಡೆ ಚಕ್ರಧ
ರಂ ನೆಱಗುಂ ಪೆಱರ ವಿಕ್ರಮಕ್ಕೆಡೆಗುಡದ

ತ್ಯುನ್ನತಗಭೀರತಾಸಂ
ಪನ್ನಂ ನಿಜವಾಸಮಸ್ತಮಿತಸಂತ್ರಾಸಂ ೧೧೭

ಬಾಣಮಿದಧಿಪತಿನಿಗದಿತ
ಬಾಣಮನೊಳಕೊಂಡು ದಂಡಮಂ ಸಾಮಮನ
ಕ್ಷೂಣಮನಱಿಪಲ್ ನೆಱಿಗುಂ
ಕ್ಷೋಣೀಶರ್ಗಧಿಕ ಶೌರ್ಯ ಮಂತ್ರಿಯ ತೆಱದಿಂ ೧೧೮

ವ॥ ಎಂದಿಂತದಱಿೊಳಿರ್ದಂಕಮಾಲೆಯ ಬಿಂಕಮಂ ಕೇಳ್ವುದೆಂದ ಸಚಿವನ ವಚನಮುಚಿತ ಮೆನಿಸಿ ಮನಕ್ಕೆವರೆ ಮಾಗಧಂ ಮಹಾಸಂಧಿವಿಗ್ರಹಿಯ ಮೊಗಮಂ ನೋೞ್ಪುದು ಮಾತಂ ಶಿಲಾಸ್ತಂಭದೊಳ್ ವಿಜೃಂಭಿಸುತ್ತುಂ ತೆತ್ತಿಸಿರ್ದ ವಿಶಿಖಗತಲಿಖಿತ ಸುವರ್ಣ ಪತ್ರಮಂ ನೋಡಿ

ಚಂ॥ ಜಲಚರವೃತ್ತಿಯಂ ತಳೆದು ವರ್ತಿಸುತಿರ್ಪವರ್ಗುಂಟೆ ಬೇಱಿದೋ
ರ್ವಳಮದಜೆಂದೆ ಕಾಲ್ವೊೞಿಯಿದಾದುದು ತಾಂ ನೆಲಸಿರ್ಪ ಸಿಂಧು ಮಾ
ರ್ಮಲೆಯಲೆವೇಡ ಜೀವನಮನೊಲ್ವೊಡೆ ಕಾಣ್ಬುದು ವಜ್ರನಾಭಿಯಂ
ಬಲನಿಧಿಚಕ್ರವರ್ತಿಯನದಕ್ಕಭಯಂ ಭುವನೈಕರಕ್ಷಕಂ ೧೧೯

ವ॥ ಎಂದು ಬರೆದಿರ್ದ ರಾಜಾದೇಶಮಂ ಬಾಚಿಸಿ ಕೇಳ್ದು ಕಂಗನೆ ಕನಲ್ದಿಂತೆಂದಂ

ಮ॥ ನದಿಯಂ ನಾವಿಕನಂತೆ ಪೊಕ್ಕು ಗುಱಿಯುಂ ಧಾನುಷ್ಕನೆಂಬಂತೆ ತ
ಪ್ಪದಿದಂ ಕಂಬಮನೆಚ್ಚುದಂ ತನಗೆ ಬಾಹಾ ಗರ್ವಮಂ ತೋಱು ಬೇ
ಡಿದಪಂ ಕಪ್ಪಮನೆನ್ನ ವಾಹಿನಿಯುಮುದ್ಯನ್ಮದ್ಭುಜಾದಂಡಮುಂ
ಕದನಕ್ರೌರ್ಯಮನೀಯದಂತವಱಿವೋಲೆಂತುಂ ಸಮಂತಿರ್ಕುಮೇ ೧೨೦

ವ॥ ಎಂದು ಮುನಿಸಂ ಮೊಗಕ್ಕೆ ತಂದಾಸ್ಥಾನರಂಗದಿಂದೆೞ್ದು ರಣರಂಗಕ್ಕುದ್ಯೋಗಿಸುತ್ತಿರ್ದನಂ ಚಕ್ರವರ್ತಿಯ ಸಾಮರ್ಥ್ಯಮನಱಿವ ಹಿತಮಹತ್ತರರುದ್ವೃತ್ತನಂ ಮಾಗಧನಂ ಮಾರ್ಕೊಂಡು

ಕಂ॥ ಏಕಾಕಿಯ ಕಲಹಮುಮ
ಸ್ವೀಕರಣೀಯಂ ವಿವೇಕಿಗಳಿನೆಂದೊಡಿದೇಂ
ಲೋಕಾಧಿಪತಿಯ ಕದನಂ
ಸ್ವೀಕರಣೀಯಮ ಬಿಸುೞ್ಬುದಸದಾಗ್ರಹಮಂ ೧೨೧

ಪೂಜಿಸು ರಾಜಿತ ಶರಮಂ
ರಾಜಾದೇಶಮನೆ ಮೌಳಿಯೊಳ್ ತಳೆ ನಡೆ ನಿ
ರ್ವ್ಯಾಜದೊಳೆ ಚಕ್ರಿಚರಣಾಂ
ಭೋಜಕ್ಕೊಲ್ದೆಱಗು ಪಡೆವೊಡಧಿಕಶ್ರೀಯಂ ೧೨೨

ವ॥ ಎಂದನ್ವಿತರುಂ ಹಿತಾನ್ವೇಷಿಗಳುಮಪ್ಪ ಮಹಾಪ್ರಧಾನರ್ ನುಡಿದ ನುಡಿಗೊಡಂಬಟ್ಟು ಚಲಮಂ ಬಿಟ್ಟು

ಉ॥ ಗಾಲಿಯನೆತ್ತಿ ಪತ್ತಿಗೆಯ ವಾಹಖುರಂಗಳ ಘಾತದಲ್ಲಿ ಕ
ಲ್ಲೋಳಮದಾಗದಿರ್ದುಮಿನರಶ್ಮಿಗೆ ಕೊಳ್ಗುದಿಗೊಳ್ವವೋಲಿಳಾ
ಪಾಳನ ತೇಜದೇಳ್ಗೆಗಗಿವಂಬುಚರಂಗಳ ಮೋಹದಿಂದವಂ
ಪಾಳಿಸವೇಳ್ಕುಮೆಂದು ವರುಣಂ ಬರುತಿರ್ಪ್ಪವೊಲೊಪ್ಪಿ ಮಾಗಧಂ ೧೨೩

ವ॥ ಬಂದು ವಿನಯವಿನಮಿತೋತ್ತಮಾಂಗನಾಗಿ

ಕಂ॥ ವರುಣನ ಭಂಡಾರದೊಳೆಸೆ
ವರುಣಮಣಿಪ್ರಕರದಂತೆ ರಂಜಿಪ ರತ್ನಾ
ಭರಣಂಗಳಿನೋಲಗಿಸಿದ
ನೆರಡಿಲ್ಲದ ಭಕ್ತಿಯಿಂದೆ ಚಕ್ರಿಗೆ ದಿವಿಜಂ ೧೨೪

ವ॥ ಓಲಗಿಸುವುದುವಾತನ ವಿನಯಮೆ ತನಗೆ ಬಾಳ್ತೆಯಪ್ಪುದಱಿಸಾ ಪದಾರ್ಥಮಂ ಬಾಳ್ತೆಗೆಯ್ಯದೆಯುಮಾತನ ಬಿನ್ನಪಮಂ ಮನ್ನಿಸಲ್ವೇಳ್ಕುಮೆಂದುನ್ನತ ಚಿತ್ತನೊಂದೆರಡು ರತ್ನಂಗಳಂ ಕಳೆದುಕೊಂಡುೞಿದುವಂ ತಾಂ ಕುಡುವ ಪಸಾಯದೊಡನೆ ಕೊಟ್ಟು ಸಂತಸಂ ಬಡಿಸೆ ಮಾಗಧನಾಗಳಿಂತೆಂದಂ

ಕಂ॥ ಅನುಪಮಪದನಖಮಣಿಯಿಂ
ಸನಾಯಕಂ ಮಕುಟಮಾಯ್ತು ಭವದೀಯ ದಯಾ
ಜನಿತಪ್ರಸಾದದಿಂದಂ
ಸನಾಥಮಾದತ್ತು ಮತ್ಕುಲಂ ಭುವನಪತೀ ೧೨೫

ವ॥ ಅಂತಾ ವಿಬುಧಪತಿಯಂ ವಿಬುಧಪತಿ ಸಂತಸಂಬಡಿಸಿ ಬೀಳ್ಕೊಳಿಸಿ ಪರಿಜನಂ ಬೆದಱುಗುಂ ಬೇಗಂ ಪೋಗೆಂದು ಕಳಿಪಿ

ಕಂ॥ ಉದಯಾಚಳಕಟಕಕ್ಕಿನ
ನುದಧಿಯಿನೆಳ್ತರ್ಪ್ಪ ತೆಱದೆ ನಿಜಕಟಕಕ್ಕಾ
ನದಿಯಿಂದಂ ಸೈನಿಕಚ
ಕ್ರದ ಹರ್ಷಂ ಬಳೆಯೆ ಚಕ್ರವಿಭುವೆಳ್ತಂದಂ ೧೨೬

ರವಿ ದೂರದೊಳಿರ್ದುಮಭೀ
ಷುವಿಂದೆ ಕುವಳಯದ ಲಕ್ಷ್ಮಿಯಂ ಪರಿಯಿಪವೋಲ್
ದಿವಿಜಕುಲಧನಮುಮಂ ಚ
ಕ್ರವರ್ತಿ ಪರಿಯಿಸಿದನಿಷುವಿನಿಂ ಘನತೇಜಂ ೧೨೭

ವ॥ ಎಂದು ಮಾಗಧನೊಳ್ ಮಾಡಿದವಾರ್ಯಶೌರ್ಯಮಮಂ ಮಾಗಧರ್ ಮನೋರಾಗದಿಂ ಪರಿಕೀರ್ತಿಸುತ್ತುಂ ಬರೆ ತೀರದೇಶದೊಳ್ ತನ್ನ ಬರವಂ ಪಾರುತ್ತಮಿರ್ದ ಮಹಾಸಾಮಂತ ಮಕುಟಬದ್ಧಮಣಿ ಕುಟಸ್ಯಂದನರುಚಿರುಚಿರಚರಣಾರವಿಂದಂ ಸ್ಯಂದನದಿಂದಮಿೞಿದು ಬಳಸಿಬರ್ಪ ಪರಿಜನಂಬೆರಸಶೇಷಶಿಬಿರಯೋಷಿದ್ದತ್ತಶೇಷಾಕ್ಷತಂಗಳನುತ್ತಂಸಂ ಮಾಡುತ್ತುಂ ಮಗಳಪಾಠಕಗಾಯಕರ ನಂಗಳಂ ಕರ್ಣಾವತಸಂ ಮಾಡುತ್ತುಂ ರಾಜಹಂಸಂ ರಾಜನಿಳಯಮನಳಂಕರಿಸಿ ಮಱುದೆವಸಂ ದಿವಸಮುಖದೊಳ್ ಪೂರ್ವಾಭಿಮುಖನಾಗಿ ನಡೆದು ನಿಜಕಟಕಮಂ ನದೀತಟದೊಳ್ ಬಿಡಿಸಿ

ಮ.ಸ್ರ॥ ಸ್ಥಿರತೇಜಂ ವೈಜಯಂತೀಮುಖದೆ ವರತನುಖ್ಯಾತನಂ ಭೂರಿಶೋಭಾ
ಕರರಕ್ತೋದಾನದೀದ್ವಾರದಿನವಯವದಿಂ ಪೊಕ್ಕು ಮಿಕ್ಕಾ ಪ್ರಭಾಸಾ
ಮರನಂ ಪೂರ್ವಕ್ರಮಂ ನೇರ್ಪಡೆ ಪದನತರಂ ಮಾಡಿ ಸಾಶ್ಚರ್ಯಶೌರ್ಯಾ
ಭರಣಂ ವಿಖ್ಯಾತಿವೆತ್ತಂ ಸುಕವಿಜನಮನೋಹರ್ಷಸಸ್ಯಪ್ರವರ್ಷಂ ೧೨೮

ಗದ್ಯ

ಇದು ವಿದಿತವಿಬುಧಲೋಕನಾಯಕಾಭಿಪೂಜ್ಯವಾಸುಪೂಜ್ಯಜಿನಮುನಿ ಪ್ರಸಾದಾಸಾದಿತ ನಿರ್ಮಳಧರ್ಮ ವಿನುತ ವಿನೇಯಜನವನಜವನವಿಳಸಿತ ಕವಿಕುಳತಿಳಕಪ್ರಣೂತ ಪಾರ್ಶ್ವನಾಥ ಪ್ರಣೀತಮಪ್ಪ ಪಾರ್ಶ್ವನಾಥಚರಿತ ಪುರಾಣದೊಳ್ ಮಾಗಧಾಮರವರತನುಪ್ರಭಾಸಾಮರ ದರ್ಪದಳನ ವರ್ಣನಂ ದಶಮಾಶ್ವಾಸಂ

ಏಕಾದಶಾಶ್ವಾಸಂ

ಕಂ॥ ಶ್ರೀದಾಕ್ಷಿಣ್ಯಾಶಾಸಂ
ಪಾದಿತ ಸುಖಕರ ವಿಳಾಸ ಭಾಸುರ ವಿಜಯ
ಶ್ರೀದಯಿತಂ ತೆಂಕಲ್ ಮೊಗ
ನಾದಂ ಸಾಧಿಸಲೆ ವೇಡಿ ಕವಿಕುಳತಿಳಕಂ ೧

ವ॥ಅಂತಖಿಳಕ್ಷಿತಿರಕ್ಷಣದಕ್ಷದಕ್ಷಿಣಭುಜಾದಂಡಂ ದಕ್ಷಿಣದಿಙ್ಮುಖಕ್ಕಭಿ ಮುಖನಪ್ಪುದುಂ ಪ್ರಭಾಕರಪ್ರಭಾವವಮಾತ್ಮೀಯತೇಜಃಪ್ರಭಾವದಂತೆ ರಿಪುಕುವಳಯಲಕ್ಷ್ಮಿಯಂ ಸ್ವಕೀಯ ಕರಕಮಳಕ್ಕತ್ಯಾಯತ್ತಂ ಮಾಡುತ್ತುಮತಿಪ್ರವೃದ್ಧಮಾಗೆ

ಮ॥ ಅತಿತೇಜೋಧಿಕನಪ್ಪವಂಗದಿರದಾವಂ ತೇಜಮಂ ತೋರ್ಕುಮಾ
ಕ್ಷಿತಿಭೃದ್ವಂಶಮವಶ್ಯದಿಂ ಕಿಡುಗುಮೆಂಬಂತರ್ಕ ತೀವ್ರಪ್ರಭೋ
ನ್ನತಿಗಂ ಮಾಱುರಿವರ್ಕಕಾಂತಮಣಿಯಂ ತಾಳ್ದಿರ್ದ ಧಾತ್ರೀಧರೋ
ದ್ಧತವಂಶಸ್ಥಳಿ ಬೇಯೆ ಬೇಸಗೆ ಕರಂ ಕೊರ್ವಿತ್ತು ಸರ್ವೋರ್ವಿಯೊಳ್ ೨

ಅಱದೇಂ ಚಂಡಮರೀಚಿರೋಚಿಯ ನೆಲನಂ ನಿರ್ನೀರಮಪ್ಪನ್ನೆಗಂ
ನೆಱೆ ಶೋಷಿಪ್ಪುದುಮಪ್ಪುಗಳ್ ಮುನಿಸಿನಿಸಿಂ ನಿಸ್ತೇಜಮಂ ತನ್ನೊಳೆ
ಚ್ಚಱಕುಂ ನಿಚ್ಚಲುಮೆಂದು ವಹ್ನಿಯ ನಿಜಪಾದಪ್ರಾಂತಮಂ ಪೊರ್ದೆ ಬೆ
ಳ್ಕುಱೆ ತೇಜಸ್ಪತಿ ಕಾಯ್ದು ಕಾಯ್ದನುಟಿದಂದಿಂತೇಕೆ ತೀವ್ರಾತಪಂ ೩

ಮ.ಸ್ರಾ॥ ಒಡಲಂ ಚಂಡಾಂಶುಚಂಡದ್ಯುತಿ ಕಿಡಿವಿಡುತಂ ಕಿರ್ಚಿನಂತಳ್ಪಿನಂ ಘೀ
ಳಿಡುತುಂ ಕಾಡಾನೆ ನೀಡುಂ ಮುೞುಗೆ ಮಡುವಿನೊಳ್ ಕಾಯ್ದು ಕರ್ಬೊನ್ನ ಬಟ್ಟಂ
ಬಿಡೆ ತಂದಂವಟ್ಟೆದಂತಾಗಳೆ ಜಳಮನಿತುಂ ಬತ್ತಿದತ್ತೆಂದೊಡೇನು
ಗ್ಗಡಮಾಯ್ತೋ ಧಾತ್ರಿ ನಿರ್ಜೀವನಮೆನಿಸುವಿನಂ ಗ್ರೀಷ್ಮಮತ್ಯಂತಭೀಷ್ಮಂ ೪

ಚಂ॥ ಅಡಿ ಪುಗುಟಾಗೆ ತೀವ್ರತಪನದ್ಯುತಿ ನೆತ್ತಿಯನಗ್ನಿ ತಾಗುವಂ
ತುಡುಗದೆ ತಾಗೆ ಗಂಟಲರ್ದೆ ಬತ್ತೆ ಬೆಮರ್ತುರ್ಪ ಬಿಗುರ್ತುರ್ಪ ಪಾಂಥರೋ
ರಡಿಯನಿಡಲ್ಕಮಾಱದಱನೀರ್ಗಳ ಮೀನವೊಲಂದು ಮಾರ್ಗದೊಳ್
ಬಿಡೆ ಮಱುಗುತ್ತುಮಿರ್ಪಿನೆಗಮುಗ್ಗಡಮಾಯ್ತು ನಿದಾಘದಾಗಮಂ ೫

ಪರಹಿತರೊಲ್ದು ಸಾರ್ದ್ರಹೃದಯಕ್ಷಿತಿಪಾಳಕರಾಜ್ಯದಲ್ಲಿ ಸಂ
ವರಿಸಿದ ಜೀವನೋಚಿತಧನಂಗಳನೀಟ್ಟುಳಿಗೊಳ್ವ ತೀವ್ರನ

ಪ್ಪರಸನ ಮಾಟ್ಕೆಯಿಂದಮೆ ಜಳಾಶಯದಂಬುದಕಾಲದಲ್ಲಿ ಸಂ
ವರಿಸಿದ ಜೀವನಂಗಳನೆ ತೀವ್ರಕರಂ ಕವರ್ದಂ ನಿದಾಘದೊಳ್ ೬

ಮ॥ ನೆಲನೆಲ್ಲಂ ತಪನಪ್ರತಾಪಶಿಖಿಯಿಂದಂ[ನಾಡೆಯುಂ]ಕಾಯ್ದು ಕಾ
ವಲಿಯಂತಾಗೆ ಮಣಲ್ ಛಿಟಿಲ್ಲೆನುತರಲ್ವೋಪಂತು ನಾನಾನದೀ
ಜಲಮಾದಂ ಕುದಿದುರ್ಕೆ ಮಾರ್ಗರಜವೆತ್ತಂ ಪೊತ್ತಿ ಕಾಡೊಳ್ ದವಾ
ನಳನಂ ಪುಟ್ಟಿಸೆ ಕೊರ್ವಿ ಪರ್ವಿದುದಗುರ್ವಿಂದುಗ್ರಘರ್ಮಾಗಮಂ ೭

ವ॥ ಅಂತಾಸುರಮಾದ ಬೇಸಗೆಯೊಳ್

ಚಂ॥ ಮಳಯಜದಣ್ಪು ಕಪ್ಪುರದ ತಂಬುಲಮೊಪ್ಪುತುಮಿರ್ಪ ಮೌಕ್ತಿಕಂ
ಗಳ ತೊಡವುಜ್ಜಳಿಪ್ಪ ದುಗುಲಂ ಹಿಮಚಂದನಗಂಧವಾರಿ ಶೀ
ತಳನಿಳಯಂ ಮೃಣಾಳವಳಯಂ ಕೊಳನಂಬುಜಪತ್ರವೀಜನಂ
ಕಳೆಯೆ ನಿದಾಘದಾಹದೊದವಂ ಪಡೆಯೇಂ ಪಡೆದತ್ತೊ ಸೌಖ್ಯಮಂ ೮

ಮ॥ ಇಡಿದುರ್ವೀರುಹಷಂಡದಿಂದೆ ಲತಿಕಾಸಂದೋಹದಿಂ ಕೋಡುತುಂ
ಕುಡದರ್ಕಾಂಶುಗಮಿರ್ಕೆಯಂ ಮಿಸುಪ ರಕ್ತೋದಾನದೀತೀರಮಂ
ಪಿಡಿದಾ ಗ್ರೀಷ್ಮದೊಳಾದ ಖೇದದೊದವಂ ಕೆಯ್ಕೊಳ್ಳದಾನಂದಮಂ
ಪಡೆಯುತ್ತುಂ ಪಡೆ ಪೊರ್ದಿದತ್ತು ವಿಜಯಾರ್ಧಾದ್ರೀಂದ್ರಮಂ ರುಂದ್ರಮಂ ೯

ಹರಿಯೂಥಂ ಖಗರಾಜಿ ಖಟ್ಗಿ ನಿವಹಂ ನಾಗವ್ರಜಂ ಸ್ಯಂದನೋ
ತ್ಕರಮುದ್ಗಂಧಮರುದ್ಗಣಂ ಕಟಕರತ್ನಶ್ರೇಣಿಗಳ್ ತನ್ನೊಳೊ
ಪ್ಪಿರೆ ಷಟ್ಖಂಡಧರಿತ್ರಿ ಸೇವಿಸೆ ನಿಜಶ್ರೀಪಾದಮಂ ಪೆಂಪುವೆ
ತ್ತುರದಿಂ ಚಕ್ರಧರಂಗೆ ಮಿಕ್ಕು ವಿಜಯಾರ್ಧಂ ಸ್ಪರ್ಧೆಯಂ ಮಾಡುಗುಂ ೧೦

ವ॥ ಅಂತು ಸೊಗಯಿಸುವ ವಿಜಯಾರ್ಧನಗಮನೆಯ್ದೆವಂದು

ಕಂ॥ ನುತರಕ್ತೋದಾತೀರ
ಸ್ಥಿತಕುಸುಮಿತವನದಿನುತ್ಸವಾದುತ್ಸವಮಾ
ಪತಿತಮೆನುತ್ತುಂ ವಿಜಯಾ
ರ್ಧತಟದ ನಂದನಮನೆಯ್ದಿತಾ ನೃಪಕಟಕಂ ೧೧

ಚಂ॥ ಮಳಯಜ ಮಾಧವೀ ವಕುಳ ಚಂಪಕ ಲೋಧ್ರ ಲವಂಗ ಮಾಗಧೀ
ತಿಳಕ ತಮಾಳ ತಾಳ ಸರಳಾಮಳಕಾರ್ಜುನ ಸರ್ಜ ಭೂರ್ಜ ಗು
ಗ್ಗುಳಘನಸಾರ ಲುಂಗ ಲವಲೀ ಸಹಕಾರ ಕದಂಬ ಪೂಗಪಾ
ಟಳಿ ಗಿರಿಮಲ್ಲಿಕಾ ಸುರಭಿ ಶೋಭಿಸುತಿರ್ದುವು ತದ್ವನಾಂತದೊಳ್ ೧೨

ಕಂ॥ ಪ್ರಿಯಪವನಂ ಪಿಕನಿನದಂ
ಮಯೂರನೃತ್ಯಂ ಪ್ರಸೂನಗಂಧಂ ಫಳಸಂ
ಚಯಮೊದವಿಕ್ಕುಂ ಪಂಚೇಂ
ದ್ರಿಯಸುಖಮಂ ಪಡೆಗೆ ಪಡೆದುದಾ ನಂದನದೊಳ್ ೧೩

ಕುಸುಮಶರಚಕ್ರಿಸವನಮ
ನೆಸಗಲ್ ಮಧುಚಕ್ರಿರಾಜ್ಯಸವನಮನೆಸಗಲ್
ಮಿಸುಗಿರೆ ಪಸುರ್ವಂದಲನೆ
ತ್ರಿಸಿದನೊ ವಿಜಯಾರ್ಧನೆನಿಸಿ ರಂಜಿಸಿತು ವನಂ ೧೪

ವ॥ ಅಂತು ರಾಜಿಸುವ ವನರಾಜಿಯಂ ವನವೇದಿಕಾತೋರಣದ್ವಾರದಿಂ ಪೊಕ್ಕು

ಕಂ॥ ರಮಣೀಯರತ್ನಮಯಮ
ಧ್ಯಮಕೂಟಾಸನ್ನ ಸನ್ನಿವೇಶಿತಬಳಭೂ
ರಮಣನಿರೆ ನಿಯಮದಾ ನಿಯ
ಮಮ ತನಗಟ್ಟಿದ ನಿಯಾಮಮಾಗಿರೆ ಬೇಗಂ ೧೫

ವಿಜಯಾರ್ಧಕುಮಾರಂ ನಿಜ
ಭುಜಗರ್ವಂ ಪರ್ವತಂಬೊಲಿದಿರ್ವುಗೆ ಚಕ್ರಿ
ಧ್ವಜಿನೀ ಗಜರದಕುಳಿಶ
ವ್ರಜಹತಿಯಿಂದಪ್ಪುದೆನುತೆ ಕಂಡಂ ಭಯದಿಂ ೧೬

ಮ॥ ಕ್ರಮಕಂಜಕ್ಕಭಿಷೇಕಮಂ ಮಕುಟಮಾಣಿಕ್ಯಾಂಶುವಿಂ ಮಾಡಿ ವಿ
ಕ್ರಮಚಕ್ರಪ್ರಭುವಿಂಗಿದೆನ್ನಯ ನಿಯೋಗಂ ಪೂಜ್ಯರಾಜ್ಯಾಭಿಷೇ
ಕಮನಾಂ ಮಾಳ್ಪೆನೆನುತ್ತೆ ಬಿನ್ನವಿಸಿ ತೀರ್ಥಾಚ್ಛಾಂಬುವಿಂ ತೂರ್ಯಘೋ
ಷಮದೆತ್ತಂ ಪೊಱಪೊಣ್ಮೆ ಪೂಣ್ದು ವಿಜಯಾರ್ಧಂ ಪ್ರೇಮದಿಂ ಮಾಡಿದಂ ೧೭

ವ॥ ಅಂತು ರಾಜ್ಯಾಭಿಷೇಕಮನನೇಕ ಮಂಗಳಾನಕನಿನದಮೆಸೆವಿನಮೆಸಗಿ ರಾಜ್ಯಚಿಹ್ನ ಮಿವನವಧಾರಿಸುವುದೆಂದು

ಕಂ॥ ಧವಳಾತಪವಾರಣಮಂ
ಪ್ರವಿಮಳ ಚಮರಜಮನ ಸಮಸಿಂಹಾಸನಮಂ
ಭುವನಪ್ರಭುವಿಂಗಿತ್ತಂ
ಕುವಳಯವೈಭವಮನೊಳಗುಮಾಳ್ಪುವನೊಲವಿಂ ೧೮

ವ॥ ಅಂತು ತನ್ನಂ ಸಮಾರಾಧಿಸಿದ ವಿಜಯಾರ್ಧಕುಮಾರನನಗಣ್ಯಕಾರುಣ್ಯಾಮೃತದಿಂ ತಣಿಪಿ ಬೀೞ್ಕೊಳಿಸಿ ಕಳಿಪಿ ವನನಿಧಿಯಂ ತೋರಣದ್ವಾರದಿಂ ಪೊಱಮಟ್ಟು ತಮಿಸ್ರಗುಹಾದ್ವಾರಕ್ಕನತಿದೂರದೊಳ್ ನಿಜಸ್ಕಂಧಾವಾರಮಂ ಬಿಡಿಸೆಂದು ಬೆಸಸಿದಾಗಳ್

ಉ॥ ವಾರಿಜಸೌರಭಾಕಳಿತಚಂದ್ರಮಣಿದ್ರವ ಶೈತ್ಯಯುಕ್ತ ಕ
ರ್ಪೂರ ಲವಂಗ ಚಂದನಲತಾ ಪರಿವರ್ತನಮಂದಚಾರವಿ
ಸ್ಫಾರಸಮೀರದೊಳ್ ಬಿಡಿಸಿದಂ ಪಡೆವಳ್ಳನುದಾರರಾಜಕಂ
ತೀರವನಾಜ್ಞೆಯಿಂ ಕಟಕಮಂ ವಿಜಯಾರ್ಧನಗೋಪಕಂಠದೊಳ್ ೧೯

ಕಂ॥ ನೆಗಟ್ದ ಚತುರ್ದಶರತ್ನದೆ
ಸೊಗಯಿಪೆ ನಾನನ್ಯವಾಹಿನಿಗೆ ತನ್ನವೊಲಾ
ನಗಿದು ತೆಱಪೀಯೆನೆನುತುಂ
ನಗುವುದು ವಿಜಯಾರ್ಧಕಟಕಮಮಂ ವಿಭುಕಟಕಂ ೨೦

ವ॥ ಅಂತು ವಿಜಯಾರ್ಧಕಟಕಕ್ಕೆ ಮಾಱಿಂಡಲಮಾಗೆ ಕಟಕಮಂ ಬಿಡಿಸಿ

ಕಂ॥ ವಿಜಯಾರ್ಧಮನುತ್ತರಿಪೊಡೆ
ವಿಜಯಂ ನೆಱೆಯಕ್ಕುಮಲ್ಲದಿರ್ದೊಡೆ ಪೆಱತೇಂ
ವಿಜಯಾರ್ಧಮಕ್ಕುಮೆನುತದ
ನಜೇಯನುತ್ತರಿಪುಪಾಯಮಮಂ ಬಗೆವಿನೆಗಂ ೨೧

ಕೃತಮಾಳಂ ಮೌಳಿಸ್ವೀ
ಕೃತಮಾಲಂ ಚಕ್ರಿ ಪುಣ್ಯಮಹಿಮಾಹೂತಂ
ವಿತತ ತಮಿಸ್ರಗುಹಾಸಂ
ತತ ರಕ್ಷಕನಿರದೆ ಬಂದು ಕಂಡಂ ನೃಪನಂ ೨೨

ಪ್ರವಿಮಳಗುಣದೆ ಚತುರ್ದಶ
ಭುವನಮೆ ಬೆಲೆಯೆನಿಪುವಂ ಮಹಾದರದಿಂ ಭೂ
ಪ್ರವರಂಗೆ ಚತುರ್ದಶ ರ
ತ್ನವಿಭೂಷಣಗಣಮನಟ್ಟೆಯಿಂ ಸುರನಿತ್ತಂ ೨೩

ವಿದಿತಂ ಕೃತಮಾಲಂ ನಿಜ
ಹೃದಯಮನೊಪ್ಪಿಸುವ ತೆಱದೆ ವಿಜಯಾರ್ಧಗಿರೀಂ
ದ್ರದ ಗುಹೆಯ ಪಡಿಗಳಂ ತೆಱೆ
ವುದೀ ತೆಱದಿನೆಂದು ಬಿನ್ನವಿಪ್ಪುದುಮಾಗಳ್ ೨೪

ಮ.ಸ್ರ॥ ಕೃತಮಾಲಂ ಬಿನ್ನಪಂಗೆಯ್ದುದನತಿಮುದದಿಂ ಚಿತ್ತದೊಳ್ ತಾಳ್ದಿ ತನ್ನಿಂ
ಕೃತಮಾಳಂಬಂ ಸ್ವಕೀಯಾಪ್ರತಿಮವಿಪುಳಕಾರುಣ್ಯಮೆಂದಾ ಸುರಂಗೂ
ರ್ಜಿತಮಂತ್ರಂ ದಾನಸಂತಾನಮನೊದವಿಸಿ ತನ್ನಂತೆ ಸನ್ಮಾನವಿಭ್ರಾ
ಜಿತಮಂ ಕಲ್ಪಾವನೀಜಂ ಕುಡದೆನಿಸಿದನಾ ದೇವನಿಂ ರಾಜರಾಜಂ ೨೫

ವ॥ ಅಂತಾತನಂ ಸಂತಸಂಬಡಿಸಿ ಬೀೞ್ಕೊಳಿಸಿ ಕಳಿಪಿ ದಕ್ಷಿಣದಿಶಾವಳಿಯಂ ವಳಯದಂತೆ ದಕ್ಷಿಣಭುಜದಂಡಕ್ಕಳವಟ್ಟುದೆಂದತಿಪ್ರಮೋದಕ್ಕೆ ಪಕ್ಕಾಗಿರೆ

ಮ॥ ಧರಣೀಶಂ ವಿಜಯಾರ್ಧಮಂ ಪುಗದ ಮುನ್ನಂ ಕಾಣೆ ಕೆಯ್ಕೊಳ್ವನಾ
ದರದಿಂ ಕಾಣ್ಬುದೆ ಮಂತ್ರಮೆಂಬ ಬಗೆಯಿಂದಂ ರಕ್ತೆ ರಕ್ತೋದೆಯೆಂ
ಬೆರಡುಂ ಸಿಂಧುವ ಮಧ್ಯದೇಶದ ಮಹೀಶರ್ ಕೋಶಯೋಷಾಮದ
ದ್ವಿರದಾಶ್ವಂಗಳನಿತ್ತು ಬಂದೆಱಗಿದರ್ ಚಕ್ರೇಶಪಾದಾಬ್ಜದೊಳ್ ೨೬

ಕಂ॥ ಅವಿಲಂಘ್ಯಂ ಚಕ್ರಾಧಿಪ
ಭವದಾಜ್ಞೆಯದರ್ಕೆ ಬೆಸಸು ವಿಜಯಾರ್ಧಮನಂ
ತವಯವದೆ ದಾಂಟಿ ಕಂಟಿಸು
ವವನೀಪಾಳರನೆ ಲೀಲೆಯಿಂದೆಱಗಿಸಮೇ ೨೭

ವ॥ ಎಂದು ಬೆಸನಂ ಬೇಡಿದವರಂ ಬೀಡಿಂಗೆ ಕಳಿಪಿ ಬೞಿಯಂ ಬಳಾಧ್ಯಕ್ಷನಂ ಬೞಿಯಟ್ಟಿ ಬರಿಸಿ ಕೃತಮಾಲಂ ಪೇೞ್ದುದುಮಂ ನೆಱೆಯಱಿಪಿ

ಕಂ॥ ಗಿರಿಗುಹೆಯ ಪಡಿಗಳಂ ದಂ
ಡರತ್ನದಿಂ ತೆಱೆದು ಬೆಂಕೆಯಾಱುವಿನಂ ಚೆ
ಚ್ಚರಮಾಮ್ಲೇಚ್ಛಮಹೀಪಾ
ಳರ ತೇಜಮನಾಱಿಸೆಂದು ನಿಯಮಮನಿತ್ತಂ ೨೮

ನಿಯಮಿಸೆ ವರೂಥಿನೀಪತಿ
ಹಯರತ್ನಮನೇಱಿದಂಡರತ್ನಮನಹಿತ
ಕ್ಷಯಕರಮಂ ಧರಿಯಿಸಿ ಕತಿ
ಪಯ ಹಯಬಳಪರಿವೃತಂ ಜಯಶ್ರೀನಿಳಯಂ ೨೯

ತಳರ್ದು ನದೀವೇದಿಯನಂ
ತೊಳವೊಕ್ಕಗತಟದ ವೇದಿಕೆಯನೆಯ್ದಿ ಸಮು
ಜ್ವಳಸೋಪಾನದೆ ರಜತಾ
ಚಳಜಗತೀತಳಮನೇಱಿ ಭುಜಬಳಕಳಿತಂ ೩೦

ಪಡೆಯಂ ರಕ್ತಾನದಿಯೊ
ಳ್ಪುಡುಗದೆ ಸೋಪಾನಮಾರ್ಗದಿಂ ಮ್ಲೇಚ್ಛನೃಪರ್
ನಡನಡನಡುಗುವಿನಂ ಮು
ನ್ನಡೆಯಿಸಿ ಪೂರ್ವಾಭಿಮುಖದೆ ದೋರ್ವಳದೃಪ್ತಂ ೩೧

ವ॥ ಅಂತು ಮೂಡಣಮ್ಲೇಚ್ಛಖಂಡಕ್ಕೆ ದಂಡರತ್ನದಿಂದೊಗೆದ ಬೆಂಕೆ ಸೋಂಕದಂತು ಪಡೆಯಂ ಮುನ್ನಮೆ ನಡೆಯಿಸಿ ಗುಹೋತ್ಸಂಗಮನುತ್ಸಾಹದಿಂಮೊರ್ವನೆ ಪರಾಕ್ರಮಸಿಂಹಂ ಪೊರ್ದಿ ತುರಂಗರತ್ನದ ಬೆಂಗೆ ಚಮೂಪತಿರತ್ನಂ ಬಂದು ಪೂರ್ವಾಭಿಮುಖ ವಾಗಿ ಚಕ್ರವರ್ತಿ ಗೆಲ್ಗೆಂದು

ಕಂ॥ ಇಡೆ ವಿಜಯಾರ್ಧಾದ್ರಿಗುಹೆಯ
ಪಡಿಗಳನಾ ದಂಡರತ್ನದಿಂ ದಂಡೇಶಂ
ಬಿಡದೆಱಗುವ ಖೇಚರರೆರ್ದೆ
ಪಡಿದೆಱೆದವೊಲಾಗೆ ತೆಱೆದುವಾಗಳೆ ಪಡಿಗಳ್ ೩೨

ಶ್ರೀವಜ್ರನಾಭಿತೇಜಃ
ಪಾವಕಮಾವರಿಸುವಂತೆ ರಿಪುಹೃದಯಮನೇ

ನಾವರಿಸಿತೊ ತದ್ಗಿರಿಯ ಗು
ಹಾವಿವರಮನಗ್ನಿದಂಡರತ್ನಪ್ರಭವಂ ೩೩

ತೊಡೆ ಕೆಯ್ ಬ್ಯೆಸಿಕೆಯಳವಡೆ
ಮಡದಿನವುಂಕಿದೊಡೆ ಪನ್ನೆರಡುಯೋಜನಮಂ
ಗಡ ಲಂಘಿಸಿ ಹಯರತ್ನಂ
ಪಡೆದುದು ಪವನಂಜಯಾಖ್ಯೆಗನ್ವರ್ಥತೆಯಂ ೩೪

ಮನದನ್ನಮಾಗಿಯುಂ ಮನ
ಮನೆ ಮೀಱು ಜವಾತಿರೇಕದಿಂ ಪತಿಗೊಲವಂ
ಜನಿಯಿಸಿತು ತುರಗಮರ್ಥಿಗೆ
ನೆನೆದರ್ಥದಿನಧಿಕಮಿತ್ತ ದಾನಿಯ ತೆಱದಿಂ ೩೫

ಗಿರಿಗುಹೆಯ ಮುಖದಿನೊಗೆತ
ರ್ಪುರಿ ತಾಗದ ತೆಱದೆ ತುರಗರಥಿನೀಪತಿಯಂ
ಪರಿರಕ್ಷಿಪ ಯಕ್ಷಕುಳಂ
ಹರಿಜವದೊಡನೊಂದಿದಂತೆ ಬೇಗದಿನಾಗಳ್ ೩೬

ಕೊಂಡೊಯ್ದುಖಂಡಶೋಭಾ
ಮಂಡಿತದೊಳ್ ಮ್ಲೇಚ್ಛಖಂಡದೊಳ್ ಬಿಟ್ಟಿರ್ದು
ದ್ದಂಡನಿಜಬಲಮನೆಯ್ದಿಸೆ
ದಂಡೇಶಂ ಕೂಡಿಕೊಂಡು ಸಂಗರಶೌಂಡಂ ೩೭

ವ॥ ಪ್ರದಕ್ಷಿಣಂಗೆಯ್ದಪೂರ್ವಶೋಭಾಕಳಿತಮಪ್ಪ ಪೂರ್ವಮ್ಲೇಚ್ಛಖಂಡಮ ನುಂಡಿಗೆ ಸಾಧ್ಯಂ ಮಾಡಿಯತ್ಯುಚ್ಚವಿಭವಮ್ಲೇಚ್ಛ ಮಹೀಶರನವರವರ ಸಾರವಸ್ತುವಾಹ ನಾದಿಗಳ್ವೆರಸು ಮುಂದಿಟ್ಟೊಡಗೊಂಡು ಮುನ್ನಿನಂತೆ ಸಮುನ್ನತ ತೋರಣದ್ವಾರದಿಂದೊಳಪೊಕ್ಕು ರಕ್ತಾನದೀನಂದನವನವೇದಿಕೆಯ ನಡುವಣಿಂ ಬಂದು ಮಣಿಮಯ ಸೋಪಾನಂಗಳಿಂ ಮನಂ ಗೊಳಿಸುವ ರಜತಾಚಳದ ತಟವೇದಿಕೆಯಂ ಕಳೆದು ಜಗತೀತಳಮನೇಱೆ ನೋೞ್ಪನ್ನೆಗಂ

ಕಂ॥ ಅತುಳ ಮಹಿಭೃದ್ಗುಹಾಂತಃ
ಪ್ರತಾಪಮುಪಶಾಂತಮಾಯ್ತು ರಥಿನೀಶಸಮೂ
ರ್ಜಿತದಂಡಹತಿಗೆ ಮಹಿಭೃ
ತ್ಪ್ರತಾಪಮೀ ತೆಱದೆ ಪೋಕುಮೆಂದಱಿಪುವವೋಲ್ ೩೮

ಉ॥ ಅಂತುಪಶಾಂತಮಾದ ಗುಹೆಯಂ ಪರಿಶೋಧಿಸಿದಂ ತನ್ನನೂನಸೈ
ನ್ಯಂ ತಡವಿಲ್ಲದಂತು ನಡೆವಂತಿರೆ ಮಾಡಿಸಿ ಕಾಪುವೇೞ್ದು ಸಾ
ಮಂತ ಸಮಗ್ರಮಂಡಳಿಕಮಂಡಳಿ ತನ್ನೊಡನೊಪ್ಪಿ ಬರ್ಪಿನಂ
ಕಾಂತಮನೆಯ್ದುವಂ ಶಿಬಿರಮಂ ರಥಿನೀಪತಿ ಚಕ್ರವರ್ತಿಯಾ ೩೯

ಕಂ॥ ಓಲಗದೊಳ್ ಕಂಡು ಮಹೀ
ಪಾಳಕನಂ ವಿನತಮಸ್ತಕಂ ಪತಿ ಕಾರು
ಣ್ಯಾಳೋಕನಸಂಭವಪುಳ
ಕಾಲಂಬಂ ಮ್ಲೇಚ್ಛರಾಜರಂ ಕಾಣಿಸಿದಂ ೪೦

ಶಾ॥ ಧೀರೋದಾತ್ತಚಮೂಪಮೇರುಮಥಿತಂ ಮ್ಲೇಚ್ಛಾವನೀಪಾಳಕ
ಕ್ಷೀರಾಂಭೋನಿಧಿಕೌಸ್ತುಭೋಜ್ವಳಮಣಿ ಶ್ರೀಕನ್ಯಕಾನೀಕಮಂ
ಕಾರುಣ್ಯಂಬಡೆವಂತು ಚಕ್ರಿಚರಣಾಂಭೋಜಕ್ಕೆ ಮಾಣಿಕ್ಯಕೋ
ಟೀರದ್ಯೋತಿಯಿನರ್ಘ್ಯಮೆತ್ತಿ ಮೊದಲೊಳ್ ತಾನಿತ್ತನಾನಂದದಿಂ ೪೧

ಕಂ॥ ಸೇವಾನಭಿಜ್ಞರಂ ಮ್ಲೇ
ಚ್ಛಾವನಿಪರನುಚಿತಮಂತ್ರದಿಂ ಚಕ್ರಿಪದಾ
ಬ್ಜಾವನತರೆನಿಸಿ ಮೆಱೆದಂ
ಸೇವಾಚಾತುರ್ಯ್ಯಮಂ ಚಮೂಪತಿರತ್ನಂ ೪೨

ವ॥ ಅಂತವರನಾಜ್ಞಾವಿಧೇಯರಂ ಮಾಡಿ ತದನಂತರಂ

ಕಂ॥ ಅವರವರ ದೇಶವಂಶವಿ
ಭವವಿಕ್ರಮನಾಮಚಿಹ್ನಮಂ ಚಕ್ರಿಗೆ ಬಿ
ನ್ನವಿಸಿ ಪಸಾಯಮನವರ್ಗು
ತ್ಸವಮಪ್ಪವೊಲೀಸಿ ಬೀೞ್ಕೊಳಿಸಿ ಭೂಭುಜರಂ ೪೩

ವ॥ ತಂತಮ್ಮ ನೆಲೆಗೆ ಪೋಪಂತು ಚಕ್ರವರ್ತಿಯಿಂ ನಿಯಮಮನೀಸಿ ಸಂತಸಂಬಡಿಸಿ ಕಳಿಪಿ ಬೞಿಯಂ ದಕ್ಷಿಣತ್ರಿಖಂಡಮಂಡಳವಿಜಯಯಾತ್ರೆಯಂ ಕಟಕಕ್ಕಱಿ ಪಲೆಂದು ವಿಜಯಪ್ರಯಾಣಭೇರಿಯಂ ಕ್ಷೋಣಿಪತಿಯನುಮತಿಯಿಂ ಪೊಯ್ಸಿದಾಗಳ್

ಮ.ಸ್ರ॥ ಪ್ರಳಯಪ್ರಕ್ಷೋಭಿತಾಂಭೋನಿಧಿ ಸಮುದಯಸಂಭೂತ ಗಂಭೀರನಾದಂ
ವಿಳಯಪ್ರಸ್ಥಾನವಿಸ್ತಾರಿತವಿಪುಳತರಾಂಭೋದ ಸಂಘಾತನಾದಂ
ಬಳೆದತ್ತೆಂಬಂದದಿಂದಂ ಕುಳಗಿರಿ ತಳರ್ವಂತುದ್ಧತಾಶಾಗಜೌಘಂ
ಪೆಳಱುತ್ತಿರ್ಪಂತು ಪೊಣ್ಮಿತ್ತಧಿಪತಿವಿಜಯೋತ್ಪಾದಿಭೇರೀನಿನಾದಂ ೪೪

ಕಂ॥ ನಡೆವ ಷಡಂಗಬಲಕ್ಕಿ
ಟ್ಟೆಡೆಯಾಶಾಭಿತ್ತಿಯೆನುತುಮೊಡೆವಂದದೆ ಧೀಂ
ಕಿಡುತೆಣ್ದೆಸೆಗರಿಭಯಮಂ
ಪಡೆದುದು ದಿಗ್ವಿಜಯಭೂರಿಭೇರೀರಾವಂ ೪೫

ಉ॥ ಪೂಜಿಸಿ ಚಕ್ರಮಂ ಶುಭಮುಹೂರ್ತದೊಳುತ್ಕಟದಾನವಾರಿಯಿಂ
ರಾಜಿಸುತಿರ್ಪುದಂ ವಿಜಯಪರ್ವತಮಂ ನಿಜತೇಜದಂತೆ ವಿ
ಭ್ರಾಜಿಯಿಸಾವಗಂ ಬೆಳಗೆ ಮಂಗಳಭೂಷಣರತ್ನಕಾಂತಿಗಳ್
ರಾಜಮನೋಜನೇಱಿ ನಡೆದಂ ಜಯ ಜೀವರವಂ ನೆಗೞ್ವಿನಂ ೪೬

ವ॥ ಅಂತಗಣ್ಯಪುಣ್ಯಮೂರ್ತಿ ಯತಿವರ್ತಿಗಳಂ ನಿಜಪದಪದ್ಮಸಮೀಪವರ್ತಿಗಳಂ ಮಾಡಲೆಂದು ಚಕ್ರವರ್ತಿ ರಾಜನಿಳಯದಿಂ ತಳರ್ವಾಗಳ್

ಚಂ॥ ಕರಿಮಕರಂಗಳಿಂದೆ ಬಡವಾಮುಖಫೇನವಿತಾನದಿಂ ಭಯಂ
ಕರ ಭಟಹಸ್ತಶಸ್ತ್ರರುಚಿವೀಚಿಗಳಿಂ ರಥಭೈತ್ರದಿಂ ಚಮೂ
ವರ ದೃಢವಜ್ರವೇದಿಕೆಯಿನಾಶ್ರಿತಭೂಧರರತ್ನದಿಂದಳಂ
ಕರಿಸಿ ಮನಕ್ಕೆ ಸಂತಸಮನಿತ್ತುದು ಚಕ್ರಿಗೆ ಸೈನ್ಯಸಾಗರಂ ೪೭

ವ॥ ಆ ಸಮಯದೊಳ್

ಕಂ॥ ದಿಕ್ಕರಿಯನೇಱಿದಿಂದ್ರನ
ಪಕ್ಕದೊಳಿಭಪತಿಯನೇಱಿದಗ್ನಿಯವೋಲ್ ತೇ
ಜಕ್ಕೆ ನೆಲೆಯಾಗಿ ಚಕ್ರಿಯ
ಪಕ್ಕದೊಳೆಸೆದಂ ಚಮೂಪನಿಭಮಸ್ತಕದೊಳ್ ೪೮

ವ॥ ಅಂತಪ್ರತಿಮಪ್ರತಿಪಕ್ಷಭೇದಿಪಕ್ಷ ಗಜಾಧಿರೂಢನಧಿರಾಜಂಗೆ ಕೆಯ್ಗಳಂ ಮುಗಿದಿಂತೆಂದಂ

ಶಾ॥ ಹೇಳೋನ್ಮೂಳಿತವೈರಿವರ್ಗವನದುರ್ಗಂ ಖಡ್ಗೆ ನಿರ್ಭಿನ್ನಶುಂ
ಡಾಳಂ ನಿರ್ದಳಿತಾದ್ರಿದುರ್ಗನಿವಹಂ ವಿಧ್ವಸ್ತವಾಜಿವ್ರಜಂ
ಲೀಲೋಲ್ಲಂಘಿತತೋಯದುರ್ಗನಿಕರಂ ನಿರ್ಭೇದಿಸ್ಯಂದನಂ
ಕಾಳೋಗ್ರಂ ವಿಳಸತ್ಪದಾತಿಯಿದು ದಲ್ ಕರ್ಣಾಟಸೈನ್ಯಂ ನೃಪಾ ೪೯

ಚಂ॥ ಪ್ರಳಯಘನಪ್ರಭೀಷಣವಿಷಾಣವಿನಿರ್ಮಿತ ಚಾಪದಂಡಮಂ
ಡಳಿಶರವರ್ಷಮೇಘಸಮಯಂ ವರವೀರವಧೂಸುವರ್ಣಕುಂ
ಡಳಮಿದು ಮಂಡಳಾಗ್ರಪರಿಶೋಭಿ ವರಾಟಕಪಕ್ಷರಕ್ಷಣಾ
ಕಳಿತತುರಂಗಮಂ ನೃಪ ವರಾಟಬಳಂ ವಿಹತಾನ್ಯದೋರ್ವಳಂ ೫೦

ಮ॥ ತುರಗವ್ಯೂಹಗಜಂ ಗಜವ್ರಜಮೃಗೇಂದ್ರಂ ಸ್ಯಂದನೇಭದ್ವಿಷ
ಚ್ಛರಭಂ ವೀರಪದಾತಿಯೂಥಶರಭೌಘೋದ್ದಂಡಭೇರುಂಡಮು
ದ್ಧುರಖಡ್ಗಿಂ ಧೃತಶೀರ್ಷಕಂ ವಿಧೃತ ನಾನಾಚರ್ಮವರ್ಮಂ ನೃಪೇ
ಶ್ವರ ನೋಡಿಂತಿದು ಸೈನ್ಯಮನ್ಯಭಯಕೃನ್ಮದ್ರಾವಿಳಂ ದ್ರಾವಿಳಂ ೫೧

ಮ.ಸ್ರ॥ ನುತಕಸ್ತೂರೀ ವಿಳಾಸೋಚಿತ ತಿಳಕಲಲಾಟಂ ನಿಶಾತಾಸಿಧಾರಾ
ಹತ ವಿದ್ವಿಡ್ಮಾಂಸಸಂತರ್ಪಿತ ನಿಖಿಳನಿಶಾಟಂ ದೃಢಾಬದ್ಧಕೂರ್ಚಾ
ಯತಜೂಟಂ ವೀರಘಂಟಾರುತಿ ವಿದಳಿತ ವಿದ್ವಿಷ್ಟಚೇತಃಕವಾಟಂ
ಕ್ಷಿತಿಪಾಳೋತ್ತಂಸಸಂಶೋಭಿಪ ಬಳಮಿದು ಲಾಟಂ ದ್ವಿಷತ್ಕಾಳಕೂಟಂ ೫೨

ಪ್ರತಿಪಕ್ಷಕ್ಷೋಣಿಪಾಳಪ್ರಕರ ಹೃದಯಶೂಲೋಪಮ ಸ್ಥೂಳ ಶಾತಾ
ಯತಕುಂತನ್ಯಸ್ತಹಸ್ತಂ ವಿಚಕಿಳ ವಿಳಸನ್ನೀಳಮೌಳಿ ಪ್ರಶಸ್ತಂ
ಚತುರಸ್ತ್ರೀತುಂಗಪೀನಸ್ತನ ಮಳಯರುಹಾ ಲಿಪ್ತಕಾಯಂ ಸ್ವಕೀಯಂ
ಕೃತಭಾಸ್ವಚ್ಚಕ್ರಭೂಷಾರುಚಿಭರಿತ ದಿಶಾರಂಧ್ರಮೀ ಸೈನ್ಯಮಾಂಧ್ರಂ ೫೩

ವ॥ ಅಂತನೇಕ ದೇಶಾಧೀಶ ಪೃಥುರಥಿನೀಪ್ರತಾನಮಂ ಭೂಷಾವೇಷಸನ್ನಾಹ ವಾಹನಾದಿ ವಿಶೇಷದಿಂ ವಿಶೇಷಿಸಿಯಶೇಷವಸುಧಾವಲ್ಲಭಂಗೆ ಬೇಱೆವೇಱೆ ತೋಱುತ್ತುಂ

ಮ॥ ವನಭೂಜಂ ಪೃಥುಸೈನ್ಯಪಾದಹತಿಯಿಂ ನುರ್ಗಕ್ಕುಮೆಂದಿಂತುಪಾ
ಯನಮಂ ಮುನ್ನಮೆ ಚಕ್ರಿಗಟ್ಟೆ ವಿಜಯಾರ್ಧೋರ್ವೀಧರಂ ಸಾರವ
ಸ್ತುನಿಕಾಯಂಗಳನಟ್ಟಿದಂತೆ ಘನಸಾರೋದಾರ ಕಸ್ತೂರಿಕಾ
ವನಜಾಮೋದಮನಾದಮೋಲಗಿಸಿತಂದೆಯ್ತಂದು ಮಂದಾನಿಳಂ ೫೪

ವ॥ ಅಂತಲಂಪನೀವ ಕಂಪುಮಂ ತಣ್ಪುಮಂ ತೆರಳ್ಚಿ ಪಣ್ಣನೆ ಬಂದ ತಣ್ಣೆಲರ ಶೀಟದಿಂ ನಿದಾಘದಾಹಕ್ಕಗಿದು ವಿಗತ ಕಂಚುಕಮಾಗಿರ್ದುದಂ ರೋಮಾಂಚಕಂಚುಕಿತ ಗಾತ್ರಮಂ ಮಾಡಿ ನಾಡೆಯುಂ ಪ್ರಮೋದಮಂ ಪಡೆದು ನಡೆದು ರಜತಾಚಳದ ಜಗತೀತಳಮನೇಱೆ

ಉ॥ ಸಾರಮಣಿಪ್ರಸಾನುವಿಜಯಾರ್ಧಮಹೀಧರಗೋಮಿನೀಮುಖಾ
ಕಾರಮನತ್ಯುದಾರಮನಮೇಯಜಯಪ್ರಮದಾಸಮಾಗಮ
ದ್ವಾರಮನುದ್ಘ ತೋರಣಮಣಿಪ್ರಕರದ್ಯುತಿಪೂರಮಂ ಗುಹಾ
ದ್ವಾರಮನೆಯ್ದಿದತ್ತು ಪಡೆ ಲೋಚನಚಾರುಸುಖಾವತಾರಮಂ ೫೫

ವ॥ ಅಂತು ಕಾಂತಮಾದ ಗುಹಾದ್ವಾರಮನೆಯ್ದೆವಂದು

ಕಂ॥ ಪಡಿ ತೆಱೆದಿರೆಯುಂ ಗುಹೆಯಂ
ಪಡೆ ಕಟ್ಟಲೆಗಗಿದು ಪುಗದೆ ನಿಂದಿರೆ ಕಂಡಾ
ಗಡೆ ರಥಿನೀಪತಿ ತಮಮಂ
ಕಿಡಿಸುವುಪಾಯಮನೆ ಕುಡೆ ಪುರೋಹಿತರತ್ನಂ ೫೬

ಮಣಿಯಿಂದೆ ಸೂರ್ಯನಂ ಕಾ
ಕಿಣಿಯಿಂ ಚಂದ್ರಮನನಾ ಗುಹೆಯ ಭಿತ್ತಿಯೊಳೀ
ಕ್ಷಣ ರುಚಿರಮೆನೆ ಬರೆದನಾ
ಕ್ಷಣದೊಳೆ ಕಣ್ಬಡೆದ ತೆಱದೆ ಪಡೆ ನಡೆವಿನೆಗಂ ೫೭

ವ॥ ಅಂತುಮಲ್ಲದೆ

ಕಂ॥ ರವಿಶಶಿಗಳ್ ನಿಜತೇಜ
ಕ್ಕವಕಾಶಂ ಗುಡದ ಗುಹೆಯ ಕಟ್ಟಲೆಯಂ ತೂ
ಳ್ದುವ ಭರದಿಂ ಮಣಿಕಾಕಿಣಿ
ಯ ವಶಕೆ ಸಂದಂತೆ ಬರೆಯೆ ತೂಳ್ದಿದರದಱೊಳ್ ೫೮

ಬರೆದ ಶಶಿರವಿಗಳಿಂ ಭಾ
ಸುರತೇಜಶ್ಚಕ್ರ ಚಕ್ರರತ್ನದ್ಯುತಿಯಿಂ
ಪರೆಯೆ ತಮಂ ರಕ್ತಾನದಿ
ಯೆರಡುಂ ತಡಿವಿಡಿದು ಜೀಡು ನಡೆದುದು ಪದೆಪಿಂ ೫೯

ವ॥ ಅಂತು ಚಮೂಪತಿಯ ನಿಯಮದಿಂ ಕೆಲವು ಪಯಣಂಗಳಂ ನಡೆದು ತಮ್ಸಗುಹಾಮಧ್ಯದಿರ್ದಸೆಯ ಚೆಲ್ವನೊಳಕೊಂಡ ಕುಂಡಂಗಳಿಂ ಪುಟ್ಟಿ ಬಂದ ರಕ್ತಸಿಂಧುವಿನೊಳ್ ಸಂಗತಂಗಳುಮುತ್ತರಂಗಳುಮಪ್ಪ ನಿಮಗ್ನೋನ್ಮಗ್ನಾಪಗೆಗಳ್ ಪಗೆಗಳಂತೆ ಗಮನವಿಘ್ನಮಂ ಮಾಡಿಯಡ್ಡಂಬರೆ ಪಡೆ ನಡೆಯದೆ ನಿಲ್ವುದುಂ ಕಂಡು ದಂಡಾಧಿಪನವಱ ತಡಿಗಳೊಳೆ ಬೀಡಂ ಬಿಡಿಸಿ

ಕಂ॥ ಪ್ರವಿಮಳವಾಹಿನಿ ಪುಣ್ಯ
ಪ್ರವಾಹದಂತೊಂದು ನೆಗೆಪುವುದು ಮೇಗಣ್ಗೆ
ಬ್ಬುವುದು ತಳಕೊಂದು ಪಾಪ
ಪ್ರವಾಹದಂತುನ್ನಿಮಗ್ನೆ ಮಗ್ನೆ ವಿಚಿತ್ರಂ ೬೦

ವ॥ ಎಂದು ಚಕ್ರಧರಂಗಾ ನದಿಗಳ ವೈಷಮ್ಯಮನಗ್ರಾಮ್ಯಮಾಗೆ ಬಿನ್ನವಿಸೆ ಸರಿತ್ಸಮುತ್ತರಣೋಪಾಯದಲ್ಲಿ ತಕ್ಷಕರತ್ನಮೆ ದಕ್ಷನೆಂದು ಬರಿಸಿ ವಸುಧೇಶಂ ಬೆಸಸೆ

ಕಂ॥ ಪದನಱಿದು ಪೇೞೆ ಪತಿಸೇ
ವ್ಯ ದಿವ್ಯಶಕ್ತಿಪ್ರಭಾವದಿಂದಂ ಪೆಂಪಿಂ
ಪುದಿದಿರ್ದ ಮಾನುಷಾರ
ಣ್ಯದ ತರುಗಳನಿರದೆ ತರಿಸಿ ತಕ್ಷಕರತ್ನಂ ೬೧

ಗಗನಮನಳ್ಳಿಱುವಂತಿರೆ
ಮಿಗೆ ಬಳೆದ ಮಹೀರುಹಂಗಳಂ ನಡೆ ತತ್ಸಿಂ
ಧುಗಳೊಳ್ ಪಾತಾಳಮನೆ
ಯ್ದಿಗಡ್ಡಱಿಪ ಮುದದಿಂದಮೆರಡಱ ಪವಣಂ ೬೨

ವ॥ ಅಂತಿಱುಂಬಿನಡವಿಯ ನಿಡಿಯ ಮರಂಗಳಿನಡವಿಯುಂ ಪಡೆಗೆ ನಡೆಯಲಳವಡಿಕೆಯಪ್ಪಂತೊಡರಿಸೆ

ಕಂ॥ ಸೇತುವೊಲಳವಡೆಯಡವಿ ಮ
ಹೀತಳಪತಿ ವಿತತ ಕರಿತುರಂಗಮ ರಥ ಪಾ
ದಾತಿಬಳಂಬೆರಸು ಸಮೋ
ರ್ವೀತಳದೊಳ್ ನಡೆದು ಪೋಪ ತೆಱದಿಂ ಪೋದಂ ೬೩

ವ॥ ಅಂತು ವಿಷಮಸರಿತ್ತುಗಳನಶ್ರಮದಿನುತ್ತರಿಸಿ ಕತಿಪಯಪ್ರಯಾಣಂಗಳಂ ನಡೆದು

ಕಂ॥ ಪೋಗಿ ಜಳದೊಳಗೆ ಮುೞುಗಿ
ದರ್ಾಗಳೆ ಪೊಱಮಡುವ ಮಾೞ್ಕೆಯಿಂದೆ ಗುಹಾಂತ
ರ್ಭಾಗದೆ ಪೊಱಮಟ್ಟು ಮನೋ
ರಾಗಮನೆಯ್ದಿದುದು ಚಕ್ರವರ್ತಿಯ ಕಟಕಂ ೬೪

ಸಂತಮಸಗೃಹ ಗುಹಾಂತರ
ದಿಂ ತೊಲಗಿದ ಸೇನೆಯ ಪ್ರಸನ್ನೋಗ್ರತರ

ಸ್ವಾಂತನೃಪಾಳಕನೋಲಗ
ದಿಂ ತೊಲಗಿದ ಸೇವಕಂಬೊಲಾಂತುದು ಸುಖಮಂ ೬೫

ವ॥ ಅಂತು ಚಮೂಪಾಳಹೇಳೋತ್ಪಾಟಿತವಜ್ರಕವಾಟಮಹಾಗುಹಾದ್ವಾರದಿಂ ಪೊರಮಟ್ಟು ಪುಟ್ಟಿದ ಮನಃಪ್ರಸರದಿಂ ಪಸರಂಬಡೆದು ನಡೆವಾಗಳ್

ಕಂ॥ ಒಸರ್ವ ಶಶಿಕಾಂತಮಣಿಯಿಂ
ವಿಸರಮನಾಂತಮಳಕಮಳಪರಿಮಳಮಂ ಪೊ
ತ್ತೆಸಗುವ ಸಮೀರನಿಂದಾ
ಱೆಸಿದುದು ನೃಪವಿಪುಳಕಟಕಮಂ ಗಿರಿಕಟಕಂ ೬೬

ವ॥ ಅಂತು ತಣ್ಪುಮಂ ಕಂಪುಮಂ ತಳ್ಕಯ್ಸಿ ಮೆಲ್ಲನೆ ಬಂದಲೆವೆಲರಲಸಗಮನೆ ತನುಸೋಂಕಿಂ ಪುಳಕಾಂಕುರಮಂ ಪುಟ್ಟಿಸುವಂತು ಪುಳಕಾಂಕುರಮಂ ಪುಟ್ಟಿಸೆ ಮುಂಪುಟ್ಟಿದ ಪರಿತಾಪಂ ಪೋಗೆ ಪೋಗಿ ನವಪಲ್ಲವ ಸುಕುಮಾರಕೋರಕ ಸುರಭಿಕುಸುಮ ಸರಸಫಲ ತರುಷಂಡಮಂಡಿತಮಪ್ಪ ರಮ್ಯಪ್ರದೇಶದೊಳ್

ಮ॥ ಇದು ಪೂರ್ವಕ್ರಮಮೆನ್ನದಾವೆಡೆಯದಾರ್ಗಿಂಬಾದುದಾ ಮಾರ್ಗದಿಂ
ನದಿಯಿರ್ಮೆಯ್ಯುರು ವಜ್ರವೇದಿವಿಡಿದೆತ್ತೆತ್ತಂ ಬಿಡುತ್ತುಂ ಮನೋ
ಮುದದಿಂದಂ ಬರೆ ಸಾರಭೂರುಹವನಶ್ರೀ ಮಧ್ಯಮಮ್ಲೇಚ್ಛಖಂ
ಡದ ಮಧ್ಯಾವನಿಭಾಗದೊಳ್ ಬಿಡಿಸಿದಂ ಬೀಡಂ ಚಮೂವಲ್ಲಭಂ ೬೭

ವ॥ ಅಂತು ನಾಡೆಯುಂ ಚೆಲ್ವುವಡೆಯೆ ಬೀಡಂ ಬಿಡಿಸಿ

ಕಂ॥ ಉರ್ವೀಪತಿ ಬೆಸಸುತ್ತಿರೆ
ಪೂರ್ವದಿಶಾಮ್ಲೇಚ್ಛಖಂಡಮಂ ದಂಡೇಶಂ
ದುರ್ವಾರಂ ಸಾಧಿಸಿದಂ
ಪೂರ್ವಕ್ರಮದಿಂದ ಖರ್ವದೋರ್ವಳ ಗರ್ವಂ ೬೮

ವ॥ ಅಂತಾ ಪೂರ್ವಮ್ಲೇಚ್ಛಖಂಡಾಧಿಪತಿಗಳಂ ದಂಡಾಧಿಪತಿ ಗಳಿತಗರ್ವರಂ ಮಾಡಿಯಪೂರ್ವೋಪಾಯನಂಬೆರಸು ಸಾರ್ವಭೌಮನಂ ಕಾಣಿಸಿ

ಕಂ॥ ಸಕಳನೃಪವಿತತಿ ನಾನಾ
ಮಕುಟೋಜ್ವಳಮಣಿಮರೀಚಿ ಸಂಚಯದಿಂಮೇ
ಚಕಿತಂ ಮಾಡಿದುದತಿಭಯ
ಚಕಿತಂ ಬಂದೆಱಗಿ ಚಕ್ರಿಚರಣಾಂಬುಜಮಂ ೬೯

ವ॥ ಅಂತಾ ಮ್ಲೇಚ್ಛರಾಜರಂ ರಾಜರಾಜನ ಪದಪಯೋಜಕ್ಕೆಱಗಿಸಿ ಮತ್ತಂ ಮಧ್ಯಮಮ್ಲೇಚ್ಛ ಖಂಡವರ್ತಿಗಳುಮಪ್ಪ ಚಿಲಾತಾವರ್ತರಂ ಚಮೂನಾಥಂ ನಿಜಪರಾಕ್ರಮ ದಿನಾಕ್ರಮಿಸಲೆಂದು ಚಕ್ರಾಧೀಶನಾದೇಶದಿಂ ವಿಜಯಪ್ರಯಾಣಭೇರಿಯಂ ಪೊಯ್ಸಿ

ಕಂ॥ ಶ್ರುತಿಯಂ ಭೇರೀರವಮ
ಶ್ರುತಪೂರ್ವಂ ತಾಗೆ ಜಾನಪದಜನಮನಿತುಂ
ಪ್ರತಿಹತಮಾದತ್ತಪ್ರತಿ
ಹತತೇಜಂ ಪತಿಯದೆಂತು ವಿಸ್ಮಿತಚಿತ್ತಂ ೭೦

ವ॥ ಗುಜಿಗುಜಿಗೊಳುತ್ತುಮೋರೋರ್ವರೊಳ್ ನುಡಿಯುತ್ತುಂ ಕಿವಿಯುಂ ತಲೆಯುಮಾಡುತ್ತುಮಿರ್ಪುದುಮಾ ವಾರ್ತೆಯಂ ಚಿಲಾತಾವರ್ತರ್ ಕರ್ಣಪರಂಪರೆಯಿಂ ಕೇಳ್ದು ಮದಾಂಧ ಸಿಂಧುರಕ್ಕೆ ಪಿಡಿಯಂ ತೋಱಿದಂತೆ ಕಡುಮುಳಿದು ಕಿಡಿಕಿಡಿವೋಗುತ್ತು ಮಿಂತೆಂದರ್

ಕಂ॥ ತಮದಿಂದೆ ನೋಡಿದರ ಕ
ಣ್ಣೆಮೆ ಸೀವುದು ಮದ್ಧರಿತ್ರಿಯಂ ಪೊಕ್ಕೊಡೆ ತೇ
ಜಮದಿರದೆ ಸುಡುಗುಮೆಂಬುದ
ನಮಾತ್ಯರಾ ಚಕ್ರಿಗಱಿದುಮಱಿಪರೊ ನಿರುತಂ ೭೧

ಅವರಱಿಪದೊಡಂ ಮದ್ಬಾ
ಣವಿತತಿಯಿನ್ನಱಿಪಿದಪ್ಪುದೆನುತುಂ ದರ್ಪ
ಪ್ರವರಚಿಲಾತಾವರ್ತರ್
ಬವರಕ್ಕುದ್ಯುಕ್ತರಾದರಪನಯಯುಕ್ತರ್ ೭೨

ವ॥ ಅದಂ ಕಂಡವರ ಮಂತ್ರಿಮಂಡಳಿಯೊಳೊರ್ವಂ ಮಾರ್ಕೊಂಡಿಂತೆಂದಂ

ಕಂ॥ ಬಲ್ಲಿದನೊಳೆಡಱುವುದು ನಯ
ಮಲ್ಲದಿದಂ ಮೀಱಿ ಯುದ್ಧಮಂ ಮಾಱ್ಪೊಡೆತ
ಳ್ವಿಲ್ಲದೆ ಬಲಿವುದು ದುರ್ಗಮ
ನಲ್ಲಿರ್ದೊಡಜೇಯಮನ್ಯರಿಂ ನೃಪಸೈನ್ಯಂ ೭೩

ವ॥ ಎನೆ ಮತ್ತೊರ್ವನಿಂತೆಂದಂ

ಮ॥ ಒಡೆದಂ ವಜ್ರಕವಾಟಮಂ ಗುಹೆಯ ಸಿಂಧುದ್ವಂದ್ವಮಂ ದಾಂಟಲಾ
ವೆಡೆಯಿಂ ಬಾರವೆನಿಪ್ಪುವಂ ನಿಮಿಷದಿಂದಂ ದಾಂಟಿದಂ ಬೆಟ್ಟದಿ
ಟ್ಟೆಡೆಯೊಳ್ ಪುಟ್ಟಿದರಣ್ಯದೊಡ್ಡುರಿಯೆ ಸೇನಾಸಂಘಸಂಘಟ್ಟದಿಂ
ನಡೆತಂದಂ ನೃಪನೆಂದೊಡಿಂ ನಮಗೆ ದುರ್ಗಂ ಬಾಱಿಸಲ್ ತೀರ್ಗುಮೇ ೭೪

ವ॥ ಮತ್ತಿಂತೆಂದಂ

ಉ॥ ಬೇಡಿತನೀಯದಾಕ್ರಮಿಸಿ ಚಕ್ರಧರಂಗಿದಿರಾಂಪರಾರ್ ಜಳ
ಕ್ರೀಡೆಯೊಳಟ್ಟಿಪಂ ಜಳನಿಷಣ್ಣನೃಪಾಳಕಜಾಳಮಂ ವನ
ಕ್ರೀಡೆಯೊಳಂಜಿಪಂ ವನನಿಕುಂಜನಿವಾಸಮಹೀಶರಂ ಗಿರಿ
ಕ್ರೀಡೆಯೊಳೊಡ್ಡಿಪಂ ಗಿರಿವರಸ್ಥಿತರಾಜರನಾಜಿನಿಷ್ಠುರಂ ೭೫

ವ॥ ಅದುಕಾರಣದಿಂ

ಚಂ॥ ಗಿರಿಗಹನಾಂಬುದುರ್ಗಮಿರೆಯುಂ ಚತುರಂಗಬಲಂಗಳುಳ್ಳೊಡಂ
ನಿರವಧಿದೇವ ಖೇಚರಸಮಗ್ರಬಲಂ ಬರೆ ಕಾಯ್ದುನಿಂದೆ ನಿ
ತ್ತರಿಸವು ದಿವ್ಯಮಂತ್ರವಿನಿಯೋಗದಿನೀಗಳೆ ನಾಗರಾಜರಂ
ಬರಿಪುದು ದೇವ ದೈವಬಲಮಿಲ್ಲದೆ ಚಕ್ರಿಯನಾವನಾಂಪವಂ ೭೬

ಕಂ॥ ಎನೆ ಮನದೆಗೊಂಡು ನೆನೆದಂ
ದು ನಿಮಿಷದಿಂ ನಾಗರಾಜರೆಟ್ಟಿರೆ ವಿನಯೋ
ಪನತ ನಿಜಮಕುಟಮಣಿಕಾಂ
ತಿ ನೀರದಿಂ ತೊಳೆದರುರಗಪತಿಪದಯುಗಮಂ ೭೭

ವ॥ ಅಂತು ವಿನಯವಿನಮಿತರಾದ ಚಿಲಾತಾವರ್ತರಂ ಪರಾರ್ಥತತ್ಪರರ್ ಪರಮ
ಕಾರುಣ್ಯದಿ ನಗಣ್ಯಪುಣ್ಯಭಾಗಿಗಳಾಗಿಮೆಂದು ಪರಸಿ ಬಟ್ಕಮಿಂತೆಂದರ್

ಕಂ॥ ಪೆಱತೇನೆಮಗೆಱಗಿದ ಶಿರ
ಮೆಱಗಿದೊಡಾವೆಱಗಿದವರೆವಸ್ವರ್ಗದಜೆಂ
ದೆಱಗದಿರಿಮಾವೆ ಬೆದಱಿಪೆ
ವೆಱಗಿಸಲೆಂದುಱದೆ ಮೇಲೆ ವಂದರನೀಗಳ್ ೭೮

ವ॥ ಎಂದು ಮನಂಬೊಯ್ದನಂತರಂ

ಕಂ॥ ಆಕಾಶದಲ್ಲಿ ವಿದ್ಯಾ
ಪ್ರಾಕಾರಮನುರಗನಾಯಕರ್ ವಿರಚಿಸೆ ನಿ
ರ್ವ್ಯಾಕುಳತೆಯಿಂದೆ ಸೈನ್ಯಾ
ನೀಕಂಬೆರಸಿದಱೊಳಿರೆ ಚಿಲಾತಾವರ್ತರ್ ೭೯

ವ॥ ಅದೆಂತಿರ್ದುದೆಂದೊಡೆ

ಕಂ॥ ಪಡೆಗವಱ ಪೆಡೆದಣಿಯಿತೆನೆ
ಮಡುಗಟ್ಟಿದ ವಿಷಮವಿಷಮೆ ಜಳಖಾತಿಕೆ ಕಾ
ಯ್ದುಡುಗದೆ ನಿಂದ ಫಣಿಗಳಿಂ
ಪಡೆದೊಡೆ ಪಡೆದತ್ತು ದುರ್ಗಮತ್ಯುಗ್ರತೆಯಂ ೮೦

ವ॥ ಅಂತು ಮರುನ್ಮಾರ್ಗದೊಳಮಾರ್ಗಮತಿದುರ್ಗಮಮಪ್ಪ ದುರ್ಗಮಂ
ಕೆಯ್ಗೆಯ್ದು ಕಾದಲುದ್ಯೋಗಿಗಳಾಗಿರ್ದುದಂ ದಂಡಾಧಿಪಂ ಕಂಡು ಕಡುಮುಳಿದು

ಕಂ॥ ಸ್ವರ್ಗಕ್ಕೆ ಪೋಪೊಡಿಂತಿದು
ನಿರ್ಗಮಮೆಂಬಂತೆ ದುರ್ಗಮಂ ರಚಿಸಿರ್ಪರ್
ಸ್ವರ್ಗಮನೆ ಕುಡುವೆನಾನಹಿ
ತರ್ಗೆನುತುಂ ನಡೆದು ಮುತ್ತಿದಂ ರಥಿನೀಶಂ ೮೧

ವ॥ ಅಂತು ಪುರಹರಂ ತ್ರಿಪುರಮಂ ಮುತ್ತುವಂತೆ ಸೇನಾಗಣಪತಿ ಮುತ್ತುವುದುಂ

ಮ॥ ಸಿಡಿಲಂ ಜೇವೊಡೆ ಕಾರ್ಮುಗಿಲ್ಗಳನುದಂಚತ್ಕಾರ್ಮುಕಂ ಮಿಂಚನು
ಗ್ಗಡಮಪ್ಪಸ್ತ್ರಮರೀಚಿ ಪೋಲೆ ನವಿಲಂ ನೃತ್ಯತ್ಕಬಂಧವ್ರಜಂ
ಕಡುಪಿಂದಂ ಪ್ರಳಯಾಭ್ರದಂತಿರೆ ಚಿಲಾತಾವರ್ತರರ್ಕಾಂಶುವೋಲ್
ಕಿಡುವನ್ನಂ ನೃಪಸೈನ್ಯಮಾರ್ದು ಶರವರ್ಷವ್ರಾತಮಂ ಬೀಱೆದರ್ ೮೨

ವ॥ ಅದಲ್ಲದೆಯುಂ

ಕಂ॥ ಸಿಡಿಲುಂ ಮಿಂಚುಂ ಮೊಬಗುಂ
ಕಡುಗಾಳಿಯುಮಿಂದ್ರಚಾಪಮುಂ ಭಯಮಮಂ ತಾ
ನೆಡೆವಱಿಯದೀಗುಮೆನೆ ಮೞೆ
ಯೆಡೆವಱಿಯದೆ ಕಱೆದು ಭಯಮನೀವುದು ಪಿರಿದೇ ೮೩

ವ॥ ಅಂತು ಸೇನೆ ನಾಡೆಯುಂ ಮೊಗಸೇಡುಗೊಳ್ವಂತೆ ಕೊಳ್ವ ಮೞೆಯುಮಂ
ಪೊಡೆವ ಸಿಡಿಲುಮಂ ದಂಡಾಧಿಪಂ ಕಂಡು

ಮ॥ ಒಡೆವೆಂ ಭೂಧರದುರ್ಗಮಂ ಕುಡಿವೆನಂಭೋದುರ್ಗಮಂ ಬೇಗದಿಂ
ಸುಡುವೆಂ ಕಾನನದುರ್ಗಮಂ ಸಲೆ ಚಿಲಾತಾವರ್ತರಂ ಲಾಂತಮಂ
ಪಿಡಿದರ್ಪಂತಿರೆ ಮಾೞ್ಪೆನಾಂ ಮುಳಿಯೆ ದುರ್ಗಂ ದುರ್ಗಮಾಗಿರ್ಕುಮ
ಪ್ಪೊಡೆ ಭೂಪರ್ಗಡ ಭೂಪರೆಂದೆನಿಪೊಡಿನ್ನೆಲ್ಲಿತ್ತೊ ಮತ್ಪೌರುಷಂ ೮೪

ವ॥ ಎಂದು ಮುಳಿಸಂ ಮೊಗಕ್ಕೆ ತಂದು

ಮ॥ ಅಡಿಯೊಳ್ ಪಾಸಿದ ಚರ್ಮರತ್ನಮದಱಿಂ ಮೇಲಾತಪತ್ರಂ ಬೆಡಂ
ಗಿಡಿದೊಪ್ಪುತ್ತಿರೆ ಧಾತ್ರಿಯಂ ಗಗನಮಂ ಗಂಟಿಕ್ಕಿದಂತಲ್ಲಿ ಪೆ
ರ್ಪಡೆಯಿರ್ದತ್ತು ಸಿಡಿಲ್ಗೆ ಕೊಳ್ವ ಮೞೆಗಾ ಮಿಂಚಿಂಗೆ ತಾನಳ್ಕಿದಾರ್
ಪಡೆವರ್ ಬಲ್ಲಿದರಪ್ಪರಲ್ಲಿ ಭಯಮಂ ತಮ್ಮೊಂದು ಸಾಮರ್ಥ್ಯದಿಂ ೮೫

ಕಂ॥ ವಿದ್ಯಾನಿರ್ಮಿತಮಂ ಪರ
ವಿದ್ಯಾಚ್ಛೇದನ ಸಮಗ್ರಸಾಮರ್ಥ್ಯಯುತಂ
ಚೋದ್ಯಮರಿಗೊದವುವಿನಮನ
ವದ್ಯಯಶಂ ದುರ್ಗದುಗ್ರತೆಯನಳಱೆಸಿದಂ ೮೬

ಚಂ॥ ಜಳಧರಮದ್ರಿಯಂ ಮುಸುಱೆ ಗರ್ಜಿಸುತುಂ ಸುರಿವಂಬುವರ್ಷದಿಂ
ಚಳಿಯಿಸಲಾಱದಗ್ಗಳಿಪ ಲಜ್ಜೆಗೆ ಬೆಳ್ಮೊಗಮಪ್ಪ ಮಾೞ್ಕೆಯಿಂ
ದಳವಿಗಳುಂಬಮಪ್ಪ ಶರವರ್ಷದೆ ಧೀರಚಮೂಪರತ್ನಮಂ
ಚಳಿಯಿಸಲಾಱದೇಱೆ ಮೊಗದೊಳ್ಮಿಗೆ ಬೆಳ್ಪೊಳಸೋರ್ದರುದ್ಧತರ್ ೮೭

ವ॥ ಅಂತು ಚಿಲಾತಾವರ್ತರುಂ ನಾಗರಾಜರುಂ ನಿರ್ಬಂಧದಿಂ ಸರ್ವಶಕ್ತಿಯಿಂ
ಮಾೞ್ಪ ವಿಗುರ್ವಣೆಗಳಂ ಗಣೆಯಿಸದೆ ಪ್ರತಿವಿಧಾನಮಂತ್ರವಿಧಾನಮುಂ ಬೆರೆಸಿ

ಸಾಮಾನ್ಯಾಸ್ತ್ರದಿಂ ಕಾದುತ್ತುಂ ಮಂತ್ರಾಸ್ತ್ರದಿಂದಲ್ಲದೆ ಗೆಲಲ್ಬಾರದೆಂದು ಬವರಮನವಳಿಂ ಮಾಱ್ಪುದಂ ಕಂಡು

ಕಂ॥ ರವಿರಥದಂತಾಕಾಶದೊ
ಳವಯವದಿಂ ಪರಿವ ರಥಮುಮಂ ಗಿಡುಗಮುಮಂ
ಪ್ರವಿಪುಳ ಮಂತ್ರಯುತಂ ಸ್ಥಪ
ತಿ ವಿರಚಿಸಿದನೊದವೆ ಬಲ್ಪು ರಥಿನೀಪತಿಯೊಳ್ ೮೮

ವ॥ ಅಂತಪ್ರತಿಮಪ್ರತಾಪಕ್ಕಗಣ್ಯಪುಣ್ಯಂ ಸಹಾಯಮಪ್ಪಂತು ಚಮೂಪತಿಗೆ ತಕ್ಷಕರತ್ನಂ ನೆರಮಾಗೆ

ಮ॥ ಉರಗಾಸ್ತ್ರಂ ಗರುಡಾಸ್ತ್ರದಿಂ ಪೃಥುಪಯೋದಾಸ್ತ್ರಂ ಸಮೀರಾಸ್ತ್ರದಿಂ
ಕರಿಶಸ್ತ್ರಂ ನಖರಾಯುಧಾಸ್ತ್ರದೆ ತಮೋಸ್ತ್ರಂ ತೀವ್ರದೀಪ್ತ್ಯಸ್ತ್ರದಿಂ
ಗಿರಿಶಸ್ತ್ರಂ ಕುಳಿಶಾಸ್ತ್ರದಿಂ ಜಳಧಿಶಸ್ತ್ರಂ ಬಾಡಬೋಗ್ರಾಸ್ತ್ರದಿಂ
ಪಿರಿದುಂ ಬೆಂಗುಡೆ ನಾಗರಾಜರನೆ ಬೆಂಗೊಂಡಂ ಚಮೂವಲ್ಲಭಂ ೮೯

ಕಂ॥ ಕುಲದೈವದ ಬಲಮೆನಸುಂ
ನೆಲಸಿರೆಯುಂ ಮೊಘೆಗೆ ಚಂದ್ರಬಲಮುಳ್ಳೊಡಮೇಂ
ಸಿಲೆಗಾನದವೋಲಾನರೆ
ಕಲಪದೊಳಪಕರಿನಬಲ ಚಿಲಾತಾವರ್ತರ್ ೯೦

ವ॥ ಅಂತು ಸೇಂದ್ರಾಯ ತಕ್ಷಕಾಯಯೆಂಬಂತೆ ತಮಗೆ ಶರಣ್ಯರಪ್ಪುರಗ ರಾಜರುಮಂ ತಮ್ಮುಮನೊರ್ಮೊದಲೆ ಕಾರ್ಮುಕನಿರ್ಮುಕ್ತನಿಶಿತಶಿಳೀಮುಖಂಗಳಿಂ ಪರಾಙ್ಮುಖರಂ ಮಾಡೆ ಹತಪ್ರತಿಭರಾಗಿ ನಾಗರಾಜರ್ ಪೋಗೆ ವಿಗತಪ್ರಾಣತ್ರಾಣರಾಗಿ ಭಯಕ್ಕೆ ಪಕ್ಕಾಗಿ

ಕಂ॥ ಮಾಡುವ ಸಾಹಸಮಂ ಮಿಗೆ
ಮಾಡಿ ಬೞಿಕ್ಕಂಬು ತಪ್ಪೆಯಭಿವಾದಯೆನಿ
ಪ್ಪೀ ಡೊಂಬಿನವರ್ ಚಕ್ರಿಗೆ ೯೧
ಬೇಡಿತನಿತ್ತೆಱಗಿದರ್ ಚಿಲಾತಾವರ್ತರ್

ವ॥ ಅಂತುದ್ವೃತ್ತರಪ್ಪ ಚಿಲಾತಾವರ್ತರಂ ತೊೞ್ತುವೇಷಕ್ಕೆ ಪಕ್ಕುಮಾಡಿದ ಪೃತನಾವಲ್ಲಭಂಗೆ ಪೃಥ್ವೀವಲ್ಲಭನಂಗಚಿತ್ತಮನಿತ್ತು ರಕ್ತಾಖ್ಯಾನದೀತೀರಂ ಬಿಡಿದು ಬೀಡಂ ನಡಯಿಸೆಂದು ನಿಯಮಿಸಿದಂದದಿಂ ನಡೆಯಿಸಲೊಡನೆ

ಕಂ॥ ರಕ್ತಾಸರಿದಧಿದೇವತೆ
ದಿಕ್ತಟಸಂವ್ಯಾಪ್ತಶೋಣದೀಪ್ತ್ಯನ್ವಿತಮಂ
ರಕ್ತತೆಯಂ ಚಕ್ರಿಗೆ ಸು ೯೨
ವ್ಯಕ್ತಂ ಮಾಱ್ಪಿಂತನರ್ಘ್ಯವಸ್ತುವನಿತ್ತಳ್

ವ॥ ಅವನವನೀರಕ್ಷಕಂ ಸ್ವೀಕರಿಸಿ ದಕ್ಷಿಣದಿಶಾಭಾಗಕ್ಕೆ ಪೋಗವೋಗೆ ನಿಷಧ ಶೈಲದ ಲೀಲೆ ಕಣ್ಬೊಲನಾಗೆ

ಮ॥ ಬಡವಂ ಪೆತ್ತ ಧನಂಬೊಲಿರ್ದ ಮಣಿಯಂ ಬಯ್ತಿಟ್ಟು ರತ್ನಾಕರಂ
ಗಡದೆಂತೊಪ್ಪುಗುಮೆಂದು ಮೂದಲಿಪವೋಲ್ ಪೂರ್ವಾಪರಾಂಭೋಧಿಯಂ
ಬಿಡೆ ಮುಟ್ಟಿರ್ದಖಿಳಾಸೆಗಂ ಕೆದಱು ಮಾಣಿಕ್ಯಾಂಶುವಿಂ ಶ್ರೀಯನೋ
ಳ್ಪಿಡೆವೆತ್ತಿರ್ದುದನೀಶನೆಯ್ದೆ ನಿಷಧಕ್ಷೋಣೀಧ್ರಮಂ ನೋಡಿದಂ ೬೩

ವ॥ ಅಂತು ಪಲತೆಱದ ಪೊಗಟ್ತೆಗೆ ವಿಷಯವಾದ ನಿಷಧಗಿರಿಯಂ ವಿಷಯವಲ್ಲಭಂ ನಿರೀಕ್ಷಿಸುತ್ತುಮಿರೆ ಚಮೂವಲ್ಲಭಂ ಚಕ್ರಿಗಿಂತೆಂದಂ

ಮ॥ ಇದು ನಿನ್ನಾಜ್ಞೆಗೆ ಸೀಮೆಯೆಂದೆನಿಸಿಯುಂ ನಿಸ್ಸೀಮಶೋಭಾಗುಣಾ
ಸ್ಪದಮತ್ಯಾಯತಿವೆತ್ತುಮಿಂತಿದಣಕಂ ಕಾಲತ್ರಯಸ್ಥಾಯಿ ಶ
ಶ್ವದಿನದ್ಯೋತಿಸಮೇತಮಾಗಿಯುಮನಸ್ತದ್ಯೋತಿ ವಿದ್ಯಾಧರೀ
ವದನಾಂಭೋರುಹಸೌರಭಾಕರಸರೋಲಕ್ಷ್ಮೀಧರಂ ಕ್ಷ್ಮಾಧರಂ ೬೪

ವ॥ ಅಂತಾ ಮಹಾಮಹೀಧರ ಮಹಿಮೆಯಂ ಪೊಗಟ್ವಂತೆ ದಿಗ್ವಿಜಯಕ್ಕೆ ಸೀಮೆಯೆಂಬುದಂ ಮುಖಾಂತರದಿಂ ನಿರವಿಸೆ ಚಮೂನಾಥನ ಚಾತುರ್ಯಕ್ಕೆ ವಕ್ರೋಕ್ತಿವಿಶಾರದಂ ಮಹೀರಮಣಂ ಮನದೊಳೆ ಮೆಚ್ಚಿ

ಕಂ॥ ವೇದಿಕೆಯಂ ಜಳನಿಧಿ ಮ
ರ್ಯಾದೆಗೆ ದಾಂಟದವೊಲಾ ನಿಷಧನಗಮಂ ಧಾ
ತ್ರೀದಯಿತಂ ದಾಂಟನೆ ಮೊದ
ಲಾದಂತು ಪೊಸಂತಿಲೆಂದೆ ದಾಂಟನೆ ದಿಟದಿಂ ೬೫

ನಿಷಧಾದ್ರಿನಿತಂಬದೊಳೆ ನಿ
ಮಿಷಮಾತ್ರಂ ದರ್ಭಶಯನದೊಳ್ ಮಂತ್ರಮುಖಂ
ವಿಷಯವಿಭು ನಿಯಮದಿಂದಿರೆ
ನಿಷಧಾಮರನಿರದೆ ಬಂದು ಕಂಡಂ ನೃಪನಂ ೬೬

ವ॥ ಅಂತು ಸೀತಾಸಿಂಧುವಿನ ನಿಷಧಮಹೀಧರದ ಮಧ್ಯವರ್ತಿಗಳಪ್ಪ ದೇವವಿದ್ಯಾಧರಧರಾಧಿನಾಥರನಾಜ್ಞಾಯತ್ತರಂ ಮಾಡಿ ಮಗುೞ್ದುತ್ತರದಿಶಾಭಾಗಕ್ಕೆ ಮಹಾಭಾಗನನುರಾಗದಿಂ ಬರ್ಪಾಗಳ್

ಮ॥ ಪ್ರಗುಣಶ್ರೀಮಣಿರಾಜಯೋಜನಶತೋತ್ಸೇಧಂ ಸುವರ್ಣಾತ್ಮಕಂ
ನೆಗಟ್ವಿಂತಾ ವೃಷಭಾಚಳೋನ್ನತಿಯವಿಚ್ಛಿನ್ನಾದ್ಯಚಕ್ರೀಪ್ರಶ
ಸ್ತಿಗಳಂ ತೆಕ್ಕನೆ ತೀವಿ ಕಾಲಮುಮನಾದ್ಯಚ್ಛಿನ್ನಮೆಂಬೀ ಜನೋ
ಕ್ತಿಗೆ ದೃಷ್ಟಾಂತಮದಾಗೆ ದೃಷ್ಟಿಗೊಲವಂ ತಂದತ್ತು ಧಾತ್ರೀಶನಾ ೬೭

ಚಂ॥ ಅಳವಿನೊಳಾಜ್ಞೆಯೊಳ್ನಯದೊ ಳನ್ವಯೊದೊಳ್ವಿಭವಪ್ರಭಾವದೊಳ್
ಬಲದೊಳತಿಪ್ರತಾಪದೊಳಗಾರೆಣೆಯೆಂದೊಗೆದಾ ಮದಜ್ವರಂ
ಗಳಿಯಿಸಿದತ್ತು ಯಂತ್ರಪಟದಂತೆಸೆಯುತ್ತಿರೆ ಪೂರ್ವಚಕ್ರಿಸಂ
ಕುಳ ವಿಜಯಪ್ರಶಸ್ತಿ ವೃಷಭಾದ್ರಿಯನೀಕ್ಷಿಸೆ ಚಕ್ರವರ್ತಿಯಾ ೬೮

ಕಂ॥ ಮೊದಲಗಲಂ ಯೋಜನಶತ
ಮುದಯಂ ಶತಯೋಜನಂ ತದರ್ಧಪ್ರಮಿತಂ
ತುದಿಯಗಲಮೆನೆ ವಿರಾಜಿಸು
ವುದು ವೃಷಭಾಮರಶುಭಾಶ್ರಯಂ ವೃಷಭನಗಂ ೯೯

ವ॥ ಅಂತು ಶೋಭಿಸುವ ವೃಷಭಭೂಧರಧಾಮ ವೃಷಭಾಮರನಿಂ ರಾಜವೃಷಭಂ ಪೂಜಿತನಾಗಿ ಬಟಿಕ್ಕಮದಱ ಸಮೀಪಕ್ಕೆ ಪೋಗಿ

ಕಂ॥ ವಿದಿತಾದಿನೃಪರ ಪೆಸರಿಂ
ಪುದಿದು ಸುವರ್ಣಾತ್ಮಕಂ ಸುವರ್ಣಾತ್ಮಕಮ
ಪ್ಪುದು ಯುಕ್ತಮೆನೆ ವಿರಾಜಿಸು
ವುದನೀಕ್ಷಿಸಿ ಬರೆಯಿಸಲ್ಕೆ ತನ್ನಯ ಪೆಸರಂ ೧೦೦

ತಡೆಯದುರುದಂಡರತ್ನದಿ
ನೆಡೆಯಿಲ್ಲದೊಡಾದ್ಯನೃಪರ ಪೆಸರ್ಗಳೊಳೊಂದಂ
ತೊಡೆಯಿಸಿ ತನ್ನಯ ನಾಮ
ಕ್ಕೆಡೆಮಾಡಿಸಿದಂ ನೃಪಾಳಚೂಡಾರತ್ನಂ ೧೦೧

ವ॥ ಅಂತು ತೆಱಪಂ ಮಾಡಿಸಿ ತದನಂತರಂ

ಮ॥ ಚಲಮಂ ಚಾಗಮನಾಜ್ಞೆಯಂ ವಿನಯಮಂ ಪೇೞ್ವಂದು ಷಟ್ಖಂಡಮಂ
ಡಳದೊಳ್ ಮಾರ್ಮಲೆವನ್ನರಿಲ್ಲ ಬಡವರ್ ತಾಂ ರಕ್ಷಿಪೆಲ್ಲಾಜನಂ
ಗಳೊಳಿಲ್ಲನ್ನೆಯದಿಂದೆ ವರ್ತಿಸುವರಿಲ್ಲಾರ್ಯರ್ ಸಮರ್ಯಾದೆಯಂ
ತಳೆದೈಶ್ವರ್ಯಮನಪ್ಪುಕೆಯ್ಯದವರಿಲ್ಲೆಂದುಂ ನಿಜಕ್ಷೋಣಿಯೊಳ್ ೧೦೨

ಮ.ಸ್ರ॥ ಜಿನಪೂಜಾಳೋಕನಂ ಲೋಚನಕೆ ಜಿನಗುಣೋತ್ತುಂಗಸಂಪತ್ತಿ ಸಂಕೀ
ರ್ತನವಾಚಾನರ್ತನಂ ನಾಲಗೆಗೆ ಜಿನಮುಖೋಕ್ತಾಗಮಾರ್ಥವ್ರಜಂ ಭಾ
ವನೆಗೆಂದುಂ ಬಂದುವೆಂಬುನ್ನತಿಯೊಳೆ ನಿಜಸಮ್ಯಕ್ತ್ವಮಂ ಧಾತ್ರಿಗೆಲ್ಲಂ
ಜನತಾಸಂಸ್ತುತ್ಯವೃತ್ತಂ ಮೆಱೆವನುರುಕಳಾಚಾರುಚಾತುರ್ಯವರ್ಯಂ ೧೦೩

ಕಂ॥ ಅಱಿಯದ ಕಳೆಯಿಲ್ಲಱಿವರ
ನೆಱಗಿಸದ ಮೃದೂಕ್ತಿಯಿಲ್ಲ ದಶದಿಶೆಗಳೊಳಂ
ಮೆಱೆಯದ ಗುಣಮಿಲ್ಲುಚಿತಮ
ನಱೆಯದ ವಿತರಣಮದಿಲ್ಲ ತನಗನವರತಂ ೧೦೪

ಶಶಿವಿಶದಗುಣಂ ವಿಜಯ
ಪ್ರಶಸ್ತಿಯಂ ವಿಮಳಕಾಕಿಣೀರತ್ನದೆ ವಾ
ಕ್ಕುಶಳಂ ಬರೆಯಿಸಿದಂ ದಶ
ದಿಶೆಯೊಳ್ ನಿಜಕೀರ್ತಿ ಬಳೆಯೆ ಗುಣಮಾಳಿಕೆಯಂ ೧೦೫

ಶಾ॥ ಸ್ವಸ್ತಿ ಪ್ರಸ್ತುತಪುಣ್ಯಭಾಜ್ಮಕುಟಬದ್ಧಶ್ರೇಣಿಚೂಡಾಮಣಿ
ನ್ಯಸ್ತಶ್ರೀಪದ ವಜ್ರನಾಭಿ ವಿಮಳಶ್ರೀವಜ್ರವೀರ್ಯಾತ್ಮಜಂ
ಧ್ವಸ್ತಾರಾತಿ ಸಮಗ್ರ ದಿಗ್ವಿಜಯಜಾತಖ್ಯಾತಿಯಂ ಚಕ್ರಿ ಜೈ
ತ್ರಸ್ತಂಭಂ ತನಗೆಂಬಿನಂ ಬರೆದೊಡೇನೊಪ್ಪಿತ್ತೊ ತದ್ಭೂಧರಂ ೧೦೬

ವ॥ ಅಂತಾ ವೃಷಭಾಚಳಮಂ ನಿಜಾಂಕಮಾಳೆಗಳಿನಳಂಕರಿಸಿ ಚಕ್ರಿ ಪಶ್ಚಿಮ ದಿಗ್ವಿಭಾಗಕ್ಕೆ ನಡೆಯೆ

ಕಂ॥ ಭಾಸುರಮಣಿನಿರ್ಮಿತಸಿಂ
ಹಾಸನಮಂ ಸಾರ್ವಭೌಮಲಕ್ಷ್ಮೀಪದವಿ
ನ್ಯಾಸನಮನೊಸೆದು ರಕ್ಕೋ
ದಾಸರಿದಧಿದೇವಿ ಭೂವರಂಗೊಲಿದಿತ್ತಳ್ ೧೦೭

ವ॥ ಅಂತನುತ್ತರಾಭಿಧಾನಸಿಂಹಾಸನವುನಾತ್ಮಾಂಯುತ್ತಂ ಮಾಡಿ ತತ್ತರಂಗಿಣೀತೀರಂ ಬಿಡಿದುತ್ತರಾಭಿಮುಖನಾಗಿ ನಡೆತಂದಿಂಬಾದ ವಿಜಯಾರ್ಧನಗನಿತಂಬದೊಳ್ ಬೀಡಂ ಬಿಡಿಸಿದಾಗಳ್

ಕಂ॥ ಸಾನುಮಸೃಣೇಂದುಮಣಿ ಯಿನಿ
ಸಾನುಮಲಸದೀವ ಸಲಿಲಶೀಕರಕಳಿತಂ
ದಾನಗಜಂಗಳ ಸೋಂಕಿಂ
ದಾ ನಗಜಂ ಸುರಭಿ ಪಡೆಯನಾಜೆಸಿತನಿಲಂ ೧೦೮

ವ॥ ಅಂತು ಗಮನಶ್ರಮಮನಡಂಗಿಸಿ ಪಡೆಗಲಂಪಂ ಪಡೆವ ನಗೋಪಕಂಠದೊಳ್ ರಾಜಕಂಠೀರವನುಪ್ಪಯಣಮಂ ಮಾಡಿರ್ಪುದುಮಾ ಪ್ರಸ್ತಾವದೊಳ್

ಕಂ॥ ಕರಮಟ್ಟೆ ನಾಟ್ಯಮಾಳಾ
ಮರನವನತನಾಗೆ ಚಕ್ರಿಪದನಖರಂಗಾಂ
ತರದೊಳ್ ತತ್ಪ್ರತಿಬಿಂಬಂ
ವಿರಚಿಸಿದುದು ನಾಟ್ಯಮಾಳೆಯಂ ತತ್ಕ್ಷಣದೊಳ್ ೧೦೯

ವ॥ ಅಂತು ನಾಟ್ಯಾಮಾಳಾಮರನಿಂ ರಾಜರಾಜಂ ಪೂಜಿತನಾಗಿ ಬಟೆಯಂ ಬಳಮುಖ್ಯನಂ ಬರಿಸಿ ಗಿರಿಗುಹಾದ್ವಾರವಜ್ರಕವಾಟಮನುದ್ಘಾಟನಂ ಮಾಡೆಂದು ನಿಯಮಿಸೆ

ಕಂ॥ ಮುನ್ನಿನ ತೆಱದಿಂ ತೆಱೆದು ಮ
ಹೋನ್ನತವಿಜಯಾರ್ಧಗಿರಿಗುಹಾದ್ವಾರಮನು
ತ್ಪನ್ನ ವಿಜಯನಪರದಿಶಾ
ಸನ್ನಮ್ಲೇಚ್ಛಾಧಿರಾಜರಂ ಸಾಧಿಸಿದಂ ೧೧೦

ವ॥ ಅಂತವರ ದರ್ಪಮನದಿರ್ಪಿ ಕುಲಧನಕನ್ಯಾರತ್ನ ಕರಿ ತುರಗಾದಿ ಸಾರವಸ್ತುಗಳನೊತ್ತಿ ಕಪ್ಪಂಗೊಂಡು ಷಟ್ಖಂಡಮಂಡಳಾಧಿಪತಿಯ ಪದಪಯೋಜಮನಾ

ಮ್ಲೇಚ್ಛರಾಜರಂ ಚಮೂಪತಿ ಬಂದು ಕಾಣಿಸೆ ಚಕ್ರವರ್ತಿಯವರಂ ಸಮುಚಿತ ಪ್ರತಿಪತ್ತಿಯನಿತ್ತು ಕೃತಾರ್ಥರಂ ಮಾಡಿ ಬೀಟ್ಕೊಳಿಸಿ ಕಳಿಪಿ ಕಾಲಮಂ ಕಳಿಪದೆ ಪೂರ್ವಕ್ರಮದಿಂ ಪರ್ವತ ಗುಹಾದ್ವಾರಮಂ ಪೊಕ್ಕು ರಕ್ತೋದಾನದಿಯ ತಡಿವಿಡಿದು ಪೋಗಿ ತತ್ಕ್ಷೋಣೀ ಧರದಕ್ಷೂಣಶೋಭಾ ನಿರೀಕ್ಷಣೀಯದತ್ತಚಿತ್ತಂ ತತ್ಕಟಕದೊಳ್ ಕಟಕಮಂ ಬಿಡಿಸಿ ಸಾರ್ವಭೌಮನಿರೆ

ಕಂ॥ ನಿಶ್ಚಿತಮಂತ್ರಚಮೂಪತಿ
ಪಶ್ಚಿಮದಿಜ್ಮ್ಲೇಚ್ಛನೃಪತಿಗಳನೆಱಗಿಸಿದಂ
ನಿಶ್ಚಳಿತಧೈರ್ಯಮೇರು ವಿ
ಪಶ್ಚಿನ್ನುತಕೀರ್ತಿ ಚಕ್ರಿಚರಣಾಂಬುಜದೊಳ್ ೧೧೧

ಅಂತೆಱಗಿಸುವುದುಮವನೀ
ಕಾಂತಂ ವಿಕ್ರಾಂತಭೂಮಿ ಕೃತದಿಗ್ವಿಜಯಂ
ಭ್ರಾಂತೇಂ ಕೃತಕೃತ್ಯಂ ಮಿಗೆ
ಸಂತಸಮಂ ತಳೆದನಂತರಂಗದೊಳಾಗಳ್ ೧೧೨

ವ॥ ಅಂತು ಸ್ವಸಾಧ್ಯಂ ಪ್ರಸಾದ್ಯಾಶ್ರಿತತೋಷೀ ದೋಷಾಭಾವಾತ್ತೆಂಬಂತೆ ಕತಿಪಯ ಸಂವತ್ಸರಂಗಳಿಂ ಸಿದ್ಧದಿಗ್ವಿಜಯನಾಗಿ ಮನೋರಾಗಕ್ಕೆ ನೆಲೆಯಾಗಿ ನಿಜಪ್ರಚಾರ ಪ್ರಸಾದದಿಂ ಪ್ರಮೋದಮನಾ ಮ್ಲೇಚ್ಛರಾಜರೊಳೊದವಿಸಿ ತದನಂತರಂ ಜಗತೀಪ್ರಭು ಶುಭಮಹೂರ್ತದೊಳ್

ಮ॥ ಧ್ವಜಿನೀಮುಖ್ಯಕುಮಾರ ಮಂಡಳಿಕ ಮಂತ್ರಿ ಮ್ಲೇಚ್ಛರಾಜಾಂಗನಾ
ವ್ರಜ ಸಾಮಂತ ಖಗಾಮರಾಟವಿಕಪಲ್ಲೀಪಾಳಧಾನುಷ್ಕ ಸಾ
ಮಜ ಪಾದಾತಿ ರಥಾಶ್ವವಿಶ್ವಗುಣಬದ್ಧಾಂತಃಪುರಚ್ಛತ್ರಿಕಾ
ಧ್ವಜಚಂಚಚ್ಚಮರೀಜಶಂಖಪಟಹಪ್ರಸ್ಫಾರಭೇರೀರವಂ ೧೧೩

ವ॥ ಅಂತೆಸೆಯೆ

ಉ॥ ದಿಕ್ಕರಿಕುಂಭರಂಗದೊಳೆ ನರ್ತಿಸೆ ಕೀರ್ತಿ ಜಯಾನಕಸ್ವನಂ
ಮಿಕ್ಕಿರೆ ವಜ್ರನಾಭಿ ಕೃತದಿಗ್ವಿಜಯಂ ನವಯೌವನಾಂಗನಾ
ದೃಕ್ಕುಮುದಂ ಮುಖೇಂದುಗಲರ್ದೊಪ್ಪೆ ನಿಜಾನ್ವಯರಾಜಧಾನಿಯಂ
ಪೊಕ್ಕನನೇಕ ಸಾರಮಣಿತೋರಣ ರಾಜಿತ ರಾಜವೀಥಿಯಂ ೧೧೪

ವ॥ ಅಂತು ವಿಶಿಷ್ಟಾಷ್ಟಶೋಭೆಗಳಿಂ ಶೋಭಿಸುವನಶ್ವರಾಶ್ವಪುರಮಂ ಪೊಕ್ಕು ಪುರಾಂಗನಾ ಜನಂಗಳಪಾಂಗಸಂತತಿಯೊಡನೆ ಸೂಸುವ ಲಾಜಾವರ್ಷಮುಮಂ ಪೆರ್ವಂಡಿ ರಾಶೀರ್ವಾದದೊಳ್ ಬೆರಸಿ ಪರಸುವ ಕುಲವೃದ್ಧರ ನಲ್ವರಕೆಗಳುಮಂ ತಳೆಯುತ್ತುಂ ನಿಖಿಳಮಂಗಳನಿಳಯಮೆನಿಪ ರಾಜನಿಳಯಮಂ ರಾಜರಾಜಂ ಪೊಕ್ಕು ಸನ್ಮಾನದಾನ ಪುರಸ್ಸರಂ ಸಕಳಮಕುಟಬದ್ಧಾದಿ ರಾಜಲೋಕಮಂ ವಿಸರ್ಜಿಸಿ ನಿರ್ಜಿತಾರಾತಿ ಜಾತಂ ಜಾತಮನೋರಥಂ ಮನೋನುರಾಗಕ್ಕಾಗರಮಾಗಿರ್ಪಿನಂ ಮೌಹೂರ್ತಿಕ ಪರಿಕೀರ್ತಿತ ಪಟ್ಟಬಂಧ ಮಹೋತ್ಸವ ಮುಹೂರ್ತಮತ್ಯಾಸನ್ನಮಾಗೆ

ಕಂ॥ ಶ್ರೀಸುದತೀಪತಿಗಾತ್ಮನ
ದೀಸಲಿಲದೆ ಸೀತೆ ರಕ್ತೆ ರಕ್ತೋದೆಯೆನಿ
ಪ್ಪೀ ಸರಿದಧಿದೇವತೆಯರ್
ಮಾಸರಮಪ್ಪಂತು ಮಜ್ಜನಮನೊಡರಿಸಿದರ್ ೧೧೫

ವ॥ ಅನಂತರಂ

ಕಂ॥ ಕೃತಮಾಲನಾಟ್ಯಮಾಳಾ
ನ್ವಿತ ಮಾಗಧವರತನುಪ್ರಭಾಸಾಮರರುಂ
ವಿತತವಿಜಯಾರ್ಧನಿಷಧಾ
ಪ್ರತಿಮಾಮರರುಂ ಮನೋನುರಾಗದಿನಾಗಳ್ ೧೧೬

ಮ॥ ಕನಕಾಂಭೋಜರಜಃಪಿಶಂಗಿತ ಸರಸ್ತೋಯಂಗಳಿಂ ಖೇಚರೀ
ಜನಪೀನಸ್ತನಚಂದನೋಜ್ವಳ ನದೀನೀರಂಗಳಿಂ ಶ್ರೀಮುಖಾ
ಬ್ಜನಿಸರ್ಗೋದಿತಗಂಧಸಿಂಧುಜಳದಿಂ ಸಂಪೂರ್ಣಮಂ ಸ್ವರ್ಣಕುಂ
ಭನಿಕಾಯಂಗಳನಾಂತುಕೊಂಡು ಸುರಿದರ್ ಧಾತ್ರೀಶಮೂರ್ಧಾಗ್ರದೊಳ್ ೧೧೭

ವ॥ ಅಲ್ಲಿಂ ಬಳಿಕ್ಕೆ

ಕಂ॥ ಮೂವತ್ತಿರ್ಚ್ಛಾಸಿರ್ವರ್
ಭೂವಿಶ್ರುತಮಕುಟಬದ್ಧರತ್ಯುತ್ಸವದಿಂ
ತೀವೆ ದಿಶಾವಳಯಮನು
ದ್ಭಾವಿತ ರಸಗೇಯ ತೂರ್ಯ ಶಂಖನಿನಾದಂ ೧೧೮

ಮ॥ ಸುಮನೋರತ್ನಸಮೇತ ಸತ್ಕುಲಮಹೀಭೃತ್ಸಂಗೆ ತನ್ನಿಚ್ಚೆ ಪ
ದ್ಮೆ ಮಹಾಪದ್ಮೆಯೆನಿಪ್ಪ ನಿರ್ಮಳಸರಸ್ತೋಯಂಗಳಿಂ ರತ್ನ ಹೇ
ಮಮಯೋದ್ಯತ್ಕಳಶಂಗಳಿಂ ತಳೆದು ತದ್ಭೂಮೀಧ್ರಮಂ ಪೋಲ್ತ ವಿ
ಕ್ರಮಿಚಕ್ರಪ್ರಭುಗಟ್ಟಿಜಿಂದೆಸಗಿದರ್ ಸನ್ಮಾನದಿಂ ಸ್ನಾನಮಂ ೧೧೯

ವಿವಿಧಾತೋದ್ಯರವಂ ದಿಶಾವಳಯಮಂ ತಳ್ಕೈಸೆ ಮಾಕಂದ ಪ
ಲ್ಲವ ಸರ್ವೌಷಧಸಾರ ಸಾರಸಪಯಸ್ಸಂಪೂರ್ಣ ಸೌವರ್ಣ ಕುಂ
ಭವಿತಾನಂಗಳನೆತ್ತಿ ವಿಪ್ರ ಜಯ ಜೀವ ಸ್ವಸ್ತಿ ವರ್ಧಸ್ವನಂ
ದ ವಚಂ ವರ್ತಿಸೆ ಚಕ್ರವರ್ತಿಗಭಿಷೇಕಂ ಮಾಡೆ ಸಂಪ್ರೀತಿಯಿಂ ೧೨೦

ಲಲಿತಶ್ರೀಲಲನಾವಿಲೋಚನಮರೀಚಿ ಕ್ಷೀರವಾರಾಶಿ ನಿ
ರ್ಮಳವಸ್ತ್ರಪ್ರಕರಾಂಚಿತಂ ಮಕುಟಮುಕ್ತಾಹಾರಕೇಯೂರಕುಂ
ಡಳಮುದ್ರಾಕಟಸೂತ್ರಕಂಕಣಮಣಿಗ್ರೈವೇಯಕಾದ್ಯುದ್ಘಮಂ
ಗಳಭೂಷಾವಳಿಯಿಂ ಮಸಂಗೊಳಿಸಿದಂ ಶೃಂಗಾರಲೀಲಾಕರಂ ೧೨೧

ವ॥ ಅಂತು ಸಕಳಸಾಮ್ರಾಜ್ಯಲಕ್ಷ್ಮೀವಶೀಕರಣ ಮಂಗಳಾಳಂಕರಣಂಗಳಿಂದಳಂ ಕರಿಸಿದನನಧಃಕೃತಸಿಂಹಪರಾಕ್ರಮನೆಂಬುದಂ ಸೂಚಿಸುವಂತೆ ಸಿಂಹಾಸನಾರೂಢನಂ ಮಾಡಿ

ಉ॥ ಮುಟ್ಟೆ ದಿಗಂತಮಂ ಸಕಳಮಂಗಳತೂರ್ಯ ಸುಗೇಯನಿಸ್ವನಂ
ಪುಟ್ಟೆ ಮಹೋತ್ಸವಂ ಪುರಗೃಹಂಗಳೊಳಂ ಗುಡಿರತ್ನತೋರಣಂ
ಕಟ್ಟೆ ಸಮಗ್ರ ರಾಜ್ಯಪದವೀಪರಿವೀತಲಲಾಟಪಟ್ಟದೊಳ್
ಪಟ್ಟಮನೊಪ್ಪೆ ಕಟ್ಟಿದರಶೇಷಶುಭಪ್ರವಿಲಗ್ನಲಗ್ನದೊಳ್ ೧೨೨

ವ॥ ಅಂತವನೀಪೂಜ್ಯಪ್ರಾಜ್ಯಸಾಮ್ರಾಜ್ಯಪಟ್ಟಮಂ ಕಟ್ಟಿ

ಮ॥ ಸ್ಥಿರಸಂಪತ್ಸುರಶೈಳಪಟ್ಟದೊಳಭೀಷ್ಟಾರ್ಥಪ್ರದಂ ಕಲ್ಪಭೂ
ಮಿರುಹಂ ವಿಶ್ರುತಸೂರ್ಯಮಂಡಳದೊಳುದ್ಯತ್ತೇಜಮಂಭೋಧಿಯೊಳ್
ವರಮರ್ಯಾದೆ ವಿರಾಜಿಸಿರ್ಪ ತೆಱದಿಂ ತತ್ಪ್ರಾಭವಂಬೆತ್ತು ನಿ
ನ್ನುರದೊಳ್ ರಾಜಿಸುತಿರ್ಕೆ ರಾಜ್ಯವಿಭವಂ ಚಂದ್ರಾರ್ಕತಾರಂಬರಂ ೧೨೩

ವ॥ ಎಂದು ಪರಮಾನಂದದಿಂ ಪರಸಿ ಶೇಷೆಯನಶೇಷಮಕುಟಬದ್ಧರ್ ತೀವೆ

ಮ.ಸ್ರ॥ ತಳೆದಂ ಸಾಮ್ರಾಜ್ಯಸಂಪತ್ತಿಯನಖಿಳಕಳಾವಲ್ಲಭಂ ವಲ್ಲಭಂ ಭೂ
ವಳಯಕ್ಕುರ್ವೀಶಚೂಡಾಮಣಿಚರಣನಖಂ ಸತ್ಯವಾಣೀಸಖಂ ಕೋ
ಮಳ ಕಾಂತಾಗೀತದತ್ತಶ್ರವಣನವನತಕ್ಲೇಶವಿದ್ರಾವಣಂ ಭೂ
ತಳವಂದಿಸ್ತೋತ್ರಪಾತ್ರಂ ವಿಬುಧಜನಮನಃಪದ್ಮಿನೀಪದ್ಮಮಿತ್ರಂ ೧೨೪

ಗದ್ಯ

ಇದು ವಿದಿತ ವಿಬುಧಲೋಕನಾಯಕಾಭಿಪೂಜ್ಯ ವಾಸುಪೂಜ್ಯಜಿನಮುನಿ ಪ್ರಸಾದಾಸಾದಿತ ನಿರ್ಮಳಧರ್ಮ ವಿನುತ ವಿನೇಯಜನವನಜವನ ವಿಳಸಿತ ಕವಿಕುಳತಿಳಕಪ್ರಣೂತ ಪಾರ್ಶ್ವನಾಥ ಪ್ರಣೀತಮಪ್ಪ ಪಾರ್ಶ್ವನಾಥ ಪುರಾಣದೊಳ್ ವಜ್ರನಾಭಿನಾಮಾಭಿರಾಮಚಕ್ರವರ್ತಿ ದಿಗ್ವಿಜಯ ವರ್ಣನಂ ಏಕಾದಶಾಶ್ವಾಸಂ

ದ್ವಾದಶಾಶ್ವಾಸಂ

ಕಂ॥ ಶ್ರೀ ಸಾರ್ವಭೌಮಪದಲ
ಕ್ಷ್ಮೀಸಂಗತವಕ್ಷನಮಳಚರಿತಂ ವಿತತಾ
ಜ್ಞಾಸಫಳೀಕೃತವಿಭವಂ
ಭಾಸುರಯಶನೆಸೆದನಿಳೆಗೆ ಕವಿಕುಳತಿಳಕಂ ೧

ವ॥ ಮತ್ತಮಾ ಮಹೀವಲ್ಲಭಂ ಮೂವತ್ತಿರ್ಚ್ಛಾಸಿರವಿಷಯಂಗಳಿನೆಪ್ಪತ್ತೆರಡುಸಾಸಿರ ನಗರಂಗಳಿಂ ತೊಂಬತ್ತಾಱುಕೋಟಿ ಗ್ರಾಮಂಗಳಿಂ ತೊಂಬತ್ತೈಸಾಸಿರ ದ್ರೋಣಾಮುಖಂಗಳಿಂ ನಾಲ್ವತ್ತೆಣ್ಚಾಸಿರ ಪಟ್ಟಣಂಗಳಿಂ ಪದಿನಾಱುಸಾಸಿರಖೇಡಂಗಳಿನಯ್ವತ್ತಾಱುಸಾಸಿರಾನ್ತರ್ದ್ವೀಪಂಗಳಿಂ ಪದಿನಾಱುಸಾಸಿರ ಸಂವಾಹಂಗಳಿನಱುಸಾಸಿರ ಕುಕ್ಷಿನಿವಾಸಂಗಳಿನೆಣ್ಬತ್ತೆರಡುಸಾಸಿರ ದುರ್ಗಾಟವಿಗಳಿನನೇಕಕೋಟಿಪ್ರಮಾಣಸ್ಥಳಿಗಳಿಂ ಶತಸಹಸ್ರಕೋಟಿಖೇಡಂಗಳಿಂ ನಾಲ್ಕುಸಾಸಿರಖರ್ವಡಂಗಳಿಂ ನಾಲ್ಕುಸಾಸಿರಮಡಂಬಂಗಳಿಂ ಮೂಱುಕೋಟಿ ಗೋಮಂಡಳಂಗಳಿಂ ಮನಂಗೊಳಿಸುವ ವಿಷಯ ಭಾಮಿನೀಪ್ರೇಮಭೂಮಿಯಪ್ಪುದಱಿಂ ಸಾರ್ವಭೌಮನುಂ ಕಾಮರೂಪಿಯುಂ ಕಾಮಚಾರಿಯುಮಪ್ಪ ವಿಜಯಾರ್ಧಮೆಂಬ ಹಸ್ತಿರತ್ನಮುಂ ಪ್ರಶಸ್ತಮಪ್ಪೆಣ್ಬತ್ತುನಾಲ್ಕುಲಕ್ಷಭದ್ರಗಜಂಗಳುಂ ಪವನಂಜಯಮೆಂಬಶ್ವರತ್ನಮುಂ ವಿಶ್ವಾವನೀವಿಶ್ರುತಮಪ್ಪ ಪದಿನೆಂಟುಕೋಟಿ ಜಾತ್ಯಶ್ವಂಗಳುಮಜಿತಂಜಯಮೆಂಬ ರಥಸನಾಥಮಾಗಿ ಮನೋರಥಮಂ ತೀರ್ಚುವೆಣ್ಬತ್ತುನಾಲ್ಕುಲಕ್ಷರಥಂಗಳುಂ ಮೂವತ್ತಿರ್ಚ್ಛಾಸಿರ ಮಕುಟಬದ್ಧರುಂ ಪದಿನೆಣ್ಚಾಸಿರ ಮ್ಲೇಚ್ಛರಾಜರುಮೆಣ್ಬತ್ತುನಾಲ್ಕುಕೋಟಿ ವೀರಭಟರ್ಕಳುಂ ನಿಮಿರ್ಕೆವಡೆದ ನಾಲ್ವತ್ತೆಂಟು ಕೋಟಿ ಪತಾಕೆಗಳುಂ ಪನ್ನೆರಡುಯೋಜನಂಬರಂ ಕೇಳಲೆ ಬರ್ಪ ಗಂಭೀರನಾದಮನಾಳ್ದಾನಂದಂಗಳೆಂಬ ಪನ್ನೆರಡುಂ ಭೇರಿಗಳುಂ ವಿಜಯಘೋಷಂಗಳೆಂಬ ಪನ್ನೆರಡುಂ ಪಟಹಂಗಳುಂ ಗಂಭೀರಾವರ್ತಮೆಂಬಿರ್ಪತ್ತುನಾಲ್ಕು ಶಂಖಂಗಳುಂ ತನ್ನುನ್ನತಿಯನತಿಶಯಿಸೆ ಮಹತ್ವಮನಪ್ಪುಕೆಯ್ದು ವಾಹಿನೀಪತಿಯಪ್ಪುದಱಿಂ ಬಳಜಳನಿಧಿಯುಂ ಶ್ರೀಭವನದೊಳು ದ್ಭವಿಸಿದ ಮಣಿಚ್ಛತ್ರಕಾಕಿಣೀ ಚರ್ಮರತ್ನಕ್ಕಮಾಯುಧಶಾಲೆಯೊಳ್ ಸಂಭವಿಸಿದ ಚಕ್ರಾಸಿ ದಂಡರತ್ನಕ್ಕಂ ವಿಜಯಾರ್ಧನಗದೊಳೊಗೆದ ಗಜಾಶ್ವಸ್ತ್ರೀರತ್ನಕ್ಕಮಶ್ವಪುರದೊಳ್ ಪುಟ್ಟಿದ ಪುರೋಹಿತ ಸ್ಥಪತಿ ಗೃಹಪತಿ ಚಮೂಪತಿರತ್ನಕ್ಕಮಾಕರನಾದುದಱಿಂ ಗಂಭೀರಗುಣರತ್ನಾಕರ ನುಮೆನಿಸಿ ಕ್ಷಿತಿಸಾಗರಮೆಂಬ ವಜ್ರಪ್ರಾಕಾರದೊಳಂ ಸರ್ವತೋಭದ್ರಮೆಂಬ ಗೋಪುರದೊಳಂ ರಾಜಿಸುವ ವೈಜಯಂತಿಯೆಂಬ ಮೂಲಪ್ರಾಸಾದಮಂ ಬಳಸಿದುತ್ತುಂಗ ಸಿಂಹಾಸನಪ್ರಶಸ್ತಿಕಮೆಂಬ ಸಭಾಸದನಮುಂ ವರ್ಧಮಾನಮೆಂಬೀಕ್ಷಣಸುಖವರ್ಧಮಾನ ಪ್ರೇಕ್ಷಾನಿಧಾನಮುಂ ಮಹಾಘರ್ಮಾಂತಮೆಂಬ

ತ್ರಿಕಾಂತಧಾರಾಗೃಹಮುಂ ಗೃಹಕೂಟಮೆಂಬ ಹರ್ಷಕರವರ್ಷಾಗಾರಮುಂ ಗಿರಿಕೂಟಮೆಂಬ ದಿಗವಳೋಕನಪ್ರಾಸಾದಮುಂ ಸಿಂಹವಿಧೃತ ಸಿಂಹವಾಹಿನೀನಾಮ ಶಯ್ಯಾಳಂಕೃತ ಪುಷ್ಕಳಾವರ್ತಿಯೆಂಬ ಶಯನಾಶ್ರಯಮುಂ ಸಿಂಹಾಟಕಮೆಂಬ ಕುಂತಕ್ಕಂ ಲೋಹವಾಹಿನಿಯೆಂಬ ಸುರಿಗೆಗಂ ವಜ್ರಕಾಂತ ಮೆಂಬ ಬಿಲ್ಗಂ ಅಮೋಘಮೆಂಬ ಶರಕ್ಕಂ ವಜ್ರತುಂಡಮೆಂಬ ಶಕ್ತಿಗಮಭೇದ್ಯಮೆಂಬ ಕವಚಕ್ಕಂ ಸೌನಂದಕಮೆಂಬ ಖಡ್ಗರತ್ನಕ್ಕಂ ಭೂತಮುಖಮೆಂಬ ಖೇಟಕಕ್ಕಂ ಮನೋವೇಗಮೆಂಬ ಕಣೆಯಂ ಮೊದಲಾದ ಪಲತೆಱದಾಯುಧಕ್ಕಂ ನೆಲೆಯಾಧಾಯುಧ ನಿಕೇತನಮುಂ ಜೀಮೂತಮೆಂಬ ಸಜ್ಜನನುತಮಜ್ಜನ ಮಂದಿರಮುಂ ದೇವರಮ್ಯಮೆಂಬ ಪಟಹರ್ಮ್ಯಮುಂ ಕುಬೇರಕಾಂತಮೆಂಬ ಕೋಶನಿವೇಶಮುಂ ವಸುಧಾಗಾರಮೆಂಬ ಕೋಷ್ಠಾಗಾರಮುಂ ದ್ವಾತ್ರಿಂಶನ್ನಾಟ್ಯಶಾಲೆಗಳಿಂ ಲೀಲೆವಡೆದ ನಂದ್ಯಾವರ್ತಮೆಂಬ ಶಿಬಿರಶರಣಮುಂ ಪಲತೆಱದ ಪಱೆಗಳುಮಂ ಷಟ್ಕರ್ಮಸಾಧಕ ಸಾರವಸ್ತುಗಳುಮಂ ವಿವಿಧಾಶ್ರಯಾಸನಶಯ್ಯಾ ವಿಶೇಷಂಗಳುಮಂ ಶಾಲ್ಯಾದಿ ನಾನಾಧಾನ್ಯಂಗಳುಮಂ ದುಕೂಲಾದಿ ವಿಚಿತ್ರವಸ್ತ್ರಂಗಳುಮಂ ಹಾರಾದ್ಯಳಂಕಾರಂಗಳುಮಂ ಶಕ್ತ್ಯಾದಿ ಶಸ್ತ್ರಂಗಳುಮಂ ಸುವರ್ಣಮಂ ರತ್ನಂಗಳುಮಂ ಕುಡುವ ಕಾಲ ಮಹಾಕಾಲ ನೈಸರ್ಪ ಪಾಂಡುಕ ಪದ್ಮ ಪಿಂಗಳ ಮಾಣವಕ ಶಂಖ ಸರ್ವರತ್ನಂಗಳೆಂಬ ನವನಿಧಿಗಳುಂ ವಿಷಮೋಚಿಕೆಗಳೆಂಬ ಪಾವುಗೆಗಳುಂ. ವೀರಾಂಗದಮೆಂಬ ಮಣಿಕಂಕಣಗಳುಂ ವಿದ್ಯುತ್ಪ್ರಭಮೆಂಬ ಮಣಿಕುಂಡಳಂಗಳುಮವತಂಸಿಕೆಯೆಂಬ ನವರತ್ನಹಾರಮುಂ ಚಿಂತಾಮಣಿಯೆಂಬುತ್ತಂ ಸಮುಂ ಯುಕ್ಷಕರವಿಧೂಯಮಾನಾನುಪಮಾಭಿಧಾನ ದ್ವಾತ್ರಿಂಶಚ್ಚಮರರುಹಮುಮನಸ್ತರಾಭಿಧಾನೋತ್ತುಂಗಸಿಂಹಾಸನಮುಂ ಸೂರ್ಯಪ್ರಭಮೆಂಬ ಧವಳಾಪತ್ರಮುಂ ಸ್ಥಾವರ ಜಂಗಮಕೃತ್ರಿಮ ವಿಷಪರಿಹರಣಪರಿಣತರಪ್ಪ ಮೂನೂಱಱುವತ್ತು ಮಾನಸ ಶರೀರವೈದ್ಯರಿಂ ಸೂಪಶಾಸ್ತ್ರಪ್ರವೀಣರಪ್ಪನಿಬರೆ ಬಾಣಸಿಗರಿಂ ಸುಪರೀಕ್ಷಿತಮುಂ ಸುಪ್ರಯತ್ನನಿಷ್ಪನ್ನಮುಮಪ್ಪ ಪರಮಕಲ್ಯಾಣಮೆಂಬನ್ನಮುಮಮೃತಗರ್ಭಮೆಂಬ ಭಕ್ಷ್ಯಂಗಳುಮಮೃತಕಲ್ಪಮೆಂಬಾಸ್ವಾದ್ಯಮುಮಪ್ಪಮೃತಪಾನಮೆಂಬಪಾನಮುಂ ತನ್ನ ಭೋಗಕ್ಕನುಕೂಲಮಾಗೆ ಮೂವತ್ತಿರ್ಚ್ಛಾಸಿರ ಮಕುಟಬದ್ಧತನೂಭವೆಯರುಮನಿಬರೆ ನಿರಂತರ ಶೋಭಾಕ್ರಾಂತಪ್ರತ್ಯಂತ ರಾಜ ತನೂಭವೆಯರುಂ ದ್ವಾತ್ರಿಂಶತ್ಸಹಸ್ರಾವರೋಧರಮಣಿಯರುಮಂತು ಷಣ್ಣವತಿಸಹಸ್ರ ಮೆನಿಸಿದಂತಃ ಪುರಕಾಂತೆಯರ್ಗೆಲ್ಲಮಗಣ್ಯಲಾವಣ್ಯಸೌಭಾಗ್ಯ ಭಾಗ್ಯಾದಿ ಲೀಲೆಗಳಿಂ ಮೇಲೆನಿಸುವ ಸಕಳಕಳಾವಿದ್ಯಾಧರಿ ವಿದ್ಯಾಧರಾಧಿಪಕುಮಾರಿ ಸುಭದ್ರೆಯೆಂಬ ಸ್ತ್ರೀರತ್ನಮುಂ ತನಗೆ ಮನೋರಥ ಜನ್ಮಭೂಮಿಯಾಗೆ

ಕಂ॥ ಅನುಪಮಪುರನಿಧಿಶಯ್ಯಾ
ಸನನರ್ತನ ಭೋಜ್ಯರತ್ನ ಸೈನ್ಯ ಸಭಾವಾ
ಹನ ನಾಮಭೇದದಿಂ ವ
ಜ್ರನಾಭಿ ವಿಭುಗೆಸೆದುವೀ ದಶಾಂಗಂ ಭೋಗಂ ೨

ಎತ್ತಿದೊಡುಱದ ನೃಪಾಳರ
ಸತ್ತಿಗೆಯವರಾತಪಾರ್ತಿಯನೆ ಕಳೆಗುಂ ಭೂ
ಪೋತ್ತಮ ಸೂರ್ಯಪ್ರಭನೊ
ಳ್ಪೆತ್ತೆ ಬಳಾತಪದ ಬಾಧೆಯುಮನಳಱಸುಗುಂ ೩

ವ॥ ಚರ್ಮರತ್ನಮುಮದೊರ್ಮೆಯುಂ ಬಳಕ್ಕೆಳಸುವ ಭೂತಳೋಪಸರ್ಗಮಂ ನಿಸರ್ಗಸಾಮರ್ಥ್ಯದಿಂ ನಿವಾರಿಸುತ್ತುಮೆಸೆಯುತ್ತಿರೆ

ಕಂ॥ ಭೂಕಂಟಕನೃಪಜಯ ಕಾಂ
ತಾಕರ್ಷಣಯಂತ್ರಮಧಿಪಲಕ್ಷ್ಮೀಲಲನಾ
ಲೋಕನ ಮಣಿದರ್ಪಣಮೆನಿ
ಪಾಕೃತಿಯಿಂದೊಪ್ಪುತಿರೆ ಸುದರ್ಶನಚಕ್ರಂ ೪

ಮ॥ ಭುವನೇಶಂ ನಿಷಧಾವನೀಧರದಿನಾ ಸೀತೋದೆ ಪರ್ಯಂತಮೊ
ಪ್ಪುವ ಷಟ್ಖಂಡಮಹೀತಳಂ ವಿಪುಳತೇಜಕ್ಕಟ್ಟಿ ವಿದ್ಯಾಧರರ್
ದಿವಿಜರ್ ಮಾಗಧಮುಖ್ಯರೋಲಗಿಸೆ ಮೂಲೋಕಂಗಳೊಳ್ ಕೀರ್ತಿಯಾ
ಜ್ಞೆವೊಲೊಪ್ಪುತ್ತಿರೆ ವಜ್ರನಾಭಿ ಮೆಱೆದಂ ಶ್ರೀಸಾರ್ವಭೌಮತ್ವದಿಂ ೫

ಅನುಕೂಲಂ ವನಿತಾಜನಂ ವಿನಯಸಂಪನ್ನಂ ಸುತಶ್ರೇಣಿ ಭ
ಕ್ತಿನಿಯುಕ್ತಂ ಪರಿವಾರಮಪ್ರತಿಮಿತಾಜ್ಞಾಧೀನರಾಜನ್ಯಕಂ
ಸುನಯೋದ್ಯೋಗನಿಯೋಗಿವರ್ಗಮನುರಾಗಶ್ರೀಗಡರ್ಪಾದ ಸ
ಜ್ಜನವಿದ್ವಜ್ಜನಪೂಜ್ಯವೈಭವನದೇಂ ಸೌಖ್ಯಕ್ಕೆ ಪಕ್ಕಾದನೋ ೬

ವ॥ ಅಂತನೇಕ ಸಹಸ್ರವರ್ಷಂಗಳ್ ಸುಖಾಮೃತವರ್ಷಂಗಳಾಗಿ ಪೋಗುತ್ತಮಿರೆ ಮತ್ತೊಂದು ದೆವಸಂ ಸಿಂಹಕಟೀತಟಂ ಸಿಂಹಾಸನ ಶ್ರೀಕೇಕರಾಳೋಕನ ಕಾಂತಿಸಂತತಿ ನಿತಂಬಬಿಂಬಮಂ ಬಳಸಿದಂತೆಸೆಯೆ ಸಾಂದ್ರಚಂದ್ರಿಕೆಯ ಚೆಲ್ವಿಂಗನುಕೂಲಮಾದ ದುಕೂಲ ಮನುಟ್ಟು ಮಳಯಜವಲ್ಲಭಂ ವಿಳಾಸಿನೀದರಹಾಸದಂತೆ ನಯನಮನೋಹಾರಿಯುಂ ಸೌರಭವಿಸ್ತಾರಿಯುಮಪ್ಪ ಮಳಯಜಮಂ ಕೋಮಳತನುವಿನೊಳಮರೆ ತಿಮಿರ್ದು ಹದಂಬೆತ್ತ ಕತ್ತುರಿಯನೆ ಸರಿಗೆದೆಗದಂತೆಸೆವ ಕೇಶಪಾಶದ ಪರಿಮಳದಿನವಂ ಪೊರೆದಪನೆಂಬಂತೆ ಪರಿಮಳದುರುಳಿಯೆನಿಪಿರುವಂತಿಯ ಬಿರಿಮುಗುಳನಿಂಬಾಗೆ ತೋರದುಱುಂಬಿನೊಳ್ ತುಱುಂಬಿ ಕುಂತಳಾಳಿಮಾಳಾಮೇಳನದಿಂ ಕುಸುಮ ಶರಶರಂಗಳಂತೆ ಕಾಂತೆಯರ ಮನಮನೀಟ್ಟುಕಳಿಗೊಳ್ವ ಚಂಚತ್ಪಂಚರತ್ನದ ತಲೆಸುತ್ತಂ ಸುತ್ತಿ ಮತ್ತಮಳಿಮಿಳಿತವಿಚಕಿಳಮುಕುಳದಿಂ ರತಿ ರಚಿಯಿಸಿದ ಕುಸುಮಚಾಪ ಚಕ್ರಧರನ ಕರಚಕ್ರದಂತೆ ಲೀಲೆವೆತ್ತ ನೀಲಮುತ್ತಿನೋಲೆಯಂ ಪಾಲೆಯೊಳಮರ್ಚಿ ಚಕ್ರಧರಂ ಪೀತಾಂಬರನೆಂಬ ತನ್ನ ಪೆಸರಂ ನನ್ನಿ ಮಾಡುವಂತೆ ಚೆನ್ನನಪ್ಪ ಸೊನ್ನೆಸಾರವಂಗಿಗೆಯಂ ತೊಟ್ಟು ನೇತ್ರವಿಚಿತ್ರಮೆನಿಪ ಚಿತ್ರಾವಳಿಯ ಪಾಂಗನಂಗನಾಪಾಂಗಾಂ ಗಜಗಜಮಂ ಕಟ್ಟುವಂತೆ ಕಟ್ಟಿ ವಿಜಯಶ್ರೀರಮಣೀಪೀಠದಂತಿರೆ ಕೇಯೂರಮಂ ಭೂರಿಭುಜದೊಳ್ ತಳೆದು ಭಾಸುರರತ್ನವಳಯಮಂ ವಿಶೇಷಶೋಭಾಕರಕರಯುಗಳದೊಳಾಂತು ನಮೇರುಭೂರುಹಶಾಖಾವಳಿಗಳ್ಗುದಾರದಿಂ ವೀರಮುದ್ರೆಯನಿಕ್ಕುವಂತೆ ಕೋಮಳಾಂಗುಳಿಗಳೊಳ್ ಮಣಿಮಯಾಂಗುಳೀಯಕಂಗಳಂ ಸಂಗಳಿಸಿ ರೋಹಣನಗ ನಿತಂಬಮೆಂಬಂತೆ ನಿಜನಿತಂಬಮೆಸೆಯೆ ಮಿಸುಪರತ್ನಘಟಿತ ಕಟಾರಮಂ ಕಟ್ಟಿ ಕೃಷ್ಣ ಹೃದಯಂ ತನಗಿರಲುಚಿತ ಮೆಂದು ತನ್ನ ಹೃದಯಕ್ಕವತರಿಸಿದ ಸಿರಿಯು ಸಹಜ ಸೌಹಾರ್ದದಿನನುಬಂಧಿಸಿ ಬಂದತಿಪ್ರಶಸ್ತಕೌಸ್ತುಭಮೆನಿಪನುಪಮನೂತ್ನ ರತ್ನ ಪದಕಮಂ ವಿಸ್ತೀರ್ಣವಕ್ಷಸ್ಥಳಕ್ಕಲಂಕಾರಮಂ

ಮಾಡಿ ಸಾರ್ವಭೌಮಶ್ರೀಧಾಮಲಲಾಟ ಲಲಿತೇಂದು ಮಂಡಳಮಂ ಗೆಡೆಗೊಂಡು ಚಿತ್ತಜನಂತೆ ವೃತ್ತಸ್ತನಿಯರ ಚಿತ್ತಮನೆಟಕುಳಿಗೊಳ್ವ ಚೆಲ್ವುವೆತ್ತ ಕತ್ತುರಿಯ ತಿಳಕಮನಿಟ್ಟು ಗೃಹೀತತಾಂಬೂಳನಾಳೋಕಿತಮಂಗಳಮಣಿದರ್ಪಣಂ ಕೂರ್ಪಿಂದಾರ ಕೂರ್ಪುಮಂ ನೇರ್ಪುಗಿಡಿಪಲಗಂ ಪಿಡಿದಲರ್ಗಣೆಯನಲರಂಬಿನ ಬಂಬಲೆಂಬಂತೆ ಬಗೆಗೊಳಿಸಿ ವೀಳೆಯಂಗುಡುವ ಮೇಲುದಂ ಪಿಡಿವಣ್ಪೆಕ್ಕುವ ತಲೆಯಂ ಪಿಕ್ಕುವ ನೆಲನನುಗ್ಗಡಿಸುಗ್ಗಡಿಸುತುಂ ಬರ್ಪ ಚಮರಜವನಿಕ್ಕುತಿರ್ಪ ಮೇಳದಿಂ ನುಡಿವ ಕಳಕಳಮಂ ಜಡಿವ ವಿವಿಧವಧೂಕದಂಬಕಂ ಸರಸಚರಣಾಧರಪಲ್ಲವದಿಂ ಪಲ್ಲವಿಸಿ ಕೇಕರದರಹಾಸವಿಳಾಸದಿಂ ಕುಸುಮಿಸಿ ಮಿಸುಪ ತನುಲತೆಗಳಿನತನು ಲತಾಕೇಳೀ ಲೀಲೋದ್ಯಾನ ಲತೆಗಳಂತೆ ಬಳಸಿ ಬರೆ ವಸಂತರಾಜನ ವಿಳಾಸಮಂ ತಳೆದು ಪದನಖಮಯೂಖಂಗಳಿನಿಳಾವಿಳಾಸಿನಿಗೆ ಪುಳಕಾಂಕುರಂಗಳಂ ಪುಟ್ಟಿಸುತ್ತುಂ ನಡೆತಂದು ತನ್ನಂತೆ ಸಮುನ್ನತ ಜಯಸ್ತಂಭವಿಜೃಂಭತ್ಕೀರ್ತಿ ಸಾಲಭಂಜಿಕಾಮೂರ್ತಿ ದೀಧಿತಿಸುಧಾಧವಳಿತ ದಿಗ್ಭಿತ್ತಿಭಾಗಮುಂ ಸಂಪಾದಿತ ಸಕಳಜನಮನೋರಾಗಮುಂ ನಿಜವಕ್ಷಸ್ಥಳದಂತೆ ಲಕ್ಷ್ಮೀನಿಳಯಮುಮಮಳ ಗುಣಮಣಿ ಪ್ರಕಾಶಿತಸಭಾವಳಯಮುಂ ಸ್ವಕೀಯವಿಭವದಂತುದಿತೋದಿತೋದಯಮುಮಾಸಾದಿತ ಸಹೃದಯಪ್ರಮೋದಮುಮೆನಿಸಿ ಸರಸಿಜಸಂಭವನೆ ಸೂತ್ರಧಾರನಾದಂತೆ ನೇತ್ರ ವೈಚಿತ್ರ್ಯಮಂ ಸೂತ್ರಿಸುವಾಸ್ಥಾನಮಂಡಪ ಮಧ್ಯಸ್ಥಿತಾನುತ್ತರಾಭಿಧಾನಸಿಂಹಾಸನಮನಳಂಕರಿಸಿದಾಗಳ್

ಮ॥ ಜಗದೀಶಂ ಬೆದಜಟ್ಟೆ ದೋರ್ವಳದಗುರ್ವಿಂದನ್ಯರಾಜನ್ಯಕಂ
ಬಗೆಗೆಟ್ಟುರ್ವರೆಯಂ ಬಿಸುಟ್ಟು ವನಮಂ ಪೊಕ್ಕುಂ ಭಯಂಗೊಳ್ವುದುಂ
ಮೃಗರಾಜಂ ಮಿಗೆ ಕಂಡು ತಾನುಮತಿಭೀತಾತ್ಮಂ ಶರಣ್ಬೊಕ್ಕವೋಲ್
ಸೊಗಯಿಕ್ಕುಂ ಮಣಿಭಾಸುರಂ ನಿರುಪಮಂ ಕ್ಷೋಣೀಶಸಿಂಹಾಸನಂ ೭

ಚಂ॥ ಅರಸಿಯರಂಗರೋಚಿಮಣಿಭೂಷಣಕಾಂತಿಗಳಿಂ ಸರಾಗದಿಂ
ಪೊರೆದ ಜಲಂಬೊಲೊಪ್ಪೆ ಕನಕಾಸನಭಾಸುರಶೋಭೆ ಹೇಮತಾ
ಮರಸವಿಳಾಸಮಂ ತಳೆಯೆ ಹಾರಲತಾಂಶುವೃತಂ ಸಭಾಸರೋ
ವರ ವರರಾಜಹಂಸನೆನೆ ರಾಜಿಸಿದಂ ವಸುಧಾಧಿನಾಯಕಂ ೮

ಉ॥ ಓಲಗದಲ್ಲಿ ಮಂಡಳಿಕಮೌಳಿವಿಘಟ್ಟಿತ ಪಾದಪೀಠ
ಪಾಳಕನಿರ್ಕೆಲಂಬಿಡಿದು ಕಣ್ಗೆಸೆದರ್ ನಗೆಗಾರ್ತಿಯರ್ ಸಮಂ
ತೋಲಗಕಾರ್ತಿಯರ್ ನೆಗಟ್ದಿ ಜಾಣ್ನುಡಿಗಾರ್ತಿಯರೊಲ್ಮೆಕಾರ್ತಿಯರ್
ಲೀಲೆಯನಾಂತು ನಿಂದ ಬಿಯಗಾರ್ತಿಯರಗ್ಗದ ಗಾಡಿಕಾರ್ತಿಯರ್ ೯

ಕಂ॥ ನೇವುರದ ಕನ್ನವುರದೆ
ಕ್ಕಾವಳಿಯ ತೊಳಪ್ಪ ಮುತ್ತಿನಾರದ ಕಟಿಸೂ
ತ್ರಾವಳಿಯ ಘನಸ್ತನೆಯರ್
ಭಾವಜಗಜಘಟೆಯನಿಟೆಸಿ ಕಣ್ಗೊಳಿಸಿರ್ದರ್ ೧೦

ಚಂ॥ ಗುರುಕುಚಸಂಗದಿಂ ತರಳವೃತ್ತಿಗೆ ಮುತ್ತೊಳಗಾದುದೆಂದೊಡಿಂ
ತರಳಕಟಾಕ್ಷದಿಂದಡರೆ ನೋಡಿದೊಡನ್ಯರ ಚಿತ್ತವೃತ್ತಿಯೊಳ್

ತ್ರರಳತೆ ತೋರ್ಪುದಚ್ಚರಿಯೇ ಪೇಟಿನೆ ಕಾಮಶರಕ್ಕೆ ಕಾಂತರಂ
ತರುಣಿಯರೊಲ್ದು ನೋಡಿ ಗುಜೆಮಾಡುವರೋಲಗದೊಳ್ ನೃಪಾಳನಾ ೧೧

ಮ॥ ನವಶೃಂಗಾರಸಮುದ್ರದೊಳ್ ತಳೆದು ಲಾವಣ್ಯಾಂಬುವಂ ಕಾಮಿನೀ
ನಿವಹೋತ್ತುಂಗಪಯೋಧರಂ ಬಯಸಿ ನೋಡುತ್ತಿರ್ಪರಂಗೋರ್ವಿಯೊಳ್
ವಿವಿಧ ಸ್ವೇದಜಲಂಗಳಿಂ ಪುಳಕಸಸ್ಯಾನೀಕಮಂ ಮಾಡೆ ನಾ
ಡೆ ವಿಳಾಸಂಬಡೆದತ್ತು ಚಕ್ರಧರನಾಸ್ಥಾನಂ ಘನಶ್ರೀನುತಂ ೧೨

ಸಕಳಾಂತಃಪುರಮಂತ್ರಿಮಂಡಳಿಕ ರಾಜಶ್ರೇಷ್ಠಿ ತಂತ್ರಾಧಿನಾ
ಯಕ ಸಾಮಂತ ಕವೀಂದ್ರ ವಾಗ್ಮಿ ಗಮಕೋದ್ಯದ್ವಾದಿ ವಾಗ್ಗೇಯಕಾ
ರಕಥಾದ್ಯೋತಕ ಪುಣ್ಯಪಾಠಕ ಲಸದ್ಗೇಯ ಪ್ರವೀಣಪ್ರವಾ
ಪಕವೈತಾಳಿಕನರ್ತಕೀ ಪ್ರಕರದಿಂದೊಪ್ಪಿರ್ದುದೊಡ್ಡೋಲಗಂ ೧೩

ಕಂ॥ ಜಗದೀಶಪಾದಪೀಠಂ
ಸೊಗಯಿಸಿದುದು ಮಕುಟಬದ್ಧಮೌಳಿಮಣಿದ್ಯೋ
ತಿಗಳ ಬೆಳಗಿಂದೆ ರೋಹಣ
ನಗಪಾದವಿಳಾಸವಿಭವಮಂ ಮಿಗೆ ನಗುತುಂ ೧೪

ಚಂ॥ ಮಣಿಮಯ ಚಾರುಚಾಮರಮನುಜ್ವಳಹಸ್ತನಖಾಂಶು ನೀಳ್ದು ಬಾ
ಸಣಿಸೆ ಸುಕಾಂತಮಪ್ಪಧರಪಲ್ಲವಮಂ ಸುಲಿಪಲ್ಲ ಕಾಂತಿ ಬಾ
ಸಣಿಸೆ ನವೀನಯೌವನ ಸಭಾಜನಮಂ ಕಡೆಗಣ್ಣ ಕಾಂತಿ ಬಾ
ಸಣಿಸೆ ವಿಳಾಸದಿಂ ವಿಭುಗೆ ಚಾಮರಮಿಕ್ಕಿದರಂಬುಜಾಕ್ಷಿಯರ್ ೧೫

ಮ॥ ಸಕಳಕ್ಷತ್ರಕುಳಾನುಲೇಪ ರಮಣೀವೇಣೀದಳತ್ಪುಷ್ಪದಾ
ಮಕ ವಕ್ತ್ರಾಂಬುಜಗಂಧಮಂ ತಳೆದು ಕಸ್ತೂರೀ ಲಸಚ್ಚಂದನೋ
ದಕ ಸಾರ್ದ್ರೀಕೃತ ರತ್ನಕುಟ್ಟಿಮಮನಾದಂ ಸೋಂಕಿ ಮಂದಾನಿಳಂ
ಸೊಕಮಂ ಮಾಡುತೆ ತೀಡೆ ನೀಡುಮೆಸೆದತ್ತಾಸ್ಥಾನಭೂಮಂಡಳಂ ೧೬

ವ॥ ಆ ಸಮಯದೊಳ್ ಸಮಯಂಬಡೆದು ಮುಖರಿಗಾಣನಾಸ್ಥಾನಮಧ್ಯರಂಗಮಂ ಸಂಗೀತ ಪ್ರಸಂಗಮಂ ಪುಟ್ಟಿಸಲೆಂದಳಂಕರಿಸೆ

ಕಂ॥ ಝುಂಕಾರಂ ಪೆಣ್ದುಂಬಿಯ
ಝುಂಕಾರಮೆನಿಪ್ಪ ಮೆಲ್ಪಿನಿಂ ಬಾಜಿಸಿದಂ
ಬಿಂಕದೆ ಮದನಧನುರ್ಗುಣ
ಟಂಕಾರಮೆನಿಪ್ಪ ಶಂಕೆಗೆಡೆಗುಡುವಿನೆಗಂ ೧೭

ತಾಳಾನುಗತಮೆನಿಪ್ಪು
ಲ್ಲಾಳಂ ಮೊದಲಾಗೆ ಸೊಗಯಿಸುವ ಪದಿನಾಱುಂ
ಪಾಳಕಳೆಯಿನಮರ್ದಂ ವಿಧು
ಲೀಲೆಯಿನಾವುಜಿಗನೀವುತುಂ ಬಾಜಿಸಿದಂ ೧೮

ಪಣವಂ ಸಭೆಗೆ ಸುಖಪ್ರಾ
ಪಣವಂ ನಿನದಮೆನೆ ತಾಳ್ದೆ ಪಾಣವಿಕರ್ ಪೂ
ಗಣೆಯನ ಜಯಪಟಹಧ್ವನಿ
ಗೆಣೆಯೆನೆ ಬಾಜಿಸಿದರೆಸೆಯೆ ಲಯಗತಿ ಪಲವುಂ ೧೯

ಮಾರ್ದಂಗಿಕರಿನಿದೆನಿಸುವ
ಮಾರ್ದವದಿಂದೊಂದಿ ರತಿಯ ಕರವೀಣೆಯ
ಮಾರ್ದನಿಯೆನೆ ಬಾಜಿಸಿದರ್
ತ್ರಿರ್ದುವವೋಲ್ ಸುಖಲತಾಳಿಗಮೃತದ ಪೊನಲಂ ೨೦

ಕವುತಂ ದೇಂಕಾರಂ ಮಲ
ಪವಥೆ ತುಡುಂಕೊತ್ತು ಜಂಕೆಯಂತರಿಜತಿ ರಿ
ಗ್ಗವಣೆ ಪಹರಣೆಯೆನಿಪ್ಪೀ
ಪ್ರವಂದಮಂ ಶ್ರೋತ್ರಬಂಧುವೆನೆ ಬಾಜಿಸಿದರ್ ೨೧

ವ॥ ಅಂತು ವಾದ್ಯಂಗಳ ಗಡಣೆ ಹೃದ್ಯಮಾಗೆ

ಕಂ॥ ಪರಿಕಿಪೊಡೆ ಪೌರನುಂ ಸು
ಸ್ವರನುಂ ಸುಗುಣನುಮೆನಿಪ್ಪಿನಂ ಸಪ್ತವಿಧಂ
ಸ್ಫುರಿತಾದಿ ಗಮಕಮಮರು
ತ್ತಿರೆ ವಾಂಶಿಕನತಿಸುರಾಗಮೆನೆ ಬಾಜಿಸಿದಂ ೨೨

ವ॥ ಅಂತು ವಾಂಶಿಕಂ ಶ್ರುತಿಗೆ ಸೊಗಯಿಸೆ ಶ್ರುತಿಯಂ ಪವಣಿಸಿ ಕುಡುವುದುಮಾ ಶ್ರುತಿಯೊಳಾ ಲಪ್ತಿಯಂ ಪಲವಂ ವ್ಯಾಪ್ತಿವೆರಸು ಮಾಡಿ

ಕಂ॥ ಗಾಣರ್ ತಮಗೊಳ್ಪಿಂ ಸರಿ
ಗಾಣರೆನಿಪ್ಪವರೆ ಮೆಚ್ಚೆ ಬಿಚ್ಚಳಿಸುವಿನಂ
ಗಾಣರ್ ಸವಸುತಿಯಿಂ ರತಿ
ವೀಣೆಯನೆಚ್ಚಜಿಸಿದಂತೆ ಪಾಡಿದರಾಗಳ್ ೨೩

ಚಂ॥ ಜವನಿಕೆಯಾಗಳೋಸರಿಸೆ ಬೇಸಗೆಯಂತೆ ಪಯೋಧರಂ ನಭೋ
ವಿವರಮನೆಯ್ದೆ ತೀವೆ ಮಣಿಭೂಷಣಕಾಂತಿ ಸುರೇಂದ್ರಚಾಪಲೇ
ಖೆವೊಲಿರೆ ಕೇಕರಾಂಬು ಕುಡುಮಿಂಚೆನೆ ತಾಂ ರಸಭಾವಮೂರ್ತಿ ಪಾ
ರ್ಥಿವಸುಖಸಸ್ಯವೃಷ್ಟಿಯೆನೆ ದೃಷ್ಟಿಗೆ ನರ್ತಕಿ ನೀಡುಮೊಪ್ಪಿದಳ್ ೨೪

ಕಂ॥ ವನಲತೆ ಪಲ್ಲವಪುಟದಿಂ
ಮನಸಿಜಯಂಗರ್ಘ್ಯಮೀವವೋಲ್ ಧವಳವಿಳೋ
ಚನರುಚಿನಿಭಪುಷ್ಪಾಂಜಳಿ
ಯನಿತ್ತು ನರ್ತಕಿ ವಿಚಿತ್ರಮೆನೆ ನರ್ತಿಸಿದಳ್ ೨೫

ಉ॥ ಲೀಲೆಯಿನಂಗಜಂಗೆ ಕುಸುಮಾಸ್ತ್ರಮನಾ ರತಿ ನೀಡುತಿರ್ಪವೋಲ್
ಮೇಳಿಸೆ ಲೋಲದೃಷ್ಟಿರುಚಿ ಹಸ್ತಚಯಂಗಳೊಳಾದ ಚಾಳೆಯಂ
ಚಾಳಿಸೆ ಚಿತ್ತಮಂ ಪಯದ ಪದ್ಧತಿ ವಾದ್ಯಲಯಾನುಕೂಳಗೇ
ಯಾಳಿಯೊಳೊಂದೆ ನರ್ತಿಸುವ ನರ್ತಕಿಯಚ್ಚರಿಯಂ ನಿಮಿರ್ಚಿದಳ್ ೨೬

ಕಂ॥ ಲುಳಿತಮಳವಟ್ಟು ಬಂದುದು
ಜಲಶಯನಂ ನಯನಹಾರಿಯಾದತ್ತೊಪ್ಪ
ಕ್ಕೊಳಗಾಯ್ತು ದರ್ಪಸರಳಂ
ವಿಳೋಕನಕ್ಕುಚಿತಮೆನಿಸಿ ರುಚಿಯಿಸಿ ರಚಿತಂ ೨೭

ಉ॥ ಭಂಗಿಯನಾಳೆ ನಿಜ್ಜವಣೆ ರೇಖೆ ಮನೋಹರಮಾಗೆ ರೂಪು ಚೆ
ಲ್ವಿಂಗೆಡೆಯಾಗೆ ತಾಳದನುಕೂಲತೆಯಿಂ ವಳನೋರುನರ್ತನಂ
ಸಂಗತಮಾಗೆ ಗೀತದೊಳಮೊಂದಿದ ವಾದ್ಯದೊಳಂ ಲತಾಂಗಿ ಸ
ರ್ವಾಂಗದೆ ಪಾಡುವಂತೊಸೆದು ಬಾಜಿಸುವಂತೆವೊಲಾಯ್ತು ನರ್ತನಂ ೨೮

ಕಂ॥ ಗೀತಮನೊಡನುಗ್ಘಯಿಪವೊ
ಲಾತೋದ್ಯಲಯಂ ಪ್ರಶಸ್ಯಲಾಸ್ಯಂ ಪರಿಷ
ತ್ಪ್ರೀತಿಯನುತ್ಪಾದಿಸೆ ಸಂ
ಗೀತವೆಸರ್ ಗೀತವಾದ್ಯನೃತ್ಯದೊಳೆಸೆಗುಂ ೨೯

ಆಂಗಿಕದಿಂ ನಟಿ ವಾಚಿಕ
ದಿಂ ಗಾಯಕ ವಾದ್ಯಲಯಮನಭಿನಯಿಪುದಱಿಂ
ಸಂಗತಮಾದುದು ವಾದ್ಯದೊ
ಳಂ ಗೀತದೊಳಂ ಪ್ರತೀತ ತೂರ್ಯಾಖ್ಯಾನಂ ೩೦

ಪಲವಂಗಹಾರಮೊಪ್ಪುವ
ಪಲವು ಪಯಂ ನೆಗಟೆ ನರ್ತಿಸುತ್ತುಂ ಮತ್ತಂ
ಚಳಿಯಿಸದೆ ಸಭೆಯ ಬಗೆಯೊಳ್
ನೆಲಸಿದಳುತ್ಪಳದಳಾಕ್ಷಿ ನರ್ತಕಿ ಚಿತ್ರಂ ೩೧

ವ॥ ಅಂತು ಸಂಗೀತಕಪ್ರಸಂಗಂ ಮನಂಗೊಳಿಸುತ್ತುಮಿರ್ಪುದುಮಾ ಪ್ರಸ್ತಾವದೊಳ್

ಮ॥ ಕ್ಷಿತಿನಾಥೋನ್ನತ ನಿನ್ನ ಪುಣ್ಯವಶದಿಂ ದುಃಕರ್ಮದಾವಾನಳಾ
ಮೃತವರ್ಷಂ ನಿಜಸೂಕ್ತಿಜನ್ಮಿಗದಱಿಂ ಕ್ಷೇಮಂಕರಾಖ್ಯಾನಮ
ನ್ವಿತಮಾಗೊಪ್ಪುವ ದಿವ್ಯಯೋಗಿ ಬಹಿರುದ್ಯಾನಪ್ರದೇಶಕ್ಕೆ ವಿ
ಶ್ರುತಬೋಧಾಂಬುಧಿ ಬಂದು ದೇವ ನೆಲಸಿರ್ದಂ ಭವ್ಯಸೌಖ್ಯಪ್ರದಂ ೩೨

ವ॥ ಎಂದು ಜಿನ್ನವಿಸಿದ ಋಷಿನಿವೇದಕಾಭಿಲಷಿತಫಳಮನುತ್ಪುಳಕ ಕಳಿಕಾಂಚಿತಾಂಗ ಶೋಭಾ ವಿಜಿತಕಲ್ಪಾಂಘ್ರಿಪನಿತ್ತುತ್ತುಂಗಸಿಂಹಾಸನದಿನಿೞಿದು ಮುನಿಪೋತ್ತಮನಿರ್ದತ್ತ ಲೇೞಡಿಯಂ ನಡೆದು ವಿನಯವಿನಮಿತೋತ್ತಮಾಂಗನಾಗಿ

ಕಂ॥ ವಿನುತಮುನಿಪಾಗಮಾಕ
ರ್ಣನಮೆ ವಿಶೋಧಿಗೆ ಜಿನಾಗಮಾಕರ್ಣನದಿಂ
ತನುಕೂಲಮಾಗೆ ಶುಭಭಾ
ವನೆಯತ್ತಲೆ ಚಿತ್ತವೃತ್ತಿಯಂ ವಿಭುವಿತ್ತಂ ೩೩

ಸರದಾಶಯಕ್ಕೆ ವಿಶದತೆ
ಸರದಾಗಮದಿಂದಮಪ್ಪ ತೆಱದಿಂದೆ ಮುನೀ
ಶ್ವರರಾಗಮದಿಂದವನೀ
ಶ್ವರಾಶಯಕ್ಕಾದುದತಿಶಯಂ ವಿಶದತ್ವಂ ೩೪

ಸಾತಿಶಯಬೋಧಸಸ್ಯವಿ
ಘಾತಿ ತ್ರಿಪರಿಗ್ರಹೇಚ್ಛೆಯಂ ಯತಿಪತಪಃ
ಸ್ವಾತಿ ಬೆದಱಟ್ಟೆ ಬಳೆದುದು
ಭೂತಳಪತಿಚಿತ್ತದಲ್ಲಿ ತತ್ತ್ವವಿವೇಕಂ ೩೫

ಚಕ್ರಂಬಿಡಿದಾಯ್ತು ಮಹೀ
ಚಕ್ರಪರಿಭ್ರಮಣದಂತೆ ಬಹ್ವಾರಂಭೋ
ಪಕ್ರಮದಿಂ ಮಱಿದಿರೆ ಭವ
ಚಕ್ರಪರಿಭ್ರಮಮುಮಕ್ಕುಮೆಂದಗಿದಧಿಪಂ ೩೬

ಏಕಿನಿತು ಪರಿಗ್ರಹಮಂ
ಸ್ವೀಕರಿಸಿದೆನಿವಱಿವಾರ್ತಮಲ್ಲದೆ ಸುಖಮಾ
ಳೋಕಿಸುವೊಡಿಲ್ಲ ಬಱೆದವಿ
ವೇಕಿಗಳೇನೆಂದೊ ಬಯಸುವರ್ ನೃಪಪದಮಂ ೩೭

ತನುತನುಪರಿಗ್ರಹದ ಮುನಿ
ಜನಕಂ ಸಾವದ್ಯಮೊದವುತಿರ್ಪುದು ಗಡಮಿ
ನ್ನೆನಗೆ ಬಹುವಿಧ ಪರಿಗ್ರಹ
ವನಧಿಗೆ ಸಾವದ್ಯಮಪ್ಪುದಂ ಪವಣಿಪರಾರ್ ೩೮

ಎನಿತೆನಿತು ಪರಿಗ್ರಹಮಾ
ಯ್ತನಿತನಿತಘವೃದ್ಧಿ ಹಾನಿ ತನ್ನಯ ಗುಣಕಂ
ದೆನೆ ದುರಿತದ ಪರಿಜನಮಂ
ತನತೆಂಬನನಡಸಿ ಕಟ್ಟದಿರ್ಕುಮೆ ಕರ್ಮಂ ೩೯

ಚಂ॥ ನೆರೆಯದ ಮುನ್ನಮರ್ಥಮದೆ ಸಾರ್ದೊಡೆ ಸೌಖ್ಯಮೆ ಸಾರ್ಗುಮೆಂದದಂ
ನೆರಪಿ ಸುಖಪ್ರಸೇವೆಯನೊಡರ್ಚುವೆನೆಂದನೆ ಮೇಲೆಮೇಲೆ ಬಿ
ತ್ತರಿಪತಿತೃಷ್ಣೆ ದುಃಖಮನೆ ಕೊರ್ವಿಸುತಿರ್ಪುದಱಿಂದಮರ್ಥಸಂ
ವರಣೆಯನರ್ಥಮಂ ಪಡೆಗುಮಲ್ಲದೆ ಸೌಖ್ಯಮನೀಯಲಾರ್ಕುಮೇ ೪೦

ಕಂ॥ ಬಯಸಿದರುಂ ದೋಷಿಗಳೆ ವಿ
ಷಯಮಂ ಗಡ ಬಯಸಿ ನೆರಪಿದೆನ್ನಿಂ ದೋಷಾ
ಶ್ರಯನಾವನೆನುತೆ ಕೊಕ್ಕರಿ
ಕೆಯನಾಂತಂ ತತ್ತ್ವವೇದಿಗದು ಕೌತುಕಮೇ ೪೧

ಚಂ॥ ಚಿರತರಮಿರ್ದೊಡಂ ವಿಷಯಸಂತತಿ ಪೋಪುದಗಲ್ದವಶ್ಯಮೀ
ನರರವನೇಕೆ ತಾಮೆ ಬಿಡರೋ ಗಡಗಲ್ಕೆಯೊಳುಂಟೆ ಖೇದಮಂ
ತಿರದವು ತಾವೆ ಪೋಗೆ ಬಗೆಗಪ್ಪುದು ದುಃಖಮನಂತಮಂತವಂ
ಪರಿಪರಿಪಂಗೆ ಸೌಖ್ಯಮದಱಿಂ ತೊಱೆವೆಂ ವಿಷಯೋತ್ಕರಂಗಳಂ ೪೨

ವ॥ ಎಂದು ವಿಭಾವ ಪರಿಣಾಮಮಂ ಪತ್ತುವಿಟ್ಟು

ಕಂ॥ ಇದೆ ಕಾಲಲಬ್ಧಿ ದೊರೆಕೊಂ
ಡುದು ವಿಷಯವಿರಕ್ತಿಯಲ್ಲದಂದೇಕೆಯೊ ಪೇ
ೞೊದವಿದುಪದೇಶಲಬ್ಧಿಯು
ಮುದಯಿಸುಗುಂ ಮುನಿಪದಾಂಬುಜಾರಾಧನೆಯಿಂ ೪೩

ಕ್ಷೇಮಂಕರಯತಿಪತಿಗಳ
ನಾಮಗ್ರಹಣದೊಳೆ ವಿಷಯವೈರಾಗ್ಯಂ ನಿ
ಸ್ಸೀಮಮೆನಿಸಿತ್ತು ದರ್ಶನ
ಮೇಮಾತೆಮಗಖಿಳಸುಖಮನೊದವಿಕುಮಲ್ತೇ ೪೪

ಮ.ಸ್ರ॥ ಎನಿತುಂಟಾಸ್ವಾದ್ಯಮಾ ವಸ್ತುವನೆ ನೆರಪಿ ನಿರ್ಬಂಧದಿಂ ಮೆಲ್ದು ಸಲ್ಲೇ
ಖನಮಂ ಮಾಳ್ಪಂ ಬೞಿಕ್ಕಂತವನೆ ತೊಱೆವವೋಲ್ ಚಕ್ರಿ ಷಟ್ಖಂಡಮಂ ಸಾ
ಲ್ವನಿತಂ ಸಾಮ್ರಾಜ್ಯಮಂ ಮುನ್ನನುಭವಿಸಿ ತೃಣಪ್ರಾಯಮಂ ಮಾಡಿಬಿಟ್ಟಂ
ಘನತತ್ತ್ವಜ್ಞಾನಿ ಸಾಂಸಾರಿಕಸುಖಮನಿದಂ ಸೌಖ್ಯಮೆಂದೊಲ್ವನಾವಂ ೪೫

ವ॥ ಎಂದು ಪರಮವೈರಾಗ್ಯಪರಾಯಣನಾಗಿ

ಚಂ॥ ಕವಚಹರಂ ಮನೋಹರಗುಣಂ ನಿಮಗೀತನೆ ನಾಥನೆಂದು ಪಾ
ರ್ಥಿವವರ್ಗೆ ನಿಯೋಗಿಗಳ್ಗೆ ಪತಿ ಪೇೞ್ದು ಸಮೂರ್ಜಿತರಾಜ್ಯದೊಳ್ ತನೂ
ಭವನನುದಾತ್ತನಂ ನಿಱಿಸಿ ಕೀರ್ತಿಯ ಡಿಂಡಿಮರಾವಮೆಂಬವೋಲ್
ರವಮಖಿಳಾಶೆಯಂ ಬಳಸೆ ಪೊಯ್ಸಿದನುತ್ಸವಕಾರಿಭೇರಿಯಂ ೪೬

ವ॥ ಅಂತು ಸಕಳ ಸಾಮ್ರಾಜ್ಯಪಟ್ಟಮನಗ್ರನಂದನಂಗೆ ಕಟ್ಟಿ ಪಟ್ಟಬಂಧೋತ್ಸವ ತೂರ್ಯರವಮುಮಾನಂದಭೇರೀರವಮುಂ ದಿಗ್ವಳಯಮಂ ಬಳಸೆ ಪೊಯ್ಸಿ ತಪೋರಾಜ್ಯಮಂ ಸ್ವೀಕರಿಸಲೆಂದುದ್ಯುಕ್ತನಾದ ಚಕ್ರವರ್ತಿಗೆ ಸಮೀಪವರ್ತಿಗಳಪ್ಪ ಪಾರ್ಥಿವರುಮಮಾತ್ಯರು ಮಿಂತೆಂದರ್

ಮಾಳಿನಿ॥ ದುರಿತರಿಪುವನಿಕ್ಕಲ್ ದೇವ ನೀನಾರ್ತು ಪೋಗು
ತ್ತಿರೆ ಪೆಱರಗಿದಿರ್ಪಂತಿರ್ಪುದೇಂ ಪಾಟಿಯೇ ಪೇೞ್
ಪರಿಜನಕದಳಿಂದಂ ಪೂಣ್ದು ನಿನ್ನಿಂದೆ ಮುನ್ನ
ನ್ನರಿವೆವಘಮನಾತ್ಮಧ್ಯಾನತೀವ್ರಾಸಿಯಿಂದಂ ೪೭

ವ॥ ಅಂತುಮಲ್ಲದೆ

ಕಂ॥ ಸ್ವಾಯತ್ತಸಾರ್ವಭೌಮ
ಶ್ರೀಯಂ ಜವ್ವನದೊಳುೞಿದೆ ನೀಂ ತೊಱೆದೆ ಗತ
ಪ್ರಾಯರೆಮಾವಲ್ಪತರ
ಶ್ರೀಯಂ ತೊಱೆದಾತ್ಮಹಿತದೊಳೆಸಗುವುದರಿದೇ ೪೮

ಎಂದು ತಱಿಸಂದು ರಾಜ್ಯದೊ
ಳೊಂದಿದ ನೃಪನಂದನಂಗೆ ನಿಜನಂದನರಂ
ತಂದೊಪ್ಪಯಿಸಿ ಪತಿಯ ಬೞಿ
ಸಂದರ್ ನೃಪತಿಗಳುಮುಚಿತಮತಿಮಂತ್ರಿಗಳುಂ ೪೯

ವ॥ ಅಂತು ಪರಿತ್ಯಕ್ತಪರಿಗ್ರಹಮಾದ ಪರಿಗ್ರಹಂಬೆರಸು ಪರಮಾನುರಾಗದಿಂ ಪೋಗಿ ನೀರಜನೆನಿಪ ಮುನಿರಾಜಚರಣನೀರಜಕ್ಕೆ ನೀರಾಜನಮಂ ರಾಜರಾಜಂ ಮೌಳಿಕೀಳಿತ ಶೋಣಮಾಣಿಕ್ಯಕಿರಣದೀಪಕಳಾಪದಿಂದೊಡರ್ಚಿ ವಿಶಿಷ್ಟಾಷ್ಟವಿಧಾರ್ಚನಾಪರಿಕರ ದಿಂದರ್ಚಿಸಿ ಭಕ್ತಿಭರದಿನೆಱಗುವಂತೆಱಗಿ ಪೊಡೆವಟ್ಟನಂತರಂ

ಕಂ॥ ಕ್ಷೇಮಂಕರಮುನಿಪತಿ ನಿಜ
ನಾಮಗ್ರಹಣದೊಳೆ ಬಹುಪರಿಗ್ರಹಬಂಧ
ವ್ಯಾಮೋಹಮನಳಱಿಸಿದ
ತ್ತೀ ಮಹಿಮೆಯಿನಾಯ್ತು ನಿನ್ನ ಪೆಸರನ್ವರ್ಥಂ ೫೦

ವ॥ ಅಂತವರ ವರಗುಣಸ್ತವನದ ನೆವದಿಂ ವಿಷಯವಿರಕ್ತಿಯಿಂ ವ್ಯಕ್ತೀಕರಿಸಿದ ವಿಷಯವಲ್ಲಭನ ವಿವೇಕಕ್ಕವಧಿವಿಳೋಕನಂ ಸಂತಸಮನಾಂತು ಚಕ್ರವರ್ತಿಯಂ ಸಂಯಮಚಕ್ರವರ್ತಿಯಂ ಮಾಡೆ

ಕಂ॥ ಪೃಥಿವೀಪಾಳಸಹಸ್ರಂ
ಪ್ರಥಿತಮಹೀನಾಥನಂತೆ ದೀಕ್ಷೆಯನಾಂತೇಂ
ಕಥಿಯಿಪೊಡೆ ಯಥಾ ರಾಜಾ
ತಥಾ ಪ್ರಜಾಯೆಂಬ ನೀತಿಯಂ ಪ್ರಕಟಿಸಿತೋ ೫೧

ಚಂ॥ ಒಡವಳೆದಿರ್ದ ಮೋಹದ ಮಹೀಪತಿಸಂತತಿ ಮೆಲ್ಲಿನೊಳ್ಳಿನೊಳ್
ತೊಡರ್ದಬಳಾಜನಂ ಬಿಡದೆ ತನ್ನೊಡನುಗ್ರತಪಕ್ಕಮೊಡ್ಡಿದ
ತ್ತೊಡಲನದೆಂದೊಡಿಂಪೊರೆವ ಪೆಂಪುಮನಾ ನೃಪನಿಂಪುಮಂ ಪವ
ಣ್ಣಿಡಿಸುವೆನೆಂಬನುಂಟೆ ಚತುರಬ್ಧಿಪರೀತಮಹೀತಳಾಗ್ರದೊಳ್ ೫೨

ವ॥ ಅಂತು ತನ್ನೊಡನೆಲ್ಲರುಂ ಕರ್ಮವಲ್ಲರೀಲವಿತ್ರಪವಿತ್ರಚರಿತ್ರಪಾತ್ರರಾಗಿ ವರ್ತಿಸುತ್ತುಮಿರೆ ದುರಿತಗಿರಿವಜ್ರಂ ವಜ್ರನಾಭಿ

ಕಂ॥ ವ್ರತಸಮಿತೀಂದ್ರಿಯರೋಧ
ಸ್ಥಿತಿಭೋಜನಲುಂಚನೈಕಭುಕ್ತಾಚೇಳ
ಕ್ಷಿತಿತಳಶಯನಾವಶ್ಯಕ
ತತಿವಿಗತಸ್ನಾನವಿಧೃತದಂತಮಳತ್ವಂ ೫೩

ಪ್ರಾಯಶ್ಚಿತ್ತಂ ವಿನಯಂ
ವೈಯಾಪೃತ್ಯಂ ಸದಾಗಮಾಧ್ಯಾತ್ಮಸ್ವಾ
ಧ್ಯಾಯಂ ಕಾಯೋತ್ಸರ್ಗಂ
ಶ್ರೇಯೋನಿಳಯಾತ್ಮತತ್ತ್ವಲೀನಂ ಧ್ಯಾನಂ ೫೪

ಅವಮೋದರ್ಯಮನಶನಂ
ವಿವಿಕ್ತಶಯನಾಸನಂ ರಸತ್ಯಾಗಂ ಮ
ತ್ತವಿರಳಕಾಯಕ್ಲೇಶಂ
ಭುವನಸ್ತುತವೃತ್ತಿ ವೃತ್ತಿಪರಿಸಂಖ್ಯಾನಂ ೫೫

ತವದುತ್ತಮಕ್ಷಮಾಮಾ
ರ್ದವಾರ್ಜವಂ ಸತ್ಯಶೌಚಸಂಯಮ ತಪ ಮ
ತ್ತವಿಚಳಿತತ್ಯಾಗಿತೆಯ
ದ್ರವಿಣತ್ವ ಬ್ರಹ್ಮಚರ್ಯಮಾರ್ಯಪ್ರಣುತಂ ೫೬

ವ॥ ಎಂಬೀ ಪೆಸರಿಂದೆಸೆವ

ಕಂ॥ ಮೂಲೋರ್ಕಕುತ್ತರೋತ್ತರ
ಭೂಲೋಕಸ್ತುತಗುಣಾಂಕುಶದಿನಿಂದ್ರಿಯ ಶುಂ
ಡಾಳಮನುಗಿಯುತ್ತುಂ ಧೃತಿ
ಶೀಲಂ ಜಿತಕರ್ಮಜಾಳನೆನಿಸಿ ಮುನೀಶಂ ೫೭

ವ॥ ನೆಗೞುತ್ತುಂ ಗುರುಪಾದಮೂಳದೊಳ್ ದೀಕ್ಷಾಕಾಲಮುಮಂ ಗುಣಗಣಪೋಷಣಮುಮಂ ಮಾಡುತ್ತುಂ ಗಣಪೋಷಣಕಾಲಮಂ ಕಳಿಪಿ ಬೞಿಕೇಕವಿಹಾರಿಯಾಗಿ ನಿಜಾತ್ಮಚಿಂತನಕ್ಕೆ ನಿರ್ಜಂತುಕಪ್ರದೇಶಮನಱಸುತ್ತುಂ ಬರ್ಪಾಗಳ್

ಮ॥ ಪಲಸಾಲಂ ತಡಸಾಸು ತೇಗು ತದುಕಿಂಚಿಲ್ಪೊನ್ನೆ ಚೆನ್ನಂಗಿ ಬೊ
ಬ್ಬುಲಿಯಿರ್ಬಿಡೆಡರನೇಱಲಿಪ್ಪೆ ಸಿರಿಸಂ ಹಾಡಂಗಿ ಭಾರಂಗಿ ನೇ
ಳಲೆರಂ ಪಾದರಿ ತಾಱ ತಂಡಸು ಬಿಳಿಲ್ ಬಲ್ಮತ್ತಿ ಬೇವತ್ತಿ ಸೆ
ಳ್ಳೆಲವಂ ಸಂಪಗೆ ತುಂಬರಂಬಡೆ ಕವುಂಗಿಮ್ಮಾವು ಕಕ್ಕಿಮ್ಮರಂ ೫೮

ವ॥ ಎಂಬೀ ಮರದುಱುಗಲಿಱುಂಬಿನಿಂದತಿಗಹನಮೆನಿಪ ಗಹನಾಂತರದೊಳಗೆ

ಚಂ॥ ವಿಪುಳ ರಸಪ್ರಪೂರ್ಣ ಫಳರಾಜಿವಿರಾಜಿತ ಸಾರಭೂಜದಿಂ
ವಿಪುಳ ಸುಗಂಧಮಗ್ನಮಧುಪಪ್ರಕರಾಂಚಿತ ಪುಷ್ಪವಲ್ಲಿಯಿಂ
ವಿಪುಳ ವಿಳೋಲಲೋಚನವನೇಚರಕೋಮಳಕಾಂತೆಯರ್ಕಳಿಂ
ವಿಪುಳ ಮರೀಚಿರತ್ನಚಯದಿಂ ವಿಪುಳಾಚಳಮೊಪ್ಪಿ ತೋಱುಗುಂ ೫೯

ವ॥ ಆ ವಿಪುಳಾಚಳದ ವಿಪುಳಶಿಳಾತಳದೊಳಚಳಿತಪ್ರತಿಮಾಯೋಗದೊಳಾ ಯೋಗೀಶ್ವರಂ ನಿಲ್ವುದುಂ

ಕಂ॥ ಕರಿಗಂ ಕೇಸರಿಗಂ ಕೇ
ಸರಿಗಂ ಶರಭಕ್ಕಮಾಯ್ತು ಶರಭಕ್ಕಂ ಮ
ಚ್ಚರಿಸುವ ಭೇರುಂಡಕ್ಕಂ
ಪರಸ್ಪರಪ್ರೀತಿ ಯತಿಯ ತಪದುನ್ನತಿಯಿಂ ೬೦

ವ॥ ಅಂತು ಶಾಂತರಸಮಂ ಪಸರಿಸುತ್ತುಂ ಮುನಿಪೋತ್ತಮನಾತ್ಮಧ್ಯಾನಾಧೀನ ಮಾನಸನಾಗಿರ್ಪುದುಮಾ ಗಿರಿಗನತಿದೂರದೊಳ್

ಕಂ॥ ಪಕ್ಕಣಮಿರ್ಪುದು ಪುಣ್ಯದ
ಪಕ್ಕಣಮಿಲ್ಲಲ್ಲಿ ಪುಟ್ಟಿದರ ಬಗೆಯೊಳ್ ಪಾ
ಪಕ್ಕೆ ನೆಲೆವೀಡು ನರಕಂ
ಬೊಕ್ಕವರ್ಗಳೆ ಮಗುೞ್ಚಿ ಪುಗಲೆ ಪುಟ್ಟುವರದಱೊಳ್ ೬೧

ಶಾರೀರ ಪರಸ್ಪರ ವಸು
ಧೇರಿತ ಸಹಜಾತಮಾನಸಾಗಂತುಕ ದು
ರ್ವಾರ ಬಹುದುಃಖಮಂ ಪಾ
ಪಾರಂಭಕನುಂಡು ಷಷ್ಠನರಕೋರ್ವರೆಯೊಳ್ ೬೨

ವ॥ ಅಂತು ಮುನ್ನಿನ ಜನ್ಮದೊಳಜಗರನಾಗಿ ಮುನಿಪುಂಗವನಂ ನುಂಗಿದ ಪಾಪದ ಪರಿಪಾಕದಿಂ ಬಟಿಸಿಡಿಲ್ಲೊಡೆಯ ಶತಚೂರ್ಣಶರೀರನಾಗಿ ಪೋಗಿ ತಮಃಪ್ರಭೆಯೊಳಿರ್ಪತ್ತೆರಡುಸಾಗರೋಪಮಂಬರಮವೆಯಿಕ್ಕುವನಿತು ಪೊೞ್ತುಂ ತೆಱಪಂ ಪಡೆಯದೆ ಪಲತೆಱದ ದುಃಖಮನನವರತಮನುಭವಿಸಿ ಬಂದು

ಕಂ॥ ಆ ಪಕ್ಕಣಕ್ಕಮಗ್ಗದ
ಪಾಪಕ್ಕಂ ಪೞಿಗಮಧಿಪನಾದಂ ಯತಿಪ
ಸ್ತ್ರೀಪಶುಶಿಶುವಿಷಮವಧೋ ೬೩
ದ್ದೀಪಿತಕೋಪಂ ಕುರೂಪನಸದಾಳಾಪಂ

ಆರಕ್ತನಯನಯುಗಳಂ
ಕ್ರೂರತ್ವಕೃತಾಂತದಾರಕಂ ಶ್ಮಶ್ರು ದೃಢೋ
ದಾರತರಶೃಂಗನಂತಕ ೬೪
ಸೈರಿಭದಂತಿರ್ಪನಲ್ಲಿ ಕಠಿನಕುರಂಗಂ

ಚಂ॥ ಕರಡಿಯ ಕಾರ್ಷ್ಣ್ಯಮಂ ಮಹಿಷದಕ್ಷಿಯ ತೀಕ್ಷ್ಣತೆಯಂ ವರಾಹದು
ದ್ಧುರತರದೇಹನಿಷ್ಠುರತೆಯಂ ಪುಲಿಯುಗ್ರತೆಯಂ ಮದಾಂಧಸಿಂ
ಧುರದ ಪೊಡರ್ಪನಗ್ಗಳಿಪ ಸಿಂಗದ ಸಾಸಮನೋವದಂತವಂ
ಗಿರಿದೆಟಿಕೊಂಡವೋಲತಿಭಯಂಕರನೆಯ್ದೆ ಕುರಂಗನಂಗದಿಂ ೬೫

ವನಚರನಾಗಿ ಕಾನನಚರಂ ಪೆಸರಿಂದೆ ಕುರಂಗನಾಗಿ ನೆ
ಟ್ಟನೆ ಗಜಸಿಂಹಮಂ ಕೊಲುವನಶ್ರಮದಿಂದಮ ಬೇಡನಾಗಿಯಾ
ತನ ಮೃಗಯಾರ್ಥಿಯುಚ್ಚತನುಸಂಗತನಾಗಿ ಸಮಂತು ನೀಚವ
ರ್ತನಯುತನಾದನಾರವನವೋಲ್ ವಿಪರೀತಚರಿತ್ರರುರ್ವಿಯೊಳ್ ೬೬

ಕಂ॥ ಮುಳ್ಮರದ ಕೆಲದ ಮಾಳತಿ
ಯೊಳ್ಮೊರ್ಖಿನ ಕೆಯ್ಯ ರತ್ನದೊಳ್ ಸಮನೆನಿಸಿ
ರ್ದಳ್ಮದನವಿಜಯಲಕ್ಷ್ಮಿಯ
ಬಾಳ್ಮೊದಲೆನೆ ಮಿಸುಪ ಶಬರಿ ಶಬರನ ಕೆಲದೊಳ್ ೬೭

ವ॥ ಮತ್ತಮಾ ಶಬರಶಿಬಿರದೊಳ್

ಚಂ॥ ಬೆಳತಿಗೆಗಣ್ಣ ಬೆಳ್ಪಿನೊಳೆ ಕೌಮುದಿಯಿಂ ಪುದಿದಿರ್ದ ಸಸ್ಮಿತೋ
ತ್ಪಳಿನಿಯನುಟ್ಟ ಪಲ್ಲವನಿಕಾಯದೆ ಪಲ್ಲವಭೃತ್ತಮಾಳಕೋ
ಮಳಲತೆಯಂ ನಿರಾಕರಿಸಿ ಪೆರ್ಮೊಲೆಪೊಂಗೊಡನಂತಿರೊಪ್ಪೆ ಪ
ಜ್ಜಳಿಸುವ ನೀಳದಿಂ ಸಮೆದ ಪುತ್ತಳಿಯಂತೆ ಪುಳಿಂದೆಯೊಪ್ಪಿದಳ್ ೬೮

ಕಂ॥ ತುಂಗಕುಚಂ ಮಂಗಳಕಳ
ಶಂ ಗುರುಜಘನಂ ನಿತಂಬಮೆನಿಸುವುದುಚಿತಂ
ಸಂಗಳಿಸಿದ ಪಲ್ಲವದಿಂ
ದಂ ಗೆಡೆಗೊಳೆ ಚೆಲ್ವು ಸೊಗಯಿಸಿತು ವನಚರಿಯಾ ೬೯

ಅಂಗಜಗಜಕುಂಭದ ಚೆ
ಲ್ವಿಂಗಿವು ಗುರುಗುಂಜಿಯಿಂದಮಗ್ಗಳಮೆನೆ ಪೀ
ನಂಗಳ್ ಗುಂಜಾಭರಣದೆ
ತುಂಗಕುಚಂಗಳ್ ವಿರಾಜಿಕುಂ ಬೇಡಿತಿಯಾ ೭೦

ಮನಮನೆಜಗಿಸಿತಶಿಕ್ಷಿತ
ವನೇಚರೀಸರಸಗೀತರುಚಿ ಸಹಜಕವೀಂ
ದ್ರನ ಕಾವ್ಯದಂತೆ ಮುಗ್ಧಾಂ
ಗನೆಯೊಲವಿನ ತೆಜದಿನಲರ ತನಿಗಂಪಿನವೋಲ್ ೭೧

ಕೋಗಿಲೆಗೆ ಮನೋರಾಗಮ
ನಾಗಿಪ ರೂಪುಂಪೊದಳ್ದವೋಲ್ ಕಳರವಮಿಂ

ಬಾಗೆಸೆವ ರೊಪು ಮನಮಂ
ಪೂಗಣೆಯೆನೆ ತಾಗೆ ಶಬರಿ ಪಾಡಿದಳೊರ್ವಳ್ ೭೨

ಚಂ॥ ಕದಪು ವಿಚಿತ್ರಪತ್ರಚಯಮಿಲ್ಲದಲಕ್ತಕಜಾತರಾಗಮಿ
ಲ್ಲದ ಪದಪಲ್ಲವಂ ಮಿಸುಪ ತಿರ್ದಣಮಿಲ್ಲದ ಪುರ್ವು ಹಾರಮಿ
ಲ್ಲದವುರ ವಸ್ತ್ರಮಿಲ್ಲದ ಕಟೀತಟಿ ಮಂಜನಮಿಲ್ಲದಕ್ಷಿಗಳ್
ಮುದಮನನಾರತಂ ಪಡೆಯೆ ಬೇಡಿತಿ ಗಾಡಿಯನೊಲ್ದು ತಾಳ್ದಿದಳ್ ೭೩

ವ॥ ಅಂತುಂ ಮುತ್ತುಂ ಮೆಟಿಸುಂ ಪೆಡೆವಣಿಯುಂ ಫಣಿಯುಂ ಅಮೃತಮುಂ ವಿಷಮುಂ ಬೆರಸಿರ್ಪಂತೆ ಬೇಡಿತಿಯರುಂ ಬೇಡರುಂ ಕೂಡಿರ್ಪ ಶಬರಶಿಬಿರಕ್ಕಾ ಕುರಂಗನಧಿಪನಾಗಿರ್ದು ಪಾಪರ್ಧಿಲಂಪಳನೊಂದುದೆವಸಂ

ಕಂ॥ ಅಂಜಿಸೆ ಸಾರ್ಚಿದ ಕಹಳೆಯ
ಜುಂಜೆಯ ದನಿ ಜವನ ವಿಜಯಪಟಹದ ದನಿವೋಲ್
ಬಿಂಜದಡವಿಯ ಮೃಗಂಗಳು
ಮಂ ಜಳಚರಕುಳಮುಮಂ ವಯೋನಿವಹಮುಮಂ ೭೪

ಜಾಲಂ ಬಲೆ ಸಿಡಿವಲೆ ಬಡಿ
ಕೋಲಲಗಂಬಿಟ್ಟಿ ಕೊಡಲಿ ಬಿಲ್ ಕೆಯ್ವೊಡೆ ಬೆ
ಳ್ವಾಲಂ ಗಾಳದ ಕಟ್ಟಿಗೆ
ಕೌಳೇಯಕವಿತತಿ ಸೆಂಡುಕೋಲಸಿ ಚಕ್ರಂ ೭೫

ವ॥ ಮತ್ತಂ ಪಲವು ಚಂದದ ಬಲೆಗಳ್ವೆರಸು ಬೇಂಟೆಗೆ ಜವನ ಬಂಟರೆನಿಸುವ ವನಚರಪರಿವೃತನಾಗಿ ಪೊಜಮಟ್ಟು ಕಾಳಂ ದಾಟಿಟ್ಟು ಗಹನದುರ್ಗಮಂ ನಿರ್ಘೃಣವೃತ್ತಿಯಿಂ ಮುತ್ತುವಂತೆ ಮುತ್ತಿ

ಕಂ॥ ಟಂಕಾರರವಂ ಕಿವಿಯಂ
ಭೋಂಕೆನೆ ಮಿಗೆ ತೀವೆ ಪುಗಲೆ ದೆಸೆಗಾಣದೆ ತ
ಳ್ಳಂಕಗೊಳುತಿರ್ಪ ವನಮೃಗ
ಮಂ ಕವಿತಂದೆಚ್ಚುದಾಗ ವನಚರನಿಕರಂ ೭೬

ಮೃಗಮಂ ಪತಿಯಿಂದಂ ಗೋ
ರಿಗೆ ಪತ್ತಿಸಿ ಕೊಲಿಪ ಶಬರಿ ಪಥಿಕರನೊಳ್ಮಾ
ತುಗಳಿಂ ಸಿಲ್ಕಿಸಿ ಪತಿಯಿಂ
ದುಗಿಯಿಪ ನೇಣ್ಕಾರ್ತಿಯಂದಮಂ ನೆನೆಯಿಸಿದಳ್ ೭೭

ಕಣೆಯಿಂದಂ ಕಾಮನ ಪೂ
ಗಣೆ ಕೂರಿದುವಲ್ಲದಂದು ಗೋರಿಗೆ ಸಂದಿ
ರ್ದಣಿಸದೆ ವನಚರನೇಸಂ
ಪ್ರಣಯದೆ ಸೆರೆದತ್ತು ಹರಿಣಿಯೊಳ್ ಮಿಗೆ ಹರಿಣಂ ೭೮

ಕಾಯ್ದು ಹರಿಣಕ್ಕೆ ನಾಯ್ಗಳ
ನೊಯ್ದುಱ್ ಬಿಡಲೆಯ್ದಲಾಱದಿರೆ ತಾನವಱಿಂ
ದೆಯ್ದುವ ಗತಿ ಪಿರಿದೆಂಬವೊ
ಲೆಯ್ದಿದ ಶಬರನವನಿಱಿದು ತೋಱಿದನಾಗಳ್ ೭೯

ಅಲಗಂಬಿಂದಿಸೆ ಬೆದಱದೆ
ಮಲೆದಿದಿರನೆ ಬಂದು ಮೇಲೆವಾಯ್ದೊಡೆ ತೀವಿ
ರ್ದಲಗಿಂದೆಕ್ಕಲನಂ ಕೊಲೆ
ಕಲಿತನವಾಯ್ತೆಕ್ಕಲಾವಣಂ ಲುಬ್ಧಕನೊಳ್ ೮೦

ಪ್ರತಿಮಾನಮನಾರ್ದಿಸೆ ಕಣೆ
ಮತಂಗಜದ ಪೇಚಕಾಂತರದೆ ಪೋಪುದಱಿಂ
ಪ್ರತಿಮಾನಂ ಶರವಿದ್ಯೆಯೊ
ಳಿತರರ್ ತನಗಿಲ್ಲೆನಿಪ್ಪನಲ್ಲಿ ಕುರಂಗಂ ೮೧

ಸಿಂಗಮನದಱಟ್ಟುವ ಮುನಿ
ಸಿಂಗಮವನ ಸಾಹಸಕ್ಕಮುಟಿಚು ಮೃಗಂಗಳ್
ಸಂಗಡದೆ ಸಾಯದವನೇ
ಸಂಗಡದೇಂ ಮೀಱುವನ್ನವಿನ್ನೇನೊಳವೇ ೮೨

ಪಕ್ಕಿಗೆ ಗಿಡುಗಂ ಕ್ರೂರಮೃ
ಗಕ್ಕೆ ಮೃಗಾರಾತಿ ಹರಿಗೆ ಶರಭಂ ಶರಭಾ
ಘಕ್ಕಷ್ಟಾಪದರಿಪುವೆನೆ
ಕೊಕ್ಕರಿಸದೆ ಕೊಂದನಂದು ನಿಂದು ಪುಳಿಂದಂ ೮೩

ವ॥ ಅಂತಾ ಕುರಂಗಂ ಕೃತಾಂತನಂತೆ ಜಳಸ್ಥಳ (ವನಸ್ಥಳ) ನಭಸ್ಥಳಚರಂಗಳಪ್ಪ ಜೀವಂಗಳನೋವದೆ ಕೊಂದುಂ ತಣಿಯದೆ ದೆಸೆಗಳನವ್ವಳಿಸಿ ನೋಡುತ್ತುಂ ವಿಪುಳಾಚಳದೊಳ್ ಯೋಗನಿಯೋಗದೊಳ್ ನಿಂದಿರ್ದಾ ಯೋಗೀಶ್ವರನಂ ಕಂಡುಂ ಪರಿತಂದು ಭವಬದ್ಧ ಕ್ರೋಧದಿಂ ಭವನಂತೆ ವನೇಚರಂ ವಿಷಮಲೋಚನನಾಗಿ ನುಂಗುವಂತೆ ನೋಡಿ

ಕಂ॥ ಪೆಱತೇನೊ ಬಗೆಗೆ ತನ್ನನೆ
ಗುಱಿಮಾಡಿದ ಮುನಿಯ ತನುವನೊದವಿದ ಮುನಿಸಿಂ
ಗುಱಿಮಾಡಿ ನೆರೆಯದಘಮಂ
ನೆಱಪುವೆನಾನೆಂಬ ತೆಱದೆ ತೆಗೆನೆರೆದೆಚ್ಚಂ ೮೪

ನಿಶಿತಾಸ್ತ್ರಹತಿಯಿನಾ ಮುನಿ
ಯ ಶರೀರಂ ಕೂಡೆ ಜಾಳರಂಬೋಗಿರೆ ತ
ನ್ನ ಶರೀರದೇಱು ವಾಯೊಳ್
ವಿಶೇಷದಿಂ ನುಸುಳೆ ಕಂಡು ಮುಳಿಯದ ಮುನಿಸಿಂ ೮೫

ಕರಚಕ್ರದಿಟ್ಟು ಖಂಡಿಸು
ತಿರೆ ಶಬರಂ ತನುವನಾಮೆ ಬೇರ್ಕೆಯ್ವೆಡೆಯೊಳ್
ನೆರಮಾದನೆಂದೆ ಯತಿಪತಿ
ಪರಮಧ್ಯಾನದೊಳೆ ನಿಂದನೇಂ ಧೃತಿಯುತನೋ ೮೬

ವನಮೃಗನಿವಹಂ ತವಗಾ
ವನೇಚರನಿನಪ್ಪ ಬಾಧೆಯಂ ಬಗೆಯದೆ ಕ
ಣ್ಪನಿಯಂ ತೀವುತ್ತುಂ ನಿಜ
ತನುವಂ ಶರಚಕ್ರಹತಿಗೆ ಸಾರ್ಚಿದುವಾಗಳ್ ೮೭

ವನದೇವತೆಯರೊಳಾಕ್ರಂ
ದನನಿನದಂ ಪುಟ್ಟಿತಲ್ಲಿ ಜವನಂ ಬಾರಿ
ಪ್ಪನುಮಾವನೊ ಕಟ್ಟಿತನಾ
ವನೊ ಕಳೆವನೆನಿಪ್ಪ ಮಾತದೇಂ ತಪ್ಪುಗುಮೇ ೮೮

ಶಲ್ಯಂಗಳಿರ್ದೊಡಂ ವೈ
ಕಲ್ಯಕ್ಕೆಡೆಗುಡದೆ ಧೃತಿಯನವಳಂಬಿಸಿ ನಿಃ
ಶಲ್ಯೋವ್ರತಿಯೆನಿಸಿದ ವಾ
ತ್ಸಲ್ಯಪರಂ ಪರಮತತ್ತ್ವಮಂ ಭಾವಿಸಿದಂ ೮೯

ವ॥ ಅಂತು ನಿರ್ಮಳಾಂತರಂಗಧರ್ಮಧ್ಯಾನಪರಾಯಣನಾಗೆ

ಕಂ॥ ಗಿಡುವಿಂದಂ ತೊಲಗಿದಲರ್
ಪಡೆದು ಗುಣಮನುತ್ತಮಾಂಗದೊಳ್ ಸೊಗಯಿಪವೋ
ಲೊಡಲಿಂ ತೊಲಗಿದ ಮುನಿಯಸು
ಪಡೆದು ಗುಣಮನುತ್ತಮಾಂಗದೊಳ್ ಸೊಗಯಿಸುಗುಂ ೯೦

ಮಂದರಧೃತಿಯತಿತನುವಂ
ಮಂದಾರನಮೇರುಪಾರಿಜಾತಕಮುಚಿತಂ
ಬಂದು ಸುರಿದತ್ತು ದೆಸೆ ತಂ
ಪಿಂದಂ ಪುದಿವಂತು ದಿವಿಜಕರತಳಗಳಿತಂ ೯೧

ವ॥ ಅಂತು ಪರಿತ್ಯಕ್ತಶರೀರಭಾರನಾದ ಮುನಿನಾಯಕಂ ಸುಭದ್ರಾಭಿಧಾನ ಸುಖನಿಧಾನ ಮಧ್ಯಮ ಗ್ರೈವೇಯಕನಾಯಕರತ್ನನುಂ ಸಪ್ತವಿಂಶತಿರತ್ನಾಕರಪ್ರಮಿತಜೀವಿತನುಂ ತತ್ಸಮಾನ ಸಂವತ್ಸರಸಹಸ್ರಸಂಕಲ್ಪಿತಾಮೃತಾಶನನುಂ ಸಾರ್ಧತ್ರಯೋದಶಮಾಸ ನಿರ್ಯತ್ಸುರಭಿನಿಶ್ವಾಸನುಮಣಿಮಾದಿಗುಣಮಣಿಪಾರಾವಾರನುಂ ನಿಃಪ್ರವೀಚಾರನುಮಾಗಿ

ಕಂ॥ ನೂತ್ನಶಶಿಕಾಂತನಿರ್ಮಳ
ರತ್ನಚ್ಛವಿ ಸಹಜವಸನಭೂಷಣಮಾಳಂ
ರತ್ನಿದ್ವಯಾರ್ಧತನು ಸಾ
ಪತ್ನರಹಿತಮಹಿಮನೆಸೆದನಂದಹಮಿಂದ್ರಂ ೯೨

ಅಪ್ರತಿಮಪುಣ್ಯಸಂಜನಿ
ತಾಪ್ರತಿಮನಿಜಾಯುರಬ್ಧಿಭವಸುಖಸುಧೆಯಿಂ
ಶ್ರೀಪ್ರಭು ತಣಿದನವರತಮ
ಯಪ್ರಿಯನಲ್ಲಿರ್ದ ಜಿನರ್ಗೆ ವಿನಮಿತನಪ್ಪಂ ೯೩

ವ॥ ಅಂತು ಕಲ್ಪಾತೀತದೊಳನಲ್ಪಾನಂದಪೀಯೂಷಮಂ ಪೀರ್ದು ನಿಜಾಯುರವಸಾನದೊಳನೂನಜ್ಞಾನಜೈನಮೂರ್ತಿಯಂ ಧ್ಯಾನಿಸುತ್ತುಮಲ್ಲಿಂದಮಹಮಿಂದ್ರಂ ಬಂದು ಜಂಬೂವೃಕ್ಷೋಪಲಕ್ಷಿತದ್ವೀಪದ ಭರತಕ್ಷೇತ್ರದೊಳ್

ಕಂ॥ ಕೋಶಾಭಿವೃದ್ಧಿಯಂ ವಸು
ಧೇಶಂಗೆ ಸಮಸ್ತಧಾನ್ಯರತ್ನಾಕರಮ
ಪ್ಪೀ ಶೋಭೆಯಿಂದೆ ಪಡೆದು ಸು
ಕೌಶಲಮನ್ವರ್ಥನಾಮಮೆಸೆಗುಂ ದೇಶಂ ೯೪

ವ॥ ಆ ವಿಷಯವಿಳಾಸಿನಿಗಳಂಕಾರಮೆನಿಸಿ

ಕಂ॥ ಸಾತಿಶಯರೂಪಯೌವನ
ಚಾತುರ್ಯನಿಕೇತನಾಂಗನಾನಿಚಿತಂ ಸಾ
ಕೇತಪುರಿ ಮಕರಕೇತನ
ಮಂ ತನ್ನೊಳ್ ನೋಡೆ ಲೀಲೆಯಿಂದೆತ್ತಿಸುಗುಂ ೯೫

ವ॥ ಆ ಪುರಶ್ರೀಪತಿಯುಂ ಕಾಶ್ಯಪಾನ್ವಯಪ್ರಶಸ್ತ್ಯನುಮಿಕ್ಷ್ವಾಕುವಂಶೋತ್ತಂಸನುಮಪ್ಪ

ಉ॥ ಶ್ರೀವಿಭುವಜ್ರಬಾಹುವಸುಧಾಪತಿಗಂ ವಿಳಸತ್ಪ್ರಭಂಕರೀ
ದೇವಿಗಮಿಂದ್ರಭೂರುಹಕಮಪ್ರತಿಮಪ್ರಿಯಕಲ್ಪವಲ್ಲಿಗಂ
ಭೂವಳಯಾರ್ತಿಹಾರಕಮುದಾರಗುಣೋನ್ನತಿ ಪುಟ್ಟುವಂತೆ ವಿ
ಶ್ವಾವನಿಪೂಜ್ಯನೂರ್ಜಿತಯಶಃಪ್ರಸರಂ ಕವಿತಾಮನೋಹರಂ ೯೬

ಕಂ॥ ಆನಂದಂ ಪರಿಜನಕ
ತ್ಯಾನಂದಂ ಪುರಜನಕ್ಕೆ ಜನಿಯಿಸುತಿರೆ ನೇ
ತ್ರಾನಂದನಮೂರ್ತಿ ಗುಣಾಂ
ಭೋನಿಧಿಯಾನಂದನೆಂಬ ನಂದನನಾದಂ ೯೭

ವ॥ ಅಂತು ತನ್ನಭಿಧಾನಕ್ಕನ್ವರ್ಥಮಪ್ಪಂತು ಪುಟ್ಟಿ

ಮ.ಸ್ರ॥ ಸ್ಮಿತಹೇಮಾಂಭೋಜವಕ್ತ್ರಂ ಕುವಳಯನಯನದ್ವಂದ್ವಮಾಜಾನುಬಾಹು
ದ್ವಿತಯಂ ವಿಸ್ತೀರ್ಣವಕ್ಷಂ ಘನಜಘನಯುಗಂ ಚಾರುರಂಭೋರುಯುಗ್ಮಂ
ನುತಜಂಘಾಕಾಂಡಮಂಚನ್ಮೃದುಪದಯುಗಳಂ ರಂಜಿಪನ್ನಂ ಕುಮಾರಂ
ಚತುರಸ್ತ್ರೀಹಾರಿಯಾದಂ ವಿಬುಧಜನಮನಃಪದ್ಮಿನೀಪದ್ಮಮಿತ್ರಂ ೯೮

ಗದ್ಯ

ಇದು ವಿದಿತ ವಿಬುಧಲೋಕನಾಯಕಾಭಿಪೂಜ್ಯ ವಾಸುಪೂಜ್ಯಜಿನಮುನಿ ಪ್ರಸಾದಾಸಾದಿತ ನಿರ್ಮಳಧರ್ಮ ವಿನುತ ವಿನೇಯಜನವನಜವನವಿಳಸಿತ ಕವಿಕುಳತಿಳಕಪ್ರಣೂತ ಪಾರ್ಶ್ವನಾಥ ಪ್ರಣೀತಮಪ್ಪ ಪಾರ್ಶ್ವನಾಥಚರಿತಪುರಾಣದೊಳಾ ನಂದಕುಮಾರಾಭ್ಯುದಯವರ್ಣನಂ ದ್ವಾದಶಾಶ್ವಾಸಂ

ತ್ರಯೋದಶಾಶ್ವಾಸಂ

ಕಂ॥ ಶ್ರೀಗಂ ಸಮಗ್ರವಿಜಯ
ಶ್ರೀಗಮಿಳಾಸ್ತುತ್ಯಸರಸಸಾಹಿತ್ಯವಚಃ
ಶ್ರೀಗಂ ವಿಧುವಿಶದಯಶಃ
ಶ್ರೀಗಂ ನೆಲೆಯೆನಿಸಿ ನೆಗೞ್ದ ಕವಿಕುಳತಿಳಕಂ ೧

ಗುರುರಾಜ್ಯಭರಕೆ ನೆಱದಿರೆ
ವರಾಹಕಂಧರನೆನಿಪ್ಪ ತನಯಂ ಪಿತೃವಾ
ದರದಿಂ ಪಟುಪಟಹರವಂ
ಪರೆಯುತ್ತಿರೆ ಕೂರ್ತು ರಾಜ್ಯಭಾರಮನಿತ್ತಂ ೨

ವಿತತಕಳಾವಿಳಸಿತನ
ಪ್ರತಿಮ ಮಹಾಮಂಡಳೇಶ್ವರತ್ವಮನಾಂತು
ನ್ನತಿಗೆಡೆಯಾದಂ ಕುವಳಯ
ಹಿತಕರನಾನಂದರಾಜನೂರ್ಜಿತತೇಜಂ ೩

ವ॥ ಅಂತು ನಿಜಗುರುನಿರೂಪಿತಮಹಾಮಂಡಳಾಧಿಪತ್ಯಮನೇಕಾಯತ್ತಂ ಮಾಡಿ

ಕಂ॥ ಸಂತಂ ವಸಂತಮೆನಿಸಿ ನಿ
ತಾಂತಂ ತನ್ನಾಳ್ವ ಧರಣಿ ಸೊಗಯಿಸಿ ವಸುಧಾ
ಕಾಂತಂ ಪಾಳಿಸೆ ಮಿಸುಪ ವ
ಸಂತಂ ಬಂದಿತ್ತುದವನಿಗತ್ಯುತ್ಸವಮಂ ೪

ವ॥ ಅಂತುಮಲ್ಲದೆ

ಮ॥ ಪರಿಪಕ್ವಂ ಫಳರಾಜಿ ಸೌರಭನಿದಾನೋಜ್ಜೃಂಭಿತಂ ಪುಷ್ಪಮಂ
ಜರಿ ನಾನಾಲತಿಕಾವಳೀವಿಪುಳಶಾಖಾಹಸ್ತದೊಳ್ ಶೋಭಿಸು
ತ್ತಿರೆ ನಂದೀಶ್ವರಪೂಜೆಯಂ ಪಡೆದು ಮಾಟ್ಕುಂ ರಾಜನಾನುಂ ಮನೋ
ಹರಮಂ ಮಾಡುವೆನೆಂದು ಬಂದ ತೆಱದಿಂ ಚೆಲ್ವಾಯ್ತು ಚೈತ್ರಾಗಮಂ ೫

ವ॥ ಅಂತು ಜಗದಾಶ್ಚರ್ಯಮೆನಿಸಿ ತನ್ನೆಸಗುವ ನಂದೀಶ್ವರಸಪರ್ಯೆಗೆ ಸಹಾಯಮಾಗಿ ಬಂದ ಮಧುಮಾಸದೊಳ್

ಕಂ॥ ನಿರುಪಮಪುಣ್ಯಪಯೋಧಿಯ
ತೆರೆಯೆನೆ ಚಮರರುಹಮಿಂದುವೆನೆ ಬೆಳ್ಗೊಡೆಯೊ
ಪ್ಪಿರೆ ಕಲ್ಪಭೂಜಮೆನೆ ಸುರು
ಚಿರಮಣಿಮಯಪಾಳಿಕೇತನಂ ಕರಿಶಿರದೊಳ್ ೬

ಚಂದಂಬಿಡಿದಿರೆ ದೇವ
ಚ್ಛಂದಂ ಮಣಿತೋರಣಂಗಳೆಡೆಯೆಡೆಯೊಳ್ ಪೂ
ರ್ಣೇಂದುನಿಭಚಂದ್ರಮಣಿಮುಕು
ರುಂದ ಕಳಶಧಾರಿ ವಾರನಾರೀನಿಕರಂ ೭

ನಡೆವ ಮುಗಿಲೆನಿಸೆ ಕರಿ ಚೆ
ಲ್ವಡರ್ದ ವಿಮಾನಮನೆ ಪೋಲೆ ಮಂಡವಿಗೆ ಬೆಡಂ
ಗಿಡಿದಿರೆ ಖೇಚಾರಿಯನಂ
ದೊಡರಿಪ ನರ್ತಕಿಯೆ ಖಚರಿಯೆನೆ ಕರಮೆಸೆದಳ್ ೮

ಘಂಟಾರವಮುಂ ಘನಜಯ
ಘಂಟಾರವಮುಂ ದಿಶಾಗಜಂಗಳ ವಿಳಸ
ದ್ಘಂಟಾರವಮಂ ಕೊರ್ವಿಸು
ತೆಂಟುಂ ದೆಸೆಗಳುಮನೆಯ್ದೆ ತೀವಿದುವಾಗಳ್ ೯

ವ॥ ಅಂತು ಯಾನನಾಗಶಿರೋಭಾಗದೊಳ್ ಪರಭಾಗಂಬಡೆದ ಚಮರೀಜಸಮಾಜಮುಂ ಪಲ್ಲವೋಲ್ಲಸಿತಸಿತಾತಪತ್ರವ್ರಾತಮುಂ ಪಾಳಿಕೇತನ ಪಾಳಿಯುಂ ವಿತಾನ ವಿತಾನಮುಂ ಮಂಡವಿಗೆಯ ಮಂಡಲಿಯುಂ ವಾರನಾರೀವಾರಮುಂ ಬಿತ್ತರಂಬೆತ್ತಿರೆ ಭುವನೇಶ್ವರ ವಂದಿತನಂದೀಶ್ವರಮಹಾಮಹಿಮೆಯನಮೇಯಹೃದಯಾನಂದದಿ ನಿಂದ್ರಂ ಮುಂದೆ ತನಗೆ ಮಾಳ್ಪ ಶ್ರೀವಿಹಾರವಿಸ್ತಾರಮೀ ತೆಱನಾದಪುದೆಂದಭಿನ ಯಿಸುವಂದದಿನಾನಂದ ನರೇಂದ್ರಂ ವಿಶಿಷ್ಟಾಷ್ಟಶೋಭೆಯಿಂ ಶೋಭಿಸುವ ನಿಜರಾಜಧಾನಿಯ ರಾಜವೀಥಿಯೊಳಗನೇಕ ರಾಜಚಿಹ್ನಂ ಮೆಱೆಯೆ ಮೆಱೆಯಿಸುತ್ತುಂ ವಿನೇಯನಿಕಾಯಂಬೆರಸು ಬರುತ್ತುಮಿರ್ಪುದುಮಾ ಪ್ರಸ್ತಾವದೊಳ್

ಕಂ॥ ವಿಪುಳಮತಿಗಳ್ ವಿವೇಕಾ
ಧಿಪಮತಿಗಳ್ ಪುಣ್ಯಸಿದ್ಧಿ ನೋಟ್ಪವರ್ಗಂ ಸಿ
ದ್ಧಿಪ ಜೈನಪೂಜೆಯಂ ನೋ
ಟ್ಪ ಪರಿಮಿತಾತ್ಮೀಯಭಕ್ತಿಭಾವಾಯತ್ತರ್ ೧೦

ಬರೆ ಪುಣ್ಯಸಮುದಯಮನಾ
ದರದೆಱಗುವರ್ಗೀವ ಸಮುದಯಂಬೆರಸು ನರೇ
ಶ್ವರನವರನಧಿಕಭಕ್ತಿಯ
ಭರದಿಂ ಗುರುಭಕ್ತಿಪೂರ್ವಕಂ ಬಂದಿಸಿದಂ ೧೧

ವ॥ ಅಂತಾ ಮುನೀಂದ್ರರಂ ಬಂದಿಸಿ ನರೇಂದ್ರನಿಂತೆಂದಂ

ಕಂ॥ ಜಿನಬಿಂಬಮಚೇತನಮೆಂ
ತು ನಿಗ್ರಹಾನುಗ್ರಹಕ್ಕೆ ನಾಯಕಮಕ್ಕುಂ
ಮುನಿವಾರಾಧಿಸುವ ಜನ
ಕ್ಕೆನಗಿದು ವಿಸ್ಮಯಮದಂ ತಿಳಿಪು ಮುನಿತಿಳಕಾ ೧೨

ವ॥ ಎಂದು ವಿನಯವಿನಮಿತೋತ್ತಮಾಂಗನಾಗಿ ಬಿನ್ನವಿಸಿ ನರಪತಿಗಪ್ರತಿಹತ ಪ್ರತಿಭರಪ್ಪ ಯತಿಪತಿಗಳಿಂತೆಂದು ಬೆಸಸಿದರ್

ಕಂ॥ ಅವಿಚಕ್ಷಣರಂ ತಿಳಿಪ
ಲ್ಕವನಿಪ ಬೆಸಗೊಂಡೆ ನಿನಗೆ ತತ್ತ್ವವಿದಂಗಿ
ಲ್ಲಿ ವಿಮೋಹಮುಂಟೆ ಜೈನ
ಸ್ಯ ವಿಸ್ಮಯೋ ನಾಸ್ತಿಯೆಂಬ ನುಡಿಯುಳ್ಳುದಱಿಂ ೧೩

ವ॥ ಎಂದರಸನ ದರ್ಶನಶುದ್ಧಿಯಂ ಪ್ರಭಾವಿಸಿ ಬಱೆಯಮಿಂತೆಂದರ್

ಮ॥ ನಿಯತಾಷ್ಟಾದಶದುಷ್ಟದೋಷರಹಿತಶ್ರೀಜೈನಬಿಂಬಂ ವಿಶು
ದ್ಧಿಯನುತ್ಪಾದಿಕುಮಾ ವಿಶುದ್ಧಿಯೆ ವಿನೇಯರ್ಗೈಹಿಕಾಮುತ್ರಿಕಾ
ಕ್ಷಯಸೌಖ್ಯಾಮೃತಮಕ್ಕುಮೆಂತೆನೆಯಭವ್ಯಂಗಾದೊಡಂ ಜೈನಮು
ದ್ರೆಯೆ ಮಾಳ್ಕುಂ ಮಹಿತಾಹಮಿಂದ್ರತೆಯನೆಂಬೀ ಸ್ತುತ್ಯಸಾಮರ್ಥ್ಯದಿಂ ೧೪

ಉ॥ ಶಾಂತರಸಾಂಬುರಾಶಿ ಜಿನಬಿಂಬಮದಂ ಪರಿಭಾವಿಪಾತನೊಳ್
ಶಾಂತಿ ಪೊದಟ್ಟು ನಿಲ್ಕುಮದೆ ಮಾಳ್ಕುಮಭೀಷ್ಟಸುಖಂಗಳಂ ಜಗ
ಕ್ಕಂತದಱಿಂ ಸುಖಾರ್ಥಿಯೆನಿಸಿರ್ಪ ವಿನೇಯನಿಕಾಯಮಾವಗಂ
ಸಂತಸದಿಂದೆ ಭಾವಿಸುಗೆ ಬಣ್ಣಿಸುಗರ್ಚಿಸುಗಿಂದ್ರವಂದ್ಯನಂ ೧೫

ವ॥ ಎಂದು ತನಗೆ ತತ್ತ್ವಸ್ವರೂಪಮಂ ನಿರೂಪಿಸೆ

ಕಂ॥ ಆಸನ್ನಭವ್ಯನರ್ಹ
ಚ್ಛಾಸನದೀಪಕರವಚನರುಚಿನಿಚಯಂ ಶಂ
ಕಾಸಂತಮಸಮನಲೆವಿನ
ಮಾ ಸಮ್ಯಗ್ಬೋಧರತ್ನ ರತ್ನಾಕರರಂ ೧೬

ವನಭವನಜ್ಯೋತಿಷ್ಕ
ಳ್ಪನಿಳಯನಂದೀಶ್ವರಾದಿಭೂತಳದೊಳ್ ಭೂ
ವಿನುತಮಕೃತ್ರಿಮಜಿನಗೃಹ
ಮೆನಿತೊಳವೆನಗವಱ ಸಂಖ್ಯೆಯಂ ಮುನಿ ಬೆಸಸಿಂ ೧೭

ವ॥ ಎಂದು ಬಿನ್ನವಿಸೆ ಪರಮಾಗಮ ಪಾರಾವಾರಪಾರಂಗಮರಿಂತೆಂದು ಬೆಸಸಿದರ್

ಕಂ॥ ಧನರಕ್ಷಕನುಮಕೃತ್ರಿಮ
ಜಿನಗೃಹಮಂ ನೋಡಿ ಸಮವಸೃತಿಯಂ ಪದೆದಿಂ
ಬಿನೆ ಮಾಳ್ಕುಮೆಂದೊಡಿನ್ನವ
ಅನುಪಮಶೋಭಾವಿಳಾಸಮಂ ಪವಣಿಪರಾರ್ ೧೮

ಪ್ರವಿಪುಳವಾನವ್ಯಂತರ
ಭವನದ್ವೀಪಾರ್ಣವಾಚಳಕ್ಕಂ ಪವಣಿ
ಲ್ಲವರ ಜಿನಾಗಾರಕ್ಕಂ
ಪವಣಿಲ್ಲದಱಿಂದಮವಱ ಚೆಲ್ವಿನ ತೆಱದಿಂ ೧೯

ಭಾಸುರಮಣಿಮಯ ಭವನಾ
ವಾಸದೊಳರುಣಾತ್ಮಕಳಶತೋರಣರುಚಿರಂ
ದ್ವಾಸಪ್ತತಿಲಕ್ಷಯುತ
ಶ್ರೀಸಂಭೃತಸಪ್ತಕೋಟಿಜಿನಗೃಹಮೆಸೆಗುಂ ೨೦

ಜ್ಯೋತಿರ್ಲೋಕದೊಳಮಸಂ
ಖ್ಯಾತಮಕೃತ್ರಿಮಜಿನಾಲಯಂ ನವರತ್ನ
ದ್ಯೋತಿನಿರಸ್ತಜ್ಯೋತಿ
ಶ್ಚೇತೋಧ್ವಾಂತಂ ನಿತಾಂತಮೆಸೆಗುಂ ಕಾಂತಂ ೨೧

ಸುತ್ರಾಮಪ್ರಣುತಂ ಪ್ರಥ
ಮತ್ರಿದಿವದೊಳೀಕ್ಷಣಪ್ರಿಯಂ ಮಣಿರೋಚಿ
ಶ್ಚಿತ್ರಿತಭಿತ್ತಿವ್ರಾತಂ
ದ್ವಾತ್ರಿಂಶಲ್ಲಕ್ಷಜಿನಗೃಹಂ ಸೊಗಯಿಸುಗುಂ ೨೨

ಎರಡನೆಯ ಕಲ್ಪದೊಳ್ ಮಣಿ
ಕಿರಣಪತಾಕಾಂಚಳಧ್ವಜಾಂಚಿತ ಜಿನಮಂ
ದಿರಮೆಸೆಗುಂ ಮಣಿತೋರಣ
ಪರಿವಾರವಿಶಿಷ್ಟಮಷ್ಟವಿಂಶತಿಲಕ್ಷಂ ೨೩

ಪ್ರಕಟಿತಸನತ್ಕುಮಾರಾ
ಖ್ಯಕಲ್ಪದೊಳ್ ಕಲ್ಪಭೂಜಪುಷ್ಪಸುಗಂಧಂ
ಸುಕೃತಪ್ರದಜಿನಸದನ
ಪ್ರಕರಂ ಪನ್ನೆರಡುಲಕ್ಕೆಯೆಸೆಯುತ್ತಿರ್ಕುಂ ೨೪

ತ್ರಿದಶಪತಿವಿನುತಮರ್ಹ
ತ್ಸದನಂ ಮಾಹೇಂದ್ರಕಲ್ಪದೊಳ್ ಪುಣ್ಯಫಳ
ಪ್ರದಮಷ್ಟಲಕ್ಷಮಮರೀ
ಮೃದುಗೀತವಿನೂತಮುಚಿತನೃತ್ಯಸ್ತುತ್ಯಂ ೨೫

ಅತ್ತಸುಖಬ್ರಹ್ಮ ಬ್ರ
ಹ್ಮೋತ್ತರಕಲ್ಪಂಗಳಲ್ಲಿ ಶಶಿಮಣಿವಿಳಸ
ದ್ಭಿತ್ತಿಯರುಣಮಣಿಕಳಶಮ
ನುತ್ತಮಜಿನವಸತಿ ನಾಲ್ಕುಲಕ್ಕೆಯೆನಿಕ್ಕುಂ ೨೬

ಲಾಂತವಕಾಪಿಷ್ಠಂಗಳೊ
ಳೇಂ ತೊದಳಯ್ವತ್ತುಸಾಸಿರಂ ಜಿನಗೇಹಂ
ಸಂತತಮತಿಕಾಂತಾಮರ
ಕಾಂತಾಸಂಗೀತಕೇಳಿಯಿಂ ಕಣ್ಗೊಳಿಕುಂ ೨೭

ಸುಮನೋಮನೋಹರಂ ಶು
ಕ್ರ ಮಹಾಶುಕ್ರಂಗಳಲ್ಲಿ ಪಲ್ಲವಿತಸುರ
ದ್ರುಮವನವೃತಮೆಸೆಗುಂ ನತ
ಸುಮನಂ ನಾಲ್ವತ್ತುಸಾಸಿರಂ ಜಿನಗೇಹಂ ೨೮

ವಿದಿತ ಶತಾರ ಸಹಸ್ರಾ
ರದೊಳಮರೀನಯನಕಾಂತಿ ಸಾರಸುಧಾಸಾ
ರದೊಳೊಪ್ಪಿ ತೋಱುಗುಂ ತ
ಪ್ಪದೆ ಜಿನಗೃಹವಿತತಿ ಷಟ್ಸಹಸ್ರಪ್ರಮಿತಂ ೨೯

ನಾನಾ ವಿಮಾನ ಮಾನಿತ
ಮಾನತಮಾ ಪ್ರಾಣತಾರಣಾಚ್ಯುತಮೆನಿಸಿ
ರ್ಪೀ ನಾಲ್ಕುಂ ಕಲ್ಪಂಗಳೊ
ಳಾನತಸುರಸಮಿತಿ ಜಿನವಸತಿ ಸಪ್ತಶತಂ ೩೦

ಮೊದಲಲ್ಲಿ ನೂಱಹನ್ನೊಂ
ದದಱಿಂ ನೂಱೇೞು ಬೞಿಕೆ ತೊಂಬತ್ತಾಱೆ
ನ್ನದಱಿಂ ಬೞಿಕ್ಕೆ ಜಿನಪತಿ
ಸದನಂ ಗ್ರೈವೇಯಕತ್ರಯಂಗಳೊಳೆಸೆಗುಂ ೩೧

ಎಸೆವಾ ನವಾನುದಿಶೆಯೊಳ್
ವಸತಿಗಳೊಂಬತ್ತೆ ಕಳಶದರ್ಪಣಘಂಟಾ
ಪ್ರಸರಾದ್ಯುಪಕರಣಂ ರಂ
ಜಿಸುಗುಂ ನೂಱೆಂಟು ಬೇಱೆವೇಱೆನ್ನವಱೊಳ್ ೩೨

ನಿರುಪಮಸುಖಪಂಚಾನು
ತ್ತರೆಗಳೊಳಹಮಿಂದ್ರಬೃಂದವಂದ್ಯಂಗಳ್ ಮಂ
ದರದಂತಿರೆಯ್ದೆ ಜಿನಮಂ
ದಿರಮೆಸೆಗುಂ ನಂದನಾಳಿಸುಂದರವಿಭವಂ ೩೩

ನಿರುಪಮನಂದೀಶ್ವರದೊ
ಳ್ಪುರುರತಿಕರದಧಿಮುಖಾಂಜನಾದ್ರಿಯೊಳಯ್ಪ
ತ್ತೆರಡು ಜಿನಮಂದಿರಂ ಸುರ
ಪರಿವೃಢಪರಿಪೂಜಿತಂ ಸುಪರಿವಾರಯುತಂ ೩೪

ಮಂದರಮಯ್ದಱ ನಾಲ್ಕುಂ
ನಂದನದೊಳ್ ನಾಲ್ಕುನಾಲ್ಕುಜಿನಮಂದಿರಮೋ
ಜೊಂದಱೊಳೆಸೆಗುಮವನಿತುಮ
ನೊಂದಿಸಿದೊಡಶೀತಿ ಜಿನಗೃಹಂಗಳೆನಿಕ್ಕುಂ ೩೫

ಕುಳಶೈಳಂಗಳೊಳರ್ಹ
ನ್ನಿಳಯಂ ಮೂವತ್ತುನೂಱು ವಕ್ಷಾರನಗಂ
ಗಳೊಳಿಷುಪರ್ವತದೊಳ್ ನಾ
ಲ್ಕೆಳಸಿರ್ಕುಂ ನಾಲ್ಕು ಮಾನುಷೋತ್ತರಗಿರಿಯೊಳ್ ೩೬

ವಿಜಯಾರ್ಧಂ ನೂಱೆಪ್ಪ
ತ್ತು ಜಿನಾಲಯಮವಱೊಳನಿತೆಯಕ್ಕುಂ ಜಂಬೂ
ಕುಜದಲ್ಲಿಯಯ್ದು ಶಾಲ್ಮಲಿ
ಕುಜದೊಳ್ ಸೊಗಯಿಸುಗುಮಯ್ದೆ ಜಿನಭವನಂಗಳ್ ೩೭

ಕುಂಡಳದೊಳ್ ವಾಣೀಮಣಿ
ಮಂಡಳ ಜಿನಗೃಹಚತುಷ್ಟಯಂ ಸಕಳಮಹೀ
ಮಂಡನ ರುಚಕಾದ್ರಿಯೊಳಾ
ಖಂಡಳವಿನುತಂ ಜಿನಾಲಯಂ ನಾಲ್ಕೆಸೆಗುಂ ೩೮

ಇನಿತು ಜಿನಗೃಹಸಮಾಖ್ಯೆ ಪ
ಠನಮಾತ್ರದೆ ಸಿದ್ಧಮಂತ್ರದಂತಭಿಮತಮಂ
ನಿನಗೆ ಜನಿಯಿಸುಗುಮವನಿಪ ೩೯
ನೆನೆವುದು ಪೊಗೞ್ವುದು ಕೃತಾರ್ಥನಪ್ಪೆಯಮೋಘಂ

ಬೆಸಗೊಂಡ ನಿನಗಮಭಿವ
ರ್ಣಿಸಿದೆಮಗಂ ಸಕಳ ಕರ್ಮನಿರ್ಜರೆ ಪುಣ್ಯ
ಪ್ರಸರಂ ಸಂಭವಿಸಿದುದಂ ೪೦
ತೆ ಸುಜನಸಂಸರ್ಗಮಾರ್ಗೆ ಮಾಡದೊ ಸುಖಮಂ

ಎಂದು ಬೆಸಸಿದ ಮುನೀಶ್ವರ
ರಂ ದೃಢತರಭಕ್ತಿಯಿಂದೆ ಬಂದಿಸಿ ಧರ್ಮಾ
ನಂದಮನೆ ತಳೆದು ತನ್ನಯ ೪೧
ಮಂದಿರಕೆಟ್ಟಂದಗಣ್ಯ ಪುಣ್ಯೋದ್ಯುಕ್ತಂ

ಪುರುಷಾರ್ಥನಿಧಿ ಶಲಾಕಾ
ಪುರುಷತೆಯಂ ಮಾಳ್ಪ ಪುಣ್ಯರಾಶಿಗಳೆಂಬಂ
ತಿರೆ ಸೊದೆವಳಿದ ಶಲಾಕೆಯ
ಪರಮಜಿನಾಲಯಮನಲ್ತೆಯಿಂದೆತ್ತಿಸಿದಂ ೪೨

ಮ॥ ವಿಳಸತ್ಪುಣ್ಯನಮೇರುವಿಂದೆಸೆವ ಪೆಂಪಿಂ ಮೇರುವಂ ಕೀರ್ತಿನಿ
ರ್ಮಳಗಂಗೋದ್ಭವಸಂಗದಿಂದೆ ಹಿಮವತ್ತುಂಗಾದ್ರಿಯಂ ಪೋಲ್ತು ಕ
ಣ್ಗೊಳಿಸುತ್ತಿರ್ದುವು ನೂತ್ನ ರತ್ನಮಯಭಿತ್ತಿವ್ರಾತಚೈತ್ಯಾಲಯಂ
ಗಳುದಂಚದ್ರುಚಿ ಕಾಂಚನೋರು ಕಳಶಪ್ರೋತ್ತುಂಗಶೃಂಗಂಗಳಿಂ ೪೩

ಮ.ಸ್ರ॥ ಪ್ರಗುಣ ಸ್ವರ್ಗಾಪವರ್ಗಕ್ಕಮಳಿನಮಣಿಚೈತ್ಯಾಲಯಶ್ರೇಣಿ ನಿಶ್ರೇ
ಣಿಗಳೆಂಬಂತಾದಮುತ್ತುಂಗತೆಯಿನೆಸೆದು ಮಿಥ್ಯಾತಮಸ್ತೋಮಮಂ ತೂ
ಳ್ದಿ ಗಡಾ ಸನ್ಮಾರ್ಗಮಂ ತೋಱುವ ಮಣಿಕಳಶಾರ್ಕಾಂಶುವಿಂದೊಪ್ಪೆ ಭವ್ಯಾ
ಳಿಗಲಂಪಂ ಪುಟ್ಟಿಸುತ್ತಿರ್ದುವು ಧರಣಿಪನೊಲ್ದೆತ್ತಿಸಲ್ಕತ್ಯುದಾತ್ತಂ ೪೪

ಚಂ॥ ಜಡಮತಿ ಭೇದಿಸಲ್ ನೆಱೆಯದಂತಿರೆ ರೀತಿ ಬೆಡಂಗನೆಯ್ದೆ ನೂ
ರ್ಮಡಿಸೆ ವಿಚಿತ್ರಭಿತ್ತಿಯಳವಟ್ಟಿರೆ ಜಾತಿ ನಿಸರ್ಗಶೋಭೆಯಂ
ಗೆಡೆಗೊಳೆ ಪಾರ್ಶ್ವಪಂಡಿತವಿನಿರ್ಮಿತಕಾವ್ಯದವೋಲ್ ಜಿನಾಲಯಂ
ಪಡೆದು ವಿನೇಯಸಂಪದಮನೇಂ ಪೆಸರ್ವೆತ್ತುದೊ ವಿಶ್ವಧಾತ್ರಿಯೊಳ್ ೪೫

ವ॥ ಅಂತಕೃತ್ರಿಮಭಕ್ತಿಯಿನಕೃತ್ರಿಮಚೈತ್ಯಾಲಯದಂತೆ ನಿಜಕೀರ್ತಿತ್ರೈಲೋಕ್ಯವರ್ತಿಯಾಗೆ ಚೈತ್ಯಭಕ್ತಿಯಿಂದುತ್ತುಂಗಚೈತ್ಯಾಲಯಂಗಳನೆತ್ತಿಸಿ

ಮ.ಸ್ರ॥ ಜಿನಪೂಜಾನಂದದಿಂದಂ ಜಿನಚರಿತಕಥಾಕರ್ಣನಾನಂದದಿಂದಂ
ಜಿನರಾಜಸ್ನಾನಗಂಧೋದಕಸವನ ಸಮುಜ್ಜೃಂಭಿತಾನಂದದಿಂದಂ
ಜಿನಪಾದಾಂಭೋಜಶೇಷಾಕ್ಷತಕುಸುಮಶಿರೋಭೂಷಣಾನಂದದಿಂದಂ
ವಿನುತಾನಂದಾವನೀಪಾಳಕನೆನೆ ನೆಗಟ್ದಂ ಸ್ತುತ್ಯಸಮ್ಯಕ್ತ್ವಯುಕ್ತಂ ೪೬

ಕಂ॥ ಧರ್ಮಸುರದ್ರುಮದ ಫಳಂ
ಶರ್ಮಪ್ರದ ರಾಜ್ಯವಿಭವಮೆಂದಱಿದು ನೃಪಂ
ಧರ್ಮಾನುಕೂಲಮೆನಿಸಿಯೆ
ನಿರ್ಮಳಮತಿಯರ್ಥಕಾಮದೊಳ್ ವರ್ತಿಸಿದಂ ೪೭

ವ॥ ಅಂತು ಧರ್ಮಾರ್ಥಕಾಮಫಳಾಯ ರಾಜ್ಯಾಯ ನಮಯೆಂಬ ವಾಕ್ಯಾರ್ಥಮನನ್ವರ್ಥಂ ಮಾಡುತ್ತುಮನೇಕ ಭೋಗೋಪಭೋಗಮನನುಭವಿಸುತ್ತುಮಿರ್ದೊಂದುದಿವಸಂ ಮಣಿಮಯ ಶೃಂಗಾರಾಗಾರದೊಳ್ ಶೃಂಗಾರಯೋನಿಯಂ ಭಂಗಿಸುವಂತೇಕಭಂಗಿಯಿಂ ಶೃಂಗಾರಮಂ ಮಾಡಿ ಮಣಿದರ್ಪಣಮಂ ನೋಡಿ

ಕಂ॥ ಕೆನ್ನೆಯ ನರೆಯಂ ನರಪತಿ
ಕನ್ನಡಿಯೊಳ್ ಕಾಣೆ ಪುಟ್ಟಿದುದು ವೈರಾಗ್ಯಂ

ನಿನ್ನಿರ್ಮಳತೆಯನೆಮ್ಮವೊ
ಲಿನ್ನಿಯತಂ ತಾಳ್ದೆನುತ್ತುಮಱಿಪಿದ ತೆಱದಿಂ ೪೮

ದರ್ಪಣವನಭೀಕ್ಷಿಸೆಯು
ತ್ಸರ್ಪಣಮಭಿರೂಪರೂಪಲಾವಣ್ಯಕ್ಕಂ
ತೋರ್ಪುದುಮುಂ ಮುಪ್ಪಿನೊಳವ
ಸರ್ಪಣಮಾಯ್ತಿನ್ನದೇಕೆ ಭೋಗೋದ್ಯೋಗಂ ೪೯

ತನ್ನಯ ಮೊಗಮಂ ನೋಡಲ್
ತನ್ನಯ ಕಣ್ ಪೇಸಿದಪ್ಪುದೆಂದೊಡೆ ಪೞತೇ
ನಿನ್ನಬಲೆಯರುಂ ಪೇಸುಗು
ಮೆನ್ನದೆ ಗತವಯಸನಬಲೆಯರ್ಗೆಳಸುವುದೇ ೫೦

ಮ॥ ತನುವಿಂದಂ ಧನದಾರ್ತಮಾರ್ತದಿನನೇಕಾರಂಭಮಾರಂಭದಿಂ
ಘನಜೀವಂಗಳ ಬಾಧೆ ಬಾಧೆಗಳಿನೇನೋ ಬಂಧಮಾ ಕರ್ಮಬಂ
ಧನದಿಂ ದುರ್ಗತಿ ದುರ್ಗತಿಭ್ರಮಣದಿಂದಂ ದುಃಖಮೆಂದಾರ್ಯರೀ
ತನ ಮೋಹಕ್ಕೆಡೆಯಾಗದಾಂಪುದು ತಪಃಶ್ರೀಯಂ ಕೃತಶ್ರೇಯಮಂ ೫೧

ಕಂ॥ ಬಾಲೆಯರ ಮನದೊಳೊದವಿದ
ನೀಲೀರಾಗತೆಯುಮಱಿಗುಮಱಿದೊಡೆ ಕೇಶಂ
ನೀಳತೆಯನೆಂದವಂದಿರ
ಲೋಲತೆಯಂ ಬಿಡದೊಡಪ್ರಬುದ್ಧಂ ವೃದ್ಧಂ ೫೨

ಇರದೆ ಗತವಯಸರನುಕೂ
ಲರಸಾಭಾರ್ಯಾಯೆನಿಪ್ಪಿದಂ ಬಗೆಯದೆ ಚಿಃ
ತರುಣಿಯರೊಲ್ಲದೊಡಂ ಕಾ
ತರಿಸಿಯೆ ಬೆಂಬತ್ತುವವರೆ ಗರ್ದಭಚರಿತರ್ ೫೩

ಪಳಿತಂ ಬರೆ ಪೞಿ ತನ್ನಂ
ಬಳಸುಗುಮೆಳಸಿದೊಡೆ ವಿಷಯತತಿಗದಱಿಂ ಶಂ
ಫಳಿತನ್ಮುಕ್ತಿಗೆನಿಪ ಮತಿ
ಫಳಿತಂ ತಳೆದಂದು ತಪಮನುಱಿದಂತಫಳಂ ೫೪

ವ॥ ಎಂದು ವಿಷಯವಲ್ಲಭಂ ವಿಷಯವಿರಕ್ತನಾಗಿ

ಕಂ॥ ಪ್ರಾಜ್ಯಗುಣವಜ್ರಬಾಹುಗೆ
ರಾಜ್ಯಮನಿತ್ತಾತ್ಮಜಂಗೆ ಜಗತೀತ್ರಯಸಂ
ಪೂಜ್ಯಮೆನಿಸಿರ್ದ ಸುತಪೋ
ರಾಜ್ಯಮನೂರ್ಜಿತ ಸಮಗ್ರವೈರಾಗ್ಯಧನಂ ೫೫

ಸಮಧಿಕ ದಯಾರಸಾಮೃತ
ಸಮುದ್ರಸಿತರುಚಿ ಸಮುದ್ರಗುಪ್ತಯತೀಂದ್ರ
ಕ್ರಮಕಮಳಸನ್ನಿಧಾನದೊ
ಳಮಳ ಗುಣಾನಂದಹೃದಯನಾನಂದನೃಪಂ ೫೬

ದುರ್ವಾರ ವೀರಮಾರನ
ದೋರ್ವಳಮಂ ನಿಜಸಹಾಯದಿಂ ಭೇದಿಸಲ
ಯ್ಯುರ್ವರ್ ತಪಮಂ ತನ್ನೊಡ
ನುರ್ವೀಶರ್ ತಳೆಯೆ ತಳೆದನನುಪಮತಪಮಂ ೫೭

ವ॥ ಅಂತು ನಿರಂತರ ದೃಢತರ ವೈರಾಗ್ಯವಿಶಾಲಮೂಲದಿಂದಗಾಧಬೋಧಾಲವಾಲಜಲದಿಂದುಪಶಮಸಮ್ಯಕ್ತ್ವಸ್ಕಂಧದಿಂ ಪಂಚಮಹಾವ್ರತಶಾಖಾಪ್ರಪಂಚದಿಂ ವಿಚಿತ್ರಚರಿತ್ರಪತ್ರದಿಂದನೂನಧ್ಯಾನಪ್ರಸೂನದಿಂದೈಹಿಕಾಮುಷ್ಮಿಕಪೂಜ್ಯತಾತುಳಫಳದಿಂದೆಸೆವ ದಿಗಂಬರದೀಕ್ಷಾನಲ್ಪ ಕಲ್ಪವೃಕ್ಷಮಂ ಧೈರ್ಯಮಂದರಾಚಳಂ ತಳೆದು

ಮ.ಸ್ರ॥ ಒಲವಿಂದಂ ಮಾಡುವತ್ಯೂರ್ಜಿತ ಜಿನಗುಣಸಂಪತ್ತಿ ನಾನಾನಿಳಿಂಪಾ
ತುಳಭಕ್ತ್ಯುತ್ಕರ್ಷಸಂಪೂಜಿತ ಜಿನಗುಣಸಂಪತ್ತಿಯಂ ಮಾಡೆ ಚೇತೋ
ಬಳಯುಕ್ತಂ ಸಿಂಹನಿಷ್ಕ್ರೀಡಿತಮಖಿಳಹೃಷೀಕೇಭಮಂ ತೂಳ್ದೆ ಮುಕ್ತಾ
ವಳಿ ಮುಕ್ತಿಶ್ರೀವಧೂಸಂಗಮಮೆನಿಸೆ ಮುನೀಂದ್ರೋತ್ತಮಂ ಮೈಮೆವೆತ್ತಂ ೫೮

ವ॥ ಎಂದಿವು ಮೊದಲಾದನಶನದೊಳಂ ಸಿಕ್ಥಚಾಂದ್ರಾಯಣಂ ಮೊದಲಾದವಮೋದರ್ಯದೊಳಂ ಗೃಹಸ್ಥಭೂಷಾವೇಷವ್ಯವಸ್ಥಾಪನಂ ಮೊದಲಾದ ವೃತ್ತಿಪರಿಸಂಖ್ಯಾನದೊಳಂ ಮೋಚಿತಸ್ಥಾನಂ ಮೊದಲಾದ ವಿವಿಕ್ತ ಶಯ್ಯಾಸನದೊಳಮಾಚಾಮ್ಲವರ್ಧನಂ ಮೊದಲಾದ ರಸಪರಿತ್ಯಾಗದೊಳಂ ನೆಗಱ್ದ ಕಾಯಕ್ಲೇಶಮೆಂಬಾಱನೆಯ ತಪೋನುಷ್ಠಾನಮನೆತ್ತಿಕೊಂಡು

ಕಂ॥ ಉಳ್ಳಲರೆ ಮನಂ ಕೈರವ
ದೊಳ್ಳಲರಲರ್ವಂತೆ ತನ್ನ ಜಸದಂತೆ ಹಿಮಂ
ಬೆಳ್ಪಂಗೆಡೆದಿರೆ ಮನದೊಳ
ಗಳ್ಕಾಡದೆ ಯೋಗಿ ಬೆಳ್ಳವಾಸದೊಳಿರ್ದಂ ೫೯

ತಪನಂ ಪರಿತಾಪಮನಿ
ತ್ತಪನಂಶುಗಳಿಂದಮೆಂದು ಪಥಿಕರ್ಕಳ್ ಪಾ
ದಪರಾಜಿಯ ನೆೞಲೊಳ್ ನಿಂ
ದಪರಾರ್ ಮಿಡುಕಲರಿದೆನಿಪ ಬಿಸಿಲುಗ್ಗಡದೊಳ್ ೬೦

ಎತ್ತಮುರಿಗೆದಱುವಿನನಂ
ಸತ್ತಿಗೆಗೆತ್ತೊಗೆವ ಬಿಸಿಲನಾ ಸತ್ತಿಗೆಯೊಳ್
ತೆತ್ತಿಸಿದ ಮಾಣಿಕದ ರುಚಿ
ಗೆತ್ತದಿರದೆ ದಿವ್ಯಯೋಗಿ ಕಲ್ಸೆಲೆನಿಂದಂ ೬೧

ಪೊಡೆವ ಸಿಡಿಲ್ ಬಿಡೆ ಬೀಸುವ
ಕಡುಗಾಳಿ ಪೊದಟ್ಟು ನೀಳ್ದು ಮಿಂಚುವ ಕುಡುಮಿಂ
ಚೆಡೆವಱಿಯದೆ ಪೊಸಕಾರೊಳ್
ಕೊಡದಿಂ ಸುರಿವಂತೆ ಸುರಿವ ಮೞೆ ನೆಗೞೆ ಕರಂ ೬೨

ನಿರುಪಮನಿಜನಿರ್ಮಳಿನ
ಸ್ವರೂಪಸಂಭೂತ ಭಾವನೋಚಿತ ಕಾಷ್ಠಾ
ಭರದೆ ಬಹಿರ್ವಿಷಯದೊಳಿಂ
ಮರವಾನಸನೆನಿಸಿ ಯೋಗಿ ಮರಮೊದಲಿರ್ದಂ ೬೩

ವ॥ ಅಂತುಗ್ರೋಗ್ರತಪದೊಳವ್ಯಗ್ರನೇಕಾಗ್ರದಿಂ ನೆಗೞುತ್ತುಮಿರ

ಕಂ॥ ಪುತ್ತಡರ್ದ ಮೆಯ್ಯ ಮಲಮೇ
ನಿತ್ತುದೊ ಘನಶಾಂತರಸಮನೆೞೆಯಲ್ ಮೆಯ್ಯಿಂ
ಮೆತ್ತಿದ ಮೂಸೆಯ ಮೃತ್ತಿಕೆ
ಮತ್ತೆನಿಸಿದುದಪ್ಪುದೆಂಬಿನಂ ಯತಿಪತಿಯಾ ೬೪

ಚಂ॥ ತನು ಬಡವಾದುದೆಂಬಿನಿತೆ ಸದ್ಗುಣಘಾತಿಕಷಾಯಜಾತಿ ನೆ
ಟ್ಟನೆ ಬಡವಾದುದಾಶೆಯನನುತ್ತರನಿಸ್ಪೃಹವೃತ್ತಿ ಗೆಲ್ದುದೆಂ
ಬಿನಿತೆ ವಿಶುದ್ಧಕೀರ್ತಿಲತೆಯುಂ ಮಿಗೆ ಗೆಲ್ದುದೆನಿಪ್ಪ ಭಾ
ವನೆಯೊಳೆ ನಿಂದು ದರ್ಪಕನ ದೋರ್ಯುಗದರ್ಪಮನಾರ್ದದಿರ್ಪಿದಂ ೬೫

ವ॥ ಮತ್ತಮಮೇಯ ಪ್ರಾಯಶ್ಚಿತ್ತ ವಿನಯ ವೈಯಾಪೃತ್ಯ ಸ್ವಾಧ್ಯಾಯ
ದೊಳಧ್ಯವಸಾಯಂ ಮಾಡುತ್ತುಮೇಕಾದಶಾಂಗಧಾರಿಯುಮೇಕವಿಹಾರಿಯುಮಾಗಿಯು
ನೇಕದೇಶದೊಳ್ ದಶಧರ್ಮಧಾರಿ ಧರ್ಮಪ್ರವರ್ತನೆಯುಂ ಮಾಡುತ್ತುಂ ಸ್ವರ್ಗಾಪವರ್ಗ
ಫಳಪ್ರದಾಯಿ ವ್ಯುತ್ಸರ್ಗಸಮಗ್ರ(ಚಿಂತಾನಿರೋಧ)ಧ್ಯಾನಮೆಂಬ ಪನ್ನೆರಡನೆಯ ತಪಮನುಪ
ಶಮಚಿತ್ತಂ ಸ್ವಾಯತ್ತಂ ಮಾಡಲ್ವೇಡಿ ವಿಶೋಧಿವಿಶುದ್ಧಾಶಯಂ ದರ್ಶನವಿಶುದ್ಧ್ಯಾದಿರೂಢಷೋಡಶ
ಭಾವನೆಯುಂ ಭಾವಿಸುತ್ತುಂ

ಕಂ॥ ಜಾಱೀಂ ಮುನಿ ಮನಮಂ ಪದಿ
ನಾಱಿಡೆಗೆ ಪಸುತ್ತುಮಿರ್ದೊಡಂ ಚಿತ್ರಂ ಮೆ
ಯ್ದೋಱುತ್ತು ಭುವನದೊಳ್ ಸರಿ
ದೋರದ ತೀರ್ಥಕರ ವಿದಿತಪುಣ್ಯಮಗಣ್ಯಂ ೬೬

ವ॥ ಅಂತು ಜಗತೀತ್ರಯಕ್ಷೋಭಸಮರ್ಥತೀರ್ಥಕರಪುಣ್ಯಮಂ ವಿನೇಯಜನ ಶರಣ್ಯಮಂ
ನೆರಪಿ

ಕಂ॥ ಕ್ಷೀರವನಮೆಂಬ ವನದೊಳ್
ಕ್ಷೀರಾಬ್ಧಿ ತರಂಗವಿಶದವಿವಿಧಗುಣಂ ಗಂ

ಭೀರಂ ಪ್ರತಿಮಾಯೋಗದೊ
ಳಾರಾಧಿತ ತತ್ತ್ವನಿರ್ದನೂರ್ಜಿತಸತ್ತ್ವಂ ೬೭

ಇಪ್ಪತ್ತೆರಡು ಪರೀಷಹ
ಮಾರ್ಪುವೆ ಯತಿಪತಿಯನಟ್ಟಿಕೆಸಲ್ ನಿಜತನುವಂ
ಬೇರ್ಪಡಿಸಿ ಪರಮಯೋಗದೊ
ಳಿರ್ಪನನಘವನವಿತಾನದಾವಾನಳನಂ ೬೮

ವ॥ ಅಂತವಿಶ್ರಾಂತ ತ್ರಿಗುಪ್ತಿಗುಪ್ತನುಂ ಶಾಂತರಸಸಂತೃಪ್ತನುವಾಗಿ ಪ್ರತಿಮಾಯೋಗದೊಳಪ್ರತಿಮ ಸಮಾಧಿನಿಷ್ಠನಿರ್ಪುದುಮತ್ತಲ್

ಕಂ॥ ಎನಿತೊಳವಪಾಯಹೇತುಗ
ಳನಿತುಂ ನಿರಯದೊಳೆ ರೋಗಮೆನಿತೊಳವುದಯ
ಕ್ಕನಿತುಂ ಬರ್ಪುವು ನಾರಕ
ರ್ಗನೆ ನೆಱಪಿದ ಪಾಪಪಾಕಮಂ ಪವಣಿಪರಾರ್ ೬೯

ಕಿವಿಗೆ ಕಠೋರಧ್ವನಿ ಕ
ಣ್ಗೆ ವಿಭೀಕರಮೂರ್ತಿ ಜಿಹ್ವೆಗತಿ ವಿರಸರಸಂ
ಅವಗಂಧಂ ಮೂಗಿಂಗೆ
ಯ್ದುವುದೊರ್ಮೆಯುಮಧಿಕಕರ್ಮದಿಂ ನಾರಕರಂ ೭೦

ದಿವದೊಳ್ ಸುಖಜನಕಂ ವ
ಸ್ತುವೆಲ್ಲಮೀ ಮರ್ತ್ಯಲೋಕದೊಳ್ ಸುಖದುಃಖೋ
ದ್ಭವಕಾರಿ ನರಕದೊಳ್ ದುಃ
ಖವರ್ಧನಂ ನಿರಯಭವರ್ಗದೆಲ್ಲಿತೊ ಸೌಖ್ಯಂ ೭೧

ವಾರಿಧಿಯನೀಂಟೆ ತೀರದ
ನೀರಟ್ಟಿ ಜಗಕ್ಕೆ ನೆಱಪಿದಶನಮನುಣೆ ಕೇಳ್
ತೀರದ ಪಸಿವುಳ್ಳೊಡಮೇಂ
ನಾರಕರ್ಗಿಲ್ಲಂಬುಕಣಮುಮಶನದ ಲವಮುಂ ೭೨

ನಾರಕರನನ್ಯಜನ್ಮದ
ವೈರಮನೆಟ್ಟಿಜೆಸಿದ ಹಟ್ಟಿಕಾಳೆಗಮಂ ಕ
ಣ್ಣಾರೆ ನಿರೀಕ್ಷಿಪ ತೆಱದಿಂ
ದಾರುತ್ತಿಜೆಯಿಸುತುಮೀಕ್ಷಿಪರ್ ದನುಜರ್ಕಳ್ ೭೩

ನಿರಯಜರ ದುಷ್ಟದುರಿತಮೆ
ಶರೀರಮಂ ತಳೆದು ಪಲವುಭೇದದ ದುಃಖೋ
ತ್ಕರಮನೊದವಿಸುವ ತೆಱದಿಂ
ಪರಸ್ಪರಂ ನಾರಕರ್ಕಳೊದವಿಸುತಿಕ್ಕುಂ ೭೪

ವಿಷಸಮ ವಿಷಯಮನೊದವಿಸೆ
ವಿಷಧಿಗಳತಿರೋಷದಿಂ ಪರಸ್ಪರಮದಟೆಂ
ವಿಷಧಿಯನೀಂಟುವವೋಲ್ ಸ್ಥಿತಿ
ವಿಷಧಿಗಳಂ ನಾರಕರ್ಕಳೀಂಟುವರಲ್ತೇ ೭೫

ವ॥ ಅಂತತಿ ದುರ್ವಾರಘೋರದುಃಖಸಸ್ಯಪಾತ್ರಮಾದ ನರಕಕ್ಷೇತ್ರಂಗಳೊಳ್

ಕಂ॥ ಶುಭಯೋಗಭಾಗಿ ಯೋಗಿ
ಪ್ರಭುವಧೆಯಿಂದಾದ ಪಾಪದಿಂ ದುಃಖದವ
ಪ್ರಭವಾಟವಿಯೆನಿಪ ತಮಃ
ಪ್ರಭೆಯೊಳ್ ಜನಿಯಿಸಿ ಕುರಂಗನತಿಮಳಿನಾಂಗಂ ೭೬

ಘಾತಿಸಿದುವು ರೋಗಜಮಭಿ
ಘಾತಂ ಮಾನಸಸಮುದ್ಭವಂ ಕ್ಷುತ್ತೃಟ್ಸಂ
ಜಾತಂ ತೀವ್ರಕ್ಷೇತ್ರೋ
ದ್ಭೂತಮಸಾತಂ ಪ್ರಭೂತಮಾ ಪಾತಕನಂ ೭೭

ವ॥ ಅಂತು ನಿರಂತರಂ ಪಂಚಪ್ರಕಾರಘೋರಕ್ಲೇಶಮಂ ದ್ವಾವಿಂಶತಿ ಪಾರಾವಾರ ಪರ್ಯಂತಂ ನಿಷ್ಠುರಹೃದಯಂ ಷಷ್ಠನರಕದೊಳನುಭವಿಸುತಿರ್ದು ಬಂದು

ಕಂ॥ ಆ ಕ್ಷೀರವನದೊಳತಿರೌ
ದ್ರಾಕ್ಷಂ ಗಜಪತಿ ಗಜಾಸುರೋನ್ಮದವಿದಳ
ತ್ರ್ಯಕ್ಷಂ ಜನಿಯಿಸಿದುದು ಹ
ರ್ಯಕ್ಷಂ ಘನವನಮೃಗಾಳಿಸಂಹೃತಿದಕ್ಷಂ ೭೮

ಚಂ॥ ವಿತತನಿತಂಬದಿಂ ವಿವಿಧ ಪಾದದಿನುಚ್ಚಶಿರಃಪ್ರಕೂಟದಿಂ
ದತಿಸಿತದಂತಮೌಕ್ತಿಕದಿನಾನನವಿದ್ರುಮದಿಂ ಸ್ಫುರನ್ನಖ
ಪ್ರತತಿ ಸುವಜ್ರದಿಂ ನಯನನೀಳದೆ ಕೇಸರಶೋಣರತ್ನದಿಂ
ದ್ಯುತಿ ಶಶಿಕಾಂತನಿರ್ಝರದಿನಿರ್ದುದು ಕೇಸರಿ ರೋಹಣಾದ್ರಿವೋಲ್ ೭೯

ಕಂ॥ ಆರಯ್ವೊಡೆ ಚಿತ್ರಂ ಕಂ
ಠೀರವದ ನೆಗೞ್ತೆ ದಾನಲೀನಾಳಿ ಲಸ
ದ್ವಾರಣಕುಂಭವಿದಾರಣ
ಕಾರಣಲಂಘನದೆ ತನಗೆ ಪಾರಣೆಯಕ್ಕುಂ ೮೦

ಮುತ್ತೊಗೆವ ತಾರೆಗಳ್ ಬಿಸು
ನೆತ್ತರ್ ಕಿಸುಸಂಜೆಯೆನಿಸೆ ಶಶಿವೋಲ್ ದಶನಂ
ಬಿತ್ತರಿಸಿರೆ ಹರಿಯುದಯ ನ
ಗೋತ್ತುಂಗಕರೀಂದ್ರಶಿರಮನುಗಿಬಗಿ ಮಾೞ್ಕುಂ ೮೧

ವ॥ ಅಂತನೇಕಾನೇಕಪಮಸ್ತಮಸ್ತಿಷ್ಕಲುಬ್ಧಂ ಲುಬ್ಧಕನಂತೆ ನಖಮುಖನಿಶಿತಾಸ್ತ್ರಘಾತದಿಂ ಮಾತಂಗಸಂಘಾತಮಂ ಘಾತಿಸುತ್ತುಮಿರ್ದೊಂದುದೆವಸಂ ನಿಜಭೈರವರವವಿಭೀತಚೇತಸಂಗಳಪ್ಪ ಗಜಯೂಥಂಗಳುಮಾಡುಂಬೊಲದೊಳಿರದೋಡಿಪೋಗೆ ತೀವ್ರಕ್ಷುಧಾಪೀಡಿತನಾಗಿ ನೀಡುಂ ಕಾಡಾನೆಗಳನಱಸಿ ಕಾಣದೆ ತೊಳಲುತ್ತುಮಾ ಕ್ಷೀರಕಾಂತಾರಮಧ್ಯಮಹೀಧರದತಿಕಾಂತ ಶಶಿಕಾಂತಶಿಳಾತಳದೊಳನೂನ ಧ್ಯಾನಾಧೀನಮಾನಸನಾಗಿರ್ದ ಮುನಿನಾಗನಂ ಕಂಡು

ಕಂ॥ ಮುನಿಸಿಂ ಹರಿ ಮೇಲ್ವಾಯ್ದೊಡೆ
ಮುನಿಸಿಂಹನದರ್ಕೆ ಚಳಿಯಿಸದೆ ತತ್ತ್ವಾರಾ
ಧನದೊಳ್ ಸಮಗ್ರ ಸುಖಸಾ
ಧನದೊಳ್ ನಿಂದಂ ವಿವೇಕಿಗದು ತಕ್ಕುದೆ ದಲ್ ೮೨

ಭೇದಿಸೆ ತನುವಂ ಸಿಂಹಂ
ವೇದನೆ ಮುನಿಗಾದುದಿಲ್ಲ ತನ್ನಿಂ ತನುವಂ
ಭೇದಿಸಿ ತನ್ನೊಳ್ ನಿಂದನ
ನಾದ ಪರೀಷಹಸಹಸ್ರಮುಂ ಭೇದಿಕುಮೇ ೮೩

ಸಂಚಿಸಿದಘಮಂಬರಿಸಿ ಪ
ಳಂಚಲೆವೆಡೆಗಾದುದಿದು ಸಹಾಯನೆನುತ್ತುಂ
ಪಂಚಪದಮನೋದುತ್ತುಂ
ಪಂಚಾಸ್ಯಕೃತೋಪಸರ್ಗಮಂ ಸೈರಿಸಿದಂ ೮೪

ಪಂಚೇಂದ್ರಿಯಪಂಚಾಸ್ಯಂ
ಮುಂ ಚಳಿಯಿಸಲಾಱದಳಱುತೊಡನಿರ್ದುಮದಿ
ನ್ನೇಂ ಚಳಿಯಿಸಲಾರ್ಕುಮೆ ಪೇೞ್
ಪಂಚಾಸ್ಯಂ ಕ್ಷಣಮೆ ಪೊರ್ದಿದುದು ಯತಿಪತಿಯಂ ೮೫

ವ॥ ಆ ಸಮಯದೊಳ್

ಕಂ॥ ಪಂಚಾನನೋಪಸರ್ಗಜ
ಯಂ ಚಿತ್ತಕ್ಕತಿವಿಚಿತ್ರಮಂ ಕುಡೆ ದಿವಿಜರ್
ಪಂಚಾಮರಮಹಿಜಕುಸುಮ
ಸಂಚಯವೃಷ್ಟಿಯೊಳೆ ಮುನಿಯ ತನುವಂ ಪುದಿದರ್ ೮೬

ವ॥ ಅಂತನನ್ಯ ಸಾಮಾನ್ಯಸನ್ಯಸನವಿಧಿಯಿಂ ಮುಡುಪಿಯನಲ್ಪಸೌಖ್ಯಾನತಕಲ್ಪದೊಳ್ ಪುಟ್ಟಿ

ಕಂ॥ ಉಲಿಯೆ ಪಟಹಾಳಿ ಜವನಿಕೆ
ತೊಲಗುವವೋಲ್ ತೆಱೆಯೆ ನೆಱೆ ವಿಮಾನದ ಪಡಿತ
ಳ್ತಲರ ಮಱೆ ಕಱೆಯೆ ಪುಷ್ಪಾಂ
ಜಳಿಯಂತಮರಿಯರ ನೃತ್ಯಮೆಸೆದಿರೆ ನಿಸದಂ ೮೭

ಸುರಪತಿಯೊಪ್ಪುವ ಸಿರ್ಪಿನ
ಪೊರೆಯಿಂ ಪೊಱಮಡುವ ವಿಮಳಮೌಕ್ತಿಕಮನೆ ಬಿ
ತ್ತರಿಸಿದುಪಪಾದತಳ್ಪದ
ಪೊರೆಯಿಂ ದೇದೀಪ್ಯಮಾನತನು ಪೊಱಮಟ್ಟಂ ೮೮

ಚಂ॥ ನನೆಗಣೆಯಂತೆ ಕಂಪೊಗೆವ ರೂಪೊಡವುಟ್ಟಿದುದೇೞ್ಗೆವೆತ್ತ ಯೌ
ವನವೊಡವುಟ್ಟಿದತ್ತು ಮಣಿಭೂಷಣವಸ್ತ್ರಲತಾಂತಶೇಖರಂ
ತನಗೊಡವುಟ್ಟಿದತ್ತು ಶುಭಲಕ್ಷಣನಿರ್ಮಳವೃತ್ತಿ ತತ್ವಭಾ
ವನೆಯೊಡವುಟ್ಟಿದತ್ತೊಲವು ತಾನೊಡವುಟ್ಟಿದುದಾ ನರೇಂದ್ರನಾ ೮೯

ವ॥ ಅಂತನಂತಸುಖನಿದಾನಾನತಕಲ್ಪಾಧೀಶ್ವರನುಂ ವಿಂಶತಿಪಾರಾವಾರ ಪ್ರಮಾಣಾಯುಷ್ಯನುಂ ಶುಕ್ಲಲೇಶ್ಯಾಪರಿಣತನುಂ ವಿಂಶತಿಸಹಸ್ರಸಂವತ್ಸರ ಸಂಕಲ್ಪಿತಾಮೃತಾ ಹಾರನುಂ ತ್ರಿರತ್ನಿ ಪ್ರಮಾಣಧಾತುಮಳರಹಿತಶರೀರನುಂ ದಶಮಾಸನಿರ್ಯತ್ಸುರಭಿನಿಶ್ವಾಸನುಂ ಚತುಃಶತವಿಮಾನಾಧೀಶನುಂ ತ್ರಯತ್ರಿಂಶತ್ತ್ರಿದಶಪರಿವೇಷ್ಟಿತನುಂ ಅಯುತ ಶತಸಮಸಾಮಾನಿಕ ಸಮನ್ವಿತನುಂ ಚತುರಯುತಪ್ರಮಿತಾತ್ಮರಕ್ಷಕರಕ್ಷಿತನುಂ ಲೋಕಪಾಳಕ ಚತುಷ್ಟಯವಿಶಿಷ್ಟನುಂ ಅಂತರ್ಮಧ್ಯಬಾಹ್ಯಪರಿಷತ್ಪರೀತನುಂ ಚತುಸ್ತ್ರಿಂಶತ್ಪ್ರಮಾಣ ಮಹಾದೇವೀಮನೋಹರ ಮನೋಜಾತನುಂ ಭಯಲೋಭದುರ್ಲಭನುಮೆನಿಸಿ

ಕಂ॥ ಮನಮೆ ತನುವಾಗೆ ಸುರಕಾ
ಮಿನೀಜನಂಗಳೊಳನಂಗಸುಖಸಂಪದಮಂ
ನೆನೆಯಲೊಡಂ ಪಡೆವುದಱಿಂ
ಮನಃಪ್ರವೀಚಾರನೆನಿಸಿದಂ ಸುರರಾಜಂ ೯೦

ದೇವನನೆ ಪಲವು ಮೆಯ್ಯಿಂ
ದೇವಿಯರೋಲಗಿಸಲೆಂದು ವಿಕ್ರಿಯೆಯಿಂದಂ
ದೇವಿಯರಂ ಪಡೆಯೆ ತರಂ
ಗಾವಳಿ ಶೃಂಗಾರನದಿಯಿನೊಗೆವಂತೊಗೆದರ್ ೯೧

ಮ॥ ಪುದಿದಂಗದ್ಯುತಿವಾರಿಯಿಂ ದಶನಮುಕ್ತಾನೀಕದಿಂ ಸುತ್ತಿಮು
ತ್ತಿದತಿಸ್ಥೂಳಪಯೋಧರಪ್ರಕರದಿಂ ವಕ್ತ್ರೇಂದುಸಂಭೂತಿಗಾ
ಸ್ಪದಮಾಗಿರ್ಪುದಱಿಂದೆ ತೋಳ್ತೆರೆಗಳಿಂ ದೃಷ್ಟ್ಯಬ್ಜದಿಂ ಮೀರಿಪ
ಟ್ಟಿದ ಶೃಂಗಾರಸಮುದ್ರದಂತೆ ಸೊಗಯಿಕ್ಕುಂ ವಿಕ್ರಿಯಾದೇವಿಯರ್ ೯೨

ಉ॥ ಜಾಱದ ಜವ್ವನಂ ತವದ ಮೆಯ್ಸಿರಿ ತೀರದ ಸೌರಭಂ ಪಡಂ
ಗಾಱದ ಗಾಡಿ ಕುಂದದ ವಿಳಾಸಮುಡಂಗದ ವಿಭ್ರಮಂ ಕಿಱುಂ
ಬೇಱದ ವಕ್ತ್ರದರ್ಪಣಮನಂಗನನೂನವಿಧಾನ ಶೋಭೆಯಂ
ಜಿಗೆ ಸುರೇಶ್ವರಂಗೆ ಪದೆಪಂ ಪಡೆಗುಂ ದಿವಿಜಾಂಗನಾಜನಂ ೯೩

ಭೂಮಿಗಭೀಷ್ಟಮಂ ಕುಡುವ ಕಲ್ಪಕುಜಂ ನಿಧಿ ಕಾಮಧೇನು ಚಿಂ
ತಾಮಣಿಯೆಂಬಿವೋಲಗಿಪುವಾ ದಿವಿಜೇಶನನಾ ಸುರೇಶನುಂ
ಪ್ರೇಮದಿನರ್ಹದಂಘ್ರಿಗಳನೋಲಗಿಪಂ ಸಕಳಾರ್ಥಸಿದ್ಧಿಗಿಂ
ಶ್ರೀ ಮಹಿಮಾಂಬುರಾಶಿ ಜಿನಸೇವೆಯೆ ಕಾರಣಮೆಂದೆ ಪೇೞ್ವವೋಲ್ ೯೪

ಮ॥ ಸ್ತನಭಾರಾನತದೇವವಾರವನಿತಾಶ್ರೀ ಯೌವನಾನಂದಿನಂ
ದನದೊಳ್ ಸತ್ಫಳಸಂಕುಳಾನತ ಸುರೋರ್ವೀಜಾತ ದೇವಾದ್ರಿನಂ
ದನದೊಳ್ ಪಾದಪಯೋರುಹಾನತ ಸಭಾನೀಕಂಗಳೊಳ್ ಭಾಗ್ಯಭಾ
ಜನನಪ್ಪಾನತನಾಥನೊಲ್ದು ನಲಿದಂ ಜೈನಕ್ರಮಾಬ್ಜಾನತಂ ೯೫

ವ॥ ಅಂತು ನಿರಂತರಸುಖಾಕ್ರಾಂತಾಂತರಂಗನಾಗಿಯುಂ ಭೋಗೈಕರತನಾಗಿ ಜಿನರಾಜಪೂಜಾವಳೋಕನಾನಂದಾಶ್ರುಮಿಶ್ರಿತ ನಿರೀಕ್ಷಣನುಂ ಜಿನಚರಣಸ್ಮರಣ ಪರಿಣತಾಂತಃಕರಣನುಮಾಗಿರ್ದನನ್ನೆಗಮಿತ್ತಲ್

ಕ॥ ಶ್ರೀಪರಿಚುಂಬಿತಜಂಬೂ
ದ್ವೀಪದ ಭರತಾವನೀವಿಳಾಸವತೀವೇ
ಣೀಪದದಂತಿರೆ ಸುಮನಃ
ಶ್ರೀಪರಿಮಳರಾಶಿ ಕಾಶಿಯೆಸೆಗುಂ ದೇಶಂ ೯೬

ಚಂ॥ ಬೆಳೆಯದ ಧಾನ್ಯಮುಳ್ಳಲರೊಳೊಂದದ ಪೂಗಿಡು ಕಂಪನಾಂತು ಬಂ
ದೆಳಸದ ತಣ್ಣೆಲರ್ ಫಲಭರಂಗಳನಾನದ ಸಾರಭೂರುಹಂ
ಜಳರುಹಮಿಲ್ಲದಿರ್ಪ ಕೆಱೆ ನೋಡೆ ಮನೋಹರಮಲ್ಲದೂರ್ ಗುಣಾ
ವಳಿಗಳಿನೊಪ್ಪದಿರ್ಪ ಜನಸಂಕುಳಮೆಲ್ಲಿಯುಮಿಲ್ಲ ದೇಶದೊಳ್ ೯೭

ಕಂ॥ ಕೊಳರ್ವಕ್ಕಿಯ ಕಳರವದಿಂ
ಮಿಳಿರ್ವೆಳಲತೆಯಿಂ ತಳಿರ್ತಶೋಕೆಯಿನೆತ್ತಂ
ಕುಳಿರ್ವೆಳಾವನದಿಂ ಬಗೆ
ಗೊಳಿಪಲ್ಲಿಗೆ ಕಾಶಿದೇಶಮಾಯ್ತವಕಾಶಂ

ಹರಿಯಾಕಳ್ಗಳವಿರ್ಕುಂ
ಹರಿಯಾಕಳ್ಗಳವೋಲಲ್ಲಿಯುಂ ಮಿಗೆ ಮೊಲೆಯಿಂ
ಸುರಿತರ್ಪ ಪಾಲ ಪೊನಲೊಳ
ಗಿರೆ ಗೋಪರ್ ಗೋಪನಂತಿರೋಲಾಡುತ್ತುಂ ೯೯

ಪರಿಶೋಭೆವೆತ್ತ ನಾಗೋ
ತ್ಕರದಿಂದನವರತಮಲ್ಲಿ ಮಿಸುಗುವ ಸಸಿಯಿಂ
ದೊರೆವೆತ್ತ ಗಂಗೆಯಿಂದೀ
ಶ್ವರನ ಜಟಾಜೂಟದಂತೆ ಜನಪದಮೆಸೆಗುಂ ೧೦೦

ಚಂ॥ ಇದು ವಿಷಯಾಂಗನೋಚಿತ ಮುಕೂಲದ ಮೇಲುದಿದಾ ಲತಾಂಗಿಯಿ
ಕ್ಕಿದ ಪೊಸಮುತ್ತಿನಾರಮಿದು ಭಾಸ್ಕರ ಭೀರುತೆಯಿಂದೆ ಬಂದು ತಾ
ಳ್ದಿದ ಪೆಱಯೊಂದುರೂಪಮಿದು ತೋಱುವ ಪುಣ್ಯನದೀಪ್ರವಾಹಮಂ
ಬಿಪನೊದವಿಪ್ಪ ಬಾಂದೊಱಗದೇಂ ದೊರೆಯುಂಟೆ ನದೀನವಂಗಳೊಳ್ ೧೦೧

ಕಂ॥ ಸುರನದಿಯಿಂದಂ ಸುಮನಃ
ಪರಿಶೋಭಿತ ಸತ್ಫಳಪ್ರಭಾಸುರತರುವಿಂ
ಸುರಲೋಕದಂತೆ ತದ್ಧರೆ
ಕರಮೆಸೆಗುಂ ಸುಖಸುಧಾನಿವಾಸವಿಳಾಸಂ ೧೦೨

ಶ್ರೀಕಾಶಿ ಸುಕವಿನಿಧಿ ಕಮ
ಳಾಕರದೊಳ್ ಕಮಳದಂತೆ ಕಣ್ಗೊಳಿಕುಂ ಲ
ಕ್ಷ್ಮೀಕಳಿತ ವಾರಣಾಸಿ ವಿ
ವೇಕಲಸದ್ರಾಜಹಂಸಮೂರ್ಜಿತಕೋಶಂ ೧೦೩

ಚಂ॥ ಕನಕವಿಶಾಲಶಾಲಕರದಿಂದೆ ಸಹಸ್ರಕರಾಭಿಧಾನಮಂ
ದಿನಕರನೊಳ್ ಸಮರ್ಥಿಸಿದುದಿಂದ್ರಕುಬೇರಪುರಪ್ರಶೋಭೆಯಂ
ತನಗನುರಾಗದಿಂ ತೆಗೆದುದೆಂಬಿನಮೇೞ್ಗೆಯಿನೊಳ್ಪನಾಂತ ಸೂ
ತನಪುರಲಕ್ಷ್ಮಿ ಪಕ್ಷ್ಮಚಳನತ್ವಮನೀಕ್ಷಿಪರ್ಗಾಗಲೀಗುಮೇ ೧೦೪

ಕಂ॥ ಅಮೃತಕರಂ ಕರದಿಂದಮ್ಮೃ
ತಮನೆಱದವನೋವುತಿರ್ಪನತನುವ ಚಾಪ
ಕ್ಕಮರ್ದನೆ ಧವಳೇಕ್ಷುಗಳೊ
ಪ್ಪಮನಾಳ್ದು ಪೊದಟ್ಟು ಪೊಂಗಿದುವು ಪೊಱವೊಟಲೊಳ್ ೧೦೫

ನಾರಂಗಂ ವನವನಿತೆಯ
ಹಾರದ ಪೊಸಮುತ್ತು ಪೊರೆದುವಾಕೆಯ ಕುಚಕಾ
ಶ್ಮೀರದಿನೆನೆ ಸೊಗಯಿಸುತುಂ
ನೇರಿದುವೆನಿಸಿರ್ಪುವಲ್ಲಿ ಕಂಪಿಂ ಕೆಂಪಿಂ ೧೦೬

ಜಳಕೇಳಿಗೆಳಸಿ ವನವಧು
ಪೊಳೆವರಿಸಿನದೆಱವ ಘುಸೃಣದುರುಳಿಯೆನೆ ಮನಂ
ಗೊಳೆ ತಳೆದವೊಲೊಪ್ಪಿರ್ಪುವು
ಫಳಭರನತಮಾತುಳುಂಗ ಜಂಬೀರಂಗಳ್ ೧೦೭

ಚಂ॥ ಫಳರಸದಿಂದೆ ಮುಂಬೆಳೆದವೆಂಬಿದಱಂ ನವಪುಷ್ಪವಾಟಸಂ
ಕುಳಕುಸುಮಾಸವಂ ಪೊರೆಯೆ ತತ್ತಳಮಂ ಮಧುಪಾಳಿ ಮುತ್ತೆ ಬ
ಳ್ಳಿಗಳುಮಂತವಂ ಕುಸುಮವಾಟಮೆ ಗೆತ್ತಿಱಕೆಯ್ದು ಪಾಯ್ದುವಾ
ಕಳಮವನಾಳಿಗಳ್ಗೆಸೆವ ಪಾಮರಿಯರ್ ಸಲೆ ಸೋಯಲೆತ್ತಲುಂ ೧೦೮

ಉ॥ ಸೋಂಕಿ ತದಂಗರಾಮಮರ್ದಂತೆ ಪರಾಗಮನೊಂದಿ ಘರ್ಮತೋ
ಯಂ ಕವಿದಂತೆ ವಾರಿಗಳನಿಂಬಿನೆ ಚುಂಬಿಸಿ ಸುಯ್ಯ ಕಂಪು ಚೆ
ಲ್ವಂ ಕುಡೆ ಪತ್ತಿದಂತೆ ನವಸೌರಭಮಂ ತಳೆದಾ ಪುರಕ್ಕೆ ತ
ಣ್ಪಂ ಕಡುಗಂಪನೀಯುತನಿಲಂ ವನಲಕ್ಷ್ಮಿಯೊಳಾಡಿ ತೀಡುಗುಂ ೧೦೯

ಕಂ॥ ಅಭಿಮತಮನಿತ್ತು ಧರೆಗೆ ದಿ
ಗಿಭಕುಳಮಂ ಕುಂದಕುಮುದಶಶಿವಿಶದಯಶೋ
ವಿಭವಮಭಿವ್ಯಾಪಿಸೆ ತ
ಮ್ಮಿಭಕುಲತೆಯಲ್ಲಿ ನನ್ನಿ ಮಾಟ್ಪರ್ ಪರದರ್ ೧೧೦

ಎತ್ತಿದ ಪಟಿಯಿಗೆ ಲೋಭ
ಕ್ಕೆತ್ತಿದ ಪಟಿಯಿಗೆಯದೀಯದೆಂದೆನುತಿಳೆಗೊ
ಲ್ದಿತ್ತುರು ಕೀರ್ತಿಧ್ವಜದೊಡ
ನೆತ್ತಿಸುವರ್ ಪರದರಲ್ಲಿ ಮಿಗೆ ಪಟಿಯಿಗೆಯಂ ೧೧೧

ಇಟ್ಟಳಮೆನಿಸುವ ಕಂಪಿನ
ಘಟ್ಟಿಯನನುಕರಿಸೆ ಕುಸುಮಶರಚಕ್ರಿಗೆ ಕೈ
ಘಟ್ಟಿಯನಿತ್ತವರಂತಿರೆ
ಘಟ್ಟಿಮಗುಱ್ಚುವರುದಾರ ವಾರಾಂಗನೆಯರ್ ೧೧೨

ಉ॥ ತೋಳ ಮೊದಲ್ಗೆ ಪೆರ್ಮೊಲೆಗದೊರ್ಮೆಯುಮುಣ್ಮುವ ಸೌರಭಕ್ಕೆ ಭೃಂ
ಗಾಳಿ ವಿಟೌಘನೇತ್ರಮೊಡನೋತೆಱಗುತ್ತಿರೆ ಪಾರ್ವ ಮೇಲುದಂ
ಬಾಲೆಯರ್ಗಲ್ಲಿ ಸಂವರಿಸಲಲ್ಲದೆ ಘಟ್ಟಮಗುಜ್ಜಲಿಲ್ಲ ಪೊ
ೞ್ತು ಲಲಿತಾಂಗಿಯರ್ಗೆನುತುಮಿರ್ಪುದು ಪೌರಜನಂ ನಿರಂತರಂ ೧೧೩

ಕಂ॥ ಪುರದ ರಮಣಿಯರ ಮಣಿನೂ
ಪುರದ ರವಕ್ಕೆಳಸಿ ಹಂಸೆ ಪಱಿಮಱಿಯಾಡು
ತ್ತಿರೆ ಮಧುಕರನಿಕರಂ ಮುಱಿ
ಪರಿಮಳಕೆ ವಿನೋದದಿಂದೆ ಸುೞಿವರ್ ಪೊೞಲೊಳ್ ೧೧೪

ನಡೆವೆಡೆಯೊಳ್ ಹಂಸೆಗಳು
ಗ್ಗಡಿಸುತ್ತುಂ ನೆಲನನೊಡನೆ ನಡೆವುವು ನಯದಿಂ
ನುಡಿವೆಡೆಯೊಳ್ ತುಂಬಿಗಳಾ
ಮಡದಿಯರೆಂದಂತೆ ನುಡಿವುವೆನೆ ಪೊಗೞದರಾರ್ ೧೧೫

ಚಂ॥ ಬರೆದ ವಿಳಾಸಿನೀಗೃಹದ ಭಿತ್ತಿಯ ಶಕ್ರಕುಬೇರವಾರಿಧೀ
ಶ್ವರರ ವಿಶಿಷ್ಟವಿಭ್ರಮಸೆಗುಂ ಪುರಲಕ್ಷ್ಮಿಯರೊಪ್ಪಮಂ ಸ್ಫುರ
ನ್ನಿರುಪಮರತ್ನರಾಶಿಗಳನೀಕ್ಷಿಸಿ ವಾಸವನುಂ ಧನೇಶನುಂ
ವರುಣನುಮಲ್ಲಿ ಮೆಚ್ಚಿ ಮಿಗೆ ವಿಸ್ಮಿತಚೇತಸರಾಗಿ [illegible] ೧೧೬

ಚಂ॥ ರಜತಗಿರೀಂದ್ರಮಂ ಬಳಸಿ ನಿಂದುಪಶೈಳಶತಂಬೊಲಾ ಮಹೀ
ಭುಜನ ನಿವಾಸಮಂ ಮಣಿಮರೀಚಿವಿಚಿತ್ರತಭಿತ್ತಿಭಾಗಮಂ
ರಜತಮಯಾತಿ ವಿಸ್ತೃತ ಮಹೋನ್ನತ ಸಪ್ತತಳ ಪ್ರಶಸ್ತಮಂ
ಗಜಗತಿಸಿದ್ಧಶುದ್ಧಸುದತೀಗೃಹಸಂತತಿ ಸುತ್ತಿ ಶೋಭಿಕುಂ ೧೧೭

ಮೃಗಮದಸಾಂದ್ರಗಂಧಯುತಮಜ್ಜನಶಾಲೆಯಿನಿಂದುಕುಂದಲೀ
ಲೆಗಳನದಿರ್ಪಲಾರ್ಪಮಳ ಭೋಜನಶಾಲೆಯಿನಂಗಜಾತಕೇ
ಳಿಗೆ ನೆಲೆಯಾದ ಸಜ್ಜಯನಶಾಲೆಯಿನಿಷ್ಟವಿನೋದಶಾಲೆಯಿಂ
ಮೃಗಪತಿಪೀಠರತ್ನರುಚಿಯಿಂ ಪುದಿದೋಲಗದೊಂದು ಶಾಲೆಯಿಂ ೧೧೮

ಮ॥ ವಿಗಳದ್ದಾನ ಸುಪೀನ ದೀರ್ಘಕರನಾಗಾಂಗಪ್ರಭಾನೀಳಶಾ
ಲೆಗಳಿಂ ರಾಜಿತರಾಜವಾಹನಗುಣಶ್ರೀವಾಜಿವಿಭ್ರಾಜಿಶಾ
ಲೆಗಳಿಂ ಯಂತ್ರಕರ ಪ್ರಮುಕ್ತಕರ ಮುಕ್ತಾಮುಕ್ತಸಚ್ಛಸ್ತ್ರಶಾ
ಲೆಗಳಿಂ ಶೋಭೆಯನಾಂತುದಿಂತು ಪಿರಿದುಂ ಭೂಪಾಳನಿರ್ಪಾಳಯಂ ೧೧೯

ಕಂ॥ ಸೂಸಿದ ಮಳಯಜಕುಂಕುಮ
ಕೌಸುಮಪರಿಮಳಕೆ ಬಳಸಿದಳಿವಿತತಿಗಳಿಂ
ದೇಸೆವಡೆದಿರ್ದ ರಾಜನಿ
ವಾಸಾಂಗಣಮಿಂದ್ರನೀಳಖಚಿತಮೆನಿಕ್ಕುಂ ೧೨೦

ಆ ಪುರದಧಿಪತಿ ಸಕಳಕ
ಳಾಪರಿಣತನಶ್ವಸೇನನನುಪಮಶೌರ್ಯಾ
ಟೋಪವಿಲೋಪಿತವೈರಿಮ
ಹೀಪ ಚತುರಸೇನಸುಚಿತಸೂಕ್ತಿನಿಧಾನಂ ೧೨೧

ಪ್ರತಿಪಕ್ಷಮನನಿತುಮನ
ಪ್ರತಿಮನಯೋಧ್ಯಮಪರಾಕ್ರಮಂ ಮರ್ದಿಸಿ ತ
ತ್ಕ್ಷಿತಿನಾಥಂ ಸರ್ವಂ ಸ
ಪ್ರತಿಪಕ್ಷಂ ವಸ್ತುವೆಂಬಿದಂ ಮಾಣಿಸಿದಂ ೧೨೨

ಮ॥ ಕಳೆಯಂ ಕಲ್ತುವರುರ್ವರಾಪತಿನಿಮಿತ್ತಂ ಕಲ್ವರಾ ಭೂಪನುಂ
ಗಳ ಮೂರ್ಖಂ ವಿಮುಖಂ ಸುಖಕ್ಕನಿಮೊಡಾರ್ಗಿಂಬಾಚ್ಚಿಯಾ ವಿದ್ಯೆಗಿ:
ಫಳಮಂದಾ ನೃಪನಾವನಾವಕಳೆಯೊಳ್ ನಿಷ್ಣಾತನಾತಂಗನಾ
ಕುಳಮಾ ವಿದ್ಯೆಯಿನೊಳ್ಪು ಪೊರ್ದೆ ಪೊರೆವಂ ತಾನೆಂದೊಡೇಂ ಪ್ರೌಢನೋ ೧೨೩

ಕಂ॥ ಜಳಜಕ್ಕೆ ಮುದ್ದು ಶಶಿಮಂ
ಡಳಕ್ಕೆ ಪರಿಮಳಮದೆಳಸಿ ನಿಂದೊಡೆ ತದ್ಭೂ
ತಳಪತಿಯ ಸೌಮ್ಯಮುಖಮಂ
ಡಳಕ್ಕೆ ದೊರೆಯಕ್ಕುಮಲ್ಲದಂದವು ದೊರೆಯೇ ೧೨೪

ಸುದತಿಕಳಾಲಾವಣ್ಯಾ
ಸ್ಪದರೂಪಾಮೃದಿತವಿಭವಮಂ ಮುದದಿಂದಂ
ಮೊದಲೊಳ್ ಬ್ರಹ್ಮಂ ತನಗಿ
ತ್ತುದಜಿಂದಂ ಬ್ರಹ್ಮದತ್ತೆವೆಸರಿಂದೆಸೆದಳ್ ೧೨೫

ಆ ದಂಪತಿಗಳ ಘನಪು
ಣ್ಯೋದಯದಿಂದಾನತೇಂದ್ರನುದಯಿಸಲಿರೆ ಶು
ದ್ಧೋದರದೊಳವಧಿಯಿಂದ
ಱಿದಾದರದಿಂ ಬೆಸಸೆ ಧನದನಂ ದಿವಿಜೇಂದ್ರಂ ೧೨೬

ಮ॥ ನಿಜಪುಣ್ಯೋದಯದಿಂದಮಿಲ್ಲಿಗೊಗೆತರ್ಪಂ ಸ್ವರ್ಗದಿಂ ದೇವನಿಂ
ತ್ರಿಜಗತ್ಪೂಜ್ಯನೆನುತ್ತುಮತ್ಯವಿರಳಂ ಕೊರ್ವಿರ್ದ ಭವ್ಯೋತ್ಸವ
ಧ್ವಜದಂಡಂಗಳ ಪಾಂಗು ತೋಱೆ ಕಱೆದಂ ರಾಜಾಂಗಣಂ ರಂಜಿಪಂ
ತಜರೇಂದ್ರಂ ಬೆಸವೇೞೆ ಯಕ್ಷಪತಿ ರತ್ನಾಸಾರಮಂ ಸಾರಮಂ ೧೨೭

ವ॥ ಅಂತಾನತೇಂದ್ರನಾನತಕಲ್ಪದಿಂದಾ ದಂಪತಿಗಳ ಗರ್ಭಕ್ಕವತರಿಸುವ ಮುನ್ನಂ ಅಱುದಿಂಗಳ್ವರಮಶ್ವಸೇನಮಹಾರಾಜನ ರಾಜಾಂಗಣದೊಳ್ ಪ್ರತಿದಿನಂ ಮೂಱುಕೋಟಿಯುಮರೆಯಂ ವಸುಧಾರೆಯಂ ಸುರಿಯುತ್ತುಂ ತನ್ನ ಧನದತ್ವಮಂ ನನ್ನಿಮಾಡುತ್ತುಮಿರೆ

ಕಂ॥ ಆಹ್ರಾಸಗುಣಗಣೇಂದ್ರಂ
ಶ್ರೀ ಹ್ರೀ ಧೃತಿಕೀರ್ತಿ ಬುದ್ಧಿಲಕ್ಷ್ಮಿಗಳಂ ದುಃ
ಖಹ್ರಸ್ವಕಾರಿಸುಖಗಾಂ
ಗಹ್ರದಕರಿ ಬೆಸಸಿದಂ ನಿಜಪ್ರಮದೆಯರಂ ೧೨೮

ವ॥ ಅಂತು ಪದ್ಮಾದಿ ಪದ್ಮಾಕರಂಗಳೊಳ್ ಮನಂಗೊಳಿಸಿರ್ಪ ದೇವಿಯರುಮಂ ರುಚಕಾಚಳಂಗಳ ನಾನಾ ಸೂತ್ನರತ್ನರಚಿತ ರುಚಿರ ಪ್ರಾಸಾದಂಗಳೊಳಿರ್ಪನೇಕ ನಾಮಾಂಕಿತದಿಗಂಗನೆಯರುಮಂ ಬ್ರಹ್ಮದತ್ತಾಮಹಾದೇವಿಯ ಗರ್ಭಸಂಶೋಧನಮಂ ದಿವ್ಯೌಷಧಾನ್ನಪಾನಾದಿ ದ್ರವ್ಯಂಗಳಿಂ ಮಾಡಲುಂ ವಿವಿಧ ವಿನೋದಂಗಳಂ ತೋಱೆಯಲಸುಗೆಯನಾಗಲೀಯದಂತು ಮನಮಱೆದೋಲಗಿಸಲುಂ ಸೌಧರ್ಮೇಂದ್ರಂ ಧರ್ಮಾನುರಾಗದಿಂ ನಿಯಮಿಸಿ ಕಳಿಪೆ

ಕಂ॥ ಅಮದುರ್ಣ್ಣನ್ನಂ ಮುಡಿವುದು
ನಮೇರು ಮಂದಾರ ಪಾರಿಜಾತಂ ಪದಪಿಂ
ದಮರ್ದುಡುವುದು ದೇವಾಂಗಂ
ರಮಣಿಗೆ ದೇವಿಯರೆ ನಡೆವ ಪರಿಚಾರಕಿಯರ್ ೧೨೯.

ಆಳವಡೆ ಸೋಗೆಯ ಕೆಯ್ಯೊಳ್
ವಿಳಾಸಲಾಸ್ಯಮನೆ ಕಲ್ತ ಹಂಸೆಗಳೆನೆ ಕ
ಣ್ಗೊಳಿಸಿರ್ದುವು ಶಿಖಿನಿಭಕುಂ
ತಳಭರೆಗಮರ್ದಮರಿಯಿಕ್ಕೆ ಚಮರೀರುಹಮಂ ೧೩೦

ವೃತ್ತಕುಚೆಗಮರಿ ಮುತ್ತಿನ
ಸತ್ತಿಗೆಯಂ ತಳೆಯೆ ರಾಹುಚಂದ್ರನ ಕೆಳೆಯಂ
ಬಿತ್ತರಿಸುತ್ತೊಡನಿರ್ದಪ
ನುತ್ತಮಜಿನಮಹಿಮೆಯಿಂದಮೆನೆ ಮುಡಿ ಮೆಱೆಗುಂ ೧೩೧

ತಾಮರೆಯ ದಳಮನಿೞಿಸುವ
ಕೋಮಳೆಯಲರ್ಗಣ್ಣೊಳೆಚ್ಚಿದಳ್ ಕಾಡಿಗೆಯಂ
ಕಾಮಾಂಧಕಾರಮಂ ಕುಡು
ವಾ ಮದನನ ಬಾಣಮೆನಿಸೆ ಸುರವಧುವೊರ್ವಳ್ ೧೩೨

ಕುರುಳಂ ತಿರ್ದಿದೊಡಲ್ಲಿಯ
ಪರಿಮಳಕಳೆ ಮುತ್ತೆ ಮತ್ತೆ ಕುರುಳೆಂದಳಿಯಂ
ಸುರವಧು ಕೆಲಕ್ಕೆ ತೊಲಗಿಸೆ
ಮೊರೆವಳಿ ಬಿಡೆ ಬೆದಱು ನಗಿಸಿದಳ್ ಕೆಳದಿಯರಂ ೧೩೩

ತೋರ್ಪೊಡೆ ನಿಜಮುಖಕೀ ಮಣಿ
ದರ್ಪಣಮೆಣೆಯೆಂದು ಪೇೞ್ವ ತೆಱದಿಂದೊರ್ವಳ್
ದರ್ಪಣಮಂ ಪಿಡಿದೆಸೆದಳ್
ದರ್ಪಕವಧುವೆನಿಪ ವಧುಗೆ ಸುರವಧು ಮುದದಿಂ ೧೩೪

ಅಳವಡುವಂತಿರೆ ಕಪ್ಪುರ
ವಳಿಕಿನ ತಗಡಿಂದೆ ಮಾಡಿದಂತಿರೆ ಕಂಪಂ
ತಳೆದ ಬಿಳಿಯೆಲೆಯನಂಬುಜ
ದಳದಿಂ ಪುದಿವಂತೆ ಪಿಡಿದು ಸುರಸತಿಯೆಸೆದಳ್ ೧೩೫

ಉರದೊಳ್ ಕುಚಮಂಡಳದವೊ
ಲಿರೆ ಹರಿಗೆಯನಮರೆ ಪಿಡಿದು ತೀಕ್ಷ್ಣತೆಯಂ ಕೇ
ಕರದಂತೆ ತಳೆದ ಬಾಳಂ
ಧರಿಯಿಸಿ ದೇವಿಯರೆ ಸತಿಗೆ ಮೆಯ್ಗಾಪಾದರ್ ೧೩೬

ಎಡೆಗಿಱಿದಿರ್ಪುದುಮುಂದಂ
ಗಡಮೆಂಬೀ ನುಡಿಯುಮಲ್ಲಿ ಮೊಲೆಯೊಳೆ ಪೆಱತಾ
ವೆಡೆಯೊಳಮಿಲ್ಲೆನೆ ನಿಯಮಿಸೆ
ಪಡಿಯಱೆಕೆಯನಾಂತರಮರಿಯರ್ ತತ್ಸಭೆಯೊಳ್ ೧೩೭

ಅಮೃತಾತ್ಮಿಕೆಯರ್ ತಾಮೆನಿ
ಪಮರಿಯರೆ ಕರಾಸ್ಯರೂಪಸಂಭವಸುಲಯಾ
ಶ್ರಮವಾದ್ಯಗೀತನೃತ್ಯಮು
ಮಮರ್ದಂ ಕುಡೆ ಸತಿಯ ಮನಮನೊಸೆಯಿಸುತಿರ್ದರ್ ೧೩೮

ಮನಮೊಸೆದು ಗರ್ಭಸಂಶೋ
ಧನಮಂ ದಿವ್ಯಾನ್ನಪಾನಭೂಷಣಶಯ್ಯಾ
ಸನ ವಸನ ವಿಲೇಪನಮಾ
ಲ್ಯನಿಚಯದಿಂ ಸತಿಗೆ ಮಾಡಿದರ್ ಸುರಸತಿಯರ್ ೧೩೯

ಮ॥ ಪ್ರಿಯದಿಂ ದಿವ್ಯಸುಸೇವ್ಯವಸ್ತುತತಿಯಿಂದಂ ಗರ್ಭಸಂಶೋಧನ
ಕ್ರಿಯೆಯಿಂ ದೇವಿಯರಿಂಗೆ ಚಂದ್ರಕಳೆಯಂ ನುಣ್ಪಿಟ್ಟರೆಂಬಂತೆ ಕಾಂ
ತಿಯನೋರಂತೆಸೆವಂತು ತಾಳ್ದಿ ವಿಶದಶ್ರೀಬ್ರಹ್ಮದತ್ತಾಲತಾಂ
ಗಿಯದೇಂ ಲೀಲೆಯಿನಶ್ವಸೇನನೃಪನಂ ತಾಂ ಸೋಲಿಸಲ್ ಸಾಲ್ತಳೋ ೧೪೦

ವ॥ ಅಂತು ದೇವಕಾಂತೆಯರಾ ಕಾಂತೆಗೆ ಪಲವುದೆವಸಂ ಪಲತೆಱದ ಪರಿಚರ್ಯೆಯನಾಶ್ಚರ್ಯವಾಗೆ ಮಾಡುತ್ತುಮಿರ್ಪುದು[ಮೊಂದು]ದೆವಸಮಬ್ಜಿನಿಯಂತೆ ರಜಸ್ವತಿ[ಲೆ]ಯುಂ, ಕಾಮೋದ್ದಾಮಪ್ರಮೋದಸಂಪಾದಿಲಕ್ಷ್ಮೀಮತಿಯುಂ ಮಹಾಸುತಸಸ್ಯೋತ್ಪತ್ತಿ ನಿಮಿತ್ತಧಾರಿಣಿಯುಮಖಿಳಬಂಧುಜನಸುಖಕಾರಿಣಿಯು ಮಾಗಿರ್ದು

ಕಂ॥ ತೀರ್ಥಜಳಂಗಳಿನೆಸಗೆ ಚ
ತುರ್ಥಸ್ನಾನಮನಗಣ್ಯಲಾವಣ್ಯಮದ
ಪ್ರಾರ್ಥಿತಮೆಸೆದಿರೆ ಜಂಗಮ
ತೀರ್ಥಂ ತಾನೆನಿಸಿ ಜಿನಜನನಿ ಸೊಗಯಿಸಿದಳ್ ೧೪೧

ವ॥ ತದನಂತರಂ

ಕಂ॥ ಲಾವಣ್ಯಾಂಬುಧಿಯ ತರಂ
ಗಾವಳಿಯೆನೆ ದುಗುಲಮಮಳಮುಕ್ತಾವಳಿ ಮು
ಕ್ತಾವಳಿಯೆನೆ ಜಳನಿಧಿಯಧಿ
ದೇವತೆಯೆನೆ ದೇವಿ ಕರಮ ಕಣ್ಗೆಸೆದಿರ್ದಳ್ ೧೪೨

ಚೇತಃಪ್ರಸಾದಸಂಪಾ
ದಾತಿಶಯವಿಚಿತ್ರಶೋಭೆಯಿಂ ಪ್ರಾಸಾದ
ಖ್ಯಾತಿವಡೆದ ಶಶಿಕಾಂತಕೃ
ತಾತುಳಶಯ್ಯಾನಿವಾಸದೊಳ್ ಸವಿಳಾಸಂ ೧೪೩

ಮ॥ ಇರೆ ಹಂಸಾತುಳತೂಳತಳ್ಪದೊಳ್ ಶ್ರೀರಾಜಹಂಸಂ ಕಳಾ
ಧರನುದ್ಯದ್ರುಚಿರಾಂಬರಂ ಕುಮುದಕಾಂತಾಪಾಂಗೆ ಹೇಮಾಂಬುಜಾ
ಸ್ಯೆ ರತೀಶಪ್ರಿಯಚಂದ್ರಿಕಾಧವಳಹಾರೋದಾರೆ ಕೋಕಸ್ತನೋ
ದ್ಧುರಭಾರಾನತೆ ಸೂಱೆವಂದಳಧಿಕಾನಂದಂ ಪ್ರಿಯಂಗಪ್ಪಿನಂ ೧೪೪

ವ॥ ಅಂತಾ ಕಾಮಿನಿ ಕಾಮದೇವನ ಕೋಲ ಸೂಱುಂ ತನ್ನ ಸೂಱುಮೊಂದೆ ಯೆಂಬಂದದಿಂ ಬಗೆಯನುಗಿಬಗಿಮಾಡುತ್ತುಂ ಸೂಱೆವಂದ ನಲ್ಲಳಂ ಸುಖಮಂ ತಳ್ಕಯ್ಸುವಂತೆ ತೆಗೆದು ತಳ್ಕಯಿಸಿ ಸಕಂಟಕತನುಗಳಾಗಿಯುಮತನುರಾಗರಾಜ್ಯಸಂಪತ್ತಿಗೆ ನಿಷ್ಕಂಟಕ

ವೃತ್ತಿಯನೀಯುತ್ತುಂ ಸಂಭೋಗಸಾಗರವೇಳೆಯುಂ ವೇಳೆಯಱಿಯದ ಲೀಲೆಗಳಿಗನುಕೂಲಮಾಗೆ ಸುಖಸುಪ್ತರಾಗಿರೆ

ಕಂ॥ ಉನ್ನತನತಿಶಯಭದ್ರಗು
ಣಂ ನಿನಗುದಯಿಸುವ ತನಯನೆಂದಱಿಪುವುದಂ
ಪುನ್ನಾಗಮನ್ಯೈರಾವತ
ಸನ್ನಿಭಮಮಂ ಸ್ವಪ್ನದಲ್ಲಿ ಗಜಗತಿ ಕಂಡಳ್ ೧೪೫

ಪಣೆಯೊಳ್ ಪತ್ತಿದ ಪಂಕಂ
ಪೊಣರ್ಕೆಗಿಲ್ಲಿತರವೃಷಭಮೆನಿಸುವ ವೃಷಭಾ
ಗ್ರಣಿಯಂ ಸಮಗ್ರ ಕಾಂತಾ
ಗ್ರಣಿ ಕಂಡಳ್ ರಾಗಮಾಗೆ ಬೆಳಗಪ್ಪಾಗಳ್ ೧೪೬

ಕರಿಶಿರದ ಮುತ್ತು ಪತ್ತಿರೆ
ಚರಣನಖಂಗಳೊಳೆ ವಜ್ರದಿಂ ವೆಜ್ಜಮನೊ
ಪ್ಪಿರೆ ಮಾಡುವವರನಿಟಿಸುವ
ಹರಿಯಂ ಹರಿಸದೊಳೆ ಹರಿಕಟೀತಟಿ ಕಂಡಳ್ ೧೪೭

ಕನಕಾಬ್ಜಂ ಕನಕಾಚಳ
ಮೆನೆ ಮಿಸಿಸುವ ಕರಿಗಳಿಂದ್ರರೆನೆ ತನ್ನಯ ಮ
ಜ್ಜನಮೆ ಜಿನಜನನಸವನಮಿ
ದೆನೆ ಸೊಗಯಿಪ ಸಿರಿಯ ನಯನಮಂ ಶ್ರೀ ಕಂಡಳ್ ೧೪೮

ಗುಣಯುತನಖಿಳಶಿರೋಭೂ
ಷಣನುದಯಿಪ ತನುಜನೆಂದು ಸೂಚಿಸುವುದನೀ
ಕ್ಷಣ ಮಧುಪಸುಖದ ಪರಿಮಳ
ಗುಣದಾಮೋದ್ದಾಮಧಾಮಮಂ ವಧು ಕಂಡಳ್ ೧೪೯

ನಿಜಮುಖಚಂದ್ರದ್ಯುತಿಯಿಂ
ದೆ ಜಲಕ್ಕನೆ ತೊಳಗಿ ಬೆಳಗುವಂಗಜ ಭೂಭೃ
ದ್ವಿಜಯಮನೊದವಿಸುತುದಯಿಪ
ರಜನೀಕರನಂ ಚಕೋರಲೋಚನೆ ಕಂಡಳ್ ೧೫೦

ಪರಮಜಿನಹಂಸಜನನಾ
ಕರೋದಯಾದ್ರೀಂದ್ರಲಕ್ಷ್ಮಿಯೆನಿಸಿದ ತನ್ನಂ
ಪರಿಪೂಜಿಸಲ್ಕೆ ದಶಶತ
ಕರಮಂ ತಳೆವಂತಿರೆಸೆವ ರವಿಯಂ ಕಂಡಳ್ ೧೫೧

ಸಂಭವಿಸಿದೊಡೀಯಂದದ
ಕುಂಭಾಮೃತದಿಂದೆ ನಿಜಸುತಂಗಭಿಷವಮಂ
ಜಂಭಾರಿ ಪಾಬ್ಬುಮೆನಿಸುವ
ಕುಂಭಯುಗಮನಮಳಕುಂಭನಿಭಕುಚೆ ಕಂಡಳ್ ೧೫೨

ಅನಿಮಿಷಪತಿಪೂಜ್ಯನೆನಿ
ಪ್ಪ ನಂದನಂ ಕಣ್ಗೆ ಸುಖಮನೀ ತೆಱದಿಂದಂ
ಜನಿಯಿಸುಗುಮೆನಿಸಿ ಸೊಗಯಿಸು
ವನಿಮಿಷಯುಗಮಂ ಝಷೋಪಮೇಕ್ಷಣೆ ಕಂಡಳ್ ೧೫೩

ಜಿನರಾಜಹಂಸನೊಪ್ಪಿ
ರ್ಪ ನಿಜೋದರಮಾನಸಕ್ಕೆ ಸಮನೆನಿಸುವುದಂ
ವನಜಾಕರಮಂ ಕಂಡಳ್
ವನಜಾನನೆ ರಾಜಹಂಸಸಂಶೋಭಿತಮಂ ೧೫೪

ಶುಂಭದ್ಗುಣಮಣಿನಿಳಯಂ
ಗಂಭೀರಂ ವಿಮಳವಿಮಳಹೃದಯನೆನಿಪ್ಪಂ
ಸಂಭವಿಪನೆಂದು ಸೂಚಿಸು
ವಂಭೋಧಿಯನೆಸೆವ ಕಂಬುಕಂಧರೆ ಕಂಡಳ್ ೧೫೫

ಭಾಸುರಮಣಿಕೃತ ಶಕ್ರಶ
ರಾಸನಮಂ ಮೇರುಶೈಳಶೋಭಾವಹ ಸಿಂ
ಹಾಸನಮಂ ಜಿನವಿಭವವಿ
ಭಾಸನಮಂ ಜಿತಸರೋರುಹಾನನೆ ಕಂಡಳ್ ೧೫೬

ಮಾನಸಮೇತಂ ಸತ್ಪಥ
ಯಾನಯುತಂ ಸಾತ್ರಿತೋನ್ನತಿಪ್ರದನಪ್ಪಂ
ಮಾನಿನಿ ನಿನಗೆಂದಱಪುವ
ಮಾನಿತಮಂ ಸುರವಿಮಾನಮಂ ಸತಿ ಕಂಡಳ್ ೧೫೭

ಭೋಗೀಶಫಣಾಮಣಿಗೃಹ
ಮಾಗಿರ್ಪ ತನೂಜನಪ್ಪನೆಂದಱಪುವುದಂ
ಭೋಗೀಂದ್ರರುಂದ್ರಗೃಹಮಂ
ಭೋಗನಿಭಪ್ರಚುರಕಬರಿ ಕಂಡಳ್ ಮುದದಿಂ ೧೫೮

ಜ್ಞಾನಪ್ರದೀಪಜನ್ಮ
ಸ್ಥಾನಂ ದುರಿತೇಂಧನಪ್ರಣಾಶಕರಂ ತೇ
ಜೋನಿಧಿ ಜಿನನೆಂದಱಪುವ
ತಾನಿತನಿರ್ಧೂಮ ದಹನನಂ ವಧು ಕಂಡಳ್ ೧೫೯

ವೃತ್ತಾತಿಶಯ ಗುಣಂ ಭುವ
ನೋತ್ತಂಸಂ ಸುಪ್ರಸನ್ನಮುಖನುದಯಿಸುಗುಂ
ಮತ್ತೆನಿಸದೆಂದು ಸೂಚಿಸು
ವೃತ್ತಮ ಮಣಿಗಣಮನಮಳ ಗುಣಮಣಿ ಕಂಡಳ್ ೧೬೦

ವ॥ ಮತ್ತಮಮಳಕಮಳಧವಳವೃಷಭಂ ನಿಜಮುಖಕಮಳಮಂ ಪುಗುವುದುಮಂ ಕಾಣ್ಬುದುಮಾ ಕಾಂತೆಗೆ ತನ್ನಗಣ್ಯಪುಣ್ಯದೇವತೆಯ ತೊಟ್ಟ ಷೋಡಶಾಭರಣವಂತೆ ಮನಂಗೊಳಿಸಿ ದೃಶ್ಯಮಾದ ಷೋಡಶಸ್ವಪ್ನಂಗಳನಿತುಂ ಸತ್ಯಸ್ವಪ್ನಂಗಳೆಂದು ಕನ್ಪಿಡಿಸಲ್ ಕನಸಿನೊಳ್ ತೋಱಿದ ದಿನಕರನೆ ನೆನಸಿನೊಳ್ ತೋರ್ಪಂತುದಯಿಸಿ ಖಂಡೇಖರನಾಗಿಯಾ ಜಿನಜನನಿಗಿಂದ್ರಾಣಿ ಪಿಡಿದ ರನ್ನದ ಕನ್ನಡಿಯಂತೆ ತೊಳಗಿ ಬೆಳಗುತಿರ್ಪುದುಮಾ ಪ್ರಸ್ತಾವದೊಳ್ ಪ್ರಶಸ್ತಗುಣವಿಸ್ತಾರಕನೆನಿಸಿರ್ದ ಪುಣ್ಯಪಾಠಕಂ ಬಂದು

ಶಾ॥ ದಾನೇಭಂ ವೃಷಭಂ ಗಜಾರಿ ಸಿರಿಧಾಮಂ ಚಂದ್ರಮಂ ಭಾಸ್ಕರಂ
ಮೀನಂ ಪೂರ್ಣಘಟಂ ಕೊಳಂ ಜಳಧಿ ನಾನಾರತ್ನಸಿಂಹಾಸನಂ
ಶ್ರೀನಾಕೇಂದ್ರವಿಮಾನಮುದ್ಧಫಣಿವಾಸಂ ಮಣಿವ್ರಾತಮ
ನ್ಯೂನಜ್ವಾಳಿಯೆನಿಪ್ಪಿವಂ ಕನಸಿನೊಳ್ ಕಂಡರ್ಗೆ ಸನ್ಮಂಗಳಂ ೧೬೧

ವ॥ ಎಂದು ತನ್ನ ಕಂಡಕನಸುಗಳಂ ಪರಿವಿಡಿಯಿಂದೋದೆ ತತ್ಫಳಮಂ ಮಂಗಳ ಪಾಠಕಂ ಸಾಧಾರಣೋಕ್ತಿಯಿಂ ವ್ಯಕ್ತಂಮಾಡ್ಗುಮದಂ ಕೇಳ್ದು ಮೆಚ್ಚುತ್ತುಂ ಪುಳಕದೊಡನೆಬ್ಬಿತ್ತು ವಿಶೇಷೋಕ್ತಿಯಿಂ ಕೇಳಲೆಂದು ಸಮುತ್ಸುಕಚಿತ್ತೆ ನಿರ್ವರ್ತಿತ ನಿತ್ಯಮಂಗಳಕ್ರಿಯೆಯುಂ ಕೃತಾಳಂಕಾರಕ್ರಿಯೆಯುಮಾಗಿ ಮನೋರಾಗದಿಂ ಮನೋವಲ್ಲಭನಲ್ಲಿಗೆ ವಂದು ಮನಕ್ಕೆ ವಂದಿರ್ದ ಕನಸುಗಳನನುಕ್ರಮದಿಂ ಸೂಕ್ತಿಕರ್ಣಾವತಂಸಂಗವತಂಸಂ ಮಾಱ್ಪುದುಮನಲ್ಪ ಹರ್ಷಮಂ ಸ್ವಪ್ನಾಧ್ಯಾಯ ಪ್ರಗಲ್ಭಂ ತಳೆದು ತದನಂತರಂ

ಕಂ॥ ಷೋಡಶ ಭಾವನೆಯಿಂದಂ
ಕೂಡಿಯೆ ತೀರ್ಥಕರ ಪುಣ್ಯಮಂ ನೆರಪಿದಳಾ
ಚೂಡಾಮಣಿ ನಿನಗನಘಂ
ಕ್ರೋಡೀಕೃತಸೌಖ್ಯನುದಯಿಕುಂ ತೀರ್ಥಕರಂ ೧೬೨

ಎಂದು ಶುಭಸ್ವಪ್ನಫಳಮ
ನಿಂದೀವರವದನೆಗಱಿಪೆ ಪುಳಕಾಂಕುರಮಾ
ನಂದಾಶ್ರುತೋಯದಿಂ ಬಳೆ
ದಂದದೆ ಬಳೆಯಿತ್ತು ಸತಿಯ ತನುವಲ್ಲರಿಯೊಳ್ ೧೬೩

ಸುತಮಾತ್ರಂ ಜನಿಯಿಕುಮನೆ
ಸತಿಯುರ್ಗನುರಾಗಮುದಯಿಕುಂ ತ್ರೈಭುವನಾ
ರ್ಜಿತನುದಯಿಕುಮನೆ ಹರ್ಷಮ
ನತರ್ಕ್ಯಮಂ ತಳೆವುದೆಂಬುದೇನಚ್ಚರಿಯೇ ೧೬೪

ವ॥ ಅಂತು ಸಂತೋಷಪೀಯೂಷರಸತರಂಗಿತಾಂತರಂಗೆಯಾಗಿ ಮಗನ ಬರವಿಂಗೆ ಮನದೊಳೆ ಗುಡಿಗಟ್ಟಿ ನಿಜನಿವಾಸಕ್ಕೆವಂದು ಸುಖದಿಂದಿರ್ಪಿನಮತ್ತಲಾನ ತೇಂದ್ರಾನತಕಲ್ಪದೊಳನಲ್ಪಸುಖಾಮೃತಮನನುಭವಿಸಿ ಬಂದು ವೈಶಾಖದ ಕೃಷ್ಣಪಕ್ಷದ ತದಿಗೆಯುಂ ವಿಶಾಖಾನಕ್ಷತ್ರಮುಂ ಪ್ರವರ್ತಿಸೆ

ಕಂ॥ ನಿರುಪಮಬೋಧಂ ಮತಿಯೊಳ್
ಪರಿಮಳಮಂಬುರುಹಗರ್ಭದೊಳ್ ನೆಲಸುವವೋ
ಲರಸಿಯ ಗರ್ಭದೊಳರ್ಹ
ತ್ಪರಮೇಶಂ ನೆಲಸಿ ಮಹಿಮೆಯಂ ಬಳೆಯಿಸಿದಂ ೧೬೫

ವ॥ ಅದನಿಂದ್ರನವಧಿಬೋಧದಿಂದಮಱಿದು ಬಂದು

ಕಂ॥ ಶ್ರೀಜಿನರಾಜಂ ನೆಲಸೆ ಸ
ರೋಜಾಸ್ಯೆಯ ಗರ್ಭದಲ್ಲಿ ಚೈತ್ಯಾಲಯಮಂ
ಪೂಜಿಸುವಂತೆ ಶಚೀಪತಿ
ಪೂಜಿಸಿದನಗಣ್ಯಪುಣ್ಯೆಯಂ ಮಣಿಗಣದಿಂ ೧೬೬

ವ॥ ಅಂತಮರೇಂದ್ರನಾನಂದದಿಂ ಬಲವಂದು ಬೞಿಯಂ ಬ್ರಹ್ಮದತ್ತಾಮಹಾದೇವಿಯುಮನಶ್ವಸೇನಮಹಾರಾಜನುಮಂ ವಿಚಿತ್ರ ವಸ್ತ್ರಾಭರಣಸಮಾಜದಿಂ ಪೂಜಿಸಿ ಪೊಡೆವಟ್ಟು ಪೋದನನ್ನೆಗಮಿತ್ತಲ್

ಮ.ಸ್ರ॥ ಪ್ರಣುತ ಪ್ರದ್ಯೋತನದ್ಯೋತಿತ ಪೃಥುಗಗನಶ್ರೀಗಿಳಾಸ್ತುತ್ಯ ಚಿಂತಾ
ಮಣಿಭಾಸ್ವತ್ಕ್ಷೋಣಿಗುರ್ವೀನುತಸುರಕುಜಸಂಶೋಭಿತೇಂದ್ರಾಚಳಶ್ರೀ
ಗೆಣೆಯೆಂಬಂತೊಪ್ಪೆ ತನ್ನಂ ತಳೆದು ಜನನಿ ತೇಜೋಮಯಂ ಲೋಕಸಂರ
ಕ್ಷಣಪುಣ್ಯಂ ಮೈಮೆವೆತ್ತಂ ವಿಬುಧಜನಮನಃಪದ್ಮಿನೀಪದ್ಮಮಿತ್ರಂ ೧೬೭

ಗದ್ಯ

ಇದು ವಿದಿತ ವಿಬುಧಲೋಕನಾಯಕಾಭಿಪೂಜ್ಯ ವಾಸುಪೂಜ್ಯಜಿನಮುನಿ ಪ್ರಸಾದಾಸಾದಿತ ನಿರ್ಮಳಧರ್ಮವಿನುತ ವಿನೇಯಜನವನ ಜವನವಿಳಸಿತ ಕವಿಕುಳತಿಳಕ ಪ್ರಣೂತ ಪಾರ್ಶ್ವನಾಥ ಪ್ರಣೀತಮಪ್ಪ ಪಾರ್ಶ್ವನಾಥಚರಿತಪುರಾಣದೊಳ್ ಜಿನಾರ್ಭಕಗರ್ಭಾವತರಣ ಕಲ್ಯಾಣವರ್ಣನಂ ತ್ರಯೋದಶಾಶ್ವಾಸಂ

ಚತುರ್ದಶಾಶ್ವಾಸಂ

ಕಂ॥ ಶ್ರೀನವರತ್ನಾಸಾರಮ
ನೂನಂ ನವಮಾಸಮಪ್ಪಿನಂ ಕಱೆಯೆ ವಿನೇ
ಯಾನಂದಂ ತಾಯುದರದೊ
ಳಾನತಸುರನಿರ್ದನೆಸೆದು ಕವಿಕುಳತಿಳಕಂ ೧

ಬೇರೂಱಿತು ನಿಜರುಚಿಯೆನೆ
ಬೇರೂಱುವ ವಕ್ರಶಕ್ರಧನುವೆನೆ ರತ್ನಾ
ಸಾರಮನೆ ಕೂರ್ತು ಕಱೆಯೆ ಕು
ಬೇರಂ ದಿವಸಕ್ಕೆ ಮೂಱುಕೋಟಿಯುಮರೆಯುಂ ೨

ಮುನ್ನಮೆಯಱುದಿಂಗಳ್ವರೆ
ಗನ್ನಾಕಸ್ತ್ರೀಯರಿಸುವೆಸಮನೆಸಪರ್ ದೇ
ವನ್ನಲಸೆ ಗರ್ಭದೊಳ್ ತಾ
ಯ್ಗಿನ್ನವರೆಸಗುವ ಸಪರ್ಯೆಯಂ ಪವಣಿಪರಾರ್ ೩

ವ॥ ಅಂತು ನಿಮಿಷಮಪ್ಪೊಡಂ ಜಿನಾಂಬಿಕೆಗಳಸುಗೆಯನಾಗಲೀಯದನೇಕ ವಿನೋದಂಗಳಿಂ ಪ್ರಮೋದಮನಾಪಾದಿಸುತ್ತುಂ ಗರ್ಭಪೋಷಕಾರಿಯುಂ ಮನಸ್ತೋಷಕಾರಿಯುಮಪ್ಪ ಕಲ್ಪಕುಜಸಂಜನಿತ ಸಮಸ್ತ ವಸ್ತುವಿನೋಲಗಿಸುತ್ತುಂ ಬೆಸಕೆಯ್ಯುತ್ತುಮಿರೆ

ಕಂ॥ ಆ ವನಿತೆಗೆ ಮಣ್ಣಂ ಮ
ಲ್ವೀ ವಾಂಛೆ ಪುಟ್ಟಿತಿಲ್ಲ ಗರ್ಭದೊಳಿರ್ಪಾ
ದೇವಂಗವನೀರಾಜ್ಯದ
ಸೇವನೆಯೊಳ್ ವಾಂಛೆಯುಣ್ಮದುದನಱಿಯದವೋಲ್ ೪

ಅಯನಿಳಯಂ ತ್ರೈಳೋಕ್ಯದ
ಬಯಕೆಯನವಯವದೆ ತೀರ್ಚಲಾರ್ಪಂ ತಾಯ್ಗಾ
ಬಯಕೆಯನಿರಲೀವನೆಯೆನೆ
ಬಯಕೆಗಳಾ ಗರ್ಭವತಿಗೆ ಪುಟ್ಟವೆ ಪಿರಿದುಂ ೫

ಮಳಿನತೆಯಂ ತಳೆದೊಡೆ ನಿ
ರ್ಮಳಚರಿತಂ ತಮ್ಮನೊಲ್ದು ಸೇವಿಸನೆಂದು

ತ್ಪಳನೇತ್ರೆಯ ಕುಚಕಳಶಂ
ಗಳಜೆದ ತೆಱದಿಂದೆ ತಳೆಯದೆಸೆದುವು ಕರ್ಪಂ ೬

ಆ ರಮಣಿಯ ನಾಭಿಯ ಗಂ
ಭೀರತ್ವಂ ಕೆಟ್ಟುದಿಲ್ಲದಂತೆ ದಲತಿಗಂ
ಭೀರಗುಣರಿರ್ದೆಡೆಗೆ ಗಂ
ಭೀರತೆ ಪಿರಿದಪ್ಪುದಲ್ಲದೇ ಕೆಟ್ಟಪುದೇ ೭

ಆ ತ್ರಿಭುವನನಾಥಂ ಬೋಧ
ತ್ರೈತಯ ಸುಸಮಗ್ರನೆಂದು ಸೂಚಿಪ ತೆಱದಿಂ
ನೇತ್ರರಮಣೀಯಮೆನಿಸಿ ವ
ಳಿತ್ರಯಮೆಸೆದಿರ್ದುವಟೆಯದಾ ಕೋಮಳೆಯಾ ೮

ನಿರ್ದೋಷಂ ತಾಯುದರದೊ
ಳಿರ್ದುಮುಪದ್ರವಮನೇನುಮಂ ಮಾಡನೆ ತಾ
ನಿರ್ದವನಿಗುಪದ್ರವಮಂ
ಪೊರ್ದಿಸದ ಪರೋಪಕಾರಿಗದು ಪಿರಿದಾಯ್ತೇ ೯

ಬೆಳ್ಮೊಗಮಂ ಮಿಗೆ ಚಂದ್ರಮ
ನೊಳ್ ಮೂಡುವ ಚೆಲ್ವನಾಂತು ಕಾಂತನ ಮನಮಂ
ಬೆಳ್ಮಾಡಿ ಮನಸಿಜನ ಕೂ
ರ್ಬಾಳ್ಮೊದಲೆನಿಸಿರ್ದುದಿಂದುವದನೆಯ ವದನಂ ೧೦

ವಿಧುವದನೆಯ ನಿಜಕಾಮಿನಿ
ಯಧರಾಮೃತಸೇವೆಯಿಂದೆ ತಣಿದು ಗುಣಾಂಭೋ
ನಿಧಿಯಶ್ವಸೇನನುರ್ವರೆ
ಗಧಿನಾಯಕನೊಪ್ಪಿದಂ ಚಕೋರದ ತೆಱದಿಂ ೧೧

ವ॥ ಅಂತು ಮನೋನಯನವಲ್ಲಭನ ಹರ್ಷಗರ್ಭನರ್ಮವಚನಸಂದರ್ಭದೊಡನೆ ಗರ್ಭಂ ಬಳೆದು

ಕಂ॥ ನಿರುತಂ ಗ್ರಹಮುಚಿತಗೃಹದೊ
ಳಿರೆ ಪುಷ್ಯದ ಕೃಷ್ಣಪಕ್ಷದೇಕಾದಶಿಯೊಳ್
ಬೆರಸಿರೆ ಶುಭವಾರಂ ಶುಭ
ಕರಣಂ ಶುಭಯೋಗಮೆಸೆವ ಶುಭನಕ್ಷತ್ರಂ ೧೨

ಆ ಸುದತಿಗೆ ಸುಖದಿಂ ನವ
ಮಾಸಂ ನೆಱೆದೆಸೆಯೆ ಪುಣ್ಯಸಂಚಯಜನ್ಮಾ
ವಾಸಂ ಪದಪಂಕಜನತ
ವಾಸವಮಣಿಮಕುಟದೇಶ ನಯಮಣಿಕೋಶಂ ೧೩

ಚಂ॥ ಸುರಿಯೆ ಸುರತ್ನವೃಷ್ಟಿ ಸುರವಾರವಧೂಜನಮತ್ತಲಿತ್ತಲುಂ
ಪರಿಯೆ ನೆಗೞ್ದವೆತ್ತ ಪುರದುರ್ವರೆ ಪೂಮೞೆಯೊಂದುಕಂಪಿನಿಂ
ಪೊರೆಯೆ ಮದಾಳಿಗಳ್ ಮೊರೆಯೆ ಮಂಗಳತೂರ್ಯರವಂ ದಿಶಾಳಿಯೊಳ್
ಪರೆಯೆ ಬುಧವ್ರಜಂ ನೆರೆಯೆ ಸಂತಸದಿಂ ಪರಮೇಷ್ಠಿ ಪುಟ್ಟಿದಂ ೧೪

ಕಂ॥ ಕುಸುಮಾಸಾರದೊಳೊಂದಿದ
ವಸುಧಾರೆ ತದೀಯಗಂಧದಿಂದಂ ಪುದಿದೇಂ
ಪೊಸಯಿಸಿತೊ ಪೊನ್ಗೆ ಕಂಪುಂ
ಪಸರಿಸಿತೆಂಬಿದೆನೆ ಜಿನನ ಜನನೋತ್ಸವದೊಳ್ ೧೫

ವ॥ ಆ ಶುಭಮುಹೂರ್ತದೊಳ್

ಕಂ॥ ನಿಮಿರ್ದಮರ್ದು ದಕ್ಷಿಣಾವ
ರ್ತಮನಾಂತೆಸೆದತ್ತು ವಹ್ನಿ ತೇಜೋಮಯರೀ
ಕ್ರಮದಿಂ ಪ್ರದಕ್ಷಿಣಂಗೊ
ಳ್ಗುಮರ್ಹನಂ ಭುವನಪತಿಗಳೆಂದಱಿಪುವವೋಲ್ ೧೬

ಕಂ॥ ಧಾರಿಣಿ ಗಗನಂ ನೀರಂ
ನೀರಜಮೆನಿಸಿತ್ತು ಸಾರಸೌರಭಕಳಿತಂ
ಮಾರುತನೆಸಗಿತ್ತು ಜಿನಂ
ನೀರಜನುರ್ವರೆಗೆ ಸುಖದನೆಂದಱಿಪುವವೋಲ್ ೧೭

ಮ॥ ಕರುಮಾಡಂಗಳುಮೊಳ್ಪುವೆತ್ತ ಪರಿಯಂ ಪ್ರಾಸಾದಮುಂ ಚಿತ್ರಿತಾಂ
ಬರ ನೇತ್ರೋಚಿತ ಚಿನ್ನದೊಳ್ಗುಡಿಗಳಿಂ ರತ್ನಸ್ಫುರತ್ತೋರಣೋ
ತ್ಕರದಿಂ ಕುಂಕುಮಚಂದನದ್ರವ ಘನಾರ್ದ್ರೀಭೂತಗೇಹಾಂಗಣಂ
ತರದಿಂ ತಳ್ತಿರೆ ರತ್ನದೊಂದು ಕಡೆಯಿಂದೊಪ್ಪಿತ್ತು ತತ್ಪತ್ತನಂ ೧೮

ಕಂ॥ ಬಿಡುಮುತ್ತಿನ ಕಡೆಯಿಂದಂ
ಬಿಡೆ ಬೆಳಗುವ ರತ್ನದೀಪರುಚಿಯಿಂದಂ ಪಾ
ಲ್ಗಡಲ ತಡಿಯಂದದಿಂ ಚೆ
ಲ್ವಿಡಿದ ಸುಧಾವಹಗೃಹಾಂಗಣಂ ಕಣ್ಗೊಳಿಕುಂ ೧೯

ಮ॥ ಸುಮನೋರತ್ನಸುವರ್ಣವೃಷ್ಟಿಯೊದವಿಂ ರಾಜಾಂಗಣಂ ಸಾರಗಂ
ಧಮಯಂ ರತ್ನಮಯಂ ಸುವರ್ಣಮಯಮಾಯ್ತಿಂದ್ರಾಂಗನಾನೀಕಮು
ತ್ತಮವಿನ್ಯಾಸದೊಳೊಂದಿ ಪಲ್ಲವಮಯಂ ಭಾಸ್ವನ್ಮಣಿದ್ಯೋತಿಸಂ
ಗಮದಿಂ ಪುಷ್ಪಮಯಂ ಮುಕ್ತೇಂದುರುಚಿಯಿಂ
ಪೂರ್ಣೇಂದುರೋಚಿರ್ಮಯಂ ೨೦

ವ॥ ಅಂತು ಪುರಭವನಮುಂ ರಾಜಭವನಮುಮುತ್ಸವೋದ್ಭವ ನವೀನ ಶೋಭಾ
ಸುಭಗಮಾಗಿರ್ಪುದುಮತ್ತಲಾ ಪ್ರಸ್ತಾವದೊಳ್

ಕಂ॥ ಎಱಗದೊಡಂ ಮಕುಟದ ತನಿ
ಎಱಕಂ ತನಿಯರಲಮಱೆ ಸುರೋರ್ವೀರುಹದೊಳ್
ನೆಱೆ ತನಿಯಾಸನಕಂಪಂ
ಪೊಱಮಟ್ಟಱಿಪಿದವು ಸುರರ್ಗೆ ಜಿನನುದ್ಭವಮಂ ೨೧

ಹರಿಘಂಟಾಭೇರೀಶಂ
ಖರವಂ ಜ್ಯೋತಿಷ್ಕಕಲ್ಪಭವಭವನ ವ್ಯಂ
ತರಭವನದಲ್ಲಿ ಭೋಂಕೆನೆ
ಪರಿವಿಡಿಯಿಂ ನೆಗೆದುವಮರಲೋಕಾಶ್ಚರ್ಯಂ ೨೨

ವ॥ ಅಂತು ತಂತಮ್ಮ ಲೋಕದೊಳಾಕಸ್ಮಿಕಂ ನೆಗೞ್ದನೇಕಶುಭಚಿಹ್ನಂಗಳಿಂ ಶುಭಚಿಹ್ನನುದಯಮಂ ತ್ರಿದಶಪತಿಗಳಱಿದುಮವಧಿಯಂ ಪ್ರಯೋಗಿಸಿ ನಿಶ್ಚಯಿಸಿ ನಿಜಾಸನಂಗಳಿನಿೞಿದಾ ತ್ರಿಳೋಕಪತಿಗೆ ಮೂಱುಸೂೞ್ ಮನದೆಱಕದಿನೆಱಗಿ ಪೊಡೆವಟ್ಟು

ಉ॥ ಭಾವನರುತ್ಸವಾಕಳಿತಭಾವಯುತರ್ ಸುಖಭೂಮಿಭೌಮರು
ಜ್ಜೀವಿತಹರ್ಷರಪ್ರಮಿತ ಕಳ್ಪಜರುತ್ಪಳನಾಥ ಮುಖ್ಯದೇ
ವಾವಳಿಯಿಂತು ದೇವಜನನಾಭಿಷವಕ್ಕೆ ಚತುರ್ನಿಕಾಯಮಾ
ಶಾವಧಿಯಾಗಿ ಕಾಯರುಚಿ ತೀವಿರೆ ಬಂದುದದೊಂದು ಲೀಲೆಯಿಂ ೨೩

ಕಂ॥ ಆರ್ಮಹಿಮೆವೆತ್ತೊಡಂ ಸೌ
ಧರ್ಮನೆ ಜಿನರಾಜಪೂಜೆಯೊಳ್ ಮೊದಲಿಗನಂ
ತರ್ಮುಖತೆ ಭಕ್ತಿಭವ್ಯತೆ
ನೂರ್ಮಡಿಯುೞ ದಿಂದ್ರರಿಂದೆ ತನಗೆನಿಪೊಳ್ಪಿಂ ೨೪

ವ॥ ಅಂತು ತನ್ನನೆ ಮುಖ್ಯನಂ ಮಾಡಿ ಬರಲ್ವೇಡಿರ್ದ ಸುರರೆಲ್ಲರುಮಂ ಕೂಡಿಕೊಂಡು

ಮ॥ ಜಿನಜನ್ಮಾಭಿಷವೋತ್ಸವಕ್ಕೆ ನೆಗೆದಾನಂದಾಶ್ರುವಿಂ ಮಾಡಿ ಮ
ಜ್ಜನಮಂ ಸತ್ಪುಳಕಂಗಳಿಂ ಪಸದನಂಗೊಂಡಿಂದ್ರನಿಂದ್ರಾಣಿ ದೇ
ವನಿಕಾಯಂ ಬೆರಸಂಬರಂ ಮಣಿಮರೀಚಿವ್ರಾತದಿಂ ಬಣ್ಣವಿ
ಟ್ಟ ನವೀನಾಂಬರದಂದದಿಂದೆಸೆಯೆ ಬಂದಂ ಪೊಣ್ಮೆ ದೇವಾನಕಂ ೨೫

ವ॥ ಅಂತು ದೇವಾವಳಿ ನಭೋವಳಯ ದಿಶಾವಳಯಮಂ ವಳಯಾದಿ ಭೂಷಣ ಮಣಿಮರೀಚಿಗಳಿನಳಂಕರಿಸುತ್ತುಂ ಬಂದು

ಮ॥ ಬಹಿರುದ್ಯಾನದ ಬಳ್ಳಿಮಾವಲರ್ದ ಮಲ್ಲೀ ಮಾಳತೀವಲ್ಲಿ ಚಿ
ತ್ತಹರಂ ಶೋಭಿಸೆ ಗಂಗೆ ಸಂಗತ ಸುಮೀನಾಪಾಂಗೆ ಕಣ್ಗೊಪ್ಪೆ ನೂ
ತ್ನಹಟದ್ರತ್ನಗೃಹಾಳಿಯೊಪ್ಪಿರೆ ಸುರೇಶರ್ ಬಣ್ಣಿಸುತ್ತಿರ್ದರಾ
ಗ್ರಹದಿಂ ವಿಶ್ರುತ ವಾರಣಾಸಿಯನುದಂಚದ್ರತ್ನವಾರಾಶಿಯಂ ೨೬

ವ॥ ಅಂತತಿ ಮನೋಹರಮಪ್ಪ ಬಹಿಃಪುರಾಂತಃಪುರಶ್ರೀಯಂ ಸಹಸ್ರಾಕ್ಷತ್ವಂ ಸಫಳಮಾದತ್ತೆನುತ್ತಮಟ್ಟೆವಟ್ಟು ನಿರೀಕ್ಷಿಸುತ್ತುಮಶ್ವಸೇನಮಹಾರಾಜರಾಜಾಂಗಣದೊಳಿರ್ಪುದುಂ ಪುಳೋಮಸುತೆ ತಿರೋಹಿತದೇಹಿಯಾಗಿ

ಮ॥ ಮಿಗೆ ರಾಗಕ್ಕೆಡೆಯಾಗಿ ತನ್ನ ಬಗೆಯಂ ಶ್ರೀಬ್ರಹ್ಮದತ್ತಾಪ್ರಸೂ
ತಿಗೃಹಂ ಶೋಣಮಣಿಪ್ರಭಾಪರಿವೃತಂ ಪೋಲ್ತೊಪ್ಪೆ ಪೊಕ್ಕಿಂದ್ರಕಾಂ
ತೆ ಗಡಂ ಮುಂ ಪೊಡೆವಟ್ಟು ಮೂಮೆ ಬಲವಂದಾಯಿರ್ವರಂ ಬಾಳನಂ
ಜಗದಾಶ್ಚರ್ಯ ವಿಳಾಸಮೂರ್ತಿಯುತನಂ ಕಣ್ಣಾರ್ವಿನಂ ನೋಡಿದಳ್ ೨೭

ವ॥ ಅಂತು ನಿಜಕುವಳಯದಳಧವಳ ವಿಳೋಕನಕಾಂತಿ ಕ್ಷೀರಧಾರಾಸಹಸ್ರದಿಂದಭಿಷವಣಮಂ ತ್ರಿಭುವನಚೂಡಾಮಣಿಗೆ ಮಾಡಿ ತಣಿಯದೆ ಜಿನನುಮಂ ಜಿನಜನನಿಯುಮಂ ಪೊಗೞ್ದು ಬಱಿಯಂ ಭುವನಾಂಬಿಕೆಗೆ ಮಾಯಾನಿದ್ರೆಯನಿತ್ತು

ಕಂ॥ ಶ್ರೀಯುತ ಜಿನಮತಕಿತರಂ
ಮಾಯಾಮತಮೆಂದು ಸುರರ್ಗೆ ಸೂಚಿಪ ತೆಱದಿಂ
ಮಾಯಾಶಿಶುವಂ ಶಚಿ ತರ
ಳಾಯತಲೋಚನೆಯ ಮುಂದೆ ತಂದಿಟ್ಟೊಂದಂ ೨೮

ಬಾಳಾರ್ಕನನ್ನೆಂದ್ರೀದಿ
ಗ್ಬಾಲೆವೊಲಿಂದ್ರಾಣಿ ಮುಗಿದ ಕರಸರಸಿಜಮು
ನ್ಮೀಳಿಸೆ ತಳೆದಳ್ ತನ್ನ ಸ
ಲೀಲವದನಹೃದಯವನಜದಂತನುರಕ್ತಂ ೨೯

ಕಲ್ಪಲತೆ ಪುಣ್ಯಫಲಮನ
ನಲ್ಪಮನತಿವಿಪುಳಪುಳಕಕಳಿಕಾತತಿಗಳ್
ತಳ್ಪೊಯ್ಯೆ ತಳೆದ ತೆಱದೊಂ
ದೊಳ್ಪಂ ಪಡೆಯುತ್ತುಮಮರಿಯರ್ಕಳ್ ಬಗೆಯೊಳ್ ೩೦

ಕಳಮಂಗಳ ಗೀತಂಗಳ
ನಳವಡೆ ಪಾಡುತ್ತುಮಾಡುತುಂ ಮುದದಿಂ ಮಂ
ಗಳವಸ್ತುವನಾಂತು ದಿಶಾ
ಲಲನೆಯರೊಡವರೆ ವಿಳಾಸದಿಂ ನಡೆತಂದಳ್ ೩೧

ನಡೆತಂದು ಜಿನಾರ್ಭಕನಂ
ಕುಡೆ ನೀಡಿದ ತೋಳ್ಗೆ ಚಂದನದ್ರವದಿಂ ಕಂ
ಪಡರೆ ನಿಜಾಂಕಾಸನದೊಳ್
ಬಿಡೌಜನಿರಿಸಿಟ್ಟು ಭಕ್ತಿಯಿಂ ಪೊಡೆವಟ್ಟಂ ೩೨

ನೀಲೀರಾಗತೆಯಂ ಹರಿ
ನೀಲಚ್ಛವಿ ಪಡೆಯೆ ಹರಿಗಮೈರಾವತಶುಂ

ಡಾಳಕ್ಕಂ ಬಳಸಿದ ವಿಬು
ಧಾಳಿಗಮಿಂದ್ರಾಣಿಗಂ ಜಿನಾರ್ಭಕನೆಸೆದಂ ೩೩

ಜಿನನಾಥನ ತನುರುಚಿಯಂ
ಜನಲೇಖಾಶ್ರೀಯನಾಂತು ನೋಟ್ಟಿಮರೀಲೋ
ಚನಕನನುಭೂತಸುಖಮಂ
ಜನಿಯಿಸಿದುದು ಭಂಜಿತಾಂಜನಂ ಜನವಿನುತಂ ೩೪

ವ॥ ಅಂತು ಪೂರ್ವಾದ್ರಿಯಂತಿರ್ದ ದಿವಿಜದಂತಿಯ ಪೂರ್ವಾಸನದೊಳಿರ್ದ ನಾಕಿ ನಾಯಕಂ ಜಿನನಾಯಕನಂ ನಿಜಾಂಕಮನೇಱಿಸಿಕೊಂಡು

ಕಂ॥ ಸುರಗಿರಿಗೆ ಸುರವ್ರಜಮಂ
ಸುರಪತಿ ಪೋಗೆಂದು ಸನ್ನೆಗೆಯ್ದೆತ್ತಿದ ದೋಃ
ಪರಿಘಂ ಕೈವಂದೊಪ್ಪುವ
ಸುರತರುಶಾಖಾವಿಳಾಸಮಂ ಪಾಳಿಸುಗುಂ ೩೫

ಸ್ರ॥ ಬಾಳಾರ್ಕಂಗರ್ಘ್ಯಮಂ ನಿರ್ಮಳನಿಜಮಕುಟಾನರ್ಘ್ಯಮಾಣಿಕ್ಯರೋಚಿ
ರ್ಮಾಳಾಕಾಶ್ಮೀರರಾಗೋಚ್ಚಳಿತಬಹಳಬಾಷ್ಪಾಂಬುವಿಂದಿತ್ತು ಮುನ್ನಂ
ತ್ರೈಲೋಕ್ಯಸ್ವಾಮಿಯಂ ಪ್ರೇಮದೆ ಜಯನಿನದಂ ನಂದ ವರ್ಧಸ್ವನಾದಂ
ಮೂಲೋಕಕ್ಕೆಯ್ದೆ ಧೀಂಕಿಟ್ಟೊದವಿರೆ ವಿಬುಧರ್ ಬಣ್ಣಿಸುತ್ತಿರ್ದರಾಗಳ್ ೩೬

ವ॥ ಆಗಳೈರಾವತವಾರಣಕ್ಕೆ ನಿಜವಾರಣಮಂ ಪಕ್ಕುಮಾಡಿ

ಕಂ॥ ತಾರಾಚಳಶಿಖರದೊಳಂ
ತಾರಾಪತಿಯುದಯಿಸಿರ್ದನೆನೆ ಬೆಳ್ಗೊಡೆಯಂ
ರಾರಾಜಿಸೆ ಸುರಕರಿಚೂ
ಡಾರತ್ನಜಿನಂಗೆ ಪಿಡಿದನೀಶಾನೇಂದ್ರಂ ೩೭

ವಿಮಳಿನ ದುಗ್ಧಚ್ಛಟೆಯಿಂ
ಕ್ರಮದಿಂದಂ ಸವನಸಮಯದೊಳ್ ಪುದಿದಪುದೆಂ
ದಮರ್ದಿರೆ ಪೇಟ್ವಂತೆ ಸನ
ತ್ಕುಮಾರಮಾಹೇಂದ್ರರಿಕ್ಕಿದರ್ ಚಮರಜಮಂ ೩೮

ಇತರೇಂದ್ರರುಮಿತರನಿಜೋ
ಚಿತಪರಿಚಾರಕತೆಯೊಳ್ ಪ್ರವರ್ತಿಸುತಿರೆ ಸಂ
ಗತ ಗೀತ ವಾದ್ಯ ನೃತ್ಯ
ತ್ರಿತಯಂ ಬಗೆಗೊಳಿಸೆ ಭರತಮತಪರಿಣತರಿಂ ೩೯

ಮ.ಸ್ರ॥ ದಿವಿಜೇಭಕ್ಕಾಯ್ತು ಮೂವತ್ತೆರಡುಮೊಗಮವೊಂದೊಂದಱೊಳ್ ದಂತಮೆಂಟೆಂ
ಟವಱೊಳ್ ನೀರೇಜಷಂಡಂ ಸೊಗಯಿಸುಗುಮವೊಂದೊಂದಱೊಳ್ ಸಂ

ಭವಿಕುಂ ಮೂವತ್ತೆರಡುವವಱಿಸಳವು ಮೂವತ್ತೆರಡ್ ನರ್ತಿಪರ್ ಮ
ತ್ತವಱೊಳ್ ದ್ವಾತ್ರಿಂಶದಿಂದ್ರಾಂಗನೆಯರೆಸಳೊಳೋರೊಂದಱೊಳ್
ಲೀಲೆಯಿಂದಂ ೪೦

ಕಂ॥ ನಿಟ್ಟಯಿಪೊಡೆ ಮೆಲ್ಲಡಿಗಿವು
ಬೆಟ್ಟಿದುವಂಬುರುಹಮೆನುತುಮಿಟಿಕೆಯ್ದವನಿಂ
ಮುಟ್ಟೆವಣಮೆಂಬ ತೆಱದಿಂ
ಮೆಟ್ಟದೆ ಸುರಸತಿಯರಾಡಿದರ್ ಸರಸಿಜದೊಳ್ ೪೧

ಭವಜಳಧಿಗೆ ಕಟ್ಟಿದ ಸೇ
ತುವೆನಿಸೆ ಮಣಿಕುಟ್ಟಿಮಂ ಸುರಾಚಳಮಂ ಮ
ಟ್ಟುವಿನಂ ನೀಳ್ದಿರೆ ಪರಮೋ
ತ್ಸವದಿಂ ನಡೆದುದು ನಭೋಂಗಣದೊಳಮರಗಣಂ ೪೨

ಉ॥ ಅಚ್ಚರಿ ಪುಟ್ಟೆಯಚ್ಚರಸಿಯರ್ಕಳೆ ನರ್ತಿಸೆ ದೇವಕಾಂತೆಯರ್
ನಚ್ಚಿನ ವೀಣೆಯಂ ಮಿಡಿದು ತಮ್ಮ ಕೊರಲ್ಗಿದಜೆಂಚರಂ ಕರಂ
ತುಚ್ಚಮೆನಿಪ್ಪುದಂ ಪ್ರಕಟಿಪಂತಿರೆ ಪಾಡೆ ನಿಳಿಂಪವಾದಕರ್
ಮೆಚ್ಚಿಸುವಂತು ಬಾಜಿಸೆ ಸುರಾಗಮನಾಗಿಸಿತಾ ಸುರಾಗಮಂ ೪೩

ವ॥ ಅಂತು ಸುರಾಗಮಂ ಸುರಾಗಮನೆಯ್ದುತ್ತುಂ ಸುರಾಗಮನೆಯ್ದುವುದುಂ

ಮ.ಸ್ರ॥ ಜಿನಚೈತ್ಯಾವಾಸದುದ್ಯತ್ಕಳಶಮೆ ಕಳಶಂ ದರ್ಪಣಂ ದರ್ಪಣಂ ಕಾಂ
ಚನಚಂಚತ್ತೋರಣಂ ತೋರಣಮೆನೆ ಜಿನನಂ ಸ್ಮೇರಮಂದಾರ ಭಾಸ್ವ
ದ್ಘನವೇಣೀಭಾರಭೃಂಗೀಕುಳಕಳನಿನದಂ ಗೇಯಮೆಂದೆಂಬಿನಂ ಮೇ
ರುನಗಂ ಶ್ರೀಲೋಕಚೂಡಾಮಣಿಯನಿದಿರ್ಗೊಳಲ್ಕಿರ್ಪವೋಲೊಪ್ಪಿತಾಗಳ್ ೪೪

ಕಂ॥ ತರು ಸುರತರು ಪಾಷಾಣಂ
ಸುರುಚಿರ ನವರತ್ನಮಿರ್ಪ ಮೃಗನಿಕರಂ ಭಾ
ಸುರಸುರರೆಂದೊಡೆ ಮಂದರ
ಗಿರೀಂದ್ರದೊಳ್ ದೊರೆಯೆನಿಪ್ಪ ಕುಳಗಿರಿಯೊಳವೇ ೪೫

ಮಂದರಮಂ ಬಲವರ್ಪದ
ನಿಂದಱಿದೆಂ ಚಂದ್ರಸೂರ್ಯ ತಾರಾಳಿ ಜಗ
ದ್ವಂದಿತ ಜಿನಮಜ್ಜನಪೀ
ಠಂ ದಿಟಮನಿಪೊಂದುಮಹಿಮೆಗೆಡೆಯಾದುದಱಿಂ ೪೬

ಮಂದರಮನ್ಯಕುಳಾದ್ರಿಗ
ಳಿಂದುನ್ನತಮಾದುದಾಗಿ ಮಜ್ಜನಪೀಠಂ

ಸಂದ ಗುಣಾಂಭೋನಿಧಿಗೆ ಜಿ
ನೇಂದುಗೆ ಬೆಸಕೆಯ್ವವಂಗೆ ತುಂಗತೆಯರಿದೇ ೪೭

ಒರ್ಮೆಯುಮವನತರಭಿಮತ
ಶರ್ಮಪ್ರದ ಪುಣ್ಯಹರ್ಮ್ಯಮೆನಿಸಿರೆ ಬೊಮ್ಮಂ
ನಿರ್ಮಿಸಿದ ನಾಲ್ಕುನೆಲೆಯ ಚ
ತುರ್ಮುಖ ಜಿನಭವನಮೆನಿಸಿ ಸುರಗಿರಿಯೆಸೆಗುಂ ೪೮

ಸಮುಚಿತನಂದನ ಜಿನಭವ
ನಮನಮನೀಕ್ಷಿಸಿ ಸಮಸ್ತ ಸುರಲೋಕದೊಳಂ
ಕಮನೀಯತರ ವಿಮಾನಂ
ವಿಮಾನಮೆನಿಸಿರ್ಕುಮೆಂದೊಡಿನ್ನೇವೊಗಟ್ವೆಂ ೪೯

ಉ॥ ಶ್ರೀನುತಭದ್ರಶಾಳವನನಂದನ ಸೌಮನಸೋರುಪಾಂಡುಕೋ
ದ್ಯಾನವನಪ್ರಸೂನಫಳಸಂತತಿ ಸಾನುಮಣಿಪ್ರತಾನಮಂ
ತಾ ನಗರಾಜನಂ ದಿವಿಜರಾಜನೆ ಪೂಜಿಸಿದಂತೆ ಚಂದ್ರತಾ
ರಾನಿವಹಂ ನಿವಾಳಿಸುವ ದೀಪಮದಾಗೆಸೆದತ್ತದೆತ್ತಲುಂ ೫೦

ಮ॥ ಜಿನಪೂಜಾಷ್ಟವಿಧಾರ್ಚನಾ ವಿವಿಧ ದಿವ್ಯಾಮೋದದೊಳ್ ಸೌಖ್ಯಭಾ
ಜನದೇವೀಜನಗೀತದೊಳ್ ವನಲತಾಂತಾಮೋದಮಂ ಮತ್ತಭೃಂ
ಗನಿನಾದಂಗಳನೊಯ್ದು ಕೂಡಿ ಸುರರೊಳ್ ಸಂಪ್ರೀತಿಯಂ ನೀಡಿ ಮೆ
ಲ್ಲನೆ ತೀಡಿತ್ತಘಮೇಘಚಾಳನಸುಶೀಳಂ ಶಕ್ರಶೈಳಾನಿಳಂ ೫೧

ವ॥ ಅಂತು ಬಂದ ಮಂದಾನಿಳನ ಸೋಂಕು ಪುಳಕಾಂಕುರಮಂ ಕೊನರಿಸೆ

ಕಂ॥ ನಂದನದೀ ನಾಲ್ಕಱ ನಾ
ಲ್ಕುಂದೆಸೆಗಳ ನಾಲ್ಕುನಾಲ್ಕುಜಿನಮಂದಿರದಿಂ
ವಂದನೆಗೆ ಯೋಗ್ಯಮೆನುತುಂ
ಮಂದರಮಂ ಮೂಮೆ ಬಲಹರಂ ಬಲವಂದಂ ೫೨

ಮುಡಿ ಮುಗಿಲೆನೆ ಕಡೆಗಳ್ಗಳ್
ಕುಡುಮಿಂಚೆನೆ ಭೂಷಣಾಂಶು ಸುರಧನುವೆನೆ ಚೆ
ಲ್ವಿಡಿದ ಘನಾಗಮಲಕ್ಷ್ಮಿವೊ
ಲಡರ್ದರ್ ಸುರನಗನಿತಂಬಮಂ ಸುರಸತಿಯರ್ ೫೩

ಮುಡಿಯಿಂ ತಮಾಳಲತೆ ಕೇ
ಸಡಿಯಿಂದಮಶೋಕಲತೆ ಸುಕೋಮಳತನುವಿಂ
ನಡೆಗೊಂಡ ಕಲ್ಪಲತೆಯೆನೆ
ನಡೆದರ್ ವನವೀಥಿಯಲ್ಲಿ ಸುರಕಾಮಿನಿಯರ್ ೫೪

ಲತೆಯೊಳ್ ತನುಲತೆ ಶಾಖೆಯೊ
ಳತಿಶಯ ಭುಜಶಾಖೆ ಫಳದೊಳಧರಂ ಪುಷ್ಪ
ಪ್ರತತಿಯೊಳಮರಿಯರಧರ
ಸ್ಮಿತಮೊಂದಿರೆ ಪಿಕಶುಕಾಳಿಯಜ್ಞೆಯವೆ ಬನದೊಳ್ ೫೫

ಅಮರದ್ರುಮಸಂತಾನಕ
ನಮೇರು ಮಂದಾರ ಪಾರಿಜಾತದ ಮುಗುಳಿಂ
ದಮೆ ಸಮೆದಕ್ಕಟ ಕಟಿಸೂ
ತ್ರ ಮಕುಟ ಕೇಯೂರ ಹಾರದಮರಿಯರೆಸೆದರ್ ೫೬

ಅಮರ್ದಿರೆ ಪೊಸಮಲ್ಲಿಗೆ ಮುಗು
ಳ ಮಕುಟ ಕೇಯೂರ ಮುದ್ರಿಕಾಕಂಕಣ ಹಾ
ರಮನೊಸೆದು ಸಮೆದು ತಳೆದೇಂ
ಸುಮನಃಪ್ರಿಯರಾದರಿಂತು ಸುರಕಾಮಿನಿಯರ್ ೫೭

ಮುಗುಳುಂ ಕುಸುಮರಜಮುಮಮ
ರಗಜದ ಮಸ್ತಕದೊಳಮರವಲ್ಲರಿಯಿಂದ
ಲ್ಲುಗೆ ವನವಧುವಕ್ಷತಮಂ
ಮಿಗೆ ಪಿಷ್ಟಾತಕಮನಮರೆ ತಳಿದವೊಲೆಸೆಗುಂ ೫೮

ಭರದಿಂ ಜ್ಯೋತಿಷ್ಕರ್ ಬಲ
ವರೆ ಸೊಗಯಿಪ್ಪುದೊಂದೆ ಮೆಯ್ಯೊಳೆಲ್ಲಾ ಮೆಯ್ಯುಂ
ಸುರಗಿರಿ ಸೊಗಯಿಸಿದುದು ಬಲ
ವರೆ ಭಾವನ ಭೌಮ ಕಲ್ಪಜಾಮರರೊಲವಿಂ ೫೯

ವ॥ ಅಂತು ಚತುರ್ನಿಕಾಯಾಮರರಮರಗಿರಿಯಂ ಬಲವರೆ

ಮ॥ ಶೋಭಾಧಾಮಾಮರೇಂದ್ರಸ್ತುತಜಿನನಿರೆ ಕುಂಭಾಗ್ರದೊಳ್ ಭದ್ರಲಕ್ಷ್ಮೀ
ಶ್ರೀಭದ್ರಾಶಾಳಮಂ ನಂದನಮನಮರದೃಙ್ನಂದನಂ ರುಂದ್ರಕೈಳಾ
ಸಾಭ ಶ್ರೀಮಂದಿರಂ ಸೌಮನಸಮನೆನಸುಂ ಪಾಂಡುಕೋದ್ಯಾನಮಂ ದೇ
ವೇಭಂ ಶ್ರೀಪಾಂಡುರಂ ಮುನ್ನಡರ್ದಮರಕುಭೃತ್ಕಂದರಕ್ಕೆಯ್ದಿತಾಗಳ್ ೬೦

ವ॥ ಅಂತು ಬಂದು ಪಾಂಡುಕವನದ ಪೂರ್ವೋತ್ತರ ದಿಶಾಭಾಗದೊಳ್
ಪರಭಾಗಂಬಡೆದು

ಕಂ॥ ಶತಯೋಜನವಿಷ್ಕಂಭಂ
ವಿತಾನಪರಿಶೋಭಿ ಪಂಚಶತಯೋಜನವಿ
ಸ್ತೃತಮಷ್ಟಯೋಜನೋಚ್ಛ್ರಯ
ಮತುಳವಿಶಿಷ್ಟಾಷ್ಟಮಂಗಳೋನ್ನತನಿಳಯಂ ೬೧

ಕಳಧೌತದ ಕಣೆ ಬೆಳ್ದಿಂ
ಗಳ ಬೆಳಗೆಯ್ಯೆನಿಸಿ ಬೆಳ್ಪನೊಳಕೊಂಡು ಮನಂ
ಗೊಳಿಸಿರ್ದುದರ್ಧಚಂದ್ರನ
ವಿಳಾಸಮಂ ತಳೆದು ಪಾಂಡುಕಂ ಶಶಿವಿಶದಂ ೬೨

ರುಚಿರಮಣಿರುಚಿಗಳಿಂದ
ರ್ಧಚಂದ್ರಮಂಡಳಕಮಾಯ್ತು ಚಿರಪರಿವೇಷಂ
ಪ್ರಚುರತರಮೆಂಬಿನಂ ಕ
ಣ್ಗೆ ಚಿತ್ರಮಂ ಪಡೆದು ಪಾಂಡುಕಂ ಸೊಗಯಿಸುಗುಂ ೬೩

ತೊಳಗುತ್ತಿರ್ದುದು ಗಂಗಾ
ಜಳ ಹೃದಯದ ನಡುವೆ ವಿಕಚಕನಕಾಂಭೋಜಂ
ತೊಳಗುವ ತೆಱದಿಂ ಪಾಂಡುಕ
ಶಿಳಾತಳದ ಮಧ್ಯದಲ್ಲಿ ಮೃಗಪತಿಪೀಠಂ ೬೪

ಅದಱಿಂದಂ ನೇರ್ಗಿಱಿಯೆನಿ
ಸಿದುವೆರಡುಂ ದೆಸೆಯೊಳಭವಸವನೋತ್ಸವಮಂ
ತ್ರಿದಶಾಧಿಪರಿರ್ದೆಸಗುವ
ಸದಮಳಮಣಿವಿಷ್ಟರಂಗಳೆರಡೆಸೆದಿರ್ಕುಂ ೬೫

ದಿಟ್ಟಿಗೆ ದೇವಾಂಗದ ಮೇ
ಲ್ಕಟ್ಟುಂ ಕಂಭೆಯದ ಕಂಭಗಟ್ಟುಂ ಚೆಲ್ವಂ
ನೆಟ್ಟನೆ ಕುಡೆ ಮಂಡಪಮಳ
ವಟ್ಟುದು ಲಕ್ಷ್ಮಿಯ ವಿವಾಹಗೇಹದ ತೆಱದಿಂ ೬೬

ವ॥ ಅಂತು ಮನಂಗೊಂಡೆಸೆವ ಪಾಂಡುಕಶಿಲಾತಳದ ಮೇಲೆ ಲೀಲಾವಾಸಮಾಗೆ ವಾಸವಂ ಮಂಡಪಮಂ ವಿರಚಿಸಿ ತನ್ಮಧ್ಯನಿವಿಷ್ಟವಿಶಿಷ್ಟಸಿಂಹವಿಷ್ಟರದೊಳ್ ಜಿನಾರ್ಭಕನಂ ಪೂರ್ವಾಭಿಮುಖಮಾಗಿರಿಸಿ

ಕಂ॥ ಶ್ರೀವರ್ಣಂ ಪದನಖತಾ
ರಾಪತಿರುಚಿಯಿಂದೆ ತೀವೆ ಹರಿ ಮಂತ್ರಮುಖಂ
ದೇವಾಧಿಪನಂ ಸ್ಥಾಪಿಸಿ
ಸೇವಾರತನನುಪಮಾರ್ಚನೆಯಿನರ್ಚಿಸಿದಂ ೬೭

ಧರಣೀರಮಣಿಯ ಮಕುಟದ
ಪರಿಶೋಭೆಯನಾಳ್ದ ಕನಕಗಿರಿಶಿಖರದೊಳೊ
ಯ್ದಿರಿಸಲೊಡಂ ಕೇವಣಿಸಿದ
ಹರಿನೀಳಾನರ್ಘ್ಯರತ್ನಮೆನಿಸಿದನನಘಂ ೬೮

ಮ॥ ಸುರತೂರ್ಯಂ ಮೊೞಗಾಗೆ ಮಂದರದರೀದೇಶಪ್ರದೇಶಸ್ಥಿತಂ
ಪರಮೇಶಂ ಹರಿನೀಳರತ್ನರುಚಿಮತ್ಕಾಯಂ ಘನಶ್ರೀಯಿನೊ
ಪ್ಪಿರೆ ತಾಳ್ದಿರ್ದು ಸಹಸ್ರಲೋಚನಮಯೂರೋತ್ಸಾಹಸಂಪಾದಕಂ
ಸುರಕಾಂತಾಸುಖಸಸ್ಯಮಂ ನೆಗಪಿದಂ ಸಾರಪ್ರಭಾಸಾರದಿಂ ೧೯

ವ॥ ಆಗಳ್ ಧರ್ಮನಾಯಕರಪ್ಪ ಸೌಧರ್ಮೇಂದ್ರನುಮೀಶಾನೇಂದ್ರನುಂ ಪರಿವಾರ ವಾಹನಾಯುಧವಧೂವಿಳಸಿತಾಶಾಪತಿಗಳನವರವರ ದಿಗ್ವಿಭಾಗದೊಳುಚಿತಪ್ರತಿಪತ್ತಿ ಪುರಸ್ಸರಮಿರಿಸಿ ಯುೞಿದ ನಿಖಿಳನಿಳಿಂಪನಾಯಕವಿತಾನಮನುಚಿತಸ್ಥಾನಂಗಳೊಳಿರಿಸಿ ಜಿನಸಿಂಹ ಸಿಂಹಾಸನದಿರ್ಕೆಲದಲ್ಲಿ ದಕ್ಷಿಣೋತ್ತರದಿಗ್ಭಾಗದೊಳ್ ಪರಭಾಗಂಬಡೆದಿರ್ದ ಭದ್ರಾಸನಂಗಳೊಳ್ ಪಾಕಶಾಸನರಿರ್ವರುಮಿರ್ದಸೆಯೊಳಿರ್ದು ಜಿನಸವನೋದ್ಯುಕ್ತಚಿತ್ತರಾಗಿ

ಕಂ॥ ಕಳಕಂಠನಿನದದೊಡನಳಿ
ಗಳ ನಿನದಂ ನೆಗೆವ ತೆಱದೆ ಸುರಕರಹತಮಂ
ಗಳತೂರ್ಯರವದೊಡನೆ ಮಂ
ಗಳಗೀತರವಂಗಳೊಗೆದುವಮರೀಮುಖದಿಂ ೨೦

ಸುರಿವ ಸುಧಾವರ್ಷದ ಜಳ
ಧರಮೊಗೆವಂತೊಗೆದು ಗಗನತಳಮಂ ಕಾಳಾ
ಗುರುಧೂಪಧೂಮಮೇನಾ
ವರಿಸಿತೊ ನವಗಂಧಮಗ್ನಮಧುಕರನಿಕರಂ ೨೧

ಅಮಳಕಳಮಾಕ್ಷತಂಗಳ
ನಮೇರುವಿನ ಚಾರುಚಂದನಾಂಬುವ ಪೊಳೆಪಿಂ
ದಮೆ ನಿಜಮತಿವೋಲ್ ಸನ್ಮಾ
ರ್ಗಮನೆಯ್ದಿದುದಿಂದ್ರನೆತ್ತಿದರ್ಘ್ಯೋದ್ಧರಣಂ ೨೨

ವ॥ ಅಲ್ಲಿಂ ಬೞಿಯಂ ಚೂತಪಲ್ಲವೋಲ್ಲಸಿತ ಚಂದನಚರ್ಚಾಚರ್ಚಿತ ವಿಕಚವಿಚಕಿಳಮಾಳತೀ ಮಾಲಾಲಂಕೃತ ಮಂಗಳಮಣಿದರ್ಪಣಪರಿಶೋಭಿತ ಸುರಸರಿದರ್ಣಃಪೂರ್ಣಮನಿಸಿರ್ದ

ಕಂ॥ ಪ್ರಣವೋಚಿತಕಳಶೋದ್ಧಾ
ರಣಮಂತ್ರದಿನಿಂದ್ರರಿರ್ವರುಂ ಕಳಶೋದ್ಧಾ
ರಣಮಂ ಸ್ವಚಿತ್ತವಸತಿಗೆ
ಮಣಿಕಳಶಮನಿಡುವ ತೆಱದೆ ಮಾಡಿದರೊಲಪಿಂ ೨೩

ಮ॥ ಪುರುಹೂತರ್ ಪರಿಚಾರಕಕ್ರಿಯೆಗೆ ಮಿಕ್ಕರ್ ಪೂಣೆ ದೇವೀಪುರ
ಸ್ಸರಮಿಂದ್ರಾಂಗನೆ ಮಾಲೆ ಕನ್ನಡಿ ಸೊಡರ್ ಭೃಂಗಾರಮಾದ್ರಾಕ್ಷತೋ
ತ್ಕರಮಂಬೂರ್ಜಿತಮಂಗಳೋಪಕರಣದ್ರವ್ಯಂಗಳಂ ನೀಡೆ ಭಾ
ಸ್ವರಭಾಗ್ಯಂಗೆ ಜಿನಾರ್ಭಕಂಗೆಸೆದುದಾ ಜನ್ಮಾಭಿಷೇಕೋತ್ಸವಂ ೨೪

ವ॥ ಅಂತು ಸೌಧರ್ಮೇಶಾನೇಶರಿರ್ವರುಂ ಭರ್ಮನಿರ್ಮಿತ ನಿರ್ಮಳಕಳಶಂಗಳ ನೆತ್ತಿಕೊಂಡು

ಶಾ॥ ನಾನಾತೀರ್ಥಜಳಕ್ಕೆ ಪಾವನತೆಯಂ ಮಾಳ್ಪಂತೆ ತೀರ್ಥೇಶ್ವರಂ
ಗಾ ನೈರ್ಮಲ್ಯಜಲಂಗಳಿಂ ಸವನಮಂ ಮುಂ ಮಾಡಿ ಪುಂಡ್ರೇಕ್ಷುದ
ಣ್ಡಾನೂನಾಮ್ರರಸಂಗಳಿಂ ನಿರುಪಮಶ್ರೀನಾಳಿಕೇರಾಂಬುವಿಂ
ದಾನಂದಂ ಮಿಗೆ ಮಾಡಿದರ್ ಸವನಮಂ ದೇವಂಗೆ ದೇವಾಧಿಪರ್ ೭೫

ಮ॥ ಎನಸುಂ ಕಬ್ಬಿನ ಬಿಲ್ ಮನೋಭವನ ಬಾಹಾಖರ್ವಗರ್ವಂ ಮನೋ
ಜನ ಸಾಮ್ರಾಜ್ಯಫಳಂ ಘನಾಮ್ರಫಳಮೆಂದೇಂ ಸಾರಸರ್ವಸ್ವಮಂ
ಮುನಿಸಿಂದಿಟ್ಟುಳಿಗೊಂಡು ತಂದ ತೆಱದಿಂ ಕೆಯ್ಕೊಂಡ ಪುಂಡ್ರೇಕ್ಷುನೂ
ತನಚೂತೋರುರಸಂಗಳಿಂ ಸವನಮಂ ದೇವಂಗವರ್ ಮಾಡಿದರ್ ೭೬

ಕಂ॥ ಗವ್ಯಂ ಕವಿಕುಳತಿಳಕನ
ಕಾವ್ಯದವೋಲ್ ನವ್ಯಮನುಪಮಂ ಬುಧಜನಸಂ
ಸೇವ್ಯಮೆನಿಸಿರ್ದ ಘೃತದಿಂ
ಭವ್ಯೇಂದ್ರರ ವಿಭುಗೆ ಮಾಡಿದರ್ ಮಜ್ಜನಮಂ ೭೭

ವ॥ ಅನಂತರಂ

ಕಂ॥ ಅಮೃತಶ್ರೀಪ್ರಿಯನಪ್ಪಂ
ಗಮೃತಾಂಬುಧಿಸಾರವಾರಿಯಿಂದಭಿಷವಮಂ
ಸಮೆವುದು ಕರಮುಚಿತಮೆನು
ತ್ತಮೃತಾಂಬುಧಿಗೋಳಿಗಟ್ಟಿ ನಿಂದು ನಿಳಿಂಪರ್ ೭೮

ತಳಮಷ್ಟಯೋಜನಂ ಮುಖ
ದಳವಿ ಸಮಂತೇಕಯೋಜನಕ್ರಮಮೆನಿಪು
ಜ್ವಳಶಾತಕುಂಭಕುಂಭಂ
ಗಳನುತ್ಸವದಿಂದೆ ತಳೆದು ತಮತಮಗಮರರ್ ೭೯

ಬಿಳಿಯಮುಗಿಲೆನಿಸೆ ಶಶಿಮಣಿ
ಕಳಶಂ ಸುರಗಿರಿಯಿನಮೃತಜಳಧಿವರಂ ನಿ
ರ್ಮಳರೋಳಿಗಟ್ಟಿ ನಿಂದೇಂ
ತೊಳಪ ಶರತ್ಕಾಲಲೀಲೆಯಂ ತಾಳ್ದಿದರೋ ೮೦

ಚಂ॥ ಮಣಿಮುಕುಟಂಗಳುಂ ಮಣಿವಿನಿರ್ಮಿತನೂತ್ನಘಟಂಗಳುಂ ನಭೋಂ
ಗಣಮನೆ ತೀವಿತಂದಭಿಷವೋತ್ಸವದೊಳ್ ಜಿನದೇಹದೀಪ್ತಿಯಿೀ
ಕ್ಷಣಸುಖಕಾರಿ ಬಾಳರವಿಕೋಟಿಯನೇಳಿಪುದೆಂದದಂ ಮರು
ದ್ಗಣಕೆ ನಿವೇದಿಪಂತು ದಿವಿಜಪ್ರವರಂ ಪಡೆದಂತವೆತ್ತಲುಂ ೮೧

ವ॥ ಅಂತು ಸೌಧರ್ಮಸುರಾಧಿಪನೀಶಾನಶಕ್ರನೆರಡುಂ ಪಕ್ಕದೊಳ್ ಅಮರ್ಕೆವೆತ್ತ ಮರರಾಳಿಗಟ್ಟಿ ನಿಂದು

ಚಂ॥ ಪರಿದು ಪಯಃಪಯೋಧಿಗಮರಾವಳಿ ರತ್ನಘಟಂಗಳಿಂದಮಾ
ತುರದೊಳೆ ತೀವಿ ತಂದು ಕುಡೆ ತಾಳ್ದಿ ಪೊದಟ್ದಿ ಭುಜವ್ರಜಂಗಳಿಂ
ಸುರಗಿರಿಕಾಂತಕಲ್ಪತರುವಿಂಗೆಱೆವಂತು ಸುಧಾಂಬುವಂ ಸುರೇ
ಶ್ವರನನುರಾಗದಿಂ ಸುರಿಯೆ ರಂಜಿಸಿದತ್ತು ಜಿನೇಂದ್ರಮಜ್ಜನಂ ೮೨

ಕಂ॥ ನೀಳನಗಮೆನಿಸಿ ಕಾಂಚನ
ಶೈಳಂ ಮೊದಲಲ್ಲಿ ಜಿನತನುಪ್ರಭೆಯಿಂದಂ
ಕೈಳಾಸಮೆನಿಸಿತೊದವಿದ
ಪಾಲಿಂ ಜಿನಜನನಸವನಮೇನಚ್ಚರಿಯೋ ೮೩

ತಮತಮಗಾಗಳ್ ತಂದೀ
ವಮೃತದಿನಮರೇಂದ್ರರೆಸಗೆ ಸವನಮನೆಸೆದ
ತ್ತಮರಾಪಗೆ ಪೊಱಪೊಣ್ಮುವ
ಓಮವದ್ಗಿರಿಯೆನಿಸಿ ಹೇಮಗಿರಿ ತತ್ಕ್ಷಣದೊಳ್ ೮೪

ಚೆಂಬೊನ್ನಘಟಂಗಳಿನಮೃ
ತಾಂಬುಧಿಯಂಬುಗಳನಾಂತು ಪವನಜವದಿನಾ
ದಂ ಬಿಡೆ ತಂದು ಮರುತ್ತುಗ
ಳೆಂಬಭಿದಾನಮನೆ ನನ್ನಿಮಾಡಿದರಮರರ್ ೮೫

ಘನಪಾಂಡುಕಮದೆ ಪಾಂಡುರ
ಮೆನಿಸಿದುದಿಲ್ಲುಟಿದ ಸೌಮನಸನಂದನಭೂ
ವಿನುತಶ್ರೀಭದ್ರಾಶಾ
ಸುನಂದನಮುಮೆನಿಸಿತಭವ ಸವನಾಮೃತದಿಂ ೮೬

ಕರಮೆಸೆದುದು ಜಿನಸೇವಾ
ಪರಿಣತ ಪುರುಹೂತಪುಣ್ಯವಾರಾಶಿಯೆ ಬಿ
ತ್ತರಿಪನ್ನಮೊಗೆವ ಸವನಾಂ
ಬುರಾಶಿಯೊಳ್ ಯಾನಪಾತ್ರದಂತೆ ವಿಮಾನಂ ೮೭

ಚಂ॥ ಅನಿಮಿಷಕೋಟಿಯೀವಮೃತಪೂರ್ಣಸುವರ್ಣಘಟಪ್ರಕೋಟಿಯಂ
ಘನಭುಜಕೋಟಿಯಿಂ ತಳೆದು ಮಜ್ಜನಮಂ ಶಿಶುಗೀಯೆ ಶಕ್ರನಾ
ವನೊ ಶಿಶುಗಿಂತು ಮಾಡಿದವನೆಂಬರ ಮೌಢ್ಯಮನೋಡಿಸಿತ್ತು ಬಾ
ಳನ ಸಱುಸುಯ್ಯ ಗಾಳಿಯೊಳೆ ಪಾಱುವ ದೇವವಿಮಾನಸಂಕುಳಂ ೮೮

ಕಂ॥ ಅಮೃತಾಂಬುಪೂರ್ಣಮಣಿಕಳ
ಶಮನನಿಮಿಷರೆನಿತನೀವರನಿತೆ ಭುಜಾದಂ

ಡಮನೆ ಪಡೆದಾಂತವಂ ಸ್ನಾ
ನಮನೆಸಗಿದರೇಕಚಿತ್ತದಿಂ ವಿಭುಗಿಂದ್ರರ್ ೮೯

ಚಂ॥ ತನು ಸವನಾಮೃತಾಂಭದೊಳೆ ತೇಂಕಿರೆ ನಿರ್ಜರನಾಮಮಂತದಂ
ಮನದೊಳೆ ಭಾವಿಸುತ್ತಿರೆ ಸುರವ್ರಜದೊಳ್ ಸುಮನೋಭಿಧಾನಮಂ
ತನುಗತಮಾದುದೆಂದೆನಿಸಿದಾ ಜಿನಮಜ್ಜನವೀಕ್ಷಣೀಯಮಾ
ಜಿನತನು ಮಾಡಿದತ್ತನಿಮಿಷತ್ವದೊಳಟ್ಟಿಯನೀಕ್ಷಿಪೇಂದ್ರರೊಳ್ ೯೦

ಉ॥ ಕ್ಷೀರಪಯೋಧಿ ರತ್ನಘಟಕೋಟಿಗಳಂ ಸುರಕೋಟಿ ತೀವೆ ನಿ
ರ್ನೀರಮದಾಗೆ ತಂದೊಡಮನಿಂದ್ಯ ಜಿನಾಭಿಷವೈಕಯೋಗ್ಯವಿ
ಸ್ತಾರಮನಾಂತೆನೆಂಬತುಳರಾಗರಸಾಮೃತದಿಂದೆ ಮತ್ತೆ ತಾಂ
ಪೂರಿಪುದಲ್ಲದಂದು ಜಲಮೆಲ್ಲಿಯದೆಂದೆನಿಸಿತ್ತು ಮಜ್ಜನಂ ೯೧

ಕಂ॥ ಅಮೃತದಿನರ್ಹನ್ನಾಗನ
ನಮರೇಂದ್ರಂ ಮುದದೆ ಮಜ್ಜನಂಬುಗಿಸಿ ದಿಶಾ
ಸಮುದಯನಾಗಂಗಳನೆ
ಯ್ದೆ ಮಜ್ಜನಂಬುಗಿಸಿದಂ ಯಶಸ್ಸುಧೆಯಿಂದಂ ೯೨

ವ॥ ಅಂತು ನಿರಂತರಪ್ರವರ್ಧಮಾನಾನೂನಸುಧಾಪ್ರಚುರಪ್ರವಾಹಂಗಳಿಂ ಜಿನಗೇಹಗಳಂ ಸುಧಾಧವಳಿತಂಗಳಂ ಮಾಡೆಯುಂ ಮೇರುವಂ ಪುಷ್ಪಿತನಮೇರುವೆನಿಸಿಯುಂ ಧಾತ್ರಿಯಂ ಪುಣ್ಯಸಸ್ಯಕ್ಷೇತ್ರಮಪ್ಪಂತಾವರಿಸೆಯುಂ ಮೇಗಣ್ಗೆ ನೆಗೆದ ಸುಧಾಬಿಂದು ಸಂದೋಹಂ ಬೇಱೊಂದುಲೋಕನೀಯ ಜ್ಯೋತಿರ್ಲೋಕಮನಾಕರ್ಷಿಸೆಯುಂ ದೆಸೆದೆಸೆಗೆ ಸಿಡಿಲ್ದ ಸುಧಾಶೀಕರಂಗಳ್ ದಿಶಾಕರಿಗಳ ಕೊರಲ್ಗೆ ನಕ್ಷತ್ರಮಾಲೆಯನೋಲಗಿಸೆಯುಂ ಕ್ಷೀರವಾರಿಧಿವಾರಿಯಿಂದನಂತವೀರ್ಯಂಗೆ ಲೋಕಾಶ್ಚರ್ಯಮಪ್ಪಂತು ವಿಕ್ರಿಯಾವಿಚಕ್ಷಣರಪ್ಪ ಸಹಸ್ರೇಕ್ಷಣರ್ ಮಜ್ಜನಮಂ ನಿರ್ಮಿರ್ಚೆ ಜಗನ್ಮಂಗಳಮುಖ್ಯಂಗೆ ಘನೀಭೂತ ಚಂದ್ರಾತಪದಂತೆಯುಂ ಪಿಂಡೀಭೂತಶಶಿಮಣಿ ಪ್ರಭೂತಸಲಿಲಂಗಳಂತೆಯುಂ ಪಾಂಡುರತೆಯನೊಳಕೊಂಡು

ಚಂ॥ ಬೆಳಲ ಪೊದಟ್ಟಿ ಪಣ್ಣ ತನಿಗಂಪುಮನಿಂಪುಮನಾಳ್ದು ಬೆಳ್ಮುಗಿ
ಲ್ಗಳನಿಱುಕೆಯ್ದು ಸಾಂದ್ರ ಘನಚಂದ್ರಿಕೆಯಂ ನೆಱೆ ಚುನ್ನವಾಡಿ ಪ
ಜ್ಜಳಿಸುವ ಪುಣ್ಯಪುಂಜದವೊಲೊಪ್ಪುವ ಮಾಹಿಷಮಪ್ಪ ಸರ್ವಮಂ
ಗಳವಿಧಿಗಾದ್ಯಮಾದ ದಧಿಯಿಂ ಜಿನಮಜ್ಜನಮಂ ನಿಮಿರ್ಚಿದರ್ ೯೩

ವ॥ ಅಂತುಮಲ್ಲದೆ

ಮ॥ ಮಿಗೆ ಪಂಚೇಷುಗೆ ಬಾಣಮಾಗೆ ತನುವಂ ಮುಂ ಪೊರ್ದಲಂಜಿರ್ದ ಮ
ಲ್ಲಿಗೆ ಸೇವಂತಿಗೆ ಜಾದಿ ಕುಂದಮಿವು ದಧ್ಯಾಕಾರದಿಂ ಕಂಪು ಕೆ
ಯ್ಮಿಗುವನ್ನಂ ಪುದಿವಂತೆ ತೋರ್ಪ ದಧಿಯಿಂದಂ ಸ್ನಾನಮಂ ಜ್ಞಾನವಾ
ರ್ಧಿಗೆ ನಿರ್ಧೂತತಮಸ್ತಮಂಗೆ ಜಿನಪಂಗುತ್ಸಾಹದಿಂ ಮಾಡಿದರ್ ೯೪

ವ॥ ಅಂತು ಶಶಿಕಾಂತಕಾಂತವಧಿಯಿಂ ಗುಣಮಣಿಭಾಸ್ವದುದಧಿಗೆ ವಿಬುಧ ವಿಭುಗಳಭಿಷವಣಮನೊಡರ್ಚಿ ಸಮನಂತರಂ ಕಳಧೌತಕಳಶಂಗಳನೆತ್ತಿಕೊಂಡು

ಮ॥ ಕುಮುದಾಂಭೋಜ ಲವಂಗಜಾತಿಫಳವಲ್ಲೀಪತ್ರ ತಕ್ಕೋಲ ಕುಂ
ಕುಮ ಕಾಳಾಗರುಕುಂದುರುಷ್ಕ ಮಳಯಪ್ರೋದ್ಭೂತಕರ್ಪೂರ ಶ
ಕ್ರಮಪೋದ್ಯಾನ ಸುಗಂಧವಸ್ತುವಿಳಸತ್ತೀರ್ಥಾಂಬುವಿಂದಿಂದ್ರರು
ತ್ತಮತೀರ್ಥಪ್ರಭುಗೆತ್ತಿಯಿಂದೆಸಗಿದರ್ ಗಂಧೋದಕಸ್ನಾನಮಂ ೯೫

ಪರಿಲಿಪ್ತಂ ಹರಿಚಂದನಂ ಹರಿಯ ಚಿತ್ತಾಹ್ಲಾದಮಂ ಮಾಡಿ ತಾ
ಳ್ದಿರೆ ತನ್ನಾಮಮನೆಯ್ದೆ ಕಾಷ್ಣ್ಯ್ರಲಘುತಾ ಸಂಪತ್ತಿಯಂ ಪೋಲ್ತು ತಾ
ಳ್ದಿರೆ ಕಾಳಾಗುರುವರ್ಹದಂಗರುಚಿಗಾ ತೀರ್ಥೇಶ್ವರಂಗೊಲ್ದು ಬಂ
ಧುರ ಗಂಧಂಗಮರೇಂದ್ರರಂದೆಸಗಿದರ್ ಗಂಧಾಂಬುವಿಂ ಸ್ನಾನಮಂ ೯೬

ಕಂ॥ ಪರಮಾನುರಾಗರಸದವೊ
ಲಿರೆ ಕುಂಕುಮಕಳಿತ ಗಂಧಜಳಮದಱೊಳ್ ನಿ
ರ್ಭರಭಕ್ತಿಯೊಳೋಲಾಡು
ತ್ತಿರೆ ಸಮನಿಸಿತಮರಸಮಿತಿಗವಭೃಥಸವನಂ ೯೭

ಸುರಶೈಳಶಿಳಾಸ್ಫಾಳನ
ಭರದಿಂ ದೆಸೆದೆಸೆಗೆ ಪಾಯ್ವ ಘುಸೃಣಾರುಣ ಬಂ
ಧುರಗಂಧೋದಕದಿಂ ದಿ
ಕ್ಪರಿಪಾಳಕತತಿಗಮಾದುದವಭೃತಸವನಂ ೯೮

ವ॥ ಅಂತು ಸುರಭಿಗಂಧಬಂಧುರಗಂಧಜಳಂಗಳಿಂದಭಿಷವಣಮಂ ನುತಿಪ್ರವಣರ್ ಮಾಡಿ

ಕಂ॥ ಕುಳಿಶಪತಿ ಸುರಭಿತರ ಜಳ
ಮಳಯಜಕಳಮಾಕ್ಷತಪ್ರಸೂನಸುಧಾನ್ನೋ
ಜ್ವಳದೀಪಧೂಪಫಳಸಂ
ಕುಳದಿಂ ಜಿನಪದಪಯೋಜಮಂ ಪೂಜಿಸಿದಂ ೯೯

ವ॥ ಅಂತು ವಿಶಿಷ್ಟಾಷ್ಟವಿಧಾರ್ಚನೆಗಳಿನರ್ಚಿಸಿ

ಕಂ॥ ಅಮೃತದೊಳಟ್ಟಿವೊಲರೆಬರ್
ಸಮನಿಸೆ ಸುಖಮನ್ಯವಸ್ತುವಿಂ ಜಿನಪತಿ ನಿ
ನ್ನಮಳ ಸವನಾಮೃತದೊಳ
ಟ್ಟಿಮರರ ನಿರತಿಶಯಸುಖಮನದನೇವೊಗಟ್ಟಿಂ ೧೦೦

ಭಾವಿಸೆ ನಿನಗಭಿಷವಮಂ
ದೇವೇಂದ್ರರ್ ಮಾಡಿ ಕೂಡೆ ಮೂಲೋಕಮುಮಂ
ಪಾವನಮೆನಿಸಿದರದಱಿಂ
ಪಾವನತೆ ವಿಚಿತ್ರಮಲ್ತೆ ಜಿನಪತಿ ನಿನ್ನಾ ೧೦೧

ವ॥ ಎಂದಿಂತು ನಿಳಿಂಪನಾಯಕಂ ನಿಳಿಂಪಸಂಪಾದಿತಸವನಾರ್ಚನಸ್ತವನಪರಿಸಮಾಪ್ತಿ ಸಮಯಾನಂತರಂ

ಕಂ॥ ದೇವಾಂಗಾಮೃತಕಣಮಂ
ದೇವಾಂಗದಿನೊತ್ತಿ ಶಚಿ ವಿಭೂಷಿಸಿದಳ್ ತಾ
ರಾವಳಿಯಂ ನೂಂಕಿ ರವಿ
ಶ್ರೀ ವಿಶದಾಂಬರಮನಂಶುವಿಂ ಭೂಷಿಪವೋಲ್ ೧೦೨

ತೊಳಗುವ ಭಾಳದೊಳಿಂದ್ರನ
ಕುಲವಧುವೀ ತ್ರಿಭುವನಾಧಿಪತ್ಯಕ್ಕೀ ಜಗ
ತ್ತಿಳಕಾಂಘ್ರಿನಖಾಂಶುಗೆ ಮುದ
ದೊಳೆ ಪಟ್ಟಂಗಟ್ಟುವಂತೆ ತಿಳಕಮನಿಟ್ಟಳ್ ೧೦೩

ಹಾರಂ ಚೂಡಾಮಣಿ ಕೇ
ಯೂರಂ ಕಂಠಿಕೆ ಸುರತ್ನಮುದ್ರಿಕೆ ಲಲಿತಾ
ಕಾರಕ್ಕೆ ಮುದ್ರೆಯೆನೆ ಶೃಂ
ಗಾರಸಮುದ್ರಂಗೆ ತುಡಿಸಿದಳ್ ಶಚಿ ಮುದದಿಂ ೧೦೪

ವರಸಹಜವಿದ್ಧಕರ್ಣಂ
ನಿರವಿಸೆ ನಿಜಮಪ್ಪ ಬೋಧಮಂ ತುಡಿಸಿದಳಾ
ದರದೊಳೆ ಮಣಿಕುಂಡಳಮಂ
ಸರಸ್ವತೀಕರ್ಣಕುಂಡಳಂಗೊಲವಿಂದಂ ೧೦೫

ಜಿನಘನಜಘನಕ್ಕಿಂದ್ರಾಂ
ಗನೆ ನಯನಮಯೂರ ಹರ್ಷವರ್ಷೋತ್ಕರ್ಷ
ಕ್ಕೆನಸುಂ ಸೊಗಯಿಪ ಸೌದಾ
ಮಿನಿಯೆನೆ ಕಟಿಸೂತ್ರಮಂ ತೊಡರ್ಚಿದಳಾಗಳ್ ೧೦೬

ಹರಿವಧು ನೂಪುರಮಂ ಜಿನ
ಚರಣದೊಳಳವಡಿಸಿ ತಳೆಯೆ ಶಿರದೊಳ್ ಮಣಿಶೇ
ಖರಮೆನಿಸಿತಂತೆ ಪೂಜ್ಯಪ
ದರನಾರಾಧಿಪ ಜನಕ್ಕೆ ಪೂಜ್ಯತೆಯರಿದೇ ೧೦೭

ಮ॥ ಪುರುಹೂತಪ್ರಿಯೆ ಪುಣ್ಯಮೂರ್ತಿಗೊಲವಿಂದಂ ಷೋಡಶಸ್ವರ್ಗದೊಳ್
ದೊರೆಯಿಲ್ಲೀಕ್ಷಿಪೊಡೆಂಬುವಂ ತುಡಿಸೆ ಚೆಲ್ವಂ ನೀಡುತುಂ ಷೋಡಶಾ
ಭರಣಂ ಷೋಡಶಭಾವನಾನಿರತನಾದಂ ತೀರ್ಥನಾಥಂ ಗುಣಾ
ಭರಣಂ ಮುನ್ನಮೆನುತ್ತೆ ಪೇಳ್ವ ತೆಱದಿಂ ಚೆಲ್ವಾದುವತ್ಯುಜ್ವಳಂ ೧೦೮

ವ॥ ಅಂತು ನಿರ್ಭರಭಕ್ತಿಯಿಂ ಸರ್ವಜ್ಞನಂ ಸರ್ವಾಭರಣಭೂಷಿತನಂ ಮಾಡಿ ಇಂದ್ರಾಣಿಯೈರಾವಣಾರೂಢನಪ್ಪ ನಿಜಪ್ರಿಯೋತ್ಸಂಗಸಂಗತನಂ ಮಾಡಿದಾಗಳ್

ಕಂ॥ ಸುರಭಿ ಶುಚಿ ಸುಭಗತೇಜಃ
ಪರಮಾಣುಗಳೆಲ್ಲಮಲ್ಲಿ ನೆಲಸಿದುವೆನೆಯ
ಚ್ಚರಿವಟ್ಟು ಸಹಸ್ರಾಕ್ಷಂ
ನಿರೀಕ್ಷಿಸುವುದುಚಿತಮೆನೆ ಜಿನನನೀಕ್ಷಿಸಿದಂ ೧೦೯

ವ॥ ಅಂತಪ್ರತಿಮ ರೂಪಸೌಂದರ್ಯಮಂ ಸಂಕ್ರಂದನಂ ನೋಡಿ ಪರಮಾನಂದ ಪುಳಕಮಂ ತಳೆಯುತ್ತುಂ

ಕಂ॥ ಸಾರ್ವರ್ತುಕವನಶೋಭಿತ
ಗೀರ್ವಾಣಾಚಳದೊಳಿಂದ್ರನಮರಸಮೇತಂ
ನಿರ್ವರ್ತಿತ ಜಿನಸವನಂ
ನೇರ್ವಡಿಪಡೆ ವಾರಣಾಸಿಗಭಿಮುಖನಾದಂ ೧೧೦

ವ॥ ಅಂತನೇಕ ನಾಕಲೋಕಾನೀಕಘನಧ್ವನಿಗಳ್ ನೆಗಟ್ಟೆ ನೆಗಟ್ಟೆವೆತ್ತ ವಾರಣಾಸಿ ಗಭಿಮುಖನಾದಾಗಳ್

ಕಂ॥ ಸುರಪತಿಕೃತಾಭಿಷವದು
ಗ್ಧರವಂ ಸುರಪಟಹರವಮಮರರಮಣೀಗೇ
ಯರವಂ ಸುರಜನರವಮುಟಿ
ದಿರೆ ಸುರಗಿರಿ ಜಾನಿಪಂತಿರಿರ್ದುದು ಜಿನನಂ ೧೧೧

ವ॥ ಅಂತು ಚತುರ್ನಿಕಾಯ ದೇವನಿಕಾಯಂ ಕಾಯಕಾಂತಿಸಂತತಿಯಿಂದಾಕಾಶ ಪ್ರದೇಶಮಂ ನವರತ್ನಮರೀಚಿಮೇಚಕಿತವಾರಾಶಿಯನನುಕರಿಸುವಂತಳಂಕರಿಸುತ್ತುಂ ವಾರಣಾಸಿಗವತರಿಸಿ

ಮ॥ ಅಸಿತಾಭ್ರಂ ಗಜರಾಜಿ ಶಾರದಪಯೋದಂ ಚಂದ್ರಕಾಂತೇಂದ್ರಯಾ
ನಸಮೂಹಂ ಪವನಾಳಿ ಚಾಮರಸಮೀರೌಘಂ ಹಿಮಂ ಚಂದನಂ
ಕುಸುಮಶ್ರೀಲತೆ ಬಾಳಿಕಾವಳಿ ಬಿಸಿಲ್ ಭೂಷಾಂಶುವಾಗೊಪ್ಪೆ ಬ
ರ್ಪ ಸುರವ್ರಾತಮನೀಕ್ಷಿಸಿತ್ತು ಋತುಗೆತ್ತಾ ಪೌರನಾರೀಜನಂ ೧೧೨

ವ॥ ಅಂತವತರಿಸಿ ಸುರಸಮಿತಿಪರಿವಾರಂಬೆರಸು ಪುರುಹೂತಂ ಪುರಮಂ ಪುಗುವಾಗಳ್

ಚಂ॥ ಕೆದಱಿದ ರಾಜವೀಥಿಗಳ ಪೂವಲಿ ರತ್ನದ ತೋರಣಾಳಿ ಚೀ
ನದ ಗುಡಿ ಮಂದಿರಾಂಗಣದ ರತ್ನರಜಂಗಳ ರಂಗವಲ್ಲಿ ಸೂ
ಸಿದ ಪಟವಾಸಚೂರ್ಣಮನುರಾಗರಸಾವಿಳಕಾಮಿನೀಜನಂ
ಪುದಿದಿರೆ ವಾರಣಾಸಿ ತಳೆದತ್ತು ಸುರೇಶಪುರೀವಿಳಾಸಮಂ ೧೧೩

ವ॥ ಅಂತು ವಿರಾಜಿಸುವ ಪುರವಿಳಾಸಮನವಲೋಕಿಸುತ್ತುಂ ಬಂದು ವಂದನ ಮಾಲಾಳಂಕೃತ ರಾಜಮಂದಿರಮಂ ಪೊಕ್ಕು

ಮ॥ ಜನತಾನೇತ್ರವಿಚಿತ್ರಹರ್ಷಜನಕಶ್ರೀಗೇಹದಿಂ ಮುಂದೆ ಕಾಂ
ಚನಚಂಚನ್ಮಣಿಸಂಚಯಾಂಚಿತ ಮಹೇಂದ್ರಸ್ತೋತ್ರಪಾತ್ರಂ ಮರು
ಜ್ಜನಸಂಪಾದಿತಮಪ್ಪ ಮಂಡಪದ ಭಾಸ್ವನ್ಮಧ್ಯಪೀಠಾಗ್ರದೊಳ್
ಜಿನಸಂ ಸ್ಥಾಪಿಸಿ ಸಂತಸಕ್ಕೆ ನೆಲೆಯಾದಂ ನಾಕಲೋಕಾಧಿಪಂ ೧೧೪

ವ॥ ಆಗಳಾತ್ಮಜಾತ ಮುಖಾಂಬುಜಾತಜಾತಲೀಲಾಮಂದಮಕರಂದಸೇವಾಲೋಲಲೋಚನ ಚಂಚರೀಕನಪ್ಪಶ್ವಸೇನವಿಶ್ವಂಭರಾವಲ್ಲಭನುಂ ಶಚೀಮುಖದಿವಸ ಮುಖಾವಳೋಕನ ಮಾತ್ರೋನ್ನಿದ್ರಿತನೇತ್ರ ಶತಪತ್ರಜಗತ್ತ್ರಯನಾಥಾಂಬಿಕೆಯುಂ ನಯನೀಯ ಬಾಳಾರ್ಕನ ಮುಖಕಮಳಮಂ ನೀಡುಮಟ್ಟಿರ್ಕುರ್ಱು ನೋಡಿ

ಕಂ॥ ಆನಂದಾಶ್ರುಗಳಿಂ ಪಿತೃ
ಪೀನಸ್ತನೆಮಾತೃಕುಚಘಟಾಮೃತಜಳಧಾ
ರಾನಿವಹದಿನಭಿಷೇಕಮ
ನೇನಿತ್ತರೊ ಮಗುಳ್ ಜಿನಶಿಶುಗೆ ಮುದದೊದವಿಂ ೧೧೫

ವ॥ ಆ ಸಮಯದೊಳ್

ಮ॥ ಗುರುವಿಂತೀ ತ್ರಿಜಗಕ್ಕೆನಿಪ್ಪ ಸುಚರಿತ್ರಂ ಪುತ್ರನೆಂದಂದು ಧ
ನ್ಯರುಮಿಂ ಮಾನ್ಯರುಮಲ್ತೆ ನೀಮೆಯೆನುತುಂ ಶ್ರೀಬ್ರಹ್ಮದತ್ತಾಮನೋ
ಹರಿಯಂ ವಿಶ್ರುತನಶ್ವಸೇನವಿಭುವಂ ದಿವ್ಯಾನುಳೇಪಾಮಳಾಂ
ಬರಭೂಷಾದಿಗಳಿಂದಮರ್ಚಿಸಿದನಿಂದ್ರಂ ಲೋಕಸಂಪೂಜ್ಯನಂ ೧೧೬

ವ॥ ಅಂತು ಪೂಜಿಸಿ ಜಿನರಾಜಜನನಾಭಿಷವಣವೃತ್ತಾಂತಮಂ ಶ್ರವಣರಮಣೀಯಮಾಗೆ ಪಾಕಶಾಸನಂ ಪೇಳ್ ಕೇಳ್ದು

ಉ॥ ಪುಟ್ಟದ ಮುನ್ನ ಮುಂ ನೆಗಟ್ದವಲ್ತೆ ಸುವರ್ಣಸುರತ್ನವೃಷ್ಟಿ ಪೊಂ
ಬೆಟ್ಟಮೆ ಮೆಟ್ಟಿ ಮೀವ ಮಣಿಶಕ್ರರೆ ಮಜ್ಜನಮಂ ನಿಮಿರ್ಚುವರ್
ನೆಟ್ಟನೆ ವಾರಿ ಪಾಲ್ಗಡಲ ನೀರೆನೆ ಮಜ್ಜನಮಾಯ್ತು ಸೂನುಗಿಂ
ಪುಟ್ಟಿದೊಡೆಂಬ ಸಂತಸಮನೇವೊಗಟ್ದಪ್ಪುದೊ ಮಾತೃತಾತರಾ ೧೧೭

ವ॥ ಅನಂತರಂ ಜಗದ್ಗುರುವಿನ ಜನನೀಜನಕರುಂ ಪುರೋಹಿತಪ್ರಧಾನರುಮವರಿವರೆನ್ನದೆ ಪರಿಜನಮುಂ ಪುರಜನಮುಂ ಜಾತ ವಿಪುಳಪುಳಕರ್ ಜಾತಕರ್ಮೋತ್ಸವ ಪರಂಪರಾ ಪರವಶರಾದಾಗಳ್

ಮ॥ ಪುರಕಾಂತಾತತಿನೂಪುರಂಗಳ ಕಟೀಸೂತ್ರಂಗಳಾರಾವಮಾ
ಗಿರೆ ತೂರ್ಯಧ್ವನಿಪಾರಿಹಾರ್ಯಮಣಿಕಾಂತಿಶ್ರೇಣಿ ಕಾಶ್ಮೀರಸಾ
ರರಸಂ ತನ್ನಯ ಚಿತ್ತರಾಗಮನೆ ಕೆಯ್ಯೊಳ್ ತೋರ್ಪವೋಲೆತ್ತಲುಂ
ಭರದಿಂದೋಕುಳಿಯಾಡುತುಂ ಸುಟಿಯೆ ಜನ್ಮೋತ್ಸಾಹಮೇನೊಪ್ಪಿತೋ ೧೧೮

ಉ॥ ಮಂಗಳಗಾಯಿಕಾಮುಖಸರೋರುಹಗೀತಮಧುಪ್ರಸೇವನಾ
ಸಂಗತರಾಜಭೃಂಗಕುಳದಿಂದಬಳಾಕಳಹಂಸಯಾನದಿಂ

ಮಂಗಳತೂರ್ಯನಾದವಿಹಗಧ್ವನಿಯಿಂ ಮಣಿಭೂಷಣಾಂಶುತೋ
ಯಂಗಳಿನೊಪ್ಪುತಿರ್ದುದು ಸರೋವರದಂತೆ ಗೃಹಂ ಮಹೀಶನಾ ೧೧೯

ವ॥ ಅಂತು ಪಾರ್ಶ್ವತೀರ್ಥೇಶ್ವರನ ಜನನೋತ್ಸವದೊಳ್ ವಿಶ್ವಜನಮುಂ ವಿಶ್ವಜಗತ್ಪೂಜ್ಯ ಸಾಮ್ರಾಜ್ಯಂ ತನತನಗೆ ಕೈಸಾರ್ದುದೆಂಬ ಸಂತೋಷಮಂ ತಾಳ್ದಿರೆ ತನ್ನತಿಶಯ ಭಕ್ತಿಯಂ ವ್ಯಕ್ತಂ ಮಾಳ್ಪಂತಮರೇಂದ್ರನಾನಂದನಾಟಕಮನಾಡಲ್ವೇಡಿ ಶುದ್ಧಂ ಚಿತ್ರಮೆಂಬ ಪೂರ್ವರಂಗಪ್ರಸಂಗದೊಳಂಗೀಕೃತಮಂಗಳಾಳಂಕಾರನುಮೂರೀಕೃತ ಮಂಗಳ ಪದೋಚ್ಚಾರಣನುಂ ವಿಸ್ತಾರಿತ ಪ್ರಸ್ತಾವನಾವಿಶೇಷನುಮೆನಿಸಿ ಸಭಾಂತರಂಗತರಂಗಿಣೀ ಕೌತುಕರಸೋತ್ತರಂಗತರಂಗಸಂಗತಮಾಗೆ ರಂಗಂಬೊಕ್ಕು

ಕಂ॥ ಶುಭಗುಣಜಿನಪದದೊಳ್ ತ
ನ್ನಭಿಮುಖತೆಯನಱಿಪುವಂದದಿಂದಂ ದಿವಿಜ
ಪ್ರಭುವೇಂ ಸಮಪದದೊಳ್ ನಿಂ
ದು ಭಾವಶುದ್ಧಿಯೊಳೆ ಮಾಡೆ ಪುಷ್ಪಾಂಜಳಿಯಂ ೧೨೦

ಅಲರ್ದ ಕರಪುಟಮೆ ಸಿಪ್ಪುಗ
ಳಲರ್ದವೊಲಿರೆ ಭಕ್ತಿರಸಸುಧಾರ್ಣವಮುಕ್ತಾ
ಫಳದಂತೆ ಪೊಳೆವ ಪುಷ್ಪಾಂ
ಜಳಿಯಂ ಜಿನಪದದೊಳಾಗಳೆಸಗೆ ಸುರೇಂದ್ರಂ ೧೨೧

ಕರಮೆಸೆದುದು ಜಿನಪದಪಂ
ಕರುಹಾಶ್ರಿತಲಕ್ಷ್ಮಿಯೊಂದು ದರಹಾಸಮೊ ಮೇಣ್
ಪರಮಜಿನಾಂಘ್ರಿಸುರಾಂಘ್ರಿಪ
ಪರಿಶೋಭಿತಕುಸುಮತತಿಯೊ ಮೇಣೆಂಬಿನೆಗಂ ೧೨೨

ಜವನಿಕೆ ತೊಲಗಿರೆ ದುಗುಲದ
ಜವನಿಕೆಯಂ ಮಗುೞೆ ಪಿಡಿದರೆಂಬಂದದಿನೇ
ನವಿರಳತರಳವಿಲೋಕನ
ಕುವಳಯರುಚಿ ಪಸರಿಸಿತ್ತೊ ದಿವಿಜೋತ್ತಮನಾ ೧೨೩

ನೆಯ್ದಿಲ ಪೂವಂ ರಂಗದೊ
ಳೆಯ್ದುವಿನಂ ಪರಪುವಂತೆ ಚಂದನರಸದೊಳ್
ತೊಯ್ದಪನೆನೆ ಸಭೆಯಂ ತ
ಳ್ತೊಯ್ದುವು ಪರಕಲಿಸಿ ಪರಿಯ ನಯನದ್ಯುತಿಗಳ್ ೧೨೪

ವ॥ ಅಂತುಮಲ್ಲದೆ

ಕಂ॥ ಪೂವಲಿಯಂ ನಯನದ ಬೆ
ಳ್ಪಾವಗಮಿರ್ಮಡಿಸೆ ಕರ್ಪು ಬೞಸಲ್ವ ಸುಭ್ರೂಂ
ಗಾವಳಿಯವೊಲೆಸೆದಿರೆ ರಸ
ಭಾವಾಲಸದೃಷ್ಟಿಪಾತಮೇಂ ಪಸರಿಸಿತೋ ೧೨೫

ವ॥ ಆ ಸಮಯದೊಳ್ ಸಮಯಂಬಡೆದು

ಕಂ॥ ದೊರೆವೆತ್ತ ಕಿನ್ನರೀಗೇ
ಯರಸಾಮೃತವರ್ಷದೊಡನೆ ನೆಗೆವಮೃತಪಯೋ
ಧರರವದವೊಲುಪವಾದಕ
ಪರಿವಾದಕವಾದ್ಯನಿನದಮೊಗೆದುವು ಪಲವುಂ ೧೨೬

ವ॥ ಆ ಸುಖಾಲಯ ಸುಲಯಕ್ಕೆ ಪಯಂ ಸುರಭಿಪಯನಾದಂತಮೃತಪಯ ಮನೆ ಮನಂ ತಣಿವಿನಂ ಕಱಿಯೆ ನೆಱಿಯೆ ಮೆಱಿದು

ಕಂ॥ ಪ್ರಕಟಿಸಿದಂ ಶತಮುಖನಾಂ
ಗಿಕ ವಾಚಿಕ ಭೂಷಣೋತ್ಥಿತಾಹಾರ್ಯಕ ಸಾ
ತ್ವಿಕ ನಾಮಮನಾಂತ ಚತುಃ
ಪ್ರಕಾರದಭಿನಯಮನಭಿನವಂ ನೆಗೞ್ವೆನೆಗಂ ೧೨೭

ರಸಭಾವಾಭಿನಯಾದಿ
ಪ್ರಸಿದ್ಧ ನಾಟ್ಯಾಂಗದಲ್ಲಿ ಪನ್ನೊಂದಱೊಳೀ
ಕ್ಷಿಸೆ ಸುರಪತಿ ನೆಱೆ ಮೆಱೆದುಂ
ಪೊಸಯಿಸಿದಂ ನಾಟಕಾದಿದಶರೂಪಕಮಂ ೧೨೮

ಮ॥ ದಿವಿಜೇಂದ್ರಾವಳಿಯೀಕ್ಷಣಕ್ಕೆ ಪೊಸತಂ ಢಾಳಂ ಬೆಡಂಗಾಗೆ ಬೀ
ಱುವ ಬಾಹೂರುಶಿರಃಕಟೀಹೃದಯಪಾದಾಂಭೋಜಮೆಂಬೀ ಷಡಂ
ಗ ವಿಶಿಷ್ಟಾಭಿನಯಂ ನಯಂಬಡೆಯೆ ಶುಕ್ರಂ ನಾಟ್ಯವೇದಾವತಾ
ರವಿಳಾಸಂ ತಳೆದತ್ತು ಮೂರ್ತಿಯನೆನಿಪ್ಪಾರೂಢಿಯಿಂದಾಡಿದಂ ೧೨೯

ವ॥ ಅಂತು ಬಿಡೌಜಂ ನಾಟ್ಯವಿದ್ಯೆಗೋಜನೆಂಬುದನಶ್ವಸೇನಾದಿರಾಜಸಭೆಗಂ ಸುರಸಮಾಜಕ್ಕಮಱಿಪಿ ಸಾಮಾಜಿಕಜನಂ ಪೊಗೞೆ ನೆಗೞೆ ತನ್ನ ಬಗೆಯೊಳೊಗೆದಾ ನಂದಮಂ ನಿಜ ನಿಯತ ತನುವಿನೊಳಳವಡಿಸಿ ತಳೆಯಲ್ ನೆಱಿಯದೆ ದೃಶ್ಯಶ್ರವ್ಯದೃಢಸೂತ್ರಾದಿ ಪ್ರಯೋಗಂಗಳೊಳಂಬಹುಪ್ರಕಾರನಾಟ್ಯಂಗಳೊಳಮಾಂಗಿಕಾದಿ ಚತುರ್ವಿಧಾಭಿನಯಂಗಳೊಳಂ ದುರಿತ ಪರಿಹಾರಾರ್ಥಮಾರಭಟೀವೃತ್ತಿ ಪ್ರವರ್ತಿಸುವ ತಾಂಡವಮನಾಖಂಡಳನಾಡಲುದ್ಯೋಗಿಸಿ

ಕಂ॥ ವಿದಿತಂ ವೈಶಾಖಸ್ಥಾ
ನದೊಳಿರೆಯುಂ ಶಕ್ರನೆಸೆವ ರಸಭಾವಂ ತೋ
ಱಿದುದು ರುಚಿವೃಷ್ಟಿ ದೃಷ್ಟಿಯೊ
ಳೊದವಿದ ರಸಭಾವಮೊಪ್ಪಿ ತೋರ್ಪುದು ಪಿರಿದೇ ೧೩೦

ವ॥ ಅಂತು ವೈಶಾಖಸ್ಥಾನದೊಳಮಾಸ್ಥಾನಜನಮಾನಸದೊಳಂ ನಿಂದು

ಮ॥ ಚಳನಾಘಾತದಿನಬ್ಧಿಯುಚ್ಚಳಿಸೆ ಮುಕ್ತಾಜಾಳಕಂಗಳ್ ನಭ
ಸ್ಥಳದೊಳ್ ತಾರಗೆಯಂತೆ ತೋಱಿದುವು ತೋಳಳ್ಳೇಱಿ ನಿಂ ತಾರಕಾ

ವಳಿಯಲ್ಲಿಂದುದಿರ್ದಬ್ಧಿಯಲ್ಲಿ ಪೊಸಮುತ್ತಂಬಂತಿರೊಪ್ಪಿರ್ದುವಾ
ರಳವಾಖಂಡಳತಾಂಡವಂ ಬಗೆವೊಡತ್ಯಾಶ್ಚರ್ಯಸಂಪಾದಕಂ ೧೩೧

ಕಂ॥ ಕರಣಂ ಸುಮನೋವಿಸ್ಮಯ
ಕರಣಂ ರೇಚಕಮನೂನಸುಖಸೂಚಕಮ
ಚ್ಚರಿಯನುಗುಲ್ವಿಂಗಹಾರಂ
ಸರಸ್ವತೀಹಾರಮೆನಿಸಿದಂ ಸುರರಾಜಂ ೧೩೨

ಸಕಳಜ್ಞಂ ಮಾಳ್ಕುಂ ದಂ
ಡಕವಾಟಪ್ರತರಲೋಕಪೂರಣಮಂ ಪೂ
ಣ್ದಕಳಂಕನೆಂದು ಪೇಳ್ವಿಂ
ತೆ ಕಳಾಢ್ಯಂ ಕ್ರಮದೆ ಲೋಕಮಂ ವ್ಯಾಪಿಸಿದಂ ೧೩೩

ಇಳೆಯೊಳ್ ತೋಱಿದ ರೂಪನೆ
ಗಳ ಗಗನದೊಳಾಗಳಂತೆ ತೋರ್ಪಂ ವೃಷನಾ
ಗಳೆ ಗಡ ದಿಗ್ವ್ಯಾಪಕನಾ
ರಳವಿಂದ್ರನ ವಿಕ್ರಿಯಾಬಳಂ ಚಿತ್ರತರಂ ೧೩೪

ಎಱಗಿದೊಡುನ್ನತಿಯೆಂಬುದ
ನಱಿಪುವವೋಲ್ ಬಳೆವನಾಗಳರ್ಹಚ್ಛಿಶುಗಂ
ಕಿಱಿಯನೆನಿಸಿರ್ದು ಮುದದಿಂ
ನೆಱೆ ಕೊರ್ವುವ ತೆಱದೆ ದೆಸೆಗಳಂ ವ್ಯಾಪಿಸುವಂ ೧೩೫

ವ॥ ಅಂತಿಂದ್ರನಿಂದ್ರಜಾಲಿಗನ ಲೀಲೆಯಂ ಧಾಳಿಸುತ್ತುಮಮಾನುಷಮಪ್ಪನೇಕ ನಾಟ್ಯಕಳಾ ಪರಿಣತಿಯಿಂ ಸುರನರಪರಿಷಜ್ಜನಚಿತ್ತಭಿತ್ತಿಯೊಳ್ ವೈಚಿತ್ರ್ಯಮನಾಪಾದಿಸುತ್ತುಂ ವರ್ತಿಸುತ್ತುಮಿರೆ

ಮ॥ ದಿವಿಜಸ್ತ್ರೀತತಿ ತಳ್ತು ತೋಳ್ದುಱುಗಲೊಳ್ ಸಲ್ಲೀಲೆಯಿಂದಾಡೆ ನಾ
ಡೆ ವಿಳಾಸಂಬಡೆದತ್ತು ಕಲ್ಪತರು ಶಾಖಾನೀಕದೊಳ್ ನಾಟ್ಯವೈ
ಭವಲಕ್ಷ್ಮೀತತಿ ತತ್ಸಭಾಸದರ ದೃಷ್ಟಿವ್ರಾತದಿಂ ಪುಟ್ಟಿತೆಂ
ಬವೊಲುತ್ಸಾಹರಸಪ್ರವಾಹಭರಶೃಂಗಾರಾಬ್ಧಿ ದೇವೇಂದ್ರನಾ ೧೩೬

ಕಳಕಾಂಚೀಧ್ವನಿ ನಾದಮಾಗೆ ಪದವಿನ್ಯಾಸಂ ಪದನ್ಯಾಸಮಾ
ಗೆ ಲಸತ್ಕಾಂತಿಜಲಂಗಳಿಂ ಭುಜಮೃಣಾಳಶ್ರೇಣಿಯಿಂದಾವಗಂ
ಕೊಳನಂ ಪೋಲ್ವ ಸಹಸ್ರನೇತ್ರನ ತನುಶ್ರೀಯಲ್ಲಿ ನೇತ್ರಾಬ್ಜಸಂ
ಕುಳಮಂ ಹಂಸಿಗಳಂತೆ ಭಂಗಿಸಿ ಬೆಡಂಗಿಂದಾಡಿದರ್ ದೇವಿಯರ್ ೧೩೭

ಕಂ॥ ಪದವಿನ್ಯಾಸಂ ಹಂಸೀ
ಪದವಿನ್ಯಾಸಮನೆ ಪೋಲ್ತು ಪೂವಲಿಯಿಂ ಮೆ

ಟ್ಟಿದೊಡಂ ಕೊರಗಿಸದಳಿವಳಿ
ಹೃದಯಾಂಬುರುಹಮನಲರ್ಚಿತಮರೀಜನದಾ ೧೩೮

ಅಮರ್ದ ಪದನ್ಯಾಸಲಘು
ತ್ವಮನೇವರ್ಣಿಸುವುದಾ ಸಹಸ್ರಾಕ್ಷನ ಕ
ಣ್ಣೆಮೆಗಳ ಮೇಲೆ ಕರಣಮಂ
ನಿಮಿರ್ಚಿದರ್ ಶತಸಹಸ್ರಮಂ ಸುರಸತಿಯರ್ ೧೩೯

ಭೂಚಾರಿಗಳೊಳಮೊಪ್ಪುವ
ಖೇಚಾರಿಗಳೊಳಮಮರ್ಕೆವಡೆದಿರ್ಪಿನೆಗಂ
ರೇಚಿಸಿಯುಂ ಪೂರಿಸೆ ಲೀ
ಲೋಚಿತಲಾವಣ್ಯರಸಮದೇಂ ಪಸರಿಸಿತೋ ೧೪೦

ಚಂ॥ ಪಯದ ಬೆಡಂಗು ಚಾಳೆಯದ ಚೆಲ್ವುರಚಲ್ಲಿಯ ಲೀಲೆ ಹಸ್ತಶಾ
ಖೆಯ ಲಲಿತತ್ವಮೀಕ್ಷಣದ ಕಾಂತತೆ ಪುರ್ವಿನೊಳಾದ ಜರ್ವಿದೆ
ಲ್ಲಿಯುಮತಿದುರ್ಲಭಂ ಬಗೆವೊಡಿಲ್ಲಿಯೆ ಕಾಣಲೆ ಬಂದುವೆಂದು ವಿ
ಸ್ಮಯದೊಳೆ ಕೂಡಿ ನೋಡೆ ಸಭೆ ನರ್ತಿಸಿದತ್ತಮರಾಂಗನಾಜನಂ ೧೪೧

ಕಂ॥ ಕಡೆಗಣ್ಗಳ ಬೆಳ್ಪಿಂ ಕೇ
ಸಡಿಗಳ ಕೆಂಪಿಂದಮಳಕನೀಳಚ್ಛವಿಯಿಂ
ತುಡುಗೆಯ ಮಣಿಗಣಮಂ ನು
ಣ್ಪಿಡುತುಂ ಸುರಸತಿಯರಾಡಿದರ್ ನರ್ತನಮಂ ೧೪೨

ಶಾ॥ ತಾಳಂ ಮೇಳಿಸುವಂತು ಗೇಯದೊಳೊಡಂಬಟ್ಟಿತ್ತು ವಾದ್ಯಕ್ಕೆ ಸೌ
ಖ್ಯಾಲಂಬಂ ಸಮನಾಯ್ತು ಶಕ್ರನ ಮನಂ ತಾನೆಂಬಿನಂ ತಾಂಡವ
ಕ್ಕೀ ಲಾಸ್ಯಂ ದೊರೆಯಾದುದೆಂದು ವಿಬುಧರ್ ಕೊಂಡಾಡೆ ಸಭಾ...ದೊಳ್
ಥಾಳಂ ನೆಟ್ಟನೆ ಪುಟ್ಟೆ ನಾಟ್ಯರಸದೊಳ್ ತೇಂಕಾಡುವಂತಾಡಿದರ್ ೧೪೩

ಉ॥ ಚಾರಿಗೆ ಚಾರಿ ಚಾಳೆಯಕೆ ಚಾಳೆಯಮೀಕ್ಷಣಕೀಕ್ಷಣಂ ಮನೋ
ಹಾರಿ ಪಯಂ ಪಯಕ್ಕೆ ಕರಣಂ ಕರಣಕ್ಕೆ ರಸಂ ರಸಕ್ಕೆ ವಿ
ಸ್ತಾರಿಪ ಭಾವಸಂಗತಿಗೆ ಭಾವಮೊಡಂಬಡೆ ಸೌಕುಮಾರ್ಯಮಂ
ನಾರಿಯರುದ್ಧತತ್ವಮನೆ ತಾಂ ತಳೆದಿಂತು ವಿಚಿತ್ರವೃತ್ತಿಯಿಂ ೧೪೪

ಮ॥ ಅಮರೇಂದ್ರಂ ನಿಜಪಾದಹಸ್ತಕಮಳಪ್ರಾಂತಂಗಳೊಳ್ ದೇವಿ...ರ್
ಭ್ರಮರೀವಿಭ್ರಮಮಂ ನಿಮಿರ್ಚುವುದದೆಂತುಂ ಯುಕ್ತಮೆಂ...ದಿಂ
ಭ್ರಮರೀವಿಭ್ರಮಮಂ ನಿಮಿರ್ಚುವುದುಮತ್ಯಾನಂದದಾನಂದನೃ
ತ್ಯಮನೊಲ್ದಾಡಿದನಲ್ಲಿ ತಳ್ತೆಸೆದು ಲಾಸ್ಯಂ ತಾಂಡವಂ ತೋರ್ಪಿನಂ ೧೪೫

ಕಂ॥ ಸ್ವರ್ಗಾಧಿನಾಯಕಂ ಸ
ನ್ಮಾರ್ಗೋಚಿತಭಾವಶುದ್ಧಿಯಿಂದೆಸಗಲ್ಕಂ

ತಾರ್ಗಮತಿಗಹನಮೆನಿಪಪ
ವರ್ಗಂ ಸಮನಿಪ ವಿಶುದ್ಧಿ ಸಮನಿಪುದುಚಿತಂ ೧೪೬

ಆನಂದನಾಟಕಂ ಪರ
ಮಾನಂದಮನಖಿಳದಕ್ಷಿಣೇಂದ್ರಶಚೀಶ
ಕ್ರಾನೇಕಪಕ್ಕಮೊದವಿಪು
ದೇನೀವುದು ಪಿರಿದೆ ಸುರವರಂಗಾಯತಿಯೊಳ್ ೧೪೭

ವ॥ ಅಂತಗಣ್ಯಪುಣ್ಯಮಂ ನೆರೆಯೆ ಸ್ವಸಾಧ್ಯಪ್ರಸಾದ್ಯನೃತ್ಯತೋಪ್ಯದೋಷಾಯೆಂಬ
ನ್ಯಾಯಮಂ ಸ್ವಾಯತ್ತಂ ಮಾಡಿಯನಂತರಂ

ಕಂ॥ ವಿನುತಜ್ಞಾನಾದಿಗುಣಂ
ಜನನಾಂಬುಧಿತರಣಹೇತು ತೀರ್ಥವ್ರಾತಂ
ಜಿನ ನಿನ್ನ ಪಾರ್ಶ್ವದೊಳ್ ನೆ
ಟ್ಟನಿರ್ಪ ಕಾರಣದೆ ಪಾರ್ಶ್ವತೀರ್ಥೇಶ್ವರನೈ ೧೪೮

ವ॥ ಎಂದು ತೀರ್ಥನಾಥಂಗನ್ವರ್ಥನಾಮಮನಿಟ್ಟೊಡನಾಡುವಂತೋರನ್ನರೆನಿಪ
ಸುರಕುಮಾರಕರನಿರವೇಟ್ಟು ಪರುಠವಿಸಿ

ಕಂ॥ ಮೊಲೆಯೂಡಲ್ ಮಣಿಮಂಡನ
ಕುಳಮಂ ತುಡಿಸಲ್ಕೆ ಮಜ್ಜನಂಬುಗಿಸಲ್ಕೆಂ
ದೊಲವಿಂದಂ ನಿಯಮಿಸಿ ಸುರ
ಲಲನೆಯರಂ ಶಕ್ರನಮರಲೋಕಕ್ಕೊಗೆದಂ ೧೪೯

ಸ್ರ॥ ಇತ್ತಲ್ ತೀರ್ಥಾಧಿನಾಥಂ ನಿಜಪಿತೃಯುಗಳಕ್ಕಾವಗಂ ಹರ್ಷಮಂ ಮಾ
ಡುತ್ತುಂ ಕೂಸಾಟದಿಂದಂ ನಯನಕುವಳಯಕ್ಕಾಸ್ಯಚಂದ್ರಾಂಶುವಂ ಬೀ
ಱುತ್ತುಂ ವಿದ್ಯಾಪ್ರಭಾವಂ ಬಳೆಯೆ ಬಳೆಯುತುಂ ತನ್ನ ಸತ್ಪುಣ್ಯಮಂ ತೋ
ಱುತ್ತುಂ ಕಣ್ಗೊಪ್ಪುತಿರ್ದಂ ವಿಬುಧಜನಮನಃಪದ್ಮಿನೀಪದ್ಮಮಿತ್ರಂ ೧೫೦

ಗದ್ಯ

ಇದು ವಿದಿತವಿಬುಧಲೋಕನಾಯಕಾಭಿಪೂಜ್ಯ ವಾಸುಪೂಜ್ಯ ಜಿನಮುನಿಪ್ರಸಾದಾ
ಸಾದಿತ ನಿರ್ಮಳಧರ್ಮ ವಿನುತ ವಿನೇಯಜನವನಜವನ ವಿಳಸಿತ ಕವಿಕುಳತಿಳಕಪ್ರಣೂತ
ಪಾರ್ಶ್ವನಾಥಪ್ರಣೀತಮಪ್ಪ ಪಾರ್ಶ್ವನಾಥಚರಿತ ಪುರಾಣದೊಳ್ ಅಮರೇಂದ್ರಾನಂದನೃತ್ಯವರ್ಣನಂ
ಚತುರ್ದಶಾಶ್ವಾಸಂ

ಪಂಚದಶಾಶ್ವಾಸಂ

ಕಂ॥ ಶ್ರೀ ಸುಚರಿತ್ರಂ ಸೂಕ್ತಿವಿ
ಳಾಸಂವೃತಹಂಸರಾಜಹಯನವೋಲೆಸೆದಂ
ತಾಸುರದಾರಕರೊಡನಿರೆ
ಭಾಸಿಸಿದಂ ಪುಣ್ಯಮೂರ್ತಿ ಕವಿಕುಳತಿಳಕಂ ೧

ಪಿತೃಯುಗದ ಕಿವಿಗೆ ವೀಣಾ
ರುತಿಯಿರೆಯುಂ ಸೊಗಯಿಸಲ್ ತೊದಳ್ನುಡಿ ನುಡಿದಂ
ನುತನೃತ್ಯಮಿರೆಯುಮಿಾಕ್ಷಣ
ಕತಿಹರ್ಷಮನೀಯೆ ಶಿಶು ತಳರ್ನಡೆ ನಡೆದಂ ೨

ವ॥ ಅಂತು

ಕಂ॥ ಶೈಶವಮಂ ಸ್ಮಿತಬಂಧು ಕು
ಶೇಶಯನಿನನಂತಿರಂತು ಕಳೆದುರುತೇಜೋ
ರಾಶಿ ವಿರಾಜಿಸಿದಂ ಜಗ
ದಾಶಯಮಿಥ್ಯಾತಮೋಹರಂ ತೀರ್ಥಕರಂ ೩

ಕಳೆಗಳೊಡನೊಡನೆ ವೃತ್ತಂ
ವಿಳಾಸಮತ್ಯುನ್ನತಿ ಪ್ರಸನ್ನತೆ ತೇಜಂ
ಬಳೆಯೆ ಕುವಳಯದ ಮುದಮಂ
ಬಳೆಯಿಸುತುಂ ಚಂದ್ರನಂದದಿಂದಂ ಬಳೆದಂ ೪

ವ॥ ಮತ್ತಂ ಮುಕ್ತಿವನಿತಾಸಕ್ತಸಾತ್ವಿಕಭಾವನಾಗಿಯುಂ ನಿಃಸ್ವೇದನು ಮುಪಾಧಿಗ್ರಾಹಿಯಾಗಿಯುಮಮಳನುಂ ಪ್ರವ್ಯಕ್ತಗುಣಾನುರಕ್ತನಾಗಿಯುಂ ಕ್ಷೀರಗೌರಕ್ಷತಜನುಂ ಸದ್ವೃತ್ತನಾಗಿಯುಂ ಸಮಚತುರಸ್ರ ಸಂಸ್ಥಾನನುಂ ತ್ರಯೋವಿಂಶತಿ ತೀರ್ಥೇಶನಾಗಿಯುಮಷ್ಟಸಹಸ್ರಲಕ್ಷಣ ಲಕ್ಷಿತನುಂ ಸುಸ್ವರನಾಗಿಯುಂ ರಂಜಿತವ್ಯಂಜನನುಂ ಉಚಿತಕಾರ್ಯಾಸಕ್ತನಾಗಿಯುಮನಂತವೀರ್ಯನುಂ ಸುದರ್ಶನಧರನಾಗಿಯುಂ ಸೂಕ್ತಿಸುಧಾವಿಸ್ತೀರ್ಣಕರ್ಣಸುಖನುಂ ಕಲ್ಯಾಣಕಾಯಕನಾಗಿಯುಂ ಮರಕತವರ್ಣನುಂ ಸುಗ್ರೀವನಾಗಿಯುಮಭಿರಾಮನುಂ ಲೋಕೋನ್ನತನಾಗಿಯುಂ ನವರತ್ನಿಸುಮುತ್ಸೇಧನುಂ ಸಕಳಕಳತ್ರತ್ಯಕ್ತನಾಗಿಯುಂ ನಿರ್ಜಿತಕುಸುಮಚಾಪರೂಪನುಂ ಮಧುಪಸೇವಾವಿರಹಿತನಾಗಿಯುಂ ಸುರಭಿಸೌರಭನುಂ ಉಗ್ರವಂಶಾಗ್ರಣಿಯಾಗಿಯುಮತ್ಯಂತಶಾಂತನುಂ ಸಕಳ ಕಳಾಧರನಾಗಿಯುಂ ಸಮುದಿತ ಸಹಸ್ರಕರತೇಜನುಮಾಗಿರೆ

ಮ॥ ವಿಳಸತ್ಸೂಕ್ತಿವಧೂಕಟಾಕ್ಷರುಚಿ ತಳ್ತಿರ್ಪಂತು ವಕ್ತ್ರಾಂಬುಜಂ
ತಳೆದತ್ತುಜ್ವಳವೃತ್ತಿಯಂ ನಿರುಪಮಂ ಸಿಂಹಾಸನಶ್ರೀ ವಿನಿ
ಶ್ಚಳಮಿರ್ಪಂತು ಕಟೀತಟಂ ಘನತೆಯಂ ತಾಳ್ದತ್ತು ವಿಸ್ತಾರಿಯಾ
ಯ್ತಲಘುತ್ರೈಭುವನಾರ್ಚ್ಯಲಕ್ಷ್ಮಿಯೊದವಿಂದಿರ್ಪಂತು ವಕ್ಷಸ್ಥಳಂ ೫

ಕಂ॥ ಲಲಿತಮುಖಕಮಳದೊಳ್ ಶ್ಮ
ಶ್ರುಲೇಖೆಯುಂ ದಂತಪಂಕ್ತಿಯುಂ ಮುಖಲಕ್ಷ್ಮೀ
ಲಲನೆಯ ನೀಳದ ಮುಕ್ತಾ
ಫಳದೇಕಾವಳಿವೊಲೇಂ ಮನಂಗೊಳಿಸಿದುವೋ ೬

ಶ್ರೀವಧುವಕ್ಷಮನಪ್ಪೆ ವ
ಚೋವನಿತೆ ಮುಖಾಬ್ಜಮಂ ಜಯಶ್ರೀ ಭುಜಮಂ
ಯೌವನಲಕ್ಷ್ಮಿ ಜಿನನ ಸಕ
ಳಾವಯವಮನಪ್ಪಿ ಚೆಲ್ವಿನೇನೊಪ್ಪಿದಳೋ ೭

ಚತುರತೆಯಂ ಕೀರ್ತಿಸುವೊಡೆ
ಮತಿಶ್ರುತಾವಧಿವಿಬೋಧಮೊಡವುಟ್ಟಿದುವು
ನ್ನತಿಯಂ ಪೇೞ್ವೊಡೆ ಭುವನ
ತ್ರಿತಯಂ ಜಿನಪತಿಯ ಪದಮನಾರಾಧಿಸುಗುಂ ೮

ಅಮರ್ದಮರದಾರಕರ್ ಮ
ಲ್ಲ ಮೇಷ ಖಗ ವೃಷಭ ಮಹಿಷಯುಗಳಂಗಳ ರೂ
ಪುಮನಾಳ್ದು ಯುದ್ಧಮಂ ಜಿನ
ಕುಮಾರಕನ ಮುಂದೊಡರ್ಚಿ ಪಡೆದರ್ ಮುದಮಂ ೯

ಮುರಜ ಪಣವ ಕಳವೀಣಾ
ಪರಿವಾದನದಿಂದೆ ಶಬ್ದಷಟ್‌ತರ್ಕಾಳಂ
ಕರಣನಯ ಕಾವ್ಯ ನಾಟಕ
ಭರತಾದಿಯನೋದಿ ವಿಬುಧರಾದರ್ ವಿಬುಧರ್ ೧೦

ವ॥ ಇಂತಿವು ಮೊದಲಾದನೇಕ ಭೇದವಿನೋದಂಗಳಂ ನೆಱೆಯೆ ಮೆಱೆದು ಮನಮಱೆದೋಲಗಿಸುತ್ತುಮಿರ್ದೊಂದುದೆವಸಂ ಪೊಱವೊೞಲ ಸಿರಿಯಂ ನಿರೀಕ್ಷಿಸಲ್ವೇೞ್ಕು ಮೆಂದು ಬಿನ್ನವಿಸೆ ಸೇವಕಜನದ ಮನದಿಚ್ಛೆಯಂ ಸಲಿಸುವುದೆ ತನಗೆ ಬಿನದಮಪ್ಪುದಱಿ ಮನದೆಗೊಂಡು

ಕಂ॥ ಸುರನಾಯಕನಟ್ಟಿದ ಸುರ
ತರುಕುಸುಮಸುಗಂಧಮಣಿವಿಭೂಷಣವಸನೋ
ತ್ಕರದಿಂದಮಳಂಕೃತನಾ
ಗಿರೆ ಕರಮೆಸೆದತ್ತು ಮೂರ್ತಿ ಜಿನಮನ್ಮಥನಾ ೧೧

ಎತ್ತಿದ ಬೆಳ್ಗೊಡೆಯೆಸೆದಿರೆ
ಮುತ್ತಿನ ಲಂಬಣದಿನವಳಿ ರುಚಿ ಪಸರಿಸಿ ಪ
ರ್ವಿತ್ತೆನೆ ಪೆರ್ವಿಡಿಯೇಱು ಬ
ರುತ್ತುಂ ಚಮರಜಮನಿಕ್ಕೆ ಕಮಳಾನನೆಯರ್ ೧೨

ಏಱೆ ದಿವಿಜೇಂದ್ರಗಜಮಂ
ಮೀಱುವ ಮದಗಜಮನಣೆದು ನೂಂಕಿಯುಮಧಿಪಂ
ಮೀಱಲಣಮಿಾಯದೇಱಿಯೆ
ಮಿಾಱಿದನೋಜೆಯೊಳೆ ನೆಗಟ್ದಿ ಭಗದತ್ತನುಮಂ ೧೩

ವ॥ ಅಂತಖಿಳವಿಳಾಸಕ್ಕಾವಾಸವಾಗಿ ಪೌರನಾರೀಜನದ ಮನಮಂ ಮನಸಿಜಶಿಳೀಮುಖಕ್ಕೆ ಪಕ್ಕುಮಾಡುತ್ತುಂ ಪೋದಾಗಳ್

ಉ॥ ತೆಂಗಿನಕಾಯ ತೋಯದೊಳೆ ಚಂದನಗಂಧದೆ ಕುಂದಕುಟ್ಮಳಾ
ಫಂಗಳ ನಿರ್ಮಳಾಕ್ಷತದೆ ಜಾದಿಯಪುಷ್ಪದೆ ಗಂಧಶಾಳಿಯು
ತ್ತುಂಗನಿವೇದ್ಯದುಜ್ಜ್ವಳಿಪ ಚಂಪಕದೀಪದೆ ಗುಗ್ಗುಳಪ್ರಧೂ
ಪಂಗಳಿನಾಮ್ರಕಮ್ರಫಳದರ್ಚಿಪವೋಲಿರೆ ತದ್ವಹಿಃಪುರಂ ೧೪

ವ॥ ಅಂತು ಚೆಲ್ವನೊಳಕೆಯ್ದು ಪೊಱವೊಟಿಲ ವಿಳಾಸಮಂ ಜಿನಕುಮಾರಕಂ ಸುರದಾರಕ ಸಮನ್ವಿತಂ ವಿಳೋಕಿಸುತ್ತುಮಿರ್ಪುದುಮಾ ಪ್ರಸ್ತಾವದೊಳ್

ಕಂ॥ ನಡುವಗಲ ಸೂರ್ಯರಶ್ಮಿಯೆ
ಸುಡೆ ಸುಗಿಯದರಿಲ್ಲ ಮತ್ತಮದಱೊಡಗೂಡಿ
ರ್ದಡೆಯುಡುಗದೆ ನಾಲ್ದೆಸೆಯಿಂ
ಸುಡುವನಳಜ್ವಾಳೆಗಟ್ಟಿದಿರ್ದಪನೊರ್ವಂ ೧೫

ವ॥ ಎಂದೊರ್ವಂ ತಪಃಸಾರಾಸಾರತೆಯನಱಿಯದ ನಿರ್ಬುದ್ಧಿಯಿರ್ಪುದಂ ಬಿನ್ನವಿಸಿಯಲ್ಲಿವರಂ ಬಿಜಯಂಗೆಯ್ದು ದೇವರ್ ಚೋದ್ಯಾವಹಮಂ ನೋೞ್ಪುದೆಂದಾಗ್ರಹಮಂ ಮಾಡೆ

ಕಂ॥ ಅಂತಸ್ತತ್ತ್ವಮನಱಿಯದ
ವಂ ತಳೆಗುಂ ತೋಷಮಂ ಬಹಿರ್ವಿಷಯದೊಳ
ಭ್ಯಂತರದೊಳೆ ತೋಷಮನಾ
ಳ್ಗುಂ ತತ್ತ್ವವಿವೇಕಿ ವಿಗತಬಹಿರಾಶ್ಚರ್ಯಂ ೧೬

ವ॥ ಎಂದಿಂತಗಾಧಬೋಧತರಂಗಿಣೀನಾಥಂ ಸಮುತ್ತರಂಗತರಂಗ ಸಂಗತಮಪ್ಪಂತರಂಗದೊಳ್ ಭಾವಿಸಿ ಮುಗುಳ್ನಗೆ ನಗುತ್ತುಮಿಂತೆಂದಂ

ಕಂ॥ ದುರಿತೇಂಧನಮಂ ಸುಡುಗುಂ
ಪರಮ ಧ್ಯಾನಾಗ್ನಿಯುಟಿದ ಪಂಚಾಗ್ನಿ ವಪುಃ

ಪರಿಪೀಡೆಯನೀಗುಮಿದಂ
ಪರಿಭಾವಿಸನಿಂತು ತಾಪಸಂ ಬಹಿರಾತ್ಮಂ ೧೭

ಎನಸುಮುವಿಗುಟ್ಟಿ ಕೆಯ್ ಪುಗು
ಱನಾಂತುದೆಂಬಂತೆ ತತ್ತ್ವವಿದರಲ್ಲದರೊಂ
ದು ನೆಗೞ್ತೆ ದುರಿತಕರಮಯ
ವಿನಾಶಕಂ ದಯೆಯನುಱಿದು ನೆಗೞ್ವುದಱಿಂದಂ ೧೮

ಸಸಿಯಂ ಬಿಸುಟ್ಟು ಬೆಳೆಯಿಸಿ
ಕಸಮಂ ಸತ್ಫಳಮನಱಸುವವನೆಸಕಂ ತಾ
ಪಸನೆಸಕಮಕಟ ಗುಣಮಂ
ಬಿಸುಟ್ಟು ಪಾಪಮನನಾರತಂ ಪೊರೆವುದಱಿಂ ೧೯

ಅರಿದಾದೊಡಮೇಂ ಕೊಲ್ಲಟಿ
ಗರಾಟದಂತಪರಿಮಿತ ತಪಂ ಬಾರದು ಬ
ಲ್ಲರ ಬಗೆಗುಚಿತಕಳಾಗಮ
ವಿರಹಿತಮಪ್ಪುದಱಿನೆಂದು ನುಡಿಯೆ ಕುಮಾರಂ ೨೦

ವ॥ ಅಂತು ತನ್ನ ತಪಮಂ ಪ್ರಶಂಸೆಮಾಡ್ಪಿನನಜ್ಞನೆಂದವಜ್ಞೆಗೆಯ್ವುದುಮನತಿ ದೂರಮಾಗಿರ್ದಾ ತಾಪಸಪಾಶನಾಲಿಸಿ

ಕಂ॥ ಬಿಸುಟು ಪರಲೋಕಚಿಂತೆಯ
ನಸಾರಮಂ ಖ್ಯಾತಿಲಾಭಪೂಜಾದಿಯನ
ರ್ಥಿಸಿ ನೆಗೞ್ವ ಕುಲಿಂಗಿಯದೇ
ಕೆ ಸೈರಿಕುಂ ಶಿಖಿವೊಲುದ್ದಮುರಿಯುತ್ತಿರ್ದಂ ೨೧

ವ॥ ಅಂತನಳನಾರಾಧನೆಯಿಂ ತನಗಮಳತೆಯಾದುದೆಂಬಂತೆ ಕಿಡಿಕಿಡಿವೋಗುತ್ತ ಮುತ್ತಮ ದಯಾಮೂಲ ಧರ್ಮಕುಜಕುಠಾರಮನಾವತರಂ ಭವಾಟವಿಯೊಳ್ ತಾಂ ತಿರಿವು ದನಭಿನಯಿಸುವಂತೆ ತಿರಿಪುತ್ತುಂ ಪರಿತಂದು ಜಗದಾರಾಧ್ಯಂ ತನಗಸಾಧ್ಯನೆಂಬುದಂ ಕಂಡು ನಿರಪರಾಧನಪ್ಪ ತಪೋಧನನಂ ವಧಿಯಿಸಿದನೆಂಬಪವಾದಮನಾದೊಡಮವಂಗೆ ಪೊರ್ದಿಸಿ ಯಶೋವಧಮಂ ಮಾಡುವೆನೆಂದುದ್ದಂಡ ಮದವೇದಂಡಕ್ಕಡ್ಡಂ ಬಂದು ನಿಂದು

ಕಂ॥ ಅರಸರೆಮೆಂದಧಿಕರನಾ
ದರಿಸದೊಡಂ ಪೆಱಿರುಮೆಱಗುತಿರ್ದೊಡಮದುವಂ
ಪರಿಕಿಸದೆ ನುಡಿದು ಕಿಡಿಪುದು
ಪುರುಷಾರ್ಥಮೆ ತಪದೊಳಱಪೆಯುಳ್ಳೊಡೆ ದೋಷಂ ೨೨

ಎನೆ ದರಹಸಿತಮುಖಾಬ್ಜಂ
ಜಿನನಾಥಂ ತೋಱಿದಪ್ಪೆನೀಗಳೆ ನಿನ್ನೊಂ

ದನುಪಮತಪದುನ್ನತಿಯಂ
ನಿನಗೆಂದವನಾಶ್ರಮಕ್ಕೆ ತಡೆಯದೆ ನಡೆದಂ ೨೩

ವ॥ ಅಂತು ಕರುಣಾಕ್ರಾಂತಸ್ವಾಂತಂ ನಡೆತಂದು ದಳ್ಳೆಂದುರಿವ ಪೊಱಲ ಪುಳ್ಳಿಯಂ ಬಾಳತಪಸ್ವಿಯಂ ತಿಳಿಪುವ ಬಗೆಯಿಂದಾಗಲೆ ತೆಗೆಸಿ ಸೀೞೆಂದು ಸೀೞಿಸೆ

ಕಂ॥ ಎರಡುಂ ದೆಸೆಯುರಿವಿಂಧನ
ದುರುಕೋಟರದೊಳಗೆ ಸಿಲ್ಕಿ ಬೇವುರಗನುಮಾ
ವುರಗಿಯುಮಾ ತಪಸಿಗಿಹಃ
ಪರದೊಳಮೊಗೆತಪ್ಪ ಪಾಪಮಂ ಪ್ರಕಟಿಸುತುಂ ೨೪

ಇರೆ ಕಂಡು ತಪಸಿಯುಂ ದು
ರ್ಧರತರಮೆಂದಿರದೆ ಪೊಗೞ್ವೆ ಜನಮುಂ ಬೆಱಗಾ
ಗಿರೆ ತೋಱೆ ತನ್ನ ಹೃದಯದ
ಕರುಣಾರಸಮಂ ಸಮಂತು ತೋಱುವ ತೆಱದಿಂ ೨೫

ವ॥ ಆಗಳ್ ಜಿನಾಗಮನಿಪುಣನಾ ಭೋಗಿ ಮಿಥುನಂಗಳಂ ಪುಣ್ಯ ಭಾಗಿಗಳಂ ಮಾಡಲೆಂದು ಜಿನನಾಗಂ ನಾಗದಿಂದಮಿೞಿಚು ಕಾರುಣ್ಯಾಮೃತಮಂ ನಯನಕುವಳಯ ದಳಂಗಳಿಂ ತಳಿದು

ಕಂ॥ ಪಂಚಪದಮಂ ದುರಿತಕರಿ
ಪಂಚಾನನಪದಮನಖಿಳಸುಖನಿಕರ ಸುಧಾ
ಪಂಚಮಸಮುದ್ರಮಂ ಗುಣ
ಸಂಚಯಮಣಿನಿವಹಜನನರೋಹಣನಗಮಂ ೨೬

ಸಂಗತಭುವನತ್ರಯರಾ
ಜ್ಯಾಂಗನೆಯಂ ನಿಮಿಷದಿಂ ವಶಂಮಾಡುವ ಮಂ
ತ್ರಂಗಳನತಿಶಯಪಂಚಪ
ದಂಗಳನಹಿಗಳ್ಗೆ ಸಹಜಶುಭಮತಿ ಪೇೞ್ದಂ ೨೭

ವ॥ ಅಂತು ಪಂಚನಮಸ್ಕಾರಸುಧಾರಸಮಂ ಶ್ರವಣಾಂಜಳಿಗಳಿಂದೀಂಟಿಸಿದುದೆ ತಮಗಮೃತಾಶನತ್ವಮಂ ಸಮರ್ಥಿಸಿತೆಂಬಂತೆ

ಕಂ॥ ವರಭವನಾಮರಲೋಕದೊ
ಳುರಗಂ ಧರಣೇಂದ್ರನಾಯ್ತು ಪದ್ಮಾವತಿಯಾ
ಯ್ತುರಗಿ ಮಿಗೆ ಪಂಚಪದಮಂ
ಪರಿಭಾವಿಸಿ ಕೇಳ್ದು ಪಡೆದ ಪುಣ್ಯೋದಯದಿಂ ೨೮

ನಿಮಿಷದೊಳನಿಮಿಷಪದಮಂ
ಸಮರ್ಥಿಸಿತ್ತಹಿಗಮೞ್ವು ನಂಬುಗೆ ಶುಭವೃ

ತ್ತಮಿವಿಲ್ಲದಿರೆಯುಮಂತನಿ
ತುಮನಾಂತರ್ ನನೆಯೆ ಪಂಚಪದಮೀಯದುದೇಂ ೨೯

ಭವನಾಮರಪದಮಂ ಸುಖ
ಭವನಮನಹಿಮಿಥುನಮಂ ಸಮಂತೆಯ್ದಿಸಿ ಪೊ
ಕ್ಕು ವಿಳಾಸದಿಂದೆ ಪುರಮಂ
ಭವನಮುಮಂ ಜಿನಕುಮಾರನಿರೆ ಸೊಗಯಿಸುತುಂ ೩೦

ನವಯೌವನನಾದ ತನೂ
ಭವನಂ ಕಂಡಶ್ವಸೇನನರಪತಿಪರಮೋ
ತ್ಸವದಿಂ ವಿವಾಹಮಂ ಮಾ
ಡುವನೆಂದು ನಿರೀಕ್ಷಿಸಲ್ಕೆ ನೃಪಕನ್ನೆಯರಂ ೩೧

ವ॥ ಅಂತು ಕನ್ಯಾರತ್ನಲಕ್ಷಣಪರೀಕ್ಷಣಪ್ರಯತ್ನಚಿತ್ತರಪ್ಪ ಮಹತ್ತರರಂ ರತ್ನೋಪಾಯನಪುರಸ್ಸರಂ ಕಳಿಪುವುದುಮವರ್ ಕತಿಪಯಪ್ರಯಾಣಂಗಳಿಂ ಕ್ಷೋಣೀಪತಿಗಳ ಪುರಂಗಳನೆಯ್ದಿಯವರ ರಾಜಭವನಮಂ ನಿವೇದಿತನಿಜಾಗಮನವೃತ್ತಾಂತರಾಗಿ ಪೊಗಿ ಪಾಗುಡಮಂ ಕೊಟ್ಟು ನೆಟ್ಟನವರ್ಗೆ ತಮ್ಮ ಬರವಿಂತೆಂಬುದಂ ಪೇೞೆ ಕೇಳ್ದವನೀಕಾಂತರೆಲ್ಲರು ಮತ್ಯಂತ ಸಂತೋಷಮನಾಂತಿಂತೆಂದರ್

ಮ॥ ಒಡೆಯಂ ತ್ರೈಭುವಕ್ಕೆನಿಪ್ಪನುಪಮಂ ಶ್ರೀಪಾರ್ಶ್ವನಾಥಂ ವರಂ
ಗಡ ವಿಶ್ವಸ್ತುತನಶ್ವಸೇನನೃಪನುಂ ಶ್ರೀಬ್ರಹ್ಮದತ್ತಾಖ್ಯೆಯುಂ
ಪಡೆಮಾತೇಂ ನಮಗಪ್ಪ ನಂಟರೆನೆ ಮಾನ್ಯರ್ ನಾಮೆ ದಲ್ ಧನ್ಯರೀ
ಯೆಡೆಯಿಂ ಕೊಳ್ಕೊಡೆಗುಂಟೆ ಮತ್ತಮುಚಿತಸ್ಥಾನಂ ಧರಿತ್ರೀನುತಂ ೩೨

ವ॥ ಎಂದು ನಿಶ್ಚಯಿಸಿ

ಕಂ॥ ಕೆಲರಾಚಾರಕ್ಕೆ ಕೆಲರ್
ಕಳಾವಿಳಾಸಕ್ಕೆ ಕೆಲರುದಾರಕ್ಕೆ ಕೆಲರ್
ಲಲಿತಾಕಾರಕ್ಕೆ ಕೆಲರ್
ಕುಲಕ್ರಮಕ್ಕೆಳಸಿ ನಿಖಿಳನರಪತಿಸುತೆಯರ್ ೩೩

ಕಿವಿ ಬೇಟಂಗೊಂಡೊಡಮೇಂ
ಯುವತಿಯರ ವಿಳೋಕನಂ ಮನಂ ಹಸ್ತಮುಮೊ
ಪ್ಪುವ ಜಿನನ ರೂಪನೀಕ್ಷಿಸ
ಲವಿಚಳಿತಂ ನನೆಯಲೆಸೆಯೆ ಬರೆಯಲ್ ಪರಿಗುಂ ೩೪

ಕೆಂದಾವರೆಯಲರ್ಗಳ ರಜ
ದಿಂದಂ ಪೊರೆದಿರ್ದ ಪೂಗೊಳನನೀಕ್ಷಿಸಿ ದ
ಳ್ಳೆಂದುರಿವ ಮನ್ಮಥಾನಳ
ಸಿಂದಗಿದರ್ ವಿರಹ ವಿಧುರ ವನಜಾನನೆಯರ್ ೩೫

ವ॥ ಅಂತು ಮುನ್ನಮೆ ಸಮುನ್ನತಪಾರ್ಶ್ವಜಿನಗುಣವರ್ಣನಾಕರ್ಣನದಿಂ ಕಂತುಶರಾಕ್ರಾಂತಸ್ವಾಂತೆಯರಾಗಿರ್ದುದನವರವರ ಪರಿಚಾರಕಿಯರಿಂ ಕೇಳ್ದು ನಾಮೆ ಮುನ್ನಂ ಕನ್ನೆಯರನೊಯ್ದು ಕುಡುವಮೆಂಬಧ್ಯವಸಾಯದಿಂದಮಿರ್ದವನಿತರ್ಕೆ ನಮ್ಮ ಪುಣ್ಯ ಪ್ರೇರಣೆಯಿಂ ನೀಮೆ ಬೇಡೆ ಬಂದಿರೆಂದಾನಂದಮನೊಳಕೊಂಡು ಮಂಡಳಾಧಿಪತಿಗಳ್ ಬಱಿವಱಿಗೆ ತಂತಮ್ಮ ಸರ್ವಸ್ವಮಂ ಸಮಕಟ್ಟಿ

ಉ॥ ಕೊಟ್ಟು ಕೃತಾರ್ಥರಪ್ಪೆವೆನುತುಂ ಘನಮಂಗಳತೂರ್ಯನಿಸ್ವನಂ
ಮುಟ್ಟೆ ದಿಗಂತಮಂ ನಿಜಕುಮಾರಿಯರಂ ಮದನಂಗೆ ಪಟ್ಟಮಂ
ಕಟ್ಟುವ ರೂಪಿನಿಂ ಸೊಬಗಿನಿಂ ಸೊಗಸಿಪ್ಪವರಂ ಸಮಂತು ಮುಂ
ದಿಟ್ಟು ಪುರಕ್ಕೆ ವಂದರೊಲವಿಂದವನೀಶ್ವರರಶ್ವಸೇನನಾ ೩೬

ಕಂ॥ ಬರೆ ಪೋಗಿ ನೃಪಾಳಕರಂ
ಕೊರಲಪ್ಪಿ ಪುರಕ್ಕೆ ತಂದು ವಿವಿಧೋಚಿತದಿಂ
ಪರಿತೋಷಮನೆಯ್ದಿಸಿದಂ
ಪುರುಷಾರ್ಥನಿಧಾನನಶ್ವಸೇನನೃಪಾಳಂ ೩೭

ವ॥ ಅಂತಾ ಮಹೀಕಾಂತರಂ ದಾನಸನ್ಮಾನಾದಿಗಳಂ ಬೀಱಿಯುಂ ವಿವಿಧ ವಿನೋದಂಗಳಂ ತೋಱಿಯುಂ ಸಂತಸಂಬಡಿಸಿ ಪರಿಣಯನಪರಿಕರಮಂ ಪರಮೋತ್ಸವದಿಂ ಗೃಹಮಹತ್ತರಂಗಳವಡಿಸುವಂತು ನಿಯಮಮನಿತ್ತು

ಚಂ॥ ನವಯುವನಾದನೀ ಸಮಯದೊಳ್ ಜಿನನಂ ವಶವರ್ತಿಯಾಗಿ ಮಾ
ಡುವೆನುಱಿದಂದು ತಾಳ್ದಿ ತಪಮಂ ನಿಜಯೋಗದಿನೆನ್ನನಾವಗಂ
ತವಿಸುಗುಮೆಂದು ಮನ್ಮಥನೃಪಂ ನಿಜಮೋಹನಮಂತ್ರದೇವತಾ
ನಿವಹಮನಟ್ಟಿದಂದದೊಳೆ ಕಣ್ಗೆಸೆದರ್ ನರಪಾಳಪುತ್ರಿಯರ್ ೩೮

ವ॥ ಅಂತು ವಿರಾಜಿಸುವ ರಾಜತನೂಜೆಯರಂ ಸೌಭಾಗ್ಯಸಂಪನ್ನೆಯರಂ ಚೆನ್ನೆಯರಂ ನೋಡಿ ನಿಜತನಯನ ಮನಮನಿವರವಯವದಿನೆಱಗಿಸಲ್ ನೆಱಿವರೆಂದಶ್ವಸೇನಮಹೀನಾಥನುಂ ಬ್ರಹ್ಮದತ್ತಾಮಹಾದೇವಿಯುಂ ರೋಮಾಂಚಕಂಚುಕಿತಗಾತ್ರರಾಗಿ ರಾಜಪುತ್ರಿಯರ ವೃತ್ತಾಂತಮನಱಿಪಲ್ ನೆಱಿವ ಚತುರವಚನಸಂಚಯಕಂಚುಕಿಯಂ ಕಳಿಪುವುದುಮಾ ಸೌವಿದಲ್ಲಂ ವಿಜಿತಾಂಗಜಾಕಾರ ಸುಕುಮಾರ ಕುಮಾರನಿರ್ದತಿ ಪ್ರಮೋದ ಸಂಪಾದಿಯಪ್ಪ ವಿನೋದಶಾಲೆಗೆ ಬಾಲೆಯರಂ ಮುಂದಿಟ್ಟೊಡಗೊಂಡು ಬಂದು ವಿನಯದಿಂದವರೆಱಗುವುದನಱಿಪುವಂದದಿಂ ತಾನೆಱಗಿ ಕುಮಾರಂಗೆ ಬಱಿಕ್ಕಿಂತೆಂದು ಬಿನ್ನವಿಸಿದನೀ ಕಂಕೆಲ್ಲೀಪಲ್ಲವೋಪಮಪದಪಲ್ಲವೆ ಪಲ್ಲವಮಹೀವಲ್ಲಭ ತನುಪ್ರಭವೆ ಈ ಸ್ಮರಶರಶರಧಿ ಸಮಾನ ಜಾನುಪ್ರದೇಶೆ ಕೋಸಲದೇಶಾಧೀಶತನೂಸಂಭವೆ ಈ ರಂಭಾಸ್ತಂಭ ವಿಸ್ತಾರೋರುಸ್ತಂಭೆ ಕಾಶ್ಮೀರಕುಂಭಿನೀಪತಿಸುತೆ ಈ ಕಾಂಚನಕಾಂಚೀಸಮಂಚಿತಘನಜಘನೆ ಪಾಂಚಾಳರಾಜತನೂಜೆ ಈ ಗಂಭೀರಶೋಭಾ ನಾಭಿಮಂಡಳೆ ಪಾಂಡ್ಯಧಾತ್ರೀಪಾಳಪುತ್ರಿ, ಈ ಲಾವಣ್ಯರಸರುಚಿರಕುಚಕಳಶೆ ಕಳಿಂಗನೃಪಾಂಗಜೆ ಮೃಣಾಳನಾಳ ಲೀಲಾಲಂಕೃತ ಜಯ ಈ ಶಿರೀಷದಾಮಸುಕುಮಾರ

ಶೋಭಾವಹಬಾಹುಶಾಖೆ ಶಾಕಂಭರೀಶಾತ್ಮಜೆ ಈ ನಿಕಾಮಕೋಮಳಕಂಬುಕಂಧರೆ ಯಿಂದ್ರನರೇಂದ್ರನಂದನೆ ಈ ಪ್ರವಾಳಲೀಲಾಧರೆ ಚೋಳಧರಾರಮಣಸಮುತ್ಪನ್ನೆ ಈ ಕೈರವದಳಧವಳಲೋಚನೆ ಕೇರಳಮಹೀತಳಸಂರಕ್ಷಕ ಸಂಜಾತೆ ಈ ಮೃಣಾಳನಾಳ ಲೀಲಾಳಂಕೃತಕರ್ಣಪಾಳಿಕೆ ನೇಪಾಳಭೂಪಾಳಕುಮಾರಿ ಈಯಷ್ಟಮೀವಿಶಿಷ್ಟೇಂದು ಲಲಿತಲಲಾಟೆ ಲಾಟದೇಶಪ್ರಭುಪ್ರಭೂತೆ ಈ ಮಧುಕರಮಾಳಾ ನೀಳಕುಂತಳೆ ಕುಂತಳ ಮಹೀಕಾಂತಕನ್ಯಕೆ ಈ ಮರಾಳಲೀಲಾಲಸಯಾನೆ ವರಾಳನರಪಾಳ ಶರೀರೋದ್ಭವೆ ಈ ಮಾಳತೀಮಾಳಾಕೋಮಳೆ ಮಾಳವಮಹೀನಾಥಪ್ರಸೂತೆಯೆಂದು ಕನ್ನೆಯರಂ ಬೇಱೆವೇಱೆ ತೋಱಿ ಬಿನ್ನವಿಸುತುಮಿರ್ಪುದುಮಾ ಪ್ರಸ್ತಾವದೊಳ್

ಕಂ॥ ಬಾಲೆಯರಪಾಂಗರೋಚಿ
ರ್ಮಾಲಾಮಾಳತಿಯನಿಕ್ಕಿ ಬೞಿಯಂ ಕೊರಲೊಳ್
ಮಾಲೆಯನಿಕ್ಕುವ ಮನದಿಂ
ಮೇಳಿಸೆ ಮನಮೊಲ್ದುದಿಲ್ಲ ಜಿತಮನ್ಮಥನಾ ೩೯

ಚಂ॥ ಕುಸುಮಶರಕ್ಕೆ ಚಂದ್ರನನನೂನಕಳಾಪರಿಪೂರ್ಣಂ ನಿರೀ
ಕ್ಷಿಸಿ ಗುಱಿಯಪ್ಪವೋಲಬಲೆಯರ್ಕಳವಂದಿರನೇನೊ ಚಂದ್ರನೀ
ಕ್ಷಿಸಿ ಗುಱಿಯಕ್ಕುಮೇ ಜಿನನಮೂರ್ತಿಯುಮಂತೆ ಲತಾಂಗಿಯರ್ಕಳಂ
ಮಿಸುಗಿ ಮರುಳ್ಚಿತಲ್ಲದವರ್ಗೇನೆಱಗಿತ್ತೆ ವಿಳಾಸಭಾಸುರಂ ೪೦

ಕಂ॥ ನೆರಪಿ ರುಚಿರಾರ್ಥತತಿಯಂ
ನಿರವಿಸೆ ಬಾಣಸಿಗನ ರುಚಿ ಪುಟ್ಟಿದವಂಗಾ
ದರಮಾಗದಂತು ಕಂಚುಕಿ
ನಿರವಿಸೆ ರುಚಿ ಪುಟ್ಟಿತಿಲ್ಲ ವಿಭುಗಬಲೆಯರೊಳ್ ೪೧

ವ॥ ಆಗಳ್ ತಮ್ಮುದ್ಯೋಗಿಸಿದುದ್ಯೋಗಂ ಸಫಳಮಾಗದಿರದೆಂದು ಮನೋನುರಾಗದಿಂ ಕಂಚುಕಿಯ ಬೞಿಯನೆ ಬಂದು ವಿವಾಹಸಂಬಂಧಮನನುಬಂಧಿಸಲೆಂದಶ್ವಸೇನ ನೃಪೋತ್ತಮನುಂ ಬ್ರಹ್ಮದತ್ತಾಮಹಾದೇವಿಯುಂ ದೇವದೇವೋತ್ತಮಗಿಂತೆಂದು ಬಿನ್ನಪಂಗೆಯ್ದರ್

ಕಂ॥ ನಯನಚಕೋರಂ ಲಲಿತಾಂ
ಗಿಯರ ಸರಸಹೃದಯಕುವಳಯಂ ಸಕಳ ಕಳೋ
ದಯನಿಧಿ ನಿಜಪ್ರಸಾದ
ಪ್ರಿಯಂಗಳವನಿತ್ತಲರ್ಚುವುದು ಕುಳತಿಳಕಾ ೪೨

ವ॥ ಅಂತುಮಲ್ಲದೆ

ಮ॥ ಜನನಾಥರ್ ನಿನಗೀವೆವೆಂಬ ಭರದಿಂದಂ ತಂದರೀ ಕನ್ನೆಯರ್
ನಿನಗಿಷ್ಟಾಂಗನೆಯರ್ಕಳಪ್ಪೆವುಱಿದಂದೇಮಾತೊ ತಾಮುಂ ತಪೋ
ವನಮಂ ಪೊರ್ದುವೆವೆಂದು ಪೂಣ್ದಿರದಜೆಂ ಕಾರುಣ್ಯವಾರಾಶಿ ನೆ
ಟ್ಟನೊಡಂಬಟ್ಟು ವಿವಾಹಮಂ ಪಡೆವುದೆಮ್ಮೆಲ್ಲರ್ಗಮುತ್ಸಾಹಮಂ ೪೩

ವ॥ ಎಂದವರಭಿಪ್ರಾಯಮನಱಿಪುವಂತುಕ್ತಿಪ್ರಿಯಂಗೆ ಅರ್ಥಿ ದೋಷಂ ನ ಪಶ್ಯತಿಯೆಂಬ ಮಾತಂ ಮಾತಾಪಿತೃಗಳ್ ನನ್ನಿಮಾಡುತ್ತುಮತ್ಯಾಗ್ರಹಮಂ ಮಾಡುತ್ತುಮಿರೆ ಕುಮಾರಂ ತನ್ನಂತರಂಗದೊಳಿಂತೆಂದಂ

ಕಂ॥ ಮೃಗಲೋಚನೆಯರ್ಕಳಿವರ್
ಮೃಗದಂತೆವೊಲೆಳಸಿ ಬಳಸುತಿರ್ದಪರಾನುಂ
ಮೃಗದಂತೆ ಗೋರಿಗೊಳಗಾ
ಗೆ ಗಡತನುವ್ಯಾಧಬಾಣಬಾಧೆಯದಕ್ಕುಂ ೪೪

ಮ॥ ನೆಗಟ್ದೀ ರಾಜತನೂಜೆಯರ್ಕಳಿವರ್ಗಂ ನಾಂ ತಾತನೆಂದುಕ್ತಿಗಂ
ಬಗೆಗಟ್ಟೈಹಿಕಸೇವೆಯೊಳ್ ತೊಡರ್ದೊಡೀ ಕೆಯ್ನೀರೆ ಸಂಸಾರವ
ಲ್ಲಿಗೆ ಪೊಯ್ನೀರೆನಿಸಿರ್ಕುಮೀ ಮದುವೆಗಾನೇಗೊಂಡೊಡೇಮಾತೊ ನೆ
ಟ್ಟಗೆ ದುಷ್ಕರ್ಮಫಳಪ್ರಸೇವನೆಗಮಾನೇಗೊಂಡೆನೇನಾಗೆನೇ ೪೫

ಕಂ॥ ಜನಕನತಿಮುಗ್ಧವಚನಂ
ಜನನಾಬ್ಧಿಯೊಳಟ್ದುಗುಂ ದೃಷದ್ದ್ರೋಣಿವೊಲೆಂ
ತನುಚಿತಮನೊಡಂಬಟ್ಟಪೆ
ನೆನುತ್ತುಮವಕರ್ಣಿಸಲ್ಕೆ ಬಗೆದಘದೂರಂ ೪೬

ವ॥ ಅಂತು ಬಗೆದು ನಿಜಪಿತೃಯುಗದ ಮನದಾಗ್ರಹಮಂ ಮಾಣಿಸಲೆಂದಿಂತೆಂದಂ

ಕಂ॥ ಆಯತಿಗಹಿತಕರಾನ್ಯ
ಸ್ತ್ರೀಯರ ಮದುವೆಯೊಳದೇನೋ ನಿಶ್ಚಳಿತತಪಃ
ಶ್ರೀಯೆ ಸುಖಮೂರ್ತಿ ಮುಕ್ತಿ
ಶ್ರೀಯ ವಿವಾಹಮೆ ವಿದಗ್ಧರಿಂ ಕರಣೀಯಂ ೪೭

ಏನಿದು ಕರಣಮೆ ಮುಕ್ತಿ
ಸ್ಥಾನಮನೆಯ್ದುವರ್ಗೆ ವೃತ್ತಮೋ ದರ್ಶನಮೋ
ಜ್ಞಾನಮೊ ಮದುವೆಯಿದರ್ಕೆ
ಜ್ಞಾನಿಗಳವೊಲೇಕೆ ಮಾಟ್ಪಿರತ್ಯಾಗ್ರಹಮಂ ೪೮

ವ॥ ಎಂದು ತನ್ನ ನಿಸರ್ಗವೈರಾಗ್ಯಮಂ ಪ್ರಕಟಿಸಿಯವರ ದುರಾಗ್ರಹವೃತ್ತಿಯಂ ವಿಘಟಿಸುವುದುಮಾ ಮಹೀವಲ್ಲಭರ ತನೂಭವೆಯರೆಲ್ಲರುಂ ತನ್ನಾದುದನಪ್ಪೆಮೆಂದು ಪರಿಚ್ಛೇದ ಮನಪ್ಪುಕೆಯ್ದಿರ್ದರ್ ಜಿನಕುಮಾರನುಂ ಕುಮಾರಕಾಲಂ ಮೂವತ್ತುಬರಿಸಂ ಪೋಗೆ ವಿಷಯವಿರಾಗತಾಸಂಪನ್ನನಾಗಿರ್ಪುದುಂ ಮತ್ತೊಂದು ದೇವಸಂ

ಕಂ॥ ಜಾತಿತುರಂಗಮುಮಂ ಸಾ
ಕೇತದ ಜಯಸೇನಭೂಮಿಪತಿ ಪಾಗುಡಮಂ
ಪ್ರೀತಿಯೊಳೆ ಕಳಿಪೆ ತಂದಭಿ
ಜಾತಮಹತ್ತರನನುಚಿತ ವಾಗ್ವಿಸ್ತರನಂ ೪೯

ವ॥ ಸಮುಚಿತ ಸಮಯದೊಳ್ ಕಾಣಿಸಿಕೊಂಡನನಾಕ್ಷೋಣೀಪಾಳಕ್ಷೇಮಕುಶಲ ವಾರ್ತಾಪ್ರಶ್ನಾನಂತರಂ ನಿಜನಾಥಪುರಂ ಪುರುದೇವಜನನಪಾವನಗುಣಧಾಮಮುಂ ನಾಮತ್ರಯಾಭಿರಾಮಮುಮಾಗಿರ್ಪುದದನೆಮಗೆ ಕೇಳಲಟ್ಟೆಯಾದಪುದು ಪೇಟ್ನೆ ಮಹಾ ಪ್ರಸಾದಮೆಂದು ಹಸ್ತಕಮಳಮಂ ಮುಗಿದು ಮಹತ್ತರಂ ಸವಿಸ್ತರಮಿಂತೆಂದು ಬಿನ್ನವಿಸಿದಂ

ಮ॥ ಗುರುದೇವಾಂಘ್ರಿವಿನೀತಸಜ್ಜನರ ಚೆಲ್ವಿಂದಂ ವಿನೀತಾಖ್ಯೆಯಂ
ಪರರಿಂದೆಂತುಮಯೋಧ್ಯಮಾದ ಗುಣದಿಂ ಸಂದಿರ್ದಯೋಧ್ಯಾಖ್ಯೆಯಂ
ಸ್ಫುರಿತೋದ್ಯನ್ಮಣಿಕೇತನಪ್ರಕರದಿಂ ಸಾಕೇತಮೆಂಬಾಖ್ಯೆಯಂ
ನಿರುತಂ ತಾಳ್ದಿ ವಿರಾಜಿಕುಂ ಪುರುಜಿನಶ್ರೀಜನ್ಮಗೇಹಂ ಪುರಂ ೫೦

ಕಂ॥ ದೇವ ನಿಜೋದಯದಿಂದಂ
ಪಾವನಮೀ ವಾರಣಾಸಿಯಾದವೊಲಾದಂ
ಪಾವನಮಾದತ್ತದು ಪುರು
ದೇವೋದಯದಿಂದಯೋಧ್ಯೆ ಜಗದಾರಾಧ್ಯಾ ೫೧

ದೇವಪತಿ ಪೇೞೆ ಧನದಂ
ರೈವೃಷ್ಟಿಯನೆಸಗೆ ಮಾಡೆ ಪದ್ಮಾದಿ ಸರೋ
ದೇವಿಯರುಂ ರುಚಕಾಚಳ
ದೇವಿಯರುಂ ತಾಯ್ಗೆ ಗರ್ಭಸಂಶೋಧನಮಂ ೫೨

ಮ॥ ಜಯವರ್ಮಕ್ಷ್ಮೀಶಮಹಾಬಳಾಖ್ಯಲಲಿತಾಂಗಂ ವಜ್ರಜಂಘಾರ್ಯತುಂ
ಗ ಯಶ್ರೀಧರರಾಜಕಜಂ ಸುವಿಧಿಭೂಪಾಳಾಚ್ಯುತಂ ವಜ್ರನಾ
ಭಿಯಶೇಷಕ್ಷಿತಿಪಾಳ[illegible]ಕಂ ಸರ್ವಾರ್ಥಸಿದ್ಧೀಶನಾ
ಗಿ ಯುಗಾದ್ಯಂ ಮರುದೇವಿಗಂ ಪುರುಜಿನಂ ಶ್ರೀನಾಭಿಗಂ ಪುಟ್ಟಿದಂ ೫೩

ಕಂ॥ ಪ್ರಿಯರತ್ನಮಯಂ ಜಗದಾ
ಶಯಮಾದುದು ಮುನ್ನಮುದಯಿಸುತ್ತಿರೆ ರತ್ನ
ತ್ರಯಮಯಮಾದುದು ಬೞಿಕಿಂ
ತಯನಯಸಂಪತ್ತಿ ವಿಸ್ಮಯಂ ವೃಷಪತಿಯಾ ೫೪

ವ॥ ಅಂತುದಯಿಸುವುದುಂ ದೇವರಾಜಂ ದೇವರ್ಗಂತು ನಿಸರ್ಗಭಕ್ತಿಯಿಂ ಮಂದರ ಮಹೀಧರಮಸ್ತಕದೊಳ್ ಸಮಸ್ತ ದೇವನಿಕಾಯಂಬೆರಸತಿ ಪ್ರಶಸ್ತ ಕ್ಷೀರನೀರಾಕರ ನೀರುಗಳಿಂ ಜನ್ಮಾಭಿಷೇಕಮನೊಡರ್ಚಿದನಂತೆ ವೃಷಭಂಗಂ ಜನ್ಮಾಭಿಷೇಕಮನನಂತರಂ ರಾಜ್ಯಾಭಿಷೇಕಮುಮಂ ಮಾಡೆ ಪಲವು ದೆವಸಂ ಪರೋಪಕಾರಶೀಲಂ ವರ್ಣಾಶ್ರಮಗುರುವಸಿ ಮಸಿ ಕೃಷಿ ವಾಣಿಜ್ಯಾದಿ ಷಟ್ಕರ್ಮಮುಮಂ ನಿರ್ಮಳಧರ್ಮಮುಮನೈಹಿಕಾಮುಷ್ಮಿಕಸುಖ ಸಂಪಾದಕಂಗಳಂ ಸಕಳಾತ್ರಮಕ್ಕಂ ನಿವೇದಿಸಿ ಪರಮಾಹ್ಲಾದಮನಾಪಾದಿಸುತ್ತುಂ ಸಮಸ್ತ ಧಾತ್ರಿಯಂ ಪ್ರತಿಪಾಲಿಸುತ್ತುಮಿರ್ದು ಸುಕವಿಜನಮನೋರಂಜನ ಲೀಲಾಂಜನಾ ನೃತ್ಯನಿರೀಕ್ಷಣ ವ್ಯತಿಕರ ಪ್ರಭೂತಭೋಗವೈರಾಗ್ಯಪರಂ ಪರಮಪುರುಷಾರ್ಥದತ್ತಚಿತ್ತನುತ್ತಮ ದೀಕ್ಷೆಯಂ ಕೈಕೊಂಡಖಂಡಿತ ಯೋಗನಿಯೋಗದಿಂ ಘಾತಿಗಳಂ ವಿಘಾತಿಸಿ ಸಮುದ್ಭೂತಕೇವಳಾವಲೋಕನಂ ತ್ರಿಳೋಕಪತಿ ಸಮರ್ಚಿತ ಸಮವಸರಣಸಂಪತ್ತಿಯಂ ಪಡೆದು ಕಡೆಯೊಳ್ ಕರ್ಮನಿರ್ಮೂಳನಂ ಮಾಡಿ

ಮೋಕ್ಷಲಕ್ಷ್ಮೀಕುಚಕುಂಭಸಮುಲ್ಲಸಿತಪಲ್ಲವನಾದನೆಂದೆಲ್ಲ ಮಂ ಪರಿಮಿತವಚನಂಗಳಿಂ ತಿಳಿಪಿದ ಮಹತ್ತರನನುಚಿತಪ್ರತಿಪತ್ತಿಗಳಿಂ ಸಂತಸಂಬಡಿಸಿ ಕಳಿಪಿ ಪುರುಪರಮೇಶ್ವರಚರಮಾಚರಣಸ್ಮರಣಂ ಭವಸ್ಮರಣಕಾರಣಮುಂ ಸಂಸಾರ ಪಾರಾವಾರ ಸಮುತ್ತರಣ ವಿಶಿಷ್ಟವೈರಾಗ್ಯಕಾರಣಮುಮಾಗೆ

ಕಂ॥ ಪಂಚೇಂದ್ರಿಯವಶಗತನಘ
ಸಂಚಯಮಮಂ ಮಾಡಿ ಮಿಗೆ ಚತುರ್ಗತಿಗಳೊಳಂ
ಪಂಚಪರಾವರ್ತನಮಂ
ಪಂಚಮಗತಿವಡೆಯದಿಂತು ತಿರಿಗುಂ ಜೀವಂ ೫೫

ಮ॥ ಪುದಿದಜ್ಞಾನತೆಯಿಂ ಗೃಹೀತಮಗೃಹೀತಂ ಮಿಶ್ರಮೆಂಬೀ ವಿಭೇ
ದದ ನಾನಾಪರಮಾಣುವಂ ಪಲವುಸೂಳ್ ನೋಕರ್ಮಕರ್ಮಸ್ವರೂ
ಪದವಂ ಸ್ವೀಕರಿಸುತ್ತನೇಕವಿಧದುಃಖಾನೀಕಮಂ ದ್ರವ್ಯನಾ
ಮದ ಸಂಸಾರಸಮುದ್ರದೊಳ್ ಮುಳುಗುತುಂ ತಾಂ ಸೇವಿಕುಂ ಜೀವಕಂ ೫೬

ನರಕಾದ್ಯುದ್ಭವರಾಯುವಂ ಸಮಯಮಂದೇಕೋತ್ತರಂ ವೃದ್ಧಿಯಾ
ಗಿರೆ ಮುನ್ನುಂಡವರಾಯುವಂ ಕ್ರಮದೆ ಮೂವತ್ತೊಂದುವಾರಾಶಿಯಂ
ನಿರುತಂ ಸೇವಿಸುಗುಂ ಜಿನೇಂದ್ರಪದಸೇವಾಭಾವಜೀವಂ ನಿರಂ
ತರ ದುಃಖಾನಳ ದಗ್ಧಮೂರ್ತಿ ಭವಸಂಸಾರಾಟವೀ ಮಧ್ಯದೊಳ್ ೫೭

ಮ॥ ಭುವನಾಕಾಶದ ಮಧ್ಯದೇಶಮದೆ ಮಧ್ಯಂ ತನ್ನ ಜನ್ಮಕ್ಕೆ ನಿ
ಕ್ಕುವಮಾಗಾಂತವರಾವಗಾಹನೆಯನಾದಂ ತತ್ಪ್ರದೇಶಂಗಳ
ಪ್ಪುವಱೊಳ್ ತಪ್ಪದೆ ಪುಟ್ಟುಗುಂ ವಿವಿಧವಾರಂ ಕ್ಷೇತ್ರಸಂಸಾರಭೈ
ರವ ದುಃಖಾರ್ಣವದಲ್ಲಿ ಕೂಡೆ ಪರಿಗುಂ ಮೂಢಾತ್ಮನಪ್ರೌಢಿಯಿಂ ೫೮

ಕಂ॥ ಎರಡುಂ ಕಲ್ಪದ ಸಮಯೋ
ತ್ಕರದೊಳನುಕ್ರಮದೆ ಸಂಕ್ರಮಿಸುಗುಂ ಮಡಿಗುಂ
ಪರವಶತೆಯಿನಾತ್ಮಂ ಬಹು
ತರವಾರಮಪಾರ ಕಾಲ ಸಂಸಾರಸ್ಥಂ ೫೯

ಯೋಗವಿಶೇಷಸ್ಥಿತ್ಯನು
ಭಾಗ್ಯಾನೋಬಂಧನ ಸ್ಥಿತಿಶ್ರೇಣಿಗಳೊಳ್
ರಾಗಾದಿ ಭಾವ ಪರಿವ
ರ್ತಾಗರ್ತದೊಳಾತ್ಮನಜ್ಞನಕ್ಕಟ ತಿರಿಗುಂ ೬೦

ನರಕಗತಿ ಸಮಮೆ ತಿರ್ಯ
ಗ್ನರಸುರಗತಿಗಳುಮವಂತೆದಲ್ಲಾ ನರಸುರರ್
ಪರವಶತಾಯೆಂಬಿದು ಬಿ
ತ್ತರಿಸೆ ಪರಾಧೀನಸುಖಮವಱೊಳುಳ್ಳುದಱಿಂ ೬೧

ಮ॥ ಸುಕೃತಾರಂಭವೆ ಪಾಪದಿಂ ಸುಕೃತ ಪಾಪಾರಂಭದಿಂ ದೇವ ನಾ
ರಕ ತಿರ್ಯಗ್ನರಜನ್ಮಜಾಳದೊಳ್ ಸಿಲ್ಕಿರ್ದಿನ್ನೆಗಂ ಮುಕ್ತಿಸಾ
ಧಕತತ್ತ್ವಾಮೃತಸೇವೆಯಂ ಪಡೆಯದಿರ್ದೆಂ ಮುಕ್ತಿ ಕೆಯ್ಸಾರ್ವೊಡೈ
ಹಿಕದೀಯಲ್ಪಸುಖಕ್ಕೆ ನಿಂದೊಡಳಿಪಿಂದೆನ್ನಿಂದಮಿಂ ಗಾಂಪರಾರ್ ೬೨

ಅತಿದುಃಖಾತ್ಮಕಮಪ್ಪ ನಾರಕಭವಂ ತಾನಿರ್ಕೆ ತಿರ್ಯಗ್ಗತಿ
ಸ್ಥಿತಿ ವಿಜ್ಞಾನವಿಹೀನಮೀ ಮನುಜಜನ್ಮಂ ಸೌಖ್ಯಲೇಶಂ ಸಮೂ
ರ್ಜಿತದುಃಖಂ ಸುರಜನ್ಮಮಂತ್ಯದೊಳದೆಂತುಂ ದುಃಖಯುಕ್ತಂ ಚತು
ರ್ಗತಿಯೊಳ್ ಭಾವಿಸೊಡಿಲ್ಲ ಸೌಖ್ಯಮದಱಿಂ ಸಂಸಾರಮೇಂ ಸಾರಮೇ ೬೩

ಕಂ॥ ಇಲ್ಲಧಿಕಸುಖಫಳಂ ಭವ
ವಲ್ಲಿಯೊಳಱಸುವೊಡದೆಲ್ಲಿಯುಂ ನಿರ್ವೃತಿ ದೋ
ರ್ವಲ್ಲಿಯೊಳುಂಟದನೆಯ್ದಿಸು
ವಲ್ಲಿಗೆ ಜಿನದೀಕ್ಷೆ ಮೂಱಿ ಪೇೞ್ ತೊದಳುಂಟೇ ೬೪

ವ॥ ಎಂದಿಂತು ಚತುರ್ಗತಿಗಳುಮಂ ದುರ್ಗತಿಗಳೆಂದು ಭೋಗಂಗಳುಮಂ ದುಃಖ ಭೋಗಂಗಳೆಂದು ಭಾವಿಸುತ್ತುಮಿರೆ

ಕಂ॥ ಲೋಕಾಂತಿಕದೇವರ್ ಪರ
ಲೋಕಪ್ರಿಯರಲ್ಲದಂದು ಮುಂ ಬಾರದರೊ
ಲ್ದೇಕೆ ಜಿನಂ ಪರಹಿತಮಂ
ಸ್ವೀಕರಿಪುದುಮದನೆ ನುಡಿದು ದೃಢಮೆನಿಸಿದಪರ್ ೬೫

ವಿಷಯವಿರತರ್ಗೆ ನಿರುಪಮ
ವಿಷಯಂ ವಿಷದಂತಸೇವ್ಯಮಪ್ಪುದಱಿಂದಂ
ಋಷಿಗಳೆನೆ ದಿವದೊಳಿರ್ಪರ್
ತೃಷೆಯಿಲ್ಲದರುದಕಮೊಳ್ಳಿತೆನೆ ಕುಡಿದಪರೇ ೬೬

ವ॥ ಅಂತು ಮಹಿಮವೆತ್ತ ಸಾರಸ್ವತಾದಿಗಳಪ್ಪೆಣ್ಬರು ಲೋಕಾಂತಿಕದೇವರ್ ಪರಮರಮಣಿ ಕಳಿಪಿದ ವಿವಾಹವಿಧಿ ವಿಹಿತಮಹತ್ತರರಂತೆ ಬಂದು ಪರಮನ ಚರಣಸರಸಿರುಹಕ್ಕೆ ನಿಜಮೌಳಿಕೀಳಿತ ಪದ್ಮರಾಗದಿಂ ಪರಮನನಾಗಳೋಲಗಿಸಿ ಸುರತರುಸಂಜನಿತ ಕುಸುಮಮಂಜರಿಯಿಂ ಜಿನರಾಜನಂ ಪೂಜಿಸಿ

ಕಂ॥ ಲೋಲತೆ ವಿಷಯದೊಳಕ್ಕುಮ
ನಾಳೋಚಿತಮತಿಗೆ ನಿನ್ನೊಳಾಗದದರ್ಕೀ
ಕಾಲಮನೆ ಪಾರುತಿರ್ದೆವು
ಕಾಲಂ ಪರಿಣಯನವಿಧಿಗೆ ಸುತಪಃಶ್ರೀಯಂ ೬೭

ಎಮಗಿದು ನಿಯೋಗಮೆಂದು ಪ
ರಮ ಬಿನ್ನವಿಸಿದೆಮಗಲ್ಲದೊಡೆ ನಿಜವೈರಾ

ಗ್ಯಮನಾರೊ ಪವಣಿಪರ್ ಮು
ಕ್ತಿಮನೋಹರತಾರಹಾರಮೆನೆ ಸೊಗಯಿಪುದಂ ೬೮

ವ॥ ಎಂದಿಂತು ಲೋಕಾಂತಿಕದೇವರ್ ದೈವಜ್ಞರಂತೆ ತಪೋಲಕ್ಷ್ಮಿಯ ವಿವಾಹೋತ್ಸಾಹಕ್ಕುತ್ಸುಕನಾಗಿರ್ದ ಶೀಲವತ್ಸಳನ ಮನಮಂ ಪ್ರೋತ್ಸಾಹಿಸಿ ಪೊಡವಟ್ಟು ಪೋದರಿತ್ತಲ್

ಚಂ॥ ಸುರಪತಿ ದೇವದೇವನ ವಿರಾಗತೆಯಂ ತಿಳಿದಾತ್ಮಬೋಧದಿಂ
ಪರಮ ತಪೋವಧೂಟಿಯ ವಿವಾಹದೊಳಾಗಲೆವೇೞ್ಕುಮೆಂದು ಬಿ
ತ್ತರಿಸಿರೆ ಮಜ್ಜನಂಬುಗಿಪವೋಲ್ ಪರಿನಿಷ್ಕ್ರಮಣಾಭಿಷೇಕಮಂ
ಸುರಪಟಹಂಗಳುಣ್ಮೆ ಸುರಸಿಂಧುಜಲಂಗಳಿನಂದು ಮಾಡಿದಂ ೬೯

ವ॥ ಅಂತು ಚತುರ್ನಿಕಾಯನಾಕಿನಿಕಾಯಂಬೆರಸು ಪರಿನಿಷ್ಕ್ರಮಾಭಿಷವಣಾರ್ಚನೆಯಂ ನಿಮಿರ್ಚಿ ಸಮನಂತರಂ

ಕಂ॥ ತ್ರಿದಶಪತಿ ಜಿನಪತಿಯನಿಂ
ತಿದೆ ಶೃಂಗಾರಕ್ಕೆ ಸೀಮೆಯೆನೆ ಸುರತರುಗು
ಣ್ಮಿದ ಕುಸುಮವಸನದಿಂದಂ
ಸದಮಳಮಣಿಭೂಷಣಂಗಳಿಂ ಭೂಷಿಸಿದಂ ೭೦

ವ॥ ಅಂತಲಂಕರಿಸುವುದುಂ ಕಂತುಮಹೀಕಾಂತವಿಳಾಸವಿಜಯಮನಭಿನಯಿಸು ವಂದದಿಂದಭಿನವ ಸೌಂದರ್ಯದೊಳೊಂದಿ

ಕಂ॥ ಇಂಧನಮಂ ಬಿಸುಡುವವೋ
ಲಿಂಧನಮಂ ಬಿಸುಟು ಸುಜನಸಖನಖಿಳೈನೋ
ಬಂಧನಮಂ ಬಿಡಿಪಂತಿರೆ
ಬಂಧುಗಳಂ ಬಿಡಿಸಿ ತಪಕೆ ತಱಿಸಂದಿರ್ದಂ ೭೧

ವ॥ ಅಂತು ಕಷಾಯಸಹಾಯ ಸಮಗ್ರ ಪರಿಗ್ರಹಮಂ ತೊಱೆದು ಗುಣಶ್ರೇಣಿಯ ನೇಱುವಂತೆ

ಚಂ॥ ಬಿಡೆ ಮಣಿಶೋಭಿಯಂ ಸಿವಿಗೆಯಂ ಪರಮೇಶ್ವರನೇಱೆ ಚೆಲ್ವು ನೇ
ರ್ಪಡೆ ನೃಪರೊಯ್ದುರೇೞಡಿವರಂ ಖಚರಾಧಿಪರೊಯ್ದರತ್ತಲೇ
ೞಡಿವರಮತ್ತಲೊಯ್ದರಮರೇಂದ್ರರನಿಂದಿತಭಕ್ತಿಯುಕ್ತರೆಂ
ದೊಡೆ ಜಿನಪಂಗೆ ಪೂಣ್ದು ಬೆಸಕೆಯ್ಯದರಾರ್ ವಸುಧಾವಿಭಾಗದೊಳ್ ೭೨

ಕಂ॥ ಆ ತ್ರಿಭುವನಪತಿ ವರರ
ತ್ನತ್ರಯಮಂ ತಳೆದ ಮಾೞ್ಕೆಯಿಂ ತಳೆದಖಿಳ
ಕ್ಷತ್ರಿಯರುಂ ಖೇಚರರುಂ
ಸುತ್ರಾಮರುಮತಿಪವಿತ್ರರಾದರುದಾತ್ತರ್ ೭೩

ವ॥ ಅಂತು ಸಕಳ ಮಂಗಳಾನಕಂಗಳನಂಗವಿಜಯ ಪಟುಪಟಹ ರವದಂತೆ ದಿಕ್ತಟಮಂ ತೀವೆ ದೇವೇಂದ್ರರೊಯ್ದು ದೇವಾಂಗವಸ್ತ್ರವಿಸ್ತೃತವಿತಾನವಿಳಸಿತನಭೋವಿಭಾಗದೊಳ್ ದೇವಾಂಗನಾಂಗುಳೀಸಂಚಯರಚಿತ ಪಂಚರತ್ನಚೂರ್ಣರಂಗವಲ್ಲೀಕಾಂತಪ್ರಾಂತ ಪ್ರದೇಶ ದೊಳಿಂದೀವರ ಗಂಧಬಂಧುರ ದೇವಸಿಂಧು ಸಲಿಲಸೇಚನ ಪಾವನ ದೇವಧಾಮೋದ್ಯಾನ ಮಧ್ಯಾಮಳಕ ವಿಶಾಳಶಿಳಾಪಟ್ಟದೊಳ್ ಮುಕ್ತಿಲಕ್ಷ್ಮೀಲಲಾಟಪಟ್ಟ ಮಳಯಜತಿಳಕನೆನಿಸಿದ ದೇವದೇವೋತ್ತಮನಂ ಚಿತ್ತವೃತ್ತಿಯನಱು ದು ತಂದಿಟ್ಟಿಪಿ ಬಟ್ಟಯಮುಪಶಮಿತ ದಿವಿಜ ದನುಜ ಮನುಜ ಬಹಳ ಕೋಳಾಹಳರ್ ಪ್ರತೀಹಾರಪ್ರತಿಪತ್ತಿಯೊಳ್ ಸುತ್ರಾಮರ್ ಪ್ರವರ್ತಿ ಸುತ್ತುಮಿರೆ

ಕಂ॥ ಜಿನಪಂ ವಸನಾಭರಣಂ
ತನುಭೂಷಣಮೇವುವೆಂದವಂ ತೊಲಗಿಸೆ ನೆ
ಟ್ಟನೆ ನಿಜಮೆನಿಸಿದ ಗುಣಮಣಿ
ವಿನೂತ ದಿಗ್ವಾಸದಿಂದಳಂಕೃತನಾದಂ ೭೪

ವ॥ ಅಂತು ಬಾಹ್ಯಾಭ್ಯಂತರಪರಿಗ್ರಹನಿವೃತ್ತಿಗೆಯ್ದುತ್ತರಾಭಿಮುಖನುಮಂತರ್ಮು ಖನುಂ ನಿಬಿಡನಿಬದ್ಧಪಲ್ಯಂಕಾಸನನುಂ ಪ್ರಕಟಿತಜಿನಶಾಸನನುಮಾಗಿರ್ದು

ಕಂ॥ ಸದ್ಧರ್ಮೋದ್ಧಾರಿ ನಮಃ
ಸಿದ್ಧೇಭ್ಯಯೆನುತ್ತೆ ಕೇಶಪಾಶಮನಘಸಂ
ಪದ್ಧಾತ್ರೀರುಹಮೂಳಮ
ನುದ್ಧರಿಸುವ ತೆಱದೆ ಪಱಿದನಘವನದಹನಂ ೭೫

ವಿಮುಳ್ಳೆನೋಬಳಮನಸಿಜ
ನೃಪನೂರ್ಜಿತರಾಜ್ಯಚಿಹ್ನಚಮರಜಮೆನೆ ಶೋ
ಭಿಪ ಕೇಶಪಾಶಮಂ ಮೋ
ಹಪಾಶಮಂ ಪಱಿವ ತೆಱದೆ ಪಱಿದಂ ಪರಮಂ ೭೬

ಪಱಿಯೆ ಕರಕಮಳಪರಿಮಳ
ಕೆಱಗಿದ ಮಱಿದುಂಬಿ ಬಿಡದೆ ಬಂದಪುವೆಂಬೀ
ತೆಱನನನುಕರಿಸಿ ಕರದೊಳ್
ಮಿಱುಗಿದುವಾ ನೀಳಕುಂತಳಂ ಜಿನಪತಿಯಾ ೭೭

ನಿರ್ವಾಣಕಾಮಿನೀಪ್ರಿಯ
ಸರ್ವಜ್ಞಶ್ರೀಯನೀವ ಜಿನದೀಕ್ಷೆಯನಂ
ದುರ್ವೀಶರ್ ಸಾಸಿರದ
ಯ್ಯೂರ್ವರ್ ತನ್ನೊಡನೆ ತಳೆಯೆ ತಳೆದನುದಾತ್ತಂ ೭೮

ಏನಂ ಪೇೞ್ವೆನೊ ಪರಮ ತ
ಪೋನಿಧಿಯ ವಿಶೋಧಿಯಂ ಮನಃಪರ್ಯಯ ಸ

ದ್ಧಾನಂ ಸಪ್ತರ್ಧಿಸುದೀ
ಕ್ಷಾನಂತರಮೊಗೆದು ನೆಗಟ್ಟುವನೆ ಜನವಿನುತಂ ೭೯

ವ॥ ಅಂತು ತಪೋಂಗನಾಪಾಣಿಗ್ರಹಣಮಂ ಪ್ರಶಸ್ಯಪೌಷ್ಯ ಬಹುಳೈಕಾದಶೀ ಪೂರ್ವಾಹ್ಣದೊಳ್ ಮಾಡಿ ವಿಶಿಷ್ಟಾಷ್ಟಾದಶಸಹಸ್ರಶೀಳಾಳಂಕೃತನುಂ ಚತುರಶೀತಿಲಕ್ಷ ಗುಣಮಣಿಲಕ್ಷಿತನುಮಾಗೆ ಪರಮನನಮರಪರಿವೃಢನನೇಕನಾಕಲೋಕಾರ್ಚನೆಗಳಿನಮರ ಸಮಿತಿವೆರಸರ್ಚಿಸಿ ತ್ರಿಕರಣಶುದ್ಧಿಯಿಂ ತ್ರಿಃಪ್ರದಕ್ಷಿಣಂಗೆಯ್ದು

ಕಂ॥ ದಿವಿಜಪತಿ ಜಿನನ ಕುಂತಳ
ನಿವಹಮನಾಂತೊಯ್ದು ರತ್ನಪಟಳಕದೆ ಸುಧಾ
ರ್ಣವದೊಳ್ ಬಿಡೆ ಮಿಸುಗಿದುವ
ರ್ಣವಲಕ್ಷ್ಮಿಯ ನೀಳರತ್ನದವತಂಸದವೋಲ್ ೮೦

ಜಿನನ ಪದರಜಮುಮಂ ತ್ರಿಭು
ವನಪತಿಗಳ್ ತಳೆವರುತ್ತಮಾಂಗದೊಳೆಂದಾ
ವನಧಿ ಶಿರೋರುಹಮಂ ಶಿರ
ದಿನಾಂತವೋಲ್ ತೇಂಕುತಿರ್ದುವಮೃತಾಂಬುಧಿಯೊಳ್ ೮೧

ವ॥ ಅಂತು ಸಹಸ್ರನೇತ್ರಂ ಜಿನಸಮುತ್ಪಾಟಿತಪವಿತ್ರಸಹಸ್ರಕುಂತಳಂಗಳಂ ಜಳನಿಧಿ ತರಂಗ ಸಂಗತಂ ಮಾಡಿ ನಾಕಲೋಕಕ್ಕೆ ಪೋಪುದುಮಿತ್ತ ತೀರ್ಥನಾಥಂ ದೀಕ್ಷೋಪವಾಸಮಂ ಮಾಡಿ ಮಱುದೆವಸಮಕ್ಷೂಣಶೋಭಾಸದ್ಮಪದ್ಮಖೇಟಪುರಕ್ಕಭಿಮುಖನಾಗಿ

ಶಾ॥ ಪಾದನ್ಯಾಸವಿಳಾಸಮುರ್ವರೆಯ ಮಿಥ್ಯಾಧ್ವಾಂತಮಂ ತೂಳ್ದೆಯಾ
ಹ್ಲಾದಂ ಭವ್ಯಚಕೋರದೊಳ್ ನೆಲಸೆ ಸನ್ಮಾರ್ಗಪ್ರಕಾಶತ್ವದಿಂ
ದಾದಂ ಚಂದ್ರಗತಿತ್ವಮೊಪ್ಪೆ ನೆಗಳ್ದೀರ್ಯಾಶುದ್ಧಿಹೃಚ್ಛುದ್ಧಿಗಂ
ಪ್ರಾದುರ್ಭಾವಮನೀಯೆ ಬಾವರಿಗೆವಂದಂ ಪಾರ್ಶ್ವಯೋಗೀಶ್ವರಂ ೮೨

ಮ॥ ನಿಧಿಚಿಂತಾಮಣಿ ಕಾಮಧೇನು ದಿವಿಜೇಂದ್ರೋರ್ವೀಜಮೊಂದಾಗಿ ಸ
ನ್ನಿಧಿಗೆಟ್ಟಿಂದುದಱಿಂದಮತ್ಯಧಿಕಮಾದತ್ತುತ್ಸವಂ ಶ್ರೀತಪೋ
ನಿಧಿ ತನ್ನಿರ್ದ ಗೃಹಕ್ಕೆ ವಂದೊಡೆ ಸುಶರ್ಮಂಗಂತೆ ದೃಗ್ಬೋಧವೃ
ತ್ತಧರಿತ್ರೀನುತರತ್ನಮಂ ಮುನಿಪನೀವಂತೇನವೊಲ್ದೀಗುಮೇ ೮೩

ವ॥ ಅಂತು ಸಂಯುವಮಾನುವರ್ತಿಪುಣ್ಯಮೂರ್ತಿಯೆಟ್ಟಿರುತ್ತಿರ್ಪುದಂ ಗುಣಮಣಿಮಂಡನನಪ್ಪಾ ಮಂಡಳೇಶ್ವರಂ ಕಂಡು

ಉ॥ ಸಂಜನಿತಾನುರಾಗನಿದಿರ್ವಂಗಿ ಲಲಾಟತಟಪ್ರಶಸ್ತಹ
ಸ್ತಾಂಜಳಿಯರ್ಘ್ಯಪಾದ್ಯಮನೊಡರ್ಚಿ ವಿವೇಕವಿಳಾಸಿನೀಮನೋ
ರಂಜನನಂ ಮನೋಜಮದಭಂಜನನಂ ಪ್ರವಿನಷ್ಟದುಷ್ಟಕ
ರ್ಮಾಂಜನನಂ ನೃಪಂ ನಿಱಿಸಿದಂ ನಿರವದ್ಯಚರಿತ್ರಪಾತ್ರನಂ ೮೪

ಕಂ॥ ಅಧನಂ ನಿಧಿಯಂ ವಿದ್ಯಾ
ನಿಧಿ ನಿಶಿತಪ್ರಜ್ಞನೆನಿಪ ಶಿಷ್ಯಾಗ್ರಣಿಯಂ
ಸಧನಂ ಸುತನಂ ಪಡೆದಂ
ತಧಿಕೋತ್ಸವಮಂ ಸುಶರ್ಮನಾಂತಂ ಶಾಂತಂ ೮೫

ವ॥ ಅಂತು ಹರ್ಷೋತ್ಕರ್ಷಕ್ಕೆ ಪಕ್ಕಾಗಿ ಪರಮಮುನೀಶ್ವರನಂ ನಿಱಿಸಿ

ಕಂ॥ ನವಕೇವಳಲಬ್ಧಿಪ್ರದ
ನವವಿಧಪುಣ್ಯಂ ಪ್ರಸಿದ್ಧಸಪ್ತರ್ಧಿಕರ
ಪ್ರವಿಮಳಸಪ್ತಗುಣಂ ತನ
ಗವಿಚಳಮೆನೆ ಯತಿಗೆ ಕುಡೆ ಸುಧಾನ್ನಮನೊಲವಿಂ ೮೬

ಏವೇೞ್ವಿನಾಗಳೊಗೆದುವು
ಪೂವಿನ ಮೞೆ ಸುರಭಿಗಂಧಬಂಧುರಪವನಂ
ರೈವೃಷ್ಟಿ ದೇವದುಂದುಭಿ
ದೇವರಹೋ ಧ್ವಾನಮೆಂಬ ಪಂಚಾಶ್ಚರ್ಯಂ ೮೭

ಉ॥ ಮುನ್ನಱುದಿಂಗಳಂಬಿಕೆಯ ಗರ್ಭದೊಳಂ ನವಮಾಸಮಿರ್ಪಿನಂ
ರನ್ನದ ಪೊನ್ನ ಕಳ್ಪತರುಪುಷ್ಪದ ಪೆರ್ಮೞೆ ಕೊಳ್ವುವೆಂದೊಡ
ತ್ತುನ್ನತತೀರ್ಥನಾಥನಖಿಳರ್ಧಿಯುತಂ ನಿಲೆ ರಾಜಗೇಹದೊಳ್
ಸನ್ನುತಮಯ್ದುಮಚ್ಚರಿಯುಮಾದುದಿದಚ್ಚರಿಯೇ ಸುಶರ್ಮನಾ ೮೮

ವ॥ ಅಂತು ಸುಶರ್ಮನಂ ಸುಶರ್ಮಕರಪುಣ್ಯಕರ್ಮಕ್ಕಾರ್ಮನಂ ಮಾಡಿ ಪರಸಿ ಪೋಗಿ ನಿರ್ಮಳ ದಶಧರ್ಮಧರಂ ದುಷ್ಕರ್ಮರಿಪುಗಳಂ ನಿರ್ಮೂಳನಂ ಮಾಡಲ್ವೇಡಿ ಪರಮ ಸಂಯಮೋದ್ಯುಕ್ತಚಿತ್ತನಾಗಿ

ಕಂ॥ ಮನಮಂ ಪ್ರಾಯಶ್ಚಿತ್ತಾ
ದ್ಯನುಪಮ ತಪದಲ್ಲಿಯನಶನಾದಿಕತಪದೊಳ್
ತನುವಂ ನೆಟ್ಟನೆ ಯೋಜಿಸಿ
ಮುನಿಪತಿ ಪನ್ನೆರಡು ತೆಱದ ತಪದಿಂ ನೆಱೆದಂ ೮೯

ಮ॥ ನಿಯತಂ ಯೋಗನಿಯೋಗದಿಂದೆ ಯತಿಪಂ ಕಾಲತ್ರಯಜ್ಞಾನಿಯಾ
ಗಿಯುಮತ್ಯದ್ಭುತಮಾಗೆ ಮಾಗಿ ಮೞೆಗಾಲಂ ಗ್ರೀಷ್ಮಮೆಂಬೀ ಪ್ರಸಿ
ದ್ಧಿಯ ಕಾಲತ್ರಯಮಂ ಸಮಂತಱಿಯದಂತಾ ಬೆಳ್ಳವಾಸಕ್ಕೆ ಸಾ
ವಿಯ ಮೂಲಕ್ಕರಿದಪ್ಪ ಕಲ್ಸೆಲೆಗೆ ಮೆಯ್ಯಂ ಸಾರ್ಚಿದಂ ನಿಶ್ಚಳಂ ೯೦

ಕಂ॥ ಪರಮೋಪಶಾಂತರಸದೊಳ್
ನಿರಂತರಂ ತೇಂಕುತಿರ್ಪ ಮುನಿಪತಿಯ ಮುಖಾಂ
ಬುರುಹಮಲರ್ದಿರ್ಕೆ ತನುಲತೆ
ಕೊರಗದೆ ಖರಕರನ ಕರಹತಿಯಿನತಿಚಿತ್ರಂ ೯೧

ಯತಿಪಂ ಚತುರ್ವಿಧಾಹಾ
ರತತಿಯನನಶನದೊಳಾತ್ಮನಿಷ್ಠಂ ತೊಱೆಯು
ತ್ತತಿಶಯಮೆ ನೆಱೆಯೆ ತೊಱೆದಂ
ಚತುರ್ವಿಧಾಸ್ರವದ ಕಾರ್ಮಣಾಹಾರಮುಮಂ ೯೨

ಇಂತಿದು ಚಿತ್ರಂ ಪೂರ್ಣತೆ
ಯಂ ತಳೆದತ್ತಂತರಂಗಬಹಿರಂಗದೊಳಂ
ಶಾಂತರಸಾಸ್ವಾದನಮಿರೆ
ಯುಂ ತನ್ಮುನಿಯಲ್ಲಿ ರಸಪರಿತ್ಯಾಗತಪಂ ೯೩

ಯಮಿ ನಡೆವ ನುಡಿವ ಸಂ
ಯಮಾರ್ಥಮುಣ್ಬುಚಿತ ವಸ್ತುವಂ ಕೊಳ್ವಿಡುವಂ
ದು ಮಳಮನುಗುವೆಡೆಯೊಳ್ ಜೀ
ವಮನೋವಿಯೆ ಪಂಚಸಮಿತಿಯಂ ಸಂಚಿಸಿದಂ ೯೪

ವ॥ ಅಂತು ಪರಮಸಂಯಮಧಾರಿಯುಮೇಕವಿಹಾರಿಯುಮಾಗಿ ಗಿರಿದರೀಸರಿತ್ಪುಳಿನ ಕಾಂತಾರಾದಿ ನಿರ್ಜಂತುಕಪ್ರದೇಶಂಗಳೊಳ್ ನಿಂದಾತ್ಮಾಭ್ಯಾಸಮಂ ಮಾಡುತ್ತುಂ ವಿಹಾರಿಸುತ್ತುಂ ಬಂದು

ಕಂ॥ ಪ್ರಕಟಾಹಿಚ್ಛತ್ರಪುರೋ
ಪಕಂಠ ವಿಪುಳಾದ್ರಿ ಸಾನುಮಂಡನಶೋಭಾ
ದಿಕದೇವದಾರುವನರಂ
ಜಕ ಶಶಿಮಣಿ ಘನಶಿಳಾತಳದೊಳುನ್ನತದೊಳ್ ೯೫

ಎರಡುಂ ಮಡಂಗಳೆಡೆ ನಾ
ಲ್ವೆರಲೊರ್ಗೇಣೆರಡುಮುಂಗುಟಂಗಳ ತೆಱಪಾ
ಗಿರೆ ಋಜ್ವಾಗತದೊಳ್ ಬೆರ
ಸಿರೆ ತನ್ನಯ ನಿಲವು ಯೋಗಿಸಂಸ್ತವಯೋಗ್ಯಂ ೯೬

ಮ॥ ಕರಣಂ ಕೂಡೆ ಕುನುಂಗಿಕೊಂಡಿರೆ ಮನಂ ಭಾಳಾಗ್ರದೊಳ್ ನಿಟ್ಟೆವೆ
ತ್ತಿರೆ ನೇತ್ರದ್ವಯಮುಳ್ಳಲರ್ದಿರೆ ಭುಜಾಕಾಂಡಂಗಳಾ ಜಾನುಗ
ಳ್ವರೆಗಂ ನೀಳ್ದಿರೆ ದಂತಮೊಂದಿಯನಿತುಂ ತಮ್ಮೊಳ್ ಸಮಾನಂಗಳಾ
ಗಿರೆ ಯೋಗಂ ಪರಭಾಗಮಂ ಪಡೆದುದಾ ನಿಷ್ಪಂದಯೋಗೀಂದ್ರನೊಳ್ ೯೭

ವ॥ ಅಂತಂತರಂಗಬಹಿರಂಗ ಸಾಮಗ್ರೀ ಸಮಗ್ರನಾಗಿ

ಕಂ॥ ದೃಪ್ತಮನಸಿಜನನಜನಿಪ
ದೀಪ್ತಮಹಾಘೋರತಪ್ತತಪಮೆಸೆಯೆ ಶಮ

ವ್ಯಾಪ್ತಂ ಪ್ರತಿಮಾಯೋಗದೆ
ಸಪ್ತದಿನಂ ಬರೆಗಮಿರೆ ಮುನೀಶ್ವರತಿಳಕಂ ೯೮

ಮುನಿಯೋರ್ವನ ಶಾಂತರಸಂ
ವನಮೃಗಸಂಕುಳದ ಮನದೊಳಂ ನೆಲಸಿದುದೊ
ರ್ವನ ಪುಣ್ಯದ ಫಲಮಂ ಪಲ
ರನುಭವಿಸುವರೆಂಬ ಮಾತು ಸಂಭವಿಸುವಿನಂ ೯೯

ಪುಲಿಗಳ್ ಪುಲ್ಲೆಯ ಮಱಿಯಂ
ಮೊಲೆಯೂಡಿದುವಲ್ಲಿ ಸೊರ್ಕಿದಾನೆಯ ಕಟದೊಳ್
ನೆಲೆಸಿದ ತೀನಂ ತುಱಿಸಿಯೆ
ತೊಲಗಿಸಿದುವು ನಖಮುಖಂಗಳಿಂ ಸಿಂಹಂಗಳ್ ೧೦೦

ಸೋಗೆಯ ಸೋಗೆಯ ನೆೞಲೊಳ್
ನಾಗಂಗಳ್ ನಲಿದುವವಱ ಪೆಡೆಗಳ ನೆೞಲೊಳ್
ರಾಗದಿನಿರ್ದುವು ದರ್ದುರ
ಮಾ ಗುಣನಿಧಿಯಿರ್ದಗಣ್ಯಪುಣ್ಯಾಶ್ರಮದೊಳ್ ೧೦೧

ವ॥ ಅಂತು ಶಾಂತರಸಮೆಂಬ ಪಾದರಸಮಂ ನಿಜಪ್ರಯೋಗಪ್ರಾವೀಣ್ಯದಿಂ ಧ್ಯಾನಾನಳಮುಖಕ್ಕೆ ನಿಲ್ವಂತು ಶುದ್ಧಾತ್ಮಬದ್ಧಂ ಮಾಡಿಯಪ್ರತಿಮಂ ಪ್ರತಿಮಾಯೋಗದೊಳಿರ್ಪುದುಂ ಪೂರ್ವಸೂಚಿತಪಂಚಾಗ್ನಿತಪಸ್ತಪ್ತತಾಪಸಂ ಜೀವಿತಾವಸಾನದೊಳ್ ಕ್ರೋಧಮನೆತ್ತಿಕೊಂಡ ಸುರಕುಲದೊಳ್ ಭೂತಾನಂದನನೆಂಬನಾಗಿ ಪುಟ್ಟಿ ಭೌಮ ವಿಹಾರಾರ್ಥಮಾಗಿ

ಚಂ॥ ಕಮಠಚರಂ ಬರುತ್ತುಮಸುರಂ ವಿಪುಳಾದ್ರಿಯೊಳಾತ್ಮಯೋಗದು
ದ್ಯಮದೊಳಗಿರ್ದ ಪಾರ್ಶ್ವಮುನಿನಾಥನ ಮೇಲೆ ವಿಮಾನಮಾಗಳಾ
ದಮೆ ನಭದಲ್ಲಿ ಕೀಲಿಸಿದವೋಲ್ ನಿಲೆ ಸತ್ಪಥದಿಂದಗಲ್ದೊಡ
ಕ್ಕುಮೆ ದಲವಶ್ಯದಿಂ ಕುಗತಿಯೆಂಬವೊಲುರ್ವಿಗೆ ಪಾಯ್ದನುದ್ಧತಂ ೧೦೨

ಉ॥ ಕ್ರೂರಮೃಗಂಗಳಾ ಮುನಿಪನಿರ್ದ ವನಾಂತರದೊಳ್ ನಿರಂತರಂ
ವೈರಮನೊಕ್ಕುಶಾಂತರಸಮಂ ತಳೆದಿರ್ದುವು ದೈತ್ಯನಂತಪ
ಸ್ಮಾರಮನೂನವಾರಿಯನೆ ಕಂಡು ಕೆರಳ್ದವೊಲನ್ಯಜನ್ಮಸಂ
ಸ್ಕಾರದೆ ಕೋಪಮಂ ತಳೆದನೀಕ್ಷಿಸಿ ಶಾಂತರಸಾಂಬುರಾಶಿಯಂ ೧೦೩

ಚಂ॥ ಅಸುರಕುಲಕ್ಕೆ ಮುಖ್ಯನೆನಿಪುನ್ನತಿಯಂ ವಿಭವಪ್ರಭಾವದಿಂ
ಪಸರಿಪನಲ್ಲಿ ದುಷ್ಟಮತಿ ರೋಷವಿಶೇಷಮನಾಂತನೆಂಬಿನಂ
ಮಸುಗುವಜಾತಶತ್ರುವಿನ ಸನ್ನಿಧಿಯೊಳ್ ಭವಬದ್ಧವೈರಮಂ
ಬಿಸುಟವು ಕೋೞ್ಮಗಂ ತಳೆದನುಗ್ರತೆಯಂ ಕಿಡಿ ಸೂಸೆ ಕಣ್ಗಳಿಂ ೧೦೪

ಕಂ॥ ಅವರಿವರೆನ್ನದೆ ಕೇಡಡ
ಸುವರ್ಗಕ್ಕುಂ ಪ್ರಕೃತಿವಿಕೃತಿಯೆಂಬಿದನುಸಿರ್ವಂ
ತೆವೊಲಾಗಿನ್ನವನೊಳ್ ಪ್ರಕೃ
ತಿವಿಕೃತಿಯಾದತ್ತು ಕೋಪಲೋಪಿತಗುಣನೊಳ್ ೧೦೫

ಇಡುವಡಿಗಳವನಿತಳದೊಳ್
ನಿಡುದೋಳ್ ದೆಸೆಯೊಳ್ ಶಿರಂ ಮರುನ್ಮಾರ್ಗದೊಳಂ
ದೆಡೆಗಿಡೆದಿರೆ ಕೋಪಾನಳ
ನೊಡನೊಡಲುಂ ಬಿಡದೆ ಬಳೆದುದಾ ದಾನವನಾ ೧೦೬

ಮ॥ ಕಿಡಿಯಂ ಸೂಸುವ ಕಣ್ಗಳಿಂದೆ ಸಿಡಿಲಂ ದಂಷ್ಟ್ರಾಂಶುವಿಂ ಮಿಂಚನೆ
ಲ್ಲೆಡೆಯಿಂದಂ ಬಿಡುತರ್ಪ ಘರ್ಮಜಳದಿಂದಂ ವೃಷ್ಟಿಯಂ ಕಾಳಿಮ
ಕ್ಕೆಡೆಯಾದಂಗದ ಕಾಂತಿಸಂತತಿಗಳಿಂ ನೀಳಾಭ್ರಜಾಳಂಗಳಂ
ಪಡೆಯುತ್ತುಂ ಪ್ರಳಯಾಂಬುದಾಗಮಮನಾಗಳ್ ದೈತ್ಯನೇಂ ಪೋಲ್ತನೊ ೧೦೭

ಕಂ॥ ದನುಜಂ ಯಮಂಗಿವಂ ಸಂ
ದನುಜಂ ನಿರ್ದಯೆಯಿನೆಂಬಿನಂ ಪೀಡೆಯನಾ
ಮುನಿಸನುಟಿದಂಗೆ ಮಾಣದೆ
ಮುನಿಸಮಿತಿನುತಂಗೆ ಮಾಡಲೊಡರಿಸಿ ಕಡುಪಿಂ ೧೦೮

ಮ॥ ಹರಿಯುಂ ವ್ಯಾಘ್ರಮುಮಪ್ಪುರುಗ್ರತರಕೋಪಾಟೋಪದಿಂ ಸತ್ತರು
ತ್ತರಜನ್ಮಂಗಳೊಳೆಂಬುದಚ್ಚರಿಯೆ ದೈತ್ಯಂ ಕ್ರೋಧದಿಂದಾಗಳಂ
ತಿರೆ ತದ್ರೂಪಮನಾಂತನೆಂದು ನುಡಿವನ್ನಂ ಕೊರ್ವೆ ವೈಕುರ್ವಣಂ
ಭರದಿಂ ಪಾಯ್ದೊಡಮಟ್ಟಿದಿರ್ದನಚಳಂ ಶ್ರೀಪಾರ್ಶ್ವಯೋಗೀಶ್ವರಂ ೧೦೯

ಕಂ॥ ಕಹಕಹರಾವಂ ರೋಧಃ
ಕುಹರಮನಾವರಿಸೆ ಸಿಂಹನಿಸ್ವನಮಾಶಾ
ನಿಹಿತಗಜಮದಮನುಡುಗಿಸೆ
ಬಹುವಿಧದಾಯುಧದಿನಟ್ಟಿಸುತ್ತಾರುತ್ತುಂ ೧೧೦

ಆ ದೊರೆಯುಪಸರ್ಗಮನು
ತ್ಪಾದಿಸಿಯುಂ ಮುನಿಯ ಮನದ ಧೈರ್ಯಮನೆನಸುಂ
ಭೇದಿಸಲಾಱದೆ ನೆರಪಿದ
ನಾ ದನುಜಂ ಭೂತಮಂ ಪ್ರಭೂತಮನಾಗಳ್ ೧೧೧

ಉ॥ ಜೋಡಿಪುದೊಂದು ಬೊಬ್ಬಿರಿವುದೊಂದುರಿಗಣ್ಣನೆ ತೋರ್ಪುದೊಂದು ಕೂ
ರ್ದಾಡೆಯ ಕೂರ್ಪನೊಪ್ಪಿಸುವುದೊಂದಸಿಯಂ ತಿರಿಪುತ್ತೆ ಬರ್ಪುದೊಂ
ದೇಡಿಪುದೊಂದು ಪರ್ವಸಿಜೋಳಾನನಮಂ ಬಿಡೆ ತೋರ್ಪುದೊಂದು ಕೈ
ವಾಡಿನ ಕೀಡೆಗಾಡುವುದದೊಂದು ಮರುಳ್ ನೆರೆದತ್ತು ದೈತ್ಯನಾ ೧೧೨

ಚಂ॥ ಮಸಗುವ ಮಾರಿ ಜೊಜ್ಜರಿವ ಚಂತಱೆಯಂ ಸಿಡಿಲೇೞ್ಗೆಯೇೞ್ವ ರಾ
ಕ್ಷಸಿ ಕುಡುದಾಡೆಯಂ ಮಸೆವ ಡಾಕಿನಿ ಕೂರಸಿಯಿಂದೆ ಕೊಂಕಿ ಝಂ
ಕಿಸುವ ಕುಮಾರಿ ಮಾಂಕರಿಪ ಪೂತಿನಿ ಹೂಂಕೃತಿಗೆಯ್ವ ಭೈರವಂ
ನೊಸಲುರಿಗಣ್ಣನಾಳ್ವ ಚವುಡೇಶ್ವರಿ ಕೂಕುಱೆದಾರ್ವ ಕಾಟೆಯಂ ೧೧೩

ಕಂ॥ ಬೆಟ್ಟಂ ತಿರಿಕಲ್ಲಾಡುವ
ಝುಟ್ಟಿಂಗಂ ಶೈಳಯುಗಳಮಂ ಬಿಡೆ ತಾಳಂ
ಗುಟ್ಟುವ ಬೇತಾಳಂ ಬೊ
ಬ್ಬಿಟ್ಟಚಳಂಗಳನೆ ಚಳಿಯಿಸುವ ಭೂತಕುಳಂ ೧೧೪

ಒದವಿದುದರಾಗ್ನಿಯಂ ಬೇ
ಗದೆ ಬೆದಱೆಸುವಲ್ಲಿಗೆಯ್ದದೀ ಮುಖಮೆಂಬಂ
ದದಿನುದರದೊಳಂ ಮುಖಮಂ
ಮದಯುತಭೂತಂಗಳಲ್ಲಿ ತಳೆದುವು ಪಲವುಂ ೧೧೫

ಚಂಡತರಕೋಪಶಿಖಿಯಿಂ
ಖಂಡಂ ಕರಗಿದುದು ನೆತ್ತರಱುತತ್ತೆನೆ ಮಾ
ರ್ಕೊಂಡೇಂ ತ್ವಗಸ್ಥಿಮಾತ್ರಂ
ಚಂಡಿಕೆಯೊಡಲೇೞೆಸಿತ್ತು ಬೇತಾಳನುಮಂ ೧೧೬

ಕುಡುದಾಡೆಯ ಕಡುಗೂರ್ಪಂ
ಪಿಡಿದ ಶುಭಂಕರಿಯ ಕೂರ್ಪುಮುರಿಗಣ್ಣುರಿಯುಂ
ಕಿಡಿಯಂ ಸೂಸುವ ಕಣ್ಣುಂ
ಬಿಡದರ್ವಿಸೆ ಸುತ್ತಿ ಮುತ್ತಿ ಭೂತವ್ರಾತಂ ೧೧೭

ಮ॥ ಪುಲಿ ಪಾಯ್ವಂತು ಸಿಡಿಲ್ ಕಡಂಗಿ ಪೊಡೆವಂತುಗ್ರಾಗ್ನಿ ಕೊಳ್ವಂತದೆ
ತ್ತಲುಮಂಭೋನಿಧಿ ಮೇರೆದಪ್ಪಿ ಕವಿವಂತುದ್ದಂಡಶುಂಡಾಳಮಂ
ಡಳಿಕೊಳ್ವಂತಹಿ ನುಂಗುವಂತೆ ಶರಭಂ ಸೀೞ್ವಂತೆ ಸಿಂಹಂ ನಖಾ
ವಳಿಯಿಂ ಖಂಡಿಸುವಂತೆ ಕೂರ್ಪಿಮದಗುರ್ವಿಂ ದೈತ್ಯವ್ಯೆಕುರ್ವಣಂ ೧೧೮

ಚಂ॥ ಮಿಸುಗುವ ದಾಡೆಯಿಂ ಪೆಣನನಿರ್ವಗಿಯಾಗಿರೆ ಸೀೞ್ದು ಭಾಳದು
ರ್ವಿಸುವುರಿಗಣ್ಣ ಕಿಚ್ಚಿನೊಳೆ ಸುಟ್ಟಡಗಾಗಿರ ಲೊಕ್ಕಚಕ್ಕಣಂ
ಪಸಿಯಕಪಾಳದಾಂತು ರುಧಿರಾಸವಮಂ ಕುಡಿದಾರುತಿರ್ಪ ರಾ
ಕ್ಷಸಿಯರ ರೂಕ್ಷರಾಕ್ಷಸರ ತೀಕ್ಷ್ಣತ್ರೆಯೀಕ್ಷಣಕಾದುದದ್ಭುತಂ ೧೧೯

ಕಂ॥ ಲೋಕಹಿತಾಚರಣ ಕಳಾ
ನೀಕಪ್ರಯುತಂಗೆ ಯತಿಗೆ ದಾನವನಿರದು
ದ್ರೇಕಿಸೆ ಮಾಡುವ ಪೀಡೆ ಸು
ಧಾಕರನಂ ರಾಹು ಪೀಡಿಪುದನನುಕರಿಕುಂ ೧೨೦

ನೆರೆದುವು ಮರುಳ್ಗಳಾತಂ
ಮರುಳ್ಗೆ ಪತಿ ದೈತ್ಯನೆಂದೊಡಖಿಳರ್ಧಿಗುಣಾ
ಭರಣನಬಾಧ್ಯನಸಾಧ್ಯಂ
ನಿರುತಂ ತಮಗೆಂದು ಬಗೆಯದುದು ವಿಸ್ಮಯಮೇ ೧೨೧

ವ॥ ಅಂತಶಕ್ಯಾನುಷ್ಠಾನಮಂ ದಾನವಂ ನಿಜಸೇನೆವೆರಸೆತ್ತಿಕೊಂಡು ಮಹೋಪಸರ್ಗಮಂ ನೀಡುಂ ಮಾಡುತ್ತುಮಿರೆ

ಕಂ॥ ವಿಗತಭಯನಿಂದ್ರಜಾಲಿಗ
ನೆಗೆತ್ತು ದಾನವನ ಮಾಟ್ಪ ವಿಕೃತಿಯನೇನುಂ
ಬಗೆಯದೆ ನಿಜಯೋಗದೊಳ
ತ್ಯಗಣಿತ ಗುಣನಿಳಯನಚಳಿತಂ ನಿಲೆ ಮುನಿಪಂ ೧೨೨

ಒಳಗೆ ನಿಜಧ್ಯಾನಾನಳ
ನಳುರೆ ಪೊಱಗೆ ದಾನವೋಪಸರ್ಗ ಮಹೋಗ್ರಾ
ನಳನಳುರೆ ಕರ್ಮಬಂಧಂ
ಗಳನಿತುಮವು ದಗ್ಧರಜ್ಜುವೆನಿಸಿದುವಾಗಳ್ ೧೨೩

ಮ॥ ದನುಜಂ ಮಾಟ್ಪುಪಸರ್ಗದುಗ್ರತೆಯೊಳಕ್ಷೋಭಂ ನಿಜಧ್ಯಾನದೊಳ್
ಮುನಿಪಂ ಕೂಡಿರೆ ತತ್ತಪಂ ತ್ರಿಭುವನಕ್ಷೋಭಪ್ರದಂ ನಾಗರಾ
ಜನ ಸಿಂಹಾಸನಕಂಪಮಂ ಪಡೆಯೆ ತತ್ಸಂಬಂಧಮಂ ಬೋಧದಿಂ
ದೆನಸುಂ ನಿಟ್ಟಿಸಿ ತನ್ನ ಕಾಂತೆಗುರಗೇಂದ್ರಂ ಪೇೞ್ದನೀಯಂದಮಂ ೧೨೪

ಕಂ॥ ಪರಹಿತಚರಿತಂಗೆ ಜಗ
ದ್ಗುರುಗೆ ಭವಾನಳವಿದಗ್ಧರಾಗಿಯುಮವಿದ
ಗ್ಧರೆನಿಪ್ಪ ನಮ್ಮನೀಸುಖ
ಪರಿಕರದೊಳ್ ನಿಲಿಸಿದಂಗೆ ಮುಳಿದೆಯ್ದೆ ಖಳಂ ೧೨೫

ಚಂ॥ ದನುಜನೊಡರ್ಚುವಂ ಗಡುಪಸರ್ಗಮನಾತನ ಕೋಪವಹ್ನಿಯಾ
ತನನೆ ಕಱುತ್ತು ಸುಟ್ಟುದೆನೆ ದೃಷ್ಟಿ ವಿಷಪ್ರಭವಾಗ್ನಿಯಿಂದೆ ನೆ
ಟ್ಟನೆ ಸುಡುವೆಂ ಮನೋರಮಣಿಯಲ್ಲದೊಡೆಯ್ದೆ ಕೃತಘ್ನರಾಗೆಮೇ
ಯೆನೆ ಲಲಿತಾಂಗಿಯುಂ ಮನದೆಗೊಂಡಿರದೀಗಳೆ ಪೋಗಿ ಬೇಗದಿಂ ೧೨೬

ವ॥ ಮತ್ತ ಮತ್ಯುತ್ಕಟೈಃ ಪುಣ್ಯಪಾಪೈರಿಹೈವ ಫಲಮಶ್ನುತೇಯೆಂಬ ನೀತಿಯನಾ ಗುರುದ್ರೋಹಸಂಜಾತಪಾತಕಪ್ರಧಾನದಾನವನೊಳ್ ದಿಟಂ ಮಾಡಿಯವನಂ ಭಂಗಿಸಿ ಪರಮಗುರುವಿನುಪಸರ್ಗಮಂ ಪಿಂಗಿಸಿ ಬರ್ಪುದೆ ನಮಗೆ ಕರಣೀಯಮುಂ ಶ್ರೇಯ ಮುಮೆಂದು ತನ್ನಭಿಪ್ರಾಯಮಂ ನಿಜಪ್ರೇಯಸಿಯುಮೊಡಂಬಡೆ ನಿಶ್ಚಿತಕಾರ್ಯನುಂ ಸಮೂರ್ಜಿತಶೌರ್ಯನುಮಾಗಿ

ಚಂ॥ ಧರೆ ಜಿರಿದತ್ತು ದೈತ್ಯಹೃದಯಂ ಜಿರಿವಂತು ಚತುಃಸಮುದ್ರಮುಂ
ತಿರದೆ ಕಲಂಕಿದತ್ತು ದನುಜೇಂದ್ರನ ಸೇನೆ ಕಲಂಕುವಂತು ಕೇಳ್
ಗಿರಿ ತಳರ್ದತ್ತು ದಾನವನ ಪೆಂಪನಿತುಂ ತಳರ್ವಂತಹೀಶ್ವರಂ
ಬರೆ ರವಿದೀಪ್ತಿಯುಂ ನಿಜಫಣಾಮಣಿದೀಪ್ತಿಯುದಿರ್ಪುದಿರ್ಪಿನಂ ೧೨೭

ವ॥ ಅಂತು ಬಂದು ಮಂದರಾಚಳದಂತಚಳಿತಧೈರ್ಯನುಮಾಗಿ ಯೋಗಧ್ಯಾನಚಿತ್ತನಾಗಿರ್ದ ಪಾರ್ಶ್ವತೀರ್ಥೇಶ್ವರನಂ ನೋಡಿ

ಮ.ಸ್ರ॥ ಧೃತಶುದ್ಧಧ್ಯಾನದಿಂದಂ ಮತಿ ತೊಲಗಿದುದೇ ದೃಷ್ಟಿ ನಾಸಾಗ್ರದಿಂ ಸೂ
ಸಿತೆ ವಕ್ತ್ರಾಂಭೋರುಹಂ ಸ್ಮೇರದೆ ಜಿಡಜಿದುದೇ ಕಾಯಮಾತ್ಮೀಯನಿರ್ದ
ಗ್ರತೆಯಿಂ ಬರ್ಜಿತ್ತೆ ಜಾನುಪ್ರಗತಭುಜಯುಗಂ ನಿಃಷ್ಪ್ರಕಂಪತ್ವದಿಂ ಪಿಂ
ಗಿತೆ ಪೇಟಿಂದಾ ಮುನೀಂದ್ರಸ್ಥಿರತೆಗೆ ತಲೆಯಂ ತೂಗಿದಂ ನಾಗರಾಜಂ ೧೨೮

ವ॥ ಅಂತು ನಾಗರಾಜಂ ಮುನಿರಾಜನ ಧೈರ್ಯಮುಮವಾರ್ಯಮುಮಂ ಸಹಸ್ರಮುಖದಿಂ ತಾನುಂ ತನ್ನ ಮನೋನಯನವಲ್ಲಭೆಯುಂ ಮೆಚ್ಚಿ ಬಿಚ್ಚಳಿಸಿ ಬಟಿಯಂ ಮೂಱುಂ ಲೋಕದೊಡೆಯನಂ ಮೂಱುಸೂಱ್ ಬಲವಂದು ನಿಜಕೋಟೀರಧಾರನಾನಾ ರತ್ನರೋಚಿಃಪೂರನೀರಂಗಳಿಂ ನೀರಜನ ಚಾರುಚರಣನೀರಜಂಗಳಂ ತೊಳೆದು ಮುನೀಂದ್ರನಂ ಬಂದಿಸಿ ತಮ್ಮೊಳಿಂತೆಂದರ್

ಕಂ॥ ದನುಜವಧೆಯಿಂದಮಘಬಂ
ಧನಮೆನಗಂ ಮುನಿಗಮಕ್ಕುಮೆಂದದನುಳಿದಾ
ದನುಜೇಂದ್ರನ ವಿದ್ಯಾಚ್ಛೇ
ದನಮಂ ಮಾಱ್ಪುದನೆ ಮನದೊಳವಳಂಜಿಸಿದಂ ೧೨೯

ಮ॥ ಘನವೈಕುರ್ವಣದಕ್ಷನಪ್ಪ ದನುಜಂಗಂ ಭೀತಿಯಪ್ಪಂತು ನೆ
ಟ್ಟನೆ ಲೋಕಾದ್ಭುತವಿಕ್ರಿಯಾಪರಿಣತಂ ನೀಚಂ ಭಯಕ್ಕಲ್ಲದಂ
ಜನೆನುತ್ತುಂ ಪಡೆದಂ ಸಹಸ್ರಫಣಸರ್ಪಾಕಾರಮಂ ನಾಗರಾ
ಜನದಂತಲ್ಲದೊಡಕ್ಷಿಸೌಖ್ಯಕರಸೌಮ್ಯಾಕಾರನೇನಲ್ಲನೇ ೧೩೦

ವ॥ ಅಂತಗುರ್ವುಮದ್ಭುತಮುಮಪ್ಪಂತು ವಿಗುರ್ವಿಸಿ

ಚಂ॥ ದನುಜಕೃತೋಪಸರ್ಗಮನಿತುಂ ಮುನಿರಾಜನೊಳಂತು ನಿಷ್ಫಳಂ
ಮುನಿಪತಿಗಾನುಮೆಯ್ದೆ ಉಪಕಾರಮುಮಂತೆ ದಲಾದೊಡಂ ಸಮಂ
ತನುಮಿಕುಮೀ ಕೃತಜ್ಞತೆ ಕೃತಾರ್ಥತೆಯುಂ ತನಗೀಯುಕೆಂದಿದಂ
ನೆನೆದೊಸೆದೆತ್ತಿದಂ ನಿಜಫಣಾಮಣಿಮಂಟಪಮಂ ಫಣೀಶ್ವರಂ ೧೩೧

ಕಂ॥ ವಿಪುಳಫಣಾಮಂಡಳಮಂ
ಡಪಮಂ ಫಣಿರಾಜನೆತ್ತೆ ಬೋಧಶ್ರೀಯ

ತ್ಯಪಗತಕಲ್ಮಷಪಾರ್ಶ್ವಾ
ಧಿಪತಿಯ ಸುವಿವಾಹಗೇಹಮೆನಿಸಿದುದಾಗಳ್ ೧೩೨

ಪಿಡಿದಳ್ ಪದ್ಮಾವತಿಯೊ
ಳ್ಪಿಡಿದ ಫಣಾಮಣಿಯ ಮೇಲೆ ಜಿನಪಂ ಭುವನ
ಕ್ಕೊಡೆಯಂ ದಲೆಂದು ವಜ್ರದ
ಕೊಡೆಯಂ ಪೋಲ್ವಂದದಿಂದೆ ಸೊಗಯಿಸುವಿನೆಗಂ ೧೩೩

ತನು ಕಾವಹಿಯ ಫಣಂ ತುಂ
ಬೆನೆ ವಜ್ರಚ್ಛತ್ರಮೆಸೆಯೆ ಜಿನಪನಹಿಚ್ಛ
ತ್ರನೆನಿಸಿ ನೆಗಟ್ದಿರೆ ತತ್ಪ
ತ್ತನದೊಳಹಿಚ್ಛತ್ರನಾಮಮಾಯ್ತನ್ವರ್ಥಂ ೧೩೪

ವ॥ ಅಂತು ಭೀಷಣಾಕೃತಿಯಂ ಫಣಿರಾಜಂ ಪಡೆದು ಪೆಡೆಮಣಿಯರುಣಕಿರಣದಿ ನುರಿಯನುಗುಟುತ್ತುಮಿರ್ಪ ದಿಟ್ಟಿಗಳಿಂದಟ್ಟಿ ನುಂಗುವಂತು ದೆಸೆದೆಸೆಗವ್ವಳಿಸುತ್ತುಮಿರೆ ಸುತ್ತಲುಂ ಸುತ್ತಿ ಮುತ್ತಿ ಸಮಸ್ತ ವಸ್ತುವೇದಿಯಂ ವ್ಯಾಘ್ರಾದಿ ಕ್ರೂರಮೃಗಾಕಾರದಿಂ ಬಾಧಿಸುತ್ತುಮಿರ್ದ

ಕಂ॥ ಭೂತಂಗಳ್ ಫಣಿಪತಿಪರಿ
ಭೂತಂಗಳ್ ಬೆದಱಿಪೋಗೆ ಪೋಗದೆ ಮತ್ತಂ
ಭೂತಾನಂದಂ ತಾನಂ
ದಾತತಕೋಪಂ ಮಹೋಪಸರ್ಗೋದ್ಯುಕ್ತಂ ೧೩೫

ಚಂ॥ ಒದವಿಸುವಶ್ಮವೃಷ್ಟಿ ನವಮೌಕ್ತಿಕವೃಷ್ಟಿ ಸಮಸ್ತ ಶಸ್ತ್ರಜಾ
ಳದ ಮಱಿ ಪುಷ್ಪವೃಷ್ಟಿ ವಿಷವೃಷ್ಟಿ ಸುಧಾರಸವೃಷ್ಟಿ ವಿಸ್ಫುಳಿಂ
ಗದ ಮಱಿ ರತ್ನವೃಷ್ಟಿ ಜಳವೃಷ್ಟಿ ಸುಚಂದನಾವಾರಿವೃಷ್ಟಿ ರ
ಕ್ತದ ಮಱಿ ಕುಂಕುಮಾಂಬುವಿನ ವೃಷ್ಟಿ ದಲಾಯ್ತು ತಪಃಪ್ರಭಾವದಿಂ ೧೩೬

ವ॥ ಅದಂ ಕಂಡು

ಮ॥ ಉರಿಯಂ ಕಾಱುವ ಕೆಂಡಮಂ ಕಱುವ ವಕ್ತ್ರಂ ನೇತ್ರಮದ್ರೀಂದ್ರಮಂ
ಭರದಿಂದೆತ್ತುವ ದೂರದಿಂ ಸುರಿವ ನಾನಾಬಾಹುಕಾಂಡಂ ವಸುಂ
ಧರೆಗೊಂದಂಬರಕೊಂದು ದಾಡೆ ಬಳೆದೆತ್ತಂ ಭೀತಿಯಂ ಬೀಱಿ ಭೀ
ಕರರೂಪಂ ತಳೆದು ಪ್ರಕೋಪನಸದಾಳಾಪಂ ಯಮಾಟೋಪಮಂ ೧೩೭

ಕಂ॥ ನಗಮನಗೆಯೆತ್ತಿ ತಂದಿ
ಕ್ಕೆ ಗಡೆತ್ತಿದ ಕೊಡೆಯ ವಜ್ರಧಾರೆಗಳಿಂ ರೇ
ಣುಗಳಾದುವಾ ಮುನಿಯ ಧೃತಿ
ಗಗಧೃತಿ ತುಷಮಾತ್ರಮೆಂದು ಪೇೞ್ವಂತಾಗಳ್ ೧೩೮

ದಾನವಕೃತೋಪಸರ್ಗಮ
ದಾನತ ದೇವವ್ರತಪ್ರಭಾವದೆ ಕಿಡೆ ಸಂ
ತಾನಲತಾಂತಾಸಾರಂ
ತಾನಲಸದೆ ದೇವಬೃಂದದಿಂದಾಯ್ತೆತ್ತಂ ೧೩೯

ವ॥ ಆಗಳಾ ಯೋಗೀಶ್ವರಂ

ಕಂ॥ ಜ್ಞಾಯತನಾಗಖಿಳಾರ್ಥಂ
ಜ್ಞೇಯಂ ಪರಕೀಯಮುಂ ಸ್ವಕೀಯಮುಮಿಲ್ಲೆಂ
ಬೀಯಱಿವಿಂ ಕಿಡಿಸಿದನಾ
ತ್ಮಾಯತ್ತಂ ಯೋಗಿ ರಾಗಮಂ ದ್ವೇಷಮುಮಂ ೧೪೦

ವ॥ ಅಂತಾತ್ಮಾಯತ್ತ ಸಮಸ್ತ ವಸ್ತುಗತ ಮಧ್ಯಸ್ಥ ಚಿತ್ತನೈಕಾಗ್ರ್ಯ ಯೋಗ್ಯ ಬಾಹ್ಯಾಭ್ಯಂತರ ಸಾಮಗ್ರೀ ಸಮಗ್ರನವ್ಯಗ್ರಮನೋವಷ್ಟಂಭೀಭೂತ ವಿಶಿಷ್ಟಾಷ್ಟ ಗುಣಪ್ರಕೃಷ್ಟ ನಿರುಪಮನಿರುಪಧಿ ನಿರುಪಾಧಿ ನಿರಾಲಂಬನೀರೋಗಮಯ ನಿರವಯವ ನಿರತಿಶಯ ನಿಶ್ಚಿತ ನಿಶ್ಚಳಿತ ನಿಶ್ಶಬ್ದ ನಿರ್ದ್ವಂದ್ವ ನಿಷ್ಕ್ರಿಯ ನಿಷ್ಕರ್ಮ ನಿಷ್ಕಳಂಕ ನಿಷ್ಕಾರಣ ನಿರ್ಭಯ ನಿರ್ಭೇದ ನಿರ್ಭರ ನಿರ್ವರ್ಣ ನಿರ್ವಿಷಯ ನಿರ್ವಿಕಾರ ನಿರ್ವಿಕಲ್ಪಕ ನಿರ್ವಾದಬೋಧಮಯ ಪರಮಾನಂದ ಸ್ವಭಾವ ಸ್ವರೂಪವ್ಯಕ್ತಿ ಲಕ್ಷಣಸ್ವಸಾಧ್ಯ ಸಿದ್ಧಿಪ್ರಸಿದ್ಧಿ ಪ್ರತಿಚ್ಛಂದಸ್ಥಾನೀಯ ವಿಶುದ್ಧಸಿದ್ಧಿಪರ್ಯಾಯಪರ್ಯನನವರತಾಧ್ರುವಾದಿ ದ್ವಾದಶಾನುಪ್ರೇಕ್ಷಾ ಭಾವನಾನು ಭಾವಸಂಭಾವಿತಾಶೇಷಭಾವಂ ದೂರ ನಿರಸ್ತಾಪಾರ ಸಂಸಾರ ಪಾರಾವಾರ ನಿವೃತ್ತ ವರ್ತನಸಮರ್ಥಾರ್ತ ರೌದ್ರ ಧ್ಯಾನನಾತ್ಮೀಯಕೃತ ನಿತ್ಯನಿರತಿಶಯ ನಿರ್ವಾದ ನಿರ್ವಾಣ ಸುಖಸುಧಾರ್ಣವನಿಮಜ್ಜನ ನಿರ್ಮಾಣ ಪ್ರವಣ ಚತುರ್ವಿಧಧರ್ಮಶುಕ್ಲಧ್ಯಾನವಿಧಾನಂ

ಕಂ॥ ಜಿನನೆಂದ ತೆಱನೆ ವಸ್ತುಗ
ಳೆನಿತನಿತಱ ತೆಱನನಱಿವನುಂ ನೆಱೆ ಮಧ್ಯ
ಸ್ಥನುಮಪ್ಪುದಱಿಂದವಿಚಳ
ಮನಿಸಿರ್ದಾಜ್ಞಾವಿಚಯಮನನ್ವಿತಜಯಮಂ ೧೪೧

ತೊಲಗದೆ ಮಿಥ್ಯಾತ್ವದಿನಘ
ಫಲದಿಂ ಸುಖಫಲದಿನಮಳ ರತ್ನತ್ರಯದಿಂ
ತೊಲಗಿದರೆಂತುದ್ಧತಭವ
ಜಲಧಿಯನುತ್ತರಿಕುಮೆಂಬಪಾಯವಿಚಯಮಂ ೧೪೨

ದುರಿತಯುತ ಸುಕೃತದಿಂದಂ
ದುರಿತದಿ ಸಂಯುದಿಂದೆ ದುರಿತದೆಯ್ದುಗುಮಾತ್ಮಂ
ನರ ನಾರಕ ಸುರ ತಿರ್ಯಕ್
ಸ್ವರೂಪತೆಯನೆನಿಸುವ ವಿಪಾಕವಿಚಯಮುಮಂ ೧೪೩

ಪದಿನಾಲ್ಕೆ ರಜ್ಜುವೀ ಜಗ
ಮದಱೊಳಶುಭ ಶುಭದೆ ದುಃಖಸುಖಜೀವಂ ಶು
ದ್ಧದಿನಕ್ಷಯನೆನಿಸುಗುಮೆನಿ
ಸಿದುದಂ ಸಂಸ್ಥಾನವಿಚಯಮಂ ಯಮಿ ತಳೆದಂ ೧೪೪

ವ॥ ಅಂತತಿ ಪ್ರಶಸ್ಯಲೇಶ್ಯಾಪರಿಣತನುಂ ಚತುರ್ವಿಧ ಧರ್ಮಧ್ಯಾನಾಧೀನ ಮಾನಸನುಮಾಗಿಯಧಃಪ್ರವೃತ್ತಾನುಪೂರ್ವಾನ್ಯನಿವೃತ್ಯಭಿಧೇಯಕರಣತ್ರಯಚರಮ ಸಮಯದೊಳನಂತಾನುಬಂಧಿ ಕ್ರೋಧಮಾನಮಾಯಾಲೋಭಂಗಳನೊರ್ಮೊದಲೊಳಿತರ ದ್ವಾದಶಕಷಾಯ ಸ್ವರೂಪದಿಂ ವಿಸಂಯೋಜಿಸಿ ಮತ್ತಮಂತರ್ಮುಹೂರ್ತಂ ವಿಶ್ರಮಿಸಿ ತತ್ಪರಿಣಾಮತ್ರಯ ಪವಿತ್ರಂ ಕ್ರಮದಿಂ ಮಿಥ್ಯಾತ್ವಸಮ್ಯಗ್ಮಿಥ್ಯಾತ್ವ ಸಮ್ಯಕ್ತ್ವಪ್ರಕೃತಿಗಳೆಂಬ ದರ್ಶನಮೋಹನೀಯಂಗಳಂ ನಿರವಶೇಷಂ ಕ್ಷಪಿಯಿಸಿದನದೆಂತೆನೆ

ಚಂ॥ ಮೊದಲ ಚತುಷ್ಕಷಾಯವೆಸರಗ್ಗದ ಗೋವಳಿಗರ್ಕಳಾಂತೊಡೊ
ರ್ಮೊದಲೊಳೆ ಬಂಧಮೋಕ್ಷವಿಧುರಂ ಕರಣತ್ರಯಮೆಂಬ ಗಾಯದಿಂ
ದದಿರದನಂತವೀರ್ಯನದಟಿಂ ಮುಱಿದಾಗಳೆ ಮೋಹಮಲ್ಲನೊ
ಡ್ಡಿದೊಡವರಂ ಕಱುತ್ತು ಮುಱಿದಂ ಜಗಜಟ್ಟಿವೊಲಾ ಮುನೀಶ್ವರಂ ೧೪೫

ವ॥ ಅಂತಾ ಮುನಿರಾಜಕುಂಜರಂ ಸಪ್ತಪ್ರಕೃತಿ ಸಪ್ತಚ್ಛದಪಾದಪಮೂಳಮನು ನ್ಮೂಳಿಸಿ ಮೋಕ್ಷಲಕ್ಷ್ಮೀಸಮಾಕೃಷ್ಟಿಕರಣದಕ್ಷಾಕ್ಷೂಣನಿರ್ಮಳಕ್ಷಾಯಿಕ ಸಮ್ಯಗ್ದೃಷ್ಟಿ ವಿಶಿಷ್ಟನಾಗಿ ಸಮನಂತರಂ ಮಂದಮಂದತರಕಷಾಯೋದಯಸ್ಥಾನರಾಶಿರಂಜಿತಪ್ರಮತ್ತಾಪ್ರಮತ್ತ ಪರಾವರ್ತಸಹಸ್ರಗರ್ಭಿತಾಂತರ್ಮುಹೂರ್ತಕಾಲಂ ವಿಶ್ರಮಿಸಿ

ಕಂ॥ ಕ್ಷಪಕಶ್ರೇಣಿಯೆ ನಿರ್ವೃತಿ
ವಿಪುಳಪ್ರಾಸಾದಸುಖಸಮಾರೋಹಣಕಂ
ತುಪಯೋಗಿಯೆಂದು ಯೋಗಿ ತ
ದುಪಯೋಗದೊಳತುಳವಿದ್ಯನುದ್ಯತನಾದಂ ೧೪೬

ವ॥ ಅಂತು ಕ್ಷಪಕಶ್ರೇಣ್ಯಾರುರುಕ್ಷುವಪ್ಪ ಮುಮುಕ್ಷುಮುಖ್ಯಂ ನಿರ್ಮಳಧರ್ಮ ಧ್ಯಾನಮಕರಿಕಾರೂಢಪ್ರೌಢನಧಃಪ್ರವೃತ್ತ ಕರಣಪರಿಣತಾತಿಶಯಪ್ರಮತ್ತಗುಣಸ್ಥಾನ ನಿಷ್ಪಾದಿತ ಸ್ಥಿತಿಬಂಧಾಪಸರಣಸಹಸ್ರಂ ತದನಂತರ ಸಮಯ ಸಂಪ್ರಾಪ್ತಾ ಪೂರ್ವಕರಣ ಕ್ಷಪಕಗುಣ ಸ್ಥಾನನವ್ಯಂಜನ ಯೋಗಸಂಕ್ರಮಣಕ್ರಮಸಂಭವದ್ದ್ವಾಚತ್ವಾರಿಂಶದ್ಭಾಗಸಂಗತಪೃಥಕ್ತ್ವ ವಿತರ್ಕವಿಚಾರನಾಮಭಿಧಾಮ ಪ್ರಥಮಶುಕ್ಲಧ್ಯಾನಾಧೀನಂ ಪ್ರತಿಸಮಯಾನಂತಗುಣ ವಿಶುದ್ಧಿಸ್ಥಿತಿಬಂಧಾ ಪಸರಣಸ್ಥಿತ್ಯನುಭಾಗಕಾಂಡಕಘಾತಗುಣಶ್ರೇಣಿಗಳಂ ನಿಗ್ರಹಿಸುತ್ತು ಮಂತರ್ಮುಹೂರ್ತಮಾತ್ರ ನಿರ್ವರ್ತಿತಾಪೂರ್ವಕರಣನುಮನಂತರ ಸಮಯ ಸಮುದಿತ ಪ್ರತಿಕ್ಷಣಾನಂತಗುಣಪರಿಣಾಮ ಪರಿಣತಾನಿವೃತ್ತಿಕರಣಗುಣಸ್ಥಾನನುಮಾಗಿ ನಿಜಗುಣ ಸ್ಥಾನಪ್ರಥಮಾದಿ ನವಭಾಗಗಳೊಳತಿ ರೂಢಷೋಡಶಪ್ರಕೃತ್ಯಾದಿಗಳಂ ನಿರ್ಭೇದಿಸಿದನದೆಂತೆನೆ

ಕಂ॥ ನಿರಯಾದಿಷೋಡಶಪ್ರಕೃ
ತಿರಿಪುವನನಿವೃತ್ತಿಕರಣ ನಿಶಿತಾಸಿಯಿನಂ
ತುರವಣೆಯಿಂ ವಿಚ್ಛೇದಿಸಿ
ಪರಾಕ್ರಮಶ್ರೀಗೆ ಯತಿವರಂ ವರನಾದಂ ೧೪೭

ಪ್ರತ್ಯರ್ಥಿಭಾವದಿರ್ದ
ಪ್ರತ್ಯಾಖ್ಯಾನಾಖ್ಯಮಂ ಕಷಾಯಮನದಟಿಂ
ಪ್ರತ್ಯಾಖ್ಯಾನಕಷಾಯಮ
ನತ್ಯೂರ್ಜಿತಸತ್ವನೆಂಟುಮಂ ವಿಘಟಿಸಿದಂ ೧೪೮

ಜಿನಮುನಿರಾಜಂ ಕ್ರಮದಿಂ
ದೆ ನಪುಂಸಕಯುವತಿವೇದಯುಗಮಂ ಧ್ಯಾನಾಂ
ಶುನಿಕಾಯದಿಂದೆ ನಿರ್ಮೂ
ಳನಮಂ ಮಾಡಿದನುದಾತ್ತನಿರ್ಮಳವೃತ್ತಂ ೧೪೯

ಹರಿಯಿಸಿದಂ ಪುಂವೇದದ
ಪುರಾಣಸತ್ಕರ್ಮದೊಡನೆ ನೋಕರ್ಮಮನ
ಕ್ಷರಪರಿಣಾಮಯುತಂ ಹಾ
ಸ್ಯರತ್ಯರತಿಶೋಕ ಭಯ ಜುಗುಪ್ಸಾಹ್ವಯಮಂ ೧೫೦

ಅಳಜೆಸಿ ಸಮಯೋನದ್ವ್ಯಾ
ವಳಿಮಾತ್ರದೆ ಪುರುಷವೇದ ನವಬಂಧಮನಂ
ತಳರ್ಚಿಸಿದಂ ಕ್ರಮದಿಂ ಸಂ
ಜ್ವಳ ನಕ್ರೋಧಾದಿ ಸಾಂಪರಾಯತ್ರಯಮಂ ೧೫೧

ವ॥ ಅಂತು ನಿಷ್ಠಾಪಿತಸಾಮಯಿಕಚ್ಛೇದೋಪಸ್ಥಾಪನಾಸಂಯಮಾಧಿಷ್ಠಾನಾನಿವೃತ್ತಿಕರಣಸ್ಥಾನಂ ಸಮನಂತರ ಸಮುಪಗತ ಸೂಕ್ಷ್ಮಸಾಂಪರಾಯಗುಣಸ್ಥಾನಸಂಯುತನುಮಾಗಿ

ಕಂ॥ ಶ್ರವಣೋತ್ತಮನವನತವ್ಯೆ
ಶ್ರವಣಂ ಸಲೆ ಸರ್ವಗುಣವಿಲೋಪನಮಂ ಮಾ
ಡುವ ಲೋಭಮಂ ವಿಭೇದಿಸೆ
ವಿವಿಧ ಗುಣಾಭರಣದಿಂ ವಿಭೂಷಿತನಾದಂ ೧೫೨

ವ॥ ಅಂತತಿಕ್ರಾಂತಸೂಕ್ಷ್ಮಸಾಂಪರಾಯಾಧ್ಯವಸಾಯನತಿಖ್ಯಾತ ಯಥಾಖ್ಯಾತಚಾರಿತ್ರೋಪಲಕ್ಷಿತಕ್ಷೀಣಕಷಾಯಂ ಛದ್ಮಸ್ಥವೀತರಾಗಸಂಯುತನುಮಾಗಿ ನಿಜಗುಣಸ್ಥಾನದ್ವಿಚರಮಸಮಯದೊಳ್

ಕಂ॥ ಸಲೆ ನಿದ್ರಾದ್ವಯಮಮಂ ದಾ
ನ ಲಾಭ ಭೋಗೋಪಭೋಗ ವೀರ್ಯಮೆನಿಪ್ಪ
ಸ್ಖಲಿತಾಂತರಾಯಮಯ್ದುಮ
ನಲೆದುರುಸುಖಸಂಪದಕ್ಕೆ ತಾಂ ಪತಿಯಾದಂ ೧೫೩

ನಿರುಪಮಮುನಿ ಚಕ್ಷುರ ಚ
ಕ್ಷುರವಧಿ ಕೇವಳಮೆನಿಪ್ಪ ದರ್ಶನ ಜನಿತಾ
ವರಣಚತುಷ್ಟಯಮಮಂ ಸಂ
ಹರಿಸಿದನಘವನದವಾನಳಂ ಮುನಿತಿಳಕಂ ೧೫೪

ತರದಿಂ ಮತಿಶ್ರುತಾವಧಿ
ಪರಮ ಮನಃಪರ್ಯಯೋದ್ಧಕೇವಳಬೋಧಾ
ವರಣಮನಯ್ದುಮನುಪಸಂ
ಹರಿಸಿದನತಿಶಯವಿಶುದ್ಧಭಾವಸಮೃದ್ಧಂ ೧೫೫

ಉ॥ ಚೈತ್ರದ ಕೃಷ್ಣಪಕ್ಷದ ಚತುರ್ದಶಿಯಾಗೆ ವಿಶಾಖೆಯಂದು ಬಂ
ದತ್ರಿವಿಳೋಕನಪ್ರಭವನೊಪ್ಪಿರೆ ಕೇವಳಬೋಧಮುಣ್ಮಿದ
ತ್ತು ತ್ರಿಜಗತ್ತ್ರಿಕಾಲ ವಿಷಯಾಖಿಳ ವಸ್ತುವಿಬೋಧಕಂ ಸುಖ
ಕ್ಷೇತ್ರಮತೀಂದ್ರಿಯಾಕ್ಷಯಮನಂತಚತುಷ್ಟಯಮಿಂದ್ರವಂದ್ಯನೊಳ್ ೧೫೬

ಧ್ಯಾನಮಹಾನಳಂ ತವಿಸೆ ಘಾತಿಚತುಷ್ಟಯಕಿಟ್ಟಮಂ ನಿಜಾ
ಧೀನಮನಂತವೀರ್ಯ ಸುಖದರ್ಶನಬೋಧಚತುಷ್ಟಯಂ ತ್ರಿಲೋ
ಕೀನುತಮಾತ್ಮಹೇಮದೊಳೆ ವರ್ಣವಿಶೇಷಮದಾಗೆ ಶೋಭಿಪಂ
ಮಾನಿತಶೀಳರತ್ನನಿಧಿ ಪಾರ್ಶ್ವಜಿನಂ ಭುವನೈಕಭೂಷಣಂ ೧೫೭

ವ॥ ಅಂತುಮಲ್ಲದೆ

ಉ॥ ಧ್ಯಾನವಿಧಾನಮೆಂಬೆಸೆವ ದಬ್ಬುಕದಿಂದೊಡೆದೆಯ್ದೆ ಘಾತಿಸಂ
ತಾನ ಶಿಲಾಚತುಷ್ಟಯಮನುದ್ಭವಚಂ ಜಿನಯೋಗಿ ಕೇವಳ
ಜ್ಞಾನನಿಧಾನಮಂ ಪಡೆದು ವಿಶ್ವವಿವಕ್ಷೆ ವಿಶುದ್ಧಲಕ್ಷ್ಮಿಯಿಂ
ದೇನೆಸೆದಿರ್ದನೋ ತ್ರಿಭುವನಪ್ರಭು ಪಾರ್ಶ್ವಜಿನೇಶ್ವರಂ ವರಂ ೧೫೮

ವ॥ ಅದಲ್ಲದೆಯುಂ

ಮ.ಸ್ರ॥ ಪ್ರಿಯಭಾಷಾಸಿಂಧುಸಂಭೂತಿಯಿನುದಿತಗುಣಶ್ರೇಣಿಮಾಣಿಕ್ಯದಿಂ ನಿ
ಶ್ಚಯಸಿತ್ಸ್ಯಾನ್ಮತ್ವದಿಂ ಭೂನುತನಿಜಧೃತಿಯಿಂ ವ್ಯಕ್ತಸಮ್ಯಕ್ತ್ವ ಲೋಕ
ತ್ರಯಮಿಥ್ಯಾಧ್ವಾಂತಮಂ ತೂಳ್ಚುವ ವಿಭವಲಸತ್ಕೇವಲಜ್ಞಾನಭಾನೂ
ದಯದಿಂ ಪೂರ್ವಾದ್ರಿಯೆಂಬಂತಸದಳಮೆಸೆದಂ ಶಾಶ್ವತಂ ಪಾರ್ಶ್ವನಾಥಂ ೧೫೯

ಗಗನೋದ್ಯದ್ಯಾನಪ್ರಾಣಿವಧನಖಿಳವಿದ್ಯೇಶ್ವರಂ ವೀತಬಾಧಂ
ವಿಗತಚ್ಛಾಯಂ ವಿಪಕ್ಷ ಪ್ರಚಳನನಪಹೃದ್ಯೋಜನೇಚ್ಛಂ ಸುಭಿಕ್ಷಂ
ಪ್ರಗುಣ ಶ್ರೀಸಿದ್ಧಕೇಶಪ್ರಣವತತಿ ಚತುರ್ವಕ್ತ್ರನೆಂಬೀ ವಿಳಾಸ
ಕ್ಕೆ ಗಡಂತಾವಾಸಮಾದಂ ವಿಬುಧಜನಮನಃಪದ್ಮಿನೀಪದ್ಮಮಿತ್ರಂ ೧೬೦

ಗದ್ಯ

ಇದು ವಿದಿತವಿಬುಧಲೋಕನಾಯಕಾಭಿಪೂಜ್ಯ ವಾಸುಪೂಜ್ಯಜಿನಮುನಿ ಪ್ರಸಾದಾಸಾದಿತ ನಿರ್ಮಳಧರ್ಮ ವಿನುತ ವಿನೇಯಜನವನಜವನವಿಳಸಿತ ಕವಿಕುಳತಿಳಕಪ್ರಣೂತ ಪಾರ್ಶ್ವನಾಥಪ್ರಣೀತಮಪ್ಪ ಪಾರ್ಶ್ವನಾಥ ಚರಿತ ಪುರಾಣದೊಳ್ ಕೇವಳಜ್ಞಾನೋದಯವರ್ಣನಂ ಪಂಚದಶಾಶ್ವಾಸಂ

ಷೋಡಶಾಶ್ವಾಸಂ

ಕಂ॥ ಶ್ರೀಪರಮೌದಾರಿಕತನು
ಪಾಪಹರಂ ಪುಣ್ಯರೂಪನೆಸೆದಿರೆ ಜಗತೀ
ದೀಪಂ ಸತ್ಪಥದಲ್ಲಿ ಕ
ಳಾಪತಿ ಜಿನರಾಜನೆನಿಪ ಕವಿಕುಳತಿಳಕಂ ೧

ಹರಿಶಂಖಪಟಹಘಂಟೋ
ದ್ಧುರರವದಿಂ ಜ್ಯೋತಿರಮರಭವನ ಭವ ವ್ಯಂ
ತರ ಕಳ್ಪವಾಸಿಗರ್ ಭಾ
ಸುರ ಬೋಧೋದಯಮನರಿದು ಬರೆ ಮುದದೊದವಿಂ ೨

ಮ.ಸ್ರ॥ ನುತಪೌಲೋಮೀಕಟಾಕ್ಷದ್ಯುತಿವಿಸರಸುಧೋದ್ಭೂತರೋಮಾಂಚಸಸ್ಯ
ಕ್ಷಿತಿಗಾತ್ರಂ ಶೋಣರತ್ನಾಭರಣಕಿರಣಸಿಂಧೂರಸಂಶೋಭಿತೈರಾ
ವತ ನಾಗೇಂದ್ರಾಧಿರೂಢಂ ಸುರಸಮಿತಿಯುತಂ ನಾಕಲೋಕಾಂಗನಾಸಂ
ಗತಿ ಗೀತಾತೋದ್ಯನೃತ್ಯಪ್ರಣಯಿ ಶತಮುಖಂ ಬಂದನಾನಂದದಿಂದಂ ೩

ವಿನುತಾಪಾಂಗಪ್ರಭಾಸಂಜನಿತ ಸುರನದೀಪೂರದೊಳ್ ಚಾರುವಕ್ತ್ರಂ
ವನಜಾತಂ ಸ್ಮೇರನೇತ್ರಂ ಧವಳಕುವಳಯಂ ಬಾಹುಜಾಳಂ ಮೃಣಾಳಂ
ಸ್ತನಭಾರಂ ಚಕ್ರವಾಕಂ ಚಳದಳಕಚಯಂ ಚಂಚರೀಕಂ ಸಮಂತಾ
ಗೆ ನಿತಾಂತಂ ದೇವಕಾಂತಾಕುಳಮೆಸೆದು ನಭೋಭಾಗದೊಳ್ ಬಂದುದಾಗಳ್ ೪

ವ॥ ಅಂತುಮಲ್ಲದೆ

ಮ॥ ಮೊಗದಿಂ ನಿರ್ಮಳಚಂದ್ರಮಂಡಳಸಹಸ್ರಾನೀಕಮಂ ಕೇಕರಾಂ
ಶುಗಳಿಂ ಚಂದ್ರಿಕೆಯಂ ತಳತ್ತಳಿಪ ಮುಕ್ತಾಹಾರದಿಂ ತೋರತಾ
ರಗೆಯಂ ನಿರ್ಮಿಸುತುಂ ಭ್ರಮದ್ಭ್ರಮರಮಾಳಾನಂದಿ ಮಂದಾರಮಾ
ಲೆಗಳಂ ಲೀಲೆಯಿನಾಂತು ಬಂದುದಮರೀಸಂದೋಹಮುತ್ಸಾಹದಿಂ ೫

ವ॥ ಆಗಳಖಿಳಜನ ಮನೋಮಯೂರೀಲೋಚನ ಚಾತಕನಿಕಾಯ ಹರ್ಷೋತ್ಕರ್ಷ ವರ್ಷಾಕಾಲಲೀಲಾಭ್ರವಿಭ್ರಮೈಕೇಂದ್ರನೀಳಮಣಿಮಯ ಸಮವಸರಣ ಭೂಮಂಡಳಮನನತಿದೂರದೊಳೆ ಕಂಡು ನಿಟಿಳತಟಘಟಿತ ಕರಕಮಳಯುಗಳರಾಗಿ

ಮ॥ ಇದು ದುಷ್ಕರ್ಮದವಾನಳಪ್ರಶಮನಪ್ರೋದ್ಭೂತ ನೀಳಾಭ್ರಮಂ
ತಿದು ಲೋಕತ್ರಯಜೈತ್ರಮೋಹಮಹಿಭೃದ್ದೋರ್ಗರ್ವ ಹೃದ್ದುರ್ಗಮಂ

ತಿಮು ಜನ್ಮಾಂಬುಧಿಪಾರತಾರಣಕರಂಡಂ ನೋಡಿಮೆಂದಿಪ್ಪ ಸ
ಮ್ಮುದದಿಂದಿಂತಭಿವರ್ಣಿಸುತ್ತಮರಸಂತಾನಂ ಜಿನಾಸ್ಥಾನಮಂ ೬

ವ॥ ಅಂತು ಪರಮಾನಂದದಿಂ ಪೊಗಳ್ದು ಶತಮುಖಿಶತಪರಿವೃತನುಂ ಚತುರ್ನಿಕಾಯ ಸುಮನಸ್ಸಮೂಹಸಮನ್ವಿತನುಮಾಗಿ ಧರ್ಮಾನುರಾಗಸಾಗರೋತ್ತರಂಗಪ್ರೇರಿತಾಂತರಂಗಂ ಬಂದು ಮುನ್ನಮೆ ತನ್ನ ನಿಯಮದಿಂ ಧನದಂ ನಿರ್ಮಿಸಿದ ಸಮವಸರಣದ ಸಿರಿಯಂ ಮೆಚ್ಚಿ ಬೆಚ್ಚಳಿಸಿ ಸಹಸ್ರಾಕ್ಷಂ ನಿರೀಕ್ಷಿಸಿದನದೆಂತಿರ್ದುದೆಂದೊಡೆ

ಕಂ॥ ರವಿ ಕಣ್ಗೆ ಸೊಗಯಿಸಂ ನೋ
ಡುವೊಡತಿ ಹೀನಾಧಿಕಸ್ವಭಾವಂ ಶಶಿಯೆಂ
ದವಱುಮನಿಟೆಯಿಪುದೆನೆ ಪೊಗ
ೞ್ವವನಾವಂ ಸಮವಸೃತಿಯ ಶೋಭಾಕೃತಿಯಂ ೭

ಭಾವುಕರೀಯೆಡೆಗಿದು ಶೋ
ಭಾವಹಮೆಂಬಿನೆಗಮಿಂಬು ಮೆಯ್ವೆತ್ತಿರೆ ನಾ
ನಾ ವಸ್ತುಗಳಂ ನೆಱಪಿ ಕ
ಳಾವಿದುರಂ ಧನದನೊಸೆದು ಸಮೆದಂ ಸಭೆಯಂ ೮

ಧರೆಗಯ್ದಾಸಿರ ಬಿಲ್ಲಂ
ತರದಲ್ಲಿ ನಿರಂತರಪ್ರಶೋಭೆಗೆ ನೆಲೆಯಾ
ಯ್ತುರು ಸಮವಸರಣಮವನತ
ಶರಣಂ ಸುಖಕರಣಮವಹಿತಾಂತಃಕರಣಂ ೯

ಗುಣನಿಧಿಗೆಱಗೆ ಗುಣಾರೋ
ಹಣಮೀ ತೆಱದಿಂದೆ ಸುಗಮಮೆಂದಱಿಪುವ ವಾ
ಕ್ಷಣುತ ಪದೌಷಧನಿಧಿಗಳ್
ಮಣಿಮಯ ವಿಂಶತಿಸಹಸ್ರಸೋಪಾನಂಗಳ್ ೧೦

ವ॥ ಅಂತು ನಾಲ್ಕುಂ ದೆಸೆಯೊಳುಮೆಸೆವ ಸಮೀಚೀನಸೋಪಾನಂಗಳಿಂ ಮನಂಗೊಳಿಸಿ ಜಾತರೂಪಗೋಪುರಚತುಷ್ಟಯ ಭುವನೈಕಮಲ್ಲಂ ಮೋಹಮಲ್ಲನೀಸೆಕ್ಕ ತುಳದಿಂದಕ್ಕುಳಿಸದೆ ಡೊಕ್ಕರಿಗೊಂಡು ನೆಟ್ಟನೆ ಮುಱಿದಿಕ್ಕಿ ಗೆಲ್ದ ವಿದ್ಯಾಧರಕಳಮಿದೆನಿಸಿದ ಸಮವಸರಣದ

ಕಂ॥ ಲೋಕಾಕಾಶದ ತೆಱದಿಂ
ದೇಕೇಂದ್ರಿಯ ನೀಳಕುಟ್ಟಿಮಂ ಕಣ್ಗೊಳಿಕುಂ
ವ್ಯಾಕೀರ್ಣನವಪದಾರ್ಥಾ
ನೀಕಮಖಂಡಿತ ವಿಳಾಸಮಂಡಿತಮೆಂತುಂ ೧೧

ಸಾಲಂ ವೇದಿದ್ವಿತಯಂ
ಸಾಲೋನ್ನತವೇದಿ ಸಾಲವೇದಿಕೆ ವಿಳಸ
ಚ್ಛಾಲಂ ವೇದಿಕೆಯವಳಿ ವಿ
ಶಾಲಾಂತರವರೆಗಳೆಂದು ಸೊಗಯಿಸುತಿರ್ಕುಂ ೧೨

ವ॥ ಮತ್ತಮವಱನ್ವರ್ಥನಾಮಾಭಿರಾಮತೆಯಂ ಪೇೞ್ವೊಡೆ

ಕಂ॥ ....ಚೈತ್ಯ
ಪ್ರಕರದಿನುರೆ ಪುಷ್ಪವಾಟದಿಂ ವನಗಳಿನು
ಚ್ಚಕೃತಧ್ವಜದಿಂ ಸುರಕುಜ
ನಿಕರದೆ ಸಂಗೀತಗೃಹ ಗಡಣದಿಂದೆಸೆಗುಂ ೧೩

ಬಳಸಿರ್ದ ಸಾಲವೇದಿಕೆ
ಗಳೆ ನೆಗೞ್ದಾಧಾರವಳಯಮಾಗೆ ಸುವರ್ಣೋ
ಜ್ವಳಮ ಸಮಸಿದ್ಧಚಕ್ರಮ
ನಳವಡೆ ಬರೆದಂತೆ ಸಮವಸೃತಿ ಸೊಗಯಿಸುಗುಂ ೧೪

ವ॥ ಮತ್ತಮುತ್ತಮಪುರುಷನಂತೆ ಸದ್ವೃತ್ತತೆಗೊಳಗಾದ ಸಮವಸರಣಮಂಡಪದ

ಕಂ॥ ಕಡೆವಿಡಿದು ಪಂಚರತ್ನದ
ಪುಡಿಯಿಂದಂ ಪಡೆದ ಧೂಳಿಸಾಲಂ ಚೆಲ್ವಂ
ಪಡೆದಿಂದ್ರಚಾಪಮುಂ ಜಿನ
ನಡಿಗಳನೋಲಗಿಪ ಲೀಲೆಯಂ ಪಾಲಿಸುಗುಂ ೧೫

ಸುರಚಾಪದ ಸಿರಿವಡೆದುಂ
ಸ್ಥಿರವಿಭವಮನಾಳ್ದು ಬಗೆವೊಡಚ್ಚರಿ ಬಹಿರು
ದ್ಧುರಪರಿಧಿ ಕಣ್ಗೆವಂದುದು
ವರ ಧೂಳೀಸಾಲಮೆನಿಸಿಯುಂ ನೋಟಕರಾ ೧೬

ವ॥ ಅಂತು ಸೊಗಯಿಸುವ ಧೂಳೀಸಾಲಲಕ್ಷ್ಮೀಲಪನವಿಳಾಸಮನೊಳಕೊಂಡು

ಕಂ॥ ಘನಘಟಿತ ಪಂಚರತ್ನಾಂ
ಶು ನಿಕಾಯ ವಿಚಿತ್ರಿತಾಂಬರಪ್ರಸರಂ ನೆ
ಟ್ಟನೆ ಜಾತರೂಪಮಾಗಿಯು
ಮನುಪಮ ಗೋಪುರಚತುಷ್ಟಯಂ ಚಿತ್ರತರಂ ೧೭

ತ್ರಿದಶಶರಾಸನರುಚಿ ಮೊದ
ಲದು ಕನಕದವೆರಡು ರಕ್ತಕನಕದದೊಂದ
ಗ್ಗದ ಕನಕರಜತಕಳಧೌ
ತದದೊಂದೊಂದುಟಿದವೆರಡು ರವಿಕಾಂತಂಗಳ್ ೧೮

ಮೊದಲದು ಕನಕಜಮೆರಡನೆ
ಯದು ಮೊದಲಾದಾಱುಗೋಪುರಂ ರಜತಮಯಂ
ವಿದಿತ ಹರಿನ್ಮಣಿಮಯಮೆರ
ಡೊದವಿದ ಜಿನಸಭೆಯ ಗೋಪುರಂಗಳ್ ಕ್ರಮದಿಂ ೧೯

ದ್ವಾರತ್ರಿತಯದೊಳಂ ಪ್ರತಿ
ಹಾರರ್ ಜ್ಯೋತಿಷ್ಕರೆರಡಱೊಳ್ ಯಕ್ಷರ್ ದೌ
ವಾರಿಕರುಟೆದೆರಡಱೊಳಂ
ತಾರಯೆ ಭವನಭವಕಲ್ಪಜರ್ ಪ್ರತಿಹಾರರ್ ೨೦

ವಿಳಸಿತ ಗೋಪುರದಿರ್ಕೆಲ
ದೊಳಮೊಂದೊಂದತುಳ ನೃತ್ಯನಿಳಯಂ ಕನಕೋ
ಜ್ವಳ ಧೂಪಘಟಮುಮಾ ತೆಱ
ದೊಳೆ ಕಣ್ಗೊಳಿಸಿರ್ಕುಮವಱ ಮುಂತತಿಕಾಂತಂ ೨೧

ನಾಟಕಶಾಲೆಯೊಳಭಿನವ
ಹಾಟಕಮಣಿಘಟಿತದೂಪಘಟಧೂಮಚಯೋ
ದ್ಘಾಟಿತಘನಕೆ ನಲಿವ ನವಿ
ಲಾಟಮನನುಕರಿಸೆ ನರ್ತಿಪರ್ ಸುರಸತಿಯರ್ ೨೨

ವ॥ ಅಂತು ಕಾಂತಿಯಂ ತಳೆದ ಗೋಪುರಂಗಳ ಬಹಿರಂತರ್ಜಗತಿಗಳೊಳ್ ತ್ರಿಜಗತ್ಪೂಜ್ಯರಾಭಿಷವಣ ಪ್ರವಣಂಗಳುಮತೀತೋತ್ತರ ಸಪ್ತಜನ್ಮಪ್ರದರ್ಶನಕಂಗಳುಂ ದುರಂತದುಃಖಾಗಮ ನಿದಾಘನಿವಾರಣಪ್ರವೀಣಂಗಳುಮನೂನ ಜ್ಞಾನಭಾನೂದಯಾಚ್ಛಾದಕ ಮಿಥ್ಯಾತ್ವಾಂಭೋದ ನಿರ್ಭೇದನ ಪ್ರಭಂಜನಜನಕಂಗಳುಂ ಸಂಸಾರಕಾಂತಾರಪರಿಭ್ರಮಣಶ್ರಮಹರಂಗಳುಂ ಪ್ರಗುಣಗುಣಸುಪ್ರತಿಷ್ಠಾಪ್ರದಂಗಳುಂ ಮೋಕ್ಷಲಕ್ಷ್ಮೀವಿವಾಹಗೇಹಾಳಂಕಾರಂಗಳುಂ ಮನಸಿಜವಿಜಯಜಾತಖ್ಯಾತಿವ್ಯಾಪಕಂಗಳುಮಪ್ಪ

ಕಂ॥ ಕಳಶಾದರ್ಶಚ್ಛತ್ರಾ
ಮಳ ಚಾಮರ ತಾಳ ಸುಪ್ರತಿಷ್ಠಕ ಭೃಂಗಾ
ರ ಲಸದ್ಧ್ವಜಮೆನಿಸಿದ ಮಂ
ಗಳಮಿವು ನೂಱೆಂಟು ಸೊಗಯಿಕುಂ ಪ್ರತ್ಯೇಕಂ ೨೩

ಸುರಗಿರಿವೋಲ್ ಪಾಂಡುಕದಿಂ
ಶರನಿಧಿವೋಲ್ ಶಂಖದಿಂದೆ ಬಲಿಬಂಧನ ತ
ತ್ಪರಹರಿವೋಲ್ ಮಾಣವಕ
ಸ್ಫುರಿತಾಕೃತಿಯಿಂದೆ ಪದ್ಮದಿಂ ಸುರನದಿವೋಲ್ ೨೪

ಪರಿಭಾವಿಸುವೊಡೆ ರೋಹಣ
ಗಿರಿಯಂತಿರೆ ಸರ್ವರತ್ನದಿಂದುಜ್ಜ್ವಲನೀ

ಪುರದಂತೆ ಮಹಾಕಾಳಾದಿ
ನುರುದಕ್ಷಿಣದಿಕ್ಕಿನಂತೆ ಕಾಲಸ್ಥಿತಿಯಿಂ ೨೫

ಸೊಗಯಿಪ್ಪ ಗೋಪುರಂಗಳ
ಜಗತೀತಳಮೊಪ್ಪುತಿರ್ಪ ಸಂವತ್ಸರಮಾ
ಲೆಗಳೆನೆ ಪಿಂಗಳದಿಂ ಕಾಂ
ತಿಗೆ ಸಖನೈತರ್ಪ ವಿಭವದಹಿಭವನದವೋಲ್ ೨೬

ಎನಿತೊಳವು ತೊಳಪ ಗೋಪುರ
ಮನಿತಱೊಳಂ ನೂಱುನೂಱು ಮಣಿತೋರಣಮಂ
ಶುನಿಕಾಯದಿಂ ನಭೋಮಂ
ಡನಮಂ ಚಿರಶಕ್ರಚಾಪಮಂ ಪಡೆದೆಸೆಗುಂ ೨೭

ಪಳಿಕಿನ ಭಿತ್ತಿಗಳಿರ್ಕೆಲ
ದೊಳಮಳಮಡೆ ಧೂಳಿಶಾಲದಿಂ ಜಿನಪೀಠ
ಸ್ಥಳಮಂ ಮುಟ್ಟುವಿನಂ ಕ
ಣ್ಗೊಳಿಸಿರ್ಪುವು ನಾಲ್ಕುಬೀದಿ ನಾಲ್ಕುಂದೆಸೆಯೊಳ್ ೨೮

ಬೀದಿಗಳಮರನದೀಸಂ
ವಾದಿಗಳಮರೀಕೃತೋಪಹಾರಲತಾಂತಾ
ಮೋದಿಗಳಘವಿಘಟನಸಂ
ಪಾದಿಗಳೆಯ್ದಿಪವು ಪರಮಪದಸಂಪದಮಂ ೨೯

ವ॥ ಮತ್ತಮಾ ಚತುರ್ಗತಿನಿವಾರಣಚತುರ್ವೀಥೀಮಧ್ಯದೊಳ್ ದ್ವಾದಶಜಾತರೂಪ ಗೋಪುರಾಳಂಕೃತ ಸಾಲತ್ರಯದಿಂದೊಳಗೆ

ಕಂ॥ ಧನುವೆಂಟು ನಾಲ್ಕುನಾಲ್ಕಂ
ತನುಕ್ರಮದಿನುದಯಮೆನಿಪ ಮೂಱುಂ ಪೀಠಂ
ಘನವೈಢೂರ್ಯಮಯಂ ಭ
ರ್ಮ ನಿರ್ಮಿತಂ ಪಂಚರತ್ನಸಂಚಿತಮೆಸೆಗುಂ ೩೦

ನಂದಾಸರೋವರಮಲ
ರ್ದಿಂದೀವರದಿಂದಮಮರಿಯರ ಗತಪಕ್ಷ್ಮ
ಸ್ಪಂದನಧವಳವಿಲೋಕನ
ಸಂದೋಹದೊಳೊಂದಿದಾಸ್ಪದಂದದಿನೆಸೆಗುಂ ೩೧

ವ॥ ಅಂತು ನೇತ್ರವಿಚಿತ್ರಂಗಳಾದ ಪೀಠತ್ರಯಂಗಳ ಮೇಲೆ

ಮ.ಸ್ರ॥ ದ್ವಿಸಹಸ್ರಾರಂಗಳಿಂದಂ ಕುಳಿಶಮಣಿ ಮೊದಲ್ ಸ್ಫಾಟಿಕಂ ವೃತ್ತಮಧ್ಯಂ
ನಿಸದಂ ವೈಢೂರ್ಯಪೀಠಂ ಧ್ವಜಚಮರರುಹಾಲಂಬಿ ಘಂಟಾಳಿಯಿಂ ಸಾ

ಲ್ದಸೆಯೊಳ್ ಶೋಭಿಪ್ಪ ನಾಲ್ಕುಂ ಮಣಿಮಯಜಿನಬಿಂಬಂಗಳಿಂದಗ್ರಿಮಂ ಶೋ
ಭಿಸೆ ಮಾನಸ್ತಂಭಮನೋಹರಮೆನಿಸಿ ಚತುರ್ದಿಕ್ಕಿನೊಳ್ ನಾಲ್ಕುಮಿರ್ಕುಂ ೩೨

ಕಂ॥ ಪುದಿದಯ್ದಯ್ದು ಸುಧಾಹ
ರ್ಮ್ಯದ ನಡುವೊಂದೊಂದು ಜಿನಗೃಹಂ ಮಾನಸ್ತಂ
ಭದಿನಂತಾ ಮಾನಸ್ತಂ
ಭದ ಸೀಮೆವರಂ ವಿರಾಜಿಸಿರ್ಕುಂ ಕ್ರಮದಿಂ ೩೩

ಪ್ರಾಸಾದಚೈತ್ಯಭೂಮಿಸ
ಮಾಸಾದಿತನವಸುಧಾಂಶುವಿಸ್ತಾರದೆ ಪು
ಣ್ಯಾಸಾರಶಾರದಾಭ್ರವಿ
ಳಾಸಮನೊಳಕೆಯ್ದ ನಭದವೋಲ್ ಕಣ್ಗೊಳಿಕುಂ ೩೪

ವ॥ ಪೂರ್ವವರ್ಣಿತವರ್ಣನಾಕೀರ್ಣರಜತರಚಿತಚತುಷ್ಟುರ್ವಾರವಿಸ್ತಾರಕ್ಕಾಧಾರಮಾಗಿ

ಕಂ॥ ನಿರುಪಮ ಕನಕಾಬ್ಜರಜ
ಸ್ತರಂಗತತಿ ನೂಂಕೆಯೇಱಿಗಟ್ಟಿದುದೆಂಬಂ
ತಿರೆ ಪೊಸಪೊಂಗಳ ವೇದಿಕೆ
ಯೆರಡುಂ ಕಡೆಯಲ್ಲಿ ಕಣ್ಗೆ ಪಡೆದಿರೆ ಚೆಲ್ವಂ ೩೫

ಪಾವನತೆಗೆ ಬಯಸಿ ಜಗ
ತ್ಪಾವನನಂ ಗಂಗೆ ಪೊರ್ದಿ ಪೊಗೞ್ವಂದದಿನಿಂ
ದೀವರ ಪರಿಮಳತರ ಮಧು
ಪಾವಳಿರವದೆಸೆವುದಮಳ ಪರಿಖಾವಳಯಂ ೩೬

ಲಲನೆಯರ ವದನವನಜಂ
ವಿಲಸಿತಲಾವಣ್ಯನದಿಯೊಳೆಸೆವಂದದೆ ನಿ
ರ್ಮಳಜಳಖಾತಿಕೆಯೊಳಮು
ಳ್ಳಲರ್ದಂಬುಜಮೆಸೆದುವುಱಿದು ಪಂಕಜವೆಸರಂ ೩೭

ಕುಸುಮರಜಂ ಮಣಲಂಭಃ
ಪ್ರಸರ ಲಸತ್ಕೇಳಿಕಾಂತೆಯರ ಕುಚಲಿಪ್ತಂ
ಘುಸೃಣಮಲಯರುಹಮೃಗಮದ
ರಸಪಂಕಮೆ ಪಂಕಮಮಳಜಳ ಖಾತಿಕೆಯೊಳ್ ೩೮

ಜಳಕೇಳಿಗೆಳಸಿದಮರಿಯ
ರಲಘುಸ್ತನದಮಳ ಮಳಯಜದ ಕುಂಕುಮದಾ
ಗಳುಮೆಸೆವ ಪಂಕದಿಂ ಸಿತ
ಜಳಜಂ ಕೋಕನದಮೊಗೆದು ಸೊಗಯಿಕುಮದಱೊಳ್ ೩೯

ವ॥ ಅಂತಮೃತಕ್ಕೆ ಲೀಲಾಲಯಮಾಗಿ ಸುಧಾಲೇಖೆಯಂತೆಸೆವ ಖಾತಿಕಾಲೇಖೆಯಿಂದೊಳಗೆ

ಕಂ॥ ಅಂಕುರದಿಂ ಪಲ್ಲವದಿಂ
ದಂ ಕೋರಕದಿಂದೆ ಕುಸುಮದಿಂ ಫಲದಿಂ ಚೆ
ಲ್ವಂ ಕುಡುವ ಚಾರುಲತಿಕಾ
ಸಂಕುಳದಿಂದೊಂದಿ ವಲ್ಲರೀವನಮೆಸೆಗುಂ ೪೦

ವ॥ ಮತ್ತಂ ಫುಲ್ಲಶರವಲ್ಲಭಾಧರಪಲ್ಲವ ಸಮುಲ್ಲಸಿತ ಪಲ್ಲವಾಶೋಕಲತೆಯ ನವ್ಯ ಸೌರಭ್ಯಸಂಪನ್ನ ಪುನ್ನಾಗಲತೆಯ ಅಮಂದಮಕರಂದಮಂದಿರಮಾದ ಮಾಕಂದಲತೆಯ ನಿರುಪಮಾಮೇಯಪರಿಮಳಾದೇಯಘ್ರಾಣಪಾಪೇಯಚಾಂಪೇಯಲತೆಯ ಮಧುವ್ರತ ಬಂಧುಗಂಧಬಂಧುರಬಂಧೂಕಲತೆಯ ಸಾರಸೌರಭಪೂರಕಪೂರ್ರಲತೆಯ ಮಧುಕರ ಪ್ರಮೋದಮಾಧವೀಲತೆಯ ಸುರಭಿಪರಿಮಳಮಿಳಿತಸುರಭಿಲತೆಯ ಶಿಳೀಮುಖಮುಳ್ಳ ವಿಳಸನವಿಚಕ್ಷಣವಿಕಚವಿಚಕಿಳಲತೆಯ ಮದಾಳಿಮಾಳಾವೃತೋನ್ಮೀಳಿತಮಾಳತೀಲತೆಯ ನಿರುಪಮಪರಿಮಳಕಳಿತ ಕನಕ ಕೇತಕೀಲತೆಯ ಪುದುವಿಂ ಚೆಲ್ವಂ ಪುದುಂಗೊಳಿಸಿ ಗಂಧವಹಗಂಧ ಸಿಂಧುರದ ನೀರಾಟಕ್ಕೆ ವಸಂತರಾಜಂ ವಿರಚಿಸಿದ ಪರಿಮಳಪ್ರವಾಹ ಸುಮನೋಮನೋಹರವಾಹಿನಿಯನನುಕರಿಸುವ ಪುಷ್ಪವಾಟದಿಂ ನೋಟಕ್ಕಡರ್ಪಾಗಿರ್ಪ ವಲ್ಲೀವನದಿಂದೊಳಗೆ

ಕಂ॥ ರನ್ನದ ತೆನೆಗಳ್ ಮಣಿಗಳ್
ಪೊನ್ನಟ್ಟಳೆ ರಜತಗೋಪುರಂ ನವಕೂಟಂ
ತನ್ನೊಳೆನೆ ನೆಗಟ್ದಿ ವಿಜಯಾ
ರ್ಧೋನ್ನತನಗದಂತೆ ಲೀಲೆವಡೆದುದು ಶಾಲಂ ೪೧

ವ॥ ಅಂತು ಕಾಂತಮಾದ ವಿಶಾಲಶಾಲದಿಂದೊಳಗೆ

ಕಂ॥ ಋತುವನಿತುಂ ನಿಜನಿಜಪರಿ
ಣತೆಯಂ ಬಿಸುಟ್ಟೈಕಮತ್ಯಮಂ ತಳೆದಂತಾ
ವಿತತೋದ್ಯಾನಂಗಳೊಳುಪ
ಚಿತ ಪುಷ್ಪಫಲಂಗಳೆಸೆಗುಮಸದಳಮದಱೊಳ್ ೪೨

ಪುದಿದ ಪೊಸದಳಿರ್ಗಳಿಂ ಗಜ
ಮದಗಂಧದಿನಲರ ತುಱುಗಲಿಂ ಫಳದಿಂ ಮಾ
ಣದೆ ಮಿಸುಪಶೋಕ ಸಪ್ತ
ಚ್ಛದ ಚಂಪಕಚೂತವನಮವೆಸೆಗುಂ ನಾಲ್ಕುಂ ೪೩

ಕಳನಾದಂ ಸುರಸತಿಯ
ರ್ಕಳನಾದಂ ಸೋಲಿಸುತ್ತುಮಿರೆ ಚೂತಲಸ
ತ್ಕಳಿಕಾಸ್ವಾದನದಿಂ ಕಾ
ಕಳಿ ಕಾಱ್ಬುರಮಾಗೆ ಕರೆವ ಕೋಗಿಲೆಯೆಸೆಗುಂ ೪೪

ಪಗೆಯಂ ಬಗೆಯಿನುಜಿದು ಸಂ
ಪಗೆಯಂ ಬಂದೆಳಸೆ ನಿಜಸುವರ್ಣತೆಯಂ ಭೂ
ಮಿಗೆ ಪೊಸತೆನೆ ಕೊಟ್ಟಂತಿರೆ
ಮಿಗೆ ಪೊರೆದೆಸೆಸದತ್ತು ತುಂಬಿಯೊಳ್ ಪೊಂಬಣ್ಣಂ ೪೫

ಚೈತ್ಯಕುಜದ ಮೊದಲೊಳ್ ಜಿನ
ಚೈತ್ಯಂ ಮರಮೊದಲೊಳಿರ್ಪ ಜಿನಮುನಿವೋಲ
ತ್ಯಂತಂ ಸೊಗಯಿಸೆ ನೆಗಳ್ದಾ
ದಿತ್ಯರ್ ಪೂಜಿಸುವರೊಸೆದು ವಿವಿಧಾರ್ಚನೆಯಿಂ ೪೬

ಲಂಬಣದ ಮುತ್ತು ತಾರಗೆ
ಯಂ ಬೆಳ್ಗೊಡೆ ಚಂದ್ರಬಿಂಬಮಂ ಚಮರಜಮಾ
ಬಿಂಬದ ರುಚಿಯಂ ಗೆಲೆ ಜಿನ
ಬಿಂಬಂ ಸೊಗಯಿಪುದು ಚೈತ್ಯವೃಕ್ಷದ ಮೊದಲೊಳ್ ೪೭

ಪುದಿದಿರ್ದಶೋಕವನಮ
ಧ್ಯದ ರಕ್ತಾಶೋಕವಿಪುಳವೃಕ್ಷದ ಮೊದಲೊಳ್
ಸದಮಳ ಜಿನಬಿಂಬಂ ಕನ
ಕದ ಪೀಠದ ಮೇಲೆ ಲೀಲೆವಡೆದೆಸೆದಿರ್ಕುಂ ೪೮

ಲಲಿತಾಶೋಕಂ ಭಾಮಂ
ಡಳಮಲರ್ವಟಿ ದಿವ್ಯಭಾಷೆ ಸುರಪಟಹಂ ಪೊಂ
ಗಳ ಹರಿಪೀಠಂ ಬೆಳ್ಗೊಡೆ
ಚಳಚಮರಜಮೆಸೆಯೆ ರಂಜಿಕುಂ ಜಿನಬಿಂಬಂ ೪೯

ಸ್ಮರನುರವಣೆಯಿಲ್ಲದುದಂ
ನಿರವಿಸಿದುವು ತರುಣಿಯರ ಮುಖಾಸವಕುಚಕೇ
ಕರ ಪದಹತಿಗೆಳಸದರ
ಲ್ಬುರುವಕುಳಂ ಕುರವಕಾಮ್ರತಿಳಕಮಶೋಕಂ ೫೦

ಅಲರಂ ಮುಡಿವಲರ್ವಚ್ಚಮ
ನೊಲವಿಂ ಸಮೆವಮರಿಯರ್ಕಳಿಲ್ಲಲ್ಲಿ ಜಗ
ತ್ತಿಳಕನ ಪಾದಮನರ್ಚಿಸು
ವಲಂಪು ಪೂಜೆಗಾಗಿ ರಾಗಮುದಯಿಸದುದಜಿಂ ೫೧

ದಿವಿಜವಧೂಟಿಯರಧರ
ಚ್ಛವಿಕುಂಕುಮಪಂಕದಿಂದೆ ಕೇಕರರೋಚಿಃ
ಪ್ರವಿಮಳ ಮಳಯರುಹಸ್ಮಿತ
ಧವಳಾಕ್ಷತ ಕುಸುಮವಿಸರದಿಂದರ್ಚಿಸುವರ್ ೫೨

ತರುಗಳ್ ನಿಜನಿಜಶಾಖಾ
ಕರದಿಂದಲ್ಲೊಕ್ಕಪುಷ್ಪಫಳಸಂಕುಳದಿಂ
ವರುಪನನಾರಾಧಿಪುವನೆ
ಸುರರೂರ್ಜಿತಬೋಧರೆಂತುಮಾರಾಧಿಸರೇ ೫೩

ವ॥ ಅಂತು ಹೃದ್ಯಮುಂ ನಿರವದ್ಯಮುಮಪ್ಪುದ್ಯಾನವನದಿಂದೊಳಗೆ ಪೂರ್ವಸೂಚಿತ ವರ್ಣನೋಚಿತ ಚತುರ್ದ್ವಾರವಿಸ್ತಾರಕ್ಕೊಳಗಾದ ವೇದಿಕೆಯಿಂದೊಳಗೆ

ಕಂ॥ ಪರಿವಾರಧ್ವಜಮಷ್ಟೋ
ತ್ತರಶತಮೊಂದೊಂದು ನಾಯಕಧ್ವಜದೊಳ್ ತ
ಳ್ತಿರೆ ದಶಭೇದಧ್ವಜಮೊ
ಪ್ಪಿ ರತ್ನಮಯಮಿರ್ಪುವನುಪಮಧ್ವಜ ಧರೆಯೊಳ್ ೫೪

ಹರಿಹಂಸವೃಷಭಶಿಖಿಗಜ
ಗರುಡಾಂಬುಜಚಕ್ರವೇಳಮಾಳಾಧ್ವಜಮಂ
ತರುಹನ ಜಯಮಂ ಪೇಳ್ವಂ
ತಿರೆ ದಶವಿಧಮೆಸೆದುವಷ್ಟಶತಮೇಕೈಕಂ ೫೫

ವ॥ ಅಂತು ರತ್ನರೋಚಿರ್ವ್ರಜದಿಂ ಕಳ್ಪಕುಜದಂತೆ ರಂಜಿಸುವ ವಿಜಯಧ್ವಜ ಧರೆಯಿಂದೊಳಗೆ ಪೂರ್ವವರ್ಣನೋಪೇತ ಚತುರ್ಗೋಪುರ ವಿಶಾಲಸಾಲದಿಂ ಲೀಲೆವಡೆದು

ಕಂ॥ ಮಾಲ್ಯಾತೋದ್ಯಜ್ಯೋತಿರ
ಮೂಲ್ಯಾಭರಣ ಪ್ರದೀಪವಸನಾಶನಸ
ತ್ಕಲ್ಯಗೃಹಪಾತ್ರದಾತೃಗು
ಣಾಲ್ಯರ್ಚಿತ ದಶವಿಧಾನ ಕಲ್ಪಕುಜಂಗಳ್ ೫೬

ದೇವಕುರೂತ್ತರಕುರುಗಳ್
ದೇವಾರಣ್ಯಂ ಸಮಂತು ಭೂತಾರಣ್ಯಂ
ದೇವನನಾರಾಧಿಸಿ ಧರೆ
ಗೀವ ಗುಣಂ ಪಡೆಯಲೆಂದು ಬಂದವೊಲೆಸೆಗುಂ ೫೭

ಅಂಕುರಮುಂ ನವಪಲ್ಲವ
ಮುಂ ಕೋರಕಮುಂ ಪ್ರಸೂನಮುಂ ಫಳತತಿಯಂ
ತಾಂ ಕುಡುಗುಮೆನೆ ಸುರದ್ರುಮ
ಸಂಕುಳಮಭಿಲಷಿತಫಳಮನೀವುದು ಪಿರಿದೇ ೫೮

ಎನಿಪ ದಶವಿಧಸುರದ್ರುಮ
ವನಮನುಪಮ ಜಿನಪದಾಬ್ಜಪೂಜಾರತರ
ಪ್ಪನಿಮಿಷರ ವಾಂಛಿತಾರ್ಥಮ
ನನುದಿನಮೀಯುತ್ತುಮಾವಗಂ ಸೊಗಯಿಸುಗುಂ ೫೯

ವ॥ ಅಂತನಲ್ಪಪ್ರಭಾತಳ್ಪಮಾದ ಕಳ್ಪಕುಜಮಹೀತಳದಿಂದೊಳಗೆ ಮುನ್ನಮಭಿವರ್ಣಿಸಿದ ಚೆಲ್ವಂ ತಳ್ಕೈಸಿದ ನಾಲ್ಕುಂ ಗೋಪುರಂಗಳಿಂ ಮನಂಗೊಳಿಸುವ ವೇದಿಕ ತಮ್ಮ ಚೆಲ್ವಂ ನಿವೇದಿಸೆ

ಕಂ॥ ನೃತ್ಯಗೃಹಂಗಳ್ ಕುಳನಗ
ಮತ್ಯುನ್ನತಿವಡೆಯಲೆಂದು ಭುವನೋನ್ನತನಂ
ಸ್ತುತ್ಯನನೋಲಗಿಸಿರ್ಪವೊ
ಲತ್ಯಾಯತಿವಡೆದು ಸುತ್ತಿ ಸೊಗಯಿಸುತಿರ್ಕುಂ ೬೦

ರಂಗಂ ಮೂವತ್ತೆರಡಾ
ರಂಗದೊಳೊಂದೊಂದಱಲ್ಲಿ ಮೂವತ್ತಿರ್ವರ್
ಪಿಂಗದೆ ದೇವಾಂಗನೆಯರ
ನಂಗಂ ನಲಿದಾಡೆ ನರ್ತಿಪರ್ ಪಲತೆಱದಿಂ ೬೧

ಸವಗಾಣಂ ಗಾಯಕಿಯ
ರ್ಗೆ ವೀಣೆ ಸಮವಾದಕಂ ಸುವಾದಕರ್ಗೆ ಮನೋ
ಭವಚಾಪಜ್ಯಾರವಮೆನೆ
ವಿವೇಕಿಗಳ್ ಗೀತವಾದ್ಯಮೊಗೆವುವು ಹೃದ್ಯಂ ೬೨

ದಿವಿಜಾಂಗನೆಯರ್ ನರ್ತಿಪ
ರವೆರಡರೊಳಮವರ ನರ್ತನದ ಪದಗತಿಯಿಂ
ದವಿರಳಮಭಿನಯಿಸುತ್ತುಂ
ನವನಾಟ್ಯರಸಾಧಿದೇವತೆಯರೆಂಬಿನೆಗಂ ೬೩

ವ॥ ಮತ್ತಮಾ ನರ್ತನಧರಿತ್ರೀಪ್ರಣಿಧಿಪ್ರಣೂತ ಮಹಾವೀಥೀಮಧ್ಯಮನಳಂಕರಿಸಿ ಶತಶತಸೂತ್ನ ರತ್ನ ತೋರಣಂಗಳಿಂ ನಯನೋತ್ಸವಕಾರಣಂಗಳಾಗಿ

ಕಂ॥ ಅಸ್ತಮಿತತಮಂಗಳ್ ಭುವ
ನಸ್ತುತಮಹಿಮಾವಳಂಬಿಗಳ್ ಪರಿವಿಡಿಯಿಂ
ವಿಸ್ತಾರಿಸಿ ನವನವರ
ತ್ನ ಸ್ತೂಪಮವೆಸೆಗುಮಭವ ನವಲಬ್ಧಿಯವೋಲ್ ೬೪

ಸ್ತೂಪವಿರಾಜಿತಜಿನಪ
ಶ್ರೀಪದಮಂ ಸುರಭಿಸಲಿಲಗಂಧಾಕ್ಷತೆ ನಾ
ನಾಪುಷ್ಪಸುಧಾಶನಮಣಿ
ದೀಪಾಗರುಧೂಪಫಳದಿನರ್ಚಿಪರಮರರ್ ೬೫

ವ॥ ಅಂತು ಮನಂಗೊಳಿಸುವ ಸಂಗೀತಕಶಾಲೆಯಿಂದೊಳಗೆ

ಕಂ॥ ಗಾರುಡಮಣಿರಚಿತ ಚತು
ರ್ದ್ವಾರಂ ಚತುರಾನನಂ ರವಿಸ್ಫಟಿಕಪ್ರಾ

ಕಾರಂ ಶ್ರೀಮಂಡಪಲ
ಕ್ಷ್ಮೀರಮೆ ತೆಗೆದುಟ್ಟ ದುಗುಲಮೆನೆ ಸೊಗಯಿಸುಗುಂ ೬೬

ಪಚ್ಚೆಯ ಮಣಿಗೋಪುರದಿಂ
ದುಚ್ಚಳಿಪಂಶುಗಳನಿಂದುಮಂಡಳದ ಮೃಗಂ
ಮೆಚ್ಚುವೆಳವುಲ್ಲೆನುತ್ತುಂ
ನಚ್ಚಿಯೆ ಬಂದೆಳಸಿ ಬಳಸಿ ಬೆಚ್ಚನೆ ಸುಯ್ಗುಂ ೬೭

ಮಂಗಳಕರ ಭುವನಾಧಿಕ
ಮಂಗಳನನನಂತಬೋಧನಿಧಿಯಂ ನಿಧಿಗಳ್
ಸಂಗಡದೋಲಗಿಸುವುದುಚಿ
ತಂ ಗಡಮೆನೆ ನೆಲಸಿ ಗೋಪುರದೊಳೋಲಗಿಕುಂ ೬೮

ವ॥ ಮತ್ತಮಪ್ರತಿಮಭಕ್ತಿಯುಕ್ತ ಕಳ್ಪಜಪ್ರತಿಹಾರಾಳಂಕೃತ ದ್ವಾರಚತುಷ್ಟಯ ವಿಶಿಷ್ಟ ಪ್ರಾಕಾರದಿಂದೊಳಗೆ

ಕಂ॥ ಗಗನಸ್ಫಟಿಕಘಟಿತ ಭಿ
ತ್ತಿಗಳೆಡೆಗೆಡೆಗೊಪ್ಪೆ ಪನ್ನೆರಡುಕೋಷ್ಠಂಗಳ್
ಸೊಗಯಿಸಿ ದಳದಂತಿರೆ ದಿ
ಟ್ಟಿಗೆ ಲಕ್ಷ್ಮೀಮಂಡಪಂ ಸ್ಮಿತಾಂಬುಜಮೆನಿಕುಂ ೬೯

ಶ್ರೀಮದ್ದ್ವಾದಶಕೋಷ್ಠ
ಸ್ತೋಮಂ ದಳಮಾಗೆ ವಿಷ್ಟರಂ ಕರ್ಣಿಕೆ ಪೊಂ
ದಾಮರೆಯೊಂದಂದದೆ ಲ
ಕ್ಷ್ಮೀಮಂಡಪಮೆಸೆದುದಸಮಗುಣಗಂಧಾರ್ಹಂ ೭೦

ವ॥ ಅಂತು ವಿಶಿಷ್ಟಮಾದ ದ್ವಾದಶಕೋಷ್ಠಂಗಳೊಳ್

ಮ.ಸ್ರ॥ ಮುನಿಮುಖ್ಯರ್ ಕಳ್ಪಜಸ್ತ್ರೀಜನತತಿ ಗಣಿನೀಸಂಕುಳಂ ಜ್ಯೋತಿರಬ್ಜಾ
ನನೆಯರ್ ಭೌಮಾಂಗನಾಸಂತತಿ ಭವನವಧೂಸಂಚಯಂ ಭಾವನಾಖ್ಯರ್
ವನಜರ್ ಜ್ಯೋತಿರ್ಗಣಂ ಕಳ್ಪಜವಿತತಿ ಮನುಷ್ಯಾದಿ ತಿರ್ಯಗ್ವ್ರಜಂ ನೆ
ಟ್ಟನೆ ಬಾಹ್ಯಂ ಪೂರ್ವಮಾಗೋಲಗಿಸೆ ಜಿನಪನೊಪ್ಪಿರ್ಪನಾಸ್ಥಾನದೀಪಂ ೭೧

ವ॥ ಅಂತು ಕಣ್ಗೊಳಿಸುವ ಲಕ್ಷ್ಮೀಮಂಡಪದ ಮಧ್ಯದಲ್ಲಿ

ಕಂ॥ ಅಷ್ಟಧನು ನಾಲ್ಕುಧನು ಮ
ತ್ತಷ್ಟಾರ್ಧಧನುಃಪ್ರಮಾಣದುದಯದ ಮೂಱುಂ
ವಿಷ್ಟರಮುರುವೈಢೂರ್ಯನು
ತಾಷ್ಟಾಪದ ಸರ್ವರತ್ನಮವು ಸೊಗಯಿಸುಗುಂ ೭೨

ನಿರ್ಮಳಿನಾದ್ಯಾಸನದ ಚ
ತುರ್ಮುಖತಳದಲ್ಲಿ ನೆಲಸಿ ಯಕ್ಷಕುಮಾರರ್
ಕೂರ್ಮೆಯೊಳೆ ಧರ್ಮಚಕ್ರಮ
ನೊರ್ಮೆಯುಮಾತ್ಮೀಯಮೌಳಿಯೊಳ್ ತಳೆದಿರ್ಪರ್ ೭೩

ಸರಸಿರುಹಚಕ್ರವೃಷಗಜ
ಗರುಡಾಂಬರಸಿಂಹಸುರಭಿಮಾಳಾಚಿಹ್ನ
ಸ್ಫುರಿತಾಷ್ಟಮಣಿಧ್ವಜಪರಿ
ಕರದಿಂ ಕರಮೆಸೆವುದೆರಡನೆಯ ಪೀಠತಳಂ ೭೪

ವ॥ ಮತ್ತಂ ಮೂಱನೆಯ ವಿಶಿಷ್ಟವಿಷ್ಟರಮಧಿಷ್ಠಾನಮಾಗೆ

ಕಂ॥ ವಾಸನೆಯಿಂದಮೆ ಸಮೆದ ವಿ
ಳಾಸಮನೊಳಕೊಂಡು ಗಂಧಕುಟಿ ಸೊಗಯಿಪುದಾ
ವಾಸನೆ ಸೋಂಕಿದರಂ ಸುಖ
ವಾಸನೆವೆರಸಮೃತಪದಮನಿರದೆಯ್ದಿಸುಗುಂ ೭೫

ಸಿಂಧುರವಿರೋಧಿಪೀಠಂ
ಗಂಧಕುಟೀಮಧ್ಯದಲ್ಲಿ ಸಿರಿಯಂ ಪಡೆಮಾ
ತೇಂ ಧರಿಯಿಸಿ ಕಮಳದ ತೆಱ
ದಿಂ ಧಾರ್ಮಿಕಮಧುಪಚಯಮನೇನೆಱಗಿಸಿತೋ ೭೬

ಪರಿಹೃತಸಂಗಂ ತ್ರಿಭುವನ
ಪರಿವೃಢನೆಂದಱಿಪುಗುಂ ತ್ರಿಪೀಠಾಗ್ರದ ಭಾ
ಸುರರತ್ನ ರುಚಿರಹರಿವಿ
ಷ್ಟರಮಂ ಮುಟ್ಟದೆ ವಿರಾಜಿಪಿರವಘಹರನಾ ೭೭

ನಿರುಪಮಪೀಠತ್ರಯಮಾ
ಗಿರೆ ಲೋಕತ್ರಿತಯಮಗ್ರಲೋಕಂ ಹರಿವಿ
ಷ್ಟರಮಾಗೆ ಮೇಗೆ ವಿಭು ನಾ
ಲ್ವೆರಲಂತರದಲ್ಲಿ ಸಿದ್ಧನಂತೆಸೆದಿರ್ಕುಂ ೭೮

ಉ॥ ಶ್ರೀಮದಗಾಧಬೋಧವಿಭವಾಂಬುಧಿಸಂಭವಚಂದ್ರನಂದದು
ದ್ದಾಮ ಸಿತಾತಪತ್ರಮದಱಪ್ರತಿಮೋಜ್ವಳಪೀಠಿಯಿಂದದಿಂ
ಚಾಮರಮಿಂದ್ರಭೂಮಿರುಹವಂತಿರಶೋಕಮಹೀರುಹಂ ಸಮ
ಗ್ರಾಮಿತಘೋಷದಂತೆಸೆಯೆ ಭಾಷೆ ವಿರಾಜಿಸಿದಂ ಜಿನಾಧಿಪಂ ೭೯

ಕಂ॥ ಸುರತೂರ್ಯಂ ತೂರ್ಯಂ ಸುರ
ತರು ಕುಸುಮಾಸಾರಮರ್ಘ್ಯಮೆ ದಲೆನೆ ಹರಿವಿ

ಷ್ಪರದಿಂ ಭಾಮಂಡಳದಿನ
ಕರನಿಂದುದಯಾಚಳಕ್ಕೆ ಜಿನನೆಣೆಯಾದಂ ೮೦

ಹರಿಪೀಠದ ನೆವದಿಂದಂ
ಸುರಗಿರಿ ಬೆಳ್ಗೊಡೆಯ ನೆವದಿನಮೃತದ್ಯುತಿ ಚಾ
ಮರದ ನೆವದಿಂ ಸುಧಾಂಬುಧಿ
ತರಂಗಮಾಳಿಕೆಗಳೋಲಗಿಪ್ಪವೊಲೆಸೆಗುಂ ೮೧

ಅಲರ್ವಟಿಯ ನೆವದಿನಕ್ಷಯ
ಲಲನೆಯ ಕಡೆಗಣ್ಣಬೆಳಗಶೋಕೆಯ ನೆವದಿಂ
ಫಳಿತಾಮರದ್ರುಮಂ ಭಾ
ವಳಯದ ನೆವದಿಂ ದಿನೇಶಬಿಂಬಮಳುಂಬಂ ೮೨

ವರಭಾಷೆಯ ನೆವದಿಂದಂ
ಸರಸ್ವತೀದೇವಿ ಸರ್ವಭಾಷಾತ್ಮಿಕೆ ಕೂ
ರ್ತರುಹನ ವಕ್ತ್ರಾಬ್ಜಮನಾ
ದರದಿಂದೋಲಗಿಸುವಂದದಿಂ ಸೊಗಯಿಸುಗುಂ ೮೩

ಮೃತಿ ಜನನಂ ಕ್ಷುಧೆ ತೃಷೆ ರುಜೆ
ರತಿದೋಷಂ ನಿದ್ರೆ ಸಾಧ್ವಸಂ ಬಧಿರತೆಯುಂ
ಧತೆ ಪಂಗುತೆಯಾಗದು ಜನ
ತತಿಗಾ ಜಿನಪತಿಯ ಮೈಮೆಯಿಂ ತತ್ಸಭೆಯೊಳ್ ೮೪

ಸಂಗಳಿಕುಂ ರತ್ನತ್ರಿತ
ಯಂಗಳ್ ಜಿನಸೇವೆಯಿಂದಮೆಂದಱಿಪುವವೋಲ್
ಪಿಂಗುವುದಂಧತೆ ಬಧಿರತೆ
ಪಂಗುತೆಯಂಧಾದಿಜನ್ಮಿಗಭವನ ಸಭೆಯೊಳ್ ೮೫

ದರ್ಪಣಮಂ ನೋಡಿದೊಡಂ
ತೋರ್ಪುದು ಭವವಿತತಿ ಜಿನಸಭೆಯೊಳಿದೆ ಚಿತ್ರಂ
ದರ್ಪಕಹತಜಿನಮುಖಮಣಿ
ದರ್ಪಣಮಂ ನೋಡೆ ತೋಱದೊಂದುಂ ಭವಮುಂ ೮೬

ಸ್ರ॥ ನಾನಾ ಪ್ರಾಸಾದಚೈತ್ಯಾವನಿ ಪರಿಖೆ ಲಸತ್ಪುಷ್ಪವಾಟಂ ನವೀನೋ
ದ್ಯಾನಂ ತುಂಗಧ್ವಜಂ ರಂಜಿಸೆ ಸುರತರು ಸಂಶೋಭಿ ಸಂಗೀತರಂಗ
ಸ್ಥಾನಂ ಶ್ರೀಮಂಡಪಂ ದ್ವಾದಶಗಣವೃತಪೀಠತ್ರಯಾಗ್ರಸ್ಥಸಿಂಹಾ
ಸನ ಶ್ರೀಪೀಠಪೂರ್ವಾಚಳದೊಳಘಹರಂ ಪಾರ್ಶ್ವನಾಥಾರ್ಕನಿರ್ವಂ ೮೭

ವ॥ ಅಂತನಂತಚತುಷ್ಟಯಪ್ರಕೃಷ್ಟನುಂ ಪ್ರಾತಿಹಾರ್ಯಾಷ್ಟಕವಿಶಿಷ್ಟನುಮಪ್ಪ ಪಾರ್ಶ್ವನಾಥಂ ಸನಾಥಮಾದ ಸಮವಸರಣದ ಸಕಳಜನಮನೋನಯನಪ್ರಸಾದಪ್ರದ ಪ್ರಾಸಾದ ಚೈತ್ಯವಿಚಿತ್ರ

ಧಾತ್ರಿಯುಮಂ ನಿಖಿಳಲೋಚನಾಲಂಬನ ಕದಂಬ ಕುವಳಯ ಸುಧಾಮಯೂಖಲೇಖೆಯೆನಿಸಿ ದಮಳಜಳ ವಿಳಸತ್ಖಾತಿಕಾಲೇಖೆಯುಮಂ ಸುರಸುಂದರೀಸಂದೋಹ ನಯನಷಡಯನ ಸಮುಲ್ಲಸಿತಮಂ ಪಲ್ಲವಿಸುವುತ್ಫುಲ್ಲ ಫುಲ್ಲಮಲ್ಲಿಕಾಕಂಕೆಲ್ಲಿಪ್ರಮುಖವಲ್ಲೀ ವನಮುಮಂ ಶುಕಪಿಕಪ್ರಕರಪರೀತಚೂತಾದ್ಯನೋಕಹಾನೀಕಾತಿ ಹೃದ್ಯಮೆನಿಸಿದುದ್ಯಾನಮುಮಂ ವಿಜಿತತ್ರಿ ಜಗದ್ವಿಜಯ ಮಕರಧ್ವಜ ವಿಜಯಧ್ವಜಮೆನಿಸಿದುತ್ತುಂಗಮಂಗಳಧ್ವಜಾವನಿಯುಮನನಲ್ಪಜನ ನೇತ್ರ ಪುತ್ರಿಕಾವಿಶ್ರಮಣದರುಣ ರಮಣೀಯತಳ್ಪತಳಮೆನಿಸಿದ ಸತ್ತಳಾಕಳ್ಪಕಳ್ಪಾವನಿಯ ಸಮಾಜಮುಮಂ ಸರಸ ಸಾಮಾಜಿಕನಿಕರ ಹೃದ್ಯಾತೋದ್ಯ ಸಂಸ್ತುತ್ಯ ನೃತ್ಯ ಸಂಗೀತ ಗೀತ ಸಂಗತಮೆನಿಸಿದಖಿಳ ಸುಖಪ್ರಸಂಗಸಂಗೀತ ರಮ್ಯಹರ್ಮ್ಯಂಗಳುಮಂ ಸಕಳಕಳಾ ವಿಚಕ್ಷಣಾಪಕ್ಷ ವಿಕ್ಷೇಪಣಾಪಾದಿರೂಪಲಕ್ಷ್ಮೀ ಲಕ್ಷಿತಮೆನಿಸಿದಕ್ಷೂಣ ಮೋಕ್ಷಲಕ್ಷ್ಮೀವಿವಾಹಮಂಡಪ ಲಕ್ಷ್ಮೀಮಂಡಪಮುಮನಮರಪರಿವೃಢಂ ಪರಿವಿಡಿಯಿಂ ವಿಸ್ಮಯಸ್ಮೇರಲೋಚನನಾಗಿ ನೀಡುಂ ನೋಡುತ್ತುಂ ಮಾನಸ್ತಂಭಸ್ತೂಪಾದ್ಯಚಿಂತ್ಯ ಮಹಿಮಾಸ್ಪದಾಭ್ಯರ್ಚ್ಯವಂದ್ಯಂಗಳಂ ಪಂಚಕಲ್ಯಾಣಪೂಜಾಪ್ರವೀಣೆಯೆನಿಸಿದಿಂದ್ರಾಣೀಸಂಯುಕ್ತಂ ನಿಖಿಳಜಿನಪೂಜಾಸಕ್ತಂ ಸ್ತುತಿಶತಸಹಸ್ರಂಗಳಿಂ ಸ್ತುತಿಯಿಸುತ್ತುಂ ನವ್ಯದಿವ್ಯಾರ್ಚನಾದ್ರವ್ಯಂಗಳಿಂದರ್ಚಿಸುತ್ತುಂ ಪರಮಾನಂದಸಂದೋಹದಿಂದಭಿವಂದಿಸುತ್ತುಂ ಬಂದು ಜಗತ್ತಿಳಕ ಮುಖ ಕಮಳಾವ ಲೋಕಮಾತ್ರ ಸಂಜಾತಹರ್ಷೋತ್ಕರ್ಷಸರ್ವಾಂಗಪುಳಕಂ ನಿಜನಿಟಿಳತಟ ಘಟಿತಕರಕಮಳ ಯುಗಳಕನೊಳಗಂ ಪೊಕ್ಕು

ಕಂ॥ ಸರ್ವಜ್ಞ ಪದಾಂಬುರುಹಂ
ನಿರ್ವಾಣಶ್ರೀಯನೀವುದೆಂದುಚಿತ ಮನೋ
ನಿರ್ವಹಣಂ ಮೂಱಿಡೆಯೊಳ್
ಸರ್ವಾಂಗಪ್ರಣತನಾದನಂದಮರೇಂದ್ರಂ ೮೮

ಬಲವಪ್ಪ ತೆಱದೆ ತಾರಾ
ವಳಿಸಹಿತಂ ಚಂದ್ರನಮರಶೈಳಮನಿಂದ್ರಂ
ಲಲನಾಸಮೂಹಸಹಿತಂ
ಬಲವಂದಂ ಗಂಧಕುಟಿಯನಕುಟಿಳಚಿತ್ತಂ ೮೯

ಗಂಧಕುಟಿಯಂ ಸುಸೌರಭ
ಬಂಧುರಮಂ ತ್ರಿಃಪ್ರದಕ್ಷಿಣಂ ಬರುತೆ ಜಗ
ದ್ಬಂಧುವನಶೇಷಗುಣಮಣಿ
ಸಿಂಧುವನಿಂತೆಂದು ಪೊಗೞ್ದನಮರವರೇಣ್ಯಂ ೯೦

ರ॥ ಜಯಜಯ ದೇವದೇವ ನಿರವದ್ಯ ನಿರಾಮಯ ಶುದ್ಧ ಬುದ್ಧ ಚಿ
ನ್ಮಯ ಮದದೂರ ಧೀರ ಜಿನ ನಿತ್ಯ ನಿರಂಜನ ಪುಣ್ಯಪುಂಜ ನಿ
ರ್ಭಯ ಪರಮೇಶ ಪಾಪಹರರೂಪ ದಯಾಮೃತರೂಪ ನಿನ್ನ ಮ
ಹಿಮೆಯನದನಂತುಟಂತುಟೆನಲಾರ್ ನೆಱೆವರ್ ಭುವನೈಕಬಾಂಧವಾ ೯೧

ವ॥ ಅಂತು ತ್ರಿಲೋಕರಕ್ಷಾಮಣಿಯಂ ತ್ರಿಃಪ್ರದಕ್ಷಿಣಂ ಬಂದು ತ್ರಿಕರಣಶುದ್ಧಿಯಿಂ

ಮ॥ ನಿಧಿ ಚಿಂತಾಮಣಿ ಕಾಮಧೇನು ಸುರಭೂಜಂ ಸ್ಪರ್ಶಮೊಂದಾಗಿ ಬಂ
ದು ಧರಿತ್ರೀಸ್ತುತ ಸಾರವಸ್ತುಗಳನೀಯುತ್ತಿರ್ದುವೆಂಬಂತೆ ವಾ
ಶ್ನಿಧಿ ಪಾರ್ಶ್ವಾಧಿಪಪಾದಪೀಠಮನಲಂಪಿಂದಿಂದ್ರನಿಂದ್ರಾಣಿ ಪು
ಣ್ಯಧನರ್ ಪೂಜಿಸಿದರ್ ಶತೇಂದ್ರಸಹಿತಂ ದಿವ್ಯಾರ್ಚನಾದ್ರವ್ಯದಿಂ ೯೨

ಚಂ॥ ಎನಿತುಸುರತ್ನದರ್ಪಣಸಿತಾತಪವಾರಣಚಾಮರಂ ಧ್ವಜಾ
ದ್ಯನುಪಮಮಂಗಳಂಗಳೆನಿತುತ್ತಮ ಪುಷ್ಪಫಳಪ್ರತಾನಮಂ
ತನಿತಱಿಂದ್ರನಿಂದ್ರಸತಿಯಿಂದ್ರಶತಂ ದಿವಿಜಾಳಿ ದೇವಕಾ
ಮಿನಿಯರನಿಂದ್ಯರರ್ಚಿಸಿದರಂದು ಜಿನೇಂದ್ರಪದಾರವಿಂದಮಂ ೯೩

ಕಂ॥ ಸಹಜಾಕೃತಿಯಂ ಶಕ್ರಂ
ಮಹಮಂ ಜಿನನೊಳ್ಪನೀಕ್ಷಿಪೆಸಮುಸಿರ್ವೊಂದಾ
ಗ್ರಹದೆ ಸಹಸ್ರೇಕ್ಷಣನುಂ
ಸಹಸ್ರಭುಜನುಂ ಸಹಸ್ರಜಿಹ್ವನುಮಾದಂ ೯೪

ವ॥ ಮತ್ತಮನವರತ ಜಿನಪದಪಯೋಜಸೇವಾಸಕ್ತಚಿತ್ತಂ ಶುಭವೃತ್ತಮುನಿ ಕೋಷ್ಠಾಧಿಷ್ಠಿತರುಂ ಸರ್ವಜ್ಞ ಸಾಮ್ರಾಜ್ಯಪದ ಯೌವರಾಜ್ಯಪದಪ್ರತಿಷ್ಠಿತರುಂ ಚತುರ್ಜ್ಞಾನ ನಿಧಾನರುಂ ಸಪ್ತರ್ಧಿವಾರ್ಧಿಗಳುಮಪ್ಪ ಸ್ವಯಂಭೂನಾಮಾದಿ ಗುಣಧರ ಗಣಧರ ಪ್ರಮುಖ ನಿಖಿಳ ಮುನಿಜನಚರಣಸರಸಿರುಹಂಗಳಂ ನಿಜಮಕುಟಮಣಿಕಿರಣವಾರಿ ಧಾರಾಸಹಿತಂ ಸುರತರುಪ್ರಸೂನಾದಿ ದಿವ್ಯಾರ್ಚನಾಪ್ರತಾನದಿಂ ಪ್ರತ್ಯೇಕಮಾಗರ್ಚಿಸಿ ಪರಮಾನಂದದಿಂದಭಿ ವಂದಿಸಿ ಸಮನಂತರಂ ನಿರಂತರಶೋಭಾವಿಶಿಷ್ಟಾಶೇಷಕೋಷ್ಠ ನಿರೀಕ್ಷಣಸಂತುಷ್ಟನಮರ ಶ್ರೇಷ್ಠ ನಿಜಕೋಷ್ಠಮನಳಂಕರಿಸಿರೆ

ಕಂ॥ ಕೇವಳಬೋಧಂ ದೇವರ
ದೇವಂಗುದಿಯಿಸಿದ ವಾರ್ತೆಯಂ ನಿಜಚರರಿಂ
ಭೂವಿಶ್ರುತಾಶ್ವಸೇನಮ
ಹೀವರನುಂ ಬ್ರಹ್ಮದತ್ತೆಯುಂ ಕೇಳಲೊಡಂ ೯೫

ಹರಿವಿಷ್ಟರದಿಂದಿಟಿದಾ
ದರದಿಂದೇೞಡಿಯನಾ ದೆಸೆಗೆ ನಡೆದು ಜಗ
ದ್ಗುರುಚರಣಕ್ಕೆಱಗಿದುದಾ
ಗುರುಯುಗಳಂ ಗುಣದ ನೆಱವಿಯೆಱಗಿಸದಾರಂ ೯೬

ನೆಗೆದುವು ಪುಳಕಂ ಬಾಷ್ಪಂ
ಬುಗಲೊಗೆದುವು ವನನುಭೂತಹರ್ಷೋತ್ಕರ್ಷಂ
ಬಗೆಯೊಳ್ ಬಳೆದತ್ತಾ ಪಿತೃ
ಯುಗಳಕ್ಕದು ತಕ್ಕುದಲ್ತೆ ಬಗೆವೊಡೆ ಜಗದೊಳ್ ೯೭

ಅಕ್ಕುಂ ತಾಯ್ತಂದೆಗೆ ನಾ
ಲ್ಕಕ್ಕರದಜಿವಾಯ್ತು ಸುತನೊಳೆನೆಯುಂ ಹರ್ಷಂ
ಮಿಕ್ಕಖಿಳ ಬೋಧಮಾಯ್ತೆನೆ
ಮೊಕ್ಕಳವರ್ಗಾಯ್ತು ಹರ್ಷಮನೆ ಕೌತುಕಮೇಂ ೯೮

ವ॥ ಅಂತು ಸಂತಸದಂತಮನೆಯ್ದಿ ತದನಂತರಂ

ಕಂ॥ ಇತ್ತಂಗಚಿತ್ತಮಂ ಭೂ
ಪೋತ್ತಮನಾ ವಾರ್ತೆವೇಟ್ಟಿ ಮನುಜಂಗತ್ಯಾ
ಯತ್ತ ಪುಳಕಕ್ಕೆ ಭಕ್ತಿಗೆ
ಮತ್ತೊಸೆದಿತ್ತಂಗಚಿತ್ತಮಂ ಶುಭವೃತ್ತಂ ೯೯

ಮ.ಸ್ರ॥ ಪುಳಕಂಗಳ್ ಪೊಣ್ಮೆ ಪುಣ್ಯಾಂಕುರನಿಕರದವೋಲ್ ಕ್ಷೇತ್ರಸುಕ್ಷೇತ್ರದೊಳ್ ಮಂ
ಗಳತೂರ್ಯಧ್ವಾನಮಷ್ಟಾಶೆಯೊಳೆಸೆಯೆ ಪೊಬಲ್ಗಪ್ಪಲೋಭಾವಿಳಾಸಂ
ಬಳೆವನ್ನಂ ಸ್ವರ್ಣರತ್ನೋಜ್ವಳವಸನಫಳಾದ್ಯರ್ಚನಾ ದ್ರವ್ಯಮಂ ಕೋ
ಮಳೆಯರ್ಕಳ್ ತಾಳ್ದಿ ಸುತ್ತುಂಬರೆ ವಿಭು ಪೊಜಮಟ್ಟಂ ಮಹೋತ್ಸಾಹಗೇಹಂ ೧೦೦

ವ॥ ಆ ಸಮಯದೊಳ್

ಕಂ॥ ಗುಡಿಗೃಹದೇವತೆಯರ್‌ನಿಜಿ
ವಿಡಿದುಟ್ಟವೊಲೊಪ್ಪೆ ರತ್ನ ತೋರಣತತಿಯೊ
ಳ್ಪಿಡಿದಾ ದೇವತೆಯರ ತಲೆ
ದುಡುಗೆವೊಲಿರೆ ವಾರಣಾಸಿಯೇಂ ರಾಜಿಸಿತೋ ೧೦೧

ಮೃದುಪವನಹತಪತಾಕಾ
ಸ್ಪದಕೇತುಕರಂಗಳಿಂದೆ ಜಿನಪೂಜೆಗೆ ಬೇ
ಗದೆ ಪೋಗಿಮೆಂದು ಪೇಟ್ವಂ
ದದಿನೆಸದುದು ವಾರಣಾಸಿ ನಿಜಪುರಜನಮಂ ೧೦೨

ವ॥ ಅಂತು ವಿರಾಜಿಸುವ ವಾರಣಾಸಿಯಿಂದಶ್ವಸೇನಂ ವಿಶ್ವವಿನೇಯನಿಕಾಯಂಬೆರಸು ಪೊಜಮಟ್ಟು ದುರಿತಾರಿವಾರಣಾಸಿಯೆನಿಸಿದ ಜಿನೇಶನ ಸಭೆಗೆ ಬರವರೆ

ಮ॥ ವನಜಾಮೋದಮನಾಂತು ಕೈರವದ ಕಂಪಂ ಪೇಜಿ ಮಂದಾರಚಂ
ದನಸಂತಾನಕ ಪಾರಿಜಾತ ವಿಬುಧೋರ್ವೀಜಾತಸಂಜಾತ ನೂ
ತನ ಸೌಗಂಧ್ಯದೊಳೊಂದಿ ಬಂದೆಲರಮಂದಾನಂದದಿಂ ತನ್ನೃಪಾ
ಳನನಾಲಿಂಗಿಸುವಂದದಿಂ ಸಮುವಸೃತ್ಯುಜ್ಜೀವನಂ ಪಾವನಂ ೧೦೩

ವ॥ ಅಂತಾ ಪಾವನಸ್ಪರ್ಶನದಿಂ ಪವಿತ್ರಗಾತ್ರನಾಗುತ್ತುಂ ಬಂದು ತನ್ನಾಸನ್ನಭವ್ಯತೆಯಂ
ಪ್ರಕಟಿಸುವಂತೆ ವಿನೇಯಜನಶರಣಸಮವಸರಣಾಸನ್ನ ಪ್ರದೇಶದೊಳ್
ನಿಜಗಜಸ್ಕಂಧದಿಂದಿೞಿದು ನಿಸರ್ಗಭಕ್ತಿಯೊಳ್ ಪಾದಮಾರ್ಗದಿಂ ನಡೆತಂದು

ಕಂ॥ ಉನ್ನತರ್ಗೆ ಮಾಳ್ಪ ವಿನಯಮ
ದುನ್ನತಿಯನೆ ಮಾಳ್ಕುಮೆಂಬುದಂ ಸೂಚಿಪವೋಲ್
ಸನ್ನುತ ಸೋಪಾನಂಗಳಿ
ನುನ್ನತಮಂ ಸಮವಸರಣಮಂ ಪುಗುತಂದಂ ೧೦೪

ನಿರತಿಶಯ ಸಮವಸರಣದ
ಪರಿಶೋಭೆಯೊಳಿರದೆ ನೃಪನ ಕಣ್ಣುಂ ಮನಮುಂ
ಪರಿದುವು ಜಿನನಿರ್ದೆಡೆಗೆನೆ
ಪರಮೇಶನ ಮೂರ್ತಿವಿಭವಮೇನಚ್ಚರಿಯೋ ೧೦೫

ವ॥ ಅಂತು ಸಮುದ್ಭೂತಭಕ್ತಿಪ್ರೇರಿತ ಚಿತ್ತಂ ಬಂದು ಗಂಧಕುಟಿಯಂ ತ್ರಿಃಪ್ರದಕ್ಷಿಣಂ ಬಂದು

ಕಂ॥ ನೃಪನರ್ಚಿಸಿದಂ ಭಕ್ತಿಯಿ
ನುಪಾಂತ್ಯ ಜಿನಪತಿಪದಾಂತಿಕಮನಬ್ಜಸುಗಂ
ಧ ಪದಾಂಬುಸುಗಂಧಾಕ್ಷತ
ಸುಪುಷ್ಪ ಚರು ದೀಪ ಧೂಪಫಳಮಣಿಗಣದಿಂ ೧೦೬

ಮ॥ ಕಮಠಂಗುಗ್ರತೆ ನಿನ್ನೊಳತ್ಯುಪಶಮಂ ದುಶ್ಚಿಂತೆಯಿಂ ಕರ್ಮಬಂ
ಧಮವಂಗಸ್ಖಳಿತಾತ್ಮಚಿಂತೆಯೊಳೆ ನಿನ್ನೊಳ್ ಬಂಧವಿಚ್ಛಿತ್ತಿದು
ರ್ದಮಮಿಥ್ಯಾತ್ವಮಹತ್ವದಿಂದವನೊಳಜ್ಞಾನಂ ಸುದೃಷ್ಟಿತ್ವದು
ತ್ತಮಬೋಧಂ ನಿನಗಾಗೆ ಲೋಕಗುರುವಾದೈ ಪಾರ್ಶ್ವತೀರ್ಥೇಶ್ವರಾ ೧೦೭

ಕರಣಗ್ರಾಮನಿಯಾಮಕಾಚರಣಮುಷ್ಟಿಭ್ರಾಜಿಯಿಂ ಭೇದತ
ತ್ವರ ವಿಜ್ಞಾನವಿಶೇಷಣಸ್ಖಳಿತಧಾರಾದೀಪ್ರಸಂಶೋಭಿಯಿಂ
ವರ ವೈರಾಗ್ಯಗುಣಪ್ರತೇಜಿತನಿಜಧ್ಯಾನಾಸಿಯಿಂ ದುಷ್ಟದು
ರ್ಧರ ಕರ್ಮಾರಿಯುನಾರ್ದು ಗೆಲ್ದಧಟನಾದೈ ಪಾರ್ಶ್ವತೀರ್ಥೇಶ್ವರಾ ೧೦೮

ಗಿರಿಗಳ್ ವಜ್ರಶರೀರನಂ ವಿವಿಧಭೂತಂ ಲೋಕರಕ್ಷಾಗುಣಾ
ಕರನಂ ಕ್ರೂರಮೃಗೋತ್ಕರಂ ದೃಢತರಧ್ಯಾನಾಗ್ನಿಸಂಭೂತಿ ಭೂ
ಧರನಂ ಕೆಂಡದಖಂಡವೃಷ್ಟಿವಿಭವಂ ಶಾಂತಾಮೃತಾಂಭೋಧಿಯಂ
ಪಿರಿದುಂ ಬಾಧಿಸವೆಂಬವೋಲದಿರದಿರ್ದೈ ಪಾರ್ಶ್ವತೀರ್ಥೇಶ್ವರಾ ೧೦೯

ನರನಾಥಂ ನಿರುತಂ ಸ್ವತಂತ್ರನೆನಿಪಂ ಸಾಪತ್ನರಂ ಮಿಕ್ಕ ಭೂ
ವರರಂ ಗೆಲ್ವವೊಲಂತರಂಗದಘಮಂ ಬಾಹ್ಯೋಪಸರ್ಗಂಗಳಂ
ಸ್ಥಿರಯೋಗೋನ್ನತಿಯಿಂ ಸ್ವತಂತ್ರನೆನಿಸಿರ್ದೆಟ್ಟಿಟ್ಟ ನಿರ್ಬಂಧದಿಂ
ಪರಮಾರ್ಹಂತ್ಯಪದಕ್ಕೆ ನೀನಧಿಪನಾದೈ ಪಾರ್ಶ್ವತೀರ್ಥೇಶ್ವರಾ ೧೧೦

ಉಪಸರ್ಗಂ ಕಿಡುಗುಂ ನಿಜಾಂಘ್ರಿಯುಗಮಂ ಸಂಪ್ರೀತಿಯಿಂ ಪೂಣ್ಬು ಭಾ
ವಿಪ ಭವ್ಯರ್ಗೆನೆ ನೀನವಂ ನಿರವಶೇಷಂ ಘಾತಿಯೊಳ್ ಕಾಡಿ ಘಾ

ತಿಪುದೇನಚ್ಚರಿ ಬಲ್ಲಿದರ್ಗೆಡಱೆ ಮೂಲೋಚ್ಚಿತ್ತಿ ತದ್ವೈರಿಗಂ
ಬುಪದೇಶಂ ಪುಸಿಯಾಗದಂತೆಸಗಿದೈ ಶ್ರೀಪಾರ್ಶ್ವತೀರ್ಥೇಶ್ವರಾ ೧೧೧

ನೆಗಟ್ಟಿರ್ದಾತ್ಮನೊಳೊಲ್ದು ಯೋಜಿಸಿ ಮನೋವಾಕ್ಕಾಯಮಂ ಸಂವೃತಾ
ತ್ತಿಗಳಂ ಸಂಯಮದಿಂ ವಿಘಾತಿಪೆಡೆಯೊಳ್ ತದ್ಭ್ರಾತೃನೆಂಬಂತೆ ಮಾ
ಡೆ ಗಡೋರಂತುಪಸರ್ಗಮಂ ಕಮಠನಾರ್ಪಿಂದಾಳ್ದನಂ ಗೆಲ್ವ ಸಾ
ಸಿಗನಾಳ್ಗೆಟ್ಟಿನದೆಂಬವೋಲುಜಿದ ಗೆಲ್ದೈ ಪಾರ್ಶ್ವತೀರ್ಥೇಶ್ವರಾ ೧೧೨

ಶಾ॥ ಉಗ್ರಾಹೀಂದ್ರಮದಾಂಧಸಿಂಧುರತರಕ್ಷು ಕ್ರೂರಕಂಠೀರವೋ
ದಗ್ರವ್ಯಾಘ್ರದವಾಗ್ನಿವಜ್ರಪವನವ್ಯಾಮಿಶ್ರಿತಾಶ್ರಾಂತವೃ
ಷ್ಟಿಗ್ರಾಹಾದ್ಯಸುರಪ್ರಭೂತಭಯಕೃದ್ವೈಕುರ್ವಣಾವ್ಯಾಪತ್ಯೈ
ಕಾಗ್ರಧ್ಯಾನನಿಧಾನದಿಂದೆ ಜಿನನಾದೈ ಪಾರ್ಶ್ವತೀರ್ಥೇಶ್ವರಾ ೧೧೩

ವ॥ ಎಂದಿಂತಷ್ಟಮಹಾಪ್ರಾತಿಹಾರ್ಯವರ್ಯನಂ ವಿಶಿಷ್ಟಾಷ್ಟಕದಿಂ ಸ್ತುತಿಯಿಸಿ ಸಾಷ್ಟಾಂಗಪ್ರಣತನಾಗಿ ಬೞಿಯಂ ಭವ್ಯಜಿನಶರಣ್ಯರಂ ಗಣಧರಾಗ್ರಗಣ್ಯರಂ ಗುರುಭಕ್ತಿಪೂರ್ವಕಮಭಿವಂದಿಸಿ ತದನಂತರಂ ನಿಜೋಚಿತಸ್ಥಾನದೊಳ್ ಕುಳ್ಳಿರ್ದು ಕರಕಮಳಯುಗಳಮಂ ಮುಗಿದು

ಕಂ॥ ಜೀವಾಜೀವಸ್ಥಿತಿಯನ
ದಾವುದುಪಾದೇಯಮವಱೊಳಾವುದು ಹೇಯಂ
ಭಾವಿಸೆ ಬೆಸಸುವುದು ಜಗ
ತ್ಪಾವನವಿಮಳಾವಬೋಧ ನೀಂ ದಯೆಯಿಂದಂ ೧೧೪

ವ॥ ಎನಲೊಡಂ

ಕಂ॥ ಮಿಸಿಸಿದಪನಮೃತವರ್ಷದಿ
ನಸದಳಮವನಿಪನನೆಂಬವೋಲ್ ದಂತರುಚಿ
ಪ್ರಸರಂ ಪಸರಿಸೆ ಬೆಸಸಿದ
ನಸದೃಶಮಹಿಮಾವಳಂಬನೀ ತೆಱದಿಂದಂ ೧೧೫

ಪರಿಕಿಪೊಡುಪಯೋಗಮಯಂ
ಶರೀರಮಿತನತನು ಕರ್ತೃ ಭೋಕ್ತೃ ದಿಟಂ ಸಂ
ಸರಣಸ್ಥನೂರ್ಧ್ವಗಮನಂ
ವರ ಸಿದ್ಧಂ ಜೀವನೆನಿಕುಮರ್ಹನ್ಮತದೊಳ್ ೧೧೬

ಎರಡುಂ ತೆಱನಕ್ಕುಂ ಜೀ
ವರಾಶಿ ಮುಕ್ತರ್ ಸಮಂತು ಸಂಸಾರಿಗಳೆಂ
ದಿರದೇಕವಿಧಂ ಮುಕ್ತರ್
ಪರಿಕಿಸೆ ಸಂಸಾರಿಜೀವಮದು ಪಲವುತೆಱಂ ೧೧೭

ನಿಸದಂ ಪದಿನಾಲ್ಕುಂ ಜೀ
ವಸಮಾಸೆಯೊಳನಿತೆ ಮಾರ್ಗಣಾಸ್ಥಾನದೊಳೀ
ಕ್ಷಿಸುವುದನಿತ್ತೆ ಗುಣಸ್ಥಾ
ನಸಮಿತಿಯೊಳ್ ಬೇಱೆವೇಱೆ ಸಂಸಾರಿಗಳಂ ೧೧೮

ವ॥ ಅವಲ್ಲದೆಯುಂ

ಕಂ॥ ನಿರುತಂ ಪುದ್ಗಲಮೆಂದುಂ
ವರಧರ್ಮಾಧರ್ಮಗಗನಕಾಲಂಗಳುಮೆಂ
ದಿರದಯ್ದುತೆಱದೆ ನೆಗಱ್ಗುಂ
ಪರಮಾಗಮದೊಳ್ ಸಮಂತಜೀವದ್ರವ್ಯಂ ೧೧೯

ಪರಿಕಿಸೆ ಜೀವದ್ರವ್ಯಂ
ಬೆರಸಿರೆ ಷಡ್ದ್ರವ್ಯಮೆನಿಕುಮವಱೊಳ್ ಕಾಲಂ
ಪರಿಹೀನಮಾಗೆ ಪಡೆಗುಂ
ನಿರುತಂ ಪಂಚಾಸ್ತಿಕಾಯಮೆಂಬೀ ಪೆಸರಂ ೧೨೦

ಪರಿಭಾವಿಸಿ ಪಡೆಗುಂ ಬಂ
ಧುರ ಜೀವಮಜೀವಮಾಸ್ರವಂ ಬಂಧಂ ಸಂ
ವರೆ ನಿರ್ಜರೆ ಮುಕ್ತಿಗಳಿವೆ
ಪರಮಾರ್ಥಂ ಸಪ್ತತತ್ತ್ವಮೆಂಬೀ ಪೆಸರಿಂ ೧೨೧

ಇವೆ ಪುಣ್ಯಪಾಪದೊಳ್ ಬೆರ
ಸಿ ವಿಕಲ್ಪಿಸೆ ನವಪದಾರ್ಥಮೆನಿಸುಗುಮೊಂದೊಂ
ದು ವಿಚಾರಿಪಂದು ಬಹುಭೇ
ದವಿಧಾಯಿಗಳೆನಿಸುಗುಂ ಜಿನಪ್ರವಚನದೊಳ್ ೧೨೨

ವ॥ ಅದಲ್ಲದೆಯುಂ

ಚಂ॥ ಜಿನ ಜಿನಸೂಕ್ತಿ ಸೂಕ್ತಿ ಕಥಿತಾರ್ಥಚಯಂಗಳೊಳಾದ ನಚ್ಚುದ
ರ್ಶನಮಜಿತಂ ವಿಬೋಧಮಮಳಾಚರಣಂ ಸುಚರಿತ್ರಮಕ್ಕುಮಿಂ
ತಿನಿತುಮನಾಕುಳಂ ನಿಜಪರಾತ್ಮನೊಳಿರ್ದೊಡೆ ಶುದ್ಧ ದೃಗ್ವಿಬೋ
ಧನುತಚರಿತ್ರಮೆಂದೆನಿಕುಮಿಂತಿವೆ ಮುಕ್ತಿಗೆ ಮುಖ್ಯಕಾರಣಂ ೧೨೩

ಕಂ॥ ವ್ಯವಹಾರನಯಾಶ್ರಿತಶು
ದ್ಧ ವಿನಿಶ್ಚಯ ನಯವಿಶಿಷ್ಟ ರತ್ನತ್ರಯಮೆಂ
ಬಿವು ಮುಕ್ತಿಗೆ ಕಾರಣಮ
ಪ್ಪುವು ವಿಮಳಧ್ಯಾನಮಂತವರ್ಕೆ ನಿಮಿತ್ತಂ ೧೨೪

ಉಪಶಾಂತಂದಾಂತಂ ಸಂ
ದುಪೇಕ್ಷಕಂ ಸಲೆ ತಿತಿಕ್ಷು ನಿಃಕಾಂಕ್ಷಮನಃ

ಕ್ಷಪಿತದುರಿತಾರಿಪಕ್ಷಂ
ವ್ಯಪೇತದೋಷಂ ನಿರಸ್ತ ರಾಗದ್ವೇಷಂ ೧೨೫

ನಿರುತಂ ಬಹಿರಾತ್ಮನುಮಂ
ತರಾತ್ಮನುಂ ಭಾವಿಪಂದು ಪರಮಾತ್ಮನುಮೆಂ
ದಿರದಕ್ಕುಂ ಮೂಱುತೆಱಂ
ಪರಿಕಿಪೊಡೆ ದಶಾವಿಭೇದದಿಂ ಜೀವಚಯಂ ೧೨೬

ಮಾನಿತ ಪರಮಾತ್ಮಶ್ರ
ದ್ಧಾನಾನುಷ್ಠಾನ ವಿಶ್ರುತಧ್ಯಾನ ಸಮಾ
ಧಾನನಿರದಂತರಾತ್ಮಂ
ತಾನಕ್ಕುಂ ತದ್ಗುಣೇತರಂ ಬಹಿರಾತ್ಮಂ ೧೨೭

ಪರಮವಿಶುದ್ಧಜ್ಞಾನ
ಸ್ವರೂಪನತಿವಿಶದದರ್ಶನಂ ನಿರ್ಲೇಪಂ
ನಿರತಿಶಯಸೌಖ್ಯನಮಳಂ
ಪರಮಾತ್ಮನೆನಿಕ್ಕುಮಪಗತಾಘಪ್ರಕರಂ ೧೨೮

ವ॥ ಅಲ್ಲಿ

ಕಂ॥ ತೊಱೆವುದು ಬಹಿರಾತ್ಮನನೇ
ತೆಱದೊಳಮಾರಯ್ದೊಡಂತರಾತ್ಮನ ದೆಸೆಯಿಂ
ದಱೆವುದು ನೆಱೆ ಪರಮಾತ್ಮನ
ತೆಱನಂ ಮೋಕ್ಷಾರ್ಥಿಯೆನಿಪ ಭವ್ಯಂ ಮನದೊಳ್ ೧೨೯

ವ॥ ಎನಿಸಿದವ್ಯಗ್ರಚಿತ್ತನೇಕಾಂತ ಪರಮಪಾವನಪ್ರದೇಶದೊಳ್ ನಿಬಿಡನಿಬದ್ಧ ಪಲ್ಯಂಕಾಸನನುಂ ನಾಭೀತಟವಿನ್ಯಸ್ತೋತ್ತಾನಹಸ್ತಸ್ವಸ್ತಿಕನುಂ ನಿಷ್ಪಂದಮಂದಿಘೂರ್ಣಿತಲೋಚನನುಂ ಪಂಚಗುರುಚರಣಸ್ಮರಣಪರಿಣತಾಂತಃಕರಣನುಮಾಗಿರ್ದ ಮುನಿವರಂಗೆ

ಮ॥ ಪರಮ ಸ್ವಾಶ್ರಿತ ದೃಗ್ವಿಬೋಧಚರಿತಂ ಸ್ವಾತ್ಮೈಕನಿಷ್ಠಂ ದಲಾ
ಗಿರೆ ಬಾಹ್ಯಕ್ರಿಯೆಯುಮಾಂತರಕ್ರಿಯೆಗಳೆಲ್ಲಂ ಪಿಂಗೆ ತಚ್ಛುದ್ಧಜಾ
ಗ್ರದ್ರತ್ನತ್ರಯಭಾವನಾಬಳದೆ ಸಾರ್ಗುಂ ಸ್ವಾತ್ಮಸಂಪತ್ತಿ ತ
ದ್ವರಸಂಪತ್ತಿಯಿನಕ್ಕುಮಕ್ಷಯಸುಖಂ ನಿರ್ವಾಣಲಕ್ಷ್ಮೀಸುಖಂ ೧೩೦

ವ॥ ಎಂದು

ಕಂ॥ ಅದಱಿಂದೆಯ್ದುವ ಫಳಮಾ
ವುದೆಂದೊಡವ್ಯಗ್ರನಿರುಪಮಾನಂತಸುಖಾ
ಸ್ಪದಮಪ್ಪ ಮುಕ್ತಿಪದಮಿ
ರ್ಪುದದೀ ಭುವನತ್ರಯಾಗ್ರದೊಳ್ ಭುವನಪತೀ ೧೩೧

ಮ.ಸ್ರ॥ ವಿತತಶ್ರೀಪಾರ್ಶ್ವತೀರ್ಥೇಶ್ವರವಚನಸುಧಾವಾರ್ಧಿಕಲ್ಲೋಲಮಾಲಾ
ಪ್ರತಿಮೋದ್ಯದ್ದ್ವಾದಶಾಂಗಶ್ರುತಗದಿತ ಪದಾರ್ಥಂಗಳೊಳ್ ಜೀವಕರ್ಮ
ಸ್ಥಿತಿಯಂ ಸುವ್ಯಕ್ತಮಪ್ಪಂತಿರೆ ಗಣಧರಯೋಗೀಶ್ವರರ್ ಪೇೞೆ ಕೇಳ್ದು
ಜ್ಜಿತದೋಷಂ ನೂತ್ನ ರತ್ನತ್ರಯಮಯ ವಿಳಸದ್ಭೂಷಣೋಪೇತನಾದಂ ೧೩೨

ಕಂ॥ ಕಿವಿಗುಡುತೆಗಳಿಂ ಜಿನದಿ
ವ್ಯವಚನಸುಧೆಯಂ ಸಮಂತು ಕಣ್ಗುಡುತೆಗಳಿಂ
ದವಿರಳಸೌಂದರ್ಯಸುಧಾ
ಪ್ರವಾಹಮಂ ತೆಗೆದು ತುಂಬಿದಂ ಹೃತ್ಸರಮಂ ೧೩೩

ಎಂತಾನು ಬೀೞ್ಕೊಂಡನ
ನಂತರಮರ್ಹತ್ಪದಾಬ್ಜ ವಿಶ್ರಾಂತ ನಿಜ
ಸ್ವಾಂತಂ ಜಿನನಂ ಗಣಧರ
ರಂತರದಿಂದಫಲಮಕ್ಕುಮೇ ಸತ್ಸಂಗಂ ೧೩೪

ಚಂ॥ ನೆನೆಯಲೊಡಂ ಕೃತಾರ್ಥತೆಯನಾಗಿಪ ದೇವರ ದೇವನೆನ್ನ ನಂ
ದನನೆನಿಸಿರ್ದನೆಂದು ಭವಬಂಧನದಿಂದಮಗಲ್ದೆನೆಂದು ಸಂ
ದನುಪಮ ಪುಣ್ಯಸಂತತಿಗೆ ಭಾವಿಸೆ ಭಾಜನನಾದೆನೆಂದು ತ
ಣ್ಣನೆ ತಣಿದಂ ಸ್ವಚಿತ್ತದೊಳುದಾತ್ತಗುಣಪ್ರವರಂ ಮಹೀವರಂ ೧೩೫

ವ॥ ಅದಲ್ಲದೆಯುಂ

ಮ॥ ಮನದೊಳ್ ತಜ್ಜಿನನಾಥಚಿಂತೆ ನುಡಿಯೊಳ್ ತದ್ಯದ್ಗುಣೌಘಪ್ರಶಂ
ಸನಮಾತ್ಮಕ್ರಿಯೆಯೊಳ್ ತದರ್ಚನಮಣಂ ಮತ್ತಲ್ಲದಿನ್ನೇನುಮಂ
ಮನದೊಳ್ ಮಾತಿನೊಳೊಲ್ದು ಮಾಡುವೆಡೆಯೊಳ್ ಭವ್ಯಾವತಂಸಂ ದಿಟಂ
ನೆನೆಯಂ ತಾಂ ನುಡಿಯಂ ಸಮಂತು ನೆಗೞ್ದಂ ಭೂಪಾಳನೇಂ ಧನ್ಯನೋ ೧೩೬

ಕಂ॥ ಪರಮಪುರುಷಾರ್ಥಲಕ್ಷ್ಮೀ
ವಿರಾಜಿತಂ ನೆಗೞ್ದ ವಾರಣಾಸೀಪುರಮಂ
...............ಪೊಕ್ಕು ನಿರಂ
ತರಸೌಖ್ಯಂ..................ನೃಪನೆಸೆದಿರ್ದಂ ೧೩೭

ವ॥ ಇತ್ತಲ್

ಕಂ॥ ಕಮಠನನಿಮಿತ್ತದೋಷಾ
ತ್ತಮನಂ ಪಲವುಂ ಭವಂಗಳೊಳ್ ಕೊಲುತುಂ ಸಂ
ದಮಳಗುಣನಿಳಯನಂ ವಿ
ಶ್ವಮಹಿತಮರುಭೂತಿಯಂ ಜಗದ್ಧಿತಮತಿಯಂ ೧೩೮

ತಾನೆಯ್ದಿದ ನಾರಕದುಃ
ಖಾನೀಕದ ಪವಣನುಸಿರಲಾರೆತ್ತಜೀವರ್
ತಾನೆ ದಿಟಮಜೀವನೆನಿಸಿಯ
ನೂನಕ್ಲೇಶಾಗ್ನಿತಪ್ತನಾಗಿ ಬಟೆಕ್ಕಂ ೧೩೯

ಹತಮತಿ ಮನುಷ್ಯಗತಿವಡೆ
ದು ತಾಪಸತ್ವಕ್ಕೆ ಸಾರ್ದು ರಾಕ್ಷಸವಂಶೋ
ದ್ಗತನಾಗಿ ಭರದಿನುಪಸ
ರ್ಗತತಿಯನಾ ತೀರ್ಥವಿಭುಗೆ ಬಿಡದೊಡರಿಸಿದಂ ೧೪೦

ವ॥ ಅಂತು ತನ್ನನಂತಾನುಬಂಧಿಕ್ರೋಧಕ್ಕಿದುವ ಸೀಮೆಯೆಂಬಂತನೇಕ ಘೋರೋಪಸರ್ಗಂಗಳಂ ನಿರವಿಸಿ ನಿರುಪಸರ್ಗನಂ ಚಳಿಯಿಸಲಾಜದೆ ತ್ರಿಭುವನಕ್ಷೋಭಕಾರಿಯಾದ ತತ್ಪುಣ್ಯಾತಿಶಯಕ್ಕೆ ಭೂತಾನಂದಂ ಪರಮಾನಂದಮನೆಯ್ದಿ ಜಿನಚರಣಮಂ ಶರಣ್ಬೊಕ್ಕು ಮಿಥ್ಯಾತ್ವಮನೊಕ್ಕು ವಿಮಳರತ್ನತ್ರಯವಿಭೂಷಿತಂ ಸಮುಚಿತಕೋಷ್ಠದೊಳ್ ಕುಳ್ಳಿರ್ಪುದುಂ ಮತ್ತಂ

ಕಂ॥ ..ಲದ ರ ನಿಸರ್ಗಜನಿತೋ
ದ್ಧು..ನಾತಿಶ್ಯಯಸಮುತ್ಥಸುರಪತಿಕೃತ ಬಂ
ಧುರಮ..ಮಾತಿಶಯೇಕ್ಷಣ
ರಿರದಾಂತರ ವಂದ್ಯಬು..ಯಂ ಸ್ವಾಶ್ರಮದೊಳ್ ೧೪೧

ಅಂತಯ್ನೂರ್ವರ್ ತಾಪಸ
ರಾಂತರ್ ಜಿನದೀಕ್ಷೆಯಂ ಜಿನೇಶ್ವರಚರಣೋ
ಪಾಂತದೊಳಂತುಟೆ ವಿಧು ..ಧು
ಕಾಂತದೊಳೊಂದಿಸಸೆ ಸಾರ್ದ್ರ ಹೃದಯಸ್ಥಿತಿಯಂ ೧೪೨

ವ॥ ತದನಂತರಂ

ಕಂ॥ ಸುರರಾಜನವಧಿಯಿಂ ದೇ
ವರ ದೇವನ ತದ್ವಿಹಾರಕಾಲಮನಱಿದಾ
ದರದಿಂ ಮುಕುಳಿತಕರಸರ
ಸಿರುಹಂ ನಿಜವಿಭುಗೆ ವಿನಯದಿಂದಿಂತೆಂದಂ ೧೪೩

ಉ॥ ದೇವರ ದೇವ ನಿನ್ನ ಚರಣಾಂಬುರುಹದ್ವಯಸೇವೆಯಿಂದೆ ಭ
ವ್ಯಾವಳಿ ತಾಳ್ದುನಿಂದು ಕೃತಕೃತ್ಯತೆಯಂ ನಿಖಿಳಾವನೀತಳಂ
ಪಾವನಮಕ್ಕೆ ಮಿಕ್ಕ ಕುಮತಪ್ರಕರಂ ಪೆಜಪಿಂಗಿ ಪೋಕೆ ಸೌ
ಖ್ಯಾವಹಮಕ್ಕೆ ಕೂಡೆ ಸಚರಾಚರಮೀಶ ಭವದ್ವಿಹಾರದಿಂ ೧೪೪

ಚಂ॥ ವಿವಿಧಸೆಯಿಂ ಪಳಂಚೆ ಜಯ ಜೀಯರವಂ ವಿವಿಧಾನಕಂ ಸಮು
ಘ್ಘಿಸೆ ದ ಂತಾರಿಪಕ್ಷಿಜಯಘೋಷಿತ ಮಂಗಳತೂರ್ಯನಂಗಳಂ

[illegible]

ಪಸರಿಸೆ ದೇವಭಾವನ ವಿಯಚ್ಚರ ಕಿನ್ನರ ಮರ್ತ್ಯಭೂಷಣ
ಪ್ರಸರಮಣಿಪ್ರಭಾವಿಸರಮೇನೆಸೆದತ್ತೊ ಸಭಾವಿಜೃಂಭಣಂ ೧೪೫

ಕಂ॥ ಸಲೆ ಪಿಂತೆ ಮುಂತೆ ಮತ್ತಿ
ಕ್ಕೆಲಂಗಳೊಳಮಂಬುಜಂಗಳೇೞೇೞಿಂ ತಂ
ದೊಲವಿಂ ನಿರವಿಸಿದಂ ಜಿನ
ಲಲಿತಪದನ್ಯಾಸದೆಡೆಯೊಳಮರಾಧೀಶಂ ೧೪೬

ಎನಿತನುರಾಗತೆಯಂ ತಾ
ಳ್ದಿ ನಿಜಶ್ರೀಚರಣಸೇವೆಗೆಳಸಿರೆಯುಂ ಮು
ಟ್ಟನೆ ವೀತರಾಗನಂಭೋ
ಜನಿಕರಮಂ ತೊಱೆದ ವಸ್ತುಗೆಳಸುಗುಮೆ ಬುಧಂ ೧೪೭

ಪರುಷಗ್ರಾವಚಯಂ ಶ
ರ್ಕರೋಪಳಂ ಕೀಟಕಂಟಕಪ್ರಕರಂ ತ
ದ್ಧರೆಯೊಳಗಿನಿತಿಲ್ಲದವೋಲ್
ಮರುದಮರರ್ ಸಮಱ್ ಭಕ್ತಿಯಂ ನೆಱ ಮೆಱೆದರ್ ೧೪೮

ಸ್ತನಿತಕುಮಾರರ್ ಚೞೆಯಂ
ವಿನೂತಕರ್ಪೂರಕುಂಕುಮಾಗರು ಘನಚಂ
ದನ ಬಂಧುರಾಂಬುವರ್ಷಮ
ನನಿಶಂ ಸಮೆದರ್ ಜಿನೇಂದ್ರಸೇವಾನಿರತರ್ ೧೪೯

ಉ॥ ಕಾಲಹರಂ ಜಿನಂ ಬರುತುಮಿರ್ದಪನಿನ್ನೆನಗುಂಟೆ ಪಾರಲಾ
ಕಾಲಮನೀ ತ್ರಿಕಾಲವಿಷಯಜ್ಞನ ಕಾಲನೆ ಬಲ್ಲಿತಾಗಿ ನಾ
ಮೋಲಗಿಪಂ ದಲೆಂದು ನಿಜಶಾಖೆಗಳೆಂಬ ಕರಂಗಳಿಂ ಪ್ರಸೂ
ನಾಳಿಫಳಂಗಳಂ ಪಿಡಿದು ಬಂದವೊಲಿರ್ದುವು ನಂದನೋತ್ಕರಂ ೧೫೦

ಕಂ॥ ಕರಮೆಸೆದಿರ್ದುದು ತಮ್ಮೊಳ್
ಸುರರೊರ್ವರನೊರ್ವರಿರದೆ ಸಂಭ್ರಮದಿಂದಂ
ಕರೆದುರುವೆಸನಂ ಪೇೞ್ವು
ಚ್ಚರವಂ ಬಧಿರಿತ ದಿಗಂತರೋರ್ವೀವಳಯಂ ೧೫೧

ಧರಣಿ ರಜೋದೂಷಿತೆಯೆಂ
ದಿರದೆಱಿಸಿದೊ ಬಂದು ನೆಲೆಸಿದಂ ವಿಶ್ವಜಗ
ದ್ಗುರುವೆನ್ನೊಳೆಂಬ ಮುದದಂ
ಬರಂ ಪ್ರಸನ್ನತೆಯನಾಂತವೋಲ್ ಸೊಗಯಿಸುಗುಂ ೧೫೨

ಮ॥ ಅನುಕೂಲಂ ಪವನಂ ವಿನೂತಫಳಭಾರಾನಮ್ರವೃಕ್ಷಾಳಿ ಸ
ಸ್ಯನಿಕಾಯಂ ಮುಕುರಪ್ರಭಂ ವಿಮಳರತ್ನಭ್ರಾಜಿತಂ ವಿಸ್ತೃತಾ

ವನಿಯಾಶಾವಳಯಂ ನಿರಸ್ತತಿಮಿರಂ ಸಾನಂದನಿರ್ಪಂದಮಾ
ಯ್ತೆನುತ್ತೋರ್ವಿಜನಮಾವಗಂ ಜಿನಲಸದ್ಯಾತ್ರೋತ್ಸವಪ್ರೀತಿಯಿಂ ೧೫೩

ತಲೆಯೊಳ್ ಪೊತ್ತು ಸುವರ್ಣರತ್ನಮಯಧಾಸ್ವಚ್ಚಕ್ರಮಂ ಯಕ್ಷಸಂ
ಕುಳಮಂದಗ್ರಿಮಭಾಗದೊಳ್ ನಡೆಯುದಿಂದ್ರರ್ ಛತ್ರಮಂ ಚಾಂದ್ರನಿ
ರ್ಮಳಬಿಂಬತ್ರಯಮೊಳ್ಪಿನಿಂದಮಡಕಿಲ್ತೊಂಡಂತೆ ಚೆಲ್ವಾದುದಂ
ನಲವಿಂದೆತ್ತಿಪರಿಕ್ಕಿದರ್ ಚಮರಮಂ ಮಿಕ್ಕಿಂದ್ರರಾನಂದದಿಂ ೧೫೪

ಕಂ॥ ಎತ್ತಿದರಾರತಿಗಳನು
ದ್ವೃತ್ತಸ್ತನಭರ ವಿನಮ್ರಮರ್ತ್ಯಾಮರಿಯರ್
ಪತ್ತಿದುವು ಬೆನ್ನನಿರದು
ನ್ಮತ್ತಾಳಿಗಳಧಿಕಗಂಧಲುಬ್ಧತೆಯಿಂದಂ ೧೫೫

ನಡೆವೆಡೆ ಗಗನತಳಂ ಬಿಡೆ
ನಡೆವುದಸಂಖ್ಯಾತ ಮನುಜ ತಿರ್ಯಗ್ಗಣಮೆಂ
ದೊಡೆ ಚೋದ್ಯಮಲ್ತು ಮುನ್ನೆಡೆ
ಯುಡುಗದುಪಾರ್ಜಿಸಿದ ಜಿನನ ಪುಣ್ಯಂ ಕಿಱದೇ ೧೫೬

ವ॥ ಅಂತು ಚತುರ್ನಿಕಾಯಾಮರ ಪರಿಕಲ್ಪಿತಾತಿಶಯ ವಿರಾಜಮಾನ ಪದ್ಮಯಾನದಿಂ ನಡೆಯ

ಮ.ಸ್ರ॥ ನೆರೆದೆತ್ತಂಭಾವನರ್ ಪಂದಿರೆ ಮುದದಿನಧೋಲೋಕಮಾ ಕಲ್ಪಜರ್ ವಂ
ದಿರೆ ನೋಟ್ಪಂದೂರ್ಧ್ವಲೋಕಂ ಮೃಗಮನುಜಗಣಂ ಕೂಡಿ ಸದ್ಭಕ್ತಿಯಿಂ ಬಂ
ದಿರೆ ತಿರ್ಯಗ್ಲೋಕಮೆಂಬಂತೆಸೆದುದಸದಳಂ ಯಾತ್ರೆಯೇನಿಲ್ಲಿ ಚಿತ್ರಂ
ಗುರುನಾಥಂ ಮೂಱುಲೋಕಕ್ಕೆನಿಸಿದ ಜಿನನಿರ್ದಲ್ಲಿಗಾರ್ವಾರರೆನ್ನರ್ ೧೫೭

ಮ॥ ಭರತಕ್ಷೇತ್ರದಶೇಷದೇಶನಿವಸದ್ಭವ್ಯಾಶಯೋದ್ಯದ್ಗುಹಾಂ
ತರ ಸಂಸುಪ್ತ ವಿಬೋಧಸಿಂಹತತಿಯಿಂ ಸ್ವಾತ್ಮೀಯಗಂಭೀರಧಿ
ವ್ವರವಂ ಬೋಧಿಸಿದತ್ತು ಸರ್ವಜನತಾಮಿತ್ರತ್ವಭಾವಂ ನಿರಂ
ತರಸಂಸಾರ ದುರಂತ ದುಃಖನಿಚಯಂ ತೂಳ್ದಿತ್ತು ಜೀವಂಗಳಾ ೧೫೮

ಮ.ಸ್ರ॥ ಜನಚೇತಃಕ್ಷೇತ್ರದೊಳ್ ಸಂದಣಿಸಿ ಬಳೆದ ಮಿಥ್ಯಾಕುಜವ್ರಾತಮಂ ದಿ
ವ್ಯನಿನಾದೋದ್ಯತ್ಕುಠಾರಂ ತವಿಸೆ ಪರಮಕಾರುಣ್ಯಪೀಯೂಷವಾಕ್ಸೇ
ಚನಮಂ ಮುಂ ಮಾಡಿ ಸದ್ಧರ್ಮಮನತಿಶಯದಿಂ ಬಿತ್ತಿ ನಿಃಶ್ರೇಯಸೇಂದ್ರಾ
ವನಿಜಾತಾರಾಮಮಂ ಚಿತ್ತರಿಸಿದನಖಿಳಾರಂಭಮಂ ಬಿಟ್ಟಮೀಶಂ ೧೫೯

ವ॥ ಅಂತು ಸ್ವಯಂಭೂಪ್ರಭೃತಿನವಗಣಧರರುಂ ಷಷ್ಟ್ಯುತ್ತರ ಪಂಚಶತಪೂರ್ವಧರರುಂ ನವಶತೋತ್ತರಸಹಸ್ರಶಿಕ್ಷಕರುಂ ಚತುಃಶತೋತ್ತರಪಂಚಸಹಸ್ರಾವಧಿ ಜ್ಞಾನಿಗಳುಂ ಏಕಸಹಸ್ರಕೇವಳಿಗಳುಮನಿತೆ ವೈಕ್ರಿಯಿಕಋದ್ಧಿಪ್ರಾಪ್ತರುಂ ಪಂಚವಿಂಶದುತ್ತರ ಸಪ್ತಶತಮನಃಪರ್ಯಯಜ್ಞಾನಿಗಳುಂ ಷಟ್ಶತವಾದಿಗಳುಂ ಸುಲೋಚನಾಪ್ರಭೃತಿ ಪಂಚತ್ರಿಂಶತ್ಸಹಸ್ರಾರ್ಯಿಕೆಯರುಂ ಏಕಲಕ್ಷಶ್ರಾವಕರುಂ ತ್ರಿಲಕ್ಷಶ್ರಾವಕಿಯರುಂ ಅಸಂಖ್ಯಾತ

ದೇವನಿಕಾಯಮುಮನಿತೆ ತಿರ್ಯಕ್ಸಮೂಹಮುಂ ಬೆರಸು ಚತುರ್ಮಾಸೋನ ಸಪ್ತತಿವರ್ಷ ಕೇವಳಿಕಾಲಂ ಮಾಸಾವಶೇಷಮಾದುದೆಂಬನ್ನೆವರಂ

ಮ॥ ಕರಹಾಟಾಂಧ್ರ ಕಳಿಂಗವಂಗಮಗಧಾಂಗಾಭೀರಸೌವೀರಗೂ
ರ್ಜರ ಕರ್ಣಾಟ ವರಾಟ ಮಾಳವ ಮಹಾರಾಷ್ಟ್ರಾದಿ ದೇಶಸ್ಥಸಿಂ
ಧುರ ಭವ್ಯೋತ್ತಮಪೂರ್ವಜನ್ಮಕೃತಪುಣ್ಯಪ್ರೇರ್ಯಮಾಣಂ ಜಿನೇ
ಶ್ವರನಾಸ್ಥಾನಮನಿಂದಿತಂ ವಿಹರಿಸುತ್ತುಂ ಬಂದು ಸಮ್ಮೇದಮಂ ೧೬೦

ವ॥ ಸಾರ್ದದಾ ಮಹೀಧರದ ಮಹಿಮಾತಿಶಯಮಂ ಪೇೞ್ವೊಡೆ

ಮ॥ ಎಸಗಿಂದ್ರಾದ್ರಿ ತದದ್ರಿಗಾಂ ಸರಿ ವಲಂ ನಿರ್ವಾಣಕಲ್ಯಾಣಮಿಂ
ದ್ರಸುತರ್ಗೆನ್ನೊಳುದಾತ್ತಜನ್ಮಸವನಂ ತದ್ಭೂಧ್ರದೊಳ್ ನೋೞ್ಪೊಡೆಂ
ದೆನಿಪೀ ಪೆಂಪು ವೃಥೋನ್ನತಾದ್ರಿನಿಕರಕ್ಕೇನುಂಟೆ ಪೇೞೆಂದು ನೆ
ಟ್ಟನೆ ಸಮ್ಮೇದಮಹೀಧರಂ ನಗುವುದುದ್ಯತ್ಕೋಕಿಳಾರಾವದಿಂ ೧೬೧

ಪರಿನಿರ್ವಾಣಮನೆಯ್ದಿದರ್ ಮುದದೆ ಪತ್ತೊಂಭತ್ತು ಮುಂ ತೀರ್ಥಕೃ
ದ್ವರರೆನ್ನೊಳ್ ಕಡೆಯೆಯ್ದಿಸಲ್ ಸಲುಗೆಯಿಂ ಪಾರ್ಶ್ವೇಶ್ವರಂ ಬಂದನೆಂ
ಬುರುರಾಗಂ ಗಿರಿಯಿಂ ಬಯಲ್ವರಿದವೋಲ್ ಕಣ್ಗಂ ಮನಕ್ಕಂ ಮನೋ
ಹರಮಾಗಿರ್ದುದು ಧಾತುರಾಗಮಿಳಿತಂ ತನ್ನಿರ್ಝರಾಂಬುಪ್ಲವಂ ೧೬೨

ವ॥ ತದ್ಗಿರೀಂದ್ರಪಾವನೈಕದೇಶದೊಳ್

ಕಂ॥ ವಿನುತಗಣಧರಮುಖಾಖಿಳ
ಮುನಿಜನವೃತನುತ್ತರಾಭಿಮುಖನೆನಸುಂ ಯೋ
ಗನಿರೋಧದಿಂದಮಿರ್ದಂ
ವಿನೇಯಜನಬಂಧು ಮಾಸಮೊಂದಪ್ಪಿನೆಗಂ ೧೬೩

ವ॥ ಅನಂತರಂ ಸೂಕ್ಷ್ಮ ಕ್ರಿಯಾಪ್ರತಿಪತ್ತಿಯೆಂಬ ತೃತೀಯಶುಕ್ಲಧ್ಯಾನಮನೊಳ ಕೊಂಡಂತರ್ಮುಹೂರ್ತದಿಂ ಸ್ವಶರೀರತ್ರಿಗುಣಬಹುಳತೆಯಿನೊಂದು ಸಮಯದೊಳ್ ಚತುರ್ದಶ ರಜ್ಜೂತ್ಸೇಧಜೀವಪ್ರದೇಶಪ್ರಸರ್ಪಣಮಪ್ಪ ದಂಡಸಮುದ್ಘಾತಮುಮನೆರಡನೆಯ ಸಮಯದೊಳ್ ಪೂರ್ವೋಕ್ತಬಾಹಲ್ಯಾಯಾಮದಿಂದಿರ್ಕೆಲಂಗಳೊಳಮಮಳ್ವಡಿಯ ತೆಱದಿಂ ಬಳೆದ ಜೀವಪ್ರದೇಶ ಪ್ರಸರ್ಪಣಮಪ್ಪ ಕವಾಟಸಮುದ್ಘಾತಮುಮಂ ಮೂಱನೆಯ ಸಮಯದೊಳ್ ವಾಯುತ್ರಯ ಮುೞಿಯೆ ಲೋಕಾಕಾಶ ಪ್ರದೇಶಪ್ರವರ್ತನಮಪ್ಪ ಪ್ರತರಣ ಸಮುದ್ಘಾತಮುಮಂ ನಾಲ್ಕನೆಯ ಸಮಯದೊಳ್ ನಿಖಿಳಲೋಕವ್ಯಾಪಿ ಜೀವಪ್ರದೇಶ ಪ್ರಸರ್ಪಣಮಪ್ಪ ಲೋಕಪೂರಣ ಸಮುದ್ಘಾತಮುಮಂ ನಿರ್ವರ್ತಿಸಿ ಮತ್ತಂ ಪ್ರತಿಲೋಕಮಾರ್ಗದಿಂದೊಂದೊಂದುಸಮಯ ದೊಳ್ ಪ್ರತರಕವಾಟದಂಡ ಸಮುದ್ಘಾತಂಗಳಂ ಮಾಡಿ... ಎಂಟನೆಯಸಮಯದೊಳ್ ಮೂಲಶರೀರಪ್ರಮಾಣನಾಗಿಂಪುಘಾತಿ ಘಾತಿತತಿಯು ಪಡೆದಾಯುಸ್ಥಿತಿಯೊಳುೞಿದ ಘಾತಿಸ್ಥಿತಿಯುಂ ಸಮಾನಂ ಮಾಡಿ ಮತ್ತಮಂತರ್ಮುಹೂರ್ತದಿಂಬಾ ದರಕಾಯಯೋಗಸೂಕ್ಷ್ಮ ಮನೋವಚನೋಚ್ಛ್ವಾಸಂಗಳುಮಂ ನಿರೋಧಿಸಿ ಸೂಕ್ಷ್ಮಕಾಯಯೋಗನಾಗಿ ನಿರೋಧಂಗೆಯ್ದು

ಕಂ॥ ಎನಸುಂ ಪಂಚಪದಂಗಳು
ಮನುಚ್ಚರಿಸುವನಿತೆ ಪೊೞ್ತು ತನಗವಧಿ ಸಮಂ
ತೆನೆ ನೆಗೞ್ದ ಯೋಗಕೇವಳ
ವಿನುತಗುಣಸ್ಥಾನಸುಸ್ಥಿರಂ ತಾನಾದಂ ೧೬೪

ವ॥ ಅಲ್ಲಿಂ ಬೞಿಯಂ ಸಮುಚ್ಛಿನ್ನ ಪ್ರಾಣಾಪಾನಪ್ರಚಾರಸರ್ವಕಾಯವಾಙ್ಮನೋಯೋಗ ಪರಿಸ್ಪಂದಕ್ರಿಯಾವ್ಯಾಪಾರಮಪ್ಪ ಸಮುಚ್ಛಿನ್ನಕ್ರಿಯಾನಿವೃತ್ತಿಯೆಂಬ ಚತುರ್ಥ ಶುಕ್ಲ ಸಂರುದ್ಧಸಮಸ್ತಾಸ್ರವಂ ಪರಿಪೂರ್ಣ ನಿಖಿಳಶೀಲಗುಣಗಣಂ ನಿಜದ್ವಿಚರಮಸಮಯದೊಳನ್ಯತರವೇದನೀಯಗತಿ ತತ್ಪ್ರಾಯೋಗ್ಯಾನುಪೂರ್ವ ಶರೀರಬಂಧನ ಸಂಘಾತ ವರ್ಣರಸ ಪ್ರತ್ಯೇಕಪಂಚಕ ಸಂಹನನ ಸಂಸ್ಥಾನಷಟ್ಕಾಂಗೋಪಾಂಗದ್ವಿಕಸುಗಂಧದ್ವಿಕ ವಿಹಾಯದ್ವಿಸ್ಪರ್ಶಾಷ್ಟಕ ಅಗುರುಲಘೂಪಘಾತೋಚ್ಛ್ವಾಸಪ್ರಶಸ್ತಾಪ್ರಶಸ್ತವಿಹಾಯೋಗತ್ಯ ಪರ್ಯಾಪ್ತಕ ಪ್ರತ್ಯೇಕಶರೀರ ಚತುಷ್ಕ ಸ್ಥಿರಾಸ್ಥಿರ ಶುಭಾಶುಭ ಸುಸ್ವರ ದುಸ್ವರ ಸುಭಗ ದುರ್ಭಗ ಪ್ರತ್ಯೇಕ ಶರೀರ ಯಶಸ್ತಿತ್ವನಾದೇಯಾ ಯಶಸ್ಕೀರ್ತಿನಿರ್ಯಾಣಪರ್ಯಾಪ್ತನೀಚೈರ್ಗೋತ್ರಂಗಳೆಂಬೆಪ್ಪತ್ತೆರಡು ಪ್ರಕೃತಿಗಳುಮಂ ನಿರ್ಮೂಲಂಗೆಯ್ದು ಕಡೆಯ ಸಮಯದೊಳವಶಿಷ್ಟಾನ್ಯತರವೇದನೀಯ ಮನುಷ್ಯಾಯುರ್ಗತಿ ಪಂಚೇಂದ್ರಿಯ ಜಾತಿ ತತ್ಪ್ರಾಯೋಗ್ಯಾನುಪೂರ್ವತ್ರಸ ಬಾದರ ಪರ್ಯಾಪ್ತಕ ಸುಭಗಾದೇಯ ಯಶಸ್ಕೀರ್ತ್ಯುಚ್ಚೈರ್ಗೋತ್ರತೀರ್ಥಕರನಾಮಂಗಳೆಂಬ ಪದಿಮೂಱುಂ ಪ್ರಕೃತಿಗಳಂ ನಿರವಶೇಷಂ ಕಿಡಿಸಿ

ಮ.ಸ್ರ॥ ವರಸಮ್ಯಕ್ತ್ವಾವಬೋಧಪ್ರಥಿತ ವಿಮಳ ಸದ್ದರ್ಶನಾನಂತವೀರ್ಯೋ
ದ್ಧುರಸೂಕ್ಷ್ಮತ್ವಾವಗಾಹಾ ಗುರುಲಘುಕವಿಬಂಧಂಗಳೆಂಬಿಂತಿವೆಂಟುಂ
[ಪರಮೋತ್ಕೃಷ್ಟಂ ಗುಣಂಗಳ್ ನೆಲಸಿರೆ] ನಿಜದಿಂದಷ್ಟಮೋರ್ವೀಶನಾದಂ
ಪರಮೇಶಂ ನಿರ್ಜಿತಾಶಂ ದಳಿತದುರಿತಯೂಥಂ ಲಸತ್ಪಾರ್ಶ್ವನಾಥಂ ೧೬೫

ಕಂ॥ ತನ್ನಂ ತಾಂ ತನ್ನಿಂದಂ
ತನ್ನತ್ತಣಿನಱಿದು ತನಗೆ ಸೌಖ್ಯೋನ್ನತಿಯಂ
ತನ್ನೊಳ್ ನಿಜಮೆನಿಸಿರ್ದಾ
ತನ್ನ ಗುಣಂ ಪ್ರಕಟಮಾಗಿ ಕುಡೆ ನುತಿವಡೆದಂ ೧೬೬

ಮ॥ ನಿರವದ್ಯಂ ನಿರುಪಾಧಿಕಂ ನಿರುಪಮಂ ನಿಶ್ಚಿಂತರೂಪಾತ್ಮಕಂ
ಪರಮಾನಂತಚತುಷ್ಟಯಪ್ರವಿನುತಂ ನಿರ್ಧೂತದೋಷಂ ನಿರಾ
ವರಣಂ ನಿರ್ಮಳಿನಂ ನಿರಸ್ತದುರಿತಂ ನಿರ್ವ್ಯಗ್ರನಿರ್ಬಾಧಬಂ
ಧುರಮಾಗಿರ್ದ ಸುಖಕ್ಕೆ ತಾಂ ನಿಳಯನಾದಂ ವಿಶ್ವಬೋಧಾಸ್ಪದಂ ೧೬೭

ವ॥ ಅಂತಾ ನಿರತಿಶಯಸುಖಾಶ್ರಯಮಾದ ನಿಶ್ರೇಯಸನಿಳಯಮೆಂತುಟೆಂದೊಡೆ

ಮ॥ ಇಳೆ ಚಂಚನ್ಮಣಿಕುಟ್ಟಿಮಂ ಕುಳನಗೌಘಂ ಸ್ತಂಭಮಾದಂ ದಿಶಾ
ವಳಯಂ ಕುಡ್ಯಚಯಂ ಸುರೋತ್ಕರವಿಮಾನಾನೀಕಮಾ ಭೂಮಿಕಾ
ವಳಿ ತಾಮಾಗಳವಟ್ಟ [ವಿಸ್ತ್ರುತಜಗಚ್ಛತ್ರೈಕ್ಯ] ಚೆಲ್ವಾಗಿರಿ
ಟ್ಟಿ ಲಸನ್ಮೌಕ್ತಿಕರಾಜಮಾನಕಳಶಂ ತಾನಾಯ್ತು ಮುಕ್ತ್ಯಾಲಯಂ ೧೬೮

ಕಂ॥ ಸುಲಲಿತಮೀಷತ್ಪ್ರಾಗ್ಭಾ
ರಲಕ್ಷಣಾಖಂಡಚಂದ್ರಕಾಂತಮಯಂ ನಿ
ರ್ಮಳಸಮವೃತ್ತಂ ಪವಣಿಂ
ಸಲೆ ನಾಲ್ವತ್ತೈದುಲಕ್ಷಯೋಜನದಗಲಂ ೧೬೯

ನಿಲದೆಂಟುಯೋಜನಂ ವಿ
ಶ್ವಲೋಕಚೂಡಾವತಂಸಮವ್ಯಾಬಾಧಂ
ಮಳದೋಷ ದೂಷಣಾಕುಳ
ವಿಳಯವಿಹೀನಂ ಸಮಂತು ಸಿದ್ಧಕ್ಷೇತ್ರಂ ೧೭೦

ವ॥ ಅಲ್ಲಿ

ಉ॥ ಅಂತಪವರ್ಗಸೌಖ್ಯನಿಳಯೈಕ ಸಮಾಶ್ರಯನಾಗಿಯುಂ ಜನ
ಸ್ವಾಂತದೊಳೊರ್ಮೆಯುಂ ನೆಲಸಿ ತನ್ನ ಮಹತ್ವಗುಣಪ್ರಕರ್ಷಮಾ
ಶಾಂತರಮಂ ಸಮಂತು ಬೆಳಗುತ್ತಿರೆ ನಿತ್ಯನಿರಂಜನಾದನ
ತ್ಯಂತ ವಿಶುದ್ಧ ದರ್ಶನ ವಿಬೋಧಚರಿತ್ರ ವಿಚಿತ್ರಭೂಷಣಂ ೧೭೧

ವ॥ ಅನ್ನೆಗಮಿತ್ತಲ್

ಮ॥ ಪರಿನಿರ್ವಾಣಮಹಾಮಹಕ್ಕೆ ನೆರೆದೆತ್ತಂ ಬರ್ಪ ದಿವ್ಯಾಂಗನೋ
ತ್ಕರದಿಂ ವ್ಯಂತರಸುಂದರೀನಿಕರದಿಂ ಜ್ಯೋತಿಷ್ಕಕಾಂತಾಳಿಯಿಂ
ನಿರುತಂ ಭಾವನಭಾಮಿನೀಪ್ರಕರದಿಂ ಚೆಲ್ವಾಯ್ತು ತತ್ತನ್ಮನೋ
ಹರ ಕಾಂತಾಳಿ ಕಟಾಕ್ಷರೋಚಿರುಚಿಯಿಂ ಸಮ್ಮೇದಭೂಮೀತಳಂ ೧೭೨

ಕಂ॥ ಕಡುಗಿೞಿದು ಗಗನತಳಮಂ
ದೆಡೆಯುಡುಗದೆ ನಡೆವ ಸುರಸಮಾಜಕ್ಕೆನೆ ದಾಂ
ಗುಡಿವಿಡೆ ವಿಳಾಸದೆಸಕಂ
ಬಿಡೌಜನೆಟ್ಟಿಂದನಾ ಶತೇಂದ್ರ ಸಮೇತಂ ೧೭೩

ವ॥ ಅಂತು ಬಂದು

ಕಂ॥ ಸಾಮಜದಿನಿೞಿದು ಸುರಚೂ
ಡಾಮಣಿಯಿಂದ್ರಾಣಿವೆರಸು ಸವಿನಯದಿಂದಂ
ಮೂಮೆ ಬಲಗೊಂಡನದ್ರಿಶಿ
ಖಾಮಣಿಯಂ ನಿರ್ವೃತಿಪ್ರಸಿದ್ಧಾವನಿಯಂ ೧೭೪

ವ॥ ಅಲ್ಲಿಂ ಬೞಿಕ್ಕಂ..........

ಮ॥ ಅತಿಪೂತಾಮಳವಾರಿಯಿಂ ಮಳಯಜಕ್ಷೋದಂಗಳಿಂ ಮೌಕ್ತಿಕಾ
ಕ್ಷತಪುಂಜಂಗಳಿನಿಂದ್ರಭೂಜ ಸುಮನೋದಾಮಂಗಳಿಂ ಸಂಗತಾ

ಮೃತಸನ್ನಾಹನಿಕಾಯದಿಂ ಮಣಿಲಸದ್ದೀಪಂಗಳಿಂ ಧೂಪಸಂ
ತತಯಿಂ ಸತ್ಫಳರಾಜಿಯಿಂದೆ ಸಮೆದಂ ಪೂಜಾವಿಶೇಷಂಗಳಂ ೧೭೫

ವ॥ ತದನಂತರಂ

ಕಂ॥ ಸುರವಾದಕರಿರ್ಕೆಲದೊಳ
ಗಿರೆಸುರಗಾಯಕೀಜನಂ ತಾಂ ಪಿಂತಿರೆ ತ
ತ್ಸುರನರ್ತಕಿಯರ್ ಕೂಡಿರೆ
ಸುರಪತಿಯಾನಂದನಾಟಕೋದ್ಯತನಾದಂ ೧೭೬

ಮ॥ ಅನಿತಂ ತೋಱಿದನಿಂದ್ರನಾಡುವೆಡೆಯೊಳ್ ತಜ್ಜನ್ಮವೃತ್ತಪ್ರಶಂ
ಸನದಿಂ ತತ್ತ್ವದನಿರ್ಭರಪ್ರಣಯದಿಂ ತತ್ತದ್ರಸೋತ್ಕರ್ಷದ
ರ್ಶನದಿಂ ತತ್ಸಮಯೋಚಿತಪ್ರಚುರಭಾಷಾವೇಷಸಾದೃಶ್ಯದಿಂ
ದೆನಸುಂ ವಾಚಿಕಸಾತ್ವಿಕಾಂಗಿಕವಿನೂತಾಹಾರ್ಯಕಾಖ್ಯಂಗಳಿಂ ೧೭೭

ಮ.ಸ್ರ॥ ....

....

............ನಿರ್ವಾಣಪೂಜೋತ್ಸವದೊಳೆ ನೆಗಟ್ದಿರ್ದೆನ್ನ ಪುಣ್ಯಕ್ಕೆ ಪೇೞಾರ್
ಸಮಮೆಂದಿಂದ್ರಂ ಶತೇಂದ್ರರ್ವೆರಸು ನಲಿದನಾನಂದದಿಂದೀ ಕೃತಾತ್ಮಂ ೧೭೮

ನಲವಿಂ ವಕ್ತ್ರಾಂಬುಜಕ್ಕೋಲಗಿಸೆ ವಿಕಸನಶ್ರೀಯನುತ್ಕರ್ಷಹರ್ಷಂ
ವಿಳಸತ್ಸೌಂದರ್ಯಮಂ ಕೊರ್ವಿಸೆ ಪುಳಕಚಯಂ ಹಾರಮಂ ಮತ್ತೆ ವಕ್ಷ
ಸ್ಥಲದೊಳ್ ಸಾನಂದಬಾಷ್ಪಪ್ರತತಿಪಡೆಯೆ ತನ್ನಾಟ್ಯಮಂತಾಲಯಕ್ಕಾ
ಕುಳಿಶಾಸ್ತ್ರಂ ಪೋದನಾಗಳ್ ಸುಕವಿಜನಮನೋಹರ್ಷಸಸ್ಯಪ್ರವರ್ಷಂ ೧೭೯

ಮ॥ ಅರವಿಂದೋದ್ಭವಸೂನು ಭಾನು ಮನು ತತ್ಪುತ್ರಂ ತದೀಯೋದ್ಭವಂ
ಸ್ಥಿರಮಿಕ್ಷ್ವಾಕುಮಹೀಶನಾಕ್ಷಿತಿಪನಿಕ್ಷುಗ್ರಾಮದೆಣ್ಬತ್ತುನಾ
ಲ್ವರನಾಚಾರಯುತಂ ಪ್ರತಿಷ್ಠಿಸಿದನೆಂದಂದಾದ್ಯರುಂ ಹೃದ್ಯವಿ
ದ್ಯರುಮಾಚಾರವಿಶುದ್ಧರುಂ ಪರರದಾರ್[ವಿಶ್ವಂಭರಾ ಭಾಗದೊ]ಳ್ ೧೮೦

ಕಂ॥ ಎನೆ ನೆಗಟ್ದಿ ವಿಪ್ರಕುಳಮಂ
ಡನಚರಣಾಂಭೋಜಭೃಂಗನಖಿಳದಿಶಾಮಂ
ಡನ ಕೀರ್ತಿಕಾಂತಪಂಡಿತ
ಜನವನರುಹಷಂಡ ಚಂಡಕರಮಾರ್ತಂಡಂ ೧೮೧

ಶಾ॥ ವೀರಶ್ರೀನಿಧಿಕಾರ್ತವೀರ್ಯತನಯಂ ಶ್ರೀಲಕ್ಷ್ಮಣಕ್ಷೋಣಿಪ
ಕ್ಷೀರಾಂಭೋನಿಧಿ [ಜಾತಚಂದ್ರನೆನಿಪಾಶ್ರೀ] ಕಾರ್ತವೀರ್ಯಂ ಕಳಾ
ಧಾರಂ ಸಜ್ಜನಸೌಖ್ಯಕಾರಿಸುಚರಿತ್ರಂ ಲೋಕನೇತ್ರಂ ಶುಭಾ
ಕಾರಂ..................................ಸೊಗಯಿಪಂ ಶ್ರೀಚಂದ್ರಿಕಾನಂದನಂ ೧೮೨

ಮ॥ ಪೊಗರಂಭೋರುಹಸಂಭವಂ ಬರೆದತಿಸ್ಪಷ್ಟಾಕ್ಷರಶ್ರೇಣಿ ಸಾ
ಕ್ಷಿಗಳಾಶಾಧಿಪರಾಜಿರಾಜಿಸುವುದಂ ವಾಚಾಳಭೂಪಾಳಕರ್
ಜಗದೊಳ್ ಒರ್ಕುಡಿಮಾಡದಂತಸಿಲತೋದ್ಯತ್ಪತ್ರಮಂ ತೋಱೆ ನೆ
ಟ್ಟಗೆ ರಟ್ಟಾನ್ವಯಕಾರ್ತವೀರ್ಯನಖಿಳೋರ್ವಿಭಾಗಮಂ ಭೋಗಿಪಂ ೧೮೩

ಕಂ॥ ಶ್ರೀಕಾರ್ತವೀರ್ಯನೃಪಲ
ಕ್ಷ್ಮೀಕವಿ........ ವಿನೇಯಾ
ನೀಕಶಿರೋಮಣಿ ನೆಗಟ್ದಿಂ
ಲೋಕಪ್ರಿಯಜಾತಕೀರ್ತಿ ಕವಿಕುಳತಿಳಕಂ ೧೮೪

ಮ॥ ಶಕವರ್ಷಂ ಚತುರಬ್ಧಿಚಂದ್ರಶಶಿಸಂಖ್ಯಂ ಚಿತ್ರಭಾನೂತ್ಥಕಾ
ರ್ತಿಕಶುದ್ಧೋದಿತಪಂಚಮೀಧಿಷಣವಾರಂ ಪೂಣ್ಕೆ ಸಂಪೂರ್ಣಮಾ
ಯ್ತು ಕವಿಪ್ರಸ್ತುತಪಾರ್ಶ್ವನಾಥಚರಿತಂ ಪಾರ್ಶ್ವೋದಿತಂ ಕೂಡೆ ನ
ರ್ತಿಕೆ ತತ್ಕೀರ್ತಿವೊಲೂರ್ಜಿತಾರ್ಥ[ವಿಲಸತ್ಕಾವ್ಯಂ ಧರಾಭಾಗದೊ]ಳ್ ೧೮೫

ಕಂ॥ ಮಿಗೆ ಸಾರ್ದ್ರಹೃದಯರಂಗದೊ
ಳಗೆಯ್ದುತಿರೆ ಪುಳಕಸಸ್ಯತತಿ ಮತ್ಪ್ರಜ್ಞಾ
ನಗನಿಕಟಜನಿತಮಂ ತಿ
ರ್ದುಗೆ ಕಾವ್ಯರಸಪ್ರವಾಹಮಂ ಬುಧನಿವಹಂ ೧೮೬

ಮ॥ ಇದು ಸದ್ಧರ್ಮಸುಕಾವ್ಯಧರ್ಮವಿಭವಕ್ಕಾಖ್ಯಂದಲೆಂದೊರ್ಮೆಯುಂ
ಮುದದಿಂದಂ ಬರೆವಳ್ಕಱಿಂ ಬರೆಯಿಪತ್ಯಾನಂದದಿಂ ಪೇಟ್ವ ಸಂ
ಮುದದಿಂದೊಂದಿ ನಿರಂತರಂ ನೆನೆವಿನಂ ಸಂತೋಷದಿಂ ಭಾವಿಪ
ಗ್ಗದ ಕಾವ್ಯಪ್ರಿಯಭವ್ಯಕೋಟಿಗೆ ಜಯಂ ಭದ್ರಂ ಶುಭಂ ಮಂಗಳಂ ೧೮೭

ಗದ್ಯ

ಇದು ವಿದಿತವಿಬುಧಲೋಕನಾಯಕಾಭಿಪೂಜ್ಯ ವಾಸುಪೂಜ್ಯಜಿನಮುನಿ ಪ್ರಸಾದಾಸಾದಿತ ನಿರ್ಮಳಧರ್ಮ ವಿನುತ ವಿನೇಯಜನವನಜವನವಿಳಸಿತ ಕವಿಕುಳತಿಳಕಪ್ರಣೂತ ಪಾರ್ಶ್ವನಾಥಪ್ರಣೀತಮಪ್ಪ ಪಾರ್ಶ್ವನಾಥ ಚರಿತ ಪುರಾಣದೊಳ್ ಪರಿನಿರ್ವಾಣ ಕಲ್ಯಾಣ ಭಗವನ್ಮೋಕ್ಷ ಕಲ್ಯಾಣವರ್ಣನಂ ಷೋಡಶಾಶ್ವಾಸಂ ಶ್ರೀಪಾರ್ಶ್ವನಾಥಪುರಾಣಂ ಸಮಾಪ್ತಂ

ಮಂಗಳಮಹಾ ಶ್ರೀ ಶ್ರೀ ಶ್ರೀ

ಅನುಬಂಧಗಳು

೧. ಪುಷ್ಪದಂತ ಪುರಾಣಂ

ಚಂದ್ರನಾಥಾಷ್ಟಕಂ

ಅರ್ಥಕೋಶ

ಸಹಾಯಕ ಸಾಹಿತ್ಯ

೨. ಪಾರ್ಶ್ವನಾಥಪುರಾಣಂ

ಪಾರ್ಶ್ವಪಂಡಿತ ವಿರಚಿತ ಶಾಸನ

ಅರ್ಥಕೋಶ

ಪಾರಿಭಾಷಿಕ ಪದಕೋಶ

ಸಹಾಯಕ ಸಾಹಿತ್ಯ

ಚಂದ್ರನಾಥಾಷ್ಟಕಂ

ಸ್ರ॥ ಶ್ರೀಪಾದಂ ಗೋಮಿನೀಭಂಗಿಗೆ ನವನಳಿನಶ್ರೀಮುಖಂ ಶ್ರವ್ಯದಿವ್ಯಾ
ಳಾಪಜ್ಯೋತ್ಸ್ನಾವಿಲಾಸಕ್ಕಮಲ ಹಿಮಕರಸ್ವಚ್ಛಬೋಧಂ ತ್ರಿಲೋಕೀ
ರೂ[ಪಾದರ್ಶಕ್ಕ]ವಾತ್ಮಾಕೃತಿ ಶಿವಸುಖವಲ್ಲೀವಿತಾನಕ್ಕಡರ್ಪಾ
ದಾಪೂರ್ಣೈಶ್ವರ್ಯಮಂ ಮಾಡೆಮಗೆ ಸುಖಾವಾಪ್ತಿಯಂ ಚಂದ್ರನಾಥಾ ೧

ಮ.ಸ್ರ॥ ನೆನೆವಂದಾನಂದದಿಂ ತಣ್ಣನೆ ತಣಿದು ಜಿಗಿಲ್ಕುಂ ಮನಂ ಬಂದು ಕಂಡಂ
ದೆನಸುಂ ತಣ್ಪಿಂ ಕುಳಿರ್ಕೊಂಡುಗುಮಮರ್ದಿನೊಳಟ್ಟಂತೆ [ಕಣ್‌ಬಣ್ಣಿ]ಪಂದಿಂ
ಪಿನಲಂಪಂ ಸೇವಿಪಂತಗ್ಗಲಿ[ಸಿ] ನಲಿಗುಮಿಾ ಜಿಹ್ವೆಯೆಂದಂದು ನಿನ್ನಂ
ನೆನೆದುಂ ಕಂಡುಂ ಪೊಗಟ್ದುಂ ಸುಖಿಯೆನಿಸಿದವಂ ಧನ್ಯನೈ ಚಂದ್ರನಾಥಾ ೨

ನಿನಗಿಂದ್ರಂ ಪಂಚಕಲ್ಯಾಣಮನೆಸಗಿ ಮಹೈಶ್ವರ್ಯನಾದಂ ಕಡಲ್ ಪಾ
ಲ್ವೊನಲಂ ಜನ್ಮಾಭಿಷೇಕಕ್ರಿಯೆಗೆ ಸಲಿಸಿ ಗಂಭೀರಮಾಯ್ತದ್ರಿಪಂ ಮ
ಜ್ಜನಲೀಲಾಪೀಠಮಾಗಿರ್ದವಿಚಳಮೆನಸಿತ್ತೆಂದೊಡೈಶ್ವರ್ಯ ಗಾಂಭೀ
ರ್ಯನುತಸ್ಥೈರ್ಯಕ್ಕೆ ಲೋಕತ್ರಯದೊಳೆಡೆಯದಾರ್ ನಿನ್ನವೋಲ್ ಚಂದ್ರನಾಥಾ ೩

ಸುದತೀಲೀಲಾಂಗಮಂ ಸೋಂಕದ ನವಯುವತೀಸ್ನಿಗ್ಧಮುಗ್ಧಾಸ್ಯಮಂ ನೋ
ಡದ ಕಾಂತಾಳಾಪಮಂ ಕೇಳದ ವನಜಮುಖಿವಕ್ತ್ರಸೌರಭ್ಯಮಂ ಕೊ
ಳ್ಳದ ರಾಮಾರಮ್ಯಬಿಂಬಾಧರರಸಮನಡುರ್ತೀಂಟದಕ್ಷೂಣ ಮೋಕ್ಷಾ
ಸ್ಪದ ಲಕ್ಷ್ಮೀಸಂಗಸೌಖ್ಯೋನ್ನತಿ ನಿನಗೆ ನಿಜಂ ದೇವರೊಳ್ ಚಂದ್ರನಾಥಾ ೪

ಹರಿಪೀಠಂ ಮೋಹಮಾತಂಗಮನಳರಿಸಿತ್ತೋ ಚಾಮರಂ ಕಾಮದೀಪಾಂ
ಕುರಮಂ ಬೀಸಿತ್ತೊ ಭಾಮಂಡಲ[ವಘ]ತಮಮಂ ತೂಳ್ದಿತೊ ಪುಂಡರೀಕಂ
ಪುರಿದತ್ತೋ ಜನ್ಮಸಂತಾಪಮನಳಜ್ಜಿಸಿತೋ ಶೋಕಮಂ ತಳ್ತಶೋಕಂ
ಭರದಿಂದೆಂಬಂತೆ ಮೆಯ್ದೋಜವು ನಿಜಸಭೆಯೊಳ್ ತದ್ಭಯಂ ಚಂದ್ರನಾಥಾ ೫

ಮೃಗತೃಷ್ಣಾಭೋಗಮಂ ತಿರ್ದಿದ ನಿಡುಮಡುವೆಂದೆಯ್ದುವಾಭೀಳ ಕಾಳೋ
ರಗನಂ ನೇವಾ[ಳ]ವೆಂದೆತ್ತುವ ನಿಶಿತಕನತ್ಖಡ್ಗಮಂ ನೆಯ್ದಿಲೊಳ್ವಾ
ಸಿಗಮೆಂದಾಂಪಂತೆ ನೀನಲ್ಲದ ಕುಮತಶತಭ್ರಾಂತರಂ ದೇವರೆಂದೋ
ಲಗಿಪೆಗ್ಗರ್ಗಾದ ಬೋಧಂ ನಗಿಸುವುದಭವತ್ಪ್ರಾಪ್ತರಿಂ ಚಂದ್ರನಾಥಾ ೬

ಗಳಿತಂ[ಘಾ]ತಿವ್ರಜಂ ಪಿಂಗಿದ ಜವನಿಕೆ ಪುಷ್ಪೋಲ್ಲಸದ್ವೃಷ್ಟಿ ಪುಷ್ಪಾಂ
ಜಳಿ ದಿವ್ಯಶ್ರವ್ಯನಾದಂ ಸರಸಮಧುರಗೀತಸ್ವನಂ ದೇವಭೇರೀ
ಕುಳನಾದಂ ಮಿಕ್ಕ ಢಕ್ಕಾರವಮೆನೆ ಭವದಾಸ್ಥಾನದೊಳ್ ರಂಜಿಕುಂ ಮಂ
ಜಳಮುಕ್ತಿ ಶ್ರೀವಧೂಸಂಗದೊಳಭಿನವಸಂಗೀತಕಂ ಚಂದ್ರನಾಥಾ ೭

ಸ್ಫುರಿತ ಶ್ರೀಪಾದಮುದ್ಯೋತಿಸೆ ಕಿಡೆ ತಮವಾಶಾಂಬರಶ್ರೀ ಪೊದಟ್ಟೊ
ಪ್ಪಿರೆ ಸತ್ಸಂದೋಹವಾರಾಜಿಸೆ ಕುವಲಯವಾನಂದಮಂ ತಾಳ್ದೆ ಕಾಮಾ
ತುರಚಕ್ರಕ್ಕಾಗೆ ರಾಗಕ್ಷಯಮಮೃತನಿಧಿಸ್ಫೂರ್ತಿ ಕೆಯ್ಗಣ್ಮೆ ನಿಚ್ಚಂ
ಧರಣೀಲೋಕಕ್ಕೆ ನಿನ್ನಿಂ ದ್ವಿಗುಣಿಸುವುದು ಚಂದ್ರೋದಯಂ ಚಂದ್ರನಾಥಾ ೮

ಬಹುವಿದ್ಯಾಮಂಡನಂ ಪಂಡಿತಮುನಿಪತಿ ಚಂದ್ರವ್ರತಿಶ್ರೀಪದಾಂಭೋ
ರುಹಸೇವಾಸಂಗಭೃಂಗಂ ಕ್ಷಿತಿನುತಗುಣವರ್ಮಂ ವಚೋಮಾಲೆಯಿಂದ
ನ್ವಹಮಾದಂ ಪೂಜಿಸಲ್ ರಾಜಿಪ [ಪದ] ನನಘಂ ಮಾಳ್ಕೆ ಭವ್ಯರ್ಗೆ ಸೌಖ್ಯಾ
ವಹಮಂ ಕೊಲ್ಲಾಪುರನ್ವಶ್ರೀ ತ್ರಿಭುವನತಿಳಕಾಲಂಕೃತಂ ಚಂದ್ರನಾಥಾ ೯

* * *

ಅರ್ಥಕೋಶ

ಪುಷ್ಪದಂತ ಪುರಾಣಂ

(ಸಂಖ್ಯೆಗಳು ಆಶ್ವಾಸ ಮತ್ತು ಪದ್ಯವನ್ನು ಸೂಚಿಸುತ್ತವೆ)

ಅಂಚಳ ೫-೩೨ ಬಟ್ಟೆ
ಅಂತಿಕ ೩-೬೪ ಸಮೀಪ
ಅಂಬುಗಂಡಿ ೨-೬೧ ನೀರಿನ ದಾರಿ
ಅಗಿ ೮-೪೬ ಹೆದರು
ಅಗುಂತಿ ೯-೧೦೯ ಹೆಚ್ಚಳ
ಅಗುಂದಲೆ ೨-೨೩ ಅತಿಶಯ
ಅಗ್ಗ ೨-೭೭ ಶ್ರೇಷ್ಠ
ಅಗ್ಗಳಿಸು ೨-೪೩ ಹೆಚ್ಚಿಸು
ಅಗ್ರಿಮ ೮-೪೫ ಮೊದಲಿಗ
ಅಜಾಕೃಪಣೀಯ ೧-೭೮ ಆಡಿನ ಮೊಲೆ
ಅಣಿ ೫-೧೨ ಸೈನ್ಯ
ಅಣ್ಕೆ ೩-೧೧೮ ಬಣ್ಣ ಹಾಕುವುದು
ಅತ್ತಳ ೭-೭೫ ಹೆಚ್ಚಳ
ಅದಗುಂತಿ ೮-೫೪ ಅದಿರ್ಗಂತಿ, ಒಂದು ಜಾತಿಯ ಹೂವು
ಅದಟ ೮-೧೩ ಪರಾಕ್ರಮ
ಅಧರಿಸು ೧೦-೫೧ ಕೀಳು ಮಾಡು
ಅನುಷ್ಣ ೯-೪೭ ಚಂದ್ರ
ಅಪಚಯ ೨-೫೦ ಬಿಡಿಸುವುದು
ಅಮರಧನು ೫-೧೦ ಕಾಮನ ಬಿಲ್ಲು
ಅಮರರಾಜೋರ್ವಿಜ ೧-೮೧ ಕಲ್ಪವೃಕ್ಷ
ಅಮ್ಮಾವು ೩-೧೨೭ವ ಕಾಡುಹಸು
ಅವಚಲು ೧೩-೬೧ ಮುಖ ತಿರುಗಿಸು
ಅವಟಯ್ಸು ೮-೪೭ವ ಒಪ್ಪಿಸು
ಅಷ್ಟ ಶೋಭೆ ೮-೪೯ವ ಸುಣ್ಣ ಹೊಡೆಸುವುದು, ಕಾರಣೆ ತೆಗೆಸುವುದು ಮುಂತಾದ ಎಂಟು ಮಂಗಳ ಕಾರ್ಯಗಳು
ಅಳುಂಬ ೨-೮೭ ಅತಿಶಯ
ಅಳುಂಬ ೩-೧೧೪ವ ಮನೋಹರ
ಅಟ್ಕಿಮೆ ೮-೧೭ ಪರಾಕ್ರಮ
ಆಂದೋಳ ೮-೨೮ವ ಉಯ್ಯಾಲೆ, ಪಲ್ಲಕ್ಕಿ
ಆಕೃಷ್ಟಿ ೫-೭೪ ಆಕರ್ಷಣೆ
ಆಚ್ಛಾದನ ೩-೧೦೯ ಮುಚ್ಚುವುದು
ಆತಪ ೮-೧೦೪ ಬಿಸಿಲು
ಆನ್ ೫-೩೭ ಮೇಲೆಬೀಳು
ಆರ್ದ್ರಕ ೨-೪೭ ಹಸಿ ಶುಂಠಿ
ಆಜಿಡಿ ೧೩-೨ ಹಿಂಸೆ
ಆಲೇಹನಂಗೈ ೩-೭೬ವ ನೆಕ್ಕು
ಆವೇದಿಸು ೮-೨೧ ಹೇಳು
ಇಂಡೆಯಾಟ ೧೨-೨೧ ಚೆಂಡಾಟ
ಇಕ್ಕೆದಾಣ ೨-೪೬ ಆಶ್ರಯ
ಇಕ್ಷುಯಂತ್ರ ೨-೪೯ ಕಬ್ಬಿನ ಗಾಣ
ಇಱುಂಬುಗೊಳ್ ೫-೫೫ ಸಂದು ಸಂದುಗಳಲ್ಲಿ ಹೋಗಿಸೇರು.
ಇಸುವೆಸ ೯-೬೦ ಸೇವಾವೃತ್ತಿ
ಇಳಿಪು ೨-೫೨ ಲೇವಡಿ ಮಾಡು
ಈನ್ ೩-೧೨೬ ಕರು ಹಾಕು
ಈಷತ್ ೩-೮೪ ಸ್ವಲ್ಪ
ಉಂಡಿಗೆ ೪-೨೯ ಮುದ್ರೆ
ಉಚ್ಚಲಿತ ೬-೪೩ ಮೇಲಕ್ಕೆ ಚಿಮ್ಮುವ
ಉಜ್ಜುಗ ೫-೧ವ ಉದ್ಯೋಗ, ಕೆಲಸ
ಉಡುಪ ೧೩-೮ ಚಂದ್ರ
ಉತ್ತಮಾಂಗ ೩-೧೩೦ವ ತಲೆ
ಉದಂತ ೧-೩೨ ಸಮುದ್ರದ ವರೆಗೆ
ಉದಂತ ೩-೧೦೨ ಹೇಳಿಕೆ, ವಿಚಾರ
ಉದೀಚಿ ೬-೩೬ ಉತ್ತರ ದಿಕ್ಕು
ಉನ್ನಿದ್ರೆ ೧೨-೬ ನಿದ್ರೆಯಿಂದ ಏಳುವುದು
ಉಪಕಂಠ ೬-೯ ಸಮೀಪ
ಉಪಶಲ್ಯಕ ೨-೫೧ ಊರಿನ ಸಮೀಪವಿರುವ ಮಾಳ
ಉಪಾಯನ ೬-೩೧ವ ಬಾಗಿನ, ಉಡುಗೊರೆ
ಉಪೋಷಿತೆ ೩-೧೧೩ ಉಪವಾಸ ಇರುವವಳು
ಉಷ್ಟ್ರ ೭-೧೯ ಒಂಟೆ
ಉಳಿಕೆ ೧೨-೨೭ ವಾದ್ಯ ವಿಶೇಷ
ಋಕ್ಷ ೮-೯ ಕರಡಿ
ಎಗ್ಗು ೧೩-೬೯ ಸಂಕೋಚ
ಎಚ್ಚು ೧೧-೬೩ ಹಚ್ಚು
ಎಡ್ಡ ೩-೨೬ ಸುಂದರ

ಎರೆ ೩-೧೨ ಬೇಡು
ಎಳಕುಟಿಯಾಡು ೨-೨೪ ಹೀಯಾಳಿಸು
ಎಳತೆ ೫-೨೪ ನೇತಾಡುವಿಕೆ
ಎಳಸು ೯ -೧೪ ಬಯಸು
ಏವ ೩-೨೩ ಕೋಪ
ಏವಯ್ಸು ೮-೧೧೪ವ ಕೋಪಗೊಳ್ಳು
ಐಕಿಲ್ ೬-೩೫ ಹಿಮ
ಓವರಿ ೬-೫೩ ಕೊಠಡಿ
ಓಳಿ ೭-೬೪ವ ರಾಶಿ
ಕಂಕರಿ ೧೨-೨೭ ವಾದ್ಯ ವಿಶೇಷ
ಕಂಪಣ ೮-೧೮ವ ಆಯುಧ ವಿಶೇಷ
ಕಟಕ ೮-೩೧ ಕಡಗ
ಕಟಿಸೂತ್ರ ೧೧-೬೩ ಉಡಿದಾರ
ಕಡುಪು ೩-೧೨೭ ಉಗ್ರತೆ
ಕಡೆ ೧೨-೧೦೨ ರಂಗೋಲಿ
ಕಣಯ ೮-೨೮ವ ಅಯುಧ ವಿಶೇಷ
ಕಣ್ಸಲ್ಲ ೮-೧೧೫ ಕಣ್ಣಿನ ಸನ್ನೆ
ಕನಕ ೩-೨೧ ಉಮ್ಮತ್ತ
ಕನ್ನಡಿಸು ೮-೪೧ ಪ್ರತಿಫಲಿಸು
ಕಬರಿ ೫-೯೬ ಕೂದಲು
ಕರಣೀಯ ೭-೪೯ ಒಪ್ಪಿಗೆ
ಕರವಳರು ೮-೪೨ ಕತ್ತಿ ಹಿಡಿದವರು
ಕರು ೨-೭೨ ಗೋಡೆ
ಕರ್ಣತಾಳ ೩-೫೪ವ ಆನೆಯ ಕಿವಿಯ ಬಡಿತ
ಕರ್ದಮ ೮-೪೭ವ ಕೆಸರು
ಕಲುಂಬು ೮-೩ ಕಲಕು
ಕಳ ೫-೮೦ ಯುದ್ಧಭೂಮಿ
ಕಾಂಚೀಲತೆ ೫-೨೯ ಒಡ್ಯಾಣ
ಕಾರಂಡೆ ೨-೩೯ ಒಂದು ಬಗೆಯ ಹಕ್ಕಿ
ಕಾಶ್ಮೀರ ೧೨-೧೦೨ ಕಸ್ತೂರಿ
ಕಿತ್ತಡಿ ೩-೨೯ ಪಾದ
ಕಿಣಭ್ರಾಜತ್ ೮-೪೩ ಜಡ್ಡುಗಟ್ಟಿದ
ಕಿಱುಗೇಣ್ ೩-೩೬ ಚಿಕ್ಕ ಕತ್ತಿ
ಕಿಸು ೫-೬೨ ಕೆಂಪು
ಕೀರ್ಣ ೨-೬೯ ತುಂಬಿದ
ಕೀಲಾರ ೬-೨೨ ಹಾಲು ಕರೆಯುವ ಜಾಗ
ಕುಪಿಜ ೪-೮೮ ಬೆಟ್ಟದಾವರೆ
ಕುನುಂಗು ೫-೭೪ ಬಗ್ಗು
ಕುಪ್ಪಿಗೆ ೩-೨೮ ಭರಣಿ
ಕುರವಕ ೨-೩೯ ಒಂದು ಜಾತಿಯ ಹಕ್ಕಿ
ಕೂಂಕು ೩-೭೬ವ ಕುರಿತು
ಕೂರಿಸು ೯-೨೧ ಪ್ರೀತಿಸು
ಕೂರ್ಪು ೩-೧೬ ಪ್ರೀತಿ
ಕೂವ ೫-೯೭ ಬಾವಿ, ಕೂಪ
ಕೃಷ್ಣಾಗರು ೧೦-೯೧ ಒಂದು ಜಾತಿಯ ಸುಗಂಧದ ಮರ
ಕೆಯ್ಪುಜ್ ೫-೯೮ ಚಪ್ಪಾಳೆ
ಕೆಯ್ನೀರ್ ೮-೬೦ ಧಾರೆ
ಕೆಯ್ಗೆಯ್ ೨-೪೮ ಅಲಂಕರಿಸು
ಕೈತವ ೩-೧೯ ಮೋಸ
ಕೊಂಡುಕೊನೆ ೧-೬೭ ಹೊಗಳು
ಕೊಟ್ಟಿಗೆ ೩-೧೨೪ವ ಎತ್ತಿನ ಮೇಲೆ ಸಾಮಾನು ಸಾಗಿಸುವುದು
ಕೊಣಸು ೩-೭೬ವ ಜಿಂಕೆಯ ಮರಿ
ಕೊನರು ೨-೪೫ ಚಿಗುರು
ಕೊಱಚಾಡು ೨-೪೪ ಪೀಡಿಸು
ಕೊಲ್ಲಿನೋಟ ೫-೯೦ ಕಡೆಗಣ್ಣ ನೋಟ
ಕೋ ೮-೫೦ ಪೋಣಿಸು
ಕೋಟ್ಟಾಗಾರ ೬-೨೨ ಕೋಷ್ಠಾಗಾರ, ಕಣಜ
ಕ್ರಕಚ ೭-೧೭ ಗರಗಸ
ಗಗನಾಪಗೆ ೨-೬೬ ಗಂಗೆ
ಗವ್ಯೂತಿ ೬-೧೭ವ ದೂರದ ಒಂದು ಅಳತೆ
ಗಟಿಸು ೯-೬೯ ಒಂದುಗೂಡಿಸು
ಗಹನ ೫-೬೩ವ ಕಾಡು
ಗಾಡಿ ೨-೪೪ ಸೌಂದರ್ಯ
ಗಾತ್ರಕ್ಷೇತ್ರ ೩-೧೦೭ ದೇಹ
ಗಾವರಿಸು ೫-೧೫ ಧ್ವನಿ ಮಾಡು
ಗುಂಜಿ ೮-೧೧೯ ಗುಲಗಂಜಿ
ಗುಣ ೯-೧೧೧ ಬಿಲ್ಲಿನದಾರ
ಗುವಿ ೮-೨೮ವ ಕಬ್ಬಿಣದ ತುಂಡು
ಗೆಂಟು ೨-೮೨ ಹತ್ತಿರ
ಗೊಂದಳ ೩-೧೨೭ ಗುಂಪುಗೂಡು
ಗೋತ್ರ ೫-೪೭ವ ಬೆಟ್ಟ
ಚಂದ್ರಿಕೆ ೮-೧೦೬ ವ ಬೆಳದಿಂಗಳು
ಚಟ್ಟ ೨-೬೧ ಶಿಷ್ಯ
ಚಳಿಸು ೫-೯೨ ಕುಟ್ಟು
ಚಾಗ ೨-೪೪ ತ್ಯಾಗ
ಚಾಳಿಸು ೮-೩೬ ಚಲಿಸು
ಚಾಳಿಸು ೧೦-೩೮ ಹೀಯಾಳಿಸು
ಚೀನ ೨-೬೨ ರೇಷ್ಮೆ ಬಟ್ಟೆ

ಚೀರ ಘಟ್ಟಿ ೨-೬೨ ಬ್ರಹ್ಮ (?)
ಚುನ್ನ ೧೩-೬೬ ಹಾಸ್ಯ
ಚೂಡಾಕರಣ ೪-೫೧ ಚವಲ
ಚೂಳಿಕೆ ೧-೯೪ ಬೆಟ್ಟ, ಮರ ಮುಂತಾದವುಗಳ ತುದಿ
ಜಂಪತಿ ೧೨-೧೦ ದಂಪತಿ
ಜಗುಬು ೩-೪ ಜಾರು
ಜಡ ೩-೩ ನೀರು
ಜಲಕ್ಕನೆ ೩-೧೨೧ ಕೊಡಲೆ, ತಕ್ಷಣ
ಜಾಗ ೧೨-೧೦೦ ಕೆಂಪುಕಲ್ಲು
ಜೀವಣ ಶಾಲೆ ೨-೫೦ ಊಟದ ಮನೆ
ಝುಂಪಾಣ ೫-೨೦ ಮುಸುಕು
ಝುಷ ೫-೨೫ ಮೀನು
ಝುಂಕಟ ೧೨-೨೭ ವಾದ್ಯ ವಿಶೇಷ
ಟಂಕಿತ ೨-೭೫ವ ಮುದ್ರಿಸಿದ
ಡಕ್ಕೆ ೧೨-೨೭ ವಾದ್ಯ ವಿಶೇಷ
ತಕ್ಕು ೩-೯೨ ಠಕ್ಕು, ಮೋಸ
ತಗುಳ್ ೨-೩೦ವ ತಾಗು, ತಗಲು
ತಟಂಕಷ ೧-೩೪ ಕೂಲಂಕಷ
ತನುತ್ರ ೬-೩೪ ರಕ್ಷಾ ಕವಚ
ತರವಾರಿ ೬-೩೪ವ ಕತ್ತಿ
ತಳುಂಬು ೨-೭೭ ದೂಡು, ತಳ್ಳು
ತವೆ ೩-೧೨ ತೀರು
ತಳಕು ೮-೧೮ ಹೋಗು
ತಳಕ್ ೭-೧೮ ನಡೆ, ಹೋಗು
ತಳವಾರೆ ೧೦-೭೧ ತುದಿಯ ವರೆಗು
ತಟಿ ೫-೧೯ ಛತ್ರಿ
ತಿಂಗಣಿ ೮-೫೦ವ ಗೊಂಡೆ
ತಿಂಬು ೨-೪೪ ತುಂಬಿಸು
ತಿಗ್ಮರೋಚಿ ೩-೧೨೦ ಸೂರ್ಯ
ತಿಜಿ ೨-೪೫ ಸಂಗ್ರಹಿಸು
ತೀರಮೆ ೨-೪೬ ಮುಕ್ತಾಯ
ತುಷಾರ ೩-೮೪ವ ಬೆಳದಿಂಗಳು
ತೂಳ ೫-೮೫ ಹತ್ತಿ
ತೆಂಬೆಲರ್ ೪-೨೩ ತೆಂಕಣ ಗಾಳಿ
ತೆನೆ ೨-೬೧ ಗೋಪುರ
ತೆಲ್ಲಂಟಿ ೧೨-೧೯ ಉಡುಗೊರೆ
ತೇಂಕು ೫-೩೪ವ ತೇಗು
ತೇರಯ್ಸು ೨-೪೪ ಒಮ್ಮೆಟ್ಟು
ತೋಡು ೩-೪೦ ಸಮಾನ
ತೋಣಿ ೨-೬೭ ಸಮ
ತೋಮರ ೮-೨೮ ಆಯುಧ ವಿಶೇಷ
ತೋಮೆ ೩-೧೨೭ವ ಗುಂಪು
ದಗುಂತಿ ೨-೭೭ ಅತಿಶಯ
ದಟ್ಟಡಿ ೩-೯೬ ಪುಟ್ಟ ಮಕ್ಕಳು ಹಾಕುವ ತಪ್ಪು ಹೆಜ್ಜೆ
ದಡ್ಡಿ ೬-೫೩ ಮನೆಯ ಮಾಳಿಗೆ
ದಶನ ೬-೧೫ ಹಲ್ಲು
ದಾನ ೪-೨೪ ಮದೋದಕ
ದಾಸವರ್ಣ ೫-೬೨ ದಾಸವಾಳ
ದೇವ ಮಾತೃಕ ೨-೧೪ವ ಮಳೆ ನೀರಿನಿಂದ ವ್ಯವಸಾಯ
ದೇವಾಂಗ ೮-೮೭ವ ಬಟ್ಟೆ
ದೀರ್ಘಿಕೆ ೨-೫೪ ಬಾವಿ
ದೋಹಳ ೬-೩೪ ಬಯಕೆ
ದ್ರವಿಣ ೪-೭೩ ಸಂಪತ್ತು
ದ್ರೋಣಿ ೨-೪೪ ದೋಣಿ
ದ್ವಿರದ ೪-೫೪ ಆನೆ
ಧರಾಮರ ೧೨-೧ ಬ್ರಾಹ್ಮಣ
ನದೀ ಮಾತೃಕ ೨-೧೪ವ ನದಿಯ ನೀರಿನಿಂದ ವ್ಯವಸಾಯ
ನಮೆ ೮-೧೭ ಕೃಶವಾಗು
ನಾಗವೇದಿಕೆ ೮-೫೦ ನಾಗಂದಿಗೆ
ನಿಕ್ಕುವಂ ೧-೭೮ ನಿಶ್ಚಯ
ನಿತ್ತಜಿಸು ೧-೯೪ ತಾಳು, ಸಹಿಸು
ನಿಳಿಂದ ೧೨-೬ ದೇವತೆ
ನೀಡ ೨-೭೪ ಮನೆ
ನೀಡುಂ ೩-೧೦೬ ವಿಶೇಷವಾಗಿ
ನೀಳ ೮-೫೪ ನೀಲ, ನವರತ್ನಗಳಲ್ಲಿ ಒಂದು
ನುಗುಬು ೨-೬೪ ನುಸುಳು
ನೆಗಪು ೧೧-೬೦ವ ಮಾಡು
ನೆಮ್ಮು ೮-೧೯ವ ಆಶ್ರಯಿಸು
ನೇರ್ಪಡು ೪-೮೭ ನೆಟ್ಟಗೆ ಮಾಡು
ನೆಲಮುಕ್ಕ ೬-೪೮ ವಿಷದ ಹಾವು
ನೈಷಂಗ ೧-೮೨ ಬತ್ತಳಿಕೆ
ಪಂಡಿತವಕ್ಕಿ ೨-೭೭ ಗಿಳಿ
ಪಂದಲೆ ೭-೨೨ ಆಗತಾನೆ ಕತ್ತರಿಸಿದ ತಲೆ
ಪಜ್ಜತಿ ೧೨-೫೬ ಪದ್ಧತಿ
ಪಟ ೧೨-೧೬ ವಸ್ತ್ರ
ಪಟವಾಸ ಚೂರ್ಣ ೧೨-೧೭ ಸುವಾಸನೆ ಪುಡಿ

ಪಟ್ಟ ೨-೮೬ ಚೌಕ, ಜಾಗ
ಪಡಿಚಂದ ೨-೯೨ ಸಮಾನ
ಪಡು ೮-೬೪ ಮಲಗು, ಮುಳುಗು
ಪದಿಱು ೫-೧೩ ಸುಳ್ಳು, ಸಟೆ
ಪದುಳಿಕೆ ೧-೨೯ ಕ್ಷೇಮದಿಂದಿರುವುದು
ಪನೆ ೧೨-೬೩ ಕೆನ್ನೆಯ ಕೂದಲು
ಪರಿಕಾಲ್ ೪-೮ ಹರಿಯುವ ಕಾಲುವೆ
ಪರ್ಚುಗೊಳ್ ೩-೬೫ ಹಂಚಿಕೊಳ್ಳುವುದು
ಪರ್ವ ೨-೪೮ ಕಬ್ಬಿನ ಗಿಣ್ಣು
ಪಱ್ ೫-೧೩ ತಮ್ಮಟೆ
ಪಲ್ಲಣ ೫-೧೦ ಜೀನು
ಪಲ್ಮೊರೆ ೫-೧೦ ಹಲ್ಲು ಕಡಿಯುವುದು
ಪಸ ೧೩-೨ ಬರ
ಪಸದನ ೬-೭೨ ಅಲಂಕಾರ
ಪಸಲೆ ೩-೭೬ ಹುಲ್ಲುಗಾವಲು
ಪಸಾಯಿತ ೮-೨೦ ಸಾಮಂತ ರಾಜ
ಪೞಿಯಿಗೆ ೬-೨೮ ಬಾವುಟ
ಪಟಿನ ೧೨-೨೭ ವಾದ್ಯ ವಿಶೇಷ
ಪಟಿಂಬಾಗ ೮-೮೧ ಕೆಟ್ಟ ಮನಸ್ಸು
ಪಾಂಡು ೬-೩೮ ಬಿಳಿ
ಪಾಂಶು ಕೇಳಿ ೧೨-೬೫ ಧೂಳಾಟ
ಪಾಂಸು ೫-೪೦ ಧೂಳು
ಪಾಗಲ್ ೮-೪೭ ಗೋಡೆ
ಪಾಟಿ ೭-೫೭ ಸಮ
ಪಾಲ್ಯ ೧೨-೬೭ ಬೀಡು, ಪಾಲನೆ
ಪಾವಕ ದಿಕ್ಕು ೨-೫೩ ಅಗ್ನಿದಿಕ್ಕು, ಆಗ್ನೇಯ
ಪಿಂಡು ೩-೧೨೭ ಹಿಂಡು
ಪಿಡಿ ೫-೮೨ ಹೆಣ್ಣಾನೆ
ಪುಂಸವನ ೩-೮೮ ಗರ್ಭಿಣಿಯರಿಗೆ ಮಾಡುವ ಶಾಸ್ತ್ರ
ಪುಟ್ಟಿಗೆ ೪-೪೩ ಬಟ್ಟೆ
ಪುಣಂಬು ೩-೨೭ ಬಾಣ
ಪುದು ೮-೨೬ ಹೊಸ
ಪುರುಡು ೧೦-೭೦ ಸ್ಪರ್ಧೆ
ಪುರುಳು ೨-೪೪ ಸಂಪತ್ತು
ಪುಷ್ಕರ ೧೨-೧೦೭ ಸೊಂಡಿಲು
ಪುಷ್ಪಾತಿಶಯ ೩-೮೫ ಹೆಣ್ಣಿನ ಮಾಸಿಕ ಅವಸ್ಥೆ
ಪೆಂಟೆ ೨-೮೨ ಪಿಂಡಿ, ಕಟ್ಟು
ಪೆಕ್ಕಣ ೪-೨೫ ನೋಟ
ಪೆಱ್ ೧-೯೨ ಚಂದ್ರ
ಪೊಂಪುಟಿ ೨-೮೬ ಆಧಿಕ್ಯ, ಹೆಚ್ಚಳ
ಪೊಗಸು ೩-೬೭ ಬೆಳಗು
ಪೊದಟ್ ೫-೩೯ ವ್ಯಾಪಿಸು
ಪೊಸವಾಣಿತಿವುಲ್ಲೆ ೩-೭೬ವ ಹೊಸಬಾಣಂತಿ ಹುಲ್ಲೆ
ಪೊಳಕು ೯-೧೦೮ ಹಾರ
ಪೋತ ೫-೮೩ ಮರಿ
ಪ್ಲವ ೧೨-೩ ಪ್ರವಾಹ
ಫೇನ ೬-೧೫ ನೊರೆ
ಬಗರಗೆ ೨-೪೪ ಕುಳಿ
ಬಚಿಯಿಸು ೮-೫೭ ಕೊಡಿಸು
ಬರ್ಚಿಸು ೩-೩೦ ಬಣ್ಣ ಬಳಿ
ಬರ್ದುಗಾರ್ತಿ ೨-೭೭ವ ವೇಶ್ಯೆ
ಬರ್ದೆ ೮-೧೯ವ ಮುಗ್ಧೆ
ಬಱುಗಂಪಲ್ ೫-೪೬ ಬತ್ತು
ಬಳ್ವಲ್ ೪-೮೧ವ ಬೆಳೆದ (?)
ಬಳ್ಳ ೧-೯೦ ಒಂದು ಬಗೆಯ ಅಳತೆ
ಬಾಯ್ದೆಱ್ ೩-೪೫ ತುಟಿ
ಬಾಟ್ ೩-೩೯ ಕತ್ತಿ
ಬಿಡಲರಿಯದಂಗೆ ೯-೭ ಬಿಡಲಾಗದವನಿಗೆ
ಬಿಡಾಲ ೨-೭೨ ಬೆಕ್ಕು
ಬಿನ್ನ ೧೨-೨ ಖಾಲಿ
ಬಿಯ ೨-೪೪ ವ್ಯಯ
ಬಿಸಲತೆ ೮-೫೭ ತಾವರೆಯ ನಾಳ
ಬಿಸುಗೆ ೬-೨೯ ಅಂಬಾರಿ
ಬೀಜಪೂರ ೯-೧೫ ದೊಡ್ಡೀಳೆ
ಬೆಟ್ಟು ೫-೩೭ ಸೇರು
ಬೆಳ್ಳ ೮-೧೦೬ ನೀರು
ಬೇಡಬಟ್ಟು ೫-೫೫ ಬೇಡಪಡೆ
ಬೊಂದಿಗೆ ೫-೮೯ ಹಗ್ಗ
ಬೊಂಬುಟಿ ೧೨-೨೭ ವಾದ್ಯ ವಿಶೇಪ
ಭಲ ೫-೭೨ ತೋಳ
ಭೃಂಗಾರ ೪-೭೯ ಚಿನ್ನದ ಕಲಶ
ಭಾರತಿಕ ವೃಂದ ೭-೩೪ ನರ್ತಕರ ಸಮೂಹ
ಮಂಡವಿಗೆ ೬-೨೨ ಗುಡಾರ
ಮಂದ ೨-೫೬ ಆನೆಯ ಒಂದು ಜಾತಿ
ಮಂದುರ ೨-೬೧ವ ಲಾಯ
ಮಕರತೋರಣ ೨-೯೧ ಮೊಸಳೆಯಾಕಾರದ ತೋರಣ
ಮಘವ ೧೨-೬ ಇಂದ್ರ

ಮಡಲು ೧೩-೩೩ ತುದಿ
ಮದಿಲ್ ೨-೯೦ ಗೋಡೆ
ಮರಿಚ ೫-೬೯ ಮೆಣಸು
ಮಸೂರಿಕ ೧೨-೭೮ ಕಡಲೆ
ಮಾತುಳಾನಿ ೮-೪೯ವ ತಾಯಂದಿರು
ಮಾರುತ ಭುಕ್ ೧೩-೩೫ ಹಾವು
ಮಾರುತ ವೀಥಿ ೮-೨೭ವ ಆಕಾಶ
ಮಾರ್ಗಣ ೧-೬೦ ಬಾಣ
ಮಿತ್ರ ೬-೪೦ ಸೂರ್ಯ, ಗೆಳೆಯ
ಮಿಳಿರು ೫-೩೪ವ ಅಲುಗಾಡು
ಮುಂಡಾಡು ೪-೭೨ ಅಪ್ಪು
ಮುಂಬು ೩-೮೪ ಮೊದಲು
ಮುಕರು ೧೨-೨೩ ಮುತ್ತು
ಮುಡಿಪು ೯-೯ವ ಸಾಯುವುದು
ಮುಹುರ್ ಮುಹುರ್ ೩-೭೭ವ ಮತ್ತೆ ಮತ್ತೆ
ಮೂಗುವಡು ೬-೧೪ ನಿಶ್ಯಬ್ದವಾಗು
ಮೂವಡಿ ೧-೯೪ ಮೂರು ಸಲ
ಮೃಗಧರ ೮-೪೭ವ ಚಂದ್ರ
ಮೃಗಭೂ ೩-೫೮ ಕಸ್ತೂರಿ
ಮೃಗಮದ ೮-೫೪ ಕಸ್ತೂರಿ
ಮೆಯ್ಗರೆ ೧೩-೧೯ವ ಮರೆಯಾಗು
ಮೇಚಕರುಚಿ ೧-೪೮ ಹಳದಿ ಬಣ್ಣ
ಮೇಳೆಯ ೭-೬೯ವ ಗೋನಾಳಿ, ಕೂಡಿಸು
ಮೊಗಸು ೮-೭ ಹಬ್ಬು
ಮೊಗಸು ೧೦-೩೦ ಅಪೇಕ್ಷೆ
ಮೊಗ್ಗು ೮-೪೩ ಸಾಧ್ಯತೆ
ಮೊಱೆ ೨-೫೪ ಜಲಾಶಯ
ಮೊಟ್ಗು ೩-೯೮ ಬಾಗು, ನಮಸ್ಕರಿಸು
ಯಾವಕ ೯-೭೪ ಗೋರಂಟಿ
ರೆಕ್ಕೆ ೫-೮೦ ರಕ್ಷೆ
ರಯ್ಯ ೨-೪೧ ಮನೋಹರ
ರವಿನಂದನ ೮-೬೮ ಕರ್ಣ
ರಸಾತಳ ೨-೫೩ ಪಾತಾಳ
ರಸಾಳ ೧-೪೦ ಮಾವು
ರಸಿತ ೧೨-೨೨ ಝೇಂಕಾರ
ರಹಟಘಟೀಯಂತ್ರ ೨-೫೧ ರಾಟೆ
ರಾಸಭ ೬-೨೧ ಕತ್ತೆ
ರುಂದ್ರ ೪-೯೨ ವಿಶಾಲವಾದ
ರುಚಿ ೮-೫೨ ಕಾಂತಿ
ಱೊಪ್ಪು ೫-೭೪ ಪ್ರಾಣಿಗಳನ್ನು ಕೂಡುವದೊಡ್ಡಿ, ಆಶ್ರಯ ಸ್ಥಾನ
ಱೋಡಾಡು ೨-೪೪ ಹೀಯಾಳಿಸು
ಲಕ್ಷ್ಮ ೩-೭೬ ಗುರುತು
ಲಪನ ೭-೪೧ ಮುಖ
ಲಾಜ ೮-೪೭ವ ಬತ್ತದ ಅರಳು
ಲೆಪ್ಪ ೫-೨೨ ಮೇಣ
ಲೋಕೈಕಮಿತ್ರ ೫-೪೧ ಸೂರ್ಯ
ವನಮಾಲೆ ೩-೨೨ ತುಳಸೀ ಹಾರ
ವನ್ಯಲುಲಾಯ ೮-೭೭ ಕಾಡುನಾಯಿ
ವರುಣವಾಹನ ೨-೯೧ ಮೊಸಳೆ
ವಾರಕರ್ ೭-೩೫ ಪಾಲುದಾರರು
ವಾರುಣಿ ೮-೯೭ ಮದ್ಯ
ವಾಹಳೀ ೩-೧೩೦ ವೈಹಾಳಿ
ವಿಂದ ೨-೯೫ ವೃಂದ, ಸಮೂಹ
ವಿಕೀರ್ಯಮಾಣ ೮-೪೭ವ ಇರುವ
ವಿತಾನ ೪-೭೮ ಬಾವುಟ
ವಿಪಣಿ ವೀಥಿ ೨-೭೭ ಪೇಟೆ ಬೀದಿ
ವೇತ್ರ ೭-೩೭ ಬೆತ್ತ
ವೇಸರಿ ೩-೧೩೧ ಹೇಸರಗತ್ತೆ
ವೈಹಳಿ ೨-೫೫ ವೈಹಾಳಿ, ಆನೆಯ ಒಂದು ಜಾತಿ
ವೊಕ್ಕರಣೆ ೨-೫೪ ಹೊಕ್ಕರಣೆ, ಪುಷ್ಕರಣಿ. ಕೊಳ
ಶತಮುಖ ದಿಕ್ಕು ೯-೧೦೬ ಪೂರ್ವದಿಕ್ಕು
ಶಿಖಂಡಿ ೬-೯ ನವಿಲು
ಶಿಬಿಕೆ ೮-೨೮ವ ಪಲ್ಲಕ್ಕಿ
ಶುದ್ಧಾಕ್ಷರ ೨-೩೯ವ ಮೂಲಾಕ್ಷರ
ಶೇಖರ ೭-೩೩ ತಲೆಯಲ್ಲಿ ಧರಿಸುವ ಆಭರಣ
ಶ್ರೀಕಾಂತೆ ೮-೬೪ ಲಕ್ಷ್ಮಿ
ಶ್ವಾಪದ ೫-೬೦ ಕ್ರೂರ ಪ್ರಾಣಿ, ಹುಲಿ
ಸಂಕಲೆ ೫-೨೯ ಕಂದಿ ಹೋಗುವುದು
ಸಂಕೀರ್ಣ ೨-೫೬ ಆನೆಯ ಒಂದು ಜಾತಿ
ಸಂಗಡ ೩-೧೨೭ ತಾಗುವುದು, ಘರ್ಷಣೆ
ಸಂದಷ್ಟ ೫-೨೮ ಕಡಿಯಲ್ಪಟ್ಟ
ಸಪತ್ನಿ ೩-೫೬ ಸವತಿ
ಸಮಯ ೧-೮೦ ಧರ್ಮ
ಸಮೆ ೮-೪೯ ಸಿದ್ಧಪಡಿಸು
ಸರಿ ೧೨-೧೪ ಮಳೆ
ಸಸಿನಂ ೫-೩೧ ನೆಟ್ಟಗೆ
ಸಾಂದು ೨-೮೩ ಸಾದು
ಸಾಂಯಾತ್ರಿಕ ೨-೭೪ ಸಮುದ್ರವ್ಯಾಪಾರಿ

ಸಾಹಣ ವೆಗ್ಗಡೆ ೮-೨೮ವ ಕುದುರೆಗಳನ್ನು ಪಳಗಿಸುವವ
ಸಿವಿಱು ೧೨-೨೭ ವಾದ್ಯ ವಿಶೇಷ
ಸೀಮಂತ ೩-೫೫ ಬೈತಲೆ
ಸೀಯಬಾರ ೬-೨೩ ಹೆಬ್ಬಾಗಿಲು
ಸುಟ್ಟಿದೋಱು ೮-೮ಳ ಬೆರಳೆತ್ತಿ ತೋರಿಸು
ಸುಟ್ಟುರೆ ೩-೧೨೭ ಬಿರುಗಾಳಿ
ಸುದ್ದಗೆ ೪-೫೬ ಅಕ್ಷರ
ಸುರಭಿ ೩-೧೦೯ ಹಾಲು
ಸುರ್ವು ೨-೪೮ ಸೊರೆಯುವುದು
ಸೂಕ್ತಿಸತಿ ೮-೬ಳ ಸರಸ್ವತಿ
ಸೂಲಿಸು ೫-೮೨ ಹೆರಿಗೆ ಮಾಡು
ಸೆಗಳಿಗೆ ೬-೫೩ ಬಿಸಿ, ಕಾವು
ಸೆಡೆ ೧-೯ಳ ಹೆದರು
ಸ್ಯೆಪು ೩-೮೭ ಪುಣ್ಯ
ಸ್ಯೆರಿಭ ೬-೨೧ ಕೋಣ
ಸೊಡರ್ವರ್ಕು ೩-೯೧ ಹಣತೆಯ ದೀಪದ ಮಸಿ
ಸೋವು ೯-೧ಳ ಓಡಿಸು
ಸ್ಕಂದ ೫-೨೨ ರೆಂಬೆ
ಸ್ತ್ರೈಣ ೬-೩ ಹೆಣ್ಣುತನ
ಹರಿದ್ರ ೨-೪೭ ಅರಿಶಿನ
ಹರಿ ೮-೬ ಸೂರ್ಯ
ಹಾರೀತ ೨-೩೯ ಕಪೋತ
ಹಾಜಿ ೩-೧೨೭ವ ಓಡು, ಜಿಗಿತ

ಸಹಾಯಕ ಸಾಹಿತ್ಯ

ಪುಷ್ಪದಂತ ಪುರಾಣಂ

೧. ಪುಷ್ಪದಂತ ಪುರಾಣಂ : ಇಮ್ಮಡಿ ಗುಣವರ್ಮ, (ಸಂ.) ಎ. ವೆಂಕಟರಾವ್, ಹೆಚ್. ಶೇಷಯ್ಯಂಗಾರ್, ಮದ್ರಾಸು, ೧೯೩೩.

೨. ಕರ್ನಾಟಕ ಕವಿಚರಿತೆ (ಸಂಪುಟ ೧, ೨ ,೩) : (ಸಂ.) ಆರ್. ನರಸಿಂಹಾಚಾರ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೨, ೧೯೭೩, ೧೯೭೪.

೩. ಆದಿಪುರಾಣಂ : ಪಂಪ, (ಸಂ.) ಕೆ.ಜಿ. ಕುಂದಣಗಾರ, ಎ.ಪಿ. ಚೌಗುಲೆ, ಮದ್ರಾಸ್, ೧೯೫೩.

೪. ಪಂಪಭಾರತಂ ಎಂಬ ವಿಕ್ರಮಾರ್ಜುನ ವಿಜಯಂ : ಪಂಪ, (ಸಂ.), ಬೆಳ್ಳಾವೆ ವೆಂಕಟನಾರಣಪ್ಪ, ಮೈಸೂರು, ೧೯೩೧.

೫. ಚಂದ್ರಪ್ರಭ ಪುರಾಣ : ಅಗ್ಗಳ, (ಸಂ.) ಎಸ್.ಜಿ. ನರಸಿಂಹಾಚಾರ್, ಮಂ.ಅ. ರಮಾನುಜಯ್ಯಂಗಾರ್, ಕರ್ನಾಟಕ ಕಾವ್ಯ ಕಲಾನಿಧಿ, ಮೈಸೂರು, ೧೯೦೧.

೬. ಚಾವುಂಡರಾಯ ಪುರಾಣ : ಚಾಮುಂಡರಾಯ, (ಸಂ.) ಕಮಲ ಹಂಪನಾ, ಕೆ.ಆರ್. ಶೇಷಗಿರಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೩.

೭. ಮಹಾಪುರಾಣ : (ಭಾಗ ೧, ೨) ಎ. ಶಾಂತಿರಾಜಶಾಸ್ತ್ರಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೧.

೮. ಕೆಲವು ಕನ್ನಡ ಕವಿಗಳ ಜೀವನ ವಿಚಾರ : ಎ. ವೆಂಕಟಸುಬ್ಬಯ್ಯ, ಬೆಂಗಳೂರು, ೧೯೨೭.

೯. ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ : ನಾಲ್ಕನೆಯ ಸಂಪುಟ; ಡಾ. ಹಾ.ಮಾ. ನಾಯಕ, ಪ್ರಧಾನ ಸಂಪಾದಕ, ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ ಸಂಪಾದಕ. ೧೯೭೭.

೧೦. ಇಮ್ಮಡಿ ಗುಣವರ್ಮ : ಲೇ ಬಿ.ಎ. ವಿವೇಕ ರೈ. ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ, ನಾಲ್ಕನೆಯ ಸಂಪುಟ, ಡಾ. ಹಾ.ಮಾ ನಾಯಕ ಪ್ರಧಾನ ಸಂಪಾದಕ, ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ ಸಂಪಾದಕ, ೧೯೭೭.

೧೧. ಸೂಕ್ತಿ ಸುಧಾರ್ಣವಂ : ಮಲ್ಲಿಕಾರ್ಜುನ, (ಸಂ.) ಎನ್. ಅನಂತ ರಂಗಾಚರ್. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೩

೧೨. ಪೀಠಿಕೆಗಳು ಲೇಖನಗಳು : ಡಿ.ಎಲ್. ನರಸಿಂಹಾಚಾರ್, ಡಿ.ವಿ.ಕೆ. ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು, ೧೯೭೧.

೧೩. ಕಾವ್ಯ ಸಾರಂ: ಮಲ್ಲಿಕವಿ, (ಸಂ.) ಎನ್. ಅನಂತ ರಂಗಾಚರ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೩.

೧೪. ಕಾವ್ಯ ಸಾರ : ಅಭಿನವವಾದಿ ವಿದ್ಯಾನಂದ, (ಸಂ.) ಎಸ್. ಜಿ ನರಸಿಂಹಾಚಾರ್, ಮಂ.ಅ. ರಾಮಾನುಜಯ್ಯಂಗಾರ್, ಕನ್ನಡ ಕಾವ್ಯ ಮಂಜರಿ, ಮೈಸೂರು, ೧೮೯೮.

* * *

ಪಾರ್ಶ್ವಪಂಡಿತ ವಿರಚಿತ ಶಾಸನ

॥ ಓಂ ನಮಃ ಸಿದ್ಧೇಭ್ಯಃ ॥

ಶ್ರೀಮತ್ಪರಮಗಂಭೀರಸ್ಯಾದ್ವಾದಾಮೋಘಲಾಂಛನಂ
ಜೀಯಾತ್ತ್ರೈಲೋಕನಾಥಸ್ಯ ಶಾಸನಂ ಜಿನಶಾಸನಂ ॥

ಕಂ ॥ ಶ್ರೀ ಜನ್ಮಭೂಮಿ ವರಸುರ
ಭೂಜಂ ಕ್ಷೀರಾಂಬುರಾಶಿಯಂತೆ ಗಭೀರಂ
ಶ್ರೀಜೈನ ಶಾಸನಂ ಸಲೆ
ರಾಜಿಸುತಿರ್ಕಮಳರಾಜಪೂಜಿತಮಹಿಮಂ ೧

ವಿಳಸಿತ ವಿಪುಳಾಮೃತಗೋ
ಕುಲದಿಂದಂ ಸಕಳಸಸ್ಯಸಂಪದದಿಂ ನಿ
ರ್ಮಳವರ್ಣದಿಂದೆ ವಿಧುಮಂ
ಡಳದಂತಿರೆ ಕೂಂಡಿಮಂಡಳಂ ಕಣ್ಗೊಳಿಕುಂ ೨

ವ ॥ ಅದನಾಳ್ವಂ –

ಶಾ ॥ ಸೇನಂ ಸಾಹಸ ಭೀಮಸೇನನ ಸಕೃದ್ವಿದ್ಯಾವಿಲಾಸೇನನಾ
ಜ್ಞಾನಾರೀಪ್ರಿಯವಲ್ಲಭಂ ಪೃಥುಸಭಂ ತೀವ್ರಾಂಶುತೇಜಃಪ್ರಭಂ
ನಾನಾದಾನಿ ದೃಢಾಭಿಮಾನಿ ರಣಭೂಸೇನಾನಿ ರಟ್ಟಾನ್ವಯ
ಶ್ರೀನೇತ್ರಂ ಬುಧಮಿತ್ರನುಜ್ಜ್ವಳಯಶಃಪಾತ್ರಂ ನೃಪಂ ರಂಜಿಪಂ ೩

ಆ ಸೇನಾವನಿಪಂಗಮಪ್ರತಿಮ ಲಕ್ಷ್ಮೀದೇವಿಗಂ ಪುಟ್ಟಿದಂ
ಭೂಸಂರಕ್ಷಣದಕ್ಷದಕ್ಷಿಣಭುಜಂ ವಿಧ್ವಸ್ತ ಶತ್ರುವ್ರಜಂ
ತ್ರಾಸಾನಮ್ರನೃಪಾಳ ಪಾಳಿತ ಜಯಶ್ರೀಕೇಳಿ ಶಸ್ತ್ರಾನ್ವಿತಾ
ಭ್ಯಾಸಂ ಸೂನೃತ ವಾಗ್ವಿಳಾಸನವನೀನಾಥೋತ್ತಮಂ ಕತ್ತಮಂ ೪

ಕಂ ॥ ಆ ವಿಭುವಿನವಧು ಪದ್ಮಲ
ದೇವಿ ಕಳಾರೂಪ ವಿಭವ ಜಿನಮತದೊಳ್ವಾ
ಗ್ದೇವಿ ರತಿದೇವಿ ಲಕ್ಷ್ಮೀ
ದೇವಿ ಶಚಿದೇವಿಯೆನಿಸಿ ಮಿಗೆ ಸೊಗಯಿಸುವಳ್ ೫

ಶ್ರೀಪತಿ ನಾ ವಿಷ್ಣುಃ ಪೃಥು
ವೀಪತಿಯೆನೆ ಲಕ್ಷ್ಮಿದೇವನೊಗೆದಂ ವಸುದೇ
ವೋಪಮಕುತ್ತಮವಿಭುಗಂ
ಶ್ರೀಪದ್ಮಲದೇವಿಯೆಂಬ ಸುತದೇವಕಿಗಂ ೬

ಚಂ ॥ ಪ್ರಕಟಿತ ತೇಜನನ್ವಯ ಸರೋಜಸಮೂಹವಿಕಾಸಿ ಸಜ್ಜನ
ಪ್ರಕರರಥಾಂಗ ಸಮ್ಮದಕರಂ ನಿಯತಾಭ್ಯುದಯಪ್ರಶೋಭಿತಾ
ಧಿಕನಿಜಮಂಡಳಂ ಜಿತ ಕಳಂಕ ಪವಿತ್ರ ಚರಿತ್ರನಾಗಿ ಚಂ
ದ್ರಿಕೆಗಧಿನಾಥನಾದನಿದು ವಿಸ್ಮಯನಾ ಪ್ರಭು ಲಕ್ಷ್ಮಿಭೂಭುಜಂ ೭

ಉ ॥ ಶ್ರೀಯುವತೀಶ ಹೇಮಗರುಡಧ್ವಜಮಂಡಿತಮಂಡಳೇಶನಾ
ರಾಯಣ ಲಕ್ಷ್ಮಣಂಗೆ ತನುಜರ್ಭುಜದಂತೆ ಧರೋರುಭಾರಧೌ
ರೇಯರನೂನದಾನಜಯ ಧರ್ಮಧರರ್ವಿಭು ಕಾರ್ತವೀರ್ಯಲ
ಕ್ಷ್ಮೀಯುತ ಮಲ್ಲಿಕಾರ್ಜುನ ಮಹೀಶ್ವರರಾದರತರ್ಕ್ಯವಿಕ್ರಮರ್ ೮

ಮ ॥ ಪರಚಕ್ರಂ ನಿಜ ವಿಕ್ರಮಕ್ಕಗಿದು ತೇಜಃಚಕ್ರಮಂ ಬಿಟ್ಟು ಕೋ
ವರ ಚಕ್ರಕ್ಕೆಣೆಯಪ್ಪಿನಂತಿರಿವಿನಂ ದಿಕ್ಚಕ್ರಮಂ ವ್ಯಾಪಿಸು
ತ್ತಿರೆ ಕೀರ್ತ್ಯಂಗನೆ ಕಾರ್ತವೀರ್ಯನಖಿಳೋರ್ವೀ ಚಕ್ರಮಂ ಚಕ್ರಿಯಂ
ತಿರೆ ದೋರ್ದಂಡದೊಳಾಂತನಚ್ಯುತಗುಣಂ ಶ್ರೀರಟ್ಟನಾರಾಯಣಂ ೯

ಉ ॥ ಮೇರು ನಭಸ್ತಳಂ ಜಳಧಿ ಮತ್ತತಿಯುನ್ನತಿಸಹ್ಮತ್ತ್ವಗಂ
ಭೀರಗುಣಕ್ಕೆ ಮಚ್ಚರಿಪುವೆಂದಮರಾದ್ರಿಯನಿಕ್ಕೆಮೆಟ್ಟಿಯಾ
ನೀರದ ಮಾರ್ಗಮಂ ಪುದಿದು ವಾರಿಧಿಯಂ ಮಿಗೆ ದಾಂಟಿ ಕೀರ್ತಿಯಾ
ಶಾರಮಣರ್ಗೆ ಬಣ್ಣಿಪುದು ಪೆಂಪಿನಲಂಪಿನ ಕಾರ್ತವೀರ್ಯನಾ ೧೦

ಊರ್ಜಿತತೇಜನಿರ್ಜಿತಯಶಂ ಪರಿತರ್ಜಿತ ರಾಷ್ಟ್ರಕಂಟಕಂ
ನಿರ್ಜಿತ ದುರ್ಜಯಾರಿನಿವಹಂ ಕಮಳಾಧಿಪನಂತೆ ದಾನಿನಾ
ಗಾರ್ಜುನನಂತೆ ರಾವಣವಿದಾರಣ ಕಾರಣ ರಾಮನಂತೆ ಮಿ
ಕ್ಕರ್ಜುನನಂತೆ ರಂಜಿಪನಿಳೇಶಶಿಖಾಮಣಿ ಮಲ್ಲಿಕಾರ್ಜುನಂ ೧೧

ಕಂ ॥ ಶ್ರೀಚಕ್ರವರ್ತಿತನುಜೆ ಕ
ಳಾಚತುರೆ ವಿಶಾಳಲೋಳಲೋಚನೆಯೆನಿಸಿ
ದೇಚಲದೇವಿ ಸತೀತ್ವ ಸು
ಲೋಚನೆಯೆನೆ ಕಾರ್ತವೀರ್ಯವಧು ಪೆಸರ್ವಡೆದಳ್ ೧೨

ವ॥ ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾಮಂಡಳೇಶ್ವರಂ ಲತ್ತನೂರ್ಪುರವರಾಧೀಶ್ವರಂ ತ್ರಿವಳೀ ತೂರ್ಯನಿರ್ಘೋಷಣಂ ರಟ್ಟಕುಲಭೂಷಣಂ ಸಿಂಧೂರ ಲಾಂಛನಂ ಸಫಳೀಕೃತ ವಿದ್ವಜ್ಜನಾಭಿ ವಾಂಛನಂ ವೀರಕಥಾಕರ್ಣನಜಾತರೋಮಾಂಚಂ ಸಾಹಿತ್ಯವಿದ್ಯಾವಿರಿಂಚಂ ಸುವರ್ಣಗರುಡಧ್ವಜಂ ಸಹಜಮಕರಧ್ವಜಂ ಸಂಗ್ರಾಮ ಕೌತೂಹಳೀಕೃತ ಗದಾದಂಡಂ ಕದನಪ್ರಚಂಡಂ ಸಿಂಧುರಾರಾತಿ ಬಂಧುರ ಕಬಂಧ ನರ್ತನ ಸೂತ್ರಧಾರಂ ವೈರಿ ಮಂಡಳಿಕ ಗಂಡತಳ ಪ್ರಹಾರಂ ಪರವಧೂನಂದನಂ ವಿಭವಸಂಕ್ರಂದನಂ ಸಾಹಸೋತ್ತುಂಗಂ ಸಮಾರಾಧಿತ ಮಹಾಲಿಂಗನಿದು ಮೊದಲಾದನೇಕ ನಾಮಾವಳಿ ವಿರಾಜಿತಂ ಶ್ರೀಕಾರ್ತವೀರ್ಯದೇವಂ ನಿಜಾನುಜಯುವರಾಜ ವೀರಮಲ್ಲಿಕಾರ್ಜುನದೇವಂ [illegible] ವೇಣುಗ್ರಾಮಾಸ್ಕಂಧಾವಾರದೊಳ್ ಸುಖದಿಂ ಸಾಮ್ರಾಜ್ಯಲಕ್ಷ್ಮಿಯನನುಭವಿಸುತ್ತುಮಿರೆ –

ಕಂ॥ ಶ್ರೀಕವಿವಿಬುಧಸ್ತೀರ
ತ್ನಾಕಳಿತಂ ಜಳಧಿಯಂದದಿಂ ಯದುಕುಳಲ
ಕ್ಷ್ಮೀಕಾಂತಂ ಶ್ರಿತಕಮಳಾ
ನೀಕಂ ಹಗರಟಿಗೆನಾಡು ಜಗದೊಳಗೆಸೆಗುಂ ೧೩

ವ॥ ಆ ನಾಡನಾಳ್ವಂ –

ಮ॥ ಯದುವಂಶಂ ಶ್ರಿತರಾಜಹಂಸಮೆಸೆದಿರ್ಕುಂ ವ್ಯೋಮದಂತಲ್ಲಿಯ
ಭ್ಯುದಯಂಬೆತ್ತನುದಾತ್ತವೃತ್ತನುರುತೇಜಂ ಕೀರ್ತಿಭಾಜಂ ಸಮು
ದ್ಭದಿಳೇಜ್ಯಂ ಸುಮನಃಪ್ರಪೂಜ್ಯನಮಳಸ್ವಾಂತಂ ಜಿತಧ್ವಾಂತನೊ
ಪ್ಪಿದನಾದಂ ಕಮಳಾಧಿಪ ಪ್ರಭುತೆಯಿಂ ಶ್ರೀರೆಬ್ಬನುರ್ವೀಶ್ವರಂ ೧೪

ಶಾ॥ ಆ ರೆಬ್ಬಪ್ರಭುವಿಂಗಮಗ್ರವಧು ಹೋಲಾದೇವಿಗಂ ಸ್ವಾನ್ವಯೋ
ದ್ಧಾರಂ ಧೀರನುದಾರನುದ್ಧಗುಣಸಾರಂ ಶುಂಭದಂಭೋದಿಗಂ
ಭೀರಂ ವಾಗ್ವನಿತಾಸ್ತನಸ್ಥಗಿತಹಾರಂ ಸೌಖ್ಯಸಂಪಾದಕಾ
ಚಾರಂ ಬ್ರಹ್ಮನಪೋಲತರ್ಕ್ಯಮಹಿಮಂ ಬ್ರಹ್ಮಾಹ್ವಯಂ ಪುಟ್ಟಿದಂ ೧೫

ಕಂ॥ ಜಳನಿಧಿಗಭೀರಭೃತ ಭೂ
ವಳಯಬ್ರಹ್ಮಂಗಮುಚಿತವೇಳೋಪಮ ಚಂ
ದಲದೇವಿಗಮೊಗೆದಂ ಮಂ
ಡಳನಾಥಂ ರಾಜನಂದದಿಂ ರಾಜರಸಂ ೧೬

ಚಂ॥ ಪುದಿದಿರೆ ರಾಗದಿಂ ಸಕಳ ಮಂಡಳಮಪ್ರತಿಮಪ್ರಸಾದ ಸಂ
ಪದಮಖಿಳಾಶೆಯಂ ನಜೆಯೆ ಪೂರಿಸಿ ಜೈನಮತಾಮೃತಾರ್ಣಮಂ
ಪದೆದಭಿವೃದ್ಧಿಯಂ ತಳೆಯೆ ತನ್ನ ಪೆಸರ್ಗನುರೂಪಮಾಗೆಯ
ಭ್ಯುದಯಮನೆಯ್ದಿದಂ ವಿಮಳವೃತ್ತವಿರಾಜಿತರಾಜಭೂಭುಜಂ ೧೭

ಕ್ಷಿತಿಪತಿರಾಜರಾಜನ ಮನೋರಮೆ ಮೈಳಲದೇವಿತಾಂ ಯಶ
ಶ್ವತಿ ನುತಿಯೋಗ್ಯ ಭಾಗ್ಯವತಿ ದಾನದಯಾವತಿ ಸತ್ಕಳಾಸರ
ಸ್ವತಿಯಭಿರೂಪರೂಪ ಮಳಯಾವತಿ ಜೈನಪದಾಂಬುಜಾರ್ಚನಾ
ವತಿ ಪುರುಪುಣ್ಯೆ ಪುತ್ರವತಿ ರಂಜಿಸುವಳ್ಳುವಿಶಾಳ ಶೀಳದಿಂ ೧೮

ಮ॥ ಕುಳವಿಸ್ತಾರಕ ರಾಜರಾಜ ವಿಭುಗಂ ಶ್ರೀ ರೋಹಿಣೀಮೂರ್ತಿಮೈ
ಳಲಮಾದೇವಿಗಮಾತ್ಮಜರ್ಪ್ರತಿಹಿತ ಶ್ರೀಚಂದ್ರಿಕಾದೇವಿನಿ
ರ್ಮಳರುಕ್ಚಂದ್ರಿಕೆಯಂತೆ ಸಿಂಹಮಹಿಪಂ ಸೌಮ್ಯಂಯೊಳಾದರ್ಮಹಿ
ತಳಪೂಜ್ಯರ್ವಿಭುಧೇಜ್ಯರುಜ್ವಳಗುಣ ಶ್ರೀಕಾಂತರಾತ್ಯಂತಿಕಂ ೧೯

ಚಂ॥ ಅನುಪಮ ಶೌರ್ಯಶಾಳಿ ಯದುವಂಶಶಿರೋಮಣಿ ರಾಜರಾಜನಂ
ದನೆ ವಿಬುಧಾಭಿನಂದನೆ ಘಟೋದರ ಸುಸ್ಥಿತ ಸರ್ವದರ್ಪ ಘಂ
ಜನೆ ಪತಿಚಿತ್ತರಂಜನೆ ಜಗಸ್ತುತ ಜೈನಮತಾಮೃತಾಬ್ಧಿ ವ
ರ್ಧನಕರಚಾರುಚಂದ್ರಿಕೆ ಮಹಾಸತಿಚಂದ್ರಿಕೆ ಧನ್ಯೆ ಧಾತ್ರಿಯೊಳ್ ೨೦

ಉ॥ ಶ್ರೀಪತಿ ಲಕ್ಷ್ಮೀದೇವಮಹಿವಲ್ಲಭವಲ್ಲಭೆ ಕಾರ್ತವೀರ್ಯಧಾ
ಶ್ರೀಪತಿ ಮಲ್ಲಿಕಾರ್ಜುನ ಮಹೀಶರ ಮಾತೃ ಮಹಾಸತೀತ್ವಸೀ
ತೋಪಮೆ ಜೈನಪೂಜನಸುರೇಂದ್ರ ವಧೂಪಮೆ ರೂಪಕಂತುಕಾಂ
ತೋಪಮೆ ರಂಜಿಪಳ್ನೆಗಟ್ಟಿ ಚಂದಲದೇವಿ ಸಮಸ್ತಧಾತ್ರಿಯೊಳ್ ೨೧

ಮ॥ ಸ್ಫುರಿತಾನರ್ಘ್ಯಮಣಿ ಪ್ರಣೂತ ಕಟಿತ ಪ್ರಖ್ಯಾತದಾನೇಂದ್ರ ಭೂ
ಮಿರುಹೋರ್ವೀತಳಧಾಂ ತುಂಗಶಿಖರ ಶ್ರೀಮದ್ಭುಜಾದಂಡಮಂ
ದರದಿಂ ವೈರಿಬಳಾಬ್ಧಿಯಂ ಮಥಿಯಿಸುತ್ತುದ್ಯಜ್ಜಯಶ್ರೀವಧೂ
ವರನಾದಂ ಯದುವಂಶಭಾಳತಿಳಕಂ ಸಿಂಹಾವನೀಪಾಳಕಂ ೨೨

ಸಬಳಂಗೊಂಡು ಸಮಗ್ರ ಸಿಂಹಮಹಿಪಂ ಮೇಲ್ವಾಯಿಸಲ್ವಾಜಿಯಂ
ಸಬಳಂ ವೈರಿಬಲಂ ಜವಂಗೆ ಕಬಳಂ ಬೇತಾಳ ಜಾಳಕ್ಕೆ ಕೊ
ಟ್ಟ ಪಿರಿ ಶ್ರೋಣಿಬಳಾರಿಗಿತ್ತ ಬಡಿನಂ ಹಾರ್ದಿರ್ದ ಹರ್ದಂಗೆ ಬೇ
ರ್ದುವೃತಕ್ಕೆತ್ತಿದ ಬುತ್ತಿಯೆಂದೊಡಹಿತರ್ಮ್ಮೆಯೊದೋಜೆ ಮಾಜಾಂಪರೇ ೨೩

ಚಂ॥ ಜನಪತಿಸಿಂಗಿದೇವನ ಮನಃಪ್ರಿಯೆ ಭಾಗಲದೇವಿ ಭಾಗ್ಯಮೇ
ದಿನಿ ಗುಣಯೂಥನಾಥ ಮುನಿದಾನವಿನೋದಿನಿ ಸಂಶ್ರಿತಾರ್ತ್ತಿಭೇ
ದಿನ ವಿಬುಧಪ್ರಮೋದಿನಿ ಕಳಾಗಮವೇದಿನಿ ನಿತ್ಯಸತ್ಯವಾ
ದಿನಿ ದುರಿತಾಪನೋದಿನಿ ಪತಿವ್ರತೆ ಪೂಜಿತರೂಪೆ ರಂಜಿಪಳ್ ೨೪

ಉ ॥ ಭೋಗ ಪುರಂದರಪ್ರತಿಮ ಸಿಂಹಮಹೀಪತಿಗಂ ಜಿನಾರ್ಚನೋ
ದ್ಯೋಗಸಚೀಚರಿತ್ರವತಿ ಭಾಗಲದೇವಿಗಮಾದನಾತ್ಮಜಂ
ರಾಗಸಮಾಗಮಪ್ರದಸುಮೂರ್ತಿ ಜಯಂತನತಿಪ್ರಸಿದ್ಧ ಜೈ
ನಾಗಮವಾರ್ಧಿವರ್ಧನ ಕಳಾನಿಧಿ ರಾಜರಸಂ ಸಮಂಜಸಂ ೨೫

ಮ ॥ ಜಿನಪೂಜಾವಿಬುಧಾಧಿಪಂ ವಿಪುಳತೇಜಂ ಪ್ರಾಪ್ತಧರ್ಮಪ್ರಭಾ
ವನಯಂ ಪುಣ್ಯಜನೋತ್ತಮಂ ಗುಣಗಣಾಂಭೋರಾಸಿ ವೈರಿಪ್ರಭಂ
ಜನನುರ್ವೀಧನದಂ ಮಹೀಶ್ವರನೆನಿಪ್ಪೀ ಪೆಂಪಿನಿಂ ಲೋಕಪಾ
ಳನಿವಂ ರಾಜರಸಂ ಜಗದ್ವಳಯಮಂ ಪಾಳಿಪ್ಪುದೇನೋಪ್ಪದೇ ೨೬

ಚಂ ॥ ಕ್ಷಿತಿ ಸಲೆ ಕೂರ್ತು ಕೀರ್ತಿಪುದು ಮೂರ್ತಿ ಮನೋಭವರಾಜನಂ ಸಮ
ರ್ಚಿತಜಿನರಾಜನಂ ಯದುಕುಳಾಮೃತವಾರಿಧಿ ರಾಜನಂ ಸಮು
ನ್ನತಿ ಗಿರಿರಾಜನಂ ಗುಣವಿರಾಜಿತರಾಜಿತನೂಜ ಸಿಂಹಭೂ
ಪತಿ ಸುತರಾಜನಂ ವಿಷಮವಾಜಿ ಸುಶಿಕ್ಷಣ ವತ್ಸರಾಜನಂ ೨೭

ಉ ॥ ಪಿಂಗದವಾರ್ಯಕಾರ್ಯಮಸುಹೃನ್ಸುರಲೋಕಜಗದ್ದಳಂಗೆರಾ
ಜಂಗೆ ಜಗತ್ತ್ರವೇದ ಜನಕಾಭ್ಯುದಯಂ ಯದುವಂಶ ಸಂಭವೋ
ತ್ತುಂಗ ಗುಣಾಚ್ಯುತಂಗೆ ವಿಜಯಪ್ರಿಯವೃತ್ತಿ ನೃಪಾಳಸಿಂಹಜಾ
ತಂಗೆ ಪರಾಕ್ರಮಂ ಪೊಸತೆ ಬಣ್ಣಿಸುವಂದು ಸಮಸ್ತ ಧಾತ್ರಿಯೊಳ್ ೨೮

ಉ ॥ ದ್ಯೂತಮೃಗಪ್ಪಿ ಮಾಂಸಗಣಿಕಾ ಪರದಾರ ಖಳಪ್ರಸಂಗಜೌ
ರ್ಯಾತುಳ ಮಲ್ಲಮೇಷಖಗಯುದ್ಧನಿಷಿದ್ಧ ವಿನೋದನೋದ್ಧತ
ಭೂತಳನಾಥರಪ್ಪರದು ಮಾಣ್ದು ಜಿನಸ್ತವನಾರ್ಚನಾಮಹೀ
ಖ್ಯಾತಮುನೀಂದ್ರದಾನರತರಪ್ಪರೆ ರಾಜನೃಪಾಳ ನಿನ್ನವೋಲ್ ೨೯

ಕಂ ॥ ಸತಿ ಚಂದಲದೇವಿ ಪತಿ
ವ್ರತೆ ಲಕ್ಷ್ಮೀದೇವಿಯೆಂಬರೀರ್ವರುಮವನೀ
ಪತಿರಾಜನ ನೃಪನ ರಾಣಿಯ
ರತಿಶಯ ಗುಣಯುತೆಯರೆನಿಸಿನೆಗಟ್ದರ್ಜಗದೊಳ್ ೩೦

ವ॥ ಸ್ವಸ್ತಿ ಸಮಸ್ತ ಪ್ರಶಸ್ತಿಸಹಿತ ಶ್ರೀಮನ್ಮಹಾಮಂಡಳೇಶ್ವರಂ ಕುಪಣಪುರ ವರಾಧೀಶ್ವರಂ ಯದುಕುಳಾಂಬರದ್ಯುಮಣಿ ಬುಧಜನಚಿಂತಾಮಣಿ ನಿಜಭುಜಾಸಿನಿರ್ದಳಿತ ರಿಪುನೃಪಕಂಟಕವಳಂ ನರಲೋಕ ಜಗದ್ದಳಂ ಅನವರತ ಜಿನಸವನಸುರಭಿ ಸಲಿಲಪವಿತ್ರೀ ಕೃತೋತ್ತಮಾಂಗಂ ಧರ್ಮಕಥಾಪ್ರಸಂಗಂ ಜಿನಸಮಯ ಸುಧಾರ್ಣವ ಸುಧಾಕರಂ ಸಮ್ಯಕ್ತ್ವರತ್ನಾಕರನೆನಿಸಿ ನೆಗಟ್ದ-

ಉ ॥ ಕ್ಷತ್ರಿಯಮಸ್ತಕಾಭರಣ ರಾಜನೃಪಂ ವಿಭುಸಿಂಹಸೂನು ರ ।
ತ್ನತ್ರಯ ಮೂರ್ತಿ ನಿರ್ಮಳಿನ ಧರ್ಮಮನುತ್ತಮನೊಲ್ದು ಪೇಟ್ವವೋ॥
ಲ್ಧಾತ್ರಿಗೆ ಮಿಕ್ಕ ಕಲ್ಲೊಳೆಯೊಳೆತ್ತಿಸಿದಂ ಜಿನಶಾಂತಿಗೇಹಮಂ ।
ನೇತ್ರವಿಚಿತ್ರಮಂ ಮಹಿಕಿರೀಟಮನಪ್ರತಿಮತ್ರಿಕೂಟಮಂ ॥೩೧॥

ವ ॥ ಅಂತಸಂತಸುಖಶ್ರೀಕಾಂತಂ ಶಾಂತಿನಾಥ ಸಮುತ್ತುಂಗ ಚೈತ್ಯನಿಧಾನಮಂ ಕನಕಕಳಶಮಕರತೋರಣಮಾನಸ್ತಂಭವಿರಾಜಮಾನಮಂ ರಾಜರಸಂ ಸಿಂದನ ಕಲ್ಲೊಳೆಯಲ್ಲಿ ಮಾಡಿಸಿ ತನ್ನ ಗುರುಗಳುಂ ಜಗದ್ಗುರುಗಳುಮೆನಿಸಿದ ಶುಭಚಂದ್ರ ಭಟ್ಟಾರಕ ದೇವರ್ಗೆ ಕೊಟ್ಟನವರ ಗುರುಕುಳಕ್ರಮಮೆಂತೆನೆ –

ಕಂ ॥ ಜಯನಿಳಯ ಕುಂದಕುಂದಾ
ನ್ವಯ ವಿಶ್ರುತಮೂಲಸಂಘದೇಶಿಕ ಪೂರ್ಣೋ
ದಯ ಪುಸ್ತಕಗಚ್ಛದೊಳತಿ
ಶಯಮೆನೆ ಹನಸೋಗೆಯೆಂಬ ಬಳಿ ಬಗೆಗೊಳಿಕುಂ ೩೨

ಗುರುಕುಳತಿಳಕರ್ಪಾವನ
ಚರಿತಗುರ್ಣಭರಿತರಲ್ಲಿ ನೆಗಟ್ದರ್ವಿಜಿತ
ಸ್ಮರಮಲಧಾರಿಮುನೀಂದ್ರ
ರ್ಚರಣಾಂಬುಜನತನರೇಂದ್ರರಪಗತತಂದ್ರರ್ ೩೩

ಚ॥ ಮದನವಿಸಂಕುಳಂ ವಿಷಮಬಾಣ ವಿಷಾಹಿಮಹಾವಿಷಾಪಹಾ
ರದ ಮಣಿ ನಾಮದಕ್ಕರಮ ಮೋಹಪಟುಗ್ರಪಭೇದಿ ಮಂತ್ರಮಂ
ಗದಮುಳಮಾಜವಂ ಜವರುಜಾಪಹರಣೌಷಧಮೆಂದೊಡೇನನೆಂ
ಬುದೊ ಮಲಧಾರಿದೇವಮುನಿಪೋತ್ತಮ ಭಾವತಮುತ್ಪ್ರಭಾವಮಂ ೩೪

ಉ ॥ ಶಾಂತರಸಾವತಾರ ಮಲಧಾರಿ ಮುನೀಶ್ವರರಗ್ರಶಿಷ್ಯ ಸ್ಯೆ

ದ್ಧಾಂತಿಕ ನೇಮಿಚಂದ್ರನುರುಧರ್ಮರಥ ಶ್ರುತವಾರ್ಧಿ ನೇಮಿಚಂ
ದ್ರಂ ತಮಮಂ ನಿವಾರಿಪ ಕಳಾಗುಣಭದ್ರನಮಾನುಷಾಮೃತ
ಸ್ವಾಂತ ಸಮಂತಭದ್ರನೆನೆ ಬಣ್ಣಿಪರಾರಕಳಂಕವತ್ಸನಂ ೩೫

ಶಾ ॥ ಆ ಸೈದ್ಧಾಂತಿಕ ನೇಮಿಚಂದ್ರಯತಿವರ್ಯಾಚಾರ್ಯ ಶಿಷ್ಯರ್ಗುಣಾ
ವಾಸ ಶ್ರೀಶುಭಚಂದ್ರಭಾಸುರಯಶೋಭಟ್ಟಾರಕರ್ವಿಶ್ವಧಾ
ತ್ರೀ ಸಂಪೂಜಿತ ಶೀಳಧಾರಕರುದಗ್ರಾನಂಗ ಸಂಹಾರಕ
ಶ್ರೀಸದ್ದರ್ಶನ ಬೋಧವೃತ್ತ ಪದವೀ ವಿಸ್ತಾರನಿಸ್ತಾರಕರ್ ೩೬

ಮ ॥ ಶುಭಚಂದ್ರಂ ಸ್ವಗುಣೋಲ್ಲಸತ್ಕುವಳಯಂ ಶ್ರೀಚಂದ್ರಿಕಾ ಶುದ್ಧವೃ
ತ್ತಿಭವ ಪ್ರಾಭವದಿಂ ದಿಗಂಬರಕುಳ ಶ್ರೀವೃದ್ಧಿಯಂ ಮಂಡಳ
ಪ್ರಭು ಸಂಪೂಜಿತ ಪಾದನುಜ್ವಳ ಗುಣಾಢ್ಯಂ ಶಾಂತರೂಪಂ ಕಳಾ
ವಿಭವಾತ್ಯುನ್ನತವೃತ್ತನಭ್ಯುದಯಯುಕ್ತಂ ಮಾಟ್ಪುದೇನೋಪ್ಪದೇ ೩೭

ಉ ॥ ಮಾರಮದಾಪಹಾರಿ ಪರಮೋಗ್ರತಪಶ್ಶುಭಚಂದ್ರದೇವಭ
ಟ್ಟಾರಕಶಿಷ್ಯರೀ ಲಲಿತಕೀರ್ತಿ ಸಮುನ್ನತ ನಾಮಧೇಯಭ
ಟ್ಟಾರಕರಿಂದು ಸಲ್ಲಲಿತಕೀರ್ತಿಗಳನ್ವಿತಶಾಂತಮೂರ್ತಿಗಳ್
ಸಾರಚತುಷ್ಟಯಾರ್ಥಚಯವೇದಿಗಳುತ್ತಮ ಸತ್ಯವಾದಿಗಳ್ ೩೮

ವ ॥ ಸ್ವಸ್ತಿ ಸಮಸ್ತಗುಣಸಂಪನ್ನರುಂ ಭವ್ಯಪ್ರಸನ್ನರುಂ ಚಂದಲದೇವೀವಂದಿತ ಪದಾರವಿಂದರುಂ ನಿಜಾತ್ಮಭಾವನಾಗೀಜ್ಪಿಂಡರುಂ, ಶ್ರೀರಾಜನೃಪಾಳ ಸುಪ್ರತಿಷಿತ ಶಾಂತಿನಾಥದೇವರ ಬಸದಿಯಾಚಾರ್ಯರುಂ ಮಂಡಳಾಚಾರ್ಯರುಮಪ್ಪ ಶುಭಚಂದ್ರ ಭಟ್ಟಾರಕದೇವರ್ಗೆ ಶ್ರೀಕಾರ್ತವೀರ್ಯದೇವಂ ಆ ಶಾಂತಿನಾಥದೇವರಂಗಭೋಗಕ್ಕಂ ರಂಗಭೋಗಕ್ಕವಾ ಬಸದಿಯ ಖಂಡಸ್ಫುಟಿತ ಜೀರ್ಣೋದ್ಧರಣಕ್ಕಮಲ್ಲಿರ್ಪ ಮುನಿಜನಂಗಳಾಹಾರಾಭಯಭೈಷಜ್ಯಶಾಸ್ತ್ರದಾನಕಂ ಶಕವರ್ಷಂ ೧೧೨೭ನೆಯ ರಕ್ತಾಕ್ಷಿ ಸಂವತ್ಸರದ ಪೌಷ್ಯ ಶುದ್ಧ ಬಿದಿಗೆ ಶನಿವಾರದಂದುತ್ತರಾಯಣ ಸಂಕ್ರಮಣದಲ್ಲಿ ಕೂಂಡಿ ಮೂಱುಸಾಸಿರದ ಬಟೆಯ ಕುಱುಂಬೆಟ್ಟ ಗಂಪಣದೊಳಗಣಸಿಂದನ ಕಲ್ಪೊಳೆಯಲ್ಲಿಯ ಕಳಗಡಿಯರ ಸಿಂದಗಾಂವುಂಡಂ ಮುಖ್ಯವಾಗಿ ಹನ್ನೀರ್ಬರ್ಗಾವುಂಡುಗಳಱಿಯೆ ಹನ್ನೆರಡು ತಪ್ಪಡಿಯ ಕುಱುಂಬೆಟ್ಟ ಗೋಲಿಂದೆರಡು ಸಹಸ್ರ ಕಂಬಕೆಯ್ಯಂ ಧಾರಾ ಪೂರ್ವಕಂ ಸರ್ವನಮಸ್ಯವಾಗಿ ಕೊಟ್ಟನಾಕೆಯ್ಯ ಸೀಮೆ [।] ಊರಿಂ ಬಡಗಲ್ ಕಂಕಣನೂರ ಹೆದ್ದಾರಿಯಿಂ ಮೂಡಲವಿಲ್ಮಹಳ್ಳದ ಮುರುವಿನಲ್ಲಿ ನೈರುತ್ಯದ ಕೋಣೋಳ್ನಟ್ಟ ಕಲ್ಲಲ್ಲಿಂ ಬಡಗಮುಖಂ ಬಿಳಿಯ ಬಾವಿಯಿಂ ಮೂಡಲಾಗಿ ಪಡುವಣ ಸೀಮೆನಡಿಯಲ್ಕೆಂಮೊರಡಿಯಲ್ಲಿ ವಾಯವ್ಯದ ಕೋಣೋಳ್ನಟ್ಟ ಕಲ್ಲಲ್ಲಿಂ ತೆಂಕಮುಖಂ ಪಂಚವಸದಿಯ ಮಾನ್ಯದಿಂ ಪಡುವಲಾಗಿ ಮೂಡಣ ಸೀಮೆನಡಿಯಲ್ ನವಿಲ ಹಳ್ಳದಲ್ಲಿ ಆಗ್ನೇಯ ಕೋಣೋಳ್ನಟ್ಟ ಕಲ್ಲಲ್ಲಿಂ ಪಡುಮುಖಂ ತೆಂಕಣಸೀಮೆ ನವಿಲ ಹಳ್ಳಂ [॥] ಆ ಬಸದಿಯ ಸಂಬಂಧದ ಮನೆಯ ನಿವೇಶನವಿಂಮೋಲನುಂ ಗೇಣು [।] ಬಾಚೆಯ ಎಡಿಯ ರಾಜಹಸ್ತದಲ್ ಬಸದಿಯಿಂ ಬಡಗಲ್ ರಾಜವೀಥಿಯಿಂ ಮೂಡಲ್ ಪಡುವಣೆಕ್ಕೆಯ ಹಸ್ತಂ ನಾಲ್ವತ್ತು ಸಿರಿವಾಗಿಲ ಕಲ್ಲಿಂ ಮೂಡಲ್ ಪಂಚವಸದಿಯ ಕೇರಿಯಲ್ಲಿಗೆ

ಬಡಗಣಕ್ಕೆಯ ಹಸ್ತವಿಪ್ಪತ್ತಾಱು ಆ ಕೇರಿಯಂ ಪಡುವಣಭಾಗಂ ಬಿಡಿದು ಮೂಡಣಕ್ಕೆಯ ಹಸ್ತ ನಾಲ್ವತ್ತು ತೆಂಕಣೆಕ್ಕೆಯ ಹಸ್ತ ಐವತ್ತೆರಡಾ ಮಾನ್ಯದೊಳಗಣಂಗಡಿ ನಾಲ್ಕು ಗಾಣವೊಂದಾ ಬಸದಿಯ ಬಣಬೆಯ ನಿವೇಶನವಯ್ದು [।] ಊರಿಂ ಪಡುವಲ್ ಹೂದೋಂಟದ ಕಂಬಂ ಮೂವತ್ತು [॥] ಮತ್ತಮಾ ವೂರ ಸಂತೆಯಂ ಮಾಡಲ್ ವೇಡಿ ಜೆಳಗಲ ಮುಖ್ಯವಾಗಿ ನಾಲ್ಕುಂ ಪಟ್ಟಣದ ಸೆಟ್ಟಿಯರುಂ ಮಹಾನಡಾಗಿ ನೆರೆದಿರ್ದಲ್ಲಿ ಆ ಶಾಂತಿನಾಥದೇವರ ನಿತ್ಯಾಭಿಷೇಕಕ್ಕಮಷ್ಟ ವಿದಾರ್ಚನೆಗಂ ಸರ್ವಬಾಧಾಪರಿಹಾರವಾಗಿ ಬಿಟ್ಟ ಎತ್ತು ಕತ್ತೆ ಕೋಣಂ ಮೊದಲಾದಱುವತ್ತು ೬೦ ॥ ಮತ್ತಮೇಱುವರೆ ಹಂನೊಂದುವರೆಯ ಸಮಸ್ತ ಮುಂಮುರಿದಂಡಂ ಮುಖ್ಯವಾಗಿ ನಾಡುಗಳ್ ಬಿಟ್ಟಾಯದ ಕ್ರಮಮೆಂತೆಂದೊಡೆ [।] ಸಕಳ ಧಾನ್ಯಮಾವುದು ಬಂದಡಂ ಹೇಱಿಂ ಗೊಂಮನಂ [।] ಭಂಡಿಗೆ ಬಳ್ಳವೆರಡು [।] ಹಸರಕ್ಕಡಕೆ ಅಯ್ದು [।] ಹೇಱಿಂಗೆಲೆ ನೂಱು [।] ಹೊತ್ತಳ ಕಯ್ವತ್ತು [।] ಹಾಡರ್ಕೆಸೊಲ್ಲಿಗೆ ಎಂಣೆ [।] ಒಲೆಯ ಹೊಣೆ ಮಾಱಿತಕ್ಕೆ ಒಂದು ಕಟ್ಟೊಲೆ [।] ಕಿರುಕುಳವೇನು ಮಾಱಿದಡಂ ಸುಟ್ಟುಗಾಯಂ ಹಿಡಿವತ್ತಿ [।] ಕಂಪೆಗೆ ಮಡಿಕೆ ಒಂದು ॥

ಶಾ ॥ ಶ್ರೀಜನ್ಮಾಯತ ಮೂರ್ತಿ ತೀರ್ಥಮಹಿಮಾವಿಸ್ತಾರಿ ಧಾತ್ರಿಸ್ಫುರ
ತ್ತೇಜಶ್ಚಕ್ರಧರಂ ಜಗಂನುತಯಶಂ ತಂನಂದದಿಂದೆಂದುರಾ
ರಾಜಿಷ್ಣು ಜಿನಶಾಂತಿನಾಥನವನೀನಾಥ ಪ್ರಣೂತೋದಯಂ
ರಾಜಕ್ಷ್ಮಾಪತಿಗೀಗೆ ಬೇಳ್ಪ ವರವಂ ಚಂದ್ರಾರ್ಕತಾರಂಬರಂ ೩೯

ಕಂ ॥ ಲಲಿತ ಪದಾರ್ಥಾಳಂಕೃತಿ
ಗಳಿನೊಸರ್ವ ರಸಂಗಳಿಂದೆ ಬುಧರೊಳ್ಪುಳಕಾ
ವಳಿ ಸಸ್ಯಮೊಗೆಯೆ ಕವಿಕುಳ ೪೦
ತಿಳಕಂ ಶಾಸನಮನೊಲ್ದು ಪೇೞ್ದಂ ಪಾರ್ಶ್ವಂ

ಬಹುಭಿರ್ವಸುಧಾದತ್ತಾ ರಾಜಭಿಸ್ಸಗರಾದಿಭಿ: [।] ಯಸ್ಯಯಸ್ಯ ಯದಾ ಭೂಮಿಃ ತಸ್ಯ ತಸ್ಯ ತದಾಫಲಂ ॥ ಗಣ್ಯಂತೇ ಪಾಂಸವೋ ಭೂಮೇರ್ಗಣ್ಯಂತೇ ವೃಷ್ಟಿ ಬಿಂದವಃ [।] ನಗಣ್ಯತೇ ವಿಧಾತ್ರಾಪಿ ಧರ್ಮಸಂರಕ್ಷಣೇ ಫಲಂ ॥ ಸ್ವದತ್ತಾಂ ಪರದತ್ತಾಂವಾ ಯೊ ಹರೇತವಸುಂಧರಾಂ [।] ಷಷ್ಟಿರ್ವರ್ಷ ಸಹಸ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿ: [॥] ಸಾಮಾನ್ಯೋಯಂ ಧರ್ಮಸೇತುರ್ನೃಪಾಣಾಂ ಕಾಲೇಕಾಲೇ ಪಾಲನೀಯೋ ಭವದ್ಭಿಃ[।] ಸರ್ವಾನೇತಾನ್ಭಾವಿನಃ ಪಾರ್ಥಿವೇಂದ್ರಾ ನ್ಭೂಯೋ ಭೂಯೋ ಯಾಚತೇ ರಾಮಚಂದ್ರಃ॥ ಮದ್ವಂಶಜಾಃ ಪರಮಹೀಪತಿವಂಶಜಾ ವಾ ಪಾಪದಪ್ರೇತಮನಸಾ ಭುವಿ ಭೂಮಿಪಾಲಾ ಯೇ ಪಾಳಯನ್ತಿಮಮ ಧರ್ಮಮಿಮಂ ಸಮಗ್ರಂ ತೇಭ್ಯೋ ಮಯಾ ವಿರಚಿತಾಂ (ತೋಂ) ಜಳಿರೇಷಮೂರ್ಧ್ನಿ ॥ ಮಂಗಳ ಮಹಾ ಶ್ರೀ ಶ್ರೀ [॥] ಅರ್ಹತೇ ನಮಃ ॥

ಅರ್ಥಕೋಶ

ಪಾರ್ಶ್ವನಾಥ ಪುರಾಣಂ

(ಸಂಖ್ಯೆಗಳು ಆಶ್ವಾಸ ಮತ್ತು ಪದ್ಯವನ್ನು ಸೂಚಿಸುತ್ತವೆ)

ಅಂಕ ೯-೧೩ ಶೂರ
ಅಂಗಚಿತ್ತ ೭-೭೮ ಉಡುಗೊರೆ
ಅಂತಿಕ ೯-೬೨ ಸಮೀಪ, ಹತ್ತಿರ
ಅಂಶು ೧೬-೨೭ ಕಾಂತಿ
ಅಂಶುಕ ೭-೩೦ ಸೀರೆ
ಅಗ್ಗ ೨-೫೧ ಶ್ರೇಷ್ಠ
ಅಡಕಿಲು ೫-೬೮ ಒಂದರ ಮೇಲೆ ಒಂದು ಇಡುವುದು
ಅಣಿ ೩-೧೩೭ ಸೈನ್ಯ
ಅತ್ತಳಗ ೪-೬೪ ಅಸಾಧ್ಯ
ಅದವಳಲು ೩-೮೬ ದುಃಖ
ಅಧಿಷ್ಠಾನ ೫-೬೮ ತಳಹದಿ
ಅಧ್ವ ೩-೪೫ ದಾರಿ
ಅನುವರ ೧೦-೧೧೪ ಯುದ್ಧ
ಅಪವರ್ಗ ೧೪-೧೪೬ ಮೋಕ್ಷ
ಅಭಿಜಾತ ೯-೬೮ವ ಹೊಸ, ನವ
ಅಭಿಲಕ್ಷಿತ ೧೬-೫೮ ಬಯಸಿದ
ಅಮ್ಮ ೪-೧೫೪ ತಂದೆ
ಅಯಃಪುತ್ರಿಕೆ ೬-೮೯ ಕಬ್ಬಿಣದ ಗೊಂಬೆ
ಅಱುನೀರ್ ೬-೪೯ ಬತ್ತಿದ ನೀರು
ಅಲರ್ವಾಸು ೯-೩೧ ಹೂವಿನ ಹಾಸಿಗೆ
ಅವಕರ್ಣಂಗೆಯ್ ೪-೧೫೪ ಕಿವಿಯ ಮೇಲೆ ಹಾಕಿಕೊಳ್ಳದಿರುವುದು
ಅವಚಱು ೪-೭೧ ಅಸಹ್ಯಪಡು
ಅವುಡಲ ೩-೧೩೧ ಹರಳುಗಿಡ
ಆಟಿಸು ೩-೧೦೧ ಆಸೆಪಡು
ಆತಪ ೩-೩೨ವ ಸೂರ್ಯ
ಆದಂ ೬-೧೨ ವಿಶೇಷ
ಆದವೆ ೩-೧೦೪ ವಿಶೇಷವಾಗಿ
ಆಮೋದ ೮-೧೦೩ ಸುವಾಸನೆ
ಆಯುತ್ತರು ೨-೪೫ ಸ್ನೇಹಿತರು
ಆಸು ೧೨-೫೮ ಆಚದ ಮರ
ಆಸುರ ೩-೧೨೨ ಭಯಂಕರ
ಆಸೆ ೧೧-೯೩ ದಿಕ್ಕು
ಇಡುವು ೪-೧೨೪ ಸಂದಿ
ಈಶಿತೆ ೫-೧೧೧ ಸಾಮರ್ಥ್ಯ
ಉಂಡಿಗೆ ೮-೩೪ವ ಮುದ್ರೆ
ಉಕ್ಕೆವ ೨-೩೮ ಮೋಸ
ಉಗೆಮಿಗು ೯-೬೮ ವಿಶೇಷವಾಗಿ
ಉಜ್ಜುಗ ೨-೪೫ ಉದ್ಯೋಗ
ಉಡು ೮-೮ ನಕ್ಷತ್ರ
ಉತ್ತರಿಸು ೬-೫೫ ದಾಟು
ಉತ್ಸವ ೩-೩೩ ಉತ್ಸಾಹ
ಉದಯರಾಗ ೩-೩೪ ಬೆಳಗಿನ ಕೆಂಪು
ಉದ್ದ ಮುರಿಸು ೩-೯ವ ಉದ್ದೀಪಿಸು
ಉದ್ಘ ೮-೧೦೩ ಸುಖ
ಉಪಶಮ ೫-೪೭ ಇಂದ್ರಿಯ ನಿಗ್ರಹ
ಉಮ್ಮಚ್ಚ ೧೦-೧೧೪ ಕೋಪ
ಉವಿ ೧೫-೧೭ ಹೊಟ್ಟು
ಋಜ್ವಾಗತ ೧೫-೯೬ ನೆಟ್ಟಗೆ ನಿಲ್ಲುವುದು
ಎಕ್ಕಲಾವಣಂ ೧೨-೮೦ ಅಸದೃಶ
ಎಡಪು ೨-೪೯ ತಪ್ಪು ಮಾಡು
ಎರೆ ೬-೧೦೮ವ ಆಹಾರ
ಎಱೆನೆಟ್ಟು ೫-೮೭ ಆಶ್ರಯ
ಏಡಿಸು ೧೫-೧೧೨ ಹಾಸ್ಯಮಾಡು
ಏಱು ೩-೧೦೦ ಗಾಯ
ಏವ ೧೦-೮ ಹೊಟ್ಟೆಕಿಚ್ಚು
ಏಟಿಗ ೭-೯೪ ಆಡು, ಟಗರು
ಏಟಿದ ೪-೬೩ ಅವಮಾನ, ತಿರಸ್ಕಾರ
ಐನ ೧೫-೭೧ ಪಾಪ
ಒಣರ್ ೨-೭೬ ಹೇಳು
ಓಜೆ ೩-೩೬ ಕ್ರಮ
ಕಂಠೀರವ ೫-೪೯ ಸಿಂಹ
ಕಂಡೂತಿ ೨-೨೧ ತುರಿಕೆ
ಕಂಬು ೭-೩೩ವ ಶಂಖ
ಕಂಭೆಯ ೧೪-೬೬ ಒಂದು ರೀತಿಯ ಬಟ್ಟೆ
ಕಟುತ್ರಯ ೨-೪೦ ಶುಂಠಿ, ಮೆಣಸು, ಹಿಪ್ಪಲಿಗಳ ಮಿಶ್ರಣ
ಕಟ್ಟಳೆ ೩-೧೩೪ ತೂಕದ ಬಟ್ಟು
ಕಡ ೯-೧೦ ಸಾಲ

ಕಡವ ೮-೧೭ ಒಂದು ಜಾತಿಯ ಮರ
ಕಣಿಯ ೬-೧೦ ಸೀರೆಯ ನಿರಿ
ಕಣಿಶ ೭-೨೧ ತೆನೆ
ಕತಕ ೫-೪೦ ನೀರು ಶುದ್ಧಿ ಮಾಡುವ ಬೀಜ
ಕಪೋಳ ಪತ್ರ ೨-೧೭ ಅಲಂಕಾರಕ್ಕಾಗಿ ಕೆನ್ನೆಯ ಮೇಲೆ ಬರೆಯುವ ರೇಖಾ ವಿನ್ಯಾಸ, ಮಕರಿಕಾಪತ್ರ
ಕರಡಿಗೆ ೫-೮೧ ಕರಂಡಿಕೆ, ಪೆಟ್ಟಿಗೆ
ಕರವಳಯ ೨-೫೨ವ ಬಳೆ
ಕರುಮಾಡ ೫-೬೮ ಮಹಡಿ ಮನೆ
ಕವಣೆ ೩-೧೪೦ ಕಲ್ಲಿನಿಂದ ಬೀಸಿ ಹೊಡೆಯಲು ಮಾಡಿದ ಸಾಧನ
ಕವಳ ೩-೧೦೦ ಎಲೆಯಡಿಕೆ
ಕಳವೆ ೭-೨೩ವ ಬತ್ತ
ಕಳ ೧೪-೩೧ ಕಲರವ
ಕಳಾವಿದುರ ೧೬-೮ ಕಲಾವಿದ
ಕಾಕಳಿ ೧೬-೪೪ ಕಲಕಲಧ್ವನಿ
ಕಾರ್ತಸ್ವರ ೮-೧೦೦ ಚಿನ್ನ
ಕಾಳು ೬-೯೧ ವ್ಯರ್ಥ
ಕಿನಿಸು ೧೦-೫೬ ಕೋಪಿಸು
ಕುಂಜರ ೪-೧೮೯ ಆನೆ
ಕುಂಥು ೬-೭೦ ಸಣ್ಣ ದೇಹವುಳ್ಳ ಪ್ರಾಣಿಗಳಲ್ಲಿ ಕೊನೆಯದು
ಕುಡ್ಯ ೧೬-೧೬೮ ಗೋಡೆ
ಕುಱುಂಬುಗೊಳಿಸು ೧೦-೮೯ ಚಿಕ್ಕದಾಗಿ ಅಡಗಿಸು
ಕುಱುವ ೮-೧೭ ನಡುಗಡ್ಡೆ
ಕುಲಿಂಗಿ ೧೫-೨೧ ಮತಭ್ರಷ್ಟ
ಕುಳಿಶ ೫-೪೨ ವಜ್ರ
ಕುಟುಂಪೆಯ ಜಲ ೧೦-೧೦೮ ಮೊಣಕಾಲಿನಷ್ಟು ನೀರು
ಕೊಂಟಿ ೧೦-೭೧ವ ಪರಿಹಾಸ್ಯ
ಕೆಯ್ಬುಡಿ ೯-೨೭ ಕೈಗನ್ನಡಿ
ಕೇಕರ ೭-೩೯ ಕಡೆಗಣ್ಣ ನೋಟ, ಕಾಂತಿ
ಕೇದಾರ ೬-೧೦೩ ಗದ್ದೆ, ಭೂಮಿ
ಕೊಂಡುಕೊನೆ ೯-೬೦ವ ಹೊಗಳು
ಕೋಡಗಗಟ್ಟು ೨-೧೮ ಬಿಗಿಯಾದ ಬಂಧನ
ಕ್ಷಾಯಿಕ ೫-೪೭ ಸಮ್ಯಕ್ತ್ವದ ಒಂದು ಭೇದ
ಖನಿತ್ರ ೫-೩೫ ಗುದ್ದಲಿ
ಖಟ್ಗಿ ೧೧-೮೯ ಖಡ್ಗಮೃಗ
ಖೇಟ ೨-೫೧ವ ಖೇಡ, ಹಳ್ಳಿ
ಖೇಡಕುಟಿ ೭-೮೯ ಉದ್ಯಾನದಲ್ಲಿ ಮಾಡಿಕೊಂಡಿರುವ ವಿಹಾರದ ಕೊಳ
ಗಂಪಲು ೫-೬೧ ಕೆಸರು
ಗದಿತ ೪-೯ ಹೇಳಿದ
ಗಿಡಿಗ ೩-೧೪೨ ಒಂದು ಆಯುಧ
ಗಿರಿವ ೩-೪೧ ನುಂಗುವ
ಗುಡಿ ೨-೭೫ ಬಾವುಟ
ಗುಣ್ಬು ೩-೧೪೧ವ ಆಳ
ಗುಮ್ಮ ೩-೧೪೧ ಒಂದು ಉಪಕರಣ
ಗೃಹಮಹತ್ತರ ೨-೯೮ವ ಅರಮನೆಯ ಆಡಳಿತದ ಮುಖ್ಯಾಧಿಕಾರಿ, ಮನೆವೆಗ್ಗಡೆ
ಗೆಂಟು ೭-೮ ದೂರ
ಗೆಡೆ ೧೨-೬೯ ಸಂಬಂಧ
ಗೋರಿ ೧೫-೪೪ ಬೇಡರ ಹಾಡಿನ ಇಂಪು
ಘಟ್ಟಿ ೭-೪೨ ಗಂಧ ತೇಯುವವನು
ಘರ್ಮಜಳ ೮-೧೦೩ ಬೆವರು
ಚಣ ೬-೯೧ ಚೀರ್ಣ, ಇಕ್ಕಳ
ಚತುರ್ಥಕಾಲ ೭-೧೧ ಸುಷಮಕಾಲ
ಚಳಕಿಗೆ ೯-೭೪ ಒಂದು ಆಭರಣ, ಜಡೆಬಿಲ್ಲೆ
ಚಾರಣ ೩-೩೬ ಹೊಗಳುವಿಕೆ
ಚೊಕ್ಕಳಂ ೪-೯೧ ಸದಾಚಾರ ಉಳ್ಳವನು
ಚೌತ ೯-೧೨ ಪೊಗದಿ, ಕಪ್ಪ
ಜಯನ ಶಾಲೆ ೭-೩೮ ಮನ್ಮಥನ ಆಯುಧಶಾಲೆ
ಜರಗು ೪-೯೪ ಅಕ್ಕಸಾಲಿಗರ ಅಗ್ಗಿಷ್ಟಿಕೆಯ ಬೂದಿ
ಜರಿಯಿಸು ೩-೧೪೧ ಬೀಳಿಸು
ಜವನಿಕೆ ೧೪-೧೨೩ ತೆರೆ
ಜಾಂಗಳ ವಿದ್ಯೆ ೮-೮೯ವ ವಿಷಪರೀಕ್ಷೆಯ ವಿದ್ಯೆ
ಜಾತರೂಪಧರ ೪-೧೪೮ ದಿಗಂಬರ
ಜಾಱು ೫-೧೦೨ ಸಂಶಯ
ಜೊತ್ತಿಸು ೩-೫೭ ಜೊತೆಗೂಡಿಸು
ಡಾಣೆ ೨-೬೩ ದೊಣ್ಣೆ
ಡಾಳ ೩-೧೧೨ ಧೂರ್ತ
ಡೆಂಕಣಿ ೩-೧೩೬ ಕೋಟೆಯ ಮೇಲಿನ ಬುರುಜು
ಡೊಕ್ಕರಿ ೧೬-೧೦ವ ಹಳ್ಳ, ದೊಗರು
ತಂಬುಲ ೩-೧೦೦ ವೀಳೆಯವನ್ನು ಜಗಿದ ಎಂಜಲು
ತಱಿಸಲ್ ೧೫-೭೧ ಸಿದ್ಧನಾಗು

ತವಂಗ ೭-೩೭ ಅಟ್ಟಣೆ
ತಟ್ಟೈಸು ೩-೭ ಅಪ್ಪು
ತಾತ ೧೪-೧೧೭ ತಂದೆ
ತಾಳಂಗುಟ್ಟು ೩-೧೯೯ವ ತಾಳಬಾರಿಸು
ತಿಳಕ ೯-೩೨ ಒಂದು ಜಾತಿಯ ಮರ
ತೀನ್ ೧೫-೧೦೦ ಕಡಿತ, ತೀಟೆ
ತುಡುಗುಣಿ ನಾಯ್ ೩-೬೦ ಕಳ್ಳನಾಯಿ
ತೊದಳು ೫-೭೭ ಸುಳ್ಳು
ತೋರ ೧೬-೫ ದಪ್ಪ
ತೋರಗುಂಡು ೩-೧೩೧ ದಪ್ಪಕಲ್ಲು
ದಂಭೋಳಿ ೮-೧೬ ಸಿಡಿಲು
ದಡ್ಡಿ ೮-೯೪ ತಡಿಕೆ
ದಬ್ಬುಕ ೧೫-೧೫೮ ಹಾರೆ
ದಶವಿಧದಶೆ ೪-೧೯೯ ಅನೆಗೆ ಪೋತ, ವಿಕ್ಕ, ಕಲಭ, ಜವನ, ರೂಪ, ಕಲ್ಯಾಣ, ಯೋದ, ಯೋದತರ, ಸ್ಥವಿರ, ವೃದ್ಧ ಎಂದು ಅವುಗಳ ವಯಸ್ಸಿಗೆ ಅನುಗುಣವಾಗಿ ಹತ್ತು ಅವಸ್ಥೆಗಳು.
ದಳಿಂಬ ೯-೩೧ ಒರಗುದಿಂಬು
ದೀಂಟೆ ೪-೨೦ ದಿಣ್ಣೆ
ದೂಳಿಗೋಂಟೆ ೩-೧೩೧ವ ಲಗ್ಗೆಹತ್ತಿ ಕೋಟೆಯನ್ನು ಪುಡಿ ಮಾಡುವುದು
ದೇಹಾರ ೩-೩೦ವ ದೇವರ ಮನೆ
ದ್ವಿಜಿಹ್ವ ೬-೬೬ ಹಾವು
ದ್ವಿಪ ೪-೧೨೦ ಆನೆ
ನಖಪದ ೩-೭೫ ನಖಹತಿ, ಉಗುರ ಹೊಡೆತ
ನಯನೀಯ ೧೪-೧೧೪ವ ನೋಡಲು ತಕ್ಕುದಾದ
ನಾಂದು ೩-೪೫ ನಾದು, ಹೊಸೆ
ನಾಗಪತಿ ೪-೧೫೦ ಆನೆ
ನಿಕಷಾಶ್ಮ ೬-೨೭ ಒರೆಗಲ್ಲು
ನಿಜ್ಜವಣೆ ೧೨-೨೮ ಅಂಗನ್ಯಾಸ
ನಿದಾಘ ೧೧-೮ ಬೇಸಿಗೆ
ನಿಧಾನ ೪-೭೫ ಗುಪ್ತಧನ
ನಿರಯ ೬-೭೫ ನರಕ
ನಿರ್ವಂದ ೩-೧೨೮ ಒಂದರ ಮೇಲೆ ಒಂದು ಬೀಳುವಂತೆ
ನಿರ್ವೃತಿ ೭-೧೪ ಮೋಕ್ಷ
ನೆಲಗಸ್ನ ೩-೧೪೧ ವ ನೆಲದಲ್ಲಿ ಹಾಕುವ ಕಸ್ನ
ನೇಣ್ಕಾರ್ತಿ ೧೨-೭೭ ಮೋಸಗಾತಿ
ನೇರಾಣಿಯ ಪೊಂಗಳು ೮-೯೩ ಅಪ್ಪಟ ಚಿನ್ನ
ನೋನು ೫-೫೩ ವ್ರತವನ್ನು ಹಿಡಿ
ಪಂಕ ೩-೩೨ ಕೆಸರು
ಪಂಕಿಳ ೩-೩೨ ವ ಕೆಸರಿನಿಂದ ಕೂಡಿದ
ಪಂಗು ೧೬-೮೫ ಕುಂಟು
ಪಕ್ಕುಮಾಡು ೧೪-೩೬ವ ಪಕ್ಕಕ್ಕೆ ತರುವುದು
ಪಕ್ಷ ೫-೪೨ ರೆಕ್ಕೆ
ಪಟವಾಸ ೧೪-೧೧೩ ಸುಗಂಧದಪುಡಿ
ಪಡಣ ೪-೪೩ ಕೇಡು
ಪಡಲಿಗೆ ೩-೩೩ವ ಪಾತ್ರೆ
ಪಡಿಯಱವಕ್ಕಿ ೯-೨೮ವ ಗಿಳಿ
ಪಡೆವಳ ೩-೨ ಸೇನಾಪತಿ
ಪಣ್ಣು ೩-೩೫ವ ಹೂಡು, ಒಡ್ಡು
ಪಣ್ಣು ೮-೩೨ವ ಸಜ್ಜಾಗು
ಪಯ ೧೪-೧೪೪ ಪಾದ
ಪರಿಕಲಿಸು ೧೦-೧ ವ ವ್ಯಾಪಿಸು
ಪರಿಖೆ ೭-೩೪ ಅಗಳು
ಪರಿಯಣ ೧೦-೧ವ ತಟ್ಟೆ
ಪವಣಿಸು ೩-೪೬ ಅಣಿಗೊಳಿಸು
ಪಸ ೫-೪ ಬರ, ಕ್ಷಾಮ
ಪಸಾಯ ೨-೪೫ ಉಡುಗೊರೆ
ಪಸು ೧೩-೬೬ ಹಂಚು
ಪಳಕ ೭-೩೮ ಫಲಕ, ಹಲಗೆ
ಪಱಯಿಗೆ ೩-೪೨ ಬಾವುಟ
ಪಾಗುಡ ೧೫-೩೧ವ ಉಡುಗೊರೆ
ಪಾಣಿಯವಾಸ ೯-೫ ಸುವಾಸನೆಗಟ್ಟಿದ ನೀರನ್ನು ಕೊಡುವ ಅರವಟ್ಟಿಗೆ
ಪಾರದರ ೩-೭೩ ವ್ಯಭಿಚಾರ
ಪಾಸಟಿ ೭-೭ ಸಮ
ಪಾಳಂಬಡು ೪-೪೪ ದೇವತೆಗೆ ಮಾಡಿಕೊಳ್ಳುವ ಹರಕೆ
ಪಿಂತಿಲ್ ೭-೪೧ ಹಿತ್ತಿಲು
ಪಿಡಿ ೯-೨೭ ಆನೆ
ಪಣಿಲ್ ೪-೧೩೯ ಹಿಣಿಲು, ಡುಬ್ಬ
ಪಿಟ್ಕು ೯-೧೩೫ ಆಯುಧಗಳ ಹಿಡಿ
ಪೂವಲಿ ೧೪-೧೨೫ ರಂಗವಲ್ಲಿ
ಪೆಳಱು ೧೦-೧೯೯ ಬಿರುಕುಬಿಡು
ಪೊಂಕ ೯-೧೩ ಗರ್ವ
ಪೋರ್ಕುಳಿ ೨-೨೭ ಹೋರಾಟ
ಪೋಟಿಲ್ ೬-೧೦೭ ಪೊಟರೆ
ಪೈತಿಗ ೯-೧೬ ಪಿತ್ತವಿಕಾರಗೊಂಡ

ಬಗೆ ೬-೨ವ ಮನಸ್ಸು
ಬಟ್ಟೆಗಳ್ವ ಕಳ್ಳ ೩-೯೯ ದಾರಿಕಾಯುವ ಕಳ್ಳ
ಬಡವಾನಳ ೭-೩೩ ಸಮುದ್ರದೊಳಗಿನ ಬೆಂಕಿ
ಬರ್ಕೆ ೯-೯ ಬಕ್ಕೆ ಹಲಸು
ಬಾಯ್ದಱ್ ೯-೬೫ ತುಟಿ
ಬಾವರಿ ೧೫-೮೨ ಚರಿಗೆ
ಬಾಸಣಿಸು ೧೨-೧೫ ಮುಚ್ಚು
ಬಾಸಿಗ ೫-೯೪ ಬಾಸಿಂಗ, ಹೂವಿನ ಅಲಂಕಾರ
ಬಾಸೆ ೭-೧೬ವ ನಾಭಿಯ ಮೇಲಿನ ಕೂದಲು
ಬಾಟ್ಟೆಗೆಯ್ ೩-೧೧೨ ವ ಲೆಕ್ಕಿಸು
ಬಿಡಾಳ ೩-೧೧೨ ಬೆಕ್ಕು
ಬಿಣ್ಣುಂಡು ೭-೪೦ ಲಂಗರು
ಬಿದು ೩-೧೨೪ ಕುಂಭಸ್ಥಳ
ಬಿಸುಗೆ ೩-೧೨೪ ಅಂಬಾರಿ, ಬೆಸುಗೆ
ಬುಗುಟು ೪-೨೬ ಹಣೆ ಮೊದಲಾದೆಡೆಗಳಲ್ಲಿ ಏಟು ತಗುಲಿದರೆ ಏಳುವ ಗುಳ್ಳೆ
ಬೆಗಡು ೩-೮೬ವ ಆಶ್ಚರ್ಯ
ಬೆಳ್ಳ ೧೩-೫೯ ನೀರು
ಬೆಳ್ಳಾಲಂ ೧೨-೭೫ ದೊಡ್ಡಬಲೆ
ಬೆಳ್ಮಿಗ ೬-೯೯ವ ಜಿಂಕೆ ಮೊದಲಾದ ಸಾಧು ಮೃಗಗಳು
ಬೈಸಿಕೆ ೧೧-೩೪ ಕುಳಿತು ನಿಂತು ಮಾಡುವುದು
ಭದ್ರಜಾತಿ ೪-೧೪೮ ಭದ್ರಜಾತಿಯ ಆನೆ
ಭೂಭೃತ್ಪತಿ ೭-೩೩ವ ಬೆಟ್ಟಗಳ ಒಡೆಯ, ಮೇರುಪರ್ವತ
ಮಂಚಿಗೆ ೩-೧೩೩ ಎತ್ತರದ ಅಟ್ಟು
ಮಂಡನ ೬-೬೪ ಅಲಂಕಾರ
ಮಂತಣಂ ೨-೨೨ ಮಂತ್ರಾಲೋಚನೆ
ಮತಂಗದಾನ ೪-೧೨೩ ಮದಜಲ
ಮದ ೩-೩೬ ಆನೆಯ ಮದ
ಮದಾಳಿ ೭-೩೨ ದುಂಬಿ
ಮಲಂಗು ೯-೩೧ ದಿಂಬು
ಮಲರ್ ೭-೬೦ ಹೂವು
ಮಾಸರ ೧೧-೧೧೫ ಮನೋಹರ
ಮುಕ್ಕಡಿ ೫-೪೨ ಮೂರುತುಂಡು
ಮುಖರಿಗಾಣ ೧೨-೧೬ವ ಕೊಳಲು ಬಾರಿಸುವವ
ಮುಮ್ಮುಟಿ ೩-೧೨೨ ನುಜ್ಜುಗುಜ್ಜು
ಮೃಗತೃಷ್ಣಿಕೆ ೬-೫೧ ಬಿಸಿಲ್ಗುದುರೆ
ಮೆಯ್ಗರೆ ೩-೧೫೮ವ ಮರೆಯಾಗು
ಮೇಚಕಿತ ೧೧-೬೯ ಮುಚ್ಚು, ಆವರಿಸು
ಮೊಗಸೇಡುಗೊಳ್ ೧೧-೮೩ವ ಮುಖ ಕೆಡುವಂತೆ
ಮೊಘೆ ೧೧-೯೦ ಮಣ್ಣಿನ ಗಡಿಗೆ
ಮೊದಲು ೧೬-೪೬ ಬುಡ
ಯಾನಪಾತ್ರ ೪-೭೬ ದೋಣಿ
ರಂಭ ೫-೯೧ ವ ಬಾಳೆ
ರಯ್ಯ ೭-೨೭ ರಮ್ಯ, ಸುಂದರ
ರಶನಾ ೬-೧೩ ಗೆಜ್ಜೆಯ ಡಾಬು
ರಸೆ ೭-೭೬ ಭೂಮಿ
ರುತಿ ೨-೧೦೦ ಧ್ವನಿ
ರುವತ್ ೯-೯೫ ಧ್ವನಿ
ಱುಂಜೆ ೧೨-೭೪ ಒಂದು ಬಗೆಯ ವಾದ್ಯ
ಱೋಡಿಸು ೧೫-೧೧೨ ಅಣಕಿಸು
ಲಂಜಿಕೆ ೮-೪೪ ವೇಶ್ಯೆ
ಲಂಪಳ ೯-೩ ಲಂಪಟ
ಲಂಬಣ ೧೬-೪೭ ಹಾರ
ಲತಾಂತಶರ ೩-೭೮ ಮನ್ಮಥ, ಬಳ್ಳಿಯ ತುದಿಯಲ್ಲಿರುವ ಹೂವನ್ನು ಬಾಣವಾಗಿ ಮಾಡಿಕೊಂಡವನು
ಲವ ೬-೧೦೮ ಸ್ವಲ್ಪ
ಲಾಂತ ೧೧-೮೪ ಸ್ವರ್ಗ
ಲೊವೆ ೯-೨೯ ಲೋವೆ, ಇಳಿಜಾರಾದ ಸೂರು
ಲೋವಿಸರ ೩-೧೨೨ ಲೋಳೆಸರ
ವಪ್ರಭೆ ೭-೪೦ ಚಿನ್ನದ ಕಾಂತಿ
ವಲ್ಲಕಿ ೬-೧೩ ವೀಣೆ
ವಸು ೬-೨೫ ವ ಚಿನ್ನ
ವಾಂಶಿಕ ೧೨-೨೨ವ ಕೊಳಲು ಬಾರಿಸುವವ
ವಾರಣ ೪-೧೩೧ ಆನೆ
ವಾಸ ೧೫-೭೪ ಬಟ್ಟೆ
ವಿಗುರ್ವಣೆ ೧೧-೮೭ವ ಮಾಯೆಯಿಂದ ಸೃಷ್ಟಿಸುವುದು
ವಿಪಣಿಮಾರ್ಗ ೨-೫೧ ಅಂಗಡಿ ಬೀದಿ
ವಿಷಧಿ ೧೩-೭೫ ಸಮುದ್ರ
ವಿಷಯ ೭-೧೪ ದೇಶ
ವೇದಕ ೫-೪೩ ಸಮ್ಯಕ್ತ್ವ
ವೈಹಾಳಿ ೩-೩ ಕುದುರೆ ಸವಾರಿ
ಶಂಫಳಿ ೧೩-೫೪ ತಲೆಹಿಡುಕಿ
ಶಕುಂತ ೩-೧೫೪ ಒಂದು ಹಕ್ಕಿ
ಶಕ್ರಚಾಪ ೧೬-೨೭ ಇಂದ್ರನ ಧನುಸ್ಸು

ಶಾರದೇಂದು ೩-೩೨ವ ಶರತ್ಕಾಲದ ಚಂದ್ರ

ಶೋಫ ೨-೪೨ ಬಾವು, ಊತ

ಶ್ಮಶ್ರು ೬-೨೭ ಮೀಸೆ

ಶ್ರೀಫಳ ೬-೫೯ ವ ಬಿಲ್ವಪತ್ರೆಕಾಯಿ

ಸಂಚುಕರ ೩-೩೩ ಚಂಚಕಾರ, ಮೊದಲು ಕೊಡುವ ಹಣ

ಸಂಧಿವಿಗ್ರಹಿ ೨-೪೨ ನಿಯೋಗಿ

ಸಣ್ಣಿಗೆ ೬-೯೩ ಅರೆಯುವ ಕಲ್ಲು

ಸಪ್ತಚ್ಛದ ೮-೧೦೩ ಏಳೆಲೆ ಬಾಳೆ

ಸಬಳ ೩-೧೩೬ ಈಟಿ

ಸಬ್ಬ ೩-೧೩೫ ವ ಸರ್ವ

ಸರವಳಿಗೆ ೮-೫೦ ಶ್ಯಾವಿಗೆ

ಸಲ್ಲಕೀ ೪-೫೫ ಜೊಂಡು

ಸವ ೧೬-೬೨ ಸಮ

ಸವಾರಿಗಳ್ ೩-೩೮ ಸವಾರರು

ಸಹಕಾರ ೯-೨೯ ವ ಮಾವು

ಸಾಧ್ವಸ ೧೬-೮೪ ನಿದ್ರೆ

ಸಾರ್ಥಪತಿ ೪-೧೩೫ವ ವ್ಯಾಪಾರಿಗಳ ಯಜಮಾನ

ಸಿತಾತಪತ್ರ ೧೬-೭೯ ಬಿಳಿಯ ಕೊಡೆ

ಸಿಪ್ಪು ೧೪-೧೨೧ ಚಿಪ್ಪು

ಸುಟ್ಟುರೆ ೩-೧೨೬ ಪ್ರವಾಹ

ಸುಮನೋವರ್ಷ ೫-೮೮ ಹೂಮಳೆ

ಸೂನಗೆ ೩-೧೨೨ ಬಾಣ

ಸೂರ್ಯಜ ೩-೩೮ ಸೂರ್ಯನ ಮಗ ರೇವಂತ

ಸೆಡೆ ೩-೧೧೩ ಉಬ್ಬು

ಸೈಗೋಲರ್ ೩-೧೧೭ ನಿಪುಣರಾದ ಬಿಲ್ಲಾಳುಗಳು

ಸೊದೆ ೮-೪೯ ಸುಣ್ಣ

ಸೊನೆ ೯-೪೮ ಸುವಾಸನೆಯಿಂದ ಕೂಡಿದ ರಸ

ಸ್ವಾತಿ ೧೨-೩೫ ಸ್ವಾತಿಮಳೆ

ಹುತಾಶನ ೪-೫೨ ಬೆಂಕಿ

ಹಟ್ಟಿ ಕಾಳೆಗ ೧೩-೭೩ ಮನೆಜಗಳ

ಹರಿ ೩-೩೯ ಇಂದ್ರ

ಹರಿ ೩-೪೦ ಕುದುರೆ

ಪಾರಿಭಾಷಿಕ ಪದಕೋಶ

ಅಘಾತಿ ಕರ್ಮ : ಆತ್ಮನ ಗುಣಗಳಿಗೆ ಘಾತಿಯುಂಟು ಮಾಡದ ಕರ್ಮ, ಇದು ನಾಲ್ಕು ವಿಧ – ಆಯುಃಕರ್ಮ, ನಾಮಕರ್ಮ, ಗೋತ್ರ ಕರ್ಮ, ವೇದನೀಯ ಕರ್ಮ.

ಅಣಿಮಾ : ತಪಸ್ಸಿನಿಂದ ದೊರಕುವ ಎಂಟು ಸಿದ್ಧಿಗಳಲ್ಲಿ ಒಂದು. ಅತ್ಯಂತ ಸೂಕ್ಷ್ಮ ರೂಪವನ್ನು ಹೊಂದಬಲ್ಲ ಶಕ್ತಿ.

ಅನಂತ ಚತುಷ್ಟಯ : ತೀರ್ಥಂಕರನಿಗೆ ಕರ್ಮ ಪರಿಣಾಮ ನಷ್ಟವಾದ ಬಳಿಕ ಲಭಿಸುವ ನಾಲ್ಕು ಗುಣಗಳು – ಅನಂತ ಜ್ಞಾನ, ಅನಂತ ದರ್ಶನ, ಅನಂತ ಸುಖ, ಅನಂತವೀರ್ಯ.

ಅನಂತಾನುಬಂಧಿ : ಹುಟ್ಟು ಸಾವುಗಳ ಸಂಸಾರದಲ್ಲಿ ಜೀವನನ್ನು ಅನಂತಕಾಲದ ವರೆಗೆ ಸುತ್ತಾಡಿಸುವ ಕ್ರೋಧ, ಮಾಯಾ, ಮಾನ, ಲೋಭ ಎಂಬ ನಾಲ್ಕು ಕಷಾಯಗಳು.

ಅನುಯೋಗ ಚತುಷ್ಟಯ: ಜೈನಾಗಮದ ಪ್ರಥಮಾನುಯೋಗ, ಕರಣಾನುಯೋಗ, ಚರಣಾನುಯೋಗ, ದ್ರವ್ಯಾನುಯೋಗ ಎಂಬ ನಾಲ್ಕು ವಿಭಾಗಗಳು.

ಅಭಿಯೋಗ್ಯ : ಇಂದ್ರನ ಪರಿವಾರ ದೇವತೆಗಳಿಗೆ ಸೇರಿದ ಒಂದು ವರ್ಗ. ಸೇವಕರಿಗೆ ಸಮಾನರಾದ ದೇವತೆಗಳು.

ಅವಧಿ ಜ್ಞಾನ : ಮುಂದೆ ಸಂಭವಿಸಲಿರುವ ಸಂಗತಿಗಳನ್ನು ತಿಳಿಯುವ ದಿವ್ಯ ಜ್ಞಾನ. ಇದು ದೇವ ಮತ್ತು ನಾರಕರಿಗೆ ಸಹಜವಾಗಿರುತ್ತದೆ. ಇದರಲ್ಲಿ ದೇಶಾವಧಿ, ಪರಮಾವಧಿ, ಸರ್ವಾವಧಿ ಎಂದು ಮೂರು ವಿಧ.

ಅಷ್ಟಮಭೂಮಿ : ಸಿದ್ಧರು ವಾಸಮಾಡುವ ಭೂಮಿ, ಈಷತ್ ಪ್ರಾಗ್ಭಾರವೆಂದೂ ಕರೆಯುತ್ತಾರೆ. ಇದು ಜನನ ಮರಣಾದಿ ವಿಕಾರಗಳಿಲ್ಲದ ಅತೀಂದ್ರಿಯ ಸುಖ ಮತ್ತು ಅನಂತಜ್ಞಾನಗಳಿರುವ ಭೂಮಿ.

ಅಷ್ಟವಿಧಾರ್ಚನೆ : ನೀರು, ಗಂಧ, ಅಕ್ಷತೆ, ಪುಷ್ಪ, ಚರು, ದೀಪ, ಧೂಪ, ಫಲ ಎಂಬ ಎಂಟು ಬಗೆಯ ವಸ್ತುಗಳಿಂದ ಪೂಜಿಸುವುದು.

ಅಷ್ಟಾಹ್ನಿಕ ಪೂಜೆ : ಶ್ರಾವಕರು ಅಷ್ಟಮಿಯಿಂದ ಹುಣ್ಣಿಮೆಯ ವರೆಗೆ ಎಂಟು ದಿನಗಳ ಕಾಲ ಮಾಡುವ ಜಿನಪೂಜೆ.

ಆತ್ಮರಕ್ಷಕ : ಇಂದ್ರನ ವೈಭವ ಪ್ರದರ್ಶನಕ್ಕೆ ಆತನ ಸಮೀಪದಲ್ಲಿಯೇ ಇರುವ ಪರಿವಾರ ದೇವತೆಗಳ ಒಂದು ವರ್ಗ.

ಆರ್ತಧ್ಯಾನ : ಇಷ್ಟವಿಲ್ಲದ ವಸ್ತುಗಳನ್ನು ಬಿಡಬೇಕೆಂಬ ಮತ್ತು ಇಚ್ಛಿಸಿದ ವಸ್ತುಗಳು ಬೇಕೆಂಬ ಅಪೇಕ್ಷೆಯಿಂದ ಅವುಗಳನ್ನೇ ಚಿಂತಿಸುತ್ತಿರುವುದು.

ಆರು ಅವಶ್ಯಕಗಳು : ೧. ಸಾಮಾಜಿಕ – ಎಲ್ಲ ಜೀವಗಳಲ್ಲಿಯೂ ಸಮತ್ವ ಭಾವನೆ. ೨. ಚತುರ್ವಿಂಶತಿ ಸ್ತವನ – ಇಪ್ಪತ್ನಾಲ್ಕು ತೀರ್ಥಂಕರರನ್ನು ಸ್ತುತಿಸುವುದು. ೩. ವಂದನಾ – ಪಂಚಪರಮೇಷ್ಠಿಗಳಿಗೆ ವಂದಿಸುವುದು. ೪. ಪರಿಕ್ರಮಣ – ಹತ್ತಿದ ದೋಷಗಳಿಗಾಗಿ ಪಾಶ್ಚಾತ್ತಾಪ. ೫. ಪ್ರತ್ಯಾಖ್ಯಾನ – ಪಾಪಕರ್ಮಗಳನ್ನು ಮಾಡುವುದಿಲ್ಲವೆಂದು ಪ್ರತಿಜ್ಞೆ ಮಾಡುವುದು. ೬. ಕಾಯೋತ್ಸರ್ಗ – ದೇಹಾಭಿಮಾನ ತೊರೆದು ಆತ್ಮಧ್ಯಾನದಲ್ಲಿರುವುದು.

ಆಸನ ಕಂಪ : ತೀರ್ಥಂಕರನ ಜನನ ಮುಂತಾದ ವಿಶೇಷ ಸಂದರ್ಭಗಳಲ್ಲಿ ಪೂರ್ವ ಸೂಚನೆ ಎಂಬಂತೆ ದೇವೇಂದ್ರನಿಗೆ ಕುಳಿತ ಪೀಠ ಅಲುಗುವುದು.

ಇಪ್ಪತ್ತೆಂಟು ಮೂಲ ಗುಣಗಳು : ಐದು ಪಂಚ ಮಹಾ ವ್ರತಗಳು, ಐದು ಪಂಚ ಸಮಿತಿಗಳು, ಐದು ಪಂಚೇಂದ್ರಿಯ ನಿಗ್ರಹ, ಆರು ಆವಶ್ಯಕಗಳು, ಸ್ನಾನಾಭಾವ, ಭೂಮಿ ಶಯನ, ನಗ್ನತ್ವ, ಕೇಶೋತ್ಪಾಟನ, ಏಕಾಶನ, ದಂತಧಾವನಾಭಾವ, ಸ್ಥಿತಾಶನ.

ಈರ್ಯಾಪರಿಶುದ್ಧಿ : ನಡೆಯುವಾಗ ಜೀವ ಹಿಂಸೆ ಆಗದಿರಲೆಂದು ನೆಲವನ್ನು ನಾಲ್ಕು ಮೊಳಗಳಷ್ಟು ಮುಂದೆ ಸೂಕ್ಷ್ಮವಾಗಿ ನೋಡುತ್ತ ನಡೆಯುವುದು.

ಏಳು ಬೆಸನಗಳು : ಕೋಪದಿಂದ ಹುಟ್ಟುವ ವಾಕ್ಪಾರುಷ್ಯ, ಅರ್ಥದೂಷಣ, ದಂಡ ಪಾರುಷ್ಯ ಎಂಬ ಮೂರು ವೆಸನಗಳು ಮತ್ತು ಕಾಮದಿಂದ ಹುಟ್ಟುವ ಮೃಗಯಾ ವೆಸನ, ದ್ಯೂತ ವೆಸನ, ಪಾನ ವೆಸನ, ಸ್ತ್ರೀ ವೆಸನ ಎಂಬ ನಾಲ್ಕು ವೆಸನಗಳು.

ಏಳು ರಾಜ ಪ್ರಕೃತಿಗಳು : ರಾಜ (ಸ್ವಾಮಿ), ಅಮಾತ್ಯ (ಮಂತ್ರಿ), ಜನಪದ (ಪ್ರಜೆ), ದುರ್ಗ (ರಾಜ್ಯ ರಕ್ಷಣೆ), ದಂಡ (ಸೈನ್ಯ), ಕೋಶ (ಅರ್ಥ ಸಂಪತ್ತು), ಮಿತ್ರ.

ಕರ್ಮನಿರ್ಜರೆ : ಕರ್ಮ ಹರಿದು ಬೀಳುವುದು.

ಕಷಾಯ : ಕರ್ಮಫಲವನ್ನು ಬೆಳೆಸುವ ಕ್ರೋಧ, ಮಾನ, ಮಾಯ, ಲೋಭ ಎಂಬ ದೋಷಗಳು.

ಕಾಯೋತ್ಸರ್ಗ : ಕೈ ಇಳಿಬಿಟ್ಟುಕೊಂಡು ದೇಹವನ್ನು ನೇರವಾಗಿ ಮತ್ತು ನಿಶ್ಚಲವಾಗಿರಿಸಿಕೊಂಡು ನಿಲ್ಲುವುದು.

ಕ್ಷಪಣಕ : ಜೈನ ಸನ್ಯಾಸಿ.

ಕಾಲಲಬ್ಧಿ : ಸಮ್ಯಗ್ದೃಷ್ಟಿ ದೊರೆಯುವ ಕಾಲ ಹತ್ತಿರವಾಗುವುದು.

ಕೇವಲ ಜ್ಞಾನ : ಪರಿಶುದ್ಧವೂ ಪರಿಪೂರ್ಣವೂ ಸರ್ವವ್ಯಾಪಿಯೂ ಆದ ಅನಂತ ಜ್ಞಾನ.

ಕೇವಲಿ : ಕೇವಲಜ್ಞಾನ ಪಡೆದವ.

ಗಣಧರ : ಶ್ರೇಷ್ಠವಾದ ಜ್ಞಾನದರ್ಶನಗಳನ್ನು ಹೊಂದಿದ ತೀರ್ಥಂಕರನ ಮುಖ್ಯ ಶಿಷ್ಯ.

ಘಾತಿಕರ್ಮ : ಅನಂತಗುಣಗಳಿಗೆ ಕೇಡುಂಟುಮಾಡುವ ಕರ್ಮಗಳು. ಇವು ಜ್ಞಾನಾವರಣೀಯ, ದರ್ಶನಾವರಣೀಯ, ಮೋಹನೀಯ, ಅಂತರಾಯ ಎಂದು ನಾಲ್ಕು ವಿಧ.

ಚತುರ್ಗತಿ : ಕರ್ಮಫಲದಿಂದ ಜೀವಿಯು ಅಲೆದಾಡುವ ನಾಲ್ಕು ನೆಲೆಗಳು – ದೇವಗತಿ, ಮನುಷ್ಯಗತಿ, ತಿರ್ಯಗ್ಗತಿ, ನರಕಗತಿ.

ಚತುರ್ದಶಗುಣ : ವರ್ಣ, ಅಲಂಕಾರ, ಸ್ವರ, ಪದ, ಸಮೀಪ, ಉಚ್ಛ್ವಾಸ, ಸಭಾ, ಆದೇಶ, ತಾಳ, ಲಯ, ಯತಿ, ಫಣಿಸ್ಥಾನ, ದೇಶ, ಕಾಲಜ್ಞತೆ.

ಚತುರ್ನಿಕಾಯ ದೇವತೆಗಳು : ಭವನವಾಸಿ, ಜ್ಯೋತಿಷ್ಯ, ವ್ಯಂತರ, ವೈಮಾನಿಕ ಎಂಬ ನಾಲ್ಕು ಬಗೆಯ ದೇವತೆಗಳ ಸಮೂಹ.

ಚರಮ ದೇಹ : ಮೋಕ್ಷಕ್ಕೆ ಮುನ್ನ ಪಡೆಯುವ ಕಡೆಯ ಸ್ಥೂಲ ದೇಹ.

ಚಾರಣ ಋದ್ಧಿ : ಆಕಾಶ, ನೀರು ಮೊದಲಾದವುಗಳಲ್ಲಿ ನಡೆಯುವ ಶಕ್ತಿ.

ಛದ್ಮಸ್ಥಕಾಲ : ಸರ್ವಜ್ಞನಾಗುವುದಕ್ಕೆ ಮುಂಚಿನ ಅವಸ್ಥೆ.

ಜ್ಯೋತಿಷ್ಕ : ದೇವತೆಗಳ ನಾಲ್ಕು ವರ್ಗಗಳಲ್ಲಿ ಒಂದು. ಸೂರ್ಯ, ಚಂದ್ರ, ಗ್ರಹ, ನಕ್ಷತ್ರಗಲ್ಲಿ ಇರುವವರು ಜ್ಯೋತಿಷ್ಕ ದೇವತೆಗಳು.

ತೈಜಸ ಶರೀರ : ಲಬ್ಧಿ ವಿಶೇಷದಿಂದ ಉಂಟಾಗುವ ಜನ್ಮ. ಇದು ಶುಭ ತೈಜಸ, ಅಶುಭ ತೈಜಸ ಎಂದು ಎರಡು ವಿಧ.

ತ್ರಸ ಜೀವ : ಎರಡು ಅಥವಾ ಹೆಚ್ಚು ಇಂದ್ರಿಯಗಳನ್ನುಳ್ಳ, ತಾವಾಗಿಯೇ ಚಲಿಸಬಲ್ಲ ಜೀವಿಗಳು. ಇವು ನಾಲ್ಕು ವಿಧ – ದ್ವೀಂದ್ರಿಯ ಜೀವ, ತ್ರೀಂದ್ರಿಯ ಜೀವ, ಚತುರಿಂದ್ರಿಯ ಜೀವ, ಪಂಚೇಂದ್ರಿಯ ಜೀವ.

ತ್ರಿಗುಪ್ತಿ : ಮನ ವಚನ ಕಾಯಗಳನ್ನು ನಿಗ್ರಹಿಸಿ ಅವು ಧರ್ಮಧ್ಯಾನದಲ್ಲಿ ನಿರತವಾಗುವಂತೆ ಮಾಡುವುದು.

ತ್ರೈವಿದ್ಯ : ಷಟ್ಖಂಡಾಗಮದ ಮೊದಲ ಮೂರು ಖಂಡಗಳನ್ನು ಆಳವಾಗಿ ಅಭ್ಯಾಸ ಮಾಡಿದವನು.

ದಶಧರ್ಮ : ರಾಗ ದ್ವೇಷಗಳಿಂದ ಕೂಡಿರುವಂಥ ಮನಸ್ಸಿನ ಉಪಶಮನಕ್ಕಾಗಿ ಬಳಸುವ ಹತ್ತು ಧರ್ಮಗಳು – ಉತ್ತಮ ಕ್ಷಮಾ, ಉತ್ತಮ ಮಾರ್ದವ, ಉತ್ತಮ ಆರ್ಜವ, ಉತ್ತಮ ಶೌಚ, ಉತ್ತಮ ಸತ್ಯ, ಉತ್ತಮ ಸಂಯಮ, ಉತ್ತಮ ತಪ, ಉತ್ತಮ ತ್ಯಾಗ, ಉತ್ತಮ ಆಕಿಂಚವ್ಯ, ಉತ್ತಮ ಬ್ರಹ್ಮಚರ್ಯ.

ದಿವ್ಯಧ್ವನಿ : ತೀರ್ಥಂಕರರು ಸಮವಸರಣದಲ್ಲಿ ಕುಳಿತು ಲೋಕ ವಿಹಾರ ಮಾಡುತ್ತ ಬೋಧಿಸುವ ಧರ್ಮಬೋಧೆ. ಇದು ಚತುರ್ಗತಿಯಲ್ಲಿರುವ ಪ್ರಾಣಿಗಳಿಗೆಲ್ಲ ಅವರವರ ಭಾಷೆಯಲ್ಲಿಯೇ ತಿಳಿಯುತ್ತದೆ. ಇದು ತೀರ್ಥಂಕರರ ಮುಖದಿಂದ ಹೊರಟ ದಿವ್ಯವಾಣಿ. ಸಮಸ್ತ ಜೀವಿಗಳ ಅಜ್ಞಾನವನ್ನು ನಿವಾರಿಸುವಂಥದ್ದು. ಸಂಧ್ಯಾತ್ರಯಗಳಲ್ಲಿ ನವಮುಹೂರ್ತ ಕಾಲದಲ್ಲಿ ಮಾತ್ರ ಹೊರಡುವಂಥದ್ದು. ಒಂದು ಯೋಜನ ದೂರದ ವರೆಗೆ ಕೇಳುವಂಥದ್ದು.

ದಾನಗಳು : ಆಹಾರದಾನ, ಅಭಯದಾನ, ಶಾಸ್ತ್ರದಾನ, ಭೈಷಜ್ಯದಾನ.

ಧರ್ಮಧ್ಯಾನ : ಇಂದ್ರಿಯಗಳನ್ನು ರಾಗ ದ್ವೇಷಾದಿ ಭಾವನೆಗಳಿಂದ ಮುಕ್ತಮಾಡಿ ಧಾರ್ಮಿಕ ಚಿಂತನೆಯ ಕಡೆಗೆ ತಿರುಗಿಸುವುದು.

ನವವಿಧ ಪುಣ್ಯ : ಚರಿಗೆಗೆ ಬಂದ ಮುನಿಗಳನ್ನು ಸತ್ಕರಿಸುವ ಒಂಬತ್ತು ಕ್ರಮ –ಮೂರು ಪ್ರದಕ್ಷಿಣೆ, ಪಾದ ಪ್ರಕ್ಷಾಲನ, ಉನ್ನತ ಪೀಠ ಪ್ರದಾನ, ಅರ್ಚನ, ನಮಸ್ಕಾರ, ವಚನ ಶುದ್ಧಿ, ಕಾಯ ಶುದ್ಧಿ, ಮನಃ ಶುದ್ಧಿ ಮತ್ತು ಏಷಣಾ ಶುದ್ಧಿ.

ಪಂಚಮಹಾ ವ್ರತಗಳು : ಅಹಿಂಸೆ, ಸತ್ಯ, ಆಸ್ತೇಯ (ಕದಿಯದಿರುವುದು), ಬ್ರಹ್ಮಚರ್ಯ, ಅಪರಿಗ್ರಹ (ಪ್ರಾಪಂಚಿಕ ವಿಷಯಗಳಲ್ಲಿ ಮನಸ್ಸು ಕೊಡದಿರುವುದು).

ಪಂಚ ಸಮಿತಿ : ಈರ್ಯಾ ಸಮಿತಿ, ಭಾಷಾ ಸಮಿತಿ, ಏಷಣಾ ಸಮಿತಿ, ಆದಾನ ನಿಕ್ಷೇಪಣ ಸಮಿತಿ, ಉತ್ಸರ್ಗ ಸಮಿತಿ ಎಂಬ ಐದು ಬಗೆಯ ಧಾರ್ಮಿಕ ಪ್ರವೃತ್ತಿಗಳು..

ಪಂಚಾಶ್ಚರ್ಯ : ಉತ್ತಮ ಪಾತ್ರಕ್ಕೆ ಆಹಾರದಾನ ಮಾಡಿದಾಗ ಉಂಟಾಗುವ ಐದು ಬಗೆಯಾದ ಸೋಜಿಗಗಳು – ದೇವದುಂದುಭಿ ಮೊಳಗುವುದು, ಹೂವಿನ ಮಳೆ ಕರೆಯುವುದು, ಚಿನ್ನದ ಮಳೆ ಸುರಿಸುವುದು, ಕಮ್ಮನೆ ಮೆಲುಗಾಳಿ ಬೀಸುವುದು, ದೇವತೆಗಳು ಪ್ರಶಂಸೆ ಮಾಡುವುದು.

ಪರೀಷಹ : ತಪಸ್ಸಿಗೆ ಬಾಧಕವಾಗಿ ಬರುವ ೨೨ ಬಗೆಯ ಉಪದ್ರವಗಳು – ಹಸಿವು, ಬಾಯಾರಿಕೆ, ಚಳಿ, ಉಷ್ಣ, ಸೊಳ್ಳೆ, ನೊಣ ಮೊದಲಾದವು ಕಚ್ಚುವುದು, ಬಟ್ಟೆ ಇಲ್ಲದಿರುವುದರಿಂದ ಆಗುವ ತೊಂದರೆ, ಅರತಿ, ಸ್ತ್ರೀ ವಿರಹ, ಸಂಚಾರ ಬಾಧೆ, ಶಯ್ಯಾ ಬಾಧೆ, ಆಸನ ಬಾಧೆ, ಬೈಗುಳು, ಯಾಚನೆಯಲ್ಲಾಗುವ ತೊಂದರೆ, ಭಿಕ್ಷೆ ದೊರೆಯದಿದ್ದರೆ ಆಗುವ ಖೇದ, ರೋಗ ಬಾಧೆ, ಮುಳ್ಳು ಕಲ್ಲುಗಳು ತಾಕಿ ಆಗುವ ಬಾಧೆ, ಮೈ ತೊಳೆಯದಿರುವುದರಿಂದ ಆಗುವ ಬಾಧೆ, ಜನರಿಂದ ಪುರಸ್ಕಾರ ದೊರೆಯದೆ ಆಗುವ ಬಾಧೆ, ಅಹಂಕಾರ, ಅಜ್ಞಾನ, ತಪಸ್ಸಿಗೆ ತಕ್ಕ ಫಲ ಕಾಣಿಸಿಕೊಳ್ಳದೆ ಆಗುವ ಬಾಧೆ.

ಪಲ್ಯಂಕಾಸನ : ಬಲಪಾದವನ್ನು ಎಡತೊಡೆಯ ಮೇಲೂ ಎಡಪಾದವನ್ನು ಬಲತೊಡೆಯ ಮೇಲೂ ಇಟ್ಟು ಧ್ಯಾನಕ್ಕೆ ಕುಳಿತುಕೊಳ್ಳುವ ಆಸನ.

ಪಾರಿಷದ : ಇಂದ್ರನ ಸಭೆಯಲ್ಲಿರುವ ದೇವತೆಗಳ ಒಂದು ವರ್ಗ.

ಪ್ರತಿಮಾನಿಯೋಗ : ವಿಗ್ರಹದಂತೆ ನಿಶ್ಚಲವಾಗಿ ನಿಂತು ತಪಸ್ಸು ಮಾಡುವ ಕ್ರಮ.

ಪ್ರಥಮಾನುಯೋಗ : ಅನುಯೋಗಗಳಲ್ಲಿ ಮೊದಲನೆಯದು. ತ್ರಿಷಷ್ಟಿ ಶಲಾಕಾಪುರುಷರ ಚರಿತ್ರೆಯನ್ನು ಒಳಗೊಂಡಿರುತ್ತದೆ.

ಭವನಾಮರ : ಭವನವಾಸಿ, ವ್ಯಂತರ, ಜ್ಯೋತಿಷ್ಕ, ಕಲ್ಪವಾಸಿ ಎಂಬ ದೇವತಾವರ್ಗಗಳಲ್ಲಿ ಒಂದು.

ಭೋಗಭೂಮಿ : ಕಲ್ಪವೃಕ್ಷಗಳಿಂದ ಭೋಗದ ಸಾಧನಗಳು ದೊರೆಯುವ ಭೂಮಿ. ಇದರಲ್ಲಿ ಉತ್ತಮ ಭೋಗಭೂಮಿ, ಮಧ್ಯಮ ಭೋಗಭೂಮಿ, ಜಘನ್ಯಭೋಗಭೂಮಿ ಎಂದು ಮೂರು ವಿಧ.

ಮಾನಕಷಾಯ: ಕಷಾಯಗಳಲ್ಲಿ ಒಂದು. ಆತ್ಮನ ವಿನಯ ಗುಣವನ್ನು ನಾಶಮಾಡುವ ಅಹಂಕಾರ, ತೀವ್ರ ಮನೋವಿಕಾರ ರೂಪ ಕಷಾಯಗಳ ಯೋಗದಿಂದ ಜನಿಸುವುದು.

ಮೂವಿಟ್ಟಿ : ಪ್ರತಿಫಲಾಪೇಕ್ಷೆಯಿಲ್ಲದೆ ಮಾಡುವ ಶೋಧನ ಕರ್ಮ, ವಹನ ಕರ್ಮ ಮತ್ತು ಅಪನಯನ ಕರ್ಮಗಳೆಂಬ ಮೂರು ಬಗೆಯ ಸೇವೆ.

ಮೋಹನೀಯ ಕರ್ಮ : ಜೀವವನ್ನು ಮೋಹಗೊಳಿಸಿ ಹಾಳು ಮಾಡುವಂಥದ್ದು. ಇದರಲ್ಲಿ ದರ್ಶನ ಮೋಹನೀಯ. ಚಾರಿತ್ರ ಮೋಹನೀಯ ಎಂದು ಎರಡು ವಿಧ.

ಲೋಚು : ತಲೆ ಮತ್ತು ಮುಖದ ಕೂದಲನ್ನು ಕೈಯಿಂದ ಕಿತ್ತು ತೆಗೆಯುವುದು. ಇದು ಮುನಿಗಳು ಮಾಡಬೇಕಾದ ಒಂದು ವಿಧಿ.

ಸಪ್ತ ತತ್ವಗಳು : ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರಾ, ಮೋಕ್ಷ.

ಸಮವಸರಣ : ತೀರ್ಥಂಕರನು ಧರ್ಮೋಪದೇಶ ಮಾಡುವುದಕ್ಕೆಂದು ಕುಬೇರನು ಇಂದ್ರನ ಅಪ್ಪಣೆಯ ಮೇರೆಗೆ ನಿರ್ಮಿಸಿದ ಮಂಟಪ.

ಸಲ್ಲೇಖನ : ಕಾಯ ಹಾಗೂ ಕಷಾಯಗಳನ್ನು ಕ್ಷೀಣಗೊಳಿಸಲು ಮರಣ ಕಾಲಕ್ಕೆ ಮುಂಚೆ ಆಹಾರಾದಿಗಳನ್ನು ಒಂದು ವಿಧಿಗನುಸಾರ ಕಡಿಮೆ ಮಾಡುತ್ತ, ಕಡೆಗೆ ಪೂರ್ಣ ಉಪವಾಸವಿದ್ದು ಶಾಂತಿಯಿಂದ ಶರೀರವನ್ನು ತ್ಯಜಿಸುವುದು.

ಸಾಮಾನಿಕ ದೇವರು : ವಿಮಾನವಾಸಿ ಮತ್ತು ಭವನವಾಸಿ ದೇವತೆಗಳಲ್ಲಿನ ಒಂದು ವರ್ಗ.

ಹತ್ತು ಮುನಿಧರ್ಮಗಳು : ಉತ್ತಮಕ್ಷಮಾ (ಕೋಪವನ್ನು ಪೂರ್ಣವಾಗಿ ತೊರೆದು ಬೇರೆಯುವರು ಕೇಡು ಮಾಡಿದರೂ ಸಹಿಸಿಕೊಳ್ಳುವುದು), ಮಾರ್ದವ (ಅಹಂಕಾರವನ್ನು ತ್ಯಜಿಸಿ ವಿನಯವನ್ನು ಬೆಳೆಸಿಕೊಳ್ಳುವುದು), ಅರ್ಜವ (ಮೋಸವನ್ನು ಬಿಟ್ಟು ಸರಳತೆಯಿಂದಿರುವುದು). ಸತ್ಯ (ನಿಜವನ್ನೇ ಹೇಳುವುದು), ಶೌಚ (ಕೆಟ್ಟ ಆಲೋಚನೆ, ಕೆಟ್ಟ ಕೆಲಸ ಮಾಡದಿರುವುದು), ಸಂಯಮ (ಇಂದ್ರಿಯ ನಿಗ್ರಹಗೊಳಿಸುವುದು, ಪ್ರಾಣಿಗಳ ಬಗ್ಗೆ ದಯಾಪರನಾಗಿರುವುದು), ತಪಸ್ಸು (ಉತ್ತಮ ತಪಸ್ಸು ಮಾಡುವುದು), ತ್ಯಾಗ (ಪ್ರಾಪಂಚಿಕ ವಿಷಯಗಳಲ್ಲಿ ಆಸಕ್ತಿ ತೊರೆಯುವುದು), ಆಕಿಂಚನ್ಯ (ತನ್ನದಲ್ಲದ ಯಾವುದನ್ನೂ ತೆಗೆದುಕೊಳ್ಳದಿರುವುದು). ಬ್ರಹ್ಮಚರ್ಯ (ಮನ ವಚನ ಕಾಯಗಳಿಂದ ಸ್ತ್ರೀ ಮಾಯವನ್ನು ತ್ಯಜಿಸುವುದು).

ಸಹಾಯಕ ಸಾಹಿತ್ಯ

(ಪಾರ್ಶ್ವನಾಥ ಪುರಾಣಂ)

೧. ಪಾರ್ಶ್ವನಾಥಪುರಾಣಂ : ಪಾರ್ಶ್ವ ಪಂಡಿತ, (ಸಂ) ಎಂ. ಮರಿಯಪ್ಪ ಭಟ್ಟ ಮತ್ತು ಎಂ. ಗೋವಿಂದ ರಾವ್, ಮದ್ರಾಸು ವಿಶ್ವವಿದ್ಯಾನಿಲಯ, ೧೯೫೪.

೨. ಪಾಶ್ವನಾಥಪುರಾಣಂ : ಪಾರ್ಶ್ವಪಂಡಿತ, (ಸಂ.) ಎಸ್. ಬೊಮ್ಮರಸ ಪಂಡಿತ, ೧೯೫೬.

೩. ಪಾರ್ಶ್ವನಾಥ ಪುರಾಣಂ : ಪಾರ್ಶ್ವಪಂಡಿತ, (ಸಂ.) ಹೆಚ್. ಶೇಷಯ್ಯಂಗಾರ್, ಮದ್ರಾಸ್, ೧೯೬೦.

೪. ಪಾರ್ಶ್ವ ಪಂಡಿತ : ಡಾ. ಬಿ.ನಂ. ಚಂದ್ರಯ್ಯ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೩.

೫. ರಟ್ಟರ ಕಾಲದ ಸಾಂಸ್ಕೃತಿಕ ಅಧ್ಯಯನ : ಡಾ. ಶಿ.ಬಾ. ಪಾಟೀಲ, ಬಸವ ಶ್ರೀ ಪ್ರಕಾಶನ, ಸಂಕೇಶ್ವರ, ೧೯೯೬.

೬ ಪಾರ್ಶ್ವ ಪಂಡಿತ, (ಲೇ) ತೀ.ನಂ. ಶಂಕರನಾರಾಯಣ, ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ, ನಾಲ್ಕನೆಯ ಸಂಪುಟ, ಡಾ. ಹಾಮಾ. ನಾಯಕ ಪ್ರಧಾನ ಸಂಪಾದಕ, ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ ಸಂಪಾದಕ, ೧೯೭೭.

೭ ಮಹಾಪುರಾಣ: ಅನು. ಜಿ. ಬ್ರಹ್ಮಪ್ಪ, ಜೈನ ಮಠ, ಹೊಂಬುಜ, ೧೯೮೫.

೮. ಪಾಶ್ವನಾಥಪುರಾಣ ಒಂದು ತೌಲನಿಕ ಅಧ್ಯಯನ : ಡಾ. ರಾಜಶೇಖರ ಈ ಇಚ್ಚಂಗಿ ಜೈನ ಅಧ್ಯಯನ ಸಂಸ್ಥೆ, ಶ್ರವಣ ಬೆಳಗೊಳ.

* * *



ಸಮಗ್ರ ಕನ್ನಡ ಜೈನಸಾಹಿತ್ಯ

ಕನ್ನಡ ವಿಶ್ವವಿದ್ಯಾಲಯವು ಕರ್ನಾಟಕ ಸರಕಾರದ ಆರ್ಥಿ
ನೆರವಿನಿಂದ ರೂಪಿಸಿ, ಪ್ರಕಟಿಸುತ್ತಿರುವ ಸಮಗ್ರ ಕನ್ನಡ ಜೈನಸಾಹಿತ್ಯ ಸಂಪುಟಗ
ಯೋಜನೆಯು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೇ ಮಹತ್ವಪೂರ್ಣವಾದದ
೨೦೦೬ರ ಶ್ರವಣಬೆಳಗೊಳದ ಐತಿಹಾಸಿಕ ಗೊಮ್ಮಟ ಮಹಾಮಸ್ತಕಾಭಿಷೇಕ
ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯ ಹಂಪಿಯು ಈ ಸಮ
ಕನ್ನಡ ಜೈನಸಾಹಿತ್ಯ ಸಂಪುಟಗಳ ಯೋಜನೆಯನ್ನು ರೂಪಿಸಿ ಕರ್ನಾಟ
ಸರಕಾರಕ್ಕೆ ಸಲ್ಲಿಸಿತು. ಕರ್ನಾಟಕ ಸರಕಾರವು ಈಗಾಗಲೇ ಸಮಗ್ರ ವಚನಸಾಹಿ
ಮತ್ತು ದಾಸಸಾಹಿತ್ಯ ಸಂಪುಟಗಳನ್ನು ಹೊರತಂದಿದ್ದು, ಈಗ ಸಮ
ಜೈನಸಾಹಿತ್ಯ ಸಂಪುಟಗಳ ಪ್ರಕಟಣೆಯ ಮೂಲಕ ಪ್ರಾಚೀನ ಕನ್ನಡ ಸಾಹಿತ
ಬಹಳ ಮಹತ್ವದ ಶರೀರವೊಂದನ್ನು ಪೂರ್ಣಗೊಳಿಸುತ್ತಿದೆ. ಈ ಸಮ
ಜೈನಸಾಹಿತ್ಯ ಸಂಪುಟದ ಯೋಜನೆಯನ್ನು ೨೦೦೬ರ ಶ್ರವಣಬೆಳಗೊಳ
ಮಹಾಮಸ್ತಕಾಭಿಷೇಕದ ಭಾಗವಾಗಿ ಕರ್ನಾಟಕ ಸರಕಾರ ಅಂಗೀಕರಿಸಿ ಸಾರಸ್
ಮಹಾಮಸ್ತಕಾಭಿಷೇಕ ಮಾಡಿದ ಪುಣ್ಯಕ್ಕೆ ಪಾತ್ರವಾಗಿದೆ.

ಎರಡನೆಯ ಗುಣವರ್ಮನು ಹದಿನಾರನೆಯ ಶತಮಾನದ ಆರಂಭದ
ಇದ್ದು 'ಪುಷ್ಪದಂತ ಪುರಾಣಂ' ಎಂಬ ಚಂಪೂ ಕಾವ್ಯವನ್ನೂ 'ಚಂದ್ರನಾಥಾಷ್ಟ
ಎನ್ನುವ ಒಂಬತ್ತು ಪದ್ಯಗಳ ಅಷ್ಟಕವನ್ನೂ ರಚಿಸಿದ್ದಾನೆ. ಇವನ 'ಪುಷ್ಪದ
ಪುರಾಣ'ವು ಒಂಬತ್ತನೆಯ ತೀರ್ಥಂಕರನಾದ ಪುಷ್ಪದಂತನ ಚರಿತವ
ಹದಿನಾಲ್ಕು ಆಶ್ವಾಸಗಳ ಹರಹಿನಲ್ಲಿ ವಿವರಿಸಿರುವ ಚಂಪೂ ಕಾ
ನಾಟಕೀಯತೆಯ ಗುಣ, ನಾಣ್ನುಡಿಗಳ ಬಳಕೆ, ಸರಳ ಸಮರ್ಥ ಉಪಮೆಗಳ
ದೇಸಿನುಡಿಯ ಅಪೂರ್ವ ಬಳಕೆ - ಹೀಗೆ ಚಂಪೂ ಕಾವ್ಯದ ಒಳಗೆಯ
ಕನ್ನಡತನದ ಹೊಳಹುಗಳನ್ನು ಪ್ರಕಟಿಸುವ ಪ್ರಯತ್ನವನ್ನು ಗುಣವರ
ಮಾಡಿದ್ದಾನೆ. ಪಾರ್ಶ್ವಪಂಡಿತನು 'ಪಾರ್ಶ್ವನಾಥ ಪುರಾಣಂ' ಎಂ
ಚಂಪೂಕಾವ್ಯದಲ್ಲಿ ತನ್ನ ಆಶ್ರಯದಾತ ನಾಲ್ಕನೇ ಕಾರ್ತವೀರ್ಯನೊಂದಿ
ಕಥಾನಾಯಕನನ್ನು ಸಮೀಕರಿಸಲು ಪ್ರಯತ್ನಿಸಿದ್ದಾನೆ. ಮಹಾವೀರನಂತೆ ಐತಿಹಾಸಿ
ವ್ಯಕ್ತಿಯಾದ ಪಾರ್ಶ್ವನಾಥನನ್ನು ಜೈನತೀರ್ಥಂಕರ ಪುರಾಣಗಳ ನಾಯಕನಂತೆ ಕ
ಚಿತ್ರಿಸಿದ್ದಾನೆ. ತನ್ನ ಕಾಲದ, ನಾಡಿನ ಸಸ್ಯಸಂಪತ್ತನ್ನು, ದೇಸಿ ತಿನಿಸುಗಳನ್ನು, ಜನಪ
ದೇವತೆಗಳನ್ನು ತುಂಬಾ ವಿಶಿಷ್ಟವಾಗಿ ವರ್ಣಿಸುವ ಸೊಗಸು ಈತನ ಕಾವ್ಯದ
ದೊರೆಯುತ್ತದೆ.

ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಸಂಪಾದನ ವಿಭಾಗದಲ್ಲಿ ಹಿರಿಯ ಸಂಶೋಧಕಿಯಾಗಿರುವ ಡಾ. ವೈ
ಭಾನುಮತಿ ಅವರು ಪ್ರಾಚೀನ ಕನ್ನಡ ಸಾಹಿತ್ಯ, ಹಸ್ತಪ್ರತಿಶಾಸ್ತ್ರ, ಗ್ರಂಥ ಸಂಪಾದ
ಮತ್ತು ಜಾನಪದ ಕ್ಷೇತ್ರಗಳಲ್ಲಿ ವಿಶೇಷ ಪರಿಶ್ರಮ ಸಾಧನೆಗಳನ್ನು ಮಾಡಿದವರ
ಗ್ರಂಥಸಂಪಾದನೆಯ ಕ್ಷೇತ್ರ ಹೊಸ ತಲೆಮಾರಿನ ವಿದ್ವಾಂಸರ
ಅವಗಣಿತವಾಗಿರುವ ಇಂದಿನ ಸಂದರ್ಭದಲ್ಲಿ ಡಾ. ವೈ.ಸಿ. ಭಾನುಮತಿ ಅವ
ಈ ಕ್ಷೇತ್ರಕ್ಕೆ ತಮ್ಮನ್ನು ಅರ್ಪಿಸಿಕೊಂಡು ಸಹ್ಯಾದ್ರಿಖಂಡ, ಬತ್ತೀಸಪುತ್ಥಳಿ ಕ
ಮುಂತಾದ ಅಪೂರ್ವ ಕೃತಿಗಳ ಸಂಪಾದನೆಗೆ ಹೆಸರಾಗಿದ್ದಾರೆ. ಎರಡನೆ
ಗುಣವರ್ಮನ ಪುಷ್ಪದಂತಪುರಾಣಂ, ಪಾರ್ಶ್ವಪಂಡಿತನ ಪಾರ್ಶ್ವನಾಥ ಪುರಾಣ
ಎಂಬೆರಡು ಜೈನಕಾವ್ಯಗಳನ್ನು ಈವರೆಗೂ ಸಂಪಾದಿತವಾದ ಪಠ್ಯಗಳ ಮತ
ಹಸ್ತಪ್ರತಿಗಳ ಸೂಕ್ಷ್ಮ ಅವಲೋಕನದಿಂದ ಪರಿಶ್ರಮಪೂರ್ವಕವಾಗಿ ಹಾಗ
ಅಚ್ಚುಕಟ್ಟಾಗಿ ಸಂಪಾದಿಸಿಕೊಟ್ಟಿದ್ದಾರೆ. ಅವರಿಗೆ ಕನ್ನಡ ವಿಶ್ವವಿದ್ಯಾಲಯ
ಪರವಾಗಿ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಬಿ.ಎ. ವಿವೇಕ ರ
ಕುಲಪ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ